ಗುಲ್ಜಾರ್ : ಕಮರ್ಶಿ… ನಲ್ಲೂ ಕಲಾ…

ಕಥೆಯನ್ನು ಅವರು ನಿರ್ವಹಿಸಿರುವ ರೀತಿ,
…ತ್ತು ಭಾವನೆಗಳನ್ನು ತಳುಕು ಹಾಕಿರುವ ಬಗೆ
…ದಾಗಿದೆ. ನಿರ್ದೇಶನದಲ್ಲಿ ಸ್ವಂತಿಕೆಯನ್ನು
…ಡಿರುವ ಗುಲ್ಜಾರ್ ಪ್ರತಿಭಾಸ್ಪರ್ಶದಿಂದಾಗಿ
…ಯಾಬಾದುರಿ, ಸಂಜೀವಕುಮಾರ್
…ಲ್ಲಿ ಮಿಂಚಿದರು.
…ಈ ಚಿತ್ರ 'ಕೋಶಿಷ್' ಕೂಡ ಗುಲ್ಜಾರ್‌ರ
…ಸಾಧನೆ. ಮತ್ತೆ ಗುಲ್ಜಾರ್ ವಿದೇಶಿ ವಸ್ತುವನ್ನು
…ಟ್ಟುಕೊಂಡಿದ್ದಾರೆ ಎಂದು ಮಾತ್ರ ವಿಮರ್ಶಕರು
…ವಾಗಿತ್ತು. ಈ ಸಲ ಜಪಾನಿನ ಶ್ರೇಷ್ಠ ಚಿತ್ರ 'ಫಾರ್
…' ಆಫ್ ಯು.ಎಸ್. ಅಲೋನ್' ಆಧರಿಸಿದ್ದರೂ
…ವಸ್ತುವನ್ನು ತುಂಬ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.
…ರ ಭಾವೋತ್ಕಟತೆಯನ್ನು ಮುಟ್ಟುವಂತಿದ್ದ
…ಯಾಬಾಧುರಿ ಮತ್ತು ಸಂಜೀವಕುಮಾರ್
…ವನೆಯೆ ಬರುವುದಿಲ್ಲ, ಗುಲ್ಜಾರ್
… ತಮ್ಮ ಪಾತ್ರಗಳಲ್ಲಿ ಎಷ್ಟರಮಟ್ಟಿಗೆ
…ಲ್ಲಿ ಸೃಜತೆ ಕೊನೆಯಾಯಿತು ಮತ್ತು
…ತು ಎಂಬುದೇ ತಿಳಿಯುವುದಿಲ್ಲ
…'ಗೆಯಲ್ಲಿ 'ಕೋಶಿಷ್' ಒಂದು
…ಸಿದ್ದು ಆಶ್ಚರ್ಯವೇನಲ್ಲ
…ಜ್ಜಾರ್ ಸೃಜನಶೀಲ
… ಅವರ ಸೃಜನಶೀಲ ಪ್ರತಿಭೆ
…ನ ಅಭಿನಯಕ್ಕಿಂತ
… ಅವಕಾಶ
…ರಿಂದ
… ನಟ –
…ರ್ವಹಿಸಬೇಕು



ಗಮನಿಸಿದರು ಇದರಿಂದ ಅವ…
ಸಾಮರ್ಥ್ಯವನ್ನು ಅರಿತುಕೊಳ್ಳಬ…
ಯಾವ ನಟನೂ ಸಂಜೀವ್‌ರ …
ಬಹಿರಂಗಪಡಿಸಿಲ್ಲ.
ಗುಲ್ಜಾರ್ ನಿರ್ದೇಶನದಲ್ಲಿ …
ಉತ್ತಮಕುಮಾರ್ ಅವರೂ ಸೇ…
'ಕಿತಾಬ್'ನಲ್ಲಿ ಪಾತ್ರ ನಿರ್ವಹಿಸಿ…
ಪಾತ್ರವನ್ನು ಉತ್ತಮಕುಮಾರ್ …
ಚಿತ್ರ ಗೋತಾ ಹೊಡೆಯಿತು. …
ತಮ್ಮದೇ ಸಿನೀಮಿಯ ದಾ…
ಅದರಲ್ಲಿ ತೋರಿಸಿಕೊಟ್ಟರು. …
ರಾಜುಲ್ ಅಭಿನಯ ಅವರ …
ಗರಿಯಾಗಿದೆ. ಆದರೆ ಮೀರಾ …
ವ್ಯಾವಹಾರಿಕವಾಗಿ ಸೋತಿತ್ತು …
ದೃಷ್ಟಿಯಿಂದ 'ಗುಲ್ಜಾರ್'ರ ಅಧ…
ಭಾವನೆ ಉಂಟಾಯಿತು.
ಅವರ ನೆಚ್ಚಿನ 'ಮೀರಾ' …
ಅವರಿಗೆ ಹೆಚ್ಚು ನೋವನ್ನುಂಟ…
ಮತ್ತು ಸಂಗೀತದಿಂದಾಗಿ ಮೀರ…
ಚಿತ್ರವಾಗಿ ಉಳಿಯುವುದು. ಪ್ರೇ…
ಪ್ರತಿಕ್ರಿಯಿಸದಿದ್ದರೂ ಅದರ …
ಮೀರಾ' ನನ್ನ ಗ್ರಹಿಕೆಯ ಪ್ರಕಾ…
ಸುಂದರ ಬೆಸುಗೆಯಾಗಿದೆ. ಚಿ…
ವರ್ಷಕಳೆದವು. ಆದರೂ ಪ್ರೇಕ…
ಮೆಚ್ಚುತ್ತಿಲ್ಲವೆಂಬುದನ್ನು ಅರಿ…
ಗುಲ್ಜಾರ್ ಹೇಳುತ್ತಾರೆ.
ಆದರೆ ಒಂದು ಮಾತ್ರ …
ಅವರ ಚಿತ್ರಗಳ ಗು…

ವರು ಆಶಿಸುವಂತಾಯಿತು. ಅಭಿನಯಕಲೆಯಲ್ಲಿ
...ರ ಪ್ರೇರಣೆ ಪ್ರಭಾವಗಳಿಗೊಳಗಾದ
ಚಿಂತನಶೀಲ ಕಲಾವಿದನ ಕುರಿತು
...ರ್ ಚಿತ್ರದಲ್ಲಿ ಕೆಲಸಮಾಡುವಾಗ
...ತ್ರಿತ್ವದ ವಾತಾವರಣ
...ಆಡಂಬರ–
...ಚಿತ್ರೀಕರಣ ಎಷ್ಟು
...ದಯ ಮೇಲೆ

ಚಿತ್ರಗಳೆಲ್ಲ ವಿಮರ್ಶಕರ ಗಮನ ಸೆಳೆದಿವೆ, ಪ್ರಶಂಸೆ ಪಡೆದಿವೆ. 'ಮೌಸಂ', 'ಕಿನಾರಾ', 'ಮೀರಾ', 'ಕಿತಾಬ್', 'ಅಂಗೂರ್', 'ನಮಕೀನ್' ಇವೆಲ್ಲ ನಮ್ಮ ನೆನಪಿನಲ್ಲಿ ಅಚ್ಚೊತ್ತುವ ದೃಶ್ಯಗಳನ್ನೊಳಗೊಂಡಿವೆ.

ಸಂಜೀವ್‌ಕುಮಾರ್ ಈ ಚಿತ್ರದ ನಾಯಕ. ಬಂಗಾಲಿ ಖ್ಯಾತ ತಾರೆ ಸುಚಿತ್ರಾಸೇನ್ ನಾಯಕಿ. ರಾಜಕೀಯ ಕುರಿತ ಗುಲ್ಜಾರ್ ಒಳನೋಟದಿಂದಾಗಿ ಆಂಧಿ ಅದ್ಭುತವಾಯಿತು. ಸಹಜ ಹಿಂದೀ ಉಚ್ಚಾರಣೆ ಇಲ್ಲದಾಗ್ಯೂ ಸುಚಿತ್ರಾಸೇನ್‌ರಿಂದ ಉತ್ತಮ ಅಭಿನಯವನ್ನು ಪಡೆದಿದ್ದಾರೆ. ಸಂಜೀವ್‌ಕುಮಾರ್ ಸುಚಿತ್ರಾಸೇನ್‌ರ ಅಭಿನಯದಲ್ಲಿ ಸಮತೋಲನವನ್ನು ...ರಿಂದಾಗಿ 'ಆಂಧಿ' ಅವರ ಅತಿ ಒಳ್ಳೆಯ ... ಸುಚಿತ್ರಾಸೇನ್ ಪಾತ್ರ ನಿರ್ವಹಣೆ ... ಅಭಿನಯಕ್ಕೆ ಒಂದಿಷ್ಟುಕೂಡ ... ಚಿತ್ರವನ್ನು ನಿರ್ದೇಶಿಸಿದರು. ...ಂ', 'ಕೋಷಿಸ್' ಅಥವಾ ...ಸಿನಿಮಾದಲ್ಲಿ ...ವಾಗಿರುತ್ತದೆ. ...ದ ಸಹಜತೆಗೆ ...ಯ ನನ್ನ ಸಿನಿಮಾದ ... ಸಂಜೀವ್‌ಕುಮಾರ್‌ನ ... ವರ್ಚಸ್ಸುಗಳನ್ನು ಗಮನದಲ್ಲಿಟ್ಟುಕೊಂಡೇ ...ನ್ನ ಚಿತ್ರಕಥೆಗಳ ಕೇಂದ್ರ ಪಾತ್ರಗಳನ್ನು ಸೃಷ್ಟಿಸಿರುವೆ.

ಅವರ ಸಾವಿನ ನಂತರ ನಾನು 'ನಿರುದ್ಯೋಗಿ' ಆದೆ ಎಂಬ ಭಾವನೆ ಉಟಾಗಿದೆ. ಅವರು ಚಿತ್ರೀಕರಣಕ್ಕೆ ತಡವಾಗಿಬರುವ ವಿಚಾರದಲ್ಲಿ ನಾವು ಸದಾ ಭಿನ್ನಾಭಿಪ್ರಾಯ ಹೊಂದಿದ್ದರು ಕೆಲಸಕ್ಕೆ ಸಂಬಂಧಿಸಿದಂತೆ ನಾವು ಆತ್ಮ... ಸಂಗಾತಿಗಳಾಗಿದ್ದೆವು" ಎಂದು ಗುಲ್ಜಾರ್ ಹೇಳುತ್ತಾರೆ.

"ಅವರಗ್ರಹಣಶಕ್ತಿ ತುಂಬ ಪ್ರಖರವಾಗಿತ್ತು ... ಏನು ಬಯಸುವೆನೆಂಬುದನ್ನು ನಾನು ಅವ... ಹೇಳಬೇಕಾಗಿರಲಿಲ್ಲ, ಅವರಿಗೆ ದೃಶ್ಯದ ... ವಿವರಿಸಲಾಗುತ್ತಿತ್ತು, ಸಂಜೀವ್ ... ಸ್ಪಂದಿಸುತ್ತಿದ್ದರು. ಅವರ ಮ... ಅಭಿವ್ಯಕ್ತಿಯಲ್ಲಿ ನಾನು ...

...ಯಂ : ...

ಕಥಾಪ್ರವನ್ನು ... ವೇಷಭೂಷಣ... ಅವ...



...ಪ್ರಕಟನೆಗಳು ಅಂತೆ ಈ ಸಲದ ಒಂಬತ್ತು ... ಒಂದು ಪಕ್ಷ, ಮುಂದೆ ಹೋ...

ನೆನಪಿನಲ್ಲಿ ಅಚ್ಚೊತ್ತುವ ದೃಶ್ಯ...
'ನಮ್‌ಕೀನ್' ಗುಲ್ಜಾರ್‌ರ...
ವಿಮರ್ಶಕರು ಹೇಳುತ್ತಾ...
ಆಜ್ಮಿ, ಶರ್ಮಿಳಾಟ್ಯಾ...
ವಹೀದಾ ರೆಹ...
ಪಡೆಯು...
ಕೌಶಲ್ಯ...

ಅ ರ್ಪ ಣ

ಸಂಪಾದಕ

ವಿದ್ವಾನ್, ಡಾ|| ಎಚ್. ಪಿ. ಮಲ್ಲೇದೇವರು

ಎಂ.ಎ ; ಪಿಎಚ್.ಡಿ ; ಡಿಪ್ಲೊಮಾ–ಇನ್–ಇಂಡಾಲಜಿ.

ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಸ್ನಾತಕೋತ್ತರ ಸಂಸ್ಕೃತ ವಿಭಾಗ

ಮತ್ತು

ನಿರ್ದೇಶಕ, ಪ್ರಾಚ್ಯವಿದ್ಯಾಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪ್ರಕಾಶಕರು

ಮಲ್ಲನಮೂಲೆ ಶ್ರೀಮಠದ

ಸಮಸ್ತ ಭಕ್ತರು

ARPANA : Felicitation Volume presented to His Holiness Sri Sri Channabasava Mahaswamiji of Sri Mallanamule **Mutt**, Basavanapura, Nanjanagud Taluk, Mysore District, Karnataka State on the occasion of Suvarnakalasharohana to the three Gadduges (Tomb - monuments) of the trio of pontiffs of Mallanamule Mutt. Published by the Devotees of Sri Mallana mule Mutt. Edited by Vidwan Dr. H. P. Malledevaru, M.A. Ph.D.
1986

Price : **Rs. 20-00**

Photos and Jacket Printed at :

J. S. S. Press, Bangalore-Nilagiri Road, Mysore

Printed at :

Sri Rajendra Printers, Shivarampet, Mysore-570 001

ಸುಕ್ಷೇತ್ರ ಶ್ರೀ ಮಲ್ಲನಮೂಲೆ ಮಠಾಧೀಶ್ವರರುಗಳಾದ

ಪರಮಪೂಜ್ಯ ಆದಿಗುರು ಶ್ರೀ ಶ್ರೀ ಕಂಬಳೇಶ್ವರ ಮಹಾಸ್ವಾಮಿಗಳವರ,

ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರ ಮಹಾಸ್ವಾಮಿಗಳವರ

ಮತ್ತು

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ

ಗದ್ದುಗೆಗಳ

ಸುವರ್ಣಕಲಶಾರೋಹಣ ಮಹೋತ್ಸವದ ಪರಮಪವಿತ್ರ

ಶುಭ ಸಂದರ್ಭದಲ್ಲಿ

ಸಮಸ್ತಸತ್ಕಾರ್ಯಗಳಿಗೂ ಪ್ರೇರಕಶಕ್ತಿಯಾಗಿ ಶ್ರೀಮಲ್ಲನಮೂಲೆ ಮಠಾಧ್ಯಕ್ಷರಾಗಿರುವ

ಪರಮಪೂಜ್ಯ ಶ್ರೀ ಶ್ರೀ ಚನ್ನಬಸವ ಮಹಾಸ್ವಾಮಿಗಳವರ ಅಡಿದಾವರೆಗಳಿಗೆ

ಶ್ರೀ ಮಠದ ಸಮಸ್ತ ಭಕ್ತರು ಭಕ್ತಿಪುರಸ್ಸರವಾಗಿ ಸಮರ್ಪಿಸಿದ

ಅಭಿನಂದನ ಗ್ರಂಥ

ಅರ್ಪಣ

ಆಶೀರ್ವಚನ

ಜ್ಞಾನ, ಮಾನವಜೀವನದ ಮುಂಬೆಳಗು. ಭಕ್ತಿ, ಬದುಕಿನ ಬಾಂದಳದ ತಂಬೆಳಗು. ಕಾಯಕ, ಲೋಕಜೀವನದ ಹೊಂಬೆಳಗು. ಜ್ಞಾನ, ಭಕ್ತಿ, ಕಾಯಕಗಳ ತ್ರಿವೇಣೀ ಸಂಗಮ ವೀರಶೈವಧರ್ಮ, ಸಕಲ ಜೀವಾವಳಿಗೆ ಲೇಸನೇ ಬಯಸುವ, ಲೇಸನೇ ಮಾಡುವ ಧರ್ಮ. ಇಪ್ಪತ್ತನೆಯ ಶತಮಾನದವರು ಇನ್ನೂ ಆಗಬೇಕೆಂದು ಆಶಿಸುತ್ತಿರುವ ಸಮಾಜಕ್ರಾಂತಿಯನ್ನು ಹನ್ನೆರಡನೆಯ ಶತಮಾನದಲ್ಲೇ ಪ್ರತ್ಯಕ್ಷವಾಗಿ ಆರಂಭಿಸಿದ ವಿಶ್ವಧರ್ಮ. "ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ಆವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ, ಗುರುಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗವ ಧರಿಸಿದವನು ಆಚಾರಸಂಪನ್ನ ಸತ್ಕ್ರಿಯನಾದ ಮಹಾತ್ಮನೇ" ಎಂದು ಘೋಷಿಸಿದ, ಜಾತ್ಯತೀತವಾದ ಧರ್ಮ.

ವಿಶಾಲದೃಷ್ಟಿಯ, ವಿಕಾಸಶೀಲ ವೀರಶೈವಧರ್ಮ, ವಿಶ್ವವ್ಯಾಪ್ತಿಯನ್ನು ಪಡೆಯಲು, ವ್ಯೋಮವಿಸ್ತಾರವನ್ನು ಹೊಂದಲು ಕಾರಣರಾದವರು ಕಾರಣಿಕರಾದ ಶರಣರು ; ಅವರ ಅಮರ ಸಂದೇಶವನ್ನು ಜಗತ್ತಿಗೆ ಕಾಲಕಾಲದಲ್ಲಿ ಮತ್ತೆ ನವೋನವವಾಗಿ ಹಂಚಿ ಹರಸಿದ ಅನುಭಾವಿಗಳು ; ಶರಣವಾಣಿಯನ್ನು ಕೈದೀವಿಗೆಯಾಗಿ ಹಿಡಿದು ಬದುಕನ್ನೇ ತಮ್ಮ ಸಂದೇಶವಾಗಿಸಿದ ಸಾರ್ಥಕಜೀವಿಗಳು ; ನಾಡಿನ ಮೂಲೆ ಮೂಲೆಯಲ್ಲಿ ಸಾಮಾನ್ಯ ಜನರ ಬಾಳಿನಲ್ಲಿ ಹಾಸುಹೊಕ್ಕಾಗಿ ಬೆರೆತು, ಕಾಯಕದ ಮಹತ್ತ್ವವನ್ನರುಹಿ, ಅಧ್ಯಾತ್ಮದ ಬೆಳಕನ್ನು ಚೆಲ್ಲಿ, ಧರ್ಮದ ಧ್ವಜವನ್ನು ಎತ್ತಿಹಿಡಿದ ನಿಃಸ್ವಾರ್ಥದ ಮಹಾನುಭಾವರು. ಇಂಥ ಮಹಾನುಭಾವರ ಪುಣ್ಯ ಸ್ಮರಣೆ ದಿಗ್ಭ್ರಾಂತವಾದ ಇಂದಿನ ಜಗತ್ತಿಗೆ ದಿಕ್ಸೂಚಿಯಾಗಬಲ್ಲದು. ಮಾನವ ಇಂದು ವೈಜ್ಞಾನಿಕ ಪ್ರಗತಿಯಿಂದ ಚಂದ್ರಲೋಕವನ್ನೂ ಮುಟ್ಟಿದ್ದಾನೆ. ಸಹಸ್ರಾರು ಮೈಲಿಗಳ ದೂರದಲ್ಲಿ ನಡೆಯುವ ಘಟನೆಯನ್ನು ಆ ಕ್ಷಣದಲ್ಲೇ ತೋರಬಲ್ಲ ಸಾಧನಗಳನ್ನು ಸಾಮಾನ್ಯರಿಗೂ ಕೊಟ್ಟಿದ್ದಾನೆ. ಔಷಧಗಳ ಅನ್ವೇಷಣೆಯಿಂದ ನಾನಾ ವ್ಯಾಧಿಗಳನ್ನು ಮೆಟ್ಟಿದ್ದಾನೆ. ಆದರೆ ಹೊರಗಿನ ಪ್ರಪಂಚದಲ್ಲಿ ಇಷ್ಟು ಸಾಧನೆಗಳನ್ನು ಮಾಡಿ ಒಳಗಿನ ಪ್ರಪಂಚವನ್ನು ಮರೆತಿದ್ದಾನೆ. ಭೌತಿಕ ಪ್ರಗತಿ ಆಧ್ಯಾತ್ಮಿಕ ಬೆಂಬಲವಿಲ್ಲದೆ ಅಶಾಂತಿಗೆ ಕಾರಣವಾಗಿದೆ. ಯಾವ ಕ್ಷಣದಲ್ಲಿ ವಿಶ್ವವಿನಾಶವಾಗುವುದೋ ಎಂಬ ಶಂಕೆ ಎಲ್ಲ ಚಿಂತಕರ ಹೃದಯಗಳಲ್ಲಿ ತಾಂಡವವಾಡುತ್ತಿದೆ. ಈ ವಿಷಮ ಸಮಯದಲ್ಲಿ ಆತ್ಮದರ್ಶಿಗಳನ್ನು ಜಗತ್ತು ಮರೆತರೆ ಅದು ಆತ್ಮಹತ್ಯೆಗೆ ಸಮವಾಗುತ್ತದೆ. ಆದುದರಿಂದ ಅಧ್ಯಾತ್ಮ ಸಾಧಕರ ಸ್ಮರಣೆ, ಅವರ ಸಾಧನಗಳ ಮೌಲ್ಯಮಾಪನ, ಅವರು ಹಾಕಿಕೊಟ್ಟ ದಾರಿಯಲ್ಲಿ ಚಿಂತನ—ಮಂಥನ, ಅವರು ತೋರಿಸಿಕೊಟ್ಟ ಮಾರ್ಗದ ಆಚರಣೆ—ಇಂದು ಅಗತ್ಯ ಆಗಬೇಕಾದ ಆದ್ಯ ಕಾರ್ಯ.

ಈ ರೀತಿಯಾಗಿ ಶರಣರ ಆಧ್ಯಾತ್ಮಿಕ ಸಿದ್ಧಿಯ ಒಂದು ಪ್ರತೀಕವಾಗಿ ಈಗ್ಗೆ ಸುಮಾರು 200 ವರ್ಷಗಳ ಹಿಂದೆ ಮೈಸೂರಿನ ಸಮೀಪದ ನಂಜನಗೂಡು ಕ್ಷೇತ್ರಕ್ಕೆ ಹತ್ತಿರದಲ್ಲಿ ಪಾವನ ಕಪಿಲೆಯ ಪವಿತ್ರ ದಡದಲ್ಲಿ ಶ್ರೀ ಮಲ್ಲನಮೂಲೆ ಮಠವು ಸಂಸ್ಥಾಪಿತವಾಯಿತು. ಪವಾಡಗಳನ್ನು ಮೆರೆದು ಮಹಿಮಾನ್ವಿತರಾದ ಶ್ರೀ ಶ್ರೀ ಆದಿ ಕಂಬಳೀಶ್ವರರು ಶ್ರೀ ಮಠದ ಆದಿಗುರುಗಳು.

ಆದಿಗುರು ಶ್ರೀ ಕಂಬಳೀಶ್ವರರ ಅನಂತರ ಮಲ್ಲನಮೂಲೆ ಸುಕ್ಷೇತ್ರದ ಮಠಾಧೀಶ್ವರರಾಗಿ ಅದರ ಸರ್ವತೋಮುಖ ಬೆಳವಣಿಗೆಗೆ ಕಾರಣರಾದವರು ಶ್ರೀ ಇಮ್ಮಡಿಕಂಬಳೀಶ್ವರರು. ಅವರಿಗೆ ಶ್ರೀ ಮರಿಕಂಬಳೀಶ್ವರರು ಎಂಬ ಹೆಸರೂ ರೂಢಿಯಲ್ಲಿದೆ. ಸುತ್ತು ಮುತ್ತಲಿನ ಹಳ್ಳಿಗಳಲ್ಲೆಲ್ಲಾ ಸುತ್ತಿ, ಶಿಷ್ಯರನ್ನು ಸನ್ಮಾರ್ಗದಲ್ಲಿ ನಡೆಸಿ, ಅನೇಕ ಶಾಖಾ ಮಠಗಳನ್ನು ಸಂಸ್ಥಾಪಿಸಿ ಇವರು ಪ್ರಖ್ಯಾತರಾದರು. ಈ ಪರಂಪರೆಯಲ್ಲಿ ಮುಂದೆ ಶ್ರೀ ಮಠಕ್ಕೆ ಅಧ್ಯಕ್ಷರಾದವರು ಶ್ರೀ ಸಿದ್ಧಲಿಂಗಸ್ವಾಮಿಗಳವರು. ಇವರ ಕಾಲದಲ್ಲಿ ಮಠ ಇನ್ನೂ ಅಭಿವೃದ್ಧಿಗೊಂಡು ಜ್ಞಾನ ಅನ್ನ ದಾಸೋಹಕ್ಕೆ ಪ್ರಸಿದ್ಧವಾಯಿತು.

ಈ ಮೂವರು ಮಹಾನುಭಾವರ ಗದ್ದುಗೆಗಳಿಗೆ ಸದ್ಭಕ್ತವೃಂದದ ಹೃತ್ಪೂರ್ವಕ ಅಪೇಕ್ಷೆಯಂತೆ ಸುವರ್ಣಕಲಶಾರೋಹಣವನ್ನು ಮಾಡಿಸಬೇಕೆಂಬ ಸತ್‌ಸಂಕಲ್ಪ ಅಂಕುರಿಸಿತು. ಅಂಥ ಶುಭ ಸಂದರ್ಭದಲ್ಲಿ ಶಾಶ್ವತವಾಗಿ ಉಳಿಯುವ ಮತ್ತು ವೀರಶೈವ ದರ್ಶನ ಮತ್ತು ಧರ್ಮದ ಬಗೆಗೆ ಒಂದು ಸ್ಮರಣ ಸಂಪುಟವನ್ನು ಪ್ರಕಾಶಪಡಿಸಬೇಕೆಂಬ ಅಭಿಪ್ರಾಯವೂ ಭಕ್ತವೃಂದದ ಸಭೆಯಲ್ಲಿ ರೂಪುಗೊಂಡಿತು. ಶ್ರೀ ಗುರುತ್ರಯರ ಆಶೀರ್ವಾದದಿಂದ ಆ ಅಭಿಪ್ರಾಯ ಮೂರ್ತಗೊಂಡು ''ಅರ್ಪಣ'' ಶ್ರೀಗುರುತ್ರಯರ ಪಾದಾರವಿಂದಗಳಲ್ಲಿ ಅರ್ಪಣಗೊಳ್ಳುವುದಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೆಯ ಗ್ರಂಥ ಸಿದ್ಧವಾಗಲು ಹತ್ತಾರು ಅಂಶಗಳು ಅನುಕೂಲವಾಗಿ ಒಟ್ಟುಗೂಡಬೇಕು. ನಾಡಿನ ಹಲವಾರು ವಿದ್ವಾಂಸರು, ಸಾಹಿತಿಗಳು, ದಾರ್ಶನಿಕರು ಮತ್ತು ಅನುಭಾವಿಗಳು ಲೇಖನಗಳನ್ನು ಬರೆದುಕೊಡಬೇಕು. ಅವುಗಳನ್ನು ವಿಷಯಾನುಗುಣವಾಗಿ ವಿಂಗಡಿಸಿ ಸಂಪಾದಿಸಿ ಅಚ್ಚಿಗೆ ಸಿದ್ಧಪಡಿಸಬೇಕು. ಅಚ್ಚುಕೂಟದಲ್ಲಿ ಅಕ್ಷರಯೋಜನೆಯಾಗಬೇಕು. ಕರಡುಗಳನ್ನು ಎಚ್ಚರಿಕೆಯಿಂದ ತಿದ್ದಬೇಕು. ಮುದ್ರಿತವಾದನಂತರ ಅವುಗಳಿಗೆ ಉಚಿತವೂ ಆಕರ್ಷಕವೂ ಆದ ಕವಚವನ್ನು ಒದಗಿಸಬೇಕು. ಭಾವಚಿತ್ರಗಳನ್ನು ಯೋಗ್ಯಸ್ಥಳಗಳಲ್ಲಿ ಸೇರಿಸಬೇಕು.

ಇಷ್ಟು ಜವಾಬ್ದಾರಿಯನ್ನು ವಹಿಸಿ ಸಮರ್ಪಕವಾಗಿ ಹಾಗೂ ಸಮರ್ಥವಾಗಿ ಕಾರ್ಯವನ್ನು ನಿರ್ವಹಿಸಿ ಸ್ವಲ್ಪ ಸಮಯದಲ್ಲಿ ಅಚ್ಚುಕಟ್ಟಾಗಿ ಸ್ಮರಣ ಸಂಪುಟವನ್ನು ಹೊರ ತರಬಲ್ಲವರು ಯಾರು ಎಂದಾಗ ನಮ್ಮ ಮನಸ್ಸಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ॥ ಎಚ್. ಪಿ. ಮಲ್ಲೇದೇವರು ಅವರ

ಹೆಸರು ತೋರಿ ಬಂತು. ನೂರಾರು ವಿದ್ಯಾರ್ಥಿಗಳಿಗೆ ಸಾಹಿತ್ಯಶ್ರೀಯನ್ನು ಸುಮಾರು ಇಪ್ಪತ್ತೈದು ವರ್ಷಕಾಲ ಬೋಧಿಸಿ ಹದಿನೈದು ಗ್ರಂಥಗಳ ಲೇಖಕರಾಗಿ, ಪ್ರಾಚ್ಯ ವಿದ್ಯಾಸಂಶೋಧನಾಲಯದಿಂದ ಅನೇಕ ಸಂಸ್ಕೃತ ಶಾಸ್ತ್ರೀಯ ಗ್ರಂಥಗಳನ್ನು ಸಪರಿಷ್ಕಾರವಾಗಿ ಪ್ರಕಟಿಸಿರುವುದೇ ಅಲ್ಲದೆ, ಅವರು ತಮ್ಮ ಸಂಪಾದಕತ್ವದಲ್ಲಿ ಅನೇಕ ಸಂಭಾವನಾಗ್ರಂಥಗಳನ್ನೂ ಹೊರತಂದಿದ್ದಾರೆ. ಅವರನ್ನು ಶ್ರೀ ಮಠದ ಭಕ್ತರು ಪ್ರೀತಿಯಿಂದ ಕೇಳಿದಾಗ ಡಾ. ಮಲ್ಲೇದೇವರವರು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಈ ಗುರುತರಕಾರ್ಯವನ್ನು ಅಂಗೀಕರಿಸಿ ಅತ್ಯಲ್ಪ ಕಾಲದಲ್ಲಿಯೇ ಅಸಾಧ್ಯವನ್ನು ಸಾಧ್ಯವನ್ನಾಗಿಸಿ, ಈ ಬೃಹತ್ ಕೃತಿಯನ್ನು ಸಂಪಾದಿಸಿ ಅಚ್ಚು ಮಾಡಿಸಿ ಸಿದ್ಧಪಡಿಸಿದ್ದಾರೆ.

ಶ್ರೀ ಗುರುತ್ರಯರ ಗದ್ದುಗೆಗಳ ಸುವರ್ಣಕಲಶಾರೋಹಣದ ಶುಭ ಸಂದರ್ಭದಲ್ಲಿಯೇ ಈ ಬೃಹತ್ ಸಂಪುಟ ಪ್ರಕಟವಾಗಬೇಕೆಂಬ ದೃಢಸಂಕಲ್ಪದಿಂದ ನಾನಾ ಲೇಖಕರನ್ನು ಸಂಪರ್ಕಿಸಿ, ಆಯಾ ವಿಷಯಂಗಳಲ್ಲಿ ತಜ್ಞರಾದ ಲೇಖಕರಿಂದ ಉತ್ತಮ ಲೇಖನಗಳನ್ನು ಬರೆಯಿಸಿ, ವಿಷಯಾನುಗುಣವಾಗಿ ಅವುಗಳನ್ನು ವಿಂಗಡಿಸಿ ಡಾ॥ ಎಚ್. ಪಿ. ಮಲ್ಲೇದೇವರು ಅವರು ಈ ಸಂಪುಟದ ಸಂಪಾದನಾಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಅನೇಕ ವಿದ್ವಾಂಸರು, ಮತ್ತು ಸಾಹಿತಿಗಳು ಶ್ರೀಮಠದಲ್ಲಿಟ್ಟಿರುವ ಶ್ರದ್ಧಾಭಕ್ತಿಗಳಿಂದ ವಿಚಾರಪೂರ್ಣ ಲೇಖನಗಳನ್ನು ಈ ಸಂಪುಟಕ್ಕೆ ನೀಡಿದ್ದಾರೆ. ಶ್ರೀಮಠದ ಸಮಸ್ತ ಸದ್ಭಕ್ತವೃಂದದವರು ತನು ಮನ ಧನಗಳಿಂದ ಸರ್ವರೀತಿಯ ಸಹಾಯ ಸಹಕಾರಗಳನ್ನು ನೀಡಿ ಶ್ರೀ ಗುರುವಿಭೂತಿಯ ಸೇವೆಯನ್ನೆಸಗುವುದರ ಮೂಲಕ ಈ ಮಹತ್ಕಾರ್ಯವು ನೆರವೇರಲು ಕಾರಣರಾಗಿದ್ದಾರೆ.

ಈ ಎಲ್ಲರಿಗೂ ಹಾಗೂ ಸಕಲ ಜೀವಾವಳಿಗೂ ಆದಿಗುರು ಶ್ರೀ ಶ್ರೀ ಕಂಬಳೇಶ್ವರರು ಸಮಸ್ತ ಸನ್ಮಂಗಳಗಳನ್ನು ಅನುಗ್ರಹಿಸಲಿ ಎಂದು ಹೃದಯಾರೆ ಹಾರೈಸುತ್ತೇವೆ.

ಶ್ರೀ ಚನ್ನಬಸವ ಸ್ವಾಮಿಗಳು
ಅಧ್ಯಕ್ಷರು
ಶ್ರೀ ಮಲ್ಲನಮೂಲೆ ಮಠ
ನಂಜನಗೂಡು.

ಶ್ರೀ ಬಸಪ್ಪ ದಾನಪ್ಪ ಜತ್ತಿ
ಭಾರತದ ಮಾಜಿ ಉಪರಾಷ್ಟ್ರಪತಿ

ಬೆಂಗಳೂರು
ದಿನಾಂಕ 2-1-1986

ಮುನ್ನುಡಿ

ಸುವಿಖ್ಯಾತ ಸುಕ್ಷೇತ್ರವಾದ ಮಲ್ಲನಮೂಲೆ ಶ್ರೀ ಮಠದ ಆದಿಗುರು ಶ್ರೀ ಶ್ರೀ ಕಂಬಳೇಶ್ವರರ, ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರರ ಮತ್ತು ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಶ್ರೀ ಗದ್ದುಗೆಗಳಿಗೆ ಸುವರ್ಣ ಕಲಶಾರೋಹಣದ ಸಂಸ್ಮರಣೀಯ ಸುಸಂದರ್ಭದಲ್ಲಿ ಅಭಿವಂದನಾ ಸಂಸ್ಮರಣಸಂಪುಟವಾಗಿ 'ಅರ್ಪಣವು' ಸರ್ವಾಂಗ ಸುಂದರವಾಗಿ ಹೊರಬರುತ್ತಿರುವುದು ಅಭಿನಂದನೀಯವಾಗಿದೆ. ಶ್ರೀ ಮಠದ ಹಿರಿಯ ಗುರುವರ್ಯರ ಸವಿನೆನಪಿಗಾಗಿ ಮತ್ತು ಅಂತಹ ಮಹಾಂತ ಮಹಾನ್ ವಿಭೂತಿಗಳನ್ನು ನೆನೆದು ಘನಮುಕ್ತಿಪದವನ್ನು ಕೈಗೂಡಿಸಿಕೊಳ್ಳಲು ಕೈವಲ್ಯೋಪಾಸಕರಿಗೆ ಕೈದೀವಿಗೆ ಯಾಗಬಲ್ಲ ಇಂತಹ ಬೃಹದ್‌ಗ್ರಂಥವೊಂದನ್ನು ಪ್ರಕಟಪಡಿಸುತ್ತಿರುವ ಶ್ರೀ ಮಲ್ಲನ ಮೂಲೆ ಮಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಚನ್ನಬಸವಮಹಾಸ್ವಾಮಿಗಳವರು ಅಭಿನಂದನಾರ್ಹರಾಗಿದ್ದಾರೆ. 'ಶರಣರು ಮೆಟ್ಟಿದ ಧರೆ ಪಾವನ, ಅವರು ಒಲಿದು ಪಾದವನಿಟ್ಟ ನೆಲವೇ ಸುಕ್ಷೇತ್ರ, ಜಲವೇ ಪಾವನತೀರ್ಥ'—ಎಂದಿರುವಂತೆ ತಾವು ನೆಲಸಿದ ಸ್ಥಳವನ್ನು ಜಾಗೃತಸ್ಥಾನವನ್ನಾಗಿ ಮಾರ್ಪಡಿಸಿ ಮಹಾನುಭಾವರಾದ ಪೂಜ್ಯ ಆದಿಗುರು ಶ್ರೀ ಕಂಬಳೇಶ್ವರರು ಪವಾಡಪುರುಷರೆಂದು ಪ್ರಖ್ಯಾತರಾಗಿ ದ್ದಾರೆ. ಮಹಾಮಹಿಮರೆಂದು ನಾಡಿನಲ್ಲೆಲ್ಲ ಮನೆಮಾತಾಗಿದ್ದಾರೆ. ಸಿದ್ಧ ಪ್ರಸಿದ್ಧ ಪುಣ್ಯಪುರುಷರೆಂದು ಪ್ರಾತಃಸ್ಮರಣೀಯರಾಗಿದ್ದಾರೆ, ನಿಚ್ಚ ನಿಚ್ಚ ಶ್ರೀ ಕ್ಷೇತ್ರ ಸಂದರ್ಶ ನಕ್ಕೆ ಬರುವ ಅಸಂಖ್ಯ ಯಾತ್ರಿಕವೃಂದಕ್ಕೆ ಬೇಡಿದ ಇಷ್ಟಾರ್ಥಗಳನ್ನಿತ್ತು ಕೃತಾರ್ಥರ ನ್ನಾಗಿಸುವ ಕಲ್ಪವೃಕ್ಷವಾಗಿದ್ದಾರೆ. ಅವರ ದಿವ್ಯತಪಃಪ್ರಭಾವದಿಂದ ಶ್ರೀ ಕ್ಷೇತ್ರದ ಉಜ್ವಲ ಪರಂಪರೆಯು ಮುಂದೆ ಬಂದಂತಹ ಶ್ರೀ ಮಠದ ಗುರುವರೇಣ್ಯರಿಂದ ಮತ್ತಷ್ಟು ಅಧಿಕವಾಗಿ ಮುಂದುವರೆದುಕೊಂಡು ಬರುತ್ತಿರುವುದನ್ನು ಶ್ರೀ ಮಠದ ಇತಿಹಾಸವು ಪರಿಚಯಿಸುತ್ತಿರುವುದು ಪ್ರಸಿದ್ಧವೇ ಆಗಿದೆ. ಇಂತಹ ಪುಣ್ಯಪುರುಷರ ದಿವ್ಯಸ್ಮೃತಿಗೆ ಅದೊಂದು ಅದ್ಭುತ ಅಮರ ಕಾಣಿಕೆಯಾಗಿ ಸಮರ್ಪಣಗೊಳ್ಳುತ್ತಿರುವ ಅಮೂಲ್ಯ ಕೃತಿಯೇ—'ಅರ್ಪಣ.'

'ಅರ್ಪಣ'—ಇದು ಎರಡು ಭಾಗಗಳನ್ನೊಳಗೊಂಡಿದ್ದು ಸಮಸ್ತ ಸದ್ಭಕ್ತ ಲೋಕಕ್ಕೆ ಒಂದು ರಸದೌತಣವಾಗಿ, ಅರ್ಪಣಗೊಳ್ಳುತ್ತಿರುವುದು ಇಲ್ಲಿ ತುಂಬ ಗಮನಾರ್ಹವಾಗಿದೆ. ಮೊದಲ ಭಾಗದಲ್ಲಿ ಬೆಳಕು ಕಂಡಿರುವ ಸ್ತೋತ್ರ, ಗೀತೆಗಳು, ಕಥನಕಾವ್ಯಗಳು, ವಿದ್ವತ್ಪೂರ್ಣ ಲೇಖನಗಳು–ಶ್ರೀ ಮಲ್ಲನಮೂಲೆ

ಕ್ಷೇತ್ರದ ಮಹಿಮಾನ್ವಿತ ಪ್ರಸಂಗಗಳನ್ನು ಮತ್ತು ತಮ್ಮ ದಿವ್ಯಪಾದ ಸಂಸ್ಪರ್ಶದಿಂದ ಅದನ್ನು ಒಂದು ಅವಿಮುಕ್ತ ಕ್ಷೇತ್ರವನ್ನಾಗಿಸಿ ತೊಳಗಿ ಬೆಳಗಿದ ಅಲ್ಲಿನ ಬೆಳಕಿನ ವ್ಯಕ್ತಿಗಳಾದ ಸಿದ್ಧಪುರುಷರ ಅನುಪಮ ಸಾಧನೆ ಸಿದ್ಧಿಗಳ ಅಸದೃಶ ವ್ಯಕ್ತಿ ಚಿತ್ರಗಳನ್ನು ಅಚ್ಚುಕಟ್ಟಾಗಿ ಹಿಡಿದುಕೊಡುವುದರಲ್ಲಿ ಹೆಚ್ಚಿನ ಯಶಸ್ಸನ್ನು ಸಾಧಿಸಿವೆಯೆಂದೇ ಹೇಳಬಹುದು. ಮೊದಲಲ್ಲಿ ಬರುವ 'ಶ್ರೀ ಗುರುಪರಂಪರೆ'ಯು ಶ್ರೀಮಠದ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಸಾಧನ ಸಾಮಗ್ರಿಗಳನ್ನು ಸಾಧ್ಯವಿದ್ದ ಎಲ್ಲ ಮೂಲಗಳಿಂದಲೂ ಒಂದೆಡೆ ಸಂಗ್ರಹಿಸಿ, ಶ್ರೀ ಮಠದ ಭವ್ಯ ಪರಂಪರೆಯನ್ನು ಅತ್ಯಂತ ಮನೋಜ್ಞವಾಗಿ ನಿರೂಪಿಸುತ್ತ ತುಂಬ ಉಪಯುಕ್ತವಾಗಿದೆ.

"ಅರ್ಪಣ"-ಇದರ ಎರಡನೆಯ ಭಾಗ-ವೀರಶೈವ ದರ್ಶನ ಮತ್ತು ಧರ್ಮಗಳ ವಿರಾಟ್ ದರ್ಶನವನ್ನು ಒಮ್ಮಿಂದೊಮ್ಮೆಗೇ ಮಾಡಿಸುತ್ತ ಮೈನವಿರೇಳಿಸುವಂತಹುದಾಗಿದೆ. ಇದರಲ್ಲಿ ನಾಡಿನ ವಿದ್ವನ್ಮಣಿಗಳ, ಸುಪ್ರಸಿದ್ಧ ಸಾಹಿತಿಗಳ, ಹೆಸರಾಂತ ಲೇಖಕರ, ಶ್ರೇಷ್ಠ ಶಿವಾನಂಭಾವಿಗಳ ಅತ್ಯಮೂಲ್ಯವಾದ ವಿಚಾರಪೂರಿತ ಲೇಖನಗಳನ್ನು ಸಂಚಯನ ಮಾಡಲಾಗಿದೆ. ಸಂಪಾದಕರಾದ ಡಾ. ಎಚ್. ಪಿ. ಮಲ್ಲೇದೇವರು ಅವರು 'ಅರ್ಪಣಕ್ಕೆ' ವಿದ್ವನ್ಮಣಿಗಳ ವಿಶೇಷ ಲೇಖನಗಳನ್ನು ಆಹ್ವಾನಿಸಿ, ಅವುಗಳನ್ನು ಕ್ರಮವರಿತು ಅಣಿಗೊಳಿಸುವುದರಲ್ಲಿ ಹೆಚ್ಚಿನ ಜಾಣ್ಮೆಯನ್ನು ತೋರಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಏಕೆಂದರೆ ವೀರಶೈವ ದರ್ಶನ ಮತ್ತು ಧರ್ಮದ ಸಮಗ್ರಸ್ವರೂಪದ ಇಲ್ಲವೆ ಸಾರಸಂಗ್ರಹದ ಒಂದು ಸಂಕ್ಷಿಪ್ತ ಪರಿಚಯವಾದರೂ ಒಮ್ಮೆಲೆ ಒಟ್ಟಿಗೆ ಒಂದೇ ಕಡೆ ಓದುಗನಿಗೆ ಆಗಬೇಕು ಎಂಬುವ ಮಹದಾಕಾಂಕ್ಷೆಯು ಇಲ್ಲಿ ಸಫಲವಾಗಿದೆ. ಆ ರೀತಿಯಲ್ಲಿಯೇ ಇಲ್ಲಿನ ಲೇಖನಗಳೆಲ್ಲ ಸಿದ್ಧಗೊಂಡು, ಒಂದು ಕ್ರಮವಿಡಿದು ಬಂದಿವೆ ಎಂದು ಹೇಳಬಹುದಾಗಿದೆ. ಸಾಸಿವೆಯಲ್ಲಿ ಸಾಗರವನ್ನು ತುಂಬಿದಂತೆ, ಕರಿಯು ಕನ್ನಡಿಯೊಳಗೆ ಅಡಗಿದಂತೆ, ವಿಶ್ವಮಾನ್ಯವಾದ ವೀರಶೈವ ದರ್ಶನ ಮತ್ತು ಧರ್ಮದ ಸಮಗ್ರ ಅಂಶಗಳನ್ನು ವಿದ್ವತ್ಪೂರ್ಣವಾಗಿ ಚೊಕ್ಕವಾಗಿ ಅಚ್ಚುಕಟ್ಟಾಗಿ ಮನೋಜ್ಞವಾಗಿ ಪ್ರತಿಬಿಂಬಿಸಿ ಪರಿಚಯಿಸುವುದರಲ್ಲಿ 'ಅರ್ಪಣ'-ಈ ಕೃತಿದರ್ಪಣವು-ಸಾಧಕ ಜೀವಿಗಳ ಕೈಗನ್ನಡಿಯಾಗಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇರದು.

ಅರ್ಚನ, ಅರ್ಪಣ, ಅನುಭಾವ-ಇವು ವೀರಶೈವದ ಮೂರು ಮುಖ್ಯ ಕ್ರಿಯಾಚರಣೆಗಳು. ಇವು ಬೇರೆ ಬೇರೆಯಾಗಿರದೆ ಒಂದಕ್ಕೊಂದು ಓತಪ್ರೋತವಾಗಿ ಸಂಬಂಧಗೊಂಡು ಪರಿಪೂರ್ಣಗೊಳ್ಳುತ್ತವೆ. ಈ ದೃಷ್ಟಿಯಿಂದ ನೋಡಿದಾಗ ವೀರಶೈವ ದರ್ಶನ ಮತ್ತು ಧರ್ಮದ ಸಾರಸರ್ವಸ್ವವನ್ನು ಸುಲಭಸುಂದರರೂಪದಲ್ಲಿ ಅಂದವಾಗಿ ಸಿದ್ಧಗೊಳಿಸಿ ಸರ್ವರಿಗೂ ಉಣಬಡಿಸಲು ಹೊರಟಿರುವ ಈ 'ಅರ್ಪಣ'ವು ತನ್ನ ಹೆಸರನ್ನು ಸಾರ್ಥಕಗೊಳಿಸಿದೆ ಎನ್ನಬಹುದು. ಮರ್ತ್ಯದ ಮೇಲಿನ ಮಾನವನ ಬದುಕು ಮುಡಿಯಾಗಿ ಇಡಿಯಾಗಿ ಪರಿಪೂರ್ಣದೆಡೆಗೆ ನಡೆದು ಪೂರ್ಣಗೊಳ್ಳಬೇಕಾದರೆ ವೀರಶೈವ

ಧರ್ಮವು ಎಂತಹ ಸರಳ ಸುಂದರ ಮಾರ್ಗವನ್ನು ಹಾಕಿಕೊಟ್ಟಿದೆ ಎಂಬುದರ ಪರಿಚಯ ಈ 'ಅರ್ಪಣ'ದಲ್ಲಿ ಸಮರ್ಪಕವಾಗಿ ನಿರೂಪಣಗೊಂಡಿದೆ ಎನ್ನುವುದು ಇಲ್ಲಿರುವ ಲೇಖನಗಳಿಂದ ಸುಸ್ಪಷ್ಟವಾಗುತ್ತದೆ.

ದೇವ-ಜೀವ-ಜಗತ್ತು ; ದೀಕ್ಷೆ-ಇಷ್ಟಲಿಂಗೋಪಾಸನೆ-ವೀರಶೈವ ನಿತ್ಯಾಚರಣೆಗಳು; ಅಷ್ಟಾವರಣ-ಪಂಚಾಚಾರ-ಷಟ್‌ಸ್ಥಲಗಳು; ಭಕ್ತಿಜ್ಞಾನ ಕ್ರಿಯೆಗಳ ಸಾಮರಸ್ಯ, ಶರಣಮಾರ್ಗ, ಶಿವಯೋಗಸಿದ್ಧಿ, ಸತ್ಯಶುದ್ಧಕಾಯಕ, ದಾಸೋಹ, ವೀರಶೈವ ಧರ್ಮದ ವೈಶಿಷ್ಟ್ಯ, ವೀರಶೈವ ದರ್ಶನ ಮತ್ತು ಧರ್ಮ–ಒಂದು ಪಕ್ಷಿನೋಟ ; ಇವುಗಳನ್ನು ಕುರಿತು ಹೇಳುವ ಇಲ್ಲಿನ ಲೇಖನಗಳು ವಿದ್ವತ್ಪೂರ್ಣವಾಗಿದ್ದು ವೀರಶೈವ ಧರ್ಮದ ಅತ್ಯಮೂಲ್ಯವಾದ ಒಂದು ಕೈಪಿಡಿಯಾಗಲು 'ಅರ್ಪಣ'ಕ್ಕೆ ಅರ್ಹತೆಯನ್ನು ತಂದುಕೊಟ್ಟಿವೆಯೆಂದು ಹೇಳಬಹುದು. ಕೆಳಗಿಳಿದು ಬಂದ ಜೀವ ಮೇಲೇರಿ ಹೋಗಿ ಮಹಾದೇವನಾಗುವ ಮೃಡದರ್ಶನದ ಸಂಕ್ಷಿಪ್ತಪರಿಚಯ ಇಲ್ಲಿ ಸಾಧಕರಿಗೆ ಲಭಿಸುವುದು, ಅಲ್ಲದೆ ವೀರಶೈವದ ಹಿರಿಮೆ-ಗರಿಮೆಗಳನ್ನು, ಆಳ-ಅಗಲಗಳನ್ನು, ಸಾಧನೆ-ಸಿದ್ಧಿಗಳನ್ನು, ದಾರಿ-ಗುರಿಗಳನ್ನು, ವಿಶೇಷತೆ-ಸರಳತೆಗಳನ್ನು ಸುಲಭ ರೀತಿಯಲ್ಲಿ ವಿಶ್ಲೇಷಿಸಿ ವಿವರಿಸುವ ಇಲ್ಲಿನ ಲೇಖಕರ ಎಲ್ಲ ಬರಹಗಳೂ ತುಂಬ ಚೆನ್ನಾಗಿವೆ. ಆದುದರಿಂದ 'ಅರ್ಪಣ' ಹೆಬ್ಬೊತ್ತಿಗೆಯು ಸರ್ವರಿಗೂ ಸುಲಭಗ್ರಾಹ್ಯವಾಗಿ ಸಂಗ್ರಾಹ್ಯಯೋಗ್ಯವಾಗಿದೆಯೆಂದು ಹೇಳಲು ಸಂತೋಷವೆನಿಸುವುದು.

'ಅರ್ಪಣ'-ಬೃಹತ್ಕೃತಿಯಾದ ಈ ಅಭಿವಂದನಾ ಗ್ರಂಥವು ಅತ್ಯಲ್ಪಕಾಲದಲ್ಲಿಯೇ ಅತ್ಯಂತ ಅಂದವಾಗಿ ಆದಿ ಶ್ರೀ ಗುರುಕಂಬಳೇಶ್ವರರ ಸಂಸ್ಮರಣೀಯ ಸ್ಮಾರಕ ಗ್ರಂಥವಾಗಿ ಪ್ರಕಟವಾಗುತ್ತಿರುವುದು ಒಂದು ದೊಡ್ಡ ಸಾಹಸ. ಡಾ. ಎಚ್.ಪಿ. ಮಲ್ಲೇದೇವರು ಅವರ ಹಿರಿಯ ಸಂಪಾದಕತ್ವದಲ್ಲಿ ಇಂತಹ ಉತ್ಕೃಷ್ಟ ಗ್ರಂಥವು ಸಮಾಜಕ್ಕೆ ಅರ್ಪಿತವಾಗುತ್ತಿರುವುದು ಒಂದು ಸುಯೋಗವೆಂದೇ ಹೇಳಬಹುದು. ವಿರಾಮವನ್ನೇ ಕಾಣದ ಅವಿರತ ಪರಿಶ್ರಮ, ನಿರಂತರ ಕಾರ್ಯತತ್ಪರತೆ, ಪುಟಿದು ಬುಗ್ಗೆಯೇಳುವ ಶ್ರದ್ಧಾಭಕ್ತಿ, ಗುರುತರ ಕಾರ್ಯನಿರ್ವಹಣೆಗೆ ಬೇಕಾದ ಸಂಘಟನಾಶಕ್ತಿ, ಪಾಂಡಿತ್ಯ ಪ್ರತಿಭಾ ಪೂರ್ಣವಾದ ಸಾಹಿತ್ಯ ಸೃಷ್ಟ್ಯನುರಕ್ತಿ, ಇವೇ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡಿರುವ ಸಂಪಾದಕರು ನಿಜಕ್ಕೂ ಅಭಿನಂದನಾರ್ಹರು. ಡಾ. ಮಲ್ಲೇದೇವರವರ ಈ ಸಾಹಸವಂತೂ ಪ್ರಶಂಸನೀಯವಾದುದು.

ದೇವರು-ಧರ್ಮದ ಬಗೆಗೆ, ಆಚಾರ-ವಿಚಾರಗಳ ಬಗೆಗೆ ಜನತೆಯಲ್ಲಿ ನಿಷ್ಠೆ ನಂಬಿಕೆಗಳು ಸಡಿಲವಾಗುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ, ಅವುಗಳ ಅನಿವಾರ್ಯತೆ ಪ್ರಸ್ತುತತೆಯನ್ನು ಸ್ಪಷ್ಟವಾಗಿ ಮನದಟ್ಟಾಗಿಸಿ, ಆಧುನಿಕ ವಿಚಾರವಂತರನ್ನೂ ತಲೆದೂಗಿಸಿ ಮೆಚ್ಚಿಸಬಲ್ಲುವು ಇಲ್ಲಿನ ವಿಚಾರಪೂರಿತ ಲೇಖನಗಳು. ಅಂತೆಯೇ ಮನುಕುಲವನ್ನು ತನ್ನ ಉದ್ಧಾರದ ಹಾದಿಯತ್ತ ಹೊರಳುವಂತೆ ದಾರಿ ತೋರುವ ಮತ್ತು ಸರ್ವಾದ

ರಣೀಯವಾದ ವೀರಶೈವ ದರ್ಶನ ಮತ್ತು ಧರ್ಮವನ್ನು ಪರಿಚಯ ಮಾಡಿಕೊಡುವ ಇಂತಹ ಬೆಲೆಯುಳ್ಳ ಗ್ರಂಥವೊಂದನ್ನು ಪ್ರಕಟಪಡಿಸುತ್ತಿರುವ ಮಲ್ಲನಮೂಲೆ ಮಠಾಧೀಶರಾದ ಪರಮಪೂಜ್ಯ ಶ್ರೀ ಚನ್ನಬಸವಮಹಾಸ್ವಾಮಿಗಳವರನ್ನೂ, ಉನ್ನತಮಟ್ಟದಲ್ಲಿ ಶ್ರೇಷ್ಠ ರೀತಿಯಲ್ಲಿ ಗ್ರಂಥವನ್ನು ಸಂಪಾದಿಸಿಕೊಟ್ಟಿರುವ ಡಾ. ಎಚ್. ಪಿ. ಮಲ್ಲೇದೇವರು ಅವರನ್ನೂ, ವಿದ್ವನ್ಮಣಿಗಳಾದ ವಿವಿಧ ಲೇಖಕರನ್ನೂ ಈ ಸಂದರ್ಭದಲ್ಲಿ ಹೃದಯಾರೆ ಅಭಿನಂದಿಸುತ್ತೇನೆ.

'ಅರ್ಪಣ'-ಇದು ಎಲ್ಲರ ಬದುಕಿನಲ್ಲಿ ಆಳವಡಲಿ ಎಂಬುದಾಗಿ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶಿವಂ ಭೂಯಾತ್

ಬಸಪ್ಪ ದಾನಪ್ಪ ಜತ್ತಿ

ಸಂಪಾದಕನ ಅರಿಕೆ

ಸುಕ್ಷೇತ್ರ ಮಲ್ಲನಮೂಲೆ ಶ್ರೀಮಠವು ಮೈಸೂರು ಊಟಿ ಹೆದ್ದಾರಿಯಲ್ಲಿ ನಂಜನಗೂಡಿಗೆ ಸನಿಹವಾಗಿ ಕಪಿಲಾನದಿಯ ತೀರದ ಪ್ರಶಾಂತಪ್ರದೇಶದಲ್ಲಿದೆ.

ಲೋಕದಂತೆ ಬಾರರು ಲೋಕದಂತೆ ಇರರು
ಪುಣ್ಯದಂತೆ ಹೋಗರು ನೋಡಯ್ಯಾ
ಪುಣ್ಯದಂತೆ ಬಪ್ಪರು ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಹೋಹರು ನೋಡಯ್ಯಾ
ಉರಿಲಿಂಗದೇವಾ ನಿಮ್ಮ ಶರಣರು

—ಉರಿಲಿಂಗದೇವರು

ಉಪಮಿಸಬಾರದ ಉಪಮಾತೀತರು
ಕಾಲಕರ್ಮರಹಿತರು, ಭವವಿರಹಿತರು
ಕೂಡಲಸಂಗಮದೇವಾ, ನಿಮ್ಮ ಶರಣರು

—ಬಸವಣ್ಣನವರು

ಇಂತಹ ಉಪಮಿಸಬಾರದ ಉಪಮಾತೀತರೂ, ಕಾಲಕರ್ಮರಹಿತರೂ ಮಹಾವಿಭೂತಿಗಳೂ ಆದ ಆದಿಶ್ರೀಗುರು ಕಂಬಳೇಶ್ವರರಿಂದ ಸುಮಾರು ಇನ್ನೂರು ವರ್ಷಗಳ ಹಿಂದೆ ಸಂಸ್ಥಾಪಿತವಾದ ಮಲ್ಲನಮೂಲೆ ಶ್ರೀಮಠವು ಸುವಿಖ್ಯಾತ ಸಾಧನಾತಪೋಭೂಮಿಯಾಗಿ ಅವಿಮುಕ್ತಕ್ಷೇತ್ರವಾಗಿ ನಿಜಸಾಧಕರ ಮನೋಭಿಲಾಷೆಯನ್ನು ಈಡೇರಿಸುವ ಜಾಗೃತಸ್ಥಾನವಾಗಿ ದಿವ್ಯಕ್ಷೇತ್ರವಾಗಿದೆ. ಮಹಾಶಿವಯೋಗಿವರೇಣ್ಯರಾದ ಆದಿಗುರು ಕಂಬಳೇಶ್ವರರ ಘನವ್ಯಕ್ತಿತ್ವ, ಅವರು ಎಸಗಿದ ಲೀಲೆಗಳು, ಅವರು ಸಾಧಿಸಿದ ಮಹತ್ಕಾರ್ಯಗಳು ಮಾತು ಮನಂಗಳಿಗೆ ಮೀರಿದುವು. ಅವರ ಕರಕಮಲ ಸಂಜಾತರಾಗಿ ಸಚ್ಚಿದಾನಂದಸ್ವರೂಪಿಗಳಾದ ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರರು, ಅವರ ಕರಕಮಲ ಸಂಜಾತರಾದ ಕಾರುಣ್ಯಮೂರ್ತಿ ಪರಮಪೂಜ್ಯ ಶ್ರೀಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಸಕಲ ಜೀವಾವಳಿಗೆ ಲೇಸಮಾಡುತ್ತ, ಸರ್ವದಾ ಭಕ್ತರ ಆಧ್ಯಾತ್ಮಿಕ ಹಾಗೂ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸಿರುವುದು ಮೈಸೂರು ಜಿಲ್ಲೆಯ ಜನತೆಗೆ ಸುವಿದಿತ. ಮಲ್ಲನಮೂಲೆ ಮಠಾಧಿಪತಿಗಳಾದ ಪರಮಪೂಜ್ಯ ಶ್ರೀಶ್ರೀ ಚನ್ನಬಸವಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ದಿನಾಂಕ 8-9-1985ರಂದು ಶ್ರೀಮಠದ ಭಕ್ತರು ಸಭೆ ಸೇರಿ, ಸಮಸ್ತ ಭಕ್ತರ ಐಹಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಾಗಿ ಶ್ರೀಗಂಧದಂತೆ ತಮ್ಮನ್ನು ಸಮರ್ಪಿಸಿಕೊಂಡ ಶ್ರೀಗುರುತ್ರಯರ ಘನಸಾಧನೆ ಸಿದ್ಧಿಯನ್ನು ಭಕ್ತಿಯಿಂದ ಸಂಸ್ಮರಿಸಿ ಕೆಲವು ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಂಡರು.

1. ಶ್ರೀಮಠದ ಶ್ರೀಗುರುತ್ರಯರ ಗದ್ದುಗೆಗಳಿಗೆ ಸುವರ್ಣಕಲಶಾರೋಹಣವನ್ನೇರ್ಪಡಿಸುವುದು.

2. ಕಲಶಾರೋಹಣದ ಪರಮ ಪವಿತ್ರ ಶುಭ ಸಂದರ್ಭದಲ್ಲಿ ಕರ್ನಾಟಕದ ಎಲ್ಲ ಜಗದ್ಗುರುವರ್ಯರನ್ನು ಹಾಗೂ ಇತರ ಮಠಾಧೀಶ್ವರರನ್ನು ಭಕ್ತಿಯಿಂದ ಆಹ್ವಾನಿಸಿ ಎರಡು ದಿವಸಗಳ ಶಿವಾನುಭವ ಕಾರ್ಯಕ್ರಮವನ್ನೇರ್ಪಡಿಸುವುದು.

3. ಇಂತಹ ಶುಭಸಂದರ್ಭದಲ್ಲಿ ಪರಮಪೂಜ್ಯ ಶ್ರೀಗಳವರಿಗೆ ಅಭಿವಂದನ ಸಂಪುಟವನ್ನು ಸಮರ್ಪಿಸುವುದು.

ಅಂದಿನ ಸಭೆಯಲ್ಲಿ 'ಅಭಿವಂದನ ಸಂಪುಟ'ದ ಜವಾಬ್ದಾರಿಯನ್ನು ವಹಿಸಿ ಕೊಂಡು, ಗ್ರಂಥವನ್ನು ಹೊರತರಬೇಕೆಂದು ಮಹಾಜನರು ಒಮ್ಮತದಿಂದ ಹೇಳಿದರು. ಮೊದಮೊದಲು ಈ ಗುರುತರ ಜವಾಬ್ದಾರಿಯನ್ನು ಅಂಗೀಕರಿಸಿ 'ಅಭಿವಂದನ ಸಂಪುಟ' ವನ್ನು ಕೇವಲ ಮೂರು ತಿಂಗಳಲ್ಲಿ ಹೊರತರಲು ಕಷ್ಟವಾಗುತ್ತದೆಂದು ಹೇಳಿದೆ. ಆದರೆ ಶ್ರೀ ಗುರುವರ್ಯರ ಬಗ್ಗೆ ಭಕ್ತಿ, ಮಹಾಜನತೆಯ ಪ್ರೀತಿಯ ಅಭೀಪ್ಸೆ ಮತ್ತು ಬಹುಹಿಂದಿನಿಂದಲೂ ನನ್ನ ಪೂಜ್ಯ ಮಾತಾಪಿತೃಗಳು ಶ್ರೀಮಠದ ಶ್ರೀಗುರುವರ್ಯರಿಗೆ ಸಲ್ಲಿಸಿದ ಸೇವೆ ಇವು ನನ್ನನ್ನು ನಂತರ ನಿರುತ್ತರನನ್ನಾಗಿ ಮಾಡಿ ದುವು. ಪರಮಪೂಜ್ಯ ಶ್ರೀಶ್ರೀ ಇಮ್ಮಡಿ ಕಂಬಳೇಶ್ವರರು, ಅವರ ಕರಕಮಲಸಂಜಾತ ರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಎತ್ತಿನ ಗಾಡಿಯಲ್ಲಿ ಹೊನ್ನೂರಿಗೆ ಬಿಜಯಂಗೈಸಿದಾಗಲೆಲ್ಲ ನಮ್ಮ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದರು. ನನ್ನ ಪೂಜ್ಯ ತಂದೆ ತಾಯಿಗಳು ಅತ್ಯಂತ ಶ್ರದ್ಧಾಭಕ್ತಿಯಿಂದ ಶ್ರೀ ಗುರುಸೇವೆಯನ್ನು ಮಾಡುತ್ತಿದ್ದರು. ಇಂತಹ ಸೇವೆ ಮಾಡುವ ಸುಯೋಗ ನನ್ನ ಮಾತಾಪಿತೃಗಳಿಗೆ ಸುಮಾರು ಅರವತ್ತು ವರ್ಷಕ್ಕಿಂತಲೂ ಹೆಚ್ಚುಕಾಲ ಲಭ್ಯವಾಗಿತ್ತು. ಆದ್ದರಿಂದ ಬಯಸದೆ ತಾನಾಗಿ ಶ್ರೀಗುರುಕೃಪೆಯಿಂದ ಪ್ರಾಪ್ತವಾದ ಈ ಪವಿತ್ರ ಕಾರ್ಯವನ್ನು ಸ್ವೀಕರಿಸಿ, ನನ್ನ ಅಳಿಲು ಸೇವೆಯನ್ನು ಶ್ರೀಗುರುವರ್ಯರ ದಿವ್ಯ ಸನ್ನಿಧಿಗೆ ಸಮರ್ಪಿ ಸೋಣ ಎಂಬ ಭಕ್ತಿಭಾವನೆಯಿಂದ ಈ ಬೃಹತ್ಕಾರ್ಯದಲ್ಲಿ ಪ್ರವೃತ್ತನಾದೆ.

'ಅರ್ಪಣ' ಸಂಪುಟವನ್ನು ಎರಡು ವಿಭಾಗಗಳಾಗಿ ಮಾಡಿ, ಮೊದಲನೆಯ ಭಾಗಕ್ಕೆ 'ಶ್ರೀಗುರುಪರಂಪರೆ' ಎಂಬ ಶೀರ್ಷಿಕೆಯನ್ನಿತ್ತು ಈ ಸುಕ್ಷೇತ್ರಕ್ಕೆ 'ಮಲ್ಲನಮೂಲೆ' ಎಂಬ ಹೆಸರು ಬರಲು ಕಾರಣಪುರುಷರ ; ಅಲ್ಲಿ ಶ್ರೀಮಠವನ್ನು ಸಂಸ್ಥಾಪಿಸಿ ಇದುವರೆಗೆ ಸಮಸ್ತಭಕ್ತರ ಸರ್ವತೋಮುಖ ಉದ್ಧಾರಕ್ಕಾಗಿ ಶ್ರಮಿಸಿದ ಮಹಾವಿಭೂತಿಗಳ ಪುಣ್ಯಚರಿತೆ, ಸಾಧನೆ ಸಿದ್ಧಿಗಳನ್ನೂ, ಆ ಮಹಾಶ್ರೀಗುರುಪರಂಪರೆಯಲ್ಲಿ ಬಂದ ಇಂದಿನ ಪೀಠಾಧಿಪತಿಗಳ ನಿಜಸಾಧನೆಯನ್ನೂ ಪರಿಚಯಿಸುವ ಲೇಖನಗಳನ್ನು ಕೊಟ್ಟಿದೆ.

'ವೀರಶೈವದರ್ಶನ ಮತ್ತು ಧರ್ಮ' ಎಂಬ ಅಭಿಧಾನದಿಂದ ಎರಡನೆಯ ಭಾಗ ದಲ್ಲಿ ವಿಚಾರಪೂರ್ಣ ಲೇಖನಗಳನ್ನು ಸಹೃದಯ ಸದ್ಭಕ್ತರಿಗೆ ನೀಡಲು ಪ್ರಯತ್ನಿಸಲಾ ಲಾಗಿದೆ. ದೇವ, ಜೀವ, ಜಗತ್ತು, ಜಾನಪದಸಾಹಿತ್ಯದಲ್ಲಿ ವೀರಶೈವಧರ್ಮ, ಶರಣ ಶರಣೆಯರು ರೂಪಿಸಿದ ಮಾರ್ಗ, ದೀಕ್ಷೆ, ಇಷ್ಟಲಿಂಗೋಪಾಸನೆ, ಅಷ್ಟಾವರಣ, ಪಂಚಾ

ಚಾರ, ವೀರಶೈವ ನಿತ್ಯಾಚರಣೆ, ಷಟ್‌ಸ್ಥಲಗಳು, ಶಿವಯೋಗ, ಸತ್ಯಶುದ್ಧಕಾಯಕ, ದಾಸೋಹ, ಅನುಭವಮಂಟಪ, ಭಕ್ತಿ-ಜ್ಞಾನ–ಕ್ರಿಯೆಗಳ ಸಾಮರಸ್ಯ, ವೀರಶೈವ ಧರ್ಮದ ವೈಶಿಷ್ಟ್ಯ, ವೀರಶೈವ ದರ್ಶನ ಮತ್ತು ಧರ್ಮ—ಒಂದು ಪಕ್ಷಿನೋಟ, ಇಪ್ಪತ್ತನೆಯ ಶತಮಾನದಲ್ಲಿ ಪ್ರಕಟವಾದ ವೀರಶೈವಧರ್ಮದ ಬಗ್ಗೆ ಕೆಲವು ವಿಶಿಷ್ಟ ಕೃತಿಗಳು— ಇತ್ಯಾದಿ ಲೇಖನಗಳನ್ನು ಎರಡನೆಯ ಭಾಗದಲ್ಲಿ ಅಳವಡಿಸಿದೆ.

ಆಯಾ ವಿಷಯದಲ್ಲಿ ತಜ್ಞರಾದ ವಿದ್ವಾಂಸರನ್ನೂ, ಸುಪ್ರಸಿದ್ಧ ಸಾಹಿತಿಗಳನ್ನೂ ಕೃಪೆಯಿಟ್ಟು ಆದಷ್ಟು ಜಾಗ್ರತೆ ತಮ್ಮ ಕಾರ್ಯಗೌರವಗಳ ಮಧ್ಯೆ ಬಿಡುವು ಮಾಡಿಕೊಂಡು ಲೇಖನಗಳನ್ನು ಬರೆದುಕೊಡಬೇಕೆಂದು ಸಂಪ್ರಾರ್ಥಿಸಿದಾಗ, ಅವರೆಲ್ಲರೂ ದಯವಿಟ್ಟು ಒಂದು ತಿಂಗಳೊಳಗೆ ಲೇಖನಗಳನ್ನು ಕಳುಹಿಸಿ ಉಪಕಾರವೆಸಗಿ ಈ ಕೃತಿ ಇಷ್ಟು ಶೀಘ್ರವಾಗಿ ಹೊರಬರಲು ಕಾರಣರಾಗಿದ್ದಾರೆ. ಆತ್ಮೀಯಮಿತ್ರರಾದ ಈ ಲೇಖಕರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ನಮ್ರ ವಂದನೆಗಳು.

'ಅರ್ಪಣ' ಸಂಪುಟ ಮುದ್ರಣವಾಗುತ್ತಿರುವಾಗಲೇ ಮುದ್ರಿತ ಪುಟಗಳ ಪ್ರತಿಯನ್ನು ಕಳುಹಿಸಿ ಸಂದೇಶವನ್ನು ಅನುಗ್ರಹಿಸಬೇಕೆಂದು ಪರಮಪೂಜ್ಯ ಜಗದ್ಗುರುವರ್ಯರೆಲ್ಲರ ಮಹಾಸನ್ನಿಧಿಯಲ್ಲಿ ಭಕ್ತಿಪುರಸ್ಸರವಾಗಿ ಪ್ರಣಾಮಪೂರ್ವಕ ಅರಿಕೆ ಮಾಡಿಕೊಂಡಾಗ, ಎಲ್ಲ ಜಗದ್ಗುರುವರ್ಯರೂ ಕೃಪೆಯಿಟ್ಟು ಸಂದೇಶವನ್ನು ಅನುಗ್ರಹಿಸಿ ಆಶೀರ್ವದಿಸಿದ್ದಾರೆ. ಪರಮಪೂಜ್ಯ ಜಗದ್ಗುರುವರ್ಯರೆಲ್ಲರಿಗೂ ಭಕ್ತಿಪೂರ್ವಕ ಶಿರಸಾಷ್ಟಾಂಗ ಪ್ರಣಾಮಗಳನ್ನರ್ಪಿಸುತ್ತೇನೆ.

17-1-1986ನೆಯ ಶುಕ್ರವಾರ ಬೆಳಗ್ಗೆ ಮಲ್ಲನಮೂಲೆ ಶ್ರೀಮಠದ ಶ್ರೀ ಗುರುತ್ರಯರ ಗದ್ದುಗೆಗಳಿಗೆ ಸುವರ್ಣಕಲಶಾರೋಹಣ ಮಾಡುವ ಪರಮಪವಿತ್ರ ಸಂದರ್ಭದಲ್ಲಿ, ಅಂದಿನ ಶಿವಾನುಭವ ಸಮ್ಮೇಳನದ ಅಧ್ಯಕ್ಷರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು, ಬೃಹನ್ಮಠ, ಚಿತ್ರದುರ್ಗ ; ಉದ್ಘಾಟಕರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು, ಮೂರುಸಾವಿರ ಮಠ, ಹುಬ್ಬಳ್ಳಿ ; ಶ್ರೀ ಮಲ್ಲನಮೂಲೆ ಮಠದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳವರ ಭಾವಚಿತ್ರವನ್ನು ಅನಾವರಣ ಮಾಡಿದ ಶ್ರೀ॥ ನಿ॥ ಪ್ರ॥ ಸ್ವ॥ ಡಾ॥ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು, ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ ; ಈ ಮಹಾಸ್ವಾಮಿಗಳೆಲ್ಲರ ದಿವ್ಯ ಸಮ್ಮುಖದಲ್ಲಿ, ಇತರ ಹರಗುರುಚರಮೂರ್ತಿಗಳ ಉಪಸ್ಥಿತಿಯಲ್ಲಿ ; ಅಂದಿನ ಸಮಾರಂಭದ ಮುಖ್ಯ ಅತಿಥಿಗಳಾದ ಭಾರತದ ಮಾಜಿ ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಬಸಪ್ಪ ದಾನಪ್ಪ ಜತ್ತಿ ಅವರ, ಕರ್ನಾಟಕ ಸರ್ಕಾರದ ಕಂದಾಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಆರ್. ಬೊಮ್ಮಾಯಿ ಅವರ ಮತ್ತು ಉಪಸ್ಥಿತರಿದ್ದ ಸಕಲ ಸಭಾಸದರ ಸಮಕ್ಷಮದಲ್ಲಿ ; ಸುತ್ತೂರು ವೀರಸಿಂಹಾಸನಾಧೀಶ್ವರರಾದ ರಾಜಗುರುತಿಲಕ ಪರಮ

ಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕೃಪೆಯಿಟ್ಟು ತಮ್ಮ ಕಾರುಣ್ಯಮಯ ಅಮೃತಹಸ್ತದಿಂದ ಗ್ರಂಥ ಬಿಡುಗಡೆ ಮಾಡುವುದು ಅತ್ಯಂತ ಸಂತಸವನ್ನುಂಟುಮಾಡಿದೆ. ಈ ಜಗದ್ಗುರುವರ್ಯರೆಲ್ಲರ ದಿವ್ಯ ಸನ್ನಿಧಿಗೆ ಶಿರಸಾಷ್ಟಾಂಗ ಪ್ರಣಾಮಗಳನ್ನೂ, ಹರಗುರುಚರಮೂರ್ತಿಗಳ ಅಡಿದಾವರೆಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನೂ, ಸಮಸ್ತ ಭಕ್ತವೃಂದಕ್ಕೆ ಹೃತ್ಪೂರ್ವಕ ನಮಸ್ಕಾರಗಳನ್ನೂ ಅರ್ಪಿಸುತ್ತೇನೆ.

'ಅರ್ಪಣ' ಸಂಪುಟಕ್ಕೆ ಆಶೀರ್ವಚನವನ್ನನುಗ್ರಹಿಸಿ, ಸಮಸ್ತಕಾರ್ಯಗಳಿಗೂ ಪ್ರೇರಕಶಕ್ತಿಯಾಗಿ, ಈ ಸಂಪುಟ ಇಷ್ಟೊಂದು ಜಾಗ್ರತೆಯಾಗಿ ಹೊರಬರಲು ಸರ್ವರೀತಿಯಲ್ಲಿಯೂ ಸಹಾಯವಿತ್ತು, ಆಶೀರ್ವದಿಸಿರುವ ಮಲ್ಲನಮೂಲೆ ಶ್ರೀಮಠದ ಅಧಿಪತಿಗಳಾಗಿರುವ ಪರಮಪೂಜ್ಯ ಶ್ರೀ ಶ್ರೀ ಚನ್ನಬಸವ ಮಹಾಸ್ವಾಮಿಗಳವರಿಗೆ ಭಕ್ತಿಪುರಸ್ಸರವಾಗಿ ಕೃತಜ್ಞತಾಪೂರ್ವಕ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

'ಜಾಣನಂ ಲೌಕಿಕ ಪಾರಮಾರ್ಥಗಳೆರಡನು ಮಾಣದೆ ಕೂಡಿ ನಡೆಸುತಿಹನಿಂತು' ಎಂಬ ಶ್ರೀ ನಿಜಗುಣ ಶಿವಯೋಗಿಗಳ ಉಕ್ತಿಗೆ ನಿದರ್ಶನಸ್ವರೂಪರಾಗಿರುವ ಭಾರತದ ಮಾಜಿ ಉಪರಾಷ್ಟ್ರಪತಿಗಳೂ, ಬಸವ ಸಮಿತಿಯ ಸಂಸ್ಥಾಪಕ ಅಧ್ಯಕ್ಷರೂ ಆದ ಸನ್ಮಾನ್ಯ ಶ್ರೀ ಬಸಪ್ಪ ದಾನಪ್ಪ ಜತ್ತಿಯವರು ತಮ್ಮ ಕಾರ್ಯಗೌರವಗಳ ಮಧ್ಯೆ ಬಿಡುವು ಮಾಡಿಕೊಂಡು ಈ 'ಅರ್ಪಣ' ಸಂಪುಟಕ್ಕೆ ರತ್ನಾಭರಣದಂತಿರುವ ಅನರ್ಘ್ಯ ಮುನ್ನುಡಿಯನ್ನು ಬರೆದುಕೊಟ್ಟಿರುವುದಕ್ಕಾಗಿ, ಅವರಿಗೆ ಕೃತಜ್ಞತಾಪೂರ್ವಕವಾದ ಹಾರ್ದಿಕ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ.

ಶ್ರೀ ಮಲ್ಲನಮೂಲೆ ಮಠದಲ್ಲಿ 8-9-1985ರಂದು ನಡೆದ ಸಭೆಯಲ್ಲಿ ಸ್ಮರಣ ಸಂಪುಟದ ಸಂಪಾದನ ಕಾರ್ಯದ ಜವಾಬ್ದಾರಿಯನ್ನು ನನಗೆ ವಹಿಸಿ ಸರ್ವರೀತಿಯ ಸಕ್ರಿಯ ಸಹಕಾರವನ್ನಿತ್ತು, ಈ ಕೃತಿ ಹೊರಬರಲು ಕಾರಣರಾದ ಶ್ರೀಮಠದ ಸಮಸ್ತ ಭಕ್ತ ವೃಂದಕ್ಕೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಕಂಬಳೇಶ್ವರ ಎಂಬುದು ವ್ಯಾಕರಣ ದೃಷ್ಟಿಯಿಂದ ಶುದ್ಧ ರೂಪ. ಕಂಬಳೀಶ್ವರ ಎಂಬುದು ಜನಸಾಮಾನ್ಯರ ಬಳಕೆಯಲ್ಲಿರುವ ರೂಪ. ಆದ್ದರಿಂದ ಎರಡು ರೂಪಗಳನ್ನು ಈ ಗ್ರಂಥದಲ್ಲಿ ಉಪಯೋಗಿಸಿದೆ.

ಕರಡು ತಿದ್ದುವ ಕಾರ್ಯವನ್ನು ನಿರ್ವಹಿಸಿದ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ಹಿರಿಯ ಸಹಾಯಕ ಸಂಶೋಧಕರೂ ಮಿತ್ರರೂ ಆದ ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್ಯ, ಅನೇಕ ರೀತಿ ಸಹಕಾರವಿತ್ತ ಮಿತ್ರರಾದ ವಿದ್ವಾನ್ ಎಚ್. ವಿ. ನಾಗರಾಜರಾವ್, ವಿದ್ವಾನ್ ಎಚ್. ಎಸ್. ಘಾಟಕ್; ಭಾವಚಿತ್ರಗಳನ್ನು ಸುಂದರವಾಗಿ ತೆಗೆದುಕೊಟ್ಟಿರುವ ಮಿತ್ರರಾದ ಶ್ರೀ ತಿಪ್ಪೇಸ್ವಾಮಿ, ಒಪ್ಪೋಲೆಯನ್ನು ಸಿದ್ಧಪಡಿಸಿದ ಮಿತ್ರರಾದ ಶ್ರೀ ಡಿ. ಸಿದ್ಧ

ಗಂಗಯ್ಯ ಇವರೆಲ್ಲರಿಗೂ ಕೃತಜ್ಞತೆಗಳು. ಈ ಗ್ರಂಥವನ್ನು ಹೊರತರುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದ ಆತ್ಮೀಯ ಮಿತ್ರರೆಲ್ಲರಿಗೂ ವಂದನೆಗಳು.

ಈ ಸಂಪುಟವನ್ನು ಅಹರ್ನಿಶಿ ಶ್ರಮಿಸಿ ಕೇವಲ ಒಂದೂವರೆ ತಿಂಗಳಲ್ಲಿ ಅಚ್ಚು ಮಾಡಿಕೊಟ್ಟ ರಾಜೇಂದ್ರ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರೂ ಮಿತ್ರರೂ ಆದ ಶ್ರೀ ಲೋಕಪ್ಪ ಅವರಿಗೂ, ಅವರ ಸಿಬ್ಬಂದಿವರ್ಗದವರಿಗೂ ; ಚಿತ್ರಗಳು ಮತ್ತು ರಕ್ಷಾ ಕವಚವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಜೆ.ಎಸ್.ಎಸ್. ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರಾದ ಆತ್ಮೀಯ ಮಿತ್ರರಾದ ಶ್ರೀ ಎಚ್. [illegible]. ಬಸವಣ್ಣನವರಿಗೂ ಮತ್ತು ಅವರ ಸಿಬ್ಬಂದಿವರ್ಗದವರಿಗೂ ಆತ್ಮೀಯ ನಮನಗಳು.

ಅಘಟಿತಘಟನಾಶೀಲರೂ ಮಹಾಶಿವಯೋಗಿಗಳೂ, ಬೆಳಗಿನೊಳಗೆ ಮಹಾ ಬೆಳಗಾಗಿ ನಿಂದವರೂ ಆದ ಪರಮಪೂಜ್ಯ ಆದಿಗುರು ಶ್ರೀ ಶ್ರೀ ಕಂಬಳೇಶ್ವರರ, ಅವರ ಕರಕಮಲಸಂಜಾತರಾದ ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರರ, ಅವರ ಕರಕಮಲಸಂಜಾತರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ; ಆದಿ ಗುರು ಕಂಬಳೇಶ್ವರರ ಸಾಕಾರ ಸ್ವರೂಪರೂ ಶ್ರೀ ಮಠದ ಪೀಠಾಧಿಪತಿಗಳೂ ಆದ ಶ್ರೀ ಶ್ರೀ ಚನ್ನಬಸವ ಮಹಾಸ್ವಾಮಿಗಳವರ ಅಡಿದಾವರೆಗಳಿಗೆ ವೀರಶೈವದರ್ಶನ ಧರ್ಮಗಳ ಪರಿಮಳವನ್ನು ನಿರಂತರ ಹೊರಸೂಸುತ್ತಿರುವ ಈ 'ಅರ್ಪಣ' ಸಂಪುಟ ವನ್ನು ಸಮಸ್ತ ಭಕ್ತವೃಂದದ ಪರವಾಗಿ ಭಕ್ತಿಪುರಸ್ಸರವಾಗಿ ಸಮರ್ಪಿಸುತ್ತೇನೆ.

ಎಚ್. ಪಿ. ಮಲ್ಲೇದೇವರು
ಸಂಪಾದಕ

॥ ಶ್ರೀ ಗುರು ಮುರುಘೇಶಾಯ ನಮಃ ॥

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ, ಮಹಾಸಂಸ್ಥಾನ, ಚಿತ್ರದುರ್ಗ

ಸಂದೇಶ

'ಅರ್ಪಣ' ಎಂಬ ಅಭಿವಂದನ ಸಂಪುಟವು ಹಸ್ತಗತವಾಗಿದೆ. ಅವಕಾಶವಿಲ್ಲದ ಮೂಲಕ ಅಲ್ಲಲ್ಲಿ ಕೆಲವು ಪುಟಗಳನ್ನು ನೋಡಿ ತೃಪ್ತಿಯಾಗಿದೆ.

ವೀರಶೈವದ ಬಗೆಗೆ, ವಿದ್ವಾಂಸರ ಅಭ್ಯಾಸಪೂರ್ಣ ಲೇಖನಗಳಿಂದಾಗಿ, ಸಂಪುಟವು ತುಂಬಾ ಉಪಯುಕ್ತವೆನಿಸಿದೆ.

ಮಲ್ಲನಮೂಲೆ ಶ್ರೀ ಮಠದ ಗುರುಪರಂಪರೆಯು ಗದ್ದುಗೆಗಳ ಕಲಶಾರೋಹಣದ ಪವಿತ್ರ ಪ್ರಸಂಗದಲ್ಲಿ, ಸ್ವಧರ್ಮಚಿಂತನೆಯ ಶ್ರೇಷ್ಠ ಸೇವೆ ಅತೀವ ಸೂಕ್ತವಾಗಿದೆ.

ವಿದ್ವಜ್ಜನರ ಸಹಕಾರ ಸಹಯೋಗ ಹಾಗೂ ಭಕ್ತವೃಂದದ ಉತ್ಸಾಹ, ಉದಾತ್ತ ಭಾವನೆಗಳಿಂದ ಈ ಕಾರ್ಯಕ್ರಮ ಯಶಸ್ವಿಯಾಗಲೆಂದು ಹಾರೈಸಲಾಗಿದೆ.

ಇತಿ ಶಿವಮ್

(ಸಹಿ)

ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು

ಶ್ರೀ ವೀರಸಿಂಹಾಸನ ಮಠ, ಸುತ್ತೂರು ಸಂಸ್ಥಾನ

ನಂಜನಗೂಡಂ ತಾಲ್ಲೂಕಂ.

ಸಂದೇಶ

ಸುಕ್ಷೇತ್ರ ಮಲ್ಲನಮೂಲೆ ಶ್ರೀ ಮಠದ ಆದಿಗುರು ಶ್ರೀ ಕಂಬಳೇಶ್ವರರ ಶ್ರೀ ಇಮ್ಮಡಿ ಕಂಬಳೇಶ್ವರರ ಮತ್ತು ಶ್ರೀ ಸಿದ್ಧಲಿಂಗಸ್ವಾಮಿಗಳವರ ಪವಿತ್ರ ಗದ್ದುಗೆಗಳಿಗೆ ಸುವರ್ಣಕಲಶಾರೋಪಣ ಮಹೋತ್ಸವವನ್ನು ನೆರವೇರಿಸುವ ಸುಸಂದರ್ಭದಲ್ಲಿ ಜ್ಞಾನದಾಸೋಹ, ಶಿವಾನುಭವ, ಪ್ರಸಾದದಾಸೋಹ ಇತ್ಯಾದಿ ಕಾರ್ಯಕ್ರಮಗಳನ್ನು ಸುವ್ಯವಸ್ಥಿತವಾಗಿ ಶ್ರೀಮಠದ ಅಧಿಪತಿಗಳಾದ ಶ್ರೀ ಚನ್ನಬಸವಸ್ವಾಮಿಗಳವರು ಏರ್ಪಡಿಸಿರುವುದರಿಂದ ಆನಂದವಾಗಿದೆ.

ಇಂದು ಮಾನವಜೀವನದ ಯಾವುದೇ ರಂಗವನ್ನು ಪರಿಕಿಸಿದರೂ ಅಧಿಕಾರ ಲಾಲಸೆ, ಅಪನಂಬಿಕೆ, ಅಧರ್ಮಗಳು ಹೆಚ್ಚುಹೆಚ್ಚಾಗುತ್ತಿವೆ. ಉಪಕಾರಿಯಾಗಬಹುದಾದ ವಿಜ್ಞಾನದ ಅಭೂತಪೂರ್ವ ಆವಿಷ್ಕಾರ ಸಾಧನೆಗಳನ್ನು ರಚನಾತ್ಮಕ ಕಾರ್ಯಗಳಿಗೆ ವಿನಿಯೋಗಿಸುವುದರ ಬದಲಾಗಿ, ಅಧಿಕಾರಲಾಲಸೆಯಿಂದ ಕೂಡಿದ ಮಾನವ ವಿನಾಶಕೃತ್ಯಗಳಿಗೆ ಅದನ್ನು ಉಪಯೋಗಿಸಲುಶಿಸಿ ಇಂದಿನ ಜಗತ್ತನ್ನು ವಿನಾಶದ ಅಂಚಿಗೆ ನೂಕಿ, ಮಾನವಕೋಟಿಯನ್ನು ತಲ್ಲಣಗೊಳಿಸಿದ್ದಾನೆ. ಹೀಗೆ ವಿಷಮ ಪರಿಸ್ಥಿತಿ ಬಂದೊದಗಿದಾಗಲೆಲ್ಲಾ ತೊಳಲಾಡುತ್ತಿರುವ ಜಗತ್ತಿಗೆ ಬೆಳಕುಬೀರುವ, ಪ್ರಶಾಂತಿಯನ್ನೀಯುವ. ಮರ್ತ್ಯಕ್ಕೂ ಮಹಕ್ಕೂ ನಿಚ್ಚಣಿಗೆಯಾಗುವ, ಇಲ್ಲಿ ಅಲ್ಲಿ ಸಲ್ಲುವ ಸಮ್ಯಕ್ ಮಾರ್ಗವನ್ನರುಹುವ ಶರಣರು ಮೇಲಿಂದ ಮೇಲೆ ಈ ಜಗತ್ತಿನಲ್ಲಿ ಉದಿಸಿ ಬರುವರು.

ಆದಿಗುರು ಶ್ರೀ ಕಂಬಳೇಶ್ವರರು ಇಂತಹ ಶಿವಶರಣರಲ್ಲೊಬ್ಬರಾಗಿ ಸುಪ್ರಸಿದ್ಧರಾಗಿದ್ದಾರೆ. ಈ ಗುರುಪರಂಪರೆಯಲ್ಲಿ ಬಂದ ಮಠಾಧೀಶ್ವರರೂ ಭಕ್ತೋದ್ಧಾರ ಕಾರ್ಯಗೈದಿದ್ದಾರೆ. ಆ ಮಹನೀಯರುಗಳ ಗದ್ದುಗೆಗಳಿಗೆ ಸುವರ್ಣ ಕಲಶಾರೋಹಣವೆಸಗುವ ಪವಿತ್ರ ಸಂದರ್ಭದಲ್ಲಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿವಾನುಭವ ಸಮ್ಮೇಳನಗಳನ್ನು ಏರ್ಪಡಿಸಿ. ಧರ್ಮಜಾಗೃತಿಗೆ ಅನುವು ಮಾಡಿಕೊಟ್ಟಿರುವುದು ಪ್ರಶಂಸನೀಯವಾಗಿದೆ. ಈ ಶುಭಾವಸರದಲ್ಲಿ ಶ್ರೀ ಗುರುಪರಂಪರೆಯ ಮತ್ತು ವೀರಶೈವ ದರ್ಶನ ಮತ್ತು ಧರ್ಮದ ಬಗೆಗೆ ಉಪಯುಕ್ತ ಲೇಖನಗಳನ್ನೊಳಗೊಂಡ ಜ್ಞಾನದಾಸೋಹರೂಪಿಯಾದ 'ಅರ್ಪಣ' ಸಂಪುಟವನ್ನು ಹೊರತರುತ್ತಿರುವುದಂ ಧಾರ್ಮಿಕ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಒಂದು ಉತ್ಕೃಷ್ಟ

ಕೊಡುಗೆಯಾಗಿದೆ. ಈ ಹೆಬ್ಬೊತ್ತಿಗೆಯನ್ನು ನಮ್ಮ ಸಂಸ್ಥೆಯಲ್ಲೇ ಬೆಳೆದ ಹಿರಿಯ ವಿದ್ಯಾರ್ಥಿ ಡಾ. ಎಚ್.ಪಿ. ಮಲ್ಲೇದೇವರ ಸಂಪಾದಕತ್ವದಲ್ಲಿ ಹೊರತರುತ್ತಿರುವುದು ನಮಗೆ ಹೆಚ್ಚಿನ ಸಂತೋಷವನ್ನುಂಟುಮಾಡಿದೆ.

ಈ ಎಲ್ಲ ಕಾರ್ಯಗಳನ್ನು ಶ್ರೀಮಠದ ಭಕ್ತರ ನೆರವಿನಿಂದ ಹಮ್ಮಿಕೊಂಡು ಅಹರ್ನಿಶಿ ಶ್ರಮಿಸುತ್ತಿರುವ ಶ್ರೀ ಮಲ್ಲನಮೂಲೆ ಮಠಾಧಿಪತಿಗಳಾದ ಶ್ರೀ ಚನ್ನಬಸವಸ್ವಾಮಿಗಳವರ ಶ್ಲಾಘನೀಯ ಕಾರ್ಯವನ್ನು ಅಭಿನಂದಿಸಿ, ಶ್ರೀ ಗುರುಕೃಪೆಯಿಂದ ಸಮಸ್ತಕಾರ್ಯಗಳೂ ಅತ್ಯಂತ ಯಶಸ್ವಿಯಾಗಿ ಜರುಗಲೆಂದು ಮನಸಾರೆ ಹಾರೈಸುತ್ತೇವೆ.

ಇತ್ಯಾಶಿಷ :

(ಸಂ)

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು

ಮೂರುಸಾವಿರಮಠ, ಹುಬ್ಬಳ್ಳಿ

ಸಂದೇಶ

ಶ್ರೀ ಗುರು ಕಂಬಳೇಶ್ವರ ಮಹಾಸ್ವಾಮಿಗಳವರ ಹಾಗೂ ಶ್ರೀ ಗುರುಪರಂಪರೆಯವರ ಗದ್ದುಗೆಗಳ ಕಲಶಾರೋಹಣ ಮಹೋತ್ಸವ ಸಂದರ್ಭದಲ್ಲಿ ''ಅರ್ಪಣ'' ಅಭಿನಂದನ ಸಂಪುಟವನ್ನು ಹೊರತರುತ್ತಿರುವುದು ಸಂತಸದ ವಿಷಯ. ಅಲ್ಪಕಾಲದಲ್ಲೇ ಇಂತಹ ಮಹತ್ಕಾರ್ಯ ಸಾಧಿಸುತ್ತಿರುವ ನಿಮ್ಮ ಸಾಧನೆ ನಿಜಕ್ಕೂ ಮೆಚ್ಚುವಂತಹದು. ಮಹಾವಿಭೂತಿಗಳಾದ ಶ್ರೀಗುರು ಕಂಬಳೇಶ್ವರರಿಂದ ಸ್ಥಾಪಿತವಾದ ಮಲ್ಲನಮೂಲೆ ಮಠವು ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ ಬಂದಿರುವುದು ಹೆಮ್ಮೆಯ ವಿಷಯ. ಹನ್ನೆರಡನೇ ಶತಮಾನದ ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಆರ್ಥಿಕ, ರಾಜಕೀಯ ಕ್ರಾಂತಿಗಳ ಫಲವಾಗಿ ಇಂದಿಗೂ ನಮ್ಮ ನಾಡಿನ ಮಠಗಳು ಈ ದಿಶೆಯಲ್ಲಿ ಜಾಗೃತ ಸ್ಥಾನಗಳಾಗಿವೆ.

ಪ್ರಸ್ತುತದಲ್ಲಿ ಕ್ಲಿಷ್ಟಕರವಾದ ಸಮಾಜದಲ್ಲಿ ಸಮಾನತೆ ಕಲ್ಪಿಸಿಕೊಟ್ಟು ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ ಕೇಂದ್ರಗಳಾಗಿ ಇಂದು ನಮ್ಮ ಮಠಗಳು ಮಾರ್ಪಡಬೇಕಾಗಿದೆ. ಮಠಗಳು ಜಾಗೃತಸ್ಥಾನಗಳು. ಧರ್ಮ, ತತ್ವ, ಆಚಾರಗಳನ್ನು ಶ್ರೀಸಾಮಾನ್ಯರಿಗೂ ತಿಳಿಸಿಕೊಡುವ ಮಹತ್ಕಾರ್ಯಗಳನ್ನು ನಮ್ಮ ನಾಡಿನ ಮಠಗಳೆಲ್ಲವೂ ಹಿಂದಿನಿಂದಲೂ ಮಾಡುತ್ತ ಬಂದಿವೆ.

ಈ ''ಅರ್ಪಣ'' ಗ್ರಂಥವು ಸಂಸ್ಕೃತ ವಿದ್ವಾಂಸರಾದ ಡಾ॥ ಹೆಚ್. ಪಿ. ಮಲ್ಲೇದೇವರ ವಿವೇಚನಾತ್ಮಕ ಹಾಗೂ ಸಂಶೋಧನಾತ್ಮಕ ಗ್ರಂಥವಾಗಿದೆ. ಸಂಸ್ಕೃತ ವಿದ್ವಾಂಸರ, ಸಾಹಿತಿಗಳ ವಿವೇಚನಾತ್ಮಕ ಪ್ರಬಂಧಗಳು ಈ ಪುಸ್ತಕದ ಪ್ರತಿಯೊಂದು ಪುಟದಲ್ಲೂ ಕಂಗೊಳಿಸುತ್ತಿವೆ. ವಿಷಯವಿವೇಚನೆ ಹೃದಯಸ್ಪರ್ಶಿಯಾಗುವಂತಿದೆ. ಈ ''ಅರ್ಪಣ''ವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಶ್ರೀ ಮಠಾಧಿಪತಿಗಳ ಜೀವನ ಸಾಧನೆ ಸಿದ್ಧಿಯಿಂದ ಹಿಡಿದುಕೊಂಡು ವೀರಶೈವ ಧರ್ಮದ ತತ್ವ ವಿವೇಚನೆಯನ್ನು ಸತ್ವಪೂರ್ಣವಾಗಿ ಪ್ರತಿಬಿಂಬಿಸಿದ್ದು ''ಅರ್ಪಣ'' ಗ್ರಂಥದ ವೈಶಿಷ್ಟ್ಯವಾಗಿದೆ. ಸಾಹಿತ್ಯ ಶಕ್ತಿಗೂ ಕೊರತೆಯಾಗದಂತೆ ಮಹಾವಿಭೂತಿಗಳ ಚರಿತ್ರೆಯೂ ಒಡಮೂಡಿಬಂದುದು ನಮಗೆ ಸಂತಸವನ್ನುಂಟುಮಾಡಿದೆ.

ಇದಲ್ಲದೆ ''ಅರ್ಪಣ''ವು ಅರ್ಪಿಸುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಶಿವಯೋಗ, ದಾಸೋಹ, ಸತ್ಯಶುದ್ಧಕಾಯಕ, ವೀರಶೈವ ದರ್ಶನ-ಧರ್ಮ ಇವೆಲ್ಲವುಗಳ ವಿವೇಚನೆ, ಪ್ರತಿಯೊಬ್ಬ ಜಿಜ್ಞಾಸುವೂ ಮೆಚ್ಚುವಂತಿದೆ.

ಈ "ಅರ್ಪಣ" ಗ್ರಂಥವು ವೀರಶೈವತತ್ವಸುಶೋಧಕರಿಗೆ ಮಾರ್ಗದರ್ಶಿಯಾಗಿದೆ.

"ಜ್ಯೋತಿ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ !
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ !
ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ !
ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ !
ಸಕಳೇಶ್ವರದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ" !

ಎಂಬ ಷಟ್‌ಸ್ಥಲಸಿದ್ಧಾಂತವನ್ನೊಳಗೊಂಡ ಈ ವಚನದಂತೆ ಈ "ಅರ್ಪಣ" ದಲ್ಲಿ ಸಮರ್ಪಿತ ಭಾವನೆಯ ಎಲ್ಲ ವಿಚಾರಗಳು ತುಂಬಿ ಜನಜೀವನ ಸಾಧನೆಯ ಜಾಗೃತಿಯನ್ನುಂಟುಮಾಡುವ ಆಧಾರಸ್ತಂಭವಾಗಿದೆ. ಒಟ್ಟಿನಲ್ಲಿ ಡಾ॥ ಮಲ್ಲೇದೇವರ ಸಾಹಸ ಸಾರ್ಥಕವಾಗಿದೆ. ಇವರು ಈಗಾಗಲೇ ಇಂತಹ ಅನೇಕ ಉದ್ಬೋಧಕ ಗ್ರಂಥಗಳನ್ನು ಸಂಗ್ರಹಿಸಿ ಬರೆದು ನಾಡಿಗೆ ಚಿರಪರಿಚಿತರಾಗಿದ್ದಾರೆ. ಸಂಸ್ಕೃತಸಾಹಿತ್ಯ ಸರೋವರದಲ್ಲಿ ಈಸಿ ಸಂಸ್ಕೃತದ ಪ್ರತಿಭೆಯನ್ನು ಬೆಳಗಿಸಿದ್ದಾರೆ. ಇವರ ಸಾಹಿತ್ಯಸೇವೆ ಇನ್ನೂ ಹೆಚ್ಚುಹೆಚ್ಚಾಗಿ ಬೆಳಗಲೆಂದು ಅಂತಃಕರಣಪೂರ್ವಕವಾಗಿ ಹಾರೈಸೋಣವಾಗಿದೆ.

ಸತ್ಯಂ ಶಿವಂ ಸುಂದರಂ

(ಸಹಿ)

॥ ಶ್ರೀಗುರು ಬಸವಲಿಂಗಾಯ ನಮಃ ॥

ಶ್ರೀಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು

ಶ್ರೀ ತೋಂಟದಾರ್ಯ ಸಂಸ್ಥಾನಮಠ, **ಡಂಬಳ-ಗದಗ.**

ಗದಗ-೫೮೨ ೧೦೧

ಸಂದೇಶ

"ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ ಜಗವ ಗೆಲ್ಲಲರಿಯದೆ ನಗೆಗೆಡೆಯಾಗಿ ಹೋದರು. ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ, ಜಗದಲ್ಲಿಯೆ ಹುಟ್ಟಿ ಜಗದಲ್ಲಿಯೆ ಬೆಳೆದು, ಜಗದಂತೆಯೆ ಇದ್ದು ಈ ಜಗವ ಗೆದ್ದು ಹೋಗುವರು. ನಿಗಮಶಾಸ್ತ್ರಸಾಕ್ಷಿಯಾತ ಚನ್ನಮಲ್ಲೇಶ್ವರ ನಿನಗಾಯಿತ್ತಯ್ಯ ಅಂತಪ್ಪ ಚನ್ನಮಲ್ಲೇಶ್ವರನ ಪಾದವಿಡಿದು ಅವರು ಹೋದ ಹಾದಿಗೊಂಡು ಹೋಗುವೆನಲ್ಲದೆ ಈ ಮೇದಿನಿಯೊಳಗೆ ಕಾಮಕಾಲಾದಿಗಳ ಬಲೆಯೊಳಗೆ ಸಿಕ್ಕುಬಿದ್ದು ಹೋದೆನಾದರೆ ನಿಮ್ಮ ಪಾದಕ್ಕೆ ಅಂದೇ ದೂರವಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣ"

—**ಹಡಪದ ಅಪ್ಪಣ್ಣ**

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಸುಕ್ಷೇತ್ರ ಮಲ್ಲನಮೂಲೆ ಮಠದ ಮಹಾತ್ಮರೂ, ಭಕ್ತೋದ್ಧಾರಿಗಳೂ ಆದ ಶ್ರೀ ಗುರುಕಂಬಳೇಶ್ವರರ ಮತ್ತು ಆ ಗುರು ಪರಂಪರೆಯ ಚರಿತ್ರೆ ಹಾಗೂ ವೀರಶೈವಧರ್ಮದ ಸ್ಥೂಲಕಲ್ಪನೆಯನ್ನು ವಿಸ್ತೃತವಾಗಿ ಅರುಹುವ ಗ್ರಂಥ "ಅರ್ಪಣ."

ನಮ್ಮವರು ಸಭೆ, ಸಮಾರಂಭ, ಮೆರವಣಿಗೆ, ದಾಸೋಹ, ಗುಡಿ-ಗೋಪುರಗಳಿಗೆ ವ್ಯಯಿಸುವ ಹಣದಲ್ಲಿ ಕಾಲು ಭಾಗವನ್ನು ವೀರಶೈವಸಾಹಿತ್ಯ ಪ್ರಕಟನಾ ಕಾರ್ಯಕ್ಕೆ ಬಳಸಿದ್ದರೆ, ಬಹುದೊಡ್ಡ ಸಾಂಸ್ಕೃತಿಕ ಜಾಗೃತಿ ಆಗುತ್ತಿತ್ತು. ಈ ದೃಷ್ಟಿಯ ಜನ ವಿರಳ. ಹೀಗಾಗಿ ಅರ್ವಾಚೀನ ವೀರಶೈವ ಇತಿಹಾಸಕ್ಕೆ ಅಪಚಾರವಾಗುತ್ತಿದೆ. ಆ ದಿಶೆಯಲ್ಲಿ ಮಲ್ಲನಮೂಲೆ ಶ್ರೀ ಮಠದ ಸದ್ಯದ ಪೀಠಾಧಿಪತಿಗಳು ತುಂಬ ದೂರದೃಷ್ಟಿಯಿಂದ ತಮ್ಮ ಗುರುಪರಂಪರೆಯ ಹಾಗೂ ತನ್ನಿಮಿತ್ತ ವೀರಶೈವಧರ್ಮದ ಸ್ಥೂಲ ಪರಿಚಯವನ್ನು ಪ್ರತಿನಿಧಿಸುವ ಭಿನ್ನ ಭಿನ್ನ ಲೇಖನಗಳನ್ನೊಳಗೊಂಡ 'ಅರ್ಪಣ' ಸಂಪುಟವನ್ನು, ವೀರಶೈವದರ್ಶನಶಾಸ್ತ್ರದ ವಿದ್ವಾಂಸರೂ ಆದ ಡಾ॥ ಎಚ್. ಪಿ. ಮಲ್ಲೇದೇವರ ಸಮರ್ಥ ಸಂಪಾದಕತ್ವದಲ್ಲಿ ತರುತ್ತಿರುವದು ಅಭಿನಂದನೀಯ.

ಗ್ರಂಥವೆಂದರೆ ದೀಪವಿದ್ದಹಾಗೆ. ದೀಪ ಕತ್ತಲೆ ಕಳೆಯುತ್ತದೆ, ಗ್ರಂಥಗಳು ಅಜ್ಞಾನವನ್ನು ಕಳೆಯುತ್ತವೆ. ಇಂಥ ಗ್ರಂಥಗಳ ಸಾಲು ಬೆಳೆಯಲಿ, ನಿತ್ಯ ನಂದಾದೀಪಗಳ ದೀಪಾವಳಿ ಹೆಚ್ಚಲಿ ಎಂದು ಶುಭ ಹಾರೈಕೆ.

ಇತಿ ಶಿವಂ

(ಸಹಿ)

ಶ್ರೀಮದುಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ
ತರಳಬಾಳು ಜಗದ್ಗುರು
ಶ್ರೀ ೧೧೧೦೮ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ

ಸಂದೇಶ

ಶ್ರೀ. ನಿ.ಪ್ರ.ಸ್ವ ಶ್ರೀಗುರು ಕಂಬಳೇಶ್ವರ ಮಹಾಸ್ವಾಮಿಗಳವರ ಹಾಗೂ ಶ್ರೀ ಗುರುಪರಂಪರೆಯುವರ ಗದ್ದುಗೆಗಳ ಸುವರ್ಣಕಲಶಾರೋಹಣ ಮಹೋತ್ಸವದ ಶುಭ ಸಂದರ್ಭದಲ್ಲಿ 'ಅರ್ಪಣ' ಎಂಬ ಅಭಿವಂದನ ಗ್ರಂಥವನ್ನು ಪ್ರಕಟಿಸುವ ವಿಷಯ ತಿಳಿದು ತುಂಬಾ ಸಂತೋಷವಾಯಿತು,

'ಅರ್ಪಣ' ಗ್ರಂಥದಲ್ಲಿ ಶ್ರೀ ಗುರುಪರಂಪರೆಯ ಮಠಾಧೀಶರ ಜೀವನ, ಸಾಧನೆ ಸಿದ್ಧಿಗಳನ್ನು ವಿವರಿಸುವ, ವೀರಶೈವ ದರ್ಶನ ಮತ್ತು ಧರ್ಮದ ಮೂಲಭೂತ ತತ್ವ ಗಳನ್ನುಳ್ಳ ಲೇಖನಗಳಿರುವುದು ಅತ್ಯಂತ ಸೂಕ್ತವೆನಿಸಿತು. ವೀರಶೈವ ಧರ್ಮ ಮತ್ತು ದರ್ಶನ ಕುರಿತು ಸಂಶೋಧನೆ ಮಾಡುವ ವಿದ್ವಾಂಸರಿಗೆ ಇದೊಂದು ಆಕರ ಗ್ರಂಥ ವಾಗುವುದರಲ್ಲಿ ಸಂಶಯವಿಲ್ಲ. ಸಂಪಾದಕರ ಪ್ರಯತ್ನ ಸಾರ್ಥಕವಾದುದು.

ಇಂಥ ಸಂದರ್ಭದಲ್ಲಿ ಸಂಯೋಜಿಸಿಕೊಂಡ ಕಾರ್ಯಕ್ರಮಗಳು ನಾಡು-ನುಡಿಯ ಸಂಸ್ಕೃತಿಯ ಸಂವರ್ಧನೆಯಲ್ಲಿ ನೆರವಾಗಲಿ, ನಿರೀಕ್ಷಿತ ಪ್ರತಿಫಲ ದೊರೆಯಲೆಂದು ಹಾರೈಸುವೆವು.

ಇತ್ಯಾಶಿಷ :

(ಸಹಿ)

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು
ಶ್ರೀ ಮುರುಘರಾಜೇಂದ್ರ ಸಂಸ್ಥಾನಮಠ,
ಆನಂದಪುರಂ, ಶಿವಮೊಗ್ಗ

ಸಂದೇಶ

ಲೋಕದಂತೆ ಬಾರರು ಲೋಕದಂತೆ ಇರರು
ಲೋಕದಂತೆ ಪೋಗರು ನೋಡಯ್ಯ
ಪುಣ್ಯದಂತೆ ಬಪ್ಪರು ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಹೋಹರು ನೋಡಯ್ಯ ಉರಿಲಿಂಗದೇವಾ
ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು

ಸುಕ್ಷೇತ್ರ ಮಲ್ಲನಮೂಲೆ ಮಠದ ಶ್ರೀ ಗುರು ಕಂಬಳೀಶ್ವರರ ಪುಣ್ಯಸ್ಮರಣೆಯಲ್ಲಿ 'ಅರ್ಪಣ' ಎಂಬ ಅಭಿವಂದನ ಸಂಪುಟವನ್ನು ಅರ್ಪಿಸುತ್ತಿರುವುದು ಸಂತಸದ ಸಂಗತಿ.

ಲೋಕದ ಲೋಗರ ಮಧ್ಯದಲ್ಲಿಯೇ ಮಹಾವಿಭೂತಿಪುರುಷರಾಗಿ ಬದುಕಿ ಸಕಲ ಜೀವಾವಳಿಗೆ ಲೇಸನುಂಟುಮಾಡಿದ ಕರ್ತೃ ಕಂಬಳೀಶ್ವರರು ಶರಣಸಂದೇಶವನ್ನು ದಕ್ಷಿಣದ ಪ್ರಾಂತಕ್ಕೆ ಬಿತ್ತರಿಸಿದವರು. ಈ ಪವಿತ್ರ ಘಟದಿಂದ ಮಠವಾದರೂ ಆ ಭಾಗದ ಜನತೆಯ ಜಾಗೃತಿಯ ಕೇಂದ್ರವಾಯಿತು. ಶರಣರ ಕಾಯಕ, ದಾಸೋಹ ಸಂಪನ್ನತೆಯ ಆಧಾರದ ಮೇಲೆ ಈವರೆಗೂ ಮುನ್ನಡೆಯುತ್ತಿರುವುದು ಆದರ್ಶ. ಈ ಎಲ್ಲ ಮಹಿಮಂರ ಸ್ಮರಣೆ ಗ್ರಂಥಸ್ಥವಾಗಿ ಅರ್ಪಣವಾಗಿ ಹೊರಬರುತ್ತಿರುವುದು ಸಕಾಲಿಕ.

ಮಲ್ಲನ ಮೂಲೆ ಶ್ರೀ ಮಠದ ಶ್ರೀಗಳವರ ಚಾರಿತ್ರ್ಯ, ವೀರಶೈವಧರ್ಮದ ತತ್ತ್ವಗಳ ವಿಸ್ತೃತ ವಿಭಾಗ ಇವುಗಳಿಂದ ಅರ್ಪಣ ಸರ್ವಾಂಗಸುಂದರವಾಗಿ ಹೊರಬಂದಿರುವುದು, ಸಮಾಜಕ್ಕೆ ತಮ್ಮನ್ನೇ ಅರ್ಪಿಸಿಕೊಂಡ ಚೇತನಗಳಿಗೆ ನುಡಿ ನೈವೇದ್ಯದ ಅರ್ಪಣ ಮಾಡಿಸಹೊರಟಿರುವ ಶ್ರೀ. ನಿ. ಪ್ರ. ಚನ್ನಬಸವಸ್ವಾಮಿಗಳ ಕಾರ್ಯ ಆದರ್ಶವಾಗಿದೆ.

ವೈವಿಧ್ಯ ಮತ್ತು ವೈಶಿಷ್ಟ್ಯಪೂರ್ಣವಾಗಿರುವ ಈ ಸಂಪುಟದಲ್ಲಿ, ಈ ದಿಶೆಯಲ್ಲಿ ಅನುಭವ ಪಡೆದ ಡಾ. ಹೆಚ್. ಪಿ. ಮಲ್ಲೇದೇವರ ಸಂಪಾದಕತ್ವ ಸಾರ್ಥಕತೆ ಹೊಂದಿದೆ. ಇದು ಜನತೆಯ ಬಾಳಿಗೆ ಬೆಳಕನ್ನೂ, ಬದುಕಿಗೆ ತೃಪ್ತಿಯನ್ನೂ ತಂದುಕೊಡುವತ್ತ ಮಹತ್ವದ ಪಾತ್ರ ವಹಿಸಲೆಂದು ಹಾರೈಸಲಾಗಿದೆ.

ಇತ್ಯಾಶಿಷ :
(ಸಹಿ)

ಶ್ರೀ ಗುರುಬಸವಲಿಂಗಾಯ ನಮಃ

ಶ್ರೀಮನ್ನಿರಂಜನ ಪ್ರಣವಸ್ವರೂಪಿ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು

ಸಂಸ್ಥಾನ ಮಠ, ಮುಂಡರಗಿ, ಜಿಲ್ಲಾ ಧಾರವಾಡ.

ಸಂದೇಶ

ವಿಜ್ಞಾನ ಬೆಳೆಯುತ್ತಿರುವ ಇಂದಿನ ಯುಗದಲ್ಲಿ ಆಧ್ಯಾತ್ಮದ ಪುರಾತನ ಸಂಸ್ಕೃತಿ ಮುಪ್ಪಾದಂತೆ ಮುಂದುಡಿಕೊಂಡು ಮೂಲೆ ಸೇರುವ ಸಮಯ ಕಾಣುತ್ತಿದೆ. ವಿಜ್ಞಾನದ ವಿನೂತನ ಆವಿಷ್ಕಾರಗಳು ಮಾನವೀಯತೆಯನ್ನು ಬೆಳೆಸುವಲ್ಲಿ ವಿಫಲವಾಗಿದ್ದರೂ ಮಾನವನ ಕಣ್ಣು ಕುಕ್ಕಿಸುತ್ತಿವೆ. ಸುಖ–ಸಮೃದ್ಧಿಯ ಭರವಸೆಯಲ್ಲಿ ಆಶೆ–ಆಕಾಂಕ್ಷೆಗಳು ಮಾನವನಲ್ಲಿ ದಿನೇದಿನೇ ಅಭಿವೃದ್ಧಿಗೊಳ್ಳುತ್ತಿವೆ. ಬಿಸಿಲ್ಗುದುರೆಯಂತೆ ಬೆನ್ನಟ್ಟಿಸಿಕೊಂಡು ಓಡಿಸಿ ಕಾಡಿಸಿ ಕಂಗೆಡಿಸುತ್ತಿವೆ. ಮಾರಕಾಸ್ತ್ರಗಳು ಮನುಕುಲದ ನೆತ್ತಿಯ ಮೇಲೆ ತೂಗುತ್ತ ಕುತ್ತು ತಂದೊಡ್ಡುತ್ತಿದ್ದರೂ ದೇಶ-ವಿದೇಶಗಳ ನಾಯಕರು ಅವುಗಳ ಸಂಗ್ರಹಕ್ಕೆ ಪೈಪೋಟಿ ನಡೆಸಿದ್ದಾರೆ. ಭೌತಿಕ ಸಾಧನ ಸಂಪನ್ಮೂಲಗಳು ಬೆಳೆದಿದ್ದರೂ ಮಾನವರಿಗೆ ಸಂತೃಪ್ತಿ ಸಿಕ್ಕದ್ದಾಗಿದೆ. ಏಕೆಂದರೆ ಹವಿಸ್ಸನ್ನು ಹಾಕಿದ ಅಗ್ನಿ ಮತ್ತಷ್ಟು ಪ್ರಜ್ವಲಿಸುವುದಲ್ಲದೆ ಶಾಂತವಾಗುವುದಿಲ್ಲ. ವಿಷಯ ಭೋಗಗಳಿಂದ ಮಾನಸಿಕ ಚಂಚಲತೆ ವರ್ಧಿಸುವುದು. ಅದಕ್ಕಾಗಿ ಆಧ್ಯಾತ್ಮದ ತಳಗಲ್ಲು ಜಾರಿಹೋಗಿ ಮಾನವನ ಜೀವನ ದಯನೀಯವಾಗಿದೆ. ಕುಳ್ಳನಂತೆ ತನಗೆ ಎಟುಕದ ಹತ್ತು-ಹಲವಾರು ವಸ್ತುಗಳಿಗಾಗಿ ಹಾತೊರೆದು, ಇದ್ದುದರಲ್ಲಿ ಸಂತೃಪ್ತಿಪಡುವ ಧಾರ್ಮಿಕ ಮನೋಭಾವ ಸಂಪೂರ್ಣ ನಾಶವಾಗಿದೆ. ದುಡಿಯದೆ ದುಡ್ಡುಗಳಿಸಿ ಸುಖಪಡುವ ಲವಲವಿಕೆ ಹೆಚ್ಚಾಗಿದೆ.

ಇಂಥ ಅಸಮಾಧಾನ, ಅಸಂತೃಪ್ತಿ, ಅಸೂಯೆ, ಗರ್ವ ಮೊದಲಾದ ತಾಮಸೀ ಅಧಾರ್ಮಿಕ ಗುಣಗಳು ಹೆಚ್ಚಾಗುತ್ತಿರುವುದರ ಪರಿಣಾಮವಾಗಿ ಪ್ರಕೃತಿವಿಕೋಪವೂ ಬೆಳೆಯಹತ್ತಿದೆ. ಇದೆಲ್ಲದರ ನಿಗ್ರಹಕ್ಕೆ ಸಾತ್ವಿಕಶಕ್ತಿಯ ಸಾಕಾರವೆನಿಸಿದ ವಿಭೂತಿ ಪುರುಷರ ತಪಶ್ಶಕ್ತಿಯೇ ಸರ್ವಸಮರ್ಥವಾಗಿದೆ. ಅಂಥವರ ನಿಸ್ವಾರ್ಥಸೇವೆ, ತ್ಯಾಗ ಮನೋಭಾವ, ಆತ್ಮಸಮರ್ಪಣ ಗುಣಗಳಿಂದ ದೇಶದಲ್ಲಿ ಸುಖ-ಶಾಂತಿಗಳು ನೆಲೆಸಬಲ್ಲವು. ಭಾರತೀಯ ಧಾರ್ಮಿಕ ಇತಿಹಾಸವನ್ನು ಅವಲೋಕಿಸಿದರೆ ಈ ಮಾತು ಸತ್ಯವೆಂದು ತೋರುತ್ತದೆ. ಮಹಾನುಭಾವರ ಅವತಾರದಿಂದಾಗಿ ಕಾಯಕನಿಷ್ಠೆ, ಧಾರ್ಮಿಕಕ್ರಿಯಾಶೀಲತೆ, ಕರ್ತವ್ಯಪ್ರಜ್ಞೆ, ಸಮಾನತೆ, ಸ್ವತಂತ್ರತೆ ಮುಂತಾದ ನೈತಿಕ ಗುಣಗಳು ನೆಲೆಗೊಂಡು ದೇಶವು ಸ್ವರ್ಗಸುಖವನ್ನು ಅನುಭವಿಸಿದ ಉದಾಹರಣೆಗಳು ಸಾಕಷ್ಟು ಸಿಕ್ಕುತ್ತಿವೆ. ಈ ಸಾಲಿನಲ್ಲಿ ಮೈಸೂರಿನ ದಕ್ಷಿಣದಿಕ್ಕಿಗೆ ಸು. ೧೯ ಕಿಲೋ

ಮೀಟರ್ ದೂರದಲ್ಲಿರುವ ಮಲ್ಲನಮೂಲೆ ಮಠಾಧೀಶರು ಮಹಾಮಹಿಮರು ಹಾಗೂ ವಿಭೂತಿಪುರುಷರೆಂದರೆ ತಪ್ಪಾಗಲಾರದು.

ಮಹಿಮರು ಮಾನವ ರೂಪ ತಳೆದರೂ ಮರಣವ ಗೆದ್ದ ಮಹಂತರು. ಮೈಲಾರ ಬಸವಲಿಂಗಶರಣರು ತಮ್ಮ ಗುರುಕರುಣ ತ್ರಿವಿಧಿಯಲ್ಲಿ—

ಸುರಭಿಯಾಕಳಲ್ಲ ಸುರತರುವು ಮರನಲ್ಲ
ಪರುಷ ಶಿಲೆಯಲ್ಲ ಚರಲಿಂಗ ನರನಲ್ಲಂ
ದೊರೆದ ಶ್ರೀ ಗುರುವೆ ಕೃಪೆಯಾಗು ॥೨೧॥
ಮೃಡಜಂಗಮಲಿಂಗ ತನ್ನಡಿಯಿಟ್ಟ ಜಲ ತೀರ್ಥ
ಪೊಡವಿ ಸುಕ್ಷೇತ್ರ ಕಡುನಿಜವೆಂದೊರೆದ ಎ-
ನ್ನೊಡೆಯ ಶ್ರೀ ಗುರುವೆ ಕೃಪೆಯಾಗು ॥೨೪೨॥

ಎಂದು ವಿವರಿಸಿದಂತೆ ಮಲ್ಲನಮೂಲೆ ಶ್ರೀಮಠದ ಕರ್ತೃ ಕಾಲಕರ್ಮರಹಿತರಾದ ಶ್ರೀ ಗುರು ಕಂಬಳೇಶ್ವರ ಮಹಾಸ್ವಾಮಿಗಳು ಉಪಮಿಸಬಾರದ ಉಪಮಾತೀತರು. ಇಂಥ-ವರ ಪಾವನ ಪಾದಸ್ಪರ್ಶದಿಂದ ಈ ನೆಲ ಅವಿಮುಕ್ತ ಕ್ಷೇತ್ರವೆನಿಸಿದೆ. ಅಲ್ಲಿಯ ಕಪಿಲಾ ನದಿ ಪರಮ ತೀರ್ಥವಾಗಿದೆ. ಇನ್ನೂರು ವರ್ಷಗಳಿಂದ ಬೆಳೆದು ಬಂದ ಶ್ರೀ ಮಠವು ಭಕ್ತರ ಲೇಸನೆಸಗುತ್ತಿರುವುದು ಅಭಿಮಾನದ ಸಂಗತಿ. ಮಹಾತ್ಮರ ನೆನಹೇ ಮುಕ್ತಿಗೆ ಮೂಲವಾಗಿದ್ದರಿಂದ ಅಂಥವರ ಸ್ಮರಣಾರಾಧನೆ ಹಾಗೂ ಕಲಶಾರೋಹಣ ಸಮಾ ರಂಭಗಳ ಸವಿನೆನಹಿನಲ್ಲಿ ಸ್ಮರಣಸಂಪುಟವನ್ನು ಹೊರತರುತ್ತಿರುವುದು ಔಚಿತ್ಯಪೂರ್ಣ ವಾಗಿದೆ.

''ಅರ್ಪಣ''ವೆಂಬ ಅಭಿವಂದನ ಸಂಪುಟದಲ್ಲಿ ಎರಡು ಭಾಗಗಳಿದ್ದು ಪ್ರಥಮದಲ್ಲಿ ಶ್ರೀಮಠದ ಗುರುಪರಂಪರೆಯವರ ಜೀವನ-ಸಾಧನೆ-ಸಿದ್ಧಿಗಳನ್ನು ಸಂಗ್ರಹಿಸಿದ್ದರೆ, ದ್ವಿತೀಯ ಭಾಗದಲ್ಲಿ ವೀರಶೈವ ದರ್ಶನ ಮತ್ತು ಧರ್ಮ ಕುರಿತಾದ ಮಹತ್ವಪೂರ್ಣ ಲೇಖನಗಳು ಅಭ್ಯಾಸಯೋಗ್ಯವಾಗಿವೆ. ಈ ''ಅರ್ಪಣ'' ಗ್ರಂಥವು ಸಂಶೋಧಕರ ಕೈಪಿಡಿಯಾಗುವುದರಲ್ಲಿ ಸಂಶಯವಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತ ಕೋತ್ತರ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಪ್ರೊ॥ ಹೆಚ್. ಪಿ. ಮಲ್ಲೇದೇವರ ಸಮರ್ಥ ಮಾರ್ಗದರ್ಶನದಲ್ಲಿ ಈ ಕೃತಿ ಸರ್ವಾಂಗಸುಂದರವಾಗಿ ಭಕ್ತತತಿಗೆ ಆಧ್ಯಾ ತ್ಮಿಕ ಒಲವನ್ನು ಉಂಟುಮಾಡಿ ಸುಖಶಾಂತಿಯನ್ನು ಕರುಣಿಸಲೆಂದು ಹೃದಯ ತುಂಬಿ ಹಾರೈಸುತ್ತೇವೆ.

ಸಕಲರಿಗೆ ಲೇಸಾಗಲಿ

(ಸಹಿ)

ಹೇಮಕೂಟ ಸಿಂಹಾಸನಾಧೀಶ್ವರ
ಜಗದ್ಗುರು ಶ್ರೀ ಶ್ರೀ ಸಂಗನ ಬಸವ ಮಹಾಸ್ವಾಮಿಗಳವರು
ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿಮಠ, ಬಳ್ಳಾರಿ, ಹೊಸಪೇಟೆ

ಸಂದೇಶ

ಕನ್ನಡ ನಾಡಿನ ವೀರಶೈವಮಠಗಳು ಮೊದಲಿನಿಂದಲೂ ಆಧ್ಯಾತ್ಮಿಕ ಕೇಂದ್ರಗಳಾಗಿ ಈ ನಾಡಿನ ಜನತೆಗೆ ಚೈತನ್ಯವನ್ನು ಹಾಗೂ ಬೆಳಕನ್ನು ನೀಡುತ್ತ ಬಂದಿವೆ. ಈ ಪರಂಪರೆಯಲ್ಲಿ ಮೈಸೂರು ಜಿಲ್ಲೆಯ ಮಲ್ಲನಮೂಲೆಯ ಶ್ರೀ ಮಠವು ಕಪಿಲಾನದಿಯ ತೀರದಲ್ಲಿ ಸುಕ್ಷೇತ್ರವಾಗಿ ಸಮಸ್ತ ಭಕ್ತರಿಗೆ ಪರಮಾನಂದವನ್ನುಂಟು ಮಾಡುವ ಕೇಂದ್ರವಾಗಿದೆ. ಈ ಮಠದ ಪರಂಪರೆಯಲ್ಲಿ ಶ್ರೀ ಕಂಬಳೀಶ್ವರ ಮಹಾಸ್ವಾಮಿಗಳು, ಇಮ್ಮಡಿ ಕಂಬಳೀಶ್ವರ ಮಹಾಸ್ವಾಮಿಗಳು ಹಾಗೂ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಹಾತಪಸ್ವಿಗಳಾಗಿ ಈ ನಾಡನ್ನೇ ಉದ್ಧಾರ ಮಾಡಿದ್ದಾರೆ. ಶ್ರೀ ಮಠವು ಅಪಾರವಾದ ಭಕ್ತಕೋಟಿಯನ್ನು ಹೊಂದಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಮಠಾಧಿಪತಿಗಳ ಪಾತ್ರವು ಅತಿ ಹೆಚ್ಚಿನದಾಗಿದೆ. ಧರ್ಮದ ಹೆಸರಿನಲ್ಲಿ ಮಠಗಟ್ಟಿ ನಿಂತಿರುವ, ಸಂಪ್ರದಾಯದ ಕೆಸರಿನಲ್ಲಿಯೇ ಒದ್ದಾಡುತ್ತಿರುವ, ನೈತಿಕವಾಗಿ ಅಧಃಪತನವಾಗಿರುವ ಇಂದಿನ ಜನತೆಯನ್ನು ಧರ್ಮಾಧಿಕಾರಿಗಳಾದ ನಾವುಗಳು ಪ್ರಸ್ತುತ ಸನ್ನಿವೇಶದಲ್ಲಿ ಪ್ರಗತಿಪರ ಆಲೋಚನೆಗೆ ವೈಚಾರಿಕ ನೆಲೆಗಟ್ಟಿಗೆ ಅವಕಾಶ ಮಾಡಿಕೊಟ್ಟು, ನಾಡಿನ ಸರ್ವಾಂಗೀಣ ಉನ್ನತಿಯನ್ನು ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ವಿಚಾರಧಾರೆಯಲ್ಲಿ ಶ್ರೀ ಮಠದ ಅಧಿಪತಿಗಳಾದ ಪೂಜ್ಯ ಶ್ರೀ ಚನ್ನಬಸವ ಮಹಾಸ್ವಾಮಿಗಳವರು ಬಸವತತ್ವಾನುಯಾಯಿಗಳಾಗಿ ಭಕ್ತರ ಉದ್ಧಾರಕ್ಕೆ ಅನಂತ ಯೋಜನೆಯನ್ನು ಹಮ್ಮಿಕೊಂಡಿದ್ದು ಪರಮ ಸಂತೋಷವಾಗಿದೆ.

ಪೂಜ್ಯ ಶ್ರೀಗಳವರು ಭಕ್ತರ ಪ್ರಾರ್ಥನೆಗೆ ಓಗೊಟ್ಟು ಶ್ರೀ ಗುರುಪರಂಪರೆಯವರ ಗದ್ದುಗೆಗಳ ಕಲಶಾರೋಹಣಗಳ ಮಹೋತ್ಸವವನ್ನು, ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅನುಕರಣೀಯವಾದ ಕಾರ್ಯವಾಗಿದೆ. ಈ ಸುಸಂದರ್ಭದಲ್ಲಿ ಉತ್ಸವಸಮಿತಿಯವರು 'ಅರ್ಪಣ' ಅಭಿಮಂದನಾಗ್ರಂಥವನ್ನು ಪ್ರಕಟಗೊಳಿಸುತ್ತಿರುವುದು ಸ್ತುತ್ಯವಾದ ಕಾರ್ಯವಾಗಿದೆ. ಈ ಅರ್ಪಣ ಗ್ರಂಥದ ಎರಡನೇ ಭಾಗದಲ್ಲಿ ವೀರಶೈವಧರ್ಮದ ಸಮಸ್ತ ಸ್ವರೂಪವನ್ನು, ಪ್ರಕಾಂಡ ಪಂಡಿತರಿಂದ ಲೇಖನಗಳನ್ನು ಸಂಗ್ರಹಿಸಿರುವುದು ನಮ್ಮ ಯುವಕ ವೀರಶೈವರಿಗೆ ವೀರಶೈವ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡಲು ಪರಮ ಸಾಧನವಾಗುವುದು.

ಪೂಜ್ಯ ಶ್ರೀಗಳವರು ತಮ್ಮ ಕರ್ತೃತ್ವ ಶಕ್ತಿಯಿಂದ ಈ ನಾಡಿಗೆ ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಲೆಂದು ಹಾರೈಸುತ್ತೇವೆ.

ಇತ್ಯಾಶಿಷ :

(ಸಹಿ)

ಪರಿವಿಡಿ

೧ ಶ್ರೀ ಗುರುಪರಂಪರೆ

೨. ವೀರಶೈವದರ್ಶನ ಮತ್ತು ಧರ್ಮ



ಪರಮಪೂಜ್ಯ ಆದಿಗುರು ಶ್ರೀ ಕಂಬಳೇಶ್ವರರ ಗದ್ದುಗೆ



ಪರಮಪೂಜ್ಯ ಶ್ರೀ ಇಮ್ಮಡಿ ಕಂಬಳೇಶ್ವರರ ಗದ್ದುಗೆ



ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಗದ್ದುಗೆ



ಪರಮಪೂಜ್ಯ ಶ್ರೀ ಚನ್ನಬಸವ ಮಹಾಸ್ವಾಮಿಗಳವರು



ಪರಮಪೂಜ್ಯ ಶ್ರೀ ಕಂಬಳೇಶ್ವರರ ಸೋದರರು



ಪರಮಪೂಜ್ಯ ಆದಿಗುರು ಶ್ರೀ ಕಂಬಳೇಶ್ವರರು



ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು



ಪ್ರಸಾದನಿಲಯದ ವಿದ್ಯಾರ್ಥಿಗಳ ಪ್ರಾರ್ಥನಾಸಭೆಯಲ್ಲಿ ಪರಮಪೂಜ್ಯ ಶ್ರೀಗಳವರು

ಶ್ರೀಗುರುಪರಂಪರೆ

ಅರ್ಪಣ

ಶ್ರೀಕಂಬಳೇಶನವರತ್ನಮಾಲಿಕಾ

—ಎಂ. ಜಿ. ನಂಜುಂಡಾರಾಧ್ಯಃ

ಕಪಿಲಾಖ್ಯನದೀತೀರೇ
ನಿರಂಜನಯತೀಶ್ವರಃ ।
ಶಿಷ್ಯೇಣ ಭಕ್ತಿಮಲ್ಲೇನ
ಪೂಜಿತಃ ಸಿದ್ಧಿಮಾಪ್ನುಯಾತ್ ॥ ೧

ಅತಃ ಸಿದ್ಧಿಪ್ರದತ್ವಾಚ್ಚ
ಸಿದ್ಧಬೃಂದಾರಕಾಶ್ರಯಃ ।
ಮಲ್ಲಮೂಲೇತಿ ವಿಖ್ಯಾತಃ
ಆಶ್ರಮೋಽತ್ರ ವಿರಾಜತೇ ॥ ೨

ವಿಪಚ್ಯ ಸ ಕುಳತ್ಥಾಂಶ್ಚ
ಯವಾಗೂಂ ಚ ಸುಧೋಪಮಾಂ ।
ವಿತರನ್ ಸ್ವರ್ಶ (ಪರಂಪ) ಹಸ್ತೇನ
ಭಕ್ತಾನಂಗ್ರಹಕರ್ಮಣಿ ॥ ೩

ದೀನಾನಾಥದರಿದ್ರಾಣಾಂ
ಕಾಮಧೇನುರಿತೀರಿತಃ ।
ಯವಾಗೂಕಾಯಕೇ ನಿತ್ಯಂ
ನಿರೂಢಾಯ ನಮೋ ನಮಃ ॥ ೪

ಕಾಮಿತಾರ್ಥಪ್ರದಾನಾಯ
ಭಕ್ತಾನಾಂ ಸಿದ್ಧಿಹೇತವೇ ।
ಸಚ್ಚಿದಾನಂದರೂಪಾಯ
ಕಂಬಳೇಶಾಯ ತೇ ನಮಃ ॥ ೫

ಚಿಂತಿತಾರ್ಥಪ್ರದಾನೇಽಸ್ಮಿನ್
ಚಿಂತಾಮಣಿರಿತೀರ್ಯಸೇ ।

ಶಿವಾನುಭಾವಸಿದ್ಧಾಯ
ಶಿವರೂಪಾಯ ತೇ ನಮಃ ॥ ೬

ಶಿವಯೋಗೀಂದ್ರವಂದ್ಯಾಯ
ಶಿವಾನಂದಾನುಭಾವಿನೇ ।
ಚರವರ್ಯಾಯ ಶುದ್ಧಾಯ
ಕಂಬಳೇಶಾಯ ಮಂಗಳಂ ॥ ೭

ಗಣಾರಾಧನಯಾತ್ರಾಯಾಂ
ಸಮಾರಾಧನತತ್ಪರಃ ।
ಜಲಮಾಜ್ಯಂ ವಿಧಾಯಾಸೌ
ಸಿದ್ಧಹಸ್ತೋ ವಿರಾಜತೇ ॥ ೮

ಅತೋಽನುಷ್ಠಾನಸಿದ್ಧಾನಾಂ
ಮಲ್ಲಮೂಲಾಖ್ಯಮಾಶ್ರಮಃ ।
ಸಂಸಾರಸರ್ಪದಷ್ಟಾನಾಂ
ಸಿದ್ಧಸಂಜೀವನೌಷಧಂ ॥ ೯

ಕಲ್ಯಾಣದಾಯಕ ನಿರಂಜನ ನಿರ್ಮಲಾಂಗ
ಶ್ರೀ ಮಲ್ಲಮೂಲಮಹಿಮಾಕರಲಿಂಗಸಂಗ ।
ಕಾರುಣ್ಯಸಾಗರ ಸದಾಶಿವ ಸನ್ನುತಾಂಗ
ಶ್ರೀ ಕಂಬಳೇಶಯತಿರಾಟ್ ತವ ಸುಪ್ರಭಾತಂ ॥ ೧೦

ಭದ್ರಂ ಶುಭಂ ಮಂಗಳಂ

ಕಂಬಳೇಶ್ವರಸುಪ್ರಭಾತಂ

ಗುರುಸಿದ್ಧಪ್ಪ ಹೆಗ್ಗನಾಡಿ

ಶ್ರೀಕರನೆ ಭವಹರನೆ ಶ್ರೀ ಕಂಬಳೇಶ್ವರನೆ
ಶೋಕರಹಿತನೆ ನಿತ್ಯ ನಿರ್ಲೇಪನೆ
ಸಾಕಾರದಿಂದಿಳೆಯ ನಾಕಗೈಯಲು ಬಂದ
ಲೋಕಪೂಜ್ಯನೆ ಏಳು ಬೆಳಗಾಯಿತು ೧

ಭಾನೂದಯಕೆ ಮುನ್ನ ಗಾನಗೈಯುತಲಿಹವು
ಕಾನನದ ಸಕಲೆಂಟುಪಕ್ಷಿವೃಂದ
ಭಾನುತೇಜನೆ ಬೇಗ ಯೋಗನಿದ್ರೆಯ ತ್ಯಜಿಸಿ
ಸಾನುರಾಗದಿ ಏಳು ಬೆಳಗಾಯಿತು ೨

ಬಿಳಿಯ ಹಕ್ಕಿಗಳೆಲ್ಲ ಥಳಥಳನೆ ಹೊಳೆಯುತ್ತ
ಹೊಳೆಯ ತೀರದಿ ಕುಳಿತು ಉದಯಗಾನ
ನಲಿವಿನಿಂ ಪಾಡುವುದ ನೀನೆದ್ದು ಕೇಳಯ್ಯ
ಮಲರಹಿತ ಮಹನೀಯ ಬೆಳಗಾಯಿತು ೩

ನವಿಲು ಮೊಲ ಸಾರಂಗ ಶುಕಪಿಕಾದಿಗಳೆಲ್ಲ
ರವಿಯು ಮೂಡುತಲಿರಲು ನೋಡಿ ನಲಿದು
ಸವಿಗಾನ ಹಾಡುತ್ತಲಾಡುತ್ತ ಬಂದಿಹವು
ತವೆಕೇಳಲೇಳಯ್ಯ ಬೆಳಗಾಯಿತು ೪

ಕುಂಭಾಭಿಷೇಕಕ್ಕೆ ಕುಂಭಗಳ ಸಲೆ ಹೊತ್ತು
ಕೊಂಬುಕಹಳೆಯ ನಾದ ಮಾಡುತಿಹರು
ಕುಂಭಿಣಿಯ ಪೊರೆವಾತ ಮಜ್ಜನಕ್ಕೇಳಯ್ಯ
ಕಂಬಳೇಶ್ವರಗುರುವೆ ಬೆಳಗಾಯಿತು ೫

ಪಾದಗಳ ಪೂಜಿಸಲು ಪಾದರಿಯ ಸಂಪಿಗೆಯ
ಕೇದಗೆಯ ಪುಷ್ಪಗಳ ಭಕ್ತಜನರು
ಮೋದದಿಂ ತಂದಿಹರು ನೀ ಮುಡಿಯಲೇಳಯ್ಯ
ಖೇದರಹಿತನೆ ಬೇಗ ಬೆಳಗಾಯಿತು ೬

ಧೂಪ ದೀಪಾರತಿಯು ಕರ್ಪೂರಾರತಿ ಹಿಡಿದು
ತಾಪಸರು ಬಂದಿಹರು ಬಹಳವಾಗಿ
ಪಾಪಹರ ಪರಮಾತ್ಮ ತಾಪಗಳ ಕಳೆಯೇಳು
ಕೋಪದೂರನೆ ಜವದಿ ಬೆಳಗಾಯಿತು ೭

ಘಂಟೆ ಜಾಗಟೆ ಭೇರಿ ತಾಳ ಡಮರುಗ ಢಕ್ಕೆ
ಎಂಟುದಿಕ್ಕುಗಳಲ್ಲು ಮೊಳಗುತಿಹವು
ಕಂಟಕವ ಪರಿಹರಿಸಲೇಳಯ್ಯ ನೀನೊಲಿದು
ಎಂಟೆದೆಯ ವೀರಗುರು ಬೆಳಗಾಯಿತು ೮

ಮಂಗಳಾಂಗಿಯರೆಲ್ಲ ರಂಗವಲ್ಲಿಯ ಬಿಟ್ಟು
ಮಂಗಳಾತ್ಮನೆ ನಿನಗೆ ಕರವ ಮುಗಿದು
ಮಂಗಳವ ಹಾಡುವುದ ನೀ ಕೇಳಲೇಳಯ್ಯ
ತುಂಗಕೀರ್ತಿಯ ವಿಭುವೆ ಬೆಳಗಾಯಿತು ೯

ಆದಿಮಲ್ಲನವಂಶಲೆಯಾದಿಗುರು ಮಹನೀಯ
ಅದ್ಯಂತವಿರದಿರುವ ಶೂನ್ಯಕಾಯ
ಮೇದಿನಿಯ ಭಕ್ತರನ್ನುದ್ಧರಿಸಲೇಳಯ್ಯ
ಸಾಧುಜನಸಂಸೇವ್ಯ ಬೆಳಗಾಯಿತು ೧೦

ಕಾಯಕದ ಮಲ್ಲಯ್ಯ ಕಾಯಕವನೆಡೆಬಿಡದೆ
ಕಾಯವನು ದಂಡಿಸಲು ಸಿದ್ಧನಾಗಿ
ಮಾಯಮರ್ದನ ನಿನ್ನ ದರುಶನಕೆ ಬಂದಿಹನು
ಈಯಲೇಳ್ದರುಶನವ ಬೆಳಗಾಯಿತು ೧೧

ಎಡೆಯೂರ ಜಡೆಮುಡಿಯ ಮೃಡಸಿದ್ಧಲಿಂಗೇಶ
ಒಡಗೂಡಿ ಬಂದಿಹನು ಜಂಗಮರನು
ಒಡನೆ ನೀನೆದ್ದವರನಾದರಿಸಲೇಳಯ್ಯ
ತಡಗೈಯದಲೆ ಬೇಗ ಬೆಳಗಾಯಿತು ೧೨

ಗರಳಪುರಿಯೊಳು ಮೆರೆವ ಪರಮನಂಜುಂಡೇಶ
ಶರಣ ನಿನ್ನಯ ಘೋರತಪಕೆ ಮೆಚ್ಚಿ
ಹರುಷದಿಂದೈತಂದು ನಿಂದಿಹನು ಬಾಗಿಲೊಳು
ಕರೆದೊಯ್ಯಲೆದ್ದೇಳು ಬೆಳಗಾಯಿತು ೧೩

ಮುಮ್ಮಡಿಯಂ ಶ್ರೀ ಕೃಷ್ಣರಾಜೇಂದ್ರಭೂಪಾಲ
ತಮ್ಮೆಲ್ಲ ರಾಜಮರ್ಯಾದೆಯಿಂದ
ನಿಮ್ಮ ಚರಣಕೆ ನಮಿಸೆ ಕರಮುಗಿದು ಕಾದಿಹರು
ಸಮ್ಮುದದೊಳೇಳಯ್ಯ ಬೆಳಗಾಯಿತು ೧೪

ವಿಷದ ಕಜ್ಜಾಯವನು ಹುಸಿನಗೆಯ ಸೂಸುತ್ತ
ವಿಷಯದೂರನೆ ನಿನಗೆ ಉಣಿಸಿದವಳು
ವಿಷಧರನೆ ತಪ್ಪಾಯ್ತು ಮನ್ನಿಸೆನ್ನುತಲಿಹಳು
ಋಷಿವರನೆ ಪೊರೆಯೇಳು ಬೆಳಗಾಯಿತು ೧೫

ಕಾರದ ಸ್ವಾಮಿಗಳು ಮೇಣೊಕ್ಕಡಲಿಯಪ್ಪಗಳು
ವೀರಗುರು ಉಂಡುಂಡೆಯಯ್ಯನವರು
ಸಾರಸಾಕ್ಷನೆ ನಿನ್ನ ದರುಶನಕೆ ಬಂದಿಹರು
ತೋರಲೇಳ್ತವರೂಪ ಬೆಳಗಾಯಿತು ೧೬

ಶರಣ ಗುರುಮಲ್ಲೇಶ ಗುರುಚಿಕ್ಕವೀರೇಶ
ಪರಮ ಕಲ್ಬುರ್ಗೀಶ ಮುರುಘೇಶರು
ಮೆರೆವ ಭಕ್ತರ ಕೂಡಿ ಇಲ್ಲಿಗಾಗಮಿಸಿಹರು
ಪರಮಗುರು ನೀನೇಳು ಬೆಳಗಾಯಿತು ೧೭

ಚಿನ್ನಮಾರುವ ಶೆಟ್ಟಿ ಬದನೆತೊಟ್ಟೆಂದೆನಲು
ಹೊನ್ನೆಲ್ಲ ಬದನೆತೊಟ್ಟಾಗಿ ಬಿಡಲು
ಮನ್ನಿಸೆನ್ನುತ ಬೇಡಿ ಮುಡಿಬಾಗಿ ನಿಂದಿಹನು
ಚೆನ್ನಿಗನೆ ಪೊರೆಯೇಳು ಬೆಳಗಾಯಿತು ೧೮

ಗೂನುಬೆನ್ನಾಗಮಿಕ ಸಾನುರಾಗದಿ ಬಂದು
ಜ್ಞಾನಮೂರ್ತಿಯೆ ನಿನ್ನ ಭಜಿಸುತಿರ್ಪ
ನೀನವಗೆ ಕೃಪೆದೋರಿ ದರುಶನವ ಕೊಡಲೇಳು
ದೀನಜನರಕ್ಷಕನೆ ಬೆಳಗಾಯಿತು ೧೯

ಭೂತ ಮಾರಿಯು ಮಸಣಿ ಪ್ರೇತ ಗ್ರಹ ದೆವ್ವಗಳು
ಭೂತನಾಥನೆ ನಿನ್ನ ಸೇವೆಗೈಯೆ
ಕಾತುರದಿ ಕಾದಿಹವು ಕದದ ಬಳಿ ಕರಮುಗಿದು
ಓತು ಸ್ವೀಕರಿಸಲೇಳ್ಬೆಳಗಾಯಿತು ೨೦

ಕಪಿಲಕೌಂಡಿನ್ಯಾದಿ ಋಷಿವರ್ಯರೈತಂದು
ತಪದ ಕಾಂತಿಯೊಳವರು ಪ್ರಜ್ವಲಿಸಂತ
ಜಪಿಸುತ್ತ ಶಿವಮಂತ್ರ ಬಾಗಿಲೊಳು ನಿಂದಿಹರು
ತ್ರಿಪುರಾರಿ ಸಮನೇಳು ಬೆಳಗಾಯಿತು ೨೧

ಕನ್ನವಿಕ್ಕಲು ಮಠಕೆ ಕಳ್ಳರಿಬ್ಬರು ಬಂದು
ಕನ್ನಗತ್ತರಿ ಹಿಡಿದು ನಿಂತಲ್ಲಿಯೆ
ಖಿನ್ನನತಮುಖರಾಗಿ ಕೈಮುಗಿದು ನಿಂದಿಹರು
ಮನ್ನಿಸಂತ ಪೊರೆಯೇಳು ಬೆಳಗಾಯಿತು ೨೨

ಮಲೆಯಮಾದೇಶ್ವರರು ಹುಲಿಯೇರಿ ದರುಶನಕೆ
ನಲವಿನಿಂ ಬಂದಿಹರು ಕಾವಿ ಧರಿಸಿ
ಮಲಹರನೆ ನೀನವರನೆದ್ದೇಳಿ ಗೌರವಿಸು
ಬಲುಸಂತಸವ ತಾಳಿ ಬೆಳಗಾಯಿತು ೨೩

ಹರಕೆತುಪ್ಪದ ಕೊಡವ ಶಿರದ ಮೇಲ್ಗಡೆಯಿರಿಸಿ
ಹರಗಣಾರಾಧನೆಗೆ ತಂದಿರುವರು
ಹರುಷದಿಂ ಸ್ವೀಕರಿಸಿ ಹರಸುತಲಿ ಪೊರೆಯೇಳು
ಭರದಿ ವರವಿತ್ತವರ ಬೆಳಗಾಯಿತು ೨೪

ಮರಿಕಂಬಳೀಶ್ವರರು ಪರಮಸದ್ಗುರುವರರು
ಧರಿಸಿ ಕಂಬಳಿಕಪನಿಭಸಿತವನ್ನು
ವರಬಿಲ್ವಮಾಲಿಕೆಯನರ್ಪಿಸಲು ತಂದಿಹರು
ಧರಿಸಿ ಮುದಗೊಳಲೇಳು ಬೆಳಗಾಯಿತು ೨೫

ಸಿದ್ಧಲಿಂಗೇಶಗುರು ಸಿದ್ಧರಾಗಿಹರಯ್ಯ
ಸಿದ್ಧಪುರುಷನೆ ನಿನ್ನ ಪದಕೆ ನಮಿಸಿ
ಶುದ್ಧಕಾಯಕ ನಡೆಸಿ ನಿನ್ನ ಕೃಪೆ ಪಡೆಯಲಿಕೆ
ಉದ್ಧರಿಸಲೇಳಯ್ಯ ಬೆಳಗಾಯಿತು ೨೬

ಗುರುಚೆನ್ನಬಸವೇಶ ದರುಶನಕೆ ಹಾತೊರೆದು
ಕರಮುಗಿದು ಶಿರಬಾಗಿ ನಿಂದಿರುವರು
ಕರುಣದೃಷ್ಟಿಯ ಬೀರಿ ನೀನವರ ಹರಸೇಳು
ಪರಮಗುರುಮೂರುತಿಯೆ ಬೆಳಗಾಯಿತು ೨೭

ನೀರ ತುಪ್ಪವ ಮಾಡಿ ನೀಡಿರ್ಪ ಪರುಷಾತ್ಮ
ತೇರು ನಡೆಸಿದ ಚಾರುಮಹಿಮಾತ್ಮನೆ
ಕ್ರೂರರೋಗಾದಿಗಳ ಪರಿಹರಿಸಲೇಳಯ್ಯ
ಸಾರತರಸುಜ್ಞಾನಿ ಬೆಳಗಾಯಿತು ೨೮

ಅನ್ನದಾನಕೆ ಮಿಗಿಲು ಇನ್ನಿಲ್ಲವೆನ್ನುತ್ತ
ಅನ್ನದಾಸೋಹಕ್ಕೆ ಮಠವ ಮಾಡಿ
ಅನ್ನದಾನೇಶ್ವರನು ಎನಿಸಿ ಮೆರೆಯುತ್ತಿರುವ
ಸನ್ನುತನೆ ಬೇಗೇಳು ಬೆಳಗಾಯಿತು ೨೯

ದಾಸೋಹದಿಂ ಬಂದ ಈಶಪ್ರಸಾದವದು
ನಾಶಗೈವುದು ಹುಟ್ಟುಸಾವನೆಂದು
ಲೇಸಿನಿಂ ಬೋಧಿಸಿದ ಗುರುವರನೆ ಬೇಗೇಳು
ದಾಸೋಹಮೂರುತಿಯೆ ಬೆಳಗಾಯಿತು ೩೦

ಕಾರೆಸೊಪ್ಪಾದರೂ ಕಾಯಂಕದಿ ಪಡೆಯೆನುತ
ದಾರಿತೋರಂತ ನಡೆದ ಪಾವನಾಂಗ
ಮಾರಹರನವತಾರ ಚಿದ್ರೂಪ ಚಿದ್ಘನನೆ
ಕಾರಣಿಕ ಗುರು ಏಳು ಬೆಳಗಾಯಿತು ೩೧

ಆರುಮೂರನು ಜಯಿಸಿ ಧೀರಗುರುವೆಂದೆನಿಸಿ
ಧಾರುಣಿಯ ಭಕ್ತರಿಗೆ ಗುರುಮಾರ್ಗವ
ತೋರಲಿಕ್ಕೈತಂದ ಕಾರುಣ್ಯಮೂರುತಿಯೆ
ಬೀರಲೇಳ್ಳುವ ದೃಷ್ಟಿ ಬೆಳಗಾಯಿತು ೩೨

ಬಣ್ಣಿಸಲು ಅರಿಹರು ನಿನ್ನ ಮಹಿಮೆಗಳನ್ನು
ಗಣ್ಯಗುರುವುಹನೀಯ ಮುಕ್ತಿದಾತ
ಪುಣ್ಯಮೂರುತಿ ನಿನ್ನ ಬಣ್ಣಿಸಲ್ಕಸದಳವು
ಕಣ್ಣುತೆರೆದೇಳಯ್ಯ ಬೆಳಗಾಯಿತು ೩೩

ಗುರುವೆ ನಿನ್ನಯ ಪರಮಸುಪ್ರಭಾತವ ನಿತ್ಯ
ಧರೆಯ ಭಕ್ತರು ಪಾಡಿ ಧನ್ಯರಾಗೆ
ಗುರುಸಿದ್ಧ ರಚಿಸಿರ್ಪ ನೀನವನ ಪೊರೆಯೇಳು
ಕರುಣದಿಂ ಮಿಗೆಹರಿಸಿ ಬೆಳಗಾಯಿತು ೩೪

ಗುರುಕಂಬಳೇಶ್ವರನೆ ತವ ಸುಪ್ರಭಾತವನು
ಮರೆಯದನುದಿನದುದಯ ಕಾಲದಲ್ಲಿ
ಹರುಷದಿಂ ಪಾಡುವಗೆ ಮುಕುತಿ ಕೊಡಲೇಳಯ್ಯ
ಪರಿಹರಿಸಿ ಪಾಪಗಳ ಬೆಳಗಾಯಿತು ೩೫

ಮಂಗಳವು ಸರ್ವೇಶ ಮಂಗಳವು ಯೋಗೀಶ
ಮಂಗಳವು ಜಗದೀಶ ಮುಕ್ತಿಕೋಶ
ಮಂಗಳವು ಮಾಹೇಶ ಮಂಗಳವು ಪರಮೇಶ
ಮಂಗಳವು ಭವನಾಶ ಗುರುಕಂಬಳೇಶ ೩೬

ಧೃತಿಗೆಟ್ಟು ಅನ್ಯರ ಬೇಡದಂತೆ
ಮತಿಗೆಟ್ಟು ಪರರ ಹೊಗಳದಂತೆ
ಪರಸತಿಯ ರತಿಗೆ ಮನವೆಳಸದಂತೆ
ಇರಿಸಯ್ಯಾ ಕೂಡಲಸಂಗಮದೇವಾ.

—ಬಸವಣ್ಣನವರು

ಕಂಬಳೇಶ್ವರತ್ರಿಪದಿ

ಗುರುಸಿದ್ದಪ್ಪ ಹೆಗ್ಗವಾಡಿ

ಶ್ರೀ ಗುರುವೆ ನಿನ್ನಡಿಗೆ ಬಾಗಿ ನಮಿಸುವೆನಯ್ಯ
ನಾಗಭೂಷಣರೂಪ ಸಕಲೇಶ ಸರ್ವಜ್ಞ
ತ್ಯಾಗಮೂರುತಿಗುರುವೆ ಕೃಪೆಯಾಗು ೧

ಅಂಬಲಿಯೆ ಅಮೃತಾನ್ನ ಕಂಬಳಿಯೆ ಹೊನ್ನುಡಂಗೆ
ನಂಬಿ ಶಿವನಿತ್ತುದನು ಉಂಡುಟ್ಟು ಸುಖಿಸೆಂದ
ಕಂಬಳೇಶ್ವರಗುರುವೆ ಕೃಪೆಯಾಗು ೨

ಬಿಟ್ಟೆನೆಂದರು ಬಿಡದೆ ಬಿಟ್ಟುಬಿಟ್ಟರು ಬಿಡದೆ
ಕಟ್ಟಿಹಾಕಿರುತಿರ್ಪ ದುಷ್ಟಮಾಯೆಯ ಗೆದ್ದ
ಶ್ರೇಷ್ಠನಹ ಶ್ರೀಗುರುವೆ ಕೃಪೆಯಾಗು ೩

ಹೊನ್ನೆಣ್ಣುಮಣ್ಣೆಂದು ಜಗವು ಹೊಡೆದಾಡುತಿರೆ
ಹೊನ್ನುಹೆಣ್ಣನು ಮಣ್ಣ ತೃಣಕಿಂತ ಕಡೆಕಂಡ
ಹೊನ್ನಮ್ಮ ಶ್ರೀ ಗುರುವೆ ಕೃಪೆಯಾಗು ೪

ಸ್ನಾನದಿಂ ತನುಶುದ್ಧ ಧ್ಯಾನದಿಂ ಮನಶುದ್ಧ
ಮೌನದಿಂ ಭಾವವನು ಪರಿಶುದ್ಧಮಾಡೆಂದ
ಜ್ಞಾನನಿಧಿಸದ್ಗುರುವೆ ಕೃಪೆಯಾಗು ೫

ತನ್ನಿಂದಲೇ ಅಳಿವು ತನ್ನಿಂದಲೇ ಉಳಿವು
ತನ್ನಲ್ಲಿ ಶಿವನಿಹುದ ಚೆನ್ನಾಗಿ ಅರಿಯೆಂದ
ಚಿನ್ಮೂಲ ಚಿದ್ಗುರುವೆ ಕೃಪೆಯಾಗು ೬

ಆರು ನಾನೆಂಬುದನು ಶ್ರೀ ಗುರುವಿನಿಂದರಿತು
ಘೋರಸಂಸಾರಸಾಗರವ ನೀ ದಾಟೆಂದ
ಚಾರುಮುಖ ಚಿದ್ಗುರುವೆ ಕೃಪೆಯಾಗು ೭

ಸತ್ತುಚಿತ್ತಾನಂದ ನಿತ್ಯಘನಪರಿಪೂರ್ಣ
ಮೃತ್ಯುಘನೆ ಜಯಿಸಿರ್ಪ ಶಿವಶರಣಕುಲವಂದ್ಯ
ನಿತ್ಯಶ್ರೀ ನಿಜಗುರುವೆ ಕೃಪೆಯಾಗು ೮

ಪರತರಪರಂಜ್ಯೋತಿ ಮೆರೆವ ಚಿದ್ಘನಮೂರ್ತಿ
ನಿರುತ ಚಿಂತಾರತ್ನ ಸುರತರುವೆ ಸುರಧೇನು
ಪರುಷಮಯಶ್ರೀಗುರುವೆ ಕೃಪೆಯಾಗು ೯

ಗುರುಕೊಟ್ಟ ಮಂತ್ರವನು ನಿರುತ ಮರೆಯದೆ ನೆನೆದು
ಪರಿಭವವ ಜಯಿಸೆಂದ ಅಸಮಾಕ್ಷನವತಾರ
ಕರುಣಾಳು ಶ್ರೀಗುರುವೆ ಕೃಪೆಯಾಗು ೧೦

ಒಂದರಿಂದೆರಡಾಗಿ ಮುಂದೆ ಒಂದಾಗುವುದ
ಚಂದದಿಂ ವಿವರಿಸುತ ಭಕ್ತರನು ಪಾಲಿಸುವ
ಸುಂದರೇಶ್ವರ ಗುರುವೆ ಕೃಪೆಯಾಗು ೧೧

ನಂಬಿದವರನು ಬಿಡದೆ ಶಂಭುಲಿಂಗನೆಯಾಗಿ
ಇಂಬಿನಿಂ ಪೊರೆವಂಥ ಶಂಬರಾರಿಯ ವೈರಿ
ಕಂಬಳೇಶ್ವರ ಗುರುವೆ ಕೃಪೆಯಾಗು ೧೨

ನೂರೆಂಟುಶಾಸ್ತ್ರಗಳ ಸಾರವರಿತಿರ್ದರೂ
ಹಾರಾಡಿದರೆ ಮನವು ಫಲವೇನು ಎಂದೊರೆದ
ಕಾರಣಿಕಸದ್ಗುರುವೆ ಕೃಪೆಯಾಗು ೧೩

ಎಷ್ಟೆಂದು ಬಣ್ಣಿಸಲಿ ನಿಷ್ಠ ನಿನ್ನಯ ಮಹಿಮೆ
ಕಷ್ಟಕಾರ್ಪಣ್ಯಗಳ ಪರಿಹರಿಪ ಸಂತುಷ್ಟ
ಪುಷ್ಟಿದಾಯಕ ಗುರುವೆ ಕೃಪೆಯಾಗು ೧೪

ಅಂಗದಲಿ ಲಿಂಗವನು ಹಿಂಗದಲೆ ಧರಿಸುತ್ತ
ಲಿಂಗದಲಿ ನೀ ಬೆರೆದು ಘನಲಿಂಗವಾಗೆಂದ
ಭೃಂಗಿಸಮಸದ್ಗುರುವೆ ಕೃಪೆಯಾಗು ೧೫

ಪರಮರುದ್ರಾಕ್ಷಿಯನು ಧರಿಸಿ ಪೂಜಿಸಿದಾತ
ಪರಮಸಾಯುಜ್ಯವನು ಪಡೆಯುವುದು ದಿಟವೆಂದ
ಪುರವೈರಿಸಮಗುರುವೆ ಕೃಪೆಯಾಗು ೧೬

ನಿನ್ನ ನಾಮಾಮೃತವ ಚೆನ್ನಾಗಿ ಸವಿವಾತ
ಧನ್ಯ ತಾನಿಹಪರದಿ ಸನ್ನುತನೆ ಸಚ್ಚರಿತ
ಸನ್ಮಾನ್ಯಸದ್ಗುರುವೆ ಕೃಪೆಯಾಗು ೧೭

ಗರಳಪುರಿಯೊಳು ರಥವ ಪರುಷಹಸ್ತದಿ ನಡೆಸಿ
ಗರಳವನು ಬಡಿಸಿರಲು ಅಮೃತವೆಂದುಂಡಂಥ
ಪರಮೇಶಸಮಗುರುವೆ ಕೃಪೆಯಾಗು ೧೮

ವೀರಶೈವದ ಹಿರಿಮೆ ಮೇರೆಯಿಲ್ಲದೆ ಮೆರೆಸಿ
ಭೂರಿಭಕ್ತರ ಪಡೆದು ಸಾರತತ್ತ್ವವನಿತ್ತ
ವೀರೇಶಸಮಗುರುವೆ ಕೃಪೆಯಾಗು ೧೯

ಜಂಗಮನೆ ಜಗದೀಶ ಜಂಗಮನೆ ಜಗಭರಿತ
ಲಿಂಗಜಂಗಮಗುರುವು ಒಂದೆಂದು ಬೋಧಿಸಿದ
ಲಿಂಗಮೂರುತಿ ಗುರುವೆ ಕೃಪೆಯಾಗು ೨೦

ನುಡಿದಂತೆ ನಡೆವವಗೆ ಕಡೆಯಹುದು ಜನುಮವೆನೆ
ಅಡಿಗಡಿಗು ಉಸುರಿರ್ಪ ಅನಿಮಿತ್ತನಿಜಬಂಧು
ಮೃಡರೂಪ ಸದ್ಗುರುವೆ ಕೃಪೆಯಾಗು ೨೧

ಕಿಂಕರನು ಆದವನು ಶಂಕರನು ಆಗುವನು
ಶಂಕೆಯಿದಕಿಲ್ಲವೆಂದೊರೆದ ಶಂಕರರೂಪ
ಸೋಂಕಿರದ ಸದ್ಗುರುವೆ ಕೃಪೆಯಾಗು ೨೨

ಶಿವನಿತ್ತ ಸಿರಿಯಲ್ಲಿ ತವೆತೃಪ್ತನಾದವನು
ಜವನ ಬಾಧೆಗೆ ಸಿಗದ ಪುಣ್ಯಾತ್ಮನಹುದೆಂದ
ಭವದೂರ ಶ್ರೀಗುರುವೆ ಕೃಪೆಯಾಗು ೨೩

ಗುರು ತಂದೆ ಗುರು ತಾಯಿ ಗುರು ಬಂಧು ಗುರು ಬಳಗ
ಗುರುವರನೆ ಅತ್ಯಧಿಕವೆಂದು ಸಾರಿದ ಮಹಿಮ
ಸಿರಿಸುಗುಣ ಶ್ರೀಗುರುವೆ ಕೃಪೆಯಾಗು ೨೪

ತನ್ನ ತಾನರಿದವಗೆ ಇನ್ನುಂಟೆ ಭವಮರಣ
ತನ್ನ ತಾನರಿಯಲ್ಕೆ ಗುರುವಾಕ್ಯ ಕೇಳೆಂದ
ಎನ್ನೊಡೆಯ ಶ್ರೀಗುರುವೆ ಕೃಪೆಯಾಗು ೨೫

ಆರಿಗಾರಿರುತಿಹರು ಮಾರಾರಿಯನು ಬಿಟ್ಟು
ಬೇರೊಂದ ನಂಬಿದರೆ ನಿಜಸುಖವು ಸಿಗದೆಂದು
ದಾರಿದೋರಿದ ಗುರುವೆ ಕೃಪೆಯಾಗು ೨೬

ಆರುಮೂರರ ಬಲೆಗೆ ಜಾರಿ ಸಿಗದಿರು ಎಂದು
ಸಾರಿ ಪೇಳುತ ನಿತ್ಯ ಪಾರುಗಾಣಿಸುತಿರ್ಪ
ಸಾರಗುಣಸದ್ಗುರುವೆ ಕೃಪೆಯಾಗು ೨೭

ಸಾಧನೆಯ ಮಾಡಿ ಭವಬಾಧೆಯನು ನೀಗೆಂದು
ಸಾಧನೆಯ ಹಾದಿಯನು ಮಮತೆಯಿಂ ತೋರಿಸಿದ
ಸಾಧುಜನಸದ್ಗುರುವೆ ಕೃಪೆಯಾಗು ೨೮

ಆರುಮೂರರ ಜೊತೆಗೆ ಬೇರೆ ಎಂಟಿಹುದೆಂದು
ಸಾರಿರುವ ವಚನಗಳ ನೀನರಿತು ಜಯಿಸೆಂದ
ಮಾರಾರಿಸಮಗುರುವೆ ಕೃಪೆಯಾಗು ೨೯

ಬಾರದಿಹ ಭವದಲ್ಲಿ ಸಾರಿಸಾರಿಗು ಬಂದು
ದಾರಿಗಾಣದೆ ನೊಂದು ಬಳಲುವರ ಪೊರೆವಂಥ
ಧೀರಸುಂದರಗುರುವೆ ಕೃಪೆಯಾಗು ೩೦

ಶಿವನ ಮಂತ್ರದ ಮಹಿಮೆ ಶಿವನ ಭಕ್ತರಿಗರುಹಿ
ಶಿವನತ್ತ ತಿರುಗಿಸಿದ ಶಿವಶರಣಕುಲತಿಲಕ
ಭವದೂರಸದ್ಗುರುವೆ ಕೃಪೆಯಾಗು ೩೧

ನಂಬಿದವರಿಗೆ ಇಂಬು ನಂಬದವರಿಗೆ ಅಂಬು
ಎಂಬುದನು ನೀನರಿತು ಸಾಂಬನನು ಬೆರೆಯೆಂದ
ಕಂಬಳೇಶ್ವರಗುರುವೆ ಕೃಪೆಯಾಗು ೩೨

ತನ್ನ ಮರಣವ ತಾನು ಮುನ್ನರಿಯಬಲ್ಲಾತ
ಉನ್ನತದ ನಿಜಶರಣನಹುದೆಂದು ನಿಜ ನುಡಿದ
ಸನ್ನುತಶ್ರೀಗುರುವೆ ಕೃಪೆಯಾಗು ೩೩

ಅಷ್ಟಾವರಣ ಅಂಗ ಷಟ್ಸ್ಥಲವೆ ನಿನ್ನಾತ್ಮ
ಶ್ರೇಷ್ಠ ಪಂಚಾಚಾರ ಪ್ರಾಣವೆಂದೊರೆದಂಥ
ದಿಟ್ಟಭಾವದ ಗುರುವೆ ಕೃಪೆಯಾಗು ೩೪

ಗುರುಸಿದ್ಧಲಿಂಗೇಶ ಗುರು ಚೆನ್ನಬಸವೇಶ
ಕರಜಾತರನು ಕೊಟ್ಟು ಧಾರುಣಿಯ ಪೊರೆಯುತ್ತ
ಮರೆಯೊಳಿಹ ಮದ್ಗುರುವೆ ಕೃಪೆಯಾಗು ೩೫

ಮಂಗಳವು ಮಹಿಮಾಂಗ ಮಂಗಳವು ಚರಲಿಂಗ
ಮಂಗಳವು ಉತ್ತುಂಗ ಧವಳಚಿದ್ಭಸಿತಾಂಗ
ಮಂಗಳಾತ್ಮಕ ಗುರುವೆ ಕೃಪೆಯಾಗು ೩೬

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ
ಒರೆಗೆ ಬಣ್ಣಕ್ಕೆ ಪುಟವಿಕ್ಕಿ ನೋಡಯ್ಯ
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ ಕೂಡಲಸಂಗಮದೇವಾ.

—ಬಸವಣ್ಣನವರು

ಶ್ರೀ ಸಿದ್ಧಲಿಂಗಸ್ತೋತ್ರಪಂಚಕ

ಪಿ. ಬಸವಣ್ಣ

ಶ್ರೀರುದ್ರನೋಲ್ಘೋರವಿಷದ ಕಜ್ಜಾಯಂಗಳ
ನೋರಂತೆ ಸವಿದುಂಡು ತೇರ ಮುಟ್ಟುತೆ ನಡೆಸಿ
ನೀರ ತುಪ್ಪವ ಮಾಡಿ ಸೇರಿದ್ದ ಭಕ್ತಜನಕಾನಂದವನ್ನೆಸಗಿದ ।
ಚಾರುಮಹಿಮಾಪುರುಷ ಕಂಬಳೇಶನ ವರಕು
ಮಾರ ಮರಿಕಂಬಳೇಶ್ವರನ ಕರಸಂಜಾತ
ಬಾರಯ್ಯ ಭೂಮಿಗಿನ್ನೊಮ್ಮೆ ಸಹನಾಸಿಂಧು ಪೊರೆಯೆಮ್ಮ ಭಕ್ತಬಂಧು ೧

ವ್ಯೋಮಕೇಶೋಪಮನೆ ನಿರ್ಗುಣನೆ ನಿರ್ಮಲನೆ
ಸೋಮಧರಸನ್ನಿಭನೆ ಸನ್ನುತನೆ ಸದ್ಗುಣನೆ
ಕಾಮನಾಶನಸಮನೆ ಚಿದ್ಘನನೆ ಚಿನ್ಮಯನೆ ಚಿಜ್ಜ್ಯೋತಿರೂಪಾತ್ಮನೆ ।
ಕಾಮಿನೀಕಾಂಚನವ ಕಣ್ಣೆತ್ತಿ ನೋಡದನೆ
ಪ್ರೇಮದಿಂ ಪೂಜಿಸುತ ಪೊಡಮಡುವ ಭಕ್ತರನು
ಕಾಮಿತಾರ್ಥವನಿತ್ತು ಕಾಯೊ ಕರುಣಾಮಯನೆ ಶ್ರೀಸಿದ್ಧಲಿಂಗೇಶನೆ ೨

ಆದಿಮಲ್ಲನಮೂಲೆ ಪುಣ್ಯಮಠದೊಳು ನೆಲಸಿ
ಮೇದಿನಿಯ ಮೇಲದನು ಕೈಲಾಸವೆಂದೆನಿಸಿ
ಮೋದದಿಂದೈತಂದ ಭಕ್ತಜನರೇ ತನ್ನ ಸರ್ವಸ್ವವೆಂದೆಣಿಸಂತ ।
ಆದರಿಸಿ ಸತ್ಕರಿಸಿ ಸರ್ವರನು ಸಂತೈಸಿ
ಭೇದಭಾವವನಳಿಸುತವರಿಷ್ಟವನು ಸಲಿಸಿ
ಮೋದಗೊಳ್ಳುತಲಿದ್ದ ಸಿದ್ಧಲಿಂಗೇಶವಿಭು ಭವಬಂಧ ಬಿಡಿಸೋ ಪ್ರಭು ೩

ಅಂಬಲಿಯೆ ಅಮೃತಾನ್ನ ತಂಬಿಸೊಪ್ಪೇ ತೊಪ್ಪೆ
ಕಂಬಳಿಯೆ ಪಟ್ಟೆಪೀತಾಂಬರವು ತಾನೆಂದು
ಶಂಭುವಿತ್ತುದರಲ್ಲಿ ತೃಪ್ತಿಪಡೆಯೆಂದೊರೆದ ಕಂಬಳೇಶನ ಬೋಧೆಯ ।
ತುಂಬುಮನದಿಂ ನಂಬಿ ನಡೆಯುತ್ತಲದರಂತೆ
ಕುಂಭಣಿಯೊಳಾವುದನು ಬೇಕೆನದೆ ಬೇಡೆನದೆ
ಇಂಬಿನಿಂ ಸಲೆಬಾಳ್ದ ಗುರುಸಿದ್ಧಲಿಂಗೇಶ ಬಿಡಿಸೆಮ್ಮ ಬಂಧಪಾಶ ೪

ಗುರುವೆ ಸಾಕ್ಷಾದ್ದೈವವೆಂದೆಣಿಸಿ ಘನಮನದಿ
ಗುರುನಡೆದ ಮಾರ್ಗದೊಳಂ ನಡೆಯುತ್ತಲನುನಯದಿ
ಗುರುವಿಗಿಂ ಮಿಗಿಲಾಗಿ ಭಕ್ತಜನಹೃತ್ಕಮಲದೊಳ್ನಿಲಸಿ ಪೂಜೆಗೊಂಬ ।
ಪರಮವೈರಾಗ್ಯಸಂಪನ್ನ ಶಾಂತೋದಾರಿ
ಗುರುಚೆನ್ನಬಸವೇಶನಂ ಕರುಣದಿಂದಿತ್ತ
ಗುರುಭಕ್ತಕಲ್ಪತರು ಸಿದ್ಧಲಿಂಗೇಶಗುರು ಹರಸೆಮಗೆ ಕರುಣೆದೋರು ೫

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವ ಕೇಳಯ್ಯ.
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

—ಬಸವಣ್ಣನವರು

ಆದಿ ಕಂಬಳೀಶ್ವರರ ತ್ರಿಪದಿ

—ಶ್ರೀ ಹೆಜ್ಜಿಗೆ ಲಿಂಗಣ್ಣ

ಆದಿ ಕಂಬಳೀಶ್ವರರು ಮೇದಿನಿಯೊಳವತರಿಸಿ
ಸಾಧುಸಜ್ಜನರಂಬುಧಿಚಂದಿರರೆನಿಸಿ
ಮೋದದಿಂ ಮೆರೆದರವನಿಯಲಿ ! ೧

ನಿಮ್ಮ ನಿಜಕತೆಗೆ ನಿಮ್ಮ ಭಕುತರು ಪೇಳ್ದ
ಎಮ್ಮಮಲ ಭಾವದನುಭಾವವು ದರ್ಶಿಸಿದ
ಅಮಲ ನುಡಿಚಿತ್ರವೆ ಅಡಿಗಲ್ಲು ! ೨

ಬರೆದಿಟ್ಟ ಕತೆಇಲ್ಲ ಬರೆದ ಬುಧಜನಮಿಲ್ಲ
ಗುರುಪರಂಪರೆಯ ಪೇಳ್ವ ಲಿಪಿ ಇಲ್ಲದಿರೆ
ಬರೆಹದೊಳಿಹ ತಪ್ಪುಗಳನೆಣಿಸದಿರಿ ! ೩

ಆದಕಾನು ನೆರೆನಿನ್ನ ಮುದದೊಳು ಮರೆಹೊಕ್ಕು
ಸದುಭಾವದೆನ್ನಮಲ ಮನದಿ ನೀ ನೆಲಸಿ
ಮಧುರ ಕತೆಯಿದನೇಪೇಳು ! ೪

ಗುರುವೆ ನಿನ್ನಡಿಯಲ್ಲಿ ಕರಣ ಸಂಕುಳಮೆಲ್ಲ
ಬಿರಿದು ಹೂವಾಗಿರಲು ನೆಪಕೆ ನಾನಿದನು
ಬರೆದನೆಂಬ ಬರಿಯಭ್ರಮೆ ನೋಡಾ ! ೫

ಎನ್ನಮಲ ಭಾವದಲಿ ಚೆನ್ನಿಗನೆ ನೀನಿಂದು
ನಿನ್ನಮರ ಕತೆಯಿದ ಹೇಳಿಬರೆಯಿಸು ಗುರುವೆ
ಘನಗುರು ಕಂಬಳೀಶ ಕವಿಯೆಂ ! ೬

ನೀನೆನ್ನ ಭಾವದಲಿ ನೀನೆನ್ನ ಸೂಕ್ಷ್ಮದಲಿ
ನೀನೆನ್ನ ಸ್ಥೂಲದಲಿ ಸತತ ನೆಲಸಿರಲಂ
ನೀನೆ ನಾನಿಹೆನು ಸಹಜದಲಿ ೭

ನೀನೆನ್ನ ಮನದೊಳು ನೀನೆನ್ನ ಮತಿಯೊಳು
ನೀನೆನ್ನ ವಾಕ್ಕಾಯ ಸಕಲದಲಿ ನೆಲಸಿರಲು
ನೀನಾನೆಂಬುದದು ಹುಸಿಯೆ ! ೮

ಕಾಲಗರ್ಭದಿಂ ನಿನ್ನ ಬಾಲಯೌವನದ ಕಥೆಯು
ಆಲಿಸುವ ನೋಡುವ ಸೂಕ್ಷ್ಮಶ್ರವಣೇಂದ್ರಿಯಗಳ
ಕಾಲಗೆಲಿದ ಗುರು ನೀಡೆನಗೆ ! ೯

ಬಸವನಂ ವೀರಶೈವಸಮಾವತಾರನಂ
ದೆಸೆದೆಸೆಗೆ ಶಿವಭಕ್ತಿ ಬೆಳಗ ಬಿತ್ತಿದನಂ
ಒಸೆದು ನಮಿಸುವೆನು ಮೊದಲಲಿ ? ೧೦

ಅಸಮನಯನನೆ ಇರದೆ ವಸಂಧೆಗೈತಂದನೆನೆ
ಅಸಮ ಜ್ಞಾನಿಯಲ್ಲಿಮನವತರಿಸಿ ಬೆಳಗಿದ
ಅಸಮಗೆ ಅಭಿವಾದಿಸುವೆನು ೧೧

ಬಸವನೊಡನವತರಿಸಿ ಬಸವಮಂತ್ರವನೆ ಜಪಿಸಿ
ಬಸವನಸಮಾಕ್ಷನೆಂದೆನುತ ಪಾಡಿದ
ಅಸಮಗಣಂಗಳಿಗೆರಗುವೆನು ! ೧೨

ನುಡಿಗಳೊಡತಿ ಸರಸತಿಯೆ ಬೆಡಗಿನಿಂ ಬಿನ್ನಣದಿ
ಎಡಬಿಡದೆ ಹರಿವ ನದಿಯವೊಲ್ ಈ ಕತೆಯ
ನಡೆಸು ಲೋಕದಚ್ಚರಿ ಎನಲು ! ೧೩

ಪದಗಳ ಪುಂಜವನೆ ಹದವಾದ ಭಾವದಲಿ
ಸದಮಲಭಕ್ತಿ ಸಲಿಲದಲಿ ನೀನು ಮೀಯಿಸಿ
ಪದ್ಯಮಿವ ಬರೆಯಿಸು ಜವದೆ ! ೧೪

ಸಂಧಿ ಮೇಣ್ ಸಮಾಸಗಳ ಗೊಂದಲಕೆ ಸಿಲುಕದಲೆ
ಬಂಧುರದ ಭಾವಾವೇಶಕೆ ಹೊಂದುವವಲ
ಪದ ಬಂಧವನೆ ಬಳಸುವೆನು ! ೧೫

ಛಂದಸ್ಸು ಮುಂದಿಟ್ಟು ಅಂದವಹ ಭಾವಗಳ
ಕೊಂದು ಕೊಸರಾಡಿ ತ್ರಿಪದಿಗಳ ರಚಿಸುವೆನೆ
ಅಂದಗೆಡಿಸಿ ಚೆಂದಪಟದೊಲು ! ೧೬

ಪದಬಂಧದೊಳೆ ಮೆರೆವ ಮೃದುಮಧುರಲಾಲಿತ್ಯ
ಹದವಾದ ರಾಗರಸಗಳನೆ ಸೃಷ್ಟಿಸುತ
ಮುದದಿ ಹಾಡುವೆನು ಹಾಡಿದನು ೧೭

ವಿಘ್ನರಾಜನೆ ಸತ್ಯಸುಜ್ಞಾನ ಮಾರುತಿಯೆ
ಭಗ್ನವಾಗದ ತೆರದೊಳೀಕತೆಯ ನಡೆಸು
ಅಜ್ಞನಾದೆನ್ನನು ಹರಸು ! ೧೮

ಗುರುಪುಂಗವದ್ವಯರ ಕತೆಯುದವನಿಯಲಿ
ಮೆರೆದು ಹಬ್ಬುಗೆ ಭಕ್ತಿ ಬೆಳಕೆಲ್ಲದಿಕ್ಕಿಗೆ
ಚರಿಸುತ ತಮವನೆ ಹರಿಸುಗೆ ! ೧೯

ನಂಜುಂಡ ಶಿವಯೋಗಿ ಅಂಜದಲೆ ನೆಲೆಸಿಹನು
ನಂಜನಾಗೂಡಿನಲಿ ಸಕಲ ವೈಭವದಲಿ
ನಂಜು ಕುಡಿದವನಿವನೆನಲು ! ೨೦

ಸುತ್ತಲಿಹ ಭಕ್ತರಿಗೆ ಕತ್ತಲಿನ ಕಾವಳವ
ಎತ್ತಿ ಬಿಸುಡುವೆನೆಂಬಭಯ ಹಸ್ತವತೋರಿ
ಚಿತ್ತಜಾರಿ ಎನೆ ಮೆರೆದಿಹನು ! ೨೧

ಗರಳಪುರಿಯುತ್ತರದಿ ಮೆರೆದಿಹ ಕಪಿಲೆಯು
ಹರಿವಮರ ನಿನಾದದೋಂಕಾರಮಯನಾಟ್ಯ
ಭರಿತ ಕೌತುಕವನೇನೆಂಬೆ ! ೨೨

ಬಾಗುವಳು ಅಲ್ಲಲ್ಲಿ ಸಾಗುವಳು ಗುಳು ಗುಳಿಸಿ
ನಾಗರಾಜ ಪರಿವವೊಲ್ ಪರಿವಳು ಕಪಿಲೆ
ಸಾಗರ ಪರಿಯಂತ ನಿಲದೆ ! ೨೩

ಬಂಡೆಗಳ ಮೇಲೇರಿ ಗಂಡುಬೀರಿಯವೊಲು
ದಡಬಡನೆ ನೆಗೆದೋಡುವಳು ಮೇಣ್‌ದುಮ್ಮಿಕ್ಕಿ
ಮಡುವಾಗಿ ಸಾಗುವಳು ಸುದತಿ ! ೨೪

ಪೂರ್ವಕ್ಕೆ ಹರಿವುತ್ತಪೂರ್ವದ ಗತಿವಿಡಿದು
ಪಾರ್ವಳಿವಳದೊ ದಕ್ಷಿಣಕೆ ಬಾಗುತ್ತ
ಪೂರ್ವ ಮೂಲೆಯು ನಿರ್ವಿಂಸಂತ ! ೨೫

ಮಲೆಯೊಂದು ಪೂರ್ವಕ್ಕೆ ಅಲೆಯಾಗಿ ಬೆಳೆದಿಹುದು
ಹಲವು ಹನ್ನೆರಡು ತರುಪುಂಜಗಳಹಿಡಿದು
ಬಲವಂದು ನಿಂದಿಹ ಪರಿನೋಡ ! ೨೬

ಮಂದಾನಿಲ ಬೀಸಿಬರೆ ಚೆಂದುಳ್ಳ ಪಿಕಳಾರ
ವಂದೆ ಮಂದೆಯಾಗೆದ್ದುಹಾರುವ ನೋಟದ
ಚೆಂದವನು ಬಣ್ಣಿಸಲಳವೆ ! ೨೭

ಮಲೆಯುಲಿಯು ಭೋಂಕನೆ ಅಲೆಯಲೆಯಾಗಿ ಬಕ್ಕು
ಅಲೆಮಾರಿ ಗಾಳಿ ಬೀಸಿಬರೆ ಪೂರ್ವದಿಂ
ಬಲ್ಲಿದ ಭಾವುಕಗಿದು ಮೋಜು ! ೨೮

ನದಿಯ ಈಮೂಲೆಯುಲಿ ಸದಮಲ ಭಾವದಲಿ
ನಿಂದಿಹರು ತಪಕೆ ಶಿಷ್ಯರಿಬ್ಬರು
ಮುದವಾಂತು ಹರುಷದಲಿ ! ೨೯

ಇಷ್ಟಲಿಂಗದಿ ನಿಂದು ಷಟ್ಸ್ಥಳದೊಳೋಲಾಡಿ
ಅಷ್ಟಮದಗಳ ಗೆಲಿದಪೂರ್ವ ತೇಜದಿಂ
ನಿಷ್ಠನಿರಂಜನ ಮೆರೆವನು ! ೩೦

ಗರಳಪುರಿಯಿಂ ಮಹಿಷಕೆ ಇರುವುದೊಂದೆದ್ದಾರಿ ಇ
ದರಲಿ ಹರಿದುಬರುಂವರು ನಂಜುಂಡೇಶನ
ದರುಶನಕೆ ಭಕ್ತಿಯುಲಿ ಜನ ೩೧

ಮಲ್ಲಯ್ಯ ಶಿಷ್ಯನು ನೆರೆ ಬಲ್ಲಿದನು ಕಾಯದಲಿ
ಚೆಲ್ಲಿ ಮೆರೆಯುವ ಪೊದೆ ಮೀಸೆ ನೋಡಲು
ಝಲ್ಲೆನುವುದೆದೆ ಕಂಡವರಿಗೆ ! ೩೨

ಭಸಿತಭೂಷಿತ ಹಣೆಯು ಮಿಸುಪ ಮಿಗೆ ಮುಖಕಮಲ
ಎಸೆವ ಕೋಲೊಂದ ಹಿಡಿದು ಮಲ್ಲಯ್ಯ ಹೊದ್ದಿಹ
ಅಸಮ ಕಪಿನಿ ಕಂಬಳಿಯನೆ ! ೩೩

ಆರಡಿಯ ಎತ್ತರದ ಮೇರುಸಮ ಕಾಯದಿಂ
ದಾರಿಯುಲಿ ನಿಲ್ಲುವನು ಮೊದಲ ದಾರಿಗನ
ಕೋರುವನು ಹಾಗವ ಕೊಡು ಎಂದು ! ೩೪

ಬಂದ ಹಾಗದ ಹಣಕೆ ಬಂದು ತಾ ಶ್ರೀ ಪುರಕೆ
ಹೊಂದುವನು ಹುರುಳಿರಾಗಿಯನು ಮುದದೊಳಂ
ಹಿಂದಿರುಗುವನು ತನ್ನೆಡೆಗೆ ! ೩೫

ರಾಗಿಯಂಬಲಿ ಮಾಡಿ ಬೇಗದಿ ಬೇಯಿಸಿ ಹುರುಳಿ
ರಾಗದಿಂ ಗುರುವಿನಡಿವಿಡಿದು ಪಾಡುತ್ತ
ಕೂಗುವನು ಭಕ್ತರರ್ತಿಯಲಿ ! ೩೬

ಬನ್ನಿರೋ ಬನ್ನಿರೈ ಘನಗುರುವಿನಡಿವಿಡಿದು
ಸನ್ಮನದಿ ಪ್ರಸಾದವ ಕೊಳ್ಳ ಬನ್ನಿರೋ''
ಘನಮಲ್ಲಯ್ಯ ನೆರೆಕರೆವನಿಂತು ೩೭

ಬಯಸಿದ ಭೋಜನವಕ್ಕು ಕಾಯಿಸಿದಂಬಲಿ ಹುರುಳಿ !
ಭಯತೊರೆದು ಗುರುನಂಬಿ ಬನ್ನಿರೈ ಎಂದಂ
ನಯವಾಗಿ ಕರೆವನೊಮ್ಮೊಮ್ಮೆ ೩೮

ಅವರವರಂ ಭಾವಿಸಿದ ನವಭಕ್ಷ್ಯ ಭೋಜ್ಯಗಳ
ಸವಿಕಟ್ಟು ರುಚಿಯಕ್ಕು ಅಂಬಲಿಯಲಿ ನೆರೆ
ಭಾವಿಸಲಿದಘೋರಶಕ್ತಿ ! ೩೯

ಅಂಬಲಿಹುರುಳಿ ಕಾಯಂಕ ಬಲಗೊಂಡು ಭಕ್ತರ
ಬೆಂಬಲ ವರ್ಧಿಸಿತು ದಿನದಿನಕೆ ಶಿವನ
ಹಂಚು ಬೆಳೆಯಿತು ಭಕ್ತರಲಿ ೪೦

ಮಲ್ಲಯ್ಯ ನಿರಂಜನರು ಎಲ್ಲಬಗೆ ಭಕುತರನು
ಮೆಲ್ಲನೆಳೆದರು ತಮ್ಮೆಡೆಗೆ ಶಿವಬೆಳಗ
ಚೆಲ್ಲಿದರು ಬಂದವರ ಮನದಿ ! ೪೧

ಸವೆದಿರಲು ತಮ್ಮಾಯುಷ ಭವದ ವಿಂಗೆ ಬಂಧನವ
ಸೆವೆಸಿ ಶಿವನೆಡೆಗೊಯ್ವ ಗುರುಬರವ ಹಾರೈಸಿ
ನವಸಂಧಾನ ಗೈದರವರು ! ೪೨

ಅನುಸಂಧಾನದಂಗ್ರದನುಭಾವತರಂಗದ
ಅನುಪಮದ ಜ್ವಾಲೆ ಹಬ್ಬಿತು ದೆಸೆದೆಸೆಗು
ಅನುಪಮಂದ ತಪೋಬಲವಿದೆನೆ ! ೪೩

ತಾವ್ ಬಿಟ್ಟ ಕಜ್ಜಮನು ತಾವ್ ಬಿಟ್ಟ ಶಿಷ್ಯರನು
ಕಾವಕಡುಗಲಿ ಗುರುಬರವ ಹಾರೈಸಿದರು
ಭವದುಗ್ರ ಭಕ್ತಿಯಲಿ ೪೪

ಯೋಗದನುಸಂಧಾನ ಮಾಗಿ ಹಣ್ಣಾದಂದೆನೆ
ತೇಜಃ ಪುಂಜ ಕಾಯುವೆರಡನು ಕಂಡನತಿ
ಯೋಜನ ದೂರ ದೂರದಲಿ ! ೪೫

ಗುರುಕಂಡ ದೃಶ್ಯಮಿದನರುಹಿದನು ಶಿಷ್ಯಂಗೆ
ಪರಮಂ ಸಂತಸದಿ ಉಸುರಿದನು "ನಾವಿನ್ನು
ತೊರೆಯ ಬಹುದೀ ಕಾಯಗಳ !" ೪೬

ಗುರು ಶಿಷ್ಯರುಮಂದು ನಿರುತ ಯೋಗದಿ ನಿಂದು
ತೊರೆದಂ ಬಿಸುಟರು ದೇಹವನು ಸಾಜದಲಿ ಮಿಗೆ
ಬೆರೆದರನಂತದಲಿ ಜವದೆ ! ೪೭

ನಿರಂಜನ ಮಲ್ಲಯ್ಯರು ತೊರೆದು ಹೋದರು ಜಗಷ
ವರಂಷ ಮುನ್ನೂರರವಧಿಯಲಿ ಹಿಂದೆ ಬಿಟ್ಟರು
ಪರಮ ತಪದ ಪ್ರಖರತೆಯುನೆ ! ೪೮

ಇವರಂತ್ಯಾಭೀಷ್ಟದ ಭವ್ಯಭಾವ ಶಕ್ತಿತೇಜ
ಭವದೊಳಲ್ಲಲ್ಲಿ ಹುಡುಕುತ್ತ ಚಲಿಸಿತಹಹ
ಶಿವಯೋಗ ಸಿದ್ಧರ ಹುಡುಕುತ ! ೪೯

ಬಸವ ಕಲ್ಯಾಣದಂಚಿನಸಮ ಬಾಂಧವರ
ಎಸೆವ ಓಣಿಯಲಿ ಶಿವಯೋಗಿಗಳಿಬ್ಬರು
ಅಸಮ ಯೋಗದಲಿ ನಿಂದಿಹರು ೫೦

ದೇಹಮೆರಡಾದೆಂತು ಬಾಹ್ಯದಿ ನೋಡುವೊಡೆ
ಸಾಹಸಮುಹುದವರಲಿ ಭಿನ್ನತೆಯ ಕಾಣ್ವ
ಸಾಹಸದ ಬರಿಕಣ್ಣುಗಳಿಗೆ ೫೧

ಮುಖಕಮಲ ಹಿಗ್ಗಿರಲು ಸಖರಿವರು ಅವನಿಯಲಿ
ನಿಖಿಲ ಲೋಕದ ಸುಖವ ದುಃಖವ ಮೀರಿ ಶಿವ
ಮುಖದಿ ನಿಂದ ನಿಜಲೋಲರು ! ೫೨

ಇರುವರ ಮುಖವೊಂದೆ ಇರುವರ ಹಣೆಯೊಂದೆ
ಇರುವರ ನಾಸಿಕವುಮೊಂದೆ ಭಾವಿಸಿನೋಡೆ
ಇರುವರು ಅವಳಿ ಎನಿಸುವರು ! ೫೩

ಕಾಲುಗಳು ಕೈಯಿಗಳು ಕೀಲುಗಳರವತ್ತೆಂಟುಂ
ಮೇಲಿ ಮೆರೆವನುಪಮ ಶಿರಸ್ಸುಗಳೊಂದೆ ತೆರ
ಹೇಳಿ ಮಾಡಿಸಿದವೊಲ್ ಇಹವು ! ೪೪

ಓಣಿಯಲಿ ಬಿದ್ದಿರುವ ಸಾಣೆಗಲ್ಲಿನ ಮೇಲೆ
ಜಾಣ ಶಿವ ಸಂಪನ್ನರಿವರು ಕುಂತಿಹರು
ಮಾನಸದೆ ಶಿವನ ಪೂಜಿಸುತ ! ೪೫

ಭಸಿತ ಬೆಳಗುವ ಹಣೆಯು ಎಸೆವ ರುದ್ರಾಕ್ಷಿಸರವು
ಅಸಮಾಕ್ಷನಲಿ ಬೆರೆವ ಭಾವೋಜ್ವಲ ತೇಜವು
ಎಸೆವುತಿವೆ ಶಿವಸಮಯವನೆ ೫೬

ಇಷ್ಟಲಿಂಗವ ಹಿಡಿದು ಶ್ರೇಷ್ಠದೆಡಗೈಯಿನೊಳು
ನಿಷ್ಟೆಯಲಿ ಲಿಂಗವನೆ ನಿರುಕಿಸಂತ ನಿಜ
ದಿಷ್ಟದಲಿ ಬೆರೆದರೇನೆಂಬೆ ೫೭

ಅನಿಮಿಷ ಯೋಗದಲಿ ಘನಕೂಟ ಪಲ್ಲವಿಸಿ
ಘನಗೊಂಡಿತ್ತುಮನ ನಿಜ ಪ್ರಾಣದಲಿ ಇವರ
ಘನ ನಿಲವ ಬಣ್ಣಿಸಲಳವೆ ೫೮

ಮೂರಾದ ತನುವಿನಲಿ ಮೂರಾದ ಲಿಂಗಗಳು
ಏರುತ್ತ ಇಳಿವುತ್ತಿವರೊಳು ಕೀಲಿಸಿದ
ಗಾರುಡಿಯನೇನೆಂಬೆ ಹೇಳ ೫೯

ಮಲ್ಲಯ್ಯ ನಿರಂಜನರ ಬಲ್ಲಿದಭೀಷ್ಟ ಭಾವ
ಮೆಲ್ಲ ಮೆಲ್ಲನೆ ಬಂದಾವರಿಸಿತು ಈ
ಬಲ್ಲಿದ ನಿಜ ಶಿವಯೋಗಿಗಳ ೬೦

ಶಿವಯೋಗದಿಂದೆಳ್ಚೆತ್ತು ಭವದ ಭಕ್ತರಭೀಷ್ಟವ
ಜವದಿ ಸಲ್ಲಿಸೆ ಹೊರಟರು ದಕ್ಷಿಣಕೆ ಇದು
ಶಿವಯೋಗದಚ್ಚರಿಯು ನೋಡ ೬೧

ಭಾವಭಾವವ ತಾಕೆ ಕಾಮಿತಾರ್ಥವನೀವ
ನಾಮರೂಪವಳಿದ ಶಿವನೊಲುಂ ಹುಡುಕಹೊಂಟರು
ಭಾವಕ್ಕೆಟಕಿದ ಮೂಲತಾಣವ ! ೬೨

ಸೋದರರು ಈರ್ವರುರೆ ಹಾದಿಯಿಂ ನಡೆವಾಗ
ಸಾದು ಸಜ್ಜನರೊಳು ತೋರುವರರ್ತಿಯಲಿ
ನಾದಮಯ ಶಿವಸಂಪದವ ೬೩

ಊರಹೊರ ದೇಗುಲದಿ ಚಾರುತರ ಸೋದರರು
ಸೇರುತ್ತ ರಾತ್ರಿಯಲಿ ಶಿವಯೋಗ ನಿದ್ರೆಯಲಿ
ಸಾರುವರು ಪೇಳಲಿದನೆಂತಂ ! ೬೪

ಬೆಟ್ಟಗಳ ಗುಡ್ಡಗಳ ಅಟ್ಟಹಾಸದಿ ದಾಟಿ
ಪಟ್ಟಣದಿ ಪಳ್ಳಿಯೊಳು ಭಕ್ತರೊಳುಂ ನಿಂದು
ಇಷ್ಟಲಿಂಗವ ಪೂಜಿಪರು ೬೫

ಇಂತು ಬಂದರೋ ಶಿವಚಿಂತಕರು ಯೋಗಿಗಳುಂ
ಕಂತುಹರನಮರ ಭಕ್ತಿಯ ಚೆಲ್ಲಿ ನಡೆದರು
ಕುಂತಳದ ದಕ್ಷಿಣದ ತುದಿಗೆ ! ೬೬

ಮಹಿಷಪುರಕೈದಿದರು ಬಹಿರಂತರದ ಕೊಳೆಯ
ದಹಿಸಿದರು ಶಿವಯೋಗದುರಿಯಲಿ ಭಾವಿಸೆ
ಮಹಿಮಾನ್ವಿತರಿವರುರೆ ನೋಡ ! ೬೭

ನಡೆವಾಗ ಶಿವಭಾವ ನುಡಿವಾಗ ಶಿವಭಾವ
ಅಡಿಗಡಿಗೆ ಶಿವ ಶಿವ ಶಿವ ಎಂದುಗ್ಘಡಿಸಿ
ನಡೆದರು ಪುರದಿ ಪೊರಮಟ್ಟು ೬೮

ವನವೆಲ್ಲ ಶಿವನೆನುತ ವನದೊಳಿಹ ತರುಗಳಲಿ
ಘನಶಿವನ ಕಾಣುತ ಚರಾಚರದೊಳೆಲ್ಲ
ಘನಶಿವ ಭಾವ ಬಲಿಯಿತಹ ! ೬೯

ಘನದೊಳು ಘನವಾಗಿ ಅನುದಿನದ ಪೂಜೆಯಿಂ
ತನುವಿನೊಳ ಕರಣಕ್ರಿಯಾಸಂಕುಳವು ನಿಂತಂ
ಘನದೈಕ್ಯದೊಳು ಮೆರೆವರು ! ೭೦

ಪರಮ ಶಿವಯೋಗಿಗೆ ದೊರೆ ಕೊಳ್ಳುವುವು ನೋಡ
ಪರತರದ ಪಂಚ ಪರಂಪದೆಲ್ಲ ಶಕ್ತಿ ಇದ
ಕೆರಡೆಣಿಸುವನಜ್ಞಾನಿ ಭಾವಿಸೆ ೭೦

ಕಂಬಳೀಶರೀದ್ವಯರು ಶಂಭು ಬಕುತರು ಇವರ
ಕಂಬಳಿ ಕಪನಿಯುಮಲ ರೂಪ ಬಣ್ಣಿಸಲಂ
ಶಂಭುವಿಗು ಆಳವಲ್ಲ ನೋಡ ! ೭೧

ಗುರು ಕಂಬಳೇಶ್ವರರು ಹರನ ನಿಜ ಅವತಾರಿ
ಪರಮ ಸೋದರದ್ವಯರು ಭಾವಿಸೆ
ಹರಸಮಯದೌಪಾಸಕರು ! ೭೨

ಗುರುತೋಂಟದಾರ್ಯರೆ ಹಿರಿಯರು ಪಾವೆಯಲಿ
ಗುರು ಸಿದ್ಧವೀರಾರ್ಯರೆ ಅದುಭುತದ ತಮ್ಮ
ಎರಡೊಡಲಾದೊಡೊಂದೆ ಜೀವ ! ೭೩

ಶಿವಯೋಗ ಬಲ್ಲಿದಗೆ ಭವದಿ ಮಿಗೆ ಬಳಸುವ
ಇಹದ ಕಾಲಮಾನವು ಸಲ್ಲವು ಭಾವಿಸೆ
ಶಿವಯೋಗಿಯನಂತಮವ್ಯಯನು ! ೭೪

ಆರು ಸ್ಥಳದಾರು ಹಂತವನೇರಿ ನಿಂದಿಹ
ಚಾರುಕೀರ್ತಿ ವೆತ್ತೀರ್ವಸೋದರರ ಮಹಿಮೆಯ
ಮೇರುಸೀಮೆಯ ಗುರ್ತಿಸಲಳವೆ ? ೭೫

ಎರಡಾಗಿ ತೋರುವ ಮೆರೆವ ನಿಜ ಗುರುಗಳು
ಬೆರೆದಿಹರು ಒಂದೆ ಭಾವದಲ್ಲಿ ಆತ್ಮದಲಿ
ಪರಮ ಚೋದ್ಯವೆನೆ ಅವನಿಯಲಿ ! ೭೬

ಶರಣರು ಬಲ್ಲಿದರು ಹರನವತಾರಿಗಳು
ಪರಸಮಯ ತಿಮಿರ ಮಾರ್ತಾಂಡರು ಭಾವಿಸಲು
ಪರಮ ಪರುಷ ಶಕ್ತಿಯುತರು ! ೭೭

ಭಕ್ತಿ ಕುಸುಮವು ಅರಳಿ ಮುಕ್ತಿ ಮಧುರವ ಬೀರಿ
ವ್ಯಕ್ತಾವ್ಯಕ್ತ ಶಕ್ತಿ ಸೌರಭವ ಚೆಲ್ಲುತಿಹ
ಶಕ್ತಿವಿಶಿಷ್ಟಾದ್ವೈತ ಕುಸುಮವಿವು ! ೭೮

ಮೆಲುನಂಡಿಯ ಬಲ್ಲಿದರು ಸಲ್ಲಲಿತ ಭಾವದಲಿ
ಮೆಲುಮೆಲನೆ ನಡೆದು ಬಂದರು ಪಂಚಲಿಂಗದ
ಕಲ್ಲುಗುಡಿಗೊಂದು ರಾತ್ರಿಯಲಿ ೮೦

ತಂಗಿದರು ಸೋದರರು ಕಂಗೊಳಿಪ ಗುಡಿಯಲಿ
ಸಂಗಡಿಗರಾರಿಲ್ಲ ಭಾವಿಸೆ ನಿಸ್ಸಂಗಿ
ಜಂಗಮರಿವರನೇನೆಂಬೆ ೮೧

ಗುರಂತಿನ ಪುರಜನರು ಗುರಂಗಳೀಶ್ವರ ಕಂಡು
ಕರೆದು ಬಿನ್ನಹಗೈದಾರ್ಶಿಭೆಗೈವವರು
ಇರಲಿಲ್ಲವೆನೆ ಇದಂಸತ್ಯ ! ೮೨

ಬಲಿದರು ಪದ್ಮಾಸನ ನಿಲಿಸಿದರು ಭಾವದ
ದಲಿ ಭಾವಲಿಂಗವನೊಲಿದು ಸಂದರು ನಿಃ
ಲೋಲುಪರು ಲಿಂಗಲೀಲೆಯಲಿ ! ೮೩

ಭಾವ ಭಾವವು ಬಲಿತು ನಿಬ್ಬಾವವಾಗುತಿರೆ
ಭಾವ ಶೂನ್ಯವಳವಟ್ಟ ಸೋದರ ನಿಜಶಿವ
ಭಾವದುನ್ನತಿಯನೇನೆಂಬೆ ! ೮೪

ನಿಂದಿವರು ಐಕ್ಯದೊಳು ಬಂಧುರದ ತೇಜದಲಿ
ಅಂದು ಬೆಳಗಿದರು ಕತ್ತಲೆ ಮಯ ಗುಡಿಗಳಿ
ಗೊಂದು ನಿಜ ಕೌತುಕವು ಎನಲು ೮೫

ಗುಡ್ಡದಿಹತುದಿಯಲಿ ಬೆಡಗಿನ ತೇಜವಿದು
ಮೂಡಿದರ್ಕನೊಲು ಬೆಳಗಿ ಬೆಳಕಾದಂದು
ನುಡಿ ಮೀರಿದ ನೋಟವೈಸೆ ! ೮೬

ಗುಡ್ಡದೊಳು ಬೆಳೆದಿರುವ ದೊಡ್ಡ ಮರಗಳ ಗುಂಪು
ಕಡುಯೋಗದೊಳ್ಪಿನಲಿ ಬೆರೆದುನಿಂದಿಹ
ಬೆಡಗಂ ಬಣ್ಣಿಸಲು ಬಹುದೆ ? ೮೭

ತಾಯಿಯನೆ ಕಂಡಶಿಶು ಹಾಯಾದ ತೋಷದಲಿ
ತೊಯಿದು ತೊನೆವಂತೆ ಎದೆಮಿಡಿದ ತಾಣಸಿಗೆ
ಬಾಯ್ಬಿಡದೆ ಸುಖಂ ಸವಿವರೋ ೮೮

ಪಂಚಲಿಂಗ ಗುಡ್ಡದಂಚಿನಲಿ ಮೆರೆವುದು
ಎಚ್ಚರದ ಭಕ್ತರಿಹ ಬಸವನ ಪುರವೆಂ-
ಬಚ್ಚರಿಯ ಕಿರಿವೊಳಲೊಂದು ೮೯

ಶಂಭುಂವಿಗೆ ಇಂಬಾದ ಶಂಭುವಿಗೆ ಶರಣಾದ
ಶಂಭುಗೌಡನು ಇಹನು ಬಸವನಪುರದಿ ನಿಜ
ದಂಬುಧಿಯಯವೊಲಿವನ ಮನವು ೯೦

ತುಂಬು ಚಂದಿರ ಬರಲು ಅಂಬುಧಿಯು ಉಕ್ಕುವೊಲ್
ಶಂಭು ಭಕುತರ ಕಂಡೊಡೆ ಮನ ಹಿಗ್ಗುವುದು
ಶಂಭುಗೌಡಗಿದನೇನೆಂಬೆ ೯೧

ಉಳಂವುದೆ ಕಾಯಂಕವು ಗಳಿಕೆಬರೆ ಜಂಗಮಕೆ
ನಳನಳಿಪ ಭಾವದಿಳೆಯೊಳಗೆ ಭಕ್ತಸ್ಥಳದಿ
ಕಳೆಗೊಂಡಿಹನಿವ ನೋಡಾ ೯೨

ಜಂಗವುಗೆ ಬೇಡಿದ್ದು ಕಂಗೆಡದೆ ನೀಡುವನು
ಅಂಗವಿಸಿಹ ಲಿಂಗಕ್ಕೆ ಮನವಿಕ್ಕಿ ತನುವ
ಅಂಗಜಾರಿ ಗುರುವಿಗಿಕ್ಕಿಹನು ೯೩

ಗೌಡಂಗೆ ರಾತ್ರಿಯೊಳು ಗಾಢವಹ ನಿದ್ದೆಯೊಳು
ರೂಢಿಗಚ್ಚರಿ ಎನುವೊಂದು ಕನಸಾದುದ
ಕಂಡೆಚ್ಚರ ಗೊಂಡನಿವನಾಗ ೯೪

''ಶಿವಯೋಗ ಸಂಪನ್ನ ಭವರೋಗ ವೈದ್ಯರು
ಭವದಿ ಷಟ್ಸ್ಥಳ ಜ್ಞಾನಿಗಳು ಗುಡಿಯಂಲಿ ನಿಂದು
ಶಿವ ಭಾವದಿ ಸಂದಿಹರು ; ೯೫

ಇವರಿಲ್ಲಿಗೈತಂದು ಭವಹರನ ಭಕ್ತಿಯನೆ
ಜವದಿ ಚೆಲ್ಲುವರು ಮಲ್ಲಯ್ಯನ ಕಾಯಕವ
ಭವದಿ ಬಳಸೆ ಬಂದಿಹರು ೯೬

ಕರೆತಂದು ಮನೆಗವರ ಹಿರಿದಾದ ಸೇವೆಯನು
ನೆರೆನಿಂದು'' ಮಾಡೆನುವ ನುಡಿಕೇಳಿ ಗೌಡನು
ಭರದಿ ಬಂದನು ಗುಡಿ ಎಡೆಗೆ ೯೭

ಕನಸೆಂದು ನನಸಾಗೆ ಗುಣವಾದ ಭಕ್ತಿಯಲಿ
ಮಣಿದರಿವರಂಘ್ರಿಯಲಿ ಉದ್ದಂಡವೀ ಭಕ್ತಿ
ಗುಣದೈಸಿರಿಯ ನೇನೆಂಬೆ ೯೮

ಕರೆತಂದು ಈಶ್ವರನು ಎರಡಿಲ್ಲದಮಲ ಭಕ್ತಿಯಲಿ
ವರ ಸೌರಭದೊಳ್ಪಿನಲುಪಚರಿಸಿ ಸೋದರರ
ಬೆರಗುಗೊಳಿಸಿದನು ಜಗವರಿಯೆ ೯೯

ಬಸವ ಪುರದೊಳು ಮಿಂತು ಅಸಮಭಕ್ತನ ಮನೆಯ
ಅಸಮ ಸತ್ಕಾರ ಸವಿಯೊಳು ಮುಳುಗಿರಲು ಗುರು
ಬೆಸಸಿದನು ಗೌಡನಿಗೆ ಇಂತು ೧೦೦

ಜಗದ ಜಂಜಡ ಬಿಟ್ಟ ಭುಜಗ ಭೂಷಣ ಶಿವನ
ಜಗವರಿಯೆ ನಂಬಿಹ ವಿರಕ್ತಗೆ ಮನೆವಾಸ
ಒಗ್ಗದೊಗ್ಗದು ಎನಲು ಗುರುವು ೧೦೧

ನಿನ್ನಮನೆ ನಿನ್ನಮನ ಚೆನ್ನವಾಗಿವೆ ನಿಜವು
ನಿನ್ನಲ್ಲಿ ನೆಲೆ ನಿಂದು ಸಂದಿತೊಂದು ಮಾಸ
ಇನ್ನು ಸಾಲ್ಗುಮೀ ವಾಸವೆನೆ ೧೦೨

ಗುರುರಾಯ ಕಂಬಳೀಶ ಪೆರತೊಂದು ತಾಣಕ್ಕೆ
ಹೊರಡುವಭಿಮಂತ ತಳೆಯೆ ಅನುವಾಗದಕೆ ಗೌಡ
ಹೊರಗೆ ಕುಟಿ ರಚಿಸುವೆನೆಂದ ೧೦೩

ಪಂಚಲಿಂಗ ಗುಡಿಎಡೆ ಬೆಚ್ಚನೆಯ ಕುಟಿಯೊಂದ
ಮೆಚ್ಚುವ ರೀತಿಯಲಿ ರಚಿಸಿದನುಗೌಡ
ಉಚ್ಚತರ ರೀತಿ ನೀತಿಯಲಿ । ೧೦೪

ಮೂಡಣದಿ ಕೆಂಪಡರಿ ಗಾಢತಮ ಹರಿದೊಡೆ
ಕಾಡು ಮೇಡು ಪುರ ಪತ್ತನದಿ ಜೀವಗೊಳ
ಕೋಡಿ ಕಿತ್ತರಿವುದ ನೋಡ ೧೦೫

ಪಂಚಲಿಂಗನ ಬೆಟ್ಟದುಚ್ಚತಮನಾದದಿಂ
ಎಚ್ಚರಗೊಳ್ಳುವುದು ಖಗಸಂಕುಳವೆಲ್ಲ
ಎಚ್ಚತ್ತು ಹಾಡುತಿರೆ ಬೆಳಗಿನಲಿ ೧೦೬

ಇದಕುಮುನ್ನವೆದ್ದು ಅದುಭುತದ ಸೋದರರು
ನದಿಯುದಕದಲಿ ಮಿಂದೆದ್ದು ಬರುವರು ಕುಟಿಯಲಿ
ಎದಿರೆದುರು ಕೂತು ಪೂಜಿಪರು ೧೦೭

ಏಕಾಗ್ರ ಭಾವದೊಳು ಸಾಕಾರ ಲಿಂಗವನೆ
ಏಕೋಭಾವದೊಳೆ ನಿರುಕಿಸುತದರೊಳೆ ಬೆರೆದು
ಏಕವಾದದ್ಭುತವ ನೋಡ ! ೧೦೮

ಸ್ಥೂಲತನುವಿಹ ನಿಜ ಜಾಲವಳಿದಿರೆ ಭವದಿ
ಥಾಳೈಸುವ ದ್ವಂದ್ವವೆಲ್ಲವು ಅಳಿದು ಘನವ
ಮೇಳೈಸುವ ಘನವನೇನೆಂಬೆ ೧೦೯

ಸ್ಥೂಲದಿಂ ಸೂಕ್ಷ್ಮತನು ಜಾಳದೊಳಂ ಲಿಂಗಹೊಗೆ
ಕಾಲಕಲ್ಪಿತ ಭಾವ ಬಯಲಪ್ಪ ಜಗದಿ
ಲೀಲಾವಿನೋದವಿದಹುದು ೧೧೦

ಸೂಕ್ಷ್ಮದಿಂ ಕಾರಣಕೆ ಸಾಕ್ಷಿ ಎಂಬಂದದಲಿ
ಮೋಕ್ಷಸಾಧನವಪ್ಪ ಲಿಂಗಮುದಿಸಲುಮುದೆ
ಸೂಕ್ಷ್ಮಾತಿಸೂಕ್ಷ್ಮತೆರ ನೋಡ ೧೧೧

ಸೋದರರ ಶಿವಯೋಗ ಸಾಧಿಸಿತು ಆದರದ
ಸಾಧು ಸಜ್ಜನರ ಬರವ ಹೆಚ್ಚಿಸಿತು ಮಿಗೆ
ಭೇದಿಸಿತವರ ಅಜ್ಞತೆಯನು ೧೧೨

ಭವದ ಭಕುತರು ನೆರೆ ಬಂದರು ಜವದೊಳು
ಶಿವನೆ ಇಳೆಗೈತಂದನೆನುತಲಿ ನಂಬಿದರು
ಭವರಹಿತ ಕಂಬಳೀಶ್ವರರ ೧೧೩

ನಿತ್ಯಭಜನೆಯು ಮಿಗೆ ನಿತ್ಯಪೂಜೆಯು ಪೆರ್ಚಿ
ಸುತ್ತಮುತ್ತಣ ಭಕುತಗಣವ ಸೆಳೆಯಿತು
ಚಿತ್ತಜಾರಿಯ ಭಕುತಿ ಬೆಳಗಿತು ೧೧೪

ನಿತ್ಯದಲಿ ಶಿವಭಕ್ತಿ ಬಿತ್ತುತ ಗುರುಗಳು
ಚಿತ್ತದೊಳಹೊರಗ ತೊಳೆವುತ ಭಕುತರ
ಸತ್ತುಚಿತ್ತಾನಂದರಾಗಿಹರು ೧೧೫

ನಡೆದು ಬಪ್ಪರು ಭಕುತರಡಿಗಡಿಗೆ ಭಜಿಪರು
ಒಡೆಯ ಕಂಬಳೀಶ್ವರರ ವಚನವ ಕೇಳಿ
ದೊಡನೆ ತಣಿವರು ದಿನದಿನವು ೧೧೫

ಸತತವು ಪೆರ್ಚಿಬರೆ ಇಂತುಂಭಕ್ತರ ತಂಡ
ಸಂತಸದಿ ಗುರುದ್ವಯರು ಹಿಗ್ಗುವರು ನಿಜ
ಸಂತರ ಭಾವೋನ್ನತಿಯಲಿ ೧೧೬

ವ್ಯಕ್ತಗುಣ ಭಕಂತರ ಅವ್ಯಕ್ತಗುಣಗಡಣ
ಭಕ್ತಿಸಾಣೆಗೆ ಸಿಲುಕಿ ಹಸನ್ಯೆದುತಿರೆ ಶಿವ
ಶಕ್ತಿ ಸಂಪದವು ಹಬ್ಬುಗೆ ೧೧೭

ಗುರುಸಿದ್ಧಲಿಂಗನ ವರುಷದಾರಾಧನೆಯ
ಹರುಷದಿಂದಲಿಗೈದು ವರಗುರುದ್ವಯರು
ಮೆರೆವರೊ ಭಕ್ತಿಮಾರ್ಗವನು ೧೧೮

ಭೂತ ಹಿಡಿದವಗೆ ನಿಜ ಭೀತಿವಡೆದವನಿಂಗೆ
ಕಾತರದ ಕಳವಳವ ಕಳೆವರು ಜವದಿ
ಖ್ಯಾತ ಸೋದರ ಶಿವಯೋಗಿಗಳು ೧೧೯

ಇಂತಿರಲೊಂದು ದಿನ ಸಂತಸವು ಉಕ್ಕುತಿರೆ
ಸಂತೆಸಿರಿ ನಂಜುಂಡಯೋಗಿಯ ದರ್ಶನಕೆ
ಸಂತರೀರ್ವರು ಹೊಂಟರು ಮುದದಿ ೧೨೦

ಗರಳಪುರಿ ಸೇರಿದರು ಹರನ ಅವತಾರಿಗಳು
ಸರಸರನೆ ಬಂದರು ಯೋಗಿವಿಷಕಂಠನ
ಮಠ ಆಲಯಕೆ ಮನಹಿಗ್ಗಿ ೧೨೧

ಅರ್ಚಕರು ಅನಿತರೊಳೆ ಮುಚ್ಚಿದರು ಘನಗುಡಿಯ
ಪೆಚ್ಚು ಮೋರೆಯ ಹೊತ್ತು ಸೋದರರು ಜವದಿ
ಅರ್ಚಕರನಿರದೆ ಕೇಳಿದರು ೧೨೨

ತೆರಿಯಿರ್ಯೆ ಬಾಗಿಲನು ಹರನದರ್ಶನವೆಮಗೆ
ತ್ವರೆಯಿಂದ ಮಾಡಿಸಿರಿ ಮತ್ತೆಬರಲವ್ಮೆವು
ದೂರದ ಊರವರಾವೆನಲು ೧೨೩

ಸಾಧ್ಯವಾಗದು ವೇಳೆ ಹೋದವೋಲಯ್ಯಗಳೆ
ಖೇದಗೊಳ್ಳದೆ ಮತ್ತೆ ಬನ್ನಿರಿ ದರುಶನವು
ಸಾಧ್ಯಮಪ್ಪುದೆನೆ ಗರ್ವದಲಿ ೧೨೪

ಶಂಭುವಿನ ದರುಶನವು ಸಂಭವಿಸದಿರೆ ಅಂದು
ಇಂಬುಗೆಡದಮಿತ ಜ್ಞಾನಿಗಳು ಮನದೆ ನೋಯೆ
ಸಂಭವಿಸಿತೊಂದದ್ಭುತವು ೧೨೫

ತುಸುದೂರ ಬರುವಲ್ಲೆ ಅಸಮಾಕ್ಷನರ್ಚಕರ
ಎಸೆವ ಕಣ್ಣುಗಳು ಕಾಣದಾಗಲು ಅವರು
ಬಸವಳಿದು ಹೌಹಾರಿದರಮಮ ೧೨೬

ತಮ್ಮ ತಪ್ಪನೆ ತಿಳಿದು ಒಮ್ಮನದಿ ಕೂಗಿದರು
ದಮ್ಮಯ್ಯ ಅಯ್ಯಗಳೆ ಬನ್ನಿರೈ ಬನ್ನಿರೆಂ
ದಂಮ್ಮಳಿಸಿದರು ಅರ್ಚಕರು ೧೨೭

ಕೂಗುಕೇಳಿದ ಗುರುಗಳಾಗ ಬಂದರು ತಿರುಗಿ
ಯೋಗಿಗಳ ಮಹಿಮೆಯ ತಿಳಿದರ್ಚಕರು
ಬಾಗಿ ನಮಿಸಿದರು ಭಯದಿಂದ ೧೨೮

ಮನ್ನಿಸಿರಿ ತಪ್ಪುಗಳ ಘನಗುರು ಯೋಗಿಗಳೆ
ಎನ್ನುತ್ತ ಅಡಿಗಳಿಗೆರಗಿರಲು ಕಣ್ಣುಗಳು
ಮುನ್ನಿನಂತಾದುದೇನೆಂಬೆ ೧೨೯

ಬಾಗಿಲನುತೆರೆದರ್ಚಕರಾಗ ಕರದೊಯ್ದರು
ತ್ಯಾಗಿಗಳ ಯೋಗಿಗಳ ಶಿವನ ದರ್ಶನಕೆ
ಸಾಗಿ ನಡೆದರು ಗುರುವರರು ೧೩೦

ನೀಲಕಂಠನ ನೋಡಿನಲಿದರು ಶಿವಯೋಗ
ಮೂಲದಿ ನಿಂದು ನಿರುಕಿಸಿ ಸಂದರು ನಿಜ
ಲೋಲರೈಕ್ಯದ ಭಾವದೊಳು ೧೩೧

ದಾರಿಹೋಕರಿದ ಕಂಡು ಗಾರುಗೊಂಡವರಂತೆ
ಮೀರಿದ ಕೌತುಕದೊಳು ಮಿಗೆ ಸಿಲುಕಿ ದಡವ
ಮೀರಿದ ಮೀನಿನಂತಿಹರು ೧೩೨

ಹಿಂದಿರುಗಿ ಬಂದಿವರು ಸಂದರು ಶಿವಯೋಗ-
ದಂದದೇಕಾಂತ ಪ್ರಭಾಪುಂಜದಲಿ ಶಿವನ
ಅಂದವನೆ ಇಳೆಗೆ ಸಾರುವವೊಲ್ ೧೩೩

ಹಬ್ಬಿತೀ ನಿಜಕತೆಯು ಒಬ್ಬರಿಂದೊಬ್ಬರಿಗೆ
ಉಬ್ಬುಬ್ಬಿ ಮೋಡ ಬಹುವಂದದಲಿ ಭಕ್ತರು
ಉಬ್ಬುಬ್ಬಿ ಬಂದರು ದರ್ಶನಕೆ ೧೩೪

ಶಿವಯೋಗಿ ಸಿರಿಕಂಠ ಭವರೋಗವೈದ್ಯನ
ಶಿವಯೋಗಿಗಳು ಬಿಟ್ಟುಬರುವಾಗವಂಮ ಸಂ-
ಭವಿಸಿತಿನ್ನೊಂದು ಕೌತುಕವು ೧೩೫

ಉಬ್ಬಿರುವ ಕೊಬ್ಬಿರಂವ ಕಬ್ಬಿಲರ ಕಣ್ಣಂಗೆ
ಹಬ್ಬದೂಟವೊ ಎನಂವ ಹೋರಿಯೊಂದೆದುರಾದು-
ದಬ್ಬಬ್ಬ ಬಲು ಮದದ ರಭಸದಿ ೧೩೬

ದಾರಿಗರು ಕಂಡಿದನು ಹಾರಿಹೋದರೆಡಬಲಕೆ
ಮೀರಿದುನ್ಮಾದದಿ ಓಡುತಿಹ ಹೋರಿ ಇದ-
ನಾರು ಕಟ್ಟುವರಾರು ಹಿಡಿವರು ೧೩೭

ಸಕಲ ಜೀವದಿ ನೆಲಸಿ ನಿಖಿಲ ಲೋಕವ ಧರಿಸಿ-
ದಕಲಂಕ ಶಕ್ತಿಯನು ಸಾಧಿಸಿದ ಯೋಗಿ
ಸಕೀಲಗೊಂಡಿಹನೆಲ್ಲೆಲು ೧೩೮

ಓಡಿಬಹ ಹೋರಿಯನು ನಾಡಿಗಚ್ಚರಿ ಎನಲು
ಗಾಢತಮ ರೀತಿಯಲಿ ಸೋದರದ್ವಯರುಂ
ಓಡಿ ನಿಲ್ಲಿಸಿದರು ಹಾದಿಯಲಿ ೧೩೯

ಇಂತಿವರ ಲೀಲೆಗಳು ಸಂತತವು ನಡೆವುತಿರೆ
ಕಂತುಹರನ ಭಕ್ತಿಯಂಬುಧಿ ಪೆರ್ಚೆ ಶಿವ
ಸಂತಸದ ಕಳೆಯನೇನೆಂಬೆ ೧೪೦

ಮಲ್ಲಯ್ಯ ನಿರಂಜನರು ಇಲ್ಲವಾದನಿತರೊಳೆ
ಬಲ್ಲಿದನು ದಳವಾಯಿ ಕಟ್ಟಿಸಿದನೊಂದು
ಕಲ್ಲಿನಲಿ ಗದ್ದುಗೆಯ ಜವದಿ ೧೪೧

ಮಲ್ಲಯ್ಯ ನೆಲೆಸಿರುವ ಕಲ್ಲಿನಿದ ಗದ್ದುಗೆಯು
ಬಲ್ಲವರು ಕರೆವರೊ "ಮಲ್ಲನ ಮೂಲೆ" ಎಂದು
ಚಲ್ವುತಾಣವಿದು ನೋಡ ೧೪೨

ಇದರ ಸನಿಹದಲೆ ಮಠವೊಂದು ಮುದದಿ ಮೆರೆದಿದೆ
ಸದಮಲ ಭಕ್ತಗೌಡ ಕಟ್ಟಿದ ಕಂಬಳೀಶ-
ರಿದರೊಳು ನೆರೆ ನೆಲಸಲಿ ಎಂದು ೧೪೩

ಭಕ್ತತತಿ ದಿನದಿನವು ಉಕ್ಕುತಿರೆ ಜಲಧಿವೊಲಂ
ಮುಕ್ತಿಕ್ಷೇತ್ರವಿದೆನಲು ಮಲ್ಲನಮೂಲೆ
ಶಕ್ತರೀರ್ವರಿಂ ಬೆಳಗುತಿದೆ ೧೪೪

ಅಂಬಲಿಯು ಹುರುಳಿಯು ಇಂಬಿರುವ ಕಾಯಕದಿ
ನಂಬುಗೆಯಿಂ ಭಕುತ ವೃಂದಕೆ ಬಲಿದಮಿತ
ಇಂಬಾಗಿ ಪರಿಣಮಿಸಿತಮಮ ೧೪೫

ಕಪನಿ ಕಂಬಳಿಹೊದ್ದು ಅಪ್ಪಗಳು ಹೊರಹೊಂಟು
ಗುಪಿತದಿ ಭಕುತರ ಬಳಿಸಾರ್ದುವಂವರಿಗೆ
ಒಪ್ಪದಿ ದೀಕ್ಷೆಯ ಗೈದಪರು ೧೪೬

ಷಟ್ಸ್ಥಳದ ಮಾರ್ಗವಸೆ ನಿಷ್ಠೆಯಲಿ ರೂಢಿಸುತ
ಅಷ್ಟಮದಗಳ ಗೆಲಿವ ಶಿವಯೋಗಮಾರ್ಗದೊ-
ಳಿಷ್ಟದ ಶ್ರೇಷ್ಠತೆ ಬಿತ್ತುವರು ! ೧೪೭

ತುಂಬು ಚಂದಿರ ಬರಲು ಅಂಬುಧಿಯು ಉಕ್ಕುವೊಲು
ಕಂಬಳೀಶ ಬರಲಮಳ ಶಿವಬೆಳಗೆಲ್ಲು
ತುಂಬಿ ತುಳುಕಿತವನಿಯಲಿ ೧೪೮

ಬಿದಿರು ಮೆಳೆ ಸುತ್ತೆಲ್ಲ ಪೊದೆಯಾಗಿ ಬೆಳೆದಿರಲು
ಬಿದಿರುಗೂಡೆಂಬಾಖ್ಯೆಯಲಿ ಮೆರೆವುದಿದು
ಸದಭಿಮಾನದ ಭಕ್ತರಿಂ ಬಲು ೧೪೯

ಶಿವಬಸವನೆಂಬೋರ್ವ ಭವಹರನ ಭಕುತನುರೆ
ಶಿವಪೂಜಾನಿಷ್ಠಮೆರೆವನೀ ಊರೊಳಗೆ
ಭವಭಕ್ತಿಸೆಲೆ ಇವನೆ ಎನೆ! ೧೫೦

ಬಿನ್ನಹವ ಮಾಡಿದನು ಘನಯೋಗಿದ್ವಯರಿಂಗೆ
ಸನುಮತಿಯ ಶಿವಬಸವ ಕರೆದು ಹೊಯ್ದನಂ
ತನ್ನ ಮನೆಗಮಲಯೋಗಿಗಳ ೧೫೧

ಲಿಂಗದೊಳು ಮನ ನಿಲಿಸಿ ಅಂಗ ಲಿಂಗವೆ ಆದ
ಜಂಗಮರ ನಿಲುವಿಂಗೆ ಸಮಸಾಟಿ ಇರುವುದೆ
ಕಂಗಳಿಗಿದುವೆ ಹಬ್ಬವಹುದು ೧೫೨

ಲಿಂಗಾಂಗ ಸಮರಸವು ಅಂಗಾಂಗದೊಳಂ ತುಂಬಿ
ಅಂಗಛವಿ ಪ್ರಭಾವಳಿಯ ಸುತ್ತ ನಿರ್ಮಿಸಿತು
ಕಂಗಳು ಬಲು ಕೋರೈಸುವೊಲು ೧೫೩

ಪ್ರಣವದಾನಾದವದು ಭವ್ಯ ತರಂಗ-
ವಣುವಣಾದಿ ಜೀವ ಜಗವೆಲ್ಲ ಸ್ಪಂದಿಸಿ
ತೊನೆದು ತೂಗುವುದನೇನೆಂಬೆ ೧೫೪

ಓಂಕಾರ ನಾದವದು ಸೋಂಕಿತ್ತು ಸುತ್ತೆಲ್ಲ
ಸಾಕಾರ ಜೀವ ಜಗವನೆಲ್ಲ ಭಾವಿಸೆ
ಓಂಕಾರವೆ ಜಗದಡಿಗಲ್ಲು ೧೫೫

ನಾದಕ್ಕೆ ಮನಸೋತು ಸೀದ ಬಂದಿತುವೊಂದು
ಗೋದಿನಾಗರಹಾವು ಅದ ಕಂಡು ಭಕುತರಿ-
ಗಾದುದೊ ಭಯಂಭೀತಿಯಚ್ಚರಿಯು ೧೫೬

ಕಂಬಳೀಶರು ಕಂಡು ದಂಗು ಬಡಿದಿಹ ಭಕ್ತರ
ಡಂಬ ಧೈರ್ಯವ ನೋಡಿ ನಗುತಿಂತೆಂದರು
ಬಂದ ಭುಜಗರಾಜನ ಕುರಿತು : ೧೫೭

'ನಾಗರಾಜನೆ ಹೋಗು ಸಾಲ್ಲಂಮೀ ದರುಶನ
ಯೋಗಿರಾಜ ನಂಜುಂಡನೆಡೆಗೈದೆಂದು
ಯೋಗಿ ಸೋದರರು ಬೆಸಸಿದರು ೧೫೮

ಭಸ್ಮವನು ಮಂತ್ರಿಸುತ ಎಸೆದರೋ ಹಾವಿಂಗೆ
ವಿಸ್ಮಯಂವಿದೆನಲು ಬಂದಹಾದಿ ಹಿಡಿದು ಗ-
ಮಿಸಿತವಂಮ ಕೌತುಕವಿದೆನಲು ೧೫೯

ಕರಿಗೊರಳನಾಲಯದ ಹಿರಿಯನಾಗಮೀಶರನು
ಕರೆದಂ ಕೇಳಿದರೊಂದುದಿನವುವನ ಗೂನಿಗೆ
ನೆರೆ ಕಾರಣವು ಏನೆಂದು ೧೬೦

ಬೆನ್ನಗೂನಿದು ಕೇಳಿ ಸನ್ನುತರೆ ಗುರುಗಳೆ
ಬೆನ್ನಬಿದ್ದಿಹಂದು ಹುಟ್ಟಿನಿಂದಲಿ ಇದ
ಕಿನ್ನು ಔಷಧಿಯುಂಟೆ ಎನಲು ೧೬೧

ನಂಬಿ ಕರೆ ಸಾಂಬನನು ಬೆಂಬಿಡದೆ ಸಲಹುವನು
ಹಂಬಲಿಸಿ ಸಿರಿಕಂಠನನು ನೆನೆವುತ ನೀ
ನಂಬಿ ಮೀಯೆಂದು ಹೊಳೆಯಲಿ ೧೬೨

ಎನಲು ಭಕ್ತನು ಬಲು ವಿನಯದಿಂದಲಿ ನಮಿಸಿ
ನೆನೆದು ಶಿವನನೆ ಮನದಿ ಮಿಂದು ಎದ್ದನು
ಬೆನ್ನಗೂನದಂ ಮಾಯವಾಗಿರಲು ! ೧೬೩

ಕಂಡು ಅಚ್ಚರಿ ಇದನಂ ಗಂಡುಗಚ್ಚಿಯದ್ವಿಜ
ದಿಂಡು ಬಿದ್ದಾನು ಶಿವಯೋಗಿದ್ವಯರಡಿಗೆ
ಹಿಂಡುತ್ತ ಕಣ್ಪನಿಯ ನಿಲದೆ ೧೬೪

ಹರಡಿದ ಚೋದ್ಯವಿಂದ ಗರಳಪುರಿ ಸುತ್ತೆಲ್ಲ
ಹರಿದು ಬಂದವಿಂತ ಭಕ್ತರಿದ ಕೇಳಿ ಭರದಿ
ಎರಗಿದರು ಸೋದರದ್ವಯರಡಿಗೆ ೧೬೫

ನುಡಿಪರುಷವನಿತು ಶಕ್ತಿ ಗಡಣವೆ ಅಡಿಯಾಳು
ರೂಢಿಯೊಳು ಶಿವಯೋಗ ಸಿದ್ಧಗೆ ವೇಣ್
ಒಡನೆ ಬಹವು ಅಷ್ಟಸಿದ್ಧಿಗಳು ೧೬೬

ಪೆರತೊಂದು ದಿನದೊಳು ಎರಗಿದರು ಕಳ್ಳರೀ-
ರ್ವರು ಘನಮಠಕೆ ಕನ್ನವಿಕ್ಕಲು ಹಿಡಿದಂ
ಮಿರುಗುವ ಕನ್ನಗತ್ತರಿಯ ೧೬೭

ಕನ್ನಗತ್ತರಿ ಹಿಡಿದ ಗುನ್ನಗೈಗಳು ಸೆಟೆದು
ಬನ್ನಬಿಟ್ಟರು ಕಳ್ಳರವರಂದು ಬೆಳಕು ಹರಿ-
ವನಕವಿದು ಅದ್ಭುತವೆನಲು ೧೬೮

ಬೆಳಕರಿದು ಗುರು ಬಂದು ಕಳಕಳಿಯ ಮಾತಿಂದ
ಅಳಿಮನದ ಕಳ್ಳರಿಗೆ ಬೆಸಸಿದನುತ್ತಮ
ಗಳಿಕೆಯ ಕಾಯಕದ ಮಹಿಮೆಯ ೧೬೯

ಕಳ್ಳರೀರ್ವರು ನಿಜದೆ ಒಳ್ಳೆನಡೆನುಡಿಗಲಿತು
ಒಳ್ಳೆ ಭಕ್ತರುಮಾಗಿ ಬದುಕಿದರು ಮಠದೊಳು
ಕಳೆದು ಮನದ ಮಾಯಾಕಾಳಿಕೆ ! ೧೭೦

ಗುರುಸಿದ್ಧಲಿಂಗನುರೆ ಪರತರದ ಪರ್ವವನೆ
ಹಿರಿದಾಗಿ ಮಾಡುವರು ವರ್ಷದೊಳಗೊಮ್ಮೆ
ಗುರು ಕಂಬಳೀಶ್ವರರಂ ತಿಳಿಯೆ ೧೭೧

ಇಂತೋರ್ವ ಪರ್ವದ್ಧೊ ಬಂತು ಬಂತೆನೆ ಹನಿಯು
ಕುಂತ ಭಕ್ತಗಣ ಪಂಕ್ತಿಯನು ಬಿಟ್ಟೋಡೆ
ಸಂತ ಕಂಬಳಿ ಅಪ್ಪಗಳಾಗ ೧೭೨

ಕುಂತನೆಲ ಬಿಡಬೇಡಿ ಕಂತುಹರ ನಿಜವಾಗಿ
ನಿಂತು ಸಲಹುವನೆಂದು ಬೆತ್ತವ ಹಿಡಿದರು
ಅಂತರಿಕ್ಷಕೆ ಛತ್ರಿಎನೆ ೧೭೩

ಬಂದ ಹನಿ ಬೀಳದಿರೆ ಸಂದ ಭಕುತರ ಊಟ
ಚಂದದೊಳೆ ಸಾಗಿತಹ ಲೋಕದೊಳು ಯೋಗ-
ದಂದವನರಿತವರಾರುಂಟು ! ೧೭೪

ಹರಕೆ ಬೆಣ್ಣೆಯ ತರೆ ಮರೆತವರ ಹಸುಗಳು
ಕರೆವುನೆ ನಿಲ್ಲಿಸಿದ ಗುರುದ್ವಯರ ನೆರೆ
ಹಿರಿದು ಪವಾಡವನೇನೆಂಬೆ ೧೭೫

ಬಿಸಿ ಕಜ್ಜಾಯ ತುಪ್ಪದ ಸಮ ಕಾಯಕೆ ವ್ರತದಿ
ಎಸಗಿದಪರಾಧಕ್ಕೆ ಕಜ್ಜಾಯದೆ ಹಾವು
ಬುಸುಗುಟ್ಟಿಸಿದ ಗುರುವನೇನೆಂಬೆ ೧೭೬

ಗರಳಪುರಿಯಿಂ ಮಹಿಷನಗರಕೆ ಹರದನೋರ್ವ
ಬರುವಾಗ ಮರೆದ ಉದ್ಧಟತನಕೆ ಚಿನ್ನವ
ಪರಿವರ್ತಿಸಿದ ಬದನೆ ತೊಟ್ಟಾಗಿ ೧೭೭

ಗರಳಪುರದಧೀಶನು ಮೆರೆವನೊಮ್ಮೆ ವರ್ಷದಿ
ಏರಿ ತೇರನು ಜನರು ಹರಹರ ಎನುತ
ದರದರನೆ ಎಳೆವರರ್ಶಿಯಲಿ ೧೭೮

ತೇರೊಮ್ಮೆ ಜಾತ್ರೆಯಲಿ ಬಾರದಲೆ ನಿಂದಿರಲು
ಮಹಾರಹರ ಕಂಬಳೀಶ ಹೋಗಿ ಕರೆದೊಡೆ
ಜಾರಿತೊ ದಡದಡನೆ ಹರಿದು ೧೭೯

ಕತೆಯಿದು ಹಬ್ಬಿತ್ತು ಪಟ್ಟಣದಿ ಪುರಪುರದಿ
ಚಿತ್ರಜಾರಿಯ ಭಕುತಿ ಸುತ್ತೆಲ್ಲ ಬೆಳಗಿತು
ನಿತ್ಯಕ್ಷೇತ್ರವು ಮಠವು ಇದಕೆ ! ೧೮೦

ವರುಷದ ಪರ್ವದಲಿ ಕೊರೆಯಾಗೆ ಘೃತವಂದು
ಹರುಷದಿಂ ಕಪಿಲೆಯಿಂ ಕೊಡನೀರ ತರಿಸಿ
ಪರುಷ ಹಸ್ತದಿ ಮುಟ್ಟಿಯದು ೧೮೧

ಕರೆದ ತುಪ್ಪವೆ ಆಯ್ತು ಹರುಷದಲಿ ಬಡಿಸಿದರು
ಉಳಿದ ಭಕ್ತಗಣಕೆಲ್ಲವಿಂದು ನೆರೆ ಭಾವಿಸೆ
ಗುರುವಿನಘೋರಶಕ್ತಿಯಿಹುದು ೧೮೨

ಇಂತಮಿತ ಪವಾಡಗಳ ಸಂತ ಶಿವಯೋಗಿಗಳು
ಸಂತಸದಿ ಎಸಗಿದರು ಇಳೆಯೊಳು ಭಕ್ತರ
ಸಂತತಿಯ ಬಗೆಯೆ ಬಲು ಬೆಳಸೆ ೧೮೩

ಬೆಳೆದು ಹಿಗ್ಗಲಮುರ ಮಠ ಕಳೆಗೊಂಡು ಗುರುವರರು
ಬೆಳಗುತಿದ್ದರು ಭಕ್ತಗಣ ಸುತ್ತುವರಿದಿರೆ
ಇಳೆಯೊಳವತರಿಸಿದ ಶಿವನೆನೆ ೧೮೪

ಷಟ್ಸ್ಥಳದ ಹಿರಿಮೆಯು ಷಟ್ಸ್ಥಳದ ಗರಿಮೆಯು
ನಿಷ್ಠಭಕ್ತರ ಎದೆಯೊಳು ಮಿಂಗೆ ಬಿತ್ತಿಬೆಳೆದ-
ರಷ್ಟಾವರಣವ ನೆರೆ ಬೆಳಗುತ ೧೮೫

ನೋಡಿದಲಿ ಭಕಂತರು ನೋಡಿದಲಿ ನಿಷ್ಠರು
ನಾಡಿನೊಳೆಲ್ಲೆಲ್ಲು ಶಿವಭಕುತಿ ಪಲ್ಲವಿಸಿ
ಗಾಡಿಗೊಂಡಿತು ಶ್ರೀಶ್ರೀಮಠವಿದಂ ೧೮೬

ಬಂದ ಮಣಿಹವು ಜಗಕೆ ಸಂದಿತೆಂಬ ಭಾವವು
ಬಂದು ಎರಗಿರೆ ಶಿವಯೋಗಿದ್ವಯರೆದೆಯ
ಅಂದೆ ತಿಳಿದರು ಕೊನೆಯಿದೆಂದು ೧೮೭

ಒಡನಿದರ ಮರಿ ಕರೆದು "ಒಡೆಯನಪ್ಪಣೆವಿಡಿದು
ಒಡನೆ ಬಿಸುಡುವೆವು ಒಡಲಿದನು ಅರಿತು
ಕಡು ಎಚ್ಚರದಿರೆಂದು' ಬೆಸಸಿ ೧೮೮

ಮರಿಕಂಬಳೀಶನಿಗೆ ಎರೆದರೀರ್ವರು ತಮ್ಮ-
ಮರಯೋಗಶಕ್ತಿಯನಿತನು ಹರಸಿದರು
ಮೆರೆದಿಹದಿ ಭಕ್ತಿಯ ಬೆಳೆಸೆಂದು ೧೮೯

ಹೂಡಿದರು ಪದ್ಮಾಸನ ಕೂಡಿದರು ಇಷ್ಟವನು
ಗಾಢತರ ಧ್ಯಾನದಿಂ ಏರಿದರಂ ಭಾವವ
ನೋಡೆ ಜ್ವಲಿಸಿತು ದೇಹವನಿತು ! ೧೯೦

ಪ್ರಾಣದಲಿ ಲಿಂಗನಿಲೆ ಏಣಿಯದು ಐಕ್ಯಕ್ಕೆ
ಧ್ಯಾನಿಸಲು ಸರ್ವಾಂಗ ಲಿಂಗವಾಗಿಹ ಯೋಗಿ
ಶೂನ್ಯಗೊಂಬನಂ ನಿಶ್ಶೂನ್ಯನರಿ ೧೯೧

ಕಂಬಳೀಶ್ವರರು ಶಂಭುಲಿಂಗದೊಳೆ
ಇಂಬುಗೊಂಡರು ಶೂನ್ಯದೊಳೆ ನಿಶ್ಶೂನ್ಯ-
ದಂಬುಧಿಯ ಹೊಕ್ಕರು ನೋಡ ! ೧೯೨

ಮಂಗಳವು ಗುರುವಿಂಗೆ ಮಂಗಳವು ಕಂಬಳೀಶಗೆ
ಮಂಗಳವಾದಿಕಂಬಳಿಯಪ್ಪಗೆ ಮಂಗಳ
ಮಂಗಳವು ಸಿದ್ಧಲಿಂಗಗೆ ! ೧೯೩

———

ಶ್ರೀ ಶ್ರೀ ಸಿದ್ಧಲಿಂಗ ಯತಿಗಳು

ಶ್ರೀ ಹೆಜ್ಜಿಗೆ ಲಿಂಗಣ್ಣ

ಕಂಡೆ ನಾ ಕರುಣಾಳುಂ ಗುರುವರನ
ದುಂಡು ಮುಖದವನ ಅಖಂಡ ಮಹಿಮನ ॥೧॥

ಮೂರು ಆರನು ಭವದಿ ಗೆಲಿದನ
ಆರು ಸ್ಥಳಗಳ ಮೀರಿ ನಿಂದನ ॥೨॥ ಕಂಡೆ

ಮೃದು ವಚನಗಳ ಎದೆಯಿಂ ಮಿಡಿವನ
ಸದಮಲಭಾವದಿ ಭಕುತರ ಕರೆವನ ॥೩॥ ಕಂಡೆ

ಗುರು ಕಂಬಳೀಶನಪರರೂಪನ
ಗುರು ಸಿದ್ಧಲಿಂಗ ಯತಿವರೇಣ್ಯನ ॥೪॥ ಕಂಡೆ

ಲಿಂಗ ಅಂಗ ಸಮರಸ ಭಾವನ
ಜಂಗಮಪುಂಗನ ಸಿದ್ಧಲಿಂಗನ ॥೫॥ ಕಂಡೆ

ಜಗದ ಜಂಜಡ ಗೆಲಿದು ನಿಂದನ
ಅಗಣಿತ ಗುಣಗಣ ಮಹಿಮಾನ್ವಿತನ ॥೬॥ ಕಂಡೆ

ಶರಣರ ಪಥವ ಮೆರೆದ ಮಹಿಮನ
ಶರಣ ಸಂಕುಳಮೆಲ್ಲ ಗೆಲಿದನ ॥೭॥ ಕಂಡೆ

ಭವದಿ ಬಲ್ಲಿದ ಗುರುವೆ ತಾನೆನೆ
ಕವಿದ ತಿಮಿರವ ಹರಿಸಿದ ತಾತನ ॥೮॥ ಕಂಡೆ

ಮಲ್ಲನಮೂಲೆಯೊಳು ನೆಲೆಸಿ ಮೆರೆವನ
ಎಲ್ಲ ಭವಗಳ ಮೆಟ್ಟಿ ಮೆರೆವನ ॥೧೦॥ ಕಂಡೆ

ಶ್ರೀ ಶ್ರೀ ಅಡವೀಶ ಯತಿಗಳು

ಶ್ರೀ ಹೆಜ್ಜಿಗೆ ಲಿಂಗಣ್ಣ

ಓ ತಂದೆ ಓ ಬಂಧು ಓ ದಯಾಕರ ಸಿಂಧು
ಆತುರದಿ ಬಂದೆವೂ ನುಡಿಕೇಳಿ ನಾವಿಂದು !
ಏತಕೀ ಮೌನವೀ ಬಿಗುಮಾನ ನಿನಗೆಯಿಂದು
ಮಾತನೊಂದೆರಡು ಸೊಲ್ಲು ನೀನೆಮ್ಮಾತ್ಮಬಂಧು ! ೧

ಲಿಂಗದೊಳಂ ನೀ ದೊರೆಯೆ ಬೆರೆದಿರುವೆ ಏನಯ್ಯ ?
ಅಂಗದೊಳು ಛವಿ ತುಂಬಿ ಬೆಳಗುತಿದೆ ನೋಡಯ್ಯ !
ಲಿಂಗವಾಗಿಹ ನಿನ್ನ ಯೋಗಫಲವಿದೆ ಜೀಯ !
ಲಿಂಗಾಂಗದೊಳಂ ಮೆರೆದ ವಿರಕ್ತಿ ಫಲವಿದಯ್ಯ ! ೨

ಸುತ್ತೆಲ್ಲ ಮೆರೆದಿಹರು ನಿನ್ನಮಲ ಭಕ್ತರು ಬಲು
ಕತ್ತುಗಳು ಬಾಗಿಹವು ಭತ್ತದ ಗೊನೆಗಳೊಲು !
ಬತ್ತಿದಾ ಕೆರೆಯವೊಲು ಅವರ ಮನವೆಲ್ಲ ಬಯಲು !
ನಿತ್ಯ ತಾ ಲಿಂಗದೊಳು ನೀನಚಲವಾಗಿರಲು ! ೩

ಓಂಕಾರಮಯವಾಗಿ ಮೆರೆಯುತಿದೆ ಈ ಬಯಲು
ಪಕ್ಕದಲೆ ಈ ಕಪಿಲೆ ಹರಿವುತಿದೆ ನಿಜ ಹೊನಲು
ಪಕ್ವಾದ ನಿನ್ನಮಲ ಜೀವನದ ಕೃತಿಹೊನಲು
ಉಕ್ಕುಕ್ಕಿ ಹರಿಯುತಿದೆ ಈ ನದಿಗು ಬಲು ಮಿಗಿಲು ! ೪

ಭಕ್ತಗಣ ಮನೆಮನೆಗೆ ನಡೆಯುತಲೆ ನೀ ಚರಿಸಿ
ಮುಕ್ತಿಮಾರ್ಗದ ಹದನ ನೀನವರಿಗುಣಬಡಿಸಿ
ಭಕ್ತಗಣ ಕುಲವನೇ ಭವಹರನೆಡೆ ತಿರುಗಿಸಿ
ವ್ಯಕ್ತ ವಿರಕ್ತಿಯಾ ಜೀವನದಿ ನೀನೆನಿಸಿ ೫

ಈ ಭವ್ಯದಾರಾಮ ಬಯಲಿನೊಳೆ ಬಯಲಾಗಿ
ಶಂಭುವಿನ ಪದಕಮಲದೊಳಗೊಂದು ಹೂವಾಗಿ
ಇಂಬುಗೊಂಡಿಹೆ ನೀನು ಕಂಬಳೀಶನಾಲಯದೆ !
ಮುಂಬರುವ ವಿರಕ್ತಗಣಕೆಲ್ಲ ಮುಂಬೆಳಗಾದೆ ೬

ನುಡಿಯೊಮ್ಮೆ ಇನಿವಾಯ್ ಬಿಡು ಒಮ್ಮೆ ಓ ದೊರೆಯೆ
ಕಡುವಮೌನ ಸಹಿಸದೀ ಭಕ್ತಗಣ ಓ ಮುನಿಯೆ !
ಮೃಡನಾಳ್ಗಳ ಮನಮೀನ್ಗಳ ಒಲವಿಂ ನೀ ಹಿಡಿಯೆ
ಮಿಡುಕುತಿವೆ ನಿನ್ನ ಕರುಣಾಮೃತ ಸಲಿಲವಳಿಯೆ ! ೭

ಸುತ್ತೆಲ್ಲ ಮರಮುಂಡಿ ಚಿತ್ತಲೆಯ ಭಾವದಲಿ
ಕೆತ್ತಿರುವ ಚಿತ್ರದೊಲು ನಿತ್ಯನಿಜ ವೇಷದಲಿ
ನಿತ್ಯಾತ್ಮದ ಇರುವಿನ ಸತ್ಯತೆಯ ಸಾಕ್ಷಿಯಲಿ
ಸತ್ಯಶಿವನಡವೀಶನ ಭೃತ್ಯರೊಲು ಸೇವಿಸಲಿ ! ೮

ಅಡವೀಶ ಅಡವೀಶ ಭಕ್ತಗಣಭವನಾಶ
ಅಡವೀಶ ಅಡವೀಶ ವಿರಕ್ತರ ಚಿತ್ಯಕಾಶ !
ಅಡವೀಶ ಅಡವೀಶ ನಂಬಿದರೆ ಕಂಬಳೀಶ
ಅಡವೀಶ ಅಡವೀಶ ವಿರಕ್ತಮಹಂತೇಶ ! ೯

ಇವರು ಪರಮನಿರಂಜನಮೂರ್ತಿ ಶ್ರೀ ಶ್ರೀ ಅಡವಿಸ್ವಾಮಿಗಳು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಅಡವೀಮಠದ ಮಹಾವಿರಕ್ತರು, ನಿತ್ಯಮುಕ್ತರು. ಇವರು ಸರಳರು, ಸತ್ಯರು, ನಿತ್ಯವೂ ತ್ರಿಕಾಲ ಇಷ್ಟಲಿಂಗಪೂಜಾನಿರತರು. ಇವರು ಭಕ್ತರ ಮನೆಯಲ್ಲಿ ಒಪ್ಪತ್ತು ಮಾತ್ರ ಪೂಜೆ ಪ್ರಸಾದಕ್ಕೆ ನಿಲ್ಲುತ್ತಿದ್ದರು. ನಿರಂತರ ಕಾಲು ನಡಿಗೆಯೆ ಇವರ ಸಂಚಾರ ಕ್ರಮ. ಗಾಡಿ, ಬಂಡಿ, ಬಸ್ಸುಗಳು ಇವರಿಂದ ದೂರ ಬಲುದೂರ ! ಪಯಣಿಸುವಾಗ ನಿರಂತರ ಧ್ಯಾನಯೋಗ ನಿರತರು ! ಯಾವಾಗಲೂ ಭಕ್ತರ ಇಷ್ಟಲಿಂಗಾರ್ಚನೆ, ಶಿವಭಕ್ತಿಮಾರ್ಗಾನುಸರಣೆಯಲ್ಲಿ ಕಾಣುವ ಅಂಕುಡೊಂಕನ್ನು ತಿದ್ದುವ ಅವಿಶ್ರಾಂತ ಕಾರ್ಯ ಇವರನ್ನು ಕಡೆತನಕ ಬಿಟ್ಟಿರಲಿಲ್ಲ.

ಮೈಸೂರಿನಲ್ಲಿ ರಾಮಾನುಜರಸ್ತೆ ಪಕ್ಕದಲ್ಲಿರುವ ತಮ್ಮ ದೀಕ್ಷಾಗುರುಗಳಾದ ಮಡಿವಾಳಸ್ವಾಮಿಗಳ ಸಮಾಧಿಗೆ ಒಂದು ಗದ್ದುಗೆಯನ್ನು ಕಟ್ಟಿಸಿ ಅದರ ಮುಂದಿನ ಎಲ್ಲ ಆಗುಹೋಗುಗಳನ್ನು ಮಲ್ಲನಮೂಲೆ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಗೆ ವಹಿಸಿದ ವಿರಕ್ತ ಮಹಾಮಹಿಮರು.

ಇಂಥ ಮಹಾವಿರಕ್ತಿ ಸಂಪನ್ನರು ತಾ 28-11-1958 ನೇ ಶುಕ್ರವಾರ ಬೆಳಗಿನ 9 ಗಂಟೆಗೆ ಮಲ್ಲನಮೂಲೆ ಮಠದಲ್ಲಿ ಲಿಂಗೈಕ್ಯವಾದರು. ಇವರ ಗದ್ದುಗೆ ಶ್ರೀ ಮಠದ ಹೂದೋಟದಲ್ಲಿ ಈಗಲೂ ವಿರಾಜಮಾನವಾಗಿ ಬೆಳಗುತ್ತಿದೆ.

ಕಾಯಕದ ಮಲ್ಲಯ್ಯನವರು–ಜೀವನ ಸಾಧನೆ ಸಿದ್ಧಿ

ಡಾ|| ಬಿ. ನಂ. ಚಂದ್ರಯ್ಯ

ಭೂಲೋಕ ಕರ್ತಾರನ ಕಮ್ಮಟ ಶಾಲೆ. ಇಲ್ಲಿ ಹುಟ್ಟಿ ಬಂದ ಪ್ರತಿಯೊಂದು ಜೀವಿಯೂ ದುಡಿದು ತಿನ್ನಬೇಕು. ದುಡಿಯದೆ ಹೊಟ್ಟೆ ತುಂಬಿಸಿಕೊಳ್ಳುವವರ. ಆದರ್ಶ ಜೀವನ ನಡೆಸುವುದು ಸಾಧ್ಯವೇ ಇಲ್ಲ. ಇಲ್ಲಿ ಕರ್ಮಕ್ಕೇ ಬೆಲೆ, ಗೌರವ ಇದು ಮನುಷ್ಯನ ಮಟ್ಟಿಗಂತೂ ಸತ್ಯಸ್ಯ ಸತ್ಯ. ದುಡಿಯುವುದು, ದುಡಿದು ತಿನ್ನುವುದು ಮನುಷ್ಯನ ಕರ್ತವ್ಯವೂ ಹೌದು, ಹಕ್ಕೂ ಹೌದು. 'ಉದ್ಯೋಗಂ ಪುರುಷಲಕ್ಷಣಂ' ಎಂದು ಹೇಳುತ್ತಾರೆ. ಉದ್ಯೋಗ ಮನುಷ್ಯನ ಲಕ್ಷಣ. ಏನಾದರೊಂದು ಕೆಲಸವನ್ನು ಮಾಡಲೇಬೇಕು. ಕನಿಷ್ಠ ಪಕ್ಷ ಮನುಷ್ಯನ ದೇಹ–ಮನಸ್ಸುಗಳ ಆರೋಗ್ಯದೃಷ್ಟಿ ಯಿಂದಲಾದರೂ ಕೆಲಸ ಮಾಡಲೇಬೇಕು. ಕೆಲಸ ಮಾಡದವನು ಅಲಸಿಯಾಗು ತ್ತಾನೆ, ಸೋಮಾರಿಯೆನಿಸಿಕೊಳ್ಳುತ್ತಾನೆ. ಹಾಗೆಯೇ ಮುಂದುವರಿದರೆ ಜಂಗು ಹಿಡಿ ದಂತಾಗಿ ನಿಷ್ಪ್ರಯೋಜಕನೆನಿಸುತ್ತಾನೆ.

ಬದುಕಿನಲ್ಲಿ ಹಲವು ರೀತಿಯ ಉದ್ಯೋಗಗಳಿವೆ. ಕಾಲ-ಪರಿಸರಗಳನ್ನನುಸರಿಸಿ ವ್ಯಕ್ತಿ ತನ್ನ ಸ್ವಭಾವ–ಪ್ರವೃತ್ತಿಗನುಗುಣವಾದ ಉದ್ಯೋಗವನ್ನು ಕೈಕೊಂಡು ತನ್ನ ಪಾಲಿನ ಕೆಲಸವನ್ನು ಮಾಡುತ್ತಾನೆ. ವ್ಯಕ್ತಿ ಪ್ರಾಮಾಣಿಕನಾಗಿ ಪಾಪಭೀರುವಾಗಿದ್ದರೆ ನೇರ ಮಾರ್ಗದಲ್ಲಿ ಕಾರ್ಯ ನಿರ್ವಹಿಸಿ ಹಣ ಸಂಪಾದಿಸಬಹುದು. ಅಪ್ರಾಮಾಣಿಕ ನಾಗಿದ್ದು ಪಾಪಭೀತಿಲೇಶವೂ ಇಲ್ಲದ ವ್ಯಕ್ತಿ ಬಳಸು ದಾರಿಯನ್ನು ಹಿಡಿದು ಅನ್ಯಾಯಮಾರ್ಗದಲ್ಲಿ ಹಣ ಸಂಪಾದಿಸಬಹುದು. ನೀತಿ–ಧರ್ಮಗಳನ್ನು ಗಾಳಿಗೆ ತೂರಿ ಮೋಸ, ವಂಚನೆಗಳ ಮೂಲಕ ಹಣ ಸಂಪಾದಿಸಬಹುದು. ಕೊನೆಗೆ ಕೊಲೆ, ಅತ್ಯಾಚಾರ, ಕಳವು ಮುಂತಾದ ಅಪಮಾರ್ಗದಲ್ಲಿ ಚಲಿಸಿ ಪಾಪದ ಹಣ ಸಂಪಾದಿಸ ಬಹುದು. ಅಂತೂ **ಯೇನಕೇನ ಪ್ರಕಾರೇಣ** ತನ್ನ ಪಾಲಿನ ಕೆಲಸವನ್ನು ಮಾಡಿ ಹಣವನ್ನು ದುಡಿದು ತನ್ನ, ತನ್ನವರ ಹೊಟ್ಟೆ ತುಂಬಿಸಬಹುದು. ಹೀಗೆ **'ಉದ್ಯೋಗಂ ಪುರುಷಲಕ್ಷಣಂ'** ಎಂದು ಏನಾದರೊಂದು ಕೆಲಸವನ್ನು ಮಾಡಿ ಬದುಕನ್ನು ನೂಕುವುದನ್ನು ಸಮಾಜದಲ್ಲಿ ಕಾಣುತ್ತೇವೆ. ಜೊತೆಗೆ ಸಮಾಜಸೇವೆಯ ಹೆಸರಿನಲ್ಲಿ ಜನಕಲ್ಯಾಣದ ಹೆಸರಿನಲ್ಲಿ, ರಾಜ್ಯಾಡಳಿತದ ಸಾರ್ವಜನಿಕ ಸೇವೆಯ ಹೆಸರಿನಲ್ಲಿ ಅತ್ಯಾ ಚಾರ, ದರೋಡೆ, ಭ್ರಷ್ಟಾಚಾರ ಮುಂತಾದುವುಗಳ ಮೂಲಕ ತನ್ನ ಸೇವೆಯನ್ನು ಸಲ್ಲಿಸುತ್ತ ಹಣ ಸಂಪಾದಿಸಿ ಬಾಳನ್ನು ಸಾಗಿಸಬಹುದು. ಒಂದಲ್ಲ, ಹತ್ತಲ್ಲ, ನೂರಲ್ಲ,

ಸಹಸ್ರಾರು ರೀತಿಯಲ್ಲಿ ದ್ವಿಬಾಹುವಲ್ಲ ಸಹಸ್ರಬಾಹುಬಲವುಳ್ಳವನಾಗಿ ಲೋಕದ ಬದುಕನ್ನು ನಡೆಸಬಹುದು. ಇದು ಲೋಕರೂಢಿ. ಆದರಿಂದಲೇ ಅಲ್ಲವೇ **ಉದರ ನಿಮಿತ್ತಂ ಬಹುಕೃತವೇಷಃ** ಎಂಬ ನಾಣ್ಣುಡಿ ಸಾರ್ಥಕವಾಗಿರುವುದು !

ಆದರೆ ಈ ರೀತಿಯ ಕೆಲಸ ಮಾಡಿ ದುಡಿದು ಉಣ್ಣುವುದಂ ಸಾಧುವಲ್ಲ. ದುಡಿದದ್ದು ಸದ್ವಿನಿಯೋಗವಾಗಬೇಕು. ಸತ್ಪಾತ್ರದಲ್ಲಿ ವಿನಿಯೋಗವಾಗಬೇಕು. ನೇರ ದಾರಿಯಲ್ಲಿ ಸರಿ ದಾರಿಯಲ್ಲಿ ದುಡಿದಾಗ ಸತ್ಪಾತ್ರದಲ್ಲಿ ಸದ್ವಿನಿಯೋಗವಾಗುತ್ತದೆ. ತಾನು ದುಡಿದದ್ದು ತನಗೆ, ತನಗೆಮಾತ್ರ ಎಂದಾಗ ಅದು ಸ್ವಾರ್ಥ, ಎನಿಸುತ್ತದೆ. ಆ ಪಟ್ಟದಿಂದ ದೂರಾಗಿ ಸರ್ವರಲ್ಲಿ ಹಂಚಿಕೆಯಾಗಬೇಕು ಎಂದಾಗ ಆ ದಂಡಿವೆಂಗೆ ಅರ್ಥ, ಬೆಲೆ ಬರುತ್ತದೆ, ಉದಾತ್ತವೆನಿಸುತ್ತದೆ; ಉನ್ನತವಾಗುತ್ತದೆ. ಜನರೆಲ್ಲ ಹತ್ತಿರವಾಗುತ್ತಾರೆ. **'ಸರ್ವೇ ಜನಾಃ ಸುಖಿನೋ ಭವಂತು' 'ವಸುಧೈವ ಕುಟುಂಬಕಂ'** ಮುಂತಾದ ಮಾತುಗಳಿಗೆ ಅರ್ಥ ಬರುತ್ತದೆ.

ಈ ರೀತಿಯ ನಿಸ್ವಾರ್ಥ ದುಡಿಮೆಯನ್ನೇ ವೀರಶೈವರು 'ಕಾಯಕ' ಎಂಬ ಮಾತಿನಲ್ಲಿ ಅಭಿಷಿಕ್ತಗೊಳಿಸಿದ್ದಾರೆ. ಸನ್ಮಾರ್ಗದಲ್ಲಿ ನಡೆದು, ಧರ್ಮಾಚರಣೆಯಲ್ಲಿ ತೊಡಗಿ, ಇಂದಿಂಗೆಂತು ನಾಳಿಂಗೆಂತು ಎಂದು ಕುದಿಯದೆ ಇಂದಿನದು ಮುಖ್ಯ, ಇಂದಿಂಗೆ ಇಷ್ಟು ಸಾಕು ಎಂಬ ಸಂಗ್ರಹ ಬುದ್ಧಿದೂರನಾಗಿ ದುಡಿದು ಸಂಪಾದಿಸಿದ್ದನ್ನು ಕಾಯೇನ ವಾಚಾ ಮನಸಾ ಗುರು ಲಿಂಗ ಜಂಗಮಕ್ಕೆ ಸಮರ್ಪಿಸಿ ಶೇಷಾನ್ನದಿಂದ, ಶೇಷ ಪ್ರಸಾದದಿಂದ ಸಂತುಷ್ಟಿಯನ್ನು ಪಡೆದಾಗಲೇ ಕಾಯಕಕ್ಕೆ ಮನ್ನಣೆ, ಗೌರವ; ಆಗಲೇ ಅದಕ್ಕೊಂದು ಅರ್ಥ, ಬೆಲೆ. ಇಂಥ ಪವಿತ್ರ ಮಣಿಹವನ್ನು ಮಾಡಿ ತೋರಿದವರಂ ವೀರಶೈವ ಶರಣರು. ಇಂಥ ಕಾರ್ಯದಿಂದಾಗಿ ಅವರ ಬದುಕು ಸಾರ್ಥಕ, ಅರ್ಥ ಪೂರ್ಣ. ಬಸವಣ್ಣನವರಾದಿಯಾಗಿ ಅವರ ಸಂಪರ್ಕದಲ್ಲಿ ಬಂದ ಶರಣರೆಲ್ಲರೂ ಈ ಕಾಯಕದಿಂದಲೇ ನವಸಮಾಜ ನಿರ್ಮಾಣ ಮಾಡಿದರು, ಅದರಿಂದಲೇ ಬದುಕಿಗೆ ಬೆಲೆಯನ್ನು ಗೌರವವನ್ನು ತಂದುಕೊಟ್ಟರು, ಅದರಲ್ಲಿಯೇ ಮುಕ್ತಿಯನ್ನು ಕಂಡುಕೊಂಡರು. ಅವರು ಹಾಕಿಕೊಟ್ಟ ಈ ಪರಂಪರೆ ಮುಂದುವರಿಯಿತು. ಆ ಪರಂಪರೆಯ ಶಿಶುವೇ ಮಲ್ಲನಮೂಲೆಯಂ ಕಾಯಕದ ಮಲ್ಲಯ್ಯನವರು.

ನಂಜನಗೂಡಿನ ವಾಯವ್ಯಕ್ಕೆ ಸುಮಾರು ಮೂರು ಮೈಲಿಗಳ ದೂರದಲ್ಲಿ ಮಲ್ಲನಮೂಲೆ ಎಂದು ಪ್ರಸಿದ್ಧವಾಗಿರುವ ಈ ಜಾಗೃತ ಕ್ಷೇತ್ರ ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಒಂದು ಸಾಮಾನ್ಯ ಪ್ರದೇಶವಾಗಿತ್ತು ಆಲ, ಅರಳಿ. ಮಾವು, ಇಮ್ಮಾವು,, ಅತ್ತಿ ಇಪ್ಪೆ, ಗೋಣಿ, ಬಸರಿ ಮುಂತಾದ ದೊಡ್ಡ ದೊಡ್ಡ ಮರಗಳಿಂದಲೂ ಕುರುಚಲು ಗಿಡ ಮರ ಬಳ್ಳಿಗಳಿಂದಲೂ ಕೂಡಿ ಭೂಮಿಯಲ್ಲಿ ಕತ್ತಲೆಯ ನೆರಳಾಡಿಸುತ್ತ. ದಟ್ಟವಾಗಿ ಬೆಳೆದ ರಮ್ಯ ಪ್ರದೇಶ ಸದಾ ಜಲದ ಮಂಜುಳನಾದ ಮಾಡುತ್ತ ಹರಿಯುತ್ತಿರುವ ಕಪಿಲೆಯ ಸಂಗಮದಿಂದ ಮಧುರ ಪ್ರಶಾಂತ ವಾತಾವರಣವನ್ನು ನಿರ್ಮಿಸಿ ತನ್ನ ಪ್ರಾಕೃತಿಕ ಚೆಲುವಿನಿಂದ ಮನುಷ್ಯನ ಮನವನ್ನು ಸೂರೆ

ಗೊಂಡಿತ್ತು. ಸಾಲದೆಂಬಂತೆ ಆ ಮರಗಳ ಪೊದೆಗಳಲ್ಲಿ ಕುಳಿತು ಇಂಪಾಗಿ ಹಾಡುತ್ತಿದ್ದ ಗಿಳಿ, ಕೋಗಿಲೆ, ಮುಂತಾದ ಪಕ್ಷಿಗಳ ಇಂಚರ ಮನವನ್ನು ಮಧುರ ಮೋಡಿಯಲ್ಲಿ ಮಲಗಿಸುವಂತಿತ್ತು. ಇದಕ್ಕೆ ಕಿರೀಟವಿಟ್ಟಂತೆ ಅಲ್ಲಿ ಇಲ್ಲಿ ಸುಳಿದು ಚಿಮ್ಮುತ್ತಿದ್ದ ನವಿಲು, ಮೊಲ, ಜಿಂಕೆ, ಸಾರಂಗಗಳ ಗುಂಪು ಕಣ್ಮನಗಳನ್ನು ಸೆಳೆಯುವಂತಿತ್ತು. ಪಕ್ಕದಲ್ಲಿಯೇ ಇರುವ ಪಂಚಲಿಂಗನ ಗುಡ್ಡ ಮನಸ್ಸಿನಲ್ಲಿ ಭಕ್ತಿಭಾವವನ್ನು ಪ್ರಚೋದಿಸುತ್ತ ಪರಿಸರದ ಸೌಂದರ್ಯಾರಾಧನೆಗೆ ಅನುವು ಮಾಡಿಕೊಟ್ಟಿತ್ತು. ಈ ಚೆಲುವಿಕೆಯ ಒಂದು ಮೂಲೆಯಲ್ಲಿ ಕಳಶವಿಟ್ಟಂತೆ ಗಗನಚುಂಬಿಯಾದ ಅಶ್ವತ್ಥ ವೃಕ್ಷವೊಂದು ದಟ್ಟವಾಗಿ ಬೆಳೆದು ನಿಂತಿತ್ತು. ಇದರ ಬುಡದಲ್ಲಿ ಲಕ್ಷಣವಾದ ಗುಡಿಸಲೊಂದು ವನಮಧ್ಯದ ಆಶ್ರಮದ ನೆನಪನ್ನು ತರುತ್ತಿತ್ತು. ನಿಷ್ಕಳಂಕವಾದ ವನಮಧ್ಯದಲ್ಲಿ ನಿರ್ಮಲ ವಾತಾವರಣವನ್ನು ನಿರ್ಮಿಸಿದ್ದ ಈ ಪರ್ಣಕುಟೀರದಲ್ಲಿ ಕಾಲನನ್ನು ಮೆಟ್ಟಿ ನಿಂತ ಶಿವಯೋಗಿ ಶಿಷ್ಯನೊಂದಿಗೆ ನೆಲೆ ನಿಂತಿದ್ದರು.

ಶಿವಯೋಗಿ ಗುರುವಿನ ಹೆಸರು ನಿರಂಜನಮೂರ್ತಿ, ಶಿಷ್ಯ ಮಲ್ಲಯ್ಯ. ಇಬ್ಬರೂ ಹಾಗದ ಕಾಸಿನ ಕಾಯಕ ಮಾಡುತ್ತಿದ್ದ ಶಿವಶರಣರು, ಪರಮ ದಾಸೋಹಿಗಳು. ಕಾಯಕವನ್ನೇ ತಮ್ಮ ಉಸಿರನ್ನಾಗಿ, ಪ್ರಾಣವನ್ನಾಗಿ, ಬದುಕನ್ನಾಗಿ, ಅಷ್ಟೇ ಏನು, ಸರ್ವಸ್ವವನ್ನಾಗಿ ಭಾವಿಸಿದ ಇವರು ಮತ್ತೊಂದನ್ನರಿಯದ ವೀರ ವಿರಾಗಿಗಳು ಬಾಲ ಬ್ರಹ್ಮಚಾರಿಗಳು. **ಯಥಾ ಗುರುಸ್ತಥಾ ಶಿಷ್ಯಃ ಯಥಾ ಶಿಷ್ಯಸ್ತಥಾಗುರುಃ** ಎಂಬಂತೆ ಪರಸ್ಪರ ಸಾಕ್ಷಿಭೂತರಾಗಿದ್ದರು. ಶಿವನ ಕಾಯಕವನ್ನು ನಡೆಸಲೆಂದೇ ಭೂಲೋಕದಲ್ಲಿ ಹುಟ್ಟಿದವರು, ಆ ಮಣಿಹಕ್ಕಾಗಿಯೇ ಮೀಸಲಾಗಿ ಬದುಕಿದವರು. ಅನನ್ಯಭಾವದಿಂದ ಆ ಕಾಯಕವನ್ನು ನೆರವೇರಿಸಿ ಇಹವನ್ನು ಮುಗಿಸಿದ ಮಹಾಂತರು. ಸತ್ಯ ಶುದ್ಧ ಕಾಯಕದಲ್ಲಿ ನಿರತರಾಗಿ ಕಾಯಕ ಧರ್ಮವನ್ನು ಕ್ರಮವಾಗಿ ಅರಿತು ಆಚರಿಸಿದ ನಿಷ್ಠಾಗರಿಷ್ಠರು. ತಮ್ಮ ಪವಿತ್ರ ಕಾಯಕ ಕರ್ಮಾನುಷ್ಠಾನದಿಂದ ಭೂಕೈಲಾಸವಾಗಿಸಿದ ಧೀಮಂತ ಯೋಗಿಗಳು.

ನಿಷ್ಠುರ ಸತ್ಯ ಶುದ್ಧಕಾಯಕಕ್ಕೆ ಬದ್ಧನಾದ ಶಿಷ್ಯ ಮಲ್ಲಯ್ಯನಾದರೋ ಆಜಾನುಬಾಹು, ಬಿಸಿಲು ಚಳಿ ಮಳೆ ಗಾಳಿಗೆ ಜಗ್ಗದ ಬಗ್ಗದ ವಜ್ರದೇಹಿ, ಕಸ್ತೂರಿಯ ಮೈಬಣ್ಣ, ಮೊಳದುದ್ದ ಗಡ್ಡ, ಕೆಂಡದಂಥ ಕಂಗಳು. ತಲೆಯಲ್ಲಿ ಸುರುಳಿ ಸುತ್ತಿ ಸುತ್ತಿ ಕಟ್ಟಿದ್ದ ರಟ್ಟೆರಟ್ಟೆ ಗಾತ್ರದ ಕೆಂಜೆಡೆ. ಹಣೆತುಂಬ ವಿಭೂತಿ, ಕೊರಳಲ್ಲಿ ದಪ್ಪ ದಪ್ಪ ರುದ್ರಾಕ್ಷಿಸರ, ಕೊರಳಲ್ಲಿ ಮರದ ಕರಡಿಗೆಯಲ್ಲಿ ಕಟ್ಟಿದ್ದ ಇಷ್ಟಲಿಂಗ. ಸೊಂಟಕ್ಕೆ ಬಿಗಿದಿದ್ದ ಮಂಡಿಯು ತನಕ ಇಳಿಬಿದ್ದ ನಾರು ಬಟ್ಟೆಯ ತುಂಡು. ತೋಳುಗಳ ಮೇಲೆ ಎದ್ದು ಕಾಣುತ್ತಿದ್ದ ಭಸ್ಮ ಸುರೇಖೆಗಳು, ಕೈಯಲ್ಲಿ ಹಿಡಿಗೆ ತಕ್ಕ ಬಲವಾದ ದೊಣ್ಣೆ, ಪಾದಗಳಲ್ಲಿ ಪಟಪಟ ಶಬ್ದ ಮಾಡುವ ಮರದ ಹಾವುಗೆಗಳು. ಎಲ್ಲಕ್ಕೂ ಮಿಗಿಲಾಗಿ ಮುಖದಲ್ಲಿ ದುಮುದುಮಿಸುತ್ತಿದ್ದ ವೀರ ವಿರತಿಯ ಸ್ವಪ್ರಕಾಶ ! ಶಿವನ ಕೂರಲಗು ಹೊಳೆದ್ದಾಂಗ ! ಶಿಷ್ಯ ಮಲ್ಲಯನ ಈ ಆಕೃತಿ ವೀರ ನಿಷ್ಠೆಯ ಕಾಯಕದ

ಅನುಷ್ಠಾನಕ್ಕೆಂದೇ ತಿದ್ದಿ ಮಾಡಿದಂತಿತ್ತು. ಕಾಡಿನ ಮಧ್ಯದಲ್ಲಿ ನಿರ್ಜನ ಪ್ರದೇಶದಲ್ಲಿ ಇಂಥ ಆಕೃತಿಯನ್ನು ಕಂಡರೆ ಯಾರಿಗೆ ತಾನೆ ಎದೆ ಝಲ್ ಎನ್ನುವುದಿಲ್ಲ !

ಆದರೆ ಶಿಷ್ಯಮಲ್ಲಯ್ಯನ ಹೊರನೋಟ ಎಷ್ಟು ಭಯಂಕರವಾಗಿತ್ತೋ ಅಷ್ಟೇ ಸೌಮ್ಯವಾಗಿತ್ತು ಅವನ ಒಳನೋಟ. 'ವಜ್ರಾದಪಿ ಕಠೋರ' ಬಾಹ್ಯ ಆಕೃತಿ, ಆದರೆ 'ಪುಷ್ಪಾದಪಿ ಮೃದು' ಆಂತರಿಕ ಪ್ರಕೃತಿ. ಆತನ ಅಂತರಂಗ ಮೇಣದ ಬತ್ತಿಯಷ್ಟೇ ಮೃದು; ತೊಂದರೆಗೊಳಗಾದವರನ್ನು ಕಂಡಕೂಡಲೇ ಮಂಜಿನಂತೆ ಕರಗುತ್ತಿತ್ತು. ಅನುಕಂಪೆಯ ಆಗರ; ದರಿದ್ರರನ್ನು ತನ್ನಲ್ಲಿ ತುಂಬಿಕೊಳ್ಳುವಂತಿತ್ತು. ಕರುಣೆಯ ಸಾಗರ ದುಃಖಿಗಳ ಮೇಲೆ ಹರಿಯುತ್ತಿತ್ತು. ಅರಿಷಡ್ವರ್ಗ, ಮಲತ್ರಯಾದಿಗಳ ಪರಿಚಯವೇ ಇಲ್ಲದ ಮುಗ್ಧ ಮಲ್ಲಯ್ಯನ ಮನಸ್ಸು ಸದಾ ಸೇವಾತತ್ಪರವಾಗಿತ್ತು.

ಗುರು ನಿರಂಜನ ಮೂರ್ತಿಯಾದರೋ ಬಲಿತು ಹಣ್ಣಾದ ಶಿವನೇ ಮೂರ್ತಿಗೊಂಡಂತೆ, ಮುಟ್ಟಿದರೆ ಜಾರುವ ಮೃದುಲ ಶರೀರಿ. ಅನುಭಾವವೇ ಹಣ್ಣಾದ ಬೆಳ್ಳಿ ಕೂದಲ ಜಡೆಮುಡಿ, ತೆಳುವಾದ ಗಡ್ಡ, ಹಾಲುಂಗಲ್ಲದ ಹಸುಳೆಗಳನ್ನು ಆಕರ್ಷಿಸುವ ಶಾಂತ ಸೌಮ್ಯಮುಖಮುದ್ರೆ. ಪರ್ಣಕುಟೀರದ ಮುಂದೆ ಹಾಸಿದ್ದ ಶಿಲಾ ಪೀಠ. ವಿಭೂತಿ–ರುದ್ರಾಕ್ಷಿಗಳಿಂದಲಂಕೃತರಾಗಿ, ದಂಡ ಕಮಂಡಲುಗಳಿಂದ ಪರಿಶೋಭಿತರಾಗಿ ಶಿವಾಕ್ಷ ಜಪಮಾಲೆಯನ್ನೆಣಿಸುತ್ತ ಶಿಲಾಪಟ್ಟದ ಮೇಲೆ ಮಂಡಿಸಿ ಶಿವ ಜಪಾನುಷ್ಠಾನ ಪರವಶರಾಗಿರುತ್ತಿದ್ದುದೇ ಅವರ ನಿತ್ಯಸತ್ಯ ಶುದ್ಧ ಕಾಯಕ.

ನಿತ್ಯ ಮುಂಜಾನೆ ಉಪ್ಪವಡಿಸಿದ ಶಿಷ್ಯಮಲ್ಲಯ್ಯ ಗುರುಪಾದಕ್ಕೆ ಶಿರಸಾಷ್ಟಾಂಗ ನಮಸ್ಕಾರ ಸಲ್ಲಿಸಿ ಶುಶ್ರೂಷೆ ಮಾಡುತ್ತಿದ್ದ. ಗುರುಗಳ ಪ್ರಾತಃಕಾಲದ ಶೌಚಾದಿ ವಿಧಿಗಳು ಮುಗಿದ ನಂತರ, ಸ್ನಾನ ಪೂಜಾದಿಗಳನ್ನು ಮುಗಿಸಿ, ಶಿಲಾಪೀಠದ ಮೇಲೆ ತಂದು ಕೂರಿಸಿ ನಿತ್ಯದ ಶಿವತಪೋನುಷ್ಠಾನಕ್ಕೆ ಅಣಿಮಾಡಿದ ನಂತರ ತಾನೂ ತನ್ನ ನಿತ್ಯ ಕರ್ಮಾದಿಗಳನ್ನು ತೀರಿಸಿ ನಿತ್ಯದ ಸತ್ಯ ಶುದ್ಧ ಕಾಯಕಕ್ಕೆ ಸಿದ್ಧನಾಗುತ್ತಿದ್ದ ! ಇದು ಮಲ್ಲಯ್ಯನ ನಿತ್ಯದ ನಿರಂತರ ನಿಯಮ, ತಪ್ಪದ ದಿನಚರಿ !

ಊರಿಗೆ ಮೂರು ಮೈಲಿ ದೂರದಲ್ಲಿದ್ದ ನಿರ್ಜನವಾದ ಈ ಕಾಂತಾರದ ಮಧ್ಯದಲ್ಲಿದ್ದ ಗುಡಿಸಿಲಿನಲ್ಲಿ ವಾಸ ಮಾಡಿಕೊಂಡಿದ್ದ ಮಲ್ಲಯ್ಯ ನಡೆಸುತ್ತಿದ್ದ ಕಾಯಕ 'ಹಾಗ'ದ ಕಾಯಕ. ಜನ ಹಣವನ್ನು ಅಡ್ಡ, ಹಾಗ, ಮುಪ್ಪಾಗ ಎಂದು ಎಣಿಸಿ ವ್ಯವಹಾರ ಮಾಡುತ್ತಿದ್ದ ಕಾಲ ಅದು. 'ಹಾಗ' ಎಂದರೆ ಕಾಲು ಭಾಗ ಎಂದರ್ಥ. ರೂಪಾಯಿನ ಕಾಲುಭಾಗ ಎಂದರೆ ಪಾವಲಿ ಎಂದು ಇಟ್ಟುಕೊಳ್ಳಬಹುದು. ಪ್ರಾತರ್ವಿಧಿಗಳನ್ನು ಮುಗಿಸಿದ ಮಲ್ಲಯ್ಯ ತನ್ನ ದೈನಂದಿನ ಕಾಯಕಕ್ಕೆ ಸಿದ್ಧನಾಗಿ ನಿಲ್ಲುತ್ತಿದ್ದ. ಹಾಗೆ ಸಿದ್ಧನಾಗಿ ನಿಂತಾಗ ಮೊಟ್ಟ ಮೊದಲು ಯಾರು ಅವನ ಕಣ್ಣಿಗೆ ಬೀಳುತ್ತಾರೋ ಅವರು ಯಾರೇ ಆಗಿರಲಿ ಹಾಗ (ಕಾಸನ್ನು) ವನ್ನು ತಪ್ಪದೆ ಕೊಡಲೇ ಬೇಕಾಗುತ್ತಿತ್ತು. ಒಮ್ಮೊಮ್ಮೆ ಕೊಡದೆ ಕೊರಚಾಡುತ್ತಿದ್ದವರಿಗೆ 'ಕೊಡ್ತೀಯೋ ಇಲ್ವೋ' ಎಂದು ತಾನು ಮುಷ್ಟಿಯ ತುಂಬ ಹಿಡಿದಿದ್ದ ದೊಣ್ಣೆಯನ್ನು ತೋರಿಸುತ್ತಿದ್ದುದೂ ಉಂಟು.

ಹಾಗದ ಕಾಸು ಸಿಕ್ಕಿದ ಕೂಡಲೇ ಶಿಷ್ಯ ಮಲ್ಲಯ್ಯ ನಂಜನಗೂಡಿಗೆ ಹೋಗಿ ರಾಗಿ, ಹುರುಳಿ, ಧೂಪ, ಕರ್ಪೂರಗಳನ್ನು ತಂದು ರಾಗಿಯನ್ನು ಬೀಸಿ ಅಂಬಲಿ ಮಾಡಿ, ಹುರುಳಿಯನ್ನು ಬೇಯಿಸಿ ಸಿದ್ಧಪಡಿಸಿದ ಮಡಕೆಗಳಿಗೆ ವಿಭೂತಿ ಪಟ್ಟೆ ಹಾಕಿ ಅವುಗಳ ಮುಂದೆ ಧೂಪಹಾಕಿ ಕರ್ಪೂರ ಹಚ್ಚಿಸಿ ಸಾಷ್ಟಾಂಗ ನಮಸ್ಕಾರ ಮಾಡಿದ ಮೇಲೆ ಭಕ್ತಾದಿ ಗಳನ್ನು ಕೂಗಿ ಕೂಗಿ ಕರೆಯುತ್ತಿದ್ದ. ಈ ಮಹಾಪ್ರಸಾದವನ್ನು ಸೇವಿಸಲು ಕೆಲವರು ಮುಂದಾಗಿಯೇ ಬಂದು ಸಿದ್ಧರಾಗಿರುತ್ತಿದ್ದರಂತೆ. ಮತ್ತೆ ಕೆಲವರು ಸಕಾಲಕ್ಕೆ ಬಂದು ಸೇರುತ್ತಿದ್ದುದೂ ಉಂಟು. ಸಾಕಷ್ಟು ಭಕ್ತರು ಬಂದು ನೆರೆದಾದ ಮೇಲೆ ಆ ಶಿವ ಪ್ರಸಾದವನ್ನು ದೊನ್ನೆಗಳಲ್ಲಿ ತುಂಬಿ ಮೊದಲು ತನ್ನ ಗುರುವಿನ ಮುಂದಿಟ್ಟು ಉದ್ದಕ್ಕೆ ಅಡ್ಡಬಿದ್ದು ಸಾಷ್ಟಾಂಗ ಪ್ರಣಾಮಂಗಳನ್ನು ಭಕ್ತಿಪೂರ್ವಕವಾಗಿ ಸಲ್ಲಿಸಿ ನಂತರ ಅಲ್ಲಿ ನೆರೆದಿರುತ್ತಿದ್ದ ಭಕ್ತರಿಗೆ, ಸಾಲಾಗಿ ಕೂರಿಸಿ, ಒಂದು ಕಡೆಯಿಂದ ನೀಡುತ್ತಿದ್ದ. ಹಾಗೆ ನೀಡುತ್ತಿರುವಾಗ "ಇದು ಶಿವನ ಪ್ರಸಾದ ! ಶಿವ ಶಿವಾ ಎನ್ನುತ್ತಲೇ ಉಣ್ಣಿರಿ, ಶಿವನು ನಿಮಗೆ ಬೇಡಿದ ರುಚಿಯನ್ನು ಕೊಡುತ್ತಾನೆ" ಎಂದು ಮೇಲಿಂದ ಮೇಲೆ ಹೇಳು ತ್ತಿದ್ದನು.

ಮಲ್ಲಯ್ಯನು ನೀಡುತ್ತಿದ್ದ ಮಹಾಪ್ರಸಾದವನ್ನು ಉಂಡು ಪ್ರತಿನಿತ್ಯ ಅದರ ಸವಿಯನ್ನು ಅನುಭವಿಸುತ್ತಿದ್ದ ಅನೇಕ ಮಂದಿಗೆ ಅವನ ಈ ಮಾತು ಹೊಸದೇನೂ ಆಗಿರಲಿಲ್ಲ. ಬಹಳ ದಿನಗಳಿಂದ ಅವನು ನೀಡುತ್ತಿದ್ದ ಮಹಾ ಪ್ರಸಾದದ ಸವಿಯನ್ನು ಅನುಭವಿಸಿದ ಆ ಜನ ಅದಕ್ಕಾಗಿಯೇ ಕಾದು ಕೂತಿರುತ್ತಿದ್ದರು. ಆದರೆ ಹೊಸ ಹೊಸದಾಗಿ ಬಂದ ಭಕ್ತರಿಗೆ ಮಾತ್ರ ಆ ಮಹಾಪ್ರಸಾದದ ಮಧುರ ಸವಿಯ ಹೊಸ ಅನುಭವ ಉಂಟಾಗುತ್ತಿತ್ತು. ಅಲ್ಲಿಗೆ ಆ ಮಹಾಪ್ರಸಾದ ಸೇವನೆಗೆ ಬರುತ್ತಿದ್ದ ಭಕ್ತಾದಿಗಳು 'ಶಿವಶಿವಾ' ಎನ್ನುತ್ತಾ ಪ್ರಸಾದ ಸೇವಿಸುತ್ತಾ ಆ ಅಂಬಲಿಯಲ್ಲಿಯೇ ತಾವು ಬಯಸಿದ ರುಚಿಯನ್ನು, ಅಮೃತದ ರುಚಿಯನ್ನು ಕಾಣುತ್ತಿದ್ದರು. ಇದರ ಸವಿಯನ್ನು ಅನುಭವಿಸಿದ ಭಕ್ತರು ಹೊಸ ಹೊಸ ಭಕ್ತರನ್ನು ಕರೆತಂದು ಆ ಪ್ರಸಾದದ ಸವಿಯನ್ನು, ಆ ಮೂಲಕ ಶಿಷ್ಯ ಮಲ್ಲಯ್ಯನ ಕಾಯಕದ ನೈಜ ಮಹಿಮೆಯನ್ನು ತೋರಿಸುತ್ತಿದ್ದರು. ಈ ರೀತಿಯಲ್ಲಿ ಆತನ ಕಾಯಕ ದಿನದಿಂದ ದಿನಕ್ಕೆ ಹುಣ್ಣಿಮೆಯ ಚಂದ್ರನಂತೆ ವೃದ್ಧಿಯಾಗುತ್ತಿತ್ತು. ಆತನ ಮಹಿಮೆಯಿಂದ ಆ ಮಹಾ ಶಿವ ಪ್ರಸಾದ ಅಕ್ಷಯವಾಗುತ್ತಿತ್ತು. ಆತನ ಈ ಕಾಯಕ ಎಂಥ ಪ್ರಸಂಗದಲ್ಲಿಯೂ ತಪ್ಪದೆ ಪ್ರತಿ ನಿತ್ಯ ನಡೆಯುತ್ತಲೇ ಇತ್ತು.

ಎಷ್ಟು ಜನ ಬಂದರೂ ತಾನು ಪಡೆಯುತ್ತಿದ್ದ ಹಾಗದ ಕಾಸಿನಲ್ಲಿಯೇ ತಂದ ರಾಗಿ, ಹುರುಳಿಯಿಂದ ಮಾಡಿದ ಅಂಬಲಿಯಿಂದಲೇ ಎಲ್ಲರಿಗೂ ಊಟ ಬಡಿಸುತ್ತಿದ್ದನು. ಇದನ್ನು ಕಂಡ ಜನರಿಗೆ ಆಶ್ಚರ್ಯವಾಗುವುದರಲ್ಲಿ ಸೋಜಿಗವೇನೂ ಇಲ್ಲ. ಯಾವಾಗ ಸಾಮಾನ್ಯ ಮಾನವನ ಶಕ್ತಿಯನ್ನು ಮೀರಿದ ಕಾರ್ಯ ಒಬ್ಬ ಅಸಾಧಾರಣ ವ್ಯಕ್ತಿಯಿಂದ

ನಡೆದು ಹೋಗುತ್ತದೆ, ಆಗ ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಪಡೆಯದ ಜನ ಸಾಮಾನ್ಯವಾಗಿ ನಡೆದ ಅಂಥ ಅದ್ಭುತಕ್ಕೆ ಪವಾಡದ ಪಟ್ಟ ಕಟ್ಟಿ ಬಿಡುತ್ತಾರೆ. ಅಂಥ ಅದ್ಭುತವನ್ನು ಆಗು ಮಾಡಿದ ವ್ಯಕ್ತಿಯನ್ನು ಪವಾಡಪುರುಷ, ಕಾರಣಿಕಪುರುಷ ಎಂದು ಮುಂತಾಗಿ ಕರೆದು ಬಿಡುತ್ತಾರೆ. ಅವನನ್ನು ಹೊಗಳಿ ಹೊಗಳಿ ಅಟ್ಟಕ್ಕೇರಿಸಿ ಕೊನೆಗೆ ಹೊನ್ನ ಶೂಲಕ್ಕೆ ಹಾಕಿ ಬಿಡುತ್ತಾರೆ. ಹೊಗಳಿಕೆಗೆ ಹಿಗ್ಗಿ ಹೀರೇಕಾಯಿಯಾಗುವುದು ಸಾಮಾನ್ಯ ಮನುಷ್ಯನಿಗೆ ತೀರ ಸಹಜ, ಆದರೆ ಬಸವಣ್ಣನವರಂಥ ಎಲ್ಲೋ ಕೆಲವರು ಅದರ ಅನಿಷ್ಟವನ್ನು ಗಮನಿಸಿ 'ಎನ್ನ ಹೊಗಳಿಕೆಗೆ ಅಡ್ಡ ಬಾರಾ ಧರ್ಮಿ !' ಎಂದು ಮೊರೆಯಿಡುತ್ತಾರೆ. ಅಂತೆಯೇ ಇಲ್ಲಿಯೂ ಶಿಷ್ಯ ಮಲ್ಲಯ್ಯನ ಪವಾಡ ಸದೃಶವಾದ ಮಹಾ ಪ್ರಸಾದದ ಈ ಕಾಯಕ ನಿಷ್ಠೆಯನ್ನು ಕಂಡವರು ಬೆರಗಾಗಿದ್ದರೆ ಆಶ್ಚರ್ಯವೇನಿಲ್ಲ. ಬೆರಗಾಗಿದ್ದಾರೆ, ಆದರ ಕಾವಿನಲ್ಲಿಯೇ ಆ ಮಹನೀಯನನ್ನು ಶರಣ ಮಲ್ಲಯ್ಯ, ಕಾಯಕದ ಮಲ್ಲಯ್ಯ ಎಂದು ಮುಂತಾಗಿ ಕರೆದು ಹಾಡಿ ಹೊಗಳಿದ್ದಾರೆ. ಅವನ ಕಾಯಕ ಇನ್ನೂ ವಿಸ್ತಾರವಾಗಿ ನಡೆಯಲಿ ಎಂಬ ಸದುದ್ದೇಶದಿಂದ ಒಂದು ಹಾಗಕ್ಕಿಂತ ಇನ್ನೂ ಹೆಚ್ಚು ಹಣವನ್ನು ಕೊಡ ಹೋಗಿದ್ದಾರೆ. ಆದರೆ ನಿಷ್ಠಾವಂತನಾದ ಶರಣ ಮಲ್ಲಯ್ಯ ಇಂದಿಗೆಂತು ನಾಳಿಗೆಂತು ಎಂದು ಹಲುಬದೆ, ಇಂದಿಗೆ ಬೇಕಾಗಿರುವುದು ಹಾಗ. ಒಂದು ಹಾಗವನ್ನು ಮಾತ್ರ ತೆಗೆದುಕೊಂಡು ತನ್ನ ಕಾಯಕ ನಿಷ್ಠೆಯನ್ನು ಮೆರೆದಿದ್ದಾನೆ. ಆತನ ಈ ಕಾಯಕದಲ್ಲಿ ಎಷ್ಟು ಜನರು ಬಂದು ಪ್ರಸಾದ ಸ್ವೀಕರಿಸಿದರೂ ಪ್ರಸಾದ ತೀರುತ್ತಿರಲಿಲ್ಲ. ಒಂದು ಗೊತ್ತಾದ ಅವಧಿಯಲ್ಲಿ ಬಂದ ಎಲ್ಲ ಭಕ್ತರಿಗೂ ಪ್ರಸಾದ ನೀಡಿ ಅವರು ಸೇವಿಸಿ ತಣಿದಾದ ಮೇಲೆ ತಾನು ಪ್ರಸಾದ ಸೇವಿಸುತ್ತಿದ್ದ. ಅಲ್ಲಿಗೆ ಅವನ ಅಂದಿನ ಕಾರ್ಯ ತೀರುತ್ತಿತ್ತು. ಶರಣ ಮಲ್ಲಯ್ಯನ ಅನನ್ಯಭಕ್ತಿ ಹಾಗೂ ದೃಢ ನಿಷ್ಠೆಯಿಂದಾಗಿ ನಿತ್ಯವೂ ಹಾಗದ ಕಾಸು ಸಿಗುತ್ತಿತ್ತು, ಆದರಿಂದ ಅವನ ದಾಸೋಹದ ಕಾಯಕ ಸಾಗುತ್ತಿತ್ತು.

ಶರಣ ಮಲ್ಲಯ್ಯನ ಕಾರ್ಯ ತಪ್ಪದೆ ಅಬಾಧಗತಿಯಿಂದ ನಡೆಯುತ್ತಿತ್ತು. ಪ್ರತಿದಿನ ಯಾರಾದರೊಬ್ಬರು ಸಿಕ್ಕಿ ಅವನ ಅಂದಿನ ಕಾಯಕದ ಹಾಗವನ್ನು ಕೊಡುತ್ತಿದ್ದರು. ಆದರೆ ಒಂದುದಿನ ಯಾರೂ ಕಾಣಲಿಲ್ಲ. ಎಷ್ಟು ಸಮಯವಾದರೂ ಇಲ್ಲ. ಹಾಗೆಂದು ಮಲ್ಲಯ್ಯನಿಗೇನೂ ಆತಂಕವಾಗಲಿಲ್ಲ. ಶಿವನ ಕಾಯಕವಲ್ಲವೇ ! ಶಿವನು ನೋಡಿಕೊಳ್ಳುತ್ತಾನೆ, ಎಂಬ ಆತ್ಮವಿಶ್ವಾಸ ಕಾಯಕನಿಷ್ಠ ಮಲ್ಲಯ್ಯನದು. ಹೀಗೆ ಶಿವನ ಸೊಮ್ಮಿನಲ್ಲಿರುವಾಗ ಒಬ್ಬ ದಳವಾಯಿ ಕುದುರೆಯನ್ನೇರಿ ನಿದಾನಗತಿಯಲ್ಲಿ ಸಾಗುತ್ತಿದ್ದ. ಅಂದಿನ ಕಾಯಕಕ್ಕೆ ಸಿದ್ಧನಾಗಿಯೇ ನಿಂತಿದ್ದ ಕಾಯಕದ ಮಲ್ಲಯ್ಯ ಕೂಡಲೇ ಅವನ ಮುಂದೆ ಹೋಗಿ ನಿಂತು ಶಿವನ ಕಾಯಕಕ್ಕೆ ಹಾಗದ ಕಾಸನ್ನು ಕೇಳಿದ. ಅನಿರೀಕ್ಷಿತವಾಗಿ ತನ್ನ ಮುಂದೆ ದೊಣ್ಣೆ ಹಿಡಿದು ಬಂದು ನಿಂತ ಬೃಹದಾಕಾರದ ಆ ವ್ಯಕ್ತಿಯನ್ನು ಕಂಡು ದಳವಾಯಿಗೂ ಕೊಂಚ ಗಾಬರಿಯೇ ಆಯಿತು. ಆದರೂ ಅದನ್ನು ತೋರಿಸಿಕೊಳ್ಳದೆ ಸಾವರಿಸಿಕೊಂಡು "ಯಾರಪ್ಪ ನೀನು ? ಏನು ಬಂದೆ ?"

ಎಂದು ಕೇಳಿದನು. ಅದಕ್ಕೆ ಮಲ್ಲಯ್ಯನು ತಾನು ಪ್ರತಿನಿತ್ಯ ಕೈಕೊಂಡು ಅಬಾಧಗತಿ ಯಿಂದ ನಡೆಸಿಕೊಂಡು ಬರುತ್ತಿರುವ ಕಾಯಕದ ಸಂಗತಿಯನ್ನು ವಿವರವಾಗಿ ತಿಳಿಸಿ ಅದಕ್ಕಾಗಿ ಅಂದು ಬೇಕಾಗಿರುವ ಹಾಗದ ಕಾಸನ್ನು ಕೇಳಿದನು. ಮಲ್ಲಯ್ಯನ ಕಾಯಕದ ವಿವರವನ್ನು ಕೇಳಿದ ಕೂಡಲೇ ಹರ್ಷಚಿತ್ತನಾದ ದಳವಾಯಿ, ತತ್‌ಕ್ಷಣದಲ್ಲಿ ತನ್ನಲ್ಲಿ ಹಾಗದ ಕಾಸು ಇಲ್ಲವಲ್ಲ ಎಂಬ ವಿಷಯವನ್ನು ಅತ್ಯಂತ ವಿನಯದಿಂದಲೇ ತಿಳಿಸಿದನು. ಆದರೂ ಮಲ್ಲಯ್ಯನ ಕಾಯಕ ನಿಲ್ಲಬಾರದು ಎಂಬ ದೃಷ್ಟಿಯಿಂದ ತನ್ನ ಕೈಯಲ್ಲಿದ್ದ ಮುದ್ರೆಯುಂಗುರವನ್ನು ತೆಗೆದುಕೊಡುತ್ತ "ಅಯ್ಯ ! ಶರಣ ! ನನ್ನಲ್ಲಿ ಈ ಕ್ಷಣದಲ್ಲಿ ಹಾಗದ ಕಾಸಿಲ್ಲ. ಇದೋ ! ನನ್ನ ಈ ಉಂಗುರವನ್ನು ತೆಗೆದುಕೊಂಡು ಹೋಗಿ ಅಂಗಡಿಯಲ್ಲಿ ಒತ್ತೆ ಇಟ್ಟು ನಿನ್ನ ಇಂದಿನ ಕಾಯಕವನ್ನು ನೆರವೇರಿಸು. ನಿನ್ನ ಕಾಯಕದ ವಿಷಯವನ್ನು ಕೇಳಿ ನನಗೆ ತುಂಬ ಸಂತೋಷವಾಗಿದೆ. ಈ ನಿನ್ನ ಶಿವನ ಕಾಯಕಕ್ಕೆ ಅಡ್ಡಿ ಬರುವುದು ಬೇಡ. ನಾನು ನಾಳೆ ಪುನಃ ಬರುವಾಗ ನಿನಗೆ ಹಿಂದಿನ ಹಾಗೂ ಅಂದಿನ ಕಾಯಕದ ಹಾಗದ ಕಾಸನ್ನು ಕೊಟ್ಟು ನನ್ನ ಉಂಗುರವನ್ನು ಹಿಂದಕ್ಕೆ ಪಡೆಯು ತ್ತೇನೆ. ಇದಕ್ಕಾಗಿ ನೀನು ಸಂದೇಹ ಪಡುವ ಕಾರಣವಿಲ್ಲ. ಯಾವುದಕ್ಕೂ ಅಂಜ ಬೇಕಾಗಿಲ್ಲ. ಶಿವನು ನಿನ್ನ ಈ ಕಾಯಕವನ್ನು ಸಾಂಗವಾಗಿ ನೆರವೇರಿಸಲಿ" ಎಂದು ತುಂಬು ಭಕ್ತಿಯಿಂದ ಉಂಗುರವನ್ನು ಕೊಟ್ಟು ಕೈಮುಗಿದು ತಲೆಬಾಗಿವಂದಿಸಿ ಮಲ್ಲಯ್ಯ ನಿಂದ ಬೀಳ್ಕೊಂಡನು. ತನ್ನ ಅಂದಿನ ಕಾಯಕಕ್ಕೆ ಚ್ಯುತಿಯುಂಟಾಗದಿದ್ದುದನ್ನು ಕಂಡ ಶರಣ ಮಲ್ಲಯ್ಯನು ಅದಕ್ಕಿಂತಲೂ ಹೆಚ್ಚಿನ ನಮ್ರತೆಯಿಂದ ಉಂಗುರವನ್ನು ಸ್ವೀಕರಿಸಿದನು. ಅನಂತರ ಅಂಗಡಿಗೆ ಹೋಗಿ ಅಂದಿನ ಕಾಯಕಕ್ಕೆ ಬೇಕಾದ ಹಾಗ ವೊಂದನ್ನು ಮಾತ್ರ ಪಡೆದು ಹುರುಳಿಯನ್ನು ತಂದು ಅಂದಿನ ಕಾಯಕವನ್ನು ಮುಗಿಸಿ-ದನು. ಬಹುಜನರಿಗೆ ಅಂದಿನ ಮಹಾಶಿವಪ್ರಸಾದವನ್ನು ಉಣಬಡಿಸಿ ಶಿವನಿಗೆ ತೃಪ್ತಿ ಯಾಗುವಂತೆ ಮಾಡಿದನು.

'ಮಲ್ಲ' ಎಂದರೆ ವೀರ-ಶೂರ-ಧೀರ ಎಂದರ್ಥ. ಅಂತೆಯೇ ಮಲ್ಲಯ್ಯನಲ್ಲಿ ವೀರತ್ವ, ಧೀರತ್ವ, ಶೂರತ್ವಗಳು ಮುಪ್ಪುರಿಗೊಂಡು ಅಪೂರ್ವವಾದ ತ್ರಿವೇಣೀ ಸಂಗಮವಾದಂತಿತ್ತು. ಮುಪ್ಪುರಾರಿಯ ಕೃಪೆ ಅವನಲ್ಲಿ ಸೊನೆಗರೆದಿತ್ತು, ತಾನು ಹಿಡಿದಿದ್ದ ಕಾಯಕವನ್ನು ತಪ್ಪದೆ ನಡೆಸುವುದರಲ್ಲಿ ವೀರನಾಗಿದ್ದ, ಗುರುಸೇವಾ ನಿಷ್ಠೆಯಲ್ಲಿ ಧೀರನಾಗಿದ್ದ, ಮನಸ್ಸನ್ನು ಗೆಲ್ಲುವುದರಲ್ಲಿ ಶೂರನಾಗಿದ್ದ ! ಕಾಯಕ ನಿಷ್ಠೆಯೇ ದಾಸೋಹ ನಿಷ್ಠೆ ಎಂಬುದನ್ನು ಅನುಷ್ಠಾನದಲ್ಲಿ ತಂದಿದ್ದ ಆ ಧೀಮಂತ ಶರಣ ಮಲ್ಲಯ್ಯ. ಹೌದು, ಕರ್ತವ್ಯ ನಿಷ್ಠನಾದ ವ್ಯಕ್ತಿಗೆ ಯಾವುದರಲ್ಲೂ ಎಂದೂ ತೊಡಕೆಂಬುದಿರುವುದಿಲ್ಲ. ಕಾಯಕದಲ್ಲಿ ನಿರತನಾದವನಿಗೆ ಗುರು-ಲಿಂಗ-ಜಂಗಮದ ಪರಿವೆಯೂ ಇರುವುದಿಲ್ಲ, ಅದೂ ಅವನನ್ನು ಬಾಧಿಸುವುದಿಲ್ಲ. ಅದನ್ನೂ ಮರೆಯ ಬೇಕು. ಅದು ನಿಜವಾದ ನಿಷ್ಠೆ. ಜಿತೇಂದ್ರಿಯನಾಗಿ ಕಾಯಕಕ್ಕೆ, ಆ ಮೂಲಕ

ದಾಸೋಹಕ್ಕೆ ತನ್ನನ್ನು ಸಮರ್ಪಿಸಿಕೊಂಡಿದ್ದ ಮಲ್ಲ+ಅಯ್ಯನಿಗೆ ಯಾವುದರ ಪರಿವೆ? ಯಾವುದರ ಗೊಡವೆ ? ಯಾವುದರ ಭಯ ? ಯಾವುದಕ್ಕೂ ಅಂಜದೆ, ಅಳುಕದೆ, ಬೆಚ್ಚದೆ, ಬೆದರದೆ, ಕೊಂಕದೆ, ಕೊಸರದೆ, ಆಸರು-ಬೇಸರುಗಳಿಲ್ಲದೆ, ತೆರೆದ ಹೃದಯ ದಿಂದ, ಅತ್ಯಂತ ಕಳಕಳಿಯಿಂದ, ಕಾಯಕವನ್ನು ಮಾಡುತ್ತಿದ್ದ ಮಲ್ಲಯ್ಯ ನಿರ್ಭೀತ. ಅಂತೆಯೇ ಶೂರ-ವೀರ-ಧೀರ ! ಮೊರಾರಿಯ ಕೃಪಾದೃಷ್ಟಿಯನ್ನು ಪಡೆದಿದ್ದ ಪುಣ್ಯಾತ್ಮ !

ತನ್ನ ಮುದ್ರೆಯುಂಗುರವನ್ನು ಕೊಟ್ಟು ಅಂದಿನ ಕಾಯಕವು ಅಬಾಧ ಗತಿಯಿಂದ ನಡೆಯುವಂತೆ ನೋಡಿಕೊಂಡ ಆ ದಳವಾಯಿ ತನ್ನ ಮಾತಿನಂತೆ ಮಾರನೆಯ ದಿನ ಹಿಂತಿರುಗಿ ಬರುವಾಗ ಮಲ್ಲಯ್ಯನ ಬಳಿಗೆ ಬಂದು ಹಾಗದ ಹಣವನ್ನು ಕೊಟ್ಟು ತನ್ನ ಉಂಗುರವನ್ನು ಮರಳಿ ಪಡೆದು ತನ್ನ ಊರನ್ನು ಸೇರಿದ. ಕೂಡಲೇ ತನ್ನ ಊಳಿಗ ದವರನ್ನು ಕರೆಸಿ, ನಡೆದ ಸಂಗತಿಯನ್ನು ವಿವರಿಸಿ, ''ನಾಳೆ ಬೆಳಗ್ಗೆ ನೀವಿಬ್ಬರೂ ಅಲ್ಲಿಗೆ ಹೋಗಿ ಮಲ್ಲಯ್ಯನ ಕಾಯಕದ ವಿಷಯವನ್ನು ತಿಳಿದು ಬನ್ನಿ'' ಎಂದು ತನ್ನ ಊಳಿಗ ದವರಿಗೆ ಅಪ್ಪಣೆ ಮಾಡಿದನು. ಊಳಿಗದವರಿಬ್ಬರೂ ದಳವಾಯಿಯ ಅಪ್ಪಣೆಯಂತೆ ಮಲ್ಲಯ್ಯನ ನಿತ್ಯ ಕಾಯಕದ ಶ್ರೀಕ್ಷೇತ್ರಕ್ಕೆ ಹೊರಟು ಬಂದರು, ವೇಳೆಗೆ ಸರಿಯಾಗಿ ಕಾಯಕದ ಮಲ್ಲಯ್ಯನ ದಾಸೋಹ ಸಿದ್ಧವಾಗಿತ್ತು. ಮಲ್ಲಯ್ಯನು ಹರ್ಷಚಿತ್ತನಾಗಿ ಸಮಯಕ್ಕೆ ಸರಿಯಾಗಿ ಬಂದ ಆ ಊಳಿಗದವರಿಬ್ಬರನ್ನೂ ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತಾ '' ಬನ್ನಿ ! ಬನ್ನಿ ! ಕೈಕಾಲು ಮುಖ ತೊಳೆದು ಭಸ್ಮ ಧರಿಸಿ ಪಂಕ್ತಿ ಯಲ್ಲಿ ಕುಳಿತುಕೊಳ್ಳಿ ! '' ಎಂದು ಹೇಳಿದನು. ಅಂತೆಯೇ ದೂರದಿಂದ ದಣಿದು ಬಂದಿದ್ದ ಅವರೂ ಪ್ರಸಾದ ಸ್ವೀಕರಿಸುವುದಕ್ಕೆ ಸಿದ್ಧರಾದರು. ಎಂದಿನಂತೆ ಅನೇಕ ಭಕ್ತಾದಿಗಳು ಕಿಕ್ಕಿರಿದು ನೆರೆದಿದ್ದರು ಮಹಿಮಾಶಾಲಿಯಾದ ಶರಣ ಮಲ್ಲಯ್ಯನೂ ಎಂದಿನಂತೆ ಅಂಬಲಿ ಹುರುಳಿಯನ್ನು ದೊನ್ನೆಗೆ ತುಂಬಿ ಗುರು ನಿರಂಜನಮೂರ್ತಿಗೆ ಅರ್ಪಿಸಿ ಸಾಲಾಗಿ ಕುಳಿತಿದ್ದ ಭಕ್ತತಿಂಥಿಣಿಗೆ ನೀಡುತ್ತ '' ಇದು ಶಿವನ ಪ್ರಸಾದ ! ಶಿವಧ್ಯಾನದಲ್ಲಿ ಇದನ್ನು ಸೇವಿಸಿ ! ಶಿವನು ನಿಮಗೆ ನೀವು ನೆನೆಸಿಕೊಂಡ ರುಚಿಯನ್ನು ಕೊಡುತ್ತಾನೆ ! ಎಂದು ಶರಣುಮಾಡಿ ವಿನಂತಿಸಿಕೊಂಡ. ಅದರಂತೆ ಭಕ್ತಾದಿಗಳು ಪ್ರಸಾದವನ್ನು ಸವಿಯುತ್ತಾ ಆನಂದಿಸುತ್ತಿದ್ದರು.

ಆಗ ಶರಣ ಮಲ್ಲಯ್ಯನು ಮೈಸೂರಿನಿಂದ ಬಂದಿದ್ದ ಅರಮನೆಯ ಊಳಿಗದವ ರನ್ನು ಕುರಿತು '' ನೀವು ಇಲ್ಲಿಗೆ ಹೊಸಬರು. ಎಂದೂ ಬಂದವರೇ ಅಲ್ಲ. ಎಷ್ಟಾ ದರೂ ನೀವು ಅರಮನೆಯಲ್ಲಿ ಷಡ್ರಸಾನ್ನ ಭೋಜನ ಮಾಡುವವರು. ಈ ಅಂಬಲಿ ಹುರುಳಿ ರುಚಿಸುವುದೇ ? ಆದರೂ ಅನ್ಯಥಾ ಭಾವಿಸಬೇಡಿ, ನೀವು ಅರಮನೆಯಲ್ಲಿ ಏನೇನು ಊಟಮಾಡುವಿರೊ ಆ ಭಕ್ಷ್ಯಗಳನ್ನೇ ನೆನೆಸಿಕೊಂಡು ಊಟಮಾಡಿ, ಶಿವನು ನಿಮಗೆ ಅದೇ ಭಕ್ಷ್ಯದ ರುಚಿಯನ್ನೇ ಕೊಡುತ್ತಾನೆ'' ಎಂದು ಮತ್ತೆ ಮತ್ತೆ ಹೇಳಿ ದನು.

ಊಳಿಗದವರು ಶರಣ ಮಲ್ಲಯನ ಮಾತುಗಳನ್ನು ಕೇಳಿ, ಅವುಗಳಲ್ಲಿ ಪೂರ್ಣ ನಂಬಿಕೆಯನ್ನಿಟ್ಟು ಅರಮನೆಯಲ್ಲಿ ತಾವು ಸೇವಿಸುತ್ತಿದ್ದ ಭಕ್ಷ್ಯ ಭೋಜ್ಯಗಳನ್ನೇ ನೆನಸಿಕೊಂಡು ಅಂಬಲಿ ಹುರುಳಿಯನ್ನು ಸೇವಿಸತೊಡಗಿದರು. ಆದರೆ ಏನು ಆಶ್ಚರ್ಯ ? ಅವರು ನೆನೆಸಿಕೊಂಡಂತೆ ನಿಜವಾಗಿಯೂ ಆಯಾಯ ಭಕ್ಷ್ಯಭೋಜ್ಯಗಳ ಮಧುರ ಸವಿಯನ್ನೇ ಸವಿಯುತ್ತಿರುವಂತೆ ಸವಿಯುತ್ತಾ ಆನಂದಪರವಶರಾದರು, ವಿಸ್ಮಯಮೂಕರಾದರು. ಹೇಳುವುದಕ್ಕೆ ಮಾತೇ ಹೊರಡದಂತಾಯ್ತು. ಶರಣ ಮಲ್ಲಯ್ಯನ ಮಾತು ಅಕ್ಷರಶಃ ಸತ್ಯವಾಯಿತು. ಬಯಸಿ ಬಂದದ್ದು ಪ್ರಸಾದವಲ್ಲ ; ಅನಿರೀಕ್ಷಿತವಾಗಿ ತಾನಾಗಿ ಬಂದದ್ದು ಪ್ರಸಾದ ! ಎಂಬುದರ ಅನುಭವವಾಯಿತು. ಆನಂದಭರಿತರಾದ ಊಳಿಗದವರು ಹಿಗ್ಗುತ್ತಾ ತಲೆಬಾಗಿ ಕೈಮುಗಿಯುವುದರ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ ಶರಣ ಮಲ್ಲಯ್ಯನ ಪಾದಾರವಿಂದಗಳಿಗೆ ಪ್ರಣಾಮಗಳನ್ನು ಸಲ್ಲಿಸಿ, ಗುರು ನಿರಂಜನ ಮೂರ್ತಿಗಳ ಕೃಪಾಶೀರ್ವಾದಗಳನ್ನು ಪಡೆದು ಮೈಸೂರಿನತ್ತ ಹೊರಟರು. ಪ್ರಯಾಣ ಮಾಡುತ್ತ ದಾರಿಯುದ್ದಕ್ಕೂ ಶರಣ ಮಲ್ಲಯ್ಯನ ಮಹಿಮೆಯನ್ನು ಕೊಂಡಾಡುತ್ತ ಬರುತ್ತಿದ್ದರೆ ಅದಕ್ಕೆ ಕೊನೆಯೇ ಇದ್ದಂತೆ ಕಾಣಲಿಲ್ಲ. 'ಆಹಾ ಎಂತಹ ಷಡ್ರುಚಿ ! ನಮ್ಮ ಅರಮನೆಯಲ್ಲೂ ಇಂಥ ರುಚಿಯನ್ನು ಸವಿದು ಅನುಭವಿಸಿಲ್ಲವಲ್ಲಾ . ಏನು ಮಹಿಮೆ ! ಏನು ಪವಾಡ ! ಎನ್ನುತ್ತ ಮಲ್ಲಯ್ಯನನ್ನು ಮತ್ತೆ ಕೊಂಡಾಡುತ್ತಾ, ಕೊಂಡಾಟ ಮುಗಿಯುವುದಕ್ಕೆ ಮೊದಲೇ, ಆದರ ಸಂತೋಷದ ಪ್ರಭಾವಲಯದಲ್ಲಿರುವಂತೆಯೇ ಊಳಿಗದವರು ಮೈಸೂರನ್ನು ತಲುಪಿದರು. ಮೈಸೂರಿಗೆ ಅಷ್ಟು ದೂರದಿಂದ ಪ್ರಯಾಣ ಮಾಡಿದೆವೆಂಬ ಆಯಾಸವಿರಲಿ, ಬಂದಂತೆಯೇ ಅವರಿಗೆ ಅನ್ನಿಸಲಿಲ್ಲ.

"ದಾನೆ ದಾನೆ ಪರ್ ಲಿಖಾ ಹೈ ಖಾನೆವಾಲೆ ಕಾ ನಾವ್'' (ತಿನ್ನುವ ಪ್ರತಿಯೊಂದು ಅಗುಳಿನ ಮೇಲೂ ತಿನ್ನುವವನ ಹೆಸರು ಬರೆದಿರುತ್ತದೆ) ಎಂಬ ನಾಣ್ಣುಡಿ ಉಂಟು. ಯಾರು ಯಾರಿಗೆ ಎಲ್ಲೆಲ್ಲಿ ಏನೇನು ತಿನ್ನುವ ಅದೃಷ್ಟ ಹಣೆಯ ಮೇಲೆ ಬರೆದಿರುತ್ತದೋ ಯಾರಿಗೆ ಗೊತ್ತು ? ಅದೃಷ್ಟಶಾಲಿಯಾದವನಿಗೆ ಮಾತ್ರ ಸುಖ ಭೋಜನ ಪ್ರಾಪ್ತಿಯಾಗುತ್ತದೆ. ಇದಕ್ಕೆ ಪೂರ್ವಾರ್ಜಿತ ಪುಣ್ಯ ಎಂದು ಹೇಳೋಣವೇ? ಅದನ್ನು ಪಡೆದ ಸ್ಥಳದ ಮಹಿಮೆ ಎಂದು ಹೇಳೋಣವೇ ? ಅದನ್ನು ನೀಡಿದವನ ಮಹತ್ವ ಎಂದು ಹೇಳೋಣವೇ ? ಯಾವೊಂದು ಕಾರಣವಾಗಲಿ, ಅಥವಾ ಮೂರೂ ಕಾರಣಗಳು ಒಟ್ಟಿಗೆ ಸೇರಿರಲಿ, ಅಂತೂ ಒಟ್ಟಿನಲ್ಲಿ ಅದು ಪಡೆದವನ ಪಾಲಿಗೆ ಪುಣ್ಯ ! ಆದರಿಂದ ಅವನು ಧನ್ಯ ! ದಳವಾಯಿಯಿಂದ ಅಪ್ಪಣೆ ಪಡೆದು ಕಳುಹಿಸಿಕೊಂಡು ಬಂದ ಅರಮನೆಯ ಊಳಿಗದವರು ಪುಣ್ಯಾತ್ಮರು, ಧನ್ಯರು ಎಂಬೋಣವೇ ! ಶರಣ ಮಲ್ಲಯ್ಯನ ಮಹಿಮೆ ಇವರ ಮೂಲಕ ಪ್ರಸಾರವಾಯಿತು ಎನ್ನೋಣವೇ !

ಶರಣ ಮಲ್ಲಯ್ಯನ ಕಾಯಕದ ಮಹಿಮೆಯನ್ನು ತಿಳಿದು ಬರಲೆಂದೇ ತಾನು ಕಳುಹಿಸಿದ್ದ ಊಳಿಗದವರ ಆಗಮನಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದ ದಳವಾಯಿ

ಅವರು ಬಂದ ಸಮಾಚಾರವನ್ನು ತಿಳಿದು ಸಂತೋಷಗೊಂಡ. ಕಾಯಕ ಮಲ್ಲಯ್ಯನ ಕಾಯಕ ಮಹಿಮೆಯನ್ನು ಕೇಳಲು ಕಾತರನಾಗಿದ್ದ ದಳವಾಯಿ ಅವರು ಬಂದ ಕೂಡಲೆ "ಏನಪ್ಪ ? ಏನು ಸಮಾಚಾರ ? ಏನು ತಿಳಿದು ಬಂದಿರಿ ? ಬೇಗ ತಿಳಿಸಿ" ಎಂದು ಕೇಳಿದನು. ಶರಣ ಮಲ್ಲಯ್ಯನ ಕಾಯಕದ ಮಹಾಪ್ರಸಾದದ ಸವಿಯನ್ನುಂಡು ತೃಪ್ತರಾಗಿ ಧನ್ಯರಾಗಿದ್ದ ಊಳಿಗದವರು, ದಳವಾಯಿಯು ಆ ವಿಷಯವನ್ನು ಕೇಳಿದ್ದೇ ತಡ, ಮತ್ತೊಮ್ಮೆ ಕಂಡುಂಡ ಸವಿ, ಅನುಭವಿಸಿದ ಆನಂದ. ಪಡೆದ ಧನ್ಯತೆ, ಇವೆಲ್ಲಕ್ಕೂ ಕಾರಣವಾದ ಮಲ್ಲಯ್ಯನ ಕಾಯಕದ ಮಹಿಮೆ ಎಲ್ಲವನ್ನೂ ಕುರಿತು ವಿವರವಾಗಿ ತಿಳಿಸಿ, ಕೊನೆಗೆ, "ಹೇಳುವುದೇನು? ಆತನೊಬ್ಬ ಶಿವಯೋಗಿ : ನಿಜಕ್ಕೂ ದೈವಾಂಶ ಸಂಭೂತ, ಆತನ ಕಾಯಕದ ಮಹಿಮೆ ಅದ್ಭುತ ! ವರ್ಣಿಸಲಸದಳ ! ನಾವು ಆತನ ದರ್ಶನ ಪಡೆಯಲು ಏಳೇಳು ಜನ್ಮದಲ್ಲಿ ಪುಣ್ಯ ಮಾಡಿದ್ದೆವು. ಆತನ ದರ್ಶನ ಪುಣ್ಯದರ್ಶನ. ಆ ದರ್ಶನದಿಂದ ಪುನೀತರಾದೆವು. ಜೀವನದಲ್ಲಿ ಧನ್ಯತೆಯನ್ನು ಪಡೆದೆವು. ನಮ್ಮ ಪೂರ್ವಾರ್ಜಿತ ಕರ್ಮವೆಲ್ಲಾ ಇಂದಿಗೆ ಪರಿಹಾರವಾಯಿತು". ಎಂದು ಹೇಳಿ, ಮೇಲಿಂದ ಮೇಲೆ ಕೈಮುಗಿದು ಸಾಂಗೋಪಾಂಗವಾಗಿ ವರ್ಣಿಸಿ ಕೈಕಟ್ಟಿ ನಿಂತರು.

ಊಳಿಗದವರ ಬಾಯಿಂದ ಕೇಳಿದ ಮಲ್ಲಯ್ಯನ ಮಹಿಮೆಯಿಂದ ವಿಸ್ಮಯ-ಗೊಂಡ ದಳವಾಯಿಗೆ ಆನಂದವುಂಟಾಯಿತು. ತಾನು ಎಷ್ಟು ಹೊತ್ತಿಗೆ ಆ ಪುಣ್ಯಾತ್ಮನ ದರ್ಶನ ಮಾಡುವೆನೋ, ಜೀವನವನ್ನು ಪುನೀತಗೊಳಿಸಿಕೊಳ್ಳುವೆನೋ ಎಂಬ ತವಕ ತಡೆಯದಾಯಿತು. ಅತ್ಯುತ್ಸಾಹದಿಂದ ಕೂಡಿ ಶರಣ ಮಲ್ಲಯ್ಯನ ದರ್ಶನಾಕಾಂಕ್ಷಿಯಾದ ದಳವಾಯಿಯ ಮನಸ್ಸು ಕೂಡಲೇ ದರ್ಶನಕ್ಕೆ ಹೊರಡಬೇಕೆಂದು ನಿರ್ಧರಿಸಿತು. ತಡವಾದರೆ ದರ್ಶನಪುಣ್ಯ ಎಲ್ಲಿ ತಪ್ಪೀತೋ ಎಂಬ ಶಂಕೆ ಮೂಡಲಾರಂಭಿಸಿತು. 'ಶುಭಸ್ಯ ಶೀಘ್ರಂ' ಎಂಬಂತೆ ಮಾರನೆಯ ದಿನವೇ ದಳವಾಯಿ ತನ್ನ ಕುಟುಂಬ ಸಮೇತ ಹೊರಡಲು ಸಿದ್ಧನಾದ. ದಳವಾಯಿಯು ಹೊರಟನೆಂದರೆ ಸಾಮಾನ್ಯವೇ ? ಬಂಧು, ಬಳಗ, ಮೇನೆ, ಪಲ್ಲಕ್ಕಿ, ಕಳಶ, ಕನ್ನಡಿ. ತಮ್ಮಟೆ, ಕೊಂಬು. ಕಹಳೆ ಸಮೇತ ದೊಡ್ಡ ಮೆರವಣಿಗೆಯೇ ಸಾಲಿಟ್ಟು ಹೊರಟಿತು ! ಆದರೆ ಮುಂದಾಗುವುದನ್ನು ಬಲ್ಲವರಾರು?

ಮಂದಗತಿಯಲ್ಲಿ ಸಾಗಿ ಬರುತ್ತಿದ್ದ ದಳವಾಯಿಯ ಪರಿವಾರದ ಮೆರವಣಿಗೆ ಮಲ್ಲಯ್ಯನ ಕಾಯಕದ ಶ್ರೀಕ್ಷೇತ್ರವನ್ನು ತಲುಪುವ ಹೊತ್ತಿಗೆ ಅಂದಿನ ಕಾಯಕ ದಾಸೋಹ ತೀರಿತ್ತು. ಪುಣ್ಯಶಾಲಿಗಳಾಗಿದ್ದ ಭಕ್ತಾದಿಗಳು ಶರಣ ಮಲ್ಲಯ್ಯನ ಕಾಯಕದ ಮಹಾಪ್ರಸಾದದ ಮಧುರ ಸವಿಯನ್ನು ಸವಿದು ಹೊರಟು ಹೋಗಿದ್ದರು. ದೂರದಲ್ಲಿಯೇ ತನ್ನ ಪಾಳೆಯವನ್ನು ಬಿಟ್ಟು, ದಳವಾಯಿ ತನ್ನ ಬಂಧು ಬಳಗದವರೊ-ಡನೆ ಮಲ್ಲಯ್ಯನ ದರ್ಶನಕ್ಕೆಂದು ಬಂದರು. ಅಷ್ಟರಲ್ಲಿ ಗುರು ನಿರಂಜನ ಮೂರ್ತಿಗಳು ಶಿಷ್ಯ ಮಲ್ಲಯ್ಯನನ್ನು ಕರೆದು "ಅಯ್ಯ ! ಇಂದಿಗೆ ನಮ್ಮ ಕಾಯಕ ಮುಗಿ-ಯಿತು. ನಾವು ಬಂದ ಕಾರ್ಯ ತೀರಿತು. ಭೂಲೋಕಕ್ಕೆ ಬಂದು ನಾವು ನಿರ್ವಹಿಸ

ಬೇಕಾಗಿದ್ದ ಕರ್ತವ್ಯ ಮುಗಿಯಿತು. ಯಾವ ಕಂಬಳೀಶ್ವರರ ಬರುವಿಕೆಗಾಗಿ ನಾವು ಅನವರತ ಹಾರೈಸುತ್ತಿದ್ದೆವೋ, ಆ ಸೋದರರು ಶೀಘ್ರದಲ್ಲೇ ಆಗಮಿಸಿ ಭಕ್ತರನ್ನು ದ್ಧರಿಸುವರು. ನಮ್ಮ ಮಣಿಹ ಸಲ್ಲುವ ರೀತಿಯಲ್ಲಿ ಸಂದಿತು. ನಮ್ಮ ಕಾಯಕದ ಮಹಿಮೆ ಸಿದ್ಧಿಸಿತು. ಇನ್ನು ನಾವು ಶಿವ ಸನ್ನಿಧಿಯನ್ನು ಸೇರೋಣ'' ಎಂದು ನುಡಿಯುತ್ತಿರುವಂತೆಯೇ ಮಹಾಮಹಿಮ ಮಲ್ಲಯ್ಯನು ನಿಂತಜಾಗದಲ್ಲಿಯೇ ಭೂಮಿಯು ಬಾಯ್ದೆರೆಯಿತು ! ನೋಡು ನೋಡುತ್ತಿರುವಂತೆಯೇ ಶರಣ ಮಲ್ಲಯ್ಯ, ವೀರ ಮಲ್ಲಯ್ಯ, ಶೂರ ಮಲ್ಲಯ್ಯ, ಧೀರ ಮಲ್ಲಯ್ಯ, ಶಿವಯೋಗಿ ಮಲ್ಲಯ್ಯ ಭೂಮಿಯಲ್ಲಿ ಕರಗಿಹೋದ ! ಹುಲ್ಲೆ ಚರ್ಮದ ಮೇಲೆ ಮಂಡಿಸಿದ್ದ ಗುರು ರಂಜನ ಮೂರ್ತಿಯು ಕುಳಿತಿದ್ದ ಭಂಗಿಯಲ್ಲಿಯೇ ಮೇಲು ಮೇಲಕ್ಕೇರುತ್ತಾ ಆಕಾಶದತ್ತ ಹಾರುತ್ತ ಆಕಾಶದ ಬಯಲಲ್ಲಿ ನಿರ್ಬಯಲಾದರು.

ಅಪೂರ್ವವಾದ ಆದರೆ ಅದ್ಭುತವಾದ ಈ ದೃಶ್ಯಗಳನ್ನು ಕಣ್ಣಾರೆ ಕಂಡ ದಳವಾಯಿಗೆ ರೋಮಾಂಚನವಾಯಿತು ! ವಿದ್ಯುತ್ ಸಂಚಾರವಾದಂತಾಯಿತು ! ಬಾಯಿ ಬತ್ತಿತು ! ಅವಾಕ್ಕಾಗಿ ನಿಂತ ದಳವಾಯಿಗೆ ಅತೀವ ದುಃಖವಾಯಿತು. ''ಆಹಾ ಎಂಥ ಪ್ರಮಾದವಾಯಿತು ! ಹೃದಯದಲ್ಲಿ ಎಂಥೆಂಥದೋ ಆಕಾಂಕ್ಷೆಗಳನ್ನು ತುಂಬಿ-ಕೊಂಡು, ಕಾತರಹೃದಯಿಯಾಗಿ ಬಂದದ್ದು ನಿರರ್ಥಕ, ನಿಷ್ಫಲವಾಗಿಬಿಟ್ಟಿತು ! ಅಯ್ಯೋ ಶಿವನೇ ! ನನ್ನ ಅಳಿಲು ಸೇವೆಯನ್ನು ಆ ಮಹಾನ್ ಪುಣ್ಯಶಾಲಿಯ ಪಾದಾರವಿಂದಗಳಲ್ಲಿ ಸಲ್ಲಿಸಲು ಸಾಧ್ಯವಾಗಲಿಲ್ಲವಲ್ಲಾ'' ಎಂದು ಮುಂತಾಗಿ ಪರಿತಪಿಸುತ್ತಾ ಚಿಂತಾಕ್ರಾಂತನಾಗಿ, ಕೊನೆಗೆ ತಾನು ಸೇವೆಗೆಂದು ತಂದಿದ್ದ ಫಲ ಪುಷ್ಪಗಳನ್ನು ಆ ಶಿವಶರಣನು ಐಕ್ಯವಾದ ಸ್ಥಳದಲ್ಲಿಯೇ ಅಲಂಕರಿಸಿ, ಧೂಪಾರತಿಯನ್ನು ಬೆಳಗಿ. ಕರ್ಪೂರ ಹತ್ತಿಸಿ, ಉದ್ದಕ್ಕೆ ಅಡ್ಡ ಬಿದ್ದು ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸಿ, ವ್ಯಥಿತ ಹೃದಯನಾಗಿ ಹಿಂತಿರುಗಿದನು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? 'ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದ ನೀರೇ' ಎಂಬಂತೆ ಮಹದ್ದರ್ಶನಕ್ಕೂ ಪುಣ್ಯಬೇಕಲ್ಲ ! ಹುಟ್ಟು ಒಂದು ಆಕಸ್ಮಿಕ. ಹುಟ್ಟಿದ ಬದುಕಿನಲ್ಲಿ ಬರುವ ಮಹಾನ್ ಘಟನೆಗಳೂ ಆಕಸ್ಮಿಕ. ಅಂಥ ಅಕಸ್ಮಿಕಗಳನ್ನು ಕಾಣುವುದಕ್ಕೆ, ಕಂಡು ಪುನೀತನಾಗಿ ಬದುಕನ್ನು ಸಾರ್ಥಕಪಡಿಸಿಕೊಳ್ಳುವುದಕ್ಕೆ ಅದೃಷ್ಟ ಬೇಕಲ್ಲವೇ ? ಅಂಥ ಅದೃಷ್ಟವನ್ನು ಪಡೆದು ಹುಟ್ಟಲಿಲ್ಲವೆಂದು ಕಾಣುತ್ತದೆ ನಮ್ಮ ದಳವಾಯಿ !

ಮಿಂಚಿದ ಕಾರ್ಯದಿಂದ ವಂಚಿತನಾದ ದಳವಾಯಿಯ ಮನಸ್ಸು ದುಃಖದ ಮಡುವಾಯಿತು, ಚಿಂತೆಯ ಆಗರವಾಯಿತು. ಕ್ಷಣ ಕ್ಷಣಕ್ಕೂ ದುಃಖ ಹೆಚ್ಚಾಗಿ ಮನಸ್ಸು ಕ್ಷೋಭೆಗೊಂಡಿತು. ಅನ್ನ, ನೀರು, ನಿದ್ರೆ, ಆಹಾರ ಏನೊಂದೂ ಬೇಡವಾಯಿತು. ಅದೇ ಚಿಂತೆಯಲ್ಲಿ ಹಾಸಿಗೆ ಹಿಡಿದ. ಹಾಸಿಗೆಯಲ್ಲಿ ಮಲಗಿದ್ದಾಗ ನಿದ್ದೆಯಲ್ಲಿ ಒಂದು ಕನಸು ಬಿತ್ತು. ಕನಸಿನಲ್ಲಿ ಆ ದಿವಸ ತಾನು ಶ್ರೀಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಕಂಡ ಗುರು ನಿರಂಜನ ಮೂರ್ತಿ, ಶಿಷ್ಯ ಮಲ್ಲಯ್ಯ ಇಬ್ಬರು ಪುಣ್ಯಾ

ತ್ಮರೂ ಕಾಣಿಸಿಕೊಂಡು " ಅಪ್ಪಾ ! ಇದಕ್ಕಾಗಿ ನೀನೇನೂ ಚಿಂತಿಸಬೇಡ. ನಮ್ಮಿ-ಬ್ಬರ ಇಹಲೋಕದ ವಂಣಿಹ ಮುಗಿಯುವ ಹೊತ್ತಿಗೆ ಸರಿಯಾಗಿ ನೀನು ಬಂದೆ. ಅದೂ ನಿನ್ನ ಪುಣ್ಯವೇ ! ಹಾಗಾಗಬೇಕೆಂಬುದು ಭಗವಂತನ ನಿಯಮ ! ಅದನ್ನು ಮೀರಲು ಯಾರಿಗೆ ತಾನೆ ಸಾಧ್ಯ ? ಕ್ಷೋಭೆಗೊಳಗಾಗಿ ಕುದಿಯುತ್ತಿರುವ ನಿನ್ನ ಮನಸ್ಸಿನ ಈ ತಳಮಳ, ಈ ಚಿಂತೆ ಶಾಂತವಾಗಬೇಕಾದರೆ ನಿನ್ನ ಜ್ಞಾಪಕಾರ್ಥವಾಗಿ ಆ ಸ್ಥಳದಲ್ಲಿ ಒಂದಂಕಣದ ಗುಡಿಯನ್ನು ಕಟ್ಟಿಸಿ ಅಲ್ಲಿ ಒಂದು ಬಸವ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸು ! ಆ ಮೂಲಕ ನಿನ್ನ ಹೆಸರು ಶಾಶ್ವತವಾಗಲಿ ! ಜಗದೀಶ್ವರನು ನಿನಗೆ ಒಳ್ಳೆಯದು ಮಾಡಲಿ" ಎಂದು ಕೈ ನೀಡಿ ಹರಸಿದಂತಾಯ್ತು.

ಕೂಡಲೇ ದಳವಾಯಿಯು ಹಾಸಿಗೆಯಿಂದೆದ್ದು ಸಂತೋಷಭರಿತನಾಗಿ "ಆಗಲಿ ! ಈ ಕಾರ್ಯವನ್ನು ನಾನು ಶಿರಸಾವಹಿಸಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ಮಾಡುವೆನು. ಇಂದಿನಿಂದಲೇ ಆ ಪುಣ್ಯ ಕಾರ್ಯವನ್ನು ಪ್ರಾರಂಭಿಸುವೆನು. ಆದಷ್ಟು ಬೇಗ ಗುಡಿ ಯನ್ನು ಕಟ್ಟಿಸಿ ಆ ಮಂಗಲ ಮಣಿಹವನ್ನು ಪೂರೈಸುವೆನು ! ಇಂದಿಗೆ ನಾನು ಧನ್ಯ ನಾದೆ ! ನಾನು ಧನ್ಯನಾದೆ ! ಎಂದು ಹೇಳುತ್ತಾ ಕಂಣಿದಾಡಿದನು. ಬೆಟ್ಟದಂತೆ ಮುಸುಕಿ ಬಂದಿದ್ದ ಚಿಂತೆ ಮಂಜಿನಂತೆ ಕರಗಿಹೋಯಿತು.

ಸಂಕಲ್ಪ ಮಾಡಿದ್ದೇ ತಡ, ಒಂದಂಕಣದ ಬಸವನ ಗುಡಿಯನ್ನು ಕಟ್ಟಿಸಿಯೇ ಬಿಟ್ಟನು. ಇಷ್ಟಪ್ರಕಾರ ಅನ್ನದಾನ ವಸ್ತ್ರದಾನಗಳನ್ನು ಮಾಡಿ ದಳವಾಯಿ ಸಂತೃಪ್ತ ನಾದ. ಅಂದಿನಿಂದ ಅದು ಕಾಯಕದ ಮಲ್ಲಯ್ಯನ ನಿಜೈಕ್ಯ ಸಮಾಧಿಯೆಂದು ಪ್ರಸಿದ್ಧ ವಾಯಿತು. ಸಹಸ್ರಾರು ಭಕ್ತರನ್ನು ತನ್ನತ್ತ ಆಕರ್ಷಿಸಿತು. ಬಹುಕಾಲ ಸತ್ಯ ಶುದ್ಧ ಕಾಯಕವನ್ನು ಮಾಡುತ್ತಾ ಭೂಕೈಲಾಸವನ್ನಾಗಿಸಿದ ಶರಣ ಮಲ್ಲಯ್ಯನಿದ್ದ ಮೂಲೆಯೇ ಮಲ್ಲಯ್ಯನ ಮೂಲೆ ! ಇದೇ ಆದಿ ಮಲ್ಲಯ್ಯನ ಮೂಲೆ ! ಈ ಮಹಿಮಾ ಕ್ಷೇತ್ರವೇ ಮಲ್ಲನ ಮೂಲೆ ! ಈ ಅವಿಮುಕ್ತ ಕ್ಷೇತ್ರವೇ ಮಲ್ಲನ ಮೂಲೆ ಎಂದು ಪ್ರಖ್ಯಾತ ವಾಗಿದೆ.

ಆದರೆ ಅಂದು ದಳವಾಯಿ ಕಟ್ಟಿಸಿದ ಒಂದಂಕಣದ ಗುಡಿ ಇಂದು ಒಂಭತ್ತಂಕ ಣದ ದೇವಾಲಯವಾಗಿದೆ. ಇಲ್ಲಿನ ಬಸವಣ್ಣನಿಗೆ ಸಹಸ್ರಾರು ಜನ ಭಕ್ತರಿದ್ದಾರೆ. ಅಂದಿನ ಶಿವಾರ್ಚಕರ ವಂಶದವರೇ ಇಂದಿಗೂ ಸರದಿ ಪ್ರಕಾರ ನಿತ್ಯ ಪೂಜೆಯನ್ನು ಸಲ್ಲಿ ಸುತ್ತಿದ್ದಾರೆ. ಅಂದು ಗೊಂಡಾರಣ್ಯವಾಗಿದ್ದ ಈ ಸುಕ್ಷೇತ್ರ, ಇಂದು ರಾಜಮಾರ್ಗ, ರೈಲುಮಾರ್ಗಗಳಿಂದ ಕಂಗೊಳಿಸುತ್ತ ನಾಗರಿಕ ಪ್ರಪಂಚದ ಜಾಗೃತ ಶ್ರೀಕ್ಷೇತ್ರವಾಗಿ ಶೋಭಿಸುತ್ತಿದೆ. ಜೊತೆಗೆ ಕೈಗಾರಿಕಾ ಕ್ಷೇತ್ರವಾಗಿ ಪ್ರಗತಿ ಪಥದಲ್ಲಿ ಮುಂದುವರಿಯು ತ್ತಿದೆ. ಆ ಬಸವನ ಗುಡಿಯು ಶ್ರೀಕ್ಷೇತ್ರ ಮಲ್ಲನ ಮೂಲೆ ಮಠದ ದಕ್ಷಿಣದ ಕಡೆಯ ಲ್ಲಿದ್ದು ಭಕ್ತಾದಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ. ಇಂಥ ಸುಕ್ಷೇತ್ರದ ಶ್ರೀಗುರು ಪರಂ ಪರೆಯ ಗದ್ದುಗೆಗಳ ಕಲಶಾರಾಧನ ಮಹೋತ್ಸವನ್ನು ನಡೆಸುತ್ತಿರುವುದು ಸಾರ್ಥಕ ವಾಗಿದೆ.

ಆದಿ ಕಂಬಳೀಶ್ವರರ ದರ್ಶನ ಧ್ವನಿ

ಶ್ರೀ ಹೆಜ್ಜಿಗೆ ಲಿಂಗಣ್ಣ

ಬಾರಯ್ಯ ಗುರುಭಕ್ತವರೇಣ್ಯನೆ ಬಾ
ಎನ್ನೊಡನೆ ಬಾರಯ್ಯ ನೀ ಬಯಸಿದ ಅವಿ-
ಮುಕ್ತ ಕ್ಷೇತ್ರವ ತೋರುವೆನು ಬಾರಯ್ಯ
ಎನ್ನೊಡನೆ ನಡೆದು ಬಾ ಗರಳಪುರಿಯಿಂ
ಇಹುದು ಬಹು ಸನಿಹದಲೆ ಈ ಕ್ಷೇತ್ರ
ಒಂದೆ ಹರದಾರಿ ।

ನಡೆದು ಬಾ ಎನ್ನೊಡನೆ ಎಡಕೆ
ಇಹಳದೋ ನೋಡು ಓ ಮಲೆಯ ಕಪಿಲೆಯು
ನೋಡೆನಿತು ಬಳುಕಿ ಬಾಗುತ್ತ ಹರಿವಳವಳಂ
ನೋಡಿಲ್ಲಿ ಬಾಗಿಹಳು ಪೂರ್ವದಿಂ ದಕ್ಷಿಣಕೆ
ಎದ್ದ ಬಂಡೆಗಳ ಮೇಲೆ ಮುದ್ದಾಗಿ ಹರಿವಳಿವಳು-
ದ್ದಂಡ ಶರೀರಿಯಾಗಿಹಳು ! ಬಂಡೆಗಳ
ದುಮ್ಮಿಕ್ಕಿ ಮಡುವಾಗಿ ಹರಿವಳು
ಮುಂದೆ ಬಾಗಿದೆಡೆಯೊಳಗೊಂದು ಮೂಲೆಯನೆ
ಮಾಡಿಹಳು ಕೇಳಿವಳ ಮಂಜುಳನಿನಾದದಿಂಪ
ಓಂಕಾರ ನಾದಮಯ ಶರೀರಿ, ಇವಳಂದ
ಚಂದವ ಬಣ್ಣಿಸಲಳವೇ ಇಕ್ಕೆಲದ
ಮರ ಮಂಡಿಯನೆ ತನ್ನ ಚಲಿಸುವ
ಮುಕುರದಲಿ ನೋಡೆನಿತು
ಬಿಂಬಿಸುತ ಗಮಿಸುವಳಂ ಬಂಡೆಗಳ
ಮೇಲೊಮ್ಮೆ ಮಡುವಿನಲಿನ್ನೊಮ್ಮೆ
ಅಂಡಲೆವ ಕಪಿಲೆಯಖಂಡ ಚೇತನವ ನೋಡ !

ಇದೆ ಇಲ್ಲೆ ಸಿಕ್ಕಿತಹ ನೀ ಬಯಸಿದ
ಕ್ಷೇತ್ರ ! ಮಲ್ಲನ ಮೂಲೆಯ ಮಹಾಕ್ಷೇತ್ರ !
ಮೊದಲಲಿ ಕಾಣ್ಬುದದೋ ಬಸವನಗುಡಿ ಎಂಬೊಂದು

ತಾಣ ! ಇದುವೆ ಹಿಂದೆ ಮಲ್ಲಯ್ಯನೆಂಬವನ
ಕಾಯಕದ ಪವಿತ್ರ ತಾಣ ! ಈ ಗುಂಡಿಯೆ ಇವನ
ದಿವ್ಯ ಭವ್ಯ ಗದ್ದುಗೆ.

ಬಲಕೆ ತಿರುಗಿ ನೋಡದೊ ಗುಡ್ಡ !
ಇದುವೆ ಪಂಚಲಿಂಗನ ಗುಡ್ಡ ! ಇಲ್ಲಿಹವು
ಪಂಚಲಿಂಗನ ಗುಡಿಗಳು ! ದಳವಾಯಿ
ಇವುಗಳನೆ ಕಟ್ಟಿಸಿದನೆಂಬರೈ ! ಪುಣ್ಯಾತ್ಮನಿವ-
ನೆಂಬರು ಜನ !

ಬೆಟ್ಟವಿದು ಬಲು ಬೋಳು ಬೋಳು ಇಂದು
ಅಂದು ಕಾಡಾಗಿ ಗಿಡ ಗೆಂಟೆಗಳಿಂದಿಡಿದಿತ್ತು !
ದಟ್ಟವಹ ಕಾಡಾಗಿ ಖಗಮೃಗದ ಬೀಡಾಗಿ
ಅಟ್ಟಹಾಸದಿ ಅಂದು ರಾರಾಜಿಸುತ್ತಿತ್ತದುವೆ !

ಮತ್ತಿದೆ ನೋಡ ಮಲ್ಲನ ಮೂಲೆಯ ಮಠ !
ಕಂಬಳೀಶರ ದಿವ್ಯಲೀಲಾತಾಣ ! ಯೋಗ
ಸಮನ್ವಿತರ ಆಧ್ಯಾತ್ಮ ಮಲ್ಲರ ತಾಣ !
ಶಿವಸಮಯವನೆ ಸಾರಿದ ಮಠ ಪುಣ್ಯಜೀವಿಗಳುದಿಸಿದ
ಪರಮಪವಿತ್ರ ತಾಣ ! ಇಂದಿಲ್ಲಿ ಕಾಣ್ಬುವೊ
ಕಂಗೊಳಿಪ ಗದ್ದುಗೆಗಳ ಬರಿಗುಂಪು.
ಇದೆ ನೋಡು ಆದಿ ಕಂಬಳೀಶ್ವರ ಆದಿಗದ್ದುಗೆ
ಮತ್ತಿದೆ ಮರಿಕಂಬಳೀಶ್ವರರ ಕಿರಿದುಗದ್ದುಗೆ !
ಪಕ್ಕದಲೆ ಮೆರೆವ ಪುಟ್ಟಗದ್ದುಗೆಯೆ ಕಾರುಣ್ಯಮಯ
ಗುರು ಸಿದ್ಧಲಿಂಗರದು !

ಪಕ್ಕದಲೆ ಇಹುದು ಹಾಗದ ಕಾಯಕದ
ಮಲ್ಲಯ್ಯನ ನಿಜಗದ್ದುಗೆ !
ಇವರೆಲ್ಲ ಇಲ್ಲಿ ಲಿಂಗವಾಗಿಹರಯ್ಯ !
ಬಲ್ಲೆಯ ಇವರಾರು ಎಂಬುದನು ! ಇವರೆತ್ತಣಿಂ
ಬಂದವರೆಂಬರಿವು ಇಹುದೆ ನಿನಗೆ ?
ಹಾ ! ಇಲ್ಲವೆಂಬೆಯು ! ಅನಿತಾದೊಡಂ
ನೀನೆನ್ನೊಡನೆ ಹಾರುವೆಯ ! ಭಾವಭೃಂಗದ
ಬೆನ್ನೇರಿ ಬರುವೆಯ ! ಮುನ್ನೂರು ಬರಿಸದಲೆ

ಬಾಳಿದ್ದ ಮಲ್ಲಯ್ಯ ನಿರಂಜನರ ಕಾಂಬೊಡೆ
ಎನ್ನಮಲ ಭಾವದೊಡೆ ನೀ ಬೆಳೆದು ಬಾ !
ಗುರು ನಿರಂಜನರ ಕಾಂಬ ಭಕ್ತಿದುಂಬಿದ ಕಣ್ಣುಂತಾ !

ಹೋ! ನೋಡಿಲ್ಲೊಂದು ಪರ್ಣಕುಟಿ !
ಕಪಿಲೆ ತಡಿಯೊಳಂ ಏಕಾಂಗಿಯಾಗಿಹುದು !
ನಿರ್ಜನದ ಕಾಡಿನೊಳೆ ಗುರುಶಿಷ್ಯರೀರ್ವರೆ
ಮರೆದು ಯೋಗದಲಿ ನಿಂದಿಹರು !
ನೋಡದೋ ಪರ್ಣಕುಟಿ ಮುಂದೆ ಕಂಬಳಿ ಗದ್ದುಗೆಯ
ಮೇಲೆ ಪವಡಿಸಿಹುದೊಂದು ತೇಜಃ ಪುಂಜ ಕಾಯ !
ನೋಡದೊ ಮುಖ ಕಮಲ ತೇಜೋಮಯವಾಗಿಪ್ಪ
ಭಾವವನು ! ಭಸಿತವಿಡಿಸಿಹ ಹುಬ್ಬು ಹಣೆಯಗ್ಗಳಿಕೆಯ
ನೀ ನೋಡ ! ಕರ್ಣದಲ್ಲಿ ರುದ್ರಾಕ್ಷಿ ! ಕೊರಳಲ್ಲಿ
ಮೆರೆವ ರುದ್ರಾಕ್ಷಿಸರ ! ಕೈಯೊಳು ರಾಜಪವು
ನೋಡು ರುದ್ರಾಕ್ಷಿಕಂಕಣಗಳು ! ಕಾವಿಕಪಿನಿಯ
ಉಟ್ಟು ಕಂಬಳಿ ಗೊಪ್ಪೆಯನೆ ತೊಟ್ಟು ಕಂಗೊಳಿಪ
ಇವನೆ ನೋಡ ನಿರಂಜನ ಮಹಾ ಮೂರುತಿ ! ಇವನ
ಬಳಿ ಪವಡಿಸಿಹ ಮತ್ತೋರ್ವ ವ್ಯಕ್ತಿ ಇವನನೆ
ನೋಡ ! ಅಬ್ಬಬ್ಬ ಇವನ ಮೀಸೆ ಬಲಂ ಪೊದರು ಪೊದರು
ಭಯಂಕರನೆಂಬೆಯ ! ಹೋ ಇವನ
ಅಜಾನುಬಾಹುವ ಕಂಡಳುಕಿದೆಯ ! ಹೆದರದಿರು
ಇವ ಹಿಡಿದ ದೊಡ್ಡ ದೊಣ್ಣೆಯನೆ ಕಂಡು !
ಮೇರುಸಮ ಕಾಯನಿದ್ದೊಡೆಯುಮನಿತು
ಸೌಮ್ಯವು ಇವನ ಮುಖಭಾವ ಕಾಣ ! ಇವನೆ
ಹಾಗದ ಕಾಯಕದ ಮಲ್ಲಯ್ಯ ! ಇವನೆ ನಿತ್ಯ
ನಿರಂಜನರ ಪರಮಶಿಷ್ಯ !

ಓ ! ಇವರಾರೆಂಬೆಯ !
ಇವರಾರೆಂಬುದಾರಿಗಂ ತಿಳಿಯದಯ್ಯಾ !
ಇವರತ್ತಣಿಂ ಉತ್ತರದ ದೆಸೆಯಿಂ ಬಂದವರು
ಎಂಬುವರು ಇತ್ತಣದ ಜನಜಂಗುಳಿ !
ಇವರು ಬಸವಕಲ್ಯಾಣದಿಂದೈತಂದ ಜಂಗ-
ಮರಂತೆ ! ಅವರಾರಾದೊಡೇನೆಮಗೆ

ಅವರ ನಡೆನುಡಿಯೆ ಎಮಗೆ ದಾರಿದೀಪವೈಸೆ !
ಅಹಾ ! ಏನೆಂಬೆ ? ಇವರ ಪಂಥವಾವು
ದೆಂಬೆಯು !

ಇವರು ಶರಣ ಪಂಥಿಗಳು ಬಸವಣ್ಣ
ಬೆಸಸಿ ಬಾಳಿದ ಪಂಥವಿವರದು ! ಇಷ್ಟಲಿಂಗೋಪಾಸ-
ಕರು ! ಚೆನ್ನ ಬಸವಣ್ಣ ಪರಿಷ್ಕರಿಸಿ
ನಿರೂಪಿಸಿದ ಷಟ್ಸ್ಥಳ ಬ್ರಹ್ಮಿಗಳು.

ಓಹೋ ! ಷಟ್ಸ್ಥಳವೆಂದರೆ ನಿನಗೆ ತಿಳಿಯದೆ !
ಹಾಗಾದೊಡೆ ಕೇಳು ! ವೀರಶೈವದ
ಪರಮ ಸೋಪಾನವೇ ಈ ಆರು ಸ್ಥಳಗಳು
ಭಕ್ತಿ ಮೊದಲ ಸ್ಥಳ, ಮಹೇಶ್ವರ ಎರಡನೆಯದು
ಪ್ರಸಾದಿ ಮೂರನೆಯದು, ನಾಲ್ಕನೆಯದು
ಪ್ರಾಣಲಿಂಗಿಯದು, ಐದನೆಯದೆ ಶರಣಸ್ಥಳ
ಮತ್ತೆ ಆರನೆಯದೇ ಐಕ್ಯ ಸ್ಥಳ ! ಸ್ಥಳವೆಂಬುದೆ
ಬ್ರಹ್ಮಪದಕ್ಕೆ ಪರ್ಯಾಯ ! ಪತಂಜಲಿ
ಮಹರ್ಷಿಯ ಅಷ್ಟಸ್ಥಳಗಳನ್ನು
ಎಮ್ಮವರು ಆರುಸ್ಥಳದೊಳೆ ಅಡಕಗೊಳಿಸಿ
ಇಷ್ಟಲಿಂಗೋಪಾಸನೆ ಮುಖೇನ ಇವುಗಳ ಸಿದ್ಧಿಯನ್ನು
ಪಡೆವ ಹಾದಿಯನ್ನು ಅನುಭಾವದಿಂದ ಹಿಡಿದು
ಇಟ್ಟಿರುವುದೊಂದು ಅಧ್ಯಾತ್ಮಸಾಧನಾ-
ತಂತ್ರದೊಂದು ಮಹಾಸಾಧನೆ !

ಅಹುದಹುದು ! ಈ ಆರುಸ್ಥಳವನ್ನು
ಮೆಟ್ಟಲು ಮೆಟ್ಟಲಾಗಿ ಹತ್ತಿ ತುತ್ತತುದಿಯನ್ನು
ಸೇರಬಹುದು ! ಇಲ್ಲವೆ ಒಂದೇ ಸ್ಥಳದಲ್ಲಿ ನಿಂತು
ಉಳಿದೈದನ್ನು ಲಿಂಗಾನುಭಾವದಿಂದ ಸಾಧಿಸ
ಬಹುದು !

ಹೋ ! ಇದೆಲ್ಲ ಬಹು ಕಷ್ಟವೆಂಬೆಯ !
ಅಹುದಹುದು ! ನೀನೆಂಬ ಮಾತುನಿಜ !
ಇಷ್ಟಲಿಂಗದ ಹೊಲಬನರಿತಲ್ಲದೆ ಈ
ಸ್ಥಳವೆಂಬುದೆಲ್ಲ ಬರಿಮಾತು !

ನಿನ್ನಲ್ಲಿಹ ಚಿತ್ಕಳಾ ಶಕ್ತಿಯನಂ
ಗುರುಂ ತನ್ನ ಹಸ್ತಮಸ್ತಕ ಸಂಯೋಗದಿಂದ
ಮಂಥಿಸಿ ಬಂದ ಸಮಬೆಳಗಿಗೆ
ಇಷ್ಟಲಿಂಗದ ರೂಹು ಗೊಟ್ಟು ನಿನ್ನ ಹಸ್ತಕ್ಕೆ
ಚಂಳುಕಾಗಿಸಿದಾಗ ಮಾತ್ರ ಎಲ್ಲ ಸ್ಥಳಗಳ
ಆಳದ ಅರಿವಾಗುಂತ್ತದೆ ! ಗುರುವಿದನಂ
ನಿನಗೆ ತ್ರಿವಿಧ ದೀಕ್ಷೆಯಲಿ ತಿಳಿಯಂ ಹೇಳುವನಂ !
ಓ ಎಮ್ಮ ಚಿತ್ತಗತಿ ಅಡ್ಡದಾರಿ ಹಿಡಿಯಿತು ಎಂಬೆಯು
ಅಲ್ತಲ್ತು ಅಡ್ಡದಾರಿ ಯಿದಲ್ತು ಮೇಣಿದು
ಊಟಕ್ಕೆ ಉಪ್ಪಿನಕಾಯಿಂ ಕಣಾ !

ಹಾ ! ನೋಡಲ್ಲಿ ! ಮಲ್ಲಯ್ಯ ಪರ್ಣಶಾಲೆ
ಯಿಂದೆದ್ದು ಬಹಿರ್ದೆಸೆಗೆ ನಡೆದಿಹನಂ !
ತಂಗಾಳಿ ಬೀಸಿ ಬರೆ ಕಾಡೆಲ್ಲ ಮರಮರನೆ
ಮೈ ಮುರಿವುತಿದೆ ನೋಡ ! ಝುಳು ಝುಳನೆ
ಹರಿವ ನದಿ ಮುಂಜಾನೆಯ ಇಬ್ಬನಿಯು
ಹೀರಂತಿದೆ ಕಾಣ ! ಪೂರ್ವದಿಗಂಗನೆಯ
ಕೆಂಗಣ್ಣ ಬಿಡಿಸುವಡೆ ಕಾಡ ಖಗಕುಲವೆಲ್ಲ
ಉದಯರಾಗವ ಹಾಡುತಿದೆ ನೋಡ !

ಹಾ ! ಬಂದ ಮಲ್ಲಯ್ಯ ! ಬೆಳಗಿನ
ಕರ್ಮಗಳೆಲ್ಲವನಂ ಮುಗಿಸಿ ತನ್ನ ಕಾಯಕಕೆ
ಕೋಲ ಹಿಡಿದು ನಿಂತ ದಾರಿಯಲಿ ! ಇವನ ಕಾಯಕ
ಒಂದಂ ಹಾಗ ! ಆರಿಂದಲಾದರೂ ಸರಿ ಇವಗೊಂದು
ಹಾಗ ಹಣದ ಕಾಯಕ ಆಗಬೇಕು !

ಹಣಕೊಡದ ದಾರಿಹೋಕನಿಗೆ ದೊಣ್ಣೆ
ಎತ್ತುತ್ತಿಹನೆಂದು ಹೆದರದಿರು ಅವನು
ಅಂತೆ ಜಿಪುಣರ ಹೆದರಿಸುವನು ಹಾಗವನು
ಕೊಡಲೆಂದುಂ ! ಕಠಿಣತೆಯಂ ಬರಿ ತೋರಿಕೆಯೆಂದು !

ಹಾ ! ಕೊಟ್ಟ ನೋಡಲ್ಲಿ ಹಾಗವೊಂದ ದಾರಿಗನು
ಮುಂದದಿ ! ಮಲ್ಲಯ್ಯ ಕುಟಿಗೈದಿದನು
ತನ್ನ ಗುರುವಿಗೊಂದಿಸಲು ಮುಂದಣ ಗೆಯ್ಮೆಗೆ
ಆಶೀರ್ವಾದವ ಪಡೆಯೆ !

ಉದ್ದಂಡ ಮಲ್ಲಯ್ಯ ಬಿದ್ದಿಹನು ಗುರು
ಏನಡಿ ! ನೋಡದದೋ ಗುರು ಮೈದಡವಿ
ಹರಸುತಿಹ ತುಂಬು ಹೃದಯಂದಿ !

ಮಲ್ಲಯ್ಯ ಹೊರಬಂದ ಗರಳಪುರಿದಾರಿ
ಹಿಡಿದು ಹೊರಟನೋ ಬುರುಬುರನೆ ! ಹರದ
ನೊಬ್ಬನ ಅಂಗಡಿಯಲಿ ಕೊಂಡ ಅರ್ಧ ಹಾಗಕ್ಕೆ ರಾಗಿಯ ಮೇಣರ್ಧ
ಹಾಗಕೆ ಹುರುಳಿಯ ! ತಿರುಗಿ ಬಂದನೋ ಗುರುವಿದ್ದೆಡೆಗೆ
ಕಾಯಿಸಿದ ರಾಗಿಯಿಂ ಅಂಬಲಿಯ, ಬೇಯಿಸಿದ
ಹುರುಳಿಯನು ಪಾತ್ರೆಯಲಿ ! ಗುರುವಿಗೆಡೆ ಮಾಡಿದನಿದನೆ

ಕೇಳದೋ ಮಲ್ಲಯ್ಯ ಕೂಗಿ ಕರೆವನು
ಭಕುತರನು ಅಂಬಲಿಹುರುಳಿ ಪ್ರಸಾದವನುಂಬುದಕೆ
ಬಂದ ಭಕುತರಿಗಿಂತು ಒರೆವನು ; ಉಣ್ಣಿರೋ
ಅಂಬಲಿ ಹುರುಳಿಯನು ಗುರುವ ಮನದಿ
ನೆನೆವುತ ! ನೀವ್ ಬಯಸಿದ ಭಕ್ಷ್ಯದಭಿರುಚಿ
ನಿಮಗಪ್ಪುದು ಇದು ತಪ್ಪದು

ಬಂದ ಭಕ್ತರು ಎಷ್ಟಿದ್ದೊಡು ಪ್ರಸಾದ ಕುಗ್ಗದು !
ಅಲ್ಲದೆ ಭಕ್ತಬಯಸಿದ ಭಕ್ಷ್ಯ ಭೋಜ್ಯದ ಸವಿ
ಅಂಬಲಿಯಲಿ ಉಣಸಿಗುವ ಅದ್ಭುತವ ಕಂಡು
ಭಕ್ತರು ಹೆಚ್ಚುವರು ದಿನ ದಿನಕ್ಕೆ ! ಅಂಬಲಿ
ಹುರುಳಿ ತಿಂದು ತೃಪ್ತಿ ಪಡೆದು ಗುರುವಿ–
ಗೆರಗಿ ಹೋಗುವರು ನಿಲದೆ !

ಹಾ ! ಏನೆಂದೆ ! ಬರಿದೆ ಉಂಡು
ಹೋಗುವರೆಂಬೆಯ !

ಅಲ್ತಲ್ತು ! ಉಂಡಭಕ್ತರು ದುಂಡಾಗಿ
ಕುಳ್ಳುವರು ಗುರು ನಿರಂಜನನ ಸುತ್ತ !
ಮೇಣವನ ವಚನ ಪ್ರವಚನ ಕೇಳ್ದು
ಮನದ ಕಾಳಿಕೆಯ ಕಳೆದು ಹೋಹರು ! ಕೆಲರು
ದೀಕ್ಷೆಯ ಹೊಂದಿ ಇಷ್ಟಲಿಂಗವನು ಹೊಂದುವರು !
ಇಂತು ಭಕ್ತರುಮಲ್ಲಿ ಅಷ್ಟಾವರಣ ಪಂಚಾಚಾರ
ಷಟ್ಸ್ಥಳದಮೃತವನ್ನುಂಡು ಹೋಹರು ಕಣಾ !

ನಿರಂತರ ಹರಿವ ಕಪಿಲೆಯಂತೆ ನಿರಂಜನರ
ವಚನಾಮೃತಧಾರೆ ಹರಿಹರಿದು ಜನಜಂಗುಳಿಯ
ಮನದ ಕೊಳೆ ತೊಳೆದು ಅವರ ಮನಸ್ಸನ್ನು
ಇಹದಿಂದ ಪರಕೆ ತಿರುಗಿಸುತ್ತಿಹುದು ಬಲುರಮ್ಯವಯ್ಯ
ಇಂತು ಮಲ್ಲಯ್ಯನವಿುತ ಕಾಯಕ ನಡೆದಿತ್ತು
ಐದು ಹತ್ತು ಬರಿಸ ಪರಿಯಂತರ !

ಕೊನೆಗೊಂದು ದಿನ ನೋಡದೊ ದಳವಾಯಿ
ಬರುತಿಹನು ಠೀವಿಯಲಿ ಕುದುರೆ ಸಾರೋಟಿನಲಿ !
ಮಲ್ಲಯ್ಯಗಿವನೆ ಮೊದಲು ಸಿಕ್ಕಿದ ದಾರಿಗ !
ದಿನದಂತೆ ಮಲ್ಲಯ್ಯ ಕೋಲನೂರಿ ಗಾಡಿ ಮುಂದೆ
ನಿಂತ ನಿಲುವಿಂಗೆ ಹೆದರಿದನೆ ದಳವಾಯಿ !
ದಳವಾಯಿ ಕೇಳಿದನು, ಏನೆಂದು,
ಗಾಡಿ ನಿಲ್ಲಿಸಿದುದೇಕೆಂದು ?

ಅದಕೆ ಪಡಿ ನುಡಿವುತಿಹನು ಮಲ್ಲಯ್ಯ
ಸೌಮ್ಯದಲಿಂತು : "ಅಂಬಲಿ ಹುರುಳಿ
ಕಾಯಕಕೆ ಬೇಕೆನಗೆ ಹಾಗದ ಹಣ"

ದಳವಾಯಿಯ ಮುಖ ಚಿಕ್ಕದಾದುದ ಕಾಣು
ತನ್ನೆಲ್ಲ ಜೇಬುಗಳ ಹುಡುಕಿದರು ಹಾಗದ
ಹಣವಿಲ್ಲದಿರೆ ಏನು ಮಾಡಲು ತಿಳಿಯದೆ ಹಂಬಲಿಸಿದಾ
ದಳವಾಯಿ ! ಕೊನೆಗೆ ಕೊಟ್ಟನು ತನ್ನ
ವಜ್ರದುಂಗುರವ ! ಅದ ಮಾರಿ ಹಣವ ಹೊಂದೆಂದನವ !

ವಜ್ರದುಂಗುರವ ಮಲ್ಲಯ್ಯ ಕೊಂಡೆಯ್ದನದೋ ಗರಳಪುರಿ
ಹರದನಂಗಡಿಗೆ ಹರಿದನಿದ ಕಂಡು
ಬೆಚ್ಚಿದನು ನೋಡು ಹಣವೆಷ್ಟು ಬೇಕೆನಲು
ಒಂದೆ ಹಾಗ ಸಾಕೆಂದ ಸತ್ಯಕಾಯಕದ
ನಿತ್ಯಾತ್ಮ ಮಲ್ಲಯ್ಯ ! ಹರದನದೋ
ಅಚ್ಚರಿಯಿಂ ಬಾಯ್ಬಿಟ್ಟು ಹುಬ್ಬೇರಿಸಿ
ಮಲ್ಲಯ್ಯನನೆ ಕೆಕ್ಕರಿಸಿ ನೋಡುವ ಪರಿ ನೋಡ !
ಹಾಗದ ಹಣಕೊಟ್ಟು ಕೊಂಡು ತಂದನಂ
ಮಲ್ಲಯ್ಯ ರಾಗಿ ಹುರುಳಿಯನಂ ! ಇಂದು

ನೋಡಯ್ಯ ಭಕ್ತವರ ಮಲ್ಲಯ್ಯಗೆ ಎಲ್ಲಿಲ್ಲದ
ಸಂತಸ ಅವನ ಮುಖಮುಲ್ಲಾಸದಿ ಅರಳಿ
ನಿಂತಿಹ ಮಾಟವ ನೋಡಯ್ಯ ಅಂಬಲಿಯ
ಕಾಯಕದೆ ಮನ ಇಂಬುಗೊಂಡಿದೆ ನೋಡ
ಕುಟೀರದಿಂದ ಹೊರಬಂದು ಕುಳಿತ ನಿರಂಜನ
ಗುರುವನೆ ಪರಿಭಾವಿಸದವನಂತಿದ್ದಾನೆ !

ಭಕ್ತವರ ಏನೆಂಬೆ ? ಮಲ್ಲಯ್ಯಂಗೆ
ಮಮಕಾರದಹಂಕಾರ ಮುತ್ತಿ ಮುಸುಗಿತು ಎಂದೆಂ
ಬೆಯ ? ಅಲ್ಲವ್ವೆ ಅಲ್ಲ ! ಕಾಯಕ ಪ್ರಾಣ
ಮಲ್ಲಯ್ಯಂಗೆಲ್ಲಿಯ ಮಮಕಾರ, ಎಲ್ಲಿಯ
ಅಹಂಕಾರ ! ನಿಜ ಕಾಯಕದಿ ನಿಂದವಗೆ ಸಕಲ
ಕರಣಗಳ ಗೆಲಿದು ಬಾಳುವ, ಭವವನುದಾತ್ತೀಕರಿಸಿ
ನೋಡುವ ಸೂಕ್ಷ್ಮ ಭಾವವಳವಡುವುದೈಸೆ
ಅಲ್ಲದೆ :

" ಕಾಯಕದಲ್ಲಿ ನಿರತನಾದರೆ
ಗುರುದರುಶನವಾದರು ಮರೆಯಬೇಕು ;
ಲಿಂಗ ಪೂಜೆಯಾದರು ಮರೆಯಬೇಕು ;
ಜಂಗಮ ಮುಂದಿದ್ದರೂ ಹಂಗ, ಹರಿಯಬೇಕು ;
ಕಾಯಕವೇ ಕೈಲಾಸವಾದ ಕಾರಣ
ಅಮಳೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು "
ಎಂಬ ವಚನಾನುಭವಕ್ಕೆ ತಕ್ಕಂತೆ
ಮಲ್ಲಯ್ಯನ ನಡೆನುಡಿ ಭಾವವೆಲ್ಲವೂ ಕಳಿತು ಹಣ್ಣಾಗಿದ್ದವು !
ಮಂದಹಾಸದಿ ನಿರಂಜನರು ಮಲ್ಲಯ್ಯನ
ಮನದನುಭಾವದ ನಿತ್ಯ ನಿರ್ಮಲತೆಯನು
ಕಂಡು ಮಹದಾನಂದ ತುಂದಿಲರಾದರು !

ಅಹುದಹುದು ಕೇಳ್ ಗುರುಶಿಷ್ಯರಿಗೂ ನಡೆವುತಿದೆ
ಸಂವಾದ ಆಲಿಸಿದ ಭಕ್ತವರ ತದೇಕಚಿತ್ತದಲಿ
"ಮಲ್ಲಯ್ಯ"
"ಗುರುದೇವ"
"ಅಂಬಲಿಯ ಕಾಯಕವೆಂತಾದುದೀ ದಿನ"

"ಇಂದಿನ ಅಂಬಲಿ ಕಾಯಕದ ಪರಿಯನೇನೆಂಬೆ
ಬಂದ ಭಕ್ತರು ಸಾಸಿರ, ನಿನಗೆಡೆ ಇಟ್ಟು
ತಂದ ಅಂಬಲಿ ಪ್ರಸಾದವತ್ಯಲ್ಪ ಆದೊಡು
ಬಂದ ಭಕ್ತರೆಲ್ಲರು ಉಂಡು ತೇಗಿದರು, ತೃಪ್ತಿಯಿಂ
ತೇಗಿದರಂ ! ಗುರುನಿನ್ನ ಪರುಷ ಶಕ್ತಿಗೆ
ಮಿತಿಯುಂಟೆ ! ಆಘೋರಶಕ್ತಿ ಸಮನ್ವಿತನು
ನೀನಲ್ತೆ ! ದೆಸೆದೆಸೆಗಂ ಹಬ್ಬಿದ ನಿಜಕಾಯಕದ
ಬೆಳಗಿನೊಳೆ ನಿಬ್ಬೆರುಗೊಂಡಿಹೆ ! ಕಾಯಕದಿ ಕೈಲಾಸ
ಕೈಸಾರ್ದುದಿಂದೆನಗೆ !
"ನಿನ್ನ ಕಾಯಕದ ಸಾರ್ಥಕತೆಯ ಸವಿಉಂಡ
ಭಕಂತಗಣವ ಮುಂದಾರು ಸಲಹುವರಂ ?"
"ಹೌದೌದು ಗುರುದೇವ ! ಮುಂದಾರು
ಬರ್ಪರೋ ! ಎಮ್ಮ ಕಾಯಕವನದಾರು
ಬಲಿಸಿ ಬೆಳೆಸುವರು ಎಮ್ಮ ಭಕ್ತರಿಗದಾರು
ಮುಂಬೆಳಕ ಹಿಡಿದು ನಡೆಸುವರೊ !
ಹಾಯ್ ಇಂದೇಕೆ ನೀವಿಂತು ನುಡಿಯುವಿರಿ !
ಎಮ್ಮಾಯು ಮುಗಿಯಿತೆ ?"
"ಅಂತು ಭಾವಿಸದಿರು ಮಲ್ಲಯ್ಯ ಕಂತೆಯಿದಂ
ಅನಿತ್ಯಮಹುದಲ್ತೆ ! ಮುನ್ನಚ್ಚರಿಕೆಯ
ಮಾತಿದೆಂದರಿ ನೀನು..........
"ಅಹುದವುದಂ ನಿನ್ನ ನಂಡಿ ಶಿವನುಡಿಯು
...."
"ನಾವ್ ಬಿಟ್ಟ ಕಜ್ಜವಿದು, ನಾವ್ ಬಿಟ್ಟ
ಭಕ್ತಗಣ, ಮತ್ತೆ ಗುರುವಿನ ಬರವ
ಹಾರೈಸುವೆನು ಮಲ್ಲಯ್ಯ"
ಆದರಿಂದ ದೇವ ನಿನ್ನಭೀಷ್ಟವೆ
ಎನ್ನಭೀಷ್ಟವೆಂದೆನುವ ತಾದಾತ್ಮಭಾವವೆ
ಲೇಸಯ್ಯ ! ಯೋಗಿ ಮನದ ಶಕ್ತಿ ಪ್ರೇಣವನೆ
ಅಭೀಪ್ಸೆಯೆ ಮಹಾತ್ಮರಂ ನಮ್ಮೀಕ್ಷೇತ್ರಕೆ
ತಪ್ಪದೆಳತರ್ಪುದು ಕಾಣಾ !

"ನಮ್ಮ ಕಜ್ಜವಂ ಕೈಗೆತ್ತಿಕೊಳ್ಳುವ
ಮಹಾತ್ಮರಂ ನಾವಳಿವ ಮುನ್ನ ಕರೆದು ಕೂಗುವುದು

ಲೇಸಲ್ತೆ ಮಲ್ಲಯ್ಯ ?''

''ಆಹುದಯ್ಯಾ ! ನಿರುಪಮ ನಿರಂಜನನೆ
ನಿನಗಾವುದು ತಿಳಿಯದಿಹಂದು........''

ಕೇಳಿದೆಯ ಭಕ್ತವರ
''ಹೋ ಕೇಳಿದೆ ಗುರುಶಿಷ್ಯರ ಸಂವಾದ
ಅದ್ಭುತ ಬಲು ಅದ್ಭುತ''

ನೋಡು ಮುಂದಿನ ದೃಶ್ಯದದ್ಭುತವ !
ನಿರುಪಮ ನಿರಂಜನರು ನೋಡು ತನ್ನ ಪರ್ಣಕಂಟಿ
ಎಡೆಗೈದಿಹರು !

ಬೈಗಡರಿ ಪಡುವಣ ದಿಗಂಗನೆಯ ಕೆನ್ನೆಗೆ
ಮುತ್ತಿಡಲು ಕೆಂಪಾದುದನೆ ಎಸೆವದ್ಭುತವ
ಏನೆಂಬೆ ! ನಿಶಾರಾಣಿ ಮೆಲ್ಲಮೆಲ್ಲನೆ ತನ್ನ
ಕರಿಸೆರಗ ಬೀಸಿ ಬರೆ ಇಳೆ ಎಲ್ಲ ಕಳೆಗುಂದಿ
ಕತ್ತಲಲಿ ಕರಗುತಿದೆ ! ಅಂತರಿಕ್ಷದ ಬೋಗುಣಿ-
ಯೊಳು ನಕ್ಷತ್ರಗಳು ಒಂದು ಎರಡು ಮೂರೆಂಬಂತೆ
ಮಿಣುಗುತಿವೆ ಚಂದಿರನುದಯದ ಬರವ ಹಾರೈಸಿ !

ಪರ್ಣಕುಟಿಯಲಿ ದೀಪ ಬೆಳಗುತಿದೆ
ನಿರಂಜನರ ಶಿವಪೂಜೆ ಮುಗಿದು ಪದ್ಮಾಸನಾಸೀನರಾಗಿ
ಧ್ಯಾನಮಗ್ನರಾಗಿದ್ದಾರೆ ! ಭಸಿತ ಪೂಸಿತ ಹಣೆಗೊಂಡ
ಮುಖಾರವಿಂದ ಅರಳಿ ತೇಜಃ ಪುಂಜವಾಗಿದೆ !

ಯೋಗ ಪ್ರಭಾವ ಪುಂಜಿತವಾದ ಶಿರಸ್ಸಿನ ಸಂತ್ತ
ತೇಜಸ್ಸು ಪ್ರಭಾವಳಿಯೋಪಾದಿಯಲ್ಲಿ ಬೆಳಗಂತ್ತಿದೆ
ಕಾಯಕದ ಕಲಿ ಮಲ್ಲಯ್ಯ ತಾನು ಗುರುವಿನ ಮುಂದೆ
ತದೇಕ ಚಿತ್ತನಾಗಿ ಕುಳಿತಿದ್ದಾನೆ ! ಯೋಗಭಾವ
ದಟ್ಟೈಸಿ ಬಯಲು ಬಯಲನಪ್ಪುತಿರೆ
ನಿರಂಜನ ಧ್ಯಾನಗಣ್ಣಿಗೆ ಕಾಣಿಸಿತು ತೇಜಃ-
ಪುಂಜ ಕಾಯಗಳು ಅತಿದೂರದಲಿ ! ಯೋಗ
ಭಾವದ ದಳ್ಳುರಿಯಲಿ ಈ ಕಾಯಗಳ ಎಚ್ಚರಿಸಿದನು
ನಿರಂಜನ ನಿರಮಾಯವನು !

ಏನೆಂದೆ ಇದು ನಿನಗೆ ತಿಳಿವುದಕೆ ಕಷ್ಟವೆಂಬೆಯ
ಭಕ್ತಂಗೆ ಇದಾವುದು ಕಷ್ಟ ಇಷ್ಟಲಿಂಗವ
ಪೂಜಿಸುವ ನಿನಗೆ ತ್ರಾಟಕ ಯೋಗವಳವಟ್ಟಿರಲು
ಮನಭಾವಯನ್ನರೆಯೆನರಿಯಲಾರೆಯ ?

ಹಾ ! ಹಾಗೆ ಬಾ ! ಮೌನದ ಮಹತ್ತನ್ನು
ಬಿಡಿಸಿ ಹೇಳುವೆ ಕೇಳಂ

ಮನದ ಭಾವತರಂಗಗಳುಮನಂತಮಕ್ಷಯ
ಬೆಳಕಿನ ವೇಗವನ್ನು ಮೀರಿ ಗಮಿಸುವಮಿತ ಶಕ್ತಿ
ಭಾವತರಂಗಗಳಿಗಿಹುದು ? ಒಬ್ಬೊಳಿಗೊಂಡ
ಮಾನಸಿಕ ಭಾವ ಬಲುತೀಕ್ಷ್ಣ ಸಹಸ್ರಾರು
ಸೂರ್ಯನಪ್ಪ ಶಕ್ತಿ ಸಮನ್ವಿತ ತದೇಕಚಿತ್ತನಾದ
ಭಾವಸಮಾಧಿಗತ ಯೋಗಿಯ ಅನುಸಂಧಾನದ
ದಿವ್ಯಾಭೀಷ್ಟವು ತಪ್ಪದೆ ಕಾಯಗೊಂಡ ಫಲಿಸುವುದು

"ಅಹುದಹುದು ಅರಿವಾಯ್ತೆನಗೀಗ ! ಮುಂದಿನ
ದರ್ಶನ ಧ್ವನಿಗೈಯಲಿ"

ಅದೋ ನಿರಂಜನರು ಬಹಿರ್ಮುಖರಾಗುತ್ತಿದ್ದಾರೆ !
ಮುಖಮಂಡಲದಿಂ ಆನಂದ ತೇಜೋರಾಶಿ ಸುರಿವುತಿದೆ
ಕಣ್ಣಿವೆ ಬಿಚ್ಚಿ ಎದುರಿಗೆ ಕುಂತ ಮಲ್ಲಯ್ಯನತ್ತ
ದೃಷ್ಟಿಬೀರುತ್ತಾರೆ. ಬೇಗನೆದ್ದು ಮಲ್ಲಯ್ಯ
ಗುರುವಿಂಗೆ ಪೊಡಮಡುತ್ತಾನೆ
ಕೇಳದೋ ನಿರಂಜನರು ನುಡಿವುತಿರ್ಪರು

"ಮಲ್ಲಯ್ಯ"

"ಗುರುದೇವ"

"ಎಮಗೆ ಇಹದ ಮಣಿಹವು ಮುಗಿದು
ಬಂದುದು ಎಮ್ಮ ಕಾಯಂಕವ ಕೈಗೆತ್ತಿಕೋಬರೀರ್ವ
ರೈತಂದವರು ಈ ಎಡೆಗೆ ಈ ಕಂತೆಯನಂ
ಬಿಸುಡಬಹುದಾವು"

"ಗುರು ಇಚ್ಛೆಯೆ ಈ ಪರಮಕಿಂಕರನ ಇಚ್ಛೆ
ಹೆದರದಿರು ಭಕ್ತವರ, ಅದು ಬೆಂಕಿ ಅಲ್ಲವೈ

ನಿರಂಜನ ಮಲ್ಲಯ್ಯಗಳು ಯೋಗದೊಳು ನಿಂತು
ದೇಹದಿಂದಾತ್ಮ ತೇಜವ ಬಿಡುವ ಮಹದಂದವಿದು
ನೋಡದೋ ಈರ್ವರ ಚಿತ್ಕಳೆಯು ಬ್ರಹ್ಮರಂಧ್ರವ
ನೊಡೆದು ತೇಜೋರಾಶಿವೊಲು ಆಡರಿ
ಹಬ್ಬಿತು ಗಗನದನಂತತೆಯಲಿ !

ಹಾ ! ನುಡಿ ಚಿತ್ರ ನಿಂತಿದೆ ಇನ್ನೆಂತು
ಕೆಂಬಳೀಶ್ವರರ ಅಮರ ದರುಶನ

ನಿಲ್ಲು ನಿಲ್ಲೈ ಭಕ್ತವರ ! ಇಷ್ಟೇಕೆ ತವಕ ಮೇಣ್ ಪುಳಕ
ಎನ್ನೊಡನೆ ಬಾ ನೀ ಬಸವಕಲ್ಯಾಣದ ತನಕ :

ಅಬ್ಬಬ್ಬ ಅಷ್ಟುದೂರವ ನಾನು ಪಯಣಿಸ
ಲಹನೆ ! ಬರಿಗಾಲಿನಲಿ ಬಸವ ಕಲ್ಯಾಣವನು
ಸೇರಲಳವೆ ?

ನಿನ್ನ ಪಯಣಮಲ್ಲಿಗಕ್ಕಕ್ಕು ಬಲು ಸುಲಭ !
ಹತ್ತಿನಡೆ ನಿನ್ನಮಲ ಭಾವದ ವಿಮಾನವನೇರಿ !
ಭಕ್ತಿಯಿಂಧನವ ಸುರಿ ಇದಕೆ ! ಚಾಲಕನೆ
ಸ್ಥಿತ ಪ್ರಜ್ಞೆ ! ಗಗನ ಸಖಿ ರಸಪ್ರಜ್ಞೆ
ಹಾರಿಸೈ ವಿಮಾನವಿದ ಬಸವಕಲ್ಯಾಣದಸಮ
ತಾಣಕೆ ! ಭುವಿಗಿದನು ಇಳಿಗೊಡದೆ
ಹಾರಿಸು ಗಗನದಲೆ ಅಂತರಿಕ್ಷದಲೆ
ಹಾರುತ್ತ ದರ್ಶಿಸು ಕಲ್ಯಾಣ ಪುರದಿರವನು !

ಹಾ ! ಏನುಕಾಣದೆ ಗತಕಾಲದ
ತುಣುಕುಗಳೆಂದು ಕಾಣವೆ !

ನೋಡಯ್ಯ ಕಣ್ಣಿಟ್ಟು ಕಾಣುವುದದೊ
ತ್ರಿಪುರಾಂತಕನ ಕೆರೆ ಮೇಣ್ ಗುಡಿಯು !
ಇಲ್ಲೆಲ್ಲೊ ಪಕ್ಕದಲೆ ಇತ್ತಂತೆ ಬಸವರಾಜನ
ಮಹಿಮಾನ್ವಿತದ ಮಹಾಮನೆ, ಅಲ್ಲಿ
ಕಾಣುವುವು ಬಿಲವಲ್ಲವಯ್ಯಾ ! ಅವು
ನಾಗಲಾಂಬಿಕೆ ಬಸವರಾಜರು ಅನುಸಂಧಾನಕ್ಕೆ
ಬಳಸುತ್ತಿದ್ದ ಗುಹೆಗಳು !

ಮತ್ತಲ್ಲಿ ಕಾಣ್ಬುದೆ ಮಡಿವಾಳ
ಮಾಚಿದೇವರ ಹೊಂಡ !
ಇದುವೆ ನೋಡು ಪರುಷ ಕಟ್ಟೆ !
ಇದು ಇಂದು ಕಟುಕರ ಕೇರಿ ! ಉತ್ತರಕೆ
ಕಾಣುವುದೆ ಮುಸಲ ರಾಜನ ಅರಮನೆ !
ಪಶ್ಚಿಮದಿ ಕಾಣುವುದೆ ಬಾಂಧವರ ಓಣಿ !
ಅಲ್ಲಿ ಕಾಣುವುದೆರಡು ಆಕಾಶ ಕಾಯಗಳಲ್ಲವೈ !
ಹತ್ತಿರದಿ ನೋಡುವೊಡೆ ಇಳಿಸಲ್ಲಿ ನಿನ್ನ
ಯಾನವ ! ಹತ್ತಿರದಿ ಕಾಣಲಹುದು ಎಲ್ಲವನು !
"ಅಹುದಹುದು ಇವರು ಪರತೇಜಃಪುಂಜ
ತಪೋನಿರತ ನಿರಾಭಾರಿ ಜಂಗಮರು

ನೋಡವರ ಮೊಟವನು ಅಗಲದ ಹಣೆ
ಆನೆಗಿವಿ ! ಕಮಲದೊಳ್ ನಯನಗಳು !
ಕಿವಿಮುಚ್ಚಿ ಬಿಗಿದಿರುವ ನಯಗಾವಿವಸ್ತ್ರ
ಕಂಠ ಕಿವಿ ಕಂಕಣಕೆ ಬಿಗಿದಿರುವ ರುದ್ರಾಕ್ಷಿ !
ಕುಳ್ಳು ಮಾಟವು ! ಈರ್ವರಿಗಿವೆಲ್ಲ ಒಂದೆ ತರ !
ನೋಡಿವರು ಎಸೆವರು ಅವಳಿ ಮಕ್ಕಳೆನೆ !

ಕರದಿ ಲಿಂಗವ ಹಿಡಿದು ಕಣ್ಣಿವೆಯು
ಮುಚ್ಚಿಹರು ಎಂಬೆಯ ?

ಅಮಮ ನೋಡಿವರುಮಿರದೆ ಐಕ್ಯದಲಿ
ನಿಂದಿಹರು ! ಬಯಲು ಬಯಲನೆ ಕೂಡಿಹರು !
ನಿಲುವಿನಲಿ

"ಕಂಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ !"

ಇಂಥ ಮಹಿಮರಲಿ ತಪ್ಪನೆಣಿಸಿಂವರೆ ಮರುಳೆ !

ತಪ್ಪಾಯ್ತು ಕ್ಷಮಿಸಯ್ಯ, ದರ್ಶನಧ್ವನಿ ಚಾಲಕನೆ ! ಹೂಂ !
ಹಾಗೆ ದಾರಿಗೆ ಬಾ !

ನೋಡು ಮತ್ತಲ್ಲಿ ಕಾಣುವ ಚಿತ್ರ ಚಮತ್ಕಾರವನು !

ಯೋಗೀಶ್ವರರೀರ್ವರು ಇಳಿದು ಬರುತಿಹರೈಯ್ಯ
ತಮ್ಮ ಯೋಗ ಸಮಾಧಿಯು ಗೌರೀಶಂಕರದಿಂದ !
ಕಣ್ಣಾಲಿ ಬಿಚ್ಚಿದರು !

ಕೇಳು ಹಿರಿಯ ತೋಂಟದಾರ್ಯ ಬಾಯ್ಬಿಟ್ಟು ತನ್ನ
ತಮ್ಮ ಸಿದ್ಧವೀರಾರ್ಯನೊಡನೆ ನುಡಿಗೊಂಡಿಹನು !

''ಇಂದು ನಾವಿರ್ದ ಯೋಗಸಮಾಧಿ ಸಮಯ-
ದಳೊಂದು ದಿವ್ಯಸ್ಪಂದನವಾದುದೆಮಗೆ !

ದಕ್ಷಿಣದ ದಿಗ್ಭಾಗದಿಂ ಚಲಿಸುತ್ತ ಬಂದಪುದು ಅದು !
ಶಿವಯೋಗಿಯೋರ್ವನಭೀಷ್ಟ ಸ್ಪಂದನಮದು !

ಯೋಗಿಯನುಸಂಧಾನದುಜ್ವಲ ಭಾವತರಂಗ
ಅಲೆ ಅಲೆಯಾಗಿ ಬಂದಪುದು !

ಆ ಯೋಗಿ ಇದ್ದೆಡೆಗಾವು
ಐದಿ ಅವರು ಬಿಟ್ಟ
ಮಣಿಹದ ಹೊರೆ ಹೊರಲೆಮಗಾಹ್ವಾನದಪರಿಮಿತ
ಭಾವದನುಸಂಧಾನವದೈಸೆ ! ಇದರಪರಿಮಿತ
ಒತ್ತಡದಿಂದಾವು ಬಹಿರ್ಮುಖರಾದೆವೈ !

ನಿನಗೂ ಇದರ ಅನುಭವದ ಅರಿವಾಗಿರಬೇಕೈ ?''
''ಅಹುದಹುದು ! ನೀವೆಂದಂತೆನಗೂ
ತೇಜೋಮಯ ಸ್ಪಂದನದೊಂದರಿವಾಗಿಹುದಯ್ಯಾ !
ಲಿಂಗವಾದ ಜಂಗಮ ಅಭೀಷ್ಟವ ಸಲಿಸದಿಹುದೊಳಿತೆ, ನೀ ಹೇಳ ! ''
'' ಅಬ್ಬಾ ! ಆ ಶಿವಯೋಗಿ ಎಂಥ ಮಹಿಮಾನ್ವಿತನೊ !
ಅಲ್ಲದೆ ನಮ್ಮ ಗುರು ಷಟ್‌ಸ್ಥಲಜ್ಞಾನ ಚಕ್ರವರ್ತಿ
ತೋಂಟದ ಸಿದ್ಧಲಿಂಗಯತಿ ನುಡಿದಂತೆ
ನಡೆದ ಶರಣರು

ಉತ್ಪತ್ತಿ ಸ್ಥಿತಿ ಪ್ರಳಯ ರಹಿತಮಾದ ಮಹಾಲಿಂಗದಲ್ಲಿ
ಸಂಯೋಗವಾದ ಅಚ್ಚ ಲಿಂಗೈಕ್ಯರಯ್ಯ !
ಇಂಥವರು ಬಿಟ್ಟುಹೋದ ಕಾಯಕವನ್ನು
ಮಣಿಹವನ್ನು ಮುಂದುವರಿಸುವುದೇ ನಮ್ಮ ಶರಣರ ಪರಂಪರೆಯು !

ನಾವು ಕಂಡು ಉಂಡ ಶಿವಬೆಳಗಿನ ಪ್ರಕಾಶವನ್ನು
ಅನ್ಯರಿಗೂ ಬಿತ್ತಿ ಬೆಳೆಸುವುದೆ ಶಿವಯೋಗ ಶಿವಪರಂಪರೆ!
ಗುರುವಿನಾಣತಿ ಹೊತ್ತು ಎಮ್ಮೊಡಲೊಳು
ಹೊತ್ತಿಸಿದ ಶಿವಜ್ಞಾನದ ಸೊಡರ ಉರಿದು
ನಿಬ್ಬೆಳಗಿನ ಬಯಲೊಳೆ ಬಯಲಾಗುವ ಮುನ್ನ
ಅನೇಕಾನೇಕ ಜಡರೊಡಲೊಳು ಅಂಥ ಸೊಡರಂ ಹೊತ್ತಿಸಬೇಕು!
ಆಗಲೆ ಶಿವಯೋಗಸಂಪತ್ತು ಹತ್ತಾಗಿ ನೂರಾಗಿ
ಸಾಸಿರಮಡಿಯಾಗಿ ಬೆಳೆವುದದು!
ವ್ಯಷ್ಟಿಯಲಿ ಉದಿಸಿದ ಶಿವಬೆಳಗು
ಸರ್ವ ಸಮಷ್ಟಿಯಲಿ ಶಿವಮಹಾ ಬೆಳಗಾಗಿ
ಬೆಳಗುವ ಮಹತ್‌ಸ್ಥಿತಿ ಸಮನಿಸುವನಕ
ಶಿವಯೋಗ ಪರಂಪರೆಯ ಮಹಾಮಣಿಹ ಮುಗಿವುದಿಲ್ಲವೈ!"

"ಅಂದರೆ ತಾವತ್ತ ಪಯಣಿಸ ಬಯಸುವಿರೆಂದರಿಯಲೆ!" "ಅಹುದಹುದು, ಎಮ್ಮ ಜ್ಞಾನ ಕ್ರಿಯಾಸಂಪನ್ನತೆವಡೆಯೆ ಇದುವೆ ದಾರಿ! ನಡೆ ದಕ್ಷಿಣ ದಿಶಾಭಾಗದತ್ತಣಕೆ! ಆ ಶಿವಯೋಗಿ ನಿಂದು ತಪಗೈದ ತಾಣವನರಸಿ ನಿಂದಲ್ಲಿ ನಾವ್ ಅವನ ಮಣಿಹವ ಮುನ್ನಡೆಸುವ! ಶಿವನ ಬೆಳಗ ಬಿತ್ತಿ ಮಹಬೆಳಗನೆ ಬೆಳೆವ!"

ಓಯ್! ಏನಯ್ಯಾ ಗುರುಭಕ್ತವರ, ಶಿವಯೋಗ....
ಶಿವಯೋಗ........ಶಿವಯೋಗಿ ಅಂತ ಬಡಬಡಿಸುತ್ತಿರುವೆ!
ನಿಜ! ನನಗೆ ಅಚ್ಚರಿ! ಪರಮ ಅಚ್ಚರಿ!

ಶಿವಯೋಗದಿಂದ ಶಿವಯೋಗಿಗೆ ಇಂತೆಲ್ಲ ಶಕ್ತಿಗಳು ಬಪ್ಪುವೆ?
ನಿಶ್ಚಯಂಮಾಗಿಯುಂ ಅಹುದು! ಅದಕ್ಕೆ
ಅನುಮಾನ ನಿನಗೇಕೆ? ನರನೆ ಬ್ರಹ್ಮಾಂಡದ ಎರಕವಯ್ಯಾ!
ನಿಖಿಲ ಬ್ರಹ್ಮಾಂಡದಲ್ಲಿ ಹುದುಗಿರುವ ವ್ಯಕ್ತ
ಅವ್ಯಕ್ತ ಶಕ್ತಿಗಳೆಲ್ಲವು ನರನಲ್ಲಿ

ಸಮನ್ವಿತನಾಗಿ ಹುದುಗಿವೆ! ಯೋಗಶಕ್ತಿಯಿಂದ ಮಥಿಸಿದರೆ ಅವು
ಅಣಿಮಾದಿ ಅಷ್ಟಸಿದ್ಧಿಗಳ ರೂಪದಲ್ಲಿ ದೊರೆಕೊಳ್ಳುತ್ತವೆ!
ಸಾಧನೆ ಔಪಾಸನೆಯಿಂದದು ಸಾಧ್ಯ!
ಬರಿ ಬಾಯಿ ಬ್ರಹ್ಮದಿಂದ ಸಾಧಿಸಲರಿದು!
ಹಾ! ಮತ್ತೆ ನೋಡಲ್ಲಿ!
ಯೋಗಿದ್ವಯರು ಮೇಲೆದ್ದು ಹೊಂಟಿಹರು!

ಕಾವಿ ಕಪನಿಯನೆ ಹೊದ್ದಿಹರು ! ನಯವಾದ ಕಾವಿ
ವಸ್ತ್ರವನೆ ಶಿರಸ್ಸಿಗೆ ಬಿಗಿದಿಹರು ! ಕಿವಿ ಮುಚ್ಚುವತನಕ !
ಏನೆಂಬೆ ಬೆಳಕೊಂದು ಇವರ ಪಾಂಚಭೌತಿಕ
ಕಾಯಗಳನ್ನು ಮುಂದು ಮುಂದಕ್ಕೆ ಎಳೆದುಕೊಂಡು
ಹೋಗುತ್ತಿರುವಂತೆ ಕಾಣಿಸುತ್ತಿದೆಯು !
ಹೆಜ್ಜೆಯ ಗುರುತು ಕಾಣಿಸದೆ !
ಒಮ್ಮೊಮ್ಮೆ ದೇಹದ ನೆಳಲೂ ಇಲ್ಲದಂತಾಗುತ್ತದೆಯಲ್ಲವೆ ?

ಅವರೀರ್ವರು ಲಿಂಗಾಂಗಸಮರಸಸಂಪನ್ನರು !
ಐಕ್ಯಸ್ಥಲಸ್ಥಿತರು ! ಅವರನಡೆ ಎಲ್ಲ ಲಿಂಗಮಯಂ !
ಅವರ ನುಡಿ ಎಲ್ಲ ಲಿಂಗಮಯ !
ಅವರ ಮನವೆಲ್ಲವುಲಿಂಗಮಯ ! ಲಿಂಗವೆ ಶಿವ ಚಿದ್ರೂಪು !
ಅಂತಪ್ಪ ಸರ್ವಾಂಗ ಲಿಂಗಿಗಳ ಅಂಗ ಅನವರತ
ತೋಜೋಮಯವಾಗಿ ವಿರಾಜಿಸುತ್ತಿರುತ್ತದೆ !
ಅಂಥವರಲ್ಲಿ ತೇಜಸ್ಸು ಮುಂದಾಗಿ
ಕಾಯ ಹಿಂದಾಗಿರುವಂತೆ ಕಾಣುತ್ತದೆ !
ಮಿಗಿಲಾಗಿ ಇವರೆಲ್ಲರು ಬಯಲದೇಹಿಗಳು !
ಬಯಲದೇಹಕ್ಕೆ ನೆಳಲುಂಟೆ ?

ನೋಡದೋ ಪಚ್ಚಿಮದ ದಿಗಂಗನೆಯು
ಸಂಧ್ಯಾರಾಗದ ವಸನವನುಟ್ಟು ಮೆರೆವುತಿಹಳು !
ನಿಶೆ ಆಗಸದ ಬೋಗಂಣೆಯ ಗಸಣಿಯಿಲ್ಲದವೊಲು ಮೆಲುಮೆಲನೆ
ತುಂಬುತಿಹಳೈಸೆ !

ಊರ ಹೊರಗೊಂದು ಶಿವಗುಡಿಯು ಇಹುದ ಕಂಡು
ಜಂಗಮರು ಹೊಕ್ಕರದ ರಾತ್ರಿಯಲಿ ತಂಗಲಿಕೆ !
ಇವರ ಕಂಡು ಊರ ಭಕುತರು ಕರೆದೊಯ್ದರು ಪೂಜೆ ಪ್ರಸಾದಕೆ !

ಇಂತಿವರುಮಲ್ಲಲ್ಲಿ ತಂಗುತ್ತ, ಭಕ್ತರ ಮನೆಯಲಿ
ಪೂಜೆ ಪ್ರಸಾದವ ಸಲಿಸುತ ಹಾದಿಯನು ಸವೆಸಿದರು !
ಕೊನೆಗದೊ ಬಂದರೈ ಮಹಿಪಪಟ್ಟಣಕೆ ! ರಾತ್ರಿಯಂ
ಪಟ್ಟಣದಿ ಕಳೆದು, ಮುಂಬೆಳಗು ಬಹಮುನ್ನ

ಎದ್ದು ಪಯಣಿಸಿದರೊ ದಣಕ್ಷಿದತ್ತ ಗರಳಪುರಿ ದಾರಿಯಹಿಡಿದು
ಮುಗಿಲು ಮೇವುತಿಹ
ಚಾಮುಂಡಿಬೆಟ್ಟವನು ದರ್ಶಿಸುತ ಪೂರ್ವ ದಿಗಂಗನೆಯ
ರಂಗಿನೋಕಳಿಯ ಲೀಲಾ ವಿನೋದವನು ಮನದಣಿಯೆಂ ಸವಿಯುತ್ತ
ನಡೆದು ಬಂದರು ಯೋಗಿ ಪುಂಗವರು !

ನೋಡಿದೋ ಮಲ್ಲನ ಮೂಲೆಯ ಮಹಿಮಾಕ್ಷೇತ್ರವ ಹೊಕ್ಕರು !
ಇವರಿಗಾಯ್ತೊಂದಪೂರ್ವದ ಪುಳಕ ! ತಾಯ ಕಂಡ ಕರುವಿಗಾದಮಿತಾ-
ನಂದಮಾಯ್ತಿವರಿಗೆ ಈ ತಾಣಮಂ ಸೇರಿದೊಡನೆ !
ಸ್ಪಂದಿಸಿತ್ತುಮಿವರ ಭಾವ ಸುತ್ತಸುರಿದಮಿತಕಾಲದಿಂ
ನೆಲಸಿರ್ಪೊಂದಂ ದಿವ್ಯ ಭವ್ಯ ಭಾವದೊಡನೆ !

ಇದರ ಪಕ್ಕದಲೆ ಇಹ ಪಂಚಲಿಂಗದ ಗುಡಿಯ
ಹತ್ತಿದರು ಜಂಗಮರು ! ಗುಡಿಯೊಳೊಂದರಲಿ
ಇದ್ದರೈ ರಾತ್ರಿಯಲಿ ! ಇಳೆಯಂ ಸದ್ದಡಗೆ
ಬೆಳಗುತಿವೆ ಚುಕ್ಕಿಗಳು ರಾತ್ರಿಯಾಗಸದಿ !

ಗುಡಿಯ ಹಣತೆಯ ಹಚ್ಚಿದರು ಜಂಗಮರು !
ನೋಡು ಕುಂತರು ಶಿವಯೋಗ ಧ್ಯಾನದೊಳು !

ಇದೇಕಯ್ಯಾ ಬೆಚ್ಚು ಗುರುಗಳೀರ್ವರನ್ನು ಕಂಡು !
ಪದ್ಮಾಸನಾಸೀನದ ಅವರ ಮುಖಮಂಡಲದ ಸುತ್ತ
ತೇಜೋರಾಶಿಯೊಂದರ ಪ್ರಭಾವಳಿ ನೋಡಿ ನಿನಗೆ ಅಚ್ಚರಿಯ
ಬೆಚ್ಚಹುದೆ !

ಕೇಳು ! ಇವರು ಆಸೆ ಆಮಿಷಕೆ ಸತ್ತವರಲ್ಲ !
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತವರಲ್ಲ ! ಮಹೇಶ್ವರನಿಗಾಗಿ
ಸತ್ತ ಮಹಿಮಾನ್ವಿತರು ಕಾಣಾ !
ಅಲ್ಲದೆ ಇವರು ಸರ್ವಾಂಗಲಿಂಗಯೋಗಭರಿತರಂ !
ಏನೆಂದೆ ಸರ್ವಾಂಗಲಿಂಗಯೋಗವನರಿಯ ಬಯಸುವೆಯ !
ಮಾನವ ಶರೀರದಲ್ಲಿ ಗುದಸ್ಥಾನದಲ್ಲಿರುವ
ಆಧಾರ ಚಕ್ರದಿಂದ ಹಿಡಿದು ಆಜ್ಞಾಚಕ್ರದವರೆಗೆ
ಆರು ಜ್ಞಾನಚಕ್ರಗಳಿಂದ ಆವೃತವಾಗಿದೆ, ಆ ನಂತರ
ಶಿರೋಭಾಗದಲ್ಲಿರುವ ಸಹಸ್ರಾರ ಚಕ್ರವೆ

ಪರಮೈಕ್ಯ ಸ್ಥಳ !
ಇದಾದಮೇಲೆ ಶಿಖಾಚಕ್ರ ! ಕೊಟ್ಟ ಕೊನೆಯಾಗಿ ಏಕದಳಚಕ್ರ !

ಈ ನವವಿಧ ಜ್ಞಾನಚಕ್ರಗಳಲ್ಲಿ ಚಿತ್ಕಳಾ
ಸ್ವರೂಪಿಯಾದ ನವವಿಧ ಲಿಂಗಗಳನ್ನು ಸ್ಥಾಪಿಸಿ
ಅನುಸಂಧಾನಗೈದು ಧ್ಯಾನಿಸುವುದೇ ಶಿವಯೋಗ.
ಆಚಾರಲಿಂಗವನಾಧಾರ ಚಕ್ರದಲ್ಲಿ ನಿಲಿಸಿ ಧ್ಯಾನಗೈವುದೆ
ಸದ್ಭಕ್ತನ ಶಿವಾಚಾರವಯ್ಯ !
ಆಚಾರಲಿಂಗವರಳಿ ಗುರುಲಿಂಗವಾಗಿ ಸ್ವಾಧಿಷ್ಠಾನ
ಚಕ್ರದೊಳು ಪರಿಣಮಿಸಿ ಧ್ಯಾನಿಸುವುದೇ

ವೀರಮಾಹೇಶನ ಶಿವಾಚಾರವಯ್ಯ !
ಗುರುಲಿಂಗ ಒಲಿದು ಶಿವಲಿಂಗವೇ ತಾನಾಗಿ
ಮಣಿಪೂರದಲಿ ಶಿವಶಿವಾ ಎಂದುಉಲಿವುತಿರ್ಪುದೆ
ಪ್ರಸಾದಿಯ ಶಿವಾಚಾರವಯ್ಯ ! ಶಿವಲಿಂಗ ಚರಲಿಂಗವಾಗಿ
ಅನಾಹತ ಚಕ್ರದಲಿ ಸ್ವಯಗೊಂಡು

ಪ್ರಾಣಲಿಂಗಿಯಾಗಿಪ್ಪುದೆ ಶಿವಾಚಾರವಯ್ಯ
ಚರಲಿಂಗ ಶೇಷಲಿಂಗವಾಗುದಿಸಿ ವಿಶುದ್ಧಿಯಲಿ
ಆಯತಗೊಂಡೊಡದು ಶರಣನ ಶಿವಾಚಾರವಯ್ಯ !
ಶೇಷಲಿಂಗವಳಿದು ಮಹಾಲಿಂಗರೂಪಾಗಿ ಆಜ್ಞಾಚಕ್ರದಿ
ಬೆಳಗುತಿರೆಯದುವೆ ಲಿಂಗಾಂಗದೈಕ್ಯನ ಶಿವಾಚಾರವಯ್ಯ !
ಮಹಾಲಿಂಗವಡದಿ ಸಹಸ್ರಾರದೊಳುಅರಿಯೆ
ಶಿವ ನಿಷ್ಕಳಲಿಂಗವಾದುದು ನೋಡ
ಶಿವ ನಿಷ್ಕಳಲಿಂಗ ಶಿಖಾಚಕ್ರದಿ ನಿಶ್ಶೂನ್ಯ

ಸಕಳಲಿಂಗವಾದುದು ಪರಿಯನೆಂತು ನುಡಿವುದು ಹೇಳ !
ನಿಶ್ಶೂನ್ಯ ಸಕಳಲಿಂಗಮಂತ್ರದಲಿ ಏಕದಳ
ಚಕ್ರದೊಳು ನಿರಂಜನಲಿಂಗವಾಗಿ ತೊಳಗಿ
ಬೆಳಗುತ್ತಿರ್ದುದದ್ಭುತ ಜ್ಯೋತಿಕಾಯವಾಗಿ !

ಇಂತೀ ನಿರಂಜನ ಲಿಂಗವಾಗಿ ಈರ್ವರು
ಶಿವಯೋಗಿಗಳು ಬೆಳಗುತ್ತಿರ್ಪರು ನೋಡ !

ನೋಡಿತ್ತಣದ ದಕ್ಷಿಣಕೆ ಇಹುದೊಂದು ಕಿರುವೊಳಲು !
ಪಂಚಲಿಂಗನ ಗುಡ್ಡದ ಬದಿಗಿಹುದಂ !
ಬಸವನ ಪುರವೆಂದಿದ ಕರೆವುತಿರ್ಪರೂ !
ಭಕ್ತಪುಂಗವರು ತುಂಬಿಹರು ಈ ಪುರದಿ !
ಶಂಭುಗೌಡನು ಭಕ್ತವರೇಣ್ಯನಿವನಿಲ್ಲೆ ಬದುಕಿ ಬಾಳಂವನು!
ಉಳುವುದೆ ಇವನ ಕಾಯಕ. ನೇಗಿಲಯೋಗಿ ! ಅಂದಂ ರಾತ್ರಿಯಂಲಿ
ಇವಗೊಂದು ಕನಸಾಯ್ತು !
ಜಂಗಮನೋರ್ವನು ಬಂದಿವನ ಕನಸಿನಲಿ ಇಂತೆಂದ :

“ ಪಕ್ಕದಿಹ ಗುಡ್ಡದ ಗುಡಿಯಲ್ಲಿ ಜಂಗಮರೀರ್ವರು
ಬಂದು ಪವಡಿಸಿಹರು. ಪೂಜೆ ಪ್ರಸಾದಮಿಲ್ಲದೆ ಇಹರವರು !
ಶಿವಭಕ್ತಿಯ ಸುತ್ತೆಲ್ಲ ಬಿತ್ತೆ ; ಮೇಣ್ ಇತ್ತಣದ ನಾಡಿನಲಿ
ನೆಲಸಿಹ ಕತ್ತಲೆಯ ಕಾಳಿಕೆಯ ಕಳೆವೊಡೆ
ಇವರಲ್ಲಿಗೈತಂದಿಹರು ! ಅವರ ಕರೆದೊಯ್ದು ಮಂನೆಗೆ ಉಪಚರಿಸಂ !
ನಿರಂಜನರು ನೆಲೆಸಿರ್ದ ಮಂಲ್ಲನ ಮೂಲೆಯ ಮಹಾಕ್ಷೇತ್ರದಿ
ಇವರು ನೆಲಸಲಿಕೊಂದು ಪರ್ಣಕುಟಿ ಕಟ್ಟಿಸೈ !
ಅವರ ನೀನೆಡಬಿಡದೆ ಸೇವಿಪುದು !

ಅಂದಂ ರಾತ್ರಿಯಲಿ ಕಣ್ಣು ಹೊಸಕಿ ಗೌಡನೆಚ್ಚತ್ತನಚ್ಚರಿಯಲಿ !
ತನ್ನೊಡನೆ ಕೆಲರಂ ಕರೆದೊಯ್ದನವ ಗುಡ್ಡದಿಹ
ಪಂಚಲಿಂಗನ ಗುಡಿಎಡೆಗೆ ! ದಾರಿಯಲಿಮಿವರಿಗೆ ಗೌಡ
ವಿವರಿಸಿದ ತಾ ಕಂಡ ಕನಸ !

ಗುಡಿಯೊಳು ಕಾದಿತ್ತು ಗೌಡಗೆ ತನಗೆಟಂಕದ ಅಚ್ಚರಿಯು !
ಕನಸಲಿ ಕಂಡ ಈರ್ವರು ಯೋಗಿವರರಲ್ಲಿ ನನಸಾಗಿರ್ಪರೆಂಬವೊಲು
ಧ್ಯಾನಸ್ಥಮಾಗಿಹುದ ಕಂಡು ನಡುಗಿದನು ಗೌಡ.

ಕಣ್ಣುಗಳ ರೆಪ್ಪೆಗಳು ಬಿರಿದು ಬಿಚ್ಚಿರೆ. ಹಿರಿಯನಿಂತೆಂದ !
“ ನೀನಾರೈ ! ಇತ್ತಣಲಿ ಬಂದುದೇತರ ದೆಸಿಯಿಂದೈ ”
ಗೌಡನನಿತಿರಲೆ ಉದ್ದಂಡ ಬಿದ್ದನೀರ್ವರ ಪದಕಮಲ ದ್ವಯಕೆ
ಬಂದಿಹರುಮಂತೆ ವಂದಿಸಿದರಂ ಜವದಿ

“ಗುರುವೆ ತಮ್ಮ ಇರುವಿಕೆಯೆಲ್ಲ ಕನಸಾಯ್ತು ಮುದದಿಂದ
ನಾವೈತಂದಿಹೆವು ! ಬಿಜಯಮಾಡಿರಿ ಮಂನೆಗೆ ! ಮಿಂದು ಮಂನೆಯಲಿ
ನಿತ್ಯಲಿಂಗಾರ್ಚನೆಯ ತಾವು ನಿಂದೋಲೈಸುವುದು ಮುದದಲಿ

ಎಂದು ಕರೆದೊಯ್ದನು ಗುರುವರರ ತನ್ನ ಮನೆಗೆ !
ಮಜ್ಜನವ ಗೈಸಿದನು ಶಿವಯೋಗಿದ್ವಯರಿಂಗೆ ; ಧೂಳುಗಾಲಿನ
ಪಾದೋದಕದಿಂ ಮನೆಯಂ ಅಂಗಳವ ಸಿಂಪಡಿಸಿ ಮೇಣ್
ಮೂಲೆ ಮುಡುಕುಲುಗಳನು ಪ್ರೋಕ್ಷಿಸಿದನು ಗುರುಗಳ
ಧೂಳುಗಾಲಿನಪಾದೋದಕದಿಂ !
ಪೂಜೆಗಣಿಗೈದನದೆ ಭಕ್ತಿಯಂಲಿ ಗೌಡನಂ !
ಗುರುಪಾದ ಪೂಜೆಯನನುನಯದಿ ಎಸಗಿದನು
ಗೌಡನು ಅಂದು ! ನವಪ್ರೀತಿಯೆ ಮೈವೆತ್ತಂತೆ ನಡೆದು
ಕೊಂಡನು ಗೌಡನು, ಗುರುಗಳೀರ್ವರ ಮೆಚ್ಚುಗೆಯ ಗಳಿಸಿದನು !
ತಿಂಗಳೊಪ್ಪತ್ತುದಿನ ಗುರುಗಳಂ ತಂಗಿದರು ಗೌಡನಲಿ !
ದರ್ಶನಕೆ ಬಹ ಭಕುತರುಮಧಿಕವಾದರು ದಿನ ದಿನವು !
ಇದಕಂಡೊಂದುದಿನ ಗುರುಗಳಿಂತೆಂದು ಪೇಳಿದರು :
" ಲೋಕದ ಹಂಗುದೊರೆದ ನಾವುಗಳಂ
ಇನ್ನುಮಿಲ್ಲಿರರು ಸರಿಯಿರದುಮದರಿಂ
ಬೇರೆ ಎಡೆದೊಳೊಂದು ಪರ್ಣಕುಟಿಗೈದು
ಎಮ್ಮನಲ್ಲಿರಿಸು ! ಎಮ್ಮಕಾಯಕಕಡುವೆ
ನಿಜ ತೇಜಸವ ತಂದಪುದೈಸೆ ! "

ಅಂದು ಗುರುವಿನಿಚ್ಛೆಯಂತೆ ಗೌಡನು
ಪಂಚಲಿಂಗನ ಗುಡಿಗಳ ಬಳಿಯೊಳೊಂದು
ಕುಟಿಯು ಕಟ್ಟಿದನು ಮುದದಿಂದ !
ಗುರುಗಳೀರ್ವರುಮಲ್ಲಿಗೈದಿದರು ಮರುದಿನವೆ !
ಭಕ್ತಭೃಂಗಾಳಿ ಎರಗಿತು ಗುರುಗಳ ಪಾದ ಕಮಲಕೆ !
ಝೇಂಕರಿಸಿತು ಸುತ್ತೆಲ್ಲ ಭಕ್ತರಮಿತ ಭಜನೆ !
ಹೂಂಕರಿಸಿತು ಓಂಕಾರನಾದ ಗುಡ್ಡದುದ್ದಗಲ !
ಗುರುಗಳು ಭಕ್ತರ ಬವಣೆಯ ಬಿಡಿಸಿದರು ಯುಕ್ತಿಯಲಿ ;
ಮೇಣದ್ಭುತದ ಪವಾಡಗಳಮಿತ ಶಕ್ತಿಯಲಿ !

ನೋಡಯ್ಯಾ ಭಕ್ತವರ ಗುರುಗಳು ನಿಂದ
ನೆಲಮಿಂದು ಬೆಳಗುತಿದೆ ಮಲ್ಲಮೂಲೆ ಎಂಬಾಖ್ಯೆಯಲಿ ಅವಿಮುಕ್ತ ಕ್ಷೇತ್ರವೆನೆ !
ಇಂತಿರಲುವೊಂದುದಿನ ಗುರುಗಳೀರ್ವರು
ಹತ್ತಿರದಿ ಗರಳಪುರಿಯಲಿ ಮೆರೆದು ನಿಂದಿಹ
ನಂಜುಂಡಯೋಗಿ ದರ್ಶನವ ಪಡೆದುಕೊಂಡು ಬರೆ

ಮುದದಿ ಹೊಂಟರು ನೋಡ!
ಹೋಗುವನಿತರಲಿ ನೋಡಯ್ಯೋ ಅರ್ಚಕರು
ದೇಗುಲದ ಬಾಗಿಲನು ಮುಚ್ಚಿದರು !
ದರ್ಶನಕೆ ಎಡೆಗೊಡಿರೆಂದು ಯೋಗಿಗಳು ಕೇಳಿದರು
ಅರ್ಚಕರು ಗರ್ವದಿಂ ಮತ್ತೊಮ್ಮೆ ಬನ್ನಿರೈ ಐಯ್ಯಗಳಿ
ಎಂದೆನುತ ಮತ್ತರೊಲು ನಿಂದರಮಮ !
ಗುರುಂಗಳು ಚಿತ್ತದಿ ನೊಂದು ಹಿಂದಿರುಗಿದರು !
ಗುರುಂಗಳು ಕಿರುದಾರಿಯು ಕ್ರಮಿಸುವನಿತರಲೆ
ನೋಡು ನೋಡಲ್ಲಿ ನಡೆದುದೊಂದದ್ಭುತವು !
ಅರ್ಚಕರ ಕಣ್ಣುಗಳು ಮಂಜಾಗಿ ಕಾಣದಾದವು ನೋಡ !
ಒಡನೆ ಅರ್ಚಕರು ಅರಿತರು ತಮ್ಮ ತಪ್ಪಂ !
ಕೂಗಿ ಕರೆದರಂ ಗುರುಗಳನು, ಬಾಗಿ ನಮಿಸಿದರು ಭಯದಿ ಭಕ್ತಿಯಲಿ !

ತಪ್ಪೆಮ್ಮದಯ್ಯ, ಅಲ್ಪಜ್ಞರು ನಾವೈ !
ಬಲ್ಲಿದರಂ ತಾವು ಮನ್ನಿಸಂತ ನಮ್ಮ ಸಲಹಿರೈ
ಎಂದುಮ್ಮಳಿಸಿ ಗುರುಪದಗಳಿಗೆರಗಿದರು !
ನೋಡವರ ಕಣ್ಣುಗಳಂ ಮುನ್ನಿನಂತಾದುದು
ಇದೊಂದು ಅದ್ಭುತವೆನೆ !

ಆಗಳಾ ಅರ್ಚಕರು ಬಂದವರು ಅಸಾಮಾನ್ಯರೆಂದರಿತು,
ನಂಜುಂಡನ ದರ್ಶನವ ಮಾಡಿಸಿ ಹಾಡಿ ಹೊಗಳಿದರು !

ಇಂಥ ಪವಾಡವನೆಂದಾದರು ಕಂಡಿರುವೆಯ ಭಕ್ತವರ !
ಏನೆಂದೆ, ಪವಾಡಗಳ ವಿಜ್ಞಾನಮಿಂದು-
ಮಲ್ಲಗಳೆವುತಿದೆ ಎಂಬೆ ಏನ್ ?

ಅಕ್ಕಕ್ಕ ! ಪ್ರತ್ಯಕ್ಷಮಿಲ್ಲದುದ ನಂಬದು ವಿಜ್ಞಾನ !
ಆದರಯ್ಯೋ ಅದರೆಲ್ಲ ರಹಸ್ಯಗಳು ಕೈಗೂಡಿಹುವಿಂದನರಿಹುದೆ !

ಅಲ್ತಲ್ತು ! ಇಳೆಯ ಒಡಲೊಳು ದಿನದಿನವು ನಡೆವ
ಅದ್ಭುತದ ಪವಾಡಗಳ ನೋಡೈ !
ಕಿರಿದು ಬೀಜದೊಳು ಹಿರಿದಾಗಿ ಬೆಳೆವ ಮರದನಂತಶಕ್ತಿ
ಹುದುಂಗಿಹುದು ಅಲ್ಲಿ ಪವಾಡವೆ !

ಉಷಾದಿಗಂಗನೆಯು ಓಕುಳಿಯನಂತ ಬಣ್ಣದಾಟ–
ವದಲ್ಲದೆ ಮತ್ತೇನು ನೀಹೇಳ !

ಆಗಸದಿ ಅನಂತ ಉದರದಿ ಚಲಿಸುವ ನಕ್ಷತ್ರಕಾಯಗಳ
ಸೃಷ್ಟಿ, ನಷ್ಟವು ಅದ್ಭುತಗಳಲಿ ಅದ್ಭುತವು ನೋಡ !

ಇಂತುಮನಂತ ಪವಾಡಗಳ ಸರಮಾಲೆಯೆ ಸೃಷ್ಟಿ, ಸ್ಥಿತಿ,
ಲಯವೈಸೆ !

ಸೃಷ್ಟಿಯೊಳಡಗಿರುವ ದ್ವಂದ್ವಾತ್ಮಕ ವೈಚಿತ್ರ್ಯದ
ಹಿಂದೆ ಹುದುಗಿ ನಿಂದಿಹ ಅನಂತಶಕ್ತಿಯ ಪರಿಚಯ
ಈ ಅಣುಯುಗದಲು ಆಗಿಲ್ಲವಯ್ಯ !

ಬ್ರಹ್ಮಾಂಡವೆಲ್ಲವಿದು ಬೆಳಕುನೆಳಲಿನ
ಮೇಣ್ ಶಬ್ದಸೌರಭದ ಆಟವೈಸೆ !

"ಸೃಷ್ಟಿಯ ಮೂಲಭೂತ ಅಂಶ ಬೆಳಕು ಎಂದು ಯಾವ ಮನುಷ್ಯ ಅರಿತು ಕೊಂಡಿರುವನೊ, ಅಂಥವನು ಪವಾಡಗಳ ನಿಯಮಗಳನ್ನು ಬಳಸಿಕೊಳ್ಳಬಲ್ಲ.

ಒಬ್ಬ ಸಿದ್ಧಪುರುಷ ಇಂದ್ರಿಯಗ್ರಾಹ್ಯ ಬೆಳಕಿನ ಬಗ್ಗೆ ಇರುವ ತನ್ನ ದೈವೀಜ್ಞಾನ ವನ್ನು ಸರ್ವ ವ್ಯಾಪಕವಾದ ಬೆಳಕಿನ ಅಣುಗಳನ್ನೂ ತತ್‌ಕ್ಷಣದಲ್ಲೇ ಅನುಭವಗೋಚರ ಅಭಿವ್ಯಕ್ತಿಯಾಗುವಂತೆ ಮಾಡಲು ಬಳಸಬಲ್ಲ. ಒಂದು ಮರವಾಗಬಹುದು, ಔಷಧ ವಾಗಬಹುದು, ಒಬ್ಬ ಮನುಷ್ಯನ ಆಕೃತಿಯಾಗಬಹುದು, ಯಾವುದನ್ನು ಯೋಚಿಸ ಬೇಕಾಗಿದೆಯೋ ಅದು ಯೋಗಿಯ ಬಯಕೆ ಹಾಗು ಇಚ್ಛಾಶಕ್ತಿ ಮತ್ತು ದರ್ಶನಶಕ್ತಿ ಗಳನ್ನು ಅವಲಂಬಿಸಿರುತ್ತದೆ." [1]

"ಪರಿಪಕ್ವ ಧ್ಯಾನದ ಮೂಲಕ ತನ್ನ ಪ್ರಜ್ಞೆಯನ್ನು ಸೃಷ್ಟಿಕರ್ತನಲ್ಲಿ ಸಮನ್ವಯ ಗೊಳಿಸಿದ ಯೋಗಿ ಸೃಷ್ಟಿಯ ಸಾರಸರ್ವಸ್ವವು ಕೇವಲ ಬೆಳಕು (ಪ್ರಾಣಶಕ್ತಿಯ ಸ್ಪಂದನ) ಎಂಬುದನ್ನು ಕಾಣುತ್ತಾನೆ" [2]

"ಪರಿಪೂರ್ಣ ಯೋಗಿಯೊಬ್ಬನ ಪ್ರಜ್ಞೆ ಅಲ್ಲವಾದ ದೇಹಕ್ಕೆ ಅನ್ವಯಿಸುವು ದಿಲ್ಲ, ವಿಶ್ವರಚನೆಗೇ ಅಪ್ರಯತ್ನವಾಗಿ ಅನ್ವಯವಾಗುವಂಥದು." [3]

ತಮ್ಮ ದೇಹಗಳನ್ನಾಗಲಿ, ಇತರ ವಸ್ತುಗಳನ್ನಾಗಲಿ ಆವಿರ್ಭವಿಸುವಂತೆ ಅಥವ ಅದೃಶ್ಯವಾಗುವಂತೆ ಮಾಡುವ, ಬೆಳಕಿನ ವೇಗದೊಡನೆ ಚಲಿಸುವ 'ಯಾವ ಭೌತವಸ್ತು ವನ್ನೇ ಆಗಲಿ ತತ್‌ಕ್ಷಣವೇ ಕಣ್ಣಿಗೆ ಗೋಚರಿಸುವಂತೆ ಮಾಡಲು ಸೃಜನಾತ್ಮಕ ಬೆಳಕಿನ ಕಿರಣಗಳನ್ನು ಬಳಸುವ ಸಾಮರ್ಥ್ಯವುಳ್ಳ ಸಿದ್ಧರು ಆ ಅಗತ್ಯ ನಿಯಮವನ್ನು ಪಾಲಿಸಿ ದ್ದಾರೆ. ಅವರ ದ್ರವ್ಯ ಪರಿಮಾಣ ಅನಂತವಾದುದು." [4]

1.2.3.4. ಯೋಗಿಯ ಆತ್ಮಕಥೆ, ಪರಮಹಂಸ ಯೋಗಾನಂದ, ಐ. ಬಿ. ಹೆಚ್. ಪ್ರಕಾಶನ ಪುಟಸಂಖ್ಯೆ ಕ್ರಮವಾಗಿ 345, 344, 343, 343,

ಗುರುಂಗಳು ಹಿಂತಿರುಗಿ ಬರುತಿರ್ಪ ದಾರಿಯೊಳು
ನೋಡದೋ ಹೋರಿಯೊಂದು ದೌಡಾಯಿಸಿ ಬರುತಿದೆ ;
ಇದ ನಿಲ್ಲಿಸಿದರು ಕೈಬೀಸಿ ಗುರುದ್ವಯರು !
ಇಂತೆನಿತೆನಿತೊ ಪವಾಡಂಗಳ ಗೆಯ್ದು ಭಕ್ತ
ಸಂಕುಳವನೆ ವರ್ಧಿಸಿದರು !

ಶಿವ ಬೆಳಗ ಸುತ್ತೆಲ್ಲ ಚೆಲ್ಲಿದರು !
ಮತ್ತೆ ನೋಡವರು ತಮ್ಮ ಠಾವನ್ನು ಬದಲಿಸಿದರಂ
ಕಪಿಲೆಯ ತಡಿಎಡೆಗೆ !

ಮಲ್ಲಯ್ಯನ ಮಂಟಪಕಿದು ಪಕ್ಕದಲೆ
ವಿರಾಜಿಸುತಿದೆ ನೋಡ !
ಕಪಿನಿ ಕಂಬಳಿಹೊದ್ದು ಗುರುಗಳು ಚರಿಸಿದರು
ಸುತ್ತೆಲ್ಲ ಹಳ್ಳಿಗಳ !

ಅಪರಿಮಿತ ರೀತಿಯಲಿ ಭಕ್ತರಂ ನಿಲಿಸಿದರಂ
ಭಕ್ತಸ್ಥಳದಿ ; ಲಿಂಗದೀಕ್ಷೆಯನಂಗೈದು !

ವರ್ಷಕ್ಕೊಮ್ಮೆ ತೋಂಟದ ಸಿದ್ಧಲಿಂಗೇಶನ
ಪರ್ವವನೆ ಮಾಡಿದರು ಮುದದೊಳು !

ಮಲ್ಲಯ್ಯ ನಿರಂಜನರ ಮಣಿಹವನು ಪೆರ್ಚಿಸುತ
ಬೆಳಗಿದರು ಭೂಮಿಯಲಿ !

ಮಣಿಹವವರದು ತುದಿಗೈದಿತೆನೆ ಇಮ್ಮಡಿಯ
ಕಂಬಳೀಶಂಗೆ ಕರೆದುಕೊಟ್ಟರು ಮುಂದಿನ ಸೂತ್ರವನು !
ಮೇಣ್ ತಮ್ಮೆಲ್ಲ ಶಿವಯೋಗ ಶಕ್ತಿ ಸಂಪದವನು !

ಅಂತ್ಯದಲಿ ನೋಡದೊ ಬಲಿದು ನಿಂದರು ಸಿದ್ಧಾಸನದಿ !
ಶಿವಯೋಗ ಭಾವದತ್ಯುಗ್ರ ತುದಿಯಲಿ ನಿಂದ ನಿಲವಿದು ನೋಡ
'' ಅರಿಷಡ್ವರ್ಗಂಗಳ ಬೇರ ಕಿತ್ತು ಬಿಸುಟರು,
ಇಷ್ಟಲಿಂಗಕೆ ನಿಷ್ಠೆಯಿಂದೆ

ಜಲ. ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲವೆಂಬ
ಅಷ್ಟವಿಧಾರ್ಚನೆಯ ಮಾಡಿ,
ಮತ್ತಾ ಲಿಂಗವನು ಧ್ಯಾನ ಮುಖದಿಂದೆ ಅಂತರಂಗಕ್ಕೆ ಬಿಜಯಂಗೈಸಿ,

ಹೃದಯಕಮಲ ಕರ್ಣಿಕಾ ಸ್ಥಾನದಲ್ಲಿ ಕುಳ್ಳಿರಿಸಿ,
ಪ್ರಾಣಮಯ ನಿರ್ಗುಣದ ಅಷ್ಟವಿಧಾರ್ಚನೆಯ ಮಾಡಿ,
ಚಿತ್ತ ಸ್ಥಿರವಾಗಿ, ಭಾವವು ಬಯಲು ಬ್ರಹ್ಮದಲ್ಲಿ ಹೊಳೆಹೋಗಿ,
ತಾನಿದಿರೆಂಬುದನಳಿದು,
ಉರಿಕರ್ಪೂರದಂತೆ ಅವಿರಳ ಸಮರಸವಾಗಿರ್ಪಾತನೆ
ನಿಜೈಕ್ಯ ನೋಡಾ ಅದೆಂತೆಂದಡೆ,

"ಷಡೂರ್ಮಯಶ್ಚ ಷಡ್ವರ್ಗಂ ನಾಸ್ತಿ ಚಾಷ್ಟವಿಧಾರ್ಚನಮ್
ನಿರ್ಭಾವೋ ನಿಜಲಿಂಗೈಕ್ಯಃ ಶಿಖಿಕರ್ಪೂರಯೋಗವತ್ ॥ "
ಎಂಬುದಾಗಿ
ಇಂತಪ್ಪ ನಿಜಲಿಂಗೈಕ್ಯದ ಮಹಾಘನ ನಿಜದ
ನಿಲುವಿಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರ. "

ಓ! ಹೋ ! ಆದಿಕಂಬಳೀಶ್ವರರ ದಿವ್ಯ ದರ್ಶನ ಧ್ವನಿಗೈದು
ಉಪಕರಿಸಿದ ಅಯ್ಯಗಳೆ ನೀವಾರು ?
ತಿಳಿಯೆ ನಾನಾತುರದಿ ಆಶಿಸುವೆನು ಹೇಳ !
ಇಷ್ಟಲ್ಪ ವಿಷಯವಿದು ತಿಳಿಯದಿಹುದೆ ನಿನಗೆ ?
ತಿಳಿ ! ನಾನುಮಾಶ್ರೀಗುರುವಿನ ತಾದಾತ್ಮ್ಯಭಾವದಮಲ ಛಾಯೆ !

ಶಿವಂ ಭೂಯಾತ್

ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯ ?
ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು.
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಮರೀಚಿಕಾ ಜಲದಂತಿರಬೇಕು.

—ಚನ್ನಬಸವಣ್ಣನವರು

ಪರಮಪೂಜ್ಯ ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರರು

ಶ್ರೀ ಕ. ಪು. ಮಹಾದೇವಪ್ಪ, ಎಂ. ಎ.

ಪ್ರಾಚೀನ ಗುರುಕುಲಗಳ ಜಾಡನ್ನನುಸರಿಸಿ ಹುಟ್ಟಿಕೊಂಡುವೆಂದು ಹೇಳಬಹುದಾದ ಮಠಗಳು ತಮ್ಮ ಧರ್ಮ, ತತ್ತ್ವ ಆಚಾರಗಳನ್ನು ಜನಸಾಮಾನ್ಯರಿಗೆ ಅರುಹಿ ಅವರನ್ನುದ್ಧರಿಸುವ ಉದಾತ್ತ ಉದ್ದೇಶವನ್ನಿಟ್ಟುಕೊಂಡೇ ಬೆಳೆದುಬಂದಂತೆ ಕಂಡು ಬರುತ್ತದೆ. ಕರ್ನಾಟಕದಲ್ಲಿನ ವೀರಶೈವ ಮಠಗಳಾದರೂ ಇದೇ ತಳಹದಿಯ ಮೇಲೆ ಸ್ಥಾಪನೆಗೊಂಡು ಕ್ರಿ. ಶ. 12 ನೆಯ ಶತಮಾನದ ನಂತರ ನಡೆದ ಶರಣರ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಕ ಕ್ರಾಂತಿಯಿಂದಾಗಿ ತಮ್ಮದೇ ಆದ ಇತಿಹಾಸ, ಪರಂಪರೆಗಳನ್ನು ಹೊಂದಿದವುಗಳಾಗಿವೆ.

ಮೈಸೂರಿನ ದಕ್ಷಿಣ ದಿಕ್ಕಿಗೆ ಸುಮಾರು 18 ಕಿ. ಮೀ. ದೂರದಲ್ಲಿರುವ, ಈಗ ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿಗೊಳ್ಳುತ್ತಿರುವ ಬಸವನಪುರ ಗ್ರಾಮಕ್ಕೆ ಸೇರಿದಂತೆಯೆ ಕಪಿಲಾ ನದಿಯ ತೀರದಲ್ಲಿರುವ ವೀರಶೈವ ಮಠವೇ ಮಲ್ಲನಮೂಲೆ ಮಠ. ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಇದ್ದ ಶ್ರೀಗುರು ನಿರಂಜನ ಮೂರ್ತಿಗಳು ಹಾಗೂ ಅವರ ಶಿಷ್ಯ ಕಾಯಕದ ಮಲ್ಲಯ್ಯ ಇವರ ಲಿಂಗಾನುಷ್ಠಾನ, ಶಿವಯೋಗ ಸಮಾಧಿಗಳಿಂದ ಮತ್ತಷ್ಟು ಪವಿತ್ರವಾದ ಪ್ರದೇಶದಲ್ಲಿರುವುದೇ ಮಲ್ಲನಮೂಲೆ. ಪರಮಪೂಜ್ಯ ಶ್ರೀ ಶ್ರೀ ಕಂಬಳೇಶ್ವರರು ಈಗಿನ ಮಠದ ಎದುರಿಗಿರುವ ದಿಣ್ಣೆಯ ಮೇಲೆ ಪರ್ಣಶಾಲೆಯೊಂದನ್ನು ಕಟ್ಟಿಕೊಳ್ಳುವುದರ ಮೂಲಕ ಶ್ರೀಮಠಕ್ಕೆ ನಾಂದಿ ಹಾಕಿದರೆಂದು ಹೇಳಬಹುದು. ಕರ್ನಾಟಕದ ಉತ್ತರಭಾಗದಿಂದ ಬಂದ ಆದಿಗುರು ಕಂಬಳೇಶ್ವರರು ಹಾಗೂ ಅವರ ಸಹೋದರರು ಸುಮಾರು ಇನ್ನೂರು ವರ್ಷಗಳ ಹಿಂದೆ ಶ್ರೀ ಮಠದ ಸಂಸ್ಥಾಪಕರಾಗಿ ಭಕ್ತರಿಗೆ ಜ್ಞಾನಾನ್ನದಾಸೋಹ ಮಾಡತೊಡಗಿದರೆಂದು ತಿಳಿದುಬರುತ್ತದೆ. ಆದಿಗುರುಗಳ ನಂತರ ಬಂದವರೇ ಶ್ರೀಶ್ರೀ ಇಮ್ಮಡಿ ಕಂಬಳೇಶ್ವರರು.

ಆದಿಗುರು ಶ್ರೀ ಶ್ರೀ ಕಂಬಳೇಶ್ವರರ ಆಪ್ತ ಶಿಷ್ಯರಾಗಿ ಸೇವಾ ಕೈಂಕರ್ಯ ಮಾಡುತ್ತಾ, ಶ್ರೀ ಗುರುಕೃಪೆಗೆ ಪೂರ್ಣವಾಗಿ ಪಾತ್ರರಾಗಿ ಅವರ ಅನುಗ್ರಹ ಪಡೆದ ಇಮ್ಮಡಿ ಕಂಬಳೇಶ್ವರರು ಅವರ ಕರಕಮಲಸಂಜಾತರಾದರು. ವಿಶಾಲವಾದ ಹಣೆಗೆ ಧರಿಸಿದ ವಿಭೂತಿ, ಕೊರಳಲ್ಲಿ ಕಟ್ಟಿದ ರುದ್ರಾಕ್ಷಿ, ಕೈಯಲ್ಲಿ ಹಿಡಿದ ಬೆತ್ತ, ಅಂಗಕ್ಕೆ ಧರಿಸಿದ ಕಾವಿಯ ಕಪನಿ, ತಲೆಯ ಮೇಲಿಂದ ಮೊಣಕಾಲವರೆಗೆ ಇಳಿಬಿದ್ದ ಗೊರಗಿನಾ

ಕಾರದ ಕಂಬಳಿ ಇವುಗಳನ್ನು ಧರಿಸುತ್ತಿದ್ದ ಎತ್ತರವಾದ ನಿಲುವಿನ ತೇಜೋಮೂರ್ತಿಯಾದ ಶ್ರೀ ಇಮ್ಮಡಿ ಕಂಬಳೇಶ್ವರರು ಆದಿಗುರುಗಳು ಲಿಂಗೈಕ್ಯರಾದಮೇಲೆ ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀಮಠದ ಜವಾಬ್ದಾರಿ ವಹಿಸಿಕೊಂಡರು. ಆದಿಗುರುಗಳಂತೆಯೇ ಇವರೂ ಕಂಬಳಿ ಹೊದ್ದಿರುತ್ತಿದ್ದುದರಿಂದಲೂ ಮತ್ತು ಅವರ ನಂತರ ಮಠಾಧ್ಯಕ್ಷರಾದುದರಿಂದಲೂ ಇವರನ್ನು ಮರಿ ಕಂಬಳೇಶ್ವರರೆಂದೂ, ಇಮ್ಮಡಿ ಕಂಬಳೇಶ್ವರರೆಂದೂ, ಕಂಬಳಿ ಅಪ್ಪಗಳೆಂದೂ ಭಕ್ತಗಣ ಗೌರವಪೂರ್ವಕವಾಗಿ ಕರೆಯುತ್ತಿದ್ದರು. ಆದಿಗುರುಗಳು ಪರ್ಣಶಾಲಾ ಮಠದಲ್ಲಿ ಲಿಂಗೈಕ್ಯರಾದ ನಂತರ ಅವರ ಲಿಂಗ ಶರೀರವನ್ನು ಸಮಾಧಿ ಮಾಡಿದ ತಾಣವೆ ಈಗಿನ ಶ್ರೀಮಠವಾಗಿದೆ.

ಹೀಗೆ ಬಸವಾದಿ ಶರಣರು ನಿಜಗುಣ ಭಾವದಿಂದ ಬೋಧಿಸಿದ ಸತ್ಯಶುದ್ಧ ಕಾಯಕವೆ ಶ್ರೀ ಮಠದ ಧ್ಯೇಯ. " ಸೋಹಂ ಎನಿಸದಿರಯ್ಯ ದಾಸೋಹಂ ಎಂದೆನಿಸಯ್ಯ " ಎಂಬ ಶರಣ ತತ್ತ್ವದ ಭದ್ರ ಬುನಾದಿಯಮೇಲೆ ಶ್ರೀಮಠದಲ್ಲಿ ದಾಸೋಹ ನಡೆಯುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಮಹಾಮನೆಯಲ್ಲಿ ನಡೆಸುತ್ತಿದ್ದ ಲಕ್ಷದಮೇಲೆ ತೊಂಬತ್ತಾರುಸಾವಿರ ಗಣಂಗಳಿಗೆ ಉಣಬಡಿಸುತ್ತಿದ್ದ ದಾಸೋಹದಿಂದ ತಾನು " ಮಹಾದಾಸೋಹಿ " ಎನ್ನುವ ಮಮಕಾರ ಅಣ್ಣನವರಲ್ಲಿ ಮೂಡಿದಾಗ ಅಲ್ಲಮಪ್ರಭು ಅಷ್ಟು ಪ್ರಸಾದವನ್ನು ಭುಂಜಿಸಿಯೂ, ಸಂತೃಪ್ತರಾಗದಿದ್ದಾಗ ಅಣ್ಣನವರಿಗೆ " ಮಾಡುವಾತ ನಾನಲ್ಲಯ್ಯ ; ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ " ಎಂಬ ಆತ್ಮಭರ್ತ್ಸನೆಯ ಭಾವನೆಮೂಡಿ, ಕೊಡುವವನೂ ಶಿವನೇ ಕೊಂಬವನೂ ಶಿವನೆ ಎಂಬ ನಿಜದರಿವಾಯಿತು.

ಒಮ್ಮೆ ಇಮ್ಮಡಿ ಅಪ್ಪಗಳು ಹೀಗೆ ಭಿಕ್ಷಾಟನೆ ಮಾಡುತ್ತಿದ್ದಾಗ ಯಳಂದೂರಿನಿಂದ ಹಿಂದಿರುಗಬೇಕಾಗಿತ್ತು. ಸಾಯಂಕಾಲ ಸಮೀಪಿಸುತ್ತಿದೆ. ಬಂಡಿಯಾತ ಎತ್ತುಗಳನ್ನು ಸ್ವಲ್ಪ ಜೋರು ಎನ್ನುವಂತೆಯೆ ಹೊಡೆಯುತ್ತಿದ್ದ. ಮೊದಲೆ ಎತ್ತುಗಳನ್ನು ಕಂಡರೆ ಅಪಾರ ಪ್ರೇಮಾನುಕಂಪೆಯುಳ್ಳವರಾಗಿದ್ದ ಶ್ರೀಗಳವರು ಗಾಡಿಯವನನ್ನು ಕುರಿತು " ಅಪ್ಪಾಜಿ ! ಯಾಕೆ ಹೀಗೆ ಎತ್ತುಗಳನ್ನು ಹೊಡೀತಿ ? ಸ್ವಲ್ಪ ನಿಧಾನವಾಗಿಯೇ ಹೋಗ್ಲಿ " ಎಂದರು. ಗಾಡಿಯವನಿಗಾದರೂ ಅವನದೆ ಆದ ಚಿಂತೆ, ಭಯ. ಗುರುಗಳಿಗೆ ಹೇಳಿದ " ಕತ್ಲಾಗೋ ಅಷ್ಟರಲ್ಲಿ ಸದ್ಯ ಹೆಗ್ವಾಡಿ ದಾಟಿದ್ರೆ ಸಾಕು ! ". "ಹೆಗ್ವಾಡಿ ಹತ್ರ ಅಂಥ ವಿಶೇಷ ಏನು ? " ಎಂದರು ಗುರುಗಳು. " ಅದು ದೊಣ್ಣೆ ಹೆಗ್ವಾಡಿ ಬುದ್ದಿ ಮಾತೆತ್ತಿದ್ರೆ ದೊಣ್ಣೆ ತಗೋತಾರೆ ಈ ಊರ್‍ಜನ. ಕತ್ಲಾದ್ರೆ ಸಾಕು ಈ ದಾರೀಲಿ ಜನ ಗಾಡಿ ಇತ್ಯಾದಿ ಹೋಗೋಹಾಗಿಲ್ಲ. ಅಪ್ಪಿತಪ್ಪಿ ಏನಾರ ಬಂದ್ರೆ ಕೆಡ್ಕೇನೂ ಆಗ್ದೆ ಹೋಗೋದು ಪುಣ್ಯ " ಎಂದ ಗಾಡಿಯಾತ. ಗುರುಗಳು ಕೇಳಿದರು " ಯಾಕೆ ಏನ್ಮಾಡ್ತಾರೆ. " " ದಾರೀಲ್ಬಂದ ಜನರನ್ನು ತಡಿಯೋದು, ದುಡ್ಡು ಕಾಸಿದ್ರೆ ಕಿತ್ಕೊಳೋದು, ಗಾಡೀಲಿ ತಕ್ಕೊಂಡು ಹೋಗೋ ಸಾಮಾನುಗಳ್ನ ಇಳಿಸ್ಕೊಳ್ಳೋದು ಜೋರ್ಮಾಡಿದ್ರೆ ಪ್ರಾಣ ತೆಗಿಯೋಕೂ ಸರಿಯೆ, ಮನಸ್ಮಾಡಿದ್ರೆ ಎಷ್ಟು ಹುಲ್ಮೆದೆ

ಬೇಕಾದ್ರೂ ಸುಟ್ಟಾರು ! ''—ಹೀಗೆ ಊರವರ ಒರಟುತನ ಹಾಗು ದ್ವೇಷಾಸೂಯೆ ಗಳಿಂದ ತುಂಬಿದ ಸ್ವಭಾವದ ಪರಿಚಯ ಮಾಡಿಕೊಟ್ಟ ಆ ಗಾಡಿಯವ. ಗುರುಗಳು ನಕ್ಕು ಸುಮ್ಮನಾದರು. ಗಾಡಿ ಹೆಗ್ಗವಾಡಿಯನ್ನು ಸಮೀಪಿಸುತ್ತಿದ್ದಂತೆಯೆ ಕಂಬಳಿ ಅಪ್ಪಗಳು "ಅಪ್ಪಾಜಿ ! ಗಾಡಿ ಇಲ್ಲೆ ಹೊಡಿ. ಈ ರಾತ್ರಿ ಇಲ್ಲೆ ತಂಗಿದ್ದು ದೊಣ್ಣೆ ಹೆಗ್ವಾಡಿಯನ್ನು ಬೆಣ್ಣೆ ಹೆಗ್ವಾಡಿ ಮಾಡಿ ಹೋಗೋಣ !" ಎಂದಾಗ ಅವನಿಗೆ ಆಶ್ಚರ್ಯ ಭಯಗಳೆರಡೂ ಒಟ್ಟಿಗೆ ಆದವು. ಆದರೂ 'ಗುರುಕೃಪೆ' ಎಂತಿದೆಯೊ ಎಂದು ಮನದಲ್ಲೆ ನೆನೆದು ಗಾಡಿಯನ್ನು ಊರೊಳಕ್ಕೆ ಹೊಡೆದ. ಗುರುಗಳಿಗೆ ತೋಚಿದ ಮನೆಯೊಂದರ ಮುಂದೆ ಗಾಡಿ ನಿಂತಿತು. ಮನೆಯೊಳಗೆ ಪ್ರವೇಶಿಸಿದ ಗುರುವಿನ ಪ್ರಥಮ ದರ್ಶನದಿಂದಲೆ ಆ ಮನೆಯೊಡೆಯನಲ್ಲಿ ಏನೊ ಒಂದು ಬಗೆಯ ತಳಮಳ ಕಾತುರ. ಬಂದವರ್ಯಾರೆಂದು ಕೇಳಬೇಕೆನಿಸಿದ್ದರೂ ಆಗದೆ ತಾನು ತನ್ನ ಮನೆಯವ ರೆಲ್ಲರೂ ಗುರುಪಾದಕ್ಕೆ ಎರಗಿದರು. ಗುರುವಿನ ಕಾರುಣ್ಯ ತುಂಬಿದ ಕಣ್ಣೋಟದಿಂದ ಮೃದು ಮಧುರ ವಚನಗಳಿಂದ ಮನೆಯವರಲ್ಲೆಲ್ಲ ಏನೋ ಒಂದು ಬಗೆಯ ಭಕ್ತಿಭರಿತ ಗೌರವಭಾವನೆ ಮೂಡಿದೆ. ಅಂತೂ ಮಹಿಮಾನ್ವಿತರಾದವರು ಯಾರ ಮನಸ್ಸಿನಲ್ಲಿ ಯಾವಾಗ ಏನು ಭಾವನೆ ಉಂಟುಮಾಡುವರೊ ! ಬಲ್ಲವರಾರು ? ಗುರುವಿಗೆ ಸ್ನಾನ ಪೂಜಾದಿಗಳ ಸಿದ್ಧತೆಯೂ ಆಯಿತು. ಪ್ರಸಾದಾನಂತರ ಮನೆಯೊಡೆಯನನ್ನು ಕುರಿತು "ಹೆತ್ತಯ್ಯಾ ! ನಿಮ್ಮೂರಿನ ಜನಾನೆಲ್ಲ ಕೂಡಸ್ತೀಯಾ, ಸ್ವಲ್ಪ ಮಾತ್ನಾಡೋದಿದೆ" ಎಂದರು. ಮರುಮಾತಿಲ್ಲದೆ ಮನೆಯೊಡೆಯ ಊರವರಿಗೆಲ್ಲ ತಿಳಿಸಲು ಹೋದ. ಎಲ್ಲರಲ್ಲೂ ಒಂದೇ ಮಾತು "ಈ ಊರ್ಗೆ ಯಾವಾಗ್ಲೂ ಯಾವ ಸ್ವಾಮಿಾನೂ ಬರೊ ಧೈರ್ಯ ಮಾಡಿಲ್ಲ ! ಇವ್ರ್ಯಾರಪ್ಪ ಬಂದಿರೋರು ನೋಡ್ಕೊಂಡು ಬರೋಣ" ಎಂದು ಸಹಜ ಕುತೂಹಲದಿಂದ ಜನ ಸೇರಿದರು. ತುಂಬಿದ್ದ ಜನಸಂದಣಿಯನ್ನು ಗುರುಗಳು ಸ್ವಲ್ಪ ಹೊತ್ತು ದೃಷ್ಟಿಸಿ ನೋಡಿದರು. ಆ ನೋಟದಿಂದಲೆ ಮೋಡಿಗೊಳ ಗಾದಂತಿದ್ದ ಜನರ ಮನಸ್ಸನ್ನು ಗುರು ಅರುಹಿದ ನೀತಿಜೀವನ, ಸತ್ಯಶುದ್ಧ ಕಾಯಕ ಮುಂತಾದ ವಿಷಯಗಳು ನಾಟಿದ್ದವು. ಕಡೆಯದಾಗಿ "ಪತ್ತೈಗಳಾ ! ನಿಮ್ ಬಗ್ಗೆ ಜನ್ಗಳಲ್ಲಿ ಯಾಕಷ್ಟು ಕೆಟ್ಟ ಭಾವ್ನೆ ; ನಿಮ್ಮ ನಡತೆಯನ್ನು ಸ್ವಲ್ಪ ತಿದ್ಕೋಬಾರ್ದಾ" ಎಂದರು. ಇಷ್ಟರಲ್ಲಾಗಲೆ ಗುರುನುಡಿಯಿಂದ ಪ್ರಭಾವಿತರಾಗಿದ್ದ ಆ ಜನಸಂದಣಿ ಕಳ್ಳತನ, ಸುಲಿಗೆ, ದ್ವೇಷಾಸೂಯೆ ಮುಂತಾದ ಕೆಟ್ಟ ಭಾವಗಳಿಗೆ ಎಡೆಕೊಡಬಾರ ದೆಂದೂ, ಊರಿಗೆ ಅಂಟಿರುವ ಕಳಂಕವನ್ನು ತೊಡೆದು ಹಾಕಬೇಕೆಂದೂ ಸಂಕಲ್ಪಿಸಿತು. ಗುರುವಿನ ಪಾದ ಮೂಲದಲ್ಲಿ ಸಾಷ್ಟಾಂಗವೆರಗಿತು. ಮುಂದೆ ಆ ಕಳಂಕ ತೊಡೆದು ಹೋಯಿತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಕೆಲವು ಕಾಲಾನಂತರ ಆ ಊರಿನ ಬಹುತೇಕ ವೀರಶೈವರೆಲ್ಲರೂ ಶ್ರೀಮಠದ ಭಕ್ತರಾದರೆಂದೂ ಅವರು ಅಂದು ತಂಗಿದ್ದ ಮನೆ ದಿವಂಗತ ವೀರಣ್ಣನವರ ಪೂರ್ವಿಕರ ಮನೆಯೆಂದೂ ಹೇಳುವುದುಂಟು. ಈಗಲೂ

ಮಠದ ಆರಾಧನೆ ಮುಂತಾದ ಕಾರ್ಯ ಸಂದರ್ಭಗಳಲ್ಲಿ ಹೆಗ್ಗವಾಡಿಯ ಭಕ್ತರ ಓಡಾಟ ತುಸು ವಿಶೇಷವಾಗಿಯೆ ಇರುವುದು ಈ ಘಟನೆಗೆ ಸಾಕ್ಷಿಯಂತಿದೆ.

ಆದಿಗುರುಗಳ ಕಾಲದಲ್ಲಿ ಪ್ರಾರಂಭವಾದ ದಾಸೋಹ ಹಾಗೂ ಅದಕ್ಕಾಗಿ ಮಾಡುತ್ತಿದ್ದ ಧಾನ್ಯಭಿಕ್ಷೆ ಇಮ್ಮಡಿ ಕಂಬಳೀಶ್ವರರ ಕಾಲದಲ್ಲಿ ಹೆಚ್ಚಾಯಿತೆಂದೂ ತರುವಾಯ ಮತ್ತಷ್ಟು ಬೆಳೆದುಕೊಂಡು ಬಂದಿತೆಂದೂ ತಿಳಿಯುತ್ತದೆ. ಇಮ್ಮಡಿ ಶ್ರೀಗಳ-ವರು ಮಠದ ಜವಾಬ್ದಾರಿ ವಹಿಸಿಕೊಂಡಮೇಲೆ ಪ್ರವಾಸಮಾಡುತ್ತ, ಜನರಲ್ಲಿ ಧರ್ಮ ಪ್ರಸಾರ ಮಾಡುತ್ತ, ಭಕ್ತರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದರು. ಇವರ ಕಾಲದಲ್ಲಿಯೆ ಚಾಮರಾಜನಗರ, ಯಳಂದೂರು. ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೋಕುಗಳ ಅನೇಕ ಜನರು ಶ್ರೀಮಠದ ಭಕ್ತರಾದರೆಂದು ತಿಳಿಯುತ್ತದೆ.

ಎತ್ತಿನ ಗಾಡಿಯೊಂದರಲ್ಲಿ ಧರ್ಮ ಪ್ರಸಾರಕ್ಕಾಗಿ ತಮ್ಮ ಭಕ್ತರ ಊರುಗಳಿಗೆ ಹೋಗುತ್ತಿದ್ದ ಶ್ರೀಗಳವರನ್ನು ಜನರು ಜಾತಿ-ಮತ-ಭೇದವಿಲ್ಲದೆ ಸೇವಿಸುತ್ತಿದ್ದರು ; ಶ್ರೀಗಳವರ ದರ್ಶನಾಶೀರ್ವಾದಗಳಿಂದ ತಾವು ಪುನೀತರಾದಂತೆ ಭಾವಿಸುತ್ತಿದ್ದರು. ಭಕ್ತರಿಗಾದರೊ ಶ್ರೀಗಳವರ ಪವಾಡ ಸದೃಶ ವ್ಯಕ್ತಿತ್ವದಿಂದಾಗಿ ಅವರಲ್ಲಿ ಎಲ್ಲಿಲ್ಲದ ಭಕ್ತಿ ಗೌರವಗಳು. ಅಂತೆಯೆ ಅವರು ಪರಮ ಸಂತೋಷದಿಂದಲೂ, ಸಂಭ್ರಮ ಸಡಗರ ಗಳಿಂದಲೂ ಶ್ರೀಗಳವರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ಪೂಜಾ ವಿಧಿಗಳನ್ನು ಮಾಡಿಸಿ ಪ್ರಸಾದವನ್ನುಣಬಡಿಸಿ, ಶ್ರೀಗಳವರ ಧರ್ಮೋಪದೇಶವನ್ನು ಕೇಳಿ, ಯಥಾ ಶಕ್ತಿ ದವಸ ಧಾನ್ಯಗಳನ್ನಿತ್ತು ಕೃತಾರ್ಥರಾದಂತೆ ಭಾವಿಸುತ್ತಿದ್ದರು. ಇಂತಹ ಸಮಯ ಗಳಲ್ಲಿಯೆ ಶ್ರೀಗಳವರು ಭಕ್ತನ ಆಗು ಹೋಗುಗಳನ್ನು ವಿಚಾರಿಸುವುದರ ಜೊತೆಗೆ ಅಷ್ಟಾವರಣ, ಪಂಚಾಚಾರ, ದಾಸೋಹ, ಕಾಯಕ, ಇತ್ಯಾದಿ ವಿಷಯಗಳ ಬಗೆಗೂ ಭಕ್ತರ ಗ್ರಹಣ ಶಕ್ತಿಗನುಗುಣವಾಗಿ ವಿವರಿಸುತ್ತಿದ್ದರು.

ಶ್ರೀಶ್ರೀ ಇಮ್ಮಡಿ ಕಂಬಳೀಶ್ವರರ ಕಾಲದಲ್ಲಿಯೆ ಶ್ರೀಮಠದಲ್ಲಿ ಕಾರ್ತಿಕಮಾಸದ ಉತ್ಸವ, ಶಿವರಾತ್ರಿಯ ಜಾಗರಣಾ ಮಹೋತ್ಸವ ಮತ್ತು ಅಮಾವಾಸ್ಯೆಯ ಕಟ್ಟಳೆ ಗಳು ನಡೆಯತೊಡಗಿದವು. ಪ್ರತಿ ಕಾರ್ತಿಕ ಸೋಮವಾರದಂದು ಶ್ರೀಮಠದಲ್ಲಿ ವಿಶೇಷ ಪೂಜೆ ಹಾಗು ರಾತ್ರಿ ದೀಪೋತ್ಸವವೂ ನಡೆಯುತ್ತಿತ್ತು. ಜಾತ್ರೆಯೋಪಾದಿಯಲ್ಲಿ ಬರುತ್ತಿದ್ದ ಜನ ಸ್ನಾನ ಪೂಜಾದಿಗಳೊಂದಿಗೆ ಪ್ರಸಾದ ಸೇವಿಸಿ ಸಂತುಷ್ಟರಾಗುತ್ತಿದ್ದರು. ಶಿವರಾತ್ರಿಯಂದು ದೂರದ ಊರುಗಳಿಂದಲೂ ತಂಡೋಪತಂಡವಾಗಿ ಬರುತ್ತಿದ್ದ ಭಕ್ತರು ರಾತ್ರಿ ಜಾಗರಣೆಮಾಡಿ, ಪೂಜಾನಂತರ, ಶರಣ ಚರಿತಾಮೃತ ಹಾಗೂ ಭಜನೆ ಗಳನ್ನು ಕೇಳುತ್ತ ಇರುತ್ತಿದ್ದರು. ಅಮಾವಾಸ್ಯೆಯ ಕಟ್ಟಳೆಗಳಂದು ಆಗಮಿಸುತ್ತಿದ್ದ ಭಕ್ತರಿಗೆ ಶ್ರೀಗುರುವು ಅನುಗ್ರಹಿಸಿದ ಯಂತ್ರಧಾರಣೆ ಭಸ್ಮಧಾರಣೆಯ ಫಲವಾಗಿ ಸಕಲ ರೋಗ-ರುಜಿನಗಳೂ ಕಷ್ಟ ಪರಂಪರೆಗಳೂ ನಿವಾರಣೆಯಾಗುತ್ತಿದ್ದವು.

'ಮೃದುವಚನವೆ ಸಕಲ ಜಪಂಗಳಯ್ಯ, ಮೃದುವಚನವೆ ಸಕಲ ತಪಂಗಳಯ್ಯ' ಎಂಬ ಶರಣರ ವಚನಕ್ಕೆ ಸಾಕಾರ ರೂಪದಂತಿದ್ದ ಶ್ರೀಗಳವರು ಯಾರಿಗೂ ಕಠೋರವಾಗಿ ಆಡಿದವರಲ್ಲ. ಭಕ್ತರನ್ನು ಸಂಬೋಧಿಸಬೇಕಾದರೂ 'ಹೆತ್ತಯ್ಯ' ಎಂಬ ಶಬ್ದ ಬಳಕೆಯಾಗದಿರುತ್ತಿರಲಿಲ್ಲ. "ದಯವೇ ಧರ್ಮದ ಮೂಲವಯ್ಯ, ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ" ಎಂದು ಅಣ್ಣನವರು ನುಡಿದಂತೆಯೇ ಶ್ರೀಗಳವರೂ ಅಪಾರ ದಯಾಪರರಾಗಿದ್ದರು. ವಾಕ್‌ಸಿದ್ಧಿಯನ್ನು ಪಡೆದಿದ್ದ ಶ್ರೀಗಳವರಲ್ಲಿ ಒಮ್ಮೆ ಕಮ್ಮರವಾಡಿಯ ಭಕ್ತ ಸಾಹುಕಾರ್ ಶ್ರೀ ವೀರಭದ್ರಪ್ಪನವರು ತಮಗೆ ಗಂಡು ಸಂತಾನವಿಲ್ಲದ ಅಳಲನ್ನು ತೋಡಿಕೊಂಡಾಗ "ಹೋಗು ಹೆತ್ತಯ್ಯ ! ಮಠಕ್ಕೆ ಬಸವನ ಬಾಗಿಲು ಮಾಡಿಸಿಬಿಡು, ನಿನಗೆ ಬಸವನಂಥದ್ದೊಂದು ಗಂಡು ಮಗು ಆಗುತ್ತೆ" ಎಂದು ಹರಸಿದರಂತೆ. ಅವರು ಮಾಡಿಸಿದ ಬಸವನೇ ಇಂದು ಶ್ರೀಮಠದ ಹೆಬ್ಬಾಗಿಲಿನಲ್ಲಿ ರಾರಾಜಿಸುತ್ತಿದೆ. ಮಠದ ಹಿಂದಿರುವ ಕಪಿಲಾ ನದಿಯ ಸೋಪಾನದ ಗಾರೆಕೆಲಸ ಇತ್ತೀಚೆಗೆ ನಡೆದದ್ದಾದರೂ, ಆ ಸೋಪಾನಕ್ಕೆ ನಾಂದಿ ಇಮ್ಮಡಿ ಅಪ್ಪಗಳ ಕಾಲದಲ್ಲಿಯೆ ಪ್ರಾರಂಭವಾಯಿತು. ಈ ಹೊತ್ತಿಗೂ ದೂರದೂರುಗಳಿಂದ ಬರುವ ಪ್ರವಾಸಿಗರಿಗೆ ಮಿಂದು ಮಾರ್ಗಾಯಾಸವನ್ನು ಪರಿಹರಿಸುವುದಕ್ಕೆ ಇದಕ್ಕಿಂತ ಪ್ರಶಸ್ತವಾದ ಸ್ಥಳ ಬಹುಶಃ ನಂಜನಗೂಡು ಕ್ಷೇತ್ರದಲ್ಲಿ ಮತ್ತೊಂದಿಲ್ಲ. ಈಗ ಶ್ರೀಮಠದಲ್ಲಿ ಪ್ರೌಢಶಾಲೆಯ ಹಾಗೂ ಕಾಲೇಜಿನ ಅನೇಕ ಜನ ವಿದ್ಯಾರ್ಥಿಗಳು ಅಶನವಸತಿಗಳನ್ನು ಪಡೆದು ವಿದ್ಯಾರ್ಜನೆ ಮಾಡುತ್ತಿದ್ದಾರೆ. ನದಿಯ ಜುಳು ಜುಳು ನಿನಾದ ಹಾಗೂ ಬದಿಯಲ್ಲಿರುವ ತೋಟ ಗದ್ದೆಗಳ ನಿಸರ್ಗ ರಮಣೀಯತೆಯಿಂದ ಕೂಡಿರುವ ಈ ಪ್ರದೇಶವು ವಿದ್ಯಾರ್ಥಿಗಳ ವಿದ್ಯಾರ್ಜನೆಗೆ, ನಿಜಸಾಧಕರ ಸಾಧನೆಗೆ ಪರಮ ಪವಿತ್ರ ತಾಣವಾಗಿದೆ. ಇವೆಲ್ಲ ಇಮ್ಮಡಿ ಶ್ರೀಗಳವರ ದೂರದೃಷ್ಟಿಯ ಫಲವಲ್ಲದೆ ಬೇರೇನು ?

'ಕಂಬಳಿ ಅಂಬಲಿ ಆಸ್ತಿ, ವಿಂಕ್ಕಿದ್ದೆಲ್ಲ ಜಾಸ್ತಿ' ಎಂದೂ "ಬೇಕು ಎಂದವ ಬಡವ ಸಾಕು ಎಂದವ ಸಾಹುಕಾರ" ನೆಂದೂ ಭಕ್ತರಿಗೆ ಹೇಳುತ್ತಿದ್ದರು. ಅಂದು ಮೈಸೂರ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಅರಮನೆಗೂ ಭೇಟಿ ಕೊಡುತ್ತಿದ್ದ ಶ್ರೀಗಳವರನ್ನು ಅರಸರು ಭಕ್ತಿ ಗೌರವಗಳಿಂದ ಕಂಡು ಉಪಚರಿಸಿ ಬೀಳ್ಕೊಡುತ್ತಿದ್ದರು. ಒಮ್ಮೆ ಶ್ರೀಮನ್ಮಹಾರಾಜರವರು ಶ್ರೀಗಳವರಿಗೆ ಏನಾದರೂ ಕಾಣಿಕೆ ಕೊಡಬೇಕೆಂದು ತಮ್ಮ ಅಪೇಕ್ಷೆಯನ್ನು ಅರುಹಿದಾಗ, ಕಂಬಳಿ ಅಪ್ಪಗಳು "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ?" ಎಂಬ ಶರಣರ ಸೂಳ್ನುಡಿಯಂತೆ ಅವರ ಅಪೇಕ್ಷೆಗೆ ಓಗೊಡಲಿಲ್ಲ. ಈ ಘಟನೆಯಿಂದ ಮಹಾರಾಜರು ಮನನೊಂದರೆಂದು ತಿಳಿದ ಶ್ರೀಗಳವರು ಪ್ರತಿವರ್ಷದ, ಕಾರ್ತಿಕಮಾಸದ ಆರಾಧನೆಯಂದು ಮಠದಲ್ಲಿ ಪಾಯಸವನ್ನು ಮಾಡಲು ಕಡಾಯಿಯೊಂದನ್ನು ಆ ಒಂದು ದಿನಕ್ಕೆ ಮಾತ್ರ ಸೇವೆಯಾಗಿ ಕೊಡಬಹುದೆಂದು ತಿಳಿಸಿದರಂತೆ. ಆ ಕಡಾಯಿಯನ್ನು ಶ್ರೀಗಳವರ ಹನ್ನೆರಡನೆಯ ಪುಣ್ಯಾರಾಧನೆಯವರೆಗೂ ಅರಮನೆಯಿಂದ ತಂದು ಹಿಂತಿರುಗಿಸುವ ವಾಡಿಕೆ ಇತ್ತು.

ಶ್ರೀಗಳವರು ತಮ್ಮ ಸಮಕಾಲೀನರಾಗಿದ್ದ ಬೆಟ್ಟದಪುರದ ಪರಮಪೂಜ್ಯ ಶ್ರೀ ಶ್ರೀ ಚಿಕ್ಕವೀರ ದೇಶಿಕೇಂದ್ರರಲ್ಲಿ ಹಾಗು ದೇವನೂರು ಶ್ರೀಮಠದ ಪರಮಪೂಜ್ಯ ಶ್ರೀಶ್ರೀ ಗುರುಮಲ್ಲೇಶ್ವರರಲ್ಲಿ ಅಪಾರವಾಗಿ ಸಖ್ಯವನ್ನು ಹೊಂದಿದ್ದರು. ಕಂಬಳಿ ಅಪ್ಪಗಳು ಹಾಗು ಬೆಟ್ಟದಪುರದ ಶ್ರೀಗಳು ತಿಂಗಳಿಗೊಮ್ಮೆಯಾದರೂ ಪರಸ್ಪರ ಭೇಟಿಯಾಗದಿರುತ್ತಿರಲಿಲ್ಲ. ದೇವನೂರು ಶ್ರೀಮಠದ ಗುರುವರ್ಯರು ಲಿಂಗೈಕ್ಯರಾದ ಮೇಲೆ ಅವರ ಗದ್ದುಗೆಯನ್ನು ನಿರ್ಮಿಸಲು ಸರ್ವರೀತಿಯಿಂದ ಸಹಕರಿಸಿದರು.

ಇಮ್ಮಡಿ ಅಪ್ಪಗಳು ಗರಡಿಯ ಕಸರತ್ತನ್ನೂ ಮಾಡಿ ವಜ್ರಕಾಯವನ್ನು ಹೊಂದಿದವರಾಗಿದ್ದರು. ಆಗಾಗ್ಗೆ ಶ್ರೀಮಲೆ ಮಹದೇಶ್ವರರ ದರ್ಶನಕ್ಕಾಗಿ ಹೋಗಿ ಬರುತ್ತಿದ್ದರು. ಒಮ್ಮೆ ಹೀಗೆಯೆ ಹೋಗುತ್ತಿರುವಾಗ ಕೊಳ್ಳೇಗಾಲ ತಾಲ್ಲೋಕಿನ ಸಿಂಗಾನಲ್ಲೂರು ಗ್ರಾಮದ ಬಳಿ ಇರುವ ಸುತ್ತುಗಟ್ಟೆಯ ಸಮೀಪದ ಮರ ಒಂದರ ಕೆಳಗೆ ಸ್ವಲ್ಪ ಹೊತ್ತು ಪವಡಿಸಿದರು. ಆಗ ಶ್ರೀಗಳವರಿಗೊಂದು ಕನಸು ಬಿತ್ತು. ಶ್ರೀಮಲೆ ಮಹದೇಶ್ವರರು ಕಂಬಳಿ ಅಪ್ಪಗಳ ಕನಸಿನಲ್ಲಿ ಬಂದು "ನೀವು ನಮ್ಮೆಡೆಗೆ ಬರಬೇಕಾದುದಿಲ್ಲ. ನೀವಿದ್ದೆಡೆಯಲ್ಲೆ ನಾವಿದ್ದೇವೆ, ನಿಮ್ಮ ಸಮಾಧಾನಕ್ಕಾಗಿ ನಿಮ್ಮ ಶಿರದೆಡೆಯಲ್ಲಿ ನಮ್ಮ ಮೂರ್ತಿ ಇದೆ. ಅದನ್ನು ಶ್ರೀಮಠಕ್ಕೆ ಕೊಂಡೊಯ್ಯಿರಿ. ನಿಮ್ಮ ಸಂಕಲ್ಪವೆಲ್ಲ ನೆರವೇರುವುದು" ಎಂದು ಹೇಳಿದಂತಾಯಿತು. ಪುಳಕಗೊಂಡ ಶ್ರೀಗಳವರು ನಿದ್ರೆಯಿಂದ ಎಚ್ಚೆತ್ತಮೇಲೆ ತಲೆಯ ಬದಿಯಲ್ಲಿದ್ದ ತಾಮ್ರದ ಶ್ರೀಮಲೆ ಮಹದೇಶ್ವರರ ಮೂರ್ತಿಯನ್ನು ಕಂಡಾಗ ಆನಂದವೂ, ಆಶ್ಚರ್ಯವೂ ಆಯಿತು. ಅತೀವ ಸಂತೋಷದಿಂದ ಆ ಮೂರ್ತಿಯೊಂದಿಗೆ ಶ್ರೀಮಠಕ್ಕೆ ಹಿಂದಿರುಗಿದ ಇಮ್ಮಡಿ ಅಪ್ಪಗಳು ಅದನ್ನು ಆದಿಗುರು ಶ್ರೀ ಕಂಬಳೇಶ್ವರರ ಗದ್ದುಗೆಯ ಬಳಿಯಲ್ಲಿಟ್ಟು ಪೂಜಿಸತೊಡಗಿದರು. ಇಂದಿಗೂ ಶ್ರೀಮಠದಲ್ಲಿ ಆ ಮಲೆ ಮಹದೇಶ್ವರರ ಮೂರ್ತಿ ಪೂಜೆಗೊಳ್ಳುತ್ತಿದೆ.

ಭಕ್ತನಿಗೆ 'ಸದಾ ಶಿವನನ್ನು ನೆನೆ; ನೀನೆ ಶಿವನಾಗುತ್ತೀಯೆ' ಎಂದು ಬೋಧಿಸುತ್ತಿದ್ದ ಶ್ರೀಗಳು ಭಿಕ್ಷೆಗೆ ಹೋದಾಗಲೂ ಯಾರ ಮನಸ್ಸಿಗೂ ನೋವಾಗದಂತೆ, ಎಚ್ಚರಿಕೆ ವಹಿಸುತ್ತಿದ್ದರು. ಆಗೆಲ್ಲ 'ನೀನು ಭಕ್ತಿಯಿಂದ ಒಂದು ಹಿಡಿ ಭಿಕ್ಷೆ ಕೊಟ್ಟರೂ ಅದೇ ಒಂದು ಮೂಟೆಯಷ್ಟಾಗುತ್ತದೆ ಹೆತ್ತಯ್ಯ !' ಎಂದು ಹೇಳಿ ಭಿಕ್ಷೆ ಸ್ವೀಕಾರ ಮಾಡುತ್ತಿದ್ದರು. ಶ್ರೀಗಳವರಿಗೆ ಮೈಸೂರಿನ ಧರ್ಮಕಾರ್ಯ ಪ್ರವೀಣ ಹಾಗು ರಾಜಸೇವಾಸಕ್ತ ಡಾ॥ ಟಿ. ಎಸ್. ಸಿದ್ದಪ್ಪನವರು, ಹೊನ್ನೂರಿನ ಶ್ರೀವಾಲಿ ಸ್ವಾಮಿಗಳು ಹಾಗು ಹೆಗ್ಗವಾಡಿಯ ಶ್ರೀವೀರಣ್ಣ ಮೊದಲಾದವರು ಆಪ್ತ ಶಿಷ್ಯರಾಗಿದ್ದರು. ದೂರದೃಷ್ಟಿಯನ್ನು ಹೊಂದಿದ್ದ ಶ್ರೀಗಳವರು ತಮ್ಮ ಕಾಲದಲ್ಲಿ ದಾಸೋಹದ ಉದ್ದೇಶವನ್ನು ಇಟ್ಟುಕೊಂಡೇ ಭಕ್ತರ ಸಹಕಾರದೊಂದಿಗೆ ಶ್ರೀಮಠಕ್ಕೆ ಸ್ವಲ್ಪ ಆಸ್ತಿಯನ್ನು ಮಾಡಿದರು. ಶ್ರೀ ಮಠವು ದಾಸೋಹ ಕಾಯಕ ಮಾಡಲು ಬೆಳೆಯುವ ನಿಟ್ಟಿನಲ್ಲಿ ಅಪಾರವಾಗಿ ಶ್ರಮಿಸಿದರು. ಆದಿಗುರುಗಳ ಕಾಲದಲ್ಲಿ ಶ್ರೀಮಠದಲ್ಲಿ ದಾಸೋಹಕ್ಕಾಗಿ ನೆಟ್ಟ ಬೀಜ ಇವರ ಕಾಲದಲ್ಲಿ ಮೊಳೆತು ಚಿಗುರೊಡೆಯಿತು. ಅನಂತರ ಬಂದ ಶ್ರೀಶ್ರೀ

ಸಿದ್ಧಲಿಂಗ ಸ್ವಾಮಿಗಳವರ ಕಾಲದಲ್ಲಿ ಹೆಮ್ಮರವಾಗಿ ಬೆಳೆದು ಹೂ ಬಿಟ್ಟು ಈಗಿನ ಶ್ರೀ ಶ್ರೀ ಚನ್ನಬಸವಸ್ವಾಮಿಗಳವರ ಕಾಲದಲ್ಲಿ ಫಲ ಬಿಡುತ್ತಿದೆ.

ಶ್ರೀಮಠದ ಕಾರ್ಯ ವಿಸ್ತೃತವಾದಂತೆಲ್ಲ ಹೊನ್ನೂರು, ಬಾಗಳಿ, ಹೆಗ್ಗವಾಡಿ ಮುಂತಾದ ಸ್ಥಳಗಳಲ್ಲಿ ಇದರ ಶಾಖಾಮಠಗಳು ಪರಮಪೂಜ್ಯ ಇಮ್ಮಡಿ ಅಪ್ಪಗಳ ಕಾಲದಲ್ಲಿಯೆ ಪ್ರಾರಂಭಗೊಂಡವು.

ಹೀಗೆ ಅವಿಶ್ರಾಂತವಾಗಿ ದುಡಿದ ಶ್ರೀಗಳವರು 1923ನೆಯ ಇಸವಿ ಕಾರ್ತಿಕ ಮಾಸದ ಮೂರನೆಯ ಸೋಮವಾರದಂದು ಅವರ 80ನೇ ವಯಸ್ಸಿನಲ್ಲಿ ಕಾಯಕ ಕೈಂಕರ್ಯದಲ್ಲಿ ನಿರತರಾಗಿದ್ದಾಗಲೆ ಆಪ್ತ ಶಿಷ್ಯ ಮೈಸೂರಿನ ಧರ್ಮಕಾರ್ಯ ಪ್ರವೀಣ ಹಾಗೂ ರಾಜಸೇವಾಸಕ್ತ ಡಾ॥ ಟಿ. ಎಸ್. ಸಿದ್ದಪ್ಪನವರ ನಿವಾಸವಾದ 'ನಿರಂಜನಾಲಯ'ದಲ್ಲಿ ಶಿವೈಕ್ಯರಾದರು. ಇಂದಿಗೂ ಅವರು ಕುಳಿತು ಶಿವೈಕ್ಯರಾದ ಮಂಚದ ಮೇಲೆ ಶ್ರೀಗಳವರು ಬಳಸುತ್ತಿದ್ದ ದಂಡ ಹಾಗು ಭಾವಚಿತ್ರಗಳನ್ನಿಟ್ಟು ಪೂಜಿಸುತ್ತಿದ್ದಾರೆ. ಇಮ್ಮಡಿ ಕಂಬಳೀಶ್ವರರ ಲಿಂಗ ಶರೀರ ಸಮಾಧಿ ಇಂದಿಗೂ ಶ್ರೀಮಠದಲ್ಲಿ ಭಕ್ತರ ಅಭೀಪ್ಸೆಯನ್ನು ಕರುಣಿಸುವ ಪರಮ ಪವಿತ್ರ ತಾಣವಾಗಿ ರಾರಾಜಿಸುತ್ತಿದೆ.

———

ಮಡಕೆಯ ಮಾಡುವಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವಡೆ ಹೊನ್ನೇ ಮೊದಲು
ಶಿವಪಥವನರಿವಡೆ ಗುರು ಪಥವೇ ಮೊದಲು
ಕೂಡಲಸಂಗಮದೇವನರಿವಡೆ
ಶರಣರ ಸಂಗವೇ ಮೊದಲು

ಬಸವಣ್ಣನವರು

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ವಿಶೇಷವಾಗಿ ನೆರವಾದ ಹೆಗ್ಗವಾಡಿಯ ವೈದ್ಯ ಶ್ರೀ ಗುರುಸಿದ್ದಪ್ಪನವರು ಮತ್ತು ಕಮ್ಮರವಾಡಿ ಶ್ರೀ ಮಹಂತಸ್ವಾಮಿಗಳವರಿಗೆ ಕೃತಜ್ಞತೆಗಳು.

—ಲೇಖಕ

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು

ಶ್ರೀ ವೀರಣ್ಣ ಜೀವೂರಹಳ್ಳಿ

ಶುಭೋದಯ :

ಕಪಿಲ ಕೌಂಡಿನ್ಯರ ತಪೋಭೂಮಿಯಾದ ನಂಜನಗೂಡು ತಾಲ್ಲೋಕಿನಲ್ಲಿ ಒಂದೆಡೆ ಅನ್ನದಾನ ಜ್ಞಾನದಾನಕ್ಕೆ ಹೆಸರಾದ ಶ್ರೀಮತ್‌ಸುತ್ತೂರು ಮಠ, ಮತ್ತೊಂದೆಡೆ ದಾಸೋಹಕ್ಕೆಂದೆ ಜನ್ಮ ತಳೆದಂತಿರುವ ದೇವನೂರು ಶ್ರೀ ಗುರುಮಲ್ಲೇಶ್ವರ ಮಠಗಳ ಪ್ರಭಾವದ ನಡುವೆಯೂ ತನ್ನ ಸ್ವಂತಿಕೆಯನ್ನು ಬಿಟ್ಟುಕೊಡದೆ ಹೆಚ್ಚು ಅಬ್ಬರ ಆರ್ಭಟ ವಿಲ್ಲದೆ; ಸದ್ದು–ಗದ್ದಲಗಳಿಗೆ ಅವಕಾಶವೀಯದೆ ತನ್ನ ಕ್ಷೇತ್ರ ಮಹಿಮೆಯನ್ನು ಅನವರತ ಕಾಯ್ದುಕೊಂಡು ಭಕ್ತರಿಗೆ ಸದಾ ಮಾರ್ಗದರ್ಶನವೀಯುತ್ತಾ ತನ್ನ ಇತಿಮಿತಿಯಲ್ಲಿ ಜ್ಞಾನಾನ್ನದಾಸೋಹಗಳೊಡನೆ ಭಕ್ತರ ಶ್ರೇಯಸ್ಸಿಗೋಸ್ಕರ ಸರ್ವದಾ ತವಕಿಸುವ ಮಠಗಳಲ್ಲಿ ಶ್ರೀ ಮಲ್ಲನಮೂಲೆಯ ದಿವ್ಯ ಕ್ಷೇತ್ರವೂ ಒಂದು. ಆದಿಗುರು ಕಂಬಳೀಶ್ವರರು ಇಮ್ಮಡಿ ಕಂಬಳೀಶ್ವರರು ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಮತ್ತು ಈಗ ಮಠಾಧಿಪತಿಗಳಾಗಿರುವ ಶ್ರೀ ಶ್ರೀ ಚನ್ನಬಸವಸ್ವಾಮಿಗಳವರು ಅನುಕ್ರಮವಾಗಿ ಶ್ರೀ ಮಠದ ಗುರುಪರಂಪರೆಯಲ್ಲಿ ಅಧಿಕಾರಾರೂಢರಾಗಿ ಸಾಗಿ ಬಂದಿರುವ ಗುರು ಶ್ರೇಷ್ಠರು. ಈ ಎಲ್ಲ ಗುರುವರ್ಯರು ಅಂದಂದಿನ ಪರಿಸ್ಥಿತಿ ಪರಿಸರಕ್ಕನುಗುಣವಾಗಿ ಶಕ್ತ್ಯಾನುಸಾರ ಶ್ರೀ ಕ್ಷೇತ್ರದ ಶ್ರೇಯೋಭಿವೃದ್ಧಿಗೆ ಶ್ರಮಿಸಿರುವುದು, ಶ್ರಮಿಸುತ್ತಿರುವುದು ಭಕ್ತವೃಂದಕ್ಕೆ ಮನವರಿಕೆಯಾಗದ ವಿಚಾರವೇನಲ್ಲ. ಈ ಗುರು ಪರಂಪರೆಯಲ್ಲಿ ಶ್ರೀ ಕ್ಷೇತ್ರದ ಮೂರನೆಯ ಗುರುಗಳಾಗಿ ಶ್ರೀ ಮಠದ ಅಧಿಕಾರ ಸ್ವೀಕರಿಸಿ ಶ್ರೀ ಮಲ್ಲನ ಮೂಲೆ ಮಠದ ''ಸುವರ್ಣ ಯುಗ''ಕ್ಕೆ ಶ್ರೀಕಾರ ಬರೆದ ನೇತಾರರೇ ಮಹಾಯೋಗಿಗಳೂ, ನಿಗರ್ವಿಗಳೂ, ನಿದಾನಿಗಳೂ, ಕಾರುಣ್ಯ ಮೂರ್ತಿಗಳೂ, ಶಿಷ್ಯವತ್ಸಲರೂ,

---

ಈ ಲೇಖನ ಬರೆಯುವಲ್ಲಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರ ಸಹೋದರಿ ಶರಣೆ ಗಂಗಮ್ಮ, ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಯವರ ಪೂರ್ವಾಶ್ರಮದ ಗೆಳೆಯ ಹಾಗೂ ಒಡನಾಡಿ ಕಮರವಾಡಿಯ ಶ್ರೀ ಮಹಾಂತಸ್ವಾಮಿಗಳೂ, ಕಂಬಳೀಶ್ವರರ ಗದ್ದುಗೆಯಲ್ಲಿ ಅನೇಕ ವರ್ಷಗಳು ಪೂಜಾ ಕೈಂಕರ್ಯದಲ್ಲಿ ನಿರತರಾಗಿದ್ದು ಈಗ ಕಜ್ಜಿಹುಂಡಿ ಮಠದಲ್ಲಿ ಅಧ್ಯಕ್ಷರಾಗಿರುವ ಪಟ್ಟದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳಲ್ಲದೆ ಹೆಗ್ಗವಾಡಿಯ ವೈದ್ಯ ಹೆಚ್. ಎಸ್. ಗುರುಸಿದ್ದಪ್ಪನವರು ಬಹಳಷ್ಟು ಮಾಹಿತಿ ನೀಡಿ ಉಪಕರಿಸಿದ್ದಾರೆ. ಇವರೆಲ್ಲರಿಗೆ ನಾನು ಅತ್ಯಂತ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶಾಂತಿ ಸ್ವರೂಪರೂ, ಪವಿತ್ರಾತ್ಮರೂ ಆದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು. ಇಂತಹ ಪುಣ್ಯಪುರುಷರ ದಿವ್ಯಚರಿತ್ರೆಯನ್ನು ಲೇಖನ ಒಂದರಲ್ಲಿ ಬರೆಯುವ ಗುರುತರವಾದ ಹೊಣೆ ಕಷ್ಟದ್ದೆಂದು ಅರಿತೂ ಈ ಮಹಾ ಸಾಹಸಕ್ಕೆ ಕೈ ಹಾಕಬೇಕಾಯಿತು. ಶ್ರೀಗಳ ಸಂಬಂಧದ ವಿಷಯಗಳನ್ನು, ಅವರನ್ನು ಹತ್ತಿರದಿಂದ ಬಲ್ಲವರಿಂದ ಸಂಗ್ರಹಿಸತೊಡಗಿದಾಗ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಭವ್ಯ ದಿವ್ಯ ಜೀವನ ಸುರುಳಿ ಬಿಚ್ಚುತ್ತಾ ಹೋಯಿತು.

ಇಮ್ಮಡಿ ಕಂಬಳಿ ಅಪ್ಪಗಳು ಆದಿಗುರು ಕಂಬಳೀಶ್ವರರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಕ್ಷೇತ್ರದ ಜವಾಬ್ದಾರಿಯನ್ನು ಸ್ವೀಕರಿಸಿದ ಬಳಿಕ ಇವರ ಕಿರಿಯ ಸಹೋದರ ಶ್ರೀ ತೋಂಟದ ಸ್ವಾಮಿಯವರಿಗೆ ಕೃಷ್ಣರಾಜಪೇಟೆಯ ಗೌರಮ್ಮನೆಂಬ ವಧುವಿನೊಡನೆ ಲಗ್ನವಾಯಿತು. ಕಾಲ ಸಾಗಿದಂತೆ ಗೌರಮ್ಮನವರ ಗರ್ಭಸುಧಾಸಾಗರದಲ್ಲಿ ಒಂದು ಗಂಡು ಶಿಶು, ತದನಂತರ ಒಂದು ಹೆಣ್ಣು ಶಿಶುವಿನ (ಶರಣೆ ಗಂಗಮ್ಮ) ಜನನವಾಯಿತು. ಈ ಶಿಶುರತ್ನವೇ ಮುಂದೆ ಮಲ್ಲನಮೂಲೆಯ ಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ ಕಾರಣೀಭೂತನಾದ ಮಹಾಮಹಿಮಾನ್ವಿತ ಮಹಾತ್ಮ 'ಶ್ರೀ ಶ್ರೀ ಸಿದ್ಧಲಿಂಗಸ್ವಾಮಿ' ಎಂಬ ನಾಮಾಂಕಿತದಿಂದ ಭಕ್ತರ ಕಾಮಧೇನು, ಕಲ್ಪವೃಕ್ಷವೆನಿಸಿತು.

ಸಿದ್ಧಲಿಂಗರ ಜನನ ಯಾವಾಗ ಎಂಬುದನ್ನು ತಿಳಿಯಲು ಈತನಕ ಯಾವುದೇ ಲಿಖಿತ ಆಧಾರಗಳು ದೊರೆತಿಲ್ಲ. 1924 ರ ಹಂಚ್ಯ ಹೊಳೆಯಲ್ಲಿ ಶ್ರೀ ಮಠಕ್ಕೆ ಸೇರಿದ ಅದೆಷ್ಟೋ ಕಾಗದ ಪತ್ರಗಳು ಕೊಚ್ಚಿ ಹೋಗಿರುವುದೂ ಒಂದು ಕಾರಣವಿರಬಹುದು. ಇವರು ಲಿಂಗೈಕ್ಯರಾದಾಗ 63 ವರ್ಷಗಳು ತುಂಬಿತ್ತು ಎಂಬುದನ್ನು ಆಧಾರವಾಗಿಟ್ಟು ಕೊಂಡು ಮತ್ತು "ನನಗೆ ಚೆನ್ನಾಗಿ ಜ್ಞಾಪಕವಿದೆ" ಎಂದು ಹೇಳುವ ಕಪುರವಾಡಿಯ ಶ್ರೀ ಮಹಾಂತಸ್ವಾಮಿಗಳ ಹೇಳಿಕೆಯಂತೆ ಸಿದ್ಧಲಿಂಗರ ಜನನ 1911ರ ಮೇ, 24ರಲ್ಲಿ. ಇದನ್ನು ಕಜ್ಜಿಹುಂಡಿ ಪಟ್ಟದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೂ ಅನುಮೋದಿಸುತ್ತಾರೆ. ಇವರುಗಳ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡರೆ ಶ್ರೀಗಳು ಶಿವಾಧೀನರಾದ ಶ್ರೀಮತ್ ಆನಂದನಾಮ ಸಂವತ್ಸರ ಪುಷ್ಯ ಶುದ್ಧ ಸಪ್ತಮಿ ಭಾನುವಾರ ಅಂದರೆ 19 ನೇ ಜನವರಿ 1975 ಕ್ಕೆ ಅವರಿಗೆ 63 ವರ್ಷ 7 ತಿಂಗಳು 25 ದಿನಗಳಾಗುತ್ತವೆ.

ಬಾಲ್ಯದಲ್ಲಿ ಸಿದ್ಧಲಿಂಗರಿಗೆ ಎಲ್ಲರಂತೆ ಬಾಲಸಹಜವಾದ ಆಟ–ಪಾಟಗಳಲ್ಲಿ ಆಸಕ್ತಿ. ದನಕರುಗಳನ್ನು ಕಂಡರೆ ಎಲ್ಲಿಲ್ಲದ ಅಕ್ಕರೆ. ಕರುಣೆಯೆ ಮೈವೆತ್ತಂತೆ ಕಾಣುವ ನಿಲುವು. ಬಾಲಕ ಮೈಗೂಡಿಸಿಕೊಂಡಿದ್ದ ಮೃದು ಸ್ವಭಾವಕ್ಕೆ ಸಂಸ್ಕಾರದ ಮೆರುಗಿನ ಸೇರ್ಪಡೆಯಾಯಿತು. ಸಿದ್ಧಲಿಂಗರಿಗೆ ಎಂಟು ವರ್ಷಗಳು ತುಂಬುತ್ತಿದ್ದಂತೆಯೆ ಹೆಗ್ಗವಾಡಿಯ ಶ್ರೀ ವೀರಣ್ಣನವರು ಅಕ್ಷರಾಭ್ಯಾಸಕ್ಕೆ ಹೆಗ್ಗವಾಡಿಗೆ ಕರೆದೊಯ್ದರು. 'ದೊಣ್ಣೆ ಹೆಗ್ಗವಾಡಿಯನ್ನು ಬೆಣ್ಣೆ ಹೆಗ್ಗವಾಡಿ' ಮಾಡಿದ ಇಮ್ಮಡಿ ಕಂಬಳಿ ಅಪ್ಪನವರ ಕಾಲದಿಂದಲೂ ಶ್ರೀ ಮಠಕ್ಕೆ ಹೆಗ್ಗವಾಡಿಯ ಸಂಪರ್ಕವಿತ್ತು. ಅಲ್ಲದೆ ಹೆಗ್ಗವಾಡಿಯ ವೀರಣ್ಣನವರ ಸಹೋದರಿ ಶರಣೆ ಕೆಂಪಮ್ಮಳನ್ನು ಮಲ್ಲನಮೂಲೆಯ ಶ್ರೀ ಸಿದ್ದಪ್ಪ

ಸ್ವಾಮಿಗಳಿಗೆ ಕೊಟ್ಟು ಸಂಬಂಧವನ್ನೂ ಬೆಳಸಲಾಗಿತ್ತು. ಈ ಹಿನ್ನೆಲೆಯಲ್ಲಿ ಓದಲೆಂದು ಹೋದ ಸಿದ್ಧಲಿಂಗರ ದಿವ್ಯ ವರ್ಚಸ್ಸನ್ನು ಕಂಡ ಊರ ಜನ ತಮ್ಮೂರಲ್ಲಿ ಆಡಲಿದ್ದ ಕುಂತೂರು ಶ್ರೀ ಸಿದ್ದಪ್ಪಶಾಸ್ತ್ರಿ ವಿರಚಿತ 'ಬಸವರಾಜ ವಿಜಯ' ಎಂಬ ಭಕ್ತಿ ಪ್ರಧಾನ ನಾಟಕದಲ್ಲಿ ಬಾಲ ಬಸವನ ಪಾತ್ರ ನಿರ್ವಹಿಸಲು ಸುಮಾರು ಹತ್ತು ವರ್ಷದ ಸಿದ್ಧಲಿಂಗ ರಿಗೆ ಶ್ರೀ ವೀರಣ್ಣನವರ ಮೂಲಕ ಒತ್ತಾಯ ಹೇರಿ ಮನ ಒಲಿಸಿದರು. ನಾಟಕದಂದು ಬಾಲ ಬಸವನಾಗಿ ಸಿದ್ಧಲಿಂಗರು ಸಾಕ್ಷಾತ್ ಬಸವನೇ ಆಗಿದ್ದರು ! ನೋಟಕರ ಮನಸ್ಸು ಹನ್ನೆರಡನೆಯ ಶತಮಾನದಲ್ಲಿ ಸಂಚರಿಸತೊಡಗಿತು ! ಭಾವಪೂರ್ಣ ಅಭಿನಯ, ಮಧುರವಾದ ಹಾಡುಗಾರಿಕೆ, ಭಾವವನ್ನಡಕುವ ಕರವಿನ್ಯಾಸ, ಭಕ್ತಿ ಮುದ್ರಿತ ವದನಾರ ವಿಂದ, ಕರುಣೆ ತುಂಬಿದ ಕಣ್ಣುಗಳು ! ನೋಟಕರು ಭಕ್ತಿ ತರಂಗದಲ್ಲಿ ತೇಲಿ ಹೋದರು. ಒಮ್ಮೆ ಪುಳಕ, ಮತ್ತೊಮ್ಮೆ ರೋಮಾಂಚನ ! ಅದೊಂದು ಅವಿಸ್ಮರಣೀಯ ಅಮರ ಅನುಭವ !! ಬೆಳೆವ ಸಿರಿ ಮೊಳಕೆದೋರಿದ ಅಪೂರ್ವ ಘಟನಾವಳಿ !!!

ಕಲಿಕೆಯ ಮೂಲಕ ಜ್ಞಾನಾರ್ಜನೆಗೆ ತೆರಳಿದ ಸಿದ್ಧಲಿಂಗ ನಾಟಕದಲ್ಲಿ ವೇಷಧರಿ ಸುವುದು ಗುರುಮಾತೆಗೆ ಸ್ವಲ್ಪವೂ ಸರಿ ಕಾಣಲಿಲ್ಲ. ಹೆಗ್ಗವಾಡಿಯಿಂದ ನೇರಕರೆತಂದು ಮೈಸೂರಿನ ರಾಮಾನುಜಾ ರಸ್ತೆಯಲ್ಲಿರುವ 'ವೀರಶೈವ ಅನಾಥಾಲಯ'ದಲ್ಲಿ ಬಿಟ್ಟರು. ಇಲ್ಲಿ ನಡೆದ ಆರೇಳು ವರ್ಷಗಳ ವಿದ್ಯಾಭ್ಯಾಸದ ಅವಧಿಯಲ್ಲಿ ಸಿದ್ಧಲಿಂಗರು ಸಿಡುಬು ಖಾಯಿಲೆಗೆ ತುತ್ತಾದರು. ಇಮ್ಮಡಿ ಕಂಬಳಿ ಅಪ್ಪಗಳಿಗೆ ದಿಕ್ಕು ತೋರದಾಯಿತು. ಇವರ ಪ್ರಾಣಸಖರಂತಿದ್ದ ಬೆಟ್ಟದಪುರದ ಪರಮ ಪೂಜ್ಯ ಶ್ರೀ ಶ್ರೀ ಚಿಕ್ಕವೀರದೇಶಿ ಕೇಂದ್ರ ಮಹಾಸ್ವಾಮಿಗಳವರು ಈ ಸಂಕಷ್ಟ ಪರಿಸ್ಥಿತಿಯಲ್ಲಿ ಧಾವಿಸಿ ಬಂದು ಸಿದ್ಧ ಲಿಂಗರಿಗೆ ಅಭಿಮಂತ್ರಿಸಿ ಅನುಗ್ರಹಿಸಿದ ಫಲಪ್ರಸಾದದಿಂದ ಬಂದೆರಗಿದ್ದ ಆಪತ್ತು ಮಂಜಿನಂತೆ ಕರಗಿಹೋಯಿತು. ಗುರು ಕರುಣೆಯ ಮುಂದೆ ಕಾಲನ ಕಸರತ್ತು ಫಲಿಸದೆ ಹೋದದ್ದು ಭಕ್ತಕೋಟಿಯ ಪುಣ್ಯ ವಿಶೇಷವಲ್ಲದೆ ಮತ್ತೇನು ? ಇದಾದ ಒಂದೆರೆಡು ವರ್ಷಗಳಲ್ಲಿ ಎಂಭತ್ತರ ಗಡಿದಾಟಿದ್ದ ಇಮ್ಮಡಿ ಕಂಬಳಿ ಅಪ್ಪನವರು ಲೋಕದಾಟ ಸಾಕೆಂದರಿತು ಇಷ್ಟಲಿಂಗದಲ್ಲಿ 1923ರಲ್ಲಿ ಐಕ್ಯವಾದರು. ಇದಕ್ಕೂ ಹಿಂದೆಯೆ ಸಿದ್ಧ ಲಿಂಗರ ತಂದೆ ಶ್ರೀ ತೋಂಟದ ಸ್ವಾಮಿಗಳು ಲಿಂಗೈಕ್ಯರಾಗಿದ್ದರಿಂದ ಶ್ರೀ ಕ್ಷೇತ್ರದ ಆಡಳಿತವನ್ನು ಸುಸೂತ್ರವಾಗಿ ನೋಡಿಕೊಳ್ಳಲು ಎಳೆಯ ಸಿದ್ಧಲಿಂಗರಿಗೆ ಸಾಧ್ಯವಾಗ ದೆಂದು ಅರಿತ ಭಕ್ತಾದಿಗಳ ಸದಿಚ್ಛೆಯ ಮೇರೆಗೆ ಹೆಗ್ಗವಾಡಿಯ ಶ್ರೀ ವೀರಭದ್ರ ಸ್ವಾಮಿ, ಹೆಗ್ಗವಾಡಿಯ ಶ್ರೀ ದೇವಪ್ಪಸ್ವಾಮಿ ಮತ್ತು ಮಲ್ಲನ ಮೂಲೆಯ ಶ್ರೀ ಸ್ವತಂತ್ರ ಸ್ವಾಮಿಗಳು ಮುಂದೆ ಬಂದರು. ಶ್ರೀ ವೀರಭದ್ರಸ್ವಾಮಿಯವರಿಗೆ ಈ ಕೆಲಸದ ನಿರ್ವಹಣೆಯಿಂದಾಗಿ ''ಏಜೆಂಟ್ ವೀರಭದ್ರಪ್ಪ'' ನವರೆಂದೇ ಹೆಸರಾಯಿತು. (ಈಗಲೂ ಮಠದ ಕೆಲವು ಸರ್ಕಾರಿ ಕಾಗದ ಪತ್ರಗಳು ಏಜೆಂಟ್ ವೀರಭದ್ರಪ್ಪನವರ ಹೆಸರಿಗೆ ಬರುವುದನ್ನು ಗಮನಿಸಬಹುದು) ಈ ಏರ್ಪಾಟಿನ ಅನಂತರ ಸಿದ್ಧಲಿಂಗರು ವಿದ್ಯಾಭ್ಯಾಸವನ್ನು ಮುಂದುವರಿಸುವ ಪ್ರಯತ್ನವಾಗಿ ಪಾವನ ಕ್ಷೇತ್ರ ಸಿದ್ಧಗಂಗೆಯಲ್ಲಿ

ಆ ಕಾಲಕ್ಕೆ ಗುರು ಶ್ರೇಷ್ಠರೆನಿಸಿದ್ದ ಉದ್ದಾನ ಶ್ರೀಗಳವರ ಸನ್ನಿಧಿಯನ್ನು ಸೇರಿ ಈ ಹಿಂದೆ ಸಂಪಾದಿಸಿದ್ದ ಇಂಗ್ಲೀಷ್ ಜ್ಞಾನದ ಜೊತೆಗೆ ಸಂಸ್ಕೃತ ಭಾಷಾ ಕಲಿಕೆ, ಶೈವಾಗಮ ಮತ್ತು ಶರಣ ಸಾಹಿತ್ಯದ ಸವಿಸ್ತಾರ ಪರಿಚಯ ಮಾಡಿಕೊಂಡು ಸುಜ್ಞಾನ ದೀವಿಗೆಯಾಗಿ ಅನುಭವದ ಅಕ್ಷಯ ಭಂಡಾರದೊಂದಿಗೆ ಸ್ವ-ಸುಕ್ಷೇತ್ರ ಶ್ರೀ ಮಲ್ಲನಮೂಲೆಗೆ ಹಿಂತಿರುಗಿದರು. ಬರುವಾಗ ಆ ಮಹಾಗುರು ಉದ್ದಾನ ಶ್ರೀಗಳು ಈ ಅಂತರಂಗದ ಶಿಷ್ಯನಿಗೆ ವಿಭೂತಿ, ರುದ್ರಾಕ್ಷಿ, ಕಾವಿಕಪನಿಗಳನ್ನಿತ್ತು ಅನುಗ್ರಹವಿತ್ತು ಆಶೀರ್ವದಿಸಿ ಬೀಳ್ಕೊಟ್ಟಿದ್ದರು. (ಉದ್ದಾನ ಶ್ರೀಗಳಿಂದ ನೀಡಲ್ಪಟ್ಟ ಈ ಪವಿತ್ರ ವಸ್ತುಗಳನ್ನು ಭಕ್ತರು ಈಗಲೂ ಶ್ರೀ ಮಠದಲ್ಲಿ ನೋಡಬಹುದು).

ಸಿದ್ಧಗಂಗೆಯಿಂದ ಹಿಂದಿರುಗಿ ಬಂದಾಗ ಸಿದ್ಧಲಿಂಗರಿಗೆ ಇಪ್ಪತ್ತರ ಹರಯ. ಶ್ರೀ ಕ್ಷೇತ್ರವು ಈ ಶರಣನ ಆಗಮನಕ್ಕಾಗಿ ತುದಿಗಾಲ ಕಾತುರದಿಂದ ಎದುರು ನೋಡುತ್ತಿತ್ತು. ಅದೇ ವೇಳೆಗೆ ಸುಮಾರು 8-9 ವರ್ಷ ಆಡಳಿತ ಸೂತ್ರ ಹಿಡಿದು ಸುಸೂತ್ರವಾಗಿ, ಸಾಂಗವಾಗಿ ಶ್ರೀ ಮಠದ ಸಕಲ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಾ ಬಂದಿದ್ದ ಹೆಗ್ಗವಾಡಿಯ ಶ್ರೀ ವೀರಭದ್ರಸ್ವಾಮಿ, ಶ್ರೀ ದೇವಪ್ಪಸ್ವಾಮಿ ಹಾಗು ಶ್ರೀ ಸ್ವತಂತ್ರ ಸ್ವಾಮಿಗಳು ಶ್ರೀ ಸಿದ್ಧಲಿಂಗರಿಗೆ ಅಧಿಕಾರವನ್ನು ಒಪ್ಪಿಸಿಕೊಡಲು ತವಕಿಸುತ್ತಿದ್ದರು. ಇದಕ್ಕಾಗಿ ಸಕಲ ಏರ್ಪಾಟುಗಳೂ ಭರದಿಂದ ನಡೆದವು. 1932 ಜೂನ್ ತಿಂಗಳ ಒಂದು ಶುಭ ದಿನದ ಶುಭ ಮುಹೂರ್ತದಲ್ಲಿ ಸಿದ್ಧಲಿಂಗರಿಗೆ ಶ್ರೀಮತ್ ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರಿಂದ ಶಿವದೀಕ್ಷಾ ಸಂಸ್ಕಾರ ವಿಧಿಗಳು ಕೊಡಲ್ಪಟ್ಟವು. ಈ ಸುಸಂದರ್ಭದಲ್ಲಿ 101 ವಟುಗಳಿಗೂ ಶಿವದೀಕ್ಷೆ ನೀಡಲಾಯಿತು. ಈ ಪವಿತ್ರ ಗಳಿಗೆಯಿಂದಲೆ ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ಅಧಿಕಾರವನ್ನು ಸ್ವೀಕರಿಸಿ ಶ್ರೀ ಕ್ಷೇತ್ರ ಮಲ್ಲನ ಮೂಲೆಯ ಮೂರನೆಯ ಗುರುವರ್ಯರಾಗಿ ರಾರಾಜಿಸತೊಡಗಿದರು. ಈ ಮಂಗಳಮಯ ಸಮಾರಂಭವು ಬೆಟ್ಟದಪುರದ ಶ್ರೀ ನಿ.ಪ್ರ.ಸ್ವ. ಶ್ರೀ ಶ್ರೀ ಚನ್ನವೀರದೇಶಿಕೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರುಗಿತು.

ಸಾಧನೆಯ ಹಾದಿಯಲ್ಲಿ :

ಶ್ರೀ ಕ್ಷೇತ್ರದ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಮುಂದೆ ಅನೇಕ ಸಮಸ್ಯೆಗಳು ಎದುರಾದವು. ಮಠದ ಶಿಷ್ಯಪರಂಪರೆಯನ್ನು ಬೆಳೆಸುವುದು, ಬಸವನಪುರ ಗ್ರಾಮದಲ್ಲಿ 'ಊರ ಮಠ' ಸ್ಥಾಪನೆ ಮಾಡುವುದು, ಲಿಂಗೈಕ್ಯ ಇಮ್ಮಡಿ ಕಂಬಳೀಶ್ವರರ ಗದ್ದುಗೆ ಕಟ್ಟಿಸುವುದು, ಇದರೊಟ್ಟಿಗೆ ತಮ್ಮ ದೂರ ದೃಷ್ಟಿಯ ಫಲವಾಗಿ ವಿದ್ಯಾರ್ಥಿಗಳ ಸಲುವಾಗಿ ನಂಜನಗೂಡಿನಲ್ಲಿ ಅಶನ-ವಸತಿ ಆಲಯ ಸ್ಥಾಪನೆ ಮಾಡುವುದು, ಹಾಗು ಭಕ್ತಾದಿಗಳ ಸೌಕರ್ಯಕ್ಕಾಗಿ ಗದ್ದುಗೆಗೆ ಹೊಂದಿಕೊಂಡಂತೆ ಕಪಿಲಾ ನದಿಯ ತಡಿಯ ತನಕ ಸೋಪಾನ ಮಾಡಿಸುವ ಯೋಜನೆ

ಗಳನ್ನು ಹಾಕಿಕೊಂಡರು. ಶಿಷ್ಯರನ್ನುದ್ಧರಿಸುವ ಸಲುವಾಗಿ ಭಿಕ್ಷಾಟನೆಯ ನೆಪದಲ್ಲಿ ಕಮಾನು ಗಾಡಿಯಲ್ಲಿ ಕುಳಿತು ಚಳಿ-ಮಳೆ-ಗಾಳಿ ಎನ್ನದೆ ಹಗಲಿರುಳೆನ್ನದೆ ಊರೂರು ಬಳಸಿದರು. ಗಾಡಿ ಚಾಲಕ ಹೆಗ್ಗವಾಡಿ ಮಲ್ಲಣ್ಣ ಸದಾ ಆಪ್ತ ಸಂಗಾತಿ ಆಗಿರುತ್ತಿದ್ದ. ಚಾಮರಾಜನಗರ, ಎಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಟಿ. ನರಸೀಪುರ ತಾಲ್ಲೋಕುಗಳಲ್ಲಿ ವಿಶೇಷವಾಗಿ ಸಂಚರಿಸಿ ಶಿಷ್ಯರ ಒಂದು ದೊಡ್ಡ ಬಳಗವನ್ನೇ ಬೆಳೆಸಿದರು. ಈ ಶಿಷ್ಯರ ಅನುಕೂಲಕ್ಕಾಗಿ ಕಜ್ಜಿಹುಂಡಿ, ದಿಡ್ಡಾಪುರ, ತೊರೆವಳ್ಳಿ, ಮಾದಾಪುರ, ಕಮರವಾಡಿ, ಹೆಗ್ಗವಾಡಿಪುರ, ಅಗ್ರಹಾರ ಮತ್ತು ತುಮ್ಮನೇರಳೆ ಗ್ರಾಮಗಳಲ್ಲಿ 'ನಿತ್ಯ ದಾಸೋಹ'ದ ಶಾಖಾ ಮಠಗಳನ್ನು ಸ್ಥಾಪಿಸಿದರು. ಈ ಹಿಂದೆ ಇಮ್ಮಡಿ ಅಪ್ಪಗಳವರ ಕಾಲದಲ್ಲಿ ಹೊನ್ನೂರು, ಹೆಗ್ಗವಾಡಿ ಮತ್ತು ಬಾಗಳಿಯಲ್ಲಿ ಶಾಖಾಮಠಗಳು ಸ್ಥಾಪನೆಗೊಂಡು ಶ್ರೀ ಮಠದ ಕೀರ್ತಿಯನ್ನು ಸಾರಿದ್ದವು. ಹೀಗಾಗಿ ಭಕ್ತವೃಂದ ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಸುತ್ತಾ ಸಾಗಿತು. ಶ್ರೀಗಳವರ ಆಪ್ತ ಶಿಷ್ಯರಲ್ಲಿ ಬಾಗಳಿ ಶ್ರೀ ಮಲ್ಲಪ್ಪ, ಸಂತೆಮರಹಳ್ಳಿ ಪಟೇಲ್ ಶ್ರೀ ಪುಟ್ಟಸ್ವಾಮಪ್ಪ, ತೊರವಳ್ಳಿ ಶ್ರೀ ಕರಿಮಲ್ಲಪ್ಪ, ಹೆಗ್ಗವಾಡಿಯ ಶ್ರೀ ವೀರಣ್ಣ, ಹೊನ್ನೂರಿನ ಶ್ರೀ ವಾಲಿಸ್ವಾಮಿಗಳು, ದೇಮಹಳ್ಳಿಯ ಶ್ರೀ ಗದ್ದೆಮರಪ್ಪ, ಗೂಳಿಪುರದ ಶ್ರೀ ದ್ಯಾವಪ್ಪ ಮುಂತಾದವರು ಉಲ್ಲೇಖನಾರ್ಹ ಗುರು ಭಕ್ತರು ; ತಮ್ಮ ಪ್ರಾಣವನ್ನೇ ಒತ್ತೆ ಇಟ್ಟು ಗುರು ಸೇವೆ ಮಾಡಲು ಸಿದ್ಧರಿದ್ದ ಪುಣ್ಯಜೀವಿಗಳು. ಇವರಲ್ಲದೆ ಇತ್ತೀಚಿನ ಪೀಳಿಗೆಯಲ್ಲಂತೂ ಅಸಂಖ್ಯಾತ ಭಕ್ತರು ಇವರ ಶಿಷ್ಯ ಸಮೂಹದಲ್ಲಿದ್ದಾರೆ.

ಇಮ್ಮಡಿ ಕಂಬಳೀಶ್ವರರ ಗದ್ದುಗೆ ನಿರ್ಮಾಣ ಕಾರ್ಯಕ್ಕೆ ಶ್ರೀಗಳು ತಮ್ಮನ್ನು ತೊಡಗಿಸಿಕೊಂಡ ಸಮಯದಲ್ಲಿ ಇಮ್ಮಡಿ ಕಂಬಳಿ ಅಪ್ಪಗಳಿಂದ ಆಶೀರ್ವಾದ ಪಡೆದು ಗಂಡುಸಂತಾನ ಪಡೆದಿದ್ದ ಕಮರವಾಡಿಯ ಶ್ರೀ ವೀರಭದ್ರಪ್ಪನವರು ಗುರುವಿಗೆ ಕೊಟ್ಟಿದ್ದ ವಚನವನ್ನು ಪಾಲಿಸುವ ಸಲುವಾಗಿ ಬಸವನ ಬಾಗಿಲು ಮತ್ತು ಇಮ್ಮಡಿ ಕಂಬಳೀಶ್ವರರ ಗದ್ದುಗೆ ನಿರ್ಮಾಣದ ಖರ್ಚು-ವೆಚ್ಚವನ್ನು ವಹಿಸಿಕೊಂಡು ನಯನ ಮನೋಹರವಾದ ಗದ್ದುಗೆಯನ್ನು ಆಗು ಮಾಡಿಕೊಟ್ಟರು. ಈ ಗದ್ದುಗೆಯ ಕಟ್ಟಡದ ಕೆಲಸ ಸುಮಾರು 1935 ರ ವೇಳೆಗೆ ಮುಗಿಯಿತು. ಅನಂತರ ಯುಗ ಧರ್ಮಕ್ಕೆ ಶಕ್ಯವಿದ್ದಷ್ಟು ಹೊಂದಿಕೊಂಡು ಸನಾತನ ಧರ್ಮ ಪರಂಪರೆಯನ್ನು ಉಳಿಸಿಕೊಂಡು ಹೋಗಬಯಸಿದ ಶ್ರೀಗಳವರು ವಿದ್ಯಾರ್ಥಿಗಳಿಗಾಗಿ ನಂಜನಗೂಡಿನಲ್ಲಿ "ಶ್ರೀ ಕಂಬಳೀಶ್ವರ ವಿದ್ಯಾರ್ಥಿನಿಲಯ"ವನ್ನು ಸ್ಥಾಪಿಸಿ ಸುಮಾರು 75 ಮಂದಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅಶನ-ವಸತಿ ಸೌಲಭ್ಯ ಕಲ್ಪಿಸಿದರಲ್ಲದೆ ಇವರಿಗೆ ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಪರಿಚಯವನ್ನೂ ಮಾಡಿಕೊಡುವ ವ್ಯವಸ್ಥೆಯನ್ನೂ ಕಲ್ಪಿಸಿದರು. ಸರ್ಕಾರದಿಂದ ಸಹಾಯಧನ ಕೊಡಿಸುತ್ತೇವೆಂದು ಕೆಲವು ಅಧಿಕಾರಿಗಳು ಮುಂದೆ ಬಂದರೂ "ಬೇಡಪ್ಪ ಕಂಬಳೀಶ ಇದ್ದಾನೆ ಹೇಗೊ ನಡೆಯುತ್ತೆ, ನಮಗೆ ಸರ್ಕಾರದ ಸಹವಾಸವೇ ಬೇಡ" ಎಂದು ವಿನಯದಿಂದಲೇ ದೂರವಿಟ್ಟರು. ಭಕ್ತರ

ಅನುಕೂಲಕ್ಕಾಗಿ ಗದ್ದುಗೆಯ ಪಕ್ಕ ಸೋಪಾನ ಕಟ್ಟಿಸುವ ಅವರ ಕನಸು ಅವರ ಜೀವಿತ ಕಾಲದಲ್ಲಿ ನನಸಾಗದೆ, ಈಗಿನ ಗುರು ಶ್ರೀ ಶ್ರೀ ಚನ್ನಬಸವಸ್ವಾಮಿಗಳವರ ನೇತೃತ್ವದಲ್ಲಿ ಯರಗನಹಳ್ಳಿ ಸಾಹುಕಾರ್ ಶ್ರೀ ಚನ್ನಬಸಪ್ಪನವರ ಆರ್ಥಿಕ ಸಹಯೋಗದಿಂದ ಇದೀಗ ಪೂರ್ಣಗೊಂಡಿದೆ. ಕೇವಲ ಎರಡು ಎಕರೆ ತರೀ ಜಮೀನನ್ನು ಹೊಂದಿದ್ದ ಶ್ರೀ ಮಠ ಇವರ ಕಾಲದಲ್ಲಿ ಹದಿನೆಂಟು ಎಕರೆ ನೀರಾವರಿ ಭೂಮಿಯನ್ನು ಪಡೆಯಿತು. ಪ್ರತಿವರ್ಷ ಶಿವರಾತ್ರಿ ಮತ್ತು ಕಾರ್ತಿಕ ಮಾಸಗಳಲ್ಲಿ ಶ್ರೀ ಕ್ಷೇತ್ರದಲ್ಲಿ ವೈಭವದ 'ಶಿವಗಣಾರಾಧನೆ' ನಡೆವಂತೆ ವ್ಯವಸ್ಥಿತ ಯೋಜನೆಗಳನ್ನು ರೂಪಿಸಿಕೊಟ್ಟರು. ಈ ಆರಾಧನಾ ಸಂದರ್ಭಗಳಲ್ಲಿ ಶಿವಾನುಭವಗೋಷ್ಠಿ ಏರ್ಪಡಿಸಿ ವೀರಶೈವ ಧರ್ಮದ ಬಗೆಗೆ ಭಕ್ತರಿಗೆ ತಿಳಿವಳಿಕೆ ನೀಡಿಸುತ್ತಿದ್ದರು. ಪ್ರತಿ ಅಮಾವಾಸ್ಯೆಯಂದು ಗದ್ದುಗೆಯಲ್ಲಿ ವಿಶೇಷ ಪೂಜೆ ನಡೆಸುವ ಕಾರ್ಯ ಇವರ ಕಾಲದಲ್ಲಿ ಹೆಚ್ಚು ಪ್ರಚುರವಾಯಿತು. ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಯವರು ಯಾವುದೇ ಕಾರ್ಯಕ್ರಮ ಹಾಕಿಕೊಂಡರು, ತುಂಬಾ ಅಚ್ಚು ಕಟ್ಟಾಗಿ ಅಷ್ಟೇ ಸಮರ್ಪಕವಾಗಿ ಕೊನೆ ಮುಟ್ಟಿಸುತ್ತಿದ್ದರು. ''ಚಿಕ್ಕದು ಚೊಕ್ಕದು,'' ''ದೊರೆತುದರಲ್ಲಿ ಪರಿಣಾಮಂವಪ್ಪ'' ಎಂಬುದು ಇವರ ನೀತಿ. ''ಒಂದಂಗ್ಲ ಕಡಿಮೆಯಾಗೆ ಬಾಳ್ಬೇಕು, ತಾವು ಗುಡಿಸ್ಲಲ್ಲಿ ಇದ್ದವ್ರು, ದೊಡ್ಡ ನವಾಬ್ರಲ್ಲ'' ಎಂಬ ಅರಿವು ಅವರಿಗೆ ಇದ್ದೇಇತ್ತು. ಆದುದರಿಂದಲೆ ಬಹುತೇಕ ಅವರ ಯೋಜನೆಗಳೆಲ್ಲವೂ ಅವರ ಜೀವಿತ ಕಾಲದಲ್ಲೆ ಫಲಿಸಿದವು.

ಸಿದ್ಧಿಯ ಶಿಖರದಲ್ಲಿ :

ಮಹಾತ್ಮ ಶ್ರೀ ಶ್ರೀ ಸಿದ್ಧಲಿಂಗರು 1934ರ ಸಮಯದಲ್ಲಿ ''ಇಷ್ಟಾರ್ಥಸಿದ್ಧಿ''ಗಾಗಿ ನವ ಮಾಸಗಳ ಅನುಷ್ಠಾನ ವ್ರತ ಕೈಗೊಂಡರು. ಈ ವೇಳೆಯಲ್ಲಿ ಅವರ ಶಿವ ಪೂಜಾವೈಭವ ಒಂದು ರಸಾನಂದ. ಅನಿಮಿಷದೃಷ್ಟಿಯಿಂದ ಲಿಂಗಾನುಸಂಧಾನ ಮಾಡಿಕೊಳ್ಳುತ್ತಿದ್ದ ಅವರ ಪೂಜಾವಿಧಾನ ವರ್ಣನಾತೀತ ! ಇದು, ಎಲ್ಲರಿಗೂ ಸಾಧ್ಯವಲ್ಲದ ಮಾತು. ಈ 'ಅನುಷ್ಠಾನ ವ್ರತದ ಫಲ'ದಿಂದ ಅವರಲ್ಲಿ ಒಂದು ಬಗೆಯ ನವ ಚೈತನ್ಯ ಮೈದುಂಬಿ ನಿಂತಿತು. ಆಗಾಗ್ಗೆ ಶಿವಕಾಂತಿಯ ಮಿಂಚಿನ ಸಂಚಾರವಾಗುತ್ತಿತ್ತು. ಪರಿಪೂರ್ಣತೆ ಮನೆ ಮಾಡಿತ್ತು. ಹೆಚ್ಚೇನು.-

''ಕಂಡುದೆಲ್ಲ ಪಾವನ, ಹೇಳಿತ್ತೆಲ್ಲ ಪರಮ ಬೋಧೆ
ಮುಟ್ಟಿತ್ತೆಲ್ಲವು ಪರುಷದ ಸೋಂಕು
ಒಡನೆ ನುಡಿದವರು ಸದ್ಯೋನ್ಮುಕ್ತರು
ಸುಳಿದ ಸುಳುಹೆಲ್ಲ ಜಗತ್ಪಾವನ
ಮುಟ್ಟಿದ ಧರೆಯೆಲ್ಲವು ಅವಿಮುಕ್ತ ಕ್ಷೇತ್ರ
ಸೋಂಕಿದ ಜಲವೆಲ್ಲವು ಪುಣ್ಯ ತೀರ್ಥಂಗಳು

ಶರಣೆಂದು ಭಕ್ತಿ ಮಾಡಿದವರೆಲ್ಲರೂ ಸಾಯುಜ್ಯರು
ಗುಹೇಶ್ವರಾ, ನಿಮ್ಮ ಶರಣರ ಸುಳುಹಿನ ಸೊಗಸ—
ನುಪಮಿಸಬಾರದು''-ಎಂಬ

ಅಲ್ಲಮರ ನುಡಿ ಪರುಷವೇ ಪುರುಷಾಕಾರಗೊಂಡು ನಿಂತಂತೆ ಕಾಣತೊಡಗಿದರು !!! ಇಂತಹ ಮಹಾನುಭಾವನಿಗೆ ಶಿರಬಾಗಿ ಅಡಿವಿಡಿಯದ ಕರ–ಶಿರಂಗಳುಂಟೆ ? ವಾಕ್ಸಿದ್ಧಿ ಮತ್ತು ಸ್ಪರ್ಶ ಸಿದ್ಧಿಗಳು ಸಿದ್ಧಲಿಂಗರ ಎಡ-ಬಲದಲ್ಲಿ ಕೈಜೋಡಿಸಿ ನಿಂತವು. ಕ್ರಿಯೆ ಶ್ರೀಗಳ ವಾಕ್ಕನ್ನು ಅನುಸರಿಸಿ ಪಾವನವಾಗುತ್ತಿತ್ತು ! ''ಇಟ್ಟರೆ ಶಾಪ ಕೊಟ್ಟರೆ ವರ'' ಎಂಬಂತೆ ಶ್ರೀಗಳ ಮನ ನೊಂದರೂ ಸಾಕು ನೋವಿಗೆ ಕಾರಣನಾದವನ ಬದುಕು ಹೇಳಲಸದಳ. ''ಹರ ಮುನಿದರೆ ಗುರು ಕಾಯ್ವ ಗುರು ಮುನಿದರೆ ಹರ ಕಾಯ್ವನೆ ?'' ಎಂದಿಗೂ ಇಲ್ಲ. ಒಮ್ಮೆ ಸಿದ್ಧಲಿಂಗರ ಒಡನಾಡಿ ಶ್ರೀ ಮಹಾಂತಸ್ವಾಮಿಗಳು ಗದ್ದುಗೆಯಿಂದ ನಂಜನಗೂಡಿಗೆ ಹೋಗಿ 'ಮೂಕಿ' ಚಿತ್ರವೊಂದನ್ನು ನೋಡಿ ಮರುದಿನ ಓರಗೆಯವರೊಂದಿಗೆ ಗದ್ದುಗೆಗೆ ಉಷಃಕಾಲದಲ್ಲಿ ಹಿಂತಿರುಗಿದರು. ಪೂಜೆಗೆ ಹೂವಾರಿ ಸುತ್ತಿದ್ದ ಸಿದ್ಧಲಿಂಗಸ್ವಾಮಿಗಳವರು ಇವರನ್ನು ಕಂಡು ಬಿರುಗಣ್ಣಿಂದ ''ಮಹಂತಪ್ಪಾ ಹುಡುಗರ್ನೆಲ್ಲ ಹಾಳ್ಮಾಡ್ತೀಯಾಽಽ....'' ತಾತ್ಸಾರದಿಂದ ನೊಂದು ನುಡಿದರು. ಪ್ರತಿಯಾಗಿ ಶ್ರೀಮಹಾಂತಸ್ವಾಮಿಯವರು ''ಆಹಾ. ನಾರದ್ನಂಗೆ ಮಾತಾಡ್ಬೇಡ ಸುಮ್ನಿರು'' ಅಂದು ಬಿಟ್ರು ಅದ್ಯಾವ ಜ್ಞಾನದಲ್ಲೋ. ಅದೆಲ್ಲಿತ್ತೊ ಆ ಪ್ರಚಂಡ ಕೋಪ ಸಿದ್ಧಲಿಂಗ ವಿಭುವಿಗೆ. ಕೂಡಲೆ ''ನಾನು ನಾರದ್ನಾ ನೀನೂ ಹೀಗನ್ನಬಹುದಾ ?'' ಎಂದು ಗುಡುಗಿ ಹೂ ತುಂಬಿದ್ದ ಚಿಬ್ಬಲನ್ನು ಬಲವಾಗಿ ಒಗೆದರು. ಒಗೆದ ರಭಸಕ್ಕೆ ಹೂವೆಲ್ಲ ಚೆಲ್ಲಿ ಚಿಬ್ಬಲು ಶ್ರೀ ಸಿದ್ಧಲಿಂಗರ ಪಾದ ಮೂಲಕ್ಕೆ ಬಂದು ನಿಂತಿತು. ಇದಾದ ಕೆಲವೇ ತಿಂಗಳೊಳಗೆ ಮಹಾಂತ ಸ್ವಾಮಿಂಗೆ ಕಷ್ಟ ಪರಂಪರೆಯೆ ಕವಿಯಿತು. ನಿಂತಲ್ಲಿ ನಿಲ್ಲಲು, ಕೂತಲ್ಲಿ ಕೂರಲು ಬಿಡುತ್ತಿರಲಿಲ್ಲ ದುರ್ವಿಧಿ. ತುತ್ತು ಅನ್ನಕ್ಕಾಗಿ ನಾಡಿನ ಮೂಲೆ ಮೂಲೆ ಸುತ್ತಿಬರಬೇಕಾಯಿತು. ಬದುಕು ಮೂರಾಬಟ್ಟೆಯಾಯಿತು. ಇದನ್ನು ತಿಳಿದ ಸಿದ್ಧಲಿಂಗಸ್ವಾಮಿಗಳಿಗೆ ಕರುಳು ಹಿಂಡಿತು ; ಅನುಕಂಪೆ ಮೂಡಿತು. ಮಹಾಂತಪ್ಪನವರನ್ನು ತಮ್ಮ ಬಳಿಗೆ ಕರೆಸಿಕೊಂಡು ಆಶ್ರಯ ನೀಡಿದರು. ''ನೋಡಿ, ಅಂದು ಹೂ ಚಿಬ್ಲು ಶ್ರೀಗಳ ಪಾದಮೂಲಕ್ಕೆ ತಿರುಗಿ ಬಂದಂತೆ ನಾನು ನಾಡೆಲ್ಲ ತಿರು ತಿರುಗಿ ನನ್ನ ಸ್ವಾಮಿ ಸಿದ್ಧಲಿಂಗರ ಬಳಿಗೆ ಬಂದು ಕಡೆಗೂ ಸೇರಿದೆ.'' ಎಂದು ನೆನೆದು ಕಂಪಿತ ಶರೀರರಾಗಿ ಕಣ್ಣೀರ್ಗರೆದು ಮನಸಾ ವಂದಿಸಿದರು. ಪ್ರಾಯಶಃ ಕ್ಷಮೆ, ದಮೆ, ಶಾಂತಿ ತುಂಬಿದ ಮಹಾತ್ಮನೊಳಗೆ ಕದ್ದು ಅಡಗಿದ್ದ ಸಿಟ್ಟು ತನಗೆ ಇನ್ನೇತರ ಕೆಲಸವೆಂದು ಅಂದು ಸಿಡಿಯಿತೇನೊ ! ಮುಂದೆಂದೂ ಇಂತಹ ಕೋಪ ಅವರ ಬಳಿ ಸುಳಿಯಲೂ ಸಾಧ್ಯವಾಗಲಿಲ್ಲ. ಬೇರೊಂದು ಸಂದರ್ಭ : ಶ್ರೀಗಳು ಒಮ್ಮೆ ಬಾಗಳಿಯಲ್ಲಿ ಭಿಕ್ಷಾಟನೆ ಮಾಡಿ ಭಕ್ತರಿಂದ ಸಂಗ್ರಹಿಸಿದ್ದ ಜೋಳವನ್ನು ಮಹಂತಪ್ಪನ ಮಾದಪ್ಪನವರ ಮನೆಯಲ್ಲಿ ಇರಿಸಿದ್ದರು. ಒಂದೆರಡು ತಿಂಗಳನಂತರ ಅವಶ್ಯಕತೆ ಬಿದ್ದಾಗ ಜೋಳವನ್ನು

ಕೇಳುವಷ್ಟರಲ್ಲಿ ಮಾದಪ್ಪ ಬಳಸಿಕೊಂಡು ಬಿಟ್ಟಿದ್ದರು. ಇದು ಶ್ರೀಗಳಿಗೂ ತಿಳಿಯಿತು. ಆದರೂ "ಮಾದಪ್ಪ ಜೋಳ ಕೊಡು ಬಳಸ್ಕೋ ಬಾರ್ದಾಗಿತ್ತು ನೀನು" ಅಂದರು. ನಿಮ್ಮ ಮನೇದ್ನ ಬಳಸೋಕ್ ಬಂದಿದ್ನಾ ಬುದ್ಧಿ ನಮ್ಮೂರ್ರೊಳ್ಜೋಳ ನಾ ಬಳಸ್ಕೊಂಡಿವ್ನಿ ನೆಟ್ಟಗೆ ಅಂದೇ ಬಿಟ್ಟ. "ಅಪ್ಪಾ ! ಮಾದಣ್ಣ ಬಳಸ್ಕೊಳ್ಳೋಕೆ ಅದು ನಂದೂ ಅಲ್ಲ ನಿಂದೂ ಅಲ್ಲ, ಶರಣರಿಗೆ ಸೇರಬೇಕಾದದ್ದು, ದಾಸೋಹಕ್ಕೆ ಬಳಸಬೇಕಾದದ್ದು" ಎಂದೆಲ್ಲ ಹೇಳಿದ ಮಾತಿಗೆ ಆತ ಜಗ್ಗಲಿಲ್ಲ. ಮನನೊಂದ ಸಿದ್ಧಲಿಂಗರು "ಕಂಬ ಳೀಶಾSSS ನೀನೆ ನೋಡ್ಕೊ ಅಪ್ಪಾ" ಎಂದು ನೊಂದು ನುಡಿದು, ಅನುಚರರೊಡನೆ ಆ ಮನೆಯಿಂದ ಹೊರಬಂದರು. ಇಂದು ಆ ಮನೆ-ಮನೆತನ ದಿವಾಳಿಯಾಗಿರುವುದನ್ನು ಕಂಡ ಜನ ಇದನ್ನು ಇಂದಿಗೂ ಜ್ಞಾಪಿಸಿಕೊಳ್ಳುತ್ತಿರುತ್ತಾರೆ. ಮತ್ತೊಮ್ಮೆ ಮಠದ ಗದ್ದೆಯಲ್ಲಿ ಬಂಚಳ್ಳಿಹುಂಡಿ ಗ್ರಾಮಕ್ಕೆ ಸೇರಿದ ಒಬ್ಬರ ಎತ್ತು ಬೆಳಸನ್ನು ಮೇದು ಹಾಳುಗೆಡವಿತು. ಶ್ರೀಗಳ ಕಡೆಯವರು ಪ್ರಶ್ನಿಸಲು ಇವರನ್ನೆ ದೂಷಿಸಿ ಕಳಿಸಿದರು. ಸಿದ್ಧಲಿಂಗರಿಗೆ ಈ ವಿಷಯ ತಿಳಿದು ತಪ್ಪಿತಸ್ಥರನ್ನು ಕರೆಸಿ "ಗುರುಮನೆ ಸ್ವತ್ತು ಹಾಳ್ಮಾಡ್ದಾರ್ರು, ಅಂಥವ್ರು ಉದ್ಧಾರಆಗೊಲ್ಲ. ನಿಮ್ಗೆ ಬಸವಣ್ಣನ್ನ ಸಾಕೋದು ಕಷ್ಟ ವಾದ್ರೆ ಯಾಕಿಟ್ಕೊಬೇಕು? ಅಟ್ಬಿಡಿ, ನಾವ್ ಸಾಕ್ತೀವಿ" ಎಂದು ಹೇಳುತ್ತಾ 'ಬಾಗಿಲ ಬಸವ'ನನ್ನು ಒಮ್ಮೆ ನೋಡಿ ನಿಟ್ಟುಸಿರ್ಗರೆದರು. ಇದಾದ ಅರ್ಧಗಂಟೆಯೊಳಗೆ ಮತ್ತೆ ಐದಾರು ಜನ ದಡ-ಬಡ ಬಂದು "ತಪ್ಪು ಬುದ್ಧಿ, ತಪ್ಪು ಬುದ್ಧಿ ಕ್ಷಮ್ಸಿ" ಎಂದು ಕ್ಷಮೆ ಯಾಚಿಸಿ ಆ ಎತ್ತು ತೀರ್ಕೊಂಡ ವಿಚಾರ ತಿಳಿಸಿದರು. ಆಗ "ಬಸವನ ಚಿಂತೆ ಬಿಡಿ, ಬಸವ ಇನ್ಮೇಲೆ ರಾಜಾರೋಷವಾಗಿ ಇಲ್ಲೇ ಮೇಯ್ಕೊಳ್ಳಂದ, ನಿಮ್ನಿಮ್ಮ ಬಾಳಿನ್‌ಚಿಂತೆ ಮಾಡಿ ಸರಿಯಾಗಿ ಜೀವ್ನ ಮಾಡಿ, ಹೋಗ್ಬನ್ನಿ" ಎಂದು ಬುದ್ಧಿ ಹೇಳಿ ಕಳುಹಿದರು.

ಶ್ರೀಗಳು ಅಂದದ್ದು ಆಗಿಯೆ ತೀರುತ್ತಿತ್ತು. ಇವರ ಮಾರ್ಗದರ್ಶನದಂತೆ ಬುದ್ಧಿ ಭ್ರಮಣೆಗೊಂಡಿದ್ದ ಹದಿನಾರುಗ್ರಾಮದ ಶ್ರೀ ನಂಜುಂಡಸ್ವಾಮಿಯವರು ಗುರು ಕಂಬಳೀಶ್ವರರ ಗದ್ದುಗೆ ಮುಂಭಾಗದಲ್ಲಿ ಪ್ರತಿನಿತ್ಯ ರಜ ಹೊಡೆದು ಸುಸ್ಥಿತಿಗೆ ಬಂದರು. ಕಮರವಾಡಿಯ ಶ್ರೀಮತಿ ಮರಮ್ಮನವರಿಗೆ ಬಾಯಿತುಂಬಾ ಹುಣ್ಣುಗಳಾಗಿ ಎಷ್ಟು ಔಷಧೋಪಚಾರ ಮಾಡಿಸಿದರೂ ಗುಣವಾಗಲಿಲ್ಲ. ಸಿದ್ಧಲಿಂಗರಿಗೆ ಕಮರವಾಡಿಯಲ್ಲಿಯೇ ಈ ವಿಚಾರ ತಿಳಿಯಿತು. ಆ ಭಕ್ತಳನ್ನು ಕರೆದು "ಮಠಕ್ಕೆ ಬಂದು ರಜ ಹೊಡಿ ; ಭಕ್ತರುಂಡ ಬಟ್ಟಲು ತೊಳಿ, ಗುರು ಕಂಬಳೀಶ ನಿನ್ನ ಕಷ್ಟ ಕಳೀತಾನೆ" ಹೀಗೆ ಹೇಳಿ ಕರೆದುಕೊಂಡು ಬಂದರು. ಆಶ್ಚರ್ಯ ! ಎರಡು ಮೂರು ವಾರಗಳಲ್ಲೇ ಆ ವ್ಯಾಧಿ ಮರಮ್ಮನನ್ನು ಹೇಳದೆ ಕೇಳದೆ ಓಡಿಬಿಟ್ಟಿತ್ತು. ಇಂಥದ್ದೆ ಇನ್ನೊಂದು ಘಟನೆ : ದೇಮಹಳ್ಳಿ ಮಲ್ಲಪ್ಪ ಎಂಬುವವರಿಗೆ ದಯ್ ಮಲ್ಲಯ್ಯನೆಂದೇ ರೂಢಿಯ ಹೆಸರಾಗಿತ್ತು. ಏಕೆಂದರೆ ಅವನು—"ಅಷ್ಟು ತಿಂತಿದ್ದ—ತೋಳನ ಹೊಟ್ಟೆಗೆ ಭೂತಾನೂ ಸೇರಿಕೊಂಡ್ರೆ ಹೇಗೊ ಹಾಗೆ. ಈ ದಯ್ ಮಲ್ಲಯ್ಯ ಶ್ರೀಮಠಕ್ಕೆ ಒಮ್ಮೆ ಬಂದು ಪ್ರಸಾದಕ್ಕೆ

ಕುಳಿತ, ಸಿದ್ಧಲಿಂಗರಿಗೆ ಇವನ ಊಟದ ವಿಶೇಷ, ಜೊತೆಗೆ ಬಂದಿದ್ದ ಭಕ್ತನಿಂದ ತಿಳಿಯಿತು. ಪ್ರಸಾದವೂ ಕಡಿಮೆ ಇತ್ತು. ಸಿದ್ಧಲಿಂಗ ಶ್ರೀಗಳು ಶರಣೆ ಸಿದ್ಧವೀರಮ್ಮನನ್ನು ಕರೆದು (ಎರಡನೇ ಕಂಬಳೀಶ್ವರರ ತಂಗಿ) "ನೋಡವ್ವ ಇವನಿಗೆ ಊಟದ ದೆವ್ವ ಹಿಡಿಕೊಂಡಿದೆಯಂತೆ ಬಿಡ್ಸು ತಾಯಿ" ಎಂದು ಪ್ರಸಾದ ನೀಡಿಸಿದರು. ಆ ಲಾಗಾಯ್ತು ಇತಿಮಿತಿ ಇಲ್ಲದೆ ತಿನ್ನುತ್ತಿದ್ದ ಅವನ ಹೊಟ್ಟೆಬಾಕತನ ಹಿಂಗಿ ಹೋಯಿತು. ಸಿದ್ಧವೀರಮ್ಮ ಶಿವಶರಣೆ ಎಂಬುದನ್ನು ತೋರಿಸುವುದು, ಅದೇ ಕಾಲಕ್ಕೆ ಮಲ್ಲಯ್ಯನ ಹೊಟ್ಟೆಬಾಕ ತನ ಸುಡುವುದುಂ ಶ್ರೀಗಳ ಮುಖ್ಯ ಉದ್ದೇಶವಾಗಿತ್ತು. ಒಂದೇ ಕಲ್ಲಿಗೆ ಎರಡು ಗುರಿಗಳ ಸಾಧನೆಯಾಗಿತ್ತು. ಇಂತಹ ಘಟನೆಗಳು ಹಲವು-ಹತ್ತು ಸಿಗಬಹುದು. ಇವೆಲ್ಲವೂ ಸಿದ್ಧಲಿಂಗರ ಸಿದ್ಧಿಯ ಕುರುಹುಗಳು. ಇವರಿಂದ ಆಶೀರ್ವದಿಸಲ್ಪಟ್ಟ ಅನೇಕರು ಇಂದು ಸಕಲ ಇಷ್ಟಾರ್ಥಗಳನ್ನೂ ಹೊಂದಿ ಸಮಾಜದಲ್ಲಿ ಉನ್ನತ ಸ್ಥಾನ–ಮಾನಗಳನ್ನು ಗಳಿಸಿಕೊಂಡಿದ್ದಾರೆಂದು ಬಲ್ಲವರು ಬಹಳವಾಗಿ ಹೇಳುತ್ತಾರೆ. ಒಟ್ಟಾರೆ ಶ್ರೀಗಳದು ಅಮೃತವಾಣಿ ! ಪರುಷ ಹಸ್ತ !

ವ್ಯಕ್ತಿತ್ವದ ಒಳಹೊರಗು :–

ಮಹಾತ್ಮ ಸಿದ್ಧಲಿಂಗಸ್ವಾಮಿಯವರನ್ನು ಬಲ್ಲವರೆಲ್ಲ, ಮುಖ್ಯವಾಗಿ ಅವರ ಶಿಷ್ಯ ವರ್ಗ ಅವರ ಸಂಗೀತಪ್ರಜ್ಞೆ, ಹಾಡುಗಾರಿಕೆ, ಕಥನ ಕೌಶಲವನ್ನು ಹೇಳಿ "ಇನ್ಯಾಕs ಈ ನಮ್ಮ ದಂಡೆ ಸುತ್ಲೆ ಅದ್ಯಾವನಪ್ಪ ಅವರ್ಧಂಗ ತಿಳ್ಕೊಂಡಿದ್ದವ"-ಅಂದರೆ ಮಾತ್ರ ಅವರಿಗೆ ಸಮಾಧಾನ. ಒಬ್ಬರಂತೂ 'ನಿಮ್ಹನ್ನೊಂದು ತಾಲೋಕ್ನು ಇಲ್ಲ ; ಗುಬ್ಬಿ ಕಂಪ್ನೀಲೂ ಇಲ್ಲ' —ಅಂದರು. ಇನ್ನೊಬ್ರು "ಹಾಡೊಕ್ಕುಂತ್ರೆ ನಾಗರಹಾವೂ ತಲೆ ದೂಗ್ಬೇಕು ; ಅವರ ಹಾಡೇ ಪುಂಗಿ"—ಅಂತಾರೆ. ಒಂದು ಸಾರಿ ಮೂಗೂರಿಗೆ ಬಂದಿದ್ದ ತಂಜಾವೂರು ನಾಗಸ್ವರತಂಡದವರು ಇವರ ಪಾಂಡಿತ್ಯಪೂರ್ಣ ಹಾಡುಗಾರಿಕೆಯನ್ನು ಕೇಳಿ, ನೋಡಿ ತಲೆದೂಗಿಬಿಟ್ಟರು. ಸುತ್ತಲೂ ಚಪ್ಪಾಳೆಗಳ ಸುರಿಮಳೆಯಾಯಿತು. ಎಷ್ಟೋ ವೇಳೆ ಎಡ ಕಿವಿಯ ಹತ್ತಿರ ಎಡಕೈ ತಂದು ಎಡ ಕೆನ್ನೆಯನ್ನ ಎಡಗೈಗೆ ಆನಿಸಿ ಕಣ್ಣುಮುಚ್ಚಿ ಹಾಡಲು ಪ್ರಾರಂಭಿಸಿದರೆ ಎಷ್ಟು ಹೊತ್ತಿಗೆ ಮುಗಿಯಬಹುದೆಂಬುದು ಯಾರಿಗೂ ತಿಳಿಯುತ್ತಿರಲಿಲ್ಲ. ಇದನ್ನೆಲ್ಲ ಎಲ್ಲಿ ಕಲಿತರು ? ಹೇಗೆ ಕಲಿತರು ? ಯಾರಿಗೂ ಗೊತ್ತಿಲ್ಲ "ಆ ಕಂಬಳಿ ಅಪ್ಪನ ದಯೆ" ಎಂದು ಶಿಷ್ಯರ ನಂಬಿಕೆ. ಪ್ರಭುಲಿಂಗಲೀಲೆ, ಸಿಂಗಿರಾಜಪುರಾಣ, ರಾಜಶೇಖರವಿಳಾಸ, ನಿಜಗುಣರ ವಚನಗಳು, ಕೋಳೂರ ಕೊಡಗೂಸಿನ ಕಥಾ ಪ್ರಸಂಗ ಮತ್ತಿತರ ಶಿವಕಥಾ ಪ್ರಸಂಗಗಳು, ವಚನಶಾಸ್ತ್ರ ಹೀಗೆ ಅನೇಕ ವಿಚಾರಗಳನ್ನು ಸಂದರ್ಭ ಬಂದಾಗ ನೆನಪಿನ ಶಕ್ತಿಯಿಂದಲೆ ಉದ್ಧರಿಸುತ್ತಿದ್ದರು ಮಾತ್ರವಲ್ಲ, ರಾಗವಾಗಿ ಹಾಡಿ ಅಭಿನಯಿಸಿ ತೋರಿಸುತ್ತಿದ್ದರು. ಆ ಕಾಲಕ್ಕೆ 'ಶಿವಕಥಾ ಸಿಂಹ ಶಿರೋಮಣಿ' 'ವೀರಶೈವ ಸಿಂಹ ಶಿಖಾಮಣಿ' ಎನಿಸಿದ್ದ ಮೈಸೂರಿನ ಶಿವಪ್ಪ ಶಾಸ್ತ್ರಿಗಳ ಶಿವಕಥೆ ತುಂಬಾ ಪ್ರಸಿದ್ಧಿ ಪಡೆದಿತ್ತು. ಶ್ರೀಗಳು ಶಿಷ್ಯರ ನಡುವೆ ಪ್ರಸಂಗಗಳನ್ನು ಅರ್ಥೈಸುತ್ತಾ ಹೋಗುವ ಕೆಲವು ಸಂದರ್ಭಗಳಲ್ಲಿ

ತಮಾಷೆಗಾಗಿ ''ಇದು ಶಿವಪ್ಪ ಶಾಸ್ತ್ರಿ ಭಂಗಿ ಕಣ್ರೋ'' ಎಂದು ನಕ್ಕು ತೋರಿಸು ತ್ತಿದ್ದರು. ಇದು ಅವರ ತಿಳಿ ಹಾಸ್ಯದ ಪರಿ.

ಸಿದ್ಧಲಿಂಗರು ಹೆಚ್ಚು ಪ್ರಚಾರಪ್ರಿಯರಲ್ಲ. ತಮ್ಮ ಸೇವೆ ಬೇರೆಯವರ ಗಮ ನಕ್ಕೆ ಬರಬೇಕೆಂದು ಅವರ ಆಶಯವಲ್ಲ. ಗುಪ್ತ ಭಕ್ತನ ಸೇವೆಯಂತೆ ಗುಪ್ತಗಾಮಿನಿ. ಅಧಿಕಾರಿಗಳಾಗಲಿ ರಾಜರಾಗಲಿ ಅಥವಾ ಹಿರಿಯ ಸ್ವಾಮಿಗಳಾಗಲಿ ಬಂದರೆಂದರೆ ಅವ ರಿಗೆ ಎಲ್ಲಿಲ್ಲದ ಮುಜುಗರ ; ಏನೋ ಒಂದು ಬಗೆಯ ಅವ್ಯಕ್ತ ಕಾತರ, ಸಿ. ಪಿ. ಸಿ. ಸಾಹುಕಾರರು ಇವರ ದರ್ಶನಕ್ಕೆ ಬಂದಾಗ ಒಳಗಿದ್ದೂ ಇಲ್ಲವೆನ್ನಿಸಿಕೊಂಡರು. ಮೈಸೂರು ಮಹಾರಾಜ ದಿವಂಗತ ಜಯಚಾಮರಾಜ ಒಡೆಯರ್ ಅವರು ಊಟಿಗೆ ಹೋಗುವ ಮಾರ್ಗದಲ್ಲಿ ಶ್ರೀ ಮಠದಲ್ಲಿ ಸ್ವಾಮಿಗಳನ್ನು ನೋಡಬೇಕೆಂದು ಇಚ್ಛಿಸಿ ದಾಗ ಊರಲ್ಲಿ ಇಲ್ಲವೆನಿಸಿಕೊಂಡರು. ಮೈಸೂರಿನ ಪಂಚಗವಿ ಮಠದ ಗೌರೀಶಂಕರ ಮಹಾಸ್ವಾಮಿಗಳು ದರ್ಶನಕ್ಕೆ ಬರುತ್ತೇವೆಂದು ಒಂದಲ್ಲ ಎರಡಲ್ಲ, ಐದುಬಾರಿ ಹೇಳಿ ಕಳಿಸಿದರೂ ಒಂದಲ್ಲೊಂದು ಕಾರಣಕೊಟ್ಟು ಊರಲ್ಲಿಲ್ಲವೆನಿಸಿಕೊಳ್ಳುತ್ತಿದ್ದರು. ಈ ವರ್ತನೆ ಖಂಡಿತ ತಿರಸ್ಕಾರವಲ್ಲ. ತಮಗಿಂತ ದೊಡ್ಡವರನ್ನು ಕರೆದು ಹೇಗೆ ಸತ್ಕರಿಸು ವುದು ? ಎಲ್ಲಿ ಅಪಚಾರವಾಗುತ್ತದೊ ? ಏನಾಗುತ್ತದೊ ? ಎಂಬುದೆ ಅವರಿಗಿದ್ದ ಸಮಸ್ಯೆ. ಇದರ ಜೊತೆಗೆ ಅಧಿಕಾರಿಗಳ ಹಾಗು ರಾಜರ ದೃಷ್ಟಿಗಳಿಂದ ದೂರ ಉಳಿಯುವ ಮನಸ್ಸೂ ಅವರಲ್ಲಿದ್ದಿರಬಹುದೇನೊ ? ಹೀಗಿದ್ದೂ ಗೌರೀಶಂಕರರು ಶ್ರೀ ಮಠಕ್ಕೆ ಇವರ ಕಾಲದಲ್ಲಿ ಒಂದೆರಡು ಸಲ ಬಂದು ಹೋದರು. ಪ್ರಥಮ ಭೇಟಿಯಲ್ಲಿ ಶ್ರೀಗಳನ್ನು ಕಂಡ ಗೌರೀಶಂಕರರು ''ಅಪ್ಪಾ ಶರಣ ನಿನ್ನ ವಿಷಯ ಕೇಳಿ ತಿಳಿದಿದ್ದೆ, ಇಷ್ಟು ವರ್ಷಕ್ಕೆ ದರ್ಶನಭಾಗ್ಯ ದೊರೆಯಿತಲ್ಲ ಅಷ್ಟೇ ಸಾಕು !'' ಎಂದು ಹೇಳಿದರು. ಶ್ರೀಮನ್ ಮಹಾರಾಜರು ತಮ್ಮ ಮೂರನೆಯ ಪ್ರಯತ್ನದಲ್ಲಿ ಶ್ರೀಗಳನ್ನು ಕಾಣುವ ಅವಕಾಶವನ್ನು ಪಡೆದುಕೊಂಡರು. ಅಂದು ಬೆಳಿಗ್ಗೆ ಕುದುರೆ ಸವಾರರಿಬ್ಬರು ಬಂದು ಗದ್ದುಗೆಯಲ್ಲಿದ್ದ ಶ್ರೀಗಳವರನ್ನು ಕಂಡು ''ಸವಾರಿ ಊಟಿಯಿಂದ ಹಿಂತಿರುಗ್ತಾ ಇದೆ ; ಒಡೆಯರು ತಮ್ಮ ದರ್ಶನವನ್ನು ಬಯಸಿದ್ದಾರೆ'' ಎಂದು ಬಿನ್ನವಿಸಿಕೊಂಡರು. ಮಾತೆಯೊಡಗೂಡಿ ಪತ್ನೀ ಸಮೇತ ಶ್ರೀಮನ್ ಮಹಾರಾಜರು ಆಪ್ತ ಕಾರ್ಯದರ್ಶಿ ಎ.ಡಿ.ಸಿ. ಶ್ರೀ ಮಹಾದೇವಯ್ಯ ಮೊದಲಾದ ಮುಖ್ಯರು ಕಂಬಳೀಶ್ವರರ ಗದ್ದುಗೆಯಲ್ಲಿ ಭಕ್ತಿಯಿಂದ ಪೂಜಾ ಕೈಂಕರ್ಯ ಸಲ್ಲಿಸಿದರು. ಪಾದಗಳಿಗೆರಗಿದ ಮಹಾರಾಜರ ಶಿರ ಮುಟ್ಟಿ ಹರಸಿದರು. ಆಶೀರ್ವಚನ ಪಡೆದ ಮಹಾರಾಜರು ಪುನೀತ ಭಾವದಿಂದ ನಿಂತು ನನ್ನಿಂದ ಮಠಕ್ಕೆ ಏನಾದರೂ ಸಹಾಯ ಸಹಕಾರ ಬೇಕಿದ್ದರೆ ಅಪ್ಪಣೆಯಾಗಬೇಕೆಂದು ವಿನಂತಿಸಿದರು. ಸಿದ್ಧಲಿಂಗರು ಏನು ಹೇಳಿದರು ಗೊತ್ತೆ ? 'ನೀರ್ರುಪ್ಪ ಮಾಡಿದ ಕಂಬಳೀಶನಿದ್ದಾನೆ, ಸದ್ಯಕ್ಕೆ ಯಾವ ಕೊರತೆಯೂ ಇಲ್ಲ'' ಎಂದರು. ಅನಂತರ ಪಂಚಾ ಮೃತ ಪ್ರಸಾದ ಬಾದಾಮಿ ಹಾಲಿನ ಸೇವನೆಯಾಯಿತು. ವಿಭೂತಿ, ರುದ್ರಾಕ್ಷಿ ಫಲ ತಾಂಬೂಲಾದಿಗಳಿಂದ ರಾಜರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಎರಡು

ವಿಶೇಷಗಳು ಜರುಗಿದವು. ಒಂದು—ಕಂಬಳಿ ಅಪ್ಪಗಳ ಗದ್ದುಗೆಯಲ್ಲಿ ಪೂಜೆಗೊಳ್ಳು ತ್ತಿದ್ದ ಪ್ರಭುದೇವರನ್ನೊಳಗೊಂಡ ಶರಣ ಶರಣೆಯರ ಒಂದು ಅಪೂರ್ವ ಚಿತ್ರಪಟ ಮಹಾರಾಜರ ಮನಸ್ಸನ್ನು ಬಹುವಾಗಿ ಆಕರ್ಷಿಸಿತು. ಶ್ರೀಗಳವರನ್ನು ಕೇಳಿ ಅದನ್ನು ಅರಮನೆಗೆ ಕೊಂಡೊಯ್ದು ಅಂಥದೆ ಮತ್ತೊಂದು ಚಿತ್ರಪಟವನ್ನು ಬರೆಸಿಕೊಂಡು ಆ ನಂತರ ಮೂಲ ಚಿತ್ರಪಟವನ್ನು ಜೋಡಿಶಾಲು ಮತ್ತು ನೂರೆಂಟು ರೂಪಾಯಿಗಳ ಗುರುಕಾಣಿಕೆಯೊಡನೆ ವಂದನಾ ಪತ್ರದೊಂದಿಗೆ ಶ್ರೀಮಠಕ್ಕೆ 1950ನೇ ನವೆಂಬರ್ 26 ರಲ್ಲಿ ಕಳಿಸಿಕೊಟ್ಟರು. ಹೀಗೆ ಕೊಟ್ಟ ಬೆಳ್ಳಿ ನಾಣ್ಯದಲ್ಲಿ ಒಂದನ್ನು ಕಮರವಾಡಿಯ ಶ್ರೀಮಹಂತಸ್ವಾಮಿಗಳು ಇಂದಿಗೂ ತಮ್ಮ ಶ್ರೀ ಗಂಧದ ಕರಂಡಿಕೆಯೊಳಗೆ ಜೋಪಾನ ಮಾಡಿದ್ದಾರೆ. ಜೋಡಿ ಶಾಲುಗಳನ್ನು ಈಗಲೂ ಶ್ರೀ ಮಠದಲ್ಲಿ ಭಕ್ತರು ಕಾಣ ಬಹುದು. ಎರಡನೆಯದು ಗದ್ದುಗೆಯಲ್ಲಿದ್ದ ಒಂದು ವಿಭೂತಿ ಸರ ಮಹಾರಾಜರ ಚಿತ್ತವನ್ನಪಹರಿಸಿತು. ಇನ್ನೇನು ? ಅದು ಅವರ ಪಾಲಾಯಿತು. ''ನನಗೆ ಇನ್ನೂ ಇಂತಹ ನಾಲ್ಕು ಸರ ಬೇಕು ಮಾಡಿಸಿಕೊಡಿ'' ಎಂದು ಶ್ರೀ ಸಿದ್ಧಲಿಂಗರಲ್ಲಿ ಕೇಳಿಕೊಂಡು ಮಹಾರಾಜರು ಮೈಸೂರಿಗೆ ಹೋದರು. ಸಿದ್ಧಗಂಗೆಯ ಕಡೆಯಿಂದ ತಂದಿದ್ದ ಅಂಥದ್ದೇ ಸರವನ್ನು ಮತ್ತೆ ಮಾಡಿಸಿ ಮಹಾರಾಜರಿಗೆ ತಲುಪಿಸಬೇಕಾದರೆ ಸುಮಾರು ಎರಡು ವರ್ಷಗಳೇ ಬೇಕಾಯಿತು.

''ಮೃದು ವಚನಗಳೆ ಸಕಲ ಜಪ-ತಪಂಗಳಯ್ಯ'' ಎಂಬುದನ್ನು ಅರಿತಿದ್ದ ಶ್ರೀಗಳು ಭಕ್ತರನ್ನು ಯಾವಾಗಲೂ ಆತ್ಮೀಯತೆಯಿಂದಲೆ ಮಾತನಾಡಿಸುತ್ತಿದ್ದರು. ಅವರ ಬಾಯಿಂದ 'ತಾತ', 'ಕಂದ', 'ತಾಯಿ', 'ಅಪ್ಪಯ್ಯ', 'ಅಮ್ಮಯ್ಯ' ಶಬ್ದಗಳಲ್ಲದೆ ಬೇರೆ ಶಬ್ದಗಳೆ ಹೊರ ಬೀಳುತ್ತಿರಲಿಲ್ಲ. ಬೆಣ್ಣೆಯಂತಹ ಮಾತು-ಅವರದು. ಭಕ್ತರು ಮನೆಗಳಿಗೆ ಹೋದಾಗಲೆಲ್ಲ ಬಡವ ಬಲ್ಲಿದನೆನ್ನದೆ ಅವರಿಗೆ ಶಿವತತ್ವ, ಸದಾಚಾರಗಳನ್ನು ಬೋಧಿಸದೆ ಎಂದೂ ಭಿಕ್ಷೆ ಸ್ವೀಕರಿಸುತ್ತಿರಲಿಲ್ಲ. ಪಾದ ಪೂಜೆಯ ಸಂದರ್ಭ ಮತ್ತು ಶರಣರ ಉತ್ಸವ ಸಮಯಗಳಲ್ಲಿ 'ಕಿರಿಯ ಹಿರಿಯ' ಭೇದವೆಣಿಸದೆ ಅನ್ಯಮಠದ ಶ್ರೀಗಳವರನ್ನೇ ಈ ಪುರಸ್ಕಾರಗಳಿಗೆ ಯೋಗ್ಯರೆಂದು ತಿಳಿಸಿ, ತಾವೆ ನಿಂತು ಅವರನ್ನು ಒಪ್ಪಿಸುತ್ತಿದ್ದರು. ಉತ್ಸವ ಮೂರ್ತಿ ಕಿರಿಯರಾದರೂ ತಾವೆ ಮೆರವಣಿಗೆಯ ಮುಂದಾ ಳಾಗಿ ನಿಂತು ಶಿವಭಜನೆ ಮಾಡುತ್ತಾ ಆನಂದದಿಂದ ಸಾಗುತ್ತಿದ್ದರು. ಕಿಂಕರತ್ವ ಮತ್ತು ಮನೋವೈಶಾಲ್ಯಕ್ಕೆ ಇದಕ್ಕಿಂತಲೂ ಹೆಚ್ಚಿನ ನಿದರ್ಶನ ಬೇಕೇ ? ಆರಾಧನಾ ಸಮಯ ದಲ್ಲಿ ತಾವೆ ಮುಂದೆ ನಿಂತು ಪ್ರಸಾದ ನೀಡಿಸುತ್ತಿದ್ದರು ಅನಿವಾರ್ಯವಾದರೆ ನಡು ಕಟ್ಟಿ ಪ್ರಸಾದ ನೀಡಲೂ ಹಿಂಜರಿಯುತ್ತಿರಲಿಲ್ಲ. ಪ್ರಸಾದ ಹೆಚ್ಚಾಗಿ ಭಕ್ತರು ನಿರೀಕ್ಷಿಸಿದಷ್ಟು ಬಾರದಿದ್ದರೆ ''ಜನ ಬರ್ಲಿಲ್ಲ ಪ್ರಸಾದ ಹೋಯ್ತು, ನೋಡು ಮಲ್ಲಯ್ಯ ಭಕ್ತರು ಬಾರದೆಹೋದರೆ ನನ್ನ ಭಾಗ್ಯ ಉಳಿಯೊಲ್ಲ'' ಎಂದು ಚಡಪಡಿಸುತ್ತಿದ್ದರು. ದಂಡು-ದಂಡು ಭಕ್ತರು ಬರಬೇಕು ಮಾಡಿದ ಪ್ರಸಾದ ಮುಗಿಯಬೇಕು. ಆಗಲೆ ಅವರಿಗೆ ತೃಪ್ತಿ ; ನೆಮ್ಮದಿ.

ಶ್ರೀಗಳವರು ಅಷ್ಟೇನೂ ಎತ್ತರವೂ ಅಲ್ಲದ ಗಿಡ್ಡವೂ ಅಲ್ಲದ ಮಧ್ಯಮ ಗಾತ್ರದ ಆಕರ್ಷಣೀಯ ನಿಲುವು ಉಳ್ಳವರು. ಗೌರ ವರ್ಣ, ಹೆಗಲ ಮೇಲೆ ಹಾಕುತ್ತಿದ್ದುದು ಒಂದು ಕಾವಿವಸ್ತ್ರ. ಮಿಕ್ಕೆಲ್ಲವೂ ಶ್ವೇತ ಶುಭ್ರ ಉಡುಪು. "ಹೊಲ-ಮನೆ-ಮಠ ಭಕ್ತರು" ಎಂದು ಕಟ್ಟಿಕೊಂಡ ಮೇಲೆ ಸಂಪೂರ್ಣ ತ್ಯಾಗದ ಪ್ರಶ್ನೆ ಎಲ್ಲಿ ಬಂತು ? ಅಂತಲೆ ಅವರು ಪೂರ್ಣ ಕಾವಿ ಧಾರಿಯಾಗಿರಲಿಲ್ಲ. ಅವರದ್ದು ಒಳಕಾವಿ ; ಹೊರ ಕಾವಿಯಲ್ಲ. "ವ್ಯಕ್ತಿ ತನ್ನ ನೆರಳಿಗೆ ಅಂಜಿ ಒಂದಿಂಚು ತಗ್ಗಿ ನಡೀಬೇಕೆಂದು" ಆಗಾಗ್ಗೆ ಶಿಷ್ಯರನ್ನು ಎಚ್ಚರಿಸುತ್ತಿದ್ದರು. ಕೋರ್ಟು ಕಚೇರಿ ಎಂದರೆ ಮೂರು ಗಾವುದ ದೂರವೆ ಉಳಿಯುತ್ತಿದ್ದರು. "ಕೋರ್ಟು ನಮ್ಮೊಳ್ಗೆ ಇದೆ, ಇಲ್ಲೆ ಕೇಳು ನ್ಯಾಯಾನ, ಅಲ್ಲ್ಯಾಕೆ ಸುಮ್ನೆ ಹುಡುಕ್ತೀಯಾ ?" ಎಂಬ ನಿಲುವು ಇವರದು. "ರಾಗಿ ತಿಂದು ರೋಗ ಕಳ್ಕೊಳ್ರಿ" ಎಂದು ಬುದ್ಧಿ ಹೇಳ್ತಿದ್ರು. ಬೇಸಾಯ ಮಾಡಿಸುವುದರಲ್ಲೂ ನಿಸ್ಸೀಮರು. "ಗುರುವಾದರೂ ಕಾಯಕದಿಂದಲೇ ಮುಕ್ತಿ' ಎನ್ನುತ್ತಿದ್ದ ಮಹಾನುಭಾವರು. ಇಂತಹ ಅಮೃತವಾಣಿ ಅವರ ಅನುಭವದ ಹಾದಿಯಲ್ಲಿ ಅದೆಷ್ಟೋ !

ಕರೆಯಿತು ಕೈಲಾಸ :

ಶ್ರೀ ಮಠದ ಏಳಿಗೆಗೆ, ಭಕ್ತೋದ್ಧಾರಕ್ಕೆ ದುಡಿದುಡಿದು ದಣಿದಿದ್ದ ದೇಹ ಮತ್ತು ಮನಸ್ಸು ವಿಶ್ರಾಂತಿಯನ್ನು ಬಯಸುತ್ತಿದ್ದುವು. ಆದರೇನು ; ಅವಿಶ್ರಾಂತ ದುಡಿಮೆ ಅನಿವಾರ್ಯವಾಗಿತ್ತು. ಕರಸಂಜಾತ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳು ಸಹಕರಿಸುತ್ತಿದ್ದರೂ ವಿಸ್ತರಿಸಿದ್ದ ಶ್ರೀ ಮಠದ ಆಡಳಿತ ಸೂತ್ರವನ್ನು ಸಮರ್ಪಕವಾಗಿ ನಡೆಸಿಕೊಂಡು ಬರುವುದು ಸುಲಭದ ಮಾತಾಗಿರಲಿಲ್ಲ. ದಣಿದಿದ್ದ ದೇಹಕ್ಕೆ ಮುಪ್ಪು ಮತ್ತು ಅನಾರೋಗ್ಯ ಒಟ್ಟಿಗೆ ಧಾಳಿ ಇಟ್ಟವು. ಶರೀರ ಜರ್ಝರಿತವಾಯಿತು. ಆತಂಕಗೊಂಡ ಆಪ್ತಶಿಷ್ಯರು ಮೈಸೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಸೇರಿಸಿದರು. ಇತ್ತ ಭಕ್ತಸ್ತೋಮದ ಮನದಲ್ಲಿ ದುಗುಡದ ಜೇನು ಕಟ್ಟಿತು. ಔಷಧೋಪಚಾರಗಳಿಂದ ಪ್ರಯೋಜನ ಕಾಣಲಿಲ್ಲ. ತಮ್ಮ ಪ್ರಾಣಪಕ್ಷಿ ಕೈಲಾಸದ ಹಾದಿ ಹುಡುಕುತ್ತಿದ್ದುದನ್ನು ಅರಿತ ಈ ಮಹಾನುಭಾವರು ಶಿಷ್ಯರಿಗೆ ತಮ್ಮನ್ನು ಗದ್ದುಗೆಯ ಬಳಿಗೆ ಕರೆದೊಯ್ಯುವಂತೆ ತಿಳಿಸಿದರು. ದಿಕ್ಕು ಕಾಣದ ಶಿಷ್ಯರು ರೆಕ್ಕೆ ಮುರಿದ ಪಕ್ಕಿಯಂತೆ ಉಮ್ಮಳಿಸಿದರು. ಅಸ್ವಸ್ಥ ಶ್ರೀಗಳನ್ನು ಹೊತ್ತು ಕಾರು ಮಂದಗತಿಯಲ್ಲಿ ಶ್ರೀ ಕಂಬಳೀಶ್ವರ ಮಹಾನುಭಾವರ ಗದ್ದುಗೆಗೆ ಅಭಿಮುಖವಾಗಿ ಸಾಗಿತ್ತು. ಗದ್ದುಗೆ ಹತ್ತಿರ ಬಂದಾಗ ಬಾಗಿಲ ಬಸವನನ್ನು ಕಂಡ ಶ್ರೀಗಳ ಚೈತನ್ಯಸ್ವರೂಪ ಸಂಕಲ್ಪ ಮಾಡಿತ್ತು.

ಶ್ರೀ ಗುರು ಕಂಬಳೀಶರ ಗದ್ದುಗೆಯ ಅಂಗಳಕ್ಕೆ ಓಂಕಾರ ಸ್ವರೂಪರಾದ ಮಂಗಳಾಂಗ ಸಿದ್ದಲಿಂಗರನ್ನು ಶಿಷ್ಯರು ಕರೆತರುತ್ತಿದ್ದಂತೆಯೆ ಅವರ ಆತ್ಮ ಪರಮಾತ್ಮನಲ್ಲಿ ಲೀನವಾಯಿತು ! ಜ್ಯೋತಿ, ಜ್ಯೋತಿಯೊಡಗೂಡಿತ್ತು ! ಬೆಳಗು ಮಹಾಬೆಳಕನ್ನು ಕೂಡಿ ಆಗಿತ್ತು !! ಪಾವನ ಕಪಿಲೆ ಕ್ಷಣ ಸ್ತಬ್ಧವಾದಂತೆ ಭಾಸವಾಯಿತು. ಭಕ್ತರ

ಮನದಲ್ಲಿ ಅನಾಥ ಭಾವ ಆವರಿಸಿ ನೋವು ಸಂಕಟ ಉದ್ವೇಗ ಉಮ್ಮಳಗಳ ತೆರೆಗಳು ಘೂರ್ಮಿಸಿ ಅಪ್ಪಳಿಸಿದುವು. ಎಲ್ಲೆಲ್ಲೂ ದುಃಖದ ಕೋಡಿ ಹರಿಯಿತು. ಸಹಸ್ರಾರು ಭಕ್ತರ ಕರಗಳು ಪಾವನ ಪಾದ ಸ್ಪರ್ಶದ ಕಡೆಯ ಅವಕಾಶಕ್ಕೆ ಕಾದು ನಿಂತವು. ಸ್ಪರ್ಶಿ! ಪಾವನಗೊಂಡವು. ಇದ್ದಕ್ಕಿದ್ದಂತೆ "ಜೈ ಸಿದ್ಧಲಿಂಗ" "ಉಘೇ ಸಿದ್ಧಲಿಂಗ" ಸಹಸ್ರಾರು ಕಂಠಗಳು ಏಕಪ್ರಕಾರ ಧ್ವನಿಗೈಯತೊಡಗಿದವು. ಭಕ್ತರಿಗೆ ಉಳಿದದ್ದು ಒಂದೇ : "ಮರಳಿ ಬಾ ಸಿದ್ಧಲಿಂಗ ಜಗವನುದ್ಧರಿಸೆ" ಎಂದು ಕೇಳಿಕೊಳ್ಳುವುದು. ಅಂತೆಯೆ ಭಕ್ತಗಣ ಕರಜೋಡಿಸಿ ಶಿರಬಾಗಿ ಇಂದಿಗೂ ಪ್ರಾರ್ಥಿಸುತ್ತಿದೆ :

ನೀ ಬರುವೆ ಎಂದು ? ಜಗದೊಡೆಯ ಸಿದ್ಧಲಿಂಗ
ನೀ ಬಾರದಿರೆ ನಮ್ಮ ಬದುಕೆಲ್ಲ ಭಂಗುರ ಭಂಗ
ಬಾರಯ್ಯ ಸಿದ್ಧಲಿಂಗ ; ಭುವಿಯನುದ್ಧರಿಸೆ ನಿನ್ನ ದಿವ್ಯ ಸಂಗ
ಬಾರಯ್ಯ ಬಾರಯ್ಯ ಬಾರಯ್ಯ ಪಾವನಾಂಗ

ಶ್ರೀ ಗುರು ಸಿದ್ಧಲಿಂಗಾ**SSS....**

——

ಬಿನ್ನಹ :

ಮಹಾತ್ಮರ ಬದುಕಿಗೆ ಎಷ್ಟೊಂದು ಮುಖಗಳು ! ಯಾವುದನ್ನು ಕಾಣುವುದು ? ಯಾವುದನ್ನು ಬಿಡುವುದು ? ಏನು ಬರೆದರೂ ಪೂರ್ಣತೆ ಬಾರದು. ಇಲ್ಲಿ ಶ್ರೀಗಳವರ ಜೀವನದ ಎಲ್ಲಾ ಘಟನೆಗಳನ್ನು ಕುರಿತು ಹೇಳಿದ್ದೇನೆಂದಾಗಲಿ ಅಥವಾ ಇಲ್ಲಿ ಉಲ್ಲೇಖಿಸಿರುವ ವಿಷಯಗಳೆ ನಿರ್ಣಾಯಕವೆಂದಾಗಲಿ ಭ್ರಮೆ ಇರಿಸಿಕೊಂಡವ ನಾನಲ್ಲ. ಒಂದು ಸಾಮಾನ್ಯ ಲೇಖನದ ವ್ಯಾಪ್ತಿಯಲ್ಲಿ ಅದು ಸಾಧ್ಯವೂ ಅಲ್ಲ. ಈ ಪ್ರಯತ್ನ ಮಹಾತ್ಮ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಶಿಷ್ಯರಲ್ಲಿ ಗುರುವಿನ ಬಗ್ಗೆ ಸ್ವಲ್ಪ ಮಟ್ಟಿನ ಅರಿವು ಮೂಡಿಸುವುದು ಮತ್ತು ಶ್ರೀಗಳವರ ಜೀವನವನ್ನು ಅರಿಯಬೇಕೆಂಬ ಶರಣಕುತೂಹಲಿಗಳಲ್ಲಿ-ಜ್ಞಾನದಾಹಿಗಳಲ್ಲಿ ಸತ್ಯಶೋಧನೆಯ ಕಿಡಿಯನ್ನು ಮುಟ್ಟಿಸಿ ಪ್ರೇರೇಪಿಸುವುದು ಮಾತ್ರ. ಈ ಎರಡು ಉದ್ದೇಶಗಳು ಸ್ವಲ್ಪಮಟ್ಟಿಗಾದರೂ ಈಡೇರಿದರೆ ನನ್ನ ಉದ್ದೇಶ ಶ್ರಮ ಸಫಲ ಸಾರ್ಥಕ.

ಚಿನ್ಮಯರೂಪಿ ಪೂಜ್ಯ ಶ್ರೀ ಚೆನ್ನಬಸವಸ್ವಾಮಿಗಳು

ಶ್ರೀ. ಪಿ. ಬಸವಣ್ಣ

ಆಸಮರ್ಥ್ಯೆರ್ಯ ದೃಢತೆ ಕ್ಷಮ ದಮೆ ಅಸ್ತೇಯ
ಮಿಸುಪ ಸತ್ಯೇಂದ್ರಿಯವಿಜಯ ವಿದ್ಯೆಯು
ಎಸೆವ ಶೌಚವು ಸೌಮ್ಯಬುದ್ಧಿಮತಿ ಧರ್ಮಕ್ಕೆ
ದಶಲಕ್ಷಣವು ನೋಡೆ—ಬೋಳಬಸವ॥

ಧರ್ಮವನ್ನು ಧಾರುಣಿಯ ಉದ್ದಗಲಕ್ಕೂ ದಿಟ್ಟತನದಿಂದ ಆಚರಿಪ ಹಾಗೂ ಬಿತ್ತರಿಪ ಮಹಾಚೇತನಕ್ಕೆ ಈ ಮೇಲ್ಕಂಡ ದಶಲಕ್ಷಣವಿರಬೇಕೆಂಬುದು ಪ್ರಸಿದ್ಧ ಆರ್ಯವಾಣಿ. ಈ ಎಲ್ಲಾ ಲಕ್ಷಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಮೈಗೂಡಿಸಿಕೊಂಡು ಭಕ್ತೋದ್ಧಾರಕ್ಕಾಗಿಯೇ ಬದುಕಿ ಬಾಳುತ್ತಿರುವವರು ಚಿನ್ಮಯರೂಪಿ ಶ್ರೀ ಚೆನ್ನಬಸವ ಸ್ವಾಮಿಗಳವರು. ಆ ಭವ್ಯ ಮೂರ್ತಿಯ ಜೀವನದ ಸ್ಥೂಲಚಿತ್ರಣಗೈವ ಒಂದು ಪ್ರಯತ್ನವೇ ಈ ಲೇಖನ.

2. 5. 1943ರಂದು ಭುವಿಗಿಳಿದ ಈ ಪುಣ್ಯಜೀವಿಗೆ ದೇಹವಿತ್ತವರು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ಶರಣ ದಂಪತಿಗಳಾದ ಶ್ರೀ ಸ್ವತಂತ್ರಪ್ಪ ಹಾಗೂ ಶ್ರೀಮತಿ ಗಂಗಮ್ಮನವರು. ಶರಣೆ ಗಂಗಮ್ಮನವರು ಪೂಜ್ಯ ಶ್ರೀ॥ ನಿ॥ ಪ್ರ॥ ಸಿದ್ಧ ಲಿಂಗಸ್ವಾಮಿಗಳವರ ಆತ್ಮೀಯ ಸೋದರಿಯವರು. ಈ ದಂಪತಿಗಳಿಗೆ ಮೊದಲ ಎರಡು ಹೆಣ್ಣುಮಕ್ಕಳಿದ್ದರೂ ವಂಶದೀಪಕನಾದ ಮಗನಿಲ್ಲವೆಂಬ ಕೊರಗು ಸಾಧ್ವಿ ಗಂಗಮ್ಮ ನನ್ನು ಸದಾ ಕಾಡುತ್ತಲೇ ಇತ್ತು. ಆದಕ್ಕಾಗಿ ಹಲವಾರು ವ್ರತನೇಮಗಳನ್ನು ಕೈಕೊಂಡರು. ಕಂಬಳೀಶನ ಮುಂದೆ ಕಣ್ಣೀರ್ಗರೆದರು. ತದೇಕನಿಷ್ಠೆಯಿಂದ ಆತನ ಪುಣ್ಯ ಸಮಾಧಿಗೆ ಅಭಿಷೇಕಗೈದರು. ತಮ್ಮ ಮನದಳಲನ್ನು ಮನಸಾರೆ ಆತನ ಮುಂದೆ ತೋಡಿಕೊಂಡರು. ಅದರ ಫಲವಾಗಿ ಶ್ರೀಕಂಬಳೀಶನ ಕೃಪೆಯೇ ಮೈವೆತ್ತು ಬಂದು ಆಕೆಯ ಗರ್ಭಾಂಬುಧಿಗೆ ಸೇರಿತೋ ಎಂಬಂತೆ ಆ ತಾಯಿ ಗರ್ಭ ಧರಿಸಿದರು. ಗರ್ಭ ಬೆಳೆಯುತ್ತಾ ಬಂದಂತೆ ಹೊಟ್ಟೆಯೊಳಗಣ ಮಗುವಿನ ಉಜ್ವಲ ಕಾಂತಿ ತಾಯಿಯ ಮುಖಮುಕುರದ ಮೂಲಕ ಬಿಂಬಿಸತೊಡಗಿತು. ತಿಂಗಳುಗಳೆದಂತೆ ಆಕೆಯ ಬಯಕೆಯ ಬಳ್ಳಿ ಬೆಳೆಯತೊಡಗಿತು. ಆದರೆ ಸಾಧಾರಣ ಹೆಂಗಳೆಯರಂತೆ ಕೆರೆಮಣ್ಣು, ವಿಭೂತಿ, ಅತಿಯಾದ ಹುಳಿ ತಿನ್ನಬೇಕೆಂಬ ಕ್ಷುಲ್ಲಕ ಬಯಕೆಗಳಿಲ್ಲದೆ ಸದಾ ಶಿವಶರಣರನ್ನು ಆರಾಧಿಸುವ, ಅವರ ಮಂಗಳಕಥೆಯನ್ನು ಕೇಳುವ ಹಾಗೂ ಇಷ್ಟಲಿಂಗಾರ್ಚನೆಯಲ್ಲಿಯೆ

ಕಾಲ ಕಳೆಯುವ ನಲ್ಬಯಕೆಯುಳ್ಳವರಾಗಿದ್ದರು. ನವಮಾಸ ತುಂಬಿ ಶ್ರೀಮತಿ ಗಂಗಮ್ಮನವರು 2. 5. 1943ರ ಶುಭದಿನದಂದು ಶುಭಮುಹೂರ್ತದಲ್ಲಿ ದಿವ್ಯ ಮೂರ್ತಿಯೊಬ್ಬನಿಗೆ ಜನ್ಮವಿತ್ತು ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡರು.

ಅಂದು ಶ್ರೀಮಠದ ಪರಿಸರದಲ್ಲಿ ಸಂಭ್ರಮದ ಸಡಗರ. ಎತ್ತ ನೋಡಿದಡತ್ತ ಸಂತಸದ ಹೊನಲು ಹರಿಯುತ್ತಿತ್ತು. ವಂಶದ ಕುಡಿಯನ್ನು ಕರುಣಿಸಿದ ಸದ್ಗುರುವನ್ನು ಮರೆಯದೆ ಆತನ ಚಿದ್ಘನಸಮಾಧಿಗೆ ಕೃತಜ್ಞತಾಪೂರ್ವಕವಾಗಿ ಸಕಲ ವೈಭವದಿಂದ ಪೂಜೆ ಪುರಸ್ಕಾರಾದಿಗಳು ನೆರವೇರಿಸಲ್ಪಟ್ಟವು. ಶರಣ ತಿಂಥಿಣಿಗೆ ಭೂರಿಭೋಜನ ನಡೆಯಿತು. ಮೈಸೂರಿನಲ್ಲಿ ಸಮಾಧಿಸ್ಥರಾಗಿರುವ ಶ್ರೀ ಮಡಿವಾಳ ಸ್ವಾಮಿಗಳವರ ಕರ ಕಮಲ ಸಂಜಾತರಾದ ಶ್ರೀ ಅಡವಿಸ್ವಾಮಿಗಳವರು ಮಗುವಿನ ಜಾಜ್ವಲ್ಯಮಯವಾದ ವರ್ಚಸ್ಸನ್ನು ಕಂಡು ಮಂತ್ರಮುಗ್ಧರಾಗಿ ಮಗುವನ್ನು ನಾನಾ ರೀತಿಯಲ್ಲಿ ಪರೀಕ್ಷಿಸಿ ಈತ ಭಕ್ತೋದ್ಧಾರಕ್ಕಾಗಿ ಬಂದಿರುವ ಕಾರಣಿಕಪುರುಷನೆಂದು ಪರಿಗಣಿಸಿ ತಾವೇ ಹನ್ನೆರಡನೆಯ ಶುಭದಿನದಂದು ಷಟ್ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನಂತೆ ಸುಜ್ಞಾನಿಯಾಗಿ ಸಮಾಜದ ಕಣ್ಣಾಗಿ, ಷಟ್ಸ್ಥಲಮಾರ್ಗದ ಜ್ಞಾನಬೋಧಕನಾಗಿ ಕೀರ್ತಿವೆತ್ತಿ ಬಾಳೆಂದು ವಿಶೇಷವಾಗಿ ಆಶೀರ್ವದಿಸಿ ಚೆನ್ನಬಸವಸ್ವಾಮಿಯೆಂದು ನಾಮಕರಣಗೈದರು. ಸುಮಂಗಲೆಯರು ಆರತಿ ಬೆಳಗಿ, ಹಾಡಿ ಮಂಗಳದ್ರವ್ಯದೊಡನೆ ಫಲತಾಂಬೂಲ ಸ್ವೀಕರಿಸಿ ತೆರಳಿದರು.

ಇತ್ತ ದಿನಗಳೆದಂತೆಲ್ಲಾ ಶರತ್ಕಾಲದ ಚಂದ್ರನಂತೆ ಬೆಳೆಯುತ್ತಾ ಬಂದ ಆ ಕಾರಣಿಕ ಶಿಶು ತಂದೆ ತಾಯಿಯ ಪ್ರೇಮಪುತ್ಥಳಿಯಾಗಿ ನೆರೆಹೊರೆಯವರ ಕಣ್ಮಣಿಯಾಗಿ ಮೆರೆದು ಪ್ರವರ್ಧಮಾನಕ್ಕೆ ಬರತೊಡಗಿತು. ಅದರ ಆಟವೇ ಆಟ, ಲೀಲೆಯೇ ಲೀಲೆ. ತಂದೆ ತಾಯಿಗಳಿಗೆ ಎಷ್ಟು ನೋಡಿದರೂ ತೃಪ್ತಿಯಿಲ್ಲ. ಅದರಲ್ಲೂ ಕಂಬಳೇಶ್ವರ ಮಠದ ಅಭ್ಯುದಯಕ್ಕೆ ಆಹರ್ನಿಶಿ ದುಡಿಯುತ್ತಿದ್ದು ಅದರ ಆಧಾರಸ್ತಂಭದಂತಿದ್ದ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳವರಿಗಂತೂ ತಮ್ಮ ಪೂರ್ವಾಶ್ರಮದ ಸೋದರಳಿಯನ ಬಾಲಲೀಲೆಯನ್ನು ಕಂಡರೆ ಎಲ್ಲಿಲ್ಲದ ಹಿಗ್ಗು. ವಚನಗಳನ್ನು ತಾದಾತ್ಮ್ಯಯಿಂದ ಹಾಡುವುದರಲ್ಲಿಯೇ ಆನಂದಗಾಣುತ್ತಿದ್ದ ಆ ಪೂಜ್ಯರು ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡೇ ವಚನಗಳನ್ನು ಹಾಡುತ್ತಿದ್ದರು. ಮೊದಲೇ ಕಂಬಳೇಶನ ಅನುಗ್ರಹದಿಂದ ಜನಿಸಿದ ಆ ಮಗುವಿಗೆ ಈ ಸಂಸ್ಕಾರವೂ ಸೇರಿ ಭಕ್ತಿ, ಪೂಜೆಯ ಕಡೆಯೇ ಮನೋಧರ್ಮ ಬೆಳೆಯಿತು. ಒಂದು ದಿನ ಮಗುವು ತುಂಬಾ ಚಂಡಿ ಹಿಡಿಯಿತಂತೆ. ತಾಯಿಯು ಎಷ್ಟೇ ಸಂತೈಸಿದರೂ ಅಳು ನಿಲ್ಲಿಸಲಿಲ್ಲ. ಏನೇ ಕೊಟ್ಟರೂ ಸಾಂತ್ವನಗೊಳ್ಳಲಿಲ್ಲ. ಅನಂತರ ಸಮಾಧಾನವಾಗಲೆಂದು "ನೋಡು ನೀನು ಅಳು ನಿಲ್ಲಿಸಿ ಮಲಗಿದರೆ, ಎದ್ದೊಡನೆ ಕಂಬಳೇಶನ ಗದ್ದುಗೆಗೆ ಪೂಜೆಗೆ ಕರೆದೊಯ್ಯುತ್ತೇನೆ" ಎಂದೊಡನೆ ಮಲಗಿತಂತೆ. ಈ ರೀತಿ ಮಗುವು ತುಂಬಾ ಸಣ್ಣವಯಸ್ಸಿನಲ್ಲಿಯೇ ಗದ್ದುಗೆಯ ಕಡೆ ಅಪಾರ ಒಲವನ್ನು ಬೆಳೆಸಿಕೊಂಡಿತೆಂಬುದು ಆಶ್ಚರ್ಯದ ಸಂಗತಿ.

ಮಗುವು ಶೈಶವಾವಸ್ಥೆಯನ್ನು ಮೀರಿ ಬಾಲ್ಯಾವಸ್ಥೆಗೆ ಕಾಲಿಡತೊಡಗಿತು. ಶ್ರೀ ಸಿದ್ಧಲಿಂಗಸ್ವಾಮಿಗಳವರು ಹೇಳಿದ್ದನ್ನು ಚಾಚೂತಪ್ಪದೆ ನಡೆಯತೊಡಗಿತು. ಬಹಳ ಜಾಣ್ಮೆಯಿದ್ದರೂ ಸಹ ಏಕೋ ಏನೋ ಲೌಕಿಕ ವಿದ್ಯೆಯ ಕಡೆಗೆ ಅಷ್ಟೊಂದು ಮನ ಕೊಡುತ್ತಿರಲಿಲ್ಲ. ಸದಾ ಪೂಜೆ, ಧ್ಯಾನಾದಿಗಳತ್ತಲೇ ಮನ. ಹೆಚ್ಚಿನ ವೇಳೆಯನ್ನು ಬಾಲಕ ಗದ್ದುಗೆಯಲ್ಲಿ ಕಳೆಯತೊಡಗಿದ. ಆಡಬೇಕೆಂದರೂ ಸಹ ಗದ್ದುಗೆಯ ಆವರಣ ದಲ್ಲಿಯೇ ದೇವರನಾಮ ಹಾಡುತ್ತಲೇ ಆಡುವುದು. ಇದೆಲ್ಲವನ್ನು ನೋಡಿ ಶ್ರೀ ಸಿದ್ಧ ಲಿಂಗಸ್ವಾಮಿಗಳವರು ಈ ಬಾಲಕನನ್ನೇ ತಮ್ಮ ಕರಕಮಲಸಂಜಾತನನ್ನಾಗಿ ಮಾಡಿ ಕೊಳ್ಳುವ ಹಂಬಲ ಬೆಳೆಸಿಕೊಂಡರು. ಆ ವರೆವಿಗೆ ಈ ಬಾಲಕನ ಹಿಂದೆ ಮೂರು ಹೆಣ್ಣುಮಕ್ಕಳಾಗಿದ್ದರೇ ಹೊರತು ಮತ್ತೊಂದು ಗಂಡಾಗಿರಲಿಲ್ಲ. ಅಂತಾಗಿ ಶ್ರೀಮತಿ ಗಂಗಮ್ಮನವರಿಗೆ ಈತನೋರ್ವನೇ ಪುತ್ರ. ಆದುದರಿಂದ ಬಹಳ ಕಾಡಿ ಬೇಡಿ ಪಡೆದಿರುವ ವಂಶದೀಪಕನಾದ ತನ್ನ ಪ್ರೇಮಪುತ್ಥಳಿಯನ್ನು ತಂಗಿ ಮಠಕ್ಕೆ ಪೂರ್ಣಮನಸ್ಸಿನಿಂದ ಅರ್ಪಿಸುವಳೇ ಎಂಬ ಶಂಕೆ ಪೂಜ್ಯ ಶ್ರೀಗಳನ್ನು ಕಾಡತೊಡಗಿತು. ಇರಲಿ, ವಿಧಿನಿಯಮ ಹೇಗಿದೆಯೋ ಕಾದುನೋಡೋಣ; ಕಾಲವೆಲ್ಲಕ್ಕೂ ಮದ್ದು. ಸಮಯ ಬಂದಾಗ ಸೂಚಿಸೋಣವೆಂದು ತಮ್ಮ ಬಯಕೆಗುದುರೆಗೆ ಕಡಿವಾಣ ಹಾಕಿ ದರು.

ಬಾಲಕನ ಪೂಜಾಸಕ್ತಿ ದಿನೇ ದಿನೇ ಹೆಚ್ಚಾಗಿ ಬೆಳೆಯತೊಡಗಿತು. ಲೌಕಿಕ ವಿದ್ಯೆಯ ಕಡೆ ತಾತ್ಸಾರವೇ ಮೂಡಿತು. ಸ್ವಾಮಿಯಾಗುವ ಮನೋಧರ್ಮ ಚೆನ್ನಾಗಿ ಬೆಳೆಯಿತು. ಮಠಕ್ಕೆ ಮರಿಯನ್ನು ಮಾಡಬಾರದು. ನಾವಾಗಿ ಬಲವಂತಕ್ಕೆ ಮಾಡಿ ದರೆ ಕೆಡುತ್ತಾರೆ. ಆದುದರಿಂದ ಅವರಾಗಿಯೇ ಸ್ವಾಮಿಯಾಗುವವರನ್ನು ಸ್ವಾಮಿ ಮಾಡಬೇಕೆಂದು ಚಿಂತಿಸುತ್ತಿದ್ದ ಪೂಜ್ಯ ಶ್ರೀಗಳವರಿಗೆ ಬಾಲಕನ ಈ ಮನೋಧರ್ಮ ತುಂಬಾ ಹಿಡಿಸಿತು. ಈತನೇ ತಮ್ಮ ಶ್ರೀಮಠಕ್ಕೆ ಯೋಗ್ಯ ಉತ್ತರಾಧಿಕಾರಿಯೆಂದು ನಿಶ್ಚಯಿಸಿ ಸೋದರಿಯನ್ನು ಕೇಳೋಣವೆನ್ನಿಸಿತು. ಆದರೂ

ಕೂಡಿ ಸೇವಿಪರಯ್ಯ ಯೋಗಿಗಳ ಭಕ್ತಿಯಿಂ
ಪಾಡಿ ಪೂಜಿಪರವರ ಪಾದಂಗಳ
ಬಾಡುವರು ತಮ್ಮ ಮಗ ಯೋಗಿಯಾಗುವೆನೆನೆಲು
ರೂಢಿಯೊಳಗಿದು ಚೋದ್ಯ-ಬೋಳುಬಸವ.

ಅಂದರೆ ಜಗತ್ತಿನಲ್ಲಿ ಸಾಧಾರಣವಾಗಿ ಸಂಸಾರಿಗಳು ಯೋಗಿಗಳನ್ನು ಆದರದಿಂದ ತಮ್ಮ ಮನೆಗೆ ಕರೆತಂದು, ಆದರಿಸಿ, ಸತ್ಕರಿಸಿ, ಅವರ ಪಾದಪೂಜೆ ಮಾಡಿ, ಪಾಡಿ, ಪ್ರಸಾದನೀಡಿ, ಕಾಣಿಕೆಯನಿತ್ತು ಗೌರವಿಸಿ ಕಳುಹಿಸುತ್ತಾರೆ. ಆದರೆ ಅವರಿಗೆ ನಾಲ್ಕಾರು ಮಕ್ಕಳುಗಳಿದ್ದರೂ ಅವರಲ್ಲಿ ಯಾವನಾದರೊಬ್ಬ ಸಂಸಾರಿಯಾಗಿ ಬಾಳುವುದನ್ನು ಧಿಕ್ಕರಿಸಿ ಯೋಗಿಯೊಗುತ್ತೇನೆಂದು ಬಯಸಿದರೆ ಬಾಡಿ ಬತ್ತುತ್ತಾರೆ, ಕೊರಗಿ ಕಂಗೆಡು

ತ್ತಾರೆಂಬುದು ಚೋದ್ಯವೇ ಸರಿ. ಹೀಗಿರುವಾಗ ಕುಲದ ಕುಡಿಯಾದ ಓರ್ವನೇ ಮಗನನ್ನು ಕೇಳುವುದು ಹೇಗೆ ಎಂದು ಚಡಪಡಿಸಿದರು. ಆದರೂ ಮನದಾಸೆ ಹಿಂಗ ಲಿಲ್ಲ. ಕಂಬಳೀಶನ ಕೃಪೆಯಿದ್ದರೆ ಆಗಲಿ, ಇಲ್ಲದಿದ್ದರೆ ಹೋಗಲಿ ಎಂದು ನಿರ್ಧಾರಕ್ಕೆ ಬಂದು ಕೇಳಿಯೇ ನೋಡೋಣವೆಂದು ಸೋದರಿಯನ್ನು ಕರೆಸಿ, ಅಕ್ಕರೆಯಿಂದ ತಮ್ಮ ಮನದಾಳದ ಇಂಗಿತವನ್ನು ಹೊರಗೆಡಹಿದರು. ಹಲವಾರು ಜನ್ಮದ ಸಂಸ್ಕಾರದಿಂ ದಲೋ ಏನೋ ಆ ಸತಿ ಸಾಧ್ವಿ ಗಂಗಮ್ಮನವರು ತಮ್ಮ ಪ್ರೇಮಪುತ್ಥಳಿಯಾದ ಏಕೈಕ ಪುತ್ರನನ್ನು ಶ್ರೀಗುರುವಿನ ಚರಣಾರವಿಂದಕ್ಕರ್ಪಿಸಲು ಹಿಂದು ಮುಂದು ನೋಡಲಿಲ್ಲ, ಬಾಡಿ ಬತ್ತಲಿಲ್ಲ, ಕೊರಗಿ ಕಂಪಲಿಲ್ಲ. ಕುಲದ ಕುಡಿ ಕಡಿದುಹೋಗುತ್ತದೆಂದು ಕಂಗೆಡ ಲಿಲ್ಲ. "ತಮ್ಮಿಷ್ಟದಂತೆ ಮಾಡಿಕೊಳ್ಳಿ, ಇನ್ನುಮುಂದೆ ಇವನು ನನ್ನ ಮಗನಲ್ಲ, ನಿಮ್ಮ ಮಗ ; ಹಾಲಲ್ಲಾದರೂ ಅದ್ದಿ, ನೀರಲ್ಲಾದರೂ ಅದ್ದಿ" ಎಂದು ಸಾಷ್ಟಾಂಗ ಪ್ರಣಾಮ ಮಾಡಿ ಶ್ರೀ ಗುರುಪಾದಕ್ಕರ್ಪಿಸಿದರು. ಸೋದರಿಯು ಇಷ್ಟು ಸುಲಭವಾಗಿ ಒಪ್ಪುತ್ತಾಳೆಂದು ಕನಸಿನಲ್ಲೂ ಭಾವಿಸಿರದ ಪೂಜ್ಯ ಶ್ರೀಗಳ ಸಂತೋಷಕ್ಕೆ ಪಾರವೇ ಇಲ್ಲ. ತಮ್ಮ ಮನದ ಬಯಕೆ ಈಡೇರಿತೆಂದು ಮನಸಾರೆ ಹಿಗ್ಗಿದರು. ಕಂಬಳೀಶನಿಗೆ ಕೃತ ಜ್ಞತೆಯನ್ನರ್ಪಿಸಿದರು.

ಲೌಕಿಕ ವಿದ್ಯೆಯ ಕಡೆ ಮನಗೊಡದೆ ಇದ್ದ ವಟುವಿಗೆ ಪಾರಮಾರ್ಥವಿದ್ಯೆಯಾ ದರೂ ಸಾಕಷ್ಟು ಲಭಿಸಲೆಂದು ಪೂಜ್ಯ ಸುತ್ತೂರು ಜಗದ್ಗುರುಗಳವರಾದ ರಾಜಗುರು ತಿಲಕ ಶ್ರೀಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶ್ರಯದಲ್ಲಿ ಮೈಸೂ ರಿನ ಕ್ಯಾತನಹಳ್ಳಿ ಪಾಠಶಾಲೆಯಲ್ಲಿ ನಡೆಯುತ್ತಿದ್ದ ಗುರುಕುಲಕ್ಕೆ ಸೇರಿಸಿದರು. ಅವರು ಮೈಸೂರಿನಲ್ಲಿ ಪಾಠ ಪ್ರವಚನಗಳತ್ತ ನಿಗವಿಟ್ಟು ಅಭ್ಯಾಸಮಾಡಿದರು. ಅರವತ್ತೈದು ವಸಂತಗಳನ್ನು ಅನುಭವಿಸಿದ ಶ್ರೀಗಳವರು ತಮ್ಮ ಶಾರೀರಕಧರ್ಮ ಸರಿಯಾಗಿರುವಾಗಲೇ ಸೂಕ್ತರೀತಿಯಲ್ಲಿ ಅಧಿಕಾರವಹಿಸಿಕೊಡುವುದು ಸರಿಯೆಂದು ತೀರ್ಮಾನಿಸಿ ಮೈಸೂರಿನಿಂದ ವಟುವನ್ನು ಹಿಂದಕ್ಕೆ ಕರೆಸಿಕೊಂಡು ಶ್ರೀಮಠದ ಎಲ್ಲಾ ಭಕ್ತಕೋಟಿಯ ಅಭಿಪ್ರಾಯದ ಮೇರೆಗೆ ಬಹಳ ವಿಜೃಂಭಣೆಯಿಂದ 1958ನೆಯ ವರುಷದ ಕಾರ್ತಿಕಮಾಸದ 3ನೆಯ ಸೋಮವಾರದಂದು ಪಟ್ಟಾಧಿಕಾರವನ್ನು ವಿಧ್ಯುಕ್ತವಾಗಿ ನೆರವೇರಿಸಿದರು.

ಪಟ್ಟಾಧಿಕಾರವನ್ನು ಕೊಟ್ಟಮೇಲೆ ಕರ್ತವ್ಯಮುಕ್ತರಾದ ಪೂಜ್ಯ ಶ್ರೀಗಳು ಮತ್ತೆ ತಮ್ಮ ಉತ್ತರಾಧಿಕಾರಿಗಳನ್ನು ಸಂಸ್ಕೃತಾಭ್ಯಾಸ ಮಾಡಲು ಅನುವಾಗಲೆಂದು ಪಡುಗೂರು ಶ್ರೀಮಠಕ್ಕೆ ಕಳುಹಿಸಿದರು. ಮಳವಳ್ಳಿ ತಾಲ್ಲೂಕಿನ ಹಲಗೂರು ಬೃಹ ನ್ಮಠಕ್ಕೆ ಶ್ರೀಶ್ರೀ ವೀರಭದ್ರ ಶಿವಾಚಾರ್ಯರೆಂಬ ಅಭಿಧಾನದಿಂದ ಪಟ್ಟಾಧಿಕಾರಿಗಳಾಗಿ ಹಲವಾರು ಬೃಹದ್ಗ್ರಂಥಗಳನ್ನು ರಚಿಸಿ ವಿಖ್ಯಾತರಾದ ಪರಮಾಪುರದ ಶ್ರೀ ಶಿವಲಿಂಗ ಶಾಸ್ತ್ರಿಗಳವರ ಹತ್ತಿರ ಪಾಠ ಕಲಿತರು. ಅವರ ಪ್ರಕಾಂಡಪಾಂಡಿತ್ಯದ ಸವಿನೋಡಿ ದರು. ಸ್ವಲ್ಪ ಕಾಲದ ನಂತರ ಏಕೋ ಏನೋ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳವ ರಿಗೆ ಪುಸ್ತಕದ ಓದಿಗಿಂತಲೂ ಅನುಭಾವಿಕ ಸಂಪತ್ತು ಶ್ರೇಷ್ಠವೆಂಬ ಭಾವನೆ ಮೂಡಿತು.

ಆದರಿಂದಾಗಿ ತಮ್ಮ ಪ್ರಿಯ ಶಿಷ್ಯನನ್ನು ಪಡುಗೂರಿನಿಂದ ಹಿಂದಕ್ಕೆ ಕರೆಸಿಕೊಂಡು ಮಠದ ನಿರ್ವಹಣೆಯನ್ನು ಸ್ವಲ್ಪಸ್ವಲ್ಪವಾಗಿ ಕೊಡಲಾರಂಭಿಸಿದರು. ಎಂತಹ ಗುರುತರವಾದ ಕರ್ತವ್ಯ ಹೊರಿಸಿದರೂ ಸ್ವಲ್ಪವೂ ಬೇಸರಿಸದೆ ನಗುನಗುತ ಕಾರ್ಯವೆಸಗುತ್ತಿದ್ದರು. ಮಿಗಿಲಾಗಿ

ಗುರುವೆಂದು ಹರನೆಂದು ಬೇರುಂಟೆ ಪರಿಕಿಸಲು
ಗುರುರೂಪದಿಂ ಬರ್ಪ ಹರನು ತಾನು
ಹರಪಥವನರಿಯಲ್ಕೆ ಗುರುಪಥವೆ ಮೊದಲೆನಲು
ಗುರುವರ್ಯ ಹರನಲ್ತೆ–ಬೋಳುಬಸವ

ಎನ್ನುವ ಹಾಗೆ ನಿಷೇಧ ಹಾಗೂ ಕಾಮ್ಯಗುರುವಿನಂತಲ್ಲದ ಸೂಚಕ, ವಾಚಕ, ಕಾರಕ ಗುರುಗಳನ್ನು ಸಹ ಮೀರಿನಿಂತು ವಿಹಿತಗುರುವಾಗೆಸೆಯುತ್ತಿರ್ದ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳವರನ್ನೇ ಸಾಕ್ಷಾತ್ ದೈವವೆಂದು ನಂಬಿ, ಅವರ ಆಜ್ಞೆಯನ್ನು ಶಿರಸಾವಹಿಸಿ ನಡೆಸುತ್ತಾ ಅವರಿಗೆ ಅಂಗ, ಆಪ್ತ, ಸ್ಥಾನ ಹಾಗೂ ಸದ್ಭಾವಗಳೆಂಬ ನಾಲ್ಕೂ ರೀತಿಯ ಗುರುಸೇವೆಯನ್ನು ಮಾಡಿ ಅವರ ಶ್ರೀಕರುಣೆಗೆ ಪಾತ್ರರಾದರು. ಹೀಗೆಯೇ ಕಾಲ ಉರುಳಿದಂತೆ ಪ್ರಾರಬ್ಧಕರ್ಮಕ್ಕನುಗುಣವಾಗಿ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳವರು 19. 1. 75ರಂದು ದೇಹವನ್ನು ತ್ಯಜಿಸಿದರು.

ತಮ್ಮ ಗುರುಗಳ ಪುಣ್ಯಾರಾಧನೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿ ಎಲ್ಲಾ ಭಕ್ತಸ್ತೋಮಕ್ಕೂ ಜಂಗಮ ಮೂರ್ತಿಗಳಿಗೂ ಸಂತೃಪ್ತಿ ನೀಡಿದರು. ಜಗಜ್ಯೋತಿ ಬಸವೇಶ್ವರರು.

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ
ನಿಮ್ಮಾಣೆ ! ನಿಮ್ಮ ಪುರಾತನರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲ ಸಂಗಮದೇವಾ ॥ ಎಂದು ನುಡಿದಿರುವ

ಆ ದಿವ್ಯ ಅಮೃತವಾಣಿಯನ್ನನುಸರಿಸಿ ಸಂಗ್ರಹಣೆ ಕೂಡದೆಂದು ನಿಶ್ಚಯಿಸಿ, ಮಠದಲ್ಲಿ ಶೇಖರಣೆಯಾಗಿದ್ದ ಸುಮಾರು 70 ಕೊಡೆಗಳನ್ನು ನೂರಾರು ಪಂಚೆ ಚೌಕಗಳನ್ನು 50, 60 ಶಾಲುಗಳನ್ನು ಆ ಆರಾಧನೆಯಲ್ಲಿ ಅಂದು ದಾನಮಾಡಿದರಂತೆ. ಈ ತತ್ತ್ವವನ್ನು ಅಂದಿನಿಂದ ನಿತ್ಯವೂ ಅನುಸರಿಸುತ್ತಲೇ ಬಂದಿದ್ದಾರೆ. ಸಂಗ್ರಹಣೆ ಕಳ್ಳತನವೆನ್ನುತ್ತಾರೆ.

ತಾವೇ ಪರಿಪೂರ್ಣ ಅಧಿಕಾರ ವಹಿಸಿಕೊಂಡ ಮೇಲೆ ಧರ್ಮಾಧಿಕಾರಿಯಾಗಿ ತಮ್ಮ ಪಾಲಿನ ಕರ್ತವ್ಯದ ಬಗ್ಗೆ ಆಳವಾಗಿ ಯೋಚಿಸ ತೊಡಗಿದರು. ಅದರಲ್ಲೂ ವೈಜ್ಞಾನಿಕಯುಗದಲ್ಲಿ ಬರಿಯ ಭೌತಿಕ ಸಂಪತ್ತಿಗೇ ಮಾರುಹೋಗಿ ಆಧ್ಯಾತ್ಮದ ಕಡೆಗೆ ವಿಮುಖರಾಗಿರುವ ಜನರನ್ನು ಎಚ್ಚರಗೊಳಿಸಲು ನಿರ್ಧರಿಸಿದರು.

ಪರಮಾಣು ಬಾಂಬುಗಳ ಸೃಜಿಸಿಟ್ಟು ಬಹುವಾಗಿ
ನರನಿಂದು ನಿಂತಿಹನು ಮರಣ ದಡದಿ
ಶರಣಾಗದಿರಲವನು ಧರ್ಮದೈವಕೆ ಮಣಿದು
ಧರೆಗಿಲ್ಲ ಉಳಿಗಾಲ—ಬೋಳುಬಸವ

ಎನ್ನುವಂತೆ ಇಡೀ ಮಾನವಕೋಟಿ ಮರಣವಡದಲ್ಲಿ ನಿಂತಿರುವುದನ್ನು ಕಂಡು ಚಡಪಡಿಸಿದರು. ಇದರಿಂದ ಈ ಜನತೆಯನ್ನು ಉಳಿಸಬೇಕಾದರೆ ಅವರನ್ನು ಧರ್ಮ ಹಾಗೂ ದೈವದತ್ತ ತಿರುಗಿಸಿ ಶರಣಾಗಿಸಬೇಕೆಂದು ಮನಗಂಡರು. ಅದಕ್ಕಾಗಿ ಜನರನ್ನು ಧರ್ಮದೈವದತ್ತ ಎಳೆಯಲು ಉಪಾಯವೇನೆಂದು ಆಲೋಚಿಸಿ ಶ್ರೀ ಕ್ಷೇತ್ರವನ್ನು ನವೀಕರಣಗೊಳಿಸಿ, ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು ಜನರನ್ನು ಶ್ರೀ ಮಠದತ್ತ ಆಕರ್ಷಿಸಿದರೆ ಸೂಕ್ತರೀತಿಯಲ್ಲಿ ಧರ್ಮ ಬೋಧಿಸಬಹುದೆಂದು ತಿಳಿದು ಮೊದಲನೆಯದಾಗಿ ಶ್ರೀಮಠದಿಂದ ಕಪಿಲಾ ನದಿಗೆ ಸುರಕ್ಷಿತವಾಗಿ ಭಕ್ತರು ಇಳಿಯಲು, ಮಡಿಮಾಡಿಕೊಂಡು ಸ್ನಾನ ವಗೈರೆ ತೀರಿಸಿಕೊಂಡು ಮೇಲೇರಿ ಬರಲು ಅನುಕೂಲವಾಗುವಂತೆ ಹಲವಾರು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಸುಂದರವಾದ ಸೋಪಾನ ಕಟ್ಟಿಸಿದರು. ಮತ್ತು ಭಕ್ತರ ಹೃನ್ಮಂದಿರದಲ್ಲಿ ಸದಾ ನೆಲೆಸಿದ್ದ ಶ್ರೀ ಸಿದ್ದಲಿಂಗಸ್ವಾಮಿಗಳವರು ಬಾಹ್ಯಪ್ರಪಂಚದಲ್ಲಿಯೂ ಮುಗ್ಧ ಭಕ್ತರಿಂದ ಪೂಜೆಗೊಳ್ಳಲೆಂದು ಪರಿಭಾವಿಸಿ ಅವರ ಶಿವಯೋಗಸಮಾಧಿಯ ಮೇಲೆ ಸುಂದರವಾದ ಶಿಲಾಸಮಾಧಿಯನ್ನು ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿದರು. ಅದು ಸಾಲದೆಂಬಂತೆ ಕಂಬಳೀಶ್ವರರ ಹಾಗೂ ಮರಿಕಂಬಳೇಶ್ವರರ ಗದ್ದುಗೆಗಳಿಗೆ ಭವ್ಯವಾದ ಗೋಪುರಗಳನ್ನು ಕಟ್ಟಿಸಿದರು.

ಇದೆಲ್ಲಕ್ಕೂ ಮಿಗಿಲಾಗಿ ಮಠವೆಂದರೆ ಅನ್ನದಾಸೋಹ ನಿರಂತರವಾಗಿ ನಡೆಯಲೇ ಬೇಕೆಂಬ ಮನೋಧರ್ಮವುಳ್ಳವರು. ಎಷ್ಟೇ ಜನರು ಯಾವ ಹೊತ್ತಿನಲ್ಲೇ ಬರಲಿ ಪ್ರಸಾದವಿಲ್ಲವೆನ್ನಕೂಡದೆಂದು ಕಟ್ಟಪ್ಪಣೆ ಮಾಡಿದ್ದಾರೆ. ತಾವೇ ಬಂದು ವಿಚಾರಿಸಿ ದಾಸೋಹ ನಡೆಸಿ ಸಂತೋಷಪಡುತ್ತಾರೆ. ''ಕೆಡುವ ಶರೀರದ ಸಫಲವಾವುದು ? ಪರಹಿತ'' ಎಂಬ ನಿಜಗುಣರ ಅಮೃತವಾಣಿಯಲ್ಲಿ ಅಗಾಧವಾದ ನಂಬಿಕೆ ಇಟ್ಟವರು. ಎಂದಾದರೊಂದು ದಿನ ಅಳಿದುಹೋಗುವ ಈ ಒಡಲಿಗೆ ಸಾರ್ಥಕತೆ ಯಾವಾಗ ಎಂದರೆ ಇನ್ನೊಬ್ಬರ ಹಿತ ಬಯಸಿದಾಗ, ಅದರಲ್ಲೂ ತನ್ನವರ ಹಿತವಲ್ಲ. ಅನ್ಯರ ಹಿತ. ಭಕ್ತರು ಅವರೆದುರು ಸ್ವಲ್ಪವೂ ನೋಯಬಾರದು. ಒಡನೆಯೇ ಅವರ ಕುಂದು ಕೊರತೆಗಳನ್ನು ಕೇಳಿ, ಸೂಕ್ತ ಪರಿಹಾರ ನೀಡಲು ಸಾಧ್ಯವಾದರೆ ನೀಡಿ ಸಂತೈಸಿ ಕಳುಹಿಸುತ್ತಾರೆ. ಒಂದು ವೇಳೆ ಪರಿಹರಿಸಲು ಸಾಧ್ಯವಿಲ್ಲವಾದರೆ

ಬಾಳೆಲ್ಲ ಬೇವಲ್ಲ ಬರಿಬೆಲ್ಲವೂ ಅಲ್ಲ
ಮೇಳವಿಸಿ ಕೂಡಿಹವು ಇವುಗಳೆರಡು

ಗೋಳಾಡದಿರಂ ಬರಿದೆ ಬಹಂಕಷ್ಟ ಬಂತೆಂದು
ತಾಳು ಸುಖ ಬರುವನಕ-ಬೋಳಬಸವ

ಎನ್ನುವ ಹಾಗೆ ಜೀವನವೇ ದ್ವಂದ್ವಮಯ. ಸುಖದುಃಖಗಳು ಚಕ್ರದ ಆರೆ ಕಾಲುಗಳಂತೆ ಒಂದಾದ ಮೇಲೆ ಒಂದು ಬರುತ್ತಿರುತ್ತವೆ. ದುಃಖಕ್ಕೆ ಅಂಜಬಾರದು, ಅಳುಕಬಾರದು ; ಅನುಭವಿಸುವ ಧೈರ್ಯ ತಾಳಬೇಕು ಎಂದು ಸಾಂತ್ವನ ಹೇಳಿ ಸಮಾಧಾನಗೊಳಿಸುತ್ತಾರೆ. ದುಃಖದಂತೆ ಸುಖವೂ ಕೂಡ ತಾನೇ ಬರುತ್ತದೆ. ಬರುವ ತನಕ ಮಾತ್ರ ತಾಳಬೇಕೆನ್ನುತ್ತಾರೆ.

ಜನಮೆಚ್ಚಿ ನಡೆಕೊಂಡರೇನುಂಟು ಲೋಕದಿ
ಮನವೆಂಚ್ಚಿ ನಡೆಕೊಂಬುವುದೆ ಚೆಂದವು
....
ಮನದೊಳು ಶಿವ ತಾನೆ ಮನೆಮಾಡಿಕೊಂಡಿಹ
ಮನಮೆಚ್ಚಿ ನಡೆದರೆ ಶಿವಮೆಚ್ಚುವ"

ಎಂಬ ಸರ್ಪಭೂಷಣ ಶಿವಯೋಗಿಗಳ ದಿವ್ಯವಾಣಿ ಅವರಿಗೆ ಪರಮಮಂತ್ರ. ಜನರ ಮೆಚ್ಚಿಕೆಗಾಗಿ ಅವರು ಎಂದೂ ಹಾತೊರೆಯಲಿಲ್ಲ. ತಮ್ಮ ಮನ ಮೆಚ್ಚುವಂತೆ ಮಾತ್ರ ಕಾರ್ಯ ನಿರ್ವಹಣ ಮಾಡುವವರು. ಯಾರು ಏನೇ ಅಂದರೂ ಆ ಕಡೆ ಗಮನಕೊಡುವವರಲ್ಲ. ಯಾರು ಮೆಚ್ಚಿ ಏನು ಮಾಡಬೇಕಾಗಿದೆ ?, ಶಿವ ಮೆಚ್ಚಿದರೆ ಸರಿ ಎಂದು ತಮಗೆ ಸರಿಯೆಂದು ತೋರಿದ್ದನ್ನು ಯಾರು ಏನೆಂದರೂ ಬಿಟ್ಟವರಲ್ಲ. ಇದಕ್ಕೂ ಮಿಗಿಲಾಗಿ ತಮ್ಮ ಭಕ್ತರಲ್ಲಿ ಇವನು ಬಡವ, ಇವನು ಬಲ್ಲಿದ, ಇವನು ಪಂಡಿತ, ಇವನು ಪಾಮರ, ಇವನು ಕೊಡುಗೈ ದಾನಿ, ಇವನು ಕಡುಲೋಭಿ ಎಂಬ ಯಾವುದೇ ವಿಧವಾದ ಭೇದಭಾವನೆ ಬಗೆದವರಲ್ಲ. 10 ಪೈಸೆ ಕೊಟ್ಟವನೂ ಒಂದೇ, 10 ಸಾವಿರ ಕೊಟ್ಟವನೂ ಒಂದೇ ಎಂಬ ಮನೋಭಾವನೆಯಿಂದ ಸಮತಾ ದೃಷ್ಟಿಯಿಂದ ಕಾಣುವ ನಿಷ್ಪಕ್ಷಪಾತಮೂರ್ತಿ ಅವರು. ಈ ದೊಡ್ಡತನ ಅವರ ವ್ಯಕ್ತಿತ್ವಕ್ಕೆ ತುಂಬಾ ಮೆರಗು ಕೊಟ್ಟು ಭಕ್ತರ ಹೃದಯಮಧ್ಯದಲ್ಲಿ ರಾರಾಜಿಸಲು ಅವಕಾಶ ನೀಡಿದೆ. ಎಂತಹ ಬಡವ ಬಿನ್ನಹ ಒಪ್ಪಿಸಿದರೂ ಬರಲು ಸಾಧ್ಯವಿಲ್ಲವೆನ್ನದೆ ಅವರು ಎಷ್ಟೇ ಕನಿಷ್ಠವಾದ ಕಾಣಿಕೆಯಿತ್ತರೂ ಬೇಸರಿಸದೆ, ಅವರಿಗೆ ಆಶೀರ್ವದಿಸಿ, ಶುಭ ಕೋರಿ ಆಗಮಿಸುವ ಭವ್ಯವ್ಯಕ್ತಿತ್ವ ಸ್ವಾಮಿಯವರದು.

'ನುಡಿಯೊಂದು ಮೈಲುದ್ದ ನಡೆ ಮಾತ್ರ ಚೋಟುದ್ದ' ವಾದರೆ ಏನು ಚೆಂದ ? ಎಂದು ಭಾವಿಸಿ ನುಡಿದಂತೆ ನಡೆಯುಳ್ಳವರು. ಅಡಿಗಡಿಗೂ ನಡೆನುಡಿಯ ಅಂತರವನ್ನು ನಿವಾರಿಸೆಂದು ಕಂಬಳೀಶನಲ್ಲಿ ಅನನ್ಯ ಭಕ್ತಿಯಿಂದ ಬೇಡುವರು. ಅಣ್ಣ ಬಸವಣ್ಣನಂತೆ ನಡೆಯಲ್ಲಿ ನುಡಿಯ ಪೂರೈಸುವ ದಿಟ್ಟನಿಲುವುಳ್ಳವರು ಪೂಜ್ಯ ಶ್ರೀಗಳವರು. ಭಕ್ತರ ಸುಖವೇ ತಮ್ಮ ಸುಖವೆಂದು ಬಗೆದು ಅವರ ದೈನಂದಿನ ಆಗುಹೋಗು

ಗಳಲ್ಲಿ ಪಾಲ್ಗೊಳ್ಳುವರು. ಭಕ್ತಕೋಟಿ ಕಷ್ಟ ಕೋಟಲೆಗಳಿಂದ ನರಳುತ್ತಿದ್ದರೆ ಗುರುವಾದವನು ಉಲ್ಲಾಸದಿಂದ ಹೇಗಿರಲು ಸಾಧ್ಯವೆಂದು ಭಾವಿಸಿ ಸದಾ ಅವರನ್ನು ಸಂತೈಸಿ ಸಾಂತ್ವನಗೊಳಿಸಿ ಅವರ ಭಕ್ತಿಕೈಂಕರ್ಯವನ್ನು ಸೂರೆಗೊಂಡ ಮಹಾನುಭಾವರು. ಬಹುಶಃ ಭಕ್ತರನ್ನು ಈ ರೀತಿಯಲ್ಲಿ ಗೆದ್ದವರು ಬಹಳ ಅಪರೂಪವೆಂದೇ ಹೇಳಬೇಕು. ಅದರಲ್ಲೂ ಈ ವೈಜ್ಞಾನಿಕ ಬುದ್ಧಿಜೀವಿಗಳ ಮಧ್ಯದಲ್ಲಿ, ಗುರುವೆಂದರೆ ಮೂರುಮೊಳ ಹೌಹಾರುವ ಜಗತ್ತಿನಲ್ಲಿ ಭಕ್ತರ ಹೃನ್ಮಂದಿರದಲ್ಲಿ ವಾಸಿಸುವುದು ಮರಳಿನಲ್ಲಿ ಎಣ್ಣೆ ತೆಗೆವಷ್ಟೇ ಪವಾಡದ ಕೆಲಸ. ಆದರೂ ಶ್ರೀಗಳು ತಮ್ಮ ಅಪಾರವಾದ ವಾತ್ಸಲ್ಯದಿಂದ ಮೈಸೂರು ಜಿಲ್ಲೆಯ ನಂಜನಗೂಡು, ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ, ಟಿ. ನರಸೀಪುರ ಹಾಗೂ ಕೊಳ್ಳೇಗಾಲ ತಾಲ್ಲೂಕುಗಳ ವೀರಶೈವರ ಆರಾಧ್ಯ ಮೂರ್ತಿಯಾಗಿ ಕಂಗೊಳಿಸುತ್ತಿದ್ದಾರೆ. ವೀರಶೈವೇತರರೂ ಸಹ ಅಷ್ಟೇ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇವರು ಇಡೀ ಮಾನವರ ಕಲ್ಯಾಣದತ್ತ ಗಮನಕೊಡುವವರೇ ಹೊರತು ಕುಲಜಾತಿಗಳ ಭೇದವೆಣಿಸಿ ವಿಂಗಡಿಸಿದವರಲ್ಲ.

ಗಂಧರ್ವ ಕೆಸರೇನಂ ಬಳಿದಿರಲು ಕನ್ನಡಿಯು
ಮುಂಬಿರ್ಪ ರೂಪವನು ಬಿಂಬಿಸುವುದೆ
ನಿಂದೆಯೇನ್ ಸ್ತುತಿಯೇನು ವಿಕೃತಿಗೊಂಡರೆ ಮನವು
ಹೊಂದಲಾಗದು ಮುಕುತಿ—ಬೋಳುಬಸವ

ಎನ್ನುವ ಹಾಗೆ ನಿಂದೆ. ಸ್ತುತಿ, ಲಾಭ–ನಷ್ಟ, ಸುಖ–ದುಃಖ, ನೋವು-ನಲಿವು ಈ ದ್ವಂದ್ವಗಳನ್ನು ಮೀರಿನಿಂತ ಸ್ಥಿತಪ್ರಜ್ಞರು. ಯಾರು ಏನೇ ನಿಂದೆಗೈದರೂ ಬಾಡಿದವರಲ್ಲ. ಎಷ್ಟೇ ಹೊಗಳಿದರೂ ಅದಕ್ಕೆ ಸೊಪ್ಪು ಹಾಕಿದವರಲ್ಲ. ಇವರ ಕಾಲದಲ್ಲಿ ಶ್ರೀ ಮಠವು ಬಹಳವಾಗಿ ಅಭ್ಯುದಯವಾಗುತ್ತಿರುವುದನ್ನು ಕಂಡು ಮತ್ಸರದಿಂದ ಟೀಕಿಸುವ ಕೆಲವರನ್ನು ಕಂಡು ಕಿಂಚಿತ್ತೂ ಬೇಸರಿಸಲಿಲ್ಲ. ಮಿಗಿಲಾಗಿ ಅಂತಹವರನ್ನೂ ಮತ್ತಷ್ಟು ಪೂಜ್ಯತೆಯಿಂದಲೇ ಕಾಣತೊಡಗಿದಾಗ ಅಂತಹ ದುಷ್ಪ್ರವೃತ್ತಿಯುಳ್ಳವರೂ ಸಹ ತಮ್ಮ ದುರ್ವತನೆಗೆ ಪಶ್ಚಾತ್ತಾಪ ಪಟ್ಟು ತಮ್ಮಲ್ಲಿಗೆ ಹಾರ್ದಿಕವಾಗಿ ಬರುವಂತೆ ಮಾಡಿದ ಪವಾಡ ಪುರುಷರು ಶ್ರೀಗಳವರು. ಈಚೀಚೆಗಂತೂ ವೀರಶೈವ ಸಮಾಜದಲ್ಲಿ ಗುರು-ವಿರಕ್ತರ ಸಮಸ್ಯೆ ಬಹಳ ಜಟಿಲವಾಗಿ ಇಡೀ ಸಮಾಜವನ್ನೇ ನೊಣೆದು ನುಂಗುವಂತೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಅಂತಿದ್ದರೂ ಸಹ ಪೂಜ್ಯ ಶ್ರೀಗಳವರು ಗುರು-ವಿರಕ್ತರಲ್ಲಿ ಸಮಾನ ಬುದ್ಧಿಯನ್ನು ತಾಳಿ ಈರ್ವರನ್ನು ಸಹ ಗೌರವಿಸುತ್ತಾ ಬಂದಿದ್ದಾರೆ. ಯಾರೇ ಜಂಗಮಮೂರ್ತಿ ಮಠಕ್ಕೆ ಬಂದರೂ ಪೂಜ್ಯಬುದ್ಧಿಯಿಂದ ಆದರಿಸಿ, ಗೌರವಿಸಿ. ಸತ್ಕರಿಸಿ, ಸಾಧ್ಯವಾದಷ್ಟು ಕಾಣಿಕೆಯಿತ್ತು ಬೀಳ್ಕೊಡುವ ಪ್ರವೃತ್ತಿಯನ್ನು ಚೆನ್ನಾಗಿ ಬೆಳೆಸಿಕೊಂಡಿದ್ದಾರೆ.

ತಮ್ಮ ದೈನಂದಿನ ವ್ಯವಹಾರದಲ್ಲಿ ಆಚಾರ ವಿಚಾರವೆರಡಕ್ಕೂ ಸಮವಾದ ಒತ್ತು ಕೊಟ್ಟವರು ಶ್ರೀಗಳವರು. '' ಹಿಂಗದೆ ನಿತ್ಯಕರ್ಮವ ಮಾಡಲು ತುಂಗಧರ್ಮ

ವಿವರ್ಧನ" ಎಂಬ ಶ್ರೀ ನಿಜಗುಣರ ದಿವ್ಯವಾಣಿಯಲ್ಲಿ ಅಚಲವಾದ ನಂಬಿಕೆಯುಳ್ಳವರು. ಆಚಾರವು ಶುಷ್ಕವೆಂದು ಕೈ ಬಿಟ್ಟವರಲ್ಲ. ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ ಬರುವವರು. ಆದರೆ ಅದನ್ನೇ ಪಟ್ಟಾಗಿ ಹಿಡಿದು ವಿಚಾರವನ್ನು ಬದಿಗೊತ್ತಿದವರಲ್ಲ. ವಿಚಾರಕ್ಕೆ ಹೆಚ್ಚು ಮಾನ್ಯತೆ ಕೊಟ್ಟವರು. ಸ್ವಾಮಿಯಾದವರಿಗೆ ಆಚಾರ ವಿಚಾರವೆರಡೂ ಎರಡು ಕಣ್ಣುಗಳಂತೆ ಎಂದು ಬಗೆದು ಅವುಗಳಲ್ಲಿ ಸಮತೋಲನ ಭಾವನೆಯುಳ್ಳವರು.

ಅರಿಯಲಧ್ಯಾತ್ಮವನು ವಿಜ್ಞಾನ ಕಡೆಗಣಿಸಿ
ನರನು ತಾ ಕುಂಟುವನು ಲೌಕಿಕದೊಳು
ಅರಿತರೇಂ ವಿಜ್ಞಾನವಾಧ್ಯಾತ್ಮ ಬದಿಗೊತ್ತಿ
ಕುರುಡನೋಲ್ಮುಗ್ಗರಿಪ—ಬೋಳು ಬಸವ

ಎಂಬ ಅನುಭವದ ವಾಣಿಯಲ್ಲಿ ಪೂರ್ಣ ನಂಬಿಕೆಯುಳ್ಳವರು ಪೂಜ್ಯ ಶ್ರೀಗಳವರು. ಭಕ್ತರನ್ನು ಅಧ್ಯಾತ್ಮದತ್ತ ಎಳೆದೊಯ್ಯುವ ಜನರಲ್ಲಿ ವೈಜ್ಞಾನಿಕವಾಗಿಯೂ ಅವರನ್ನು ಮುಂದುವರಿಸಬೇಕೆಂಬುದನ್ನು ಮರೆತವರಲ್ಲ. ಅವರ ಮಕ್ಕಳು ಲೌಕಿಕವಾದ ವೈಜ್ಞಾನಿಕ ವಿದ್ಯೆಯಲ್ಲಿ ಎಂದೂ ಹಿಂದೆ ಬೀಳಬಾರದೆಂಬ ಸದುದ್ದೇಶದಿಂದ ಪ್ರಶಾಂತವಾತಾವರಣವಿರುವ ಶ್ರೀ ಕಂಬಳೇಶನ ಗದ್ದುಗೆಯ ಆವರಣದಲ್ಲಿಯೇ ಒಂದು ಸುವ್ಯವಸ್ಥಿತವಾದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಸುಮಾರು ಐವತ್ತು ಮಕ್ಕಳಿಗೆ ಉಚಿತವಾದ ಅಶನವಸನವಸತಿಗಳನ್ನಿತ್ತು ಕಾಪಾಡುತ್ತಿದ್ದಾರೆ. ಪ್ರತಿನಿತ್ಯ ಅವರಲ್ಲಿಗೆ ಹೋಗಿ ಅವರ ಕುಂದು ಕೊರತೆಯನ್ನು ವಿಚಾರಿಸಿ, ಸಾಕಷ್ಟು ರೀತಿಯಲ್ಲಿ ಅವುಗಳನ್ನು ನೀಗಿ, ಅವರು ಶಾಂತಿಯಿಂದ ವ್ಯಾಸಂಗ ಮಾಡಲು ಅನುವಾಗುತ್ತಾರೆ. ಅಷ್ಟೇ ಅಲ್ಲದೆ ಅವರ ಆಚಾರ ವಿಚಾರಗಳನ್ನು ಗಮನಿಸಿ, ಸೂಕ್ತ ರೀತಿಯಲ್ಲಿ ತಿದ್ದಿ, ತೀಡಿ ಸತ್ಪ್ರಜೆಗಳಾಗಲು ಅಣಿಗೊಳಿಸುತ್ತಾರೆ. ಶ್ರೀಗಳವರು ಕಾವಿಯುಟ್ಟು ಮೂಗು ಹಿಡಿದು ಮೂಲೆಯಲ್ಲಿ ಕೂರಬೇಕೆಂಬ ಸಂಕುಚಿತ ದೃಷ್ಟಿಯವರಲ್ಲ. ದೇಶದ ಪೂರ್ಣಪ್ರಗತಿಯತ್ತ ಅವರ ಮನ ವಾಲುತ್ತದೆ. ಪ್ರತಿಯೋರ್ವ ವಿದ್ಯಾರ್ಥಿಯನ್ನು ಕರೆದು "ಚೆನ್ನಾಗಿ ಓದು, ಅದರ ಜೊತೆಗೆ ಲೋಕ ಕಲ್ಯಾಣಕ್ಕೆ ಬಾಳು. ಜನ್ಮ ಕೊಟ್ಟ ಈ ಭೂಮಿಯನ್ನು ಬಿಡುವಾಗ ನಿನಗಾಗಿ ಎಲ್ಲರೂ ಅಳುವಂತೆ ಬಾಳು" ಎಂದು ಬುದ್ಧಿ ಹೇಳುವ ವಿಶ್ವ ಕುಟುಂಬಿಯವರು.

"ವರಗುಣವಾವುದು—ಉದಾರವು" ಎಂದು ಉಸುರಿರುವ ಶ್ರೀ ನಿಜಗುಣರ ವಾಣಿಗೆ ಪೂಜ್ಯ ಶ್ರೀಗಳಲ್ಲಿ ಪುಷ್ಟಿ ದೊರಕಿದೆ. ಅವರ ಔದಾರ್ಯ ಬಹಳ ಮೆಚ್ಚುವಂತಹದ್ದು. ಅವರು ಯಾವುದಕ್ಕೂ ಹಿಡಿದಾಡಿದವರಲ್ಲ. ಎಂದೂ ಅವರ ಕೈ ಕೊಕ್ಕಡಿಸಲಿಲ್ಲ. "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬಂತೆ ಭಕ್ತರಿಂದ ಬಂದದ್ದನ್ನು ಅವರ ಹಿತಕ್ಕಾಗಿ ವ್ಯಯಗೈಯ್ಯುವುದರಲ್ಲಿ ಎಂದೂ ಹಿಂದು ಮುಂದು ನೋಡಿದವರಲ್ಲ.

"ಕೊನೆಯ ಕಾಸಿನ ಹಾಗೂ ಕೊನೆಯ ಕಾಳಿನವರೆಗೂ ನೀಡಿ, ನಾಳೆಗೆಂದು ಏನನ್ನೂ ಇಡಬೇಡಿ" ಎಂದು ಮಠದ ಸೇವಕನನ್ನೂ, ಭಕ್ತರನ್ನೂ ಎಚ್ಚರಿಸಿ ಹೇಳುತ್ತಲೇ ಇರುತ್ತಾರೆ. "ನಾಳೆಗೆ ಬೇಕಾದರೆ ಕಂಬಳೇಶ ನಡೆಸುತ್ತಾನೆ" ಎಂದು ಕಂಬಳೇಶನ ಮೇಲೆ ಪೂರ್ಣ ನಂಬಿಕೆಯುಳ್ಳವರಾಗಿದ್ದಾರೆ. ಅವರ ಈ ಔದಾರ್ಯ ಅವರನ್ನು ಉನ್ನತ ಮಟ್ಟಕ್ಕೆ ಎತ್ತಿ ಹಿಡಿದಿದೆ. ಇದು ಅವರ ನಿಜವಾದ ವರಗುಣ.

ಅವರಲ್ಲಿ ನಾ ಕಂಡ ಮತ್ತೊಂದು ಮಹತ್ತರವಾದ ಗುಣವೆಂದರೆ ಅವರು ಯಾರನ್ನೂ ನಿಂದಿಸದೆ ಇರುವುದು. "ನಿಂದಿಸಿ ನುಡಿಯದಿರಾರನು" ಎಂಬ ನಿಜಗುಣರ ಭವ್ಯ ವಾಣಿಯನ್ನು ಅಕ್ಷರಶಃ ಪಾಲಿಸುತ್ತಿರುವ ಮಹಾಮಹಿಮರು ಪೂಜ್ಯ ಶ್ರೀಗಳವರು. "ಅವರವರು ಮಾಡಿದ್ದು ಅವರವರಿಗೆ. ನಾವೇಕೆ ಅದರ ಬಗ್ಗೆ ಯೋಚಿಸಬೇಕು, ಆಡಬೇಕು" ಎನುತ್ತಾರೆ. "ದುರಿತದೊಳು ಅಧಿಕವಾವುದು—ನಿಂದೆ" ಎಂದು ನಿಜಗುಣರೇ ಅಪ್ಪಣೆ ಕೊಡಿಸಿಲ್ಲವೇ ? "ಬೇರೆಯವರನ್ನು ನಿಂದಿಸಿ ನಾವೇಕೆ ಪಾಪಕಟ್ಟಿಕೊಳ್ಳಬೇಕು" ಎಂದು ತಾವು ಬಗೆಯುವುದಲ್ಲದೆ ಉಳಿದವರನ್ನು ಎಚ್ಚರಿಸುತ್ತಾರೆ. ಈ ಒಂದು ಶ್ರೇಷ್ಠಗುಣ ಅವರಿಗೆ ಸಮಾಜದಲ್ಲಿ ಉನ್ನತಸ್ಥಾನವನ್ನು ಗಳಿಸಿ ಕೊಟ್ಟಿದೆ.

'ಛಲ' ಕೆಟ್ಟ ಗುಣವೆಂದು ಭಾವಿಸುವುದು ಸಹಜ. ಆದರೆ ಶ್ರೀಗಳವರ "ಹಿಡಿದ ನೇಮವನು ಎಡೆಬಿಡದ ಅತಿ ಛಲ" ತುಂಬಾ ಮೆಚ್ಚಬೇಕಾದ ದೊಡ್ಡಗುಣ. ಯಾವ ಕಾರ್ಯವನ್ನೇ ಹಿಡಿದರೂ ಎಷ್ಟೇ ಅಡೆತಡೆಯಾದರೂ ಮಾಡಿಯೇ ಮುಗಿಸುವ ದಿಟ್ಟ ಛಲ ಅವರದು. ಇಟ್ಟ ಹೆಜ್ಜೆಯನ್ನು ಎಂದೂ ಹಿಂದೆಗೆದವರಲ್ಲ ಅವರು. "ಮಾಡುವ ಕಾರ್ಯದ ಔಚಿತ್ಯದ ಬಗ್ಗೆ ಮೊದಲೇ ಸರಿಯಾಗಿ ವಿವೇಚಿಸಿ ಅದರ ಆಗುಹೋಗುಗಳ ಬಗ್ಗೆ ಒಂದು ನಿರ್ಧಾರಕ್ಕೆ ಬಂದು ಅನಂತರ ಆ ಕಾರ್ಯಕ್ಕೆ ಕೈ ಹಚ್ಚಬೇಕು. ಒಂದು ಸಾರಿ ಸರಿಯೆಂತ ಆ ಕೆಲಸಕ್ಕೆ ಕೈ ಹಚ್ಚಿದ ಮೇಲೆ ವಿಘ್ನವಾಯಿತೆಂದೋ ಅಥವಾ ಅದು ಸರಿಯಿಲ್ಲವೆಂದೋ ಕೈ ಬಿಡುವುದು ಹೇಡಿತನ" ವಂದು ಸಾರುತ್ತಾರೆ.

ಅವರದು "ಕೋಪವಂಟದ ತಪಸ್ಸು," ತಪಸ್ಸನ್ನು ಆಚರಿಸುವವರಿಗೆ ಶೀಘ್ರ ಕೋಪ ಬರುತ್ತದೆಂಬುದು ಲೋಕರೂಢಿ. ಇದರ ಬಗ್ಗೆ ನಮ್ಮ ಋಷಿಗಳ ವರ್ತನೆಯನ್ನು ಸಾಕಷ್ಟು ಕೇಳಿದ್ದೇವೆ. ಆದರೆ ಶ್ರೀಗಳವರ ತಪಸ್ಸು ಕೋಪದಿಂದ ಬಹಳ ದೂರ. ಅವರಿಗೆ ಕೋಪ ಬಂದದ್ದನ್ನೇ ನಾನು ಕಾಣಲಿಲ್ಲ. ಸದಾ ಹಸನ್ಮುಖಿಯಾದ ಇವರು ತಾಳ್ಮೆಯ ತವರು. ಇವರ ಸೈರಣೆಯ ಪರಮಾವಧಿಯನ್ನು ಗುರುತಿಸಿದ ನಿಕಟವರ್ತಿಗಳಾದ ಭಕ್ತರು ಎಷ್ಟೋ ಸಾರಿ 'ಶಾಂತಿ'ಗೆ ಇನ್ನೊಂದು ಹೆಸರು "ಶ್ರೀ ಚೆನ್ನಬಸವ ಸ್ವಾಮಿಗಳು" ಎಂದದ್ದನ್ನು ಕಿವಿಯಾರೆ ಕೇಳಿ ಆನಂದಿಸಿದ್ದೇನೆ. ಈ ಒಂದು ಮಹಾಗುಣ ಅವರ ಉಜ್ವಲ ಸಾಧನೆಯ ಕೀಲಿಕೈಯೆಂದರೆ ತಪ್ಪಾಗಲಾರದು.

ಅವರ "ಕಾಪಟ್ಯವಿಲ್ಲದಾಶ್ರಮಧರ್ಮರತಿ" ಬಹಳ ಮೆಚ್ಚಬೇಕಾದ ಗುಣ. ಅವರ ಒಳಹೊರಗು ಪರಿಶುದ್ಧ. ಅವರೆಂದೂ ಸಂಚು ಹೊಂಚು ಗೈದವರಲ್ಲ. ಇದ್ದ

ದ್ದನ್ನು ಇದ್ದಂತೆ ಹೇಳುವ ದಿಟ್ಟಸ್ವಭಾವದವರು ಶ್ರೀಗಳವರು. ಅವರ ಸರಳತೆ, ಸೌಜನ್ಯ ಹಾಗೂ ಮೃದುಸ್ವಭಾವ ನಾಡಿನ ಜನಮನಸವನ್ನು ಗೆದ್ದಿದೆ. ಆಡಂಬರದಿಂದ ಮೆರೆಯಬೇಕೆಂದು ಎಂದೂ ಬಯಸಿದವರಲ್ಲ. ಖಾದಿಯುಟ್ಟು ಮುಡಿಗಟ್ಟಿ ಹೊರ ಬಂದರೆ ಸಾಕ್ಷಾತ್ ಅಲ್ಲಮರೇ ಮತ್ತೆ ಬಂದರೋ ಎನ್ನುವಷ್ಟು ಭವ್ಯತೆಯಿದೆ ಅವರ ಹೆಜ್ಜೆಯ ಭಂಗಿಯಲ್ಲಿ. ಸುಂದರಗಾತ್ರದಲ್ಲಿ.

ಅವರು ಸಣ್ಣ ಮಗುವಿದ್ದಾಗಲೇ ಬೆಳೆಸಿಕೊಂಡ ಕಂಬಳೇಶನ ಭಕ್ತಿ ಕುಂದಿಲ್ಲ, ಅದು ದಿನೇ ದಿನೇ ಬೆಳೆದು ಹೆಮ್ಮರವಾಗುತ್ತಿದೆ. ನಿತ್ಯಾಭಿಷೇಕಕ್ಕೆ ಪ್ರಯತ್ನಿಸಿ ಈಗ ಸಾಕಷ್ಟು ಭಕ್ತರು 501 ರೂಪಾಯಿಗಳ ಪುದುವಟ್ಟು ಇಟ್ಟಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಇದು 365 ಕ್ಕೆ ಏರಿ ಪ್ರತಿದಿನ ಒಬ್ಬೊಬ್ಬರ ಹೆಸರಿನಲ್ಲಿ ನಿತ್ಯಾಭಿಷೇಕ ವಾಗುವುದರಲ್ಲಿ ಸಂಶಯವಿಲ್ಲ. ನೀರನ್ನೇ ತುಪ್ಪ ಮಾಡಿದ ಮಹಾಮಹಿಮರಾಗ ಕಂಬಳೇಶ್ವರರ ಪುಣ್ಯಕ್ಷೇತ್ರವೆಂದು ಇಡೀ ಹಳೆಯ ಮೈಸೂರಿನಲ್ಲಿ ಪ್ರಖ್ಯಾತವಾಗಿರುವ ಮಲ್ಲನಮೂಲೆ ಕ್ಷೇತ್ರವು ಪೂಜ್ಯ ಶ್ರೀಗಳವರ ಬಹುಮುಖ ಪ್ರತಿಭೆ, ತ್ಯಾಗ, ಔದಾರ್ಯ ಮುಂತಾದ ವರಗುಣಗಳ ಫಲವಾಗಿ ಇಡೀ ನಾಡಿನಾದ್ಯಂತ ಭಕ್ತರನ್ನು ತನ್ನತ್ತ ಸೆಳೆಯುತ್ತದೆಂದು ನಂಬಿದ್ದೇನೆ. ಕಂಬಳೇಶ್ವರರು ಶ್ರೀಗಳಿಗೆ ಹೆಚ್ಚಿನ ಆಯುರಾರೋಗ್ಯಾದಿಗಳನ್ನಿತ್ತು. ಅನುಗ್ರಹಿಸಲೆಂದು ಬೇಡಿ ಮುಡಿಬಾಗುತ್ತೇನೆ.

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ !
ಮೃದುವಚನವೇ ಸಕಲ ಜಪಂಗಳಯ್ಯ !
ಮೃದುವಚನವೇ ಸಕಲ ತಪಂಗಳಯ್ಯ !
ಸದುವಿನಯವೇ ಸದಾಶಿವನೊಲುಮೆಯಯ್ಯ !
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ !

—ಬಸವಣ್ಣನವರು

ಶ್ರೀ ಕ್ಷೇತ್ರ ಮಲ್ಲನ ಮೂಲೆಯ ಶಾಖಾಮಠಗಳು

ಶ್ರೀ ಸಿ. ಸುಬ್ಬಣ್ಣ ಎಂ.ಎ.,

ಪರಮ ಪೂಜ್ಯ ಶ್ರೀಗುರು ಕಂಬಳೀಶ್ವರರ ಮಲ್ಲನ ಮೂಲೆಯ ಶ್ರೀ ಮಠದ ಸನಿಹದಲ್ಲಿಯೇ ಪಾವನ ಕಪಿಲೆ ಹರಿಯುತ್ತ ಭಕ್ತರ ಪಾಪ ಪರಿಹಾರ ಮಾಡುತ್ತ ಬಂದಿದೆ. ಮತ್ತೊಂದೆಡೆ, ನಂಜುಂಡೇಶ್ವರ ತನ್ನ ಭಕ್ತಾದಿಗಳನ್ನು ಆಶೀರ್ವದಿಸುತ್ತ ಅವರ ಭವಬಂಧನಗಳನ್ನು ಬಿಡಿಸುತ್ತ ಕೈವಲ್ಯ ಪದವಿಯನ್ನು ಕರುಣಿಸುತ್ತಿದ್ದಾನೆ. ಈ ಪವಿತ್ರ ಗರಳಪುರಿ ಕ್ಷೇತ್ರದ ಶ್ರೀಕಂಠೇಶ್ವರರು ಮತ್ತು ಮಲ್ಲನಮೂಲೆಯ ಗುರು ಶ್ರೀ ಕಂಬಳೀಶ್ವರರು ಆಶ್ರಯಿಸಿದ ಭಕ್ತರ ಭವರೋಗವನ್ನು ನಿವಾರಿಸಿ ಮುಕ್ತಿ ಪಥದಲ್ಲಿ ಕೈ ಹಿಡಿದು ಇಂದಿಗೂ ನಡೆಸುತ್ತಿದ್ದಾರೆಂಬುದೇ ಭಕ್ತರ ಅಚಲ ನಂಬಿಕೆ.

ಶ್ರೀಗುರು ಕಂಬಳೀಶ್ವರರ ಕಾಲದಲ್ಲಿ ಸ್ಥಾಪನೆಗೊಂಡ ಶ್ರೀ ಮಠವು ಅಂದಿನಿಂದ ಇಂದಿನವರೆಗೂ ವೀರಶೈವ ಧರ್ಮ ಪ್ರಸಾರವನ್ನು ಎಲೆಮರೆಯ ಕಾಯಿಯಂತೆ ಸಾರ್ಥಕ ರೀತಿಯಲ್ಲಿ ನಡೆಸಿಕೊಂಡು ಬಂದಿದೆ. ಕಾಯಕದ ಶ್ರೀ ಮಲ್ಲಯ್ಯನವರು ಪ್ರಾರಂಭಿಸಿದ ಅಂಬಲಿ ಹುರುಳಿ ಕಾಯಕವನ್ನು ಶ್ರೀ ಶ್ರೀ ಕಂಬಳೀಶ್ವರರು ಮುಂದು ವರಿಸಿದರು.ಈ ಮಹಾಮಹಿಮರು ಮುಂದುವರಿಸಿದ ಅಂಬಲಿ ಹುರುಳಿ ಕಾಯಕ ಇಂದಿಗೂ ಶ್ರೀಕಂಠೇಶ್ವರ ಸ್ವಾಮಿಯ ರಥೋತ್ಸವದ ದಿನ ಶ್ರೀ ಮಠದಲ್ಲಿ ನಡೆಯು ವುದನ್ನು ಭಕ್ತ ಮಹಾಶಯರು ನೋಡಬಹುದು. ಶ್ರೀ ಮಠದಲ್ಲಿ ಅವಿರತ ದಾಸೋಹ ನಡೆದುಕೊಂಡೇ ಬಂದಿದೆ. ಆದಿಗುರು ಶ್ರೀ ಕಂಬಳೀಶ್ವರರು ಶ್ರೀ ಮಲ್ಲನ ಮೂಲೆ ಕ್ಷೇತ್ರದ ಸುಸ್ಥಾಪನಾಚಾರ್ಯರೆಂದು ಇತಿಹಾಸ ತನ್ನ ಸುವರ್ಣಾಕ್ಷರಗಳಲ್ಲಿ ಬರೆದುಕೊಂಡಿದೆ. ಆದಿಗುರುಗಳು ತಮ್ಮೆಲ್ಲ ಗಮನವನ್ನು ಮೂಲ ಮಠದ ಬೆಳವಣಿಗೆಗೆ ಕೇಂದ್ರೀಕರಿಸಿದಂತೆ ಕಂಡುಬರುತ್ತದೆ. ಇವರ ಅನಂತರ ಶ್ರೀ ಮಠದ ಸೂತ್ರ ಹಿಡಿದ ಶ್ರೀ ಇಮ್ಮಡಿ ಕಂಬಳೀ ಶ್ವರರು ಧರ್ಮ ಪ್ರಚಾರಕ್ಕಾಗಿ ಎತ್ತಿನ ಬಂಡಿಯಲ್ಲಿ, ಅಗತ್ಯ ಬಿದ್ದಾಗ ಕಾಲ್ನಡಿಗೆಯಲ್ಲೂ ಪ್ರವಾಸಮಾಡಿ ಭಕ್ತರ ಸಂಖ್ಯೆಯನ್ನು ಹೆಚ್ಚಿಸಿದರು ಇವರ ಮೂಲ ಉದ್ದೇಶ ಅಜ್ಞಾನ ದಿಂದ ತೊಳಲಾಡುತ್ತಿದ್ದ ಜನರನ್ನು ಸುಜ್ಞಾನದೆಡೆಗೆ ಕೊಂಡೊಯ್ದು ಪುನೀತರಾಗು ವಂತೆ ಮಾಡುವುದಾಗಿತ್ತು. ಭಿಕ್ಷಾಟನೆಯ ಸಮಯದಲ್ಲಿ ಧರ್ಮಕ್ಕೆ ಸಂಬಂಧಪಟ್ಟ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ವಿಷಯಗಳನ್ನು ಮನ ಮುಟ್ಟುವಂತೆ ತಮ್ಮ ನಡೆ ನುಡಿಗಳಿಂದ ಬೋಧಿಸುತ್ತಿದ್ದರು. ಭಕ್ತರು ತಮ್ಮ ದೈನಂದಿನ ಸುಖಭೋಗಗಳ ನಡುವೆಯೂ ಶಾಶ್ವತವಾದ ಜೀವನ ಮೌಲ್ಯಗಳನ್ನು ರೂಢಿಸಿಕೊಳ್ಳು

ವಂತೆ ಮಾಡಲು ಮತ್ತು ಶುಭಾಶುಭ ಕ್ರಿಯೆಗಳಿಗಾಗಿ ಮೂಲ ಮಠಕ್ಕೆ ಬಹು ದೂರದ ಊರುಗಳಿಂದ ಸುಲಭವಾಗಿ ಬರಲಾಗದ ಪರಿಸ್ಥಿತಿಯಲ್ಲಿ ಶ್ರೀ ಇಮ್ಮಡಿ ಕಂಬಳೀಶ್ವರರು ಭಕ್ತರ ಅನುಕೂಲಕ್ಕಾಗಿ ಶಾಖಾಮಠಗಳನ್ನು ಅಲ್ಲಲ್ಲಿ ಸ್ಥಾಪಿಸ ತೊಡಗಿದರು.

'ದಾಸೋಹ' ಬಸವಣ್ಣನವರ ಕಾಲದಿಂದಲೂ ಬಹಳ ಮಹತ್ವವಾದ ಕಾಯಕ. ಇದರಿಂದ ಬಹಳ ಪರಿಣಾಮಕಾರಿಯಾಗಿ ಮಠ ಧರ್ಮ ತತ್ವಗಳನ್ನು ತಿಳಿಯಹೇಳಲು ಹಾಗೂ ಮಠಾನುಯಾಯಿಗಳನ್ನಾಗಿ ಮಾಡಲು ಸಾಧ್ಯವಾಯಿತೇನೊ ! ಅಂತೂ ಕರ್ನಾಟಕದಲ್ಲಿ ದಾಸೋಹಕ್ಕಾಗಿಯೆ ಮೈತಳೆದುವೆಂದು ಹೇಳಬಹುದಾದ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರ ಮಠ, ಶ್ರೀ ಕ್ಷೇತ್ರ ಸಿದ್ಧಗಂಗೆಯ ಸಿದ್ಧಗಂಗಾಮಠ, ದೇವ ನೂರಿನ ಶ್ರೀ ಗುರುಮಲ್ಲೇಶ್ವರರ ಮಠ ಮತ್ತು ಶ್ರೀ ಕ್ಷೇತ್ರ ಮಲ್ಲನ ಮೂಲೆಯ ಮಠ ಗಳು ಪ್ರಮುಖವಾದುವು. ಶಾಖಾ ಮಠಗಳೂ ಸಹ ಮೂಲಮಠಗಳ ಮಾರ್ಗದಲ್ಲೆ ದಾಸೋಹ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ತನ್ಮೂಲಕ ಧರ್ಮ ಪ್ರಚಾರ ಕೈಂಕರ್ಯದಲ್ಲಿ ನಿರಂತರ ಪ್ರಯತ್ನಶೀಲವಾಗಿವೆ.

ಶಾಖಾಮಠದ ಧ್ಯೇಯೋದ್ದೇಶಗಳಾದರೂ ಮೂಲ ಮಠದ ಧ್ಯೇಯೋದ್ದೇಶ ಗಳನ್ನು ಭಕ್ತರು ವಾಸಿಸುವ ಪರಿಸರದಲ್ಲಿದ್ದುಕೊಂಡು ಹರಡುವುದು ; ಅಜ್ಞಾನ ತುಂಬಿದ ಭಕ್ತ ಗುರುವಿನಡೆಗೆ ಬಾರದಿದ್ದಾಗ ಅಥವಾ ಭಕ್ತರ ಅಪೇಕ್ಷೆಯ ಮೇರೆಗೆ ಗುರುವೆ ಭಕ್ತನೆಡೆಗೆ ಬಂದಾಗ ಭಕ್ತನನ್ನು ಸನ್ಮಾರ್ಗಕ್ಕೆ ತರುವ ಪ್ರಯತ್ನ ಮಾಡುವುದು. ವೀರಶೈವ ಧರ್ಮದಲ್ಲಿ ಪ್ರತಿಪಾದ್ಯವಾದ ಪಂಚಾಚಾರ, ಷಟ್‌ಸ್ಥಳ, ಅಷ್ಟಾವರಣ, ಕಾಯಕ ಮೊದಲಾದ ಪಾರಿಭಾಷಿಕ ಶಬ್ದಗಳ ಮೂಲಾರ್ಥ ಮತ್ತು ಅವುಗಳ ಪ್ರಯೋ ಜನಗಳನ್ನು ಯೋಗ್ಯ ಗುರುವಿನ ಮೂಲಕ ತಿಳಿಸಿಕೊಡುವುದು. ನಾನಾ ಕಾರಣಗಳಿಂದ ಕಾರ್ಯಾರ್ಥಿಗಳಾಗಿ ದೂರದೂರುಗಳಿಂದ ಬಂದ ಭಕ್ತರಿಗೆ ಪ್ರಸಾದ ನೀಡುವುದು. ತಂಗಲು ಅವಕಾಶ ಕಲ್ಪಿಸಿ ಅವರ ಪೂಜಾವಿಧಿಗಳಿಗೆ ಅನುವು ಮಾಡಿಕೊಡುವುದು. ಶಿವರಾತ್ರಿ ಮುಂತಾದ ವಿಶೇಷ ದಿನಗಳಲ್ಲಿ ಅನುಭಾವಿಗಳನ್ನು ಅಥವಾ ವೀರಶೈವ ಧರ್ಮದಲ್ಲಿ ತಜ್ಞರನ್ನು ಕರೆಸಿ ಸತ್ಕರಿಸಿ, ಪ್ರವಚನ ಏರ್ಪಡಿಸಿ, ಧರ್ಮದ ಬಗೆಗೆ. ಶರಣರ ಬಗೆಗೆ ಅರಿವು ಮೂಡಿಸಿಕೊಡುವುದು. ಭಕ್ತರ ಮನೆಯಲ್ಲಿ ನಡೆಯುವ ಬಿನ್ನಹ ಗಳಲ್ಲಿ ಪಾಲ್ಗೊಂಡು ಸೂಕ್ತ ಮಾರ್ಗದರ್ಶನ ನೀಡುವುದು. ಭಕ್ತರಲ್ಲಿ ಪರಸ್ಪರ ಉಂಟಾಗಬಹುದಾದ ಕಲಹ, ದ್ವೇಷಾಸೂಯೆಗಳನ್ನು ಮಧ್ಯಸ್ಥಿಕೆಯಿಂದ ಬಗೆಹರಿಸಿ ಸದ್ಭಾವನೆ ಮೂಡಿಸುವುದು. ಇವಲ್ಲದೆ ಭಕ್ತನು ತಂದುಕೊಡುವ ಹೊಸ ವಿಭೂತಿಯನ್ನು ಓಂಕಾರ ಮುದ್ರೆಯೊಂದಿಗೆ ಸಂಸ್ಕಾರ ಮಾಡಿ ಬಳಸಲು ಯೋಗ್ಯ ಮಾಡುವುದು. ಅಗತ್ಯ ಸಂದರ್ಭಗಳಲ್ಲಿ ಭಕ್ತನ ಕೋರಿಕೆಯ ಮೇರೆಗೆ ಪಾದೋದಕ ಪ್ರಸಾದಗಳನ್ನು ಕೊಡುವುದು. ಒಟ್ಟಾರೆ, ಭಕ್ತರ ನಂಬಿಕೆಗೆ ಚ್ಯುತಿ ಬಾರದಂತೆ ಅವರ ಸರ್ವಾಂಗೀಣ ಪ್ರಗತಿಗೆ ಶ್ರಮಿಸುವುದು.

ಶಾಖಾಮಠಗಳಲ್ಲಿ ಕಂಡುಬರುವ ವಿಶೇಷ 'ಕಂತೆ ಭಿಕ್ಷದ ಕಾಯಕ.' ಪ್ರತಿದಿನ ಮಧ್ಯಾಹ್ನ ಮತ್ತು ರಾತ್ರಿ ಮಠದ ಸ್ವಾಮಿಯವರು ಭಕ್ತರ ಮನೆಗೆ 'ಕಂತೆ ಭಿಕ್ಷ'ಕ್ಕಾಗಿ ತೆರಳುತ್ತಾರೆ. ಇದಕ್ಕೆ ಮುನ್ನ ಸ್ವಾಮಿಯವರು ಮಿಂದು ಮಡಿಯುಟ್ಟು ನೂರೆಂಟು ಬಾರಿ ಜಪಮಾಡಿ, ಇಷ್ಟಲಿಂಗ ಪೂಜೆ ಮುಗಿಸಿ ನಂತರ ಜೋಳಿಗೆ ಬೆತ್ತಕ್ಕೆ ಪೂಜೆ ಸಲ್ಲಿಸಿ ಕಾವಿ ಕಫನಿಯನ್ನು ಧರಿಸಿ, ಬಗಲಲ್ಲಿ ಜೋಳಿಗೆ, ಕಾಲಿಗೆ ಜಂಗು, ಒಂದು ಕೈಯಲ್ಲಿ ಲಿಂಗ ಬಸವಯುತವಾದ ದಂಡ, ಮತ್ತೊಂದು ಕೈಯಲ್ಲಿ ಉದಕದ ಪಾತ್ರೆ, ತಲೆಯಿಂದ ಇಳಿ ಬಿಟ್ಟ ಕಂಬಳಿ ಕೊಪ್ಪೆ, ಕೊರಳಲ್ಲಿ ರುದ್ರಾಕ್ಷಿ, ಮೈತುಂಬ ಭಸ್ಮಾರ್ಚಿತರಾಗಿ ಭಕ್ತರ ಮನೆಯಲ್ಲಿ ನಿಂತು "ಶಿವ. ಶಿವ, ಶಿವಗಣಂಗಳ ಕಂತೆ ಭೀಕ್ಷಾsss" ಎಂದು ನಿಲ್ಲುತ್ತಾರೆ. ಭಕ್ತರು ಭಕ್ತಿ ಗೌರವಗಳಿಂದ ನೀಡಿದ ಎಡೆಯನ್ನು ಶ್ರೀ ಮಠಕ್ಕೊಯ್ದು ಲಿಂಗಾರ್ಪಿತ ವಾದ ಪ್ರಸಾದವನ್ನು ಇದ್ದ ಭಕ್ತರಿಗೆ ನೀಡುವರು. ಭಕ್ತರ ಸಂಖ್ಯೆ ಹೆಚ್ಚಿದ್ದಾಗ ಶ್ರೀ ಮಠದ ಸ್ವಾಮಿಯವರೆ ಅಡುಗೆ ಮಾಡಿಸಿ ಭಕ್ತರಿಗೆ ನೀಡುತ್ತಾರೆ. ಶ್ರೀ ಕ್ಷೇತ್ರ ಮಲ್ಲನ ಮೂಲೆಯ ಶಾಖಾಮಠಗಳಲ್ಲಿ ಇಂದಿಗೂ ಜೀವನದಿಯಂತೆ ಸಾಗುತ್ತಾ ಬಂದಿದೆ ಈ ಕಾಯಕ.

ಶ್ರೀ ಕ್ಷೇತ್ರ ಮಲ್ಲನ ಮೂಲೆ ಮಠಕ್ಕೆ ಸಂಬಂಧಿಸಿದಂತೆ ಶ್ರೀ ಗುರು ಇಮ್ಮಡಿ ಕಂಬಳೀಶ್ವರರ ಕಾಲದಿಂದಲೆ ಶಾಖಾಮಠಗಳು ಪ್ರಾರಂಭವಾಗತೊಡಗಿದ್ದು ನಂತರ ಬಂದ ಶ್ರೀ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ಹಾಗೂ ಈಗಿರುವ ಶ್ರೀ ಶ್ರೀ ಚೆನ್ನಬಸವ ಮಹಾಸ್ವಾಮಿಗಳವರ ಕಾಲದಲ್ಲಿ ಅವು ಬೆಳೆದಿವೆ ; ಬೆಳೆಯುತ್ತಲಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಾಗಳಿ, ಹೊನ್ನೂರು, ಕಜ್ಜಿಹುಂಡಿ ಮತ್ತು ಆಲೂರು ಗ್ರಾಮಗಳಲ್ಲಿರುವ ಶಾಖಾ ಮಠಗಳು.

ಬಾಗಳಿ ಮಠ :

ಕುದೇರು ಗ್ರಾಮಕ್ಕೆ ಸುಮಾರು 8 ಕಿ. ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಈಗ್ಗೆ ಸುಮಾರು 80 ವರ್ಷಗಳಿಗೂ ಹಿಂದೆ ಇದ್ದ ಜನರು ತುಂಬಾ ಒರಟಾಗಿಯೂ ವೈಯಕ್ತಿಕ ದ್ವೇಷಾಸೂಯೆಗಳಿಂದಲೂ ನಡೆದುಕೊಳ್ಳುತ್ತಿದ್ದರು. ಭಿಕ್ಷಾಟನೆಗಾಗಿ ಈ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಶ್ರೀ ಇಮ್ಮಡಿ ಕಂಬಳೀಶ್ವರರ ಪ್ರಭಾವಕ್ಕೆ ಮಣಿದ ಜನ ತಮ್ಮ ಗ್ರಾಮದಲ್ಲಿ ಶಾಖಾಮಠವನ್ನು ತೆರೆಯಲು ಒತ್ತಾಯಿಸಿದಾಗ ಅದರ ಅನಿವಾರ್ಯತೆಯನ್ನು ಮನಗಂಡಿದ್ದ ಶ್ರೀಗಳವರು ಗುರು ಲಿಂಗ ಜಂಗಮದ ಮಹತ್ವವನ್ನು ಮನದಟ್ಟು ಮಾಡುವ ಸಲುವಾಗಿ ಆಚಾರವಿಚಾರಗಳನ್ನು ವರ್ಧಿಸಲು ಪ್ರಪ್ರಥಮವಾಗಿ ಇಲ್ಲಿ ಶಾಖಾಮಠವನ್ನು ಸ್ಥಾಪಿಸಿದರು. ಮೊದಲಿಗೆ ಮಠದ ಸೂತ್ರವನ್ನು ಹಿಡಿದವರು ಶ್ರೀ ಗಂಗಾಧರ ಸ್ವಾಮಿಗಳು. ಆಗ ಅವರಿಗೆ 15 ವರ್ಷ. ಸುಮಾರು 12 ವರ್ಷ ದಾಸೋಹ ಕಾಯಕವನ್ನು ನಿರಂತರವಾಗಿ ನಡೆಸಿದ ಇವರು ಒಂದು ಶಿವರಾತ್ರಿಯಂದು ವೈಭವಯುತವಾದ ಶಿವಯೋಗವನ್ನಾಚರಿಸಿ ಅಂದೇ ಶಿವೈಕ್ಯರಾದರು. ತದನಂತರ ಬಂದ ಪುಟ್ಟಣ್ಣಸ್ವಾಮಿಗಳು ಮಠದ ಜವಾಬ್ದಾರಿ ವಹಿಸಿಕೊಂಡು ಇಂದಿನ

ವರೆಗೂ ಶ್ರೀ ಮಠದ ಏಳಿಗೆಗಾಗಿ ನಿರಂತರ ಶ್ರಮಿಸುತ್ತಿದ್ದಾರೆ. ಬಸವ ಜಯಂತಿ, ಕಾರ್ತಿಕಮಾಸ, ಶಿವರಾತ್ರಿ ಮತ್ತಿತರ ಧಾರ್ಮಿಕ ಶುಭದಿನಗಳಲ್ಲಿ ಶಿವಾನುಭವ ಪ್ರವಚನೆಗಳನ್ನೇರ್ಪಡಿಸಿ ತನ್ಮೂಲಕ ಭಕ್ತರಿಗೆ ಜ್ಞಾನ ದಾಸೋಹ ನೀಡುತ್ತಿದ್ದಾರೆ. ಇತ್ತೀಚೆಗೆ ಶ್ರೀಗಳವರ ಪರಿಶ್ರಮದ ಫಲವಾಗಿ ಮಠದ ಆಸ್ತಿಯಾಗಿ ಹತ್ತು ಎಕರೆಯಷ್ಟು ನೀರಾವರಿ ಭೂಮಿ ಲಭ್ಯವಾಗಿದೆ,

ಹೊನ್ನೂರು ಮಠ :

ಎಳಂದೂರು ಸಮೀಪದಲ್ಲಿರುವ ಹೊನ್ನಿನ ಊರಾದ ಈ ಹೊನ್ನೂರಿನಲ್ಲಿ ಶ್ರೀ ಇಮ್ಮಡಿ ಕಂಬಳೇಶ್ವರರ ಕಾಲದಲ್ಲಿಯೆ ಮಠ ಸ್ಥಾಪನೆಯಾಯಿತು. ಸಣ್ಣ ಮನೆಯೊಂದರಲ್ಲಿ ಪ್ರಾರಂಭವಾದ ಈ ಮಠವು ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಕಾಲದಲ್ಲಿ ವಿಶಾಲವಾದ ಸ್ವಂತ ಕಟ್ಟಡವನ್ನು ಹೊಂದುವ ಸಲುವಾಗಿ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಇನ್ನೇನು ಕಟ್ಟಲು ಪ್ರಾರಂಭವಾಗಬೇಕೆನ್ನುವಷ್ಟರಲ್ಲಿ ಗುರು ಕೃಪೆಯಾಗಲಿಲ್ಲವೊ ಏನೊ ? ಕಟ್ಟಡದ ಕೆಲಸ ಸುಮಾರು ನಲ್ವತ್ತು ವರ್ಷಗಳ ಕಾಲ ಸ್ಥಗಿತಗೊಂಡು ಈಗ್ಗೆ ಹತ್ತು ವರ್ಷಗಳ ಹಿಂದೆ ಉದ್ದೇಶಿತ ಕಟ್ಟಡದ ಕೆಲಸ ಸಾಗಿ ಈಗ ಮಠ ವಿಶಾಲವೂ, ಸುಂದರವೂ ಆದ ಕಟ್ಟಡದಲ್ಲಿ ನಡೆಯುತ್ತಿದೆ. ಪ್ರಥಮವಾಗಿ ಮಠದ ಜವಾಬ್ದಾರಿಹೊತ್ತ ಹೆಳವರ ಹುಂಡಿಯ ಶ್ರೀ ಶಿವರುದ್ರಸ್ವಾಮಿಗಳವರು ಕಟ್ಟಡದ ಕೆಲಸಕ್ಕೆ ಗ್ರಾಮದ ಭಕ್ತರನ್ನು ಒಲಿಸಲು ಮಾಡಿದ ಪ್ರಯತ್ನಗಳು ಸ್ಮರಣೀಯ. ಕೊಂಗಪ್ಪನ ಶ್ರೀ ಮಲ್ಲಪ್ಪ, ಶ್ರೀ ಶಿವಪ್ಪದೇವರು, ಮತ್ತು ಶ್ರೀ ಬಸಪ್ಪ ಅವರು ಗ್ರಾಮದ ವೀರಶೈವರೆಲ್ಲರ ಸಂಪೂರ್ಣ ಸಹಾಯ ಪಡೆದು ನೂತನ ಮಠವನ್ನು ಕಟ್ಟಿಸಿದರು.

ಈಗಿರುವ ಶ್ರೀ ಮಠದ ಸ್ವಾಮಿಗಳವರು ಮಧ್ಯಾಹ್ನದ ವೇಳೆಯಲ್ಲಿ ಬೇರೆ ಊರುಗಳಿಂದ ಬರುವ ಕೆಲವು ಶಾಲಾ ಮಕ್ಕಳಿಗೆ ಊಟದ ವ್ಯವಸ್ಥೆಯನ್ನೂ ಮಾಡಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಭಕ್ತರಿಗೆ ಅನುಕೂಲ ಮಾಡಿಕೊಡುವ ಹವಣಿಕೆ ಹೊನ್ನೂರು ಮಠದ ಶ್ರೀಗಳವರದ್ದಾಗಿದೆ.

ಕಜ್ಜಿಹುಂಡಿ ಮಠ

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಕಾಲದಲ್ಲಿ ಪ್ರಾರಂಭವಾದ ಈ ಮಠದ ಜವಾಬ್ದಾರಿಯನ್ನು ಭಕ್ತರ ಅಪೇಕ್ಷೆಯ ಮೇರೆಗೆ ಪಟ್ಟದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳವರಿಗೆ ವಹಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಸುತ್ತೂರಿನ ಮಂತ್ರ ಮಹರ್ಷಿ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು, ಪಟ್ಟಾಧಿಕಾರವನ್ನು ಸ್ವೀಕರಿಸಿದ ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿಗಳವರನ್ನು ಆಶೀರ್ವದಿಸಿ ಭಕ್ತರನ್ನು ಹರಸಿದರು. ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿಗಳವರು ಸುಮಾರು 42 ವರ್ಷಕಾಲ ಕಂತೆ ಭಿಕ್ಷದಲ್ಲಿಯೆ ನಿರತರಾಗಿದ್ದರು.

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಒಡನಾಟದಲ್ಲಿಯೆ ಹತ್ತಾರು ವರ್ಷ ಕಳೆದ ಇವರಿಗೆ ಅಪಾರ ಅನುಭವವಿದೆ. ಬದಲಾದ ದಿನ ಮಾನಗಳನ್ನು ಅರಿತ ಪಟ್ಟದ ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿಂಗಳವರು ಶ್ರೀ ಕ್ಷೇತ್ರ ಮಲ್ಲನ ಮೂಲೆ ಮಠದ ಈಗಿನ ಶ್ರೀ ಶ್ರೀ ಚನ್ನಬಸವಸ್ವಾಮಿಗಳವರ ಮನ ಒಲಿಸಿ ಕಜ್ಜಿಹುಂಡಿ ಗ್ರಾಮದ ಭಕ್ತಾದಿಗಳ ನೆರವಿನೊಂದಿಗೆ ಸುಮಾರು ನಾಲ್ಕು ಎಕರೆಯಷ್ಟು ನೀರಾವರಿ ಭೂಮಿಯನ್ನು ಮಠದ ಆಸ್ತಿಯಾಗಿ ಮಾಡುವಲ್ಲಿ ಸಫಲರಾಗಿದ್ದಾರೆ. ಈ ಇಳಿವಯಸ್ಸಿನಲ್ಲೂ ಉತ್ಸಾಹದ ಚಿಲುಮೆಯಂತಿರುವ ಇವರು ಭಿಕ್ಷಾಟನೆ ಮಾಡಿ ತಂದ ದವಸಧಾನ್ಯಗಳಿಂದ ಪರ ಊರಿನಿಂದ ಬರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಹೊತ್ತು ಪ್ರಸಾದ ವಿನಿಯೋಗದ ಕಾರ್ಯವನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಈ ಮಠಕ್ಕೆ ಸೇರಿದಂತೆ ವಿದ್ಯಾರ್ಥಿ ನಿಲಯ ಒಂದನ್ನು ಸ್ಥಾಪಿಸಬೇಕೆಂದಿರುವ ಅವರ ಆಶಯಕ್ಕೆ ಶ್ರೀ ಗುರು ಕಂಬಳೇಶ್ವರರು ಆಶೀರ್ವದಿಸಲಿ.

ಹೆಗ್ಗವಾಡಿ ಮಠ

ಶ್ರೀ ಗುರು ಇಮ್ಮಡಿ ಕಂಬಳೇಶ್ವರರ ಕಾಲದಲ್ಲಿಯೆ ಪ್ರಾರಂಭವಾದ ಮಠ, ಈಗ ಕಂತೆ ಭಿಕ್ಷದ ಕಾಯಕವನ್ನು ಶ್ರೀ ನಂಜೇದೇವರು ನಡೆಸಿಕೊಂಡು ಬರುತ್ತಿದ್ದಾರೆ.

ಆಲೂರು ಮಠ

ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರ ಕಾಲದಲ್ಲಿ ಪ್ರಾರಂಭವಾದ ಮಠ. ಬಾಗಳಿಯ ಶ್ರೀ ನಂಜುಂಡ ಸ್ವಾಮಿಗಳವರು ಮಠದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಚಿಕ್ಕವಯಸ್ಸಿನವರಾದರೂ ಮಠದ ಏಳಿಗೆಗಾಗಿ ಅಪಾರವಾಗಿ ಶ್ರಮಿಸುತ್ತಿದ್ದಾರೆ, ಇವರ ಪ್ರಯತ್ನದಿಂದಲೆ ಸುಮಾರು ನಲ್ವತ್ತು ಶಾಲಾ ಮಕ್ಕಳು ಮಧ್ಯಾಹ್ನದ ಊಟದ ಪ್ರಯೋಜನ ಪಡೆಯುತ್ತಿದ್ದಾರೆ.

ಅಂಬಳೆಮಠದ ಭಿಕ್ಷದ ಶ್ರೀ ಶ್ರೀಗಳವರು; ತಾಂಡವಪುರ ಮಠದ ಶ್ರೀ ಶ್ರೀ ಶಿವಪ್ಪಸ್ವಾಮಿಗಳವರು ; ತುಮ್ಮನೇರಳೆ ಮಠದ ಶ್ರೀ ಶ್ರೀಗಳವರು; ಕಲಿಯೂರು ಮಠದ ಶ್ರೀ ಶ್ರೀ ಮರಿಸ್ವಾಮಿಂಗಳವರು ; ಚಂದಕವಾಡಿ ಮಠದ ಶ್ರೀ ಶ್ರೀ ಮಹಾಂತ ಸ್ವಾಮಿಗಳವರು ; ಮಾದಾಪುರ ಮಠದ ಶ್ರೀ ಶ್ರೀ ಮರಿಸ್ವಾಮಿಗಳವರು ; ಅನುಬಂಧದಲ್ಲಿ ಕೊಟ್ಟಿರುವ ಇನ್ನುಳಿದ ಶಾಖಾಮಠಗಳ ಶ್ರೀಗಳವರು ತಮ್ಮ ತಮ್ಮ ಶಕ್ತ್ಯಾನುಸಾರ ಆಯಾಮಠಗಳ ಏಳಿಗೆಗಾಗಿ ನಿರಂತರ ಕಾಯಕವನ್ನು ಸದ್ದುಗದ್ದಲವಿಲ್ಲದೆ, ವಿನಯ ಸದ್ಭಾವನೆಗಳಿಂದ ಭಕ್ತರ ಮನಸ್ಸನ್ನು ಗೆದ್ದು ಮೂಲಮಠದ ಪರಮಪೂಜ್ಯ, ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರ ಮಾರ್ಗದರ್ಶನದಂತೆ ಶ್ರಮಿಸುತ್ತಿದ್ದಾರೆ.

ಶ್ರೀ ಕ್ಷೇತ್ರ ಮಲ್ಲನಮೂಲೆಯ ಮಠದ ಶಾಖಾಮಠಗಳು ಇನ್ನೂ ಹೆಚ್ಚಿ ಶಾಖಾಮಠದ ಧ್ಯೇಯೋದ್ದೇಶಗಳನ್ನು ಹೆಚ್ಚು ಅರ್ಥವತ್ತಾಗಿ ಹಾಗೂ ಸಮರ್ಪಕವಾಗಿ ನಡೆಸುವಂತಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

—೦—

ಅನುಬಂಧ :

ಮಲ್ಲನಮೂಲೆ ಮಠಕ್ಕೆ ಸೇರಿದ ಸಮಗ್ರ ಶಾಖಾಮಠಗಳ ಪಟ್ಟಿ :

ಶ್ರೀ ಶ್ರೀ ಇಮ್ಮಡಿ ಕಂಬಳೇಶ್ವರರ ಕಾಲದಲ್ಲಿ ಪ್ರಾರಂಭವಾದ ಶಾಖಾ ಮಠಗಳು:—

1.	ಬದನವಾಳು ಮಠ	ನಂಜನಗೂಡು ತಾಲ್ಲೋಕು
2.	ಆಲತ್ತೂರ ಹುಂಡಿಮಠ	—,,—
3.	ಹೊನ್ನೂರು ಮಠ	ಎಳಂದೂರು ತಾಲ್ಲೋಕು
4.	ಹೆಗ್ಗವಾಡಿ ಮಠ	ಚಾಮರಾಜನಗರ ತಾಲ್ಲೋಕು
5.	ರಾಮಸಮುದ್ರ ಮಠ	—,,—
6.	ಬಾಗಳಿ ಮಠ	—,,—
7.	ಅಂಕಹಳ್ಳಿ ಮಠ	ಗುಂಡ್ಲುಪೇಟೆ ತಾಲ್ಲೋಕು

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಕಾಲದಲ್ಲಿ ಪ್ರಾರಂಭವಾದ ಶಾಖಾ ಮಠಗಳು:—

8.	ಕಜ್ಜಿಹುಂಡಿ ಮಠ	ಕೊಳ್ಳೇಗಾಲ ತಾಲ್ಲೋಕು
9.	ಮಾದಾಪುರದ ಮಠ	ಚಾಮರಾಜನಗರ ತಾಲ್ಲೋಕು
10.	ಚಂದಕವಾಡಿ ಮಠ	—,,—
11.	ಕಮ್ಮರವಾಡಿ ಮಠ	—,,—
12.	ಉಮ್ಮತ್ತೂರ ಅಗ್ರಹಾರದ ಮಠ	—,,—
13.	ಹೆಬ್ಬಸೂರು ಮಠ	—,,—
14.	ಹೆಗ್ಗವಾಡಿಪುರದ ಮಠ	—,,—
15.	ತೋರಹಳ್ಳಿ ಮಠ	ನಂಜನಗೂಡು ತಾಲ್ಲೋಕು
16.	ತಾಂಡವಪುರದ ಮಠ	—,,—
17.	ತುಮ್ಮನೇರಳೆ ಮಠ	—,,—
18.	ಆಯರಹಳ್ಳಿ ಮಠ	ಮೈಸೂರು ತಾಲ್ಲೋಕು

ಪರಮಪೂಜ್ಯ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರ ಕಾಲದಲ್ಲಿ ಪ್ರಾರಂಭವಾದ ಶಾಖಾಮಠಗಳು:—

19.	ಬೊಕ್ಕಹಳ್ಳಿ ಮಠ	ನಂಜನಗೂಡು ತಾಲ್ಲೋಕು
20.	ಮೂಡಹಳ್ಳಿ ಮಠ	—,,—
21.	ಆಲೂರ ಮಠ	ಚಾಮರಾಜನಗರ ತಾಲ್ಲೋಕು
22.	ಜನ್ನೂರು ಮಠ	—,,—
23.	ಅಂಬಳೆ ಮಠ	ಎಳಂದೂರು ತಾಲ್ಲೋಕು
24.	ಕಲಿಯೂರು ಮಠ	ಟಿ. ನರಸೀಪುರ ತಾಲ್ಲೋಕು
25.	ಯಾಕನೂರು ಮಠ	—,,—

ನಾ ಕಂಡಂತೆ ಮಲ್ಲನಮೂಲೆ ಸುಕ್ಷೇತ್ರ

ಶ್ರೀ ಡಿ. ಎಸ್. ಸದಾಶಿವಮೂರ್ತಿ ಎಂ. ಎ.

ಮೈಸೂರು ಜಿಲ್ಲೆಯ ಹಲವಾರು ವೀರಶೈವ ಪುಣ್ಯಕ್ಷೇತ್ರಗಳಲ್ಲಿ ನಾ ಕಂಡಂತೆ ಮಲ್ಲನ ಮೂಲೆ ಮಠವು ಸಹ ಈ ಜಿಲ್ಲೆಯ ಪ್ರಮುಖ ವೀರಶೈವ ಪುಣ್ಯಕ್ಷೇತ್ರವಾಗಿದೆ. ಆದರೆ ಬೇರೆ ಕ್ಷೇತ್ರಗಳು ನೆಲಸಿರುವ ಸ್ಥಳವನ್ನು ಮತ್ತು ಶ್ರೀ ಮಲ್ಲನ ಮೂಲೆ ಕ್ಷೇತ್ರವಿರುವ ಸ್ಥಳವನ್ನು ಪರಾಮರ್ಶಿಸಿದಾಗ ನಿಜಕ್ಕೂ ಯಾವುದೇ ವಿಚಾರವಂತನಿಗೆ ಅವನದೇ ಆದ ಭಕ್ತಿಭಾವನೆ ಮತ್ತು ಭವ್ಯವಾದ ಒಂದು ಅನುಭವವಾಗುತ್ತದೆ. ಏಕೆಂದರೆ ಯಾವುದೇ ವ್ಯಕ್ತಿ ಎಷ್ಟೇ ಚಂಚಲಿತನಾಗಿ ಬಂದು ಕಪಿಲಾ ನದಿಯಲ್ಲಿ ಸ್ನಾನಮಾಡಿ ಶ್ರೀ ಗದ್ದುಗೆಗೆ ಪ್ರಣಾಮವನ್ನು ಮಾಡಿದ್ದೇ ಆದರೆ, ಆತನ ಮನಸ್ಸು ನಿರ್ಮಲವಾಗುತ್ತದೆ.

"ಜನತೆ ಅರಿವಿನ ದಾರಿಕಾಣದೆ ಪರಿತಪಿಸುತ್ತಿರುವಾಗ ಅರಿತು, ದಾರಿ ತೋರುವ ಮಹಾನುಭಾವರು ಜನ್ಮತಳೆಯುತ್ತಾರೆ" ಎಂಬ ದಿವ್ಯವಾಣಿಯಂತೆ, ಅಂದಿನ ದಿನಗಳಲ್ಲಿ ಸಮಾಜದ ವಿವಿಧ ವರ್ಗದ ಜನತೆ ಅಜ್ಞಾನಿಗಳಾಗಿ ಜ್ಞಾನದ ದಾರಿ ಕಾಣದೆ ಪರಿತಪಿಸುತ್ತಿದ್ದಾಗ ಅರಿವಿನ ದಾರಿತೋರಲು ಜನ್ಮತಳೆದ ಮಹಾನುಭಾವರುಗಳೆಂದರೆ, ಬೆಟ್ಟದಪುರದ ಶ್ರೀ. ನಿ.ಪ್ರ.ಸ್ವ. ಚಿಕ್ಕವೀರ ದೇಶಿಕೇಂದ್ರರು, ದೇವನೂರು ಶ್ರೀ. ನಿ. ಪ್ರ. ಸ್ವ. ಶ್ರೀ ಗುರುಮಲ್ಲೇಶ್ವರರು. ಅಂತೆಯೇ ನಂಜನಗೂಡು ಸುತ್ತಮುತ್ತಲ ಜನತೆಗೆ ದಾರಿದೀಪವಾಗಿ, ಜನತೆಯಲ್ಲಿ ಅಡಗಿದ್ದ ಅಂಧಕಾರವನ್ನು ತೊಲಗಿಸುವುದಕ್ಕೋಸ್ಕರ ಪರಮಪೂಜ್ಯ ಶ್ರೀ. ನಿ. ಪ್ರ. ಸ್ವ. ಶ್ರೀ ಗುರು ಕಂಬಳೇಶ್ವರ ಮಹಾಸ್ವಾಮಿಗಳೆಂಬ ಮಹಾಶರಣರು ಅವತರಿಸಿದರು. ಇಂದು ನಾವು ಕಾಣುವ ನಂಜನಗೂಡು ಮತ್ತು ಮೈಸೂರು ಹಾದಿಯ ನಡುವೆ ಮಲ್ಲನ ಮೂಲೆ ಎಂಬಲ್ಲಿ ಶ್ರೀ ಕ್ಷೇತ್ರವು ವಿರಾಜಿಸುತ್ತಿದೆ. ಈ ಕ್ಷೇತ್ರವು ಕೇವಲ ವೀರಶೈವರಿಗೇ ಅಲ್ಲದೆ, ಸಮಾಜದ ವಿವಿಧ ವರ್ಗಗಳ ಜನತೆಗೂ ಸಹ ಹಲವಾರು ರೀತಿಯಲ್ಲಿ ನೆರವಾಗುತ್ತಾ ಅವರ ಮೋಕ್ಷಕ್ಕೆ ದಾರಿ ತೋರುತ್ತಾ ಬಂದಿದೆ.

ಪ್ರಪಂಚದಲ್ಲಿ ಯಾವುದೇ ಧರ್ಮವಾಗಲಿ, ಅಂದರೆ- ಹಿಂದೂ ಧರ್ಮವಾಗಲಿ ಕ್ರಿಶ್ಚಿಯನ್ ಧರ್ಮವಾಗಲಿ, ಅಥವಾ ಮುಸ್ಲಿಂ ಧರ್ಮವಾಗಲಿ, ಎಲ್ಲಾ ಧರ್ಮಗಳ ಮುಖ್ಯ ಉದ್ದೇಶ ಮಾನವನ ಸರ್ವಾಂಗೀಣ ಶುದ್ಧಿಮಾಡಿ ಆತನಿಗೆ ನೀತಿಬೋಧನೆ ಮಾಡುವುದೇ ಆಗಿದೆ. ಅಂದರೆ ಮಾನವನು ಹುಟ್ಟುತ್ತಾ ಬಾಲ್ಯದಲ್ಲಿ ಉದಾರತೆಯಿಂದ

ಕೂಡಿರುತ್ತಾನೆ. ಅವನು ಪ್ರಪಂಚದ ಆಗು ಹೋಗುಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದಾಗ ಪರಿಸರ ಅವನನ್ನು ತಪ್ಪುದಾರಿಗೆ ಎಳೆದು ಅಲ್ಪ ಮಾನವನನ್ನಾಗಿ ಮಾಡುತ್ತದೆ. ಇಂತಹ ಸಂದರ್ಭಗಳಲ್ಲಿ ವೀರಶೈವ ಧರ್ಮವು ಇಂತಹ ಅಲ್ಪಮಾನವರನ್ನು ಮತ್ತೆ ವಿಶ್ವಮಾನವನನ್ನಾಗಿ ಮಾಡಲು ಅವಿರತವಾಗಿ ಪ್ರಯತ್ನಿಸುತ್ತಾ ಬಂದಿದೆ. ಈ ಕಾರಣದಿಂದ ಇಂದಿಗೂ ಸಹ ವೀರಶೈವ ಧರ್ಮವು ವಿಶ್ವಧರ್ಮ ಎನಿಸಿದೆ.

12ನೆಯ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ವೀರಶೈವ ಧರ್ಮದ ಮೂಲಕ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಕವಾಗಿ ಮತ್ತು ರಾಜಕೀಯವಾಗಿ ಹಲವಾರು ಕ್ರಾಂತಿಗಳನ್ನು ಮಾಡಿದರು. ಅಂತಹ ಕ್ರಾಂತಿಯ ಹಲವಾರು ಕಿಡಿಗಳ ಜ್ವಾಲೆ ಇಂದಿಗೂ ಸಹ ಅಲ್ಲಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಿದೆ. ಪ್ರಸ್ತುತ ಕಲುಷಿತಗೊಂಡಿರುವ ಸಮಾಜವನ್ನು ಶುಚಿಗೊಳಿಸಿ ಅದನ್ನು ಒಂದು ಉತ್ತಮ ದಾರಿಗೆ ತಂದು, ರಾಷ್ಟ್ರದ ಎಲ್ಲಾ ಜನತೆಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ನೀಡಲು ಆ ಕ್ರಾಂತಿಯ ಕಿಡಿಗಳು ಹಲವಾರು ವೀರಶೈವಮಠಗಳ ಸ್ವಾಮಿಗಳ ಮೂಲಕ ಅಂದಿನಿಂದ ಇಂದಿನ ತನಕ ಹಲವಾರು ಯೋಜಿತಕಾರ್ಯಗಳ ಮೂಲಕ ಉದ್ದೇಶವನ್ನು ಯಶಸ್ವಿಗೊಳಿಸಲು ನೆರವಾಗಿವೆ. ಮೈಸೂರು ಜಿಲ್ಲೆಯಲ್ಲಿರುವ ಶ್ರೀ ಸುತ್ತೂರು ಮಠ, ಮಲ್ಲನಮೂಲೆ ಮಠ, ದೇವನೂರು ಮಠ ಬೆಟ್ಟದಪುರದ ಮಠ, ಪಡುಗೂರು ಮಠ, ಸಾಲೂರು ಮಠ, ಇತ್ಯಾದಿ ಅನೇಕ ಮಠಗಳು ಪ್ರಸಾದ ನಿಲಯಗಳನ್ನು ಸ್ಥಾಪಿಸಿ ದೇಶೋದ್ಧಾರ ಕಾರ್ಯಗೈಯುತ್ತಿವೆ.

ಮೇಲ್ಕಂಡ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ 'ನಾ ಕಂಡಂತೆ' ಎಂಬ ಶಿರೋನಾಮೆಯಲ್ಲಿ ಮಲ್ಲನಮೂಲೆ ಕ್ಷೇತ್ರದ ಇತಿಹಾಸ, ಸಾಧನೆ ಮತ್ತು ಈಗ ಶ್ರೀಮಠದಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಸಂಗ್ರಹವಾಗಿ ನಿರೂಪಿಸಿದೆ.

ಇಂದು ಜನತೆ ಭಾರತದ ಉದಾತ್ತ ಸಂಸ್ಕೃತಿಯನ್ನು ಮರೆತು ನವನಾಗರಿಕತೆಯ ಅಮಲಿನಲ್ಲಿ ತಮ್ಮತನವನ್ನೇ ಕಳೆದುಕೊಂಡು ಪಾಪಕೂಪಕ್ಕೆ ಬೀಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶ್ರೀಕ್ಷೇತ್ರವು ಅಣ್ಣ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಆಧಾರವಾಗಿಟ್ಟುಕೊಂಡು ಈ ಕಾಯಕದ ಮೂಲಕ ಹೇಗೆ ಮನುಷ್ಯ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದನ್ನೂ ಮತ್ತು ಧರ್ಮಮಾರ್ಗವನ್ನೂ ಸಾಮಾನ್ಯ ಜನತೆಗೆ ಅರುಹುತ್ತ ಬಂದಿದೆ. ಇಂದೂ ಕ್ಷೇತ್ರದಲ್ಲಿ ನಿತ್ಯ ದಾಸೋಹ, ಶಿವಾನುಭವ ಕಾರ್ಯಕ್ರಮಗಳು ನಡೆಯುವುದರ ಜತೆಗೆ ಶ್ರೀಮಠದ ಮಹಾಸ್ವಾಮಿಗಳವರು ಪ್ರವಾಸ ಮಾಡುತ್ತ ಆಚಾರ ವಿಚಾರಗಳನ್ನರುಹಿ ಭಕ್ತರನ್ನುದ್ಧರಿಸುತ್ತಾರೆ.

'ತನ್ನ ತಾನರಿತು ತಾನಾರೆಂದು ತಿಳಿದೊಡೆ
ತಾನೇ ದೇವರು ನೋಡಾ ಕೂಡಲಸಂಗಮದೇವ'

ಎಂಬ ಜಗಜ್ಯೋತಿ ಬಸವೇಶ್ವರರ ವಚನದಂತೆ ನಾನು ಯಾರು ? ಪ್ರಪಂಚಕ್ಕೆ ಬಂದ

ಮೇಲೆ ನಾನು ಸಮಾಜಕ್ಕೆ ಏನು ಮಾಡಬೇಕು ? ನನ್ನ ಕರ್ತವ್ಯವೇನು ? ಎಂಬಿವೇ ಮೊದಲಾದ ಮೂಲಭೂತ ಪ್ರಶ್ನೆಗಳಿಗೆ ಶ್ರೀ ಕ್ಷೇತ್ರಾಧೀಶ್ವರರು ಉತ್ತರಿಸುತ್ತಾ, ತಮ್ಮ ನಿಜಾಚರಣೆಯಿಂದ ಧರ್ಮಜಾಗೃತಿಯನ್ನುಂಟುಮಾಡುತ್ತಿದ್ದಾರೆ. ಧರ್ಮದ ಬಗೆಗೆ ಜನರಲ್ಲಿ ಅಷ್ಟು ಆಸಕ್ತಿ ಕಂಡುಬರದಿರುವ ಈ ಕಾಲದಲ್ಲಿ ಶ್ರೀಕ್ಷೇತ್ರದ ಶ್ರೀಗಳವರು, ಮಾನವ ಅಷ್ಟಾವರಣಗಳ ಮಹತ್ವವನ್ನರಿತು, ಪಂಚಾಚಾರ ಪರಾಯಣನಾಗಿ, ಸತ್ಯ ಶುದ್ಧ ಕಾಯಕವನ್ನೆಸಗುತ್ತ ಷಟ್‌ಸ್ಥಲ ಮಾರ್ಗದಲ್ಲಿ ಮುನ್ನಡೆಯಬಹುದೆಂಬುದನ್ನು ನಿಜಾಚರಣೆಯ ಮೂಲಕ ಅರುಹುತ್ತ ಧರ್ಮಜಾಗೃತಿಯನ್ನುಂಟು ಮಾಡುತ್ತಿರುವುದು ಅಭಿನಂದನೀಯವಾದುದು.

ಸಮಾನತೆ, ಶ್ರೀ ಕ್ಷೇತ್ರದ ಮತ್ತೊಂದು ಪ್ರಮುಖವಾದ ವಿಶೇಷವಾಗಿದೆ. ಇಲ್ಲಿ 'ಇವನಾರವ ಇವನಾರವ' ಎನ್ನದೆ 'ಇವ ನಮ್ಮವ ಇವ ನಮ್ಮವ' ಎನ್ನುವ ಬಸವಣ್ಣ ನವರ ವಾಣಿಯ ಸಫಲತೆಯನ್ನು ನಾವು ಕಾಣಬಹುದು. ಶ್ರೀ ಕ್ಷೇತ್ರದಲ್ಲಿ ಬಡವ-ಬಲ್ಲಿದ, ಮೇಲು-ಕೀಳು ಎಂಬ ಭಾವನೆಗೆ ಎಡೆಗೊಡದೆ ಸರ್ವರನ್ನೂ ಸಮಾನತೆ ಯಿಂದ ಕಾಣುವುದನ್ನು ಗಮನಿಸಬಹುದು.

ನನಗೆ ರಾಷ್ಟ್ರವು ಏನು ಮಾಡಿತು ? ಎಂಬುದಕ್ಕಿಂತ ನಾನು ರಾಷ್ಟ್ರಕ್ಕೆ ಏನು ಮಾಡಬೇಕು ? ಎಂಬುದು ಮುಖ್ಯ. ಈ ಕ್ಷೇತ್ರವು ಈಗ ಶ್ರೀ ಶ್ರೀ ಚೆನ್ನಬಸವ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಬಹು ಸೂಕ್ತರೀತಿಯಿಂದ ಮಾನವೀಯ ಮೌಲ್ಯ ಗಳೊಡನೆ ಭಕ್ತಾದಿಗಳಿಂದಾಗಲೀ ಅಥವಾ ಸಮಾಜದ ಬೇರಾವ ವ್ಯಕ್ತಿಗಳಿಂದಲೇ ಆಗಲಿ ಹೆಚ್ಚಿನದೇನನ್ನೂ ಬಯಸದೆ ಸಾಮಾನ್ಯ ಜನತೆಯ, ಹಾಗೂ ಸಮಾಜದ ಹಿತಕ್ಕಾಗಿ ಅವರ ಸರ್ವಾಂಗೀಣ ಅಭಿವೃದ್ಧಿಗಾಗಿ ಹಗಲಿರುಳು ಅವಿರತವಾಗಿ ಪ್ರಯತ್ನಿಸುತ್ತಿದೆ.

"ಅಂಬಲಿ ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ" ಎಂಬ ಆದಿ ಕಂಬಳೇಶ್ವರರ ಮಾರ್ಮಿಕವಾದ ಉಪದೇಶ ಶ್ರೀಕ್ಷೇತ್ರದ ಭಕ್ತರನ್ನು ಉದಾರಿಗಳನ್ನಾಗಿಯೂ, ದಾನಿ ಗಳನ್ನಾಗಿಯೂ ಧರ್ಮಿಗಳನ್ನಾಗಿಯೂ ಪರಿಣಾಮಗೊಳಿಸಿದೆ.

ಶ್ರೀ ಕ್ಷೇತ್ರದ ಆಶ್ರಯದಲ್ಲಿ ಆಗಾಗ್ಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಗಳು, ಶ್ರೀ ಗುರುವರ್ಯರ ಆರಾಧನೆ ಮೊದಲಾದ ಸಂದರ್ಭಗಳಲ್ಲಿ ಪ್ರಸಿದ್ಧ ವಿದ್ವಾಂಸ ರಿಂದ ಉಪನ್ಯಾಸಗಳನ್ನೇರ್ಪಡಿಸಿ ಇಲ್ಲಿ-ಅಲ್ಲಿ ಸಲ್ಲುವ ಶರಣಮಾರ್ಗವೇ ಸಿದ್ಧಿಯನ್ನು ಪಡೆಯುವುದಕ್ಕೆ ಸಾಮಾನ್ಯರಿಗೂ ಸುಲಭಮಾರ್ಗವೆಂಬುದನ್ನೂ ಅನುಷ್ಠಾನ ಯೋಗ್ಯ ವೆಂಬುದನ್ನೂ ಸರ್ವರ ಮನಂಬುಗುವಂತೆ ವಿವರಿಸಲಾಗುತ್ತದೆ. ಯಾವುದೇ ವ್ಯಕ್ತಿ ಜೀವನದಲ್ಲಿ ಸುಖಿಯಾಗಿರಬೇಕಾದರೆ ಸಮತೆ, ಸಂತೃಪ್ತಿ ಹೊಂದಬೇಕಾದರೆ ಯಾವುದಾದರೊಂದು ಮತ ಧರ್ಮದ ತತ್ವಗಳನ್ನು ಅನುಷ್ಠಾನಕ್ಕೆ ತಂದಾಗ ಹೆಚ್ಚು ಸಾಧ್ಯವಾಗುತ್ತದೆ. ಮನುಷ್ಯನ ಮನಸ್ಸು ನಿಜಕ್ಕೂ 'ಮರವೇರಿದ ಮರ್ಕಟ'. ಆದ್ದರಿಂದ ಮಾನವನ ಮನದ ಚಂಚಲತೆ ನೀಗಿ ಮನಸ್ಸನ್ನು ಕೇಂದ್ರೀಕರಿಸಿ ಧರ್ಮದ ತತ್ವದ ಮೂಲಕ ಪ್ರತಿವ್ಯಕ್ತಿಯೂ ದೈವತ್ವವನ್ನು ಪಡೆಯಬಹುದು ಎಂಬುದನ್ನು ಈ

ಕ್ಷೇತ್ರ ಬೋಧಿಸುತ್ತದೆ. ಸಾಮಾನ್ಯ ಜನತೆ ಅಲ್ಪ ಭೋಗದಿಂದ ಕ್ಷಣ ಮಾತ್ರ ಸುಖಿಯಾಗಿ, ನಿರಂತರವಾಗಿ ದುಃಖಿಯಾಗಿ ಬದುಕಿನ ಬವಣೆಯಲ್ಲಿ ತೊಳಲಾಡುತ್ತಿರುವುದನ್ನು ಗಮನಿಸಿಯೇ ಶೂನ್ಯಪೀಠಾಧ್ಯಕ್ಷರಾದ ಅಲ್ಲಮಪ್ರಭುಗಳು "ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ" ಎಂದು ಅಪ್ಪಣೆ ಕೊಡಿಸಿರುವರು. ಅಜ್ಞಾನದ ಅಮಲಿನಲ್ಲಿ ಸಾಮಾನ್ಯ ಜನತೆ ಅಲ್ಪ ಸುಖಕ್ಕಾಗಿ ಹೋರಾಡುತ್ತಿದ್ದಾರೆ. ಇಂತಹ ಜನತೆಗೆ ನೀತಿಬೋಧನೆಯನ್ನು ಶ್ರೀ ಕ್ಷೇತ್ರದ ಅಧಿಪತಿಗಳು ಮಾಡುತ್ತಾ ಬಂದಿದ್ದಾರೆ.

ಶ್ರೀ ಮಠದ ಶಾಖಾ ಮಠಗಳು ಅಂದರೆ ಭಿಕ್ಷದ ಮಠಗಳು ಮೈಸೂರು ಜಿಲ್ಲೆಯ ಚಾಮರಾಜನಗರ, ನಂಜನಗೂಡು, ಕೊಳ್ಳೇಗಾಲ, ಟಿ. ನರಸೀಪುರ, ಮತ್ತು ಎಳಂದೂರು ತಾಲ್ಲೂಕುಗಳ ಹಲವಾರು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆಯಾಗಿವೆ. ಶ್ರೀ ಕ್ಷೇತ್ರವು ಈ ಶಾಖಾಮಠಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿನ ನಿರ್ಗತಿಕರಿಗೆ, ಅವನಾರೇ ಆಗಲಿ, ಲಿಂಗಾಯಿತನಾಗಲಿ, ಹರಿಜನನಾಗಲಿ, ಮುಸ್ಲಿಂ ಆಗಲಿ ಯಾವುದೇ ಧರ್ಮದ ವ್ಯಕ್ತಿಯಾದರೂ, ಅಂತಹವರಿಗೆ ದಾಸೋಹದ ಮೂಲಕ ಅವರ ಹಸಿವನ್ನು ನೀಗಿಸಿ ಅವರ ಮನಸ್ಸನ್ನು ಸಂತೃಪ್ತಿಗೊಳಿಸುತ್ತಿದೆ. ಇದು ನಿಜಕ್ಕೂ ಒಂದು ಅಮೂಲ್ಯವಾದ ಕಾಯಕ. ಏಕೆಂದರೆ ಉಳ್ಳವರಿಂದ ತಂದು ಇಲ್ಲದವರಿಗೆ ಹಂಚುವ ಕಾರ್ಯ ನಿಜಕ್ಕೂ ಮಾನ್ಯವಾದುದು. ಇದು ಒಂದು ರೀತಿಯಲ್ಲಿ ಸಂಪತ್ತಿನ ಅಸಮಾನ ಹಂಚಿಕೆಯನ್ನು ಹೋಗಲಾಡಿಸಿ ಸಮಾನತೆಯನ್ನು ಸಾರುವಲ್ಲಿ ಹೆಚ್ಚು ನೆರವಾಗಿದೆ. ಕ್ಷೇತ್ರವು ಈ ದಿಕ್ಕಿನಲ್ಲಿ ಹಗಲಿರುಳು ಶ್ರಮಿಸುತ್ತಾ ಬಂದಿದೆ.

ಶ್ರೀಮಠದ ವಿದ್ಯಾರ್ಥಿಯಾಗಿ ನಾನು ಕಂಡಂತೆ ಈ ಕ್ಷೇತ್ರವು ಸಾಧಿಸಿರುವ ಕಾರ್ಯ ಪ್ರಶಂಸನಾರ್ಹ, ಏಕೆಂದರೆ ಈ ಕ್ಷೇತ್ರವು ನಡೆಸುತ್ತಿರುವ ವಿದ್ಯಾರ್ಥಿನಿಲಯದಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಸಮಾಜದ ವಿವಿಧ ರಂಗಗಳಲ್ಲಿ ಮತ್ತು ಸರ್ಕಾರದ ವಿವಿಧ ಇಲಾಖೆಗಳಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿಂದ ಹೋದಂತಹ ವಿದ್ಯಾವಂತರು 'ಜನಸೇವೆಯೇ ಜನಾರ್ದನಸೇವೆ' ಎಂದು ಭಾವಿಸಿ ಸಮಾಜದ ಸರ್ವಾಂಗೀಣ ಏಳಿಗೆಗೆ ಶ್ರಮಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಕ್ಷೇಮಾಭ್ಯುದಯಕ್ಕಾಗಿ, ಅವರ ಜ್ಞಾನವಿಕಾಸಕ್ಕಾಗಿ ಶ್ರೀಗಳು, ಬಡವ, ಬಲ್ಲಿದ, ಎಂಬ ಭೇದವೆಣಿಸದೆ 'ಕಾಯೇನ ವಾಚಾ ಮನಸಾ' ದುಡಿಯುತ್ತಿದ್ದಾರೆ. ಏಕೆಂದರೆ ಶ್ರೀಗಳು ಇಂದಿನ ವಿದ್ಯಾರ್ಥಿಗಳೇ ಮುಂದಿನ ಸಮಾಜದ ಮಹತ್ವಪೂರ್ಣವಾದ ಆಸ್ತಿ ಎಂಬ ಭಾವನೆಯುಳ್ಳವರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಶಿಸ್ತು, ಸಂಯಮ, ಆಚಾರ, ವಿಚಾರಗಳನ್ನು ತಿಳಿಸುವುದರಲ್ಲಿ ಶ್ರೀಗಳವರು ತಮ್ಮದೇ ಆದ ವಿಧಾನವನ್ನನುಸರಿಸುತ್ತಾರೆ. ಅವರ ವಾಕ್ಯಗಳು, ಕಹಿಔಷಧವನ್ನು ಸೇವಿಸಿದಂತೆ ಆದರೂ, ಅದು ಅಧರಕ್ಕೆ ಕಹಿ ಉದರಕ್ಕೆ ಸಿಹಿ ಇರುವಂತೆ. ಶ್ರೀಗಳ

ಹಿತವಚನ ವಿದ್ಯಾರ್ಥಿಗಳು ಕೇಳಲಿಕ್ಕೆ ಕಟುವಾದರೂ ಅದರಿಂದ ಮನಸ್ಸಿನ ಮೇಲೆ ಆಗುವ ಪ್ರಭಾವ, ಪರಿಣಾಮ ನಿಜಕ್ಕೂ ಅಮೋಘವಾದುದು.

ಇಂದಿಗೂ ಸಹ ಶ್ರೀ ಕ್ಷೇತ್ರದ ಆಶ್ರಯದಲ್ಲಿ ನಡೆಸುತ್ತಿರುವ ವಿದ್ಯಾರ್ಥಿನಿಲಯದಲ್ಲಿ ಹಲವಾರು ಗ್ರಾಮಾಂತರ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಚೆನ್ನಬಸವಸ್ವಾಮಿಗಳವರನ್ನು ನೆನೆಸಿಕೊಳ್ಳುವುದಂ ಅತಿಮುಖ್ಯ. ಕಾರಣ ಶ್ರೀಗಳು 'ನ ಹಿ ಜ್ಞಾನೇನ ಸದೃಶಂ' ಎಂಬುದನ್ನು ಅಕ್ಷರಶಃ ಪಾಲಿಸುತ್ತಿದ್ದಾರೆ. ಶ್ರೀಗಳವರ ಮಾರ್ಗದರ್ಶನದಲ್ಲಿ ಮುಂದೆಯೂ ವಿದ್ಯಾರ್ಥಿಗಳು ವಿದ್ಯಾವಂತರಾಗಿ, ಉತ್ತಮ ನಾಗರಿಕರಾಗಿ, ಸತ್ಪ್ರಜೆಗಳಾಗಿ ಸಮಾಜದ ಏಳ್ಗೆಗೆ ಪ್ರಯತ್ನಿಸುತ್ತಾರೆ ಎಂಬ ಭರವಸೆ ಈ ಕ್ಷೇತ್ರದ ವಿದ್ಯಾರ್ಥಿಯಾಗಿದ್ದ ನನಗಿದೆ.

ಕಣ್ಣು ಕಾಲು ಎರಡುಳ್ಳವ ದೂರ ಎಯ್ದುವನಲ್ಲದೆ
ಕಣ್ಣು ಕಾಲು ಎರಡರೊಳಗೊಂದಿಲ್ಲದವನು
ದೂರವೈಯ್ದಲರಿಯನೆಂಬಂತೆ ;
ಜ್ಞಾನರಹಿತನಾಗಿ ಕ್ರಿಯನೆಷ್ಟು ಮಾಡಿದಡೇನು ?
ಅದು ಕಣ್ಣಿಲ್ಲದವನ ನಡೆಯಂತೆ ;
ಕ್ರಿಯೆ ರಹಿತನಾಗಿ ಜ್ಞಾನಿಯಾದೊಡೇನು ?
ಅದು ಕಾಲಿಲ್ಲದವನ ಇರವಿನಂತೆ ;
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವ ಬೆರಸುವಡೆ
ಜ್ಞಾನ ಕ್ರಿಯೆ ಎರಡೂ ಬೇಕು.

ಸ್ವತಂತ್ರಸಿದ್ಧಲಿಂಗೇಶ್ವರರು.

0—0

ಮಲ್ಲನಮೂಲೆಯ ಮಹಾಬೆಳಗು

ಶ್ರೀಮತಿ ಜಗದಂಬಾ ಮಲ್ಲೇದೇವರು ಎಂ.ಎ;ಡಿಪ್–ಇನ್–ಎಪಿಗ್ರಫಿ

ವಿಶ್ವದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಅವಲೋಕಿಸಿದಾಗ ಭಾರತದೇಶ ಅತ್ಯಂತ ಪ್ರಾಚೀನಕಾಲದಲ್ಲಿಯೂ ಕ್ರಾಂತದರ್ಶಿಗಳ, ದ್ರಷ್ಟಾರರ, ಅನುಭಾವಿಗಳ, ಮಹಾವಿಭೂತಿಗಳ, ಆಚಾರ್ಯರ, ಸಮಾಜ ಸುಧಾರಕರ ಪುಣ್ಯ ಭೂಮಿಯಾಗಿ ಧರ್ಮ, ದರ್ಶನ, ಸಂಸ್ಕೃತಿ, ಅನುಭಾವ ಸಾಹಿತ್ಯ ಮೊದಲಾದವುಗಳಿಗೆ ಅನರ್ಘ್ಯ ಕಾಣಿಕೆಯನ್ನಿತ್ತಿರುವುದನ್ನು ಅವಲೋಕಿಸಬಹುದಾಗಿದೆ.

ಭಾರತದ ಅವಿಭಾಜ್ಯ ಅಂಗವಾದ ಕರ್ನಾಟಕ, ಶಕ್ತಿ ವಿಶಿಷ್ಟಾದ್ವೈತ, ದ್ವೈತ, ಈ ಧರ್ಮಗಳ ಉಗಮಕ್ಕೆ ಆಶ್ರಯವಿತ್ತು, ಅದ್ವೈತ, ವಿಶಿಷ್ಟಾದ್ವೈತ ಧರ್ಮಗಳ ಪ್ರವರ್ಧನೆಗೆ ಪ್ರೋತ್ಸಾಹವಿತ್ತು, ಜೈನ, ಬೌದ್ಧ, ಇಸ್ಲಾಂ, ಕ್ರೈಸ್ತ ಮೊದಲಾದ ಧರ್ಮಗಳಿಗೂ ಆಶ್ರಯವಿತ್ತು, ವಿವಿಧ ಧರ್ಮ ಮತ್ತು ಸಂಸ್ಕೃತಿಗಳ ಸಾಮರಸ್ಯದ ನೆಲೆವೀಡಾಗಿದೆ. ಇಂತಹ ಪಾವನಭೂಮಿಯಾದ ಕರ್ನಾಟಕದಲ್ಲಿ ಬಸವಾದಿ ಶರಣರು ೧೨ನೆಯ ಶತಮಾನದಲ್ಲಿ, ಇತಿಹಾಸದಲ್ಲೇ ಅಭೂತಪೂರ್ವವಾದ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ವೈಚಾರಿಕ, ಆರ್ಥಿಕ, ಕ್ರಾಂತಿಯನ್ನೆಸಗಿದರು. ಆ ವಿಭೂತಿ ಪುರುಷರು ತಾವೇ ಸ್ವತಃ ಆಚರಿಸಿ ಅರುಹಿದ ಉದಾತ್ತ ತತ್ತ್ವಗಳನ್ನು, ಆಚಾರಗಳನ್ನು ಜನತೆಗೆ ತಿಳಿಸಲು ವೀರಶೈವ ಮಠಗಳು ನಾಡಿನ ಮೂಲೆಮೂಲೆಗಳಲ್ಲಿ ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಮೈಸೂರು ಜಿಲ್ಲೆಯ ಸುಪ್ರಸಿದ್ಧ ಮಠಗಳಲ್ಲಿ ಒಂದಾದ ಶ್ರೀ ಮಲ್ಲನಮೂಲೆ ಮಠವು ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಬೆಳೆಸಿಕೊಂಡಿದೆ.

ಅಘಟಿತ ಘಟನಾಶೀಲರೂ, ಪರಮಯೋಗಿಗಳೂ ಆದ ಶ್ರೀ ಶ್ರೀ ಆದಿ ಗುರು ಕಂಬಳೇಶ್ವರರಿಂದ ಶ್ರೀ ಮಲ್ಲನಮೂಲೆ ಮಠವು ಸಂಸ್ಥಾಪಿಸಲ್ಪಟ್ಟಿತು. ಇಂತಹ ಮಹಿಮಾಶೀಲರ ಬಗೆಗೆ ಯಾವುದೇ ಖಚಿತ ಹಾಗೂ ಲಿಖಿತ ಆಧಾರಗಳಿಲ್ಲದ್ದರಿಂದ ಪರಂಪರಾಗತವಾಗಿ ಬಂದ ಜನವಾಹಿನಿಯ ಜನಮಾನಸಸಾಗರದ ಅಡಿಯಲ್ಲಡಗಿಹ ಮುತ್ತುರತ್ನಗಳನ್ನು ಆಯ್ದು ಅಣಿಗೊಳಿಸಿದ ಈ ಲೇಖನ ಆದಿ ಗುರು ಕಂಬಳೇಶ್ವರರ ಕಂಠಮಾಲೆಯಾಗಲು ಸಿದ್ಧವಾಗಿದೆ.

ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಿಪಥವ ತೋರಬಂದವರು

ಅಜಗಣ್ಣನ ಸೋದರಿ ಮುಕ್ತಾಯಿ ಮುಕ್ತಿಮಾರ್ಗಾಪೇಕ್ಷಿ. ಅಲ್ಲಮಪ್ರಭು ಗಳಾದರೋ ಭಕ್ತೋದ್ಧಾರಕಾಯಕವನ್ನು ಕೈಗೊಂಡು, ಚರಜಂಗಮನಾಗಿ ಸುಳಿದ ಸುಳುಹನ್ನೆಲ್ಲ ಪಾವನ ಮಾಡುತ್ತ ಹೊರಟವರು. ಭಕ್ತರ ಕರೆಗೆ ಓಗೊಡುವ ಭಗವಂತ ನಂತೆ ; ಅಣ್ಣ ಅಜಗಣ್ಣನು ಲಿಂಗೈಕ್ಯನಾದುದರಿಂದ ಆಶಿಯಾಗಿ ದುಃಖಿಸುತ್ತಿರುವ ಸಾಧಕಳಾದ ಮುಕ್ತಾಯಕ್ಕನನ್ನು ಸಂತೈಸಿ, ಆಕೆಗೆ ನಿಜಮಾರ್ಗವರುಹಲು ಬರುತ್ತಾರೆ ಅಲ್ಲಮಪ್ರಭು. ಅವರೀರ್ವರ ಸಂಭಾಷಣೆಯಲ್ಲಿ, 'ನೀನು ಯಾರು ?' ಎಂಬ ಮುಕ್ತಾ ಯಕ್ಕನ ಪ್ರಶ್ನೆಗೆ ಅಲ್ಲಮಪ್ರಭು ಹೀಗೆ ಉತ್ತರಿಸುತ್ತಾರೆ.

ಶರಣು ಶರಣಾರ್ಥಿ ಎಲೆ ತಾಯೆ,
ಧರೆಯಾಕಾಶ ಮನೆಗಟ್ಟದಂದು,
ಹರಿವನಿಲ, ಅಗ್ನಿಜಲ ಮೊಳೆದೋರದಂದು ಹುಟ್ಟಿದಳೆಮ್ಮವ್ವೆ
ಅದಕ್ಕೆ ಮುನ್ನವೇ ಹುಟ್ಟದೆ ಬೆಳೆದನೆಮ್ಮಯ್ಯ,
ಈ ಇಬ್ಬರ ಬಸುರಲ್ಲಿ ಬಂದೆ ನಾನು
....

ಅಲ್ಲಮನ ಉತ್ತರದಂತೆಯೇ ಇವೆ, ಆದಿ ಕಂಬಳೇಶ್ವರರ ಪೂರ್ವವೃತ್ತಾಂತವನ್ನು ಅರಿಯ ಹೊರಟವರಿಗೆ ದೊರಕುವ ಉತ್ತರ, ಒಟ್ಟಿನಲ್ಲಿ ಆದಿ ಕಂಬಳೇಶ್ವರರು ಚರ ಜಂಗಮರಾಗಿ, ನಾಡಿನ ಉದ್ದಗಲಕ್ಕೂ ಸಂಚರಿಸಿ, ಭಕ್ತೋದ್ಧಾರವನ್ನೆಸಗಿ ಜನರಲ್ಲಿ ಧರ್ಮಜಾಗೃತಿಯನ್ನುಂಟುಮಾಡಿ, ಷಟ್‌ಸ್ಥಲಚಕ್ರವರ್ತಿ ಚೆನ್ನಬಸವಣ್ಣನವರ ಉಕ್ತಿಗೆ ನಿದರ್ಶನರಾಗಿ "ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಿಪಥವ ತೋರಿದರು."

ಕಣ್ಣರಿಯದಿದ್ದರೂ ಕರುಳರಿಯದೆ

ಇತ್ತ ಮಲ್ಲನಮೂಲೆಯಲ್ಲಿ ಪರಮಗುರು ನಿರಂಜನಮೂರ್ತಿ ಹಾಗೂ ಅವರ ಶಿಷ್ಯ ಕಾಯಕದ ಮಲ್ಲಯ್ಯ, ಕಾಯಕನಿರತರಾಗಿ ವೀರಶೈವ ಧರ್ಮದ ಬೀಜವನ್ನು ಜನಮನದಲ್ಲಿ ಬಿತ್ತುವರು. ಅಗೋ ! ಅದೇ ತಾನೆ ಆ ಬೀಜ ಮೊಳಕೆ ಒಡೆದು ಭೂಮಿ ಯಿಂದ ಮೇಲೆ ಬಂದಿದೆ. ಆಗ ಅದರ ಸಂರಕ್ಷಣೆ ಅತ್ಯವಶ್ಯಕ. ಏಕೆಂದರೆ ಮುಂದೆ ಅದು ಸೊಂಪಾಗಿ ಬೆಳೆದು, ಜನಮನಕ್ಕೆ ತಂಪನ್ನು ನೀಡುವ ಹೆಮ್ಮರವಾಗಬೇಕೆಂಬ ಹೆಬ್ಬಯಕೆ ಆ ಗುರುವರ್ಯರದು. ಅವರಿಗಾದರೋ ಕಾಲನ ಕರೆ ಸನ್ನಿಹಿತವಾಗು ತ್ತದೆ. ತಾವು ಬಿತ್ತಿ ಮೊಳಕೆವಡೆದ ಸಸಿಗೆ ಭದ್ರವಾದ ಬೇಲಿ ಹಾಕಿ, ಸುಮಧುರ ಫಲ ವನ್ನು ಭಕ್ತಕೋಟಿಗೆ ಉಣಬಡಿಸುವ ಶ್ರೀ ಗುರುವಿನ ಆಗಮನದ ಹಂಬಲದಲ್ಲಿದ್ದಾರೆ. "ಕಣ್ಣರಿಯದಿದ್ದಡೇಂ ಕರುಳರಿಯದೆ", ಮಹಾತ್ಮರ ಮನದ ಅಭೀಪ್ಸೆ ಮಣ್ಣಾ ಗುವುದೆ ? ಅವರ ಸತ್ಯಸಂಕಲ್ಪ ಸಿದ್ಧಿಸದೆ ? ಇಲ್ಲ ಇಲ್ಲ, ಅದೋ ! ಆದಿಕಂಬಳೇಶ್ವ ರರು ಕರುವನರಸಿ ಬರುವ ಕವಿಲೆಯಂತೆ, ಕಪಿಲಾ ತಟಕ್ಕೆ ಬರುತ್ತಿದ್ದಾರೆ, ಮರ್ತ್ಯಕ್ಕೂ

ಮಹಕ್ಕೊ ನಿಚ್ಚಣಿಕೆಯಾಗಿ ಭಕ್ತಿಸೋಪಾನ ನಿರ್ಮಿಸಿ ಭಕ್ತೋದ್ಧಾರಗೈಯಲು ಆಗಮಿಸುತ್ತಾರೆ.

ಪಂಚಲಿಂಗದ ಪರಿಸರದಲ್ಲಿ

"ದಕ್ಷಿಣ ಕಾಶಿ" ಎನಿಸಿದ ನಂಜನಗೂಡು ನಂಜುಂಡೇಶ್ವರನ ನೆಲೆವೀಡು. ಇಂತಹ ಪುಣ್ಯಕ್ಷೇತ್ರಕ್ಕೆ ಅತಿಸಮೀಪದಲ್ಲಿಯೇ ಅಂದರೆ ಅದರ ವಾಯುವ್ಯಕ್ಕೆ ಸುಮಾರು ಎರಡು ಮೈಲಿಗಳ ದೂರದಲ್ಲಿ ಕಾಯಕದ ಮಲ್ಲಯ್ಯನ ಸಾಧನಾ ಭೂಮಿಯಾಗಿದ್ದು, ಅನಂತರ 'ಮಲ್ಲನಮೂಲೆ' ಎಂಬ ಅಭಿಧಾನದಿಂದ ಸುಪ್ರಸಿದ್ಧವಾದ ಮಲ್ಲನಮೂಲೆ ಮಠವಿದೆ. ಇಲ್ಲಿ ಪ್ರಕೃತಿ ಬೀಡುಬಿಟ್ಟಿದೆ. ಎತ್ತ ನೋಡಿದಡತ್ತ ವಿವಿಧ ವೃಕ್ಷಗಳು, ವನರಾಜಿಗಳೇ ಕಂಗೊಳಿಸುತ್ತಿವೆ. ಪಕ್ಕದಲ್ಲಿಯೇ ಕಪಿಲಾ ನದಿಯು ಹರಿಯುತ್ತ, ತನ್ನ ಮೃದು ಮಧುರ ಮಂಜುಳ ನಿನಾದದಿಂದ ಈ ವನಪ್ರದೇಶವನ್ನು ಮತ್ತಷ್ಟು ರಮ್ಯಗೊಳಿಸಿದ್ದಾಳೆ. ಕಪಿಲೆಯ ಮೇಲೆ ಹಾಯ್ದು ತಂಗಾಳಿ ಅದರ ಶೈತ್ಯವನ್ನು ಹೊಂದಿ, ವನಪ್ರದೇಶದಲ್ಲಿ ಬೀಸಿ ಅಲ್ಲಿಯ ವಿವಿಧ ಗಿಡ ಮರ ಬಳ್ಳಿ ಫಲಗಳ ಸುಮಧುರ ಸುಗಂಧವನ್ನು ಪೂಸಿಕೊಂಡು ಬೀಸುತ್ತಿದೆ. ಅಲ್ಲಲ್ಲಿ ಖಗ ಮೃಗಗಳು ಸಂಚರಿಸುತ್ತ, ತಮ್ಮದೇ ಆದ ಧ್ವನಿಗೈಯುತ್ತ ವಿಹರಿಸುತ್ತಿವೆ. ಅಲ್ಲಲ್ಲಿ ಚಿಕ್ಕ ಚಿಕ್ಕ ಮಲೆಗಳ ಸಾಲು ಕಂಡು ಬರುತ್ತಿದೆ. ಇದರ ಮಧ್ಯದಲ್ಲಿದೆ ಪಂಚಲಿಂಗನ ಗುಡಿ. ಅದೋ ನೋಡ ! ಪಂಚಲಿಂಗನ ಗುಡಿಯ ಪರಿಸರವೆಲ್ಲ ತನ್ನಲ್ಲಿಗೆ ಬರುವ ಶ್ರೀ ಕಂಬಳೇಶ್ವರ ದ್ವಯರ ಸ್ವಾಗತಕ್ಕೆ ಸಿದ್ಧಗೊಂಡಂತೆ ಕಂಗೊಳಿಸುತ್ತಿದೆ. ನಿರಂಜನ ಮೂರ್ತಿಗಳ ಹಾಗೂ ಕಾಯಕದ ಮಲ್ಲಯ್ಯಗಳ ಸತ್‌ಸಂಕಲ್ಪದಂತೆ ಶ್ರೀ ಶ್ರೀ ಕಂಬಳೇಶ್ವರದ್ವಯರು, ಆಗಮಿಸುತ್ತಾರೆ. ಈ ಗುರುವರ್ಯರ ಆಗಮನ ಈ ಭಾಗದ ಭಾಗ್ಯೋದಯ. ಪಂಚಲಿಂಗ ಪರಿಸರದ ಪುಣ್ಯದ ಪೂರ್ಣೋದಯ. ಪ್ರಕೃತಿಮಾತೆಯ ಮಡಿಲಾದ ಈ ತಾಣ ಅವರ ತಂಗುದಾಣವಾಯಿತು.

ಭಕ್ತಜನಮನೋಮಂದಾರ

'ಬಸವನಪುರ, ಈ ಹೆಸರಿನ ಔಚಿತ್ಯವನ್ನಾದರೂ ನೋಡಿ ! ಅಂದಿನ ಬಸವ ಕಲ್ಯಾಣದಂತೆ ಶಾಂತವೂ, ಗಂಭೀರವೂ, ಪಾವನವೂ ಆದ ಪುರವೆನಿಸಿದೆ. ಇಂತಹ ಪುರದೊಳಗೆ,

> "ಕೃಷಿ ಕೃತ್ಯ ಕಾಯಕದಿಂದಾದಡೇನು ?
> ತನು ಮನ ಬಳಲಿಸಿ ತಂದು ದಾಸೋಹವ ಮಾಡುವ
> ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ,
> ಅದೆಂತೆನೆ : ಆತನ ತನು ಶುದ್ಧ, ಆತನ ಮನ ಶುದ್ಧ
> ಆತನ ನಡೆ ಶುದ್ಧ, ನುಡಿಯೆಲ್ಲ ಪಾವನವು !
> ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು
> ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು

ಲಿಂಗಾರ್ಚನೆಯು ಮಾಡುವ ಜಂಗಮವೇ ಜಗತ್ಪಾವನ
ಇಂತಪ್ಪನವರ ನಾನು ನೆರೆ ನಂಬಿ
ನಮೋ ನಮಃ ಎಂಬೆನಯ್ಯಾ, ಕೂಡಲಸಂಗಮದೇವಾ.

ಎಂಬ ಬಸವಣ್ಣನವರ ನುಡಿಗೆ ಸಾಕ್ಷಿಯೋ ಎಂಬಂತೆ ಇದ್ದಾರೆ ಶಂಭುಲಿಂಗೇಗೌಡರು. ನೇಗಿಲಯೋಗಿಯಾಗಿ ಕೃಷಿಕಾಯಕ ಮಾಡುತ್ತಾ ಶರಣರ ಬರವನ್ನು ನಿರೀಕ್ಷಿಸುತ್ತಿದ್ದಾರೆ. ಕಾಯಕನಿರತರಾಗಿ ಶರಣಸೇವಾತತ್ಪರರಾಗಿ, ಭಕ್ತಿಭಾವೋಪೇತರಾಗಿ ಬಸವನಪುರದ ಮುಖ್ಯರಲ್ಲಿ ಒಬ್ಬರಾಗಿ ಶೋಭಿಸುತ್ತಿದ್ದಾರೆ. ಈ ಸದ್ಭಕ್ತರ ಭಾಗ್ಯದ ಬಾಗಿಲು ತೆರೆಯುವ ಕಾಲ ಸನ್ನಿಹಿತವಾಯಿತು. ಅಂದು ತಮ್ಮ ಕಾಯಕ ಮುಗಿಸಿ ಶಿವನ ಧ್ಯಾನಮಾಡುತ್ತ ಮಾಡುತ್ತ ನಿದ್ರಾಪರವಶರಾಗಿದ್ದಾರೆ. ಆಗ ಅವರ ಕನಸಿನಲ್ಲಿ ದೇವನ ದಿವ್ಯವಾಣಿ ಇಂತು ಮೊಳಗುತ್ತದೆ. "ಏಳು! ಶಂಭುಲಿಂಗ! ಇದೋ ನಿನ್ನ ಊರ ಸಮೀಪವಿರುವ ಪಂಚಲಿಂಗನ ಗುಡಿಯಲ್ಲಿ ಸೋದರರೀರ್ವರು ತಂಗಿದ್ದಾರೆ. ಅವರಾದರೋ ಶಂಭುವಿನ ಆಣತಿಯನ್ನು ಪಾಲಿಸಲು ಭುವಿಗೆ ಬಂದಿರುವ ಮಹಿಮಾನ್ವಿತರು. ಅವರ ಬರುವಿಕೆ ನಾಡಿನ ಭಾಗ್ಯೋದಯ. ಏಳು, ಸತ್ಕರಿಸು, ಅವರಿಗಿಲ್ಲಿರಲು ಅನುವು ಮಾಡಿಕೊಡು" ಎಂಬ ಮಾತು ಹಾಲಿಗೆ ಸಕ್ಕರೆ ಬೆರೆತಂತೆ, ಚಿನ್ನಕ್ಕೆ ಮೆರಗು ಬಂದಂತೆ, ಸುಂದರ ಪುಷ್ಪಕ್ಕೆ ಸುವಾಸನೆ ಸೇರಿದಂತೆ, ಭಕ್ತಿಸಂಪನ್ನರಾದ ಶಂಭುಲಿಂಗೇಗೌಡರಿಗೆ ಹರುಷದ ಹೊನಲನ್ನೇ ಹರಿಸುತ್ತದೆ. ಎಚ್ಚೆತ್ತು ನೋಡುತ್ತಾರೆ, ಆಗಲೇ ರವಿಯ ಆಗಮನವನ್ನು ಸ್ವಾಗತಿಸಲು ದಿಕ್ ದಿಗಂತಗಳು ಸಜ್ಜುಗೊಂಡಿವೆ. ಪ್ರಕೃತಿಯೆಲ್ಲ ನವ ಚೈತನ್ಯಗೊಂಡು, ಯಾವುದೋ ದಿವ್ಯ ಸಂದೇಶವನ್ನು ನಾಡಿಗೆ ಅರುಹಲು ಸಿದ್ಧಗೊಂಡಂತಿದೆ. ಇಂತಹ ಮಂಗಳಕರ ಬ್ರಾಹ್ಮೀಮುಹೂರ್ತದಲ್ಲಿ ಮೊಳಗಿದ ದೇವವಾಣಿ ಸತ್ಯವಾಗಲೇಬೇಕು. ಈಗಲೇ ಹೋಗುವೆ. ಆ ಸೋದರರೀರ್ವರ ಕಾಲಿಗೆ ಬಿದ್ದು ಅವರನ್ನು ಆದರಿಸುವೆ. ನನ್ನ ಊರಿಗೆ ಅವರನ್ನು ಕರೆದುಕೊಂಡು ಬಂದು ಅವರ ಪಾದಧೂಳಿಯ ಸ್ಪರ್ಶದಿಂದ ನನ್ನ ಊರು, ನನ್ನ ಮನೆ, ಮನ, ಎಲ್ಲವನ್ನೂ ಪುನೀತವನ್ನಾಗಿ ಮಾಡುವೆ, ಎಂದು ಪಂಚಲಿಂಗದ ಗುಡಿಯತ್ತ ಕೂಡಲೇ ಹೊರಡುವರು.

ಹೀಗೆ ಹೊರಟ ಶಂಭುಲಿಂಗೇಗೌಡರಿಗೆ ಪಕ್ಕದ ಪಂಚಲಿಂಗದ ಗುಡ್ಡವೇ ಬಹುದೂರವಾಗಿ ಕಾಣುತ್ತದೆ, ಕಲ್ಲುಮುಳ್ಳುಗಳೆನ್ನದೆ ಬೇಗ ಬೇಗ ದಾರಿ ಸವೆಸಿ, ಗುಡ್ಡಕ್ಕೆ ಬಂದು ನೋಡುತ್ತಾರೆ! ಶಿವಯೋಗ ಸಾಧನೆಯಿಂದ ಸಿದ್ಧಿ ಪಡೆದ ಎರಡು ದಿವ್ಯಮೂರ್ತಿಗಳ ದರ್ಶನವಾಗುತ್ತದೆ. ಕೂಡಲೆ ಸಾಷ್ಟಾಂಗ ಪ್ರಣಾಮ ಮಾಡಿ ಹರ್ಷ ಪುಲಕಿತರಾಗಿ ಮೈಯೆಲ್ಲಾ ಕಣ್ಣಾಗಿ ತದೇಕಚಿತ್ತದಿಂದ ಅವರನ್ನು ನೋಡುತ್ತಿದ್ದಾರೆ, ಶಂಭುಲಿಂಗೇಗೌಡರು. ಶಿವಯೋಗಿದ್ವಯರ ದಿವ್ಯದರ್ಶನದಿಂದ ಶ್ರೀಗೌಡರ ಮಾನಸಮಂದಾರಪುಷ್ಪವರಳಿ ಘಮಘಮಿಸುತ್ತದೆ. ಹರ್ಷಪುಲಕಿತರಾದ ಆನಂದಾತಿ

ರೇಕದ ತೊದಲನುಡಿಯಿಂದ ತಮ್ಮ ಮನೆಗೆ ಆಗಮಿಸಬೇಕೆಂದು ಬಿನ್ನಹ ಮಾಡುತ್ತಾರೆ. ಆ ಸೋದರದ್ವಯರು ಶಂಭುಲಿಂಗನ ಭಕ್ತಿಯ ಕರೆಗೆ ಓಗೊಟ್ಟು, ಆತನ ಅಪೇಕ್ಷೆಯಂತೆ ಅವರ ಮನೆಯಲ್ಲಿ ಸತ್ಕಾರವನ್ನು ಸ್ವೀಕರಿಸುತ್ತಾರೆ. ತದನಂತರ ಶಂಭುಲಿಂಗೇಗೌಡರು ಪಂಚಲಿಂಗದ ಪರಿಸರದಲ್ಲಿಯೇ ಒಂದು ಪರ್ಣಕುಟಿಯನ್ನು ನಿರ್ಮಿಸಿ, ಅಲ್ಲೇ ನೆಲೆಸು ವಂತೆ ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತಾರೆ. ಪಂಚಮಪುರುಷಾರ್ಥವಾದ ಭಕ್ತಿಯ ಕರೆಗೆ ಓಗೊಡುವ ಪರಶಿವನಂತೆ, ಸದ್ಭಕ್ತನ ಭಕ್ತಿಬಿನ್ನಹ ಹಾಗೂ ಕಾಯಕದ ಮಲ್ಲಯ್ಯ ಮತ್ತು ಅವರ ಶ್ರೀ ಗುರುವಿನ ಸತ್ಯಸಂಕಲ್ಪಕ್ಕೆ ಮಣಿದ ಶ್ರೀಗುರು ಕಂಬಳೀ ಶ್ವರರು ಅಲ್ಲೆ ನೆಲಸುತ್ತಾರೆ.

ಮುಕ್ತಿಕ್ಷೇತ್ರ ಮಲ್ಲನ ಮೂಲೆ

ಈ ಸುಕ್ಷೇತ್ರಕ್ಕೆ 'ಮಲ್ಲನ ಮೂಲೆ' ಎಂಬ ಹೆಸರು ಬಂದುದೂ ಒಂದು ಪವಾಡವೇ. ಗುರುನಿರಂಜನರ ಕಾರುಣ್ಯದ ಕಂದನಾಗಿ ತನ್ನ ಘನಮನದ ಮಹಿಮೆಯಿಂದ ಅಂದು ಕಾಯಕ ಮಲ್ಲಯ್ಯನೆನಿಸಿ ದಾಸೋಹಕಾರ್ಯನಿರತರಾಗುತ್ತಾರೆ ಮಲ್ಲಯ್ಯನವರು. ಕಲ್ಯಾಣದಲ್ಲಿ ಬಸವಣ್ಣನವರು ತಮ್ಮ ದಾಸೋಹ ಕಾರ್ಯದಿಂದ ಪುನೀತರಾದಂತೆ. ಮಲ್ಲಯ್ಯನವರೂ ತಮ್ಮ ಹಾಗಕಾಯಕದಿಂದ ಅಂಬಲಿ ಅಟ್ಟು, ಹುರುಳಿ ಬೇಯಿಸಿ ಸರ್ವ ರಿಗೆ ನೀಡಿ, ಹಾಗೆ ಅಣಿಗೊಳಿಸಿದ ಪ್ರಸಾದವನ್ನು ಸೇವಿಸುವವರ ಬಯಕೆಗನುಗುಣವಾದ ಭಕ್ಷ್ಯ ಭೋಜ್ಯಗಳ ಸವಿಯನ್ನೀಯುವಂತೆ ಮಾರ್ಪಡಿಸಿ, ಶರಣ ಮಲ್ಲಯ್ಯನೆನಿಸಿದರು. ವೀರಶೈವ ತತ್ತ್ವಗಳಾದ ಕಾಯಕ, ದಾಸೋಹ, ಇತ್ಯಾದಿಗಳನ್ನು ಸರ್ವರೀತಿಯಲ್ಲೂ ಅನುಷ್ಠಾನಕ್ಕೆ ತಂದು ಈ ಕ್ಷೇತ್ರದ ಹಿರಿಮೆಗೆ ಕಾರಣರಾದವರು ಮಲ್ಲಯ್ಯನವರು.

ಅನಂತರ ಶ್ರೀಮನ್ನಿರಂಜನ ಗುರುಕಂಬಳೀಶ್ವರರು ಭಕ್ತರ ಕರೆಗೆ ಓಗೊಟ್ಟು ಮಠವನ್ನು ಸಂಸ್ಥಾಪಿಸಿ, ಮಲ್ಲಯ್ಯ ಪ್ರಾರಂಭಿಸಿದ ಕಾಯಕ, ದಾಸೋಹಗಳ ಜೊತೆಗೆ, ಅನೇಕ ಪವಾಡಗಳ ಮೂಲಕ ಜನಮನದಲ್ಲಿ ಭಕ್ತಿಯ ಮುದ್ರೆಯನ್ನೊತ್ತಿ ಜನಸಾಗರ ವನ್ನು ತಮ್ಮತ್ತ ಸೆಳೆದುಕೊಂಡರು. ಶ್ರೀ ಶ್ರೀ ಕಂಬಳೀಶ್ವರರು ಶರಣರು ರೂಪಿಸಿದ ವೀರಶೈವ ಧರ್ಮಜ್ಯೋತಿಯನ್ನು ಒಂದಕ್ಕೆ ಹತ್ತಾಗಿಸಿ, ಹತ್ತಕ್ಕೆ ನೂರಾಗಿಸಿ, ಅದರ ಪ್ರಭೆಯನ್ನು ನಾಡಿನ ಮೂಲೆಮೂಲೆಗಳಲ್ಲಿ ಬೆಳಗಿಸಿದರು. ಶ್ರೀ ಗುರು ವರ್ಯರು ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣೀಸಂಗಮವಾಗಿ ಕಪಿಲಾನದಿಯ ದಡದ ಈ ಮಲ್ಲನ ಮೂಲೆಯನ್ನು ಶಾಶ್ವತ ಅವಿಮುಕ್ತಕ್ಷೇತ್ರವನ್ನಾಗಿಸಿ ಅಜರಾಮರರಾಗಿ ದ್ದಾರೆ.

ಬಿದಿರುಗೂಡದು ನೋಡಾ ಕದಿರುಗೂಡಾದುದ

ಶ್ರೀಗಳವರ ಶ್ರೀಪ್ರಭೆ ಎಲ್ಲ ಕಡೆ ಹಬ್ಬಿ ಹರಡಿದೆ. ಬಿದಿರುಗೂಡಿನ ಮಹಾ ಜನತೆಯಾದರೋ, ಶ್ರೀ ಗುರುವರ್ಯರ ಪಾದಧೂಳಿಯಿಂದ ಪುನೀತರಾಗಲು ಹಾತೊರೆಯುತ್ತಿದ್ದಾರೆ. ಅಲ್ಲಿಯ ಶಿವಬಸಪ್ಪನಾದರೋ ಮಹಾಸದ್ಭಕ್ತ. ತಮ್ಮಲ್ಲಿಗೆ

ಬರಬೇಕೆಂದು ಶ್ರೀಗಳವರನ್ನು ಬೇಡಿಕೊಂಡಾಗ ಆತನ ಭಕ್ತಿಭಾವದ ಆತಿಥ್ಯಕ್ಕೆ ಅಸ್ತು ಎಂದಿದ್ದಾರೆ ಶ್ರೀಗಳವರು. ಇತ್ತ ಬಿದಿರುಗೂಡಿನ ಮಹಾಜನತೆ ಶಿವಬಸಪ್ಪನನ್ನು ಮುಂದಿಟ್ಟುಕೊಂಡು ಶ್ರೀಗಳವರ ಆಗಮನವನ್ನು ಚಾತಕಪಕ್ಷಿಯಂತೆ ಎದುರುನೋಡುತ್ತಿದೆ. ಅಂದು ಬಿದಿರುಗೂಡು ಕೇವಲ ಬಿದಿರುಗೂಡಾಗದೆ ಕದಿರಗೂಡಾಗಿ ಶೋಭಿಸುತ್ತಿದೆ. ಇತ್ತ ಶ್ರೀಗಳವರು ತಮ್ಮ ಆಶ್ವಾಸನೆಯಂತೆ ಶಿವಬಸಪ್ಪನವರ ಮನೆಗೆ ಆಗಮಿಸಿ, ಲಿಂಗಾರ್ಚನಾ ತತ್ಪರರಾಗಿದ್ದಾರೆ. ಅವರ ದರ್ಶನಾಪೇಕ್ಷೆ ಬಿದಿರುಗೂಡಿನ ಮಹಾಜನತೆಯಷ್ಟನ್ನೇ ಅಲ್ಲ, ಶಿವನ ಕಂಠಾಭರಣನೆನಿಸಿದ ಗೋಧಿನಾಗರಕ್ಕೂ ಉಂಟಾಯಿತೇನೋ ? ಅಷ್ಟು ಜನರ ಮಧ್ಯೆ ತಾನೂ ಯೋಗಿದ್ವಯರ ದಿವ್ಯದರ್ಶನಕ್ಕಾಗಿ ಹಾತೊರೆದು ಸರಸರನೆ ಬಂದು ತನ್ನ ಹೆಡೆ ಬಿಚ್ಚಿ ಬಾಗಿ ಬಾಗಿ ನಮಿಸುತ್ತಿದೆ. ಕೆಲಜನರು ಭಯಭೀತಿಯಿಂದ ಕೂಗಿಕೊಂಡರು, ಮತ್ತೆ ಕೆಲವರು ಅದನ್ನು ಹೊಡೆಯಲುದ್ಯುಕ್ತರಾದರು. ಶ್ರೀಕಂಬಳೇಶ್ವರರು ಕಣ್ತೆರೆದು ನೋಡಿ, ಹಾವನ್ನು ಕೊಲ್ಲಬೇಡಿ. ಕಲ್ಲನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರು, ಈ ವರ್ತನೆ ಸಲ್ಲದು ಎಂದು ಉಪದೇಶಿಸಿ, ''ಎಲೆ, ನಾಗ ! ನಂಜನುಂಡ ನಂಜುಂಡೇಶ್ವರನ ಕಂಠಾಭರಣನೆನಿಸಿದ ನೀನು, ಆ ದೇವನ ಸನ್ನಿಧಿಗೇ ಹೋಗು, ಅದೇ ನಿನಗೆ ನಿಜತಾಣ'' ಎನ್ನುವರು. ಇದೇನಾಶ್ಚರ್ಯ ! ಶ್ರೀಗುರುವಿನುಪದೇಶವನ್ನು ಅಕ್ಷರಶಃ ಪಾಲಿಸುವ ಮಹಾ ಸದ್ಭಕ್ತನಂತೆ ಕೂಡಲೇ ಕಣ್ಮರೆಯಾಯಿತಲ್ಲ. ಅಚ್ಚರಿ ! ಅಚ್ಚರಿ!! ಜನವೆಲ್ಲ ಮೂಕವಿಸ್ಮಿತವಾಗಿ ನಿಬ್ಬೆರಗಿನಿಂದ ನೋಡುತ್ತಿದೆ. ಈ ಮಂಗಳ ಮುಹೂರ್ತದಲ್ಲಿ ಶ್ರೀ ಗುರುವರ್ಯರು 'ದಯವೇ ಧರ್ಮದ ಮೂಲವಯ್ಯ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂಬ ಬಸವಣ್ಣನವರ ಉಕ್ತಿಯನ್ನುದಹರಿಸಿ, ಜೀವನದಲ್ಲಿ ದಯೆ, ಸದ್ಭಕ್ತಿ. ಸದಾಚಾರಗಳನ್ನಳವಡಿಸಿಕೊಳ್ಳಬೇಕೆಂದು ಭಕ್ತಸ್ತೋಮಕ್ಕೆ ಉಪದೇಶಿಸಿದರು,

ಅರ್ಚಕರಿಂದ ಅರ್ಚನೆ

ದೇವದೇವನಾದ ನಂಜುಂಡೇಶ್ವರನ ನೆಲೆವೀಡೇ ನಂಜನಗೂಡು. ಆ ವಿಷಕಂಠನ ವಿರಾಮಸ್ಥಾನ ಮಲ್ಲನಮೂಲೆಗೆ ಪಕ್ಕದಲ್ಲಿಯೇ ಇದೆ. ಶ್ರೀಶ್ರೀ ಕಂಬಳೇಶ್ವರರಾದರೋ ಜಗದೊಡೆಯನಾದ ನಂಜುಂಡೇಶ್ವರನ ದರ್ಶನಾಪೇಕ್ಷಿಗಳಾಗಿ ಆ ಭವ್ಯ ದೇಗುಲವನ್ನು ಒಳಹೊಕ್ಕು, ಭಕ್ತಿಯೇ ರೂಪಾದಂತೆ ಆಗಮಿಸುತ್ತಿದ್ದಾರೆ. ಇನ್ನೇನು ಗರ್ಭಗುಡಿಯ ಬಳಿ ಬಂದು ದೇವನ ದಿವ್ಯ ಸನ್ನಿಧಿಯಲ್ಲಿ ನಿಂದು, ಕಣ್ತುಂಬ ನೋಡಿ, ಮನಸಾರೆ ನೆನೆದು ಪುನೀತರಾಗಬಂದಿದ್ದಾರೆ. ಆದರೆ, ಅಯ್ಯೋ ! ದರ್ಶನಲಾಭ ಅರ್ಚಕರ ಆತುರದ ನಡೆಯಿಂದ ತಪ್ಪಿತಲ್ಲ! ಇದೇನು ಅನ್ಯಾಯ ? ಶಿವಯೋಗಿದ್ವಯರಾದರೋ ಭಕ್ತಿಪರವಶತೆಯಿಂದ ಆ ಅರ್ಚಕರನ್ನು ದೇವರ ದರ್ಶನಕ್ಕಾಗಿ ಮತ್ತೊಮ್ಮೆ ಬಾಗಿಲು ತೆರೆಯುವಂತೆ ವಿನಂತಿಸಿಕೊಳ್ಳುತ್ತಾರೆ. ಅರ್ಚಕರಿಗಾದರೋ ತಮ್ಮದೇ ಆತುರ, ಬಂದ ಭಕ್ತರ ಪರಿಯನವರೆತ್ತ ಬಲ್ಲರು ? ''ಆಗದಾಗದು ವೇಳೆ ಮೀರಿತು

ಎಂದು ಹೊರಟೇ ಬಿಟ್ಟರು ಆ ಸ್ಥಳದಿಂದ. "ನೊಂದ ನೋವ ನೋಯದವರೆತ್ತ ಬಲ್ಲರೋ" ? ಹೀಗೆ ಖಿನ್ನರಾದ ಯೋಗಿದ್ವಯರು ಅಲ್ಲೇ ಇದ್ದಾರೆ, ಇತ್ತ ಅರ್ಚಕರು ಆತಂರದಿಂದ ಕೆಲಹೆಜ್ಜೆ ಇಡುವಷ್ಟರಲ್ಲಿ ಕಣ್ಣುಕಾಣದಾಯಿತು. ಆಗ ಅವರು ಅಯ್ಯೋ ಇದೇನು ? ಯೋಗಿದ್ವಯರ ಅಪೇಕ್ಷೆಯನ್ನು ನಿರಾಕರಿಸಿದುದರ ಫಲವೆ? ಏನಾಶ್ಚರ್ಯ ! ಈಗತಾನೆ ಕಾಣುತ್ತಿದ್ದ ಕಣ್ಣುಗಳು ತಮ್ಮ ಕಣ್ಬೆಳಕನ್ನು ಕಳೆದುಕೊಂಡಿವೆ, ಅರಿಯದೆ ತಪ್ಪು ಮಾಡಿದೆವಲ್ಲ. ತ್ರಾಹಿ, ತ್ರಾಹಿ, ತಪ್ಪೆಮ್ಮದು ಕ್ಷಮೆ ನಿಮ್ಮದು, "ಕರುಣೆಯನರಸಿ ಬಂದ ಕಂದನ ಕರುಳು ಕೊಯ್ವರೆ, ಶ್ರೀ ಗುರುವರ್ಯರೆ ರಕ್ಷಿಸಿರಿ, ರಕ್ಷಿಸಿರಿ" ಎಂಬ ಅರ್ಚಕರ ಆರ್ತನುಡಿ ಹಾಗೂ ಅರ್ಚನಾಭಾವಕ್ಕೆ ಮನ ಸೋತು, ಅವರ ತಪ್ಪನ್ನು ಮನ್ನಿಸಿ, ತಮ್ಮ ದಿವ್ಯದೃಷ್ಟಿಯನ್ನು ಅರ್ಚಕರ ದೃಷ್ಟಿಯಲ್ಲಿ ಕೀಲಿಸಲು, ಜ್ಯೋತಿ ಸೋಂಕಿ ಮತ್ತೊಂದು ಜ್ಯೋತಿ ಬೆಳಗನ್ನು ಪಡೆಯುವಂತೆ, ಆ ಅರ್ಚಕರ ಕಂಗಳ ಅಜ್ಞಾನದ ತೆರೆ ಸರಿದು ದೃಷ್ಟಿಲಾಭವಾಗುವುದು. ಧನ್ಯ ! ಧನ್ಯ ! ಗುರುವರ್ಯ ! ಎಂದು ಹೊಗಳಿ ಕೂಡಲೆ ಗರ್ಭಗುಡಿಯ ಬಾಗಿಲನ್ನು ತೆರೆದು ಕಂಬಳೇಶ್ವರರಿಗೆ ದೇವದರ್ಶನ ಮಾಡಿಸಿ ತಾವೂ ಪುನೀತರಾಗುವರು.

ತೇರು ಸಾಗಿತು ನೋಡಾ !

ಅಂದು ನಂಜನಗೂಡಿನ ನಂಜುಂಡೇಶ್ವರನ ದೊಡ್ಡ ತೇರು ನಡೆಯುವುದಿದೆ. ಆ ಭವ್ಯ, ದಿವ್ಯಮೂರ್ತಿಯ ದರ್ಶನಕ್ಕಾಗಿ ಜನಸಾಗರವೇ ನೆರೆದಿದೆ. ಅಲ್ಲಿ ಮೇಲು ಕೀಳೆನ್ನದೆ, ಬಡವ ಬಲ್ಲಿದನೆನ್ನದೆ, ಸ್ತ್ರೀ ಪುರುಷರೆನ್ನದೆ, ಹಸುಳೆ ವೃದ್ಧರೆನ್ನದೆ, ಆಬಾಲ ವೃದ್ಧರಾದಿಯಾಗಿ ಸರ್ವ ಜನಸ್ತೋಮ ಆ ಅಮೃತ ಘಳಿಗೆಗಾಗಿ ಕ್ಷಣವೊಂದು ಯುಗ ವಾಗಿ ನಿರೀಕ್ಷಿಸುತ್ತಿದೆ. ಅದೇನು ವೈಭವ ! ಶೃಂಗರಿಸಲ್ಪಟ್ಟ ಆ ದೇವನನ್ನು ನೋಡಲು ಎರಡು ಕಣ್ಣೇಕೆ, ಸಾವಿರ ಕಣ್ಣಾದರೂ ಸಾಲದು ! ಹೀಗೆ ಶೃಂಗರಿಸಲ್ಪಟ್ಟ ಆ ಆರಾಧ್ಯ ಮೂರ್ತಿಯನ್ನು ತೇರಿನಲ್ಲಿ ಬಿಜಯಂಗೈಸಿದ್ದಾರೆ. ಜನರೆಲ್ಲ ಕಾತುರದಿಂದ ಇನ್ನೇನು ತೇರು ಹೊರಟೇ ಬಿಟ್ಟಿತು, ಅಗೋ ! ನೋಡಿ ನೋಡಿ ಎನ್ನುತ್ತಿದ್ದಾರೆ. ಆದರೆ ಎಷ್ಟು ಹೊತ್ತಾದರು ಒಂದಂಗುಲವೂ ತೇರು ಮುಂದೆ ಸಾಗಲಿಲ್ಲ ! ಆ ತೇರನ್ನು ಎಳೆಯುವಷ್ಟು ಜನಬಲವಿಲ್ಲವೆ ? ಅಥವಾ ಅದಕ್ಕೆ ಕಟ್ಟಿದ ಹಗ್ಗ ಸಾಲದೆ ? ಏನು ಕಾರಣ ? ಜನರಾದರೋ ನಾ ಮುಂದು ತಾ ಮುಂದು ಎಂದು ತೇರು ಎಳೆಯಲು ಸ್ಪರ್ಧೆ ನಡೆಸಿದ್ದಾರೆ. ಅದಕ್ಕೆ ಕಟ್ಟಿರುವ ಹಗ್ಗವೋ, ಆದಿಶೇಷನೇ ಅವತರಿಸಿ ಬಂದಂತೆ ಕಾಣುತ್ತಿದೆ. ಇನ್ನೇನು ಕಾರಣ ತೇರು ಸಾಗದಿರಲು ? ಮುಂದೇನು ಗತಿ ? ನೆರೆದ ಜನ ಚಿಂತಾಸಾಗರದಲ್ಲಿ ಮುಳುಗಿದ್ದಾರೆ. ಒಬ್ಬೊಬ್ಬರದು ಒಂದೊಂದು ಚಿಂತೆ. ಅಷ್ಟರಲ್ಲಿ ಯಾರೋ ಸನಿಹದ ಶ್ರೀಮಠದಲ್ಲಿದ್ದ ಶ್ರೀ ಗುರು ಕಂಬಳೇಶ್ವರರಿಗೆ ಈ ಸುದ್ದಿಯನ್ನು ಮುಟ್ಟಿಸುತ್ತಾರೆ. "ಹರಮುನಿದಡೇಂ ಗುರು ಕಾಯದಿರುವನೆ" ಸುದ್ದಿ ತಿಳಿದ ಕೂಡಲೆ ಶಿವಯೋಗಿವರ್ಯರು ನಂಜನಗೂಡಿಗೆ ಆಗ ಮಿಸಿ, ಶ್ರೀಕಂಠೇಶ್ವರನಿಗೆ ನಮಿಸಿ ತೇರಿನ ಹಗ್ಗವನ್ನು ಸ್ಪರ್ಶಿಸುತ್ತಾರೆ. ಅಗೋ

ತೇರು ಸಾಗಿತು ನೋಡಾ ! ಜನರೆಲ್ಲ ಒಕ್ಕೊರಲಿನಿಂದ ಕೂಗುತ್ತಾರೆ. ಶ್ರೀಕಂಠೇಶ್ವರನ ಕೃಪೆಯು ಮಹಾಪೂರವೇ ಹರಿದು ಬಂದಂತೆ ತೇರು ಸರಾಗವಾಗಿ ಸಾಗಿದೆ. ತಲ್ಲಣಿಸಿದ ಭಕ್ತವೃಂದ ಸಮಾಧಾನದ ನಿಟ್ಟುಸಿರನ್ನು ಬಿಡುತ್ತದೆ. ಭಕ್ತಿಯ ಹೊನಲಲ್ಲಿ ಮಿಂದ ಜನತೆ ಶ್ರೀ ಗುರುಚರಣಕ್ಕೆ ನಮಿಸಿ, ಧನ್ಯತೆಯನ್ನು ಪಡೆಯುತ್ತದೆ.

ಒಳಹೊರಗಿನ ಗೂನ ಗುಣಗೈದ ಗಾರುಡಿಗ

'ಭಕ್ತಿಯಿಲ್ಲದ ಪೂಜೆ. ಒಲವಿಲ್ಲದ ನೇಮ' ಎಂಬ ಅನುಭಾವಿಗಳ ನುಡಿಗೆ ಸಾಕ್ಷಿಯೋ ಎಂಬಂತಿದ್ದಾನೆ ನಂಜುಂಡೇಶ್ವರನ ಅರ್ಚಕನೊಬ್ಬ. ಜಗತ್ತಿನ ಹಿತಕ್ಕಾಗಿ ಹಾಲಾಹಲವನ್ನೇ ತನ್ನೊಳಗಿಟ್ಟುಕೊಂಡು ಜಗದುದ್ಧಾರಗೈದ ಶಿವನ ಪಾದದಲ್ಲೇ ಇಂತಹ ಭಕ್ತಿರಹಿತ ಪೂಜಕನಿರೆ, ಏನ ಹೇಳುವುದು ? ಇಂತಹ ಡಂಭಕನ ಪೂಜೆ ಇನಿತೂ ಪ್ರಯೋಜನವಿಲ್ಲದಂತಿದೆ. ಅವನ ತನು ಗೂನಾಗಿದ್ದುದಷ್ಟೇ ಅಲ್ಲ, ಅವನ ಮನವೂ ಗೂನಾಗಿದ್ದಿತು. ತನುಮನ ಗೂನನಾದ ಆ ಪೂಜಾರಿಗೆ ಕಂಬಳೇಶ್ವರರ ಪೂರ್ಣ ಕೃಪಾದೃಷ್ಟಿ ಬಿದ್ದುದು ಒಂದು ಅದ್ಭುತವೇ ಸರಿ.

ಒಮ್ಮೆ ಕಂಬಳೇಶ್ವರರು ಈ ಅರ್ಚಕನನ್ನು ಸಂಧಿಸುತ್ತಾರೆ. ಆಮೆ ನಡಿಗೆಯಲ್ಲಿ ನಡೆಯುತ್ತಾ, ನಿಂತೂ ನಿಲಲಾರದೆ ಪಡಿಪಡಿಸುತ್ತಿರುವ ಆತನ ಸ್ಥಿತಿಯನ್ನು ಕಂಡು ಕನಿಕರಗೊಂಡು ವಿಚಾರಿಸುತ್ತಾರೆ. ಆಗ ಅವನು ಈ ಗೂನಂಬೆನ್ನು ಬೆನ್ನು ಬಿಡದ ಬೇತಾಳದಂತೆ, ನೆರಳಿನಂತೆ ಕಾಡುತ್ತಿದೆ, ಅದಕ್ಕೆ ಪರಿಹಾರೋಪಾಯ ಕಾಣದೆ ಜುಗುಪ್ಸೆಗೊಂಡಿರುವುದಾಗಿ ತನ್ನ ಅಳಲನ್ನು ತೋಡಿಕೊಳ್ಳುವನು. ಆಗ ಶ್ರೀ ಗುರುವರ್ಯರು ಅಯ್ಯೋ ! ಹುಚ್ಚಪ್ಪ "ನಂಬಿ ಕರೆದಡೆ, ಓ ಎನ್ನನೇ ಶಿವನು" ಭವರೋಗವೈದ್ಯನಾದ ಆ ನಂಜುಂಡೇಶ್ವರನ ಮೇಲೆ ನಂಬಿಕೆ ಇಡದೆ, ಅನ್ಯ ವೈದ್ಯರಿಂದೇನು ಪ್ರಯೋಜನ ? ಬಾಲಕಿ ಕೋಳೂರು ಕೊಡಗೂಸಿನ ಕತೆಯು ಕೇಳಿಲ್ಲವೇ ನೀನು ? ಬೇಡರ ಕಣ್ಣಪ್ಪನ ಭಕ್ತಿಗೆ ಮೆಚ್ಚಿ ತನ್ನ ಕಣ್ಣನ್ನೇ ಇತ್ತ ಆ ನೀಲಕಂಠನ ನಿಜದರಿವನ್ನು ಅರಿಯಲಾರದೆ ಹೋದೆಯಾ ? ಹೋಗು ! ಈಗಲೇ ಹೋಗು. ಜಗದೊಡೆಯ ಶ್ರೀಕಂಠೇಶ್ವರನನ್ನು ನಿನ್ನ ಮನೋಮಂದಿರದಲ್ಲಿ ಸ್ಥಾಪಿಸಿಕೊಂಡು, ಭಕ್ತಿಯಿಂದ ಆತನನ್ನು ಸ್ಮರಿಸುತ್ತ ಮಿಂದೆಯಾದರೆ, ಇನ್ನಿಲ್ಲವಾಗುವುದು ನಿನ್ನ ದೇಹದ ಗೂನು ಎಂದರುಹಿದರು. ಆ ಅರ್ಚಕನು ಕೂಡಲೇ ಶಿವಧ್ಯಾನ ಮಾಡುತ್ತ ಕಪಿಲೆಯಲ್ಲಿ ಮಿಂದು, ನಂತರ ನಿಂತು ನೋಡುತ್ತಾನೆ. ಏನಾಶ್ಚರ್ಯ ! ದೇಹದ ಗೂನು ಕಳೆದಿದೆ. ಆತನ ಬಾಳಿನ ಕತ್ತಲೆ ಅಳಿದಿದೆ. ಕೂಡಲೇ ಓಡೋಡಿ ಬಂದು, ಮಹಾಮಹಿಮ ಕಂಬಳೇಶ್ವರರ ಪಾದಕಮಲಗಳಿಗೆ ಬಿದ್ದು, " ಅಯ್ಯಾ, ಮಹಾತ್ಮಾ, ನೀವು ನನ್ನ ತನುವಿನ ಗೂನನ್ನಷ್ಟೇ ಅಲ್ಲದೆ ಮನದ ಗೂನನ್ನೂ ಗುಣಪಡಿಸಿದ ಗಾರುಡಿಗ ! ಗುರುವೆ ! ಪರಮ ಗುರುವೆ ! ಸದ್ಗುರುವೆ ! ನನ್ನ ಅಜ್ಞಾನ ತಿಮಿರವನ್ನು ಕಳೆದು ಜ್ಞಾನ ಭಾಸ್ಕರನನ್ನು ಬೆಳಗಿಸಿದ ಶಿವಯೋಗಿವರ್ಯರಿಗೆ ನಮೋನಮೋ ಎಂಬೆನಯ್ಯ" ಎಂದು ಕೊಂಡಾಡು

ತ್ತಾನೆ. ಹೀಗೆ ಕಂಬಳೀಶ್ವರರು ದೇವರಲ್ಲಿ ನಂಬಿಕೆ ತ್ರಿಕರಣಪೂರ್ವಕವಾಗಿ ಜನಮನದಲ್ಲಿ ನೆಲೆಸುವಂತೆ ಮಾಡುತ್ತಾರೆ.

ಹುಸಿಮನಕೆ ಭಕ್ತಿಕನ್ನವನಿಕ್ಕಿದ ಕಾರಣಿಕ

ಭೀಮಕವಿಯ ಬಸವಪುರಾಣದಲ್ಲಿ ಬರುವ ಬಸವಣ್ಣನವರ ಅನುಪಮ ವ್ಯಕ್ತಿತ್ವದಂತೆಯೇ, ಪರಮಗುರು ಕಂಬಳೀಶ್ವರರ ವ್ಯಕ್ತಿತ್ವವಿರುವುದು ಕೆಲವು ಘಟನೆಗಳಿಂದ ವ್ಯಕ್ತವಾಗುತ್ತದೆ. ಚಿನ್ನದ ವ್ಯಾಪಾರಿಯೊಬ್ಬ ನಂಜನಗೂಡಿನಿಂದ ಮಲ್ಲನ ಮೂಲೆಯ ಮೂಲಕ ಮೈಸೂರಿಗೆ ಹೊರಟಿದ್ದಾನೆ. ಪಾಪ ! ಅವನೇನು ಬಲ್ಲ ಮುಂದಾಗುವ ಘಟನೆಯನ್ನು, ಹೀಗೆ ಬಂದ ವ್ಯಾಪಾರಿ ಶ್ರೀ ಶ್ರೀಗಳವರನ್ನು ಸಂಧಿಸುತ್ತಾನೆ. ಶ್ರೀಗಳಾದರೋ ತಮ್ಮಾ, ನೀನು ಯಾರು ? ನಿನ್ನ ಕಾಯಕವಾವುದು ? ನೀನಾದರೋ ದಣಿದಂತೆ ಕಾಣುತ್ತಿದ್ದೀಯಾ, ವಿಶ್ರಮಿಸಿಕೊ. ದಣಿವಾರಿಸಿಕೊಂಡ ನಂತರ ಮುಂದೆ ಸಾಗುವಿಯಂತೆ ಎಂದು ಹೇಳಿ, ಆ ಅಭ್ಯಾಗತನನ್ನು ಸತ್ಕರಿಸುವಂತೆ ತಮ್ಮ ಶಿಷ್ಯವೃಂದಕ್ಕೆ ಹೇಳುತ್ತಾರೆ. ವ್ಯಾಪಾರಿಯಾದರೋ ಧನಮದದಿಂದ ತನ್ನ ಮುಂದಿರುವವರು ಯಾರು ? ಅವರ ಮಹಿಮೆ ಎಂತಹುದು ? ಎಂಬುದೊಂದನ್ನೂ ಅರಿಯದೆ, ತಾನು ಬದನೇಕಾಯಿಯ ವ್ಯಾಪಾರಿಯೆಂದು ಸುಳ್ಳು ಹೇಳುತ್ತಾನೆ. ಶ್ರೀಗುರುವರ್ಯರು ಹಾಗೆಯೇ ಆಗಲಿ, ಪ್ರಸಾದ ಸ್ವೀಕರಿಸಿ ನಂತರ ಹೊರಡು ಎಂದು ಹೇಳಿ ತಮ್ಮ ಕಾಯಕದಲ್ಲಿ ಮಗ್ನರಾಗುತ್ತಾರೆ. ಇತ್ತ ವ್ಯಾಪಾರಿ ಗುರುವಿನಾದೇಶದಂತೆ ಪ್ರಸಾದ ಸ್ವೀಕರಿಸಿ ಪಯಣಕ್ಕೆ ಅಣಿಗೊಂಡು ನೋಡುತ್ತಾನೆ. ತನ್ನಲ್ಲಿರುವುದೆಲ್ಲವೂ ಬದನೇಕಾಯಿಯಾಗಿದೆ ! ಹಾ ! ಎಂದು ಚೀರಿ ತನ್ನನ್ನೇ ಮರೆತು ಗೋಳಾಡುತ್ತಾನೆ. ತನ್ನ ತಪ್ಪಿನ ಅರಿವಾಗುತ್ತದೆ. ಕೂಡಲೇ ಶ್ರೀಗಳವರಲ್ಲಿಗೆ ಓಡಿ, ಗುರುವೆ! ಸದ್ಗುರುವೆ ! ಮಹಿಮಾಗುರುವೆ, ತಪ್ಪು ಎನ್ನದು, ಮನ್ನಿಸು ಮನ್ನಿಸು ಎಂದು ಉದ್ದಂಡ ಉರುಳುತ್ತಾನೆ, ಆ ಹುಸಿಮನದ ವ್ಯಾಪಾರಿ. ಗುರುವರ್ಯರಾದರೋ ಆತನ ಹುಸಿಮನಕ್ಕೆ ಭಕ್ತಿಕನ್ನವನಿಕ್ಕಿ ಆತನ ಮನೋಮಂದಿರದಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸಿ ಪುನೀತನನ್ನಾಗಿಸಿದ್ದಾರೆ. ಏನಾಶ್ಚರ್ಯ ! ಬದನೇಕಾಯಿ ಬಂಗಾರವಾಗಿ ಮಾರ್ಪಟ್ಟಿದೆ, ಬಂಗಾರದೊಡನೆ ಮನವೂ ಚೊಕ್ಕ ಬಂಗಾರವಾಗಿ ಮಾರ್ಪಟ್ಟಿದೆ. ಇದೆಲ್ಲವೂ ಶ್ರೀ ಗುರುಕಂಬಳೀಶ್ವರರ ಲೀಲಾವಿನೋದಗಳಲ್ಲೊಂದು.

ಜಲವನೇ ಘಮಘಮಿಪ ಘೃತಗೈದ ಮಹಿಮ

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ರೂಪಿಸಿದ ದಾಸೋಹಕಾರ್ಯ ಅಂದಿನಿಂದ ಇಂದಿನವರೆಗೂ ಬಹುಪಾಲು ವೀರಶೈವ ಮಠಗಳಲ್ಲಿ ನಡೆಯುತ್ತಲೇ ಬಂದಿದೆ. ಇಂತಹ ದಾಸೋಹಕಾರ್ಯವನ್ನು ಮಲ್ಲನ ಮೂಲೆಯ ಮಠವು ತನ್ನ ಪ್ರಾರಂಭದ ಕಾಲದಿಂದ ಇಂದಿಗೂ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದೆ. ಆದಿ ಕಂಬಳೀಶ್ವರರು ಭಕ್ತರ ಭಕ್ತಿಯ ಬೆಳೆಯನ್ನು ಹುಲುಸಾಗಿ ಬೆಳೆಯಲು ಈ ನಿತ್ಯ

'ದಾಸೋಹ'ದ ಜೊತೆಗೆ ವರ್ಷಕ್ಕೊಮ್ಮೆ ತೋಂಟದ ಸಿದ್ಧಲಿಂಗೇಶ್ವರರ ಆರಾಧನೆಯನ್ನು ಮಾಡುತ್ತಿದ್ದರು. ಈ ವಿಶೇಷ ಆರಾಧನೆಗೆ ನಾಡಿನ ಮೂಲೆ ಮೂಲೆಗಳಿಂದ ಮಲ್ಲನ ಮೂಲೆಗೆ ಭಕ್ತಪ್ರವಾಹವೇ ಹರಿದು ಬರುತ್ತಿತ್ತು. ಈ ಸಂದರ್ಭದಲ್ಲಿ ಜ್ಞಾನ ದಾಸೋಹ ಹಾಗೂ ಪ್ರಸಾದ ದಾಸೋಹಗಳು ನಡೆದು ಜನರನ್ನು ಮತ್ತಷ್ಟು ಭಕ್ತಿ ಪುಲಕಿತರನ್ನಾಗಿ ಮಾಡುತ್ತ ಅವರಿಗೆ ನವಚೈತನ್ಯವುಂಟುಮಾಡುತ್ತಿದ್ದವು.

ಶ್ರೀಗಳವರು ಹಮ್ಮಿಕೊಂಡ ವಿಶೇಷ ಆರಾಧನೆಯ ಈ ಕಾರ್ಯಕ್ರಮದ ಅಂಗವಾಗಿ ಜ್ಞಾನದಾಸೋಹ ಕಾರ್ಯ ಮುಗಿದಿದೆ. ಎಲ್ಲರೂ ಪ್ರಸಾದಕ್ಕೆ ಕೂಡುವಂತೆ ಶ್ರೀಗಳಿಂದ ಅಪ್ಪಣೆ ಆಗುತ್ತದೆ. ಕೂಡಲೇ ಜನಸ್ತೋಮವೆಲ್ಲ ಪ್ರಸಾದಕ್ಕೆ ಕೂಡುವರು. ಆಗ ನೋಡುತ್ತಾರೆ ವ್ಯವಸ್ಥಾಪಕರು, ತುಪ್ಪ ಸಾಲದಾಗಿದೆ. ಗಾಬರಿಯಿಂದ ಓಡೋಡಿ ಬಂದು ಶ್ರೀಗಳವರಲ್ಲಿ ಬಿನ್ನವಿಸಿಕೊಳ್ಳುತ್ತಾರೆ ಈ ವಿಷಯವನ್ನು. ಶ್ರೀಗಳಾದರೋ "ಏಕೆ ಚಿಂತೆ ? ಕಪಿಲೆ ಬಡವಳೆ? ಹೋಗು ಅವಳಲ್ಲಿ ಸಾಲ ಕೇಳಿ ಒಂದು ಕೊಡ ತುಪ್ಪವನ್ನು ತೆಗೆದುಕೊಂಡು ಬಾ, ನಂತರ ಹಿಂದಿರುಗಿಸೋಣ" ಎನ್ನುತ್ತಾರೆ ಗಂಭೀರವದನರಾಗಿ. ಅವರ ಸುತ್ತಲಿದ್ದವರೆಲ್ಲ ಬಿಟ್ಟಕಣ್ಣು ಬಿಟ್ಟ ಬಾಯಿಂದ ನೋಡುತ್ತಿದ್ದಾರೆ. ಇದೇನಂ ಗುರುಗಳಾದೇಶ ? ಇದು ಸಾಧ್ಯವೆ ? ಎಂಬ ಅನುಮಾನವಿದ್ದರೂ ಗುರುಗಳ ಅಪ್ಪಣೆಯನ್ನು ಮೀರಲಾರದೆ ನದಿಗೆ ಹೋಗುತ್ತಾನೆ ಅವರ ಶಿಷ್ಯರಲ್ಲೊಬ್ಬ. ಏನಾಶ್ಚರ್ಯ ! ಆ ಗುರುಭಕ್ತ ಕೊಡದಲ್ಲಿ ನೀರು ತುಂಬಿಕೊಂಡು ನದಿಯಿಂದ ಮೇಲಕ್ಕೆ ಬರುತ್ತಿದ್ದಂತೆಯೇ ಕಪಿಲಾಜಲ ಘಮಘಮಿಸುವ ಘೃತವಾಗಿ ಮಾರ್ಪಟ್ಟಿದೆ. ಈ ಪವಾಡವನ್ನು ನೆರೆದ ಜನ ನಿಬ್ಬೆರಗಿನಿಂದ ನೋಡುತ್ತಾರೆ. ಇದಾವುದರ ಪರಿವೆಯೂ ಇಲ್ಲದೆ ಶ್ರೀಗಳವರು ಅಂದಿನ ಕಾರ್ಯವನ್ನು ಮುಗಿಸುತ್ತಾರೆ. ಆನಂತರ ಗುಂಡ್ಲುಪೇಟೆ ತಾಲ್ಲೋಕಿನ ಒಡೆಯನಪುರದ ಶ್ರೀ ಮುದ್ದಪ್ಪನವರು ತಂದ ತುಪ್ಪವನ್ನು ಕಪಿಲೆಗೆ ಹಿಂದಿರುಗಿಸುತ್ತಾರೆ. ಈ ಸುದ್ದಿ ಭಕ್ತವೃಂದದ ಸದ್ಭಕ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇಂತಿದೆ ಮಹಾಮಹಿಮರ ಸತ್ಯಸಂಕಲ್ಪ.

ದೃಷ್ಟಿ ಪರುಷದ ದ್ರುಷ್ಟಾರ

ಮದಿಸಿದ ವೃಷಭವೊಂದು ನಂಜನಗೂಡಿನ ಬೀದಿಯಲ್ಲಿ ಹೂಂಕರಿಸುತ್ತ ಬರುತ್ತಿದೆ. ಅದು ಬರುವ ವೈಖರಿ ನೋಡುವವರ ಎದೆ ರಘಲ್ ಎನಿಸುವಂತಿದೆ. ಗುಟುರು ಹಾಕುತ್ತಾ, ಕಾಲು ಕೆರೆದು, ಕ್ರೂರದೃಷ್ಟಿಯಿಂದ ಯಾರ ಮೇಲೆ ಹಾಯಲಿ, ಯಾರಿಗೆ ತಿವಿಯಲಿ ಎಂದು ಕಾಲಭೈರವನಂತೆ ಆರ್ಭಟಿಸಿ ಬರುತ್ತಿರುವ ಆ ಹೋರಿಯನ್ನು ಕಂಡು ಜನ ತಲ್ಲಣಿಸಿ ಭಯದಿಂದ ಹೇ ನಂಜುಂಡೇಶ್ವರ ! ಶ್ರೀ ಗುರುಕಂಬಳೇಶ್ವರ, ರಕ್ಷಿಸು ಎಂದು ಒಕ್ಕೊರಲಿನಿಂದ ಕರೆಯುತ್ತಾ ಜನ ಚದುರುತ್ತಿದೆ. ಆಪದ್ಬಾಂಧವ ಆ ದೇವನ ಆದೇಶವೋ ಎಂಬಂತೆ, ಆರ್ತ ಜನರ ಮೊರೆಗೆ ಓಗೊಟ್ಟು ಕಂಬಳೇಶ್ವರರು ಆಗಮಿಸುತ್ತಿದ್ದಾರೆ. ಅದೋ ! ಏನದ್ಭುತ ! ತಾಯಿಯನ್ನು ಕಂಡ ಕರುವಿನಂತೆ ಶ್ರೀಗುರುವರ್ಯರ ಸಮೀಪಕ್ಕೆ ಬರುತ್ತಿದೆ ಆ ಮದಿಸಿದ ಹೋರಿ. ಇದೋ ! ಬಂದೇ ಬಿಟ್ಟಿತು !

ಜನರೆಲ್ಲ ಗಾಬರಿಯಾಗಿದ್ದಾರೆ. ಮುಂದೇನುಗತಿ ? ಗುರುವಿಗೇನಾಗುವುದೋ ? ಎಂದು ಚಿಂತಾತುರರಾಗಿದ್ದಾರೆ. ಶ್ರೀಗುರುವಿನ ದೃಷ್ಟಿ ಆ ಹೋರಿಗೆ ಬಿದ್ದೊಡನೆಯೇ, ಹಾವಾಡಿಗನ ಪುಂಗಿಯ ನಾದಕ್ಕೆ ಮರುಳಾಗಿ ತಲೆದೂಗುವ ಕಾಳಿಂಗಸರ್ಪದಂತೆ, ಪರ ಶಿವನ ಪಾದಕಮಲಗಳಿಗೆ ನಮಿಸಲು ಬಂದ ನಂದೀಶ್ವರನಂತೆ, ನಮಿಸುತ್ತದೆ ಶ್ರೀ ಗುರು ವರ್ಯರಿಗೆ. ಜನವೆಲ್ಲ ನಿಬ್ಬೆರಗಾಗಿ ನೋಡುತ್ತದೆ ಈ ಅದ್ಭುತವನ್ನು. ಸಿದ್ಧಪುರುಷರ ಪರುಷದೃಷ್ಟಿಗೆ ಅಸಾಧ್ಯವಾದುದು ಆವುದು ?

ಅಘಟಿತಘಟನಾಶೀಲರು ನೋಡಾ

ಒಮ್ಮೆ ಎಂದಿನಂತೆ ವರ್ಷಕ್ಕೊಮ್ಮೆ ನಡೆಯುವ ಪರ್ವ ಸಾಗಿದೆ. ಜನರೆಲ್ಲ ಪ್ರಸಾದ ಸ್ವೀಕಾರದಲ್ಲಿ ತೊಡಗಿದ್ದಾರೆ. ಆಗ ಮೇಘರಾಜನು ವರ್ಷಧಾರೆಯನ್ನೇ ಹರಿ ಸಲು ನಿಶ್ಚಯಿಸಿದನೋ ಎಂಬಂತೆ ಪಟಪಟನೆ ಹನಿ ಬೀಳಲಾರಂಭಿಸುವುದು. ಜನರೆಲ್ಲ ಅದೋ ! ಬಂದೇ ಬಿಟ್ಟಿತು ಮಳೆ ಎಂದು ಏಳಲುದ್ಯುಕ್ತರಾಗುತ್ತಾರೆ. ಶ್ರೀ ಗುರು ವರ್ಯರಾದರೋ ಏಳಬೇಡಿ, ಎಲ್ಲರೂ ನಿಶ್ಚಿಂತೆಯಿಂದ ಪ್ರಸಾದ ಸವಿಯಿರಿ ಎಂದು ಹೇಳಿ, ತಮ್ಮ ಕೈಯಲ್ಲಿದ್ದ ಬೆತ್ತವನ್ನು ಮೇಲೆತ್ತಿ ಹಿಡಿಯುತ್ತಾರೆ. ಏನದ್ಭುತ! ಆಗಸಕ್ಕೆ ಕೊಡೆ ಹಿಡಿದರೋ ಎಂಬಂತೆ, ಭಕ್ತವೃಂದ ಪ್ರಸಾದಕ್ಕೆ ಕುಳಿತಿದ್ದೆಡೆ ಎಲ್ಲೂ ಮಳೆಯಿಲ್ಲ, ಸುತ್ತೆಲ್ಲ ಆಗುತ್ತದೆ. ಭಕ್ತಿಪುಲಕಿತರಾದ ಜನರೆಲ್ಲ ಉಘೇ ! ಉಘೇ ಕಂಬಳೇಶ ! ಎಂದು ಮುಗಿಲ ಮುಟ್ಟುವ ಧ್ವನಿಯಿಂದ ಜೈಕಾರ ಮಾಡುತ್ತದೆ, ಅಘ ಟಿತಘಟನಾಶೀಲರ ಹಿರಿಮೆ ಅಸದಳ.

ಮಲ್ಲನಮೂಲೆಯ ಮಹಾಬೆಳಗು

ಅವರವರ ಭಾವಕ್ಕೆ
ಅವರವರ ಪೂಜೆಗೆ
ಅವರವರಿಗೆಲ್ಲ ಗುರು ನೀನೊಬ್ಬನೆ.

ಎಂಬ ಮುಪ್ಪಿನ ಷಡಕ್ಷರಿಯ ಅನುಭಾವಪೂರ್ಣ ನುಡಿ ಕಂಬಳೇಶ್ವರರಿಗೆ ಅರ್ಥ ವತ್ತಾಗಿ ಅನ್ವಯಿಸುತ್ತದೆ. ಕಂಬಳೇಶ್ವರರು ಯಾರು ಯಾರು ಯಾವ ಯಾವ ಭಾವ ದಿಂದ ತಮ್ಮನ್ನು ಕಾಣಲು ಇಚ್ಛಿಸಿದ್ದಾರೋ, ಅವರವರ ಇಚ್ಛೆಗೆ ಅನುಗುಣವಾಗಿ ಕಂಡಿ ದ್ದಾರೆ. ಶ್ರೀ ಗುರುವರ್ಯರು ಒಂದು ನಾಣ್ಯದ ಎರಡು ಮುಖದಂತೆ, ನಮಗೆ ಎರಡರ ಪರಿಚಯವೂ ಅಗತ್ಯ.

ಪವಾಡಗಳು ಸಾಮಾನ್ಯ ಮಾನವರ ಬದುಕಿನಲ್ಲಿ ಅದ್ಭುತ ಕೆಲಸವನ್ನು ಸಾಧಿಸ ಬಲ್ಲವು. ಅವರಿಗೆ ತತ್ತ್ವೋಪದೇಶ ಉಕ್ಕಿನ ಕಡಲೆ. 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ'. ಆದುದರಿಂದ ಗುರುವರ್ಯರು ಅಂತಹ ಮುಗ್ಧ ಜನರ ಮನಸ್ಸಿಗೆ ಬಿಂಬಿಸುವಂತೆ ಪವಾಡಗಳನ್ನು ಮೆರೆದಿದ್ದಾರೆ. ಮುಗ್ಧಜನರು ಆ ಪವಾಡ ಗಳ ಮೂಲಕ ಸಂತುಷ್ಟರಾಗಿ ಭಕ್ತಿಮಾರ್ಗದಿಂದ ಸಾಗಿ ಮುಕ್ತಿ ಪಡೆಯಲು ತವಕ

ಗೊಂಡರೆ ; ಪ್ರಜ್ಞಾವಂತ ಜನ ಮಹಾತ್ಮರ ನಡೆ-ನುಡಿ, ಆಚಾರ-ವಿಚಾರಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಧನ್ಯತೆ ಪಡೆಯುತ್ತಾರೆ. ಹೀಗೆ ಹೆಚ್ಚು ಓದಿರದಿದ್ದರೂ ಸದ್ಭಕ್ತಿಯುತರಾದ ಮುಗ್ಧ ಜನರು; ಆಚಾರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಪ್ರಜ್ಞಾವಂತ ಜನರು; ಜಗತ್ತೆಂಬ ಮಹಾಪ್ರವಾಹದ ಎರಡು ದಂಡೆಗಳಿದ್ದಂತೆ. ಈ ಎರಡು ದಂಡೆಗಳಿಗೂ ಸಂಪರ್ಕವೊದಗಿಸುವುದು ಸೇತುವೆ. ಸಿದ್ಧಿಪುರುಷರಾದ ಪರಮಗುರು ಕಂಬಳೇಶ್ವರರು ಸಮಾಜದ ಈ ಎರಡು ವರ್ಗಗಳಿಗೂ ಸೇತುವೆಯಾಗಿ, ಪರಸ್ಪರರಲ್ಲಿ ಸದ್ಭಾವ, ಸೌಜನ್ಯ ಸಾಮರಸ್ಯಗಳು ನೆಲೆಸಲು ನೆರವಾಗಿದ್ದಾರೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಕಾಯಕ, ದಾಸೋಹ, ಶಿವಯೋಗಗಳನ್ನು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ಜನರಿಗೆ ಅರುಹಿ ಧರ್ಮಜಾಗೃತಿಯನ್ನುಂಟುಮಾಡಿದ್ದಾರೆ. ಆದಿಗುರು ಕಂಬಳೇಶ್ವರರು ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣೀಸಂಗಮವಾಗಿ ಸತತವಾದ ಶಿವಯೋಗ ಸಾಧನೆಯಿಂದ, ಮಲ್ಲನಮೂಲೆ ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿ ಅವಿಮುಕ್ತಕ್ಷೇತ್ರವನ್ನಾಗಿ ಮಾರ್ಪಡಿಸಿದ್ದಾರೆ. ಆದಿಗುರು ಕಂಬಳೇಶ್ವರರ ಬಗೆಗೆ:– ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ನುಡಿಯಲ್ಲಿ ಹೇಳುವುದಾದರೆ, 'ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಿಪಥವ ತೋರ ಬಂದವರು' ; ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ, ''ಮರ್ತ್ಯಕ್ಕೆ ಮಹಕ್ಕೆ ನಿಚ್ಚಣಿಕೆಯಾಗಿ, ಇಲ್ಲಿ ಅಲ್ಲಿ ಸಲ್ಲುವ ಸನ್ಮಾರ್ಗವನ್ನರುಹ ಬಂದವರು''. ಅಲ್ಲಮ ಪ್ರಭುಗಳ ಮಾತಿನಲ್ಲಿ ಹೇಳುವುದಾದರೆ,

''ಕಂಡುದೆಲ್ಲ ಪಾವನ, ಹೇಳಿತ್ತೆಲ್ಲ ಪರಮಬೋಧೆ
ಮುಟ್ಟಿತ್ತೆಲ್ಲವು ಪರುಷದ ಸೋಂಕು
ಒಡನೆ ನುಡಿದವರು ಸದ್ಯೋನ್ಮುಕ್ತರು
ಸುಳಿದ ಸುಳುಹೆಲ್ಲ ಜಗತ್ಪಾವನ
ಮೆಟ್ಟಿದ ಧರೆಯೆಲ್ಲವು ಅವಿಮುಕ್ತಕ್ಷೇತ್ರ
ಸೋಂಕಿದ ಜಲವೆಲ್ಲವು ಪುಣ್ಯ ತೀರ್ಥಗಳು
ಶರಣೆಂದು ಭಕ್ತಿಮಾಡಿದವರೆಲ್ಲರೂ ಸಾಯುಜ್ಯರು
ಗುಹೇಶ್ವರಾ, ನಿಮ್ಮ ಶರಣರ ಸುಳುಹಿನ ಸೊಗಸನುಪಮಿಸಬಾರದು''

ಆದಿಗುರು ಶ್ರೀ ಕಂಬಳೇಶ್ವರರು ಬೆಳಗಿನೊಳಗಣ ಮಹಾಬೆಳಗು, ಅವರ ಘನ ವ್ಯಕ್ತಿತ್ವವನ್ನು, ಅವರು ನಿಂದ ನಿರಾಳವನ್ನು ಅರುಹಬೇಕಾದರೆ, ಮಾತು ಮೂಕವಾಗುತ್ತದೆ, ಶಬ್ದ ಮುಗ್ಧವಾಗುತ್ತದೆ.

———

ಪೂಜ್ಯ ಶ್ರೀ ಚೆನ್ನ ಬಸವೇಶ್ವರರು

ಶ್ರೀ ಡಿ. ಎಸ್. ಮಹದೇವಯ್ಯ(ಕೇಸರಿ)

ಕಪಿಲೆಸ್ನಾನವು ಇವಗೆ ಕಂಬಳೀಶನ ಪೂಜೆ
ಕೃಪೆದೋರಿ ಹರಸುತಿಹ ಚೆನ್ನಬಸವೇಶ್ವರಗೆ
ಸುಪರಿಚಿತಕ್ಷೇತ್ರವಿದು ವಿಪಿನಹೂದೋಟವಿದಂ
ತಪಗೈದಂ ಹರಸುತಿಹ ಲಿಂಗ ಜಂಗಮ ಸಂಗ

ತನ್ನ ಕೈಯಂಲೆ ಪತ್ರೆ, ತನ್ನ ಕೈಯಂಲೆ ಗಂಗೆ
ತನ್ನ ಕೈಯಲೆ ದುಡಿಮೆ, ತನ್ನ ಕೈಯಲೆ ಮಡಿಯಂ
ಅನ್ನವನೆ ನೀಡುತಿಹ, ನನ್ನಿಯನು ನುಡಿಯುತ್ತ
ಮನ್ನಣೆಯಂ ಭಕ್ತರಿಗೆ, ನಗುನಗುತ ಹರಸುವನು

ನನ್ನತನ್ನದಂ ಎಂಬ ಮೋಹಪಾಶವೆ ಇಲ್ಲ
ಭಿನ್ನಭೇದವ ಮಾಡಿ ಬಣ್ಣಕಟ್ಟುವುದಿಲ್ಲ
ಉನ್ನತವು ಆದರ್ಶ, ಚಿನ್ನದಂತಹ ಮೌನ
ವನ್ನೆ ಪಾಲಿಸುತಿರುವ ಧೀರ ಸಂನ್ಯಾಸಿ

ಮನ್ನಣೆಯು ಇವನಲ್ಲಿ ಶಾಂತಿ ಸೌಜನ್ಯಕ್ಕೆ
ಸನ್ಮತಿಯೆ ಉಂಟು ಶಮದಮಗಳಲ್ಲಿ
ಉನ್ನತದ ಕರುಣೆ ಕಟಾಕ್ಷಂಗಳಿಂ ಕಂಗೊಳಿಪ
ಚೆನ್ನ ಬಸವೇಶ್ವರನೆ ಶಿವದೂತ ಶರಣಾರ್ಥಿ

ಮೋಹಗೊಂಡರು ಇಲ್ಲಿ ದೇಹದಾಶೆಯು ಚಪಲ
ಸ್ನೇಹವಿಲ್ಲದ ಭಾವಭಕುತಿ ಕಣ್ಮರೆಯು
ರಾಹು ಬಡಿದಂತಿರುವ ವೀರಶೈವರ ಕುಲಕೆ
ರಾಹುತನೆ ಆಗಿ ಬಾ ಚನ್ನಬಸವೇಶ್ವರನೆ

ವಿಜ್ಞಾನಯುಗದಲ್ಲಿ ಅಜ್ಞಾನಿಗಳು ತುಂಬಿ
ಸುಜ್ಞಾನಿಗಳು ಕಡಿಮೆ, ಭಗ್ನವಾಯಿತು ತಪವು
ರುಗ್ಣನಾವಸ್ಥೆಯೇ, ಶಿವಯೋಗಸಂಪದಕೆ
ಸುಜ್ಞಾನ ಚೈತನ್ಯ ತುಂಬಿ ಹರಸೈ ಗುರುವೆ

ಬಡಿದು ಎಬ್ಬಿಸುವಂಥ ಬಿರುಗಾಳಿ ನೀನಾಗು
ಬಡಬಾಗ್ನಿ ಬಂದು ಸುಡೆ ಪಾಪಕೂಪದ ಹೊರೆಯು
ಹೊಳೆವ ಸಲೆ ಮಿಂಚಾಗಿ ಗುಡುಗಿ ಗರ್ಜಿಸೆ ನೀನು
ತಡವಿಲ್ಲ ಸುರಿಯುವುದು ಹರ್ಷವರ್ಷದ ಧಾರೆ

ರಾಗ ದ್ವೇಷಗಳಿರದ ಭೋಗ ತ್ಯಜಿಸಿದ ಗುರುವೆ
ಯೋಗಿಜನಸಹೃದಯಾವಾಸ ಶಿವಯೋಗಿ ನೀ
ತ್ಯಾಗ ಯೋಗಗಳಿಂದ ಭೋಗಮೋಕ್ಷಗಳೀಯೆ
ಬಾಗಿ ನಮಿಪೆನು ನಿನ್ನಪದಕೆ ಮಹದೇವಕವಿ

ತಪವೆತ್ತ, ಹೆರರ ಕೇಡಿಂಗೆ ಬಗೆವುದೆತ್ತ ?
ಜಪವೆತ್ತ, ಶರಣರ ಮೇಲೆ ಅನೃತವ ನುಡಿವುದೆತ್ತ ?
ಪಂಚಾಚಾರವೆತ್ತ, ಪಾತಕಕ್ಕೆ ಮನ ಬಗೆವುದೆತ್ತ ?
ಇಂತೀ ಹೊರ ಬಳಕೆಯ ಲೋಕ ರಂಜನೆಯಲ್ಲಿಪ್ಪವರಿಗೆ
ನಾನಂಜುವೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ
ನೀನೂ ಅಂಜಿ ದೂರದಲ್ಲಿ ಓಡುವೆ.

—ಸ್ವತಂತ್ರಸಿದ್ಧಲಿಂಗೇಶ್ವರರು

ಶ್ರೀ ಗುರು ಹಿರಿಮೆ

ಮಡಕೆಯ ಮಾಡುವಡೆ ಮಣ್ಣೆ ಮೊದಲು
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು
ಶಿವಪಥವನರಿವಡೆ ಗುರುಪಥವೆ ಮೊದಲು.
ಕೂಡಲಸಂಗಮದೇವರನರಿವಡೆ
ಶರಣರ ಸಂಗವೆ ಮೊದಲು;

—ಬಸವಣ್ಣನವರು.

ಸ್ಪರ್ಶಾದಪ್ಯಧಿಕಂ ಮನ್ಯೇ ಗುರುಪಾದಸರೋರುಹಮ್ ।
ಸ್ಪರ್ಶಶ್ಚ ಕುರುತೇ ಸ್ವರ್ಣಂ ಗುರುರಾತ್ಮಸಮಂ ಹಿ ತತ್ ॥

—ಲಿಂಗಪುರಾಣ

ಎನ್ನ ಕರಸ್ಥಳದ ಮಧ್ಯದಲ್ಲಿ ಪರಮ ನಿರಂಜನ ಕುರುಹು ತೋರಿದ;
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯು ತೋರಿದ;
ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ;
ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ,
ಎನ್ನೊಳಗೆ ತನ್ನ ತೋರಿದ,
ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಗೆ
ನಮೋ ನಮೋ ಎನುತಿರ್ದೆನಯ್ಯಾ ಅಖಂಡೇಶ್ವರಾ

—ಷಣ್ಮುಖಸ್ವಾಮಿಗಳು

ಭವಾರಣ್ಯಪ್ರವಿಷ್ಟಸ್ಯ ದೃಙ್ಮೋಹ ಭ್ರಾಂತಚೇತಸಃ ।
ಯೇನ ಮೇ ದರ್ಶಿತಃ ಪಂಥಾಸ್ತಸ್ಮೈ ಶ್ರೀಗುರವೇ ನಮಃ ॥

—ಅನಾದಿವೀರಶೈವಸಾರ ಸಂಗ್ರಹ

ಬಯಲ ಮೂರ್ತಿಯ ಮಾಡಿ, ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯಾ
ಶ್ರೀ ಗುರು.
ಬಯಲಮೂರ್ತಿಯಂ ಅಮೂರ್ತಿಯಂ ಮಾಡಿ,
ಎನ್ನ ಪ್ರಾಣದೊಳಗೆ ಇರಿಸಿದನಯ್ಯ ಶ್ರೀಗುರು
ಬಯಲಂ ಬಯಲನೇ ಬಯಸಿ, ಬಯಲೆಂದೆನಿಸಿ,
ಎನ್ನ ಭಾವದಲ್ಲಿರಿಸಿದನಯ್ಯ ಶ್ರೀ ಗುರು.
ಇದು ಕಾರಣ, ಎನ್ನ ಕರಸ್ಥಲ, ಮನಸ್ಥಲ ಭಾವಸ್ಥಲದಲ್ಲಿ ಧರಿಸಿ
ನಾನು ಅಂಗಲಿಂಗ ಸಂಬಂಧಿಯಾದೆನಯ್ಯಾ
ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ

—ತೋಂಟದ ಸಿದ್ಧಲಿಂಗೇಶ್ವರರು

ಗುರೋರಾಲೋಕಮಾತ್ರೇಣ ಸ್ಪರ್ಶಾತ್ಸಂಭಾಷಣಾದಪಿ ।
ಸದ್ಯಸ್ಸಂಜಾಯತೇ ಹ್ಯಸ್ಯ ಪಶೋಃ ಪಾಶಪರಿಕ್ಷಯಃ ॥

—ವೀರಾಗಮ

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಮ್ ।
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ ॥

—ಅನಾದಿವೀರಶೈವಸಾರ ಸಂಗ್ರಹ


೦—೦




ಆದಿಗುರು ಶ್ರೀ ಕಂಬಳೇಶ್ವರರ ಗದ್ದುಗೆ




ಶ್ರೀಮಠದ ಶ್ರೀ ಗುರುತ್ರಯರ ಗದ್ದುಗೆಗಳು



ಪರಮಪೂಜ್ಯ ಶ್ರೀ ಇಮ್ಮಡಿ ಕಂಬಳೇಶ್ವರರ ಗದ್ದುಗೆ




ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಗದ್ದುಗೆ




ಪರಮಪೂಜ್ಯ ಶ್ರೀ ಚನ್ನಬಸವ ಮಹಾಸ್ವಾಮಿಗಳವರು



ಶ್ರೀ ಗುರುತ್ರಯರ ಗದ್ದುಗೆಗಳ ಸನಿಹದಲ್ಲಿ ಶ್ರೀಗಳವರು



ಶ್ರೀ ಮಠದ ಕಪಿಲಾಸ್ನಾನಘಟ್ಟದಲ್ಲಿ ಭಕ್ತವೃಂದ



ಮಲ್ಲನಮೂಲೆ ಶ್ರೀಮಠ, ಬಸವನಪುರ




ಪಂಚಲಿಂಗದ ಪವಿತ್ರ ಪರಿಸರ



ಶ್ರೀಮಠದಲ್ಲಿರುವ ಶ್ರೀ ವೀರಭದ್ರಸ್ವಾಮಿ




ಕಪಿಲೆಯ ಸನಿಹದಲ್ಲಿ ಶ್ರೀಮಠ ಮತ್ತು ಶ್ರೀಗಳು



ಶ್ರೀಮಠದ ಪಾಕಶಾಲೆ

ಶ್ರೀ ಅಡವೀಶಸ್ವಾಮಿಗಳವರ ಗದ್ದುಗೆ





ಪ್ರಸಾದಕ್ಕಾಗಿ ಸಿದ್ಧವಾಗಿರುವ ಅನ್ನಬ್ರಹ್ಮ




ಶ್ರೀ ಇಮ್ಮಡಿ ಕಂಬಳೇಶ್ವರರಿಗೆ ಶ್ರೀ ಮಲೆಮಹದೇಶ್ವರರು ಅನುಗ್ರಹಿಸಿದ

ಆತ್ಮಮೂರ್ತಿ



ಪ್ರಸನ್ನನಂಜುಂಡೇಶ್ವರ ದೇವಾಲಯ



ಶ್ರೀ ಕಂಬಳೇಶ್ವರ ಪ್ರಸಾದನಿಲಯ, ನಂಜನಗೂಡು




ಮಲ್ಲನಮೂಲೆ ಶ್ರೀಮಠ



ಪ್ರಶಾಂತ ಪ್ರಕೃತಿಯ ಮಡಿಲಲ್ಲಿ ಶ್ರೀಮಠ



ಶ್ರೀಮಠದ ಕಾರ್ತಿಕಮಾಸದ ಜಾತ್ರೆಯ ಒಂದು ನೋಟ



ಕಾಯಕದ ಮಲ್ಲಯ್ಯನವರ ಸ್ಮಾರಕಕ್ಕಾಗಿ ದಳವಾಯಿ ಕಟ್ಟಿಸಿದ ದೇಗುಲ



ದಿಡ್ಡಾಪುರ ಮಠ



ಯಾಕನೂರು ಮಠ




ಶ್ರೀಮಠದ ಸನಿಹದಲ್ಲಿರುವ ಪರುಷಗಟ್ಟೆ




ಪ್ರಸಾದ ವೀಕ್ಷಣೆಯಲ್ಲಿ ದಾಸೋಹಿ ಶ್ರೀಗಳವರು



ಹೊನ್ನೂರು ಮಠ



ತಾಂಡವಪುರದ ಮಠ



ಕಲಿಯೂರು ಮಠ



ಅಲತ್ತೂರುಹುಂಡಿ ಮಠ



ಆಲಹಳ್ಳಿ ಮಠ



ಕಜ್ಜಿಹುಂಡಿ ಮಠ




ಹೆಗ್ಗವಾಡಿ ಮಠ




ನಾಗವಳ್ಳಿ, ಕಾಗಲವಾಡಿ ಮಠ



ತೊರವಳ್ಳಿ, ಮಠ



ಅಂಬಳೆ ಮಠ




ಜನ್ನೂರು ಮಠ



ಮೂಡಾಪುರ ಮಠ



ಆಲೂರು ಮಠ



ಶ್ರೀಮಠದ ವಿದ್ಯಾರ್ಥಿಗಳ ಪ್ರಾರ್ಥನಾಸಭೆಯಲ್ಲಿ ಶ್ರೀಗಳು



ಪಡುಗೂರು ಮತ್ತು ಇತರ ಮಠಾಧೀಶರು ಹಾಗೂ ಭಕ್ತರೊಡನೆ ಶ್ರೀಗಳು



ಪೂಜ್ಯ ಶ್ರೀಗಳವರೊಡನೆ ಡಾ|| ಎಚ್. ಪಿ. ಮಲ್ಲೇದೇವರು
ಶ್ರೀ ಎನ್. ಚನ್ನಂಜಪ್ಪಸ್ವಾಮಿ ಮತ್ತು ಶ್ರೀ ಶಿವನಂಜಪ್ಪಸ್ವಾಮಿ



ಪೂಜ್ಯ ಶ್ರೀಗಳವರೊಡನೆ, ಕಜ್ಜಿಹುಂಡಿ ಮಠದ ಶ್ರೀಗಳು ಮತ್ತಿತರರು

ವೀರಶೈವ ದರ್ಶನ ಮತ್ತು ಧರ್ಮ

ಜಾನಪದ ಸಾಹಿತ್ಯದಲ್ಲಿ ವೀರಶೈವ ಧರ್ಮ

ಶ್ರೀ ಎಚ್. ವಿ. ವೀರಭದ್ರಯ್ಯ. ಎಂ. ಎ.

"ಧರ್ಮವೇ ಜೀವನದ ಉಸಿರೆಂದು ಹೇಳಲಾದ ಭಾರತದಲ್ಲಿ ಎಲ್ಲ ಕಾವ್ಯ ಕಲೆಗಳ ಮೂಲಸ್ಫೂರ್ತಿಯೇ ಧರ್ಮವಾಗಿದೆ. ಈ ಮಾತು ಕರ್ನಾಟಕದ ಸಾಹಿತ್ಯ ಕಲೆಗಳಿಗೂ ಯಥಾವತ್ತಾಗಿ ಅನ್ವಯಿಸುತ್ತದೆ. [1] ಧರ್ಮ ತನ್ನಿಂದ ತಾನೇ ಪ್ರಕಾಶವಾಗಲಾರದು, ಪ್ರಸಾರವಾಗದು. ಅದಕ್ಕೆ ಮಾಧ್ಯಮ ಬೇಕೇ ಬೇಕು. ಆ ಮಾಧ್ಯಮ ಸಾಹಿತ್ಯವಾಗ ಬಹುದು, ಶಿಲ್ಪವಾಗಬಹುದು, ಯಾವುದೇ ಕಲೆಯಾಗಬಹುದು. ಧರ್ಮ ವೆಂದರೇನು ? ಅದು ಮನಸ್ಸಂಬಂಧಿಯಾದುದು. "ಮನಸ್ಸನ್ನು ಬಿಟ್ಟು ಬೇರೆ ಧರ್ಮವಿಲ್ಲ". [2] ಪ್ರಾಕೃತಿಕವಾದ ಮನಸ್ಸು ಸಾಂಸ್ಕೃತಿಕವಾಗುವ ಹಂತದಲ್ಲಿ ಪಡೆವ ಶಿಕ್ಷಣವೇ ಧರ್ಮ. ರೂಕ್ಷವಾದದ್ದು ಸೂಕ್ಷ್ಮವಾಗುತ್ತದೆ. ಒರಟಾದದ್ದು ಮೃದು ವಾಗುತ್ತದೆ. ಅಂತಃಕರಣದಲ್ಲಿ ಅರಳಿದ್ದು ಅಭಿವ್ಯಕ್ತಿಯಲ್ಲಿ ಒಡಮೂಡುತ್ತದೆ. "ತನ್ನಂತೆ ಪರ"ರನ್ನೂ ಕಾಣುತ್ತದೆ. ಉನ್ನತ ವಿಚಾರಗಳನ್ನು ಸಹಿಸುತ್ತದೆ." ಕನ್ನಡದ ಮೊದಲ ಗ್ರಂಥವೆಂದು ಒಪ್ಪಿಕೊಳ್ಳಲಾದ 'ಕವಿರಾಜಮಾರ್ಗ'ದಲ್ಲಿ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಮಂ ಪರಧರ್ಮಮುಮಂ' ಎಂಬ ಚಿನ್ನದಂತಹ ಮಾತೊಂದಿದೆ. ಈ ಮಾತಿನ ಅರ್ಥ, "ನಿಜವಾದ ಐಶ್ವರ್ಯ (ಚಿನ್ನ) ವೆಂದರೆ, ಪರ ವಿಚಾರಗಳನ್ನು, ಪರಧರ್ಮಗಳನ್ನು ಸಹಿಸತಕ್ಕದ್ದೇ'—ಎನ್ನುವುದು. ಅನ್ಯರ ವಿಚಾರ ಗಳನ್ನು ಮತ್ತು ಅನ್ಯರ ಧರ್ಮಗಳನ್ನು ಸಹಿಸುವುದೇ ನಿಜವಾದ ಸಂಪತ್ತು—ಎನ್ನುವ ಈ ಸೂಕ್ತಿ ಕನ್ನಡ ನಾಡು ಧರ್ಮಗಳ ವಿಚಾರಗಳಲ್ಲಿ ಉದ್ದಕ್ಕೂ ತಾಳಿದ ನಿಲುವಿಗೆ ಒಂದು ವ್ಯಾಖ್ಯಾನದಂತಿದೆ. ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯವೆಂದರೆ, ಧರ್ಮ ಸಹಿಷ್ಣುತೆಯೇ- ಎಂದು ಹೇಳಬಹುದು." [3] ವೀರಶೈವಧರ್ಮ ಕರ್ನಾಟಕ

---

1. ಸಾಮಾನ್ಯನಿಗೆ ಸಾಹಿತ್ಯಚರಿತ್ರೆ-ಕನ್ನಡಸಾಹಿತ್ಯ ಸಮೀಕ್ಷೆ-ಸಂ. ಡಾ॥ ಜಿ. ಎಸ್. ಶಿವ ರುದ್ರಪ್ಪ. ಪು, 41
2. ಜನಪದ ಸಾಹಿತ್ಯದಲ್ಲಿ ಧರ್ಮ-ಹೊನ್ನ ಬಿತ್ತೇವು ಹೊಲಕೆಲ್ಲ-ಶ್ರೀ ವೈ. ಎನ್. ಅಣ್ಣಾ ರಾಯ ಪು. 217
3. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ-ಕನ್ನಡ ಸಾಹಿತ್ಯಸಮೀಕ್ಷೆ–ಸಂ. ಡಾ.ಜಿ.ಎಸ್. ಶಿವ ರುದ್ರಪ್ಪ- 42

ದಲ್ಲಿಯೇ ಹುಟ್ಟಿ ಬೆಳೆದುಬಂದ ಧರ್ಮ. "ಅನ್ಯರಿಗೆ ಅಸಹ್ಯಪಡಬೇಡ',—ಎಂದು ಬೆಳೆದು ಬಂದ ಧರ್ಮ.

"ವೀರಶೈವ ಧರ್ಮವು ಹಿಂದೂ ಧರ್ಮದ ಅವಿಭಾಜ್ಯ ಅಂಗವೆಂಬುದನ್ನು ನಾವು ಮರೆಯಬಾರದು. ಸಮಕಾಲೀನ ಹಿಂದೂ ಧರ್ಮದ ಆಚರಣೆ ಮತ್ತು ಕ್ರಿಯಾ ವಿಧಿಗಳಿಗಿದ್ದ ಅತಿ ಹೆಚ್ಚಿನ ಪ್ರಾವಮುಖ್ಯವನ್ನು ಖಂಡಿಸಿ, ಧರ್ಮದ ಸತ್ವಕ್ಕೆ ಆದ್ಯ ಗಮನವನ್ನು ಕೊಟ್ಟು, ಅದರ ತತ್ತ್ವಗಳನ್ನು ದಿನವಹಿ ಜೀವನಕ್ಕೆ ಅಳವಡಿಸಿಕೊಳ್ಳುವ ಬಗೆಯನ್ನು ತಿಳಿಯಪಡಿಸಿರುವುದು ವೀರಶೈವಧರ್ಮದ ಉನ್ನತ ಕೊಡುಗೆ. ಸಮ ಕಾಲೀನ ಹಿಂದೂಧರ್ಮದಲ್ಲಿ ಪ್ರಚಾರದಲ್ಲಿದ್ದ ಯಜ್ಞಯಾಗಾದಿಗಳನ್ನೂ ಮತ್ತು ಜಾತಿ ಪದ್ಧತಿಯನ್ನೂ ಖಂಡಿಸಿ, ಸ್ತ್ರೀಯರಿಗಿದ್ದ ಧಾರ್ಮಿಕ ಪಾರತಂತ್ರ್ಯವನ್ನೂ ನಿವಾರಿಸಿ, ಅವರಿಗೆ ಸಾಮಾಜಿಕ ಜೀವನದಲ್ಲಿ ಸಮಾನವಾದ ಹಕ್ಕುಬಾಧ್ಯತೆಗಳನ್ನು ಒದಗಿಸಿದ ಕೀರ್ತಿಯು ವೀರಶೈವ ಧರ್ಮಕ್ಕೆ ಸಲ್ಲುತ್ತದೆ.[4] ಹಿಂದೂ ಧರ್ಮದ ಅತ್ಯಂತ ಪರಿಷ್ಕೃತ ಧರ್ಮವೇ ವೀರಶೈವ. ವರ್ಣ, ವರ್ಗ ರಹಿತವಾದ, ಇಹ, ಪರಗಳನ್ನೂ ಸಮನ್ವಯ ಗೊಳಿಸಿದ, ದುಡಿಮೆ-ದಾಸೋಹಗಳಿಗೆ ತುಂಬುಗೌರವ ಸಲ್ಲಿಸಿದ, ಅರ್ಥರಹಿತ ಮೌಢ್ಯ ಗಳನ್ನೂ ನಿರ್ಭಿಡೆಯಿಂದ ತಿರಸ್ಕರಿಸಿದ, 'ಸಕಲ ಜೀವರಿಗೆ ಲೇಸನೇ ಬಯಸಿದ' ವೀರ ಶೈವ ಧರ್ಮ ಕರ್ನಾಟಕದ ಪ್ರಮುಖ ಧರ್ಮಗಳಲ್ಲೊಂದಾಗಿದೆ.

ವೀರಶೈವ ಧರ್ಮದ ಉಗಮದ ಬಗ್ಗೆ ಏಕಾಭಿಪ್ರಾಯವಿಲ್ಲ. ಅದಿನ್ನೂ ವಾದ-ವಿವಾದದ ವಿಚಾರವೇ ಆಗಿದೆ. ರೇಣುಕಾದಿ ಪಂಚಾಚಾರ್ಯರೇ ವೀರಶೈವ ಧರ್ಮ ವನ್ನು ಸಂಸ್ಥಾಪಿಸಿದರೆಂದು ಸಂಪ್ರದಾಯವಾದಿಗಳು ಹೇಳುವರು. ಈ ಅಭಿಪ್ರಾಯ ವನ್ನು ಸಮರ್ಥಿಸಲು ಪ್ರಬಲವೂ ಪ್ರಮಾಣವೂ ಆದ ಆಧಾರಗಳು ಇನ್ನೂ ಅವಶ್ಯ ವಾಗಿವೆ. ರೇಣುಕಾದಿ ಆಚಾರ್ಯರಿಗಿಂತಲೂ ಹಿಂದೆ ವೀರಶೈವ ಧರ್ಮ ಇತ್ತು. ಸನಾ ತನವಾದ ಆ ಧರ್ಮವನ್ನು ರೇಣುಕರು ಮತ್ತೆ ಪ್ರತಿಪಾದಿಸಿ, ಪ್ರಸಾರಮಾಡಿದರೆಂಬು ದಕ್ಕೆ ಆಧಾರಗಳಿವೆ. .... ಬುದ್ಧ, ಏಸುಕ್ರಿಸ್ತ, ಮುಹಮ್ಮದ್ ಪೈಗಂಬರರಂತೆ, ರೇಣುಕಾದಿ ಆಚಾರ್ಯರು ಅಥವಾ ಬಸವಣ್ಣನವರು ಈ ಧರ್ಮವನ್ನು ಸಂಸ್ಥಾಪಿಸಿದ ರೆನ್ನಲಾಗದು. ರೇಣುಕಾದ್ಯಾಚಾರ್ಯರು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ವೀರಶೈವ ಧರ್ಮದ ನ್ಯೂನತೆಗಳನ್ನು ನಿವಾರಿಸಿ ತಮ್ಮ ತಪಃಪ್ರಭಾವದಿಂದ ಜನರಲ್ಲಿ ಧರ್ಮ ಶ್ರದ್ಧೆಯನ್ನುಂಟುಮಾಡಿ ವೀರಶೈವ ಧರ್ಮವನ್ನು ಪ್ರಸಾರ ಮಾಡಿದರು.

"ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯಕ, ಸಾಮಾಜಿಕ, ಧಾರ್ಮಿಕ ಮಹಾಕ್ರಾಂತಿ ಯನ್ನೆಸಗಿ ಅಂಧಶ್ರದ್ಧೆ, ಶುಷ್ಕ ಸಂಪ್ರದಾಯ, ಅಸಮಾನತೆ ಇವುಗಳಿಂದ ಆವೃತವಾ ಗಿದ್ದ ವೀರಶೈವ ಧರ್ಮದ ಅವಗುಣಗಳನ್ನೂ ಪರಿಹರಿಸಿ, ಧರ್ಮಶ್ರದ್ಧೆ, ವೈಚಾರಿಕತೆ,

---

4. ವೀರಶೈವ ಮಠಗಳ ಪರಂಪರೆ-ಸಿದ್ಧಗಂಗಾಶ್ರೀ-ಲೇ-ಹೆಚ್. ಎಂ. ಸದಾಶಿವಯ್ಯ ಪು. 552.

ಸಮಾನತೆ, ಸದ್ಭಕ್ತಿ, ಸುಜ್ಞಾನ, ಸತ್ಯಶುದ್ಧ ಕಾಯಕ ಇವುಗಳ ಅಡಿಗಲ್ಲ ಮೇಲೆ ವೀರಶೈವ ಧರ್ಮವನ್ನು ನೆಲೆಗೊಳಿಸಿ ಅದು ವಿಶ್ವಧರ್ಮವಾಗುವಂತೆ ಮಾಡಿದವರು ಬಸವಾದಿ ಶರಣರು ಎಂಬುದನ್ನು ಮರೆಯಲಾಗದು. ಒಟ್ಟಿನಲ್ಲಿ ವೀರಶೈವದ ಪ್ರಾಚೀನತೆಯನ್ನು ಖಚಿತವಾಗಿ ಆಧಾರಪೂರ್ವಕವಾಗಿ ಹೇಳಬೇಕಾದರೆ ಸಮಸ್ತ ಶೈವಾಗಮಗಳು ಸಂಶೋಧನಾತ್ಮಕವಾಗಿ ಪ್ರಕಟವಾದಾಗ ಮಾತ್ರ ಸಾಧ್ಯವಾಗಬಹುದು.''[5] ಯಾವುದೇ ಧರ್ಮದ ಶ್ರೇಷ್ಠತೆ ಇರುವುದು ಅದರ ಪ್ರಾಚೀನತೆಯಲ್ಲಿ ಮಾತ್ರವೇ ಅಲ್ಲ. ಅದರ ಹೃದಯ ವೈಶಾಲ್ಯದಲ್ಲಿ ಎನ್ನುವುದನ್ನು ಮರೆಯಬಾರದು. ಡಾ|| ಎಚ್. ಪಿ. ಮಲ್ಲೇದೇವರು ಹೇಳುವಂತೆ ವೀರಶೈವಧರ್ಮ ವಿಶ್ವಧರ್ಮವಾಗುವಂತೆ ಮಾಡಿದವರು ಬಸವಾದಿ ಶರಣರೆಂಬುದನ್ನು ಮನನ ಮಾಡುವುದು ಒಳ್ಳೆಯದು. ಅಲ್ಲದೆ ''ಧರ್ಮದ ಉಗಮ ಮತ್ತು ವಿಕಾಸವನ್ನು ಕುರಿತು ವೈಜ್ಞಾನಿಕವಾಗಿ ಚಿಂತಿಸಿರುವ ಪಾಶ್ಚಾತ್ಯ ದಾರ್ಶನಿಕ, ಸಮಾಜಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ಪ್ರಕಾರ ಜಗತ್ತಿನ ಯಾವ ಧರ್ಮವೂ ಇದ್ದಕ್ಕಿದ್ದಂತೆ ಸ್ವರ್ಗದಿಂದ ಇಳಿದು ಬಂದಿಲ್ಲ. ಎಲ್ಲ ಧರ್ಮಗಳೂ ಮೂಲತಃ ಬುಡಕಟ್ಟು ಜನಾಂಗದ ಧರ್ಮದ ರೂಪನಲ್ಲಿ (Tribal Religion) ಆರಂಭವಾಗಿ, ಅನಂತರ ಸಂಪ್ರದಾಯಬದ್ಧವಾದ ಕರ್ಮಾಚರಣೆಗಳ ರೂಪವನ್ನೂ ತಳೆದು (National Religion) ಕೊನೆಯಲ್ಲಿ ನೀತಿ ಮತ್ತು ಜ್ಞಾನ ಪ್ರಧಾನವಾದ ವಿಶ್ವಧರ್ಮ (Universal Religion) ವಾಗಿ ಮೂಡಿಬರುತ್ತವೆ.''[6] ''ರೇಣುಕಾದಿ ಆಚಾರ್ಯರಿಗಿಂತಲೂ ಹಿಂದೆ ವೀರಶೈವ ಧರ್ಮ ಇತ್ತು. ಅದು ಕಾಲ ಕಾಲಕ್ಕೆ ವಿಕಾಸವಾಗುತ್ತ, ಬಸವಾದಿ ಪ್ರಮಥರ ಕಾಲದಲ್ಲಿ ತನ್ನ ಸರ್ವಾಂಗೀಣ ಪರಿಪಕ್ವ ಸ್ವರೂಪವನ್ನು ಪಡೆದು ವಿಶ್ವಧರ್ಮವಾಯಿತು.

''ಒಂದು ಜನಾಂಗದ ಸಂಸ್ಕೃತಿಯ ಒರೆಗಲ್ಲು, ಕಲಿತ ನಾಲ್ಕಾರು ಜನ ಪಂಡಿತರಲ್ಲ ; ಕಲಿಯದ ಸಾವಿರಾರು ಜನಸಾಮಾನ್ಯರು. ಜೀವನದ ಉದಾತ್ತ ಆದರ್ಶಗಳೂ ಆಶಯಗಳೂ ಸಾರ್ಥಕವಾಗಬೇಕಾದರೆ ಸಾಮಾನ್ಯ ಜನಜೀವನವನ್ನು ಅವು ಮುಟ್ಟಿ ಅವರ ಬಾಳನ್ನು ಹಸನುಗೊಳಿಸಬೇಕು. ಅಂತಹ ಸಾರ್ಥಕತೆಯನ್ನು ಕರ್ನಾಟಕ ಸಾಧಿಸಿಕೊಂಡಿದೆ ಎಂಬುದಕ್ಕೆ ಅದರ ಜನಪದ ಸಾಹಿತ್ಯವೇ ಸಾಕ್ಷಿಯಾಗಿದೆ. ನಮ್ಮ ಜನಾಂಗದ ಸಂಸ್ಕೃತಿಯ ಕೆನೆ ಇಲ್ಲಿ ಅಭಿವ್ಯಕ್ತವಾಗಿದೆ. ಸಾಮಾನ್ಯ ಜನರಲ್ಲಿಯೂ ಸಂಸ್ಕೃತಿಯ ಸಂಜೀವಿನಿ ಮೈವೆತ್ತುದಕ್ಕೆ ಕಾರಣವನ್ನೂ ನಾಡಿನ ಧಾರ್ಮಿಕ ಚಟುವಟಿಕೆಗಳಲ್ಲಿ, ಸಾಹಿತ್ಯ ಪರಂಪರೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಅರಿತ ಜನರ ಸಂಸ್ಕೃತಿಯು, ಅರಿಯಂದ

---

5. ವೀರಶೈವ ಧರ್ಮದ ಪ್ರಾಚೀನತೆ-ಸಿದ್ಧಗಂಗಾಶ್ರೀ-ಡಾ|| ಎಚ್. ಪಿ. ಮಲ್ಲೇದೇವರು, ಪು. 561-2
6. ಶೈವ ಮತ್ತು ವೀರಶೈವ-ಒಂದು ತಾತ್ವಿಕ ವಿಶ್ಲೇಷಣೆ-ಸಿದ್ಧಗಂಗಾಶ್ರೀ-ಡಾ|| ಎಚ್. ಎಲ್. ಶಿವರುದ್ರಪ್ಪ. ಪು. 550

ಜನರ ಬಾಳಿನಲ್ಲಿ ಇಳಿದು ಬರುವಂತಾದುದು ಜನಾಂಗದ ಸಾಂಸ್ಕೃತಿಕ ಜೀವನದಲ್ಲಿ ಮಹತ್ತರವಾದ ಸಾಧನೆ.''[7] ಧರ್ಮವಾಗಲಿ, ಕಲೆಯಾಗಲಿ, ಸಾಹಿತ್ಯವಾಗಲಿ ಜನಾಂಗದ ಸಾಂಸ್ಕೃತಿಕ ಬದುಕಿನ ಮಹತ್ವದ ಮುಖಗಳು. ಅವು ಕೇವಲ ಪಂಡಿತರ, ಉಚ್ಚ ವರ್ಗದವರ ಪಟ್ಟಕ್ಕಷ್ಟೇ ನಿಂತಾಗ ಅವುಗಳ ಸಾಕಲ್ಯ ಕಾಣಬರದು. ಜನಸಾಮಾನ್ಯರ ಬಾಳಿನಲ್ಲಿ ಬೆಳಗಿದಾಗಲೇ ಅವುಗಳಿಗೆ ಮಹತ್ವ ದೊರಕೊಳ್ಳುವುದು. ಬಸವಾದಿ ಪ್ರಮಥರಿಂದ ಪ್ರಚಾರಗೊಂಡ ವೀರಶೈವ ಧರ್ಮ—ಸಾಮೂಹಿಕ ಜೀವನದ ಜೀವಂತ ಶಕ್ತಿಯಾಗಿ''[8]—ಜನಪದ ಸಮಷ್ಟಿಯ ಉದ್ಧಾರಕ್ಕೆ ಮೂಡಿಬಂದ ಧರ್ಮವಾಯಿತು. ಸಮಾಜದ ಅತ್ಯಂತ ಕೆಳವರ್ಗದ ಪ್ರಜೆಯನ್ನು ಮುಟ್ಟದ ಧರ್ಮ ಧರ್ಮವಲ್ಲವೆಂಬುದನ್ನು ಅರ್ಥಮಾಡಿಕೊಂಡು 'ವಿಪ್ರಮೊದಲುಗೊಂಡು ಅಂತ್ಯಜ'ನವರೆಗೂ ಬೆಳೆದು ಬಂದ ಧರ್ಮವಾಯಿತು ವೀರಶೈವಧರ್ಮ. ಸಿಕ್ ಜನಾಂಗದಂತೆ–ಸಮಾಜದಂತೆ-ಪರಿಪೂರ್ಣ ಜನಾಂಗವಾಯಿತು, ಸಮಾಜವೆನಿಸಿತು ವೀರಶೈವ ತನ್ನ ಸಿದ್ಧಾಂತ, ಲಕ್ಷಣಗಳೊಂದಿಗೆ.

''ನಮ್ಮ ಹಳ್ಳಿಗರ ಸಂಸ್ಕೃತಿಯು ಒಡಮೂಡಿದ್ದು ಪಂಡಿತರ ಕಾವ್ಯಗಳಲ್ಲಲ್ಲ; ಶಿಲಾಶಾಸನ, ಶಿಲ್ಪಕಲೆಗಳಲ್ಲಲ್ಲ, ಪಾಮರರೆಂದು ಕರೆಯಲ್ಪಡುವ ಹಳ್ಳಿಗರ ಹಾಡುಗಳಲ್ಲಿ; ಜಾನಪದ ಸಾಹಿತ್ಯದಲ್ಲಿ.''[9] ಧರ್ಮದ ನೈಜ ಪರಿಚಯ ಮಾಡಿಕೊಳ್ಳಬೇಕೆಂಬ ಆಸಕ್ತಿ ಹೊಂದಿದವರಿಗೆ ಯಾರಿಗೇ ಆಗಿರಲಿ—ಆ ಧರ್ಮದ ಕೆಲವು ಗ್ರಂಥಗಳನ್ನೂ, ಶಾಸನಗಳನ್ನೂ ಕೆಲವು ಮಠಾಧೀಶರನ್ನೂ—ಕೆಲವು ಮಂದಿ ನಿಷ್ಣಾತ ವಿದ್ವಾಂಸರನ್ನೂ ನೋಡಿದಷ್ಟಕ್ಕೇ ಆಗಲಾರದು. ಆ ಧರ್ಮಕ್ಕೆ ಸಂಬಂಧಿಸಿದ 'ಜಾನಪದ ಸಾಹಿತ್ಯವನ್ನು ಗಮನಿಸಿದಾಗ ತಿಳಿದು ಬಂದೀತು. ಏಕೆಂದರೆ ''ಸಾಹಿತ್ಯ ಇರುವುದು ಜನರ ಶ್ರೇಯಸ್ಸನ್ನು ಸಾಧಿಸಲು, ಇದು ಪಾಪ, ಇದು ಪುಣ್ಯ, ಇದು ಹಿತ, ಇದು ಅಹಿತ ಎನ್ನುವುದನ್ನು ತಿಳಿಯ ಹೇಳಲು. ಒಟ್ಟಿನಲ್ಲಿ ಪುರುಷಾರ್ಥ ಪ್ರಾಪ್ತಿಗೋಸ್ಕರ.''[10] ಹಾಗೆ ನೋಡಿದಾಗ ಸಾಹಿತ್ಯ ಜನರ ಬದುಕನ್ನು ಉತ್ತಮಗೊಳಿಸುವ ಮಾಧ್ಯಮವಾಗಿ 'ಜನ ಬದುಕಬೇಕೆಂಬ' ದೃಷ್ಟಿಯನ್ನಳವಡಿಸಿಕೊಂಡು ಧರ್ಮಪ್ರಚಾರಕ್ಕೆ ನಿಂತಿದ್ದು ಕನ್ನಡಸಾಹಿತ್ಯದುದ್ದಕ್ಕೂ ಕಾಣಬಂದಿದೆ.'' ಕಾವ್ಯದ ಉದ್ದೇಶವೇ ಧರ್ಮದ ಉದ್ದೇಶವೂ ಆದಾಗ, ಸಾಹಿತ್ಯ ಎನ್ನುವುದು ಧರ್ಮ ಪ್ರಸಾರದ ಹಾಗೂ ಧರ್ಮ ಪ್ರಚಾರದ ಮಾಧ್ಯಮವಾಯಿತು. ಅಲ್ಲದೆ ಸಾಹಿತ್ಯ ಅತ್ಯಂತ ಸ್ವಾರಸ್ಯವಾಗಿ ಹಾಗೂ ಪರಿಣಾಮಕಾರಿಯಾಗಿ ಧರ್ಮ ಪ್ರಸಾರ ಮಾಡಲು ಇರುವ ಸುಲಭವಾದ ಉಪಾಯವಾ

---

7. ಜಾನಪದ ಕವಿಗಳುಕಂಡ ಶರಣರು-ಹೊನ್ನಬಿತ್ತೇವು ಹೊಲಕೆಲ್ಲ-ಡಾ॥ ಹೆಚ್. ತಿಪ್ಪೇರುದ್ರ ಸ್ವಾಮಿ-ಪು. 593.
8. ಅಲ್ಲೇ-ಪು. 594.
9. ಕನ್ನಡ ಜಾನಪದ ಗೀತಗಳು-ಡಾ॥ ಬಿ. ಎಸ್. ಗದ್ದಗೀಮಠ ಪು. 181.
10. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ-ಕನ್ನಡಸಾಹಿತ್ಯ ಸಮೀಕ್ಷೆ ಸಂ. ಡಾ॥ ಜಿ. ಎಸ್. ಶಿವರುದ್ರಪ್ಪ-ಪು. 44-45

ಯಿತಂ.'' [11] ಜಾನಪದ ಸಾಹಿತ್ಯ ತಾನು ಅಪ್ಪಿಕೊಂಡಿದ್ದನ್ನು ಒಪ್ಪಿಕೊಂಡಿದ್ದನ್ನು ಅಬ್ಬರ ಆರ್ಭಟಗಳಿಲ್ಲದೆ, ಗುಪ್ತಗಾಮಿನಿಯೆಂಬಂತೆ ಪ್ರಸಾರಮಾಡುತ್ತಾ ಬಂದಿರುವು ದನ್ನು ಅಭ್ಯಾಸದಿಂದ ಮನಗಾಣಬಹುದು. ವೀರಶೈವ ಧರ್ಮದ ಅನೇಕ ಮುಖ ಗಳನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದು. ವೀರಶೈವಧರ್ಮ ಪ್ರಧಾನವಾಗಿ ಕೃಷಿಕರ ಧರ್ಮ. ನಿಸರ್ಗದಲ್ಲಿ ದಿನವಹಿ ದುಂಡಿದುಣ್ಣುವವರ ಧರ್ಮ. ಈ ಧರ್ಮದ ಅನುಯಾಯಿಗಳಿಗೆ ''ಸೌಂದರ್ಯಪ್ರಿಯತೆ, ಜೀವನಪ್ರೀತಿ, ವಾಸ್ತವದ ಹಂಬಲ, ವಿಶ್ವಪ್ರಜ್ಞೆ-ಇವುಗಳೇ ಇಂದಿನ ಕವಿಯ 'ಧರ್ಮಶ್ರದ್ಧೆ'ಯಾಗಿವೆ'' [12]—ಎಂದು ಡಾ॥ ಜಿ. ಎಸ್. ಶಿವರುದ್ರಪ್ಪನವರು ''ಕನ್ನಡ ಸಾಹಿತ್ಯದ ಮುಖ್ಯ ಪ್ರೇರಣೆಗಳು'' ಎಂಬ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ವೀರಶೈವಧರ್ಮ ಜನಪದಧರ್ಮವಾಗಿ ಮೂಡಿಬಂದ ಸಂದರ್ಭಕ್ಕೂ ಹೇಳಬಹುದಾಗಿದೆ.

''ಶಿವಶರಣ ಸಾಧು-ಸತ್ಪುರುಷರ ಪಾದಧೂಳಿಯಿಂದ ಕನ್ನಡನಾಡು ಪಾವನವಾ ಗಿದೆ. ಇವರ ಪವಾಡಗಳನ್ನೂ, ಲೀಲೆಗಳನ್ನೂ ಕಂಡು ಕೇಳಿದ ಜನಪದವು ಇವರನ್ನು ಕೊಂಡಾಡುತ್ತ ಬಂದಿದೆ. ಸದಾಚಾರಸಂಪನ್ನರಾದ ಶಿವಶರಣರ ಪ್ರಭಾವವು ಜನ ತೆಯ ಮೇಲೆ ಬಹಳವಾಗಿದೆ. ಅಂತೆಯೇ ಒಕ್ಕಲಿಗನು ಶಿವಶರಣರನ್ನು ತನ್ನ ಸುಗ್ಗಿಯ ಕಾಲದಲ್ಲಿಯೂ ಬರಮಾಡಿಕೊಂಡಿದ್ದಾನೆ. ಶಿವಶರಣರ ವಿಷಯವಾಗಿ ಜಾನಪದ ಸಾಹಿ ತ್ಯವು ಅಪಾರವಾಗಿದೆ.'' [13] ವೀರಶೈವಧರ್ಮ ಜನಪದದ ಧರ್ಮವಾದದ್ದೇ ಶಿವ ಶರಣರಿಂದ. ಆ ಧರ್ಮದ ಬೆಳಕು ಕನ್ನಡನಾಡಿನ ಬಡಗುಡಿಸಿಲಿನ ಒಳಗೂ ಬೆಳಗಿತು- ಶಿವಶರಣರ ನುಡಿ-ನಡೆಗಳಿಂದಾಗಿ. ಜನಪದದ ಮಧ್ಯದಲ್ಲಿದ್ದುಕೊಂಡು ಬಾಳಿದರು ಶಿವ ಶರಣರು. ಅವರೆಂದೂ ಜನದೂರರಾಗಿ ಬಾಳಲಿಲ್ಲ. ''ನೊಂದ ನೋವ ನೋಯ ದವರೆತ್ತ ಬಲ್ಲರು'' ಎಂಬುದನ್ನರಿತು ಬಾಳಿದರು. ಅಂಥ ಶರಣರು ಜನಸಾಮಾನ್ಯ ರಿಗೆ ಸ್ಫೂರ್ತಿಯಾದರಂ, ಆದರ್ಶವಾದರಂ, ಆರಾಧ್ಯರೆನಿಸಿದರು, ಅವರನ್ನು ನೆನೆಯು ವುದೇ ಆನಂದವಾಯಿತು.

ಶರಣರ ನೆನೆದಾರ ಸರಗೀಯ ಇಟ್ಟಾಂಗ
ಅರಳ ಮಲ್ಲೀಗೆ ಮುಡಿದ್ಹಾಂಗ। ಕಲ್ಯಾಣ
ಶರಣರ ನೆನೆಯೋ ನನ ಮನವೆ॥

ಎಂಬುದಾಗಿ ಹಾಡಿದ್ದಾರೆ. ಶರಣರ ನೆನಪು 'ಸರಗಿ' ಯನ್ನಿಟ್ಟಂತೆ. ಅರಳು ಮಲ್ಲಿಗೆ ಮುಡಿದಂತೆ, ಆ ನೆನಪು ಮೈಮನಗಳ ಚೆಲುವು ಒಲವುಗಳಿಗೆ ಜೀವಧಾತು ಎಂಬ ಕಲ್ಪನೆ ಉಲ್ಲಾಸದಾಯಕ.

---

11. ಅಲ್ಲೇ ಪು. 45.
12. ಅಲ್ಲೇ ಪು. 54.
13. ಕನ್ನಡ ಜನಪದಗೀತೆಗಳು-ಡಾ॥ ಬಿ. ಎಸ್. ಗದ್ದಗೀ ಮಠ ಪು. 23

ಮುಗ್ಧ ಶರಣರ ಹಾಡು ಸಿದ್ಧಿಮಂತ್ರವು ನೋಡು
ಸಿದ್ಧಾಗು ಹಾಡು ಹಾಡುದಕೆ। ಎಲೆ ಜೀವ
ಶುದ್ಧಾಗಿ ಹೊಂದು ಶಿವಪದವ॥

ಅಂತರಂಗದಲ್ಲಿ ಶುದ್ಧಿ ಸಿದ್ಧಿಗಳ ಬಗೆಗೆ ಚಿಂತನ-ಮಂಥನ ನಡೆದಿದೆ. ಜನಪದರಿಗೆ ಮುಗ್ಧ ಶರಣರ ಹಾಡು ಹಾಡುವುದೆಂದರೆ ಎಲ್ಲಿಲ್ಲದ ಉತ್ಸಾಹ, ಹುಮ್ಮಸ್ಸು, ಹಿಗ್ಗು. ಭಕ್ತಿ ಭಾವದ ವಿಕಾಸಕ್ಕೆ ಇಂಥ ಹಾಡುಗಳು ಸಹಾಯಕ. ಜೊತೆಗೆ ''ಮುಗ್ಧಶರಣರ ಹಾಡು'' ಯಾವುದು ? ವಿಚಾರದ ಬೆಳಕಿನಲ್ಲಿ ಥಳಥಳಿಸುತ್ತದೆ ಅದು. ಕಾಯಕ, ದಾಸೋಹ, ಇಷ್ಟಲಿಂಗಪೂಜೆ, ಗುರು ಜಂಗಮಾರ್ಚನೆ, ಮುಂತಾಗಿ ಶರಣರು ಬಾಳಿನುದ್ದಕ್ಕೂ ಬಿತ್ತಿದ್ದು. ಬೆಳೆದದ್ದು. ಇಂಥ ಮಾನವೀಯ ಮೌಲ್ಯಗಳನ್ನು. ಅವರು ಕಲಿಸಿದ್ದು ಕೋಣೆಯೊಳಗೆ ಕುಳಿತು, ಅಡ್ಡಪಲ್ಲಕ್ಕಿಯಲ್ಲಿ ಮೆರೆದು, ಬೆಳ್ಳಿ ಬಂಗಾರಗಳ ಕಿರೀಟ ತೊಟ್ಟು ಜಪಿಸುವ ಮಂತ್ರವನ್ನಲ್ಲ, ''ಉತ್ತು ಬಿತ್ತುವ ಮಂತ್ರ, ಬಿತ್ತಿ ಬೆಳೆಯುವ ಮಂತ್ರ। ಸತ್ಯಶಿವ ಮಂತ್ರ''ವನ್ನು. ಆ ಮಂತ್ರದ ಜೀವಾಳ ಕಾಯಕ, ದಾಸೋಹ, ಲಿಂಗಾರ್ಚನೆ, ಗುರು ಜಂಗಮಪ್ರೇಮವೆಂಬುದನ್ನೂ ಮನಗಾಣಬೇಕು.

ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ । ಶಿವಯೋಗ
ಕಾಯಕವೆ ಕಾಯ್ವ ಕೈಲಾಸ ॥

ಶಿವಶರಣರಿಗೆ ಕಾಯಕವೆ ಕೈಲಾಸ. ಆಧುನಿಕ ಜಗತ್ತಿನ ಎಲ್ಲ ಅರಿಷ್ಟಗಳಿಗೆ ಅನಿಷ್ಟಗಳಿಗೆ ವೀರಶೈವ ಧರ್ಮ ಕೊಟ್ಟ ಪರಿಣಾಮಕಾರಿಯಾದ ಸೂತ್ರ ಈ ಕಾಯಕ ತತ್ತ್ವ.

ಕಾಯಕದಲ್ಲಿ ನಿರತನಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು,
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾದರೂ ಕಾಯಕದೊಳಗು.

ಇದು ಆಯ್ದಕ್ಕಿ ಮಾರಯ್ಯನವರ ಸ್ಪಷ್ಟನಿಲುವು. ಈ ನಿಲುವೇ ಜನಪದದ ಹಾಡಿನಲ್ಲಿ ಮೂಡಿ ಬಂದ ರಾಮಣೀಯಕ ರೀತಿಯನ್ನು ಮೇಲೆ ನೋಡಲಾಗಿದೆ. ''ಶರಣ ಜೀವನ ಪದ್ಧತಿಯಲ್ಲಿ ಕಾಯಕತತ್ತ್ವಕ್ಕೊಂದು ಅಪೂರ್ವ ಮಹತ್ತ್ವ ಪ್ರಾಪ್ತ ವಾಯಿತು. ಸಾಮಾನ್ಯ ಸ್ತ್ರೀ ಪುರುಷರ ಮೈಮನಗಳನ್ನು ಕಾಯಕದಲ್ಲಿ ತೊಡಗಿಸುವು ದರ ಮೂಲಕವೇ ಅವರನ್ನು ಕ್ಷುಲ್ಲಕ ವಿಚಾರ-ವಿಕಾರಗಳಿಂದ ವಿಮುಖಗೊಳಿಸಿ, ಗುರು

ಪಥ--ಶಿವಪಥದತ್ತ ಅವರ ದೃಷ್ಟಿಯನ್ನು ಕೇಂದ್ರೀಕರಿಸುವುದು ಸಾಧ್ಯವೆಂಬ ತಿಳುವಳಿಕೆ ಯಿಂದ ಬಸವಣ್ಣನವರು ಆಯಾ ಶರಣರ ಕಾಯಕಗಳಿಗೆ ಉತ್ತೇಜನ ನೀಡಿದರು. ಭಕ್ತಿ ಯಿಂದ ಕೈಕೊಂಡ ಯಾವ ಕಾಯಕವಾದರೂ ಸರಿ, ಅದು ಶಿವನೊಲುಮೆಗೆ ಸಲ್ಲುತ್ತ ದೆಂಬ ವಿಚಾರವನ್ನು ಪ್ರಚಾರ ಪಡಿಸಿದರು. ಕಾಯಕ ಪ್ರಧಾನ ಭಕ್ತಿ ಜೀವನ ಧರ್ಮದ ಮೂಲಕ ಇಡಿಯ ಶರಣ ಸಮಾಜಕ್ಕ ಸಮತೆ-ಮಮತೆಗಳ ಭದ್ರ ತಳಹದಿ ಹಾಕಿ ಕೊಟ್ಟರು. ಅಂತೆಯೇ ಕಾರಣಾಂತರಗಳಿಂದ ಮುಂದೆ ಕಲ್ಯಾಣದ ಶರಣರ ಸಂಘಟನೆ ಚದುರಿ ಹೋದರೂ ಕಾಯಕದ ಕಲ್ಪನೆ ಮುಂದುರಿ ಹೋಗಲಿಲ್ಲ. ಸಾಮಾಜಿಕ ಸಂಪನ್ನತೆಯ ದೃಷ್ಟಿಯಿಂದ ಅದು ಅಂದೂ ಉಪಯುಕ್ತವೆನಿಸಿದ್ದಷ್ಟೇ ಇಂದೂ ಉಪ ಯುಕ್ತ, ಮುಂದೂ ಉಪಯುಕ್ತ.[14] ಇನ್ನೊಂದು ಗಮನಾರ್ಹವಾದುದೆಂದರೆ ಶರಣರು ಹೇಳಿದ್ದು, ಒತ್ತುಕೊಟ್ಟದ್ದು ಸತ್ಯ ಶುದ್ಧ ಕಾಯಕಕ್ಕೆ. ಏಕೆಂದರೆ ಅಪಮಾರ್ಗಗಳು ಕಾಯಕವಾಗಲಾರವು. ಕಳ್ಳತನ, ಭ್ರಷ್ಟಾಚಾರಗಳೂ ಕಾಯಕವೇ ಎಂದು ವಾದಿಸುವ ವರು ಇಂದು ಇದ್ದಾರೆ. ಆದರೆ ಶರಣರ ದೃಷ್ಟಿಯಲ್ಲಿ, ಶರಣರನ್ನು ನಂಬಿ ಬಾಳಿದ ಜನಪದರ ದೃಷ್ಟಿಯಲ್ಲಿ ಅಂಥವು ಕಾಯಕಗಳಲ್ಲ. ''ಪರರೊಡವೆ ನಾಯಿಮಾಂಸ'' ಅವರಿಗೆ. ಮೇದರ ಕೇತಯ್ಯ ಬುಟ್ಟಿ ಮಾಡಿ, ಮಾರಿ ಬಂದ ಗಳಿಕೆಯಲ್ಲಿ ಜೀವಿಸುತ್ತಿದ್ದ ಕಾಯಕ ಜೀವಿ. ಅವನ ಬದುಕನ್ನು ಕಂಡ ಜನಪದ ಕವಿಯ ಕಣ್ಣು ನಿಚ್ಚಳವಾದ ಮಾತುಗಳಲ್ಲಿ ಸತ್ಯ ಶುದ್ಧ ಕಾಯಕದ ಸ್ವರೂಪ ಪರಿಚಯ ಮಾಡಿಕೊಡುತ್ತದೆ. ಒಮ್ಮೆ ಕೇತಯ್ಯ ಬಿದಿರು ತರುವುದಕ್ಕೆಂದು ಕಾಡಿಗೆ ಹೋಗಿ ಬಿದಿರು ಕಡಿದಾಗ ಹೊನ್ನು ಸುರಿ ಯುತ್ತದೆ. ಕೇತಯ್ಯನಿಗೆ ಸಂತೋಷವಾಗಲಿಲ್ಲ; ಅತೀವ ದುಃಖವಾಗುತ್ತದೆ. ಕಾಯಕದಿಂದ ಬರದ ಒಂದು ಚಿಕ್ಕಾಸೂ ಅವನಿಗೆ ಒಗ್ಗದು. ''ಭಂಗಾರ ಹುಳ ಹತ್ತಿ ಭಂಗವಾಗಿದೆ ಬಿದಿರು, ಕಂಗಳಿಗೆ ಬೇಡ ಹೊರೆ''ಯೆಂದು ಮೆಳೆ ಮೆಳೆಗಳನ್ನು ತಿರುಗು ತ್ತಾನೆ. ಮತ್ತೊಂದು ಕಡೆ ಬಿದಿರು ಕಡಿದಾಗ ಮುತ್ತು ರತ್ನ ರಾಶಿ ರಾಶಿಯಾಗಿ ಬರು ತ್ತವೆ. ಅದರಿಂದ ದುಃಖದುಮ್ಮಾನದ ಹಿಡಿ ಜೀವವಾಗಿ ಕೇತಯ್ಯ ಮುಂದೊಂದು ''ಗಗನವನೆ ಮುದ್ದಿಸುತ ಬೆಳೆದಿರುವ'' ಬಿದಿರು ಮೆಳೆಯನ್ನೂ ಕಂಡು, ಅದನ್ನು ಹತ್ತಿ ಬಿದಿರು ಕಡಿಯುತ್ತಿರುವಾಗ ಕಾಲು ಜಾರಿ ಬೀಳುತ್ತಾನೆ. ಎದೆಗೆ ದಸಿಯೊಂದು ನಾಟು ತ್ತದೆ. ರಕ್ತ ಚಿಮ್ಮುತ್ತದೆ, ಕಣ್ಣು ಕತ್ತಲಾಗುತ್ತದೆ. ಬವಳಿಕೆ ಬಂದು ತತ್ತರಗೊಳ್ಳು ತ್ತಾನೆ. ಆದರೂ ಎದ್ದು ದಿನದ ದಾಸೋಹಕ್ಕೆ ಅಪಚಾರವಾಗದಂತೆ ನಡೆದು ಬರು ತ್ತಾನೆ. ಬುಟ್ಟಿಯನ್ನು ಮಾಡಿ ಅದನ್ನು ಮಾರಿಕೊಂಡು ಬರಲು ಸತಿ ಸಾತವ್ವನಿಗೆ ತಿಳಿಸುತ್ತಾನೆ. ಅದರಿಂದ ಬಂದ ಹಣದಿಂದ ಅಂದಿನ ದಾಸೋಹವೂ ನಡೆಯುತ್ತದೆ. ಅನಂತರ ಸತಿ ಸಾತವ್ವನನ್ನು ಕರೆದು ತನ್ನೆದೆಯಲ್ಲಿ ನಾಟಿದ್ದ ದಸಿಯನ್ನು ಕೀಳುವಂತೆ ಹೇಳುವುದಲ್ಲದೆ, ಕಿತ್ತಾಗ ಪ್ರಾಣ ಹೋದರೂ ಹೋಗಬಹುದು, ಅದಕ್ಕಾಗಿ ದುಃಖ-

14. ಇಲ್ಲಿ ಸಲ್ಲುವರು-ಬಿ.ಎ. ಸನದಿ-ಪುಟ. 9-10

ಬೇಡ ಎಂದುಸೂಚಿಸುತ್ತಾನೆ. ಸಾತವ್ವ ಪತಿಯ ಎದೆಯಲ್ಲಿ ನಾಟಿದ್ದ ದಟಿ ಕೀಳು ತ್ತಾಳೆ ; ಆದುದೇನು !

ಶಿವನೆಂದು ಎದೆ ನೋಡಿ ತವಕದಲಿ ಕಿತ್ತೊಗೆಯೆ
ಶಿವ ಶಿವನೆ ಮುಗಿತು ಕಾಯಕವು । ಎಂದೆನುತ
ಶಿವಯೋಗ ರವಿಯು ಮುಳುಗಿದನು ॥

ಶಿವಯೋಗರವಿ ಕೇತಯ್ಯ ಮುಳುಗಿದ. ಸಾತವ್ವ ದುಃಖಿಸುತ್ತಾಳೆ—

ಪತಿ ಶರಣ ತಾನಿದ್ದ ಸತಿ ಶರಣೆ ನಾನಿದ್ದೆ
ರತುನ ಕಾಯಕವೆ ಶಿವಪೂಜೆ । ಇಂದೋಯ್ತು
ಜತನೇಕೆ ಇನ್ನು ಬಾಳ್ವುದಕೆ

ರತ್ನ ಪ್ರಾಯವಾದ ಕಾಯಕ ಕೇತಯ್ಯನದು.' ಅದು ಇಂದು ಮುಗಿಯಿ ತಲ್ಲಾ ! ಎಂದೇ ಸಾತವ್ವನಿಗೆ ದುಃಖ. ಬಿದಿರು ಕಡಿದಾಗ ಉಕ್ಕಿ ಬಂದ ರತ್ನ ರಾಶಿಯನ್ನೂ ಕಿಗ್ಗಣ್ಣಿಂದ ನೋಡದೆ ಬೆವರ ದುಡಿಮೆಯಿಂದ ಬಂದ ಕವಡೆ ರತ್ನ ಸಮಾನ ಕಾಯಕವಾಯಿತು. ಸತ್ಯ ಶುದ್ಧವೆನಿಸಿತು. "ದೇವರ ಪೂಜೆಗಿಂತ ಮೊದಲು ಬೆವರ ಪೂಜೆ ಸಲ್ಲಬೇಕು. ಜಂಗಮರ ಸೇವೆಗೆ ಸಲ್ಲಬೇಕು—ಎಂಬುದೇ ಶರಣರ ಶ್ರದ್ಧೆ. ಗುರುಪ್ರಸಾದ, ಲಿಂಗಪೂಜೆ, ಜಂಗಮಸೇವೆ (ದಾಸೋಹ) ಗಳಿಗೆಲ್ಲ ಕಾಯಕವೇ ಆಧಾರ. ಅದು ಗುರು-ಲಿಂಗ-ಜಂಗಮ ಸೇವೆಯ ಸಾಧನವಾಗಿ–ಸೋಪಾನ ವಾಗಿ ನಿಲ್ಲುವುದರಿಂದ ಸತ್ಯ-ಶುದ್ಧ ಕಾಯಕವೆನಿಸುವಂತಿರಬೇಕು. ಯಾರೋ ಹೇಗೋ ದುಡಿದು ತಂದುದನ್ನು ಇನ್ನಾರಿಗೋ ಅರ್ಪಿಸಿ ಪಡೆಯುವ ಪುಣ್ಯ ಶರಣ ಜೀವನಕ್ಕೆ ಸಲ್ಲದ್ದು ; ಕೈಗಡವಾಗಿ ತಂದ ಭಕ್ತಿ ಕೊನೆತನಕ ನಿಲ್ಲದ್ದು !"[15] ಕಾಯಕ ತಾರತಮ್ಯ ಜ್ಞಾನವನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ ವಿನೂತನ ಮಂತ್ರ, ಅದು ಕೇವಲ ಕರ್ಮವಲ್ಲ. ಅದನ್ನೂ ಉದಾತ್ತೀಕರಿಸಿದ ದಿವ್ಯ ಸೂತ್ರ, ಅಂತಹ ಬದುಕನ್ನು ಬಾಳಿದ ಶರಣರು ಜನಪದದ ಮೇಲೆ ಉಂಟು ಮಾಡಿದ ಪರಿಣಾಮವೂ ಅದ್ಭುತ. ಮತ್ತು "ಒಳಿತು-ಕೆಡುಕೆಂಬ ತಾರತಮ್ಯಜ್ಞಾನವಿಲ್ಲದ ಕಾಯಕಕ್ಕೆ ಅರ್ಥವಿಲ್ಲ ; ಸಾರ್ಥಕತೆ ಯಿಲ್ಲ."[16] ಕಾಯಕ ಸುಮ್ಮನೆ ದೇಹ ದಂಡನೆಯಿಂದ ಅರ್ಥವಾಗುವುದಲ್ಲ, ಬೌದ್ಧಿಕ ಕಸರತ್ತಿನಿಂದ ಮನನವಾಗುವಂಥದಲ್ಲ. ಅದು ಅರ್ಥವಾಗಬೇಕಾದರೆ ಶುದ್ಧ ವಿವೇಕದ ಬಲ ಬೇಕು, ಪರಿಶುದ್ಧ ಭಾವನೆಯ ಬೆಂಬಲವಿರಬೇಕು.

"ಮನುಷ್ಯ ದೊಡ್ಡವನೆನಿಸುವುದು ಹುಟ್ಟಿನಿಂದಲ್ಲ. ಅವನು ಸಾಧಿಸುವ ಜ್ಞಾನ ಕ್ರಿಯೆಗಳಿಂದ, ಸದ್ಭಕ್ತಿ ಸದಾಚಾರಗಳಿಂದ, ಜನಹಿತಕ್ಕಾಗಿ ಆತ ಕೈಕೊಳ್ಳುವ ಸತ್ಯ ಶುದ್ಧ

---

15 ಇಲ್ಲಿ ಸಲ್ಲುವರು–ಬಿ.ಎ. ಸನದಿ. ಪುಟ. 10
16 ಅಲ್ಲೇ—ಪುಟ. 11

ಕಾಯಕದಿಂದ! ಹೀಗೆ ಭಕ್ತಿ ಜ್ಞಾನ ಕ್ರಿಯೆಗಳದೊಂದು ಅಪೂರ್ವ ಸಮನ್ವಯ.''[17] ಯಾರೂ ಹುಟ್ಟಿನಿಂದ ಶ್ರೇಷ್ಠರೆನಿಸಿಕೊಳ್ಳುವುದಿಲ್ಲವೆಂಬುದನ್ನು ವೀರಶೈವ ಧರ್ಮ ಸಾರಿಸಾರಿ ಹೇಳಿತು. ಆದರೂ ಅದರ ಪೂರ್ಣ ಸಾಕಾರ ಕಾಣಬರದೇ ಹೋದುದು ದುರ್ದೈವದ ವಿಚಾರ. ನಮ್ಮಲ್ಲಿನ್ನೂ ಜಾತಿ ಜಂಗಮತ್ವಕ್ಕೆ ಪ್ರಾಶಸ್ತ್ಯಕೊಡುವ ಪರಿ ಪಾಠ ಹೋಗಿಲ್ಲ. ಆದರೆ ಜನಪದರು ಇಂಥವನ್ನು ಕಟುವಾಗಿಯೇ ಟೀಕಿಸುತ್ತಾರೆ.

ಜಂಗಮರಾದ್ರಿಂದ ಜಂಗಧರಿಸಲು ಬೇಕ
ಮಂಗಬುದ್ಧಿಗಳ ಬಿಡಬೇಕ। ಕೈಯೊಳ
ಲಿಂಗದ ಗ್ಯಾನ ಇರಬೇಕ॥

ಜಂಗಮನಿಗೂ ಕರ್ತವ್ಯ ಉಂಟು. ಜಂಗುಕಟ್ಟಿ ಧರ್ಮಪ್ರಸಾರ, ಧರ್ಮಬೋಧನೆ ಧರ್ಮದ ಆಚರಣೆ ಮುಂತಾದುವುಗಳನ್ನು ತಿಳಿಸುವ ಕಾಯಕ ಅವನದಾಗಿತ್ತು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಸ್ವರೂಪವನ್ನು ಭಕ್ತಸಮೂಹಕ್ಕೆ, ತಿಳಿಸಲು ಗ್ರಾಮದಲ್ಲಿ ಒಂದು ರಾತ್ರಿ, ನಗರದಲ್ಲಿ ಐದು ರಾತ್ರಿಗಳಷ್ಟು ಕಾಲ ವಾಸ್ತವ್ಯ ಮಾಡುತ್ತ ಸಂಚಾರ ಮಾಡಬೇಕಾಗಿತ್ತು 'ಜಂಗಮ' ಶಬ್ದವೇ 'ಚಲನಶೀಲ' ವೆಂಬುದನ್ನು ಸೂಚಿಸುತ್ತದೆ. ಅಷ್ಟ ಆವರಣಗಳ ಸಹಾಯದಿಂದ, ಪಂಚ ಆಚಾರಗಳ ಮಾರ್ಗದಲ್ಲಿ, ಷಟ್ ಸ್ಥಲಗಳ ಮೆಟ್ಟಲನ್ನು ಹತ್ತಿ ಇಳಿಯುವ ಸಾಧಕನಾದವನು ಜಂಗಮ. ''ನಿಂದರೆ ಭಕ್ತನಾಗಿ ನಿಲ್ಲಬೇಕು, ಸುಳಿದರೆ ಜಂಗಮವಾಗಿ ಸುಳಿಯಬೇಕು''—ಎಂದಿಲ್ಲವೆ ಪ್ರಭುದೇವರು. ಅಂಥ ಜಂಗಮರು ವೀರಶೈವಧರ್ಮದ ಪ್ರಸಾರದಲ್ಲಿ ತೊಡಗಿದ್ದುಂಟು; ಜನಪದದಲ್ಲಿ ಬೆಳಗಿದ್ದುಂಟು. ಜಂಗಮನಿಗೆ 'ಮಂಗ ಬುದ್ಧಿ' ಇರಬಾರದು, ಕೈಯೊಳಗಿನ ಲಿಂಗದ 'ಗ್ಯಾನ' ಇರಬೇಕು ಎನ್ನುತ್ತದೆ ಜನಪದವಾಣಿ. ಶರಣರು ಮಾಡಿದ ಸುಧಾರಣೆಯ ಮುಕ್ತಾಫಲ. ಕಾಯಕಕ್ಕೆ ಯಾರೂ ಹೊರತಲ್ಲ, ಕಾಯಕದಿಂದ ಯಾರಿಗೂ ವಿನಾಯಿತಿ ಇಲ್ಲ. ಏಕೆಂದರೆ—

ಕ್ರಿಯೆಯಿಲ್ಲದ ಭಕ್ತ ಮನುಜ
ಕ್ರಿಯೆಯಿಲ್ಲದ ಜಂಗಮ ರಾಕ್ಷಸ
ಕ್ರಿಯೆಯಿಲ್ಲದ ಪ್ರಸಾದಿ ಯವನ
ಕ್ರಿಯೆಯಿಲ್ಲದ ಪ್ರಾಣಲಿಂಗಿ ಭವಿ
ಕ್ರಿಯೆಯಿಲ್ಲದ ಶರಣ ಅಜ್ಞಾನಿ
ಕ್ರಿಯೆಯಿಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ
ಕೂಡಲ ಚೆನ್ನಸಂಗಮದೇವ॥

ಎನ್ನುತ್ತಾರೆ ಚೆನ್ನಬಸವಣ್ಣ. ಕ್ರಿಯೆ, ಕಾಯಕ, ಭಕ್ತ, ಜಂಗಮ, ಪ್ರಸಾದಿ,

---

17 ಅಲ್ಲೇ—ಪುಟ. 13

ಪ್ರಾಣಲಿಂಗಿ, ಶರಣ, ಐಕ್ಯ ಯಾರನ್ನೂ ಬಿಟ್ಟದ್ದಲ್ಲ, ಬಿಟ್ಟರೆ ಕಾಯಕವಲ್ಲ. ಮರ್ತ್ಯಕ್ಕೆ ಬಂದ ನಂತರ ಕರ್ತಾರನ ಕಮ್ಮಟದಲ್ಲಿ ಸುಮ್ಮನೆ ಕೂರುವಂತಿಲ್ಲ.

ಮರ್ತ್ಯಕ್ಕ ಬಂದೀದಿ ಕರ್ತವ್ಯಮಾಡಾಕ
ಮರ್ತು ಕುಂತೀ ಯಾಕ ಮರ್ತ್ಯ । ಒಯ್ದೀತು
ತುರ್ತು ಮಾಡಣ್ಣ ನಿನ ಕೆಲಸ ॥

ಎನ್ನುತ್ತದೆ ಜನಪದರ ಮಾತು. ಕಾಯಕದಲ್ಲಿ ಆಲಸ್ಯ ಸಲ್ಲ, ನಿರಂತರ ಎಚ್ಚರಿಕೆ ಅಗತ್ಯ. 'ತುರ್ತು ಮಾಡಣ್ಣ ನಿನ ಕೆಲಸ' —ಎಂದೇ ಆದರ ತಗಾದೆ. ಕುಂಬಾರ ಗುಂಡಯ್ಯನಂಥ ಶರಣರ ಜೀವನದಲ್ಲಿ ಕಾಯಕ ಎಂಥ ಎತ್ತರ—ಬಿತ್ತರಗಳನ್ನು ಹಾಸು—ಬೀಸುಗಳನ್ನು ಪಡೆದಿತ್ತೆನ್ನುವುದನ್ನೂ ಕಾಣಬಹುದು.

ಅನುಭಾವ ಆವಿಗೆಗೆ ಕನಲೆಂಬ ಕಿಚ್ಚಿಟ್ಟು
ತಣಿವಂತೆ ಸುಡಲು ಶಿವಭಕ್ತಿ । ಮಡಿಕೆಗಳ
ದಣುವಾರಿ ಹೋಯ್ತು ಕಾಯಕದ ॥

ಅನುಭಾವ ಮತ್ತು ಅಭಿವ್ಯಕ್ತಿಗಳ ಸಾವಯವ ಶಿಲ್ಪವನ್ನಿಲ್ಲಿ ಕಾಣಬಹುದಲ್ಲವೆ? "ಅನುಭಾವ" ಎನ್ನುವುದು ಒಂದು ವಿಶೇಷವಾದ ಮಾನಸಿಕ ನಿಲುವು. ಆ ನಿಲುವಿನಲ್ಲಿ ಆತ ಕಂಡ ಕಾಣ್ಕೆಗಳು 'ಅನುಭಾವ ಸಾಹಿತ್ಯ'ದಲ್ಲಿ ಪ್ರಕಟವಾಗುತ್ತವೆ. ಅನುಭಾವಿಯು ಮೂಲತಃ ಭಕ್ತನೂ ಆಗುತ್ತಾನೆ. ಆದರೆ ಭಕ್ತರಾದವರೆಲ್ಲಾ ಅನುಭಾವದ ನಿಲುವಿಗೆ ಏರಿರುತ್ತಾರೆಂದು ಹೇಳಲು ಬಾರದು"[18] ಜನಪದ ಕವಿ ಇಲ್ಲಿ ಅನುಭಾವಿಯೂ ಆಗಿದ್ದಾನೆ, ಭಕ್ತನೂ ಆಗಿದ್ದಾನೆ.

ಹೀಗೆ "ಕ್ರಿಯಾರಹಿತವಾದ ಭಕ್ತಿಗೆ ವೀರಶೈವ ಧರ್ಮದಲ್ಲಿ ಯಾವ ರೀತಿಯ ಮನ್ನಣೆಯೂ ಇಲ್ಲ. ಭಕ್ತಿ ಎಂದರೆ ಭಗವಂತನ ನಾಮಸ್ಮರಣೆ, ಅರ್ಚನೆ, ಭಜನೆ. ಇವುಗಳಿಂದ ಮಾತ್ರ ಭಗವಂತನ ಸಾಕ್ಷಾತ್ಕಾರ ಸಾಧ್ಯ ಎಂಬ ಕ್ರಮ ವೀರಶೈವ ಧರ್ಮಕ್ಕೆ ಸಮ್ಮತವೆನಿಸಲಿಲ್ಲ. ಇವರ ಪ್ರಕಾರ ಕರ್ಮ ಎಂದರೆ ಯಜ್ಞ ಯಾಗಾದಿಗಳ ರೂಪದಲ್ಲಿ ನಡೆಯುವ ವೈದಿಕ ಕ್ರಿಯೆಯಲ್ಲ. ಕರ್ಮ ಎಂದರೆ ಶರೀರವನ್ನು ದಂಡಿಸಿ ಮಾಡುವ ಕಾರ್ಯ. ಕಾಯಕದಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಲಾಭಗಳೆರಡೂ ಉಂಟು. ಕಾಯಕದಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯವಾಗುತ್ತದೆ. ಅಂತೆಯೇ ಸಾಮಾಜಿಕ ಜನತೆಗೂ ಇದು ಒಂದು ಸುಲಭ ಸಾಧನ. ಶ್ರದ್ಧೆಯಿಂದ ಮಾಡುವ ಕಾಯಕ ಭಕ್ತಿಯಿಂದ ಮಾಡುವ ಪೂಜೆಗಿಂತಲೂ ಶ್ರೇಷ್ಠವಾದದ್ದು. ಭಗವಂತನಿಂದ ನಡೆಯುವ ಸೃಷ್ಟಿ ಕಾರ್ಯವೆಲ್ಲವೂ ಭಗವಂತನ ಕಾಯಕದ ಫಲ, ಭಗವದ್ಗೀತೆಯಲ್ಲಿ ಹೇಳಿದಂತೆ ಪರಮಾತ್ಮನು ಸದಾ ಕಾರ್ಯನಿರತನಾಗಿರುತ್ತಾನೆ"[19].

---

18 ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–ಕನ್ನಡ ಸಾಹಿತ್ಯ ಸಮೀಕ್ಷೆ ಜಿ.ಎಸ್. ಶಿವರುದ್ರಪ್ಪ– ಪುಟ. 551

19 ಶೈವ ಮತ್ತು ವೀರಶೈವ–ಒಂದು ತಾತ್ವಿಕ ವಿಶ್ಲೇಷಣೆ–ಸಿದ್ಧಗಂಗಾಶ್ರೀ, ಪುಟ. 551

ಜನಪದರು ಮನಸ್ಸಿಟ್ಟು ದುಡಿಯುವುದೇ, ಕಾಯಕ ಮಾಡುವುದೇ ಶಿವಪೂಜೆಯೆಂದು ನಡೆದುಕೊಂಡವರು.

ಕಲ್‌ಹೊಡಿ ನೆನೆದೇನ ಕಲ್ಯಾಣದಯ್ಯನ
ಅಲ್ಲಿ ಕೂಡಲದಸಂಗಮನ । ಬಸವನ
ಸೊಲ್ಲುಸೊಲ್ಲೀಗೆ ನೆನದೇನ ॥

ಎಂದು ಬೀಸುವ ಕಲ್ಲಿಗೆ ಕೈಹಚ್ಚುತ್ತಲೇ ಕಾಯಕತತ್ವಪ್ರತಿಪಾದನೆ ಮಾಡಿದ ಅಣ್ಣ ಬಸವಣ್ಣನವರನ್ನು "ಸೊಲ್ಲುಸೊಲ್ಲಿಗೆ" ನೆನೆದು ಬಾಳಿದರು, ಜನಪದರು ಮುಗ್ಧರು. ಅವರ ಹೃದಯ ಭೂಮಿಯಲ್ಲಿ ಬಿತ್ತಿದ ಶರಣರ ಕಾಯಕತತ್ವ ಹೂವಾಗಿ ಅರಳಿತು. ಅಷ್ಟೇ ಅಲ್ಲ, ಭಗವಂತನೂ ಕಾಯಕಯೋಗಿ ಎಂಬುದನ್ನು ಕಂಡುಕೊಂಡರು ಅವರು. ಭಗವಂತ ಎಲ್ಲೆಲ್ಲಿ, ಹೇಗೆಹೇಗೆ ಕಾಯಕ ನಿರತನಾಗಿದ್ದಾನೆಂಬುದನ್ನು ಅವರ ಒಳಗಣ್ಣು ಕಂಡಿದೆ.

ಹೂವಿನಾಗೆ ಹುದುಗ್ಯಾನ ಮಾಲ್ಯಾಗೆ ಮಲಗ್ಯಾನ
ಮೊಗ್ಗಾಗೆ ಕಣ್ಣುತೆರೆದಾನ । ಲಿಂಗಯ್ಯನನೋದಟಿಗೆ
ನಿದ್ದೆ ಬಯಲಾಗಿ ॥

ಜನಪದಕವಿ 'ಲಿಂಗಯ್ಯ'ಹೂವಿನಲ್ಲಿ 'ಹುದುಗು'ವುದನ್ನು ಮಾಲೆಯಲ್ಲಿ 'ಮಲಗು'ವುದನ್ನು 'ಮೊಗ್ಗಲ್ಲಿ' ಕಣ್ಣುತೆರೆ'ಯುವುದನ್ನು—ನಿರಂತರ ಕ್ರಿಯಾಶೀಲನಾಗಿರುವುದನ್ನು ನೋಡಿ 'ನಿದ್ದೆ ಬಯಲು'ಗೊಂಡಿರುವ ಈ ಪರಿ ಭವ್ಯವಾದದ್ದು ಕಾಯಕದ ಕಣ್ಣಿಗೆ ಹೊಳೆದು ಬೆಳಗಿದ್ದು. ಜಗದ್ವ್ಯಾಪಿಯೂ, ಸರ್ವಾಂತರ್ಯಾಮಿಯೂ ಆದ ಪರಶಿವನನ್ನು ಸಾಕಾರ ಗೊಳಿಸಿ, ದೇಗುಲದಲ್ಲಿ ಸ್ಥಾಪಿಸಿ, ಮುಗಿಲೆತ್ತರದ ಗೋಪುರವನ್ನು ನಿರ್ಮಿಸಿ ದೇವರಿಂದ ದೂರನಿಂತು ಅರ್ಚಕನೊಬ್ಬನಿಂದ ಅರ್ಚಿಸುವ ಮಂದಭಕ್ತ, ವೀರಶೈವದ ಭಕ್ತಿಸ್ಥಲಕ್ಕೆ ಬಲುದೂರ.[20] ನಿಸರ್ಗದ ಚೆಲುವಿನಲ್ಲಿ 'ಲಿಂಗಯ್ಯ'ನ ಲೀಲಾವಿನೋದವನ್ನು ಕಾಣುವ ಜ್ಞಾನ ಸಮನ್ವಿತವಾದ ಕಣ್ಣು ಜನಪದಕವಿಯ ಕಾರ್ಯದ ನಿಷ್ಠೆ.

ವೀರಶೈವಧರ್ಮದ ಬೇರು ಕಾಯಕ, ಹೂವು ದಾಸೋಹ. ಆಧುನಿಕ ಜಗತ್ತಿನ ಸಮಸ್ಯಾತ್ಮಕ ಸಂಕೀರ್ಣಜೀವನಕ್ಕೆ ಶರಣಧರ್ಮದ ಈ ಕೊಡುಗೆ ತಾರಕಪರಿಹಾರ. ದಾಸೋಹ ತನು-ಮನಗಳಿಂದ ದುಡಿದು ತಂದ ಕಾಯಕದ ಫಲ. ಅದು ದಾನವಲ್ಲ. ದಾನಕ್ಕೂ ದಾಸೋಹಕ್ಕೂ ವ್ಯತ್ಯಾಸವಿದೆ. ದಾನಮಾಡುವ ಕ್ರಿಯೆಯಲ್ಲಿ ಮಾಡುವವರ. ಅಂತಸ್ತು ಎತ್ತರದ್ದೆಂಬ ಅಂತಸ್ಥ ಅಹಂಭಾವವೊಂದು ಮಿಸುಂಗಾಡುತ್ತಿರುತ್ತದೆ. ಆದರೆ ದಾಸೋಹದಲ್ಲಿ ತನ್ನ ಗಳಿಕೆಯನ್ನು 'ಜಂಗಮ'ಕ್ಕೆ ಅರ್ಪಿಸುವ ಅರ್ಪಣಾಭಾವವಿರು ತ್ತದೆ. ತ್ರಿವಿಧ ದಾಸೋಹ ವೀರಶೈವಧರ್ಮದಲ್ಲಿ ಕಾಣಬರುವ ವಿಶಿಷ್ಟಕ್ರಮ.

———

20 ಶೈವ ಮತ್ತು ವೀರಶೈವ—ಒಂದು ತಾತ್ವಿಕ ವಿಶ್ಲೇಷಣೆ—ಸಿದ್ಧಗಂಗಾ ಶ್ರೀ ಡಾ॥ ಎ. ಎಲ್. ಶಿವರುದ್ರಪ್ಪ. ಪುಟ. 550.

ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವನ್ನರ್ಪಿಸುವ ವಿಧಾನ ಆದರದ್ದು. ದಾಸೋಹ, ಕೇವಲ ಗಳಿಸಿದ ದ್ರವ್ಯವನ್ನು ಬಂದ ಜಂಗಮರಿಗೆ ಅರ್ಪಿಸುವುದೇ ಅಲ್ಲ. 'ಮಾಡಿದೆನೆಂಬುದು ಮನದಲ್ಲಿ ಹೊಳೆಯದೆ' ಮಾಡುವಂಥಾದ್ದು. ದಾಸೋಹವೆಂದಾಕ್ಷಣ ಕಣ್ಣೆದುರು ನಿಲ್ಲುವ ಮಹಾಮೂರ್ತಿ ಬಸವಣ್ಣನವರು. ದಾಸೋಹವಿಲ್ಲದೆ ಬಸವಣ್ಣನಿಲ್ಲ; ಬಸವಣ್ಣನಿಲ್ಲದೆ ದಾಸೋಹವಿಲ್ಲ. ಜನಪದದಲ್ಲಿ ನೆಲೆನಿಂತಿರುವ ಬಸವಣ್ಣ ರಾಜಕಾರಣಿ ಮಂತ್ರಿಬಸವಣ್ಣನಲ್ಲ, ಸಮಾಜಸುಧಾರಕ ಬಸವಣ್ಣನಲ್ಲ, ಸಕಲವಿದ್ಯಾಪಾರಂಗತ ಬಸವಣ್ಣನಲ್ಲ, ದಾಸೋಹಿ ಬಸವಣ್ಣ.

ದಾಸೋಹಿ ಬಸವಣ್ಣ ದಾಸೋಹ ಕಲಿಸಿದನಂ
ದೇಶದೇಶೆಲ್ಲ ಕೇಳುತಲಿ। ಹೊಸಮಾತ
ಮಾಸಿದುವು ವೇದ ಹುಸಿಯೆಂದು॥

ಬಸವಣ್ಣ ದಾಸೋಹಿ, ಕಲಿಸಿದ್ದು ದಾಸೋಹ, ಕಲಿತದ್ದು ದೇಶದೇಶವೆಲ್ಲ, ಕಲಿಸಿದ ಮಾತು "ಹೊಸಮಾತು." ದುಡಿ, ದುಡಿದುದನ್ನು ಸಮಾಜಕ್ಕೆ ಹಂಚಿ ಉಣ್ಣು. "ಶಾಸ್ತ್ರ ಘನವೆಂಬೆನೆ ? ಕರ್ಮವ ಭಜಿಸುತ್ತಿದೆ ! ವೇದ ಘನವೆಂಬೆನೆ ? ಪ್ರಾಣಿವಧೆಯ ಹೇಳುತ್ತಿದೆ ! ಸ್ಮೃತಿ ಘನವೆಂಬೆನೆ ? ಮುಂದಿಟ್ಟರಸುತ್ತಿದೆ ! ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ !" ತ್ರಿವಿಧ ದಾಸೋಹದಲ್ಲಿ ದೇವನನ್ನುಕಂಡರು ಬಸವಣ್ಣ. ಅವರಲ್ಲಿ ಅರ್ಪಣೆ, ಅನುಭಾವ ಹೆಪ್ಪುಗಟ್ಟಿದ ಕನ್ನಡ ನಾಡಿನ ಜನಪದರು ದಾಸೋಹದ ಸಿದ್ಧಿಯನ್ನು ಕಂಡರು.

ಅರ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ। ಹಾಲ್ಗೊಳೆಯ
ತೆಪ್ಪ ದಾಸೋಹ ತೇಲುತಲಿ॥

ಕಾಯಕದ ಸಿದ್ಧಿ ದಾಸೋಹದಲ್ಲಿ. ಷಟ್‌ಸ್ಥಲದ ಸಿದ್ಧಿ ದಾಸೋಹದಲ್ಲಿ. ಉಂಡು ತೇಗಿತು ಜಗತ್ತು. ಕಾಯಕ ಮತ್ತು ದಾಸೋಹಗಳು ಒಂದೇ ನಾಣ್ಯದ ಎರಡು ಮುಖಗಳು. ಆ ನಾಣ್ಯ ವೀರಶೈವಧರ್ಮ. ಜನಪದರವರೆಗೆ ಅದು ಇಳಿದುಬಂದಿದ್ದರ ಫಲವಾಗಿ

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡಕಂಡಲ್ಲಿ ದಾಸೋಹ। ಕಾಯಕದ
ಕಂಡಜೀವನದ ಶಿವಮಾತು॥

ಕಲ್ಯಾಣಕ್ರಾಂತಿಯ ಫಲವಾಗಿ 'ಶರಣಸಂಘಟನೆ' ಚದುರಿಹೋಯಿತಾದರೂ ಕಾಯಕ ಮತ್ತು ದಾಸೋಹದ ಪರಂಪರೆ ಮುದುರಿಹೋಗಲಿಲ್ಲ, ಇಂದಿಗೂ ವೀರಶೈವ ಮಠಗಳು ತಮ್ಮ ಇತಿಮಿತಿಯಲ್ಲಿ ದಾಸೋಹ ಪರಂಪರೆಯನ್ನು ಉಳಿಸಿಕೊಂಡೇ ಬಂದಿದೆ. ಅಲ್ಲದೆ ಆ ದಾಸೋಹ ಕೇವಲ ಗುರು, ಲಿಂಗ ಜಂಗಮರಿಗೇ ಸೀಮಿತವಾಗದೆ, ಸಕಲ ಜೀವರಿಗೂ ತೆರೆದಿರುವ ಜ್ವಲಂತಸಾಕ್ಷಿಯಾಗಿ ಅನೇಕ ಮಠಗಳಿವೆ. ಇಂಥ ಮಠಗಳೂ ಸಹ ಮುಗ್ಧ

ಜನಪದರ ಜೀವನದಲ್ಲಿ ಮಹತ್ತರವಾದ ಪ್ರಭಾವ, ಪರಿಣಾಮಗಳನ್ನು ಮಾಡಿವೆ. "ಸಿದ್ಧಗಂಗೆಯ ಊಟ, ಶಿವಗಂಗೆಯ ನೋಟ" ಎಂಬ ಗಾದೆಮಾತು ಶರಣಧರ್ಮದ ದಾಸೋಹಕ್ಕೆ ತೆರೆದ ಒಂದು ರಸಗವಾಕ್ಷವಾಗಿದೆ. ಅನುಭವದ ರನ್ನಗನ್ನಡಿಯಾಗಿದೆ. ಗಾದೆಯೂ ಜನಪದ ಸಾಹಿತ್ಯದ ಒಂದು ಅವಿಭಾಜ್ಯ ಅಂಗವೆಂಬುದನ್ನು ಗಮನಿಸಿದಾಗ ವೀರಶೈವ ಧರ್ಮ ಜನಪದರ ಬದುಕಿನಲ್ಲಿ ಹೇಗೆಹೇಗೆ ಬದುಕಿದೆ ಎಂಬುದನ್ನು ಕಾಣಬಹುದಲ್ಲವೆ ?

ಇಳಿಹಾಳ ಬೊಮ್ಮಯ್ಯ ಶಿವಶರಣ. ಬೇಸಾಯ ಅವನ ಕುಲಕಸಬು.

ಇಳಿಹಾಳಬೊಮ್ಮಯ್ಯ ಹೊಲಗೆಲಸ ಕಾಯಕವ
ನಲುಮೆಯಲ್ಲಿ ಮಾಡಿ ದಾಸೋಹ । ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥

ಹೊಲಗೆಲಸ ಕಾಯಕವನ್ನು ಆತ್ಮಸಂತೋಷದಿಂದ ಮಾಡಿ ದಾಸೋಹ ನಡೆಸಿ, ಹರಸೇವೆ ಸಲಿಸಿ, ಲಿಂಗದೊಳು ಬಯಲಾದ ಶರಣನ ಪರಿ ಇಂತಾದರೆ, ಹೂಗಾರ ಮಾದಯ್ಯ–

ಬಹ ಭಕ್ತಮಾದಯ್ಯ ಕಡುಶರಣ ಕಾಯಕಕೆ
ಮುಡಿದು ಶಿವಮಂತದ ದಾಸೋಹ । ನಡೆಸಿದ್ದ
ಪಡುಂಗೆರೆಯ ಗದ್ದೆ ಬೆಳೆದಂತೆ ॥

ದಾಸೋಹ ಗದ್ದೆಬೆಳೆದಂತೆ ನಡೆದಿತ್ತು ಎಂಬಲ್ಲಿ ಜಾನಪದಸಾಹಿತ್ಯದ ಸೊಗಡು, ಶರಣ ಸಾಹಿತ್ಯದ ಸೊಮ್ಮು ಘಮಘಮಿಸುವುದನ್ನೂ ಅನುಭವಿಸಬಹುದು. ಅತ್ತ ಮಕ್ಕಳ ಕೈಗೆ ತುತ್ತು ರೊಟ್ಟಿ ಕೊಡದ ಧರ್ಮ ಧರ್ಮವಲ್ಲವೆಂಬುದನ್ನು ವೀರಶೈವ ಧರ್ಮ ಜನಪದದ ಹಾಡುಗಳ ಮೂಲಕ ಸಾದರಪಡಿಸುತ್ತ ಬಂದಿದೆ.

ಇಷ್ಟಲಿಂಗ ಪೂಜೆ ವೀರಶೈವದ ಪ್ರಧಾನ ಲಕ್ಷಣ. ಇಷ್ಟಲಿಂಗವೊಂದೇ ವೀರಶೈವರ ಪರಮ ಆರಾಧ್ಯಮೂರ್ತಿ. ಆ ಲಿಂಗದ ಉದ್ದೇಶ ಮತ್ತು ಉಪಾಸನಾಕ್ರಮಗಳನ್ನು ತಿಳಿಸಿಕೊಡಲು ಇರುವ ವ್ಯಕ್ತರೂಪಿಗಳೇ ಗುರು ಮತ್ತು ಜಂಗಮ. ಜಗತ್ತಿನ ಯಾವುದೇ ಧರ್ಮವನ್ನು ಅವಲೋಕಿಸಿದರೂ ಒಂದು ಧರ್ಮಕ್ಕೆ ಒಬ್ಬನೇ ಗುರುವಿರುವುದು ಕಾಣಬರುತ್ತದೆ. ಆದರೆ ವೀರಶೈವ ಧರ್ಮದಲ್ಲಿ ಗುರು ಮತ್ತು ಜಂಗಮರಿಬ್ಬರಿದ್ದಾರೆ. ಇದೇ ಈ ಧರ್ಮದ ಇನ್ನೊಂದು ವೈಶಿಷ್ಟ್ಯ. ಗುರು ಕ್ರಿಯಾಮೂರ್ತಿಯಾದರೆ ಜಂಗಮ ಜ್ಞಾನಮೂರ್ತಿ, ಅಲ್ಲದೆ. ಗುರು, ಜಂಗಮ ಎಂಬುವು ಪ್ರತ್ಯೇಕವಲ್ಲ. ಅವು ಸಾಧಕನ ಪ್ರಗತಿಪಥದ ಬೇರೆಬೇರೆ ಹಂತಗಳು. ಗುರು ಜಂಗಮನಾಗಬಲ್ಲ, ಜಂಗಮ ಗುರುವಾಗಬಲ್ಲ. ಆದರೆ ವೀರಶೈವಧರ್ಮದಲ್ಲಿ ಗುರುವರ್ಗ. ಜಂಗಮವರ್ಗ ಎಂಬ ಭಿನ್ನಶ್ರೇಣಿ ಏರ್ಪಟ್ಟಿದ್ದು 'ಲೋಕದ ಡೊಂಕು' ಎನ್ನಬೇಕು. ಗುರು ಜಂಗಮರ ಮಧ್ಯದಲ್ಲಿ ಲಿಂಗವಿದೆ. ಲಿಂಗ ಭಕ್ತನ ಸಂಕೇತ. ಲಿಂಗವಿದ್ದವನೆ ಭಕ್ತ. ಲಿಂಗವನ್ನು ಎಂದರೆ ಭಕ್ತನನ್ನು ಕೈಹಿಡಿದು ನಡೆಸುವ ಮಹಾ ಚೇತನಗಳು ಗುರು ಜಂಗಮರು. ಅಂತಹ ಗುರುವನ್ನು ಜಾನಪದಸಾಹಿತ್ಯ ಹೃದಯ ತುಂಬಿ ಹಾಡುತ್ತದೆ.

ಗುರುವಿನ ನೆನೆದೇನ ಗುರುಸ್ವಾಮೀ ನೆನೆದೇ ನ
ಗುರುವಿನ ಗುರುವ ನೆನೆದೇನ। ನನ್ನೂರ
ಹಿರಿಯರುಮಠದವರ ನೆನೆದೇನ॥

ಮುಗ್ಧಮನದ ಜನಪದರಿಗೆ ಗುರುವನ್ನು, ಗುರುಸ್ವಾಮಿಯನ್ನು ಸ್ಮರಿಸುವಲ್ಲಿ ಇನ್ನಿಲ್ಲದ ಆನಂದ. ಅದರಲ್ಲೂ 'ಗುರುವಿನ ಗುರುವನ್ನು'—ಜಂಗಮವನ್ನು ನೆನೆದೇ ಬದುಕೇನು. ಎನ್ನುತ್ತದೆ. 'ಗುರುವಿನ ಗುರು ಜಂಗಮ' ಎನ್ನುತ್ತದೆ ವೀರಶೈವ ಧರ್ಮ. ಮಠ ಮಾನ್ಯಗಳಲ್ಲಿ ನೆಲಸಿದರೂ ಗುರು, ಜಂಗಮರ ಕರ್ತವ್ಯಗಳು ಗುರುತರವಾಗಿದ್ದವು. ಭಕ್ತ ಸಮೂಹ ಧರ್ಮದಾಚರಣೆಯಲ್ಲಿ ತಪ್ಪದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಅವರದು. ಅಂಥ ಗುರುಗಳನ್ನು ಜನಪದರು ಶರಣುಮಾಡಿಯೇ ದಿನದ ಬಾಳನ್ನು ಆರಂಭಿಸುತ್ತಾರೆ—

ಶರಣೆಂಬೆ ಗುರುವಿಗೆ ಶರಣೆಂಬೆ ಶಿವನಿಗೆ
ಶರಣೆಂಬೆ ಶಿವನ ಮಡದೀಗೆ। ಗೌರಮ್ಮಗೆ
ಶರಣೆಂದು ಕಲ್ಲ ಹಿಡಿದೇನು॥

ಮುಂಗೋಳಿ ಕೂಗಿದಾಗ. ಮೂಡು ಕೆಂಪೇರುವ ಮುನ್ನ, ಬೀಸುವ ಕಲ್ಲಿಗೆ ಕೈಹಚ್ಚಿ ಕುಳಿತಗರತಿ ಮೊದಲು ಶರಣೆನ್ನುವುದು ಗುರುವಿಗೆ ಅನಂತರ ಶಿವನಿಗೆ. ಅವಳಿಗೆ ಗೊತ್ತು, 'ಮಂಡಕೆಯು ಮಾಡುವೊಡೆ ಮಣ್ಣೆ ಮೊದಲು,' 'ಶಿವಪಥವರಿವೊಡೆ ಗುರುಪಥವೇ ಮೊದಲು— ಎಂಬುದು. ತಾನು ಶಿವಪಥವರಿಯಬೇಕಾದರೆ, ಗುರುವಿಗೆ ಶರಣೆನ್ನಬೇಕು ಎಂಬುದು ಗುರುಮುಟ್ಟಿ ಗುರುವಾಗುವುದನ್ನು ಅವಳು ಬಲ್ಲಳು. ತಾನು ಗುರುವಿನ ಗುಡ್ಡಳಾಗದ ಹೊರತು, ಶಿಷ್ಯಳಾಗದ ಹೊರತು ಕೃತಾರ್ಥಳಾಗಲಾರೆ ಎಂಬುದನ್ನು ಅವಳು ಬಲ್ಲಳು. ಅದಕ್ಕಾಗಿಯೇ "ಲಿಂಗ ಅಡಿಸೇರು, ಸೆಟ್ಟಿ ಸವಾಸೇರು" ಎಂಬುದನ್ನು ತಿಳಿಯ ಬಯಸ್ತಾಳು. ಲಿಂಗದ ಅಡಿಸೇರುವಂತಾಗಬೇಕಾದರೆ, ಸೆಟ್ಟಿಯ ಸಹವಾಸ ಸೇರಬೇಕಾದರೆ–ಗುರುವಿನ ಮಾರ್ಗದರ್ಶನ ಅತ್ಯಗತ್ಯ. ಏಕೆಂದರೆ 'ಧರಣಿಯ ಮೇಲೆ ಪಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ'–ಅವನ ಸಹವಾಸ ಸುಮ್ಮನೆ ದೊರೆಕೊಳ್ಳುವಂಥದಲ್ಲ, ಅದಕ್ಕೆ ಸಾಧಕಜೀವನ ಬೇಕು. ದಾರಿ ತೋರುವ ಗುರು ಬೇಕು. ಆಚರಣೆಯಲ್ಲಿ ನಿಷ್ಠೆಯಳಿಯದಂತಿರಬೇಕು.

ಅಂಗೈಯ ಒಳಗೀನ ಲಿಂಗಮೂರುತಿ ಸ್ವಾಮಿ
ಮಂಗಳಾರುತಿನಾ ಬೆಳಗಿ। ಬೇಡುವೆನು।
ಮಾರಾಯರ ಮುಂದೆ ಮರಣಾವ॥

ಎಂಬಂಥ ವೀರನಿಷ್ಠೆ ಬೇಕು. ಶರಣರು ಬರುವ ಎಡರು–ತೊಡರುಗಳನ್ನು ಎದೆಕೊಟ್ಟು ಸ್ವೀಕರಿಸಿದರು. "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ಈಗಲೇ ಬರಲಿ....ಮರಣವೇ ಮಹಾನವಮಿ" ಎಂದು ಉಗ್ಗಡಿಸಿದರು. ಜನಪದದ ಗರತಿ

ಇನ್ನೂ ಒಂದು ಹೆಜ್ಜೆ ಮುಂದೆಹೋದಳು. ತಾನು ತನ್ನ ಅಂಗೈಯ ಒಳಗಿನ ಲಿಂಗದಲ್ಲಿ ಬೇಡಿದ್ದು ಲೌಕಿಕದ ಭೋಗಭಾಗ್ಯಗಳನ್ನಲ್ಲ, 'ಮಾರಾಯರ ಮುಂದೆ ಮರಣವನ್ನು,' ಮತ್ತು ತಾನು ಪತಿವ್ರತೆಯಾಗಿಯೇ ಪತಿಯ ಸನ್ನಿಧಿಯಲ್ಲೇ ಇಹಯಾತ್ರೆ ಮುಗಿಸ ಬೇಕೆಂಬುದನ್ನು,

ಲಿಂಗನಿಷ್ಠೆ, ಧರ್ಮದ ಆಚರಣಾಪ್ರಜ್ಞೆ ಶಿಥಿಲವಾಗುವುದನ್ನು ಕಂಡಾಗ ಕಟುವಾಗಿ ಬೈಯ್ಯಲೂ ಹಿಂದೆ ಮುಂದೆ ನೋಡಿಲ್ಲ ಜಾನಪದಸಾಹಿತ್ಯ. ಗುರು ವಿಧ್ಯುಕ್ತವಾಗಿ ಕೊಟ್ಟ ಲಿಂಗವನ್ನು ಅಶ್ರದ್ಧೆಯಿಂದ ಕಂಡಾಗ, ಅವಜ್ಞೆಮಾಡಿದಾಗ ಕನಲಿ ಕೆಂಡವಾಗುತ್ತದೆ ಅದು.

ಕಟ್ಟಿದ ಲಿಂಗವನು ನೆಟ್ಟಗೂಟಕೆ ಹಾಕಿ
ನಿಟ್ಟಿಸದೆ ಮನೆಯ ಕೆಲಸವನು । ಮಾಡುಂಬ
ಭ್ರಷ್ಟರಿಗೆ ಎನ್ನಕೊಡಬೇಡ ॥

ಲಿಂಗವೇ ಗುರುವನ್ನು ಬೇಡಿದಂತಿರುವ ಈ ಚಿತ್ರ ಅದೆಂಥ ಪರಿಣಾಮಕಾರಿ ! ಹೆಣ್ಣು ಮಕ್ಕಳಲ್ಲಿ, ಅದರಲ್ಲೂ ಲಿಂಗವಂತ ಸಮಾಜದ, ನಾಗರಿಕರೆಂದುಕೊಂಡಿರುವ ಕಲಿತ ಹೆಣ್ಣು ಮಕ್ಕಳಲ್ಲಿ ಬೆಳೆದುಬಂದಿರುವ ಅನಿಷ್ಟ ಪದ್ಧತಿಯನ್ನು ನೋಡಿದಾಗಲಂತೂ,

*ಮೋರೆಯನು ತೊಳೆಯಳು ತೋರಳು ಅನ್ನವನು
ಆರರಿಯದಂತೆ ಒಳಗೊಳಗೆ ತಿನ್ನುವ । ಛೀ
ಮಾರಿಗೆ ಎನ್ನಕೊಡಬೇಡ ॥

ಎಂದು ಬಿರುನುಡಿಯುತ್ತದೆ. ದಾಸೋಹವನ್ನು ಮರೆತ ಹೆಣ್ಣಿಗೆ ತನ್ನನ್ನು ಕೊಡುವುದೇ ಬೇಡ ಎನ್ನುವ ಲಿಂಗದ ಈ ಗೋಳನ್ನು ನೋಡಿ—

*ಬಂದು ಜಂಗಮಲಿಂಗ ನಿಂದು ಭಿಕ್ಷವ ಬೇಡೆ
ಒಂದು ತುತ್ತನ್ನು ಒಳಗಿದ್ದು ಇಲ್ಲೆಂಬ
ಹಂದಿಗೆ ಎನ್ನಕೊಡಬೇಡ ॥

ಎನ್ನುವುದಲ್ಲದೆ—

*ಜಂಗಮನ ನಿಂದಿಸುವರಂಗಜಹರನರಿಯದ
ಭಂಗಬಿಟ್ಟು ತಮ್ಮ ಲಿಂಗವನರಿಯಂದ
ಭಂಗಿಬಡುಕನಿಗೆ ಎನ್ನಕೊಡಬೇಡ ॥

---

* ಸೋಮವಾರಪೇಟೆ ಪೂಜ್ಯ ಶ್ರೀಶ್ರೀ ಗುರುಸಿದ್ಧಸ್ವಾಮಿಗಳಿಂದ ಸಂಗ್ರಹಿಸಿದ್ದು. ಶ್ರೀಶ್ರೀ ಗಳವರು ತಮ್ಮ ಬಾಲ್ಯದಲ್ಲಿ ಪಾವಗಡದ ಹಳ್ಳಿಯೊಂದರಲ್ಲಿ ಆಜ್ಜಿಯೋರ್ವಳಿಂದ ಬೀಸುವ ಕಲ್ಲಿನ ಮೇಲೆ ಹಾಡುವಾಗ ಕಲಿತದ್ದೆಂದು ತಿಳಿಸಿದ್ದು.

ಎಂದು ಜಂಗಮನ ನಿಂದಿಸುವ, ಲಿಂಗವರಿಯದ, ದುರ್ವ್ಯಸನಿಗಳಿಗೆ ಲಿಂಗವೇಕೆ ? ಎನ್ನು ತ್ತದೆ. ಮತ್ತು ಗುರುಕೊಟ್ಟ ಇಷ್ಟಲಿಂಗವಿರುವಾಗ ಅದನ್ನು ಬಿಟ್ಟು ಹಲವು ಹನ್ನೊಂದು ಕ್ಷುದ್ರ ದೈವಗಳಿಗೆ ನಡೆಕೊಳ್ಳುವುದನ್ನು ತೀವ್ರವಾಗಿ ಖಂಡಿಸುತ್ತದೆ.

*ತನ್ನ ಲಿಂಗವಬಿಟ್ಟು ಅನ್ಯದೈವಕೆ ಹೋಗಿ
ಬಣ್ಣಬಳೆದೊಟ್ಟು ಮೀಸಲನು । ಮಾಡುಂಬ
ಕುನ್ನಿಗೆ ಎನ್ನಕೊಡಬೇಡ ॥

"ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟೆ ಅಡಿಯಾಗಿ ಬೀಳುವ ಲೊಟ್ಟಿಮಾನವನ ಕಂಡರೆ ಎಡ ಪಾದರಕ್ಷೆ ತಕ್ಕೊಂಡು ಲಟಲಟನೆ ಹೊಡೆಯೆಂದಾತ ನಂಬಿಗರ ಚೌಡಯ್ಯ"—ಎಂಬ ವಚನ ನೆನಪಾಗುತ್ತದಲ್ಲವೆ ಜನಪದರ ಈ ಮಾತನ್ನು ಕೇಳುವಾಗ. ಗುರುಕೊಟ್ಟ ಲಿಂಗವನ್ನು ಸದಾ ಹೃದಯಸ್ಥಲದಲ್ಲಿಯೇ ಕಟ್ಟಿರಬೇಕಲ್ಲವೆ ? ಅದನ್ನು ಬಿಟ್ಟು ಸೊಂಟದ ಕೆಳಗೆ ಇಳಿಬಿಡುವುದನ್ನು, ಸೀರೆಯ ಸೆರಗಿನಲ್ಲಿ ಕಟ್ಟುವುದನ್ನು ಜಾನಪದಸಾಹಿತ್ಯ ವಿರೋಧಿಸುತ್ತದೆ.

*ನಾರಿ ತನ್ನ ಲಿಂಗವನು ಸೀರೆಸೆರಗಲಿ ಕಟ್ಟಿ
ಸೀರೆಮಾಸಿದರೆ ಅಗಸನಿಗೆ । ಹಾಕುಂಬ
ಮಾರಿಗೆ ಎನ್ನಕೊಡಬೇಡ ॥

ಅಶ್ರದ್ಧೆಯಿಂದಲೋ, ಅರಿಯದೆಯೋ, ಗುರು ಜಂಗಮರ ಮಾರ್ಗದರ್ಶನದ ಅಭಾವ ದಿಂದಲೋ ಇಂಥ ಪ್ರಮಾದಗಳಾಗಿರುವುದು ಸಂಭವ. ಅದನ್ನು ತಿದ್ದಿಕೊಳ್ಳುವ ಸಲುವಾಗಿ ಜನಪದರು ಹೀಗೆಲ್ಲ ಬೋಧಿಸಿದ್ದಾರೆ. ಆಸೆಗಳಿಗಾಗಿ, ಆಮಿಷಕ್ಕಾಗಿ, ಗುರುಗಳು ಲಿಂಗದೀಕ್ಷೆಯನ್ನು ಕೊಟ್ಟಿರಬೇಕು. ಅಂತಹ ಸಂದರ್ಭದಲ್ಲಿಯೂ ಲಿಂಗ ಗುರುವನ್ನು ಬೇಡಿದ ಈ ಚಿತ್ರ ನೋಡಿ.

*ಅನ್ನ ಹಚ್ಚಡ ತೇಜಿ ಹೊನ್ನಿಗಾಸೆಯಮಾಡಿ
ಚೆನ್ನಾಯಿತೆನುತ ನೀನೆನ್ನಕೊಟ್ಟರೆ
ಘನ್ನಪಾತಕವು ಗುರುಸ್ವಾಮಿ ॥

ಲೌಕಿಕವಾದ ಆಸೆ ಆಕಾಂಕ್ಷೆಗಳಿಂದ ಲಿಂಗವನ್ನು ಕೊಡುವುದು ಗುರುವಿಗೂ ಪಾತಕವನ್ನು ತರದೆ ಬಿಡದು ಎನ್ನುವ ಜನಪದರ ಮಾತಿನಲ್ಲಿರುವ ಕೆಚ್ಚನ್ನು ಗಮನಿಸಬೇಕು. "ಅಳಿಮನದವಂಗೆ ಶಿವದೀಕ್ಷೆಯ" ಕೊಡಲಾಗದು ಎಂದಲ್ಲವೆ ಬಸವಣ್ಣನವರು ಹೇಳಿದ್ದು, ಅದು ಎಷ್ಟು ಪರಿಣಾಮಕಾರಿಯಾಗಿ ಜಾನಪದಸಾಹಿತ್ಯದಲ್ಲಿ ಪ್ರತಿಬಿಂಬಿಸಿತು ! ಲಿಂಗಾಂಗಿಯಾದವನು ಯಾವಜ್ಜೀವವೂ ಲಿಂಗಸಂಗಿಯಾಗಿಯೇ ಇರಬೇಕು. ಲಿಂಗವಿರಹಿತವಾಗಿ ಇರಬಾರದು. ವಾತುಲಾಗಮದಲ್ಲಿ "ಮನುಷ್ಯರನ್ನು ಶುದ್ಧಿ

---

* ಸೋಮವಾರಪೇಟೆ ಪೂಜ್ಯ ಶ್ರೀಶ್ರೀ ಗುರುಸಿದ್ಧಸ್ವಾಮಿಗಳಿಂದ ಸಂಗ್ರಹಿಸಿದ್ದು

ಮಾಡುವುದರಿಂದ ಲಿಂಗವು 'ಪವಿತ್ರಂ' ಎಂದು ಹೇಳಲ್ಪಡುತ್ತದೆ. ಆದ್ದರಿಂದ ಎಲ್ಲ ಕಾಲದಲ್ಲಿಯೂ ಲಿಂಗಧಾರಣೆ ಮಾಡಬೇಕು. ಲಿಂಗ ಧರಿಸಿದವನು ಯಾವಾಗಲೂ ಶುದ್ಧನಾಗಿರುತ್ತಾನೆ'' [21] ಎಂದು ಹೇಳಿದೆ. ಆದುದರಿಂದಲೆ—

•ಇಷ್ಟಲಿಂಗಸ್ತೋತ್ರ ನಿಷ್ಠೆಯಿಂ ಜಪಿಸಿದರೆ
ಕಷ್ಟಕಾರ್ಪಣ್ಯ ಹರಿವುವು। ಸೃಷ್ಟಿಯೊಳು
ಇಷ್ಟಲಿಂಗದ ಸಂಗ ಬಿಡಬೇಡ ॥

ಎನ್ನುತ್ತದೆ ಜನಪದವಾಣಿ. ಇಷ್ಟಲಿಂಗದ ಮಹತ್ವ ತಿಳಿದ ನಂತರ ಸೃಷ್ಟಿಯಲೆಲ್ಲಾ ಅದರ ಪ್ರತಿಬಿಂಬ ಕಾಣುತ್ತದೆ, ಆಗ ಗುಡಿಯೊಳಗೆ ದೇವರನ್ನು ಹುಡುಕಲು ತೊಡಗುವುದಿಲ್ಲ.

ಆರೂತಿ ಹಿಡಕೊಂಡು ಆರಣ್ಯತಿರುಗ್ಯಾಳ
ದೇವರಿಲ್ಲೇನ ಗುಡಿಯಾಗ। ಕೊಟ್ರೇಶ
ಸಾವಿರಮಂದ್ಯಾಗ ಅಡಗ್ಯಾನ ॥

ಎಂದು ಸಾವಿರಮಂದಿಯಲ್ಲಿ ಅವನಿರವನ್ನು ಕಾಣುತ್ತದೆ. ''ಅಡವಿಯೊಳಗರಸುವೊಡೆ ಸಿಡಿಗಂಟೆ ತಾನಲ್ಲ; ಮಡುವಿನೊಳಗರಸುವೊಡೆ ಮತ್ಸ್ಯ ಮಂಡುಕನಲ್ಲ'' ಅದು. ತನ್ನಂತೆ ಪರರನ್ನು ಕಾಣುವ ಉದಾತ್ತ ನಿಲುವಿಗೆ ಏರುತ್ತದೆ. ಅಂಥ ನಿಲುವಿಗೇರಿದ ಸಾಧಕ ಜೀವಿಗೆ

ಕೈಲಾಸ ಕೈಲಾಸ ಕಾಣದ ಕೈಲಾಸ
ತಿಳಿಯದವರಿಗೆ ಮೋಸ। ಈ ಕಾಯ
ಶಿವಹರನ ಹಿರಿಯಮಂದಾಸ ॥

ಎಂಬ ಭಾವನೆ ಸ್ವಾನುಭಾವಕ್ಕೆ ಬರುತ್ತದೆ. ದೇಹವೇ ದೇವಾಲಯವೆಂಬ ಮಾತಂ ಜನಪದರ ಮಾತಿನಲ್ಲಿ ಸುಂದರವಾಗಿ ''ಈ ಕಾಯ ಶಿವಹರನ ಮಂದಾಸ'' ಎಂದು ಅರಳಿದೆ. ಕರಸ್ಥಲದಲ್ಲಿ ಇಷ್ಟಲಿಂಗವನ್ನಿಟ್ಟು ಪೂಜೆಮಾಡಿ, ಧ್ಯಾನಮುದ್ರೆಯಲ್ಲಿ ಕುಳಿತು ಲಿಂಗನಿರೀಕ್ಷೆಯಲ್ಲಿ ತೊಡಗಿದ ಸಾಧಕನಿಗೆ ಕಂಡುಂದಾದರೂ ಏನು—

ನಿರುಬಯಲ ನಾಕಂಡೆ ಅದರೊಳಗೆ ಅರಳುವ
ಬೆಳಗಿ ಮನಬೆಳಗಿ ಹೊಳೆದ। ಶಿವಬೆಳಗ
ನಾಕಂಡೆ ಶರಣು ಶರಣು''

ಬಯಲು ಬೆಳಗಿದುದನ್ನು ಕಾಣುವ ಎತ್ತರಕ್ಕೆ ಬೆಳೆದಿದ್ದಾನೆ ಸಾಧಕನಿಲ್ಲಿ. ಆ ಬಯಲಂ ಎಲ್ಲವನ್ನೂ ಒಳಗೊಂಡ ನಿರ್ಬಯಲು. ಸರ್ವಶೂನ್ಯ ನಿರಾಲಂಬ ಸ್ಥಿತಿ. ಅಲ್ಲಿ ಕಾಣ

---

21 ಶಕ್ತಿವಿಶಿಷ್ಟಾದ್ವೈತ—ಸಿದ್ಧಗಂಗಾ ಶ್ರೀ—ವಿದ್ವಾನ್ ವೈ. ವಿಶ್ವನಾಥಶಾಸ್ತ್ರಿ—ಪುಟ 463.
• ಸೋಮವಾರಪೇಟೆ ಪೂಜ್ಯ ಶ್ರೀಶ್ರೀ ಗುರುಸಿದ್ಧಸ್ವಾಮಿಗಳಿಂದ ಸಂಗ್ರಹಿಸಿದ್ದು.

ಬಂದುದು 'ಶಿವ ಬೆಳಗು' ಅದನ್ನು ಕಂಡನಂತರ 'ಶರಣು ಶರಣು' ಎಂಬುದೊಂದೇ ಶಬ್ದವುಳ್ಳ ಗ್ಧವಾಗುವ ಸ್ಥಿತಿ.

ಜಾನಪದ ಸಾಹಿತ್ಯದಲ್ಲಿ ವೀರಶೈವ ಧರ್ಮ ಅರಳಿರುವ ಬಗೆಯನ್ನು ಕಂಡಾಗ ಬೆರಗಾಗದಿರದು. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳ ಪ್ರಸ್ತಾವ ಪ್ರಾಸಂಗಿಕವಾಗಿ ಬಂದಿರುವುದನ್ನು ಕಾಣಬಹುದು.

ನಂಜನಗೂಡು ಚೆಂದ ನಂದಿಕೋಲು ಚೆಂದ
ಲಿಂಗಕಟ್ಟುವರ ಎದೆ ಚೆಂದ । ಲೋಕದಲಿ
ಈಭೂತಿಯಿಂಕ್ಕುವರ ಹಣೆ ಚೆಂದ ॥

ಲಿಂಗಧಾರಣೆಯಿಂದ ಕಾಣಬರುವ ಚೆಲುವು, ವಿಭೂತಿ ಧರಿಸುವುದರಿಂದ ಗೋಚರಿಸುವ ಚೆಲುವು ಲೋಕಪ್ರಿಯವಾದುವು ಎನ್ನುತ್ತದೆ ಜಾನಪದ. "ಕೂಡಲಸಂಗನ ಶರಣರಿಗೆ ನೊಸಲವಿಭೂತಿಯೆ ಶೃಂಗಾರ" ಎಂಬ ಬಸವಣ್ಣನವರ ವಚನ ಜನಪದರಲ್ಲಿ ಅರಳಿದ ಬಗೆಗೆ ಇದೊಂದು ನಿದರ್ಶನ. ಪಾದೋದಕವನ್ನು ಕುರಿತ ಒಂದು ಮುಕ್ತಕವನ್ನು ಪರಿಶೀಲಿಸಬಹುದು.

ಪಾದತೀರ್ಥವ ಸಲಿಸಿ ಪಾವನಾಯಿತು ಜನ್ಮ
ರೋಮ ರೋಮೆಲ್ಲ ರವಿ ಚಿನ್ನ ! ಗುರುಗಳ
ಪಾದದಲಿ ಕಂಡೆ ಪರಶಿವನ ॥

ವೀರಶೈವ ಧರ್ಮದಲ್ಲಿ ಪಾದೋದಕಕ್ಕೆ ತುಂಬು ಗೌರವ, ಎಣೆಯಿಲ್ಲದ ಮಹತ್ವ. ಪಾದೋದಕವಾದ ನಂತರ ಪ್ರಸಾದ.

ಲಿಂಗಕ್ಹೋಳಿಗೆ ಮಾಡಿ ಅಂಗೈಯೆ ನೊಂದವು
ಗಂಗಾಳ ಬೆಳಗಿ ಶಿರ ನೊಂದು ! ಸಿರಿಗೆರೆಯ
ಲಿಂಗವೆ ಬಿನ್ನಕೆ ದಯಮಾಡಿ ॥

ಗುರುವಿಗಾಗಿ. ಲಿಂಗಕ್ಕಾಗಿ ಹೋಳಿಗೆಯನ್ನು–ಪ್ರಸಾದವನ್ನು ಸಿದ್ಧಮಾಡಿ ತನ್ನು ಸವದಿದೆ, ಮನ ಕಾದಿದೆ, ಎಂಬ ಈ ಹೃದಯಸ್ಪರ್ಶಿ ಚಿತ್ರ ಅದೆಂಥ ಚೇತೋಹಾರಿ !

ಎದ್ದು ನೆನೆದೇನೇ ಸಿದ್ದ ಶಿವಭೋಗಿಯ
ರುದ್ರಾಕ್ಷಿ ಕಂತೆ ಒಡೆಯಾನ ! ಬಸವೇಶ್ವರನ
ನಿದ್ರೆಗಣ್ಣೇಲಿ ನೆನೆದೇನೆ ॥

ಎಂಬುದಾಗಿ ರುದ್ರಾಕ್ಷಿಧಾರಣ ಮಾಡಿದ ಬಸವಣ್ಣನವರ ಪವಿತ್ರಮೂರ್ತಿಯನ್ನು ನಿದ್ದೆ—ಎಚ್ಚರಗಳಲ್ಲಿ ಸ್ಮರಿಸುವಲ್ಲಿ ಜನಪದರಿಗೆ ಆನಂದ ಕಾಣುತ್ತದೆ.

ಸಂಜೀಯ ಬೆಳದಿಂಗಳು ಚಂದ ಗುಣಂಗಳು
ಗಂಧದ ಶಿವಗಂಪು ಸುತ್ತ ! ಸಿದ್ಧಲಿಂಗಸ್ವಾಮಿ

ಸಂಜೇಲೆ ಸಮಾಧಿ ನಡೆದಾರ !

ಸಿದ್ಧಲಿಂಗಸ್ವಾಮಿಗಳ ಸಮಾಧಿಯು ಸುಂದರ ದೃಶ್ಯ ಇದಲ್ಲವೆ ?

ವೀರಶೈವ ಧರ್ಮ ಬಸವಾದಿ ಶರಣರಿಂದ ಪ್ರವರ್ಧಮಾನಕ್ಕೆ ಬಂದುದು ಸರ್ವ ವೇದ್ಯ. ಅಂದಿನಿಂದ ಇಂದಿನವರೆಗೂ ಶರಣಧರ್ಮದ ಜ್ಯೋತಿಯನ್ನು ನಂದದ ಹಾಗೆ ಕಾಪಾಡಿಕೊಳ್ಳುತ್ತ ಬಂದ ಮಹಾಪುರುಷರು, ಶರಣಶ್ರೇಷ್ಠರು, ಶಿವಯೋಗಿ ಸಂಪನ್ನರು ನಾಡಿನುದ್ದಗಲದಲ್ಲಿ ಕಾಲ ಕಾಲದಲ್ಲಿ ಜನಿಸಿ, ಬೆಳಗಿ ಲಿಂಗದೊಳಗಾಗಿದ್ದಾರೆ. ಅಂಥವರ ಗದ್ದುಗೆಗಳು, ಮಠಮಾನ್ಯಗಳು ಇಂದೂ ಸೇವಾಮಣಿಹದಲ್ಲಿ ತೊಡಗಿವೆ. ಅವುಗಳ ಕಾರ್ಯ ಚಟುವಟಿಕೆಗಳನ್ನು ಕುರಿತಂತೆ ಜಾನಪದ ಸಾಹಿತ್ಯ ಮೂಡಿ ಬಂದಿದೆ. ಅದೇ ಒಂದು ಪ್ರತ್ಯೇಕ ಅಧ್ಯಯನಕ್ಕೆ ವಸ್ತುವಾಗುವಷ್ಟು ಸಮೃದ್ಧವಾಗಿದೆ. ಮಲೆಯ ಮಹದೇಶ್ವರ, ಕೊಟ್ಟೂರ ಬಸವೇಶ್ವರ, ಎಡೆಯೂರ ಸಿದ್ಧಲಿಂಗೇಶ್ವರ, ನಾಯಕನ ಹಟ್ಟಿ ತಿಪ್ಪೇಸ್ವಾಮಿ ಮುಂತಾಗಿ ಕೆಲವು ಹೆಸರುಗಳನ್ನು ಇಲ್ಲಿ ಉದಾಹರಿಸಬಹುದು. ಹಾಗೆಯೇ ಕಲ್ಯಾಣದ ಶರಣರನ್ನು ಕುರಿತಂತೆ ಹಂತಿಯ ಹಾಡುಗಳು ಉತ್ತರ ಕರ್ನಾಟಕ ದಲ್ಲಿ ಬಹು ಜನಪ್ರಿಯವಾಗಿವೆ. ಡಾ ॥ ಬಿ.ಎಸ್. ಗದ್ದಗಿ ಮಠರವರು "ಕನ್ನಡ ಜಾನ ಪದಗೀತಗಳು"—ಗ್ರಂಥದ ಕೊನೆಯಲ್ಲಿ ಅನುಬಂಧದಲ್ಲಿರುವ ಹಂತಿಯ ಹಾಡುಗಳನ್ನು ಇಲ್ಲಿ ಉದಾಹರಿಸಬಹುದು.

ವೀರಶೈವ ಧರ್ಮೀಯರಿಗೆ ಇಂದು ಬೇಕಾಗಿರುವುದು ಅಭಿಮಾನ. ಅದನ್ನು ಜನಪದರಿಂದ ನಾವು ಕಲಿಯಬೇಕಾಗಿದೆ.

ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೋ
ಕರುಣಿ ಕಲ್ಯಾಣದ ಬಸವಣ್ಣ ! ಕೂಡಲ ಸಂಗ
ಕಡೆತನಕ ಕಾಯೋ ಅಭಿಮಾನ ॥

ಎಂಬ ಆ ಅಭಿಮಾನಧನರಾಗಿ ಆಧುನಿಕ ಜಗತ್ತಿನಲ್ಲಿ ಜೀವಿಸಬೇಕಾಗಿದೆ. ವೀರ ಶೈವಧರ್ಮಕ್ಕೆ ಬಸವಣ್ಣನಂಥ ಮಹಾನುಭಾವನಿದ್ದಾನೆ ಎಂಬ ಅಭಿಮಾನ ಬೇಕಾಗಿದೆ. ಇಂದಿನ ವೈಜ್ಞಾನಿಕ, ವೈಚಾರಿಕ ಜಗತ್ತು ಬಸವಣ್ಣನನ್ನು, ಬಸವಣ್ಣನವರ ತತ್ವಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದೆ. ದೇಶ ವಿದೇಶಗಳಲ್ಲಿ ಹಲವು ಹನ್ನೊಂದು ಭಾಷೆಗಳಲ್ಲಿ ಆ ತತ್ವಗಳಿಂದು ಪ್ರಸಾರಗೊಳ್ಳುತ್ತಿವೆ. ಅದಕ್ಕೆ ಬದು ಕನ್ನೇ ಮೀಸಲಿಟ್ಟು ದುಡಿಯುತ್ತಿರುವ ವಿದ್ವಾಂಸ ಬಂಧುಗಳಿದ್ದಾರೆ. ಅಂಥ ಸಂದರ್ಭ ದಲ್ಲಿ ಮಹಾನುಭಾವರು ಪ್ರತಿಪಾದಿಸಿದ, ಸುಧಾರಿಸಿದ ಧರ್ಮ ಜನಪದರ ಮೇಲೆ ಉಂಟುಮಾಡಿದ ಪರಿಣಾಮದ ರಸಚಿತ್ರವನ್ನೂ ಮಾಡಿಕೊಡುವ ಅಗತ್ಯವಿದೆ.

ಮಲ್ಲಿಗೆ ಇದ್ದಾಗ ಮುಳ್ಳೇಕೆ ಮುಡಿಯುವೆ
ಕಲ್ಯಾಣದೊಳಗೆ ಬಸವಣ್ಣ। ನಿರುವಾಗ
ಕಲ್ಲಿಗೇಕೆ ಕೈಯ ಮುಗಿಯುವೆ ॥

ಜನಪದರಿಗೆ ಬಸವಣ್ಣ ಅರ್ಥವಾಗಿದ್ದಾನೆ. ಅವನು ನಡೆದ ಧರ್ಮ ಲಿಂಗವಂತ ಧರ್ಮವಾಗಿದೆ. ವೀರಶೈವ ಧರ್ಮ ಅರ್ಥವಾಗಬೇಕಾದರೆ ಬಸವಣ್ಣನವರನ್ನು ಅರ್ಥ ಮಾಡಿಕೊಳ್ಳಬೇಕು. ಬಸವಣ್ಣನವರು ಅರ್ಥವಾದರೆ ವೀರಶೈವಧರ್ಮ ಅರ್ಥ ವಾಯಿಂತೆಂದೇ ತಿಳಿಯಬಹುದು. ವೀರಶೈವಧರ್ಮದ ಸ್ವರೂಪವೆಲ್ಲ ಈ ಮುಕ್ತಕ ದಲ್ಲಿ ಹೇಗೆ ತೆರಕೊಂಡಿದೆ—

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ! ಕಂದಮ್ಮ
ಜ್ಯೋತಿಯೆ ಆಗು ಜಗಕೆಲ್ಲ ॥

ಆಚಾರ–ವಿಚಾರಗಳ ಕ್ರಿಯಾಜ್ಞಾನಗಳ ಸಾಮರಸ್ಯವನ್ನು ಬೋಧಿಸಿದ್ದು ವೀರಶೈವ. ಮಾತು ಮಾಣಿಕ್ಯವಾಗಿ, ಜ್ಯೋತಿಯಾಗುವಂತೆ ಬೆಳಗಿದ್ದು. ಜಾನಪದ ಸಾಹಿತ್ಯದಲ್ಲಿ ವೀರಶೈವಧರ್ಮ ತೆನೆತೆನೆಯಾಗಿ ಕೆನೆಗೊಂಡಿದೆ.

ಧರ್ಮದ ಸಾರ್ಥಕತೆ ಇರುವುದು ಗ್ರಂಥಗಳಲ್ಲಲ್ಲ. ಜನಾಂಗದ ಜೀವನದಲ್ಲಿ. ಅದು ಅರಳಿದಾಗ, ಅವರ ಬದುಕನ್ನು ಕೈ ಹಿಡಿದು ನಡೆಸಿದಾಗ, ಅವರ ಬದುಕಿಗೆ ನೆಮ್ಮದಿಯ ನೆಲೆಯನ್ನೂ ತಂದುಕೊಟ್ಟಾಗ, ಆ ನೆಮ್ಮದಿ, ತೃಪ್ತಿ. ಅವರ ಸವಿ ಸೊಲ್ಲು ಗಳಲ್ಲಿ ದಳ ದಳವಾಗಿ ಅರಳಿ ಗಂಧ-ಪರಿಮಳವನ್ನು ಸೂಸಿದಾಗ, ವೀರಶೈವಧರ್ಮ ಕಾಲ ಮತ್ತು ದೇಶಗಳ ಬದುಕಿನಲ್ಲಿ ಜೀವಂತ ಧರ್ಮವಾಗಿ ಉಳಿದು ಬಂದಿರುವುದಕ್ಕೆ ಜಾನಪದ ಸಾಹಿತ್ಯವೇ ಜ್ವಲಂತ ಉದಾಹರಣೆ. ಕೊನೆಯದಾಗಿ —

ಆರದಿರು ಆರದಿರು ಆರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ ॥[22]

ಎಂಬ ಕವಿವಾಣಿಯನ್ನು ನೆನೆದು ವೀರಶೈವ—ಜಾನಪದಗಳ ಅಧ್ಯಯನ ಇನ್ನೂ ಶಾಸ್ತ್ರೀಯವಾಗಿ ನಡೆಯಬೇಕಾದ ಅತೀವ ಅಗತ್ಯವಿದೆ ಎಂಬುದನ್ನು ವಿನಂತಿಸಿ ಕೊಳ್ಳುವ ಒಂದು ನಮ್ರ ಪ್ರಯತ್ನ ಈ ಲೇಖನ.

ಗ್ರಂಥ ಋಣ

1. ಸಿದ್ಧಗಂಗಾಶ್ರೀ—ಅಭಿನಂದನ ಗ್ರಂಥ-ಸಂ. ಶ್ರೀ ಪಂಡಿತ ಚೆನ್ನಪ್ಪ ಎರೆಸೀಮೆ ಮತ್ತು ಶ್ರೀ. ಟಿ.ಆರ್. ಮಹದೇವಯ್ಯ.
2. ಗೀತೆಗಳು— ಶ್ರೀ ಮತಿಘಟ್ಟ ಕೃಷ್ಣಮೂರ್ತಿ.
3. ಪೊನ್ನಬಿತ್ತೇವು ಹೊಲಕೆಲ್ಲ—ಕಾರ್ಯದರ್ಶಿ ಶ್ರೀ ಗೊ.ರು. ಚನ್ನಬಸಪ್ಪ

———

22. ಶರಣಸುನೀತ-ಡಾ. ಸಾ.ಶಿ. ಮರುಳಯ್ಯ. ಪುಟ. 130

4. ಕನ್ನಡ ಜಾನಪದ ಗೀತೆಗಳು—ಡಾ|| ಬಿ.ಎಸ್. ಗದ್ದಗಿಮಠ
5. ಕನ್ನಡ ಜಾನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ—ಡಾ|| ನಂ. ತಪಸ್ವೀ ಕುಮಾರ್
6. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ—ಕನ್ನಡ ಸಾಹಿತ್ಯ ಸಮೀಕ್ಷೆ— ಡಾ||ಜಿ.ಎಸ್. ಶಿವರುದ್ರಪ್ಪ.
7. ಕನ್ನಡ ಜಾನಪದ ಸಾಹಿತ್ಯ—ಡಾ|| ಬೆಟಗೇರಿ ಕೃಷ್ಣಶರ್ಮ.
8. ಕನ್ನಡದಲ್ಲಿ ಕೈವಲ್ಯ ಸಾಹಿತ್ಯ—ಡಾ|| ಎಚ್. ತಿಪ್ಪೇರುದ್ರಸ್ವಾಮಿ
9. ಶೂನ್ಯ ಸಂಪಾದನೆ ಮತ್ತು ಆಧುನಿಕ ಮೌಲ್ಯಗಳು—ಡಾ|| ಎಚ್. ತಿಪ್ಪೇ ರುದ್ರಸ್ವಾಮಿ.
10. ಬಸವಣ್ಣನವರು—ಡಾ|| ಎಂ. ಚಿದಾನಂದ ಮೂರ್ತಿ.
11. ಶರಣಸುನೀತ—ಸಂಪಾದಕರು ಶ್ರೀ. ಬಿ. ವೀರಭದ್ರಯ್ಯ ಮತ್ತು ಶ್ರೀ ಬಿ. ನಂಜುಂಡಪ್ಪ.
12. ನವಿಲು ಕುಣಿದಾವ—ಶ್ರೀ ಮುದೇನೂರ ಸಂಗಣ್ಣ.
13. ಹಳ್ಳಿಯ ಹಾಡುಗಳು—ಶ್ರೀ. ಗೊರೂರು ರಾಮಸ್ವಾಮಿ ಐಯ್ಯಂಗಾರ್.
14. ಕರ್ತಾರನ ಕಮ್ಮಟ—ಡಾ|| ಎಚ್. ತಿಪ್ಪೇರುದ್ರಸ್ವಾಮಿ.
15. ಇಲ್ಲಿ ಸಲ್ಲುವರು—ಶ್ರೀ. ಬಿ.ಎ. ಸನದಿ

ಶರಣ-ಶರಣೆಯರು ರೂಪಿಸಿದ ಮಾರ್ಗ

ಶ್ರೀ ಎಸ್. ನಂಜುಂಡಯ್ಯ ಎಂ. ಎ

ತುಂಬಿದ ಬಂಡಿ ಕಂಡಯ್ಯ !... ....

ಆಧುನಿಕ ವಿಜ್ಞಾನದ ಅತ್ಯದ್ಭುತ ಮುನ್ನಡೆಯಿಂದ ಮಾನವನ ಬಿಡುವಿಲ್ಲದ ಓಡಾಟ ಈ ಮರ್ತ್ಯದಮೇಲೆ ಅಷ್ಟೇ ಅಲ್ಲ, ಗ್ರಹಗ್ರಹಾಂತರಗಳಮೇಲೆಯೂ ಅತ್ಯಂತ ಭರಾಟೆಯಿಂದ ನಡೆಯುತ್ತಿರುವುದು ಇಂದಿನ ದಿನನಿತ್ಯದ ಬಿಸಿಬಿಸಿ ಸುದ್ದಿಯಾಗಿದೆ. ಜಗತ್ತಿನ ಒಂದೆಡೆಯಿಂದ ಮತ್ತೊಂದೆಡೆಗೆ ಕ್ಷಣಾರ್ಧದಲ್ಲಿ ಹೋಗಿಬರಲು ಅತ್ಯಾಧುನಿಕವಾದ ಅಸಂಖ್ಯ ವಾಹನ ಸಾಧನಗಳು, ಅಪೂರ್ವವಾದ ನೇರ ಹಾಗೂ ಸುತ್ತುಬಳಸಿನ ಹಲವಾರು ಮಾರ್ಗಗಳು ಕಣ್ಮುಂದೆ ಕಂಗೊಳಿಸುತ್ತ ನಿಂತಿವೆ. ನೆಲ-ಜಲ-ವಾಯು ಸಾಧನಗಳು ಮಾನವನಿಗೆ ಇಂದು ಯಥೇಚ್ಛವಾಗಿ ಲಭ್ಯವಾಗಿವೆ. ಇವೆಲ್ಲವೂ ಮಾನವನ ಇಹಲೋಕದ ಓಡಾಟ-ಹೋರಾಟಗಳಿಗೆ, ಬಾಹ್ಯ ಜೀವನದ ಸಾಗಾಟ ವಹಿವಾಟುಗಳಿಗೆ ಸಹಕಾರಿಗಳಾಗಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಮನುಷ್ಯನಿಗೆ ಇರುವುದು ಬರಿಯ ಹೊರಗಿನ ಜೀವನವೊಂದೇ ಅಲ್ಲ, ಒಳಗಿನ ಜೀವನ, ಪಾರಮಾರ್ಥ ಜೀವನವೂ ಇದೆಯೆಂಬುದನ್ನು ಯಾರೂ ಮರೆಯುವ ಹಾಗಿಲ್ಲ,ಮರೆಯುವಂತಿಲ್ಲ. ಆ ಬ್ರಹ್ಮಾಂಡದ ಸಂಶೋಧನೆಯ ಜೊತೆಜೊತೆಗೆ ಈ ಪಿಂಡಾಂಡದ ಸಂಶೋಧನೆಯು ಸದಾ ನಡೆಯುತ್ತ ಪಿಂಡಜ್ಞಾನಸ್ಥಲದಿಂದ ಆ ಪರಬ್ರಹ್ಮ ಪರಶಿವನೊಡನೆ ಒಂದಾಗಿ ಬೆರೆಯುವ ಐಕ್ಯಸ್ಥಲಕ್ಕೆ ಜೀವನು ಏರಬೇಕಾಗಿದೆ. ಈ ಒಳಗಿನ ಜೀವನಯಾತ್ರೆ ಅಂದರೆ ಆತ್ಮದ ಪ್ರವಾಸ ಸರಾಗವಾಗಿ ಸಾಗಬೇಕಾದರೆ, ತಾನು ತಲುಪಬೇಕಾದ ತಾಣವನ್ನು ನೇರವಾಗಿ ತಲುಪಬೇಕಾದರೆ ತಕ್ಕ ಸಾಧನ-ಸಲಕರಣೆಗಳು, ಸುಲಭ ಮಾರ್ಗೋಪಾಯಗಳು ಮುಖ್ಯವಾಗಿ ಬೇಕಾಗಿಲ್ಲವೆ ? ಸರಿಯಾದ ದಾರಿಯನ್ನು ಹಿಡಿದು ನೇರವಾಗಿ ನಡೆದು ಗುರಿ ಮುಟ್ಟುತ್ತೇನೆಂದು ಆತ್ಮನಿಗೆ ಅಷ್ಟಾಗಿ ಖಾತರಿಯಂತೂ ಇಲ್ಲ ; ಏಕೆಂದರೆ ಇಳಿಜಾರಿನ ಕಡೆಗೇ ಹೆಚ್ಚು ಜಾರುವ ಸ್ವಭಾವವುಳ್ಳ ಇಂದ್ರಿಯಾಶ್ವಗಳನ್ನು ಹೂಡಿರುವ ಈ ಶರೀರವೆಂಬ ರಥವನ್ನು ಏರಿ ಕುಳಿತಿರುವ ಆತ್ಮನು ಯಾವುದೇ ಆಘಾತ ಅಪಘಾತಗಳಿಲ್ಲದೆ ತಾನು ಗುರಿಮುಟ್ಟುತ್ತೇನೆಂಬ ಭರವಸೆಯನ್ನು ಇಟ್ಟುಕೊಳ್ಳುವ ಹಾಗಿಲ್ಲ. ಆದರೆ ಯುಕ್ತವಾದ ಮನೋಬುದ್ಧಿಗಳು ತಮ್ಮ ಕೈಯಲ್ಲಿ ಇಂದ್ರಿಯಾಶ್ವಗಳನ್ನು ಹತೋಟಿಗೆ ತಂದುಕೊಂಡು ಸಾರಥ್ಯವನ್ನು ವಹಿಸಿದರೆ ಮಾತ್ರ ರಥದೊಡೆಯ

ನಾದ ಆತ್ಮನು ಈ ಶರೀರರಥವನ್ನೇರಿ ಶಾಶ್ವತಪದವನ್ನು ಹೊಂದುತ್ತಾನೆಂದು ಉಪನಿಷದ್ವಾಣಿ ಉದ್ಘೋಷಿಸುತ್ತಿದೆ :

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ॥

—ಕಠೋಪನಿಷತ್ ೩–೩-೪

ಆತ್ಮನನ್ನು ರಥಿಯೆಂದೂ ಶರೀರವನ್ನು ರಥವೆಂದೂ, ಬುದ್ಧಿಯನ್ನು ಸಾರಥಿಯೆಂದೂ ಮನಸ್ಸನ್ನು ಕಡಿವಾಣವೆಂದೂ ತಿಳಿಯಬೇಕು. ಇಂದ್ರಿಯಗಳನ್ನು ಕುದುರೆಗಳೆಂದೂ ವಿಷಯಗಳನ್ನು ಅವುಗಳ ಮಾರ್ಗಗಳೆಂದೂ ಹೇಳುತ್ತಾರೆ. ಶರೀರ, ಇಂದ್ರಿಯ, ಮನಸ್ಸುಗಳಿಂದ ಕೂಡಿದ—ಈ ಉಪಾಧಿಗಳಿಂದಾಗಿ—ಆತ್ಮನನ್ನು ಸಂಸಾರಿ ಎಂದು ವಿವೇಕಿಗಳು ಹೇಳುತ್ತಾರೆ. ಆದ್ದರಿಂದ ಸಾರಥಿಯಾದ ಬುದ್ಧಿಯು ಮನಸ್ಸು ಇಂದ್ರಿಯಗಳನ್ನು ಹತೋಟಿಗೆ ತಂದುಕೊಂಡಾಗ ಮತ್ತು ಸೂಕ್ತ ಸಂಸ್ಕಾರಗಳ ಸಂಚಾರಿ ನಿಯಮಗಳನ್ನು ಪರಿಪಾಲಿಸಿದಾಗ ಈ ಶರೀರವೆಂಬ ರಥವು ಸರಿಯಾದ ದಾರಿಯಲ್ಲಿ ಸಾಗುತ್ತದೆ. ಅದನ್ನು ಹತ್ತಿ ಕುಳಿತಿರುವ ಆತ್ಮನು ಸಂರಕ್ಷಿತವಾಗಿ ಸ್ವಸ್ಥಾನವನ್ನು ಸೇರುವುದು ಸಾಧ್ಯವಾಗುತ್ತದೆ. ಅದನ್ನೇ ಪ್ರಭುದೇವರು ತಮ್ಮ ವಚನವೊಂದರಲ್ಲಿ ಸೊಗಸಾಗಿ ವಿವರಿಸಿದ್ದಾರೆ ;

ಕಾಲುಗಳೆರಡೂ ಗಾಲಿ ಕಂಡಯ್ಯ !
ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ !
ಬಂಡಿಯ ಹೊಡೆವರೈವರು ಮಾನಿಸರು !
ಒಬ್ಬರಿಗೊಬ್ಬರು ಸಮವಿಲ್ಲಯ್ಯ !
ಅದರಿಚ್ಛೆಯನರಿದು ಹೊಡೆಯದಿದ್ದರೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ !

ಪ್ರಭುವಿನ ವಾಣಿಯಂತೆ 'ದೇಹವೆಂಬುದೊಂದು ತುಂಬಿದ ಬಂಡಿ !' ಅದು ಖಾಲಿಯಾದ ಬಂಡಿಯಲ್ಲ, ಒಂದು ಪಕ್ಷ ಉರುಳಿಬಿದ್ದರೂ ಅಪಾಯವಿಲ್ಲ ಎಂದು ಹೇಳುವುದಕ್ಕೆ ! ಅದು ಫುಲ್ ಭರ್ತಿಯಾದ, ಓವರ್‌ಲೋಡಾದ 'ತುಂಬಿದ ಬಂಡಿ' ! ಅದಕ್ಕೆ ಚಾಲಕರು ಒಬ್ಬರಲ್ಲ, ಐವರು ಮಂದಿ ! ಅವರಾದರೂ ಒಂದೇ ದೃಷ್ಟಿ, ಒಂದೇ ಗುರಿಯುಳ್ಳವರಲ್ಲ, ಸರದಿಯ ಪ್ರಕಾರ ಒಬ್ಬರಾದ ಮೇಲೊಬ್ಬರು ಚಾಲಕರಾಗುವವರಲ್ಲ. ಐವರೂ ಒಟ್ಟಿಗೇ ತಮ್ಮಿಷ್ಟದಂತೆ ಓಡಿಸಬೇಕೆಂಬವರು. ಹೀಗಿರುವಾಗ ಈ ತುಂಬಿದ ಬಂಡಿ. ಮಹಾನುಭಾವನಾದ ಆತ್ಮನು ಏರಿ ಕುಳಿತಿರುವ ಬಂಡಿ ತನಗೆ ಬೇಕಾದ ಬಲವಾದ ಬ್ರೇಕುಗಳನ್ನು ಅಳವಡಿಸಿಕೊಂಡು ವೇಗದ ಅತಿ–ಮಿತಿಗಳನ್ನು ಅರಿತುಕೊಂಡು

ತಿರುವು–ಮುರಿವುಗಳನ್ನು ಗಮನಿಸಿ ಜೋಪಾನವಾಗಿ ಸಾಗಬೇಕಾಗಿದೆ. ಆ ಬಂಡಿಯು ತನ್ನ ಗುರಿಯನ್ನು ತಲುಪುವತನಕ ದಾರಿಯಲ್ಲಿ ಎಲ್ಲಿಯಾದರೂ ಮುರಿದುಬಿದ್ದು ಅಪಘಾತವಾಗದಂತೆ ಹಾಗೂ ತನ್ನೊಳಗೆ ಕುಳಿತಿರುವವನು ಸುಖವಾಗಿ ತನ್ನ ಊರನ್ನು ಸೇರುವಂತೆ ಎಚ್ಚರಿಕೆವಹಿಸಲು 'ಮೃಡಶರಣರ ನುಡಿಗಡಣವೆಂಬ ಕಡೆಗೀಲು'ಗಳನ್ನು ಬಂಡಿಯ ಗಾಲಿಗಳಿಗೆ ಜೋಡಿಸಿದೆಯೋ ಇಲ್ಲವೋ ಎಂಬುದನ್ನು ಮೊದಲು ನೋಡಿಕೊಳ್ಳಬೇಕಾಗುತ್ತದೆ, ಮತ್ತು ಬಂಡಿಯು ಸರಿಯಾದ ದಾರಿಯಲ್ಲಿ ಗೊತ್ತಾದ ಜಾಡಿನಲ್ಲಿ ಓಡುತ್ತಿದೆಯೊ ಎಂಬುದನ್ನೂ ಗಮನಿಸಬೇಕಾಗುತ್ತದೆ. ಕೊನೆಗೆ ಇಷ್ಟೆಲ್ಲ ಸಿದ್ಧತೆ, ಎಚ್ಚರವಹಿಸಿದರೂ ಒಮ್ಮೊಮ್ಮೆ ಅನಿರೀಕ್ಷಿತವಾಗಿ ಅನಾಹುತಗಳು ಸಂಭವಿಸುವುದುಂಟು. ಆದ್ದರಿಂದ ತೇರಿನ ಬೀದಿಯಲ್ಲಿ ಈ ದೇಹವೆಂಬ ತೇರನ್ನು ಮೈಯೆಲ್ಲ ಕಣ್ಣಾಗಿ ನಡೆಸಿ ಗುರಿಮುಟ್ಟುವುದರ ಕಡೆಗೆ ಮಾನವ ಎಚ್ಚರವಹಿಸಬೇಕಾಗಿದೆ. ಆದರೆ ಅದರ ಬಗೆಗೆ ಸ್ವಲ್ಪವೂ ವಿಚಾರಮಾಡದೆ ಸದಾ ಮೈಮರೆತು, ಮರ್ತ್ಯದಲ್ಲಿಯೇ ಮುಳುಗಿರುವ ಮಾನವನನ್ನು ಸನ್ಮಾರ್ಗದಲ್ಲಿ ತಂದು ನಿಲ್ಲಿಸಿ ಮುನ್ನಡೆಸುವ, ಅವನನ್ನು ಮೇಲಿಂದ ಮೇಲಕ್ಕೇರಿಸುವ, ಧನ್ಯತೆಗೆ ಕರೆದೊಯ್ಯುವ, ಪರಿಪೂರ್ಣತೆಯನ್ನು ಸಾಧಿಸಿಕೊಡುವ ಮಹತ್ಕಾರ್ಯಗಳು, ಮಾರ್ಗದರ್ಶನಗಳು ಮನುಕುಲಕ್ಕೆ ಬೇಕಲ್ಲವೆ ? ಅಂತಹ ಮಹಿಮಾನ್ವಿತ ಪ್ರಸಂಗಗಳು, ಅತ್ಯಮೂಲ್ಯವಾದ ಮಹೋನ್ನತ ಕಾರ್ಯಗಳು ಮಾನವಲೋಕದಲ್ಲಿ ಮೇಲಿಂದ ಮೇಲೆ ನಡೆಯುತ್ತಾ ಬಂದು ಜಗತ್ಕಲ್ಯಾಣವನ್ನು ಸಾಧಿಸಿದುದು ಈ ಜಗತ್ತಿನ ಇತಿಹಾಸದಲ್ಲಿ ಕಾಲಕಾಲಕ್ಕೆ ದಾಖಲಾಗುತ್ತಲೇ ಬಂದಿದೆ. ಅಂತಹ ಒಂದು ಅಪೂರ್ವ ಹಾಗೂ ಅದ್ವಿತೀಯವಾದ ಲೋಕೋದ್ಧಾರದ ಮಹತ್ಕಾರ್ಯವು ಎಂಟುನೂರು ವರುಷಗಳ ಹಿಂದೆಯೇ ಈ ಕನ್ನಡನಾಡಿನಲ್ಲಿ ಜರುಗಿತು ಎನ್ನುವುದು ಲೋಕಪ್ರಸಿದ್ಧವೇ ಆಗಿದೆ.

ಜಗತ್ತಿನಲ್ಲಿರುವ ಕಷ್ಟ ಕಾರ್ಪಣ್ಯಗಳನ್ನು ದುಃಖ–ದಾರಿದ್ರ್ಯಗಳನ್ನು ಅಜ್ಞಾನ ಅವಿದ್ಯೆಗಳನ್ನು ಪಾರತಂತ್ರ್ಯ-ಪರಹಿಂಸೆಗಳನ್ನು ಮೇಲು-ಕೀಳುಗಳನ್ನು, ಅಸೂಯೆ ಅನಾಚಾರಾದಿಗಳನ್ನು ಹೊಡೆದೋಡಿಸಿ ನಿತ್ಯಸುಖದ ಅಮಿತಾನಂದವನ್ನು, ಸ್ವಾತಂತ್ರ್ಯ ಸಮಾನತೆ ಸರ್ವೋದಯ–ಸದಾಚಾರ-ಸುವಿಚಾರ-ಸುಪ್ರೇಮ ಭಾವನೆಗಳನ್ನು ನೆಲೆಯೂರಿಸಿ, ಮರ್ತ್ಯಕ್ಕೆ ಮಹವನ್ನು ತಂದ ಹನ್ನೆರಡನೆಯ ಶತಮಾನದ ಮಹಾ ಘಟನೆಗಳು ಮಾನವ ಜೀವನದ ವಿಕಾಸದ ದೃಷ್ಟಿಯಿಂದ ಬಹು ಮಹತ್ವದ್ದಾಗಿವೆ. 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ' ಎಂಬ ಆಗಮೋಕ್ತಿಯಂತೆ ಧರ್ಮಗ್ಲಾನಿಯಾಗುತ್ತಿದ್ದ ಆ ಸಮಯದಲ್ಲಿ ಪರಶಿವನ ಪರಮ ಸಾತ್ವಿಕಾಂಶಗಳಾದ ಬಸವಾದಿ ಪ್ರಮಥರು ಜಗತ್ತಿನಲ್ಲಿ ಅವತರಿಸಿ ಜನಮನದ ಮೈಲಿಗೆಯನ್ನು ಶಿವಾನುಭವದ ಶುದ್ಧ ಜಲದಿಂದ ತೊಳೆದು ಮಡಿಮಾಡಿ ಮನದೊಡೆಯನು ಅಲ್ಲಿ ಸುಸ್ಥಿರವಾಗಿ ನೆಲಸಲು ಹದಗೊಳಿಸಿ ಹಸನುಮಾಡಿದರು. ನಾಡಿನ ಸಾಮಾಜಿಕ–ಧಾರ್ಮಿಕ ರಂಗಗಳಲ್ಲಿ ಭುಗಿಲೆದ್ದಿದ್ದ ಅಸಮತೆ, ಅನೈಕ್ಯತೆ, ಅಶಾಂತಿ, ಅನ್ಯಾಯ, ಆಕ್ರೋಶಗಳನ್ನು ಶಮನಗೊಳಿಸಿ

ಶಾಂತಿ ಸಹನೆ ಸೌಹಾರ್ದಗಳ ಸುಮಧುರ ಸುಧಾವೃಷ್ಟಿಯನ್ನು ಧಾರಾಕಾರವಾಗಿ ಸುರಿಸಿದರು. ಏನೆಲ್ಲ ದುಡಿದರೂ ಎಷ್ಟೆಲ್ಲ ಗಳಿಸಿದರೂ ಜೀವನದಲ್ಲಿ ಎಂದೆಂದೂ ಸಂತೃಪ್ತಿಯನ್ನೇ ಕಾಣದೆ ಮಾಯಾಮೋಹಗಳಿಂದ ಸಂಭ್ರಾಂತನಾಗಿ ನಿಟ್ಟುಸಿರಿಡುತ್ತ ಪರಿತಪಿಸುತ್ತಿರುವ ಮಾನವನ ಹುಚ್ಚುರೋಗಕ್ಕೆ ಮಹಾನುಭಾವರಾದ ಶಿವಶರಣರ ಈ ನಡೆ-ನುಡಿಗಳು, ಬದುಕು ಬಟ್ಟೆಗಳು ದಿವ್ಯೌಷಧಗಳಾಗಿ ಪರಿಣಮಿಸಿದುವು. ಇಹಲೋಕದ ಬಗೆಗೆ ಅವರಿಗಿದ್ದ ಅಪಾರಶ್ರದ್ಧೆ, ಪರಲೋಕ ಪ್ರಾಪ್ತಿಯಲ್ಲಿನ ಅಂದರೆ ಪರದೊಡನೆ ಬೆರೆಯುವಲ್ಲಿನ ಅಲೌಕಿಕ ಅಖಂಡ ಅದ್ವಯ ಆನಂದದ ಬಗೆಗೆ ಅವರಿಗಿದ್ದ ಅದಮ್ಯ ಆಸಕ್ತಿ—ಇವು ದಿವ್ಯ ಸಂಜೀವಿನಿಯಾಗಿ ಇಹದ ಮೃಣ್ಮಯ ಬದುಕನ್ನು ಚಿನ್ಮಯಗೊಳಿಸಿ ಮಾನವನು ಮಹಾದೇವನಾಗುವ ಸುಲಭ ಸುಂದರ ಸುಮನೋಹರ ಮಾರ್ಗವನ್ನು ತೋರಿಸಿಕೊಟ್ಟವು ಆ ಮಾರ್ಗ, ಅವರು ತುಳಿದ ಹಾದಿ, ನಡೆದ ದಾರಿ, ಹೋದ ಬಟ್ಟೆ—ಮರ್ತ್ಯದ ಎಲ್ಲ ಮನುಜರೂ ಊರ್ಧ್ವಗಾಮಿಗಳಾಗಿ ಮುನ್ನಡೆದು ಉದ್ಧಾರವಾಗಲು ಸುಲಭಸಾಧ್ಯವಾದ ಸುಂದರ ಸಮನ್ವಯಮಾರ್ಗ. ಯಾವ ಅತಿಗಳಿಗೂ ಹೋಗದೆ ಯಾವ ಮಿತಿಗಳಿಗೂ ಇಳಿಯದೆ—ಇಂತಹ ಯಾವ ತುದಿಗಳಿಗೂ ತಲುಪದೆ ಹಿಡಿದು-ಬಿಡುವ, ಬಿಟ್ಟು-ಹಿಡಿಯುವ ಸುಮಧುರವಾದ ಮಧ್ಯದ ನಡುವಣ ಸುವರ್ಣಮಾರ್ಗ. ಸರಸ-ವಿರಸಗಳಿಲ್ಲದ ಸಮರಸದ ದಿವ್ಯ ಜೀವನಮಾರ್ಗ, ಏಕಕಾಲಕ್ಕೆ ಲೌಕಿಕ-ಪಾರಮಾರ್ಥಗಳೆರಡನ್ನೂ ಬದುಕುವ ಭವ್ಯಮಾರ್ಗ.

ಅಲ್ಲಿಯೂ ಸಲ್ಲುವರಯ್ಯಾ !........ ....

ಜಗದೋದ್ಧಾರಕ್ಕಾಗಿ ಧರೆಗಿಳಿದು ಬಂದ ಕಲ್ಯಾಣದ ಶಿವ ಶರಣ-ಶರಣೆಯರು ಈ ಜಗತ್ತನ್ನು, ಜಗತ್ತಿನ ಜೀವನವನ್ನು ಜಳ್ಳು-ಪೊಳ್ಳೆಂದು ಹೀಗಳೆಯಲಿಲ್ಲ, ಅದನ್ನು ಮಿಥ್ಯೆಯೆಂದು ನಶ್ವರವೆಂದು ತಿರಸ್ಕರಿಸಲಿಲ್ಲ. ಅದಕ್ಕೆ ಬದಲಾಗಿ ಅದು ಶಿವನ ವ್ಯಕ್ತರೂಪ, ಪ್ರಸಾದ ರೂಪವೆಂದು ಪುರಸ್ಕರಿಸಿದರು. ಒಂದು ಪಕ್ಷ ಪರಮಾತ್ಮನ ಕಾರ್ಯರೂಪವಾದ ಜಗತ್ತು ಮಿಥ್ಯವಾದರೆ ಅದಕ್ಕೆ ಕಾರಣನಾದ ಪರಮಾತ್ಮನೂ ಮಿಥ್ಯವಾಗಬೇಕಾಗುವುದು. ಆದರೆ ಸೃಷ್ಟಿಯ ಎಲ್ಲ ವಸ್ತುಗಳೂ ಶಿವಮಯವಾಗಿರುವುದರಿಂದ ಅದನ್ನು ಶಿವಾರ್ಪಣಭಾವದಿಂದ ಸೇವಿಸುವವರಿಗೆ ಈ ಲೋಕವು ಕೈಲಾಸಕ್ಕಿಂತಲೂ ಸುಖಕರವೆಂದು ಮುಕ್ತಕಂಠದಿಂದ ಸಾರಿದರು.

> ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।
> ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಎಂಬ ವಾಣಿಯಂತೆ ಪೂರ್ಣದಿಂದ ಹೊರಹೊಮ್ಮಿ ಬಂದಿರುವ ಈ ಪ್ರಪಂಚವೂ ಪೂರ್ಣವೇ ಇರುವುದು. ಹಾಗೆ ಪೂರ್ಣದೃಷ್ಟಿಯಿಂದ ಈ ಜಗತ್ತನ್ನು ಕಂಡು ನಡೆಸಿಕೊಂಡು ಹೋಗಬೇಕೆಂದು ಹೇಳಿದರು. ಮರ್ತ್ಯಲೋಕ ಹೇಯವಾದದ್ದಲ್ಲ, ತ್ಯಾಜ್ಯವಾದುದಲ್ಲ. ಇದೊಂದು ಉಪಾದೇಯವಾದುದು, ಭೋಜ್ಯವಾದುದು. ಮಾನವ

ಜನ್ಮ ನಿಕೃಷ್ಟವಲ್ಲ, ಅದೊಂದು ಶಿವಸಾಕ್ಷಾತ್ಕಾರದ ಉತ್ಕೃಷ್ಟ ಮಾಧ್ಯಮ ಎಂದು ಘೋಷಿಸಿದರು.

ದೇವನನ್ನು ಕಾಣಲು ವ್ಯಕ್ತಿಯು ಕಾಡು-ಮೇಡುಗಳನ್ನಾಗಲೀ ಗಿರಿ-ಗಹ್ವರಗಳನ್ನಾಗಲೀ ಅಲೆಯುತ್ತಾ ಹುಡುಕಿಕೊಂಡು ಹೋಗಬೇಕಾಗಿಲ್ಲ. ತಾನು ಬದುಕಿರುವ ಪರಿಸರದಲ್ಲಿ, ತನ್ನ ಗೃಹಸ್ಥ ಜೀವನದಲ್ಲಿ, ಸತಿ–ಸುತ ಬಂಧು–ಬಳಗ ಜನಾಂಗದ ಮಧ್ಯದಲ್ಲಿಯೇ ಸರಳ ಸುಂದರ ಪರಿಶುದ್ಧ ಜೀವನವನ್ನು ನಡೆಸುತ್ತ ಜನಾಂಗದ ಸಮೂಹದಲ್ಲಿಯೇ ತನ್ನ ಅನುಭಾವದಲ್ಲಿಯೇ ತನ್ನ ಕಾಯಕದಲ್ಲಿಯೇ ಇರುವ ತಾನು ತನ್ನೊಳಗೆ ತನ್ನಲ್ಲಿಯೇ ಇರುವ ದೇವನನ್ನು ಕಾಣಬಹುದಾಗಿದೆ ಎಂದರು. ಅಂತೆಯೇ ಶರಣರ ಕಣ್ಣಿಗೆ ಜಗತ್ತು ಮಾಯೆ, ಮಿಥ್ಯೆ ಎಂಬುದಾಗಿ ಕಾಣಲಿಲ್ಲ, ಅದು ಶಿವನ ಪ್ರಸಾದರೂಪವಾಗಿ ಕಂಡಿತು.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿತ್‌ಧನಮ್ ॥
—ಈಶಾವಾಸ್ಯೋಪನಿಷತ್

ಎಂಬ ವಾಣಿಯಂತೆ ಜಗತ್ತೆಲ್ಲವೂ ಮಹಾದಾನಿಯಾದ ಆ ಜಗದೀಶನ ವರಪ್ರಸಾದವೆಂಬುದಾಗಿ ಶರಣರು ಭಾವಿಸಿದರು. ದೇವರ ದಾಸಿಮಾರ್ಯರು—

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ಗಾಳಿ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರನು ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥಾ ?

ಎಂದು ಹೇಳಿ ಎಲ್ಲವೂ ಆತನ ದಾನವೆಂದು ಎಚ್ಚರಿಸಿದ್ದಾರೆ. ಆದುದರಿಂದ ಶರಣರು ಇಹಲೋಕದ ಮತ್ತು ಇಹಜೀವನದ ಬಗೆಗೆ ತಾಳಿದ ಒಲುವು—ನಿಲುವುಗಳು ಬೇರೆ ಯಾವ ದರ್ಶನಕ್ಕೂ ಕಾಣಿಸದಷ್ಟು ಮಹೋನ್ನತವಾಗಿವೆಯೆಂದು ಹೇಳಬಹುದಾಗಿದೆ. ಕಣ್ಣಿಗೆ ಕಾಣುವ ಜಗತ್ತನ್ನು ಬರೀ ಸುಳ್ಳೆಂದು ಹೇಳಿ ಕಾಣದ ಲೋಕವನ್ನು ಸೇರಲು ಬೆನ್ನು ತಿರುಗಿಸಿ ಹೋದವರುಂಟು. ಕಾಣದ್ದ ಪರವನ್ನು ಬರಿಯ ಸಟೆಯೆಂದೂ ಕಾಣುವ ಜಗತ್ತೇ ದಿಟವೆಂದೂ ಹೇಳಿ ಇದನ್ನು ಎದೆಗಪ್ಪಿಕೊಂಡವರೂ ಉಂಟು. ಆದರೆ ಶರಣರು ಇಹಕ್ಕೆ ಹೆದರಿ ಬೆನ್ನು ತಿರುಗಿಸಿ ಹೋದವರೂ ಅಲ್ಲ, ಪರವನ್ನು ಮರೆತವರೂ ಅಲ್ಲ. ಅವರು ಇಹವನ್ನು ಎದುರಿಸಿ ಉರಿ ಬರಲಿ, ಸಿರಿ ಬರಲಿ, ಬೇಕು-ಬೇಡ ಎನ್ನದೆ ಎಲ್ಲವನ್ನೂ ಸಂತೋಷದಿಂದ ಸವಿದು ಇಹದ ಮೂಲಕವೇ ಪರವನ್ನು ಸಾಧಿಸಿದ ಪರಮವೀರರು. 'ಕೊಲುವೆನೆಂಬ ಭಾಷೆ ದೇವನದಾದರೆ ಗೆಲುವೆನೆಂಬ ಭಾಷೆ 'ಶರಣರದು'. "ಶಿವ ಶರಣು" ಎಂಬ ಖಡ್ಗವನ್ನೇ ಹಿಡಿದು ಮಾಯಾಮೋಹಗಳಿಂದ ತುಂಬಿದ ಜೀವನಸಂಗ್ರಾಮದಲ್ಲಿ ಧುಮ್ಮಿಕ್ಕಿ ಜಗದೊಡೆಯ ಮೆಚ್ಚಿ ತಲೆದೂಗು

ವಂತೆ ಕೆಚ್ಚೆದೆಯಿಂದ ಹೋರಾಡಿ ಅದ್ಭುತ ವಿಜಯವನ್ನು ಪಡೆದರು. ವ್ಯಕ್ತಿಯು ಇಹ ಲೋಕದ ಬದುಕಿನಲ್ಲಿ ಇಂತಹ ಅಪಾರವಾದ ಶ್ರದ್ಧೆ ನಂಬಿಕೆ, ವಿಶ್ವಾಸಗಳನ್ನು ಮೂಡಿಸಿದ ಮಹಾತ್ಮ, ಬಸವಣ್ಣನವರು.

> ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿಭೋ !
> ಸತ್ಯವ ನಂಡಿವುದೆ ದೇವಲೋಕ, ಮಿಥ್ಯವ ನಂಡಿವುದೆ ಮರ್ತ್ಯಲೋಕ !
> ಆಚಾರವೆ ಸ್ವರ್ಗ, ಅನಾಚಾರವೇ ನರಕ—
> ಕೂಡಲಸಂಗಮದೇವಾ, ನೀವೇ ಪ್ರಮಾಣು !

ಎಂದು ಬೋಧಿಸಿ, ಸಾಧಿಸಿ ಇಹ–ಪರಗಳ ಅಂತರವನ್ನು ಹೋಗಲಾಡಿಸಿದರು. ಸ್ವರ್ಗ ನರಕಗಳ ಸ್ವರೂಪವನ್ನು ಮಾರ್ಮಿಕವಾಗಿ ನಿರೂಪಿಸಿದರು. ಆದ್ದರಿಂದಲೇ ಅವರ ದೃಷ್ಟಿಯಲ್ಲಿ ಮರ್ತ್ಯಲೋಕವು ಮಾನವನ ಸಕಲ ಸಾಧನೆಗಳ ರಂಗಸ್ಥಳವೆಂದು ಪ್ರಾಮುಖ್ಯತೆಯನ್ನು ಪಡೆಯಿತು. ಮಾನವನು ಇಲ್ಲಿದ್ದುಕೊಂಡೇ ದೈವತ್ವಕ್ಕೇರ ಬೇಕಾಗಿದೆ, ದೇವನಾಗಬೇಕಾಗಿದೆ. ಬದುಕಿರುವಾಗ ಸಕಲಜೀವಾವಳಿಗೂ ಲೇಸನೇ ಹಾರೈಸಿ ಲೇಸನೇಗೈದು ಲೇಸಾದ ಅಚ್ಚ ಬಾಳನ್ನು ನಡೆಸಿದರೆ ಅಮೃತತತ್ವವನ್ನು ಸುಲಭ ದಲ್ಲಿ ಪಡೆಯಬಹುದು. ಅಂತಸ್ಸಾಕ್ಷಿಯಾದ, ಅಂತರ್ಯಾಮಿಯಾದ ಮನದಾಣ್ಮನು ಮನಮೆಚ್ಚಿ 'ಅಹುದಹುದು' ಎನ್ನುವಂತಹ ಬದುಕು ಅದಾಗಿರಬೇಕು. ಬರಿಯ ಲೋಕದ ಜನ ಮೆಚ್ಚುವ ಡಂಬದ ಬದುಕು ಅದಾಗದಿರಬೇಕು. 'ಅಲ್ಲಿ'ಯ ಮುಂದಿನ ಬದುಕಿಗಿಂತ 'ಇಲ್ಲಿ'ಯ ಇಂದಿನ ಬಾಳು ಚೆನ್ನಾಗಿ ಆಗಬೇಕು. ಅದು ಪರವನ್ನು ಸಾಧಿಸಲು ಇರುವ ಅತ್ಯುತ್ತಮ ಮಾರ್ಗ ಎಂಬುದನ್ನು ಒತ್ತಿಹೇಳಿದರು.

> ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ;
> ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
> ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ:
> ಕೂಡಲಸಂಗಮದೇವಾ

ಈ ಮಾತು ಬಸವಣ್ಣನವರ ಉಪದೇಶದ ಸಾರಸರ್ವಸ್ವ, ಬೀಜಮಂತ್ರ ಎನ್ನುವುದರಲ್ಲಿ ಸಂಶಯವಿಲ್ಲ. ಈ ಮರ್ತ್ಯಲೋಕವನ್ನು ಒಂದು ನಾಟಕಶಾಲೆ ಎಂದು ಕೆಲವರು ಕರೆದರೆ ಬಸವಣ್ಣನವರು ಇದೊಂದು 'ಕರ್ತಾರನ ಕಮ್ಮಟ' ಎಂದರು. ಈ ಮಾತು ತುಂಬ ಅರ್ಥವತ್ತಾದುದಾಗಿ ಪ್ರಸಿದ್ಧವಾಗಿದೆ. ಕಮ್ಮಟ ಎಂದರೆ ನಾಣ್ಯಗಳನ್ನು ಟಂಕಿಸುವ ಸ್ಥಳ, ಟಂಕಸಾಲೆ, ಇಲ್ಲಿ ಹಿಡಿದು ಮಿಡಿದರೆ ಝಣಝಣಿಸುವ, ನೋಡಿದರೆ ಮಿರ್ರನೆ ಮಿರುಗುವ ಅತ್ಯಂತಬೆಲೆಬಾಳುವ ಹೊಸ ಹೊಸ ನಾಣ್ಯಗಳಾಗಿ ಹೊರಬೀಳ ಬೇಕು. ಆಗ ಆ ನಾಣ್ಯಕ್ಕೆ ಎಲ್ಲೆಲ್ಲಿಯೂ ಚಲಾವಣೆ ಇರುತ್ತದೆ. ನಿಜವಾದ ಅಸಲಿ ನಾಣ್ಯ ತಾನು ಹೋದ ಕಡೆಯಲ್ಲೆಲ್ಲ ಉತ್ತಮ ಬೆಲೆಯನ್ನು ಪಡೆದು ಸಾರ್ಥಕವಾಗು ತ್ತದೆ. ಆದರೆ ಖೊಟ್ಟಿಯೆನಿಸಿದ ನಕಲಿ ನಾಣ್ಯ ಕೆಲವುಕಾಲ ಅಲ್ಲಲ್ಲಿ ಚಲಾವಣೆಯಲ್ಲಿ

ನುಸುಳಿ ತನ್ನ ಹೊರಗಿನ ತೋರಿಕೆಯಿಂದ ಜನಸಾಮಾನ್ಯರನ್ನು ಸಣ್ಣ ಪುಟ್ಟ ಅಂಗಡಿಯವರನ್ನು ವಂಚಿಸಿ ಪಾರಾದಂತೆ ತೋರಬಹುದು. ಅದು ಕೊನೆಗೊಮ್ಮೆ ಬ್ಯಾಂಕಿಗೆ ಹೋದಾಗ ಅಥವಾ ಚಾಣಾಕ್ಷವರ್ತಕನ ಕೈಯಲ್ಲಿ ಸಿಕ್ಕಿಬಿದ್ದಾಗ ಅದರ ಖೊಟ್ಟಿತನ ಹೊರಬಿದ್ದು ತಕ್ಕ ಶಿಕ್ಷೆಗೆ ಗುರಿಯಾಗುವುದು. ಅದರಂತೆ ಈ ಜೀವವೆಂಬ ಸಣ್ಣ ಕಳ್ಳ ನಾಣ್ಯವಾಗದೆ ತನ್ನ ಕುಟಿಲ ಕುಹಕ ಕುಬುದ್ಧಿ ಕುತ್ಸಿತವರ್ತನೆಗಳೊಂದೂ ಇಲ್ಲದೆ ತಾನು ಸಾಚಾನಾಣ್ಯವಾಗಿ ಈ ಮರ್ತ್ಯಲೋಕದ ಕಮ್ಮಟದಲ್ಲಿ ಚೆನ್ನಾಗಿ ಅಂಕಿತಗೊಂಡು ಟಂಕಿತವಾಗಿ ಚಲಾವಣೆಗೊಂಡರೆ ಸಾಕು, ಧರೆಯ ಮೇಲಿನ ಹಿರಿಯ ವರ್ತಕನಾದ ನಮ್ಮ ಮಹಾದೇವಸೆಟ್ಟಿ ಕೈಗೆತ್ತಿಕೊಳ್ಳುತ್ತಾನೆ ಎನ್ನುತ್ತಾರೆ ಬಸವಣ್ಣನವರು:

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹಗರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ
ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದರೆ ನುಡಿಯನು
ಕಾಣಿಯ ಸೋಲ: ಅರ್ಧಗಾಣಿಯ ಗೆಲ್ಲ !
ಜಾಣ, ನೋಡಪ್ಪಾ. ನಮ್ಮ ಕೂಡಲಸಂಗಮದೇವ!

ಅವನು ಸಾಮಾನ್ಯಸೆಟ್ಟಿಯಲ್ಲ, ತುಂಬ ಜಾಣನಾದ ಮಹಾದೇವಸೆಟ್ಟಿ. ಅವನ ಹತ್ತಿರ ಕಳ್ಳನಾಣ್ಯಗಳು ಸುಳಿದು ನುಸುಳುವುದಕ್ಕೆ, ಅವನ ಗಲ್ಲಾಪೆಟ್ಟಿಗೆಯನ್ನು ಸೇರುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಅಂತಹ ನಿರ್ದಯ ನಿಷ್ಠುರಸೆಟ್ಟಿಯೊಡನೆ ಕೊಡು-ಕೊಳ್ಳುವ ವ್ಯವಹಾರದಲ್ಲಿ ಸದಾತೊಡಗಿರುವ ಜೀವನಾಣ್ಯಗಳು ಒಳ್ಳೆಯ ಗಟ್ಟಿನಾಣ್ಯಗಳಾಗಿ ಇಲ್ಲಿ, ಇಹದಲ್ಲಿ ಚಲಾವಣೆಗೊಳ್ಳಬೇಕಾದುದು ಅನಿವಾರ್ಯವಾಗಿದೆ. ಅಂದಮೇಲೆ ಇಲ್ಲಿ ಸಲ್ಲದ ನಾಣ್ಯ ಪರಲೋಕದಲ್ಲಿಯೂ ಸಲ್ಲದು. ಇಹದಲ್ಲಿ ಬಾಳದವನು ಅಲ್ಲಿಯೂ ಬಾಳಲಾರನು. ಇದನ್ನು ಚೆನ್ನಾಗಿ ಮನಗಂಡ ಶರಣರು ಇಹ ಮತ್ತು ಪರಗಳಿಗೆ ಸಮಾನವಾದ ಸ್ಥಾನವನ್ನು ಕಲ್ಪಿಸಿದರು. ವ್ಯಕ್ತಿಯು ಸಂಸಾರದಲ್ಲಿದ್ದೇ ಸದ್ಗತಿಯನ್ನು ಹೊಂದುವ ಸುವರ್ಣಮಾರ್ಗವನ್ನು ನಿರ್ಮಿಸಿ ಧರ್ಮವನ್ನು 'ಶ್ರೀ ಸಾಮಾನ್ಯ'ರ ಆಚರಣೆಗೆ ಸಾಧ್ಯವಾಗುವಂತೆ ಸುಲಭಗೊಳಿಸಿದರು. ಪ್ರಪಂಚ—ಪಾರಮಾರ್ಥಗಳ ಈ ಸಮನ್ವಯಸಿದ್ಧಾಂತ ಸಾರ್ವತ್ರೀಕರಣಗೊಂಡು ಸಕಲರನ್ನೂ ವಿಶೇಷವಾಗಿ ಆಕರ್ಷಿಸಿತು. ಬಸವಣ್ಣನವರ ದಿವ್ಯವಾದ ಉಜ್ವಲತೇಜೋವಲಯದಿಂದ ವೀರಶೈವಧರ್ಮ ವಿಶ್ವಧರ್ಮವಾಯಿತು.

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯೆ
ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ !
ಕೂಡಲ ಸಂಗಮದೇವಾ

ಎಂದಿರುವ ಬಸವಣ್ಣನವರು ದೇವಲೋಕ-ಮರ್ತ್ಯಲೋಕಗಳೆಂಬ ಎರಡು ಲೋಕಗಳ

ಚಿತ್ರಗಳನ್ನು ಕಲ್ಪಿಸಿಕೊಂಡಿರುವವನು ಭಕ್ತನಾಗಲಾರ, ಶರಣನಾಗಲಾರನೆಂದು ಹೇಳಿದರು. ಆದರಿಂದಾಗಿ ಅವುಗಳ ಸೀಮಾರೇಖೆಗಳನ್ನೇ ಅಳಿಸಿಹಾಕಿದರು. ಸತ್ತು ತಾನು ದೇವನೊಡನೆ ಸೇರುತ್ತೇನೆ ಎಂಬ ಮಾತು ಸತ್ವವಿಲ್ಲದ್ದು. ಅದು ಭಕ್ತನಿಗೆ ಸಲ್ಲದು. ಅದು ಅರ್ಥವಿಲ್ಲದ್ದು. ಅದಂ ಕಬ್ಬಿನ ತುದಿಯನ್ನು ತಿಂದಂತೆ ಸಪ್ಪೆಯದಂ. ವ್ಯಕ್ತಿಯಂ ಬದುಕಿರುವಾಗಲೆ ತನ್ನ ಸಾಧನೆಯ ಸೋಪಾನಗಳನ್ನೇರಿ ಶಿವಾನುಭವವನ್ನು ಪಡೆಯುವುದಕ್ಕೆ, ಶಿವನೊಡನೆ ಬೆರೆಯುವುದಕ್ಕೆ ಸಾಧ್ಯ ಎಂಬುದನ್ನು ತಂತಮ್ಮ ಅನುಪಮ ದಿವ್ಯ ಜೀವನ ಸಾಧನ-ಸಿದ್ಧಿಗಳಿಂದಲೇ ಈ ಲೋಕದ ಬದ್ಧಜೀವಿಗಳಿಗೆ ಕಣ್ಣಾರೆ ಕಾಣಿಸಿಕೊಟ್ಟರು ; ಅಂದಿನ ಕಲ್ಯಾಣದ ಜಗಜ್ಯೋತಿಯ ಮಹಾ ಬೆಳಕಿನಲ್ಲಿ ತೊಳಗಿ ಬೆಳಗಿದ ಪ್ರಬುದ್ಧರಾದ ಅಸಂಖ್ಯಾತರು !

ಪ್ರಸಾದಕಾಯವ ಕೆಡಿಸಲಾಗದು ……

ಶರಣಧರ್ಮವು ಮಾನವ ಶರೀರವನ್ನು ಆ ಮೂಲಕ ಪಡೆಯುವ ಶಾರೀರಕ ಸುಖಭೋಗಗಳನ್ನು ನಶ್ವರವೆಂದು ಕ್ಷಣಭಂಗುರವೆಂದು ಕಡೆಗಣಿಸಲಿಲ್ಲ, ಹೀಗಳೆಯಲಿಲ್ಲ. ಹೀಗೆಂದು ಹೇಳಿದ ಮಾತ್ರಕ್ಕೆ ಅವುಗಳು ನಿತ್ಯವೆಂಬುದಾಗಿ ಸಮರ್ಥಿಸುತ್ತದೆಂದೂ ಅರ್ಥವಲ್ಲ. ಜೀವ-ಜಗತ್ತು–ಜಗದೀಶ; ಸಂಸಾರ-ಹುಟ್ಟು–ಸಾವು; ದೇಹ–ಭೋಗ–ಭಾಗ್ಯ ಇತ್ಯಾದಿಗಳ ಬಗೆಗೆ ಶರಣರು ಕೂಲಂಕಷವಾಗಿ ವಿಚಾರಮಾಡಿ ಅವುಗಳ ಸ್ವರೂಪವನ್ನು ಚೆನ್ನಾಗಿ ಮನಗಂಡಿದ್ದರು. ಸಾಧಕ ಜೀವನದ ಪ್ರಾರಂಭದ ಅವಸ್ಥೆಯಲ್ಲಿ ಜೀವನಿಗೆ ಬಿಡಲಾರದೆ ಅಂಟಿಕೊಂಡಿರುವ ದೇಹಾಭಿಮಾನ, ಪಂಚೇಂದ್ರಿಯವಿಷಯಸುಖಾಸ್ವಾದನ, ಇಹದ ಭೋಗಾಭಿಲಾಷೆಗಳ ಹುಚ್ಚುವ್ಯಾಮೋಹ–ಇವುಗಳೆಲ್ಲ ಕ್ರಮೇಣ ಕಡಿಮೆಯಾಗಿ ಊರ್ಧ್ವಮಾರ್ಗದಲ್ಲಿ ಮುನ್ನಡೆಯುವಂತಾಗಲೆಂದು ಜೀವಸಂಬೋಧನಸ್ಥಲ, ಸಂಸಾರಹೇಯಸ್ಥಲ, ತಾಮಸನಿರಸನಸ್ಥಲಗಳನ್ನು ಪ್ರಾರಂಭದಲ್ಲಿ ವಿವರಿಸಿ ಮಾನವ ಶರೀರವನ್ನು ಹೀಗಳೆದು ನುಡಿದಿರುವುದೂ ಉಂಟು.

> ಹಾವಿನ ಬಾಯ ಕಪ್ಪೆ ಹಸಿದಂ ಹಾರಂವ ನೊಣಕ್ಕೆ ಆಸೆ ಮಾಡುವಂತೆ
> ಸೂಲವನೇರಂವ ಕಳ್ಳನು ಹಾಲುತುಪ್ಪವ ಕುಡಿದಂ
> ಮೇಲೇಸು ಕಾಲ ಬದುಕುವನೋ ?
> ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವರ
> ಕೂಡಲಸಂಗಮದೇವನವರನೊಲ್ಲ ಕಾಣಿರಣ್ಣಾ

> ವ್ಯಾಧನೊಂದಂ ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ
> ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ. ನೋಡಯ್ಯಾ
> ಮೊಲನಿಂದ ಕರಕಷ್ಟ ನರನ ಬಾಳುವೆ !
> ಸಲೆ ನಂಬೋ ನಮ್ಮ ಕೂಡಲಸಂಗಮದೇವನ

ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ–ಸುಡಲೀ ದೇಹವನು
ಒಡಲುವಿಡಿದು ಕೆಡದಿರು, ಚೆನ್ನಮಲ್ಲಿಕಾರ್ಜುನನರಿ ಮರುಳೇ

ನೆಣದ ಕೊಳ, ರಕ್ತದ ಹುತ್ತು, ಕೀವಿನ ಬಾವಿ, ರೋಮದ ಸೀಮೆ,
ತ್ವಕ್ಕಿನ ಇಕ್ಕೆ, ಮಾಂಸದ ವಾಸ, ಕರುಳಿನ ತಿರುಳು, ನರದ ಕರವತಿಗೆ,
ಮಲಮೂತ್ರಗಳ ನೆಲೆವನೆ, ಕ್ರಿಮಿಯ ಸಮೂಹ, ಕೀಟಕದ ಕೋಟಾರ,
ಶುಕ್ಲದ ಕೋಶ, ಎಲುವಿನ ಬಲುಹಿಂದಿಪ್ಪುದೀಕಾಯ ಹೇಯವಯ್ಯ
ಇಂತಾಗಿ ತೋರಿ ಹಾರುವ ದೃಶ್ಯಾದೃಶ್ಯವೀ ದೇಹವಯ್ಯ
ಇದ ನನ್ನದೆಂದು ನಚ್ಚಿ ಮಚ್ಚಿ ಹೆಚ್ಚಿ ಕೆಚ್ಚುಗೊಂಡು ಒಚ್ಚತ ಹೋದ
ಎನ್ನ ಮನಕ್ಕೆ ಇನ್ನಾವುದು ಗತಿಯೊ ಸೌರಾಷ್ಟ್ರ ಸೋಮೇಶ್ವರಾ ?
ಸುಡು ಸುಡು, ಈ ದೇಹದ ರೂಪು ನೋಡಿದರೇನೂ
ಹುರುಳಿಲ್ಲವಯ್ಯ, ಎಲುವು ಚರ್ಮ ನರ ಮಾಂಸ
ಮಲಮೂತ್ರಯುಕ್ತವಾದ ಅನಿತ್ಯದೇಹವ ನಚ್ಚಿ
ನಿಮ್ಮ ನಿಜವ ಮರೆದು ಭವಭಾರಿಯಾದೆನಯ್ಯಾ
ಅಖಂಡೇಶ್ವರಾ

ಈ ಮಾತುಗಳೆಲ್ಲವು ಸಾಧಕನಾದವನಿಗೆ ತನ್ನ ದೇಹದ ಮೇಲೆ ಇರಬಹುದಾದ ದುರಭಿಮಾನವನ್ನು ದುರಾಶೆಯನ್ನು ದೂರೀಕರಿಸುವುದಕ್ಕಾಗಿಯೇ ಹೇಳಿದವುಗಳಾಗಿವೆ. ಆದರೆ ಶರಣರು ಶರೀರವನ್ನು ಅಲ್ಲಗಳೆಯುವುದನ್ನೇ ತಮ್ಮ ಗುರಿಯನ್ನಾಗಿ ಇಟ್ಟು ಕೊಳ್ಳದೆ ಶರೀರ ಮತ್ತು ತನ್ಮೂಲಕ ಅನುಭವಿಸುವ ವಿಷಯಸುಖಗಳನ್ನು ಉದಾತ್ತೀ ಕರಿಸಿ ಪರದ ಸಾಧನೆಗೆ ಶರೀರವನ್ನು ಒಂದು ಸಮರ್ಥ ಸುಂದರ ಸಲಕರಣೆಯನ್ನಾಗಿ ಉಪಯೋಗಿಸಿಕೊಂಡರು. 'ಶರೀರಮಾದ್ಯಂ ಖಲು ಧರ್ಮಸಾಧನಂ'—ಧರ್ಮಸಾಧನೆಗೆ ಶರೀರವೇ ಮೊದಲ ಮುಖ್ಯವೆಂದಿರುವಾಗ ಅದನ್ನು ಕೆಡಿಸದೆ ಸರಿಯಾಗಿ ನಡೆಸ ಬೇಕೆಂದು, ಬಳಸಬೇಕೆಂದು ತಿಳಿಯಹೇಳಿದರು. ತಮ್ಮ ಭಯಂಕರ ಸಂಕಲ್ಪ-ವಿಕಲ್ಪ ವಿಕಾರಗಳಿಂದ ಜೀವಾತ್ಮನನ್ನು ಘೋರತರ ವಿನಾಶದತ್ತ ಸೆಳೆದೊಯ್ಯುವ ತನು-ಮನ-ಇಂದ್ರಿಯಗಳ ರಭಸವನ್ನು ತಡೆದು ಅವುಗಳ ಹಲ್ಲುಗಳನ್ನು ಮುರಿದಾಗ ಅವು ನಮ್ಮನ್ನು ಕಚ್ಚಲಾರವು. ಅವುಗಳೊಡನೆ ನಿರ್ಭಯವಾಗಿ ಸರಸವಾಡುತ್ತ ವ್ಯವಹರಿಸುತ್ತ ಅವುಗಳ ಮೂಲಕವೇ ವ್ಯಕ್ತಿಯು ತನ್ನ ಉದ್ಧಾರವನ್ನು ಮಾಡಿಕೊಳ್ಳಲು ಸುಲಭಸಾಧ್ಯವಾಗುತ್ತದೆ.

ಕಾಯವಿಕಾರವನ್ನು ಕಳೆದು ಕಾಯಕನಿರತರಾದ ಕಾಯಜಾರಿಯ ಭಕ್ತರನ್ನು ಮಿಕ್ಕಿನವರಂತೆ ಕಾಯಗೊಂಡಿದ್ದವರು ಎಂದು ಹೇಳಲಾಗದೆಂದು ಅಕ್ಕನು ತನ್ನ ಸುಂದರ ವಾದ ವಚನವೊಂದರಲ್ಲಿ ತುಂಬ ಮನೋಜ್ಞವಾಗಿ ನಿರೂಪಿಸಿದ್ದಾಳೆ :

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ
ಹಾವಿನ ಸಂಗವೇ ಲೇಸು ಕಂಡಯ್ಯ
ಕಾಯವಿಕಾರವ ಕಳೆದು ಕಾಯದಲಿರ್ದರೆ
ಕಾಯದ ಸಂಗವೇ ಲೇಸು ಕಂಡಯ್ಯ
ತಾಯಿ ರಕ್ಕಸಿಯಾದಂತೆ ಕಾಯ ವಿಕಾರವು
ಚೆನ್ನಮಲ್ಲಿಕಾರ್ಜುನಯ್ಯ, ನೀನೊಲಿದವರು
ಕಾಯಂಗೊಂಡಿದ್ದರೆನಬೇಡ

ವಿಷದ ಹಲ್ಲುಗಳನ್ನು ಕಿತ್ತಮೇಲೆ ಹಾವಿನ ಜೊತೆಯಲ್ಲಿ ಹೇಗೆ ಬೇಕಾದರೂ ಆಟವಾಡಬಹುದು. ಅದು ಆನಂದದಾಯಕವೇ ಆಗಿರುತ್ತದೆ. ಹಾಗೆಯೇ ಕಾಯವಿಕಾರಗಳನ್ನೆಲ್ಲ ಗೆದ್ದ ನಂತರ ಆತ್ಮಸಾಧನೆಗೆ ಅದು ಬಾಧಕವಾಗುವುದಿಲ್ಲ, ಸಹಾಯಕವಾಗುತ್ತದೆ. ಕಾಯದ ಕತ್ತಲೆಯನ್ನು ಕಳೆದು ಲಿಂಗದ ಬೆಳಕಿನಲ್ಲಿ ನಿಂತ ಶರಣರನ್ನು ಕಾಯಗೊಂಡಿದ್ದವರು ಎಂದು ಹೇಳಲಾಗದು. ಕಾಯದ ಕತ್ತಲೆಯನ್ನು ಕಳೆದುಕೊಳ್ಳುವ ಮಾರ್ಗವೆಂದರೆ ಶರೀರದೊಳಕ್ಕೆ ಬಲ್ಲವರನ್ನು 'ಬನ್ನಿ'ರೆಂದು ಬರಮಾಡಿಕೊಂಡು, ಪೊಲ್ಲಹರನ್ನು 'ತೊಲಗಿ' ರೆಂದು ಹೊರದೂಡಬೇಕು. ಅವರನ್ನು ಒಳಕ್ಕೆ ಕಾಲಿಡದಂತೆ ಸದಾ ಎಚ್ಚರವಾಗಿದ್ದು ಕಾಯುತ್ತ ಹೊರಗಡೆಯೇ ತಡೆಯಬೇಕು ಎಂಬುದಾಗಿ ಉಗ್ಘಡಿಸುವ ಗಬ್ಬಿದೇವಯ್ಯಗಳು ತಮ್ಮ ಒಂದು ವಚನದಲ್ಲಿ ಹೀಗೆಂದು ಉಗ್ಘಡಿಸಿದ್ದಾರೆ :

ಜ್ಞಾನ ಬಾ, ಮಾಯೆ ಹೋಗೆಂದು ಕಳುಹಿತ್ತಿದ್ದೇನೆ
ಅರಿವು ಬಾ, ಅಜ್ಞಾನ ಹೋಗೆಂದು ಕಳುಹಿತ್ತಿದ್ದೇನೆ
ನಿಃಕಲ ಬಾ, ಸಕಲ ಹೋಗೆಂದು ಕಳುಹಿತ್ತಿದ್ದೇನೆ
ನಿಃಪ್ರಪಂಚ ಬಾ, ಪ್ರಪಂಚ ಹೋಗೆಂದು ಕಳುಹಿತ್ತಿದ್ದೇನೆ
ಕೂಡಲಸಂಗಮದೇವರಲ್ಲಿ ಬಸವಣ್ಣನ
ಬಲ್ಲವರೊಳಗೆ ಕೂಡಿ
ಅರಿಯದವರ ಹೊರಗೆ ತಡವುತ್ತಿದ್ದೇನೆ.[1]

ಈ ಶರೀರವನ್ನು ತುಚ್ಛೀಕರಿಸುವುದು ತ್ಯಾಜ್ಯವೆಂದೂ. ಬೇಕು-ಬೇಡಗಳೆಂಬೆರಡು ಭವಬೀಜಗಳನ್ನು ಹುರಿದು ವ್ಯಕ್ತಿಯು ತಾನಿದ್ದೆಡೆಗೆ ಬಂದ ಸಕಲ ಪಡಿಪದಾರ್ಥಗಳನ್ನು ಮನ-ಇಂದ್ರಿಯಗಳಲ್ಲಿರುವ ಷಡ್ಲಿಂಗಗಳಿಗೆ ಅಲ್ಲಲ್ಲಿಯೇ ಸಮರ್ಪಿಸಿ ಲಿಂಗಭೋಗೋಪಭೋಗಿಯಾಗುವುದೇ ಪೂಜ್ಯವೆಂದೂ. ಶಿವನನ್ನು ಕಾಣಲು ಸಾಧನವಾದ ಈ ಶರೀರವು 'ಪ್ರಸಾದಕಾಯ'ವೆಂದೂ, ಇದನ್ನು ಕೆಡಿಸಬಾರದೆಂದೂ, ಬಸವಣ್ಣನವರು

ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ

1 ಸಕಲಪುರಾತನರ ವಚನಗಳು : ಸಂಪುಟ ಮೂರು

ಆವ ಪದಾರ್ಥವಾದರೇನು ? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ
ಕೂಡಲಸಂಗಮದೇವನನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು

ಎಂದು ಮನಂಬುಗುವಂತೆ ಹೇಳಿ ಮನುಷ್ಯಜನ್ಮದ ಮತ್ತು ಮಾನವ ಶರೀರದ ಹಿರಿಮೆಯನ್ನು ಸಾರಿದ್ದಾರೆ.

ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು
ಅಂತಃಕರಣಂಗಳೆಂಬ ಪರಿಚಾರಕರುಗಳ ಕೈಯಿಂದ
ಪಂಚೇಂದ್ರಿಯಂಗಳೆಂಬ ಪರಿವಾಣದಲ್ಲಿ
ಶಬ್ದ ಸ್ಪರ್ಶ ರೂಪು ರಸ ಗಂಧಂಗಳೆಂಬ ಪದಾರ್ಥಂಗಳನು
ಎಡೆಮಾಡಿಸಿಕೊಂಡು ಸವಿವುತ್ತಿರಲು
ಆನಂದವೇ ಮಹಾಪ್ರಸಾದವಾಗಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಸದಾ ಸನ್ನಿಹಿತ ಕಾಣಿರೇ

ಎಂಬುದಾಗಿ ಉರಿಲಿಂಗಪೆದ್ದಿಗಳು ಹೇಳಿರುವಂತೆ, ಲಿಂಗಶರಣನ ಪಂಚೇಂದ್ರಿಯಗಳು ಲಿಂಗಮುಖವಾಗಿ ನಿಂತು ಪಂಚವಿಷಯಗಳ ಎಲ್ಲ ಸುಖಗಳನ್ನು ಲಿಂಗಾರ್ಪಣದಿಂದ ಪ್ರಸಾದ ರೂಪವಾಗಿ ಸವಿದು ಸುಖಿಸುತ್ತಿರುವಾಗ ಭವರೋಗವೆಲ್ಲ ಹೋಗಿ ಭವಹರನೊಡನೆ ಬೆರೆತು ಒಂದಾಗಬಹುದಲ್ಲವೆ ?

ಕಾಯ ಕರ್ರನೆ ಕಂದಿದರೇನು, ಮಿರ್ರನೆ ಮಿಂಚಿದರೇನು—ಎಂದು ಲೋಕದ ಜಡಜೀವಿಗಳಿಗೆ ಹೇಳುತ್ತ ಶರೀರದ ಮೇಲಿನ ವ್ಯಾಮೋಹವನ್ನು ಸಂಪೂರ್ಣ ತೊರೆದು

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳಬಾವಿಗಳುಂಟು
ಶಯನಕ್ಕೆ ಹಾಳುದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯ
ಆತ್ಮಸಂಗಾತಕ್ಕೆ ನೀನೆನಗುಂಟು

ಎಂದು ವಿರಾಗದ ತುತ್ತತುದಿಯಲ್ಲಿ ನಿಂತು ಹಾಡಿಕೊಳ್ಳುತ್ತ ಕಾಯದ ಲಜ್ಜೆಯ ಕಲ್ಪಿತವ ಕಳೆದು, ಜೀವದ ಲಜ್ಜೆಯ ಮೋಹವನಳಿದು, ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು, ಲೋಕವನ್ನೆ ಲೆಕ್ಕಿಸದೆ ಉಟ್ಟ ಬಟ್ಟೆಯ ಹಂಗನ್ನೂ ತೊರೆದು ದಿಟ್ಟದಿಗಂಬರೆಯಾಗಿ ಹೊರಟ ಅಕ್ಕಮಹಾದೇವಿಯು ಈ ಮಾನವ ಶರೀರದ ಪರಮಗಂತವ್ಯದ ಬಗೆಗೆ ಹೃದಯಂಗಮವಾಗಿ ಹೇಳಿರುವುದು ಮನನೀಯವಾಗಿದೆ.

'ಹಡೆವುದರಿದು ನರಜನ್ಮವ
ಹಡೆವುದರಿದು ಗುರುಕಾರುಣ್ಯವ
ಹಡೆವುದರಿದು ಲಿಂಗಜಂಗಮಸೇವೆಯು !'

ಈ ಮಾನವ ಜನ್ಮ, ಮಾನವ ಶರೀರ-ಇವು ಅಪರೂಪಕ್ಕೆ ದೊರಕಿವೆ. ಇವುಗಳನ್ನು ಪಡೆಯುವುದೇ ಕಷ್ಟ. ಮೇಲಿಂದ ಮೇಲೆ ಇವು ಲಭಿಸತಕ್ಕವಲ್ಲ. ಎಂಬತ್ತು ನಾಲ್ಕು ಲಕ್ಷಜನ್ಮಗಳಲ್ಲಿ ಬಂದಿರುವ ಈ ಜೀವ ಪುಣ್ಯವಶದಿಂದ ಈಗ ಮಾನವಜನ್ಮದಲ್ಲಿ ಬಂದು ಅರಿವು-ಆಚಾರ, ವಿವೇಕ-ವಿಚಾರಗಳನ್ನು ಪಡೆದಿರುತ್ತದೆ. ಆದ್ದರಿಂದ ಈ ಮಾನವ ಜನ್ಮ ವ್ಯರ್ಥವಾಗುವುದಕ್ಕೆ ಬಿಡಬಾರದು, ಇದನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು

ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ-
ಎಂಬತ್ತು ನಾಲ್ಕು ಲಕ್ಷ ಯೋನಿಯೊಳಗೆ
ಬಂದೆ ಬಂದೆ ಬಾರದ ಭವಂಗಳನುಂಡೆನುಂಡೆ ಸುಖಾಸುಖಂಗಳ !
ಹಿಂದಣ ಜನ್ಮಂಗಳು ತಾನೇನಾದರಾಗಲಿ
ಇಂದು ನೀ ಕರುಣಿಸು ಚೆನ್ನಮಲ್ಲಿಕಾರ್ಜುನ !

ಎಂಬುದಾಗಿ ಪ್ರಾರ್ಥಿಸಿದ್ದಾಳೆ. ಜೀವನು ಶರೀರವನ್ನು ಧರಿಸಿ ಬಂದಿರುವುದು ಶಿವನನ್ನು ಅರಿಯುವುದಕ್ಕಾಗಿ, ಅರಿತು ಬೆರೆಯುವುದಕ್ಕಾಗಿ. ನದಿಯನ್ನು ದಾಟಿಸುವುದಕ್ಕಾಗಿ ತೆಪ್ಪವಿರುವಂತೆ ಭವಸಾಗರವನ್ನು ದಾಟಿಸುವುದಕ್ಕಾಗಿ ಈ ದೇಹವೆಂಬ ಹಡಗು. ಸಾಗರವನ್ನು ದಾಟಿಸುವ ಸಾಧನವಾಗಿ ಅದು ಕಾರ್ಯನಿರ್ವಹಿಸಿದ ಮೇಲೆ ಅದರ ಉದ್ದೇಶ ಪೂರೈಸಿತು. ಅದರ ವಿಚಾರದಲ್ಲಿ ವ್ಯಾಮೋಹ ಸಲ್ಲದು. ಹಾಗೆಯೇ ಶರೀರವಿಡಿದು ಶಿವಾನುಭವವನ್ನು ಪಡೆದುಕೊಂಡ ಅಕ್ಕನು ತನ್ನ ಶರೀರವನ್ನು ಕುರಿತು ಹೇಳಿದ ಅನುಭವವಾಣಿ ಎಲ್ಲರ ಅನುಭವಕ್ಕೆ ಮುಟ್ಟುವಂತಿದೆ :

ಹಣ್ಣುಮೆದ್ದ ಬಳಿಕ, ಆ ಮರನ ಆರು ತರಿದರೇನು ?
ಹೆಣ್ಣು ಬಿಟ್ಟ ಬಳಿಕ, ಆಕೆಯನಾರು ಕೂಡಿಕೊಂಡರೇನು ?
ಮಣ್ಣುಬಿಟ್ಟ ಬಳಿಕ, ಆ ಕೆಯ್ಯನಾರುತ್ತರೇನು ?
ಚೆನ್ನಮಲ್ಲಿಕಾರ್ಜುನನ ಅರಿದ ಬಳಿಕ
ಆ ಕಾಯವ ನಾಯಿ ತಿಂದರೇನು, ನೀರ ಕುಡಿದರೇನು ?

ಕೈಯಾರೆ ಬೆಳೆಸಿದ ತರುಮರಗಳಿಂದ ಫಲಪುಷ್ಪಗಳು, ಕೈಹಿಡಿದ ಸತೀಶಿರೋಮಣಿಯಿಂದ ಸಂಸಾರ ಸುಖ ಮತ್ತು ಸಂತಾನ ಪ್ರಾಪ್ತಿ, ಕೈಕೆಸರಾಗಿ ಉತ್ತುಬಿತ್ತಿದ ಹೊಲಗದ್ದೆಗಳಿಂದ ಬಾಯಿ ಮೊಸರಾಗುವ ಸಮೃದ್ಧ ಅವುಗಳ ಪರಮಗುರಿ. ಅವುಗಳನ್ನು ಪಡೆದು ಆನಂದಿಸುವುದೇ ಮಾನವನ ಚರಮಗುರಿ. ಅದರಂತೆ ಮೃಣ್ಮಯವಾದ ಈ ಮಾನವ ಶರೀರದಿಂದ ಚಿನ್ಮಯನಾದ ಆ ಮಹಾದೇವನನ್ನು ಅರಿಯುವುದು, ಅದಕ್ಕೆ ತಕ್ಕ

ಸಾಧನೆಯನ್ನು ಈ ಶರೀರವಿಡಿದು ಮಾಡುವುದು–ಇವು ಜೀವನು ಮಾನವ ದೇಹವನ್ನು ಧರಿಸಿ ಬಂದುದರ ಮುಖ್ಯಧ್ಯೇಯಗಳಾಗಿವೆ.

ಶಿವನನ್ನು ಕಾಣುವ ಸಮರ್ಥ ಸಾಧನವಾಗುವುದರಲ್ಲಿಯೇ ಈ ಶರೀರದ ಸಾರ್ಥಕ್ಯ ಸುಸಂಗತವಾಗಿದೆ. ಅದನ್ನೇ ಪ್ರಭುದೇವರು ತಮ್ಮ ಸ್ವಾನುಭವದ ಸವಿನುಡಿಯಾದ ಪ್ರಸಾದವಾಣಿಯಲ್ಲಿ ಪ್ರಕಟಪಡಿಸಿದ್ದಾರೆ. ಮಾನವನು ಶಿವನನ್ನು ಕಾಣಲು. ಶಿವನೇ ಆಗಲು ಲಕ್ಷಗಂಗೆಯಲ್ಲಿ ಮಿಂದು ಮೇರುಮಂದರಗಳಲ್ಲಿ ಸುತ್ತಿ ಸುಳಿದಾಡಬೇಕಾಗಿಲ್ಲ. ಅತ್ತಲಿತ್ತ ಹರಿವ ಮನಸ್ಸನ್ನು ನಿಲ್ಲಿಸಿ ತನ್ನ ತನುವಿನ ತೋಟದಲ್ಲಿ ತಕ್ಕ ಕೃಷಿಯಲ್ಲಿ ತೊಡಗಿ ಬಚ್ಚಬರಿಯ ಬೆಳಗಾದ ಗೊಹೇಶ್ವರ ಲಿಂಗದ ಅಚ್ಚರಿಯ ಸ್ವಚ್ಛ ಬೆಳಸನ್ನು ಬೆಳೆಯುವ ಭವ್ಯ ಬಗೆಯನ್ನು ಬಗೆದುಂಬಿ ಬಣ್ಣಿಸಿದ್ದಾರೆ :

ತನುವ ತೋಂಟವ ಮಾಡಿ, ಮನವ ಗುದ್ದಲಿಯು ಮಾಡಿ
ಅಗೆದು ಕಳೆದೆನಯ್ಯ ಭ್ರಾಂತಿನ ಬೇರ
ಒಡೆದು ಸಂಸಾರದ ಹೆಂಟೆಯು, ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ,
ಸುಷುಮ್ನನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಟದಲ್ಲಿ ಜಾಗರವಿದ್ದು
ಸಸಿಯು ಸಲಹಿದೆನು ಕಾಣಾ ಗೊಹೇಶ್ವರಾ

ಇಂಥದೇ ಚಿತ್ರವನ್ನು ಮತ್ತಷ್ಟು ವಿಸ್ತರಿಸಿ ಕೃಷಿಕಾಯಕವನ್ನೇ ಕೈಕೊಂಡು ಆಧ್ಯಾತ್ಮ ರಸನುಷಿಯಾದ ಮಹಾಶಿವಶರಣ ಒಕ್ಕಲಿಗ ಮುದ್ದಣ್ಣಗಳು ತಮ್ಮ ಕಾಯಕದ ಪರಿಣಾಮಕಾರೀ ಪರಿಭಾಷೆಯಲ್ಲಿಯೇ ಆಧ್ಯಾತ್ಮಿಕ ಕೃಷಿಗೈಯುವ ಅಪೂರ್ವವಾದ ವಿನೂತನ ವಿಶಿಷ್ಟ ಕ್ರಮವನ್ನು ಕಣ್ಣಿಗೆ ಕಟ್ಟುವ ರೂಪಕಗಳಿಂದ ಅತಿರಮ್ಯವಾಗಿ ಹೊಮ್ಮಿಸಿ ಆದರ್ಶಕೃಷಿಕರಾಗಿದ್ದಾರೆ :

ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂ ಪಿಡಿದು
ಉತ್ತರಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟಿ ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯಾ ಎಂದಡೆ :

ನಾದ ಬಿಂದು ಕಳೆ ಮಳೆಗಾಲದ ಹದಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳನಟ್ಟು
ಇಡಾ ಪಿಂಗಳ ಸುಷುಮ್ನನಾಳವೆಂಬ ಕೋವಿಗಳ ಜೋಡಿಸಿ
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಲಂ ಬಲಿದು
ಕುಂಡಲೀಸರ್ಪನೆಂಬ ಹಗ್ಗವ ಸೇದಿ ಕಟ್ಟಿ
ಹಂಸನೆಂಬ ಎತ್ತಂ ಹೂಡಿ
ಪ್ರಣವವೆಂಬ ಬೀಜವ ಪಶ್ಚಿಮಮುಖಕ್ಕೆ ಬಿತ್ತಿ
ಸರ್ವಶಾಂತಿ ನಿರ್ಮಲವೆಂಬ ಮೇಘ ಸುರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತು.
ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯ ಕಳದು
ಅಷ್ಟವರ್ಣದ ಅಲಬಂ ಕಿತ್ತು, ದಶವಾಯುವೆಂಬ ಕಸವಂ ತೆಗೆದು
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿಧವೆಂಬ ಮಂಚಿಗೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚುವೆಂಬ ಹಕ್ಕಿಯಂ ಸೋವಿ
ಆ ಭತ್ತ ಬಲಿದು, ನಿಂದಿರಲು,
ಕೊಯ್ದುದೆಂಬ ಪರಿ ಇನ್ನಾವುದಯ್ಯಾ ಎಂದಡೆ ;
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ,
ಭಾವವೆಂಬ ಹಸ್ತದಿಂ ಪಿಡಿದು, ಜನನದ ನಿಲವಂ ಕೊಯ್ದು,
ಮರಣದ ಸಿವುಡ ಕಟ್ಟಿ. ಆಕಾಶವೆಂಬ ಬಣಬೆಯನೊಟ್ಟಿ,
ಉನ್ಮನಿಯೆಂಬ ತೆನೆಯನ್ನರಿದು,
ಮನೋರಥವೆಂಬ ಬಂಡಿಯಲ್ಲಿ ಹೇರಿ,
ಮುಕ್ತಿಯೆಂಬ ಕೊಟಾರಕ್ಕೆ ತಂದು,
ಅಷ್ಟಾಂಗಯೋಗವೆಂಬ ಜೀವಧನದಿಂದೊಕ್ಕಿ,
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟತೂರಿ,
ಪುಣ್ಯದ ಬೀಜವಂ ಕಳೆದು.
ಷಡುವರ್ಗ ಷಡೂರ್ಮಿಯೆಂಬ ಬೇಗಾರವಂ ಕಳೆದು,
ಅಂಗಜಾಲನ ಕಣ್ಣುಮುಚ್ಚಿ
ಚಿತ್ರಗುಪ್ತರೆಂಬ ಕರಣಿಕರ ಸಂಪುಟಕೆ ಬರಸದೆ
ಯಮರಾಜನೆಂಬರಸಿಗೆ ಕೋರನಿಕ್ಕದೆ
ಸುಖ ಶಂಕರೋತಿ ಎಂಬ ಸೈದಾನವನುಂಡು
ಸುಖಿಯರಾಗಿಪ್ಪ ಒಕ್ಕಲ ಮಗನ ತೋರಿ ಬದುಕಿಸಯ್ಯಾ

ಕಾಮಭೀಮ ಜೀವದನದೊಡೆಯ ಪ್ರಭುವೆ
ನಿಮ್ಮ ಧರ್ಮ ನಿಮ್ಮ ಧರ್ಮ.[1]

ಹೀಗೆ ಕಾಯವೆ ಕೈಲಾಸ, ದೇಹವೆ ದೇಗುಲ, ಕಾಯವೆ ಪೀಠ ಮನವೇ ಲಿಂಗ, ದೇಹವೇ ಪಿಂಡಿಗೆ ಜೀವವೇ ಲಿಂಗ, ಕಾಯಂವೇ ಸಜ್ಜೆ-ಪ್ರಾಣವೇ ಲಿಂಗ, ಕಾಯವೇ ಶರಣ-ಜೀವವೇ ಲಿಂಗ—ಈ ಮೊದಲಾದ ನುಡಿಲಿಂಗಗಳಲ್ಲಿ ಲಿಂಗಶರಣರು ನರ ಜನ್ಮದ ಹಿರಿಮೆಯನ್ನು, ಮಾನವ ಶರೀರದ ಮಹತ್ವವನ್ನು, ಅದನ್ನು ಹಿಡಿದು ದಡ ವನ್ನು ಸೇರುವ ಸುಲಭ ಸುಂದರ ಮಾರ್ಗವನ್ನು ನಿಚ್ಚಳವಾಗಿ ನಿರೂಪಿಸಿದ್ದಾರೆ. ಇಹ ಪರ, ಲೌಕಿಕ-ಪರಮಾರ್ಥ, ಜೀವ-ದೇವ, ನಾನು-ನೀನು, ಸಂಸಾರ-ಸಂನ್ಯಾಸ, ಭೋಗ-ತ್ಯಾಗ ಇವುಗಳಲ್ಲಿ ಯಾವುದೇ ಒಂದನ್ನು ಹಿಡಿಯದೆ, ಎರಡನ್ನೂ ಬಿಡದೆ, ಎರಡಕ್ಕೂ ಪ್ರಾಶಸ್ತ್ಯವಿತ್ತು—ಇನ್ನೂ ಸ್ವಲ್ಪ ಮುಂದುವರಿದು ಹೇಳುವುದಾದರೆ 'ಇಲ್ಲಿ'ಗೆ ಮರ್ತ್ಯದ ಬದುಕಿಗೇ ಹೆಚ್ಚಿನ ಬೆಲೆಯನ್ನಿತ್ತು—ಮಾನವನ ಮೇಲೇರುವಿಕೆಗೆ ಮಹೋ ನ್ನತವಾದ ಸಮರಸದ ಮಾರ್ಗವನ್ನು ನಿರ್ಮಿಸಿಕೊಟ್ಟಿದ್ದಾರೆ.

ಎರಡೂ ಬೇಕು :

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಆತ್ಮಶಾಂತಿಗಾಗಿ, ತನ್ನ ಜೀವನ ವನ್ನು ಸುಖಮಯವಾಗಿ ಸಾಗಿಸುವುದಕ್ಕಾಗಿ ತಾತ್ವಿಕ ವಿಚಾರಗಳಲ್ಲಿ ತೊಡಗಿ ಜ್ಞಾನ ಮತ್ತು ಕರ್ಮಗಳ ತಳಹದಿಯಮೇಲೆ ತನ್ನ ಆಚಾರ-ವಿಚಾರಗಳನ್ನು ರೂಪಿಸಿಕೊಂಡು ಮುಂದುವರೆಯುತ್ತಾ ಬಂದಿದ್ದಾನೆ. ಕೆಲವರು ಕರ್ಮವನ್ನೇ ಕೆಲವರು ಜ್ಞಾನವನ್ನೇ ಮುಖ್ಯವಾಗಿಟ್ಟುಕೊಂಡು ತಮ್ಮ ತಮ್ಮ ಸಾಧನೆಗಳನ್ನು ನಡೆಸಿಕೊಂಡು ಬಂದರು. ಆದರೆ ಮುಂದೆ ಬಂದಂತೆಲ್ಲ ಈ ಒಂದೊಂದು ಮಾರ್ಗದಲ್ಲಿಯೂ ಇರುವ ಅರೆಕೊರೆ ಗಳು, ಲೋಪದೋಷಗಳು ಮೇಲೆದ್ದು ಕಂಡವು. ಜ್ಞಾನವಿಲ್ಲದ ಕರ್ಮ ಅದು ಕುರುಡು, ಕರ್ಮವಿಲ್ಲದ ಜ್ಞಾನ—ಅದು ಕುಂಟು ಎಂಬುದು ಅರಿವಾಗಿ ಇವೆರಡೂ ಮಾನವನ ಆಧ್ಯಾತ್ಮ ಸಾಧನೆಯಲ್ಲಿ ಮುಖ್ಯವಾದುವುಗಳು ಎಂಬುದನ್ನು ಮನಗಂಡರು. ಎರಡನ್ನಾಗಲೀ ಅಥವಾ ಒಂದೊಂದನ್ನಾಗಲೀ ಬಿಟ್ಟು ಇರುವುದು ಅಂದಿನವರಿಗೆ ಸರಿ ಕಾಣಲಿಲ್ಲ. ಆಗ ಅವರು ಸಮನ್ವಯ ಮಾರ್ಗವನ್ನು ಹಿಡಿಯಲು ತವಕಿಸುತ್ತಿದ್ದರು. ಅಂತಹ ಮಾರ್ಗವನ್ನೇ ಬಸವಾದಿ ಪ್ರಮಥರು ಚೆನ್ನಾಗಿ ಪರಿಷ್ಕಾರಗೊಳಿಸಿ ಭಕ್ತಿ ಜ್ಞಾನಕ್ರಿಯೆಗಳ ಸಾಮರಸ್ಯವನ್ನು ಎತ್ತಿಹಿಡಿದರು. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಶರಣ ಧರ್ಮದಲ್ಲಿ ಕರ್ಮ-ಕ್ರಿಯೆ—ಇವೆರಡೂ ಒಂದೇ ಅಲ್ಲ, ಎರಡಕ್ಕೂ ತುಂಬಾ ವ್ಯತ್ಯಾಸವಿದೆ ಎಂಬುದು. ಕೀಳು ಕಾಮನೆಗಳಿಂದ ನಶ್ವರ ಭೋಗಲಾಲಸೆಯಿಂದ ಮಾಡುವ ಪಶುಕಾರ್ಯಗಳೆಲ್ಲವು ಕರ್ಮವೆನಿಸಿ ಜೀವನನ್ನು ಭವದಲ್ಲಿ ಕಟ್ಟಿಹಾಕುತ್ತವೆ. ಆತ್ಮಹಿತ-ಲೋಕಹಿತಗಳನ್ನು ಸಾಧಿಸುವ

1 ಸಕಲ ಪುರಾತನರ ವಚನಗಳು : ಸಂಪುಟ ಮೂರು

ಉದಾತ್ತವಾದ ದೈವೀಕಾರ್ಯಗಳು 'ಕ್ರಿಯೆ' ಎನಿಸಿ ಭವದಿಂದ ಬಿಡುಗಡೆ ಮಾಡುತ್ತವೆ. ಜೀವನದಲ್ಲಿ ನೀತಿನಿಯಮಗಳ ಪಾಲನೆ ಮತ್ತು ಧಾರ್ಮಿಕ ಸಾಧನೆಗಳನ್ನು ವ್ಯಕ್ತಿಯು ನಡೆಸುತ್ತ ನಿರಂತರ ಕ್ರಿಯಾನಿರತನಾಗಿಯೇ ಇರಬೇಕಾಗುತ್ತದೆ. ಅವನು ಕೈಕೊಳ್ಳುವ ಕ್ರಿಯೆಗಳೆಲ್ಲವು ಅಂಗಕ್ರಿಯೆಗಳಾಗದೆ ಲಿಂಗಕ್ರಿಯೆಗಳಾಗಬೇಕಾಗುತ್ತದೆ. ಹಾಗೆ ಆಗಬೇಕಾದರೆ ಅಂತರಂಗದ ಅರಿವು ಮತ್ತು ಆ ಅರಿವಿಗೆ ತಕ್ಕ ಆಚರಣೆಗಳು ಇರಬೇಕಾದುದು ಅತ್ಯಗತ್ಯ. ವಿಚಾರವನ್ನು ಬಿಟ್ಟ ಆಚಾರಕ್ಕಾಗಲೀ ಆಚಾರವಿಲ್ಲದ ಬರಿಯ ವಿಚಾರಕ್ಕಾಗಲೀ ಶರಣರು ಬೆಲೆ ಕೊಡಲಿಲ್ಲ. ಜ್ಞಾನ-ಕ್ರಿಯೆಗಳೆರಡೂ ಬೇಕು, ಪರಶಿವನಲ್ಲಿ ಒಂದಾಗಿ ಕೂಡಿ ಬೆರೆಯುವುದಕ್ಕೆ ಎಂದು ಅವರು ಸ್ಪಷ್ಟಪಡಿಸಿದ್ದಾರು :

ಕಣ್ಣು ಕಾಲು ಎರಡುಳ್ಳವ ದೂರವೆಯ್ದುವನಲ್ಲದೆ,
ಕಣ್ಣುಕಾಲು ಎರಡರೊಳಗೊಂದಿಲ್ಲದವನು ದೂರವೆಯ್ದಲರಿಯನೆಂಬಂತೆ
ಜ್ಞಾನವಿರಹಿತನಾಗಿ ಕ್ರಿಯೆ ಏನೆಷ್ಟು ಮಾಡಿದಡೇನು,
ಅದು ಕಣ್ಣಿಲ್ಲದವನ ನಡತೆಯಂತೆ.
ಕ್ರಿಯಾರಹಿತನಾಗಿ ಜ್ಞಾನಿಯಾದಡೇನು,
ಅದು ಕಾಲಿಲ್ಲದವನ ಇರವಿನಂತೆ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವ ಬೆರಸುವೊಡೆ
ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ ?
ನೆನೆದ ಮಾತ್ರದಲ್ಲಿ ಅಹುದೆ ಕಾರ್ಯದಲಲ್ಲದೆ ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ.
ಒಂದಿಲ್ಲದಿರ್ದಡೊಂದಾಗದು,
ಜ್ಞಾನವಿಲ್ಲದಿರ್ದ ಕ್ರೀ ಜಡನು. ಕ್ರೀಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು,
ಇದು ಕಾರಣ ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ
ಎರಡೂ ಬೇಕು.

ಕ್ರಿಯೆಯೇ ಅಧಿಕವೆಂಬ ಗೊಡ್ಡು ಸಿದ್ಧಾಂತಿಗಳ ಮಾತು ಸೊಗಸದಯ್ಯಾ ಎನಗೆ
ಜ್ಞಾನವೇ ಅಧಿಕವೆಂಬ ದಡ್ಡ ವೇದಾಂತಿಗಳ ಮಾತು ಸೊಗಸದಯ್ಯಾ ಎನಗೆ
ಅದೇನು ಕಾರಣವೆಂದೊಡೆ :
ಅವುದಾನೊಂದು ಪಕ್ಷಿ ಉಭಯರೆಕ್ಕೆಯಿಂದ ಗಗನಕ್ಕೆ ಹಾರುವಂತೆ
ಅಂತರಂಗದಲ್ಲಿ ಸಮ್ಯಗ್‌ಜ್ಞಾನ ಬಹಿರಂಗದಲ್ಲಿ ಶಿವಸತ್ಕ್ರಿಯಾ

ಸನ್ನಿಹಿತವಿಲ್ಲದೆ ಪರವಸ್ತುವ ಕೂಡಬಾರದಾಗಿ.
ಇದು ಕಾರಣ ಸತ್‌ಕ್ರಿಯಾ ಸಮ್ಯಗ್‌ಜ್ಞಾನ ಸಂಪನ್ನರಾದ
ಮಹಾಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ.

ಈ ಮೇಲಿನ ಮಾತುಗಳಿಂದ ಸುಜ್ಞಾನ-ಸತ್ಕ್ರಿಯಾ ಸಮಾಯುಕ್ತವಾದ ಸದಾಚಾರಕ್ಕೆ ಶರಣರು ಅಗ್ರಮನ್ನಣೆಯನ್ನಿತ್ತರೆಂಬುದು ವೇದ್ಯವಾಗುತ್ತದೆ. ಮಾನವನ ದೈನಂದಿನ ಬದುಕಿನಲ್ಲಿ ಸತ್ಕ್ರಿಯಾಚಾರ-ಸುವಿಚಾರಗಳನ್ನು ತುಂಬಿ ಜಾಗೃತಿಯನ್ನು ತಂದರು ಎಂಬುದು ಮನದಟ್ಟಾಗುತ್ತದೆ.

ಕ್ರಿಯೆಗೂ ಜ್ಞಾನಕ್ಕೂ ಪರಸ್ಪರ ಸಂಬಂಧವಿಲ್ಲದ ಅನೇಕ ವಿಚಾರಗಳು ಸಮಾಜದಲ್ಲಿ ಎಂದೆಂದೂ ಬೇರೂರಿ ನಿಂತಿರುತ್ತವೆ. ವಿಚಾರಶಕ್ತಿಯು ಬೆಳೆದಂತೆಲ್ಲ ಅರ್ಥವಿಲ್ಲದ ಈ ಕಂದಾಚಾರಗಳು ತಮಗೆ ತಾವೇ ಅಳಿದು ಹೋಗುತ್ತವೆ. ಕುರುಡು ನಂಬಿಕೆ, ಆಡಂಬರದ ಪೂಜೆ, ಹಮ್ಮಿನ ಭಕ್ತಿ, ಡಂಬಾಚಾರ ಮುಂತಾದುವುಗಳನ್ನು ಕಟುವಾಗಿ ಟೀಕಿಸಿದ ಶರಣರು ವ್ಯಕ್ತಿಯ ಅಂತರಂಗಶುದ್ಧಿ. ಬಹಿರಂಗ ಶುದ್ಧಿಗಳಿಗೆ ಬೆಲೆಯನ್ನಿತ್ತರು. ಶಕುನ-ಸೂತಕಗಳನ್ನು, ಜ್ಯೋತಿಷ್ಯ-ಭವಿಷ್ಯಗಳನ್ನು ಸ್ಪೃಶ್ಯತೆ-ಅಸ್ಪೃಶ್ಯತೆಗಳನ್ನು, ಸ್ವಾರ್ಥ-ಸಂಕುಚಿತತೆಗಳನ್ನು ಲಿಂಗದ ಬೆಳಕಿನಲ್ಲಿ ಇಲ್ಲವಾಗಿಸಿದರು. ವಿಚಾರದ ಒರೆಗಲ್ಲಿನ ಮೇಲೆ ಉಜ್ಜಿ ನೋಡಿ ಅವುಗಳ ಬಣ್ಣ ಬಯಲಾಗುವಂತೆ ಮಾಡಿದರು. ಅವಿಚಾರದ ಅಜ್ಞಾನಾಂಧಕಾರವನ್ನು ತೊಲಗಿಸಿ ಸುವಿಚಾರದ ಸುಜ್ಞಾನ ದೀಪ್ತಿಯನ್ನು ತುಂಬಿದರು. ಇದನ್ನು ಇಂದಿನ ಆಧುನಿಕ ವೈಜ್ಞಾನಿಕ ಯುಗಕ್ಕೆ ಹೋಲಿಸಬಹುದಾದರೂ ಯಾವುದೇ ಗೊತ್ತು ಗುರಿ ಕಾಣದೆ ಕತ್ತಲಲ್ಲಿ ತೊಳಲುವ ಈ ಯಾಂತ್ರಿಕ ಯುಗದಂತೆ ಅದು ಧ್ಯೇಯರಹಿತವಾಗಿರಲಿಲ್ಲ. ಪರಮಾತ್ಮನ ಕೃಪಾ ಪ್ರಸಾದದ ಹೊಂಬೆಳಗಿನಿಂದ ಅವರ ಮಾರ್ಗವು ಪ್ರಜ್ವಲಿತವಾಗಿದ್ದಿತು. ಆ ಪರಮ ಪ್ರಕಾಶದಲ್ಲಿ ಉಳಿದೆಲ್ಲ ಅಂಧಶ್ರದ್ಧೆಗಳು ಅಡಗಿಹೋದವು. ಈ ವಿಚಾರ ಸ್ವಾತಂತ್ರ್ಯದ ತಳಹದಿಯ ಮೇಲೆ ಉಳಿದೆಲ್ಲ ಧಾರ್ಮಿಕ, ಸಾಮಾಜಿಕ ಸುಧಾರಣೆಗಳು ಅಂದು ನಡೆದುವು.

ಈ ಸಂದರ್ಭದಲ್ಲಿ ಮತ್ತೊಂದು ಎಚ್ಚರಿಕೆಯನ್ನೂ ಶರಣರು ಕೊಟ್ಟಿದ್ದಾರೆ. ವ್ಯಕ್ತಿಯು ತಾನೊಬ್ಬ ದೊಡ್ಡ ವಿಚಾರವಂತ. ಮಹಾಜ್ಞಾನಿ, ಮಹಾವಿರಾಗಿ, ಪರಮಹಂಸ ಎಂದೆಲ್ಲ ಅಂದುಕೊಂಡು ತಾನು ಯಾವುದೇ ರೀತಿ-ನೀತಿಗಳನ್ನು, ಆಚಾರ ಕ್ರಿಯೆಗಳನ್ನು ಪರಿಪಾಲಿಸಬೇಕಾಗಿಲ್ಲವೆಂದು ಹೇಳಿಕೊಂಡು ಮೆರೆಯುವ ಸಂಭವವುಂಟು. ಈ ಪರಿಸ್ಥಿತಿಯು ತುಂಬಾ ಅಪಾಯಕಾರಿಯೆಂದೇ ಹೇಳಬೇಕಾಗುತ್ತದೆ. ಸಾಮಾನ್ಯ ಜನರನ್ನು ದಿಗ್ಭ್ರಾಂತರನ್ನಾಗಿಸಿ ದಾರಿತಪ್ಪಿಸುವುದರ ಜೊತೆಗೆ ಆ ವ್ಯಕ್ತಿಯ ಸಿದ್ಧಿಯು ಪರಿಪೂರ್ಣವಲ್ಲವೆಂಬುದನ್ನು ಪ್ರಕಟಪಡಿಸುತ್ತದೆ. ಎದೆಯಹಾಲು ಚೀಪುವ ಎಳೆಗೂಸಿನ ಖಾಯಿಲೆಗೆ ಹೆತ್ತವಳು ತಾನು ಔಷಧಿಯನ್ನು ಕುಡಿಯುವಂತೆ ಅಧ್ಯಾತ್ಮ ಸಿದ್ಧಿಯ ತುತ್ತತುದಿಯನ್ನು ತಲುಪಿದ್ದರೂ ಲೋಕದಲ್ಲಿರುವ ತನಕ---ಈ ದೇಹವನ್ನು

ಹೊತ್ತಿರುವ ತನಕ-ಸತ್ಕ್ರಿಯೆಯಾಚರಣೆಯಲ್ಲಿ ಇರಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದ್ದಾರೆ. ಈ ವಿಚಾರದಲ್ಲಿ ಮಹಾದೇವಿಯಕ್ಕನು ಹೇಳುವ ಈ ವಚನ ನೋಡಬಹುದು:

ಅರಿವು ಸಾಧ್ಯವಾಯಿತ್ತೆಂದು
ಗುರುಲಿಂಗ ಜಂಗಮವ ಬಿಡಬಹುದೇ ?
ಸಂದು ಸಂಶಯವಳಿದಖಂಡಜ್ಞಾನವಾಯಿತ್ತೆಂದು
ಪರಧನ-ಪರಸ್ತ್ರೀಗಳುಪಬಹುದೇ ?
'ಯತ್ರಜೀವಸ್ತತ್ರ ಶಿವಃ' ಎಂಬ ಅಭಿನ್ನಜ್ಞಾನವಾಯಿತ್ತೆಂದು
ಶುನಕ-ಸೂಕರ-ಕುಕ್ಕುಟ-ಮಾರ್ಜಾಲಗಳ ಕೂಡೆ ಭುಂಜಿಸಬಹುದೇ ?
ಭಾವದಲ್ಲಿ ತನ್ನ ನಿಜದ ನೆಲೆಯನರಿವುತ್ತಿಹುದು.
ಸುಜ್ಞಾನ-ಸತ್ಕ್ರಿಯಾ-ಸುನೀತಿ-ಸುಮಾರ್ಗದಲ್ಲಿ ವರ್ತಿಸುವುದು.
ಹೀಂಗಲ್ಲದೆ ಜ್ಞಾನವಾಯಿತ್ತೆಂದು
ತನ್ನ ಮನಕ್ಕೆ ಬಂದಹಾಗೆ ಮೀರಿ ನುಡಿದು ನಡೆದೊಡೆ
ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೇ ಚೆನ್ನಮಲ್ಲಿಕಾರ್ಜುನಯ್ಯನು ?

ಆದುದರಿಂದ ದೇಹ ಬಿಡುವತನಕವೂ ಜ್ಞಾನಿಯಾದವನು ಆಚಾರವುಳ್ಳವನಾಗಿಯೇ ನಡೆಯಬೇಕೆಂದೂ ಜ್ಞಾನಸಿದ್ಧಿಯ ನಂತರವೂ ಫಲಾಪೇಕ್ಷೆಯಿಲ್ಲದ ಸತ್ಕ್ರಿಯಾಚರಣೆಯು ಅಗತ್ಯವೆಂದೂ ಹೇಳಿ ಕ್ರಿಯಾ-ಜ್ಞಾನಗಳ ಸಾಮರಸ್ಯವನ್ನು ಸಾಂಗಗೊಳಿಸಿದ್ದಾರೆ.

ನಡೆಯಲ್ಲಿ ಜಾಣನಲ್ಲವಯ್ಯ

'ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ' ಎಂಬುದಾಗಿ ಪ್ರಶಂಸಿಸಲ್ಪಟ್ಟಿರುವ ಕಲ್ಯಾಣಪಟ್ಟಣದಲ್ಲಿ ಮನುಕುಲದ ಇತಿಹಾಸದಲ್ಲಿಯೇ ಅಪೂರ್ವವಾದ ಲೋಕವಿಖ್ಯಾತ ಅನುಭವ ಮಂಟಪವನ್ನು ಸ್ಥಾಪನೆ ಮಾಡಿದುದು ಸಮಾಜೋದ್ಧಾರಕ ಬಸವಣ್ಣನವರ ಒಂದು ಅಮೋಘವಾದ ಮಹಾಸಾಧನೆ ಎಂದು ಹೇಳಬಹುದು. ಆಧ್ಯಾತ್ಮಿಕ ಪ್ರಯೋಗಶಾಲೆ, ಧರ್ಮಸಂಪತ್ತು ಎನ್ನಬಹುದಾದ ಅಲ್ಲಿ ಮಹಾನುಭಾವರಾದ ಅನುಭಾವಿಗಳನ್ನು ಅವರು ತಮ್ಮ ದಿವ್ಯಾನುಭವಗಳನ್ನು ಒಬ್ಬರೊಬ್ಬರಲ್ಲಿ ವಿನಿಮಯ ಮಾಡಿಕೊಳ್ಳುವುದಕ್ಕಾಗಿ ಒಂದೆಡೆ ಸೇರಿಸಿದರು. ಶಾಸ್ತ್ರಪುರಾಣಾದಿ ಗ್ರಂಥಗಳಲ್ಲಿ ನಿರೂಪಿತವಾದ ತತ್ತ್ವಗಳಿಗಿಂತಲೂ ಪರಿಶುದ್ಧಾತ್ಮನಾದ ವ್ಯಕ್ತಿಯ ಹೃದಯಾನುಭವವೇ ಹೆಚ್ಚು ವಿಶ್ವಸನೀಯವೆಂದು ಪರಿಗಣಿಸಿದರು. 'ಲೋಕದೊಳಗೆ ಕಲ್ಯಾಣವೇ ಕೈಲಾಸವೆನಿಸಿತ್ತು' ಎಂಬ ಚೆನ್ನಬಸವಣ್ಣನವರ ಚೆನ್ನುಡಿಯಂತೆ ಅಂತಹ ಕಲ್ಯಾಣವನ್ನು ಕಾಣುವುದಕ್ಕಾಗಿ ದೇಶದ ಎಲ್ಲ ದಿಕ್ಕುಗಳಿಂದಲೂ ಧಾವಿಸಿಬಂದ ಅಸಂಖ್ಯಾತ ಶರಣ ಶರಣೆಯರು ಅನುಭವ ಮಂಟಪದಲ್ಲಿ ಸಮಾನ ವೇದಿಕೆಯಮೇಲೆ ಮಂಡಿಸಿ ಬಿಚ್ಚು ಮನಸ್ಸಿನಿಂದ ಆತ್ಮ ಮೆಚ್ಚುವಂತೆ ಆಧ್ಯಾತ್ಮಿಕ ಚರ್ಚೆಯನ್ನು ನಡೆಸಿದರು. ಆಧ್ಯಾ

ತ್ಮಿಕ ಪ್ರಪಂಚದಲ್ಲಿ ಒಂದು ಐತಿಹಾಸಿಕ ದಾಖಲೆಯನ್ನೇ ನಿರ್ಮಿಸಿದ ಅನುಭವ ಮಂಟಪದ ಕಾರ್ಯಕಲಾಪಗಳು, ಅಲ್ಲಿ ಮುಖ್ಯವಾಗಿ ಚರ್ಚೆಗೆ ಬಂದ ವಿಷಯಗಳು—ಇವೆಲ್ಲವು ಅನುಭವದ ಒರೆಗಲ್ಲಿನಲ್ಲಿ ಗೆದ್ದು ಬಂದವುಗಳೇ ಆಗಿದ್ದುವು. ಅಂತಹ ತತ್ತ್ವಗಳು ಲೋಕಜೀವನವನ್ನು ಬೆಳಗಿ ಮನುಕುಲದ ಕಲ್ಯಾಣಕ್ಕೆ ಮರುಜೇವಣಿಗಳಾಗಿ ಮಹತ್ತರ ಕಾಣಿಕೆಗಳನ್ನು ಸಲ್ಲಿಸಿದುವು. ವ್ಯಕ್ತಿಯ ಆತ್ಮೋದ್ಧಾರಕ್ಕೆ ಆವಶ್ಯಕವಾದ ಮತ್ತು ಅತ್ಯಂತ ಸುಲಭವಾದ ಆಚಾರ-ವಿಚಾರಗಳನ್ನು ನಿರ್ಧರಿಸಿ, 'ನುಡಿದಂತೆ ನಡೆ, ನಡೆದಂತೆ ನುಡಿ. ನಡೆ-ನುಡಿ ಒಂದಾದರೆ ಇದೇ ಜನ್ಮ ಕಡೆ' ಎಂದು ಮುಂತಾಗಿ ಉದ್ಘೋಷಿಸಿ ನಡೆ-ನುಡಿಗಳ ಸಾಮರಸ್ಯವನ್ನು ವಿಶದಪಡಿಸಿದರು.

ನಡೆಯಲ್ಲಿ ಜಾಣರೆನಿಸಿದವರು ಲೋಕದಲ್ಲಿ ಎಲ್ಲೋ ವಿರಳ, ನುಡಿಯಲ್ಲಿ ಜಾಣರಾದವರು ಅನರೇ ಬಹಳ! ಹೀಗಿರುವಾಗ ಅಂತಹ ಬೂಟಾಟಿಕೆಯ ಆಡಂಬರದ ಭಕ್ತರಿಗೆ ಭಗವಂತನು ಒಲಿಯುವ ಬಗೆ ಹೇಗೆ—ಎಂಬುದನ್ನು ಕುರಿತು ಶರಣರು ಬಹುವಾಗಿ ಚಿಂತಿಸಿದರು. 'ಮಾತಿನಲ್ಲಿ ಭಾಗವತ, ಮನದಲ್ಲಿ ಮನ್ಮಥ'ನುಳ್ಳವರಿಗೆ ಮನದಾಣ್ಮನು ಮೆಚ್ಚುವುದಂತೂ ಸಾಧ್ಯವೇ ಇಲ್ಲ. ಸಕಲೇಶ ಮಾದರಸರು ಹೇಳುವ ಮಾತು ಹೀಗಿದೆ :

ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ ।
ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ ;
ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ !
ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯ !
ಏಕಾಂತದ್ರೋಹಿ, ಗುಪ್ತ ಪಾತಕಿ, ಯುಕ್ತಿಶೂನ್ಯಂಗೆ
ಸಕಳೇಶ್ವರ ದೇವರು ಒಲಿ ಒಲಿ ಎಂದರೆ ಎಂತೊಲಿವನಯ್ಯಾ ?

'ಮನ ಮೆಚ್ಚಿ ನಡೆದರೆ ಶಿವ ಮೆಚ್ಚುವ' ಎನ್ನುವುದನ್ನು ತಿಳಿಯದೆ ಲೋಕ ಮೆಚ್ಚುವ ಲೋಕದವರನ್ನು ಮೆಚ್ಚಿಸುವ ನಾಟಕೀಯ ನಡೆನುಡಿಗಳುಳ್ಳ. ವೇಷಭೂಷಣಗಳುಳ್ಳ ಗುಪ್ತಪಾತಕಿಗಳು 'ಒಲಿ, ಒಲಿ' ಎಂದು ಅದೆಷ್ಟೇ ಗಟ್ಟಿಯಾಗಿ ಕೂಗಿಕೊಂಡರೂ ಆವರಿಗೆ ಬಲಿ ಬೀಳುವಷ್ಟು ಪೆದ್ದನಲ್ಲ ಆ ಸಕಳೇಶನು ! ಆತನು ನೋಡುವುದು, ಮೆಚ್ಚುವುದು ವ್ಯಕ್ತಿಯ ತನುಮನಧನಗಳ ಶುದ್ಧಿಯನ್ನು; ನಡೆ–ನುಡಿಗಳ ಶುದ್ಧಿಯನ್ನು ಎಂಬುದು ಮೇಲಿನ ವಚನದಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ.

ವ್ಯಕ್ತಿಯ ನಡೆ-ನುಡಿಗಳಿಗೆ ಬೆಸುಗೆ ಹಾಕುವುದೇ ಶರಣಧರ್ಮದ ಮುಖ್ಯ ಗುರಿ. ಶರಣರು ನುಡಿಯಲ್ಲಿ ಧೀರರು. ಅಂತೆಯೇ ನಡೆಯಲ್ಲೂ ಧೀರರು. ಆವರು ನುಡಿದು ನಡೆದವರಲ್ಲ, ನಡೆದು ನುಡಿದವರು. ನುಡಿಯಲ್ಲಿ ಎಚ್ಚರವಿದ್ದು ನಡೆಯಲ್ಲಿ ಎಚ್ಚರ ತಪ್ಪಿದರೆ ಆಗುವ ಅನಾಹುತ ಊಹಿಸಲಸಾಧ್ಯವೆಂದು ಬಸವಣ್ಣನವರು ಒಂದೆಡೆ ಹೇಳಿದ್ದಾರೆ :

ನುಡಿಯಲ್ಲಿ ಎಚ್ಚತ್ತು, ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪನಂತೆ!
ನುಡಿಯಲು ಬಾರದು, ನಡೆಯಲು ಬಾರದು
ಲಿಂಗದೇವನೆ ದಿಬ್ಯವೋ ಅಯ್ಯಾ!
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು, ಕಾಣಾ, ಕೂಡಲಸಂಗಮದೇವಾ

ನಡೆ-ನುಡಿಗಳು ಒಂದಾಗ ಲಿಂಗಭಕ್ತನಿಗೆ ಆವನು ಧರಿಸುವ ಲಿಂಗವೇ ಘಟಸರ್ಪವಾಗುತ್ತದೆ ಎಂಬ ಅಣ್ಣನವರ ಮಾತನ್ನು ಪ್ರತಿಯೊಬ್ಬ ಲಿಂಗವಂತನೂ ಮನನ ಮಾಡಿದರೆ ಅವನ ನಡೆನುಡಿಗಳು ಉತ್ತಮಗೊಂಡಾವೋ ಏನೋ! ಇರಲಿ, ಅಣ್ಣನವರ ಈ ಪ್ರತಿಜ್ಞಾನುಡಿಗಳು ಯಾರನ್ನು ತಾನೆ ರೋಮಾಂಚನಗೊಳಿಸುವುದಿಲ್ಲ! ಈಗ ಅವುಗಳಿಗೆ ಕಿವಿಕೊಡುವ ಮನಸ್ಸುಮಾಡೋಣ!

ಭಕ್ತಿ ಸಂಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ
ನಡೆಯೊಳಗೆ ನುಡಿಯ ಪೂರೈಸುವೆ—
ಮೇಲೆ ತೂಗುವ ತ್ರಾಸುಕಟ್ಟಳೆ ನಿಮ್ಮಕೈಯಲ್ಲಿ
ಒಂದು ಜವೆ ಕೊರತೆಯಾದರೆ
ಎನ್ನನದ್ದಿ ನೀನೆದ್ದುಹೋಗು
ಕೂಡಲಸಂಗಮದೇವಾ.

ಅಣ್ಣನವರ ಈ ಅಮೃತವಾಣಿಗಳು ವ್ಯಕ್ತಿಯ ನಡೆ-ನುಡಿಗಳಲ್ಲಿ ಏಕತೆಯಿರಬೇಕೆಂಬುದನ್ನು ಮೊಳಗಂತ್ತಿವೆ. 'ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ'— ಎಂದಿರುವ ಈ ಮಾತುಗಳು ಇಲ್ಲಿ ಪ್ರತಿಜ್ಞಾರೂಪವಾಗಿದ್ದು 'ಮಾತಿನಂತೆ ಮನವಿಲ್ಲದ ಜಾತಿಡೊಂಬರಿಗೆ' ಚಾಟಿಯೇಟಾಗಿವೆ ಎಂಬುದನ್ನು ಗಮನಿಸಬೇಕು. ಮಾನವನ ನಡೆನುಡಿಗಳನ್ನು ತಕ್ಕಡಿಯ ಪರಡಿಗಳಲ್ಲಿಟ್ಟು ತೂಗಿನೋಡುವ ಆ ಕೂಡಲ ಸಂಗನಿಗೇ ಸವಾಲನ್ನೆಸೆದು, ನನ್ನ ನಡೆನುಡಿಗಳಲ್ಲಿ ಒಂದು ಜವೆಯಷ್ಟು ಏರುಪೇರು ಕಂಡರೂ ಸರಿಯೆ ನನ್ನನ್ನು ನೀನು ಕೈಹಿಡಿಯಬೇಡ, ಮೇಲೆತ್ತಬೇಡ—ಈ ಭವಸಾಗರದಲ್ಲಿ ಎನ್ನನದ್ದಿ ನೀನೆದ್ದು ಹೋಗು' ಎಂದು ಯಾವ ಮುಲಾಜೂ ಇಲ್ಲದೆ ಅಂದಿದ್ದಾರೆ. ಹೀಗೆನ್ನುವ ಎದೆಗಾರಿಕೆ ಇದ್ದರೆ ಮಾತ್ರ ಆ ಭಕ್ತನಿಗೆ ದೇವನು ತಡಮಾಡದೆ ಒಲಿಯುವನು. ತನ್ನತ್ತ ಸೆಳೆದು ತನ್ನೊಳಗೆ ಇಂಬಿಟ್ಟುಕೊಳ್ಳುವನು ಎನ್ನುವುದು ಸುಸ್ಪಷ್ಟವಾಗಿದೆ.

ಸಮಾಜದಲ್ಲಿ ಯಾವ ವ್ಯಕ್ತಿಗೇ ಆಗಲಿ ಘನತೆ-ಗೌರವಗಳು, ಸ್ಥಾನ-ಮಾನಗಳು ದೊರಕುವುದು ಅವನ ಮಾತು-ಕೃತಿಗಳಲ್ಲಿ ಸಾಮರಸ್ಯವಿದ್ದಾಗ ಮಾತ್ರ. ಆದರೆ ತಾನು ಹೇಳುವುದು ಒಂದು, ಮತ್ತೆ ಮಾಡುವುದು ಮತ್ತೊಂದು ಆಗಿ, ಒಳ-ಹೊರಗು

ಬೇರೆಬೇರೆ ಕಂಡಾಗ ಅದು ಬೂಟಾಟಿಕೆಯಾಗುತ್ತದೆ. ಅವನಿಗೆ ಇಲ್ಲಿಯೂ ನೆಲೆಯಿಲ್ಲ, ಮತ್ತೆ ಬೇರೆಲ್ಲಿಯೂ ನೆಲೆಯಿಲ್ಲದಂತೆ ಆಗುತ್ತದೆ.

ನಡೆಯೊಳಗೆ ನುಡಿ ತುಂಬಿ. ನುಡಿಯೊಳಗೆ ನಡೆ ತುಂಬಿ
ನಡೆ ನುಡಿ ಎರಡನು ಪರಿಪೂರ್ಣ ತುಂಬಿ
ಲಿಂಗವ ಕೂಡಬಲ್ಲಾತನೇ ಶರಣ ನೋಡಾ ಅಖಂಡೇಶ್ವರಾ

ಎಂದು ಹೇಳಿರುವ ಶರಣರು ಮನುಷ್ಯನ ಮಾತು-ಕೃತಿಗಳಲ್ಲಿ ಏಕತೆಯಿದ್ದು ಪರಿಪೂರ್ಣತೆ ತುಂಬಿ ಹೊರಸೂಸಬೇಕೆಂದು ಆಶಿಸಿದ್ದಾರೆ.

ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ ।
ಮನಸ್ಯನ್ಯತ್ ವಚಸ್ಯನ್ಯತ್ ಕರ್ಮಣ್ಯನ್ಯತ್ ದುರಾತ್ಮನಾಂ ॥

ವ್ಯಕ್ತಿಯೊಬ್ಬನು ತನ್ನ ಮನಸ್ಸು, ಮಾತು, ಕ್ರಿಯೆ—ಈ ಮೂರರಿಂದ ಮಹಾತ್ಮ ನೆನಿಸಲೂ ಬಲ್ಲ, ದುರಾತ್ಮನೆನಿಸಲೂ ಬಲ್ಲ. ಮಹಾತ್ಮನಾದವನ ವಿಚಾರ, ಉಚ್ಚಾರ, ಆಚಾರ—ಇವು ಮೂರೂ ಒಂದೇ ಆಗಿರುತ್ತವೆ. ಅವನು ಮುಕ್ಕಣ್ಣನಾಗಿ ಲೋಕ ಮಾನ್ಯನಾಗುತ್ತಾನೆ. ಲಿಂಗಮೆಚ್ಚಿ ಅಹುದಹುದೆನ್ನುವಂತೆ ಧನ್ಯನಾಗುತ್ತಾನೆ. ಆದರೆ ದುರಾತ್ಮನಾದವನ ಮಾತು-ಮನಸ್ಸು-ಕೃತಿಗಳು ಒಂದೊಂದು ಬೇರೆಬೇರೆ, ಅವುಗಳಲ್ಲಿ ಹೊಂದಾಣಿಕೆಯೆಂಬುದಂತೂ ಹುಡುಕಿದರೂ ಕಾಣುವುದಿಲ್ಲ. ಅವನು ತನ್ನ ಮನಸ್ಸಿನಲ್ಲಿ ಚಿಂತಿಸುವುದೇ ಬೇರೊಂದು, ಮಾತಿನಲ್ಲಿ ಹೇಳುವುದೇ ಇನ್ನೊಂದು. ಕಾರ್ಯತಃ ಮಾಡುವುದೇ ಮತ್ತೊಂದು. ಹೀಗಾಗಿ ಮೂರೂ ಮೂರಾಬಟ್ಟೆಯಾಗಿರುತ್ತವೆ. ಇಂತಹ ಕುಟಿಲ ಕುಹಕಿಗಳದೇ ಮೇಲುಗೈಯಾಗಿ ವಿಜೃಂಭಿಸುತ್ತ ಜನಜೀವನ ಅಸ್ತವ್ಯಸ್ತ ಗೊಂಡಿರುವ ಕಾಲದಲ್ಲಿ ಶರಣರು ಕ್ರಿಯಾಜ್ಞಾನಸಮರಸಾತ್ಮಕವಾದಂತಹ ಧರ್ಮ ವನ್ನು ಬೋಧಿಸಿ ವ್ಯಕ್ತಿಯ ನಡೆ-ನುಡಿಗಳ ಏಕತೆಗೆ ಹೆಚ್ಚು ಪ್ರಾಮುಖ್ಯತೆಯನ್ನಿತ್ತು ಒಡಕು-ಬಿರುಕುಗಳಿಲ್ಲದಂತೆ ಅವುಗಳನ್ನು ಬೆಸೆದದ್ದು ಒಂದು ಮಹಾಸಾಹಸವೆಂದೆನ್ನ ಬಹುದು,

'ದಾಸೋಹಂ' ಎಂದೆನಿಸಯ್ಯಾ........

ಜೀವ ಈ ಜಗತ್ತಿನಲ್ಲಿ ಜನ್ಮಧಾರಣೆಮಾಡಿ ಬಂದ ಬಳಿಕ ತನ್ನ ಉದರಂಭರಣಕ್ಕಾಗಿ ಹಗಲಿರುಳೂ ಹೋರಾಡುತ್ತಲೇ ಇರುತ್ತದೆ. ಅದಕ್ಕೆ ತನ್ನ ಹೊಟ್ಟೆಹೊರೆದು ಕೊಳ್ಳುವುದೂ ಒಂದು ದೊಡ್ಡ ಸಮಸ್ಯೆಯಾಗಿ ಕಾಡುತ್ತದೆ. ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ ಎಂಬ ದಾಸರ ಹಾಡು ಪ್ರಸಿದ್ಧವಿದೆ. ಜಗತ್ತಿನ ಜೀವಜಾಲಗಳು ತಂತಮ್ಮ ತುತ್ತಿನ ಚೀಲಗಳನ್ನು ತುಂಬಿಕೊಳ್ಳುವುದರಲ್ಲಿಯೇ ಸದಾ ತೊಡಗಿರುವಾಗ ದೊಡ್ಡದಾದ ಮಾನವಜನ್ಮವನ್ನು ಹೊತ್ತುಬಂದಿರುವ ಮನುಷ್ಯನು ತನ್ನ ತುತ್ತಿನಚೀಲವನ್ನು ತುಂಬಿಕೊಳ್ಳುವುದು ಅಗತ್ಯವಾಗಿರುವುದರ ಜೊತೆಗೆ ತನ್ನ

ನೆತ್ತಿಯಚೀಲವನ್ನೂ ಭರ್ತಿಮಾಡಿಕೊಳ್ಳುವುದು ಅತಿ ಮುಖ್ಯವಾಗಿದೆ. ಅವನ ವೈಶಿಷ್ಟ್ಯ ಇರುವುದು ಅದರಲ್ಲಿಯೇ ಎಂದು ಹೇಳಬಹುದು. ಮೊದಲು ತುಂಬಬೇಕು ತುತ್ತಿನ ಚೀಲ. ತರುವಾಯ ನೆತ್ತಿಯ ಚೀಲ ಅಂತೆಯೇ ಈ ತುತ್ತಿನ ಚೀಲ ತುಂಬಲು ತನ್ನ ಹೊಟ್ಟೆ ಹೊರೆಯಲು ಮಾನವನು ಅದಕ್ಕಾಗಿ ಯಾರನ್ನೂ ಅವಲಂಬಿಸದೆ ಯಾರಿಗೂ ಹೊರೆಯಾಗದೆ ಸ್ವಾವಲಂಬಿಯಾಗಬೇಕು. ತಾನೇ ಮೈಮುರಿದು ದುಡಿದು ತನ್ನ ಅನ್ನವನ್ನು ಸಂಪಾದಿಸಬೇಕು. ತನ್ನ ಬದುಕನ್ನು ನಡೆಸಬೇಕು. ಇನ್ನೊಬ್ಬರ ಬೆವರಿನಿಂದ ತಾನು ಬದುಕುವುದು ಸರ್ವಥಾ ಸಲ್ಲದು. ತಾನು ಸೋಮಾರಿಯಾಗದೆ ಸದಾ ದುಡಿಯುತ್ತ ಸ್ವತಂತ್ರವಾದ ಸ್ವಾವಲಂಬನ ಜೀವನವನ್ನು ನಡೆಸುವುದು ಮಾನವನ ಪ್ರಗತಿಪಥದಲ್ಲಿ ಮೊದಲನೆಯ ಹೆಜ್ಜೆಯೆನ್ನಬಹುದು.

ತಾನು ದುಡಿದು ಗಳಿಸಿದ್ದನ್ನೆಲ್ಲ ತನಗಾಗಿ ತನ್ನವರಿಗಾಗಿ ಎಂದು ಬಳಸುತ್ತ ಸಂಕುಚಿತ ದೃಷ್ಟಿಯ ಸ್ವಾರ್ಥಿಯಾದರೆ ಅದರಲ್ಲಿ ಮಾನವನ ಹಿರಿಮೆಯೇನೂ ಇರದು. ಅಂತಹ ಸ್ವಾರ್ಥಿಮಾನವನಿಗಿಂತ ತಮ್ಮ ಜಾತಿ ಅಭಿಮಾನವುಳ್ಳ ನೀಚ ಪಶುಪಕ್ಷಿ ಪ್ರಾಣಿಗಳು ಅದೆಷ್ಟೋ ಮೇಲು ಎನ್ನಬಹುದು:

> ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವನು !
> ಕೋಳಿ ಒಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವನು !
> ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಆ ಕಾಗೆ. ಕೋಳಿಗಳಿಗಿಂದ
> ಕರಕಷ್ಟ ಕಾಣಾ ಕೂಡಲಸಂಗಮದೇವಾ.

ಆದ್ದರಿಂದ ವ್ಯಕ್ತಿಯು ತಾನು ದುಡಿದುದರಲ್ಲಿ ತನ್ನ ಮತ್ತು ತನ್ನ ಸಂಸಾರಕ್ಕಾಗಿ ಎಂದು ಎಲ್ಲವನ್ನೂ ಇಟ್ಟುಕೊಳ್ಳದೆ ಅದರಲ್ಲಿ ಸ್ವಲ್ಪವನ್ನಾದರೂ ಪರಾರ್ಥಕ್ಕಾಗಿ ವಿನಿಯೋಗಿಸಬೇಕು. ತನ್ನಂತೆ ಇತರರು ಎನ್ನುವ ಮಾನವೀಯ ಕರುಣೆಯುಕ್ಕಿ ಬಂದಾಗ 'ವಿತರಣದೊಡನೆ ಭೋಗಿಸುವರ್ಥದೊದವನು' ಪಡೆದಾಗ ಆತನು ತಾನು ಮುಂಬರಿವ ಹಾದಿಯಲ್ಲಿ ಎರಡನೆಯ ಹೆಜ್ಜೆಯನ್ನಿಟ್ಟನೆಂದು ಧಾರಾಳವಾಗಿ ಹೇಳಬಹುದು.

ಇದಕ್ಕೂ ಮುಂದಿನ ಮೆಟ್ಟಲು ಮನುಷ್ಯನನ್ನು ಮಹಾದೇವತ್ವಕ್ಕೊಯ್ಯುತ್ತದೆಯೆನ್ನಬಹುದು. ಪ್ರಾರಂಭದ ಆ ಎರಡು ಹಂತಗಳಲ್ಲಿ ಮನುಷ್ಯ ತಾನು ಕಷ್ಟಪಟ್ಟು ದುಡಿಯಬೇಕು, ದುಡಿದುದರಲ್ಲಿ ಅಲ್ಪ ಸ್ವಲ್ಪವನ್ನಾದರೂ ಸಮಾಜಕ್ಕೆ, ಲೋಕಕ್ಕೆ ಬಳಸಬೇಕು ಎನ್ನುವ ತತ್ತ್ವ ನಮಗೆ ಅರಿವಾಗುತ್ತದೆ. ಆದರೆ ಈ ಮೂರನೆಯ ಹಂತಕ್ಕೇರಿ ನಿಂತಾಗ ಮಾನವನ ಮನೋದೃಷ್ಟಿ ಸಂಪೂರ್ಣ ಬದಲಾಗುತ್ತದೆ. ಸ್ವಾರ್ಥ-ಸಂಕುಚಿತತೆಗಳು ಅಲ್ಲಿ ನಿಲ್ಲದೆ ಬಯಲಾಗಿ ಹೋಗುತ್ತವೆ. ಪರಾರ್ಥವೇ ಪರಮ ಪ್ರಧಾನವಾಗುತ್ತದೆ. ತಾನೇ ಬೆವರು ಸುರಿಸಿ ಪ್ರಾಮಾಣಿಕತನದಿಂದ ಪರಿಶುದ್ಧ ವೃತ್ತಿಯೊಂದನ್ನು ಹಿಡಿದು ಮೈಬಗ್ಗಿಸಿ ದುಡಿದು ಪಡೆದ ಫಲವನ್ನೆಲ್ಲ ತನಗೆ-ತನ್ನವರಿಗೆಂದು,

ಇಂದು-ನಾಳಿಂಗೆಂದು ಲೇಶಮಾತ್ರವೂ ಇರಿಸಿಕೊಳ್ಳದೆ ಎಲ್ಲವನ್ನೂ ಸಮಾಜದ ಹಿತ ಚಿಂತಕರಾದ ಜಂಗಮಸ್ತೋಮಕ್ಕೆ ಸಮರ್ಪಿಸಿ ಅವರು ಒಕ್ಕುಮಿಕ್ಕ ಶೇಷವನ್ನು ಪ್ರಸಾದವೆಂದು ವಿನೀತಭಾವದಿಂದ ಸ್ವೀಕರಿಸುವುದು. ಇದರಿಂದ ವ್ಯಕ್ತಿಯಲ್ಲಿ ತಾನು ತನ್ನದು ಎಂದೆನ್ನುವ ಅಹಂಕಾರ ಮಮಕಾರಗಳು, ಸ್ವಾರ್ಥ ಸಂಕುಚಿತತನಗಳು, ದ್ವೇಷಾ ಸೂಯೆಗಳು, ಬಡವ-ಬಲ್ಲಿದರೆಂಬ ಭೇದಗಳು, ಕಾಮಕ್ರೋಧಾದಿಗಳು-ಇವೆಲ್ಲವೂ ನಿರಸನವಾಗಿ ನಿರಾಡಂಬರದ ನಿರ್ಮಲ ಪ್ರಸನ್ನ ಪ್ರಸಾದ ಭಾವಗಳು ತುಂಬಿ ಬರುತ್ತವೆ. ತನ್ನ ದುಡಿಮೆ ಸರ್ವರಿಗಾಗಿ, ತಾನು ಸರ್ವರಿಗಾಗಿ, ಸರ್ವರೂ ತನಗಾಗಿ—ಎನ್ನುವ ಸರ್ವೋದಯದ ಸದ್ಭಾವನೆ ಲೋಕದಲ್ಲಿ ಮೈದಾಳಿದಾಗ ಸಾಮಾಜಿಕ, ಆರ್ಥಿಕ ಪ್ರಗತಿ ಸಾಧ್ಯವಾಗಿ ಪ್ರೀತಿ ಸೌಹಾರ್ದಗಳು, ಶಾಂತಿ-ಸುಭಿಕ್ಷಗಳು ನೆಲಸುತ್ತವೆ. ವ್ಯಕ್ತಿ ವ್ಯಕ್ತಿ ಗಳಲ್ಲಿ ಮೇಲಾಟ ಹೋರಾಟಗಳಿಲ್ಲದೆ ಆಂತರಿಕ ವಿಕಾಸ—ಪ್ರಕಾಶಗಳು ಸಹಜವಾಗಿಯೇ ಪ್ರಕಟವಾಗುತ್ತ ಅವರ ಆತ್ಮೋನ್ನತಿಗೆ ಅವಕಾಶವಾಗುತ್ತದೆ.

ಹನ್ನೆರಡನೆಯ ಶತಮಾನದ ಅಭೂತ ಪೂರ್ವ ಐತಿಹಾಸಿಕ ಸಮಗ್ರ ಕ್ರಾಂತಿಗೆ ಬಸವಣ್ಣನವರು ಬಳಸಿಕೊಂಡಿರುವ ಅತ್ಯಂತ ಪ್ರಮುಖ ಅಸ್ತ್ರಗಳಲ್ಲಿ ಕಾಯಕವೂ ಒಂದಾಗಿದೆ. ಅದುವರೆಗೆ ಕಾಯಕದ ವಿಚಾರದಲ್ಲಿ ಅನೇಕ ತಪ್ಪು ಭಾವನೆಗಳು ಬೆಳೆದು ಕೊಂಡು ಬಂದಿದ್ದುವು. ಕಾಯಕದಲ್ಲಿ ಮೇಲು-ಕೀಳು, ಕಾಯಕದ ಮೇಲಿಂದಲೇ ಕುಲ-ಜಾತಿಗಳ ನಿರ್ಣಯ, ಕಾಯಕ, ಅದೊಂದು ಹೊಟ್ಟೆಪಾಡಿನ ಉಪಾಯ—ಈ ಮೊದಲಾದ ತಪ್ಪು ಕಲ್ಪನೆಗಳನ್ನು ನಿರ್ದಾಕ್ಷಿಣ್ಯವಾಗಿ ತೊಡೆದು ಹಾಕಿದರು. ವ್ಯಕ್ತಿಯ ಇಹ-ಪರ ಜೀವನದ ಪೂರ್ಣವಿಕಾಸಕ್ಕೆ ಅತ್ಯಾವಶ್ಯಕವಾದ ಈ 'ಕಾಯಕ ತತ್ತ್ವ'ಕ್ಕೆ ಹೊಸ ತಿರುವನ್ನು ಕೊಟ್ಟರು. ಉದ್ಯೋಗಶೀಲತೆಯ ಹಿರಿಮೆಯನ್ನು ಎತ್ತಿ ತೋರಿಸಿ ಕರ್ಮಭ್ರಷ್ಟರನ್ನು ಕಾಯಕ ನಿಷ್ಠರನ್ನಾಗಿ ಮಾಡಿದರು. 'ಕಾಯಕವೆ ಕೈಲಾಸ' ವೆಂಬ ಮಹಾಮಂತ್ರವನ್ನು ಉಚ್ಚರಿಸಿ ಸಮಾಜದ ಎಲ್ಲ ಆಧಿವ್ಯಾಧಿಗಳಿಗೂ ಮಂತ್ರ ವೈದ್ಯ ನೀಡಿದರು. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಒಗ್ಗಿದ ಯಾವು ದಾದರೊಂದು ಉದ್ಯೋಗವನ್ನು ಕಡ್ಡಾಯವಾಗಿ ಮಾಡಲೇಬೇಕು, ಅದು ಸತ್ಯ ಶುದ್ಧ ಮಾರ್ಗದಲ್ಲಿ ನಡೆಸುವಂತಹುದಿರಬೇಕು, ಅದರಿಂದ ಬಂದುದನ್ನು ಗುರು ಲಿಂಗ ಜಂಗ ಮಕ್ಕರ್ಪಿಸಿ ಭೋಗಿಸುವಂತಿರಬೇಕು—ಎನ್ನುವ ಉ ದಾ ತ್ತ ಮ ನೋ ಭಾ ವ ವ ನ್ನು ಮೂಡಿಸಿದರು. ಆದರೆ ಶರಣ ಸಮಾಜದಲ್ಲಿ ಈ ಗುರುಲಿಂಗಜಂಗಮರೂ ಪರರ ಹಂಗಿನಲ್ಲಿ ಬದುಕುವವರಲ್ಲ. ಕಾಯಕ ಮಾಡಿಯೇ ಬದುಕುವವರು, ಇಲ್ಲದಿದ್ದರೆ ಸ್ಥಾನವೇ ಇಲ್ಲ.

ಕಾಯಕದಲ್ಲಿ ನಿರತನಾದರೆ
ಗುರುದರುಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು

ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು ;
ಕಾಯಕವೆ ಕೈಲಾಸವಾದ ಕಾರಣ,
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಎಂಬುದಾಗಿ ಕಾಯಕದ ಕಡುಗಲಿಗಳಾದ ಆಯ್ದಕ್ಕಿ ಮಾರಯ್ಯನವರು ಕಾಯಕದ ಹಿರಿಮೆ, ಅದರಲ್ಲಿ ನಿರತನಾದ ಸಾಧಕನ ಒಲ್ಮೆ-ಬಲುಮೆಗಳನ್ನು ಎತ್ತಿ ಹೇಳಿದರೆ.

ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು
ಲಿಂಗಕ್ಕರ್ಪಿತವಲ್ಲದೆ, ದುರಾಶೆಯಿಂದ ಬಂದುದು ಅನರ್ಪಿತ

ಎಂದು ಎಚ್ಚರಿಸಿರುವ ಕಾಯಕದ ಶರಣಾಗ್ರಣಿ ನುಲಿಯ ಚಂದಯ್ಯನವರ ವಚನ ಹೇಳುತ್ತದೆ, ಕಾಯಕಕ್ಕೆ ಯಾರೂ ಹೊರತಲ್ಲ ಎಂದು :

ಗುರುವಾದಡೂ ಕಾಯಕದಿಂದವೆ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು
ಜಂಗಮವಾದಡೂ ಕಾಯಕದಿಂದವೆ ತನ್ನ ವೇಷದ ಪಾಶ ಹರಿವುದು
ಗುರುವಾದರೂ ಚರಸೇವೆಯ ಮಾಡಬೇಕು
ಲಿಂಗವಾದರೂ ಚರಸೇವೆಯ ಮಾಡಬೇಕು
ಜಂಗಮವಾದರೂ ಚರಸೇವೆಯ ಮಾಡಬೇಕು
ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ

ಈ ಸಂದರ್ಭದಲ್ಲಿ ಪ್ರೊ. ಶಾಂತರಸ ಅವರ 'ಶಿವಶರಣರ ದೃಷ್ಟಿಯಲ್ಲಿ ಸಹಕಾರ' ಎಂಬ ಲೇಖನದಲ್ಲಿನ ಈ ಮಾತುಗಳನ್ನು ಇಲ್ಲಿ ಉದ್ಧರಿಸಬಹುದಾಗಿದೆ :

''ತತ್ವಗಳನ್ನು ಆವಿಷ್ಕಾರಗೊಳಿಸುವ ಅರಿವಿನ ಆಗರವಾದ ಗುರು, ತತ್ವದ ಸಾಕಾರವಾದ ಲಿಂಗ, ತತ್ವಗಳ ಪ್ರಸಾರಕನಾದ ಜಂಗಮ—ಇವರೆಲ್ಲರೂ ಕಾಯಕನಿರತರು. ಇವರು ಮಾಡುವುದೆಲ್ಲ ಸತ್ಯ ಶುದ್ಧ ಕಾಯಕ. ಇವರಿಗೆ ಭಕ್ತ ಮಾಡುವ ನೇಮ, ನೀಡುವ ನೇಮ ಭಿಕ್ಷೆಯಲ್ಲ. ಅದು ಅವರ ಕಾಯಕದ ಪ್ರತಿಫಲ. ತತ್ವದ ದುಡಿಮೆ ಇವರದು, ಅರ್ಥದ ದುಡಿಮೆ ಉಳಿದವರದು. ಇವೆರಡರ ಸಮನ್ವಯಕ್ಕೆ ಸಹಕಾರವಿಲ್ಲದಿದ್ದರೆ ನಡೆದೀತೆ ? ಇಲ್ಲಿ ಇನ್ನೊಂದು ಸೂಕ್ಷ್ಮವೂ ಇದೆ. ಎಲ್ಲ ಕಾಯಕಗಳಲ್ಲಿ ತತ್ವದ, ಅರ್ಥದ ಸಮನ್ವಯ ಇದ್ದೇ ಇದೆ. ಅಂತೆಯೇ ಅದು ಸತ್ಯಶುದ್ಧವೆನಿಸುತ್ತದೆ. ಕಾಯಕವೇ ಕೈಲಾಸವೆನಿಸುತ್ತದೆ.''[1]

ಈ ರೀತಿ ಆಧ್ಯಾತ್ಮಿಕ ಸಾಧನೆಯಲ್ಲಿ ಕಾಯಕದ ಮಹತ್ವವನ್ನು ಕೊಂಡಾಡಿದ ಶರಣರು ಕಾಯಕದಿಂದ ಕುಲವನ್ನು ನಿರ್ಧರಿಸಬಾರದು, ಆ ಕಾಯಕ ತರುವ ಆದಾಯದಿಂದ ಅದರ ಮೇಲು—ಕೀಳುಗಳನ್ನು ನಿರ್ಣಯಿಸಬಾರದು ಎಂದು ಹೇಳಿ ಅದುವರೆಗೂ ರೂಢಿಯಲ್ಲಿದ್ದ ಈ ಕೆಟ್ಟ ಪದ್ಧತಿಗೆ ಕೊಡಲಿಯೇಟು ಕೊಟ್ಟರು. ಈ ವಿಚಾರದಲ್ಲಿ ಬಸವಣ್ಣನವರು ಅತ್ಯಂತ ಸ್ಪಷ್ಟವಾಗಿ ಹೇಳುತ್ತ,

---

1 ಸಜ್ಜಲ ಶ್ರೀ—ಪುಟ ೮೪

ದೇವ ಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ!

ಎಂಬುದಾಗಿ ಪ್ರತಿಜ್ಞೆ ಮಾಡಿ ನಿತ್ಯಜೀವನದಲ್ಲಿ ಆಚರಣೆಗೆ ತಂದರು.

ಕೃಷಿಕೃತ್ಯ ಆವ ಕಾಯಕದಿಂದಾದೊಡೇನು?
ತನು ಮನ ಬಳಲಿಸಿ ಗಳಿಸಿ ತಂದು, ಗುರುಲಿಂಗ ಜಂಗಮಕ್ಕೆ ಮೆಚ್ಚಿಸಿ
ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ

ಎಂದು ಚೆನ್ನಬಸವಣ್ಣನವರು ಪ್ರಾರ್ಥಿಸಿದರು. ಹೀಗೆ ಕುಲಮದ, ಧನಮದಗಳನ್ನು ಅಳಿಸಿಹಾಕಿ, ಯಾವ ವೃತ್ತಿಯೂ ಕನಿಷ್ಠವಲ್ಲ, ಯಾವುದೂ ಶ್ರೇಷ್ಠವಲ್ಲ, ಇಹಪರಗಳೆರಡಕ್ಕೂ ಅದೇ ಸಾಧನವೆಂದು ಹೇಳಿ ಭಕ್ತರಲ್ಲಿ ಕುಲವನರಸಕೂಡದೆಂದು ಕಾಯಕ ತತ್ತ್ವವು ಸರ್ವಸಮಾನತೆಯನ್ನು ತಂದು ಕೊಟ್ಟಿತು.

ಮುಖ್ಯವಾಗಿ ಕಾಯಕದಿಂದ ಆಂತರಿಕ ಶಾಂತಿ ಮತ್ತು ಸಮಾಜದಲ್ಲಿ ಆರ್ಥಿಕ ಭದ್ರತೆ ದೊರೆಕೊಳ್ಳುತ್ತದೆ. ಅಪರಿಗ್ರಹ ಮತ್ತು ಅಸಂಗ್ರಹ ತತ್ತ್ವಗಳೆರಡೂ ಇಲ್ಲಿ ಒಳಗೊಂಡಿರುವುದರಿಂದ ಸಮಾನ ವಿತರಣೆಯಿಂದಾಗಿ ಎಲ್ಲರ ಹಿತರಕ್ಷಣೆಯಾಗುತ್ತದೆ. ಆದುದರಿಂದ ಅಂದಿನ ಶರಣ-ಶರಣೆಯರೆಲ್ಲರು ಒಂದೊಂದು ಕಾಯಕವನ್ನು ತಮ್ಮ ಸಾಧನೆಯ ಪ್ರಮುಖ ಅಂಗವಾಗಿ ನಡೆಸುತ್ತ ಬಂದಿದ್ದರು. ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ, ಮೋಳಿಗೆಯ ಮಾರಯ್ಯ, ಹಡಪದಪ್ಪಣ್ಣ, ಮೇದರ ಕೇತಯ್ಯ, ನುಲಿಯ ಚಂದಯ್ಯ, ತುರುಗಾಹಿ ರಾಮಣ್ಣ ಮೊದಲಾದ ಶಿವಶರಣರು ಕಾಯಕದಿಂದಲೇ ಶರಣಪದವಿಗೇರಿದ ಮಹಾಮಹಿಮರಾಗಿದ್ದರು. ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಹಾದೇವಿಯಮ್ಮ, ಕದಿರೆ ರೆಮ್ಮವ್ವ, ಗಂಗಾಂಬಿಕೆ-ನೀಲಾಂಬಿಕೆಯರು ಇವರೇ ಮೊದಲಾದ ಅನೇಕ ಶರಣೆಯರು ತಮ್ಮ ತಮ್ಮ ಕಾಯಕದಿಂದಲೇ ಕೃತಕೃತ್ಯತೆ ಪಡೆದವರಾಗಿದ್ದರು. ಉರಿಲಿಂಗಪೆದ್ದಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯು ಕಾಯಕದ ಬಗೆಗೆ ಹೇಳಿರುವ ಒಂದು ವಚನವನ್ನು ಇಲ್ಲಿ ಗಮನಿಸಬಹುದು;

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಶೆಯೆಂಬುದು ನಿತ್ಯಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ.

ಹೀಗೆ ಸತ್ಯಶುದ್ಧಕಾಯಕದಿಂದ ವ್ಯಕ್ತಿಯು ತಾನು ಪಡೆದುದನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿ ಆ ಮೂಲಕ ಪ್ರಸಾದವನ್ನಾಗಿಸಿ ತಾನು ಉಪಭೋಗಿಸಬೇಕು. ತನುಮನಧನಗಳನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಿ ತ್ರಿವಿಧ ದಾಸೋಹವನ್ನು ನಡೆಸ ಬೇಕು.

ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು
ಈ ತ್ರಿವಿಧವ ಹೊರಗುಮಾಡಿ
ಹರೆಯ ಹೊಯಿಸಿ ಕುರುಹ ಪೂಜಿಸುವರ ಮೆಚ್ಚ
ಕೂಡಲಸಂಗಮದೇವ

ಎಂದು ಬಸವಣ್ಣನವರು ತ್ರಿವಿಧದಾಸೋಹದ ಮರ್ಮವನ್ನು ಇಲ್ಲಿ ನಿರೂಪಿಸಿದ್ದಾರೆ. ಈ ಅರ್ಪಣಕ್ರಿಯೆಯಿಂದ ತನು ಮನ ಧನಗಳ ಕಾಳಿಕೆಯೆಲ್ಲ ಹೋಗಿ ಅವು ಪ್ರಸಾದ ರೂಪವಾಗಿ ಪರಿವರ್ತಿತವಾಗುತ್ತವೆ. ಸಾಧಕನನ್ನು ಬದ್ಧನನ್ನಾಗಿಸದೆ ಸಿದ್ಧಿಯ ಕಡೆಗೆ ಸುಲಭವಾಗಿ ಕರೆದೊಯ್ದು ಬುದ್ಧನನ್ನಾಗಿಸುತ್ತವೆ, ಸಿದ್ಧನನ್ನಾಗಿಸುತ್ತವೆ.

ಮಾತಿನ ಮಾತಿನಲ್ಲಪ್ಪುದೆ ಭಕ್ತಿ ?
ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ ?
ಕೂಡಲ ಸಂಗಮದೇವ ಎಲುದೋರೆ ಸರಸವಾಡುವನು
ಸೈರಿಸದನ್ನಕ್ಕ ಅಪ್ಪುದೇ ಭಕ್ತಿ ?

ಹೀಗೆ ಸಾಧಕನ ತನುಮನಧನಗಳು ಸಮಾಜಕ್ಕಾಗಿ ಸವೆಯಬೇಕು. ಅವುಗಳ ಮೇಲಿನ ಹಮ್ಮು ಬಿಮ್ಮುಗಳು, ಮೋಹ ಮದಗಳು ಈ ರೀತಿಯ ಸೇವೆಯಲ್ಲಿ, ಸಮರ್ಪಣದಲ್ಲಿ ಸಂಪೂರ್ಣ ಕರಗಿ ಇಲ್ಲವಾಗಬೇಕು. ಇಂತಹ ದಾಸೋಹಂ ಭಾವದಿಂದ ಭಕ್ತಿ ಬುಗ್ಗೆ ಯಾಗಿ ಚಿಮ್ಮಬೇಕು. ಕಿಂಕರತ್ವದಿಂದ ಶಂಕರತ್ವ ಸಾಧಿಸುವ ಮಾರ್ಗ ಕಾಣಬೇಕು. ಅದನ್ನೇ ಶರಣರು ಅನನ್ಯಭಾವದಿಂದ ಬೇಡಿದ್ದಾರೆ :

ಮೇಲಾಗಲೊಲ್ಲೆನು, ಕೀಳಾಗಲಲ್ಲದೆ
 ಕೀಳಿಂಗಲ್ಲದೆ ಹಯನ ಕರೆವುದೆ ?
ಮೇಲಾಗಿ ನರಕದೊಳೋಲಾಡಲಾರೆನು
 ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲಸಂಗಮದೇವಾ

ಎಂದಿರುವ ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು 'ನಿಮ್ಮ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದೆನಿಸೆನ್ನನು' ಎಂದು ತಮ್ಮ ವಿನಯಶ್ರೀಯನ್ನು ವ್ಯಕ್ತಪಡಿಸಿದ್ದಾರೆ.

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ, ನಿನಗೆ ಕರವೆತ್ತಿ ಪೊಡೆವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನೈ ರಾಮನಾಥಾ

ಎಂದು ದೇವರದಾಸಿಮಯ್ಯಗಳೂ

ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ
ಪರಮ ಪದವಿಯ ನಿಮ್ಮ ತಲೆಯಲ್ಲಿ ಹೊತ್ತುಕೊಳ್ಳಿ
ಎನಗೆ ನಿಮ್ಮ ತೊತ್ತುತನವೇ ಸಾಕು
ಮಹಾಲಿಂಗ ಗಜೇಶ್ವರ ದೇವಯ್ಯ
ನಿಮ್ಮ ಎದೆಯಲ್ಲಿರಿಸಿಕೊಳ್ಳಿ

ಎಂದು ಗಜೇಶಮಸಣಯ್ಯಗಳೂ

'ಸೋಹಂ' ಎಂಬುದು ಅಂತರಂಗದ ಗರ್ವ
'ಶಿವೋಹಂ' ಎಂಬುದು ಬಹಿರಂಗದ ಅಹಂಕಾರ
ಈ ಉಭಯವನಳಿದು
'ದಾಸೋಹಂ' ಭಾವವ ಕರುಣಿಸಿ ಕಾಯಯ್ಯಾ
ಅಖಂಡೇಶ್ವರಾ

ಎಂದು ಷಣ್ಮುಖಸ್ವಾಮಿಗಳೂ ತಮ್ಮ ತಮ್ಮ 'ದಾಸೋಹಂ' ಭಾವವನ್ನು ನಿರೂಪಿಸಿರುವಂತೆ ಅಣ್ಣ ಬಸವಣ್ಣನವರು ತಮ್ಮ ಉತ್ಕಟವಾದ ಅಭೀಪ್ಸೆಯನ್ನು ಅತ್ಯಂತ ಕಳಕಳಿಯಿಂದ ಹೇಳಿಕೊಂಡಿರುವ ಬಗೆ ಸಾಧಕನಿಗೆ ಸದಾಕಾಲದ ಕೈದೀವಿಗೆಯಾಗಿದೆ.

ಜನ್ಮ ಜನ್ಮಕ್ಕೆ ಹೋಗಲೀಯದೆ, 'ಸೋಹಂ' ಎಂದೆನಿಸದೆ
'ದಾಸೋಹಂ' ಎಂದೆನಿಸಯ್ಯಾ
ಲಿಂಗಜಂಗಮದ ಪ್ರಸಾದದ ನಿಲವ ತೋರಿ ಬದುಕಿಸಯ್ಯಾ
ಕೂಡಲಸಂಗಮದೇವಾ, ನಿಮ್ಮ ಧರ್ಮ !

ಹೀಗೆ ತಾನೊಬ್ಬ ಶರಣರ ಚರಣದಾಸ ಎಂಬ ಭೃತ್ಯಾಚಾರವನ್ನು ತನ್ನಲ್ಲಿ ಚೆನ್ನಾಗಿ ಅಳವಡಿಸಿಕೊಂಡು ತನುಮನಧನಗಳನ್ನು ಗುರುಲಿಂಗಜಂಗಮಕ್ಕರ್ಪಿಸಿ ತ್ರಿವಿಧ ದಾಸೋಹವನ್ನು ನಡೆಸುವುದರ ಮೂಲಕ ಪ್ರಸಾದವನ್ನು ದೊರಕಿಸಿಕೊಡುತ್ತ ಮಹಾ ಪ್ರಸಾದಿಯನ್ನಾಗಿಸುತ್ತದೆ, ಈ 'ದಾಸೋಹಂ' ಭಾವ. ಆದುದರಿಂದ ಈ 'ದಾಸೋಹಂ'

ಭಾವವು ಶಿವಯೋಗಸಾಧಕನ ಪ್ರಾರಂಭಿಕ ಜೀವನದಿಂದ ಮೊದಲುಗೊಂಡು ಶಿವ ಯೋಗ ಸಿದ್ಧಿಯ ಪರಾಕಾಷ್ಠೆಯವರೆಗೂ ನಿಚ್ಚಳವಾಗಿದ್ದು ಸಾಧಕನನ್ನು ಸಿದ್ಧಿಯ ಗದ್ದುಗೆಗೇರಿಸುತ್ತದೆಂಬುದನ್ನು ಇಲ್ಲಿ ಮರೆಯಬಾರದು.

ಹಿತವಾಗಿಪ್ಪುದು ಶಿವಂಗೆ !....

ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ,
ಜಗವ ಗೆಲ್ಲಲರಿಯದೆ ನಗೆಗೆಡೆಯಾಗಿ ಹೋದರು.
ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ !
ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು,
ಜಗದಂತೆ ಇದ್ದು, ಈ ಜಗವ ಗೆದ್ದು ಹೋಗುವರು

—ಹಡಪದಪ್ಪಣ್ಣನವರ ವಚನದಂತೆ ಶರಣರು ಈ ಜಗತ್ತಿನಲ್ಲಿ ಹುಟ್ಟಿ, ಬೆಳೆದು, ಇದ್ದು, ಗೆದ್ದು ಹೋದವರು. ಅವರು ಲೋಕದ ಸುಖಭೋಗಗಳನ್ನು ಕ್ಷಣಿಕವೆಂದು ಅಲ್ಲಗಳೆಯಲಿಲ್ಲ. ಸಂಸಾರವನ್ನು ತಿರಸ್ಕರಿಸಲಿಲ್ಲ. ಅದನ್ನು ಪವಿತ್ರವೆಂದು ಭಾವಿಸಿದರು. ಸದ್ಗತಿಯ ಸಾಧನೆಗೆ ಸಂಸಾರ ಮಾರಕವಲ್ಲ, ತಾರಕವೆಂದು ಸಾರಿದರು. ವ್ಯಕ್ತಿಯ ಕಲ್ಯಾಣ ಕೇವಲ ಭೋಗದಲ್ಲಿಲ್ಲ. ಅದರಂತೆ ಭೋಗತ್ಯಾಗದಲ್ಲಿಯೂ ಇಲ್ಲ. ಅವೆರಡರ ಸುಂದರ ಸಮನ್ವಯದಲ್ಲಿಯೇ ಜೀವನ ಕಲ್ಯಾಣ ಸಾಧ್ಯವೆಂಬುದನ್ನು ಶರಣ ಮಾರ್ಗ ತೋರಿಕೊಟ್ಟಿತು. ಭೋಗಜೀವನವನ್ನು ಧಿಕ್ಕರಿಸಿ ತ್ಯಾಗಜೀವನಕ್ಕೆ ಮಹತ್ವ ಕೊಟ್ಟ ಮಹಾಪುರುಷರು ಆಗಿ ಹೋಗಿದ್ದಾರೆ ನಿಜ. ಆದರೆ ಅಂತಹ ವೈರಾಗ್ಯಮಾರ್ಗ ಎಲ್ಲರಿಗೂ ಸಾಧ್ಯವಲ್ಲ. ಎಲ್ಲೊ ಕೆಲವರಿಗೆ ಅಲ್ಲಮಪ್ರಭು, ಅಕ್ಕಮಹಾದೇವಿಯ ರಂತಹ ಒಬ್ಬಿಬ್ಬರಿಗೆ ಸಾಧ್ಯವಾಗಬಹುದು. ಆದರೆ ಇನ್ನುಳಿದವರಿಗೆ ತ್ಯಾಗಭೋಗ ಸಮನ್ವಯದ ಸುಲಭಮಾರ್ಗ ಸಾಧ್ಯವೆಂಬುದನ್ನು ಶರಣಧರ್ಮ ತೋರಿಸಿಕೊಟ್ಟಿತು. ಆದ್ದರಿಂದ ಪರಮಾರ್ಥಕ್ಕೆ ವಿರುದ್ಧವಾದ ಲೌಕಿಕವಾಗಲಿ, ಲೌಕಿಕಕ್ಕೆ ವಿರುದ್ಧವಾದ ಪರಮಾರ್ಥವಾಗಲಿ ನಿಜಜೀವನಕ್ಕೆ ಸಾಧಕವಾಗದು ಎಂಬುದನ್ನು, ಬಸವಣ್ಣನವರು ಕೇವಲ ನುಡಿಯಿಂದ ಬೋಧಿಸದೆ ತಮ್ಮ ನಡೆಯಿಂದ ಎಲ್ಲರಿಗೂ ತೋರಿಸಿಕೊಟ್ಟರು. 'ಹಿಡಿದಡೆ ಜ್ಞಾನಕ್ಕೆ ವಿರೋಧ, ಬಿಟ್ಟೊಡೆ ಲೋಕಕ್ಕೆ ವಿರೋಧ'—ಎಂಬುದು ಶರಣರ ಸಮರಸದ ಸಮನ್ವಯ ದೃಷ್ಟಿ.

ನಯ–ನೀತಿಗಳಿಲ್ಲದ ಸಂನ್ಯಾಸ, ನೀತಿಗೆಟ್ಟ ಉಪದೇಶ–ಇವುಗಳಿಗಿಂತ ನೀತಿಬದ್ಧವಾದ ಸಂಸಾರ, ಆದರ್ಶ ಗೃಹಸ್ಥಜೀವನ–ಇವು ನೂರಕ್ಕೆ ನೂರು ಮೇಲು ಎಂಬುದನ್ನು ತಮ್ಮ ಆದರ್ಶ ನಡೆ ನುಡಿಗಳಿಂದ ಶರಣರು ಬೋಧಿಸಿದರು. ಬಸವಣ್ಣನವರು ಹೇಳುತ್ತಾರೆ.

ಹುಳಿವಿಡಿದು ಘೃತವ ಕಾಣ್ಬಂತೆ
ಅಕ್ಷರವಿಡಿದು ವಿದ್ಯವನರಿವಂತೆ

ಅನ್ನವ ಭೋಗಿಸಿ ಚೈತನ್ಯವ ಕೊಂಬಂತೆ
ಕೂಡಲಸಂಗನ ಶರಣರು
ಸತಿವಿಡಿದು ನಿರ್ವಾಣಸತಿ ಕಾಣ್ಬವರು ಕೇಳಾ ಪ್ರಭುವೇ

ಹಾಲಿಗೆ ಹೆಪ್ಪಿಡುವುದರಿಂದ ಸಿಹಿತುಪ್ಪ, ಅಕ್ಷರಾಭ್ಯಾಸದ ಮೂಲಕ ವಿದ್ಯೆ, ಅನ್ನದಿಂದ ಚೈತನ್ಯ ದೊರೆಯುವಂತೆ ಕೈಹಿಡಿದ ಸತಿಶಿರೋಮಣಿಯಿಂದ ಕೈವಲ್ಯಲಕ್ಷ್ಮಿಯನ್ನು ಕಾಣಬಹುದು. ಆದ್ದರಿಂದ ಮೋಕ್ಷಸಂಪಾದನೆಗಾಗಿ ಮನುಷ್ಯನು ಊರನ್ನು ಬಿಟ್ಟು ಕಾಡನ್ನು ಸೇರಬೇಕಾಗಿಲ್ಲ. ಇದ್ದಲ್ಲಿಯೇ 'ಇದ್ದು ಬದ್ಧನಾಗದೆ, ಸಂಳಿದು ಸೂತಕಿ ಆಗದೆ', 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ' ಆಗಬಹುದು.

ದೇವರದಾಸಿಮಯ್ಯಶರಣರು ತಾವು ಒಡ್ಡಿದ ಸತ್ವಪರೀಕ್ಷೆಯಲ್ಲಿ ತನ್ನ ಆತ್ಮ ದೀಧಿತಿಯಿಂದ ಅವರ ಹೃದಯವನ್ನೇ ಗೆದ್ದುಕೊಂಡ ಆದರ್ಶಮಹಿಳೆ ದುಗ್ಗಳೆಯ ಕೈಹಿಡಿದು ಆದರ್ಶದಂಪತಿಗಳಾಗಿ ಬಾಳಿ ಗೃಹಸ್ಥಧರ್ಮವನ್ನು ಬೆಳಗಿದರು ಗೃಹಸ್ಥಾಶ್ರಮದ ಪಾವಿತ್ರ್ಯವನ್ನು, ಮಹತ್ವವನ್ನು ಎತ್ತಿಹಿಡಿದರು. ಸಂಸಾರಧರ್ಮದ ಹಿರಿಮೆಯ ಪ್ರತ್ಯಕ್ಷ ರೂಪವೇ ಅವರ ಆದರ್ಶದಾಂಪತ್ಯ. ಅವರ ಅನುಪಮ ಗಾರ್ಹಸ್ಥ್ಯ ಜೀವನದ ಮುಡಿಯ ಮಾಣಿಕ್ಯವಾಗಿ ಲೋಕಕ್ಕೊಂದು ಚಿರಂತನ ಸಂದೇಶವೆಂಬಂತೆ ಮೂಡಿಬಂದಿದೆ, ಅವರ ಸೂಳ್ನುಡಿಯ ಈ ಮಾಣಿಕ್ಯ :

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ, ರಾಮನಾಥಾ

ಸತಿ–ಪತಿಗಳು, ದೇಹವೆರಡು ಪ್ರಾಣವೊಂದಾಗಿ ಯುಕ್ತ ಆಹಾರ–ವಿಹಾರವುಳ್ಳ ಸಾತ್ವಿಕ ಜೀವನವನ್ನು ನಡೆಸುತ್ತ ಏಕ ಮನ ಭಾವದಿಂದ ಒಬ್ಬ ದೇವನನ್ನು–ಇಷ್ಟಲಿಂಗ ಒಂದನ್ನೇ–ಭಕ್ತಿಯಿಂದ ಪೂಜಿಸುವುದು, ಅದರಿಂದ ಶಿವನಿಗೆ ಹಿತವಾಗುತ್ತದೆ, ಅವರಿಗೆ ಶಿವ ಒಲಿಯುತ್ತಾನೆ ಎನ್ನುವುದು ಅವರ ಸ್ವಾನುಭವದ ವಿಚಾರ. ಇಲ್ಲದಿದ್ದರೆ ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ–ಮಸಣಿಯ ಭಕ್ತೆಯಾಗಿ ಬಿಟ್ಟರೆ, ಒಬ್ಬರು ಪಾದೋದಕ ಪ್ರಸಾದ, ಮತ್ತೊಬ್ಬರು ಸುರೆ-ಮಾಂಸ ಸೇವಕರಾದರೆ ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯನ್ನು ಹೊರಗೆ ತೊಳೆದಂತಾಗುತ್ತದೆಂದು ಬಸವಣ್ಣನವರು ನಿಟ್ಟುಸಿರು ಬಿಟ್ಟಿದ್ದಾರೆ.

ಡಕ್ಕೆಯ ಬೊಮ್ಮಣ್ಣ ಡಕ್ಕೆಯನ್ನು ಬಾರಿಸುತ್ತ ಮೊರದಲ್ಲಿ ಮಾರಿಯನ್ನಿಟ್ಟು ಕುಣಿಸುವ ಕಾಯಕದವನು. ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ :

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು.

ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ ?
ಪತಿಯಿಂದ ಬಂದ ಸೋಂಕು ಸತಿಗೆ ಕೇಡಲ್ಲವೆ ?
ಒಂದಂಗದ ಕಣ್ಣು ಉಭಯದಲ್ಲಿ
ಒಂದು ಹಿಂಗಲಿಕ್ಕೆ ಭಂಗವಾರಿಗೆಂಬುದು ತಿಳಿಗಲ್ಲಿಯೆ
ಕಾಲಾಂತರ ಭೀಮೇಶ್ವರ ಲಿಂಗಕ್ಕೆ ಸಲೆ ಸಂದಿತ್ತು

ಹೆಂಡತಿಯ ಗುಣವನ್ನು ವಿಚಾರಿಸುವ ಹಕ್ಕು ಗಂಡನಿಗಿರುವಂತೆ ಗಂಡನ ಗುಣ-ಯೋಗ್ಯತೆಗಳನ್ನು ಪ್ರಶ್ನಿಸುವ ಹಕ್ಕು ಹೆಂಡತಿಗೂ ಇದೆ ಎಂಬುದು ಅವನ ಸ್ಪಷ್ಟ ಅಭಿಪ್ರಾಯ. ಅವರಿಬ್ಬರೂ ದೇಹದ ಎರಡು ಕಣ್ಣುಗಳು ಇದ್ದಂತೆ. ಅದರಲ್ಲಿ ಒಂದು ಊನವಾದರೂ ಇನ್ನೊಂದಕ್ಕೆ ಭಂಗ, ಆದ್ದರಿಂದ ಇಬ್ಬರೂ ಸರಿಸಮಾನರು ಎಂದು ತನ್ನ ಡಕ್ಕೆಯನ್ನು ಬಾರಿಸುತ್ತ ಡಂಗುರ ಹೊಡೆದಿದ್ದಾನೆ.

ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಹೆಣ್ಣನ್ನು ಕಡೆಗಣಿಸಿ ಅವಳು ವೇದಾಧ್ಯಯನಕ್ಕೆ ಮತ್ತು ಮೋಕ್ಷಸಂಪಾದನೆಗೆ ಅನರ್ಹಳೆಂದು, ಪುರುಷನ ಚರಣದಾಸಿಯೆಂದು, ಮನೆಯೆ ಅವಳ ಕಾರ್ಯಕ್ಷೇತ್ರವೆಂದು ಹೇಳುತ್ತ ಕೀಳಾಗಿ ಕಾಣಲಾಗಿತ್ತು. ವೈದಿಕಯುಗದಲ್ಲಿ ಕೆಲವು ಸ್ತ್ರೀದಾರ್ಶನಿಕರ ಹೆಸರುಗಳು ಕೇಳಿಬರಬಹುದು. ಆದರೂ ಪುರುಷನದೇ ಮೇಲುಗೈಯಾದ ಸಮಾಜದಲ್ಲಿ ಸ್ತ್ರೀಗೆ ಯಾವ ಬಗೆಯ ಸ್ವಾತಂತ್ರ್ಯವೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶರಣರು ಮಹಿಳೋದ್ಧಾರದ ಮಹತ್ಕಾರ್ಯವನ್ನು ಕೈಗೆತ್ತಿಕೊಂಡರು. ಗಂಡುಹೆಣ್ಣಿನ ಭೇದ ಭೌತಿಕ ಚಿಹ್ನೆಗಳಲ್ಲಿ ಮಾತ್ರ. ಆದರೆ ಸತ್ವಶಃ ಇಬ್ಬರೂ ಒಂದೇ. ಇಬ್ಬರೂ ಸರಿಸಮಾನರು, ಸಮಾಜದ ಉದ್ಧಾರವಾಗಬೇಕಾದರೆ ಅದರ ಅರ್ಧಭಾಗವಾದ ಸ್ತ್ರೀಸಮೂಹವನ್ನು ಹೊರಗಿಡುವುದು ವಿವೇಕವಲ್ಲ, ವ್ಯಾವಹಾರಿಕವೂ ಅಲ್ಲ. ಆದುದರಿಂದ ಸ್ತ್ರೀಗೂ ಸಮಾಜದಲ್ಲಿ ಸರಿಸಮಾನತೆ ಇರಬೇಕು ಎಂಬುದನ್ನು ಅರಿತ ಶರಣರು ಸ್ತ್ರೀಯರಿಗೂ ಸಮಾನತೆ-ಸ್ವಾತಂತ್ರ್ಯಗಳನ್ನು ತಂದುಕೊಟ್ಟರು. ಇದರಿಂದ ನಿಷ್ಕ್ರಿಯವಾಗಿ ಅಪವ್ಯಯವಾಗಲಿದ್ದ ಸಮಾಜದ ಅರ್ಧಶಕ್ತಿ ಕ್ರಿಯಾತತ್ಪರವಾಗಿ ಸಮಾಜದ ಶ್ರೇಯೋಭಿವೃದ್ಧಿಗೆ ತನ್ನ ಪಾಲಿನ ಅಮೋಘಸೇವೆಯನ್ನು ಸಲ್ಲಿಸಲು ಸಾಧ್ಯವಾಯಿತು.

ಹೆಣ್ಣನ್ನು ಮಾಯೆಯೆಂದು ಶರಣರು ಕಾಣಲಿಲ್ಲ, ಹಾಗೆ ಹೇಳಲೂ ಇಲ್ಲ. ಅವಳನ್ನು ಕೇವಲ 'ಆತ್ಮ'ವಾಗಿ ಕಂಡರು. ದೇವರ ದಾಸಿಮಯ್ಯನವರ ದಿವ್ಯವಾಣಿಗಳಲ್ಲಿ ಹೆಣ್ಣು-ಗಂಡುಗಳ ಒಳಗಿರುವ ಬೆಳಗು ಒಂದೇ ಎಂಬುದು ಮೊಳಗುತ್ತಿದೆ :

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥಾ
ನಿಡಿದೊಂದು ಕೋಲನು ಕಡಿದು ಎರಡು ಮಾಡಿ,

ಅಡಿಯು ಹೆಣ್ಣು ಮಾಡಿ, ಒಡೆತನವ ಗಂಡು ಮಾಡಿ,
ನಡುವೆ ಹೊಸೆದೊಡೆ, ಹುಟ್ಟಿದ ಕಿಚ್ಚು ಹೆಣ್ಣೋ ಗಂಡೋ ರಾಮನಾಥಾ

ಶಿವಯೋಗಿ ಸಿದ್ಧರಾಮೇಶ್ವರರು ಹೆಣ್ಣನ್ನು 'ಪ್ರತ್ಯಕ್ಷಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಬಸವಣ್ಣನವರು 'ಮಹಾದೇವಿ' ಎಂದು ಕಂಡು ಪರಮೋಚ್ಚಸ್ಥಾನವನ್ನಿತ್ತು ಗೌರವಿಸಿದರು. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯ ಒಂದು ವಚನವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು :

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ ?
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ ?
ಇಂದ್ರಿಯಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ ?
ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೂ ಲಿಂಗಕ್ಕೂ ವಿರುದ್ಧವೆ ?
ಇದು ಕಾರಣ ಪರಂಜ್ಯೋತಿ ಪರಮಕರುಣಿ
ಪರಮಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು
ಮರೆದಡೆ ಕಾಣಬಾರದು
ಅರಿವಿನಿಂದ ಕಂಡೊದಗಿದ ಸುಖವು
ಮಸಣಯ್ಯಪ್ರಿಯ ಗಜೇಶ್ವರಾ

ಹೆಣ್ಣು, ಹೊನ್ನು, ಮಣ್ಣು, ಅಂಗ. ಇಂದ್ರಿಯ, ಜಗತ್ತು–ಇವು ಲಿಂಗಕ್ಕೆ ವಿರುದ್ಧವಲ್ಲ ಎಂದು ವಾದಿಸುತ್ತಾಳೆ, 'ಅರಿವಿನಿಂದ ಕಂಡೊದಗಿದ ಸುಖವು' ಇಲ್ಲಿ ಮುಖ್ಯ. ಅವುಗಳ ಬಗೆಗೆ ನಾವು ಇಟ್ಟುಕೊಳ್ಳುವ ದೃಷ್ಟಿ ಮುಖ್ಯ. ಅವು ವ್ಯಕ್ತಿಯ ಉನ್ನತಿಗೆ ಸಾಧಕಗಳೇ ಆಗುತ್ತವೆ. ಬಸವಣ್ಣನವರು ಒಂದು ಕಡೆ ಇಂದ್ರಿಯಗಳನ್ನು ನಿಗ್ರಹಿಸಿದರೆ ದೋಷ ಗಳು ಬರುತ್ತವೆಂದೂ ಪಂಚೇಂದ್ರಿಯಗಳು ಬಂದು ಕಾಡುತ್ತವೆಂದೂ ಹೇಳಿದ್ದಾರೆ :

ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು !
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು !
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ-ಚಂಗಳೆಯರು ?
ಸತಿಪತಿರತಿಸುಖಭೋಗೋಪಭೋಗವಿಲಾಸವ ಬಿಟ್ಟನೆ ಸಿಂಧುಬಲ್ಲಾಳನು
ನಿಮ್ಮ ಮುಟ್ಟಿ ಪರಧನ—ಪರಸತಿಯರಿಗೆಳಸಿದರೆ
ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವಾ !

ಈ ವಚನದ ಪ್ರಕಾರ ಪರಧನದ ಆಸೆ—ಪರಸತಿಯರ ಸಂಗ ಇವುಗಳನ್ನು ಶರಣರು ಉಗ್ರವಾಗಿ ಖಂಡಿಸಿದರೇ ಹೊರತು ಗೃಹಸ್ಥಜೀವನವನ್ನಲ್ಲ ಎಂಬುದನ್ನು ಇಲ್ಲಿ ಮನ ಗಾಣಬಹುದು.

ಬಸವಣ್ಣನವರ ಕಾರುಣ್ಯದ ಫಲವಾಗಿ ಹನ್ನೆರಡನೆಯ ಶತಮಾನದಲ್ಲಿ ನಾಡಿನ ಪೂರ್ವಪುಣ್ಯದಿಂದ ಶಿವಶರಣೆಯರ ಒಂದು ಉಜ್ವಲ ಪರಂಪರೆಯೇ ಮೂಡಿಬಂದಿತು. 'ಕಾಮನ ಗೆಲಿದೆನು ಬಸವಾ ನಿಮ್ಮ ದಯದಿಂದ'—ಅಣ್ಣನ ದಯೆಯಿಂದ ಅಕ್ಕನು ಕಾಮನನ್ನು ಗೆದ್ದು ಕಾಮಾರಿಯನ್ನು ಕಂಡುಕೊಂಡಳು. ಹಾಗೆಯೇ ಅಂದಿನ ಶಿವ ಶರಣೆಯರು ಅಣ್ಣನ ದಿವ್ಯದರ್ಶನದಿಂದ ತಮ್ಮ ಸಾಧನೆಯ ಮಾರ್ಗದಲ್ಲಿ ಶರಣರಿಗೆ ಸರಿ ದೊರೆಯಾಗಿ ಮುಂದುವರೆದರು. ಅಷ್ಟೇ ಅಲ್ಲ, ಕೆಲವು ಸಂದರ್ಭಗಳಲ್ಲಿ ವಿವೇಕದ ಬೆಳಕನ್ನು ನೀಡಿ ತಮ್ಮ ಪತಿದೇವರುಗಳನ್ನು, ಅಂದಿನ ಆ ಶರಣರನ್ನು ಮುನ್ನಡೆಸಿದರು. 'ಕಾಯಕ ನಿಂದಿತ್ತು, ಹೋಗಯ್ಯಾ ಎನ್ನಾಳ್ದನೆ' ಎಂದು ಸಕಾಲದಲ್ಲಿ ಎಚ್ಚರಿಸಿ, ಅವಸರ ದಿಂದ ಹೋಗಿ ಹೆಚ್ಚು ಅಕ್ಕಿಯನ್ನು ಆಯ್ದು ತಂದಾಗ ''ಈಸಕ್ಕಿಯಾಸೆ ನಿಮಗೇಕೆ, ಈಶ್ವರನೊಪ್ಪ, ಅಲ್ಲಿಯೇ ಸುರಿದು ಬನ್ನಿರಿ'' ಎಂದು ಹೇಳಿ ಆಯ್ದಕ್ಕಿ ಮಾರಯ್ಯ ಗಳಿಗೆ ಅರಿವನ್ನು ನೀಡಿದ ಆದರ್ಶಸತಿ ಲಕ್ಕಮ್ಮ ; ಕೂಡಲಸಂಗಮದಲ್ಲಿ ಸಂಗಮವಾಗಲು ಈ ಕೂಡಲೇ ಹೊರಟು ಬರಬೇಕೆಂದು ಹಡಪದಪ್ಪಣ್ಣಗಳೊಡನೆ ಬಸವಣ್ಣನವರು ಹೇಳಿ ಕಳುಹಿಸಿದಾಗ' ಅಲ್ಲಿರುವ ಸಂಗಯ್ಯನು ಇಲ್ಲಿಲ್ಲವೆ ?' ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೆ?' ಎಂಬ ಉತ್ತರವನ್ನು ಕಳುಹಿಸಿ ತನ್ನ ನಿಜದಲ್ಲಿ ಬೆರೆದ ನೀಲಲೋಚನೆ; ತನ್ನ ಐಕ್ಯದ ನೆಲೆಯನ್ನು ಕಾಣದೆ ಕನವರಿಸುತ್ತಿದ್ದ ಪತಿ ಮೋಳಿಗೆಯ ಮಾರಯ್ಯನವರಿಗೆ— 'ಹೊರಗೆ ಕೂಡಿಹೆನೆಂಬುದು ನಿಮ್ಮ ಅರಿ ವಿಂಗೆ ಹಾನಿ' ಎಂದು ಬೋಧಿಸಿ ಐಕ್ಯದ ಗೊತ್ತನ್ನು ತೋರಿಕೊಟ್ಟ ಮೋಳಿಗೆಯ ಮಹಾ ದೇವಿಯಮ್ಮ—ಇವೇ ಮೊದಲಾದ ಇಂತಹ ಅನೇಕ ಆದರ್ಶ ಶರಣಜೋಡಿಗಳು ದಾಂಪತ್ಯ ಧರ್ಮದ ಹಿರಿದಾದ ಆದರ್ಶವನ್ನು ಎತ್ತಿ ಹಿಡಿದು ಲೋಕಕ್ಕೇ ಆದರ್ಶ ವಾಗಿವೆ. ಅಷ್ಟೇ ಅಲ್ಲದೆ ಅನುಭವ ಮಂಟಪದ ಶರಣರ ಗೋಷ್ಠಿಯಲ್ಲಿ ಭಾಗವಹಿ ಸಿದ ಶಿವಶರಣೆಯರು ತಮ್ಮ ದಿವ್ಯ ಅನುಭಾವದ ಅನುಪಮ ಪ್ರಭೆಯಿಂದ ಅಮೂಲ್ಯ

ವಚನಗಳನ್ನು ರಚಿಸಿ ಸಾಹಿತ್ಯಕ್ಕೂ ಅಪಾರವಾದ ಅನರ್ಘ್ಯಕೊಡುಗೆಗಳನ್ನು ನೀಡಿ ಶ್ರೇಷ್ಠ ವಚನಕಾರ್ತಿಯರೂ ಆಗಿದ್ದಾರೆ.

ಹೀಗೆ ಹೆಣ್ಣು ಮಾಯೆಯಲ್ಲ, ಸಂಸಾರ ಸದ್ಗತಿಗೆ ತೊಡಕಲ್ಲ, ಸತಿಪತಿಗಳೊಂದಾದ ಭಕ್ತಿಗೆ ಸರಿಸಮನಾದ ಸಾಧನೆಯಿಲ್ಲ, ಧಾರ್ಮಿಕ ಕ್ಷೇತ್ರದಲ್ಲಿ ಹೆಣ್ಣು-ಗಂಡೆಂಬ ಭೇದ ಸಲ್ಲ, ಆತ್ಮ—ಹೆಣ್ಣೂ ಅಲ್ಲ ಗಂಡೂ ಅಲ್ಲ—ಮುಂತಾದ ಉದಾತ್ತ ಜೀವನ ಮೌಲ್ಯಗಳನ್ನು ಸಾರಿದ ಶರಣಧರ್ಮ ವ್ಯಕ್ತಿಯು—ಹೆಣ್ಣಾಗಲಿ, ಗಂಡಾಗಲಿ-ಸಂಸಾರದಲ್ಲಿದ್ದುಕೊಂಡೇ ಸದ್ಗುರುವಿನಿಂದ ಪಡೆದ ಇಷ್ಟಲಿಂಗವನ್ನು ಹಿಡಿದು ಸಾಧನೆಯನ್ನು ಕೈಕೊಂಡು ತನ್ನ ಸದ್ಗತಿಯನ್ನು ಸಾಧಿಸಿಕೊಳ್ಳುವ, ಎಲ್ಲರಿಗೂ ಅನುಸರಿಸಲು ಸುಲಭವಾದ ದಾರಿಯನ್ನು ತೋರಿತು.

ತಾನುಂಬ ಊಟ....

ಸಮಾಜದಲ್ಲಿ ರೂಢಮೂಲವಾಗಿದ್ದ ಕುಲ ಜಾತಿ ವರ್ಣ ವರ್ಗ ವಿಭೇದಗಳನ್ನೆಲ್ಲ ತೊಡೆದು ಹಾಕಿ ಗಂಡು-ಹೆಣ್ಣು ಎಂಬ ತಾರತಮ್ಯವನ್ನು ಇಲ್ಲವಾಗಿಸಿದ, 'ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶರಣರೆ ಕುಲಜರು' ಎಂದು ಘೋಷಿಸಿದ ಶರಣ ಧರ್ಮವು ವ್ಯಷ್ಟಿ-ಸಮಷ್ಟಿಗಳ ಅಭ್ಯುದಯಕ್ಕೆ ಆದ್ಯತೆಯನ್ನು ಕೊಟ್ಟಿತು.

> ಲೋಕದ ಡೊಂಕ ನೀವೇಕೆ ತಿದ್ದುವಿರಿ ?
> ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
> ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ಎಂದು ಹೇಳಿ, ವ್ಯಕ್ತಿಯು ತಾನು ಮೊದಲು ನೆಟ್ಟಗಾದರೆ ಸಮಾಜವೂ ತನಗೆ ತಾನೇ ನೇರಾಗುತ್ತದೆಂದು ಎಚ್ಚರಿಸಿ ವ್ಯಕ್ತಿಯ ಪ್ರಗತಿಗೆ ಶರಣರು ಪ್ರಥಮ ಪ್ರಾಶಸ್ತ್ಯವಿತ್ತರು. ಆದಕ್ಕಾಗಿ ವ್ಯಕ್ತಿಯ ಎಲ್ಲ ಶಕ್ತಿಗಳ ವಿಕಾಸಕ್ಕೂ ಅವಕಾಶಗಳನ್ನು ಕಲ್ಪಿಸಿಕೊಟ್ಟರು. ತನ್ನ ದೇಹ, ಮನಸ್ಸು, ಬುದ್ಧಿ, ಹೃದಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ತನ್ನ ಸ್ವಸ್ವರೂಪವನ್ನು ಕಂಡುಕೊಳ್ಳುವ ಆತ್ಮಶಕ್ತಿಯ ಅಭಿವೃದ್ಧಿಗೂ ಅಗತ್ಯಮಾರ್ಗವನ್ನು ಸೃಷ್ಟಿಸಿದರು. ಬಹಳ ಹಿಂದಿನಿಂದಲೂ ಸಮಾಜದ ಮೇಲು ವರ್ಗದವರ ದಬ್ಬಾಳಿಕೆಗೆ ತುತ್ತಾಗಿ ತತ್ತರಿಸಿ ಹೋಗಿದ್ದ ಪತಿತಪಾಮರರನ್ನು, ತಾವು ಪಾಪಿಗಳು-ದಡ್ಡರು ಎಂದು ಕುಗ್ಗಿಕುಸಿದು ಹೋಗಿದ್ದವರನ್ನು, ಇದೆಲ್ಲ ನಮ್ಮ ಪೂರ್ವಾರ್ಜಿತ ಕರ್ಮಫಲ—ಹಣೆಬರಹ ಎಂದು ಕೊರಗಿ ಸೊರಗುತ್ತಿದ್ದವರನ್ನು ಕುರಿತ.

> ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
> ಎಲವೊ, ಎಲವೋ, ಬ್ರಹ್ಮಹತ್ಯವ ಮಾಡಿದವನೇ.
> ಒಮ್ಮೆ 'ಶರಣೆ'ನ್ನೆಲವೋ
> ಒಮ್ಮೆ 'ಶರಣೆಂದರೆ ಪಾಪಕರ್ಮ ಓಡುವುವು'

ಎಂದು ಧೈರ್ಯವನ್ನು ತುಂಬಿ, ಪಾಪಿಗೂ ಉದ್ಧಾರದ ಮಾರ್ಗ ಸದಾ ತೆರೆದಿದೆ ಎಂಬ ಭರವಸೆಯನ್ನು ನೀಡಿದರು. ವ್ಯಕ್ತಿಯು ತನ್ನ ವಿಕಾಸವನ್ನು ತಾನೇ ಸಾಧಿಸಿಕೊಳ್ಳ ಬೇಕು, ತಾನೇ ನಡೆದು ಮೇಲೇರಬೇಕು ಎಂಬುದನ್ನು ಎಲ್ಲರ ಮನದಲ್ಲಿ ತುಂಬಿ ಹುರಿದುಂಬಿಸಿದರು. ತನಗೂ ತನ್ನ ಸುತ್ತಲಿನ ಸರ್ವಸೃಷ್ಟಿಗೂ ಮೂಲಾಧಾರವಾದ ಮತ್ತು ತನ್ನೊಳಗೂ ಹಾಗೂ ಎಲ್ಲದರೊಳಗೂ ತುಂಬಿರುವ ಮೂಲಚೈತನ್ಯಕ್ಕೆ ಮೊದಲು ತಲೆಬಾಗಿ ಅದನ್ನು ಕಂಡುಕೊಳ್ಳುವ ಸಾಧನೆ–ಆರಾಧನೆಗಳು ಸತತ ನಡೆಯು ವಂತಾಗಬೇಕು ಎಂದು ವ್ಯಕ್ತಿಯ ವೈಯಕ್ತಿಕ ಸಾಧನೆಯ ಮೇಲೆ ಹೆಚ್ಚು ಒತ್ತು ಕೊಟ್ಟರು. ಆದರೆ ಅದುವರೆಗೆ ವ್ಯಕ್ತಿಯ ನಂಬಿಕೆ, ಭಾವನೆಗಳೇ ಬೇರೆಯಾಗಿದ್ದುವು. ದೇವರನ್ನು ಪೂಜಿಸಲು ಗುಡಿಗುಂಡಾರಗಳಿಗೆ ತಾನು ಹೋಗಬೇಕು. ಅಲ್ಲಿ ತಾನೇ ನೇರ ಪೂಜಿಸುವ ಅವಕಾಶವಿಲ್ಲದೆ ಬೇರೊಬ್ಬರು ತನ್ನ ಪರವಾಗಿ ಪೂಜೆಮಾಡಬೇಕು ಮತ್ತು ತನ್ನ ಉದ್ಧಾರವೆಲ್ಲ ಅವರ ಕೈಯಲ್ಲಿದೆ ಎಂಬುದಾಗಿ ನಂಬಿದ್ದ ಕಾಲ ಅದು. ಇದರಿಂದಾಗಿ ದೇವರು–ಧರ್ಮ, ಅರ್ಚನೆ–ಆರಾಧನೆಗಳು ಕೆಲವರ ಸೊತ್ತಾಗಿ ಜನಸಾಮಾನ್ಯರಿಗೆ ಅವು ದಕ್ಕದ ತುತ್ತುಗಳಾಗಿದ್ದುವು. ಇಂದಿಗೂ ಈ ಪರಿಸ್ಥಿತಿ ಮುಂದುವರೆದಿರುವು ದನ್ನು ಕಾಣಬಹುದಾಗಿದೆ. ಆದರೆ ಅಂದು ಶರಣರು ಇಂತಹ ಶೋಷಣೆಯ ವಿರುದ್ಧ ಸಿಡಿದೆದ್ದು ದೇವ–ಭಕ್ತರ ನಡುವಿನ ದಲ್ಲಾಳಿಗಳನ್ನು ನಿವಾರಿಸುವುದಕ್ಕೆ ಹಾಗೂ ಭಕ್ತನಿಗೆ ದೇವನೊಡನೆ ನೇರವಾದ ಅನ್ಯೋನ್ಯ ಸಂಬಂಧ ಕಲ್ಪಿಸುವುದಕ್ಕೆ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿಯೇ ಅದ್ವಿತೀಯವಾದ ಕ್ರಾಂತಿಯೊಂದನ್ನು ಮಾಡಿದರು. ದೇಗುಲದಲ್ಲಿ ಕೇವಲ ಕೆಲವರ ಸೊತ್ತಾಗಿ ಸೆರೆಯಾಗಿ ಸೊರಗುತ್ತಿದ್ದ ದೇವರನ್ನು ವ್ಯಕ್ತಿ ವ್ಯಕ್ತಿಗಳ ಹೃದಯ ದೇಗುಲದಲ್ಲಿ ಪ್ರತಿಷ್ಠಾಪಿಸಿ, ಅದನ್ನು ಅವರವರ ಕರಸ್ಥಲಗಳಿಗೆ ಇಷ್ಟಲಿಂಗರೂಪದಲ್ಲಿ ತಂದಿತ್ತು ಆರಾಧನೆಗೆ ಅನುವುಮಾಡಿಕೊಟ್ಟು ಪೂಜಾಸ್ವಾತಂತ್ರ್ಯ ವನ್ನು ನೀಡಿದುದೆ ಆ ಮಹಾಕ್ರಾಂತಿ. ದೇವನನ್ನು ಹುಡುಕುತ್ತ ವ್ಯಕ್ತಿ ಅಲ್ಲಲ್ಲಿಗೆ ಓಡಾಡಬೇಕಾಗಿಲ್ಲ. ಹಲವರ ಶೋಷಣೆಗೆ ಒಳಗಾಗಬೇಕಾಗಿಲ್ಲ. ಅವರಿವರನ್ನು ಆಶ್ರಯಿಸಬೇಕಾಗಿಲ್ಲ. ಹಸಿದವನು ತನ್ನ ಊಟವನ್ನು ತಾನೇ ಮಾಡಬೇಕಾಗುವಂತೆ, ವ್ಯಕ್ತಿ ತನ್ನ ಆಶ್ರಯದ ರತಿಸುಖದ ಸೊಗಸನ್ನು ತಾನೇ ಭೋಗಿಸಬೇಕಾಗುವಂತೆ ಭಕ್ತನು ಲಿಂಗಪೂಜೆಯ ಆನಂದವನ್ನು ತಾನೇ ಪಡೆಯಬೇಕು. ಸದ್ಗುರುವಿನ ಕಾರುಣ್ಯ ದಿಂದ ತನಗೆ ಲಭ್ಯವಾದ, ತನ್ನ ಅಂತರಂಗದ ಚಿತ್ಕಳೆಯ ಕುರುಹು ಆದ ತನ್ನ ಇಷ್ಟ ಲಿಂಗದ ಪೂಜಾನುಷ್ಠಾನಗಳನ್ನು ಯಾರ ಹಂಗೂ ಇಲ್ಲದೆ ತಾನೇ ಕೈಯಾರೆ ನೆರವೇರಿ ಸುವ ಸ್ವಾತಂತ್ರ್ಯ ದೊರೆತುದು, ಬಡವನಿಗೆ ತವನಿಧಿ ಸಿಕ್ಕಿದಂತಾಯಿತು! ಬಸವಣ್ಣ ನವರು ಇಷ್ಟಲಿಂಗವನ್ನು ಕೊಡುವುದರ ಮೂಲಕ ಹೆಣ್ಣು-ಗಂಡುಗಳಿಗೆ ಸಮಾನಾಧಿ ಕಾರ–ಸಂಸ್ಕಾರಗಳನ್ನು ದೊರಕಿಸಿಕೊಟ್ಟು ಲಿಂಗಾರ್ಚನೆಯ ಸ್ವಾತಂತ್ರ್ಯವನ್ನಿತ್ತರು. ಸಮಾಜದಲ್ಲಿನ ಏರು-ಪೇರುಗಳನ್ನು ತಗ್ಗು-ದಿಣ್ಣೆಗಳನ್ನು ಸಮಗೊಳಿಸಿ ಸರ್ವಸಮತೆ ಯನ್ನು ಸಾಧಿಸುವ ಸಮರ್ಥ ಸಾಧನವನ್ನಾಗಿ ಬಸವಣ್ಣನವರು ಲಿಂಗಲಾಂಛನ ಬಳಸಿ

ಕೊಂಡುದು ಅದ್ಭುತಕ್ರಾಂತಿಯೆನ್ನಬಹುದು. ಇಲ್ಲಿ ಶಿವ-ಜೀವರ ನೇರಸಂಬಂಧವನ್ನು ನೇರಮಾತುಗಳಲ್ಲಿಯೇ ಮನಮುಟ್ಟುವಂತೆ ಹಾಡಿದ್ದಾರೆ :

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ.

ದೇವರ ದಾಸಿಮಯ್ಯನವರು —

ಸತಿಯರ ಸಂಗವನು, ಅತಿಶಯದ ಗ್ರಾಸವನು
ಪೃಥ್ವೀಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೇ ರಾಮನಾಥಾ

ಎಂದು ಕೇಳಿದ್ದಾರೆ. ಆದುದರಿಂದ ವ್ಯಕ್ತಿಯು ಯಾರ ಮೇಲೂ ಅವಲಂಬಿತನಾಗದೆ ತನ್ನ ಇಷ್ಟಲಿಂಗದ ಅರ್ಚನೆ ಪೂಜೆಗಳನ್ನು ತಾನೇ ಸ್ವತಃ ಕೈಯಾರೆ ಮಾಡಬೇಕೆಂಬುದನ್ನು ಮನಂಬುಗುವಂತೆ ಈ ಮೇಲಿನ ವಚನಗಳು ನಿರೂಪಿಸುತ್ತವೆ.

ಸಾಧನೆಯಲ್ಲಿ ತೊಡಗಿದ ವ್ಯಕ್ತಿಯು ಪ್ರಥಮತಃ ಅಂತರಂಗಶುದ್ಧಿ, ಬಹಿರಂಗ ಶುದ್ಧಿಗಳನ್ನು ಪಡೆದುಕೊಳ್ಳಬೇಕು. ಅದು ಹೇಗೆಂದರೆ ಬಸವಣ್ಣನವರು ಹೇಳಿರುವ

ಕಳಬೇಡ, ಕೊಲಬೇಡ. ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಈ ಸಪ್ತಶೀಲಗಳ ಸಂಪಾದನೆ ಮುಖ್ಯವೆಂದೆನಿಸುತ್ತದೆ. ಸಾಧಕನ ದಿನಚರಿ ಅಚ್ಚುಕಟ್ಟಿನದು, ಶಿವ ಮೆಚ್ಚುವಂತಹುದು ಆಗಿರಬೇಕಾಗುತ್ತದೆ. ಅದರ ಒಂದು ಸ್ಥೂಲ ಪರಿಚಯವನ್ನು ಶರಣರ ನುಡಿಗಳಿಂದ ಇಲ್ಲಿ ಕೊಡಬಹುದು :

ಬೆಳಿಗ್ಗೆ ಹಾಸಿಗೆಯಿಂದ ಏಳುವುದು—

'ಸುಪ್ರಭಾತಸಮಯದಲ್ಲಿ ಆರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವುವು ಅಪಮೃತ್ಯು ಕಾಲ ಕರ್ಮಂಗಳು'

ಸ್ನಾನ— 'ತೊರೆಯ ಮೀವಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,

ತೊರೆಯಿಂ ಭೋ, ತೊರೆಯಿಂ ಭೋ
ಪರನಾರಿಯಂ ಸಂಗವ ತೊರೆಯಿಂ ಭೋ !
ಪರಧನದಾಮಿಷವ ತೊರೆಯಿಂ ಭೋ !
ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು, ಕೂಡಲಸಂಗಮದೇವಾ'
'ಆಗಡವ ಮಾಡಿ ಮಾಗುಡವ ಮಿಂದರೆ
ತಾ ಕೊಡಬಲ್ಲನೆ ?'

ಪೂಜೆಗೆ ಸಿದ್ಧತೆ—'ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗವ ಮುನ್ನ ಪೂಜಿಸು ಲಿಂಗವ'

ಪೂಜಾಸ್ಥಾನ—'ಸದ್ಭಕ್ತರು ಲಿಂಗಾರ್ಚನೆಯ ಮಾಡುವ ಕಾಲದಲ್ಲಿ,

ಕದವ ಮುಚ್ಚಿ ಸಮಾಧಾನದಲ್ಲಿ ಲಿಂಗಾರ್ಚನೆಯ ಮಾಡುವುದು.
ಶಿವಪೂಜೆಯ ಗುಪ್ತದಲ್ಲಿ ಮಾಡಬೇಕಾಗಿ ತೆರೆಯ ಕಟ್ಟುವುದು.
ಪಾಪಿಯು, ಕೋಪಿಯು, ಶಿವಾಚಾರ ಪರಿಭ್ರಷ್ಟನು, ಅಳಿಗೊಂಬನು,
ವೈದಿಕ ವಿಪ್ರನು, ಹೊಲ್ಲಹ ದೃಷ್ಟಿಯಹನು, ಅನಾಚಾರಿಯು,
ಮೂರ್ಖನು,
ತನ್ನ ಗುರುವ ನಿಂದಿಸುವಾತನು, ಇಂತಪ್ಪವರುಗಳು
ಪ್ರಮಾದದಿಂದಾದೊಡೆಯೂ ಕಂಡಡೆ ತಾ ಮಾಡಿದ ಲಿಂಗಾರ್ಚನೆ
ನಿಷ್ಫಲವಹುದು.
ಇದನರಿದು ಸಕಳೇಶ್ವರ ಲಿಂಗವ ಏಕಾಂತದಲ್ಲಿ ಭಜಿಸುವ ಭಕ್ತರಿಗೆ
ನಮೋ ನಮೋ ಎಂದು ಬದುಕಿದೆನಯ್ಯಾ'

ಪೂಜಾಕ್ರಮ —'ಅಷ್ಟ ವಿಧಾರ್ಚನೆ-ಷೋಡಶೋಪಚಾರವ ಮಾಡುವುದು ;
ಮಾಡಿದ ಪೂಜೆಯ ನೋಡುವುದಯ್ಯಾ.
ಶಿವತತ್ವಗೀತವ ಪಾಡುವುದು ;
ಶಿವನ ಮುಂದೆ ನಲಿದಾಡುವುದಯ್ಯಾ,
ಭಕ್ತಿ ಸಂಭಾಷಣೆಯ ಮಾಡುವುದು ;
ನಮ್ಮ ಕೂಡಲ ಸಂಗಯ್ಯನ ಕೂಡುವುದು'

ಜಪ ತಪ—'ಆಶೆ ಇಲ್ಲದಿಪ್ಪುದೇ ತಪ. ರೋಷ ಇಲ್ಲದಿಪ್ಪುದೇ ಜಪ.'
ಊಟ—'ಮೌನದಲುಂಬುದು ಆಚಾರವಲ್ಲ ; ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ 'ಶಿವ ಶರಣೆ'ನ್ನುತ್ತಿರಬೇಕು.
ಕರಣವೃತ್ತಿಗಳಡಗುವುವು, ಕೂಡಲ ಸಂಗನ ನೆನೆಯುತ್ತ ಉಂಡರೆ.'

ನೋಟ—'ಕಂಗಳು ತಪ್ಪಿ ನೋಡಿದರೆ ಮಾರಿ.'

ನಡೆ—'ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ.'
'ಶಿವಪಥವನರಿವರೆ ಗುರುಪಥವೇ ಮೊದಲು'

ನುಡಿ—'ಅಯ್ಯಾ ಎಂದದೆ ಸ್ವರ್ಗ, ಎಲವೊ ಎಂದಡೆ ನರಕ'
'ನುಡಿದರೆ ಲಿಂಗ ಮೆಚ್ಚಿ' ಅಹುದಹುದೆ'ನಬೇಕು'
'ಏನಿ ಬಂದಿರಿ, ಹದುಳವಿದ್ದಿರಾ ?—ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ ?

ಕುಳ್ಳಿರೆಂದರೆ ನೆಲ ಕುಳಿಹೋಹುದೆ ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,
ಕೆಡಹಿ ಮೂಗಕೊಯ್ಯದೆ ಮಾಣ್ಬನೆ ?'

ಮಾಡುವುದು—'ಮಾಡಿ ಮಾಡಿಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ'
'ಮಾಡಿದೆನೆಂಬದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ'
'ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿತ್ತನೀವ'

ನೀಡುವುದು—'ಗುರು ಲಿಂಗ ಜಂಗಮಕ್ಕೆ ದಾಸೋಹವ ಮಾಡಲು
ತನು ಕೆಡದು, ಮನಕೆಡದುಂ, ಧನಕೆಡದುಂ'

ಮುಟ್ಟುವುದು—'ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ'
ಒಂದಕ್ಕಂಜುವೆ, ಒಂದಕ್ಕಳುಕುವೆ
ಪರಸ್ತ್ರೀ ಪರಧನವೆಂಬೀಜೂಜಿಂಗಂಜುವೆ'

ನೇಮ—'ಬಂದುದ ಕೈಕೊಳ್ಳಬಲ್ಲರೆ ನೇಮ
ಇದ್ದುದ ವಂಚನೆ ಮಾಡದಿದ್ದರೆ ಅದು ನೇಮ
ನಡೆದು ತಪ್ಪದಿದ್ದರೆ ನೇಮ, ನುಡಿದು ಹುಸಿಯದಿದ್ದರೆ ನೇಮ
ನಮ್ಮ ಕೂಡಲ ಸಂಗನ ಶರಣರು ಬಂದರೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮಂ'
'ಅಂಬಲಿಯ ನೇಮದವರನಾರನೂ ಕಾಣೆ'

ದಾನ—'ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯಾ'

ಧರ್ಮ—'ದಯವಿಲ್ಲದ ಧರ್ಮವಾದೇವುದಯ್ಯಾ ?'
'ದಯದಿಂದ ಬಿಟ್ಟು ಧರ್ಮವಿಲ್ಲ'
'ಕೊಲ್ಲದಿರ್ಪುದೇ ಧರ್ಮ'

ಅಂದ ಚಂದ—'ಅಂಗವ ಅಂದ ಮಾಡಿಕೊಂಡು ತಿರುಗುವ ಭಂಗಗೇಡಿಗಳು ನೀವು ಕೇಳಿರೊ.

ಅಂಗಕ್ಕೆ ಅಂದವಾವುದೇನೆಂದರೆ,
ಗುರುವಿಗೆ ತನುವ ಕೊಟ್ಟಿರುವುದೇ ಚಂದ
ಲಿಂಗಕ್ಕೆ ಮನವ ಕೊಟ್ಟಿರುವುದೇ ಚಂದ
ಜಂಗಮಕ್ಕೆ ಧನವ ಕೊಟ್ಟಿರುವುದೇ ಚಂದ

ಅಷ್ಟಾವರಣದಲ್ಲಿ ನಿಬ್ಬೆರಗಿನಿಂದೆ ಕೂಡಿ,
ಭಕ್ತಿಯೆಂಬ ಸಮುದ್ರದಲ್ಲಿ ಈಸಾಡುವದೇ ಚಂದ
ಶಿವನ ಪಾದವ ಹೊಂದುವುದೇ ಚಂದ'

ಶೃಂಗಾರ–ಅಲಂಕಾರ—'ನಮ್ಮ ಕೂಡಲ ಸಂಗನ ಶರಣರಿಗೆ
ನೊಸಲ ವಿಭೂತಿಯೇ ಶೃಂಗಾರ'
'ಮಂಗಳವೇ ಮಜ್ಜನ, ವಿಭೂತಿಯೇ ಒಳುಗುಂದದರಿಸಿನ
ದಿಗಂಬರವೇ ದಿವ್ಯಾಂಬರ, ಶಿವಪಾದರೇಣುವೇ ಅನುಲೇಪನ
ರುದ್ರಾಕ್ಷಿಯೇ ಮೈದೊಡುಗೆ, ಶರಣಪಾದಂಗಳೇ ತೊಂಡಿಲಬಾಸಿಗ.

ಸಂಗ–ಸಹವಾಸ—'ಸಾರ, ಸಜ್ಜನರ ಸಂಗವ ಮಾಡುವುದು.

ದೂರ ದುರ್ಜನರ ಸಂಗ ಬೇಡವಯ್ಯಾ !
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ, ಕಾಳಕೂಟ ವಿಷ.'

ನೆರೆ–ಹೊರೆ – 'ದೂಷಕನವನೊಬ್ಬ ದೇಶವ ಕೊಟ್ಟರೆ,
ಆಸೆಮಾಡಿಯವನ ಹೊರೆಯಲಿರಬೇಡ.
ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ
ಭೃತ್ಯನಾಗಿರ್ಪುದು ಕರಲೇಸಯ್ಯಾ.'
'ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ,
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ!'

ಬಂಧು-ಬಳಗ—'ಶ್ರೀಗುರುವೆ ತಾಯಿತಂದೆ, ಲಿಂಗವೆ ಪತಿ, ಜಂಗಮವೆ ಅತ್ತೆ-
ಮಾವಂದಿರು. ಶಿವಭಕ್ತರೆ ಬಾಂಧವರು, ಸತ್ಯಸದಾಚಾರವೆಂಬ ಮನೆ—
ಶರಣಸತಿ.'

ನಂಬುವುದು—'ಶರಣರನೆ'

ಕೊಂಬುವುದು—'ಶರಣರ ಪ್ರಸಾದವನೆ'

ಕೊಡುವುದು—'ಶರಣರಿಗೆ'

ಉಡುವುದು—'ಶರಣರುಟ್ಟ ಮೈಲಿಗೆಯನೆ.'

'ಇಂತಪ್ಪ ಶರಣರ ಬರವು—ಎನ್ನ ಪ್ರಾಣದ ಬರವು
ಅವರ ಹೋತೆ-ಎನ್ನ ಪ್ರಾಣದ ಹೋತು,
ಇಂತಪ್ಪ ಶರಣರ ಸಂಗವ ಮಾಡಿದ ಕಾರಣ
ಏಕವಾಗಿ ಹೋದೆ ಅವರ ಪಾದದಲ್ಲಿ.'

ಉದ್ಯೋಗ—'ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,
ಚಿತ್ತಶುದ್ಧದಲ್ಲಿ ಕಾಯಂಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು.'

ಕಾಲಕ್ಷೇಪ—'ಸುಮ್ಮನೇಕೆ ದಿನ ಕಳೆವಿರಿ, ಸುಮ್ಮನೇಕೆ ಹೊತ್ತುಗಳೆವಿರಿ,'
ಮಾಡಬನ್ನಿ ದಿನ ಶಿವರಾತ್ರಿಯ, ಕೇಳಬನ್ನಿ ಶಿವಾನುಭವವ.

ಕನಸು—'ಚಿಕ್ಕಚಿಕ್ಕ ಜಡೆಗಳ ಸುಲಿಪಲ್ಲಗೊರವನು
ಭಿಕ್ಷಕ್ಕೆ ಬಂದುದ ಕಂಡೆನು.'

ಕೂಟ—'ಇಂಬಿನ ಚುಂಬನವಮೃತಾಹಾರ, ಆಲಿಂಗನವೇ ಆಭರಣ,
ಸೋಂಕೇ ಸುವಸ್ತ್ರ, ನೋಟವೇ ಕೂಟ, ಒಡನಾಟವೇ ಅಷ್ಟಭೋಗ.
ಉರಿಲಿಂಗದೇವನ ಕೂಟ ಪರಾತ್ಪರ, ವಾಙ್ಮನೋತೀತ, ಪರಮಸುಖ.

ನಿದ್ದೆ—'ಶರಣ ನಿದ್ರೆಗೆಯ್ದರೆ ಜಪ, ಕಾಣಿರೊ.'
'ಮಹಾಲಿಂಗ ಗಜೇಶ್ವರನನಗಲಿದಡೆ ನಿದ್ರೆಯೆಮಗಿಲ್ಲ.'

ಇವೇ ಮುಂತಾದ ನೂರಾರು ಸಹಸ್ರಾರು ಲಿಂಗನುಡಿಗಳಲ್ಲಿ ಶರಣರ ದಿವ್ಯಜೀವನದ ಭವ್ಯದರ್ಶನದ ಕಿಂಚಿತ್ ಪರಿಚಯವಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು. ಅಂತಹ ಜ್ಯೋತಿರ್ನುಡಿಗಳ ಬೆಳಕಿನಲ್ಲಿ ಮಾನವನು ತನ್ನ ಆತ್ಮೋದ್ಧಾರದ ಹಾದಿಯನ್ನು ಹಿಡಿದು ಮುನ್ನಡೆಯಬಹುದು !

ಕೂಡಿದ ಕೂಟ ......

ಚರಚರಾತ್ಮಕವಾದ ಇಡೀ ಬ್ರಹ್ಮಾಂಡವನ್ನೇ ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಇಷ್ಟಲಿಂಗ, ಜಗದಗಲ ಮುಗಿಲಗಲ ಮಿಗೆಯಗಲ ಆಗಿದ್ದೂ ಶ್ರೀ ಗುರುವಿನ ಕೃಪೆ

ಯಿಂದ ಶಿಷ್ಯನ ಕರಸ್ಥಳಕ್ಕೆ ಚುಳುಕಾಗಿ ಬಂದಿರುವ ಇಷ್ಟಲಿಂಗ-ಸಾಧಕನಿಗೆ ಅದಕ್ಕಿಂತ ಶ್ರೇಷ್ಠವಾದದ್ದು ಬೇರೊಂದಿಲ್ಲ. ಹೀಗಿರುವಾಗ ಅಂತಹ ಲಿಂಗವನ್ನು ನೆರೆನಂಬಿ ದೃಢ ಭಕ್ತಿಯಿಂದ ಪೂಜಿಸುವ ವ್ಯಕ್ತಿ ಪರಿಪೂರ್ಣ ಲಿಂಗಸ್ವರೂಪನೇ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ !

ಜ್ಯೋತಿ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ !
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ !
ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ !
ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ !
ಸಕಳೇಶ್ವರದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ !

ಲಿಂಗವನ್ನು ಹಿಡಿದು ಲಿಂಗದಲ್ಲೇ ನಡೆದು ಲಿಂಗವೇ ಆಗುವ ಸುಲಭಮಾರ್ಗವನ್ನು ಆಚರಣೆಗೆ ಅನುಕೂಲವಾದ ಸುಂದರ ಸರಳ ಸಿದ್ಧಾಂತವನ್ನು ವೀರಶೈವಧರ್ಮ ವಿಶ್ವಕ್ಕೆ ನೀಡಿ ವಿಶ್ವಧರ್ಮವೆನಿಸಿದೆ, ಅದು ಷಟ್‌ಸ್ಥಲಸಿದ್ಧಾಂತವೆಂದು ಅನಾದಿಯಿಂದಲೂ ಪ್ರಸಿದ್ಧವಾಗಿದೆ. ಷಟ್‌ಸ್ಥಲಗಳೆಂದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಹಂತಗಳು. ಜೀವನು ಶಿವನಾಗಲು ತನ್ನ ಸಾಧನೆಯ ಮಾರ್ಗದಲ್ಲಿ ಮೇಲೇರುವಾಗಿನ ಆರು ಮಜಲುಗಳು ಅವು. ಹನ್ನೆರಡನೆಯ ಶತಮಾನದ ಶರಣರು ಈ ಮಾರ್ಗದಲ್ಲಿ ನಡೆದು ತಮ್ಮ ತಮ್ಮ ಸಿದ್ಧಿಯನ್ನು ಸಾಧಿಸಿದುದರ ಜೊತೆಗೆ ಉಳಿದ ವರಿಗೂ ಈ ಹಾದಿಯನ್ನು ತೆರೆದಿಟ್ಟು ಹೆಚ್ಚು ವ್ಯಾಪಕಗೊಳಿಸಿದರು. ಅವರ ಸಾಧನೆ ಯನ್ನು ಕಂಡು ಸ್ಫೂರ್ತಿಗೊಂಡ ಬೇರೆಬೇರೆ ವರ್ಗದ ಸಾಧಕ ಜೀವಿಗಳು ಶರಣಮಾರ್ಗಕ್ಕೆ ಎಲ್ಲೆಡೆಯಿಂದ ಆಕರ್ಷಿತರಾದರು. ಅವರೆಲ್ಲರೂ ಷಟ್‌ಸ್ಥಲದ ಸಾಧನೆಗೆ ಮುಖ್ಯವಾಗಿ ಬೇಕಾದ ಅಷ್ಟಾವರಣ ಪಂಚಾಚಾರಗಳನ್ನು ಅಳವಡಿಸಿಕೊಂಡು ಲಿಂಗವಂತರಾದರು, ಶರಣ-ಶರಣೆಯರಾದರು. ಪೂಜಾಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಅಂದು ಲಭಿಸಿದುದರಿಂದ ಇಷ್ಟಲಿಂಗೋಪಾಸನೆಯ ಸಾಧನೆಯಿಂದಲೇ ಷಟ್‌ಸ್ಥಲಗಳನ್ನೇರಿ 'ಉರಿಕರ್ಪುರ'ದಂತೆ ಐಕ್ಯಸ್ಥಲದಲ್ಲಿ ಲಿಂಗಾಂಗಸಾಮರಸ್ಯವನ್ನು ಅನುಭವಿಸುವ ಅಪೂರ್ವ ಅವಕಾಶ ಎಲ್ಲರಿಗೂ ಅಂದು ದೊರೆಯಿತು.

ಅಂಗನು ಅಂದರೆ ಶ್ರೀಗುರುವಿನಿಂದ ದೀಕ್ಷಾ ಸಂಸ್ಕಾರವನ್ನು ಹೊಂದಿದ ಜೀವನು ಆ ಮೂಲಕ ಪಡೆದುಕೊಂಡ ಇಷ್ಟ-ಪ್ರಾಣ-ಭಾವಲಿಂಗಗಳನ್ನು ಸ್ಥೂಲ-ಸೂಕ್ಷ್ಮ-ಕಾರಣ ತನುಗಳಲ್ಲಿ ಧರಿಸಿ ತನ್ನ ಸಾಧನೆಯನ್ನು ಪ್ರಾರಂಭಿಸುತ್ತಾನೆ. ಅವನು ತನ್ನ ಪ್ರಾಣಾಂತ ರ್ಗತವಾದ ಮೂಲಚೈತನ್ಯದ ಕುರುಹಾದ ಇಷ್ಟಲಿಂಗವನ್ನು ಪ್ರಾಣದಂತೆ ಸದಾ ಧರಿ ಸಿರುವುದು ಅಗತ್ಯವಾಗಿದೆ. ಇದನ್ನು ಶ್ರೀ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ವಚನದಲ್ಲಿ ಹೀಗೆ ವ್ಯಕ್ತಪಡಿಸಿರುವರು :

ಎನ್ನ ಪ್ರಾಣದೊಳಗೆ ಹೊಳಿರ್ದ ಪರಮ ಕಳೆಯ ತೆಗೆದು
ಶಿವಲಿಂಗ ಮೂರ್ತಿಯ ಮಾಡಿ
ಎನ್ನಕರಸ್ಥಲಕ್ಕೆ ಕೊಟ್ಟನಯ್ಯಾ ಶ್ರೀಗುರು
ಆ ಲಿಂಗವು ಸರ್ವಾವಸ್ಥೆಯಲ್ಲಿಯೂ ಅಂಗವ ಬಿಟ್ಟು ಅಗಲಲಾಗದೆಂ
ಎಂದು ನಿರೂಪಿಸಿದನಯ್ಯಾ ಶ್ರೀಗುರು
ಇದು ಕಾರಣ, ಅಂಗವ ಬಿಟ್ಟು ಲಿಂಗ ನಿಮಿಷಾರ್ಧವಗಲಿದಡೆ
ನಾಯಕನರಕ ತಪ್ಪದಯ್ಯಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ
ಪ್ರಭುವೇ !

ಇಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದು. ಇಷ್ಟಲಿಂಗದ ಆವಶ್ಯಕತೆಯೇನು ? ಎಲ್ಲೆಲ್ಲಿಯೂ ಶಿವನು ಇರುವಾಗ, ಆ ಅರಿವು ನನಗಿರುವಾಗ ಇದರ ಧಾರಣ-ಉಪಾಸನೆಗಳ ಅಗತ್ಯವೇನು ? ಅದಕ್ಕೆ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ವಚನವೊಂದು ಹೀಗೆ ಉತ್ತರಿಸುತ್ತದೆ.

ಭಾವ ಮನಕ್ಕೆ ಲಿಂಗವ ಧರಿಸಿ
ಕಾಯಕ್ಕೆ ಲಿಂಗವಿಲ್ಲದಿರಬಹುದೇ ?
ಎರಡಂಗ ಭಕ್ತರಾಗಿ ಒಂದಂಗ ಭವಿಯಾಗಿಪ್ಪ
ಭ್ರಾಂತರ ಮುಖವ ನೋಡಲಾಗದು
ತನು ಮನ ಭಾವಗಳಲ್ಲಿ ಲಿಂಗವ ಧರಿಸಿ
ಲಿಂಗತ್ರಯಕ್ಕೆ ಅಂಗತ್ರಯಕ್ಕೆ ಅಗಲಿಕೆಯಿಲ್ಲದೆ
ಅಚಲಿತನಾಗಿರ್ದನಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ !

ಪೂಜೆ ಏಕೆ ಬೇಕು ಎನ್ನುವುದಕ್ಕೆ ಗೊಗ್ಗವ್ವೆಯ ಉತ್ತರ ಹೀಗಿದೆ.

ಉದ್ದವನೇರುವದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು
ಚಿದ್ರೂಪನನರಿವುದಕ್ಕೆ ಪೂಜೆ ಅರ್ಚನೆ ನಿತ್ಯನೇಮವಿಲ್ಲದೆ ಕಾಣಬಾರದು.
ಅದನ್ನು ಸತ್ಯದಿಂದ ಮಾಡಿ ಅಸತ್ಯವ ಮರೆದಡೆ
ಇದೇ ಸತ್ಯ ನಾಸ್ತಿನಾಥಾ

ಒಂದು ಎತ್ತರವಾದ ಸ್ಥಳ (ಅಟ್ಟ) ವನ್ನು ಮುಟ್ಟಲಿಕ್ಕೆ ಹೇಗೆ ಒಂದು ಗದ್ದುಗೆ (ಏಣಿ) ಯು ಅವಶ್ಯವೋ ಹಾಗೆ ಪರಮಾತ್ಮನನ್ನು ಮುಟ್ಟಲು ಪೂಜೆ, ಅರ್ಚನೆ, ನಿತ್ಯನೇಮಗಳು, ಎಂದಿದ್ದಾಳೆ.

'ಲಿಂಗವ ಹಿಡಿದಿದ್ದಲ್ಲಿ ಪೂಜಿಸುವ ಅಂಗವಿರಬೇಕು'–ಆದ್ದರಿಂದ ಅಂಗನು ತನ್ನಲ್ಲಿರುವ ಭಕ್ತಿಯನ್ನು ಬೆಳೆಸಿಕೊಂಡು 'ಶರಣಸತಿ-ಲಿಂಗಪತಿ' ಭಾವದಿಂದ ಷಟ್‌ಸ್ಥಲ

ಗಳನ್ನೂ ಸಾಧಿಸಬೇಕು. ಭಕ್ತಿಯ ವಿಕಾಸವೇ ಷಟ್‌ಸ್ಥಲದ ಸಾಧನೆಯ ಸಾರಸರ್ವಸ್ವ ವಾಗಿದೆ.

> ವಿಶ್ವಾಸದಿಂದ ಭಕ್ತನಾಗಿ
> ಆ ವಿಶ್ವಾಸದೊಳಗಿನ ನಿಷ್ಠೆಯಿಂದ ಮಹೇಶನಾಗಿ
> ಆ ನಿಷ್ಠೆಯೊಳಗಿನ ಅವಧಾನದಿಂದ ಪ್ರಸಾದಿಯಾಗಿ
> ಆ ಅವಧಾನದೊಳಗಿನ ಅನುಭಾವದಿಂದ ಪ್ರಾಣಲಿಂಗಿಯಾಗಿ
> ಆ ಅನುಭಾವದೊಳಗಿನ ಆನಂದದಿಂದ ಶರಣನಾಗಿ
> ಆ ಆನಂದದೊಳಗಿನ ಸಮರಸದಿಂದೈಕ್ಯನಾದೆನು
> ಕಾಣಾ, ಗೊಹೇಶ್ವರಾ

ಹೀಗೆ ಸಾಧನೆಯ ಪ್ರಥಮ ಸೋಪಾನವಾದ ಭಕ್ತಸ್ಥಲದಿಂದ ಪ್ರಾರಂಭಿಸಿ ತನ್ನಲ್ಲಿ ಅಂತರ್ಗತವಾದ ಭಕ್ತಿಯನ್ನು ವಿಕಾಸಗೊಳಿಸುತ್ತ ಮೇಲೇರಿ ಐಕ್ಯಸ್ಥಲದ ಸಮರಸದ ಆನಂದವನ್ನು ಅನುಭವಿಸುವುದೇ ಜೀವನದ ಪರಮಗುರಿ. 'ಬೆಳಗಿಂಗೆ ಬೆಳಗು ಸಿಂಹಾಸನ ವಾಗಿ ಬೆಳಗು ಮಹಾಬೆಳಗ ಕೂಡಿದ ಕೂಟದ ಸುಖವ ಕೂಡಲಸಂಗಯ್ಯನಲ್ಲಿ ಕಂಡು' ತಾನೇ ತಾನಾಗುವುದು.ಅದರ ವಿಶಿಷ್ಟ ಪರಿ. ಕಾಷ್ಠ ಅಗ್ನಿಯ ಕೂಡಿ ಅಗ್ನಿಯಾಗುವಂತೆ ಸದ್ಭಕ್ತನು ಲಿಂಗವ ಕೂಡಿ ಲಿಂಗವಾಗುವುದು ಅದರ ಅನುಪಮ ಸಿರಿ. ಅದನ್ನೇ ಶಿವ ಯೋಗವೆಂದು ಹಾಡಿ ಹೊಗಳಿರುವುದು.

> ತನುವ ಮಹಗುರುವಿಂಗೆ–ಮನವ ಘನಲಿಂಗಕ್ಕೆ
> ಮನಶುದ್ಧದಿಂದ ಧನವ ಜಂಗಮಕಿತ್ತ
> ಅನಘನಿಗೆ ಉಂಟು ಶಿವಯೋಗ ॥
>
> ಅಂಗಲಿಂಗದ ಭೇದದಿಂಗಿತವ ನೆರೆತಿಳಿದು
> ಮಾಂಗಲ್ಯನಾಗಿ ನಿರವಯದಿ ಮನನಿಂದ
> ಲಿಂಗೈಕ್ಯಗುಂಟು ಶಿವಯೋಗ ॥
>
> ಜೀವಭಾವವ ತೊರೆದು–ದೇವರದೇವನನು
> ಸಾವಧಾನದೊಳು ಭಜಿಸುವ ಮಹಿಮನಿಗೆ
> ಆವಾಗಲುಂಟು ಶಿವಯೋಗ[1] ॥

ಬಸವಣ್ಣನವರು ತಾವು ಕಂಡುಂಡು ಅನುಭವಿಸಿದ ಸಮರಸಾನಂದದ ಸ್ವಾನುಭವವನ್ನು ಮಾತು-ಮನಗಳಿಗೆ ಮೀರಿದ ಆ ಭವ್ಯ ನಿಲುವನ್ನು ತಮ್ಮ ಅಮೃತವಾಣಿಯಲ್ಲಿ ಹಿಡಿದು ಕೊಟ್ಟಿರುವ ಬಗೆಯಂತೂ ಅದ್ಭುತವಾಗಿದೆ.

———

1 —ಶಿವಯೋಗಾಚರಣೆ ತ್ರಿವಿಧಿ (ಶಿವಾನುಭವ ೧-೪)

ಕಣ್ಗಳಂ ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲಸಂಗಮದೇವನ !

ಎಲ್ಲ ನದಿಗಳೂ ತಂತಮ್ಮ ನಾಮ-ರೂಪಗಳನ್ನು ತ್ಯಜಿಸಿ ಸಮುದ್ರವನ್ನು ಸೇರಿ ಸಮುದ್ರವೇ ತಾವಾಗುವಂತೆ ಭಕ್ತಿ. ಜ್ಞಾನ, ಕ್ರಿಯೆಗಳ ವಿಕಾಸದಿಂದ ಷಟ್‌ಸ್ಥಲ ಮಾರ್ಗದಲ್ಲಿ ಮೇಲೇರಿದ ಅಂಗನು ಲಿಂಗನನ್ನೇ ಸೇರಿ ಲಿಂಗನಾಗುವನು. ಇಂತಹ ಲಿಂಗಾಂಗಸಾಮರಸ್ಯಕ್ಕೆ ವೀರಶೈವಾಚರಣೆಯೇ ಸುಲಭೋಪಾಯವೆಂದು ಸಾರುವುದರ ಮೂಲಕ ಮತ್ತು ಆಚರಿಸಿ ತೋರುವುದರ ಮೂಲಕ 'ಸರ್ವವರ್ಣಾನಾಂ ಲಿಂಗ ಧಾರಣಂ' ಎಂದು ಬಂದ ಭಕ್ತರೆಲ್ಲರಿಗೂ ಮುಕ್ತಿಯನ್ನೀಯುವ ವೀರಶೈವ ಶಿವಾನುಭವ ಮಂಟಪದ ಮಹಾದ್ವಾರವನ್ನು ತೆರೆದಿಟ್ಟದ್ದು ಎಂದೆಂದೂ ಮರೆಯಲಾಗದ ಒಂದು ಮಹಾಕ್ರಾಂತಿ !

ಮನುಕುಲದ ಉದ್ಧಾರಕ್ಕಾಗಿ ಮರ್ತ್ಯಕ್ಕೆ ಅವತರಿಸಿ ಬಂದ ಮಹಾನುಭಾವ ರಾದ ಶಿವಶರಣ-ಶರಣೆಯರು ನಡೆದ ದಾರಿ, ನುಡಿದ ವಾಣಿ, ಸಾಧಿಸಿದ ಸಿದ್ಧಿ, ಏರಿದ ಎತ್ತರ, ನಿಂತ ನಿಲುವು, ಚೆಲ್ಲಿದ ಬೆಳಕು, ಬೀರಿದ ಸಂದೇಶ—ಇವು ಈಗಾಗಲೆ ಎಂಟು ಶತಮಾನಗಳು ಉರುಳಿ ಹೋಗಿದ್ದರೂ ಸ್ವಲ್ಪವೂ ಮಾಸದೆ ಮಸುಳಿಸದೆ ಜಳ್ಳಾಗದೆ ಪೊಳ್ಳಾಗದೆ ಸುಳ್ಳಾಗದೆ ಗಟ್ಟಿಯಾಗಿ ತಿರುಳಾಗಿ ಭದ್ರವಾಗಿ ಅಮರವಾಗಿ ಬೇರೂರಿ ನಿಂತಿವೆ. ಇಂದು ಇಡೀ ಮಾನವಲೋಕವನ್ನೇ ಅಲ್ಲೋಲಕಲ್ಲೋಲಗೊಳಿಸಿ ಬೆಂಬಿಡದೆ ಕಾಡುತ್ತಿರುವ ಭಯಂಕರವಾದ ನಾನಾ ಸಮಸ್ಯೆಗಳ ನಿವಾರಣೆಗೆ ತಕ್ಕ ಮಾರ್ಗೋ ಪಾಯಗಳನ್ನು ಘನವಾದ ಸಿದ್ಧೌಷಧಗಳನ್ನು, ದಿವ್ಯಚಿಕಿತ್ಸೆಗಳನ್ನು ತಾರಕಮಂತ್ರ ಗಳನ್ನು ಮಹಾನುಭಾವರಾದ ಕಲ್ಯಾಣದ ಶರಣರ ಉದಾತ್ತವಾದ ನಡೆ-ನುಡಿಗಳಲ್ಲಿ, ಅವರ ಜೀವನದ ಸಕಲ ಆಚರಣೆಗಳಲ್ಲಿ, ಸಮರಸದ ಸಮನ್ವಯದ ತಾತ್ವಿಕ ವಿಚಾರ ಗಳಲ್ಲಿ ಕಂಡುಂಡು ನಾವು ಇಂದು ಕೃತಾರ್ಥರಾಗಬಹುದಾಗಿದೆ; ತಿಂದುಂಡು ತೃಪ್ತರಾಗ ಬಹುದಾಗಿದೆ. ಶ್ರವಣ-ಮನನ-ನಿದಿಧ್ಯಾಸಗಳಿಂದ ಧನ್ಯರಾಗಬಹುದಾಗಿದೆ. ಮಾನ್ಯ ರಾಗಬಹುದಾಗಿದೆ.

ನಿತ್ಯ ಲಿಂಗಾರ್ಚನೆಯುಂ ನಿತ್ಯ ಭಕ್ತರಸೇವೆ
ನಿತ್ಯ ಗುರುಭಜನೆಯುಂ ಸನ್ನಿಹಿತನಾಗಿ
ನಿತ್ಯ ಚರಲಿಂಗ ಪ್ರಸಾದವನುಂ ಕೊಂಬ ಸುಖ
ವ್ಯರ್ಥಕಾಯರಿಗುಂಟೆ ಯೋಗಿನಾಥಾ॥

—ಶರಣತತ್ವಂ ಗೆಲ್ಗೆ—

'ದೇವರು'

ಡಾ. ಡಿ. ಎಲ್. ಪಾಟೀಲ್

"ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂಚಿದ್ದಿತ್ತು
ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು
ನನೆಯೊಳಗಣ ಪರಿಮಳದಂತೆ ಇದ್ದಿತ್ತು
ಕೂಡಲ ಸಂಗಮ ದೇವರ ನಿಲವು
ಕನ್ನೆಯ ಸ್ನೇಹದಂತಿದ್ದಿತ್ತು."

ದೇವರು, ಈಶ್ವರ ಕಲ್ಪನೆ ಅಥವಾ ಸಿದ್ಧಾಂತವು ಮಾನವನ ಇತಿಹಾಸದ ಒಂದು ಅವಿಭಾಜ್ಯ ಅಂಗವಾಗಿ ಅಳಿಯದೇ ಉಳಿದುಕೊಂಡು ಬಂದಿದೆ. ಆಸ್ತಿಕರಿಗೆ ಇದೊಂದು ಮಹತ್ವದ ಅಂಶವೆಂದು ಹೇಳಬಹುದು. ದೇವರು, ಈಶ್ವರ ಮತ್ತು ಅವನನ್ನು ಕುರಿತ ಕಲ್ಪನೆಗಳು ಮತ್ತು ಸಿದ್ಧಾಂತಗಳು ಮಾನವನ ನಾಗರಿಕತೆಗೆ ಮತ್ತು ಅವನ ಮೌಲ್ಯಗಳಿಗೆ ಪ್ರೇರಕ ಶಕ್ತಿಗಳಾಗಿವೆ. ಮತಧರ್ಮಗಳಲ್ಲಿ ಒಂದೆರಡನ್ನು ಹೊರತು ಪಡಿಸಿ ಎಲ್ಲವೂ ಒಂದಿಲ್ಲೊಂದು ರೂಪದಲ್ಲಿ ಅಥವಾ ಕಲ್ಪನೆಯಲ್ಲಿ ಈಶ್ವರನ ಅಸ್ತಿತ್ವ ಮತ್ತು ಅನಿವಾರ್ಯತೆಯನ್ನು ಒಪ್ಪಿಕೊಂಡಿವೆ ಮತಧರ್ಮಗಳು ಜನಿಸಿದ್ದು ಬಹು ಮುಖ್ಯವಾಗಿ ಈಶ್ವರನ ಅಸ್ತಿತ್ವ ಮತ್ತು ಅವನ ಅಸಾಮಾನ್ಯ ಸ್ವರೂಪಗಳನ್ನು ಜನ ಸಾಮಾನ್ಯರಿಗೆ ಬೋಧಿಸುವುದಕ್ಕಾಗಿಯೇ ಎಂದು ಹೇಳಬಹುದು. ಆದರೆ ಮತಧರ್ಮಗಳು ಈಶ್ವರ ಕಲ್ಪನೆಯನ್ನು ಏಕ ರೀತಿಯಲ್ಲಿ ಮಾಡಿಲ್ಲ. ಈಶ್ವರನ ಸ್ವರೂಪ ಮತ್ತು ಲಕ್ಷಣಗಳು ಅದ್ಭುತ, ಅಗಾಧ, ಮತ್ತು ಅನಂತ. ಹೀಗಿರುವಾಗ ಈಶ್ವರನ ಸ್ವರೂಪ ಕುರಿತ ಸಿದ್ಧಾಂತಗಳಲ್ಲಿ ಭಿನ್ನತೆ ಸಹಜ. ಭಾರತೀಯ ದರ್ಶನಗಳಲ್ಲಿಯೂ ಇದೇ ವೈವಿಧ್ಯ ಮತ್ತು ಭಿನ್ನತೆ ಭಾರತದ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಅಂತಹ ಅನೇಕ ದರ್ಶನ—ಸಿದ್ಧಾಂತಗಳಲ್ಲಿ ವೀರಶೈವ ಧರ್ಮ ಅಥವಾ ದರ್ಶನವೂ ಒಂದು. ವೀರಶೈವ ಮತಧರ್ಮದಲ್ಲಿ ಅಭಿವ್ಯಕ್ತವಾಗಿ ಅರಳಿರುವ ಈಶ್ವರನ ಕಲ್ಪನೆ ಅಥವಾ ದೇವರ ನಿಲವನ್ನು ಸಂಕ್ಷಿಪ್ತವಾಗಿ ವಿವರಿಸುವುದು ಈ ಚಿಕ್ಕ ಲೇಖನದ ಉದ್ದೇಶ.

ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಂಡಾಗ ಹುಟ್ಟುವ ಮೂಲಭೂತ ಪ್ರಶ್ನೆಯೆಂದರೆ ಈಶ್ವರನ ಸ್ವರೂಪ ಎಂತಹುದು ಅಥವಾ ಅವನ ಮುಖ್ಯ ಲಕ್ಷಣಗಳಾವುವು ? ಎಂಬುದು. ಇದಕ್ಕೇ ಸಂಬಂಧಿಸಿದ ಇನ್ನೊಂದು ಪ್ರಶ್ನೆಯೆಂದರೆ ಈಶ್ವರ—ಈಶ್ವರನಾಗಿ ಏನೇನನ್ನು ಮಾಡುತ್ತಾನೆ ? ಎಂಬುದು. ದೇವರನ್ನ ಪರವಸ್ತು, ಪರಬ್ರಹ್ಮ

ಅಥವಾ ಪರಮಾತ್ಮ ಎಂದು ಕರೆದಿರುವುದರಲ್ಲಿ ಅಥವಾ ವರ್ಣಿಸಿದುದರಲ್ಲಿ ವಿಶೇಷವಾದ ಅರ್ಥವಡಗಿದೆ, ದೇವರು ವರ್ಣನಾತೀತನು, ನಿಜ. ಏಕೆಂದರೆ ಯಾವ ಮನಸ್ಸಿನಿಂದ, ಯಾವ ಬುದ್ಧಿಯಿಂದ, ಅಥವಾ ಶಾಬ್ದಿಕ ಚತುರತೆಯಿಂದ ದೇವರನ್ನು ವರ್ಣಿಸಲು ನಾವು ಹೊರಡುವೆವೋ ಅವೆಲ್ಲ ಆತನ ಸ್ವರೂಪವನ್ನು ಪೂರ್ಣವಾಗಿ ವರ್ಣಿಸಲು ಅಸಮರ್ಥವಾಗುತ್ತವೆ. ಗುಣಾತ್ಮಕವಾದುದನ್ನು ಅಥವಾ ಪಂಚಮಹಾಭೂತ ಗಳಿಂದಾದುದನ್ನು ವರ್ಣಿಸಬಹುದು, ಹೆಸರಿನಿಂದ ಕರೆಯಬಹುದು. ಆದರೆ ಪರವಸ್ತು ಅಥವಾ ಪರಶಿವ ಎಂಬುದು ತ್ರಿಗುಣಾತೀತ, ಪಂಚಮಹಾಭೂತಗಳಿಗಿಂತ ಸಂಪೂರ್ಣ ವಿಭಿನ್ನ. ದೈವವನ್ನು ಪರವಸ್ತು ಪರಬ್ರಹ್ಮ ಅಥವಾ ಪರಮಾತ್ಮವೆಂದು ಕರೆಯುವುದೇ ತಪ್ಪೆ ? ಇಲ್ಲ. ಏಕೆಂದರೆ ಆ ದೇವ ಎಷ್ಟೇ ಅತೀತನಾದರೂ, ಅವರ್ಣ ನೀಯನಾದರೂ ಅನುಭಾವಕ್ಕೆ ನಿಲುಕುವಂತಹದು, ಲೋಕದ ಮಾನವರಿಗೆ ಬಲುದೂರ, ಆದರೆ ಅನುಭಾವಿಗಳಿಗೆ ಅತಿ ಹತ್ತಿರ. ಅನುಭಾವಿಗಳು ದೇವರನ್ನು ಪರವಸ್ತು, ಪರಬ್ರಹ್ಮ, ಪರಶಿವ, ಪರಮಾತ್ಮ ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ.

ದೇವರನ್ನು ಪರವಸ್ತು, ನಿರಂಜನ, ನಿರ್ವಯಲು, ಪರಂಜ್ಯೋತಿ, ಪರಶಿವ ಎಂದು ಅನುಭಾವಿಗಳು ತಮ್ಮ ವಚನಗಳಲ್ಲಿ ವರ್ಣಿಸಿರುವುದು ತಾತ್ವಿಕ ದೃಷ್ಟಿಯಿಂದ ಸರಿ ಯಾಗಿದೆ. ಯಾವುದು ಸಾಮಾನ್ಯ ವಸ್ತುವಿನಂತಲ್ಲವೋ ಅದೇ ಪರವಸ್ತು, ಪರತತ್ವ. ಸಾಮಾನ್ಯ ವಸ್ತುಗಳ ಸ್ವರೂಪ ಹೇಗಿದೆ ಎಂಬುದನ್ನು ಸ್ವಲ್ಪ ಪರಾಮರ್ಶಿಸಿ ನೋಡಿ ದಾಗ ಸಾಮಾನ್ಯ ವಸ್ತು ಗುಣಾತ್ಮಕವಾಗಿದೆ. ಅಂದರೆ ಅದರಲ್ಲಿ ಗುಣಗಳಿವೆ, ಅದು ಹಸಿರಾಗಿರಬಹುದು, ನೀಲಿಯಾಗಿರಬಹುದು, ಸಿಹಿಯಾಗಿರಬಹುದು, (ಸಕ್ಕರೆಯಂತೆ) ಅಥವಾ ಕಹಿಯಾಗಿರಬಹುದು (ಹಾಗಲಕಾಯಿಯಂತೆ) ಸಾಮಾನ್ಯ ವಸ್ತು ಆಕಾರಾತ್ಮಕ ವಾಗಿದೆ. ಅದಕ್ಕೊಂದು ರೂಪ ಇದೆ. ಆ ರೂಪ ಹಸುವಿನದಾಗಿರಬಹುದು ಅಥವಾ ಮನುಷ್ಯ ರೂಪವಾಗಿರಬಹುದು. ಯಾವುದೇ ಒಂದು ರೂಪ ಅಥವಾ ಆಕಾರವಿಲ್ಲದ ವಸ್ತು ಈ ಭವಪ್ರಪಂಚದಲ್ಲಿ ಸಾಮಾನ್ಯವಾಗಿ ಇಲ್ಲ. ಪರವಸ್ತು ಅಥವಾ ಪರಮಾತ್ಮ ಕಾಲಾತೀತನಾದರೆ ಸಾಮಾನ್ಯ ವಸ್ತುಗಳು ಕಾಲದ ಮಹಿಮೆಗೆ ಅಧೀನವಾಗಿವೆ. ತ್ರಿಕಾಲ ಗಳಲ್ಲಿಯೂ (ಭೂತ, ವರ್ತಮಾನ ಮತ್ತು ಭವಿಷ್ಯ) ಅವು ಅಸ್ತಿತ್ವದಲ್ಲಿ ಇರಲಾರವು. ಇನ್ನು ಕಾಲಾತೀತಗಳಾಗಿರುವುದಂತೂ ಸಾಧ್ಯವೇ ಇಲ್ಲ. ಪರವಸ್ತು ಅಥವಾ ದೇವರು ತ್ರಿಕಾಲಾತೀತ, ಯಾವ ಭೌತಿಕ, ಮಾನಸಿಕ ಅಥವಾ ಬೌದ್ಧಿಕ ಉಪಾಧಿಗಳಿಗೆ ಬದ್ಧ ನಾಗದೇ ಇರುವುದರಿಂದ ದೇವರನ್ನು ನಿರಪೇಕ್ಷ, ನಿರ್ವಯಲು, ಬಯಲು, ಶೂನ್ಯ ಎಂದು ವಚನಕಾರರು ಹೇಳಿದ್ದು ಅರ್ಥಪೂರ್ಣವಾಗಿದೆ,

"ಅಂತರವಿಲ್ಲದೆಂದು ಬಾಹ್ಯವಿಲ್ಲದಂದು
ಅಡಿಮುಡಿ ಒಡಲು ಮತ್ತೊಂದು ಏನೂ ಇಲ್ಲದಂದು !
ದಶದಿಕ್ಕುಗಳು ವಿಶ್ವ ಪ್ರಪಂಚಗಳು ಏನೂ ಇಲ್ಲದಂದು

ಸ್ಥಾವರಾತ್ಮಕಂಗಳಿಗೆ ಆಧಾರ ಕರ್ತ ಎಂಬ ನಾಮಂಗಳೇನೂ ಇಲ್ಲದಂದು
ಸರ್ವಶೂನ್ಯನಿರಾಲಂಬನಾಗಿರ್ದೆಯಲ್ಲ
ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ

ಈ ವಚನದಲ್ಲಿ ಸಿದ್ಧಲಿಂಗೇಶ್ವರರು ಪರವಸ್ತುವನ್ನು "ಸರ್ವಶೂನ್ಯ ನಿರಾಲಂಬನಾಗಿ ರ್ದೆಯಲ್ಲ" ಎಂದು ವರ್ಣಿಸಿರುವುದು ಅತ್ಯಂತ ನೈಜವಾಗಿದೆ. ಭವ ಅಥವಾ ಸಂಸಾರ ದಲ್ಲಿ ನಿರಾಲಂಬವಾದುದೇನಾದರೂ ಉಂಟೆ ? ಪರಸ್ಪರಾವಲಂಬನೆ, ಪರಸ್ಪರಾಪೇಕ್ಷೆಯೆ ಈ ಪಿಂಡಾಂಡ ಮತ್ತು ಭೌತಿಕ ವಿಶ್ವದ ಮೂಲಭೂತ ಸ್ವರೂಪ. ಆದ್ದರಿಂದ ದೇವರು ಭವಪ್ರಪಂಚದಿಂದ ಮತ್ತು ಸಾಮಾನ್ಯ ವಸ್ತುಗಳಿಗಿಂತ ಭಿನ್ನ ಎಂದು ತೋರಿ ಸುವುದಕ್ಕೋಸ್ಕರವಾಗಿ ಅವನನ್ನು ಪರವಸ್ತು, ಪರಮಾತ್ಮ ಎಂದು ಕರೆದದ್ದು, ದೇವರ ಸರ್ವಶೂನ್ಯತೆ ನಿರಾಲಂಬತೆಗಳು ಅವನ ಮೂಲ ಶುದ್ಧ ಸಹಜ ಸ್ಥಿತಿಯನ್ನು ಅಭಿವ್ಯಕ್ತಿ ಸುತ್ತವೆ.

ದೇವರು ಅಥವಾ ಪರವಸ್ತು ಅನುಭವಾತೀತ, ಆದರೆ ಅನುಭಾವಾತೀತವಲ್ಲ ! ಅವನು ಅತೀತನಾದರೂ, ನಿರವಯಲಾದರೂ, ನಿರಂಜನನಾದರೂ, ಅನುಭಾವಿಗಳಾದ ವಚನಕಾರರು ಶಿವಶರಣರು ದೇವರ ಅಸ್ತಿತ್ವದ ರಹಸ್ಯವನ್ನು, ಅವನ ಸ್ವರೂಪದ ನಿಗೂ ಢತೆಯನ್ನು ಅರಿತಿದ್ದಾರೆ. ಉಪನಿಷತ್ತುಗಳ ಋಷಿಗಳಂತೆ ಪರವಸ್ತುವನ್ನು ವಿರುದ್ಧಾ ತ್ಮಕಗಳಂತೆ ತೋರುವ ಹೇಳಿಕೆಗಳಲ್ಲಿ, ಉದ್ಗಾರಗಳಲ್ಲಿ ವರ್ಣಿಸಿದ್ದಾರೆ. ಪರವಸ್ತು ವನ್ನು ಕುರಿತ ಅವರ ಹೇಳಿಕೆಗಳಲ್ಲಿ, ಉದ್ಗಾರಗಳಲ್ಲಿ ಈ ಒಂದು ವೈಶಿಷ್ಟ್ಯ ಕಾಣು ತ್ತದೆ. ಸಾಮಾನ್ಯವಾಗಿ ಕೆಲವು ಅನುಭಾವಿಗಳ ಪ್ರಕಾರ ದೇವರು ನಿರಾಕಾರ ಪರಿಪೂರ್ಣ. ಆದರೆ ಅಲ್ಲಮ ಪ್ರಭುವಿನಂಥ ಅನುಭಾವಿಗೆ ದೇವರು ನಿರಾಕಾರನೂ ಅಲ್ಲ, ಪರಿ ಪೂರ್ಣನೂ ಅಲ್ಲ. ಅವನು ನಿರ್ವಯಲು.

" ಆದಿ ಅನಾದಿ ಇಲ್ಲದಂದು
ಹಮ್ಮುಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು
ಶೂನ್ಯ ನಿಶ್ಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರಾ ಇದ್ದೆಯಲ್ಲ
ನೀನೊಬ್ಬನೇ ಇದ್ದೂ ಇಲ್ಲದಂತೆ

"ಇದ್ದೆಯಲ್ಲ, ಇಲ್ಲದಂತೆ", "ಶೂನ್ಯ ನಿಶ್ಶೂನ್ಯವಿಲ್ಲದಂದು", "ನಿನ್ನ ನೀನೇ ಬೆಳಗು ತ್ತಿದ್ದೆಯಲ್ಲ" ಎಂಬ ವಿರುದ್ಧಾತ್ಮಕಗಳಂತೆ (contradictions) ತೋರುವ ಉಕ್ತಿ ಗಳಿಂದ ಪರವಸ್ತುವಿನ ನೈಜಸ್ವರೂಪವನ್ನು ಗ್ರಹಿಸಿ ಮಾತಿನಲ್ಲಿ ಹಿಡಿದಿದ್ದಾರೆ."

"ನೋಡಬಾರದ ಬೆಳಗಂ
ಕೊಡಬಾರದ ಮೂರ್ತಿ
ಅಖಂಡ ಅಪ್ರತಿಮ ಗುಹೇಶ್ವರ ಲಿಂಗದ ಬೆಳಗಿನ ಮೂಲವ
•ಲಿಂಗಸಂಗಿಗಳಲ್ಲದೆ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರಂ"

ಎಂದು ಹೇಳಿ, ಪರ ವಸ್ತುವಿನ ಮೂಲಭೂತ ಆಧ್ಯಾತ್ಮಿಕ ರಹಸ್ಯವನ್ನು ಭೇದಿಸಿದ್ದಾರೆ.

ದೇವರ, ಪರವಸ್ತುವಿನ ಮೂಲ ರಹಸ್ಯವನ್ನು ಭೇದಿಸಿ ತಮ್ಮ ಸರಳ ವಚನಗಳಲ್ಲಿ ಅದರ ಆಳ ನಿರಾಳಗಳನ್ನು ನಮಗೆ ತಿಳಿಸಿದ್ದಾರೆ. ದೇವರ ಸ್ವರೂಪ (ಇನ್ನೊಂದು) ಅಂದರೆ, ಅವನ ಸರ್ವಾಂತರ್ಯಾಮಿಸ್ವರೂಪದ ಪರಿಚಯ ಮಾಡಿಸಿದ್ದಾರೆ. ದೇವರು ಅತೀತನೂ ಹೌದು, ಅಂತರ್ಯಾಮಿಯೂ ಹೌದು. ಹೇಗೆ? ವೀರಶೈವ ಅನುಭಾವಿಗಳು ಮನಮುಟ್ಟುವಂತೆ ಎಂತಹವರಿಗೂ ಖಚಿತವಾಗುವಂತೆ ದೇವರ ಸರ್ವವ್ಯಾಪಿತ್ವ ಮತ್ತು ಸರ್ವಾಂತರ್ಯಾಮಿತ್ವಗಳನ್ನು ತಮ್ಮ ಕೆಲವು ವಿಶಿಷ್ಟ ವಚನಗಳಲ್ಲಿ ವಿವರಿಸಿದ್ದಾರೆ. ಈ ದಿಸೆಯಲ್ಲಿ ಕೆಳಗಿನ ವಚನಗಳಂ ಮಹತ್ವದ್ದಾಗಿವೆ.

ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನ ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದೆನ್ನೈ ರಾಮನಾಥಾ."
"ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರಾ, ನಿಮ್ಮ ಶರಣ ಸಂಬಂಧ."
"ನೆಲದ ಮರೆಯ ನಿಧಾನದಂತೆ
ಮುಗಿಲ ಮರೆಯಲಡಗಿರ್ದ ಮಿಂಚಿನಂತೆ
ಬಯಲ ಮರೆಯಲಡಗಿರ್ದ ಮರೀಚಿಯಂತೆ
ಕಂಗಳ ಮರೆಯಲಡಗಿರ್ದ ಬೆಳಗಿನಂತೆ
ಗುಹೇಶ್ವರಾ, ನಿಮ್ಮ ನಿಲವು."

ದೇವರ ಸರ್ವವ್ಯಾಪಿತ್ವವನ್ನು ವಿವರಿಸುವ ಬಗೆ ನೋಡಿ :

"ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ
ಪಿಂಡಾಂಡಗಳೊಳಗೆಲ್ಲ ನೀನೇ ದೇವಾ
ಮಹದಾಕಾಶ ರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ

ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ
ಸ್ವಾನುಭೂತಿಸ್ವರೂಪ ಶರಣಜನಮನೋವಲ್ಲಭ ನೀನೇ ದೇವಾ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.''

''ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
ವಿಶ್ವತೋಬಾಹು ನೀನೇ ದೇವಾ
ವಿಶ್ವತಶ್ಚಕ್ಷು ನೀನೇ ದೇವಾ
ಕೂಡಲ ಸಂಗಮದೇವಾ.''

ಮೇಲಿನ ವಚನಗಳಲ್ಲಿ ವಚನಕಾರರು ತಾವು ಭಗವದ್ದರ್ಶನ ಮಾಡಿಕೊಂಡು, ಇತರರಿಗೆ ಭವ್ಯವಾದ ಭಗವದ್ದರ್ಶನ ಮಾಡಿಸುತ್ತಾರೆ. ಪರವಸ್ತುವಾದ ಪರಶಿವನು ಸಕಲ ಚರಾಚರವಸ್ತುಗಳಲ್ಲಿ ಹೇಗೆ ನೆಲೆಸಿದ್ದಾನೆಂಬುದನ್ನು ವಿಶದಪಡಿಸಿದ್ದಾರೆ. ಆದ್ದರಿಂದ ದೇವರು ಅತೀತನೂ ಹೌದು, ಅಂತರ್ಯಾಮಿಯೂ ಹೌದು. ದೇವರು ಕೇವಲ ಅತೀತನೆಂದರೆ ಅವನು ನಮ್ಮಿಂದ ದೂರ ಉಳಿಯುತ್ತಾನೆ. ಅವನು ನಮಗೆ ಸಮೀಪವಾಗಬೇಕಾದರೆ ಭಗವದ್‌ಗೀತೆಯು ತಿಳಿಸುವಂತೆ ನಮ್ಮ ಹೃದಯದಲ್ಲಿ ನೆಲ ಸಿರಬೇಕು. ಅಕ್ಕಮಹಾದೇವಿಯವರು ಹೇಳುವಂತೆ,

''ಎನ್ನ ನಾನರಿಯದಂದು ಮುನ್ನ ನೀನೆಲ್ಲಿರ್ದೆ ಹೇಳಯ್ಯ
ಚಿನ್ನದೊಳಗಣ ಬಣ್ಣದಂತೆ, ಎನ್ನೊಳಗಿರ್ದೆಯಯ್ಯ
ಎನ್ನೊಳಗೆ ಇರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡನು ಕಾಣಾ, ಚೆನ್ನಮಲ್ಲಿಕಾರ್ಜುನಾ.''

ಭಗವದ್‌ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ತನ್ನ ವಿಶ್ವರೂಪ ದರ್ಶನ ಮಾಡಿಸಿದಂತೆ, ಪರವಸ್ತು ಅಥವಾ ದೇವರ ದರ್ಶನವನ್ನು ಮಾಡಿಸುವುದು ವೀರಶೈವ ಅನುಭಾವಿಗಳ ಉದ್ದೇಶ. ಪರವಸ್ತು ಎಂಬುದು ಒಂದೇ, ಎರಡಲ್ಲ, ಅನೇಕ ವಲ್ಲ ಎಂದು ಒತ್ತಿ ಒತ್ತಿ ಹೇಳುತ್ತಾರೆ ವಚನಕಾರರು. ದೇವರ ಬಗ್ಗೆ ವೀರಶೈವ ಧರ್ಮದ ಒಂದು ಮುಖ್ಯ ಸಿದ್ಧಾಂತವಿದು. ಪರವಸ್ತುವೆಂಬುದು ಒಂದಕ್ಕಿಂತ ಹೆಚ್ಚಿ ಹೇಗೆ ? ಅದು ಸಾಧ್ಯವಿಲ್ಲ. ಅದಕ್ಕೆ ಎಲ್ಲಾ ವಿಧದಲ್ಲಿಯೂ ಸರಿಸಮಾನವಾದ ವಸ್ತು ಇನ್ನೊಂದಿಲ್ಲ. ಇದ್ದರೆ ಅದು ಪರವಸ್ತುವಾಗಲಾರದು. ವ್ಯಾವಹಾರಿಕ ಪ್ರಪಂಚ ದಲ್ಲಿಯೂ ಅತ್ಯಂತ ಪ್ರಧಾನವಾದದ್ದು ಒಂದೇ ಇರುವುದಿಲ್ಲವೆ ? ದೇವರ ನೈಜ ಸ್ವರೂಪವನ್ನು ಸಂದರ್ಶಿಸಿದ ವೀರಶೈವ ಅನುಭಾವಿಗಳು ''ದೇವರೊಬ್ಬನೇ, ನಾಮ ಗಳು ಅನೇಕ'' ಎಂದು ಸಾರುತ್ತಾರೆ. ಇದನ್ನು ತತ್ವಶಾಸ್ತ್ರದಲ್ಲಿ ಏಕದೇವತಾವಾದ ವೆಂದು ಕರೆಯುತ್ತಾರೆ. ವಿಭೂತಿ ಪುರುಷನಾದ ಪರಶಿವನು ಒಬ್ಬನೇ ಎಂಬುದು ಸಹಜ ವಾಗಿ ತೋರುತ್ತದೆ.

"ಇಬ್ಬರು ಮೂವರು ದೇವರೆಂದು ಉಬ್ಬಿ ಮಾತಾಡಬೇಡ
ದೇವನೊಬ್ಬನೇ ಕಾಣಿರೋ
ಇಬ್ಬರೆಂಬುದು ಹುಸಿ ನೋಡಾ ಕೂಡಲಸಂಗಮದೇವನೊಬ್ಬನೇ ಅಲ್ಲದೆ
ಇಬ್ಬರಿಲ್ಲವೆಂದಿತ್ತು ಆ ವೇದ."

"ದೇವನೊಬ್ಬ, ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ.
ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ಯುವನು.
ಹಲವು ದೈವದ ಎಂಜಲ ತಿಂಬವರನೇನೆಂಬನಯ್ಯ
ಕೂಡಲ ಸಂಗಮದೇವಾ."

ಆದ್ದರಿಂದ ಪರವಸ್ತು ಏಕಮೇವಾದ್ವಿತೀಯವಾದದು. ಉಳಿದದ್ದೆಲ್ಲ ಅವನ ಸೃಷ್ಟಿ ಅಂದರೆ ಪಿಂಡಾಂಡ. ಪಂಚಮಹಾಭೂತಗಳು–ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಆಕಾಶ,– ಮನಸ್ಸು ಮತ್ತು ಬುದ್ಧಿ ಇವೆಲ್ಲವು. ಪರವಸ್ತು ಒಂದೇ ಇರುವುದು ಎಂದು ವೀರಶೈವ ಧರ್ಮವು ಖಚಿತವಾಗಿ ಘೋಷಿಸಿದೆ.

ಪರವಸ್ತು ಅತೀತ, ಆದರೆ ಸರ್ವವ್ಯಾಪಿ ಸರ್ವಾಂತರ್ಯಾಮಿ. ಪರವಸ್ತು ನಿರ್ಮಯಲಾದರೂ ಕ್ರಮೇಣ ಅದೇ ಸೃಷ್ಟಿಗೆ ಮೊದಲು, ಅಥವಾ ಪಿಂಡಾಂಡ ಬ್ರಹ್ಮಾಂಡ ಹುಟ್ಟುವುದಕ್ಕಿಂತ ಮೊದಲು ಪರವಸ್ತು ಹೇಗಿತ್ತು ? ಎಂಬುದನ್ನೂ ವಚನಕಾರರು ಸ್ಪಷ್ಟವಾಗಿ ತಿಳಿಸಿದ್ದಾರೆ. ಏಕೆಂದರೆ ಅನುಭಾವಿಗಳಿಗೆ ದೇವರ ಸೃಷ್ಟಿಯ ರಹಸ್ಯ ಅಥವಾ ಸೃಷ್ಟಿಯಲ್ಲಿ ಅವನ ನಿಲವು ಯಾವುದೆಂಬುದಷ್ಟೇ ತಿಳಿದರೆ ಸಾಲದು. ದೇವರ ಮೂಲಸ್ವರೂಪ ಅಥವಾ ನಿಷ್ಕಲ ಸ್ವಭಾವವೂ ತಿಳಿಯಬೇಕು. ಅಂದರೇ ಪರವಸ್ತುವಾದ ದೇವರನ್ನು ಸಮಗ್ರವಾಗಿ, ಸಮಷ್ಟಿಯಾಗಿ ಅರ್ಥಮಾಡಿಕೊಂಡಂತೆ. ಕೆಳಗಿನ ಒಂದೆರಡು ವಚನಗಳಲ್ಲಿ ವಚನಕಾರರು ಪರವಸ್ತುವಿನ ನಿಷ್ಕಲ, ನಿರಂಜನ ನಿತ್ಯ ಶುದ್ಧ ಸ್ವರೂಪವನ್ನು ಅಭಿವ್ಯಕ್ತಿಸಿದ್ದಾರೆ.

ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು
ಶತಕೋಟಿ ಸೂರ್ಯರು ಮೂಡಿದಂತೆ ಇದ್ದುದಯ್ಯ
ಮಿಂಚಿನ ಬಳ್ಳಿಯ ಸಂಚವ ಕಂಡಡೆ ಎನಗಿದು ಸೋಜಿಗವಾಯಿತ್ತು.
ಗುಹೇಶ್ವರಾ, ನೀನು ಜ್ಯೋತಿರ್ಲಿಂಗವಾದಡೆ,
ಉಪಮಿಸಿ ನೋಡಬಲ್ಲವರಿಲ್ಲಯ್ಯ."

ಆದ್ದರಿಂದ ಪರವಸ್ತು, ಪರಮೇಶ್ವರ, ಪರಮಾತ್ಮ, ಪರಶಿವ ಕೇವಲ ಶುದ್ಧ ಲಿಂಗ, ನಿರಾಕಾರ, ಬಯಲು, ಎಂಬುದು ಇದರಿಂದ ನಿಚ್ಚಳವಾಗುತ್ತದೆ. ನಿರಾಕಾರವಾದ ಪರಂಜ್ಯೋತಿ ಸಾಕಾರವಾಗುವುದೇಕೆ ? ಎಂಬುದರ ರಹಸ್ಯವನ್ನು ಬಯಲು

ಮಾಡುವುದೇ ವೀರಶೈವಧರ್ಮದ ಅತ್ಯಂತ ಮಹತ್ವದ ದಾರ್ಶನಿಕ ಕಾಣಿಕೆ ಎನ್ನ ಬಹುದು.

ಪರವಸ್ತು ಶಕ್ತಿವಿಶಿಷ್ಟನಾಗಿರುವುದೇ ಸೃಷ್ಟಿ, ಸ್ಥಿತಿ, ಲಯಗಳೆಂಬ ಪ್ರಕ್ರಿಯೆಗೆ ಕಾರಣ. ಪರವಸ್ತು ಶಕ್ತಿವಿಶಿಷ್ಟ ಎಂದರೆ ಏನು ? ಮತಧರ್ಮಗಳು ಮತ್ತು ಅನೇಕ ದಾರ್ಶನಿಕರು ಈಶ್ವರನ ಸ್ವರೂಪದಲ್ಲಿ ಅನಂತ ಕಲ್ಯಾಣಗುಣಗಳನ್ನು ನೋಡಿದ್ದಾರೆ. ಸೃಷ್ಟಿ, ಸ್ಥಿತಿ, ಲಯಗಳಿಗೆ ಯಾವ ರೀತಿಯಿಂದಲೂ ಕಾರಣಕರ್ತನಾಗದ ಅಥವಾ ಕಾರಣ ಕರ್ತೃವಾಗದ ಪರಮಾತ್ಮ ಅಥವಾ ಪರಬ್ರಹ್ಮದ ಕಲ್ಪನೆಯನ್ನು ಮಾಡಿದ ದಾರ್ಶನಿಕರೂ ದಾರ್ಶನಿಕ ಸಿದ್ಧಾಂತಗಳೂ ಉಂಟು. ಆದರೆ ಪರವಸ್ತು ಸಂಪೂರ್ಣ ಶೂನ್ಯವಲ್ಲವೆಂಬುದು ಸಾಮಾನ್ಯ ನಂಬಿಕೆ ಮತ್ತು ತಿಳುವಳಿಕೆಯೆನ್ನಬಹುದು. ಪರವಸ್ತು ವನ್ನು ''ಪೂರ್ಣಮದಃ'' ''ಸಚ್ಚಿದಾನಂದ'' ''ತಜ್ಜಲಾನ್'' ''ಸತ್ಯಂ, ಜ್ಞಾನಂ, ಅನಂತಂ ಬ್ರಹ್ಮ' ಎಂದು ಮುಂತಾಗಿ ಉಪನಿಷತ್ತುಗಳು ವರ್ಣಿಸಿವೆ. ಪರವಸ್ತುವನ್ನು ''ನಿರ್ಗುಣ'' ಎಂದು ಹೇಳುವ ಅದ್ವೈತ ವೇದಾಂತವೂ, ಅದು ಶೂನ್ಯ ಎನ್ನದೆ ''ಸಚ್ಚಿ ದಾನಂದ ಸ್ವರೂಪ'' ಎನ್ನುತ್ತದೆ. ಪರವಸ್ತುವಿನ ಮೂಲಭೂತ ಸ್ವರೂಪಕ್ಕೆ ಸೇರಿರುವ ಅನಂತಾನಂತ ಕಲ್ಯಾಣಗುಣಗಳಲ್ಲಿ ಮುಖ್ಯವಾದವುಗಳೆಂದರೆ ಅದರ ಸತ್, ಚಿತ್ ಮತ್ತು ಆನಂದ ಗುಣಗಳು. ಇವು ಸಾಮಾನ್ಯವಾದ ಅರ್ಥದಲ್ಲಿ ಪರವಸ್ತುವಿನ ಗುಣ ಗಳಲ್ಲ. ಈ ಗುಣಗಳಿಗೆ ಆಶ್ರಯವೆಂಬ ಅರ್ಥದಲ್ಲಿ ಪರವಸ್ತು ಒಂದು ದ್ರವ್ಯವಲ್ಲ, ಸತ್, ಚಿತ್, ಆನಂದಗಳೇ ಪರವಸ್ತುವಿನ ಸ್ವರೂಪ. ಅವು ಅದರಿಂದ (ಪರಶಿವನಿಂದ) ಅಭಿನ್ನ. ಪರವಸ್ತುವಿನ ಈ ಮೂರು ಮುಖ್ಯ ಅಂಶಗಳೇ ವಿಶ್ವದಲ್ಲಿರುವ (ಅಂದರೆ ಅಸ್ತಿತ್ವದಲ್ಲಿ ಏನೇನು ಇದೆಯೋ ಅದೆಲ್ಲದಕ್ಕೂ) ಎಲ್ಲದಕ್ಕೂ ಮೂಲಭೂತ ಬುಗ್ಗೆಗಳು. ಪರವಸ್ತು ಅಥವಾ ಪರಶಿವನು ಸರ್ವಶಕ್ತನಾಗಿರುವುದು, ಸರ್ವಾಂ ತರ್ಯಾಮಿಯಾಗಿರುವುದು ಮತ್ತು ಸರ್ವಜ್ಞನಾಗಿರುವುದಕ್ಕೆ ಕಾರಣ, ಅವನ ಸತ್‌ಶಕ್ತಿ, ಚಿತ್‌ಶಕ್ತಿ ಮತ್ತು ಆನಂದಶಕ್ತಿಗಳು.

ಪರಶಿವನು ಶಕ್ತಿ ವಿಶಿಷ್ಟ. ಏಕೆಂದರೆ ಶಕ್ತಿ ಪರಶಿವನ ಅವಿಭಾಜ್ಯ ಅಂಗ. ಪರ ಶಿವನಿಗೂ ಶಕ್ತಿಗೂ ಭೇದವಿಲ್ಲ. ಆದ್ದರಿಂದ ಪರಶಿವನ ಈ ಶಕ್ತಿಯಿಂದಲೇ ವಿನೋದ ಕ್ಕಾಗಿ, ಲೀಲೆಗಾಗಿ ಸೃಷ್ಟಿಯಾದ ಜೀವರುಗಳು ಅವನಿಂದ ಭಿನ್ನರಲ್ಲ. ಏಕೆಂದರೆ ಪರ ವಸ್ತುವಿನ ಒಂದು ಅವಿಭಾಜ್ಯ ಅಂಶವಾದ ಶಕ್ತಿಯಿಂದಲೇ ಹೊರಹೊಮ್ಮಿದ ಜೀವರು ಗಳೂ ಕೂಡ ಪರವಸ್ತುವಿನ ಅವಿಭಾಜ್ಯ ಅಂಗಗಳು, ಇದು ಪರವಸ್ತುವಿಗೂ ಮತ್ತು ಜೀವಕ್ಕೂ ಇರುವ ಸಂಬಂಧ.

''ಹೃದಯ ಕಮಲದಲ್ಲಿ ಲಕ್ಷ್ಯವಿಟ್ಟು ನೋಡುವ ದೇವರು ದೇವರಲ್ಲ.
ಭ್ರೂಮಧ್ಯದಲ್ಲಿ ಲಕ್ಷ್ಯವಿಟ್ಟು ನೋಡುವ ದೇವರು ದೇವರಲ್ಲ.
ನಾಸಿಕಾಗ್ರದಲ್ಲಿ ಲಕ್ಷ್ಯವಿಟ್ಟು ನೋಡುವ ದೇವರು ದೇವರಲ್ಲ.

ಅಖಂಡ ಗೋಳವಾಗಿಹ ಲಿಂಗವು ತಾನೆಂದರಿದಡೆ
ತಾನೇ ದೇವ ಅಪ್ರಮಾಣ ಕೂಡಲ ಸಂಗಮದೇವಾ''

ಪರಶಿವ, ಜೀವ ಮತ್ತು ಜಗತ್ತುಗಳಿಗೆ ಶಕ್ತಿ ವಿಶಿಷ್ಟಾದ್ವೈತವಾದ ಸಂಬಂಧ ವಿಲ್ಲದಿದ್ದರೆ ಅಥವಾ ಪರಶಿವನು ಶಕ್ತಿವಿಶಿಷ್ಟನಾಗಿಲ್ಲದಿದ್ದರೆ ಸೃಷ್ಟಿಯೂ ಸಾಧ್ಯ ವಾಗುತ್ತಿರಲಿಲ್ಲ ಮತ್ತು ವೀರಶೈವ ಧರ್ಮದ ಒಂದು ಮುಖ್ಯ ಅಂಶವಾದ ಷಟ್‌ಸ್ಥಲ ಸಿದ್ಧಾಂತ ಅಥವಾ ಭಕ್ತಿಪ್ರಧಾನವಾದ ಆಧ್ಯಾತ್ಮಕ್ಕೂ ಯಾವ ಅರ್ಥವೂ ಇರು ತ್ತಿರಲಿಲ್ಲ.

ಪರವಸ್ತುವಿನ ಅಥವಾ ಪರಶಿವನ ಶಕ್ತಿವೈಶಿಷ್ಟತೆಯ ಇನ್ನೊಂದು ಮಹತ್ವದ ಅಂಶವೇ ವಿಮರ್ಶಾಶಕ್ತಿ. ಆದ್ದರಿಂದ ವೀರಶೈವ ದರ್ಶನದ ಪ್ರಕಾರ ಪರಿಪೂರ್ಣ, ಶುದ್ಧಶಕ್ತಿವಿಶಿಷ್ಟಾದ್ವೈತವಾದ ಪರವಸ್ತು ವಿನೋದಕ್ಕಾಗಿ ಒಂದೇ ಇದ್ದದ್ದು ಎರ ಡಾಗಿ—ಅಂದರೆ ಲಿಂಗ–ಅಂಗಗಳೆಂದು ವಿಭಾಗವಾಗಿ—ಜೀವರುಗಳ ಸೃಷ್ಟಿಗೆ ಕಾರಣ ವಾಗುತ್ತದೆ. ಮಹಾಕರ್ಮಯೋಗಿ ಸಿದ್ಧರಾಮನ ಈ ಕೆಳಗಿನ ವಚನ ಈ ವಿಚಾರ ವನ್ನು ನಿಚ್ಚಳವಾಗಿ, ನೇರವಾಗಿ ವಿವರಿಸುತ್ತದೆ:

''ಲೀಲೆಯದು ಪರಬೊಮ್ಮದ ಇಚ್ಛೆ
ಇಚ್ಛೆಯದು ಸಕಲ ಜೀವ ಜಾಲೋತ್ಪತ್ತಿ
ಸಕಲ ಜೀವ ಜಾಲೋತ್ಪತ್ತಿಯದು ಜಗದ್ರಚನೆ
ಜಗದ್ರಚನೆಯದು ಜಗತ್ಪ್ರಳಯ ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನ.''

ಪರವಸ್ತು ಪರವಸ್ತುವಾಗಿಯೇ ಸದಾ ಏಕೆ ಇರುವುದಿಲ್ಲ? ಜೀವರುಗಳ ಸೃಷ್ಟಿ, ಜಗತ್ ಸೃಷ್ಟಿ ಇವೆಲ್ಲ ಏಕೆ? ಪರವಸ್ತುವಿಗೆ ಇವೆಲ್ಲ ಅವಶ್ಯವೆ? ವಿಶ್ವ ಸೃಷ್ಟಿಯ ರಹಸ್ಯವೇನು?—ಎಂಬ ಪ್ರಶ್ನೆಗಳಿಗೆ ವೀರಶೈವ ಧರ್ಮವು ಸ್ಪಷ್ಟವಾಗಿ ನೀಡುವ ಉತ್ತರವೆಂದರೆ ಇದೆಲ್ಲವೂ ಪರಶಿವನ ವಿನೋದಕ್ಕಾಗಿ. ವೀರಶೈವ ಧರ್ಮದ ದೇವರ ಮೂಲಭೂತ ಕಲ್ಪನೆ ಮತ್ತು ಅದರ ಉದ್ದೇಶಗಳನ್ನು ಸಾರುವ ಈ ಕೆಳಗಿನ ಎರಡು ವಚನಗಳನ್ನು ಉದಾಹರಿಸುವುದರೊಂದಿಗೆ ಈ ಚಿಕ್ಕ ಲೇಖನವನ್ನು ಪರಿಸಮಾಪ್ತಿ ಗೊಳಿಸುತ್ತೇನೆ.

''ತನ್ನ ವಿನೋದಕ್ಕೆ, ತಾನೇ ಸೃಷ್ಟಿಸಿದ ಸಕಲ ಪ್ರಪಂಚವನು
ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಂಗಳಲ್ಲಿ
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ಜಗದ್ವಿಲಾಸ ಸಾಕಾದಡೆ ಮತ್ತೆ ಪರಿವನಾ ಪಾಶವನು''

''ಎಲೆ ಮನವೆ, ನೀ ನಿನ್ನ ನಿಜವ ತಿಳಿವೊಡೆ
ಆ ನಿನ್ನ ನಿಜವ ಹೇಳುವೆ ಕೇಳು

ಅದು ಕೇವಲ ಜ್ಯೋತಿ, ಅದು ವರ್ಣಾತೀತ
ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು
ಅದೀಗ ನಿನ್ನ ಪರಿಪೂರ್ಣತ್ವದ ನೆಲೆ
ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ

ಅದೇ ನಿನ್ನ ಸಮ್ಯಗ್ ಜ್ಞಾನದ ತೋರಿಕೆ,
ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ
ನೀ ನಮ್ಮ ಗೋಹೇಶ್ವರ ಲಿಂಗದ ಶ್ರೀ ಚರಣವನರಸಿಕೊಂಡು
ನಿಶ್ಚಿಂತನಾಗೆಲೆ ಮನವೇ

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ !
ಜ್ಯೋತಿಯ ಬಲದಿಂದ ತಮದ ಕೇಡು ನೋಡಯ್ಯ !
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ !
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ
ಕೂಡಲ ಸಂಗನ ಶರಣರ ಅನುಭಾವದಿಂದ
ಎನ್ನ ಭವದ ಕೇಡು ನೋಡಯ್ಯ !

—ಬಸವಣ್ಣನವರು

ಅಂಗಸ್ಥಲ [ಜೀವಾತ್ಮ]

ಶ್ರೀ ಎಚ್. ಗಂಗಾಧರನ್. ಎಂ. ಎ.; ಬಿ. ಎಲ್.

ದರ್ಶನ ಎಂದರೆ ನೋಡುವುದು ಎಂಬ ಸಾಮಾನ್ಯ ಅರ್ಥ. ಏನನ್ನಾದರೂ ನೋಡುವುದಕ್ಕೆ ಕಣ್ಣುಗಳು ಸಾಧನ. ಬಾಹ್ಯ ಚಕ್ಷುಗಳಿಂದ ಬಾಹ್ಯವಸ್ತುಗಳ ದರ್ಶನ ಪಡೆಯಬಹುದು. ನೋಡುವ ಕಣ್ಣುಗಳಿಗೂ ನೋಡಬೇಕಾದ ವಸ್ತುಗಳಿಗೂ ಕಾರಣ ವಾದ ಪರವಸ್ತುವೊಂದಿದೆ. ಅದನ್ನೆ ಪರಮಾತ್ಮ, ಆತ್ಮ, ಪರತತ್ತ್ವ, ಬ್ರಹ್ಮ, ಮುಂತಾದ ನಾನಾ ಶಬ್ದಗಳಿಂದ ಕರೆಯಲಾಗಿದೆ. ವಾಸ್ತವಿಕವಾಗಿ ಯಾವ ಶಬ್ದಗಳಿಗೂ ನಿಲುಕದ ತತ್ತ್ವವೆ ಪರತತ್ತ್ವ. ಆ ಪರತತ್ತ್ವವನ್ನು ಕಾಣುವ ಹಂಬಲ ಇರುವುದು ದೇಹವನ್ನು ಅವಲಂಬಿಸಿದ ಜೀವಕ್ಕೆ. ಜೀವ ಪರಮಾತ್ಮನಿಂದ ಅಭಿನ್ನವಾದರೂ ಆ ಗುರಿಯನ್ನು ಜೀವಿ ಮುಟ್ಟುವವರೆಗೆ ಜೀವ ದೇವನಿಂದ ಪ್ರತ್ಯೇಕವೇ ಆಗಿ ಭಾವಿಸಬೇಕಾಗುತ್ತದೆ. ಹೀಗೆ ಜೀವ ದೇವನನ್ನು ಕಾಣುವ ಕ್ರಿಯೆ ಮತ್ತು ಜ್ಞಾನ ದರ್ಶನವೆನ್ನಬಹುದು. 'ಆತ್ಮಾನಂ ಪಶ್ಯೇತ' ಎಂದು ವೇದದಲ್ಲೂ 'ಆತ್ಮಾ ವಾ ಅರೇ ದೃಷ್ಟವ್ಯಃ' ಎಂದು ಉಪನಿಷತ್ತಿನಲ್ಲಿ ಹೇಳಿದೆ. ಆತ್ಮದರ್ಶನ ಮಾಡುವ ಶಕ್ತಿ ಬಾಹ್ಯ ಚಕ್ಷುಗಳಿಗಿಲ್ಲ. ಆತ್ಮದರ್ಶನದ ಸಾಧನವೇ ಬೇರೆ. ದರ್ಶನವನ್ನು ಇಂಗ್ಲಿಷಿನಲ್ಲಿ 'ಫಿಲಾಸಫಿ' ಎನ್ನುತ್ತಾರೆ. ಧರ್ಮವನ್ನು 'ರಿಲಿಜನ್' ಎನ್ನುತ್ತಾರೆ. ಧರ್ಮ ದರ್ಶನಕ್ಕೆ ದಾರಿ–ದರ್ಶನ ಧರ್ಮದ ಗುರಿ.

The philosophy is a hypothetical interpretation of the unknown (as in metaphysics), or of the inexactly known (as in ethics or political philosophy) it is the front treneh in the size of truth" ಎಂದು ಹೇಳಿದ್ದಾರೆ ವಿಲ್‌ಡ್ಯೂರೆಂಟ್‌ರವರು.

ಪಾಶ್ಚಾತ್ಯ ದಾರ್ಶನಿಕರ ದೃಷ್ಟಿಯಲ್ಲೂ ಪರಮಾತ್ಮನು ಅವರ್ಣನೀಯ ಮತ್ತು ಮಾನವನ ಬೌದ್ಧಿಕ ಪರಿಧಿಗೆ ನಿಲುಕದ ವಸ್ತುವೆಂದು ವಿಶ್ಲೇಷಿಸಲಾಗಿದೆ. ಭಾರತೀಯರು ಅನಾದಿ ಕಾಲದಿಂದ ಇದರ ಬಗೆಗೆ ಚಿಂತನೆ ನಡೆಸುತ್ತಲೇ ಬಂದಿದ್ದಾರೆ. ಇತ್ತೀಚಿನ ವಿಜ್ಞಾನಿಯೂ, ಗಣಿತಶಾಸ್ತ್ರಜ್ಞನೂ ಮತ್ತು ದಾರ್ಶನಿಕನೂ ಆಗಿದ್ದ ಪ್ರೊಫೆಸರ್ ಆಲ್‌ಫ್ರೆಡ್ ನಾರ್ಥ್ ವೈಟ್‌ಹೆಡ್‌ರವರು ದರ್ಶನದ ವ್ಯಾಖ್ಯಾನ ಮಾಡುತ್ತಾ—

Philosophy is an attempt to express the infinity of the universe in terms of the limitations of language ಎಂದಿದ್ದಾರೆ. ನಮ್ಮ ಭಾಷೆಗೆ ಒಂದು ಮಿತಿ ಇದೆ, ಅನಂತ ವಿಶ್ವದ ಅಂತರಾರ್ಥವನ್ನು ವ್ಯಕ್ತಪಡಿಸಲು ಬಳಸುವ ಸಾಧನವೇ ದರ್ಶನ ಶಾಸ್ತ್ರವೆಂದಿದೆ.

ಭಾರತದಲ್ಲಿ ಆತ್ಮದರ್ಶನದ ಸಾಧನೆ ಅನಾದಿ ಕಾಲದಿಂದ ನಡೆಯುತ್ತಾ ಬಂದಿದೆ. ಅನುಭವ ವೇದ್ಯವಾಗಿದೆ ಅದನ್ನು 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ [3] —ಅಂದರೆ ಯಾವುದನ್ನು ಮಾತು ಮನಸ್ಸುಗಳು ಮುಟ್ಟಲಾರದೆ ಹಿಂದಿರುಗುವುವೋ ಅದೇ ಪರವಸ್ತು ಎಂದಿದೆ. ಅಂತೆಯೇ 'ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ' ಅಂದರೆ ಅಲ್ಲಿಗೆ ಕಣ್ಣೂ ಹೋಗಲಾರದು ಮಾತೂ ಮುಟ್ಟಲಾರದು [4] ಎಂದು ತಮ್ಮ ಅನುಭವವನ್ನು ಮಹರ್ಷಿಗಳು ವ್ಯಕ್ತಪಡಿಸಿದ್ದಾರೆ. ಆದರೆ ಸೀಮಿತವಾದ ಇಂದ್ರಿಯ ಶಕ್ತಿಯನ್ನುಳ್ಳ ಮಾನವನಿಗೆ ಒಂದು ಕಲ್ಪನೆಯಾದರೂ ಬಂದರೆ ಮಾತ್ರ ಅದನ್ನು ಕಾಣುವ ಬಯಕೆ ಮೂಡುತ್ತದೆ. ಆದುದರಿಂದ ಈ ತತ್ತ್ವವನ್ನೂ ರಹಸ್ಯವಾಗಿ ಹೇಳತೊಡಗಿದರು.

"ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ" [5] ಅಂದರೆ ಯಾವುದರಿಂದ ಈ ಎಲ್ಲ ಜೀವಿಗಳೂ ಜನಿಸಿವೆಯೋ ಜನಿಸಿದ ಮೇಲೆ ಯಾವುದರ ಮೂಲಕ ಅವು ಜೀವಿಸುತ್ತವೆಯೋ ಮತ್ತು ಇರುವ ಕಾಲ ಮುಗಿದ ಮೇಲೆ ಅವು ಯಾವುದರಲ್ಲಿ ಲೀನವಾಗುತ್ತವೆಯೋ ಅದೇ ಬ್ರಹ್ಮವೆಂದು ಉಪನಿಷತ್ತಿನಲ್ಲಿ ಹೇಳಿದೆ.

ವೀರಶೈವ ದರ್ಶನದ ಆಧಾರ ಗ್ರಂಥವಾದ ಶ್ರೀಮಾಯಿದೇವರ ಶಿವಾನುಭವ ಸೂತ್ರದಲ್ಲಿ ಪರವಸ್ತುವನ್ನು ಲಿಂಗವೆಂದೂ, ಸ್ಥಲವೆಂದೂ ಉಲ್ಲೇಖಿಸಿದೆ,

> ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ।
> ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ॥ [6]

ಅಂದರೆ ಈ ಚರಾಚರಾತ್ಮಕವಾದ ಜಗತ್ತು ಯಾವ ವಸ್ತುವಿನಲ್ಲಿ ಲೀನವಾಗುವುದೋ ಮತ್ತು ಎಲ್ಲಿ ಉತ್ಪನ್ನವಾಗುವುದೋ ಅದನ್ನೇ ಲಿಂಗವೆಂದು ಹೇಳುವರು ಎಂದಿದೆ. ವೀರಶೈವ ದರ್ಶನದ ಪಾರಿಭಾಷಿಕ ಶಬ್ದದಲ್ಲಿ ಲಿಂಗವೇ ಪರತತ್ತ್ವ, ಪರಮಾತ್ಮ, ವೇದಾಂತದ ಬ್ರಹ್ಮ. ಲಿಂಗದ ಬಗೆಗೆ ಇದೇ ರೀತಿಯ ವಿಶ್ಲೇಷಣೆಯು ಸೂಕ್ಷ್ಮಾಗಮ ಮತ್ತು ಚಂದ್ರಜ್ಞಾನಾಗಮದಲ್ಲೂ ಉಕ್ತವಾಗಿದೆ. [7] ವೀರಶೈವ ದರ್ಶನದಲ್ಲಿ 'ಸ್ಥಲ' ಎಂಬ ಶಬ್ದ ಅತ್ಯಂತ ಮಹತ್ವದ ತತ್ತ್ವಸೂಚಕವಾಗಿದೆ. ಸ್ಥಲ ಶಬ್ದದ ವಿಶ್ಲೇಷಣೆಯೂ ಲಿಂಗತತ್ತ್ವದ ವಿಶ್ಲೇಷಣೆಯಂತಿದೆ.

> ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪೌರುಷಂ ಯತಃ।
> ಲೀಯಂತೇ ಪುನರಂತೇ ಚ ಸ್ಥಲಂ ತತ್ಪ್ರೋಚ್ಯತೇ ತತಃ॥ [8]

ಯಾವ ತತ್ತ್ವದಲ್ಲಿ ಚೇತನಾಚೇತನಾತ್ಮಕವಾದ ಜಗತ್ತು ಮೊದಲು ಸ್ಥಿತಿಯನ್ನು ಅಂತ್ಯದಲ್ಲಿ ಲಯವನ್ನು ಹೊಂದುವುದೋ ಅದನ್ನು ಸ್ಥಲವೆಂದು ಹೇಳಲಾಗಿದೆ. ಸ್ಥಲ ಮತ್ತು ಲಿಂಗ ಶಬ್ದಗಳು ಒಂದೇ ವಸ್ತುವಿನ ದ್ವಿವಿಧ ವಿಶ್ಲೇಷಣೆಯಂತೆ ಭಾಸವಾಗುವ ಸಂಭವವಿದೆ. ಅದರಲ್ಲಿ ಇರುವ ವೈವಿಧ್ಯವನ್ನು ಮುಂದೆ ವಿವರಿಸಲಾಗುವುದು. ಹೆಸರು ಏನಾದರಾಗಲೀ ಈ ವಿಶ್ಲೇಷಣೆಯಿಂದ ದರ್ಶನಾಪೇಕ್ಷಿಯೂ ತೃಪ್ತ

ನಾಗಲಾರ. ಆದಕ್ಕಾಗಿ ವಿಶ್ಲೇಷಣೆ ಮತ್ತಷ್ಟು ಸೂಕ್ಷ್ಮವಾಗುತ್ತಾ ಬಂದಿದೆ. 'ಅಯಮಾತ್ಮಾ ಬ್ರಹ್ಮ' 'ಪ್ರಜ್ಞಾನಂ ಬ್ರಹ್ಮ' ಎಂದರು. ಅದೂ ಸಾಲದೆಂದು 'ಬ್ರಹ್ಮೈವೇದಂ ವಿಶ್ವಮಿದಂ' ಅಂದರೆ ಈ ವ್ಯಕ್ತ ಪ್ರಪಂಚವೆಲ್ಲಾ ಪರಬ್ರಹ್ಮವೇ ಆಗಿದೆ. ''ಇದಂ ಸರ್ವಂ ಯದಯಂ ಆತ್ಮಾ'' ವ್ಯಕ್ತವಾದುದೆಲ್ಲವೂ ಆತ್ಮವೇ[10] ಎಂದೂ ''ತತ್ ಏತತ್ ಬ್ರಹ್ಮ ಅಪೂರ್ವಂ ಅನಪರಂ ಅನಂತರಂ ಅಬಾಹ್ಯಂ ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ'' ಅಂದರೆ ಈ ಬ್ರಹ್ಮ ಹಿಂದು ಮುಂದುಗಳಲ್ಲದ್ದು. ಈ ಆತ್ಮವೇ ಬ್ರಹ್ಮ ಎಲ್ಲ ಅನುಭವಗಳ ಸಾರವೇ ಅದು ಎಂದಿದೆ. ಇಂತಹ ಗಹನ ಗಂಭೀರವಾದ ಕಣ್ಣಿಗೆ ಕಾಣದ ಕೈಗೆ ನಿಲುಕದ ಈ ಪರವಸ್ತುವನ್ನು ಕಾಣುವುದೇಕೆ ? ಎಂಬ ಪ್ರಶ್ನೆ ಮಾನವನಲ್ಲಿ ಮೊದಲು ಉದ್ಭವಿಸುತ್ತದೆ. ಹಿಂದೆಯೇ ಹೇಳಿದಂತೆ ಜೀವವೂ ಆತ್ಮವೂ ಒಂದೇ ಆಗಿದ್ದರೂ ಅದು ಸಿದ್ಧಿಸುವವರೆಗೆ ಎರಡರಲ್ಲಿ ಭೇದವು ಅನುಭವಗೋಚರವಾಗುತ್ತದೆ. ಜೀವ ನೋವು ನಲಿವುಗಳಿಗೆ ಸಿಕ್ಕಿದಂತೆ ವ್ಯಕ್ತಿಗೆ ಅನುಭವವಾಗುತ್ತದೆ. ಈ ಭಿನ್ನತೆಗೆ ಕಾರಣವನ್ನು ವಿವಿಧ ದರ್ಶನಗಳು ವಿವಿಧ ರೀತಿಯಲ್ಲಿ ವರ್ಣಿಸಿವೆ. ವೀರಶೈವ ದರ್ಶನದ ಪ್ರಕಾರ ಈ ಭಿನ್ನತೆಗೆ ಆಣವ ಮಾಯಾ ಮತ್ತು ಕಾರ್ಮಿಕ ಮಲಗಳು ಕಾರಣವೆಂದಿದೆ.

ಆಣವಂ ಮಾಯಿಕಂ ಚೈವ ಕಾರ್ಮಿಕಂ ಚ ಯಥಾಕ್ರಮಂ।
ಮಲತ್ರಯಮನಾದೀದಂ ತನುತ್ರಯಗತಂ ಭವೇತ್॥

ಅಂದರೆ ಆಣವ, ಮಾಯಾ ಮತ್ತು ಕಾರ್ಮಿಕ ಮಲಗಳು ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಶರೀರಗಳಿಗೆ ಅಂಟಿಕೊಂಡಿರುತ್ತವೆಂದು ಹೇಳಿದೆ. [12] ಈ ಮಲಗಳು ದುಃಖದ ಅನುಭವಕ್ಕೆ ಕಾರಣ. ಯಾರೂ ದುಃಖವನ್ನು ಅನುಭವಿಸುವುದಕ್ಕೆ ಬಯಸುವುದಿಲ್ಲ. ಅದನ್ನು ಕಳೆದು ಸುಖವನ್ನು ಪಡೆಯುವ ಪ್ರಯತ್ನವನ್ನು ಜೀವ ಮಾಡುತ್ತದೆ. ಇದೇ ಸಾಧನ. ಅದರ ಸಿದ್ಧಿಯೇ ದರ್ಶನ. ಅದನ್ನೇಕೆ ಮಾಡಬೇಕೆಂಬ ಪ್ರಶ್ನೆಗೆ ಉತ್ತರವಾಗಿ 'ತರತಿ ಶೋಕಂ ಆತ್ಮವಿತ್' ಅಂದರೆ ಆತ್ಮವನ್ನು ಅರಿತವನು ಎಲ್ಲಾ ಶೋಕವನ್ನು ದಾಟುತ್ತಾನೆಂದೂ ಶ್ರುತಿ ಹೇಳಿದೆ, [13] ಶೋಕಸಾಗರದಿಂದ ಪಾರಾಗುವ ಪ್ರಯತ್ನ ಧರ್ಮ. ಅದು ಸಿದ್ಧಿಸಿದರೆ ಆತ್ಮ ಸಾಕ್ಷಾತ್ಕಾರ. ಅದೇ ದರ್ಶನ. ಅದನ್ನು ಶ್ರುತಿಗಳಲ್ಲಿ ''ಬ್ರಹ್ಮವಿದ್ ಬ್ರಹ್ಮೈವ ಭವತಿ'' ಎಂದಿರುವಂತೆ ಪಾಶ್ಚಾತ್ಯದರ್ಶನಕ್ಕೆ 'know thyself' 'ನಿನ್ನನ್ನು ನೀನು ತಿಳಿದುಕೋ' ಎಂಬುದೇ ಈ ಮೂಲ ಮಂತ್ರ. ಈ ತತ್ತ್ವದ ಅನುಸಂಧಾನಕ್ಕಾಗಿ ಕಾಲಾನುಗುಣವಾಗಿ ಸ್ಥಳಾನುಗುಣವಾಗಿ ಜನರು ವಿವಿಧ ಮಾರ್ಗಗಳನ್ನು ಅನುಸರಿಸಿದರು. ಅವರ ಗುರಿಯನ್ನು ಅನೇಕ ವಿಧದಲ್ಲಿ ವಿವರಿಸಿದರು. ಅವು ದರ್ಶನಗಳಾಗಿ ಬೆಳಗುತ್ತಿವೆ.

ದರ್ಶನಗಳ ಉದಯ ಮತ್ತು ಬೆಳವಣಿಗೆ

ಭಾರತೀಯ ದರ್ಶನಗಳನ್ನು ವಿಚಾರ ಮಾಡುತ್ತಾ ವಿದ್ವಾಂಸರು ''ದಾರ್ಶನಿಕ ಪದ್ಧತಿಗಳ ಕಾಲವನ್ನು ಊಹಾತ್ಮಕ ....ಅವನ್ನು ಕ್ರಿ. ಶಕದ ಪ್ರಾರಂಭದ ಹಿಂದಿನ

ಒಂದೂವರೆ ಶತಮಾನದ ಮತ್ತು ಅದರ ತರುವಾಯ ಸ್ಥೂಲವಾಗಿ ಎರಡು ಶತಮಾನಗಳ ಅವಧಿಯಲ್ಲಿ ಸೇರಿಸಬಹುದೆಂದು ಡಾ॥ ಟಿ. ಆರ್. ವಿ. ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.[14] ಭಾರತೀಯರಂತೆ ಪಾಶ್ಚಾತ್ಯ ದಾರ್ಶನಿಕರೂ ತಮ್ಮದೇ ಆದ ನಿಟ್ಟಿನಲ್ಲಿ ಸಿದ್ಧಿಪಡೆಯಲು ಪ್ರಯತ್ನಿಸಿದ್ದಾರೆ. ಬಹುಶಃ ಮಾನವನಿಗೆ ಪ್ರಾಪಂಚಿಕ ಅರಿವು ಬಂದಾಗಲೇ ಅವನು ಈ ಪ್ರಯತ್ನ ನಡೆಸಿರಬೇಕು. ಅದನ್ನು ಸ್ವಾಮಿ ವಿವೇಕಾನಂದರು ಚೆನ್ನಾಗಿ ವಿಮರ್ಶಿಸಿದ್ದಾರೆ. ಗ್ರೀಕ್ ಅಥವಾ ಆಧುನಿಕ ಯೂರೋಪಿನ ಮನುಷ್ಯ ಹೊರ ಜಗತ್ತನ್ನು ಶೋಧಿಸಿ ಬದುಕು ಮತ್ತು ಇರವಿನ ಪವಿತ್ರ ಸಮಸ್ಯೆಗಳಿಗೆಲ್ಲಾ ಪರಿಹಾರವನ್ನು ಹುಡುಕಿದಂತೆಯೇ ನಮ್ಮ ಪೂರ್ವಿಕರೂ ಮಾಡಿದರು. ಯೂರೋಪಿನವರಂತೆ ಇವರೂ ಸೋತರು. ಆದರೆ ಪಾಶ್ಚಾತ್ಯರು ಮುಂದೆ ಸಾಗಲಿಲ್ಲ. ಅಲ್ಲೇ ನಿಂತರು. ಜೀವನ ಮೃತ್ಯುಗಳ ಮಹಾ ಸಮಸ್ಯೆಗಳಿಗೆ ಜಗತ್ತಿನಲ್ಲಿ ಪರಿಹಾರಗಳನ್ನು ಹುಡುಕಿ ಅವರು ಸೋತರು. ಆ ಇಕ್ಕಟ್ಟಿನ ಸ್ಥಿತಿಯಲ್ಲೇ ಸಿಕ್ಕಿಹಾಕಿಕೊಂಡು ನಿಂತುಬಿಟ್ಟರು. ನಮ್ಮ ಪೂರ್ವಿಕರು ಅದು ಅಸಾಧ್ಯ ಎಂಬುದನ್ನು ಕಂಡರು. ಆದರೆ ಇವುಗಳಿಗೆ ಪರಿಹಾರವನ್ನು ಕಂಡುಹಿಡಿಯುವುದರಲ್ಲಿ ಇಂದ್ರಿಯಗಳು ತೀರ ಅಸಹಾಯಕವಾದುವು ಎಂದು ಸಾರುವುದರಲ್ಲಿ ಹೆಚ್ಚು ಧೈರ್ಯ ತೋರಿಸಿದರು. ಅವರು ಅಲ್ಲಿಯೇ ನಿಲ್ಲಲಿಲ್ಲ. ಮಾನವನ ಅಂತರಂಗ ಸ್ವಭಾವವನ್ನು ಆಶ್ರಯಿಸಿದರು. ತಮ್ಮ ಆತ್ಮದಿಂದಲೇ ಉತ್ತರವನ್ನು ಪಡೆಯಲು ಪ್ರಯತ್ನಿಸಿದರು. ಅಂತರ್ಮುಖಿಗಳಾದರು. ಹೊರಗಿನ ಪ್ರಕೃತಿಯನ್ನು ಅವರು ವಿಫಲತೆಯೆಂದು, ಅಲ್ಲಿ ಏನು ಮಾಡಲೂ ಸಾಧ್ಯವಾಗದೇ ಹೋದುದರಿಂದ ಮತ್ತು ಅಲ್ಲಿ ಯಾವ ಭರವಸೆಯೂ ಉತ್ತರವೂ ದೊರಕದೆ ಹೋದುದರಿಂದ ಅದನ್ನು ಬಿಟ್ಟು ಬಿಟ್ಟರು. ಜಡ, ಮೃತ, ಭೌತವಸ್ತು ಸತ್ಯವನ್ನು ಕೊಡಲಾರದು ಎಂದು ಗ್ರಹಿಸಿದ ನಂತರ ತೇಜೋಮಯವಾದ ಮಾನವಾತ್ಮನನ್ನು ಶರಣುಹೊಕ್ಕರು. ಅಲ್ಲಿ ಅವರ ಸಮಸ್ಯೆಗಳಿಗೆ ಉತ್ತರ ದೊರಕಿತು ಎಂದಿದ್ದಾರೆ.[15]

ಹೀಗೆ ಅಂತರಾತ್ಮನನ್ನು ಅರಸುತ್ತಾ ಹೊರಟ ಮಾರ್ಗಗಳು ವಿವಿಧ ಧರ್ಮಗಳಾದುವು. ವಿವಿಧ ಧರ್ಮವನ್ನು ಅವಲಂಬಿಸಿ ಒಂದೇ ಗುರಿಮುಟ್ಟಿದರೂ ಆ ಗುರಿಯ ದರ್ಶನದ ರೀತಿಯನ್ನೂ ವಿವಿಧ ರೀತಿಯಲ್ಲಿ ಬಣ್ಣಿಸಿ ವಿವಿಧ ದರ್ಶನಗಳು ಭಾರತದಲ್ಲಿ ಬೆಳೆದುವು. ಎಲ್ಲಾ ದರ್ಶನಗಳ ಬೇರುಗಳನ್ನು ನಾವು ವೇದ ಉಪನಿಷತ್ತುಗಳಲ್ಲೂ, ಆಗಮಗಳಲ್ಲೂ ಕಾಣುತ್ತೇವೆ. ಆದುದರಿಂದ ಯಾವುದೇ ದರ್ಶನದ ಉದಯಕ್ಕೆ ನಿರ್ದಿಷ್ಟಕಾಲವನ್ನು ಗೊತ್ತುಪಡಿಸಲು ಯತ್ನಿಸುವ ಅಗತ್ಯವಿಲ್ಲ. ಮೂಲಸೂತ್ರದಿಂದ ಭಿನ್ನಕಿರಣಗಳು ರೂಪುಗೊಂಡಿವೆ ಎನ್ನಬಹುದು. ಅಂತೆಯೇ ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ದ್ವೈತ ಇತ್ಯಾದಿ ಆತ್ಮವಾದಿ ದರ್ಶನಗಳು ಬೆಳಗಿದವು. ಶಕ್ತಿವಿಶಿಷ್ಟಾದ್ವೈತ ದರ್ಶನವು ಅತ್ಯಂತ ಪ್ರಾಚೀನವಾದ ಶೈವದರ್ಶನದ ಸೂತ್ರಗಳನ್ನು ಅವಲಂಬಿಸಿ ಬೆಳೆದ ಒಂದು ದರ್ಶನ.

ಭಾರತದಲ್ಲಿ ಬೆಳೆದ ದರ್ಶನಗಳಲ್ಲಿ ಎರಡು ಪ್ರಮುಖ ಪ್ರವಾಹಗಳಿವೆ. ಒಂದು ವೇದಾಂತ, ಉಪನಿಷತ್ತು ಬ್ರಹ್ಮಸೂತ್ರ, ಗೀತೆ ಇವುಗಳನ್ನು ಪ್ರಮಾಣವಾಗಿ ಸ್ವೀಕರಿಸಿದ ದರ್ಶನಗಳು. ಇವುಗಳ ಜೊತೆಗೆ ಆಗಮಗಳನ್ನು ಅವಲಂಬಿಸಿದ ದರ್ಶನಗಳು ಶೈವದರ್ಶನಗಳು. ಇವುಗಳಿಗೆ ಸಿದ್ಧಾಂತ,ಆಗಮಾಂತ ಎಂದು ಕರೆಯಲಾಗಿದೆ. ವೀರಶೈವ ಸಿದ್ಧಾಂತವನ್ನು ಶಕ್ತಿ ವಿಶಿಷ್ಟಾದ್ವೈತ, ಶಿವಾದ್ವೈತ, ಷಟ್‌ಸ್ಥಲಸಿದ್ಧಾಂತ ಎಂದೂ ಕರೆಯಲಾಗಿದೆ. ಹೆಸರೇನೇ ಇರಲಿ ಮೂಲತತ್ತ್ವ ಒಂದೇ ಆಗಿದೆ. ಈ ದರ್ಶನದ, ಪ್ರಕಾರ ಜೀವವನ್ನು ಅಂಗವೆಂದೂ, ಪರವಸ್ತುವನ್ನು ಲಿಂಗವೆಂದೂ ಅರ್ಥೈಸಲಾಗಿದೆ. ಈ ಶಬ್ದಗಳನ್ನು ಬಳಸುವುದರಲ್ಲಿ ತಾತ್ವಿಕವೂ, ವೈಜ್ಞಾನಿಕವೂ ಆದ ಅರ್ಥವೂ, ಸಾರ್ಥಕ್ಯವೂ ಕಂಡುಬರುತ್ತದೆ. ಅಂಗವೆಂದರೆ ಸಾಮಾನ್ಯ ಅರ್ಥದಲ್ಲಿ ದೇಹ ಜೀವ ದೇಹಾವಲಂಬಿಯಾದ ಅನುಭವ ನಮಗಾಗುತ್ತದೆ. ಜೀವ ಶಿವದರ್ಶನಪಡೆಯಲು ದೇಹವೇ ಸಾಧನೆ. ಈ ಸಾಧನೆ ಅನೇಕ ಹಂತಗಳಲ್ಲಿ ಸಾಗಬೇಕಾಗುತ್ತದೆ. ವೀರಶೈವ ದರ್ಶನದಲ್ಲಿ "ಸ್ಥಲ"ಶಬ್ದ ಅತ್ಯಂತ ಮಹತ್ವಪೂರ್ಣವಾದುದು. ಶಿವಾನುಭವ ಸೂತ್ರದ ಸ್ಥಲ ವ್ಯಾಖ್ಯಾನವನ್ನು ಹಿಂದೆ ಹೇಳಿದೆ. ಸ್ಥಲನಿರ್ವಚನಕ್ಕೂ ಲಿಂಗತತ್ತ್ವವಿವರಣೆಗೂ ಅಪಾರ ಅಂತರ ಕಂಡುಬರುವುದಿಲ್ಲ. ಸ್ಥಲವೆಂಬುದು ವೀರಶೈವದರ್ಶನದ ಪಾರಿಭಾಷಿಕ ಶಬ್ದ. ಸೈದ್ಧಾಂತಿಕವಾಗಿ ಸ್ಥಲವೆಂಬುದೇ ಪರವಸ್ತು. ವಸ್ತುಗಳ ಉತ್ಪನ್ನಕ್ಕೂ ಲಯಕ್ಕೂ ಕಾರಣವಾದುದು. ಮಾನಸಿಕವಾಗಿ ಇದೊಂದು ಹಂತ. ಆದುದರಿಂದ ಆಧ್ಯಾತ್ಮದರ್ಶಕನ ಪ್ರಗತಿ ಸೂಚಕವೇ ಸ್ಥಲವೆಂದು ಕೆಲವು ಆಧಾರಗಳಿಂದ ಡಾ॥ ಹೆಚ್. ಪಿ. ಮಲ್ಲೇದೇವರು ವ್ಯಾಖ್ಯಾನಿಸಿದ್ದಾರೆ.[16] ಆಧ್ಯಾತ್ಮ ಸಾಧನೆಯಲ್ಲಿ ಸಾಧಕನ ಪ್ರಗತಿದ್ಯೋತಕನಾಗಿ ಸ್ಥಲಶಬ್ದವನ್ನು ನವಕಲ್ಯಾಣಮಠದ ಶ್ರೀ ಕುಮಾರಸ್ವಾಮಿಗಳು ವಿಶ್ಲೇಷಿಸಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. (Sthala Represents the Psychophysiological Evolution) ಸ್ಥಲ ಶಬ್ದವು ದೈಹಿಕ ಮತ್ತು ಮಾನಸಿಕ ಪರಿವರ್ತನ ಸೂಚಕವಾಗಿದೆ. ಜೀವ ಮತ್ತು ದೇಹಗಳೆರಡೂ ಒಂದನ್ನಳಿದು ಮತ್ತೊಂದನ್ನು ಪಡೆಯಬೇಕಾಗುತ್ತದೆ. ಅಳಿಯುವುದೇ ಲಯ, ಮತ್ತೊಂದನ್ನು ಪಡೆಯುವುದೇ ಉತ್ಪನ್ನ. ಅಳಿವು ಉತ್ಪನ್ನಕ್ಕಾಗಲೀ,ಉತ್ಪನ್ನ ಅಳಿವಿಗಾಗಲೀ ಕಾರಣವಲ್ಲ. ಅಳಿವಿಗೂ ಉತ್ಪನ್ನಕ್ಕೂ ಮಧ್ಯೆ ಇರುವ ಸ್ಥಿತಿಯನ್ನು ಸ್ಥಲವೆನ್ನಬಹುದು. ಅದು ಸಹ ಅವರ್ಣನೀಯವೇ ಆಗಿದೆ. ಆದರೆ ಅನುಭವವೇದ್ಯವಾಗಿದೆ. ವಿಜ್ಞಾನಿ ಜೇಮ್ಸ್‌ಜೀನ್[17] ಯಾವುದೇ ಸಾಧನದಿಂದ ಸೃಷ್ಟಿಯಲ್ಲಿ ಚಲಿಸುವ ವಸ್ತುವಿನ ವೇಗವನ್ನು ಅಳೆಯುವುದು ಸಾಧ್ಯವಿಲ್ಲವೆಂದಿದ್ದಾರೆ, ಒಂದು ಅಳಿದು ಮತ್ತೊಂದು ಉದಯವಾದಾಗ ನಡೆದ ಘಟನೆಯ ವೇಗವನ್ನಾಗಲೀ ವಿವರವನ್ನಾಲಿ ನಿರ್ಧರಿಸಲು ಅಶಕ್ಯ. ಅದು ಹೇಗೆ ಸಂಭವಿಸುತ್ತದೆಂಬುದನ್ನು ರಷ್ಯಾದ ವಿಜ್ಞಾನಿಯೊಬ್ಬರು ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.

"Philosophical analysis is needed to Understand Man as a Being who in Every Integral Moment of his Life Realises the Integrality of Infinite and Eternal Nature"

ಮಾನವ ತನ್ನ ಸಮಗ್ರತೆಯ ಚಲನೆಯಲ್ಲಿ ಶಾಶ್ವತ ಪ್ರಕೃತಿಯ ಮತ್ತು ಅನಂತದಲ್ಲಿರುವ ಸಮಗ್ರತೆಯನ್ನು ಅನುಭವಿಸುತ್ತಿರುತ್ತಾನೆ. ಇದನ್ನು ಅರ್ಥಮಾಡಿಕೊಳ್ಳಲು ದಾರ್ಶನಿಕ ವಿಶ್ಲೇಷಣೆ ಅಗತ್ಯ.[18] ಸ್ಥಲಶಬ್ದದ ಪರಿಪೂರ್ಣ ಅರ್ಥ ನಮಗಾಗದಿದ್ದರೆ ವೀರಶೈವದರ್ಶನದ ಅಂತಃಸತ್ವವನ್ನು ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯ. ರಷ್ಯನ್ ತತ್ವಜ್ಞಾನಿಯ ವ್ಯಾಖ್ಯಾನ 'ಸ್ಥಲ' ಶಬ್ದದ ಸಮಗ್ರ ನಿರ್ವಚನದಂತಿದೆ.

ಅಂಗಸ್ಥಲ (ಜೀವ)

ಜೀವವನ್ನು ಅಂಗವೆಂದು ವೀರಶೈವದರ್ಶನದಲ್ಲಿ ಪರಿಗಣಿಸಲಾಗಿದೆ. ಈ ಅಂಗ ಪರಾತ್ಪರವಸ್ತುವಾದ ಲಿಂಗವನ್ನು ಸೇರಲು ಯತ್ನಿಸುತ್ತದೆ. ಆ ಗುರಿ ಮುಟ್ಟುವುದೇ ವೀರಶೈವದರ್ಶನ ಅರ್ಥಾತ್ ಷಟ್‌ಸ್ಥಲಸಿದ್ಧಾಂತ. ವೀರಶೈವಸಿದ್ಧಾಂತದಂತೆ ಈ ಸಿದ್ಧಿಗೆ ಲಿಂಗಾಂಗಸಾಮರಸ್ಯವೆನ್ನುತ್ತಾರೆ. ಅದೇ ವೇದಾಂತದ ಜೀವನ್ಮುಕ್ತಿಯಾಗಬಹುದು, ಜೀವ ಹೇಗೆ ಲಿಂಗದಲ್ಲಿ ಸಮರಸಹೊಂದುತ್ತದೆ ಎಂಬುದರ ಅರಿವೇ ವೀರಶೈವದರ್ಶನದ ವೈಶಿಷ್ಟ್ಯ. ಅಂಗಶಬ್ದದವಾಖ್ಯೆ—

> ಅಂ ಭವೇತ್ಪರಮಂ ಬ್ರಹ್ಮ ತದ್ಗತಂ ತತ್ಪರಾಯಣಂ।
> ಅಂಗಸ್ಥಲಮಿತಿ ಪ್ರಾಹುರಂಗಸ್ಥಲವಿಶಾರದಾಃ॥
> ಅಮಿತಿ ಬ್ರಹ್ಮಸನ್ಮಾತ್ರಂ ಗಚ್ಛತೀತಿ ಗಮುಚ್ಯತೇ।
> ರೂಪ್ಯತೇಽಂಗಮಿತಿ ಪ್ರಾಜ್ಞೈರಂಗತತ್ವವಿಚಿಂತಕೈಃ॥

ಎಂದಿದೆ. ಅಂದರೆ ಅನಾದ್ಯಂತವಾದ ಜನ್ಮರಹಿತವಾದ ಯಾವ ಪರಾತ್ಪರಲಿಂಗವುಂಟೋ ಅದನ್ನು ಮಹಾಭಕ್ತಿಯಿಂದ ಯಾವ ವಸ್ತುವು ಹೊಂದುತ್ತಿರುವುದೋ ಅದೇ ಅಂಗಸ್ಥಲವೆಂದು ನಿಶ್ಚಿತವಾಗಿದೆ, ಅಂಗ ಎಂಬ ಶಬ್ದದಲ್ಲಿ 'ಅಂ' ಎಂಬುದು ಪರಬ್ರಹ್ಮವು. ತತ್ಪರಬ್ರಹ್ಮವನ್ನು ಹೊಂದಿದುದಾಗಿ ತತ್ಪರಾಯಣವಾದುದು ಯಾವುದೋ ಅದೇ ಅಂಗಸ್ಥಲವೆಂದು ಅಂಗತತ್ವವಿಶಾರದರು ಹೇಳುವರು, ಮತ್ತು 'ಅಂ' ಎಂಬುದು ಸದ್ರೂಪವಾದ ಪರಬ್ರಹ್ಮಬೋಧಕವೂ 'ಗಂ' ಎಂಬುದು ಗಚ್ಛತಿ (ಹೊಂದುತ್ತದೆ) ಎಂಬ ಅರ್ಥಬೋಧಕವೂ ಆಗಿರುವುವು. ಆ ಎರಡರಿಂದಲೇ 'ಅಂಗಂ' ಎಂಬುದು ರೂಪಿಸಲ್ಪಟ್ಟಿರುವುದು. ಎಂದರೆ ಪರಬ್ರಹ್ಮವನ್ನು ಹೊಂದಿ ತಾದಾತ್ಮ್ಯರೂಪದಿಂದಿರುವುದೇ ಅಂಗವೆಂದು ಪ್ರಾಜ್ಞರಾದ ಅಂಗತತ್ತ್ವಚಿಂತಕರ ಮತವಿರುವುದು,[19] ಈ ವ್ಯಾಖ್ಯಾನದಲ್ಲಿ ಮತ್ತೊಂದು ವೈಶಿಷ್ಟ್ಯವನ್ನು ಕಾಣುತ್ತೇವೆ. ಅಂಗದಲ್ಲಿ ಆಗಲೇ

ಪರಬ್ರಹ್ಮತ್ವ ಇರುವುದನ್ನು ಹೇಳಿದೆ. ಆದುದರಿಂದ ಅಂಗ ಮತ್ತೊಮ್ಮೆ ಬೇರೆ ಬ್ರಹ್ಮವನ್ನು ಸೇರುವುದು ಅರ್ಥಹೀನವೆನಿಸುತ್ತದೆ. ಆದರೆ 'ಅಂ' ಶಬ್ದದಿಂದ ಅದ್ವೈತವೂ 'ಗಂ' ಶಬ್ದದಿಂದ ದ್ವೈತವೂ ವ್ಯಕ್ತವಾಗುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿವಾಕ್ಯದಂತೆ ಸರ್ವವೂ ಬ್ರಹ್ಮಮಯವೇ ಆಗಿದೆ. ಆದರೆ ಅಂಗಕ್ಕೆ ಆದರ ಅನುಭವ ಸಾಧ್ಯವಾಗಲು ಅನೇಕ ಆತಂಕಗಳಿವೆ. ಅದನ್ನು ದಾಟುವ ಪ್ರಯತ್ನ ದಲ್ಲಿ ಅಂಗ ನಿರತವಾಗುತ್ತದೆ. ಅಂಗಲಿಂಗಗಳು ಅಭಿನ್ನವೆಂಬುದನ್ನು ಇಲ್ಲಿ ಸೂಚಿಸಿದೆ.

> ಉಪಾಸ್ಯೋಪಾಸಕತ್ವೇನ ಸ್ವಯಮೇವ ದ್ವಿಧಾ ಭವೇತ್।
> ಲಿಂಗಸ್ಥಲಮುಪಾಸ್ಯಂ ಸ್ಯಾದಂಗಸ್ಥಲಮುಪಾಸಕಂ॥
> ಉಪಾಸ್ಯತ್ವಂ ತಥೋಪಾಸಕತ್ವಂ ಚ ಪರಮಶ್ಶಿವಃ।
> ಅಪ್ರಚ್ಯುತಾತ್ಮಭೇದೇನ ಸ್ಥಿತಸ್ಸನ್ನಾತ್ಮಲೀಲಯಾ॥[20]

ಸ್ಥಲವೇ ಉಪಾಸ್ಯವೂ ಉಪಾಸಕವೂ ಆಗಿರುವುದು. ಲಿಂಗಸ್ಥಲ ಉಪಾಸ್ಯ, ಅಂಗಸ್ಥಲ ಉಪಾಸಕ. ಆದುದರಿಂದ ಉಪಾಸಕತ್ವಕ್ಕೂ ಉಪಾಸ್ಯತ್ವಕ್ಕೂ ಭೇದವಿಲ್ಲ. ಎರಡನ್ನೂ ಪರಶಿವಸ್ವರೂಪವೆಂದೇ ತಿಳಿಯಬೇಕು. ಎರಡರಲ್ಲೂ ಶಿವನು ತನ್ನ ಲೀಲೆಯಿಂದ ವಿಕಾರವಾಗದ ಚೇತನಸ್ವರೂಪದ ಭೇದದಿಂದಿರುವನು. ಅಂಗಲಿಂಗಗಳು ವ್ಯಾವಹಾರಿಕ ವಾಗಿ ಪ್ರತ್ಯೇಕವಾಗಿದ್ದರೂ ಎರಡರಲ್ಲೂ ಏಕತ್ವವನ್ನು ಸ್ಥಾಪಿಸುವ ತತ್ವವೊಂದಿದೆ. ಅದನ್ನೇ ಶಕ್ತಿಯೆಂದು ವೀರಶೈವದರ್ಶನದಲ್ಲಿ ಪರಿಗಣಿಸಲಾಗಿದೆ. ಅಂಗಲಿಂಗಗಳು ಒಂದೆಂಬುದನ್ನು ಶಕ್ತಿತತ್ವದಿಂದ ಅರಿಯಬಹುದು, ಅನುಭವಿಸಬಹುದು. ಆದುದ ರಿಂದಲೇ ವೀರಶೈವದರ್ಶನಕ್ಕೆ ಶಕ್ತಿವಿಶಿಷ್ಟಾದ್ವೈತದರ್ಶನವೆಂದು ಕರೆಯಲಾಗಿದೆ. ಸೂತ್ರಕಾರರು ಅದನ್ನು ಮನೋಜ್ಞವಾಗಿ ವಿವರಿಸುತ್ತಾರೆ. ಶಿವನು ತನ್ನ ವಿಮರ್ಶಾ ಶಕ್ತಿಯಿಂದ ಏಕಕಾಲದಲ್ಲಿ ತಾನೇ ಉಪಾಸ್ಯನೂ ಉಪಾಸಕನೂ ಆದನು. ಏಕೆಂದರೆ— "ಶಿವೋಭೂತ್ವಾ ಶಿವಂಯಜೇತ್ ॥" ನಾರುದ್ರೋ ರುದ್ರ ಮರ್ಚಯೇತ್ ॥ ಇತ್ಯಾದಿ ಶ್ರುತಿವಾಕ್ಯಗಳಿಂದ ಶಿವನಾಗದವನಿದೆ ಶಿವೋಪಾಸನೆಯು ಕೋಟಿ ಜನ್ಮಗಳನ್ನೆತ್ತಿದರೂ ಸಂಭವಿಸದಾಗಿ, ಶಿವನೇ ಪೂಜ್ಯನೂ ಪೂಜಕನೂ ಆಗಿರುವುದ ಲ್ಲದೆ ಅನ್ಯವಿಲ್ಲ.[21] ಅಂಗವೂ ಶಿವನೇ, ಲಿಂಗವೂ ಶಿವನೇ ಆದಾಗ್ಯೂ ಹಿಂದೆ ಹೇಳಿದಂತೆ ಅಂಗದಲ್ಲಿರುವ ಶಿವತ್ವದ 'ಅಂ'ಏಗೆ ಮಲತ್ರಯಾದಿ ಉಪಾಧಿಗಳಿರುತ್ತವೆ. ಈ ಉಪಾಧಿಗಳನ್ನು ದಾಟಿ ಅಂಗವು ಲಿಂಗದಲ್ಲಿ ಸಮರಸಹೊಂದಬೇಕಾಗುತ್ತದೆ. ಉಪಾಧಿ ಯಿಂದ ಅಂಗದಲ್ಲಿ ಶಿವತ್ವವು ಅಳಿದುಹೋಗಿದೆಯೆಂದು ಅರ್ಥವಲ್ಲ. ಅದರ ಅರಿವು ಅನುಭವವೇದ್ಯವಾಗುವುದಿಲ್ಲ. ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವನ್ನು ಕಾಣುತ್ತೇವೆ. ಆದರೆ ಅದೇ ಕನ್ನಡಿಗೆ ಮಂಜೋ ಆವಿಯೋ ಮುಸುಕಿದರೆ ಪ್ರತಿಬಿಂಬ ಕಾಣುವುದಿಲ್ಲ. ಆದರೆ ಕನ್ನಡಿಯಲ್ಲಿ ಪ್ರತಿಬಿಂಬವನ್ನು ಬಿಂಬಿಸುವ ಶಕ್ತಿ ಕಳೆದುಹೋಗಿಲ್ಲ. ಮಂಜು ಉಪಾಧಿಯಾಗಿ ಬಿಂಬಿಸುವಿಕೆಯು ಮರೆಯಾಗುತ್ತದೆ. ಅಂತೆಯೇ ಜೀವವು ಪರ

ವಸ್ತುವೇ ಆದರೂ ಉಪಾಧಿಗಳು ಜೀವದಲ್ಲಿರುವ ಶಿವತ್ವದ ಅನುಭವವನ್ನು ಆಗಗೊಡುವುಲ್ಲ. ಉಪಾಧಿಗಳನ್ನು ಅಳಿಸಿದನಂತರ ಸ್ವಸ್ವರೂಪದ ಆನಂದಾನುಭವ ವುಂಟಾಗುತ್ತದೆ. ಈ ಕಾರ್ಯವೇ ದರ್ಶನದ ಸಾಧನೆ. ವೀರಶೈವದರ್ಶನದಲ್ಲಿ ಆನಂದಾನುಭವ ವೇದ್ಯವಾಗಲು ಜೀವದಲ್ಲಿರುವ ಶಿವತ್ವದ ಸಾಕ್ಷಾತ್ಕಾರವಾಗಲು ಕೇವಲ ಮನಬುದ್ಧಿಗಳ ಪರಿವರ್ತನೆಯಾದರೆ ಸಾಲದು, ದೈಹಿಕವಾದ ಪರಿವರ್ತನೆಯೂ ಆಗಬೇಕೆಂದು ಭಾವಿಸಲಾಗಿದೆ. ಇಂತಹ ಪರಿವರ್ತನೆಯನ್ನು ಆಧಾರವಾಗಿಟ್ಟುಕೊಂಡು ಅಂಗಕ್ಕೂ ಲಿಂಗಕ್ಕೂ ಸ್ಥಲನಿರ್ದೇಶನ ಮಾಡಲಾಗಿದೆ.

'ಶಿವ ಏವ ಸ್ವಯಂ ಲಿಂಗಮಾತ್ಮೈವಾಂಗಸ್ಥಲಂ ಭವೇತ್' ಎಂದರೆ ಶಿವನೇ ತಾನು ಲಿಂಗರೂಪಿಯಾಗಿರುವನು, ಶುದ್ಧವಾದ ಜೀವಾತ್ಮನೇ ಅಂಗವಾಗಿರುವನು ಎಂದಿದೆ. ಜೀವಾತ್ಮನು ಕೇವಲ ಶುದ್ಧನೂ, (ಉಪಾಧಿವಶದಿಂದ ಮಲಿನಾತ್ಮನಾದರೂ ಸ್ವಭಾವತಃ ಶುದ್ಧನಿರುವನಂ) ತ್ರಿಮಲರಹಿತನೂ, ನಿತ್ಯನೂ, ನಿರಂಜನನೂ, ಶಾಂತನೂ, ಶಿವನ ಅಂಶಸ್ವರೂಪನೂ ಆಗಿರುವನು. ಆದುದರಿಂದಲೇ ಈತನೂ ಶಿವನೇ ಆಗಿರುವನು' ಎಂದು ವಿವರಿಸಿದೆ,[22] ಜೀವದಲ್ಲಿ ಶಿವತ್ವವಿರುವುದನ್ನು ಉದಾಹರಣೆಯೊಂದಿಗೆ ಉಲ್ಲೇಖಿಸಲಾಗಿದೆ,

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾsನಲಃ ।
ಬೀಜೇಯಥಾಽಂಕುರಃ ಸಿದ್ಧಸ್ತಥಾsತ್ಮನಿ ಶಿವಃ ಸ್ಥಿತಃ ॥

ಅಂದರೆ ಚಂದ್ರಕಾಂತಶಿಲೆಯಲ್ಲಿ ನೀರು ಹೇಗೆ ಸ್ವಾಭಾವಿಕವಾಗಿರುವುದೋ ಸೂರ್ಯಕಾಂತ ಶಿಲೆಯಲ್ಲಿ ಅಗ್ನಿಯು ಹೇಗೆ ಸ್ವಾಭಾವಿಕವಾಗಿರುವುದೋ, ಬೀಜದಲ್ಲಿ ಅಂಕುರವು ಹೇಗೆ ಸ್ವಾಭಾವಿಕವಾಗಿರುವುದೋ ಹಾಗೆ ಜೀವನಲ್ಲಿ ಪರಶಿವನು ಸ್ವಾಭಾವಿಕವಾಗಿರುವನು,[23] ಸ್ವತಃ ಶಿವನಾಗಿದ್ದರೂ ಉಪಾಧಿಯಿಂದ ಭಿನ್ನನಾಗಿ ಭಾಸವಾಗುವುದರಿಂದ ಆ ಭಿನ್ನತೆಯನ್ನು ಅಳಿಸುವ ಸಾಧನವಾಗಿ ಸ್ಥಲನಿರ್ದೇಶನಮಾಡಲಾಗಿದೆ. ಜೀವ, ಶಿವತ್ವವನ್ನು ಹೊಂದಲು ಆರು ಮೂಲಸ್ಥಾನಗಳಲ್ಲಿ ಸಾಗಬೇಕು. ಅವುಗಳನ್ನು ಭಕ್ತ,ಮಹೇಶ, ಪ್ರಸಾದ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಲಗಳೆಂದು ಕರೆಯಲಾಗಿದೆ. ಈ ಸ್ಥಲನಿರ್ದೇಶನವೇ ವೀರಶೈವದರ್ಶನದ ಅಂತರಂಗ. ಈ ಆರುಸ್ಥಲಗಳನ್ನು ಸೂಕ್ಷ್ಮವಾಗಿ ಬಿಡಿಸಿ ನೂರೊಂದು ಸ್ಥಲಗಳನ್ನು ಹೇಳಿದೆ. ಇದರಲ್ಲಿ ಅಂಗ ಸ್ಥಲಗಳು 44, ಲಿಂಗಸ್ಥಲಗಳು 57, ಒಟ್ಟು 101 ಸ್ಥಲಗಳು ವೀರಶೈವದರ್ಶನದ ಸಾಧನೆಯ ಸಂಪತ್ತುಗಳಾಗಿವೆ. ನೂರೊಂದು ಸ್ಥಲದ ವಿವರಣೆಯನ್ನು ಅನೇಕಮಂದಿ ಅನುಭಾವಿಗಳು ಅನುಗ್ರಹಿಸಿದ್ದಾರೆ. ಸಂಸ್ಕೃತದಲ್ಲಿರುವ—1) ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿ 2) ಮರಿತೋಂಟದಾರ್ಯರ ಕೈವಲ್ಯಸಾರ 3) ಪರ್ವತ ಶಿವಯೋಗೀಶ್ವರರ ಏಕೋತ್ತರಶತಸ್ಥಲಸಾರಚಿಂತಾಮಣಿ 4) ರೇವಣಸಿದ್ಧೇಶ್ವರರ ಶ್ರುತ್ಯಂತರ ಶಿರೋಮಣಿ ಏಕೋತ್ತರ ಶತಸ್ಥಲ ಹಾಗೂ ಕನ್ನಡದಲ್ಲಿರುವ 1) ಮಹಲಿಂಗದೇವನ ಏಕೋ

ತ್ತರ ಶತಸ್ಥಲ 2) ಜಕ್ಕಣಾಚಾರ್ಯರ ಸ್ವರ ಏಕೋತ್ತರಶತಸ್ಥಲ 3) ಮಗ್ಗೆಯಮಾಯಿದೇವರ ಪದ ಏಕೋತ್ತರಶತಸ್ಥಲ ಷಟ್ಪದಿ, 4) ಗುಬ್ಬಿ ಮಲ್ಲಣ್ಣನ ಏಕೋತ್ತರ ಷಟ್‌ಸ್ಥಲ ಮುಂತಾದ ಗ್ರಂಥಗಳು ನೂರೊಂದು ಸ್ಥಲಗಳ ಸಮಗ್ರ ನಿರೂಪಣೆ ಮಾಡಲು ಮೀಸಲಾಗಿವೆ. ವಚನಸಾಹಿತ್ಯದಲ್ಲಿ ಸ್ಥಲಗಳ ವಿವರಣೆಯು ಸ್ಥೂಲವಾಗಿ ಕಂಡುಬರುತ್ತದೆ.

ಅಂಗಸ್ಥಲ ವಿವರಣೆಯನ್ನು ಉಲ್ಲೇಖಿಸಿರುವ 44 ಸ್ಥಲಗಳು ಷಟ್‌ಸ್ಥಲಗಳಲ್ಲಿ ನಿರೂಪಿತವಾಗಿವೆ, ಅಂತೆಯೇ ಭಕ್ತಸ್ಥಲದಲ್ಲಿ—1) ಪಿಂಡಸ್ಥಲ 2) ಪಿಂಡಜ್ಞಾನ ಸ್ಥಲ 3) ಸಂಸಾರಹೇಯಸ್ಥಲ 4) ಗುರುಕಾರಣ್ಯ 5) ಲಿಂಗಧಾರಣ 6) ಭಸ್ಮಧಾರಣ 7) ರುದ್ರಾಕ್ಷಧಾರಣ 8) ಪಂಚಾಕ್ಷರೀ 9) ಭಕ್ತಸ್ಥಲನಿರೂಪಣ 10) ಉಭಯ 11) ತ್ರಿವಿಧ ಸಂಪತ್ತಿ 12) ಚತುರ್ವಿಧ ಸಾರಾಯ 13) ಉಪಾಧಿಮಾಟ 14) ನಿರುಪಾಧಿಮಾಟ 15) ಸಹಜಮಾಟಸ್ಥಲಗಳು. ಮಾಹೇಶ್ವರಸ್ಥಲದಲ್ಲಿ 1) ಮಾಹೇಶ್ವರಪ್ರಶಂಸಾಸ್ಥಲ 2) ಲಿಂಗನಿಷ್ಠಾ 3) ಪೂರ್ವಾಶ್ರಯನಿರಸನ 4) ವಾಗದ್ವೈತ ನಿರಸನ 5) ಆಹ್ವಾನ ನಿರಸನ 6) ಅಷ್ಟತನುಮೂರ್ತಿನಿರಸನ 7) ಭಕ್ತದೇಹಿಕಲಿಂಗಸ್ಥಲಗಳು, ಪ್ರಸಾದಿಸ್ಥಲದಲ್ಲಿ 1) ಪ್ರಸಾದಸ್ಥಲನಿರೂಪಣ 2) ಗುರುಮಾಹಾತ್ಮ್ಯ 3) ಲಿಂಗಮಾಹಾತ್ಮ್ಯ 4) ಜಂಗಮಮಾಹಾತ್ಮ್ಯ 5) ಭಕ್ತಮಾಹಾತ್ಮ್ಯ 6) ಶರಣ ಮಾಹಾತ್ಮ್ಯ 7) ಪ್ರಸಾದಮಾಹಾತ್ಮ್ಯಸ್ಥಲಗಳು, ಪ್ರಾಣಲಿಂಗಸ್ಥಲದಲ್ಲಿ 1) ಪ್ರಾಣಲಿಂಗ ನಿರೂಪಣ ಸ್ಥಲ 2) ಪ್ರಾಣಲಿಂಗಾರ್ಚನ 3) ಶಿವಯೋಗ ಸಮಾಧಿ 4) ಲಿಂಗನಿಜಸ್ಥಲ 5) ಅಂಗಲಿಂಗಸ್ಥಲಗಳು, ಶರಣ ಸ್ಥಲದಲ್ಲಿ 1) ಶರಣಸ್ಥಲನಿರೂಪಣ 2) ತಾಮಸನಿರಸನ 3) ಜ್ಞಾನನಿರ್ದೇಶನ 4) ಶೀಲಸಂಪಾದನೆಸ್ಥಲಗಳು, ಐಕ್ಯಸ್ಥಲದಲ್ಲಿ 1) ಐಕ್ಯಸ್ಥಲನಿರೂಪಣ 2) ಸರ್ವಾಚಾರಸಂಪತ್ತಿ 3) ಏಕಭಾಜನ 4) ಸಹಭೋಜನ-ಎಂದು 44 ಸ್ಥಲಗಳನ್ನು ನಿರೂಪಿಸಲಾಗಿದೆ. ಈ ಸ್ಥಲಗಳ ವಿವರಣೆ ಜಕ್ಕಣ ಮತ್ತು ಮಹಾಲಿಂಗರ ಏಕೋತ್ತರ ಶತಸ್ಥಲ ನಿರೂಪಣೆಯನ್ನು ಅನುಸರಿಸಿದೆ. ಗುಬ್ಬಿಯ ಮಲ್ಲಣಾರ್ಯರ ಗಣಭಾಷ್ಯರತ್ನಮಾಲೆಯಲ್ಲಿರುವ ವಿವರಣೆಯಲ್ಲಿ ಸ್ವಲ್ಪಮಟ್ಟಿನ ವೈವಿಧ್ಯವಿದೆ. ಅದರ ಪ್ರಕಾರ—

1) ಅನುಭಾವಸ್ಥಲ 2) ಶರಣಸಂಗವಿಯೋಗಾವಸ್ಥೆಯ ಸ್ಥಲ 3) ಶರೀರ ನಿರಸನ 4) ಮನೋನಿರಸನ 5) ಇಂದ್ರಿಯ ನಿರಸನ 6) ಸಂಸಾರ ನಿರಸನ 7) ಸಂಸಾರವ್ಯಾಪ್ತಿ ನಿರಸನ 8) ನಿದ್ರಾನಿರಸನ 9) ದ್ವಂದ್ವಕರ್ಮ ನಿರಸನ 10) ಆಶಾನಿರಸನ 11) ತ್ರಿಬಂಧನಿರಸನ 12) ಮಾಯಾ ವಿಲಾಸವಿಧಿ 13) ಜನನಭಯ 14) ಜ್ಞಾನಪರಾಮರಿಕೆಯ ಸ್ಥಲ 15) ಶಿವ ಕರುಣಾಹ್ವಾನ 16) ದೃಷ್ಟನಷ್ಟ 17) ವೈರಾಗ್ಯ 18) ಅನರ್ಥಜೀವಿತ

ನಿರಸನ 19) ಅನ್ಯದೇವನಿರಸನ 20) ಅನ್ಯದೇವತಾಭಜನನಿರಸನ 21) ಶಿವಲಿಂಗಾರ್ಚನಪ್ರತಿಷ್ಠಾ 22) ಮಾಗದ್ವೈತನಿರಸನ 23) ಶೂನ್ಯ 24) ವಿಶ್ವೋತ್ಪತ್ತಿ 25) ಸ್ವಯಂಭುಲಿಂಗ ಉತ್ಪತಿ 26) ದೇಹದೇಹಿಗಳ ಉತ್ಪತ್ತಿ 27) ಅಷ್ಟಮೂರ್ತಿನಿರಸನ 28) ಸರ್ವಗತನಿರಸನ 29) ವಿದ್ಯಾವಾದನಿರಸನ 30) ಕರ್ಮವಾದನಿರಸನ 31) ಕರ್ಮಯೋಗನಿರಸನ 32) ಊರ್ಧ್ವಪುಂಡ್ರನಿರಸನ 33) ಆದೀಕ್ಷಿತಲಿಂಗಾರ್ಚನನಿರಸನ 34) ಶೈವ ದೀಕ್ಷಾನಿರಸನ 35) ಪೂರ್ವದೀಕ್ಷಾಪ್ರತಿಷ್ಠಾ 36) ಭವಿಸಂಗನಿರಸನ 37) ಭವಿಸಾರನಿರಸನ 38) ಪರದಾರನಿರಸನ 39) ಕಳವುನಿರಸನ 40) ಹುಸಿ ನಿರಸನ 41) ಹಿಂಸಾನಿರಸನ 42) ತಾಮಸಭಕ್ತಸಂಗನಿರಸನ 43) ತಾಮಸದೀಕ್ಷಾನಿರಸನ 44) ಸಹಜದೀಕ್ಷಾಸ್ಥಲ.

ಅಂಗಸ್ಥಲದ ಬಗೆಗೆ ಗುಬ್ಬಿ ಮಲ್ಲಣ್ಣನವರ ಗಣಭಾಷ್ಯರತ್ನಮಾಲೆಗೂ ಇತರ ಕೃತಿಗಳಿಗೂ ಇರುವ ವ್ಯತ್ಯಾಸ ಅತ್ಯಲ್ಪ. ಅಂತೆಯೇ ಸಿದ್ಧಾಂತಶಿಖಾಮಣಿಯಲ್ಲಿ ಉಕ್ತವಾಗಿರುವ ಸ್ಥಲ ನಿರೂಪಣೆಯಲ್ಲೂ ಅಪಾರ ಅಂತರ ಕಂಡುಬರುವುದಿಲ್ಲ. ಹಿಂದೆ ಹೇಳಿದ ಕೃತಿಗಳಲ್ಲದೆ ಮಲ್ಲಿಕಾರ್ಜುನ ಒಡೆಯರ ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾ ಭರಣ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ, ವಿಶೇಷಾನುಭವ ಷಟ್‌ಸ್ಥಲ, ಶಿವಯೋಗಪ್ರದೀಪಿಕೆ, ಚನ್ನಬಸವಶಿವಯೋಗೀಂದ್ರರ ಕ್ಷೇತ್ರಜ್ಞಸುಮನೋವಾದ, ಹರತಾಳನಂಜಯ್ಯನ ಆಚರಣೆಸಂಬಂಧದ ವಚನಗಳು, ಲಿಂಗಚಿದಮೃತಬೋಧೆ ಮುಂತಾದ ಕೃತಿಗಳಲ್ಲೂ ಸ್ಥಲನಿರೂಪಣೆಗಳಿವೆ. ಅದರಂತೆಯೇ ಅನೇಕ ಶರಣರ ವಚನಗಳಲ್ಲಿ ಸ್ಥಲವಿವರಣೆ ಇದೆ. ಆದರೆ ನೂರೊಂದು ಸ್ಥಲಗಳನ್ನು ವಿವರಿಸಿರುವುದು ಏಕೋತ್ತರಶತಸ್ಥಲ ನಿರ್ದೇಶನಕ್ಕಾಗಿ ಮೀಸಲಾಗಿರುವ ಹಿಂದೆ ಹೇಳಿದ ಕೆಲವು ಕೃತಿಗಳಲ್ಲಿ ಮಾತ್ರ. ಉಳಿದ ಕೃತಿಗಳಲ್ಲಿ ಅಂಗಸ್ಥಲ ಲಿಂಗಸ್ಥಲಗಳ ಸಂಪೂರ್ಣವಾದ ಪ್ರತ್ಯೇಕವಾದ ನಿರೂಪಣೆಗಳಿಲ್ಲ.

ಸ್ಥಲ ನಿರ್ದೇಶನ ಜೀವದ ಮುನ್ನಡೆಯನ್ನು ಅಥವಾ ದೇವತ್ವದ ಪರಿವರ್ತನೆಯನ್ನು ಸೂಚಿಸುತ್ತದೆ. ಈ 44 ಸ್ಥಲಗಳಲ್ಲಿ ಹೇಗೆ ಪರಿವರ್ತನಕ್ರಿಯೆ ನಡೆಯುತ್ತದೆ ಎಂಬುದರ ವಿವರಣೆ ವೀರಶೈವದರ್ಶನದ ವೈಶಿಷ್ಟ್ಯ. ಅದೇ ಷಟ್‌ಸ್ಥಲ ಸಿದ್ಧಾಂತದ ರಹಸ್ಯ. ನೂರೊಂದು ಸ್ಥಲಗಳು ಷಟ್‌ಸ್ಥಲಾಂತರ್ಗತವಾದ ಪ್ರಕಾರಗಳು. ಷಟ್‌ಸ್ಥಲದ ಮೊದಲನೆಯದಾದ ಭಕ್ತಿಸ್ಥಲದಲ್ಲಿ 15 ಪ್ರಕಾರಗಳಿವೆ. ಅವುಗಳ ಆಚರಣೆಯ ಅಗತ್ಯವನ್ನು ಭಕ್ತಿಸ್ಥಲ ಬಿತ್ತರಿಸುತ್ತದೆ. ಷಟ್‌ಸ್ಥಲದ ವಿವರಣೆ ನೀಡುತ್ತ ಇದು ಮಾನಸಿಕವಾಗಿ ಪರಮಾತ್ಮನ ಅನುಸಂಧಾನದ ಮಹಾ ಮಾರ್ಗ. ಇಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಪಡೆಯುವ ಮೋಕ್ಷವೆಂಬುದೇ ಇಲ್ಲ. ಮೋಕ್ಷಪದದ ಅರ್ಥ 'ಮುಚ್'ಎಂದರೆ ಬಿಡು ಎಂದಾಗುತ್ತದೆ. ಆತ್ಮನು ದೇಹವನ್ನು ಬಿಟ್ಟುಹೋಗುವುದೇ ಮೋಕ್ಷವೆಂದು ಕೆಲವರ ಮತ. ಆದರೆ ಷಟ್‌ಸ್ಥಲದಲ್ಲಿ ಆತ್ಮನು ದೇಹಸಹಿತ

ವಾಗಿಯೇ ಪ್ರಸಾದಕಾಯನಾಗುತ್ತಾನೆ. ಹೀಗೆ ಕಾಯಕವನ್ನು ಪ್ರಸಾದ ಮಾಯವನ್ನಾಗಿ ಮಾಡುವಲ್ಲಿ, ಇಂದ್ರಿಯಂಗಳು ವಿಷಯವ್ಯಾಮೋಹವನ್ನು ಬಿಟ್ಟು ಲಿಂಗಪಥವನ್ನು ಹಿಡಿಯುತ್ತವೆ. ಆಂತರಿಕವಾದ ಈ ಮಾರ್ಪಾಡು ಷಟ್‌ಸ್ಥಲದ ಉದ್ದೇಶ. ಲೀಲೆಗೊಂದು ಎರಡಾದ ಲಿಂಗವು ಅಂಗನಿಗಾಗಿಯೇ ಮತ್ತೆ ಲಿಂಗವಾಗಿ ಬಂದಿತು. ಅಂಗನ ಸ್ಥೂಲ, ಸೂಕ್ಷ್ಮ, ಕಾರಣತನುವಿಡಿದು; ಇಷ್ಟ, ಪ್ರಾಣ, ಭಾವ ವೆಂದು ಮೂರಾಯಿತು. ಷಡಿಂದ್ರಿಯಗಳ ಆನುವಿಡಿದು, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಎಂದು ಆರು ಬಗೆಯಾಗಿ ನಾಸಿಕ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಆತ್ಮ, ಈ ಷಡಿಂದ್ರಿಯಂಗಳಲ್ಲಿ ನೆಲೆಗೊಂಡಿತು ಅಂಗದ ಕ್ರಿಯೆಗಳು ಲಿಂಗದ ಕ್ರಿಯೆಗಳಾಗಬೇಕು. ಪದಾರ್ಥ, ಪ್ರಸಾದ ಕಾಯುವಾಗ ಎಂಬುದೇ ಷಟ್‌ಸ್ಥಲದ ಉದ್ದೇಶ. ಇಲ್ಲಿರುವುದು ಪರಿಪೂರ್ಣಯೋಗ. ಆ ಪರಿ ಪೂರ್ಣ ಯೋಗಾನುಸಂಧಾನದಲ್ಲಿ ಷಡಿಂದ್ರಿಯಗಳು ತಮ್ಮಲ್ಲಿ ನೆಲೆನಿಂದ ಲಿಂಗವನ್ನೇ ಆರಾಧಿಸಿ ಲಿಂಗವೇ ಆಗಬೇಕು. ಆಯಾ ಇಂದ್ರಿಯದ ವಿಷಯಂಗಳು ಪ್ರಸಾದವಾಗಿ ಲಿಂಗಭೋಗೋಪಭೋಗಿಯಾಗಬೇಕು. ಇದು ಸದಾಚಾರ ಸತ್ಕ್ರಿಯೆಗಳಿಂದ ಸಾಧ್ಯ ವಾಗುತ್ತದೆ.[24] ಎಂದು ವಿದ್ವಾಂಸರು ಸ್ಥಲ ನಿರೂಪಣೆಯ ಕಾರಣವನ್ನು ಪ್ರಭಾವ ಯುತವಾಗಿ ಅರ್ಥೈಸಿದ್ದಾರೆ. ಈ ವ್ಯಾಖ್ಯೆಯಲ್ಲಿ ಜೀವಕ್ಕೆ ಆಶ್ರಯವಾದ ದೇಹವು ಪ್ರಸಾದಕಾಯವಾಗಿ ಪರಿವರ್ತನೆಗೊಳ್ಳಬೇಕೆಂಬುದನ್ನು, ಮನ ಮತ್ತು ಬುದ್ಧಿಗಳೂ ಲಿಂಗಗತವಾಗಬೇಕೆಂಬುದನ್ನು ವಿವರಿಸಿದೆ. ಸ್ಥಲಗಳು ವ್ಯಾವಹಾರಿಕ ಹಾಗೂ ವೈಜ್ಞಾನಿಕವಾಗಿ ಹೇಗೆ ಪರಿವರ್ತನಗೊಳ್ಳುತ್ತವೆಂಬುದನ್ನು ಪ್ರಗತಿ ಪ್ರಕಾರವನ್ನು ವಿಮರ್ಶೆಮಾಡಿ ತಿಳಿಯಬೇಕಾಗುತ್ತದೆ. ಈ ಪರಿವರ್ತನೆಗೆ ಭಕ್ತಿಯೇ ಪ್ರಮುಖ ನೆಲೆಗಟ್ಟು. ಆದುದರಿಂದ ಭಕ್ತಸ್ಥಲದಿಂದಲೇ ಜೀವನ ಸಾಧನಾಕ್ರಿಯೆ ಪ್ರಾರಂಭ ವಾಗುತ್ತದೆ. ಇನ್ನು ಭಕ್ತಿ ಎಂದರೇನು ಎಂದು ಸೂಕ್ಷ್ಮವಾಗಿ ತಿಳಿದುಕೊಳ್ಳುವುದು ಅಗತ್ಯ. ಭಕ್ತಿಯ ಬಗೆಗೆ ವಿಪುಲ ವ್ಯಾಖ್ಯಾನ ನಡೆದಿದೆ.

> ಭಜನಂ ಭಕ್ತಿಃ। ಭಜ್ಯತೇ ಅನಯಾ ಇತಿ ಭಕ್ತಿಃ। ಭಜಂತಿ
> ಅನಯಾ ಇತಿ ಭಕ್ತಿಃ॥ ಎಂದೂ
> ''ಪೂಜ್ಯೇಷ್ವನುರಾಗೋ ಭಕ್ತಿಃ'' ಎಂದೂ ಶ್ರುತಿಗಳಲ್ಲಿ ಉಲ್ಲೇಖಿಸಿದೆ.

ನಾರದರು ತಮ್ಮ ಭಕ್ತಿಸೂತ್ರದಲ್ಲಿ—

> ಸಾ ತ್ವಸ್ಮಿನ್ ಪರಮಪ್ರೇಮರೂಪಾ। ಅಮೃತಸ್ವರೂಪಾ ಚ॥

ಎಂದೂ, ಶಾಂಡಿಲ್ಯರು ತಮ್ಮ ಭಕ್ತಿಸೂತ್ರದಲ್ಲಿ
''ಸಾ ಪರಾನುರಕ್ತಿರೀಶ್ವರೇ'' ಎಂದೂ ವ್ಯಾಖ್ಯಾನಿಸಿದ್ದಾರೆ.

ಮಧುಸೂದನಸರಸ್ವತಿಯವರು ತಮ್ಮ ಭಕ್ತಿರಸಾಯನ ಗ್ರಂಥದಲ್ಲಿ

> ''ದ್ರವೀಭಾವಪೂರ್ವಿಕಾ ಮನಸೋ ಭಗವದಾಕಾರತಾರೂಪಾ

ಸವಿಕಲ್ಪವೃತ್ತಿರ್ಭಕ್ತಿಃ''॥ ಎಂದೂ, ಮತ್ತೊಂದೆಡೆಯಲ್ಲಿ
''ಧೃತಸ್ಸ ಭಗವದ್ಧರ್ಮಾಃಧಾರಾವಾಹಿಕತಾಂ ಗತಾ॥ ಸರ್ವೇಶೇ
ಮನಸೋ ವೃತ್ತಿರ್ಭಕ್ತಿರಿತ್ಯಭೀಧೀಯತೇ॥'' ಎಂದು ಅರ್ಥೈಸಿದ್ದಾರೆ.

ಭಜ ಇತ್ಯೇಷ ವೈ ಧಾತುಃ ಸೇವಾಯಾಂ ಪರಿಕೀರ್ತಿತಾ।
ತಸ್ಮಾತ್ ಸೇವಾ ಬುಧೈಃ ಪ್ರೋಕ್ತಾ ಭಕ್ತಿಃ ಸಾಧನ ಭೂಯಸೀ।

ಎಂದು ಗರುಡಪುರಾಣದಲ್ಲಿ ಹೇಳಿದೆ. ಈ ಎಲ್ಲ ವ್ಯಾಖ್ಯಾನಗಳ ಸಾರ ಒಂದು ಇನ್ನೊಂದರಲ್ಲಿ ತನ್ಮಯತೆಯನ್ನು ಹೊಂದುವುದು ಎಂದಾಗುತ್ತದೆ. ಜೀವ ದೇವನಲ್ಲಿ ಅನುರಕ್ತವಾಗುವುದು ಅಥವಾ ತಾದಾತ್ಮ್ಯವನ್ನು ಹೊಂದುವುದು ಎಂದು ಹೇಳ ಬಹುದು. ಶಂಕರಾಚಾರ್ಯರು 'ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭೀಧೀಯತೇ' ಅಂದರೆ ಜೀವ ಪರಮಾತ್ಮಸ್ವರೂಪದ ಅನುಸಂಧಾನ ಮಾಡುವುದೇ ಭಕ್ತಿಯೆಂದು ಹೇಳಿದ್ದಾರೆ. ಅನುಸಂಧಾನಶಬ್ದ ಪ್ರಧಾನ. ಇದು ಸ್ವರೂಪಜ್ಞಾನಕ್ಕೆ ಕ್ರಿಯೆಯನ್ನು ಪ್ರತಿಪಾದಿಸುತ್ತದೆ: ಸಾಧನೆಯ ಆವಶ್ಯಕತೆಯನ್ನು ಬಿತ್ತರಿಸುತ್ತದೆ.[25] ವೀರಶೈವ ದರ್ಶನದಲ್ಲಿ ಈ ವ್ಯಾಖ್ಯೆ ಸಮಗ್ರವಾಗಿ ಅನ್ವಯವಾಗುತ್ತದೆ. ಷಟ್‌ಸ್ಥಲದಲ್ಲಿ ಶಿವ ಯೋಗವೇ ಸಾಧನೆ. ಶಿವಾನುಭವವೇ ಸಿದ್ಧಿ. ಭಾವಲಿಂಗಗಳು ಆರಾಧನೆಯಿಂದ ಅಂಗ ಲಿಂಗವೆಂಬ ದ್ವೈತಭಾವದ ಅರಿವಿನಲ್ಲಿ ಕರಗುತ್ತ, ಪೂಜ್ಯ ಪೂಜಕಭಾವ ಮಾಯವಾಗಿ ಲಿಂಗಭಾವ ಒಲಿಯುತ್ತದೆ. ಅಂಗದಲ್ಲಿದ್ದ ಭಕ್ತಿ ಲಿಂಗದ ಶಕ್ತಿಯಾಗುತ್ತದೆ. ಅಂಗನ ಭಕ್ತಿಯೇ ಕ್ರಿಯೆ. ಲಿಂಗದ ಶಕ್ತಿಯೇ ಜ್ಞಾನ. ಅಂಗಾಂಗಸಾಮರಸ್ಯವೇ ಕ್ರಿಯಾಜ್ಞಾನಸಾಮರಸ್ಯ. ಇದೇ ಶಿವಾನುಭವ ವಿಶೇಷಾನುಭವ. ಇದೇ ವಿಶೇ ಷಾನುಭವದ ಷಟ್‌ಸ್ಥಲ[26] ಎಂದು ವೀರಶೈವದಾರ್ಶನಿಕರ ನಿರೂಪಣೆಯಾಗಿದೆ.

ಅಂಗನ ಭಕ್ತಿಯೇ ಕ್ರಿಯೆ ಎಂಬ ಮಾತು ಅರ್ಥವತ್ತಾದುದು. ಭಕ್ತಿ ಒಂದು ಮಾರ್ಗ, ಆಚರಣೆ. ಅದನ್ನು ಕ್ರಿಯೆ ಎನ್ನಲಾಗಿದೆ. ಕ್ರಿಯೆ ನಡೆಯುವುದಕ್ಕೆ ಮನಸ್ಸು ಪ್ರೇರಕ. ದೇಹ ಪೂರಕ, ಬುದ್ಧಿ ದರ್ಶಕ. ಈ ಮೂರರ ಸಮನ್ವಯದಿಂದ ಅಂಗ ಲಿಂಗದಲ್ಲಿ ಸಾಮರಸ್ಯವನ್ನು ಪಡೆಯಲು ಸಾಧ್ಯ. ಆದುದರಿಂದ ನಾವು ಜೀವದ ಸಮಗ್ರ ಪರಿಪೂರ್ಣತೆಯನ್ನು ಅಪೇಕ್ಷಿಸುವುದಾದರೆ ದೇಹದ ಪ್ರಾಮುಖ್ಯತೆಯನ್ನು ಕಡೆಗಣಿಸ ಲಾಗುವುದಿಲ್ಲ. ದೇಹವು ಆಧಿಭೌತಿಕಸಾಧನ, ಅದು ಸಾಧನೆಯ ಉಪಕರಣ, ಅದನ್ನು ನಾವು ಬಳಸಬೇಕಾಗುತ್ತದೆ ಎಂದಿದ್ದಾರೆ ಶ್ರೀ ಅರವಿಂದರು. (If our seeking is for a total perfection of the being the physical part of it cannot be kept aside ; for the body is the material basis, the body is the instrument which we have to use)[27] ಹೀಗೆ ದೇಹ, ಮನ ಮತ್ತು ಬುದ್ಧಿ ಮೂರರ ಸಮಗ್ರ ಪರಿವರ್ತನೆಯ ನಿರೂಪಣೆಯೇ ಅಂಗಸ್ಥಲದ ತತ್ವವಿಮರ್ಶೆಯಾ ಗಿದೆ. ಎಲ್ಲ ಸ್ಥಲ ಶಾಸ್ತ್ರನಿರ್ದೇಶಕರ ಅಭಿಮತದಂತೆ ಭಕ್ತಿಸ್ಥಲಾಂತರ್ಗತವಾದ 15 ಅಂಗಸ್ಥಲಗಳಲ್ಲಿ ಪಿಂಡಸ್ಥಲ ಮೊದಲನೆಯದು. ಜೀವಕ್ಕೆ ಅನೇಕ ಜನ್ಮಗಳಿವೆ.

ಹಿಂದಣ ಜನ್ಮದಲ್ಲಿ ಜಂಗಮುನ ಜರಿದೆನಾಗಿ ಬಾರದಭವಂಗಳಲ್ಲಿ ಬಂದೆ'' ಇತ್ಯಾದಿ ಶರಣರ ನುಡಿಗಳು ಜೀವಕ್ಕೆ ಅನಂತ ಜನ್ಮಗಳಿವೆಯೆಂಬುದನ್ನು ಸೂಚಿಸುತ್ತವೆ, ''ಅಯ್ಯಾ ಹಿಂದೆ ಮಾಡಿದ ಮಹಹಿಂದ ಬಂದೆ ಈ ಭವದಲ್ಲಿ.'' ''ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ'' ''ಎನ್ನನಾರಂ ಜನ್ಮಕ್ಕೆ ತಂದು ಅಘೋರನರಕದಲ್ಲಿಕ್ಕಿದುದ ನಾ ಬಲ್ಲೆ'' ಎಂದಂ ಬಸವಣ್ಣ ಹೇಳಿಕೊಂಡಿದ್ದಾರೆ. ಜನ್ಮಾಂತರಗಳನ್ನು ಜಗತ್ತಿನ ಎಲ್ಲ ಧರ್ಮಗಳೂ ಒಪ್ಪಿಕೊಂಡಿವೆ. ಜೀವ ಎಲ್ಲ ಪ್ರಾಣಿಗಳಲ್ಲಿಯೂ ಇರುತ್ತದೆ. ಆದರೆ ಮಾನವನಾಗಿ ಜನಿಸುವುದೂ ಪುಣ್ಯವಿಶೇಷ. ಮಾನವದೇಹದಲ್ಲಿ ಅವತರಿಸುವ ಜೀವಭಾವಕ್ಕೆ ಪ್ರಾಧಾನ್ಯ ಇದೆ. ಜನ್ಮಾಂತರದ ಪಾಪವಿಶೇಷಗಳು ನಷ್ಟವಾಗಿ ಪುಣ್ಯದ ಫಲದಿಂದ ಜೀವ ಪಿಂಡಸ್ಥಲದಲ್ಲಿ ಆವಿರ್ಭವಿಸುತ್ತದೆ. ತನ್ನಲ್ಲಿ ನಿತ್ಯಸಂಬಂಧದಿಂದಿದ್ದು ವಿಮರ್ಶ ಶಕ್ತಿಯಲ್ಲಿ ಅಡಕವಾಗಿರುವ ಅನಾದಿಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು ಜೀವನೆನಿಸಿಕೊಳ್ಳುವುದು. ಆ ಜೀವನು ದೇವ-ಮನುಷ್ಯ, ಪಶು-ಪಕ್ಷಿ, ಮೃಗ-ಜಲಚರ ಇತ್ಯಾದಿ ಅನಂತ ಭೇದಗಳಿಂದ ಕೂಡಿದ ಪ್ರಾಣಿವರ್ಗದಲ್ಲಿ ವಾಸಿಸುವನು. ಜೀವವು ದೇವನ ಅಂಶವೇ ಆದಮೇಲೆ ಪಶುಪ್ರಾಣಿಗಳಲ್ಲಿ ತೊಳಲುವುದೇಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ।
ದೇವತಿರ್ಯಕ್‌ಮನುಷ್ಯಾದಿ ನಾನಾಯೋನಿವಿಭೇದತಃ॥ [28]

ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ದೇವ-ಮನುಷ್ಯ ಪಶುಪಕ್ಷ್ಯಾದಿಯಾಗಿ ಜನಿಸುತ್ತಾರೆ ಎಂದಿದೆ. ಜೀವನು ಶುದ್ಧಾಂತಃಕರಣನಾಗಲು ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧಭಕ್ತಿಯು ಉತ್ಪನ್ನವಾಗುವುದು. ಈ ಪ್ರಕಾರದಿಂದ ಶುದ್ಧ ಶಿವಭಕ್ತಿಯುಕ್ತವಾದ ಜೀವನು ಚರಮಶರೀರಿಯಾಗಿ ಪಿಂಡಶಬ್ದವಾಚ್ಯನಾಗುವನು. [29] ಶರೀರಕ್ಕಿಂತಲೂ ಆತ್ಮನು ಭಿನ್ನನಾಗಿರುವನೆಂದೂ, ಆತ್ಮನಿಗಿಂತಲೂ ಪ್ರೇರಕನಾದ ಈಶ್ವರನು ಭಿನ್ನವಾಗಿರುವನೆಂದೂ, ಯಾವನು ಜೀವಾತ್ಮ ಪರಮಾತ್ಮರ ಸ್ವರೂಪವನ್ನು ತಿಳಿಯುತ್ತಾನೆಯೋ ಅವನು ಪಿಂಡಜ್ಞಾನಿಯೆನಿಸಿಕೊಳ್ಳುವನು. [30] ಪಿಂಡಗತವಾಗಬೇಕಾದರೂ ಶಿವಾನುಗ್ರಹವಿರಬೇಕು, ಶಿವತ್ವವಿರಬೇಕು. ಆದರೆ ಶಿವತ್ವದ ಅರಿವು ಪಿಂಡಸ್ಥಲದಲ್ಲಿ ಇರುವುದಿಲ್ಲ. ಶರಣರು ಪಿಂಡಸ್ಥಲವನ್ನು ಇನ್ನೂ ರಮ್ಯವಾಗಿ ನಿರೂಪಿಸಿದ್ದಾರೆ. ಬಸವಣ್ಣನವರು ''ಉದಕದೊಳಗಣ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿತ್ತು. ಸಸಿಯೊಳಗಣ ರಸದ ರುಚಿಯಂತಿತ್ತು. ನನೆಯೊಳಗಣ ಪರಿಮಳದಂತಿತ್ತು ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿತ್ತು'' ಎಂದಿದ್ದಾರೆ. [31] ಚೆನ್ನಬಸವಣ್ಣನವರ ವಿಶ್ಲೇಷಣೆ ಇನ್ನೂ ಗಂಭೀರವಾಗಿದೆ.

''ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು, ಕ್ಷೀರದೊಳಗಣ ತುಪ್ಪದಂತಿದ್ದಿತ್ತು, ಚಿತ್ರಕನೊಳಡಗಿದ ಚಿತ್ರದಂತಿದ್ದಿತ್ತು, ಆಲಿಯೊಳಡಗಿದ ತೇಜದಂತಿದ್ದಿತ್ತು, ನುಡಿಯೊಳಡಗಿದ ಅರ್ಥದಂತಿದ್ದತ್ತು, ಕೂಡಲ ಚೆನ್ನಸಂಗಯ್ಯ ನಿಮ್ಮ ನಿಲವು'' ಪ್ರಭುದೇವರ

ವಿಶ್ಲೇಷಣೆ ಮತ್ತಷ್ಟು ಗಹನವಾದದು. ''ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ, ಗುಹೇಶ್ವರ ನಿಮ್ಮ ಶರಣಸಂಬಂಧ, ಅಪ್ರತ್ಯಕ್ಷವಾಗಿ ಅಗೋಚರವಾಗಿ ಇರುವಿಕೆಯ ಅರಿವಾಗುವುದೆಂತು ಎಂಬ ಸಮಸ್ಯೆ ಉದಿಸುತ್ತದೆ. ಅದಕ್ಕೆ ಉತ್ತರವಾಗಿ ಪ್ರಭುದೇವರು ಹೀಗೆ ಹೇಳುತ್ತಾರೆ.

''ಕಲ್ಲೊಳಗಣ ಕಿಚ್ಚು ಉರಿಯಬಲ್ಲದೆ, ಬೀಜದೊಳಗಣ ವೃಕ್ಷ ಉಲಿಯಬಲ್ಲುದೇ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು, ಗುಹೇಶ್ವರ ನಿಮ್ಮ ನಿಲವನನುಭವಸುಖಿಬಲ್ಲ'' ಪಿಂಡದೊಳಗಿರುವ ಪರಮಾತ್ಮನ ಅರಿವು ಅನುಭವದಿಂದ ಮಾತ್ರ ವೇದ್ಯ-ಅನುಭವವೂ ಅನಿರ್ವಚನೀಯ ಸ್ಥಿತಿಯಲ್ಲಿರುತ್ತದೆ. ಅದನ್ನೇ ಪ್ರಭುದೇವರು ''ಜಲದೊಳಗಣಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತ್ತು ನೋಡಾ ! ನೆಲೆಯನರಿದು ನೋಡಿಹೆನೆಂದಡೆ ಅದು ಜಲವು ತಾನಲ್ಲ. ಕುಲದೊಳಗಿದ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರು ? ಹೊರಗೊಳಗೆ ತಾನಾಗಿದ್ದು ಮತ್ತೆ ತಲೆದೋರದಿಪ್ಪುದು, ಗುಹೇಶ್ವರ ನಿಮ್ಮ ನಿಲವು ನೋಡಾ'' ಎಂಬ ಪ್ರಭುವಾಣಿ ಪಿಂಡನ ಇರವಿಕೆಯನ್ನು ವಿವರಿಸಿದೆ. ಪಿಂಡಸ್ಥಲದಲ್ಲಿ ಶಿವತ್ವವಿದ್ದರೂ ಅದು ವ್ಯಕ್ತವಾಗುವುದಿಲ್ಲ. ಅವ್ಯಕ್ತ ವ್ಯಕ್ತವಾಗುವ ಕ್ರಿಯೆಗೆ ಇನ್ನೂ ಸಿಲುಕಿರುವುದಿಲ್ಲ.

ಜಾಯತೇ ಶಿವಕಾರುಣ್ಯಾದಾಸ್ಫುಟಾ ಭಕ್ತಿರೈಶ್ವರೀ ।
ಜಂತುರಂತ್ಯಶರೀರೋಽ ಸೌಪಿಂಡಶಬ್ದಾಭಿಧೇಯಕಃ ॥
ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ ॥
ಶಿವಭಕ್ತಿಸಮುತ್ಪನ್ನ ಪ್ರಪಂಚೇಽಸ್ಮಿನ್ವಿಕಲಿತೇ ।
ಪುಣ್ಯಾಧಿಕ್ಯಾತ್ ಕ್ಷೀಣಪಾಪಃ ಶುದ್ಧಾತ್ಮಾ ಪಿಂಡನಾಮಕಃ ॥

ಅಂತಃಕರಣಗಳು ಶುದ್ಧವಾಗಿ ಶಿವಕೃಪೆಯಿಂದ ಭಕ್ತಿಯುದಿಸಿ, ಪಿಂಡ ಬಂಧನದಿಂದ ಪಾರುಗೊಳ್ಳುವುದು. ಅನೇಕ ಜನ್ಮಗಳಿಂದ ಮಾಡಲ್ಪಟ್ಟ ಪಾಪಪುಣ್ಯಗಳ ಸಮೂಹವು ನಾಶವಾಗಿ ಅಂತಃಕರಣ ಶುದ್ಧವಾಗುವುದು. ನಾನಾತೆರನಾದ ಜೀವರಾಶಿಯಲ್ಲಿ ಬಂದರೂ ಪುಣ್ಯಸಂಚಯನದಿಂದ ಪಾಪಕ್ಷಯವಾಗಿ ಶಿವಭಕ್ತಿಯುದಿಸುವುದು. ಆ ಶುದ್ಧಾತ್ಮವು ಪಿಂಡವೆನಿಸಿಕೊಳ್ಳುವುದು.[34]

ಪಿಂಡಕ್ಕೆ ಇಷ್ಟೊಂದು ವಿವರಣೆ ಕೊಡಲು ದಾರ್ಶನಿಕರೂ ಶರಣರೂ ಅಪಾರ ಅನುಭವಗಳಿಸಿದ್ದಾರೆ. ಮಾನವನಲ್ಲದೆ ಪ್ರಾಣಿಜೀವನದಲ್ಲಿದ್ದಾಗಲೂ ಪುಣ್ಯಕಾರ್ಯಗಳನ್ನು ಮಾಡಬಹುದು. ಪುಣ್ಯಕಾರ್ಯಗಳನ್ನು ಮಾಡಲು ಶಿವಾನುಗ್ರಹವೂ ಬೇಕು. ಶಿವಕೃಪೆಯಿಂದ ಪುಣ್ಯಕಾರ್ಯಗಳು ಪ್ರಾಣಿಗಳಿಂದಲೂ ನಡೆಸಲ್ಪಟ್ಟು ಮಾನವಜೀವನ ಪ್ರಾಪ್ತವಾಗುತ್ತದೆ. ಸಾಮಾನ್ಯವಾಗಿ ಒಂದು ಉದಾಹರಣೆ ಕೊಡುವುದಾದರೆ-ಒಂದು

ಸಾಕಿದ ನಾಯಿಯು ಮಾನವನನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಅರ್ಪಿಸುತ್ತದೆ. ತಾನು ಎಚ್ಚರಿದ್ದು ಅನ್ಯರಮನೆಯಲ್ಲಿ ಕೊಲೆಯೋ ಕಳ್ಳತನವೋ ಆಗುವುದನ್ನು ತಪ್ಪಿಸಲು ಯತ್ನಿಸಬಹುದು. ಅದರ ಮಟ್ಟಿಗೆ ಅಷ್ಟೇ ಪುಣ್ಯಕಾರ್ಯ. ಆ ಕಾರ್ಯಕ್ಕೆ ತಕ್ಕ ಫಲವನ್ನು ಅಂದಲ್ಲದಿದ್ದರೂ ಮತ್ತೊಂದು ಜನ್ಮದಲ್ಲಿ ಅನುಭವಿಸುತ್ತದೆ. ಹೀಗೆ ಪ್ರಾಣಿಜೀವನದಲ್ಲೂ ಪುಣ್ಯಕೃತ್ಯವನ್ನೆಸಗುವ ಅವಕಾಶಗಳು ಲಭ್ಯವಾಗುತ್ತವೆ. ದೇಹ ಜೀವ ಭೇದವನರಿಯದ ಮೂಲಸ್ಥಿತಿ ಪಿಂಡಸ್ಥಲ. ಅದೇ ಶಿವಮಾಯೆ. ಅದರ ಅರಿವಿಲ್ಲದ ಸ್ಥಿತಿ. ಆದರೆ ಅದು ಅಷ್ಟಕ್ಕೆ ಪರ್ಯವಸಾನವಾಗುವುದಿಲ್ಲ. ಪಿಂಡ ತಾನಾರೆಂದು ಅರಿಯುವ ಪ್ರಕ್ರಿಯೆ ಪ್ರಾಕೃತವಾಗಿ ನಡೆಯುತ್ತದೆ. ಮನುಷ್ಯದೇಹದಲ್ಲಿ ಜೀವವು ಪಿಂಡವಾಗಿ ಅಂಕುರಗೊಂಡಾಗಲೇ ತಾನಾರೆಂಬುದನ್ನು ಅರಿಯುವ ಬಯಕೆಯೂ ಸಹ ಶಿವಾನುಗ್ರಹದಿಂದಲೇ ಉಂಟಾಗುತ್ತದೆ. ಭಾರತೀಯರು ಪಿಂಡಸ್ಥಲದ ಉತ್ಪನ್ನವನ್ನು ಕುರಿತು ಚಿಂತಿಸಿದಂತೆ ಪಾಶ್ಚಾತ್ಯ ವಿಜ್ಞಾನಿಗಳೂ ಚಿಂತಿಸತೊಡಗಿದ್ದರು. ಜೀವಕಣದಿಂದಲೇ ಜೀವಗಳು ಉತ್ಪನ್ನವಾಗುತ್ತವೆಂದು ಬಹುಹಿಂದೆಯೇ ವೈಜ್ಞಾನಿಕವಾದ ನಿರ್ಧಾರಕ್ಕೆ ಬಂದಿದ್ದಾರೆ. 'The biological historians insisted that a closer reading of the literature of the century indicates that these men had many predecessors who had stated, directly or obliquely that the cells were the units of life

ಜೀವದಿಂದ ಜೀವೋತ್ಪತ್ತಿಸಿದ್ಧಾಂತವು ದಾರ್ಶನಿಕವಾಗಿ ವೈಜ್ಞಾನಿಕವಾಗಿ ಸಿದ್ಧವಾಗಿದೆ. ಇದರಿಂದ ಜೀವ ಅಮರ ಮತ್ತು ಪುನರಾವರ್ತನವಾಗುವುದೆಂಬ ಭಾರತೀಯದಾರ್ಶನಿಕವಾದವು ನಿಶ್ಚಿತವಾಗಿದೆ. ಇಂದು ಒಂದು ದೇಹದಲ್ಲಿ ರೂಪ ತಳೆದ ಜೀವ, ಹಿಂದೆಯೂ ಇತ್ತೆಂಬುದರ ಅರಿವಾಗುವುದೇ ಪಿಂಡಜ್ಞಾನಸ್ಥಲ. ಅದನ್ನೇ ಬಸವಣ್ಣನವರು ತಮ್ಮನ್ನು ತಾವು ಅರಿತು ಹೀಗೆ ನುಡಿದಿದ್ದಾರೆ—

"ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ
ಬಾರದಿರ್ದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ !
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ

ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಭೃತ್ಯನಮಾಡಿ ಎನ್ನನಿರಿಸಿದೊಂಡಿರ್ದಿರಯ್ಯಾ,

ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ,

ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು, ನಿಮ್ಮ ಲೀಲಾ ವಿನೋದದಿಂದ ಇರಿಸಿಕೊಂಡಿರ್ದಿರಯ್ಯಾ,

ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಮನಃ ಪ್ರೇರಕನಾಗಿರಲೆಂದಿರಿಸಿಕೊಂಡಿರ್ದಿರಯ್ಯಾ,

ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ಸರ್ವಕಾಲ ಸಂಹಾರವಮಾಡಲೆಂದಿರಿಸಿಕೊಂಡಿರ್ದಿರೆಯ್ಯಾ,

ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ,

ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನಮಾಡಿ ಹೆಸರಿಟ್ಟು ಕರೆದು ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ ಇದು ಕಾರಣ ಕೂಡಲ ಸಂಗಮದೇವಾ ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯ.'' ಎಂದು ಬಸವಣ್ಣನವರು ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ಬಿತ್ತರಿಸಿದ್ದಾರೆ.''[35] ಅಂತೆಯೇ ಅಲ್ಲಮರು 'ಮಾಯದ ಬಲೆಯಲ್ಲಿ ಸಿಲುಕಿದ ಮರುಳ ನಾನೆಂದರಿದ ಪರಿಯ ನೋಡಾ, ಲಿಂಗವೆಂದರಿದ ಪರಿಯ ನೋಡಾ, ತನ್ನ ವಿನೋದಕ್ಕೆ ಬಂದು ನಿಶ್ಚಿಂತನಿರಾಳ ಗುಹೇಶ್ವರನೆಂದರಿದ ಪರಿಯ ನೋಡಾ[37] ಎಂದು ತಮ್ಮ ಪಿಂಡಸ್ಥಲದರಿವನ್ನು ಬಿನ್ನವಿಸಿದ್ದಾರೆ. ಚನ್ನಬಸವಣ್ಣ ತಮ್ಮನ್ನು ತಾವು ಅರ್ಥಮಾಡಿಕೊಂಡುದಷ್ಟೇ ಅಲ್ಲ. ಬಸವಣ್ಣನವರ ಪೂರ್ವಾಶ್ರಯವನ್ನು ಕೃತಯುಗದಿಂದ ಹಿಡಿದು ಕಲಿಯುಗದವರೆಗೆ ವರ್ಣಿಸಿದ್ದಾರೆ. 'ಕಲಿಯುಗದಲ್ಲಿ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದದ ಪೂರ್ವಾಶ್ರಯವ ಕಳೆದು ಲಿಂಗವಾಗಿರುವ ಸ್ಥಳವನರಿತ ಮಹಾಂತ ಕೂಡಲಚನ್ನಸಂಗನ ಮಹಾ ಮನೆಯಲ್ಲಿ ಸರ್ವಾಚರಸಂಪನ್ನ ಬಸವಣ್ಣನೆಂಬ ಗಣೇಶನಾಗಿರ್ದನು ಕೇಳಾ ಪ್ರಭುವೆ'[38] ಅಕ್ಕಮಹಾದೇವಿಯು ''ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೇ ? ಅಪಾರ ಮಹಿಮ ಚನ್ನಮಲ್ಲಿಕಾರ್ಜುನನೆನ್ನೊಳಡಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಣ್ದೆರೆದೆನು'' ಎಂದು ತನ್ನರಿವಿನ ಕುರುಹನ್ನು ಅರುಹಿದ್ದಾರೆ.[39] ಪಿಂಡದ ಪೂರ್ವಾಶ್ರಯದ ಅರಿವಾದ ಮೇಲೆ ತನ್ನ ಈ ಅವಸ್ಥೆಗಳಿಗೆ ಕಾರಣವನ್ನು ಜೀವಿ ಹುಡುಕುತ್ತಾನೆ. ಸಂಸಾರಬಂಧನವೇ ಕಾರಣವೆಂದರಿತು ಅದರಿಂದಪಾರಾಗಲು ಪ್ರಯತ್ನಿಸುತ್ತಾನೆ. ಜೀವಕ್ಕೆ ಪಿಂಡಸ್ಥಲಜ್ಞಾನವಾದ ಮೇಲೆ ಮೂರು ದುಃಖಗಳು ಕಾಡುತ್ತವೆಂಬುದರ ಅರಿವು ಮೂಡುತ್ತದೆ. ಮೊದಲನೆಯದು ಆಧ್ಯಾತ್ಮಿಕ ದುಃಖ, ಅಂದರೆ ತತ್ವಾನುಸಂಧಾನದಲ್ಲಿರದ ಪ್ರಯುಕ್ತ ಈ ಭವಕ್ಕೆ ಬಂದೆನೆಂಬ ಪಶ್ಚಾತ್ತಾಪವುಂಟಾಗುತ್ತದೆ. ಆಧ್ಯಾತ್ಮಿಕ ದುಃಖದಲ್ಲೂ ಎರಡು ವಿಧ-ಬಾಹ್ಯಾಭ್ಯಂತರ ಆಧ್ಯಾತ್ಮಿಕ ದುಃಖಗಳು ; ವಾತ, ಪಿತ್ತ, ಶ್ಲೇಷ್ಮಗಳಿಂದಾದ ದುಃಖ ಬಾಹ್ಯಾಧ್ಯಾತ್ಮಿಕ ದುಃಖ, ಕಾಮ ಕ್ರೋಧಾದಿಗಳಿಂದುತ್ಪನ್ನವಾದ ದುಃಖ ಅಂತರಾಧ್ಯಾತ್ಮಿಕ ದುಃಖವೆನಿಸುತ್ತನೆ. ಬಾಹ್ಯಜೀವನದ ಭೌತಿಕ ವ್ಯಾಪಾರದಲ್ಲಿ ಸಂಭವಿಸುವ ದುಃಖ ಆಧಿಭೌತಿಕವಾದುದು.

ಗ್ರಹಾದಿಗಳಿಂದ ಅಂದರೆ ಪರಿಸರದಿಂದ ವೈಯಕ್ತಿಕ ಶಕ್ತಿಗೆ ಮೀರಿದ ಕಾರಣ ಗಳಿಂದ ಪ್ರಾಪ್ತವಾದ ದುಃಖಕ್ಕೆ ಆಧಿದೈವಿಕ ದುಃಖವೆಂದು ಕರೆಯಲಾಗಿದೆ.[40] ಮೂರು ವಿಧದ ದುಃಖ ಮನುಷ್ಯನನ್ನು ಆವರಿಸುವುದನ್ನು ಒಬ್ಬ ಶರಣರು ಸುಂದರ ನಿದರ್ಶನದೊಡನೆ ವಿವರಿಸುತ್ತಾರೆ. "ಬಟ್ಟೆಗೊಂಡು ಹೋಗುತ್ತಿಪ್ಪ ಮನುಜನೊಬ್ಬ ಹುಲಿ ಕಾಡುಗಿಚ್ಚು ರಕ್ಕಸಿ, ಕಾಡಾನೆಗಳು ನಾಲ್ಕೂ ದಿಶೆಯಿಂದ ಬರೆ ಕಂಡು, ಭರದಿಂದ ಹೋಗದೆಸೆಯಿಲ್ಲದೆ ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ, ಹಾವ ಕಂಡು ಇಲಿಕಡಿದ ಬಳ್ಳಿಯ ಹಿಡಿದು ನಿಲೆ, ಜೇನು ಹುಳುಗಳು ಮೈಯ್ಯನೂರುವಾಗ ಮೂಗಿನ ತುದಿಯಲ್ಲಿ ಒಂದು ಹನಿ ಮಧು ಬೀಳೆ ಆ ಮಧುವ ಕಂಡು ಹಿರಿದಪ್ಪ ದುಃಖವನ್ನೆಲ್ಲಾ ಸೈರಿಸಿ ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ, ಈ ಸಂಸಾರಸುಖ ನೋಡಿದಡೆ ದುಃಖದಾಗರ ಇದನರಿತು ಸಕಲ ವಿಷಯಂಗಳಲ್ಲಿ ಸುಖವಿಂತುಂಟೆಂದು ನಿರ್ವಿಷಯನಾಗಿ ನಿಂದ ನಿಲವು ಚೆಮ್ಮಲಿಗೆಯ ಚೆನ್ನರಾಮು"[41] ಈ ನಿದರ್ಶನ ಸಂಸಾರ ದಂದುಗದ ಸುಂದರ ವರ್ಣನೆಯಾಗಿದೆ. ತನ್ನ ಹಿಂದಣ ಜನ್ಮದ ಅರಿವಾದ ಮೇಲೆ ಜೀವ ಈ ಭವಬಂಧನ ದಲ್ಲಿ ಅಂಟಿಕೊಳ್ಳುವುದಕ್ಕೆ ಹವಣಿಸುವುದು "ಶೂಲವನೇರುವ ಕಳ್ಳ ಹಾಲು ತುಪ್ಪವ ನುಂಡು ಮೇಲೇಸು ಕಾಲ ಬದುಕುವನೋ" ಎಂಬ ಪ್ರಶ್ನೆಗೆ ಉತ್ತರ ಕಾಣದೆ ದಿಕ್ಕುಗೆ ಟ್ಟಂತಾಗುತ್ತದೆ. ದುಃಖಕ್ಕೆ ಕಾರಣವನ್ನು ಅರಿತ ಮೇಲೆ ಅದರಿಂದ ಪಾರಾಗಲು ಯತ್ನಿಸುವುದು ಜೀವಿಯ ಕರ್ತವ್ಯ. ದುಃಖವನ್ನು ತನ್ನ ಸ್ವಪ್ರಯತ್ನದಿಂದ ದೂರ ಮಾಡಲು ಸಾಧ್ಯವಿಲ್ಲ ಆದಕ್ಕೆ ಮಾರ್ಗದರ್ಶನಬೇಕು. ಗುರುಕಾರುಣ್ಯಬೇಕು. ಅದನ್ನು ಗುರುಕಾರುಣ್ಯಸ್ಥಲವೆಂದು ಕರೆಯುತ್ತಾರೆ. ಗುರುವು ಶ್ರೇಷ್ಠ ಜೀವಿಯಾಗಿರಬೇಕು. ಅವರಿಂದ ಮಲತ್ರಯನಾಶಕವಾದ ವೇಧಾ, ಮಂತ್ರ ಮತ್ತು ಕ್ರಿಯಾದೀಕ್ಷೆಗಳನ್ನು ಪಡೆಯಬೇಕು. ಈ ದೀಕ್ಷೆ ದೇಹ ಮತ್ತು ಮನೊಬುದ್ಧಿಯ ಮೇಲೆ ಅಪಾರ ಪರಿಣಾಮ ವನ್ನುಂಟುಮಾಡುತ್ತದೆ. ಇದರಿಂದ ತ್ರಿಕರಣ ಶುದ್ಧಿಯಾಗುತ್ತದೆ. ಈ ದೀಕ್ಷಾ ಕ್ರಿಯೆಯಿಂದ ಲಿಂಗಧಾರಣೆಯನ್ನೇ ಪಡೆಯಬೇಕು. ಇದೇ ಲಿಂಗಧಾರಣ ಸ್ಥಲ : ವೀರಶೈವ ದರ್ಶನದಲ್ಲಿ ದೇವರ ಕುರುಹಾಗಿ ಲಿಂಗಧಾರಣೆ ಪ್ರತಿಯೊಬ್ಬ ವೀರಶೈವನಿಗೆ ಆಗಬೇಕಾದ ಪ್ರಾಥಮಿಕ ಕ್ರಿಯೆ. ಇಷ್ಟಲಿಂಗಕ್ಕೆ ಪ್ರಾಣಕ್ಕಿಂತಲೂ ಮಹತ್ವವಿದೆ. ಇಷ್ಟಲಿಂಗದ ಉಪಾಸನೆಯಿಂದ ಪ್ರಾಣಲಿಂಗದ ನಂತರ ಭಾವಲಿಂಗದ ಅನುಸಂಧಾನ ವಾಗುತ್ತದೆ. ಸ್ಥೂಲದೇಹದ ಶುದ್ಧಿಗೆ ಇಷ್ಟಲಿಂಗವೂ ಕಾರಣ, ತನುವಿನ ಶುದ್ಧಿಗೆ ಪ್ರಾಣಲಿಂಗವೂ, ಸೂಕ್ಷ್ಮ ದೇಹದ ಅರಿವಿಗೆ ಭಾವಲಿಂಗವೂ ನೆರವಾಗುತ್ತವೆ. ಹೀಗೆ ಲಿಂಗದಲ್ಲಿ ಮೂರು ವಿಧಾನವನ್ನು ವೀರಶೈವದರ್ಶನ ವಿವರಿಸುತ್ತದೆ. ಮೂರು ಹಂತದಲ್ಲಿ ಜೀವನಿಗೆ ದೇವನ ಸಂಸರ್ಗವುಂಟಾಗುತ್ತದೆ. ಹಠಯೋಗ ಸಿದ್ಧರಾದ ಸಿದ್ಧರಾಮೇಶ್ವರರು ಇಷ್ಟಲಿಂಗದ ಆವಶ್ಯಕತೆಯನ್ನು ಕುರಿತು ಅಪಾರ ಚರ್ಚೆ ನಡೆಸುತ್ತಾರೆ. ಅದಿಲ್ಲದೆ ಸಾಧನೆ ಸಾಧ್ಯವೆನ್ನುತ್ತಾರೆ. ಆಗ ಚೆನ್ನಬಸವಣ್ಣ ನವರು, ಬಸವಣ್ಣನವರು, ಪ್ರಭುದೇವರು ಮತ್ತಿತರ ಶರಣರು ಇಷ್ಟಲಿಂಗದ

ಅವಶ್ಯಕತೆಯನ್ನು ವಿಧಿವತ್ತಾಗಿ ವಿವರಿಸುತ್ತಾರೆ. ಶೂನ್ಯ ಸಂಪಾದನೆಯಲ್ಲಿ ಬರುವ ಈ ಪ್ರಸಂಗ ವೀರಶೈವದರ್ಶನದ ಒಂದು ರಸಮಯ ಸನ್ನಿವೇಶ ಎನ್ನಬಹುದು. ಸಿದ್ಧರಾಮೇಶ್ವರರಿಗೆ ಇದರ ಅರಿವಾದ ಮೇಲೆ "ದೃಷ್ಟವಪ್ಪ ಗುರುಕರುಣದಲ್ಲಿ ಇಷ್ಟ ಲಿಂಗವ ಸಂಬಂಧಿಸಿದ ಬಳಿಕ ಮತ್ತೆ ಯೋಗವುಂಟೇ ? ಸರ್ವಯೋಗಕ್ಕೆ ಶಿವಯೋಗ ಮಹಾಯೋಗವಾದ ಬಳಿಕ ಮತ್ತೆ ಕಿರಿದು ಯೋಗಂಗಳೆಂದು, ಪಾದೋದಕ ಪ್ರಸಾದಕ್ಕೆ ಹೊರಗಾಗಿ ಗುರುವಾಜ್ಞೆಯ ಮೀರಿದ ಗುರುದ್ರೋಹಿಗಳ ಎನ್ನುತ್ತ ಹೊದ್ದಿಸದಿರಯ್ಯಾ ನಿಮ್ಮ ಧರ್ಮ, ದೀಕ್ಷಾ ತ್ರಯದಲ್ಲಿ ಸಂಪನ್ನರಾಗಿ ಪ್ರಸಾದ ಲೋಲಂಪ್ತರಾಗಿ ಜಂಗಮವೇ ಲಿಂಗವೆಂಬವರ ಸಂಗಮದೊಳೆನ್ನನಿರಿಸಯ್ಯ ಕಪಿಲ ಸಿದ್ಧ ಮಲ್ಲಿಕಾರ್ಜುನಾ ನಿಮ್ಮ ಧರ್ಮ" ಎಂದು ಲಿಂಗತತ್ವಕ್ಕೆ ಶರಣಾದರು. ಸಿದ್ಧರಾಮೇಶ್ವರರ ಇಂತಹ ಪರಿವರ್ತನೆಗೆ ಶರಣರ ಅನುಭವಾಮೃತ ಕಾರಣವಾಯಿತು. ಲಿಂಗತತ್ತ್ವದ ಬಗೆಗೆ ಸಾಕಷ್ಟು ಪ್ರಶ್ನೆ ಗಳೂ ಈ ಪ್ರಸಂಗದಲ್ಲಿ ಉದ್ಭವಿಸಿದೆ. ಅದಕ್ಕೆ ಸಾಕಷ್ಟು ಸಮರ್ಥನೀಯ ಉತ್ತರವೂ ಸಿಕ್ಕಿದೆ. ಇಷ್ಟಲಿಂಗವು ವಿಶ್ವಲಿಂಗವನ್ನೆ ಅನುಸಂಧಾನಮಾಡಲು ದೊರೆತ ಸಾಧನ. ಅಂಗವು ನಿಜಲಿಂಗವಾಗಲು ನೆರವಾಗುವ ಸಾಧನಸಂಪತ್ತು. ತದನಂತರ ಅಂಗನ ಪರಿವರ್ತನೆ ಯಲ್ಲಿ ಭಸ್ಮವೂ ನೆರವಾಗುತ್ತದೆ. ಭಸ್ಮಜಾಬಾಲೋಪನಿಷತ್ತಿನಲ್ಲಿಯೂ ಎಲ್ಲಾ ಶರಣರ ವಚನಗಳಲ್ಲಿಯೂ ಭಸ್ಮದ ಅವಶ್ಯಕತೆ ಮತ್ತು ಫಲವನ್ನು ವಿವರಿಸಿದೆ. ಸಿದ್ಧಾಂತಶಿಖಾಮಣಿಯ ಏಳನೇ ಪರಿಚ್ಛೇದದಲ್ಲಿ ಭಸ್ಮಧಾರಣೆಯ ವಿಧಿವಿಧಾನಗಳನ್ನು ಹೇಳಿದೆ. ಇದಕ್ಕೆ ಭಸ್ಮಧಾರಣಸ್ಥಲವೆಂದು ಹೆಸರು. ಅದಕ್ಕೆ ಪೂರಕವಾಗಿ ರುದ್ರಾಕ್ಷ ಧಾರಣೆ ಮಾಡಬೇಕು. ರುದ್ರಾಕ್ಷಜಾಬಾಲ ಉಪನಿಷತ್, ಬೃಹಜ್ಜಾಬಾಲ ಉಪನಿಷತ್ ದೇವೀಭಾಗವತ, ಶರಣರ ವಚನಗಳಲ್ಲಿ ರುದ್ರಾಕ್ಷಿ ಮಹಿಮೆಯನ್ನು ವಿವರಿಸಿದೆ. ಸಿದ್ಧಾಂತಶಿಖಾಮಣಿಯಲ್ಲಿ ರುದ್ರಾಕ್ಷಿಯ ವೈವಿಧ್ಯವನ್ನು ವಿವರಿಸಿದೆ. ಬಾಹ್ಯಧಾರಣೆ ಗಳಾದ ಇಷ್ಟಲಿಂಗ, ಭಸ್ಮ, ರುಂದ್ರಾಕ್ಷಿಧಾರಣೆ ಜೀವನಿಗೆ ಹೇಗೆ ನೆರವಾಗುತ್ತದೆ ಎಂಬುದನ್ನು ಕೇವಲ ಶಾಸ್ತ್ರಾರ್ಥದಿಂದಲ್ಲ, ಒಂದೊಂದೂ ವೈಜ್ಞಾನಿಕವಾಗಿ ಸಮರ್ಥ ನೀಯವಾಗಿವೆ. ಜೀವನ ಮೇಲೆ ಇದರಿಂದಾಗುವ ಪರಿಣಾಮ ಅಪಾರವಾದುದು. ವೀರಶೈವದರ್ಶನದಲ್ಲಿ ಬಾಹ್ಯ ಮತ್ತು ಆಂತರಿಕ ಕ್ರಿಯೆಗಳೆರಡೂ ಅಂಗನು ಲಿಂಗದಲ್ಲಿ ಸಮರಸ ಹೊಂದಲು ಸಾಧನವಾಗುತ್ತವೆ.

ಅಂಗಸ್ಥಲದ ಆಂತರಿಕ ಪರಿವರ್ತನೆಗೆ ಮಂತ್ರ ಮುಖ್ಯ ಸಾಧನ. "ಮನನಾತ್ ತ್ರಾಯತೇ ಇತಿ ಮಂತ್ರ:" ಅಂದರೆ ಯಾವುದನ್ನು ಮನನ ಮಾಡುವುದರಿಂದ ನಮ್ಮ ತಾಪಗಳು ಪರಿಹಾರವಾಗುವುವೋ ಅದೇ ಮಂತ್ರ. ಇದಕ್ಕೆ ಪಂಚಾಕ್ಷರ ಜಪಸ್ಥಲ ಎಂದು ಕರೆಯಲಾಗಿದೆ. ಪಂಚಅಕ್ಷರ ಸಾಧನೆಯಲ್ಲಿ ಮುಖ್ಯ ವಿಷಯಗಳನ್ನು ಸೂಚಿ ಸುತ್ತದೆ. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚಭೂತಗಳು, ಗಂಧ, ರಸ, ರೂಪ ಸ್ಪರ್ಶ. ಶಬ್ದಗಳೆಂಬ ಪಂಚ ತನ್ಮಾತ್ರಗಳು, ಕಣ್ಣು ಕಿವಿ ಮೂಗು

ನಾಲಗೆ, ಚರ್ಮಗಳೆಂಬ ಪಂಚಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳು, ಸದ್ಯೋಜಾತ, ವಾಮದೇವ, ಅಘೋರ ತತ್ಪುರುಷ, ಈಶಾನರೆಂಬ ಪಂಚಬ್ರಹ್ಮರು, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳು ಎಲ್ಲವೂ ಪಂಚ ಅಕ್ಷರಗಳಿಂದ ಕೂಡಿದೆ. ಈ ಪಂಚತ್ವದ ಪ್ರಚೋದನೆಯೇ ಪಂಚಾಕ್ಷರದ ಕಾರ್ಯ. 'ನಮಃಶಿವಾಯ' ಇದೇ ಪಂಚಾಕ್ಷರ ಮಂತ್ರ. ಈ ಮಂತ್ರಕ್ಕೆ ಸರ್ವಮೂಲವಾದ ಓಂಕಾರ ಸೇರಿದರೆ ಷಡಕ್ಷರ ಮಂತ್ರವಾಗುತ್ತದೆ. ಈ ಮಂತ್ರವನ್ನು ಸಾಧಕನು ಏಕಾಗ್ರಚಿತ್ತನಾಗಿ ಧ್ಯಾನಿಸಬೇಕು. ಈ ಮಂತ್ರದ ಪಠಣದಲ್ಲೂ ಮೂರು ವಿಧ–ವಾಚಿಕ, ಉಪಾಂಶು ಮತ್ತು ಮಾನಸಿಕ ಎಂದಿದೆ. ಎಲ್ಲರೂ ಕೇಳುವಂತೆ ಹೇಳುವುದು ವಾಚಿಕ, ಇನ್ನೊಬ್ಬರಿಗೆ ಕೇಳಿಸದಂತೆ ತುಟಿಗಳನ್ನಾಡಿಸುತ್ತಾ ಪಠಿಸುವುದು ಉಪಾಂಶು, ತುಟಿಗಳನ್ನಾಡಿಸದಂತೆ ಮನಸ್ಸಿನಲೇ ಜಪಿಸುವುದು ಮಾನಸಿಕ. ಇವುಗಳಲ್ಲಿ ಸಾಧಕನು ತನ್ನ ಪ್ರಕೃತಿಗೆ ಪ್ರವೃತ್ತಿಗೆ ಅನುಗುಣವಾದುದನ್ನು ಅನುಸರಿಸಬೇಕು.

ಅಂಗವು ಲಿಂಗನೊಳಗಾಗಲು ಭಕ್ತಿ ಪ್ರಮುಖ ಸಾಧನ. ಪಾರಮೇಶ್ವರ ತಂತ್ರದಲ್ಲಿ 'ಸರ್ವತ್ರ ಭಕ್ತಿರೇಕೈವ ಭಕ್ತಾನಾಂ ಮುಕ್ತಿಸಾಧನಂ' ಎಂದಿದೆ. ಅಂದರೆ ಮುಕ್ತಿ ಸಾಧನೆಗೆ ಸರ್ವವಿಧದಲ್ಲೂ ಭಕ್ತಿಯೇ ಸಾಧನವೆಂದಿದೆ. ಭಕ್ತಿಯ ವಿಷಯದಲ್ಲಿ ಅಪಾರ ವಿಶ್ಲೇಷಣೆ ನಡೆದಿರುವುದನ್ನೂ ಹಿಂದೆ ಹೇಳಿದೆ. ವೀರಶೈವದಾರ್ಶನಿಕರು ಇದನ್ನು ವಿಶಿಷ್ಟರೀತಿಯಲ್ಲಿ ವಿವರಿಸುತ್ತಾರೆ.

"ಸಾ ಭಕ್ತಿರ್ದ್ವಿವಿಧಾ ಜ್ಞೇಯಾ ಬಾಹ್ಯಾಭ್ಯಂತರಭೇದತಃ।
ಬಾಹ್ಯಾ ಸ್ಥೂಲಾಽಽಂತರಾ ಸೂಕ್ಷ್ಮಾ ವೀರಮಾಹೇಶ್ವರಾಽಽದೃತಾ ॥"

ಅಂದರೆ ಭಕ್ತಿಯು ಬಾಹ್ಯ ಮತ್ತು ಆಂತರ ಎಂದು ಎರಡು ವಿಧ. ಬಾಹ್ಯಭಕ್ತಿ ಸ್ಥೂಲವಾಗಿರುವುದು, ಅಂತರ ಭಕ್ತಿ ಸೂಕ್ಷ್ಮತರವಾದುದು.

ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥
ಏವಂ ನವವಿಧಾ ಭಕ್ತಿಃ ಪ್ರೋಕ್ತಾ ದೇವೇನ ಶಂಭುನಾ ।
ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಂ ॥

ಭಾಗವತದಲ್ಲಿ ಹೇಳಿರುವಂತೆ ಇಲ್ಲಿಯು ನವವಿಧಭಕ್ತಿಯನ್ನು ಹೇಳಿದೆ. ಈ ನವವಿಧಭಕ್ತಿಯು ಪಾಪಿಗಳಿಗೆ ದುರ್ಲಭ ಮತ್ತು ಪುಣ್ಯಜೀವಿಗಳಿಗೆ ಸುಲಭಸಾಧ್ಯವೆಂದಿದೆ, ಶ್ರೀಪಾಯಿ ದೇವರು—

ಭಕ್ತಿಃ ಸಮರಸಾಕಾರಾ ಪ್ರಥಮಾ ಪರಿಗೀಯತೇ
ಆನಂದಾಕಾರತೊ ಭಾತಿ ದ್ವಿತೀಯಾ ಭಕ್ತಿರುತ್ತಮಾ ।
ತೃತೀಯಾsನುಭವಾಕಾರಾ ಭಕ್ತಿರ್ಭವವಿನಾಶಿನೀ ।
ಚತುರ್ಥೀ ಪರಮಾ ಭಕ್ತಿರವಧಾನಾತ್ಮಿಕಾ ಮತಾ ॥
ಪಂಚಮಾ ನೈಷ್ಠಿಕೀ ಭಕ್ತಿಃಷಷ್ಠೀ ಸದ್ಭಕ್ತಿರೀರಿತಾ ॥

[ಅಂದರೆ ಭಕ್ತಿಯಲ್ಲಿ ಸಮರಸ, ಆನಂದ, ಅನುಭವ, ಅವಧಾನ, ನೈಷ್ಠಿಕೀ, ಸದ್ಭಕ್ತಿ ಅಥವಾ [46]ಶ್ರದ್ಧಾಭಕ್ತಿ ಎಂದು ವಿವರಿಸಿದೆ. ಷಟ್‌ಸ್ಥಲದ ಭಕ್ತಸ್ಥಲದಲ್ಲಿ ಶ್ರದ್ಧಾ ಭಕ್ತಿಯೂ, ಮಹೇಶಸ್ಥಲದಲ್ಲಿ ನೈಷ್ಠಿಕವೂ, ಪ್ರಸಾದದಲ್ಲಿ ಅವಧಾನವೂ, ಪ್ರಾಣ ಲಿಂಗಿಯಲ್ಲಿ ಅನುಭವವೂ, ಶರಣನಲ್ಲಿ ಆನಂದವೂ, ಐಕ್ಯನಲ್ಲಿ ಸಮರಸವೂ ಅಡಕವಾಗಿ ರುವುದು ಷಡ್ವಿಧ ಭಕ್ತಿಯ ವೈಶಿಷ್ಟ್ಯ. ಭಕ್ತಿಯ ರೂಪರೇಷೆಗಳೇನೇ ಇರಲಿ, ವೀರಶೈವದರ್ಶನವು ಭಕ್ತಿಪ್ರಧಾನ ವಾದುದು. ಶರಣಸಾಹಿತ್ಯದಲ್ಲಿ ಭಕ್ತಿಗೆ ಆದ್ಯತೆ ಕೊಡಲಾಗಿದೆ. ಭಕ್ತಿಯು ಆಚರಣಾತ್ಮವೂ ಅನುಭವಾತ್ಮಕವೂ ಆದುದರಿಂದ ಭಕ್ತಿಮಾರ್ಗಕ್ರಿಯಾಸ್ಥಲ ವೆಂದು ವರ್ಣಿಸಿದೆ.

ಭಕ್ತಿಯ ಅನುಸಂಧಾನದಲ್ಲಿ ಗುರು ಮತ್ತು ಲಿಂಗದಲ್ಲಿ ಭೇದವೆಣಿಸಬಾರದು. ಗುರುವು ಅರಿವು ಕೊಡುವ ಪ್ರತ್ಯಕ್ಷ ಪರಮಾತ್ಮನೆಂಬ ಭಾವವಿರಬೇಕು. ಇದು ಉಭಯ ಸ್ಥಲವೆನಿಸುವುದು.ಅದೇ, ಮನೋಧರ್ಮ ಜಂಗಮನ ಬಗೆಗೂ ಇರಬೇಕು. ಅಂದರೆ ಗುರು, ಲಿಂಗ, ಜಂಗಮ ಸಮಾನವಾಗಿ ಗೌರವಿಸಲ್ಪಡುವ ಭಕ್ತಿಕೈಂಕರ್ಯ ವನ್ನು ಸಲ್ಲಿಸಿಕೊಳ್ಳಲ್ಪಡುವ ಸಂಪತ್ತು. ಈ ಭಾವನೆಯನ್ನೇ ತ್ರಿವಿಧಸಂಪತ್ತಿಸ್ಥಲ ವೆಂದು ಹೆಸರಿಸಿದೆ. ನಾವು ಬದುಕಿರಲು ಆಹಾರ ಅವಶ್ಯಕ. ದೇಹದ ಪೋಷಣೆ ಗಾಗಿ ಕೊಳ್ಳುವ ಆಹಾರ ಪ್ರಸಾದವಾಗಬೇಕು. ಭಗವದರ್ಪಿತವಾದುದಾಗಬೇಕು. ಭಗವಂತನಿಂದ ಕೊಟ್ಟುದಾಗಬೇಕು. ಆಹಾರವು ಉತ್ಪನ್ನವಾಗುವುದು ಪಂಚಭೂತ ಗಳಿಂದಲೇ. ಆದರ ಹಿರಿಮೆಯನ್ನು ಮರೆಯುತ್ತೇವೆ. ಪ್ರಸಾದವೆಂದರೆ—ಪಂಚ ಭೂತಗಳಿಂದ ನಮಗಾಗಿ ದಾನವಾಗಿ ಕೊಡಲ್ಪಟ್ಟುದು. ಆದು ಪರಮಾತ್ಮನಿಗೆ ಅರ್ಪಿತವಾದುದಾಗಬೇಕೆಂಬ ಭಾವವಿರಬೇಕು. ಶರಣರಾದ-ಜೇಡರ ದಾಸಿಮಯ್ಯನವರು

"ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ, ನಿಮ್ಮ ದಾನವನುಂಡು
ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ."[47] ಎಂದಿದ್ದಾರೆ

ಎಲ್ಲವೂ ಪರಮಾತ್ಮನಿಂದ ಅನುಗ್ರಹಿಸಲ್ಪಟ್ಟಿರುವುದರಿಂದ ಅದನ್ನು ಸ್ವೀಕರಿಸುವಾಗ ಕೃತಜ್ಞತಾಭಾವನೆಯಿರಬೇಕು. ಇದೇ ಪ್ರಸಾದಿ ಸ್ಥಳ. ದೇವರು ಕೊಟ್ಟುದುದನ್ನು ದೇವರಿಗೆ ಅರ್ಪಿಸಬೇಕು. ಅರ್ಪಣೆಯನ್ನು ದಾನವೆಂದು ಕರೆಯಲಾಗಿದೆ. ಪ್ರತಿಫಲಾ ಪೇಕ್ಷೆಯಿಂದ ನೀಡುವುದು ಸೋಪಾಧಿದಾನ. ಮೋಕ್ಷಾಪೇಕ್ಷಿಗೆ ಇದು ಯುಕ್ತವಲ್ಲ.

ಇದು ಸೋಪಾಧಿದಾನಸ್ಥಲ. ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಾಭಿಲಾಷಿಯಾಗಿ ನೀಡುವುದು ನಿರುಪಾಧಿ ದಾನವೆನಿಸುವುದು. ಇದು ನಿರುಪಾಧಿದಾನಸ್ಥಲ. ದಾನ ಕೊಡುವೆನೆಂಬ ಅಹಂಭಾವನೆಯಿರದೆ ಅದು ದೈವನಿಮಿತ್ತಕಾರ್ಯವೆಂದು ಭಾವಿಸುತ್ತಾ, ಕೊಡುವ ವಸ್ತು ದೈವವೆಂದೂ ದೈವಾರ್ಜಿತವೆಂದೂ ಭಾವಿಸಿ ದೇವರಿಗೆ ಅರ್ಪಿಸುತ್ತಿದ್ದೇನೆಂದು ತಿಳಿದು ನಡೆದರೆ ಅದು ಸಹಜದಾನವಾಗುತ್ತದೆ. ಅದೇ ಸಹಜದಾನ ಸ್ಥಲ.

ಜೀವನು ಷಟ್‌ಸ್ಥಲಗಳಲ್ಲಿ ಮೊದಲನೆಯದಾದ ಭಕ್ತಸ್ಥಲದಲ್ಲಿ ಅನುಸರಿಸಬೇಕಾದ ಈ 15 ಸ್ಥಲಗಳು ಜೀವನಿಗೆ ಮತ್ತೊಂದು ಅವಸ್ಥೆಗೆ ಅವಕಾಶಮಾಡಿಕೊಡುವ ಸಾಧನಗಳಾಗುತ್ತವೆ.

ವೀರಶೈವದರ್ಶನದ ಸಾಧನೆಯಲ್ಲಿ ಮಾಹೇಶ್ವರಸ್ಥಲ ಎರಡನೆಯದು. ಈ ಸ್ಥಲದಲ್ಲಿ ಒಂಬತ್ತು ಪ್ರಕಾರಗಳಿವೆ.

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
ವಿಶ್ವತಶ್ಚಕ್ಷು ನೀನೇ ದೇವಾ
ವಿಶ್ವತೋಮುಖ ನೀನೇ ದೇವಾ
ವಿಶ್ವತೋಬಾಹು ನೀನೇ ದೇವಾ
ವಿಶ್ವತಃಪಾದ ನೀನೇ ದೇವಾ
ಕೂಡಲ ಸಂಗಮದೇವಾ[48]

ಮಾಹೇಶ್ವರನಾದವನ ಮನೋಧರ್ಮ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನೂ ಸರ್ವದರಲ್ಲಿಯೂ ಅರಿಯುವುದಾಗಬೇಕು. ಇದೇ ಮಾಹೇಶ್ವರಪ್ರಶಂಸಾಸ್ಥಲ ಮನವು ಲಿಂಗದಲ್ಲಿ ಲೀನವಾಗಿರಬೇಕು. ವಾಣಿ ಲಿಂಗಸ್ತುತಿಗೆ ಮೀಸಲಾಗಿರಬೇಕು. ಹಸ್ತ ಲಿಂಗಪೂಜೆಗೆ ಅಣಿಯಾಗಿರಬೇಕು. ಅದುವೇ ಲಿಂಗನಿಷ್ಠಾಸ್ಥಲ. ಶಿವಸಂಸ್ಕಾರವನ್ನೂ ಹೊಂದಿದಮೇಲೆ ಶಿವಸಂಸ್ಕೃತಿಯಲ್ಲಿ ಪ್ರವೃತ್ತನಾಗಿರಬೇಕು. ಸಂಸ್ಕೃತಿಗೆ ಒಳಗಾಗುವ ಮುನ್ನ ಇದ್ದ ಸ್ವಭಾವವನ್ನು ಅಳಿಸಬೇಕು. ಇದೇ ಪೂರ್ವಾಶ್ರಯ ನಿರಸನಸ್ಥಲ. ಉಪಾಸಕ ಮತ್ತು ಉಪಾಸ್ಯಗಳೆರಡೂ ಒಂದೇ ವಸ್ತುವಿನ ಎರಡು ಮುಖಗಳಾದರೂ ಸಿದ್ಧಿಯನ್ನು ಪಡೆಯುವವರೆಗೆ ಎರಡರಲ್ಲಿ ಭಿನ್ನಭಾವವಿರಬೇಕು. ಆಚರಣೆಯಲ್ಲಿ ನಿರತವಾದಾಗ ಅದ್ವೈತಭಾವವಿರಬಾರದು. ಅದನ್ನೇ 'ಬಳಸದಿರದ್ವೈತವನು ಬಾಹ್ಯದಲಿ' ಎಂದಿದ್ದಾರೆ ನಿಜಗುಣರು. ಭಕ್ತಿಸ್ಥಲದ ಅನುಭವಾನಂದ ದೊರೆತಮೇಲೆ ಮಾಹೇಶ್ವರಸ್ಥಲಾನುಭವ ಪ್ರಾಪ್ತಿಯಾಗುತ್ತದೆ. ಆದರೆ ಅಲ್ಲಿ ತಾನೇ ಶಿವನಾಗಿದ್ದೇನೆಂಬ ಅರಿವಿದ್ದರೂ ತಾನು ಭಕ್ತನೆಂಬ ಭಾವದ ಆಚರಣೆಯಿರಬೇಕು. ಇದು ಸರ್ವಾದ್ವೈತನಿರಸನಸ್ಥಲ. ಗುರುಕೃಪೆಯಿಂದ ದತ್ತವಾದ ಇಷ್ಟಲಿಂಗದಲ್ಲಿ ಸದಾ

ಶಿವನಿದ್ದಾನೆ, ಅದು ಶಿವಮಯ ಎಂಬ ಭಾವನೆಯಿರಬೇಕು. ನಾವು ಕರೆದಾಗ ಲಿಂಗದಲ್ಲಿ ಬರುವುದಲ್ಲ. ಬೇಡವೆಂದರೆ ಹೋಗುವುದಲ್ಲ. ಲಿಂಗವೇ ಪರಮಾತ್ಮನೆಂಬ ಭಾವವಳ ವಟ್ಟಿದ್ದರೆ ಅದು ಆಹ್ವಾನ ನಿರಸನಸ್ಥಲ. ಪೃಥ್ವಿ, ಅಪ್, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ ಎಂಬಿವು ಅಷ್ಟಮೂರ್ತಿಗಳು. ಈ ಅಷ್ಟ ಮೂರ್ತಿಗಳು ಈ ಅಂಗದಲ್ಲಿವೆ.ಈ ಅಷ್ಟಮೂರ್ತಿಗಳು ಶಿವನ ಅಂಗಗಳು ಅವುಗಳಲ್ಲಿ ಶಿವನಿದ್ದಾನೆ. ಆದರೆ ಈ ಅಷ್ಟಮೂರ್ತಿಗಳೇ ಶಿವನೆಂಬ ಭ್ರಮೆಯಿರಬಾರದು. ಈ ಅಷ್ಟಮೂರ್ತಿಯ ಉಪಾಸನೆ ಮಾಡಬೇಕು. ಅದು ಶಿವೋಪಾಸನೆಯ ಸ್ವರೂಪವಾಗಬೇಕು. ಪೂಜೆ ಈ ಮೂಲಕವಾದರೂ ಶಿವಾರ್ಪಿತವಾಗಿರಬೇಕು. ಇದು ಅಷ್ಟಮೂರ್ತಿ ನಿರಸನಸ್ಥಲ ವೆನಿಸುವುದು. ಶಿವನು ಸರ್ವಾಂತರ್ಯಾಮಿ ಎಂದು ಶ್ರುತಿಗಳು ಹೇಳುತ್ತವೆ. ಅನು ಭಾವಿಗಳು ಹೇಳುತ್ತಾರೆ. ಆದರೆ ಸಾಧಕನು ಇಷ್ಟಲಿಂಗದಲ್ಲಿ ಸರ್ವಾಂತರ್ಯಾಮಿ ಯಾದ ಶಿವನನ್ನು ಕಾಣಲು ಯತ್ನಿಸಬೇಕು. ಇದು ಸರ್ವಗತ ನಿರಸನಸ್ಥಲ. ಇಷ್ಟ ಲಿಂಗದಲ್ಲಿ ಶಿವನನ್ನು ಕಾಣಲು ನಿರತನಾದ ಉಪಾಸಕನು ಶಿವನು ಲಿಂಗಬಿಟ್ಟು ಬೇರೆ ಇಲ್ಲ ಎಂದು ಭಾವಿಸಬಾರದು. ಅವನು ಸಕಲ ಚರಾಚರ ವಸ್ತುಗಳಲ್ಲಿಯೂ ವ್ಯಾಪಕ ನಾಗಿರುವನು. ಲಿಂಗನಿಷ್ಠೆಯು ಸಂಕುಚಿತ ಭಾವನೆಯ ಸಂಕೇತವಲ್ಲ. ಜಗತ್ತನ್ನು ಜಗ ದೀಶ್ವರನನ್ನು ಅರಿಯುವ ಕುರುಹು. ಈ ಸಾಧನೆಗೆ ಶಿವಜಗನ್ಮಯಸ್ಥಲವೆಂದು ಹೆಸರು.

ಶಿವನು ಸರ್ವವ್ಯಾಪಿಯಾದರೂ ಭಕ್ತನ ಹೃದಯಕಮಲದಲ್ಲಿಯೂ ವಾಸಿಸು ವನು. ಅಂದರೆ ಈ ದೇಹವು ದೇವರ ದೇಗುಲವಾಗಬೇಕು. ಅಂತಹ ಸಾಧನೆಯೇ ಭಕ್ತದೇಹಿಕಲಿಂಗಸ್ಥಲವೆನಿಸುವುದು. ದೇಹರಕ್ಷಣೆಗೆ ಆಹಾರ ಬೇಕು. ಆಹಾರ ವನ್ನು ಗಳಿಸುವ ಮಾರ್ಗ ಶುದ್ಧವಿರಬೇಕು. ಬಳಸುವ ವಸ್ತು ಶುದ್ಧವಿರಬೇಕು. ಗಳಿ ಸಿದ್ದು ಸತ್ಯಶುದ್ಧ ಕಾಯಕದಿಂದ ಬಂದುದಾಗಬೇಕು. ಭೋಗಿಸುವುದು ಶಿವಾರ್ಪಣ ಯುಕ್ತವಾಗಬೇಕು. ಇದೇ ಪ್ರಸಾದಿಸ್ಥಲ. ಮಾನವ ತಾನು ಸೇವಿಸುವ ಅನ್ನಕ್ಕನು ಗುಣವಾಗಿ ಬುದ್ಧಿ ಬೆಳೆಯುತ್ತದೆ. ಗುರುಲಿಂಗಜಂಗಮದಲ್ಲಿ ಅನನ್ಯಭಾವದಿಂದ ತನ್ನ ಭಕ್ತಿಕೈಂಕರ್ಯವನ್ನು ಸಲ್ಲಿಸುವ ಕ್ರಿಯೆ ಮತ್ತು ಭಾವ ಗುರುಮಾಹಾತ್ಮ್ಯಸ್ಥಲ, ಲಿಂಗ ಮಾಹಾತ್ಮ್ಯಸ್ಥಲ ಹಾಗೂ ಜಂಗಮಸ್ಥಲನಿರ್ದೇಶನಗಳಾಗುವುವು. ಗುರು ಲಿಂಗ ಜಂಗಮದಲ್ಲಿ ಶಿವತ್ವವನ್ನು ಅರಸಿ ಭಕ್ತಿಭಾವದಿಂದ ವರ್ತಿಸುವ ಭಕ್ತನ ಕ್ರಿಯೆ ಭಕ್ತಮಹಾತ್ಮ್ಯಸ್ಥಲ. ಮನೋವಾಕ್ಕಾಯಕರ್ಮಗಳಲ್ಲಿ ಶಿವನಿಗೆ ಶರಣಾಗತನಾಗಿ ರುವುದು ಶರಣ ಮಾಹಾತ್ಮ್ಯಸ್ಥಲ. ದೇಹ ಬುದ್ಧಿಮನಕ್ಕೆ ಲಭ್ಯವಾಗುವ ಆನಂದ, ಅನುಭವ ಶಿವನೊಲುಮೆಯಿಂದಾದುದೆಂಬ ಭಾವ ಬೆಳೆಯಬೇಕು. ಅದು ಪ್ರಸಾದವೆಂಬ ಮನೋಧರ್ಮ ಬೆಳಗಬೇಕು. ಅದೇ ಪ್ರಸಾದಮಾಹಾತ್ಮ್ಯಸ್ಥಲ.

ದೇಹ ಮನ ಬುದ್ಧಿಗಳೆಲ್ಲವು ಶಿವಮಯವಾಗಬೇಕು. ಎಲ್ಲದರಲ್ಲಿಯೂ ಶಿವ ಭಾವನೆಯುಂಟಾಗಬೇಕು. ಈ ಭಾವನೆ ನಿರುಪಾಧಿಕವಾಗಬೇಕು. ಅವನು ಪ್ರಾಣ ಲಿಂಗಿ ಎನಿಸುವನು.

ಶಿವಪ್ರಸಾದೇ ಸತಿ ಯೋಗಭಾಜಃ
ಸರ್ವಂ ಶಿವೈಕ್ಯಾತ್ಮತಯಾ ವಿಭಾತಿ ।
ಸ್ವಕರ್ಮಮುಕ್ತಃ ಶಿವಭಾವಿತಾತ್ಮಾ
ಸ ಪ್ರಾಣಲಿಂಗೀತಿ ನಿಗದ್ಯತೇsಸೌ ॥

ಅಂದರೆ ಶಿವಪ್ರಸಾದಭರಿತನಾದವನು ಶಿವಯೋಗಿಯಾಗುತ್ತಾನೆ. ಅವನಿಗೆ ಸರ್ವವೂ ಶಿವಸ್ವರೂಪವಾಗಿ ತೋರುತ್ತದೆ. ಅಂತಹವರು ಪ್ರಾಣಲಿಂಗಿಗಳೆನಿಸುತ್ತಾರೆ.[49]

ವೇದಶಾಸ್ತ್ರಪುರಾಣಾಗಮಾದಿಯಾದ ಲಿಂಗವಲ್ಲದೆ ಇಲ್ಲೆಂದು
ಲಿಂಗಾರ್ಚನೆಯ ಮಾಡುವ ಮಹಾಮಹಿಮರು ನೀವು ಕೇಳಿರೆ
ಅಂಗ ಲಿಂಗವೋ, ಆಚಾರಲಿಂಗವೋ, ಭಾವಲಿಂಗವೋ ?
ಪ್ರಸಾದಲಿಂಗವೋ ಮಹಾಲಿಂಗವೋ
ಸಾಕ್ಷಿ- ?
''ಪ್ರಾಣಲಿಂಗಸ್ಯ ಸಂಬಂಧೀ ಪ್ರಾಣಲಿಂಗೀ ಪ್ರಕೀರ್ತಿತಃ ।
ಪ್ರಸನ್ನಲಿಂಗಯುಕ್ತಾತ್ಮಾ ಮಮರೂಪೋ ಮಹೇಶ್ವರಿ॥''
ಇದು ಕಾರಣ ಕೂಡಲಸಂಗಮದೇವಾ
ಲಿಂಗನಾಮ ನಿರ್ಣಯಮಪೂರ್ವ''[50]

ಪ್ರಾಣಲಿಂಗಸಂಬಂಧಿಯಾದವನು ಶಿವರೂಪವೇ ಆಗಿರುತ್ತಾನೆ. ಅವನಲ್ಲಿ ಭಿನ್ನಭಾವ ವಿರುವುದಿಲ್ಲ. ತನ್ನ ನಡೆನುಡಿಯಲ್ಲಿ ಆಚಾರ ವಿಚಾರ ವ್ಯವಹಾರದಲ್ಲಿ ಲಿಂಗನಿಷ್ಠನಾಗಿರುತ್ತಾನೆ. ಅಂತಹವರು ಪ್ರಾಣಲಿಂಗಸ್ಥಲದ ಆನಂದಾನುಭವಯುಕ್ತರಾಗುತ್ತಾರೆ.

ಪ್ರಾಣಲಿಂಗಿಸ್ಥಲಾನುಸಂಧಾನ ಒಂದು ರೀತಿಯ ತಪಸ್ಸಾಧನೆ. ಇಲ್ಲಿ ಪ್ರಾಣ ಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ, ಅಂಗ ಲಿಂಗಸ್ಥಲವೆಂದು ಐದು ಪ್ರಕಾರಗಳಿವೆ. ಪ್ರಾಣಲಿಂಗಿಸ್ಥಲ ದೇಹದಲ್ಲಿ ನಡೆಯುವ ಸಾಧನಕ್ರಿಯೆಯಿಂದ ಆರಂಭವಾಗುತ್ತದೆ. ಪ್ರಾಣ, ಅಪಾನ ವಾಯುವನ್ನು ನಿರೋಧಿಸಿದರೆ ನಾಭಿಕಂದಮಧ್ಯದಿಂದ ಜ್ಯೋತಿ ಉತ್ಪನ್ನವಾಗುತ್ತವೆ. ಈ ಇಡಾ ಪಿಂಗಳ ನಾಡಿಗಳ ಸಂಘರ್ಷಣದಿಂದ ಪ್ರಾಣವಾಯುವು ಆತ್ಮನಲ್ಲಿ ಲೀನವಾದಾಗ ಪ್ರಾಣಲಿಂಗಸ್ಥಲಾನುಭವವಾಗುವುದು. ಪ್ರಾಣವೇ ಪರಮಾತ್ಮನಾಗುವನು. ಅವನಿಗೆ ಬಾಹ್ಯಲಿಂಗದ ಅನುಸಂಧಾನದ ಅಗತ್ಯ ಕಂಡುಬರುವುದಿಲ್ಲ. ಇದು ಸಿದ್ಧಿಯ ಪ್ರಾಥಮಿಕ ಹಂತ. ತಾದಾತ್ಮ್ಯವನ್ನು ಅನುಭವಿಸುವ ಸ್ಥಿತಿ ಪ್ರಾಣಲಿಂಗಿಸ್ಥಲವೆನ್ನಬಹುದು. ಪ್ರಾಣಲಿಂಗವು ಹೃದಯ

ದಲ್ಲಿ ದ್ವಾದಶಕಮಲಕರ್ಣಿಕೆಯಲ್ಲಿ ಪ್ರಕಾಶಿಸುತ್ತಿರುವುದು. ಅದನ್ನು ಕ್ಷಮೆ, ವಿವೇಕ, ಸತ್ಯವಚನ, ವೈರಾಗ್ಯ, ಏಕಾಗ್ರತೆ, ನಿರಹಂಕಾರ, ಶ್ರದ್ಧೆ, ಮೌನ ಇತ್ಯಾದಿ ಭಾವಶುದ್ಧಿಯಿಂದ ಅರ್ಪಿಸಬೇಕು, ಇದು ಪ್ರಾಣಲಿಂಗಾರ್ಚನಸ್ಥಲವೆನಿಸುವುದು. ಮಹಾಲಿಂಗದಲ್ಲಿ ಜೀವದ ಅಂದರೆ ಅಂಗದ ಏಕತ್ವಚಿಂತನವುಂಟಾದರೆ ಪ್ರಾಣಲಿಂಗಿಯು ಶಿವಯೋಗಸಮಾಧಿಸ್ಥಿತಿಯನ್ನು ಹೊಂದುವನು. ಇದೇ ಶಿವಯೋಗಸಮಾಧಿಸ್ಥಲ. ಈ ಸ್ಥಲದಲ್ಲಿ ಶರೀರದಲ್ಲಿರುವ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳಿರುವ ಗುದ, ಗುಹ್ಯ, ನಾಭಿ, ಹೃದಯ, ಕಂಠ ಮತ್ತು ಭ್ರೂಮಧ್ಯದಲ್ಲಿ ನೆಲೆಸಿದ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಪರಶಿವ ಎಂಬ ದೇವತೆಗಳ ಸ್ಮರಣೆಯುಂಟಾಗಿ ಅದರಲ್ಲಿ ತಾದಾತ್ಮ್ಯವುಂಟಾಗಬೇಕು.[51] ಈ ತಾದಾತ್ಮ್ಯದಿಂದ ಶಿವಜೀವರ ಏಕತ್ವದ ಸಿದ್ಧಿಯಾಗಬೇಕು. ಇದೇ ಶಿವಯೋಗಸಮಾಧಿಸ್ಥಲವೆನಿಸಿಕೊಳ್ಳುವುದು ಈ ಸ್ಥಲವು ವೀರಶೈವದರ್ಶನದ ಸಾಧನೆ ಕ್ಷೇತ್ರದಲ್ಲಿ ಅತ್ಯಂತ ಪ್ರಾಮುಖ್ಯವಾದ ದೇಹ ಮತ್ತು ಜೀವದ ಕ್ರಿಯೆ. ಷಟ್‌ಚಕ್ರನಿರೂಪಣೆಯು ಶಿವಯೋಗದ ಕೇಂದ್ರ ಪ್ರಕ್ರಿಯೆ. ಜೀವಿಯ ಸಾಧನಾರಹಸ್ಯವಿರುವುದು ಇಲ್ಲಿಯೇ. ಪಾಶ್ಚಾತ್ಯದಾರ್ಶನಿಕರು ಈ ಸಿದ್ಧಾಂತವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ.

The objects and aim of Sat-chakrabheda is yoga. This is ultimately union with the supreme self or paramatma[52] ಷಟ್‌ಚಕ್ರಸಿದ್ಧಾಂತವೂ ಶಿವ-ಜೀವರ ಏಕತ್ವವನ್ನು ಸಾಧಿಸುವ ಯೋಗ. ದೇಹವು ಸ್ವಾಭಾವಿಕವಾಗಿ ಯೋಗ ಯುಕ್ತವಾಗಿರುತ್ತದೆ. ಇಲ್ಲವಾದಲ್ಲಿ ಅದು ಇರುವುದೇ ಅಸಾಧ್ಯ. ಅದರ ಪ್ರತಿಕ್ಷಣದ ಪ್ರಗತಿ ಸಂಚಲನವೂ ಯೋಗವೇ ಆಗಿರುತ್ತದೆ. ಆದಾಗ್ಯೂ ಅದು ಕೈವಲ್ಯ ಮುಕ್ತಿಯನ್ನು ಪಡೆಯುವವರೆಗೆ ಅನೇಕ ಹಂತಗಳನ್ನು ದಾಟಬೇಕಾಗುತ್ತದೆ. ಸ್ಥಲನಿರೂಪಣೆಯ ಗಂಭೀರವ್ಯಾಖ್ಯೆ ಷಟ್‌ಚಕ್ರನಿರೂಪಣೆಯಲ್ಲಿ ವಿಸ್ತೃತವಾಗಿ ವಿವರಿಸಿದೆ, ಶಿವ ಜೀವರ ಏಕತ್ವಸಾಧನೆಗೆ ಕಾರಣ ಶಕ್ತಿ. ಇದನ್ನು ಕುಂಡಲಿನೀಶಕ್ತಿ ಎಂದಿದೆ. ಇದು ಮೂಲಾಧಾರದಲ್ಲಿ ಅಡಗಿರುತ್ತದೆ. ಸಾಧನೆಯ ಪರಿಣಾಮವಾಗಿ ಆರು ಚಕ್ರಗಳನ್ನೂ ದಾಟಿ ಏಳನೆಯದಾದ ಸಹಸ್ರಾರದಲ್ಲಿ ಅಂತಿಮವಾಗಿ ಸಮರಸವಾಗುತ್ತದೆಂದು ತಂತ್ರಶಾಸ್ತ್ರಗಳಲ್ಲಿ ವಿವರಿಸಿದೆ. ಶ್ರೀ ವುಡ್‌ರೋಫ್ ವಿವರಣೆ ಹೀಗಿದೆ—

Man is then as to his essence the static power-holder, or Siva who is pure consciousness and as mind and body, he is the manifestation of Siva's power, or Sakti or mother. He is thus Siva-Sakti. He is as he stands expression of power. The object of Sadhana or Worship and yoga is to raise this power to its perfect expression, which is perfect in the sense of unlimited experi-

ence. One more of so doing is the yoga described, whereby man exchanges his limited or worldly experience for that which is the unlimited whole (purna) or pepfect bliss.[53] ಮಾನವ ಅಂದರೆ ಜೀವಾತ್ಮ ಸ್ವಾಭಾವಿಕವಾಗಿ ಪರಮಾತ್ಮನೇ. ದೇಹ ಬುದ್ಧಿಗಳು ಪರಮಾತ್ಮನ ಪರಮ ಶಕ್ತಿಗಳೇ ಆಗಿವೆ. ಶಕ್ತ್ಯಾತ್ಮಕವಾದ ದೇಹ ಮತ್ತು ಮನಸ್ಸು ಶಿವನಲ್ಲಿ ಸೇರುವ ಸಾಧನ ಯೋಗವೆನಿಸುತ್ತದೆ. ದೇಹ ಮನ ಇವುಗಳು ಪರಿವರ್ತನಗೊಳ್ಳಬೇಕೆಂಬ ಸಿದ್ಧಾಂತ ವೀರಶೈವದರ್ಶನದ ಸಾಧನಾಕ್ರಿಯೆಯ ಸಾರವಾಗಿದೆ. ಷಟ್‌ಸ್ಥಲಸಿದ್ಧಾಂತಕ್ಕೂ ಷಟ್‌ಚಕ್ರದರ್ಶನಕ್ಕೂ ನಿಕಟಸಂಬಂಧವಿದೆ. ಆದಕಾರಣ ವೀರಶೈವದರ್ಶನವನ್ನು ಈ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವೆಂದೇ ಕರೆಯಲಾಗಿದೆ. ಈ ಸಾಮ್ಯ ಮತ್ತು ಸಮಗ್ರ ವಿವರಣೆ ಪ್ರತ್ಯೇಕ ವಿಷಯವೇ ಆಗಿರುವುದರಿಂದ ಶಿವಯೋಗಸಮಾಧಿ ಸ್ಥಲದ ಆಂತರಿಕ ಕ್ರಿಯೆಯನ್ನು ಸೂಕ್ಷ್ಮವಾಗಿ ಇಲ್ಲಿ ವಿವರಿಸಿದೆ. ಆಸಕ್ತರು ಕುಂಡಲಿನೀ ಯೋಗಗ್ರಂಥಗಳನ್ನು ಅಧ್ಯಯನ ಮಾಡಿದರೆ, ವೀರಶೈವದರ್ಶನ ಕೇವಲ ಬೌದ್ಧಿಕ ಕ್ರಿಯೆಯಲ್ಲ. ಇದು ವೈಜ್ಞಾನಿಕಸಾಧನೆಯೆಂಬುದರ ಅರಿವಾಗುತ್ತದೆ.

ಶಿವಯೋಗಸಮಾಧಿಸ್ಥಲದಲ್ಲಿ ಆಗುವ ಅನುಭವವೇನು ಎಂಬ ಪ್ರಶ್ನೆ ಉದಿಸುತ್ತದೆ. ಯೋಗದ ಪ್ರತಿಯೊಂದು ಹಂತದಲ್ಲೂ ಜೀವನಿಗೆ ಒಂದಿಲ್ಲೊಂದುರೀತಿಯ ಅನುಭವವಾಗುತ್ತಲೇ ಇರುತ್ತದೆ.

''ಲಿಂಗಾನ್ನಾಸ್ತಿ ಪರಂ ತತ್ವಂ ಯದಸ್ಮಾಜ್ಜಾಯತೇ ಜಗತ್ ।
ಯದೇತದ್ರೂಪತಾಂ ಧತ್ತೇ ಯದತ್ರ ಲಯಮಶ್ನುತೇ ॥''

ಅಂದರೆ ಚರಾಚರಾತ್ಮಕವಾದ ಜಗತ್ತು ಯಾವ ಕಾರಣದಿಂದ ಲಿಂಗದಲ್ಲೇ ಜನಿಸಿ, ಲಿಂಗರೂಪವನ್ನೇ ತಳೆದು, ಲಿಂಗದಲ್ಲೇ ಲಯಹೊಂದುವುದೊ, ಅದೇ ಪರತತ್ವವೆಂದೂ, ಲಿಂಗವೆಂದೂ ಇದಕ್ಕಿಂತ ಶ್ರೇಷ್ಠತತ್ವ ಮತ್ತೊಂದಿಲ್ಲವೆಂದೂ ಅನುಭವ ವೇದ್ಯವಾಗುತ್ತದೆ. ಅನ್ಯದರ ಅರಿವು ಮೂಡುವುದೇ ಇಲ್ಲ. ಇದರಿಂದ ಲಿಂಗವೇ ಸತ್ಯವೆಂದು ನಿಶ್ಚಯವಾಗುತ್ತದೆ.[54]

ಲಿಂಗವೇ ಸತ್ಯ ಎಂಬುದರ ನಿಜದರಿವಾಗುವುದು ನಿಜಲಿಂಗಸ್ಥಲದಲ್ಲಿ. ಅರಿವು ಘನವಾದಲ್ಲಿ ಲಿಂಗವೇ ಅಂಗವಾಗಿ ಅನುಭವವಾಗುತ್ತದೆ. ಈ ಅನುಭವ ಕ್ಷಣಿಕವಲ್ಲ, ಕ್ಷಣಿಕ ಅನುಭವ ಅನೇಕರಿಗೆ ಅನೇಕ ಕಾರಣಗಳಿಂದ ಆಗಬಹುದು, ಆದರೆ ನಿರಂತರವಾದ ಅನುಭವವಾದವರಿಗೆ ಬಾಹ್ಯಜಗತ್ತಿನ ಬಾಧಕವೇನೂ ಇರುವುದಿಲ್ಲ. ಈ ಅನುಭವಾನಂದವೇ ಜೀವನ್ಮುಕ್ತಾವಸ್ಥೆ, ಜೀವನು ದೇಹಿಯಾಗಿದ್ದರೂ ಪ್ರಾಣವು ಲಿಂಗದಲ್ಲಿ ತಾದಾತ್ಮ್ಯವನ್ನು ಹೊಂದಿರುತ್ತದೆ. ಅದೇ ಲಿಂಗಸ್ಥಲವೆನಿಸುತ್ತದೆ.ಇದೇ ಷಟ್‌ಸ್ಥಲಗಳಲ್ಲಿ ನಾಲ್ಕನೆಯದಾದ ಪ್ರಾಣಲಿಂಗಿಸ್ಥಲದ ಸಿದ್ಧಿ. ಈ ಹಂತದಲ್ಲಿ ಜೀವನು ಶಿವನ ಸಾನ್ನಿಧ್ಯದಲ್ಲಿರುತ್ತಾನೆ. ಜೀವ ದೇವನ ಛಾಯೆಯಾಗಿ ಉಳಿದಿರುತ್ತದೆ. ಈ

ಹಂತದಿಂದ ಜೀವ ದೇವನಿಂದ ಭಿನ್ನವಾಗುವುದಿಲ್ಲವೆಂದಲ್ಲ. ಈ ಹಂತ ಮುಟ್ಟಿದಾಗಲೂ ಮತ್ತೆ ಭಿನ್ನತೆ ಉಳಿದು ಜೀವ ಬೇರೆಯಾಗಬಹುದು. ದೈವದ ಆನಂದಾನುಭವದಿಂದ ಪತನವಾಗಲೂಬಹುದು. ಈ ಹಂತಕ್ಕೆ ಮುಟ್ಟಿದಾಗ ಜೀವ ತನ್ನ ಸಾಧನೆಯನ್ನು ಅಲ್ಲಿಂದ ಮುಂದುವರಿಸಬೇಕು. ಪ್ರಾಣಲಿಂಗಸ್ಥಲದಲ್ಲಿ ಎಚ್ಚರವಾಗಿರಬೇಕು ಎನ್ನುತ್ತಾರೆ ಬಸವಣ್ಣನವರು,

"ಪ್ರಾಣಲಿಂಗಪ್ರತಿಗ್ರಾಹಕನಾದ ಬಳಿಕ, ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ ? ಪಂಚೇದ್ರಿಯಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು, ಲಿಂಗವಿರಹಿತವಾಗಿ ಉಗುಳ ನುಂಗಲಾಗದು. ಇಂತೆಂದುದು ಕೂಡಲಸಂಗನ ವಚನ,"[55] ಪ್ರಾಣಲಿಂಗಿಯ ನಡೆಯನ್ನು ಚೆನ್ನಬಸವಣ್ಣನವರು ಅರ್ಥವತ್ತಾಗಿ ಬಿತ್ತರಿಸಿದ್ದಾರೆ,

"ಲಿಂಗವನೊಂದೆ ನೆನದು, ಲಿಂಗಕ್ಕೆಂದು ಮಾಡಿ, ಲಿಂಗಕ್ಕೆಂದೆ ಕೊಡುವೆನು ನಾನಯ್ಯಾ, ಸಕಲಪದಾರ್ಥಂಗಳ ಲಿಂಗಕ್ಕೆಂದೆ ಭಾವಿಸುವೆ. ಅಂಗಗುಣಗಳನರಿಯೆ ನಾನು ಲಿಂಗಕ್ಕೆಂದೆ ಕಾಮಿಸುವೆ ನಾನು, ನಿಷ್ಕಾಮಿಯಾಗಿ, ಎನ್ನ ದೇಹೇಂದ್ರಿಯಮನಃ ಪ್ರಾಣಾದಿಗಳು ಲಿಂಗೈಕ್ಯಸತಿಗಳಾಗಿ, ಲಿಂಗಕ್ಕೆಂದೆ ಬಯಸಿ, ಲಿಂಗಪ್ರಾಣಿಗಳಾದ ಕಾರಣ, ಲಿಂಗಕ್ಕೆಂದೆ ಕೈಕೊಂಬೆನು. ಅನರ್ಪಿತವನರಿಯದಿಹೆನು, ಕೂಡಲ ಚೆನ್ನಸಂಗಮ ದೇವಾ."[56] ಎಂದು ಪ್ರಾಣಲಿಂಗಿಸ್ಥದಲ್ಲಿ ತಮಗಾಗುವ ಅನುಭವವನ್ನು ಹೇಳಿಕೊಂಡರೂ ಅವರಿಗೆ ತೃಪ್ತಿ ಇಲ್ಲ, ಪ್ರಾಣಲಿಂಗಸ್ಥಲದ ವಿಪುಲ ವಿವರಣೆ ನೀಡಿದನಂತರವೂ ಈ ಸ್ಥಿತಿ ನುಡಿಯಿಂದ ಅರ್ಥವಾಗುವುದಲ್ಲ. ಅನುಭವವೇದ್ಯ. ಈ ಅನುಭವದ ಹಿರಿಮೆಯನ್ನು ಅಲ್ಲಮನೇ ಬಲ್ಲನೆನ್ನುತ್ತಾನೆ. "ಪ್ರಾಣಲಿಂಗಸಂಬಂಧಿಯಾದ ಬಳಿಕ ತನು ಗುಣವಿರಲಾಗದಯ್ಯಾ. ಕೈ ಸಿಂಹಾಸನವಾದ ಬಳಿಕ ಸಂದಾಗಿರಲಾಗದಯ್ಯಾ, ಕೂಡಲ ಸಂಗಯ್ಯನಲ್ಲಿ ಈ ಅನುವನಲ್ಲಮ ಬಲ್ಲ"[57] ಪ್ರಭುದೇವರು ಪ್ರಾಣಲಿಂಗಾನುಭವವನ್ನು ಸರಳವಾಗಿ ಸೂಚಿಸುತ್ತಾರೆ. "ಕಾಲೇ ಕಂಭಗಳಾದವೆನ್ನ! ದೇಹವೇ ದೇಗುಲವಾಯಿತ್ತಯ್ಯ! ಎನ್ನ ನಾಲಗೆಯೆ ಘಂಟೆ, ಶಿರಸುವರ್ಣದ ಕಳಶ ಇದೇನಯ್ಯ? ಶಿರವೇ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯಾ. ಗುಹೇಶ್ವರ ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ ಪಲ್ಲಟವಾಗದಂತಿದ್ದೆನಯ್ಯಾ"[58] ದೇಹವೆಲ್ಲವೂ ಲಿಂಗಮಯವು ಅಂಗ ಲಿಂಗಸಂಗವು ಆದ ಪರಿಸ್ಥಿತಿಯೇ ಪ್ರಾಣಲಿಂಗಸ್ಥಲ.

ಪ್ರಸಾದಿಯಾಗಿ ಪ್ರಾಣಲಿಂಗಿಯಾಗಿ ಅಂತರಂಗದ ಆನಂದವನ್ನು ಜೀವ ಅನುಭವಿಸುತ್ತದೆ. ಇದು ಭೋಗಾಂಗ. ಈ ಭೋಗದಲ್ಲಿರುವುದೇ ಜೀವದ ಗುರಿಯಲ್ಲ. ಈ ಭೋಗವನ್ನು ನೀಗಿ ಇದಕ್ಕಿಂತಲೂ ಉತ್ತಮ ಗುರಿಮುಟ್ಟಲು ಸಾಧನೆ ನಡೆಯುತ್ತದೆ ಮುಂದೆ ಅನುಭವ, ಅನುಭೋಕ್ತರ ಭಿನ್ನತೆಯೂ ಅಳಿಯುವ ಸ್ಥಿತಿಗೆ ಜೀವ ಮುಟ್ಟಬೇಕು. ಅದೇ ಯೋಗಾಂಗ.

"ಶಿವಜ್ಞಾನೇ ಸಮುತ್ಪನ್ನೇ ಪರಾನಂದಃ ಪ್ರಕಾಶತೇ।
ತದಾಸಕ್ತಮನಾ ಯೋಗೀ ನಾನ್ಯತ್ರ ರಮತೇ ಸುಧೀಃ॥

ಶಿವಜ್ಞಾನಪ್ರವೃತ್ತನ್ನವಾಗಿ ಅಲ್ಲಿ ಲೀನವಾದ ಮೇಲೆ, ಅಂದರೆ ಆ ಬೆಳಕಿನಲ್ಲಿ ನಿಂದ ಮೇಲೆ ಮತ್ತೆ ಬೇರೆ ಬೆಳಕಿಗಾಗಿ ಜೀವ ಅರಸುವುದಿಲ್ಲ. ಬೆಳಕಿನಲ್ಲಿದ್ದು ತಾನೇ ಬೆಳಕಾಗಿ ಪ್ರಕಾಶಿಸುತ್ತದೆ.[59] ಈ ಸ್ಥಿತಿಯೇ ಶರಣಸ್ಥಲ, ಇದರ ವಿವರಣೆ ಲಿಂಗಲೀಲಾವಿಲಾಸ ಚಾರಿತ್ರದಲ್ಲಿ ಸುಂದರವಾಗಿ ಬಿತ್ತರಿಸಿದೆ.

''ಸರ್ವಕಾರಣವಾದ ಅಖಂಡ ಚಿಚ್ಚೈತನ್ಯ ಲಿಂಗವೇ ಪ್ರಾಣಸ್ವರೂಪವಾಗಿರ್ದ ಪ್ರಾಣಲಿಂಗಿಯ ಜ್ಞಾನದೃಷ್ಟಿಗೆ ತೋರುವ ತೋರಿಕೆಯಲ್ಲಿ ಲಿಂಗಮಯವಾಗಿ ಕಾಣುತ್ತಿರಲು ಸರ್ವವು ಲಿಂಗಮಯವಾಗಿ ಕಾಂಬ ಚಿದ್‌ದೃಕ್ಕನ್ನುಳ್ಳ ಶರಣನೇ ಚಿತ್‌ಸ್ವರೂಪವು. ಆ ಚಿತ್‌ಸ್ವರೂಪವೇ ಲಿಂಗದ ಚಿಚ್ಛಕ್ತಿ. ಅಂತು ಲಿಂಗದ ಅಭಿನ್ನ ಚಿಚ್ಛಕ್ತಿ ಸ್ವರೂಪವೇ ಶರಣನಾದ ಕಾರಣ ಶರಣನೇ ಸತಿ ಲಿಂಗವೇ ಪತಿಯೆನಿಸಿತ್ತು. ಆ ಪತಿಯೆನಿಸಿದ ಚಿದ್ಘನಲಿಂಗಕ್ಕೆಯೂ, ಆ ಸತಿಯೆನಿಸಿದ ಚಿತ್‌ಸ್ವರೂಪವಾದ ಶರಣಂಗೆಯೂ ಎಂದೆಂದೂ ವಿಯೋಗವಿಲ್ಲ. ಅದು ಹೇಗೆಂದೊಡೆ, ಚಿನ್ನ ಚಿನ್ನದ ಬಣ್ಣದಂತೆ, ರನ್ನ ರನ್ನದ ಕಾಂತಿಯಂತೆ ಇಪ್ಪುದಾಗಿ ಅಂತಿಪ್ಪ ಚಿದ್ಘನಲಿಂಗದ ಚಿತ್ಪ್ರಭ ಶಕ್ತಿಯೂ ಆ ಲಿಂಗವ ಕೂಡಿಕೊಂಡೇ ಶರಣರೂಪ ಇತ್ತಾಗಿ, ಆ ಶರಣನಂಗದ ಸರ್ವೇಂದ್ರಿಯಸುಖಂಗಳನೆಲ್ಲಾ ಲಿಂಗವೇ ಭೋಗಿಸುತ್ತಿಪ್ಪನು. ಅಂತು ಭೋಗಿಸುತ್ತಿಪ್ಪ ಲಿಂಗದ ಅಭಿನ್ನದರಿವಾಗಿಪ್ಪನಾಗಿ ಶರಣ ತಾನೆಲ್ಲಾ ಲಿಂಗವೆಂದು, ಆ ಲಿಂಗಾನಂದಸುಖವೆಲ್ಲಾ ತನ್ನದಾಗಿ ಭೋಗಿಸುತ್ತಿಪ್ಪ ಶರಣ. ಅಂತು ಅಭಿನ್ನಜ್ಞಾನದಿಂದ ಲಿಂಗವು ತಾನಾಗಿ ಎರಡಿಲ್ಲದೆ ಅದ್ವಯ ಜ್ಞಾನಾನಂದದಲ್ಲಿಪ್ಪುದೇ ಆನಂದಭಕ್ತಿ. ಅಂತಹ ಅದ್ವಯಾನಂದ ಭಕ್ತಿಸ್ವರೂಪನೇ ಶರಣನಾದ ಕಾರಣ ಶರಣಸ್ಥಲವೆಂದು ಹೇಳಲಾದಂದು.''[60] ಈ ಸ್ಥಿತಿಯನ್ನು ಮುಟ್ಟಿದ ಜೀವ ಪತನವಾಗದು. ತನ್ನ ಸಾಧನೆಗನುಗುಣವಾಗಿ ಅಂಗ ಲಿಂಗಗ್ರಾಹ್ಯವಾಗುತ್ತದೆ. ಅನುಗ್ರಹಯುಕ್ತವಾಗಿರುತ್ತದೆ. ಅದೇ ಅಭಿನ್ನಜ್ಞಾನವೆಂದಿರುವುದು. ಜ್ಞಾನವೇ ಲಿಂಗವಾಗಿರುತ್ತದೆ. ಉಪನಿಷತ್ತಿನಲ್ಲಿ ಹೇಳಿರುವ 'ಪ್ರಜ್ಞಾನಂ ಬ್ರಹ್ಮ' ಎಂಬುದರ ಸ್ಥಿತಿಯನ್ನು ಅಂಗ ಗಳಿಸಿರುತ್ತದೆ. ಅಲ್ಲಿಂದ ಪತನವಿಲ್ಲ. ಉತ್ಥಾನಭ್ರಮೆಯೂ ಇಲ್ಲ. ಅದನ್ನೇ ಬಸವಣ್ಣನವರು ಸರಳ ನಿದರ್ಶನದಿಂದ ಬಿನ್ನವಿಸುತ್ತಾರೆ. ''ಮಡಕೆ ಮಣ್ಣಾಗದು ಕ್ರೀಯುಳಿದು, ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯುಳಿದು, ಹೊನ್ನು ಕಬ್ಬಿಣವಾಗದು ಕ್ರೀಯುಳಿದು, ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯುಳಿದು, ಕೂಡಲಸಂಗನ ಶರಣನಾಗಿ, ಮರಳಿ ಮಾನವನಾಗನು ಕ್ರೀಯುಳಿದು.''[61]

ಈ ಸ್ಥಿತಿಯನ್ನು ಡಾ॥ ಜ.ಚ.ನಿ.ಯವರು ಚೆನ್ನಾಗಿ ಅರ್ಥೈಸಿದ್ದಾರೆ. ''ಶರಣನಲ್ಲಿ ಶಿವತ್ವ ಸನ್ನಿಹಿತವಾಗಿರುತ್ತದೆ. ಶರಣನಲ್ಲಿ ಪರೋಕ್ಷತ್ವವಿರುವುದಿಲ್ಲ. ಅಪರೋಕ್ಷತ್ವ ಅಳವಟ್ಟಿರುತ್ತದೆ. ಪರಿಪೂರ್ಣ ಪರಶಿವಜ್ಞಾನವುಂಟಾಗಿರುತ್ತದೆ[62] ಜೀವ ಪರಿಪೂರ್ಣ ಪರಾವರ್ತನೆಯಾಗಿರುತ್ತದೆ. ಅಲ್ಲಿಗೆ ಆಣವ, ಮಾಯಾ, ಕಾರ್ಮಿಕ ಮಲಗಳ ಉಪಾಧಿಯಳಿದಿರುತ್ತದೆ. ಇದೇ ಅಂಗದ ಸಾಧನೆಯ ಪರಾಹಂತದ ಮಹಾದ್ವಾರ. ಈ ಸ್ಥಿತಿಗೆ

ಮುಟ್ಟಿದಾಗ ''ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ'' ಎಂಬುದರ ಅನುಸಂಧಾನವಾಗಿರುತ್ತದೆ. ಈ ಶರಣಸ್ಥಲ ಪ್ರಾಪ್ತವಾದ ಜೀವಿಗೆ ಕಾಮಕ್ರೋಧಾದಿ ಅರಿಷಡ್ವರ್ಗ ಸಂಪರ್ಕವಾಗದು. ರಜೋಗುಣವಾಗಲೀ ತಮೋಗುಣವಾಗಲಿ ಸೋಂಕದು. ಸತ್ವಗುಣವು ಕಣಕಣದಲ್ಲಿ ರಂಜಿಸುವುದು, ಈ ನಿಲುವೇ ತಾಮಸನಿರಸನಸ್ಥಲ. ಜೀವ ಈ ಸ್ಥಲವನ್ನು ಮುಟ್ಟಲು ಕೇವಲ ಸ್ವಸಾಮರ್ಥ್ಯದಿಂದ ಸಾಧ್ಯವಿಲ್ಲ. ಅದನ್ನು ಕರುಣಾಳುವಾಗಿ ಕೈಹಿಡಿದು ನಡೆಸುವ ಗುರು ಬೇಕು. ನಿರ್ದೇಶಕರು ಬೇಕು. ಆ ನಿರ್ದೇಶಕರು ಸ್ವಯಂ ಶಿವನಾಗಿರಬೇಕು. ಗುರುವು ಅನ್ಯವ್ಯಕ್ತಿಯಾಗಿರಬೇಕೆಂದಿಲ್ಲ, ಶರಣಸ್ಥಲಮುಟ್ಟಿದವರಿಗೆ ಅಂತರ್ವಾಣಿಯೇ ಗುರುವಾಗಿ ಮುನ್ನಡೆಸಬಹುದು. ಅಥವಾ ನಮ್ಮ ಕಲ್ಪನೆಗೇ ನಿಲುಕದೆ ಯಾವುದೇ ಪ್ರಾಣಿಯಾಗಿ, ಜಡವಸ್ತುವಿನ ಸಂಕೇತವಾಗಿ ನಿರ್ದೇಶನ ದೊರೆಯಬಹುದು. ಭೌತಿಕ ಜೀವನದಲ್ಲಿ ಅನೇಕ ವೇಳೆ ನಮಗರಿವಾಗದಂತೆ ನಮಗೆ ನಿರ್ದೇಶನ ಸಿಕ್ಕಿ ನಾವು ಸಂಕಟದಿಂದ ಪಾರಾಗಿರುತ್ತೇವೆ. ಈ ಸ್ಥಿತಿಯನ್ನೇ ನಿರ್ದೇಶನಸ್ಥಲವೆಂದು ಹೆಸರಿಸಲಾಗಿದೆ, ನಮಗೆ ನಿರ್ದೇಶನ ದೊರೆತು ಜೀವನ ಧನ್ಯವಾಗಬೇಕಾದರೆ ಮನಸ್ಸು ಸಹಾಯಕವಾಗಬೇಕು. ಶರಣನ ಮನಸ್ಸು ಶಿವತ್ವದಲ್ಲಿರುವಂತೆ ಶಿವಜ್ಞಾನದಲ್ಲಿ ನಿಷ್ಠೆಯಿಂದಿರಬೇಕು. ಈ ನಿಷ್ಠೆಯೇ ಶೀಲವೆಂದೆನಿಸುವುದು. ಶರಣಸಂಸ್ಕೃತಿಯಲ್ಲಿ ಈ ಶೀಲವನ್ನು ಹೇಳಿದೆ. ಜೀವಿಯ ಸಂಸ್ಕರಣಕ್ಕಾಗಿ ಅವನ ನಡೆ ನುಡಿ ಆಹಾರ ಆಚಾರ ವ್ಯವಹಾರವೆಲ್ಲವೂ ಶಿವಾತ್ಮಕವಾಗಿರಬೇಕು. ಅದನ್ನು ಶೀಲಸಂಪಾದನೆಯ ಸ್ಥಲವೆಂದು ಉಲ್ಲೇಖಿಸಿದೆ. ಮಹಾದೇವಿಯಕ್ಕನ 'ಶೀಲದ ವ್ಯಾಖ್ಯಾನ ಇಲ್ಲಿ ಗಮನಾರ್ಹ.

''ಶೀಲ ಶೀಲವೆಂದೆಂಬಿರಯ್ಯಾ
ಶೀಲದ ನೆಲೆಯ ಬಲ್ಲಡೆ ಹೇಳಿರೋ
ಅರಿಯದಿದ್ದರೆ ಕೇಳಿರೋ !

ಕಾಮ ಒಂದನೆಯ ಭವಿ ; ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮತ್ಸರ ಆರನೆಯ ಭವಿ,
ಆಮಿಷ ಏಳನೆಯ ಭವಿ,
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು
ಲಿಂಗವಿಲ್ಲದವರ ಭವಿ ಭವಿ ಎಂಬಿರಿ,
ತಮ್ಮಂತರಂಗದಲ್ಲಿದ್ದ ಅಂಗಾಂಗದ ಸುದ್ದಿಯನರಿಯದೆ
ಅಚ್ಚ ಪ್ರಸಾದಿ, ನಿಚ್ಚ ಪ್ರಸಾದಿ, ಸಮಯ ಪ್ರಸಾದಿಗಳೆಂದು
ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ
ಘಗಲುಗಳ್ಳರ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ'' [63]

ಅರಿಷಡ್ವರ್ಗರಹಿತರಾಗಿ ಅಂತರಂಗದಲ್ಲಿರುವ ಅಂಗಾಂಗದ ಅನುಸಂಧಾನವೇ ಶೀಲ. ಈ ಸಾಧನೆಯಲ್ಲಿ ಶೀಲಸಂಪತ್ತನ್ನು ಜೀವ ಗಳಿಸಿಕೊಳ್ಳಬೇಕು, ಅಳವಡಿಸಿ ಕೊಳ್ಳಬೇಕು.

ಶರಣತ್ವವನ್ನು ಪಡೆದ ಅಂಗವು ತನ್ನ ನಿರ್ದಿಷ್ಟಗುರಿಯನ್ನು ಮುಟ್ಟಲು ಹವಣಿಸುತ್ತದೆ. ಶರಣತ್ವದಲ್ಲಿ ಅಂಗವೂ ಲಿಂಗವೂ ಒಂದೆಂಬ ಬೆಳಗಿನಲ್ಲಿ ಅಭಿನ್ನತೆಯು ಕಂಡು ಬರುತ್ತದೆ. ಒಂದು ಸ್ಥಳದಲ್ಲಿ ಒಂದು ದೀಪವಿದ್ದಾಗ ಬೆಳಕಿರುತ್ತದೆ. ಮತ್ತೊಂದು ದೀಪ ಬಂದಾಗಲೂ ಬೆಳಕಿರುತ್ತದೆ. ಅಲ್ಲಿ ಇರುವುದು ಒಂದೇ ಬೆಳಕು. ಆದರೆ ದೀಪ ಎರಡಿರುತ್ತದೆ. ಒಂದು ದೀಪ ಹೋದಾಗ ಬೆಳಕು ಹೋಗುವುದಿಲ್ಲ. ಇದೇ ಸ್ಥಿತಿ ಶರಣ ಸ್ಥಲದಲ್ಲಿ ಅಂಗನಿಗಿರುವುದು. ಆದರೆ ಒಂದು ಬೆಳಕಿದ್ದಲ್ಲಿಗೆ ಮತ್ತೊಂದು ಬೆಳಕು ಬರುವ ಮತ್ತು ಹೋಗುವ ಅನುಭವವಾಗುತ್ತದೆ. ವೀರಶೈವದರ್ಶನದಲ್ಲಿ ಅಂಗ ಇದನ್ನೂ ಮೀರಿ ಮುನ್ನಡೆಯಬೇಕು, ಲಿಂಗದೊಳನಾಡಿಯಾದರೆ ಸಾಲದು, ಲಿಂಗವೇ ಆಗಬೇಕು. ಲಿಂಗತ್ವದ ಆನಂದಾನುಭವ ದೊರಕಬೇಕು.

"ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ॥"

ಅಂದರೆ ಪ್ರಾಣಲಿಂಗಾದಿಯೋಗದಿಂದ ಸುಖಾತಿಶಯದ ಆನಂದವನ್ನು ಹೊಂದಿದ ಶರಣನು ಶಿವನೊಡನೆ ಏಕತ್ವವನ್ನು ಭಾವಿಸುತ್ತಿರುವುದರಿಂದ ಐಕ್ಯವೆನಿಸುವನು ಎಂದಿದೆ[64]

"ಯಥಾ ಘೃತಂ ಘೃತೇ ನ್ಯಸ್ತಂ ಕ್ಷೀರಂ ಕ್ಷೀರೇ ಯಥೈವ ಚ ।
ಕೇವಲತ್ವಂ ತಥಾ ಪ್ರಾಪ್ತಂ ನ ಕಿಂಚಿದಪಿ ತದ್ಭವೇತ್ ॥"

ತುಪ್ಪದೊಳಗೆ ತುಪ್ಪ, ಹಾಲಿನೊಳಗೆ ಹಾಲು ಸೇರಿದಂತೆ ಅಂದರೆ ಎರಡರ ಗುಣ ರೂಪಗಳು ಅಭಿನ್ನವಾದಂತೆ ಶುದ್ಧಾತ್ಮನು ಅಂದರೆ ಜೀವನು ಪರಮಾತ್ಮನೇ ಆಗುತ್ತಾನೆ, ಎಂದು ಒಂದು ನಿದರ್ಶನವನ್ನು ಐಕ್ಯಸ್ಥಲ ವಿವರಣೆ ಮಾಡಿದೆ. [65] ಡಾ॥ ಜ. ಚ. ನಿ. ಯವರ ವಿವರಣೆ ಅರ್ಥವತ್ತಾಗಿದೆ. ಐಕ್ಯವೆಂದರೆ ಸಾವಲ್ಲ. ಅದು ಇದ್ದು ಇಲ್ಲದಂತಹ ಸ್ಥಿತಿ. ಹೊದ್ದಿಯೂ ಹೊದ್ದದಂತಹ ಗತಿ. ಅದು ನಿಶ್ಚಿಂತವಾದಂತಹ ಸ್ಥಿತಿ. ಕೊರತೆಗೆ ತೆರಹಿಗೆ ಇಂಬಿಲ್ಲದ ಸ್ಥಿತಿ. ಅನೈಕ್ಯವಿಲ್ಲದ ಸ್ಥಿತಿ[66] ಜೀವದ ಅಂತಿಮ ಸಾಧನೆ. ಜೀವ ದೇವರು ಅಭಿನ್ನರು, ಇದು ಶಾಸ್ತ್ರವಾಣಿ. ಅನುಭವವೇದ್ಯವಾಗಬೇಕು. ಅನುಭವಕ್ಕೆ ಬಂದಾಗ ಅಂಗ ಶಬ್ದಮುಗ್ಧನಾಗುತ್ತಾನೆ, ಅದು ವರ್ಣನಾತೀತವಾಗುತ್ತದೆ. ಆದರೆ ಆ ಗುರಿಯನ್ನು ಮುಟ್ಟುವ ನಿರ್ದೇಶನ ಅನುಭಾವಿಯಿಂದ ನಮಗೆ ಲಭ್ಯವಾಗುತ್ತದೆ. ಚೆನ್ನಬಸವಣ್ಣನವರು ಮಾರ್ಮಿಕವಾಗಿ ಈ ಸ್ಥಿತಿಯನ್ನು ನಿರೂಪಿಸುತ್ತಾರೆ.

ತನು ಸೋಂಕಿ ತನು ನಷ್ಟವಾಯಿತ್ತು
ಮನ ಸೋಂಕಿ ಮನ ನಷ್ಟವಾಯಿತ್ತು

ಭಾವ ಸೋಂಕಿ ಭಾವ ನಷ್ಟವಾಯಿತ್ತು
ಧನ ಸೋಂಕಿ ಧನ ನಷ್ಟವಾಯಿತ್ತು
ಇದು ಕಾರಣ ಕೂಡಲಚನ್ನಸಂಗಯ್ಯಾ
ಲಿಂಗ ಸೋಂಕಿ ಶರಣನ ಸಂದು ನಷ್ಟವಾಯಿತು
ನಿಮ್ಮೊಳಗೇಕಾರ್ಥವಾಯಿತು.

ಸ್ಥಲದ ನೈಜ ಅರ್ಥವನ್ನು ಈ ವಚನದಲ್ಲಿ ಕಾಣಬಹುದು. ಜೀವ ಸಾಧನಾ ಕ್ರಮದಲ್ಲಿ ಒಂದನ್ನು ಕಳೆದುಕೊಂಡು ಮತ್ತೊಂದನ್ನು ಪಡೆದ ಬಗೆ ಇಲ್ಲಿ ವರ್ಣಿತ ವಾಗಿದೆ. ತನು, ಮನ, ಧನ, ಭಾವಗಳು ಒಂದೊಂದು ಹಂತದಲ್ಲಿ ಲಿಂಗಸ್ಪರ್ಶವಾದಾಗ, ಅರ್ಥಾತ್ ಪರವಸ್ತುವಿನ ಸಂಪರ್ಕ ಪಡೆದಾಗ ತಮ್ಮತನವನ್ನು ಕಳೆದುಕೊಳ್ಳುತ್ತದೆ. ಅಂಗ–ಲಿಂಗ ಒಂದೆಂಬ ದರ್ಶನಕ್ಕೆ ಯಾವುದು ಅಡ್ಡಿಯಿತ್ತೊ, ಅದು ನಷ್ಟ ವಾಗುತ್ತಾ ಹೋಗುತ್ತವೆ. ಕನ್ನಡಿಯ ಮೇಲೆ ಮುಸುಕಿದ ಮಂಜು ಕರಗುತ್ತಾ ಹೋಗಿ ಶುದ್ಧವಾದ ಕನ್ನಡಿಯಲ್ಲಿ ಬಿಂಬದರ್ಶನವಾದಂತೆ, ತನು, ಮನ, ಧನ, ಭಾವ ಗಳು ಅಳಿದು ಏಕತೆಯು ಕಂಡು ಬರುತ್ತದೆ. ಇದು ಅಂಗ ಸಾಧಿಸುವ ಐಕ್ಯಸ್ಥಲ. ಇದೇ ಸಾಧನೆಯ ಪರಮ ಗುರಿ. ಸಿದ್ಧಿಯ ನಂತರ ಕಾರ್ಯ ಮುಗಿಯಲಿಲ್ಲ.

ವಿಷಯಾದಿಗಳ ಕ್ಷಣಿಕ ಆನಂದದಿಂದ, ಮಾಯಾಶಕ್ತಿಯ ಪರಿಕಲ್ಪನೆಯಿಂದ ಭಿನ್ನತ್ವವನ್ನು ಅನುಭವಿಸುತ್ತಿದ್ದ ಜೀವನಿಗೆ ಇವುಗಳು ನಷ್ಟವಾಗಲು ಶಿವಾದ್ವೈತದ ಸಿದ್ಧಿಯಾಗುವುದು. ಇದೇ ಐಕ್ಯಸ್ಥಲದ ಸಿದ್ಧಿಯೆನಿಸುವುದು. ಇದನ್ನೇ ಅಂಗನು ಪಡೆದ ಐಕ್ಯಸ್ಥಲವೆಂದು ವರ್ಣಿಸಿದೆ. ಈ ಸ್ಥಿತಿಯನ್ನು ಮುಟ್ಟಿದ ನಂತರ ಜೀವ ನಿಗೆ ಯಾವ ಕ್ರಿಯೆಯೂ ಪಾಪಲೇಪನವನ್ನುಂಟುಮಾಡುವುದಿಲ್ಲ. ಸರ್ವದರಲ್ಲೂ ಸಮಭಾವ ಬೆಳೆಯುತ್ತದೆ. ನಮ್ಮ ದೃಷ್ಟಿಯಲ್ಲಿ ದೇಹವಿದ್ದರೂ ಅವನಿಗೆ ದೇಹದ ಅಭಿಮಾನವಾಗಲೀ, ಅದರ ಚಿಂತೆಯಾಗಲೀ ಇರುವುದಿಲ್ಲ. ಎಲ್ಲ ಕಾಲದಲ್ಲೂ ಎಲ್ಲ ತಾಣದಲ್ಲೂ ಶಿವದರ್ಶನವನ್ನೇ ಪಡೆಯುತ್ತಾನೆ. ಅವನ ಕ್ರಿಯೆಗಳೆಲ್ಲವೂ ಶಿವಕ್ರಿಯೆ ಗಳಾಗಿ ಪರಿಣಮಿಸುತ್ತವೆ. ಇದನ್ನೇ ಆಚಾರಸಂಪತ್ತಿ ಸ್ಥಲವೆಂದು ನಿರ್ದೇಶಿಸಿದೆ. ಯೋಗೇಶ್ವರನಾದ ಶ್ರೀ ಕೃಷ್ಣನೂ ಈ ಸ್ಥಿತಿಯನ್ನು ಹೇಳಿದ್ದಾನೆ.

''ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥''

ಎಂದರೆ ಎಲ್ಲೆಲ್ಲಿಯೂ ಸಮದರ್ಶಿಯಾಗಿರುವ ಯೋಗಯುಕ್ತಾತ್ಮನು ಆತ್ಮನನ್ನು ಸರ್ವಭೂತಗಳಲ್ಲಿಯೂ, ಸರ್ವಭೂತಗಳನ್ನೂ ಆತ್ಮನಲ್ಲಿಯೂ ಕಾಣುತ್ತಾನೆ. [68] ಐಕ್ಯ ಸ್ಥಲವನ್ನು ಮುಟ್ಟಿದ ಜೀವನಿಗೆ ಸಕಲ ಸೃಷ್ಟಿಯೂ ಶಿವಮಯವಾಗುವುದು. ನಡೆ ನುಡಿ, ಆಗು ಹೋಗುಗಳೆಲ್ಲ ಶಿವಮಯವೇ ಆಗುತ್ತದೆ.

"ಶಿವೇ ವಿಶ್ವಮಿದಂ ಸರ್ವಂ ಶಿವಃ ಸರ್ವತ್ರ ಭಾಸತೇ ।
ಆಧಾರಾಧೇಯಭಾವೇನ ಶಿವಸ್ಯ ಜಗತಃ ಸ್ಥಿತಿಃ" ॥

ಜಗತ್ತು ಮತ್ತು ಜಗದೀಶರಲ್ಲಿ ಜಗದೀಶನೇ ಆಧಾರನೂ ಜಗತ್ತು ಆಧೇಯವೂ ಆಗಿದ್ದರೂ, ಜೀವನಿಗೆ ಶಿವನಲ್ಲಿ ವಿಶ್ವವೂ ವಿಶ್ವದಲ್ಲಿ ಶಿವನೂ ಗೋಚರವಾಗುವುದು. ಈ ಆನಂದಾನುಭವಕ್ಕೆ ಜೀವನ್ಮುಕ್ತಾವಸ್ಥೆಯೆನ್ನುವರು. ಇದು ಜೀವನಂ ಸಾಧಿಸುವ ಏಕಭಾಜನಸ್ಥಲ. ಅಂದರೆ ಸರ್ವರಲ್ಲಿಯೂ ಸರ್ವದರಲ್ಲಿಯೂ ಶಿವತ್ವದ ಅನುಭವಾನಂದಸ್ಥಲ. ಏಕತ್ವದ ಸಾಧನೆಯಾದಮೇಲೆ ತನ್ನಲ್ಲಿಯೂ, ಗುರುವಿನಲ್ಲಿಯೂ, ಶಿಷ್ಯನಲ್ಲಿಯೂ ಭೇದಭಾವ ಉಳಿಯುವುದಿಲ್ಲ. ಜೀವನಿಗಿರುವ ಉಪಾಧಿಗಳು ಅಳಿದು, ತಾನೇ ಶಿವನೆಂಬ, ಗುರುವೆಂಬ, ಚರಾಚರವೆಲ್ಲ ತಾನೆಂಬ ಅರಿವು ಬರುವುದೇ ಅಂಗನು ಮುಟ್ಟಬೇಕಾದ ಪರಾಹಂತ. ಶಿವನೊಡಗೂಡಿ ಸಲಿವ ದಿವ್ಯಾನಂದ. ಚಿದಾಕಾಶರೂಪ ಪರಮಾತ್ಮನಲ್ಲಿ ಜೀವಾತ್ಮನನ್ನು ಸಾಮರಸ್ಯಭಾವದಿಂದ ಲೀನಗೊಳಿಸಿ, ಸ್ವಸ್ವರೂಪವನ್ನು ಲಯಗೊಳಿಸುವ ಸ್ಥಿತಿಗೆ ಸಹಭಾಜನಸ್ಥಲವೆಂದು ಹೆಸರು. ಜೀವನ ಸಾಧನೆಯ ಪರಾಹಂತವೇ ಈ ಸ್ಥಲ. ಈ ರೀತಿಯಾಗಿ ಅಂಗವು 44 ಸ್ಥಲಗಳಲ್ಲಿ ಷಟ್‌ಸ್ಥಲಗಳಲ್ಲಿ ತನ್ನ ಕಿಂಚಿತ್ತ್ವವನ್ನು ಲಯಗೊಳಿಸುತ್ತಾ ಮಹತ್ತ್ವವನ್ನು ಪಡೆಯುತ್ತದೆ.

ಈ ಸಾಧನೆಯು ಕೇವಲ ಬೌದ್ಧಿಕ ಕ್ರಿಯೆಯಲ್ಲ, ಮಾನಸಿಕ ಸ್ಥಿತಿಯಲ್ಲ. ದೇಹ ಮನ, ಬುದ್ಧಿಗಳ ಸಹಜ ಪರಿವರ್ತನೆ ಈ ಸಾಧನೆಯ ಗುರಿಯಾಗಿದೆ. ಹಿಂದೆ ಹೇಳಿದ 44 ಸ್ಥಲಗಳೂ ಷಟ್‌ಸ್ಥಲದ ಅಂತರಂಗವೇ ಆಗಿದೆ, ಭಕ್ತಸ್ಥಲದಲ್ಲಿ ಆರಂಭವಾದ ಜೀವನ ಸಾಧನೆ, ಅದೇ ಸ್ಥಲದಲ್ಲಿ ಭಕ್ತನಾಗಿ, ಮಹೇಶನಾಗಿ, ಪ್ರಸಾದಿಯಾಗಿ, ಪ್ರಾಣಲಿಂಗಿಯಾಗಿ, ಶರಣನಾಗಿ ಐಕ್ಯಸ್ಥಿತಿಯನ್ನು ಹೊಂದಿ, ಅವನ್ನಳಿದು ಮಹೇಶಸ್ಥಲವನ್ನು ಹೊಂದಬೇಕು. ಅಲ್ಲಿಯೂ ಮತ್ತೆ ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಅನುಸಂಧಾನ ಮಾಡಬೇಕು.

ಈ ಎರಡು ಸ್ಥಲಗಳನ್ನು ತ್ಯಾಗಾಂಗವೆಂದು ಸೂಚಿಸಲಾಗಿದೆ. ಇಲ್ಲಿ 12 ತತ್ತ್ವದ ಅನುಸಂಧಾನವಿದೆ. ಜೀವ ತನ್ನ ಪೂರ್ವಸಂಚಿತ ಸಂಬಂಧವನ್ನು ಕಳೆದುಕೊಳ್ಳುತ್ತಾ ಪರಿಶುದ್ಧವಾಗುತ್ತಿರುವ ಕ್ರಿಯೆ ತ್ಯಾಗಾಂಗವೆಂದು ವಿಶ್ಲೇಷಿಸಲಾಗಿದೆ. ಈ ಕಾರ್ಯ ಆರಂಭವಾಗುವುದೇ ಮೂಲಾಧಾರ ಚಕ್ರದಲ್ಲಿ. ಪೃಥ್ವೀತತ್ತ್ವದ ಅನುಭವವಾಗುತ್ತದೆ. ನಂತರ ಸ್ವಾಧಿಷ್ಠಾನದಲ್ಲಿ ಜಲತತ್ತ್ವದ ಅನುಭವ. ಪೃಥ್ವಿ ಮತ್ತು ಜಲತತ್ತ್ವಗಳು ಜೀವನನ್ನು ಆಕರ್ಷಿಸುತ್ತವೆ. ಪತನಕ್ಕೂ ಕಾರಣವಾಗಬಹುದು. ಆದುದರಿಂದ ಇಲ್ಲಿ ಆಚಾರವೇ ಶಿವನಾಗಿ ಕ್ರಿಯೆಯೆಲ್ಲ ಶಿವಾರ್ಪಿತವಾಗಬೇಕು. ಪಾರಿಭಾಷಿಕವಾಗಿ ಇದನ್ನು ವಿವರಿಸುತ್ತಾ ಪೃಥ್ವಿಯ ಗುಣವಾಗ ಗಂಧವನ್ನು ಘ್ರಾಣೇಂದ್ರಿಯದಿಂದ ಗ್ರಹಿಸಿ ಆಚಾರಲಿಂಗಕ್ಕೆ ಅರ್ಪಿಸಬೇಕೆನ್ನುತ್ತಾರೆ. ಅದರಂತೆಯೇ ಜಲತತ್ತ್ವದ ರಸವನ್ನು ಗ್ರಹಿಸಿ

ಜಿಹ್ವಾಮುಖದಲ್ಲಿ ಗುರುಲಿಂಗಕ್ಕೆ ಅರ್ಪಿಸಬೇಕು. ಹೀಗೆ ಅರ್ಪಣ ವೃತ್ತಿ ತ್ಯಾಗಾಂಗದ ಸಂಕೇತವಾಗಿದೆ. ಮೊದಲು ಶ್ರದ್ಧಾ ಭಕ್ತಿನೈಷ್ಠಿಕಭಕ್ತಿಯಾಗಿ ಮಾರ್ಪಡುತ್ತದೆ. ನಂತರ ಜೀವನು ಪಡೆಯುವ ಪ್ರಸಾದವೆಲ್ಲಾ ಶಿವಪ್ರಸಾದ. ಅದನ್ನು ಅವಧಾನಭಕ್ತಿಯಿಂದ ಪಡೆಯಬೇಕು. ಅಗ್ನಿತತ್ವವನ್ನು ನೇತ್ರೇಂದ್ರಿಯದಿಂದ ಗ್ರಹಿಸಿ ಶಿವಲಿಂಗಕ್ಕೆ ಅರ್ಪಿಸಬೇಕು. ಇಲ್ಲಿ ಜೀವನ ಪೂರ್ವಾಶ್ರಯ ಬಿಡುಗಡೆಯಾಗುತ್ತದೆ. ಆತ್ಮನ ಸಂಸರ್ಗವಾಗುತ್ತದೆ. ತ್ವಗಿಂದ್ರಿಯದ ಮುಖೇನ ಅನುಭಾವಭಕ್ತಿಯುಕ್ತವಾಗಿ ವಾಯುತತ್ವದಿಂದ ಗ್ರಾಹ್ಯವಾದುದನ್ನು ಜಂಗಮಲಿಂಗಕ್ಕರ್ಪಿಸಬೇಕು. ಪ್ರಸಾದಿ ಪ್ರಾಣಲಿಂಗಿಸ್ಥಲಗಳಿಗೆ ಭೋಗಾಂಗವೆಂದು ಹೆಸರಿಸಲಾಗಿದೆ. ಜೀವನು ಅನಂಭವಿಸುವ ಸುಖ ಅಂಗಭೋಗವಲ್ಲ. ಸಾಧನಾಯುಕ್ತವಾದ ಲಿಂಗಭೋಗ. ಆದುದರಿಂದ ಭೋಗಾಂಗಸಾಧನೆ ಅಂಗಕ್ಕೂ ಲಿಂಗಕ್ಕೂ ಸಾಮರಸ್ಯವನ್ನು ಕಲ್ಪಿಸುವ ಸೇತುವೆಯಾಗುತ್ತದೆ. ಈ ಸಾಧನೆಯ ನಂತರ ಆನಂದಭಕ್ತಿಯಿಂದ ಶ್ರೋತ್ರೇಂದ್ರಿಯದ ಮೂಲಕ ಶಬ್ದಪ್ರಸಾದವನ್ನು ಆಕಾಶತತ್ವದಿಂದ ಗ್ರಹಿಸಿ ಪ್ರಸಾದಲಿಂಗಕ್ಕರ್ಪಿಸಿ ಜೀವನು ಶರಣತ್ವ ಹೊಂದುತ್ತಾನೆ. ಮುಂದೆ ಆನಂದಭಕ್ತಿ ಸಮರಸಭಕ್ತಿಯಾಗುತ್ತದೆ. ಇಲ್ಲಿ ಆತ್ಮತತ್ವದಿಂದ ಗ್ರಾಹ್ಯವಾದ ತೃಪ್ತಿಯನ್ನು ಮನೋಮುಖದಲ್ಲಿ ಮಹಾಲಿಂಗಕ್ಕೆ ಅರ್ಪಿಸಬೇಕು. ಪ್ರಸಾದಿಸ್ಥಲವು ಮಣಿಪೂರಚಕ್ರದಲ್ಲೂ, ಪ್ರಾಣಲಿಂಗಿಸ್ಥಲವು ಅನಾಹತಚಕ್ರದಲ್ಲೂ, ಶರಣಸ್ಥಲವು ವಿಶುದ್ಧಿಚಕ್ರದಲ್ಲೂ, ಐಕ್ಯಸ್ಥಲವು ಆಜ್ಞಾಚಕ್ರದಲ್ಲೂ ಪರಿಣಾಮಗೊಳ್ಳುತ್ತವೆ. ಈ ರೀತಿಯಾಗಿ ಅಂಗವು ಅಂದರೆ ಜೀವವು ಲಿಂಗದಲ್ಲಿ ಸಮರಸಗೊಳ್ಳುವ ಸಾಧನೆಯನ್ನು ಚನ್ನಬಸವಣ್ಣನವರು ಒಂದು ವಚನದಲ್ಲಿ ವಿವರಿಸಿದ್ದಾರೆ—

> ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದಿಂತು ಷಟ್‌ಸ್ಥಲವಾರು
>
> ಭಕ್ತ ಮಹೇಶ ಈ ಎರಡು ಗುರುಸ್ಥಲ
> ಪ್ರಸಾದಿ ಪ್ರಾಣಲಿಂಗಿ ಈ ಎರಡು ಲಿಂಗಸ್ಥಲ
> ಶರಣ ಐಕ್ಯ ಈ ಎರಡು ಜಂಗಮಸ್ಥಲ
> ಇವಕ್ಕೆ ಅಂಗಗಳಾವುವೆಂದಡೆ

ಭಕ್ತರಿಗೆ ಪೃಥ್ವಿಯೆ ಅಂಗ. ಮಹೇಶ್ವರಂಗೆ ಅಪ್ಪುವೆ ಅಂಗ, ಪ್ರಸಾದಿಗೆ ಅಗ್ನಿಯೆ ಅಂಗ, ಪ್ರಾಣಲಿಂಗಿಗೆ ವಾಯುವೆ ಅಂಗ, ಶರಣಂಗೆ ಆಕಾಶವೆ ಅಂಗ, ಐಕ್ಯಂಗೆ ಆತ್ಮವೆ ಅಂಗ, ಈ ಅಂಗಂಗಳಿಗೆ ಹಸ್ತಂಗಳಾವುವೆಂದಡೆ—

> ಭಕ್ತಂಗೆ ಸುಚಿತ್ತವೆ ಹಸ್ತ, ಮಹೇಶ್ವರಂಗೆ ಸುಬುದ್ಧಿಯೆ ಹಸ್ತ,
> ಪ್ರಸಾದಿಗೆ ನಿರಹಂಕಾರವೇ ಹಸ್ತ, ಪ್ರಾಣಲಿಂಗಿಗೆ ಸುಮನವೆ ಹಸ್ತ,
> ಶರಣಂಗೆ ಸುಜ್ಞಾನವೆ ಹಸ್ತ. ಐಕ್ಯಂಗೆ ಸದ್ಭಾವವೆ ಹಸ್ತ

ಈ ಹಸ್ತಂಗಳಿಗೆ ಲಿಂಗಂಗಳಾವುವೆಂದಡೆ :

ಸುಚಿತ್ತಹಸ್ತಕ್ಕೆ ಆಚಾರ ಲಿಂಗ, ಸುಬುದ್ಧಿಹಸ್ತಕ್ಕೆ ಗುರು ಲಿಂಗ,
ನಿರಹಂಕಾರಹಸ್ತಕ್ಕೆ ಶಿವ ಲಿಂಗ, ಸುಮನಹಸ್ತಕ್ಕೆ ಚರ ಲಿಂಗ,
ಸುಜ್ಞಾನಹಸ್ತಕ್ಕೆ ಪ್ರಸಾದ ಲಿಂಗ, ಸದ್ಭಾವಹಸ್ತಕ್ಕೆ ಮಹಾಲಿಂಗ,

ಈ ಲಿಂಗಂಗಳಿಗೆ ಮುಖಂಗಳಾವುವೆಂದಡೆ—

ಆಚಾರಲಿಂಗಕ್ಕೆ ಪ್ರಾಣ, ಗುರುಲಿಂಗಕ್ಕೆ ಜಿಹ್ವೆ
ಶಿವಲಿಂಗಕ್ಕೆ ನೇತ್ರ, ಚರಲಿಂಗಕ್ಕೆ ತ್ವಕ್ಕು,
ಪ್ರಸಾದಲಿಂಗಕ್ಕೆ ಶ್ರೋತ್ರ, ಮಹಾಲಿಂಗಕ್ಕೆ ನಿರ್ಭಾವ,

ಈ ಮುಖಂಗಳಿಗೆ ಅರ್ಪಿತಂಗಳಾವಾವೆಂದಡೆ :

ಘ್ರಾಣಕ್ಕೆ ಗಂಧ, ಜಿಹ್ವೆಗೆ ರುಚಿ, ನೇತ್ರಕ್ಕೆ ರೂಪು,
ತ್ವಕ್ಕಿಗೆ ಸ್ಪರ್ಶನ, ಶ್ರೋತ್ರಕ್ಕೆ ಶಬ್ದ, ನಿರ್ಭಾವಕ್ಕೆ ನಿರ್ವಯಲು,

ಇಂತೀ ಸರ್ವೇಂದ್ರಿಯ ಸಮ್ಮತ ನಿರ್ವಿಕಲ್ಪ ಮಹಾಲಿಂಗಾಂಗ ಭಾವದ

ಸುಚಿತ್ತಲೇಪ ಗ್ರಾಹಕ ಭಕ್ತ ಗುರುಲಿಂಗವಾದ
ಗುರುಲಿಂಗಾಂಗ ಸುಬುದ್ಧಿ ಲೇಪಗ್ರಾಹಕ ಮಹೇಶ್ವರ ಶಿವಲಿಂಗವಾದ,
ಶಿವಲಿಂಗಾಂಗ ನಿರಹಂಕಾರ ಲೇಪಗ್ರಾಹಕ ಪ್ರಸಾದಿ ಜಂಗಮಲಿಂಗವಾದ,
ಜಂಗಮಲಿಂಗಾಂಗ ಸುಮನ ಲೇಪ ಗ್ರಾಹಕ ಪ್ರಾಣಲಿಂಗಿ ಪ್ರಸಾದಲಿಂಗಿಯಾದ,
ಪ್ರಸಾದ ಲಿಂಗಾಂಗ ಸುಜ್ಞಾನ ಲೇಪ ಗ್ರಾಹಕ ಶರಣ ಮಹಾಲಿಂಗವಾದ,
ಮಹಾಲಿಂಗಾಂಗ ಸದ್ಭಾವ ಲೇಪ ಗ್ರಾಹಕ ಐಕ್ಯ ಅಭೇದಾನಂದ, ಪರಿಪೂರ್ಣ ಮಯವಾದ,

''ನಿಶ್ಶಬ್ದಂ ಬ್ರಹ್ಮ ಉಚ್ಯತೇ'' ಎಂಬ ಶ್ರುತಿಯ ಮೀರಿ ನಿಂದ
ಅಖಂಡ ಮಹಿಮಂಗೆ, ಸುನಾದಯುಕ್ತಂಗೆ, ಶಬ್ದನಷ್ಟವಾದಲ್ಲಿ,
ಆಚಾರಲಿಂಗವಿಲ್ಲ ಭಕ್ತಂಗೆ, ಗುರುಲಿಂಗವಿಲ್ಲ ಮಹೇಶ್ವರಂಗೆ,
ಶಿವಲಿಂಗವಿಲ್ಲ ಪ್ರಸಾದಿಗೆ, ಚರಲಿಂಗವಿಲ್ಲ ಪ್ರಾಣಲಿಂಗಿಗೆ,
ಪ್ರಸಾದಲಿಂಗವಿಲ್ಲ ಶರಣಂಗೆ, ಇತ್ಯಾದಿ ಜಡ ದೇಹ ಧರ್ಮ ಭಾವವಿಲ್ಲ ಐಕ್ಯಂಗೆ
ಇದು ಕಾರಣ ಕೂಡಲ ಚೆನ್ನಸಂಗಯ್ಯಾ.
ನಿಮ್ಮ ಷಟ್‌ಸ್ಥಲದ ಪರಿಯಾಯವ ನೀವೇ ಬಲ್ಲಿರಿ
ಉಳಿದ ಅಜ್ಞಾನಿ ಜೀವಿಗಳೆತ್ತ ಬಲ್ಲರು ? [69]

ಈ ಒಂದು ವಚನದಲ್ಲಿ ಷಟ್‌ಸ್ಥಲದರ್ಶನವನ್ನು ಚೆನ್ನಬಸವಣ್ಣನವರು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಇಲ್ಲಿ ಅಂಗನ ಸ್ಥಿತಿಗತಿಗಳನ್ನು ಚಿತ್ರಿಸಿ ಲಿಂಗತ್ವ ಹೊಂದುವ ಸನ್ನಿವೇಶವನ್ನು ಮನೋಜ್ಞವಾಗಿ ವಿವರಿಸಿದ್ದಾರೆ. ಈ ವಚನವನ್ನು ಸಮಗ್ರವಾಗಿ

ಅಧ್ಯಯನ ಮಾಡಿದರೆ ಜೀವನ ಸಾಧನೆ ಕೇವಲ ಮಾನಸಿಕ ಪರಿವರ್ತನೆಯಲ್ಲ, ಇದು ದೈಹಿಕವೂ ಆಗಿದೆ ಎನಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳಲು ಶರೀರಶಾಸ್ತ್ರ ಹಾಗೂ ನಾಡೀಶಾಸ್ತ್ರವು ನಮಗೆ ತಿಳಿದಿರಬೇಕು,

'ನಾಡಿ' ಶಬ್ದವು 'ನದ್' ಅಂದರೆ ಚಲನೆ ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ನಾಡಿಗಳಲ್ಲಿ ಕೆಲವು ಸೂಕ್ಷ್ಮನಾಡಿಗಳು. ಇವು ಶರೀರಶಾಸ್ತ್ರದ ಬಾಹ್ಯದೃಷ್ಟಿಗೆ ಗೋಚರ ವಾಗುವುದಿಲ್ಲ. ಇವುಗಳಲ್ಲೆ ಪ್ರಾಣಶಕ್ತಿಯು ಪ್ರವಹಿಸುವುದು. ಕೆಲವು ಶಾಸ್ತ್ರ ಗ್ರಂಥಗಳಲ್ಲಿ 7200 ನಾಡಿಗಳಿರುವುವೆಂದೂ, ಮತ್ತೆ ಕೆಲವರಲ್ಲಿ ಮೂರೂವರೆ ಲಕ್ಷ ನಾಡಿಗಳಿರುವುದಾಗಿಯೂ ಹೇಳಿದೆ. ಸಾಧಕರದೃಷ್ಟಿಯಲ್ಲಿ 14 ನಾಡಿಗಳು ಮುಖ್ಯ. 1) ಸುಷುಮ್ನ 2) ಇಡಾ 3) ಪಿಂಗಳ 4) ಗಾಂಧಾರಿ 5) ಹಸ್ತಿಜಿಹ್ವ 6) ಕುಹು 7) ಸರಸ್ವತಿ 8) ಪೂಷ 9) ಸಂಚಿನಿ 10) ಪಯಸ್ವಿನಿ 11) ವಾರುಣಿ 12) ಅಲಂಬುಷ 13) ವಿಶ್ವೋದರ 14) ಯಶಸ್ವಿನಿ ಎಂಬಿವು.

ಇವುಗಳಲ್ಲಿ ಇಡಾ, ಪಿಂಗಳ, ಸುಷುಮ್ನನಾಡಿಗಳು ಅತಿಮುಖ್ಯ. ಸುಷುಮ್ನ ನಾಡಿ ಎಲ್ಲಕ್ಕೂ ಪ್ರಧಾನ.

ಶರೀರದಲ್ಲಿರುವ ಬೆನ್ನುಮೂಳೆಗೆ ಮೇರುದಂಡವೆನ್ನುತ್ತಾರೆ. ಈ ಮೇರು ದಂಡದ ಮೂಲಕ ಇಡಾ, ಪಿಂಗಳಾ ಮತ್ತು ಸುಷುಮ್ನಾನಾಡಿಗಳು ಇತರಕಡೆಗೆ ವ್ಯಾಪಿಸಿ ಕೊಂಡಿವೆ. ಜನನೇಂದ್ರಿಯದ ಬಳಿ ಇರುವ ಮೂಲಾಧಾರ ಚಕ್ರದಲ್ಲಿ ಸಂಗಮವಾಗು ತ್ತದೆ. ಇದು ಪೃಥ್ವಿತತ್ತ್ವಚಕ್ರ. ಇದನ್ನೇ ಸ್ವಯಂಭುಲಿಂಗವೆಂದು ಕರೆಯಲಾಗಿದೆ, ಕುಂಡಲಿನೀ ಶಕ್ತಿಇರುವುದೇ ಈ ಚಕ್ರದಲ್ಲಿ. ಇದೇ ವೀರಶೈವದರ್ಶನದ ಭಕ್ತಸ್ಥಲ. ಕುಂಡಲಿನಿಯ ಉತ್ಥಾನವೇ ಭಕ್ತಿಸ್ಥಲದ ಸಾಧನೆ. ಈ ಸಾಧನೆಯಿಂದ ಸರ್ವಪಾಪಗಳ ನಿವಾರಣೆಯಾಗುತ್ತದೆ. ನಂತರ ಸ್ವಾಧಿಷ್ಠಾನಚಕ್ರದಲ್ಲಿ ಅರಿಷಡ್ವರ್ಗಗಳ ದಮನವಾಗು ತ್ತದೆ. ಜೀವನು ಶುದ್ಧನಾಗುತ್ತಾನೆ. ಇದು ಮಹೇಶಸ್ಥಲ. ಹಾಗೆ ಮಣಿಪೂರ, ಅನಾಹುತ, ವಿಶುದ್ಧ, ಆಜ್ಞಾಚಕ್ರಗಳಲ್ಲೂ ಕ್ರಮವಾಗಿ ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯಸ್ಥಲ ಸಿದ್ಧಿಯಾಗುತ್ತದೆ. ಕುಂಡಲಿನೀಶಕ್ತಿಯ ಉತ್ಥಾನವು ಶಾರೀರಿಕಕ್ರಿಯೆ ಯಲ್ಲದೆ ಕೇವಲ ಮಾನಸಿಕಕ್ರಿಯೆಯಿಂದ ಸಾಧ್ಯವಿಲ್ಲ. ಈ ಸಾಧನಾಮಾರ್ಗವನ್ನು ಯೋಗಶಾಸ್ತ್ರದಲ್ಲಿ ವಿಸ್ತರಿಸಿದೆ. ಈ ಸಾಧನೆಯಲ್ಲಿ ಪರಿಪೂರ್ಣತೆಯನ್ನು ಶರಣರು ಪಡೆದಿದ್ದರೆನ್ನುವುದಕ್ಕೆ ಪ್ರಭುದೇವರ ವಚನವೇ ಸಾಕ್ಷಿಯಾಗಿದೆ.

"ಗುದಸ್ಥಾನದಲ್ಲಿ ಆಧಾರಚಕ್ರ, ಪೃಥ್ವಿಯೆಂಬ ಮಹಾಭೂತ, ಚತುಃಕೋಣೆ, ಚೌದಳಪದ್ಮ, ಅಲ್ಲಿಹ ಅಕ್ಷರ ನಾಲ್ಕು, ವ-ಶ-ಷ-ಸ ; ಅದರ ವರ್ಣ ಸುವರ್ಣ, ಅದಕ್ಕೆ ಅಧಿದೇವತೆ ದಾಕ್ಷಾಯಣಿ. ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ, ಅಪ್ಪುವೆಂಬ ಮಹಾಭೂತ, ಧನುರ್ಗತಿ, ಷಡುದಳಪದ್ಮ, ಅಲ್ಲಿಹ ಅಕ್ಷರವಾರು, ಬ-ಭ-ಮ-ಯ-ರ-ಲ ಅದರವರ್ಣ ಪಚ್ಚೆಯ ವರ್ಣ, ಅದಕ್ಕೆ ಅಧಿದೇವತೆ ಬ್ರಹ್ಮನು.

ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ, ತೇಜವೆಂಬ ಮಹಾಭೂತ. ತ್ರಿಕೋಣೆ, ದಶದಳ ಪದ್ಮ, ಅಲ್ಲಿಹ ಅಕ್ಷರ ಹತ್ತು. ಡ-ಢ-ಣ-ತ-ಥ-ದ-ಧ-ನ-ಪ-ಫ ; ಅದರವರ್ಣ ಕೃಷ್ಣವರ್ಣ, ಅದಕ್ಕೆ ಅಧಿದೇವತೆ ವಿಷ್ಣು. ಹೃದಯಸ್ಥಾನದಲ್ಲಿ ಅನಾಹತಚಕ್ರ, ವಾಯು ವೆಂಬ ಮಹಾಭೂತ, ಷಟ್ಕೋಣೆ, ದ್ವಾದಶದಳಪದ್ಮ. ಅಲ್ಲಿಹ ಅಕ್ಷರ ಹನ್ನೆರಡು, ಕ-ಖ-ಗ-ಘ-ಙ-ಚ-ಛ-ಜ-ಝ-ಞ-ಟ-ಠ- ಅದರ ವರ್ಣ ಕುಂಕುಮವರ್ಣ. ಅದಕ್ಕೆ ಅಧಿದೇವತೆ ಮಹೇಶ್ವರನು. ಕಂಠಸ್ಥಾನದಲ್ಲಿ ವಿಶುದ್ಧಿಚಕ್ರ, ಆಕಾಶವೆಂಬ ಮಹಾ ಭೂತ, ವರ್ತುಳಾಕಾರ; ಷೋಡಶದಳಪದ್ಮ, ಅಲ್ಲಿಹ ಅಕ್ಷರ ಹದಿನಾರು, ಅ-ಆ-ಇ-ಈ -ಉ-ಊ-ಋ-ೠ-ಌ-ೡ-ಏ ಐ-ಓ-ಔ-ಅಂ-ಅಃ ಅದರವರ್ಣ ಶ್ವೇತವರ್ಣ. ಅದಕ್ಕೆ ಅಧಿದೇವತೆ ಸದಾಶಿವನು. ಭ್ರೂಮಧ್ಯಸ್ಥಾನದಲ್ಲಿ ಆಜ್ಞಾಚಕ್ರ, ಮನವೆಂಬ ಮಹಾಭೂತ. ತಮಂಧಾಕಾರ, ದ್ವಿದಳಪದ್ಮ ಅಲ್ಲಿಹ ಅಕ್ಷರವೆರಡು. ಹಂ-ಕ್ಷಂ ಅದರ ವರ್ಣ ಮಾಣಿಕ್ಯವರ್ಣ. ಅದಕ್ಕೆ ಅಧಿದೇವತೆ ಶ್ರೀಗುರು. ಉನ್ಮನ ಜ್ಯೋತಿ ಬ್ರಹ್ಮ ರಂಧ್ರದಲ್ಲಿ, ಸಹಸ್ರದಳಪದ್ಮ. ಅಲ್ಲಿ ಅಮೃತವಿಹುದು. ಅಲ್ಲಿ ಓಂಕಾರಸ್ವರೂಪವಾಗಿ ಗುಹೇಶ್ವರಲಿಂಗವು ಸದಾ ಸನ್ನಿಹಿತವು.[70] ಅಂಗವು ಲಿಂಗತ್ವವನ್ನು ಸಾಧಿಸುವಲ್ಲಿ ಷಟ್‌ಚಕ್ರದ ಸಿದ್ಧಾಂತವನ್ನು ಶರಣರು ಗಮನಿಸಿದ್ದಾರೆ. ಅದರ ಆವಶ್ಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಶರಣರು ಶರೀರಶಾಸ್ತ್ರದ ಸಮಗ್ರ ಅಂಶವನ್ನೂ ಅರಿತಿದ್ದರು. ಕುಂಡಲಿನೀಶಕ್ತಿಯನ್ನು ಉತ್ಥಾನಗೊಳಿಸಿ ಸಿದ್ಧಿ ಪಡೆದಿದ್ದರು ಆದರೆ ಎಲ್ಲ ಶರಣರಿಗೂ ಇದರ ಪಾರಿಭಾಷಿಕ ವಿವರಣೆಯನ್ನು ತಿಳಿಸಿಕೊಡುವುದು ಕಠಿಣವಾಗುವುದರಿಂದ ಷಟ್ ಸ್ಥಲವನ್ನು ಸ್ಥೂಲವಾಗಿ ವಿವರಿಸಿದರು.

ಚನ್ನಬಸವಣ್ಣನವರು ಷಟ್‌ಚಕ್ರ ನಿರೂಪಣೆಯಲ್ಲಿ ಷಟ್‌ಸ್ಥಲ ಸಿದ್ಧಾಂತ ಸಮನ್ವಯಗೊಳಿಸಿರುವ ರೀತಿ ಭವ್ಯವಾಗಿದೆ. ಕರಣಹಸಿಗೆಯಲ್ಲಿ "ಪಿಂಡ ಬ್ರಹ್ಮಾಂಡಯೋರೈಕ್ಯಂ" ಎನ್ನುತ್ತಾ ಜೀವನನ್ನೂ ಆವರಿಸಿದ, ದೇಹವನ್ನೂ ಆಕ್ರಮಿಸಿದ ಸರ್ವ ಸಂಗತಿಗಳನ್ನೂ ವಿವರಿಸಿದ್ದಾರೆ. ಜೀವಕ್ಕೆ ಕಾಯ, ಕರಣ, ಭಾವಗಳೆಂಬ ಉಪಾಧಿಗಳಿರುತ್ತವೆ. ಜೀವ ಇವುಗಳನ್ನೆಲ್ಲಾ ಲಿಂಗಾರ್ಪಣಮಾಡಿ ತನ್ನ ಉಪಾಧಿಗಳ ಬಾಧೆಯಿಂದ ಬಿಡುಗಡೆ ಹೊಂದುತ್ತಾನೆ. ಈ ರೀತಿಯ ಅರ್ಪಣತ್ರಯ ವಿವರಣೆಯನ್ನು ತನ್ನ ಮಿಶ್ರಾರ್ಪಣದಲ್ಲಿ ಸಮಗ್ರವಾಗಿ ಅರುಹಿದ್ದಾರೆ. ಸುದೀರ್ಘವಾಗಿ ಸರ್ವಸ್ಥಲ ನಿರ್ವಚನಗೈದು ಕೊನೆಯಲ್ಲಿ—

"ವಾಚಾತೀತಂ ಮನೋತೀತಂ ಭಾವಾತೀತಮಗೋಚರಂ ।
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ ॥"

ಎಂಬುದಾಗಿ,

"ಆದಿಶೂನ್ಯಂ ಮಧ್ಯಶೂನ್ಯಮಂತ್ಯಶೂನ್ಯಂ ನಿರಾಮಯಂ ।
ಸರ್ವಶೂನ್ಯಂ ನಿರಾಲಂಬಂ ನಿಶ್ಶಬ್ದಂ ಬ್ರಹ್ಮ ಉಚ್ಯತೇ ॥"

ಎಂಬ ನುಡಿಗೆಡೆಗೊಡದೆ ನಿರವಯುವಸ್ಥಲದಲ್ಲಿ
ನಿಜವನೈದಿಪ್ಪಾತನೀಗ, ಅಭೇದ್ಯ ಭೇದಕ,
ಅಸಾಧ್ಯಸಾಧಕ ಚಿನ್ಮಯ, ಚಿದ್ರೂಪ, ಚಿದಾನಂದ
ಇಂತಪ್ಪ ದಿವ್ಯ ಶಿವಯೋಗಿ ಮಹಾಶರಣ
ಪ್ರಭುದೇವರ, ಬಸವಣ್ಣನ ಕರುಣದಿಂದಾನು
ಬದುಕಿದೆನಯ್ಯಾ ಕೂಡಲಚನ್ನಸಂಗಮದೇವಾ ॥ [71]

ಲಿಂಗಾಂಗಸಾಮರಸ್ಯದ ಅಂತರಾರ್ಥವನ್ನೆಲ್ಲಾ ಈ ಒಂದು ಬೃಹದ್ ವಚನ ಕೃತಿಯಲ್ಲಿ ಚನ್ನಬಸವಣ್ಣನವರು ವಿವರಿಸಿದ್ದಾರೆ.

ಜೀವವು ಚಿನ್ಮಯವೂ, ಚಿದ್ರೂಪವೂ, ಚಿದಾನಂದವೂ ಆಗಬೇಕಾದರೆ ನಾನಾ ರೀತಿಯ ಸಾಧನೆ ಮಾಡಬೇಕೆಂಬುದನ್ನೂ 44ಸ್ಥಲ ನಿರೂಪಣೆಯಲ್ಲಿ ವಿವರಿಸಲಾಗಿದೆ. ಷಟ್‌ಸ್ಥಲನಿರೂಪಣೆಯು ಷಟ್‌ಚಕ್ರಸಾಧನೆಯ ಸ್ಥೂಲವಿವರಣೆಯೆನ್ನಬಹುದು. ಷಡ್‌ದರ್ಶನವನ್ನರಿಯದವರೂ ನಾನಾರೀತಿಯಲ್ಲಿ ಕುಂಡಲಿನೀಶಕ್ತಿಯ ತತ್ತ್ವದ ಅನುಸಂಧಾನದಿಂದ ಸಹಸ್ರಾರದಲ್ಲಿರುವ ಶಿವನೊಳೈಕ್ಯವನೊಂದಿದ್ದಾರೆ. ಅದನ್ನೇ ಹೃಷೀಕೇಶದ ಸ್ವಾಮಿ ಶಿವಾನಂದರು ಹೀಗೆ ವಿವರಿಸಿದ್ದಾರೆ—

Kundalini can be awakened by pranayama, Asanas, and mudras by Hathayogi's, by concentration and training of the mind by Rajayogi's, by devotion and perfect surrender by Bhaktas by Analytical will by the jnanis, by mantras by the tantrikas and by the grace of the guru (gurukripa) through touch, sight or mere Sankalpa. Rousing of kundalini and its union with Siva at the Sahasrara Chakra effect the state of Samadhi and mukti. No Samadhi is possibie without awakening the kundalini.)

ಹಠಯೋಗಿಗಳು ಪ್ರಾಣಾಯಾಮ ಆಸನ ಮತ್ತು ಮುದ್ರೆಗಳಿಂದಲೂ, ರಾಜಯೋಗಿಗಳು ಏಕಾಗ್ರತೆ ಮತ್ತು ಮನೋವೃತ್ತಿಯಿಂದಲೂ, ಭಕ್ತರು ಪರಿಪೂರ್ಣ ಶರಣಾಗತಿ ಮಾರ್ಗದಿಂದಲೂ, ಜ್ಞಾನಿಗಳು ತತ್ತ್ವಚಿಂತನೆಯಿಂದಲೂ, ತಾಂತ್ರಿಕರು ಮಂತ್ರಸಾಧನೆಯಿಂದಲೂ, ಗುರುವನುಗ್ರಹದಿಂದಲೂ ಅಂದರೆ ಗುರುಕೃಪೆಯಿಂದ ದೊರೆಯಬಹುದಾದ, ಸ್ಪರ್ಶ. ದೃಶ್ಯ ಮತ್ತು ಸಂಕಲ್ಪದಿಂದಲೂ ಕುಂಡಲಿನೀಶಕ್ತಿಯನ್ನು ಉತ್ಥಾನಗೊಳಿಸಿಕೊಳ್ಳುತ್ತಾರೆ. ಉತ್ಥಾನಗೊಂಡ ಕುಂಡಲಿನೀಶಕ್ತಿಯು ಸಹಸ್ರಾರ ಚಕ್ರದಲ್ಲಿರುವ ಶಿವನಲ್ಲಿ ಸಮರಸಗೊಂಡಾಗ ಸಮಾಧಿಸ್ಥಿತಿ ಮತ್ತು ಮುಕ್ತಾವಸ್ಥೆ ಲಭ್ಯವಾಗುತ್ತದೆ. ಕುಂಡಲಿನೀಶಕ್ತಿಯ ಉತ್ಥಾನವಿಲ್ಲದೇ ಸಮಾಧಿಸ್ಥಿತಿ ಸಮನಿಸದು-ಎಂದಿದ್ದಾರೆ. [72] ಇದರ ಅನುಭವ ಅಲ್ಲಮಪ್ರಭುವಿಗೆ ಸಿದ್ಧಿಸಿತ್ತು. ಅದನ್ನು ಹೀಗೆ ಭಿನ್ನವಿಸಿಕೊಂಡಿದ್ದಾರೆ.

ಆಧಾರದಲ್ಲಿ ಬ್ರಹ್ಮಸ್ವಾಯತವಾದ, ಸ್ವಾಧಿಷ್ಠಾನದಲ್ಲಿ ವಿಷ್ಣುಸ್ವಾಯತವಾದ, ಮಣಿಪೂರದಲ್ಲಿ ರುದ್ರಸ್ವಾಯತವಾದ, ಅನಾಹತದಲ್ಲಿ ಈಶ್ವರಸ್ವಾಯತವಾದ, ವಿಶುದ್ಧಿಯಲ್ಲಿ ಸದಾಶಿವಸ್ವಾಯತವಾದ, ಆಜ್ಞೇಯದಲ್ಲಿ ಉಪಮಾತೀತಸ್ವಾಯತವಾದ, ಇವರೆಲ್ಲರು ಬಯಲಲ್ಲೆ ಹುಟ್ಟಿ, ಬಯಲಲ್ಲೆ ಬೆಳೆದು, ಬಯಲಲಿಂಗವನೆ ಧರಿಸಿಕೊಂಡು ಬಯಲನೆ ಆರಾಧಿಸಿ, ಬಯಲಾಗಿ ಹೊಂದುದ ಕಂಡೆ ಗುಹೇಶ್ವರ. [73] ಈ ಕುಂಡಲಿನೀ ತತ್ವವನ್ನೂ ಷಟ್‌ಸ್ಥಲತಂತ್ರವನ್ನೂ ಸಮಗ್ರವಾಗಿ ಅಧ್ಯಯನ ಮಾಡಿದಾಗ ನಮಗೆ ಒಂದು ಪ್ರಮುಖ ಅಂಶ ವೇದ್ಯವಾಗುತ್ತದೆ. ಕುಂಡಲಿನಿಯ ಉತ್ಥಾನಕ್ಕೆ ಸಾಧನಾ ಮಾರ್ಗಗಳು ಸ್ವಾಮಿ ಶಿವಾನಂದರು ಹೇಳಿದಂತೆ ಹಲವು. ಅವುಗಳಲ್ಲಿ ಪರಿಪೂರ್ಣ ಶರಣಾಗತಿ ಮತ್ತು ಗುರುಕೃಪೆ ಒಂದು ಅಮೂಲ್ಯ ಸಾಧನವೆಂದು ತಿಳಿದು ಬರುತ್ತದೆ. ಜೀವನ 44 ಅಂಗಸ್ಥಲಗಳಲ್ಲಿ ಎಷ್ಟೇ ಮಹತ್ವದ ಸಾಧನ ನಡೆದರೂ 57 ಲಿಂಗಸ್ಥಲದ ಅನುಗ್ರಹ ಅಂಗಕ್ಕೆ ದೊರಕಲೇಬೇಕು.

ಅಂಗಸ್ಥಲದ ಸಾಧನೆಗೆ ಲಿಂಗಸ್ಥಲದ ಕೃಪೆ ಅಗತ್ಯ. ಆದರಿಂದ ಮಾತ್ರ ಸಾಮರಸ್ಯ ಸಾಧ್ಯ ಎನ್ನುವುದು ಷಟ್‌ಸ್ಥಲಶಾಸ್ತ್ರದ ಪೂರ್ಣ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಪಾಂಡುಚೆರಿಯ ಅರವಿಂದ ಮಹರ್ಷಿಗಳು ಈ ತಂತ್ರವನ್ನು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ವಿವರಿಸಿದ್ದಾರೆ.

In the evolution of the Spiritual man there must be necessarily many stages and in each stage a great variety of individual formations of the being the consciousness, the life, the temperment, the ideas, the character, the nature of instrumental mind and the necessity of dealing with the life must of itself create and infinite variety according to the stage of development and the individuality of the seeker. But apart from that even the domain of pure spiritual, self realisation and self expression need not be a single whole monotone, there can be a great diversity in the fundamental unity ; the supreme self is one, but the souls of the supreme self are many and as the soul's formation of nature, so will be its spiritual seif-expression a diversity in oneness is the law of the manifestation and integration must harmonise these diversities. But to abolish them is not the intention of the spirit in nature.

ಆಧ್ಯಾತ್ಮಿಕ ಮಾನವನ ಪರಿವರ್ತನೆಯಲ್ಲಿ ಅಗತ್ಯವಾದ ಅನೇಕ ಹಂತಗಳಿವೆ. ಪ್ರತಿ ಹಂತದಲ್ಲಿ ವ್ಯಕ್ತಿಯ ಅಂತಃಶಕ್ತಿ, ಪರಿಜ್ಞಾನ, ಜೀವನ, ಪ್ರವೃತ್ತಿ, ಭಾವನೆಗಳು, ಗುಣ ಇವುಗಳು ಗಣನೀಯವಾಗುತ್ತವೆ. ಕಾರಣ ಚಿತ್ತದ

ಸ್ವಭಾವವೂ ಜೀವನದ ವ್ಯವಹಾರಗಳೂ ಪರಿವರ್ತನೆಯ ಹಂತಕ್ಕೂ ಸಾಧಕನ ಸಾಮರ್ಥ್ಯಕ್ಕೂ ಅನುಗುಣವಾದ ಅನಂತರೂಪಗಳನ್ನು ಪಡೆಯಬೇಕು. ಆದಾಗ್ಯೂ ಶುದ್ಧಆತ್ಮಸಾಕ್ಷಾತ್ಕಾರಸ್ಥಲ ಮತ್ತು ಆತ್ಮಪ್ರಕಾಶಕ್ರಿಯೆ ಒಂದೇ ತೆರನಾಗಿರ ಬೇಕಾಗಿಲ್ಲ. ಏಕತ್ವದಲ್ಲಿ ಬೃಹತ್ತಾದ ಅನೇಕತ್ವವಿರಬಹುದು. ಆದರೆ ಪರಮಾತ್ಮ ಒಂದೆ. ಆತ್ಮಗಳು ಅಂದರೆ ಜೀವಗಳು ಹಲವು. ಜೀವದ ಸ್ವಭಾವಕ್ಕನುಗುಣ ವಾಗಿ ಆಧ್ಯಾತ್ಮಿಕ ಆತ್ಮಪ್ರಕಾಶವಾಗುತ್ತದೆ. ಏಕತ್ವದಲ್ಲಿ ಅನೇಕತ್ವವಿರುವುದೇ ಸೃಷ್ಟಿಯ ನಿಯಮ, ಅತಿಮಾನಸದ ಸಾಮರಸ್ಯ. ಸಾಮ್ಯವೂ ವಿವಿಧತೆಯಲ್ಲಿ ಏಕತ್ವ ವನ್ನು ಕಾಣುವುದೇ ಆಗಿದೆ. ವೈವಿಧ್ಯವನ್ನು ಅಳಿಸುವುದೇ ಪ್ರಕೃತಿಯ ನಿಯಮದ ಉದ್ದೇಶವಲ್ಲ.[74] ಜೀವನಂ ಹಂತ ಹಂತದಲ್ಲಿ ತನ್ನ ಸಾಧನೆಯಿಂದ ಪರಾತ್ಪರವಸ್ತುವಿ ನಲ್ಲಿ ಸಾಮರಸ್ಯವನ್ನು ಹೊಂದುವುದನ್ನು ಅರವಿಂದರು ಪೂರ್ಣಯೋಗವೆನ್ನುತ್ತಾರೆ. ಪರವಸ್ತು ಒಂದರಲ್ಲಿ ಅನಂತಜೀವಗಳು ಸಾಮರಸ್ಯವನ್ನು ಹೊಂದುವ ಕ್ರಿಯೆ ದಿವ್ಯ ಜೀವನವೆಂದಿದ್ದಾರೆ. ಅದನ್ನೇ ವೀರಶೈವದರ್ಶನದಲ್ಲಿ ಲಿಂಗಾಂಗಸಾಮರಸ್ಯ ವೆಂದಿರುವುದು. ಜೀವ ಅನಂತವಾದರೂ ಆತ್ಮ ಒಂದೇ. ಎಲ್ಲ ಜೀವಿಗಳು ಅಲ್ಲಿ ಸಾಮರಸ್ಯವನ್ನು ಪಡೆಯುವ ಸಾಧನೆಯೇ ಅಂಗಸ್ಥಲ ನಿರೂಪಣೆ. ಶರಣರ ವಾಣಿ ಅದನ್ನು ಹೀಗೆ ಸಮರ್ಥಿಸುತ್ತದೆ.

"ಘನಗಂಭೀರಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ, ಫೇನ, ತರಂಗಗಳು ತೋರಿತ್ತಲ್ಲಾ ಎಂದಡೆ, ಅವು ಬೇರಾಗಬಲ್ಲವೆ? ಪರಶಿವನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಗಳಾದವಲ್ಲದೆ ಬೇರಾಗಬಲ್ಲವೆ? ಇದ ಬೇರೆಂಬ ಅರೆಮರುಳರ ನಾನೇನೆಂಬೆ? ವಿಶ್ವವ ತಿಳಿದುನೋಡಲು ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ.[75]"

ಜೀವವೂ ದೇವನ ಅಂಶವೇ, ಸಾಗರದ ತೆರೆಯಂತೆ ಪ್ರತ್ಯೇಕತೆಯ ಅನಂಭವ ವಾದರೂ ಅದು ಅಭಿನ್ನ. ಸ್ವಸ್ವರೂಪದ ಅನುಸಂಧಾನದಲ್ಲಿ 44 ಸ್ಥಲಗಳನ್ನು ದರ್ಶನ ಶಾಸ್ತ್ರ ವಿಶ್ಲೇಷಿಸಿದೆ. ಜೀವದ ಪ್ರತ್ಯೇಕತೆಯ ಅನಂಭವವಿಲ್ಲದಿದ್ದರೆ ಜೀವನ ನೀರಸ ವಾಗುತ್ತಿತ್ತು, ಜಗತ್ತು ಅನುಪಯುಕ್ತವಾಗುತ್ತಿತ್ತು. ಈ ಪ್ರತ್ಯೇಕತೆಯ ಅನುಭವವೂ ಪರಮಾತ್ಮನ ಲೀಲೆ. ಆ ಜೀವ ಲಿಂಗದೊಡನೆ ಒಂದಾಗಬೇಕೆಂಬುದೇ ವೀರಶೈವ ದರ್ಶನಸಾರ.

1) The story of Philosophy, Page xxvi
2) Essays in Scicnce and Philosophy, p. 15
3) ತೈತ್ತಿರೀಯ ಉಪನಿಷತ್ (ii–4)
4) ಕೇನ-ಉಪನಿಷತ್ (1–3)
5) ತೈತ್ತಿರೀಯ (iii–3)

6) ಶಿವಾನುಭವ ಸೂತ್ರ (3–3)
7) Essentials of Virashaivism. P, 13.
Dr. H. P. Malledevaru
8) ಶಿ. ಅ. ಸೂ. (2–4)
9) ಮುಂಡಕ ಉ. (11–2–12)
10) ಬೃಹದಾರಣ್ಯಕ (11–4–6)
11) ಅದೇ (11–5–19)
12) ಚಂದ್ರಜ್ಞಾನಾಗಮ (ಪಟಲ 3 ಪ. 46)
13) ಛಾಂದೋಗ್ಯ (vi 8–7)
14) ಯುಗಯಾತ್ರೀಭಾರತೀಯ ಸಂಸ್ಕೃತಿ (ಸಂ. 3 ಪು. 20–21
15) ವಿವೇಕಾನಂದರ ಸಮಗ್ರ ಕೃತಿ (ಸಂಪುಟ 3)
16) Essentials of Virashaivism—P. 73.
Dr. H. P. Malledevaru
17) The Growth of Physical Scicnce P. 24
18) The Riddle of the Self by F. T. Mikhai lov P. 265
19) ಶಿ. ಅ. ಸೂ. (4–3–4)
20) ಅದೇ (2–13–14)
21) ಅದೇ (ಪು. 23)
22) ಅದೇ (ಪು. 60–61)
23) ಸಿದ್ಧಾಂತ ಶಿಖಾಮಣಿ (5–35)
24) ವಿಶೇಷಾನುಭವ ಷಟ್‌ಸ್ಥಲ (ಪು. 4–5)
25) ವಿವೇಕ ಚೂಡಾಮಣಿ (31)
26) ವಿಶೇಷಾನಂಭವ ಷಟ್‌ಸ್ಥಲ (ಪು. 8)
27) The Supramental Manifenstation (P. 8)
28) ಸಿದ್ಧಾಂತ ಶಿಖಾಮಣಿ (5–45)
29) ಅದೇ (5–50)
30) ಅದೇ (5–56)
31) ಬಸವಣ್ಣನವರ ವಚನಗಳು ಕ.ವಿ.ವಿ.ಪ್ರ. ಪು–1
32) ಚನ್ನಬಸವಣ್ಣನವರ ವಚನಗಳು „ ಪು–1
33) ಅಲ್ಲಮನ ವಚನ ಚಂದ್ರಿಕೆ ಪು. 1 (ಡಾ. ಎಲ್. ಬಸವರಾಜು)
34) ಲಿಂಗಲೀಲಾವಿಲಾಸ ಚಾರಿತ್ರ ಪು–63

35) Modern Science and Nature of Life,—(P. 102)
by W. C. Beck
36) ಬಸವಣ್ಣನವರ ವಚನಗಳು ಪು–2
37) ಅಲ್ಲಮನ ವಚನಚಂದ್ರಿಕೆ ಪು-4
38) ಚೆನ್ನಬಸವಣ್ಣನವರ ವಚನಗಳು ಪು. 9–10
39) ಮಹದೇವಿಯಕ್ಕನ ವಚನಗಳು ಪು–4
40) ಸಿದ್ಧಾಂತ ಶಿಖಾಮಣಿ ಪು. 61 (5–63, 64, 65)
41) ಲಿಂಗಲೀಲಾವಿಲಾಸಚಾರಿತ್ರ (ಪು. 88)
42) ಅದೇ (ಪುಟ 95ರಿಂದ 138)
43) ಸಿದ್ಧಾಂತ ಶಿಖಾಮಣಿ (8–14, 15)
44) ಅದೇ (9–6)
45) ಅದೇ (9–2, 3)
46) ಶಿವಾನುಭವಸೂತ್ರ (4–24ರಿಂದ 26)
47) ಸಕಲ ಪುರಾತನರ ವಚನಗಳು (ಪು. 334)
48) ಬಸವಣ್ಣನವರ ವಚನಗಳು (ಪು. 213)
49) ಸಿ. ಶಿಖಾಮಣಿ (11–75)
50) ಚೆ. ಬ. ವ. (ಪು. 408)
51) ಸಿ. ಶಿ. ಮಣಿ (12–27)
52) The Serpent Power (P. 11)
53) ಅದೇ (p. 24)
54) ಸಿ. ಶಿ. ಮಣಿ (12–39)
55) ಬಸವಣ್ಣನವರ ವಚನಗಳು (ಪು. 325)
56) ಚೆ. ಬ. ವಚನಗಳು (ಪುಟ. 456)
57) ಅದೇ (ಪು. 416)
58) ಅಲ್ಲಮನ ವಚನ ಚಂದ್ರಿಕೆ (ಪು. 46)
59) ಸಿ. ಶಿ. ಮಣಿ (13–11)
60) ಲಿಂ, ಲೀ. ವಿ. ಚಾ. (ಪು. 277)
61) ಬ. ವಚನಗಳು (ಪು, 356)
62) ಜೀವನಸಿದ್ಧಾಂತ (ಶರಣ ಸಂಪುಟ) (ಪು. 8)
63) ಮಹಾದೇವಿಯಕ್ಕನ ವಚನಗಳು (ಪು. 64)
64) ಸಿ. ಶಿ. ಮಣಿ (14–2)
65) ಲಿಂ, ಲೀ. ವಿ. ಚಾ. (ಪು. 314)

66) ಜೀವನಸಿದ್ಧಾಂತ (ಐಕ್ಯ ಸಂಪುಟ) (ಪು. 15)
67) ಚ.ಬ.ವ. (ಪು. 646)
68) ಗೀತೆ (6–29)
69) ಚ. ಬ. ವ. (ಪು. 627)
70) ಅ. ವ. ಚಂದ್ರಿಕೆ (ಪು. 44)
71) ಚ. ಬ. ವಚನ (ಪು. 686ರಿಂದ 693)
72) Kundalini Yoga p. 67
73) ಅ. ವ. ಚಂದ್ರಿಕೆ (ಪು. 47)
74) The Life Divine p. 7899
75) ಲಿಂ. ಲೀ. ವಿ. ಚಾರಿತ್ರ (ಪು. 44)

———

ಪ್ರಣತೆಯೂ ಇದೆ, ಬತ್ತಿಯೂ ಇದೆ,
ಜ್ಯೋತಿಯು ಬೆಳಗುವರೆ ತೈಲವಿಲ್ಲದೆ ಎಂತಪ್ಪುದಯ್ಯಾ ?
ಗುರುವೂ ಐದಾನೆ, ಲಿಂಗವೂ ಐದಾನೆ,
ಶಿಷ್ಯಂಗೆ ಜ್ಞಾನೋದಯವಾಗದನ್ನಕ್ಕರ, ಭಕ್ತಿ ಎಂತಳವಡುವುದಯ್ಯಾ ?
ಸೋಹಂ ಎಂಬುದ ಕೇಳಿ, ದಾಸೋಹವ ಮಾಡದಿದ್ದರೆ
ಅತಿಗಳೆದೆ ಕಾಣಾ ಗುಹೇಶ್ವರಾ

—ಅಲ್ಲಮಪ್ರಭು

ಜಗತ್ತತ್ತ್ವ

ಶ್ರೀ ಎಂ. ಸಿ. ಶಾಂತಮೂರ್ತಿ ಎಂ. ಎ.

ಮಾನವನ ಬೌದ್ಧಿಕ ಹಾಗೂ ಮಾನಸಿಕ ಶಕ್ತಿಗಳು ಆತನನ್ನು ಇನ್ನಿತರ ಜೀವಿಗಳಿಗಿಂತ ಭಿನ್ನವಾಗಿಸಲು ಸಹಕಾರಿಯಾಗಿವೆ. ಅಷ್ಟೇ ಅಲ್ಲದೆ ಅವನನ್ನು ಉತ್ತಮ ವೈಚಾರಿಕ ಪ್ರಜ್ಞೆಯುಳ್ಳವನನ್ನಾಗಿಸಿ ವಿವೇಕಯುತನನ್ನಾಗಿ ಮಾಡಿವೆ. ಈ ವೈಚಾರಿಕ ಪ್ರಜ್ಞೆ ಮಾನವನನ್ನು ಪ್ರಗತಿಯ ಹಾದಿಯಲ್ಲಿ ಹೋಗಲು ಪ್ರೇರೇಪಿಸುತ್ತದೆ. ಭಾರತೀಯರ ವೈಚಾರಿಕತೆಗೆ ಜಗತ್ತಿನ ಇತಿಹಾಸದಲ್ಲಿಯೇ ಒಂದು ವಿಶಿಷ್ಟವಾದ ಸ್ಥಾನವಿದೆ. ಬಹು ಪ್ರಾಚೀನವಾದ ವೇದೋಪನಿಷತ್ತುಗಳು ಹಾಗೂ ಶಾಖೋಪಶಾಖೆಗಳಾಗಿ ಬೆಳೆದು ನಿಂತಿರುವ ಧರ್ಮ, ದರ್ಶನ, ಶಾಸ್ತ್ರಗಳನ್ನು ನಾವು ಗಮನಿಸಿದಾಗ ಅವರ ಬೌದ್ಧಿಕ ಶಕ್ತಿಯ ಔನ್ನತ್ಯದ ಅರಿವು ನಮಗಾಗುತ್ತದೆ.

ಚೇತನಾಚೇತನಾತ್ಮಕವಾದ ಈ ಪ್ರಪಂಚದಲ್ಲಿ ಸಮಸ್ತ ಜೀವಿಗಳ ಜೀವನದ ಗುರಿಯು ಸುಖವೇ ಆಗಿರುತ್ತದೆ. ಪ್ರತಿಯೊಂದು ಜೀವಿಯ ಚಟುವಟಿಕೆಗೂ ಸುಖದ ಅನ್ವೇಷಣೆಯೇ ಮೂಲ. ಈ ಸುಖವು ನಿತ್ಯ ಮತ್ತು ಅನಿತ್ಯವೆಂದು ಎರಡು ಬಗೆಯಾಗಿದೆ. ಕನಕಕಾಂತಾದಿಗಳಿಂದ ಹೊಂದುವ ಸುಖವು ಅನಿತ್ಯವಾದುದು. ಅದಕ್ಕಿಂತ ಭಿನ್ನವಾದ ಮೋಕ್ಷದ ಸುಖವು ನಿತ್ಯವಾದುದು. ವಿಚಾರವಂತ ಮಾನವನು ಬಾಹ್ಯೇಂದ್ರಿಯಗಳಿಂದ ಪಡೆಯುವ ಅನಿತ್ಯವಾದ ಸುಖವನ್ನು ಅಲ್ಪವೆಂದು ಭಾವಿಸಿ, ಮಹತ್ತರವಾದ ನಿತ್ಯವಾದ ಪರಿಪೂರ್ಣವಾದ ಸುಖದೆಡೆಗೆ ಹೆಜ್ಜೆ ಇಡುತ್ತಾನೆ. ಈ ಸುಖಾನ್ವೇಷಣೆಯು ಮಾನವನನ್ನು ಅಲ್ಪತ್ವದಿಂದ ಪೂರ್ಣತ್ವದ ಕಡೆಗೆ ಒಯ್ಯುವಂತದ್ದಾಗಿದ್ದು ಆತ್ಯಂತಿಕ ಆನಂದವನ್ನು ತಂದು ಕೊಡುವಲ್ಲಿ ಯಶಸ್ವಿಯಾಗುತ್ತದೆ. ಈ ಸುಖಾನ್ವೇಷಣೆಯ ಮಾರ್ಗಗಳೇ ದರ್ಶನಗಳಾಗಿ ಪರಿಣಮಿಸಿದವು. ''ದೃಶ್ಯತೇ ಅನೇನ ಇತಿ ದರ್ಶನಮ್'' ಎಂಬ ವ್ಯುತ್ಪತ್ತಿಯ ಪ್ರಕಾರ ಯಾವುದರ ದ್ವಾರಾ ಪರಬ್ರಹ್ಮನನ್ನು ನೋಡುತ್ತೇವೋ ಅಥವಾ ಸಾಕ್ಷಾತ್ಕರಿಸಿಕೊಳ್ಳುತ್ತೇವೋ ಅದೇ ದರ್ಶನವೆನಿಸುತ್ತದೆ. ಈ ದರ್ಶನವು ಆಸ್ತಿಕ ಮತ್ತು ನಾಸ್ತಿಕ ದರ್ಶನಗಳೆಂದು ಮುಖ್ಯವಾಗಿ ಎರಡು ಬಗೆಯಾಗಿದೆ. ನಾಸ್ತಿಕದರ್ಶನಗಳಲ್ಲಿ ಚಾರ್ವಾಕ, ಬೌದ್ಧ, ಜೈನದರ್ಶನಗಳೂ; ಆಸ್ತಿಕ ದರ್ಶನಗಳಲ್ಲಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ, ಉತ್ತರಮೀಮಾಂಸಾ ದರ್ಶನಗಳೂ ಸೇರಿವೆ. ಈ ಕೊನೆಯದಾದ

ಉತ್ತರ ಮೀಮಾಂಸಾ ದರ್ಶನವು ಉಪನಿಷತ್ತುಗಳನ್ನು ಪರಮಪ್ರಮಾಣವಾಗಿ ಅಂಗೀಕರಿಸಿ ತನ್ನ ಸಿದ್ಧಾಂತವನ್ನು ಮಂಡಿಸುವುದರಿಂದ ವೇದಾಂತವೆಂದೂ ಇದಕ್ಕೆ ಮತ್ತೊಂದು ಹೆಸರಿದೆ. ಈ ವೇದಾಂತದಲ್ಲಿಯೂ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ಅನೇಕ ದಾರ್ಶನಿಕ ಶಾಖೆಗಳನ್ನು ಕಾಣಬಹುದಾಗಿದೆ.

ಈ ವೇದಾಂತ ಶಾಖೆಗಳಲ್ಲಿ ಶಕ್ತಿವಿಶಿಷ್ಟಾದ್ವೈತ ದರ್ಶನವು ಅತ್ಯಂತ ವೈಶಿಷ್ಟ್ಯಪೂರ್ಣವಾದುದಾಗಿದೆ. ದ್ವೈತ ಮತ್ತು ಅದ್ವೈತ ಪರವಾದ ಶ್ರುತಿಗಳಲ್ಲಿ ಕಂಡುಬರುವ ವಿರೋಧಾಭಾಸಗಳನ್ನು ನಿವಾರಿಸಿ. ಸರ್ವಶ್ರುತಿಸಮ್ಮತವಾದ ಸಮನ್ವಯ ಮಾರ್ಗವನ್ನು ಹಿಡಿದಿದೆ. ಆದ್ದರಿಂದಲೇ ಈ ಸಿದ್ಧಾಂತವನ್ನು ದ್ವೈತಾದ್ವೈತ,[1] ವಿಶಿಷ್ಟಾದ್ವೈತ, ಭೇದಾಭೇಧ, ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಇನ್ನಿತರ ವೇದಾಂತ ದರ್ಶನಗಳಂತೆಯೇ ಈ ದರ್ಶನವೂ ಸಹ ಮಹರ್ಷಿಗಳ ಬೋಧನೆಗಳಾದ ಉಪನಿಷತ್ತುಗಳನ್ನು ಮತ್ತು ಬಾದರಾಯಣರ ಬ್ರಹ್ಮಸೂತ್ರವನ್ನು ತನ್ನ ಸಿದ್ಧಾಂತಕ್ಕೆ ಆಧಾರವನ್ನಾಗಿಸಿಕೊಂಡು ದಾರ್ಶನಿಕ ವಿಷಯಗಳಾದ ಶಿವ, ಜೀವ, ಜಗತ್ತುಗಳ ಸ್ವರೂಪ ಹಾಗೂ ಪರಸ್ಪರ ಅವುಗಳಿಗಿರುವ ಸಂಬಂಧ ಮುಂತಾದ ವಿಚಾರಗಳಲ್ಲಿ ಬಹಳ ಮಹತ್ವಪೂರ್ಣವಾದ ಸೈದ್ಧಾಂತಿಕ ಕೊಡುಗೆಯನ್ನು ಭಾರತೀಯ ತತ್ತ್ವಶಾಸ್ತ್ರಕ್ಕೆ ನೀಡಿದೆ.

ಪ್ರಸ್ತುತ ಈ ದರ್ಶನವು ಜಗತ್ತತ್ತ್ವದ ಬಗೆಗೆ ಯಾವ ನಿಲುವನ್ನು ತಾಳಿದೆ ಎಂಬುದನ್ನು ಪರಿಶೀಲಿಸೋಣ.

ಈ ಜಗತ್ತಿನ ಸ್ವರೂಪವೇನು ? ಇದು ಹೇಗೆ ಸೃಷ್ಟಿಯಾಯಿತು ? ಸೃಷ್ಟಿಗೆ ಯಾವುದಾದರೂ ಕಾರಣವುಂಟೇ ? ಹಾಗೇನಾದರು ಕಾರಣವೊಂದಿದ್ದರೆ ಅದಕ್ಕೂ ಮತ್ತು ಜೀವಿಗಳಿಗೂ ಸಂಬಂಧವೇನು ? ಸೃಷ್ಟಿಯಲ್ಲಿನ ವಸ್ತುಗಳು ನಾಶವಾದಾಗ ಏನಾಗುತ್ತವೆ ? — ಇವೇ ಮುಂತಾದ ಅನೇಕ ಪ್ರಶ್ನೆಗಳು ವಿಚಾರವಂತನಾದ ಪ್ರತಿಯೊಬ್ಬ ಮಾನವನಿಗೂ ಎದುರಾಗುತ್ತವೆ. ಆಗ ಪ್ರತಿಯೊಬ್ಬನೂ ತನ್ನದೇ ಆದ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ತತ್ತ್ವಜ್ಞಾನಿಗಳೂ ಸಹ ಜಟಿಲವಾದ ಈ ಸಮಸ್ಯೆಗಳ ಬಗೆಗೆ ವಿಚಾರಮಂಥನ ಮಾಡಿ ಒಂದು ನಿರ್ಣಯಕ್ಕೆ ಬಂದು ಸಿದ್ಧಾಂತವನ್ನು ರೂಪಿಸಿದ್ದಾರೆ. ಅಂತೆಯೇ ಈ ವೀರಶೈವದರ್ಶನವು ಜಗತ್ತಿನ ಸ್ವರೂಪದ ಬಗೆಗೆ ತನ್ನದೇ ಆದ ನಿಲುವನ್ನು ತಳೆದು ಸಿದ್ಧಾಂತವನ್ನು ರೂಪಿಸಿದೆ.

---

1. ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ ॥
   ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ॥

   ಶ್ರೀಕರಭಾಷ್ಯ — ಟೀಕಾ ಶ್ಲೋಕ—14

ಜಗತ್ತಿನ ಸೃಷ್ಟಿ, ಸ್ಥಿತಿ, ಲಯಂಗಳಿ ಗೆಪರಶಿವಬ್ರಹ್ಮವೇ ಪ್ರಧಾನಕಾರಣ ವೆಂಬುದಾಗಿ [1] ಈ ದರ್ಶನವು ಪ್ರತಿಪಾದಿಸುತ್ತದೆ. ಈ ಅಂಶವೇ ಬ್ರಹ್ಮ ಸೂತ್ರದಲ್ಲಿಯೂ ಉಕ್ತವಾಗಿದೆ. [2] 'ಏಕಮೇವಾದ್ವಿತೀಯಂ ಬ್ರಹ್ಮ' ಮುಂತಾದ ಶ್ರುತಿವಾಕ್ಯಪ್ರಮಾಣದಿಂದ ಸ್ವಸಜಾತೀಯಗಳಿಲ್ಲದೆ ಎರಡನೆಯದಿಲ್ಲದೆ ತಾನೊಂದೇ ಆಗಿರುವ ಸಚ್ಚಿದಾನಂದಲಕ್ಷಣದಿಂದ ಲಕ್ಷಿತವಾದ ಸರ್ವೋತ್ಕೃಷ್ಟ, ಸರ್ವಶಕ್ತ, ಸರ್ವಜ್ಞ, ನಿತ್ಯ, ಮುಕ್ತ, ಬುದ್ಧ — ಈ ಲಕ್ಷಣಗಳುಳ್ಳ ಪರಶಿವತತ್ತ್ವವೇ ಜಗ ಜ್ಜನ್ಮಾದಿಗಳಿಗೆ ಕಾರಣವೆನಿಸಿದೆ. ಇಂತಹ ಪರಶಿವಬ್ರಹ್ಮಕ್ಕೆ ಶಿವನೆಂದೂ, [3] ಲಿಂಗ ವೆಂದೂ, [4] ಸ್ಥಲವೆಂದೂ, [5] ಈ ದರ್ಶನದಲ್ಲಿ ಹೆಸರಿಸಿರುವುದು ಔಚಿತ್ಯಪೂರ್ಣ ವಾಗಿದೆ. ಈ ಪರಶಿವನು ಸಕಲ ಪ್ರಪಂಚಕ್ಕೆ ಕಾರಣನಾಗಿ, ತನಗೆ ಬೇರೊಂದು ಕಾರಣ ವಿಲ್ಲದವನಾದುದರಿಂದ ಸದ್ರೂಪನಾಗಿರುವನು. ಸಮಸ್ತ ಜಗತ್ತಿನ ವಿಕಾಸಕ್ಕೆ ಜನಕ ನಾಗಿ ತನ್ನ ವಿಕಾಸಕ್ಕೆ ಬೇರೊಂದು ಸಾಧನವನ್ನು ಅಪೇಕ್ಷಿಸದಿರುವುದರಿಂದ ಚಿದ್ರೂಪ ನಾಗಿರುವನು. ಪ್ರಪಂಚವು ಅನುಭವಿಸುವ ಆನಂದಕ್ಕೆಲ್ಲ ಕಾರಣಭೂತನಾಗಿರುವುದ ರಿಂದ ಆನಂದ ಸ್ವರೂಪನಾಗಿರುವನು. ಶಿವನಿಗೆ ಈ ಸಚ್ಚಿದಾನಂದಸ್ವರೂಪವು ಸ್ವಯಂ ಸಿದ್ಧವಾದುದಾಗಿದೆ.

ದೃಶ್ಯ ಜಗತ್ತು ವ್ಯಕ್ತಾವಸ್ಥೆಗೆ ಬರುವುದಕ್ಕೆ ಮೊದಲು ಈ ಮೇಲಿನ ಸರ್ವ ಶಕ್ತತ್ವಾದಿ ಗುಣಗಳುಳ್ಳ ಪರಮಾತ್ಮನೊಬ್ಬನೇ ಇದ್ದನು, [6] ಈ ಚರಾಚರ ಜಗತ್ತು ರಚನೆಗೆ ಬಾರದಂದು ಆ ಪರಮಾತ್ಮನ ಸ್ವರೂಪವು ಹೇಗಿತ್ತು ಎಂಬುದನ್ನು ಅಲ್ಲಮ ಪ್ರಭುಗಳ ಈ ವಚನವು ಬಹು ಸುಂದರವಾಗಿ ಬಣ್ಣಿಸುತ್ತದೆ.

ಆದಿ ಅನಾದಿ ಇಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು,

---

1. ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ
ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತೀತಿ
ತೈತ್ತಿರೀಯೋಪನಿಷತ್—3—1
2. 'ಜನ್ಮಾದ್ಯಸ್ಯ ಯತಃ'—ಬ್ರಹ್ಮಸೂತ್ರ ಅಧಿ-೨, ಸೂತ್ರ—೨
3. ಶೇತೇ ಜಗತ್ ಅಸ್ಮಿನ್ ಇತಿ ಶಿವಃ ॥
4. ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ ।
ಮೊಗ್ಗೆಯ ಮಾಯಿದೇವರ ಶಿವಾನುಭವಸೂತ್ರ—3—3
5. ಸ್ಥಕಾರಃ ಸ್ಥಾನವಾಚೀ ಸ್ಯಾತ್ ಲಕಾರೋ ಲಯವಾಚಕಃ ।
ತಯೋಃ ಕಾರಣಭೂತಂ ಯತ್ತದೇವ ಸ್ಥಲಮುಚ್ಯತೇ ॥
ಶಿವಾನುಭವಸೂತ್ರ—2—
6. ಆತ್ಮಾ ವಾ ಇದಮೇಕ ಏವ ಅಗ್ರ ಆಸೀತ್.
ಐತರೇಯ—1

ಸುರಾಳ ನಿರಾಳವಿಲ್ಲದಂದು,
ಶೂನ್ಯ ನಿಶ್ಶೂನ್ಯವಿಲ್ಲದಂದು,
ಸಚರಾಚರವೆಲ್ಲ ರಚನೆಗೆ ಬಾರದಂದು,
ಗುಹೇಶ್ವರಾ ನೀನೊಬ್ಬನೇ ಇದ್ದೆಯಲ್ಲ, ಇಲ್ಲದಂತೆ.

ಜೀವ-ಜಗತ್ತು ಇವೆಲ್ಲವೂ ಪ್ರಳಯಕಾಲದಲ್ಲಿ ಅವ್ಯಕ್ತಸ್ಥಿತಿಯಲ್ಲಿ ಪರಮಾತ್ಮನೊಳಗಡಗಿರುತ್ತವೆ.[1] ಈ ಜಗತ್ತಿನಲ್ಲಿರುವ ಸಕಲ ವಸ್ತುಗಳೂ ಪರಮಾತ್ಮನಿಂದಲೇ ಹೊರಬಂದು ಅವನಿಂದಲೇ ರಕ್ಷಿಸಲ್ಪಟ್ಟು, ಅವನಲ್ಲಿಯೇ ಲೀನವಾಗುವುದರಿಂದ ಜಗತ್ತನ್ನು ಶಿವಾತ್ಮಕವೆಂದೇ ತಿಳಿದು ಎಲ್ಲೆಡೆಯೂ ಶಿವನನ್ನೇ ಕಾಣುತ್ತಾ ಉಪಾಸಿಸಬೇಕೆಂದು ಛಾಂದೋಗ್ಯೋಪನಿಷತ್ತು ತಿಳಿಸುತ್ತದೆ.[2] ಆದುದರಿಂದ ಜಗತ್ಸೃಷ್ಟಿಕಾರ್ಯದಲ್ಲಿ ಶಿವನು ಅಭಿನ್ನನಿಮಿತ್ತೋಪಾದಾನಕಾರಣನೆಂದು ಈ ದರ್ಶನವು ಪ್ರತಿಪಾದಿಸುತ್ತದೆ.

ಶಕ್ತಿವಿಶಿಷ್ಟ ಶಿವ (ಶಿವನೊಡನೆಯೇ ಶಕ್ತಿಯೂ ಇದೆ,) ಎಂಬ ಕಲ್ಪನೆಯು ಈ ದರ್ಶನದಲ್ಲಿ ವಿಶಿಷ್ಟವಾದುದು. ಅಸದೃಶಶಕ್ತಿಯುಳ್ಳ ಈ ಶಕ್ತಿತತ್ತ್ವವು ಶಿವನ ಸಹಧರ್ಮಿಣಿ, ಸತ್ಯಸಂಪೂರ್ಣವಾದುದು ಹಾಗೂ ವಿಕಲ್ಪರಹಿತವಾದುದೂ ಆಗಿದೆ.[3] ಸಮಸ್ತಬ್ರಹ್ಮಾಂಡದ ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತವಾದ ಈ ಶಕ್ತಿತತ್ತ್ವವು ಪರಬ್ರಹ್ಮನಲ್ಲಿಯೇ ಪ್ರಕಾಶಿಸುತ್ತದೆ.[4] ಜಗತ್ತಿನ ವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಸ್ಥಿರವಾಗಿ ನೆಲೆಸಿರುವಂತೆ, ವಿಶ್ವವೈಚಿತ್ರ್ಯಕ್ಕೆ ಕಾರಣೀಭೂತವಾದ 'ವಿಮರ್ಶಾ' ಎಂಬ ಹೆಸರಿನ ಈ ಶಕ್ತಿಯು ಪರಶಿವಬ್ರಹ್ಮದಲ್ಲಿ ಸ್ಥಿರವಾಗಿ ಪ್ರತಿಷ್ಠಿತವಾಗಿರುವುದು.[5] ಈ ಶಿವ-ಶಕ್ತಿಯರ ಸಂಬಂಧವು

---

1. ತತ್ರ ಲೀನಮಭೂತ್ಪೂರ್ವಂ ಚೇತನಾಚೇತನಂ ಜಗತ್.
—ಸಿದ್ಧಾಂತಶಿಖಾಮಣಿ 2–7.
2. 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ'—
—ಛಾಂದೋಗ್ಯೋಪನಿಷತ್ 3–4–11.
3. ಶಕ್ತಿರಪ್ರತಿಮಾ ಸಾಕ್ಷಾತ್ಶಿವೇನ ಸಹಧರ್ಮಿಣೀ ॥
ಸಾಕ್ಷಿಣೀ ಸತ್ಯಸಂಪೂರ್ಣಾ ನಿರ್ವಿಕಲ್ಪಾ ಮಹೇಶ್ವರೀ ॥
—ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರ 2–7.
4. ಸಮಸ್ತಜಗದಂಡಾನಾಂ ಸರ್ಗಸ್ಥಿತ್ಯಂತಕಾರಣಂ ।
ವಿಮರ್ಶೋ ಭಾಸತೇ ಯತ್ರ ತದ್ಬ್ರಾಜನಮಿಹೋಚ್ಯತೇ ॥
—ಸಿದ್ಧಾಂತ ಶಿಖಾಮಣಿ–20–30.
5. ವಿಮರ್ಶಾಖ್ಯಾ ಪರಾ ಶಕ್ತಿಃ ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ॥
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥

ಅನಾದಿಯಾದುದು ಹಾಗೂ ಅವಿನಾಭಾವದಿಂದ ಕೂಡಿದುದಾಗಿದೆ. ಇದರ ಸಹಕಾರವಿಲ್ಲದೆ ಶಿವನಿಗೆ ಜಗತ್ಸೃಷ್ಟಿಕಾರ್ಯದಲ್ಲಿ ಪ್ರವೃತ್ತಿಯೇ ಉಂಟಾಗಲಾರದು. ಇದು ಇಲ್ಲದಿದ್ದರೆ ಶಿವನು ಘಟಾದಿಗಳಂತೆ ಅಚೇತನವೆನಿಸುವನು. ಈ ಶಕ್ತಿತತ್ತ್ವವು ಸ್ಥೂಲ ಚಿದಚಿದಾತ್ಮಕ ಮತ್ತು ಸೂಕ್ಷ್ಮಚಿದಚಿದಾತ್ಮಕ ಎಂದು ಎರಡು ಬಗೆಯಾಗಿದೆ. ಜೀವನು ಸ್ಥೂಲಚಿತ್ ಮತ್ತು ಸ್ಥೂಲ ಅಚಿತ್ ಶಕ್ತಿಗಳಿಂದ ಕಿಂಚಿಜ್ಞತ್ವ ಮತ್ತು ಕಿಂಚಿತ್ ಕರ್ತೃತ್ವಗಳನ್ನು ಹೊಂದುತ್ತಾನೆ. ಪರಶಿವನು ಸೂಕ್ಷ್ಮ ಚಿದಚಿದಾತ್ಮಕ ಶಕ್ತಿಯಿಂದ ಕೂಡಿದ್ದು ಸರ್ವಜ್ಞತ್ವ ಸರ್ವಕರ್ತೃತ್ವ ರೂಪದಿಂದಿರುತ್ತಾನೆ, ಹೀಗೆ ಶಿವ-ಜೀವರೀರ್ವರೂ ಶಕ್ತಿವಿಶಿಷ್ಟರಾದರೂ ಆ ಶಕ್ತಿಯ ಸ್ವರೂಪದಲ್ಲಿ ಭೇದವು ಕಂಡುಬರುತ್ತದೆ. ಆದರೆ ಈ ಭೇದವು ತಾತ್ಕಾಲಿಕವಾದುದೇ ಹೊರತು ಶಾಶ್ವತವಾದುದಲ್ಲ. ಈ ತತ್ತ್ವವು ಪರಮಶಿವನಿಂದ ಮೊದಲ್ಗೊಂಡು ಸಕಲ ಚರಾಚರ ಜಗತ್ತಿನವರೆಗೂ ವ್ಯಾಪಿಸಿದೆ. ಅನಾದಿಯಾದ ಬ್ರಹ್ಮನಿಷ್ಠವಾದ ಶಕ್ತಿಯು ಜಗದ್ರೂಪವಾಗಿ ಪರಿಣಮಿಸುವಾಗ ಸತ್ತ್ವರಜಸ್ತಮೋಗುಣಾತ್ಮಕವಾಗುವುದು.[1] ಈ ತ್ರಿಗುಣಗಳ ವೈಷಮ್ಯದಿಂದ ಏಕಮೇವಾದ್ವಿತೀಯನಾದ ಪರಶಿವನೇ ಭೋಕ್ತೃ-ಭೋಜ್ಯ-ಪ್ರೇರಕ ಎಂದು ಮೂರು ತೆರನಾಗಿ ಪರಿಣಮಿಸುವನು. ಬ್ರಹ್ಮಚೈತನ್ಯವೇ ತಮೋಗುಣದಿಂದ ಅತ್ಯಂತವಾಗಿ ಆವರಿಸಲ್ಪಟ್ಟು ಭೋಜ್ಯವಸ್ತುವೆನಿಸಿದೆ.[2] ಅಂದರೆ ಭೋಜ್ಯವಸ್ತುಗಳೆಲ್ಲದರಲ್ಲೂ ಪರಮಾತ್ಮಚೈತನ್ಯವು ತಮೋಗುಣದಿಂದ ಆಚ್ಛಾದಿತವಾಗಿದ್ದರೂ ಸದ್ರೂಪದಿಂದ ಅತಿಸೂಕ್ಷ್ಮವಾಗಿ ನೆಲೆಸಿರುವುದು. ಪರಮಾತ್ಮನು ಸಚ್ಚಿದಾನಂದನಾದ್ದರಿಂದ ಅವನ ಅಂಶವಾದ ಜಗತ್ತಿನ ವಸ್ತುಗಳಲ್ಲೆಲ್ಲಾ ಸಚ್ಚಿದಾನಂದಸ್ವರೂಪವು ಇರಲೇಬೇಕು. ಆದರೆ ರಜೋಗುಣದ ಸಂಪರ್ಕದಿಂದ ಸದಂಶಕ್ಕಿಂತಲೂ ಚಿದಂಶ, ಚಿದಂಶಕ್ಕಿಂತಲೂ ಆನಂದಾಂಶ ಕಡಿಮೆಯಾಗಿ ಜೀವನಲ್ಲಿ ಶಕ್ತಿ ಜ್ಞಾನ ಪ್ರಕಾಶಗಳು ಸಹಜವಾಗಿಯೇ ಸಂಕೋಚಗೊಂಡಿವೆ. ಅಂದರೆ ಸತ್ತ್ವಗುಣದಿಂದ ಕೂಡಿದ ಬ್ರಹ್ಮಚೈತನ್ಯವು ಪ್ರೇರಕನೆಂದೂ, ತಮೋಗುಣದಿಂದ ಕೂಡಿದ ಚೈತನ್ಯವು ಭೋಜ್ಯವಸ್ತುವೆಂದೂ, ಸತ್ತ್ವ-ರಜೋಗುಣಗಳೆರಡರಿಂದಲೂ ಕೂಡಿದ ಚೈತನ್ಯವು ಭೋಕ್ತೃವೆಂದೂ ಕರೆಯಲ್ಪಟ್ಟಿದೆ. ಹೀಗೆ ಮಾಯಾಶಕ್ತಿಯ ಸಂಬಂಧದಿಂದ ಶಿವನು ಮೂರು ವಿಧವಾಗಿ ಲೀಲಾವಿನೋದವನ್ನನುಭವಿಸುತ್ತಿರುವನು. ಶಿವನು ಒಬ್ಬನೇ ಆದರೂ ಶಕ್ತಿಯೊಡ

---

1. ಗುಣತ್ರಯಾತ್ಮಿಕಾ ಶಕ್ತಿಃ ಬ್ರಹ್ಮನಿಷ್ಠಾ ಸನಾತನೀ.

—ಸಿದ್ಧಾಂತ ಶಿಖಾಮಣಿ. 5–37

2. ತದ್ವೈಷಮ್ಯಾತ್ ಸಮುತ್ಪನ್ನಾ ತಸ್ಮಿನ್ ವಸ್ತುತ್ರಯಾಭಿಧಾ ।
ಅತ್ಯಂತತಾಮಸೋಪಾಧಿ ಭೋಜ್ಯಮಿತ್ಯಭಿಧೀಯತೇ ॥

—ಸಿದ್ಧಾಂತ ಶಿಖಾಮಣಿ 5–37

ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್.

—ಶ್ವೇತಾಶ್ವತರೋಪನಿಷತ್ 1–12

ಗೂಡಿ ಜಗದ್ರೂಪದಿಂದ ಪರಿಣಮಿಸಿರುವನೆಂದು ಈ ದರ್ಶನವು ತಿಳಿಸುವುದರಿಂದ ವೀರಶೈವರನ್ನು ಅವಿಕೃತ ಪರಿಣಾಮವಾದಿಗಳೆಂದು ಕರೆಯಲಾಗಿದೆ. ಸಂಕುಚಿತವಾದ ಪಟವು ವಿಸ್ತೃತರೂಪದಿಂದ ಕುಟೀರವಾಗಿ ಪರಿಣಮಿಸುವಂತೆ ಶಕ್ತಿಯ ಸಂಕೋಚ ಮತ್ತು ವಿಕಾಸಾವಸ್ಥೆಗಳ ಭೇದದಿಂದ ಶಿವನು ಜಗತ್ತಾಗಿ ಪರಿಣಮಿಸುತ್ತಾನೆ.[1] ಇಲ್ಲಿ ಪರಿಣಾಮವೆಂದರೆ ಅವಿಕೃತ ಪರಿಣಾಮ. ಅಂದರೆ ಮೃತ್ತಿಕಾ ಘಟದಂತೆಯೂ, ಸ್ವರ್ಣ ಕುಂಡಲದಂತೆಯೂ, ಮಯೂರಾಂಡರಸನ್ಯಾಯದಂತೆಯೂ ಪರಶಿವನು ತನ್ನ ಶಕ್ತ್ಯಂಶದಿಂದ ಜಗದ್ರೂಪವಾಗಿ ಪರಿಣಮಿಸುವನೆಂದು ಇವರ ಸಿದ್ಧಾಂತ.

ಶಿವನು ಜಗತ್ತಾಗಿ ಪರಿಣಮಿಸಿದರೂ ಸಹ 'ಸರ್ವಂ ಖಲು ಇದಂ ಬ್ರಹ್ಮ' ಎಂಬ ಶ್ರುತಿಗನುಸಾರವಾಗಿ ಎಲ್ಲ ವಸ್ತುಗಳೂ ಶಿವಮಯವೇ ಆಗಿವೆ. ಮಣ್ಣಿನಿಂದ ಉತ್ಪನ್ನವಾದ ಘಟ ಮುಂತಾದವು ಮಣ್ಣಿನಿಂದ ಹೇಗೆ ಭಿನ್ನವಲ್ಲವೋ ಹಾಗೆ, ತಂತುಗಳಿಂದ ಉತ್ಪನ್ನವಾದ ಪಟವು ಹೇಗೆ ತಂತುಮಯವೇ ಆಗಿರುತ್ತದೆಯೋ ಹಾಗೆ, ಸಾಗರೋತ್ಪನ್ನವಾದ ನೊರೆತೆರೆಗಳು ಸಾಗರಕ್ಕಿಂತ ಹೇಗೆ ಭಿನ್ನವಲ್ಲವೋ ಹಾಗೆಯೇ ಈ ಚರಾಚರ ಜಗತ್ತೆಲ್ಲವೂ ಪರಶಿವನಿಂದಲೇ ಉತ್ಪನ್ನವಾಗಿ ಶಿವಸ್ವರೂಪವೇ ಆಗಿದೆ.[2]

ಈ ಮೇಲಿನ ವಿಷಯವನ್ನೇ ಅನುಮೋದಿಸುವಂತಹ ಅನೇಕ ವಚನಗಳಿವೆ. ಅವುಗಳಲ್ಲಿ ಒಂದೆರಡನ್ನು ಉದಾಹರಣೆಗಾಗಿ ನೋಡುವುದಾದರೆ—

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ,
ಸಕಲ ವಿಸ್ತಾರದ ರೂಹು ನೀನೇ ದೇವಾ,
ವಿಶ್ವತಶ್ಚಕ್ಷು ನೀನೇ ದೇವಾ,
ವಿಶ್ವತೋಮುಖ ನೀನೇ ದೇವಾ,
ವಿಶ್ವತೋಬಾಹು ನೀನೇ ದೇವಾ,
ವಿಶ್ವತಃ ಪಾದ ನೀನೇ ದೇವಾ,
ಕೂಡಲ ಸಂಗಮದೇವ.[3]

---

1. ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥ ಸಿ. ಶಿ. 10
2. ಯಸ್ಮಾದೇತತ್ಸಮುತ್ಪನ್ನಂ ಮಹಾದೇವಾಚ್ಚರಾಚರಂ ।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ ॥ ಸ.ಶಿ. 10–62
ಶಿವತತ್ವಾತ್ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ ॥ ಸಿ. ಶಿ. 10–63
ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ ।
ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಂ ॥ ಸಿ. ಶಿ. 10–64
3. ವಚನ ಸಾಹಿತ್ಯ ಸಂಗ್ರಹ–ಸಂ. ಶಿ. ಭೂಸನೂರು ಮಠ–ಪುಟ. 38

ಗಿರಿಗುಹೆಗಳ ಕಂದರದಲ್ಲಿ ನೆಲಹೊಲದಲ್ಲಿ ಇಪ್ಪೆ ದೇವಾ,
ಎಲ್ಲಿ ನೋಡಿದೊಡಲ್ಲಿ ಇಪ್ಪೆ ದೇವಾ,
ಮನಕ್ಕಗಮ್ಯ ಅಗೋಚರನಾಗಿ
ಎಲ್ಲೆಲ್ಲಿಯೂ ನೀನೇ ಇಪ್ಪೆಯಯ್ಯಾ
ಗುಹೇಶ್ವರಾ,

ಹೀಗೆ ಎಲ್ಲ ವಸ್ತುಗಳಾಗಿಯೂ ಪರಿಣಮಿಸಿರುವುದರಿಂದ ಆ ಪರಮಶಿವನೇ ಸರ್ವಪದವಾಚ್ಯನಾಗಿರುವನು.[1] ಸದ್ರೂಪದಿಂದ ಶಿವನು ಎಲ್ಲ ವಸ್ತುಗಳೊಳಗೆ ನೆಲೆಸಿದ್ದರೂ ಪರಿಪೂರ್ಣನೆನಿಸಿ ತನ್ನ ಸ್ವಾತಂತ್ರ್ಯಕ್ಕೂ, ಆತ್ಮಾರಾಮಸ್ಥಿತಿಗೂ ಭಂಗ ಬರದಂತೆ ಜಗದ್ವ್ಯಾಪಾರಗಳನ್ನು ತನ್ನ ಲೀಲೆಯಿಂದ ನಡೆಸುತ್ತಿರುವನು.[2]

ಈ ಜಗತ್ತಿನ ಸೃಷ್ಟಿಗೆ ಪರಮಶಿವನ ಲೀಲೆಯೇ ಕಾರಣವೆಂಬುದು ಈ ದರ್ಶನದ ಸಿದ್ಧಾಂತ. ಈ ಸಿದ್ಧಾಂತವನ್ನು ಮುಂದಿನ ವಚನವು ಪುಷ್ಟೀಕರಿಸುತ್ತದೆ.

ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು
ರಚಿಸಿದವನು ವಿಶ್ವಕ್ಕೆ ಹೊರತಾಗಿರ್ದನೆ ? ಇಲ್ಲ, ವಿಶ್ವಮಯ ತಾನಾದನು,
ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿಸ್ಥಿತಿಲಯಕ್ಕೊಳಗಾದನೆ ? ಇಲ್ಲ,
ಅದೇನು ಕಾರಣವೆಂದೊಡೆ, ಅಜಾತನಾಗಿ ಉತ್ಪತ್ತಿ ಇಲ್ಲ,
ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ,
ಮರಣರಹಿತನಾಗಿ ಲಯಕ್ಕೊಳಗಲ್ಲ,
ಇಂತೀ ಗುಣತ್ರಯಂಗಳ ಹೊದ್ದಲರಿಯ.
ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ,
ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ, ಇದಿರಿಲ್ಲ.
ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ
ಅರಸು ಕಾಲಾಳಾಗಬಲ್ಲ, ತನ್ನ ವಿನೋದಕ್ಕೆ ; ಮರಳಿ ಅರಸನಾಗಬಲ್ಲ.
ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು
ಜಗವಾಗಲೂ ಬಲ್ಲ ; ಜಗವಾಗದಿರಲೂ ಬಲ್ಲನಯ್ಯಾ[3]

---

1. ಸರ್ವೋ ವೈ ರುದ್ರಃ, ಸ ಬ್ರಹ್ಮಾ ಸ ಶಿವಸ್ಸ ಹರಿಸ್ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್–ಕೈವಲ್ಯೋಪನಿಷತ್.
2. ಲೋಕವತ್ತು ಲೀಲಾಕೈವಲ್ಯಂ. ಬ್ರಹ್ಮಸೂತ್ರ ಅಧಿ–11–ಸೂತ್ರ–33.
3. ಉರಿಲಿಂಗ ಪೆದ್ದಿಯ ವಚನಗಳು ಸಂ. ಡಾ. ಎಚ್. ಪಿ. ಮಲ್ಲೇದೇವರು.

ಹೀಗೆ ಅವನು ತನ್ನ ಶಕ್ತಿಯ ವೈಭವದಿಂದ ಸರ್ವಮಯನೂ, ಸರ್ವೇಶ್ವರನೂ ಆಗಿರುವುದರಿಂದಲೇ ಅವನಿಗೆ ಜಗದ್ವ್ಯಾಪಾರಲೀಲೆ ಮತ್ತು ಕೈವಲ್ಯಗಳೆರಡೂ ಏಕಕಾಲದಲ್ಲಿ ಅನ್ವಯಿಸುತ್ತವೆ. ಪ್ರಳಯಕಾಲದಲ್ಲಿ ಶಿವನು ಕೈವಲ್ಯಾನಂದವನ್ನು ಅನುಭವಿಸುತ್ತಾ ಸಚ್ಚಿದಾನಂದಸ್ವರೂಪನಾಗಿರುವನು. ಹಾಗೂ ಸ್ವಸ್ಥಾವಸ್ಥೆಯಲ್ಲಿ ಯಾವ ಬಗೆಯ ಭೇದವ್ಯವಹಾರಕ್ಕೂ ಅವಕಾಶವಿಲ್ಲದೆ ಸಕಲಪ್ರಪಂಚವನ್ನು ತನ್ನ ಶಕ್ತಿಯಲ್ಲಿ ಅಡಗಿಸಿಕೊಂಡು ಆ ಶಕ್ತಿಯನ್ನು ತನಗಿಂತ ಬೇರೆಯಾಗಿ ತೋರಿಸಿಕೊಳ್ಳದೆ ತನ್ನಲ್ಲಿಯೇ ಲೀನಗೊಳಿಸಿಕೊಂಡು ಏಕಮೇವಾದ್ವಿತೀಯನಾಗಿರುತ್ತಾನೆ. ಇಂತಹ ಪರಶಿವಬ್ರಹ್ಮವು ಲೀಲೆಯಿಂದ ತನ್ನ ವಿನೋದಕ್ಕಾಗಿ ಜಗತ್ತನ್ನು ಸೃಷ್ಟಿಸಲು ಸಂಕಲ್ಪಮಾಡಿ ತನ್ನಲ್ಲಿ ಲೀನವಾಗಿರುವ ಮಾಯಾಶಕ್ತಿಯನ್ನು ಹೊರಹೊಮ್ಮಿಸಿ ಅದರ ಮೂಲಕ ಷಟ್‌ತ್ರಿಂಶತ್ತತ್ತ್ವಮಯವಾದ ಜಗದ್ರೂಪದಿಂದ ಪರಿಣಮಿಸುವನು.

ಜಗತ್ತು ಶಿವಸ್ವರೂಪವಾಗಿರುವುದರಿಂದಲೇ ಸತ್ಯವೂ ಆಗಿದೆ ಎಂಬುದಾಗಿ ಈ ದರ್ಶನದಲ್ಲಿ ಸ್ಪಷ್ಟಪಡಿಸಲಾಗಿದೆ. ಜಗತ್ತು ಮಿಥ್ಯೆ ಎಂದು ಹೇಳುವ ಅದ್ವೈತ, ಜಗತ್ತು-ಬ್ರಹ್ಮ ಇವುಗಳಿಗೆ ಭೇದವನ್ನಂಗೀಕರಿಸಿದ ದ್ವೈತ, ಶರೀರಿಯು ಶರೀರದೊಡನೆ ಕೂಡಿದ್ದರೂ ಭಿನ್ನವಾಗಿರುವುದೆಂಬ ವಿಶಿಷ್ಟಾದ್ವೈತ ಇವೇ ಮುಂತಾದ ದರ್ಶನಗಳಲ್ಲಿ ಕಂಡುಬರುವಂತಹ ಜಗತ್ಸ್ವರೂಪವನ್ನು ಅಲ್ಲಗಳೆದು ವೀರಶೈವಸಿದ್ಧಾಂತವು ಜಗತ್ತು ಮತ್ತು ಜೀವ ಈ ಎರಡೂ ಸತ್ಯವೆಂದು ಪ್ರತಿಪಾದಿಸುತ್ತದೆ.

ಶಿವನಿಗೂ ಜಗತ್ತಿಗೂ ಭೇದ ಅಭೇದಗಳೆರಡೂ ಇವೆ. 'ಬ್ರಹ್ಮೈವೇದಂ ಸರ್ವಂ', 'ಐತದಾತ್ಮ್ಯಮಿದಂ ಸರ್ವಂ' ಎಂಬ ಉಪನಿಷದ್ವಾಕ್ಯಗಳಲ್ಲಿ ಜಗತ್ತೆಲ್ಲವೂ ಶಿವಮಯವೇ ಆಗಿರುವುದೆಂದು ಅಭೇದವನ್ನು ತಿಳಿಸಲಾಗಿದೆ. "ದ್ವಾ ಸುಪರ್ಣಾ ಸಯುಜಾ ಸಖಾಯೌ," "ದ್ವೇ ವಾವ ಬ್ರಹ್ಮಣೋ ರೂಪೇ" ಎಂಬ ವಾಕ್ಯಗಳಲ್ಲಿ ಜಗತ್ತು ಮತ್ತು ಶಿವ ಇವರಿಗೆ ಭೇದವು ಕಂಡುಬರುತ್ತದೆ. ಸರ್ಪಕ್ಕೆ ಕುಂಡಲಾಕಾರ, ದಂಡಾಕಾರ ಎರಡೂ ಸಹಜವಾಗಿ ಅನ್ವಯವಾಗುವಂತೆ ಶಿವನಲ್ಲಿ ನಾನಾಕಾರಗಳಾಗುವ ಸ್ಥಿತಿ ಹಾಗೂ ಕೇವಲ ಸ್ವಸ್ಥಸ್ಥಿತಿ ಈ ಎರಡೂ ಸಹಜವಾಗಿಯೇ ಇವೆ. ಅಂದರೆ ಜಗತ್ತು ಒಂದು ದೃಷ್ಟಿಯಿಂದ ಪರಶಿವನಿಂದ ಭಿನ್ನವಾಗಿಯೂ ಮತ್ತೊಂದು ದೃಷ್ಟಿಯಿಂದ ಅವನೊಡನೆ ಕೂಡಿಯೂ ಇರುತ್ತದೆ.

ಜಗತ್ತಿನ ಸೃಷ್ಟಿರಚನೆಯ ಕ್ರಮವನ್ನೂ ಸಹ ಪ್ರತಿಯೊಂದು ದರ್ಶನವು ತನ್ನದೇ ಆದ ಮಾರ್ಗದಲ್ಲಿ ನಿರೂಪಿಸುತ್ತದೆ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಈ ಸೃಷ್ಟಿ ರಚನೆಯ ಕ್ರಮವು ಬಹು ಅರ್ಥವತ್ತಾಗಿ ವೈಶಿಷ್ಟ್ಯಪೂರ್ಣವಾಗಿದೆ. ಈ ದರ್ಶನದಲ್ಲಿ 36 ತತ್ತ್ವಗಳನ್ನು ಅಂಗೀಕರಿಸಲಾಗಿದೆ. ಯಾವುದು ಪ್ರಳಯಾಂತವಾಗಿ ನಿಲ್ಲುತ್ತದೆಯೋ ಮತ್ತು ಜೀವಿಗಳಿಗೆಲ್ಲ ಭೋಗವನ್ನುಂಟುಮಾಡುತ್ತದೆಯೋ ಅದು ತತ್ತ್ವವೆಂದು ಹೇಳಲಾಗಿದೆ. ಶರೀರ, ಘಟ ಮುಂತಾದವುಗಳು ಪ್ರಳಯಾಂತವಾಗಿ

ಉಳಿಯುವುದಿಲ್ಲವಾದ್ದರಿಂದ ಅವು ತತ್ತ್ವಗಳಲ್ಲ.[1] ಈ ಸಿದ್ಧಾಂತದಲ್ಲಿ ಹೇಳುವ ತತ್ತ್ವಗಳು ಪ್ರಳಯಾಂತವಾಗಿವೆ. ಪರಶಿವಬ್ರಹ್ಮನು ಈ ತತ್ತ್ವಗಳ ಆಚೆಯಿದ್ದು ಇವುಗಳಿಗೆ ಮೂಲಭೂತನಾಗಿದ್ದು, ಪ್ರಳಯದಲ್ಲಿ ಅವನೊಬ್ಬನೇ ಸ್ವಸ್ಥಸ್ಥಿತಿಯಲ್ಲಿರುವನು. ಈ ತತ್ತ್ವಗಳಲ್ಲಿ ಮೊದಲನೆಯದಾದ ಶಿವತತ್ತ್ವಕ್ಕಿಂತಲೂ ಹಿಂದಿನ ಹಂತಗಳನ್ನು ವಚನಕಾರರು ಕಲ್ಪಿಸಿದ್ದಾರೆ. ಮೊದಲು ಮಹಾಲಿಂಗ, ಶೂನ್ಯಲಿಂಗ ಎಂದು ಗುರುತಿಸಿ ಆ ಶೂನ್ಯಲಿಂಗದಲ್ಲಿಯೂ ನಿಃಕಲಲಿಂಗ ಶೂನ್ಯಲಿಂಗ ಸರ್ವಶೂನ್ಯನಿರಾಲಂಬ ಸ್ಥಲ ಎಂದು ಮೂರು ಹಂತಗಳನ್ನು ಗುರುತಿಸಿದ್ದಾರೆ. ಈ ಸರ್ವಶೂನ್ಯನಿರಾಲಂಬ ಸ್ಥಿತಿಯನ್ನು ನಾಮರೂಪಕ್ರಿಯೆಗಳೊಂದೂ ಇಲ್ಲದಿರುವ ಅದ್ವೈತಪರಮಾತ್ಮನ ಸ್ವಸ್ಥಸ್ಥಿತಿ ಎಂದು ಬಣ್ಣಿಸಿದ್ದಾರೆ. ಈ ಪರಶಿವಬ್ರಹ್ಮನಿಂದ ಮೊಟ್ಟಮೊದಲು ಇಚ್ಛಾಶಕ್ತಿಯು ಉದಯಿಸಿತು. ಅನಂತರ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳು ಉದಿಸಿದವು. ಈ ಶಕ್ತಿಗಳಿಂದ 36 ತತ್ತ್ವಗಳಿಂದ ಕೂಡಿದ ಜಗತ್ತು ಉತ್ಪನ್ನವಾಯಿತು.

ಷಟ್‌ತ್ರಿಂಶತ್ತತ್ತ್ವಗಳು :

ಶುದ್ಧತತ್ತ್ವಗಳು—ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ.

ಮಿಶ್ರತತ್ತ್ವಗಳು—ಮಾಯಾ, ಕಲಾ, ಅವಿದ್ಯಾ, ರಾಗ, ಕಾಲ, ನಿಯತಿ, ಪುರುಷ. ಪ್ರಕೃತಿ.

ಅಂತಃಕರಣಗಳು—ಬುದ್ಧಿ. ಅಹಂಕಾರ, ಮನಸ್ಸು.

ಪಂಚಜ್ಞಾನೇಂದ್ರಿಯಗಳು—ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ.

ಪಂಚ ಕರ್ಮೇಂದ್ರಿಯಗಳು—ವಾಕ್, ಪಾಣಿ, ಪಾದ, ಪಾಯು, ಉಪಸ್ಥಾ.

ಪಂಚ ತನ್ಮಾತ್ರಗಳು—ಶಬ್ದ, ಸ್ಪರ್ಶ, ರೂಪ, ರಸ, ಗಂಧ.

ಪಂಚ ಭೂತಗಳು—ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವೀ.

ಪರಮಶಿವನು ಇಚ್ಛಾಶಕ್ತಿಗೆ ಅಂತರಂಗವಾಗಿರುವ ಜ್ಞಾನಶಕ್ತಿಯನ್ನು ಪ್ರವೇಶಿಸಿ ನಾನು ಸರ್ವಜ್ಞನು ಎಂಬ ಅಭಿಮಾನವನ್ನು ಹೊಂದಿ "ಶಿವತತ್ತ್ವ"ವೆನಿಸುತ್ತಾನೆ. ಈ ಶಿವತತ್ತ್ವವೇ ಮುಂದಿನ ತತ್ತ್ವಗಳನ್ನು ಕುರಿತು ನಿಮಿತ್ತಕಾರಣವೆನಿಸುತ್ತದೆ.

ಪರಮಶಿವನು ಇಚ್ಛಾಶಕ್ತಿಗೆ ಬಹಿರಂಗವಾಗಿರುವ ಕ್ರಿಯಾಶಕ್ತಿಯನ್ನು ಪ್ರವೇಶಿಸಿ ನಾನು ಸರ್ವಕರ್ತೃ ಎಂಬ ಅಭಿಮಾನವನ್ನು ಹೊಂದಿ "ಶಕ್ತಿತತ್ತ್ವ"ವೆನಿಸುತ್ತಾನೆ. ಈ ಶಕ್ತಿತತ್ತ್ವವು ಸೃಷ್ಟಿಮುಖವಾದ ಶಿವತತ್ತ್ವದ ಮೊದಲನೆಯ ಸ್ಫುರಣವಾಗಿದೆ. ಈ ಶಕ್ತಿಯಿಂದ ಕೂಡಿದ ಪರಶಿವಬ್ರಹ್ಮವೇ ಜಗತ್ತಿಗೆ ಉಪಾದಾನ ಕಾರಣವಾಗುತ್ತದೆ.

---

1. ಆಪ್ರಲಯಂ ಯತ್ತಿಷ್ಠತಿ ಸರ್ವೇಷಾಂ ಭೋಗದಾಯಿ ಭೂತಾನಾಂ ತತ್ತ್ವಮಿತಿ ಪ್ರೋಕ್ತಂ ನ ಶರೀರಘಟಾದಿ ತತ್ತ್ವಮತಃ

—ಭೋಜ ಪ್ರಣೀತ ತತ್ತ್ವಪ್ರಕಾಶಿಕಾ

ಪರಶಿವಬ್ರಹ್ಮನು ಜ್ಞಾನಶಕ್ತಿಯ ಉದ್ರೇಕಾವಸ್ಥೆಯಲ್ಲಿ ಪ್ರವೇಶಿಸಿ ಜಗತ್ತನ್ನು ಕುರಿತು 'ನಾನು ಈ ಪ್ರಪಂಚವು' ಎಂದು ಅಭಿಮಾನ ಹೊಂದಲು "ಸದಾಶಿವತತ್ತ್ವ"ವೆನಿಸುತ್ತದೆ.

ಪರಶಿವನು ಕ್ರಿಯಾಶಕ್ತಿಯ ಉದ್ರೇಕಾವಸ್ಥೆಯಲ್ಲಿ ಪ್ರವೇಶಿಸಿ "ಈಶ್ವರ"ನೆನಿಸುವನು.

ಶಕ್ತಿತತ್ತ್ವವು ಸಮುದ್ರತರಂಗನ್ಯಾಯದಂತೆ ತನಗೂ ಮತ್ತು ಪ್ರಪಂಚಕ್ಕೂ ಅಭೇದಜ್ಞಾನವನ್ನು ಹೊಂದಲು "ಶುದ್ಧವಿದ್ಯೆ" ಯೆನಿಸುತ್ತದೆ. ಅಂದರೆ ಜ್ಞಾನ ಕ್ರಿಯಾಶಕ್ತಿಗಳ ಸಾಮ್ಯಾವಸ್ಥೆಯನ್ನೇ ಶುದ್ಧವಿದ್ಯೆ ಎಂದು ಕರೆಯಲಾಗಿದೆ.

ಹೀಗೆ ಪರಮಾತ್ಮನು ತನ್ನ ಜ್ಞಾನಕ್ರಿಯಾಶಕ್ತಿಗಳಲ್ಲಿ ಪ್ರವೇಶಿಸಿ ಐದುಬಗೆಯ ಅವಸ್ಥೆಗಳನ್ನು ಹೊಂದುತ್ತಾನೆ. ಈ ಅವಸ್ಥಾವಿಶೇಷಗಳೇ ಶಿವ-ಶಕ್ತಿ-ರುದ್ರ-ವಿಷ್ಣು-ಬ್ರಹ್ಮರೆನಿಸಿ ಅನುಗ್ರಹ-ತಿರೋಧಾನ-ಪ್ರಳಯ-ಸ್ಥಿತಿ-ಸೃಷ್ಟಿ ಎಂಬ ಜಗದ್ವ್ಯಾಪಾರಗಳನ್ನು ಲೀಲೆಯಿಂದ ನಡೆಸುತ್ತಿರುವನು. ಅಮೂರ್ತರೂಪನಾದ ಪರಶಿವಬ್ರಹ್ಮನಿಗೂ ಮತ್ತು ಈ ಐದು ಬಗೆಯ ಅವಸ್ಥಾವಿಶೇಷಗಳಿಗೂ ಸಹಜವಾಗಿಯೇ ಅಭೇದವಿದೆ. ಈ ಐವರೂ ಅವನು ವಹಿಸಿದ ಕಾರ್ಯದಲ್ಲಿ ನಿರತರಾಗಿರುವರು.

"ಮಾಯಾತತ್ತ್ವ"ವು ದೇಹೇಂದ್ರಿಯಾದಿಗಳಲ್ಲಿ ನಾನು ಮತ್ತು ನನ್ನದು ಎಂಬ ಅಭಿಮಾನವನ್ನು ಹುಟ್ಟಿಸುತ್ತದೆ. ವಸ್ತುಗಳ ಯಥಾರ್ಥಸ್ವರೂಪವನ್ನು ಮರೆಸಿ ಭೇದಜ್ಞಾನವನ್ನುಂಟುಮಾಡುತ್ತದೆ. ಇದರಿಂದಲೇ ಜೀವರು ಪರಮಾತ್ಮನ ಅಂಶವೆಂಬುದನ್ನೇ ಮರೆತಿರುತ್ತಾರೆ.

ಪರಮಾತ್ಮನ ಸರ್ವಕರ್ತೃತ್ವ-ಸರ್ವಜ್ಞತ್ವ-ಪರಿಪೂರ್ಣತ್ವ-ನಿತ್ಯತ್ವ-ವಿಭುತ್ವ ಈ ಧರ್ಮಗಳು ಸಂಕೋಚಗೊಂಡು ಜೀವನದಲ್ಲಿ ಕಿಂಚಿತ್‌ಕರ್ತೃತ್ವ ಕಿಂಚಿಜ್ಞತ್ವ-ಅಪರಿಪೂರ್ಣತ್ವ-ಅನಿತ್ಯತ್ವ-ಅವ್ಯಾಪಕತ್ವ ಎಂಬ ವಿರುದ್ಧಧರ್ಮಗಳಾಗುತ್ತವೆ. ಹೀಗೆ ಸಂಕೋಚಗೊಂಡ ಶಕ್ತಿಗಳೇ ಕ್ರಮವಾಗಿ "ಕಲಾ-ವಿದ್ಯಾ-ರಾಗ-ಕಾಲ-ನಿಯತಿ" ಎನಿಸಿವೆ. ಈ ಐದು ತತ್ತ್ವಗಳು ಜೀವನವನ್ನು ಆವರಿಸಿ ಪಂಚಕಂಚುಕಗಳೆನಿಸಿವೆ.

ಪರಶಿವನ ಇಚ್ಛಾಶಕ್ತಿಯ ಸಂಬಂಧದಿಂದ ಸ್ಫುರಣಗೊಂಡ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ ಪುರುಷತತ್ತ್ವವೆನಿಸಿಕೊಳ್ಳುತ್ತದೆ. ಈ ಪುರುಷನು ಆಣವ-ಮಾಯಾ-ಕಾರ್ಮಿಕ ಎಂಬ ಮಲತ್ರಯಗಳಿಂದ ಕೂಡಿ ಸಂಸಾರಿ ಎನಿಸುತ್ತಾನೆ. ಆಗ ಅವನಿಗೆ ನಾನು ಸುಖಿ, ನಾನು ದುಃಖಿ ಎಂಬ ಜ್ಞಾನವೂ ಹಾಗೂ ಆತ್ಮನಲ್ಲಿ ಶರೀರ-ಇಂದ್ರಿಯ ಮುಂತಾದ ಅನಾತ್ಮಗಳ ಜ್ಞಾನವೂ, ಅನಾತ್ಮವಸ್ತುಗಳಲ್ಲಿ ಆತ್ಮಜ್ಞಾನವೂ ಉಂಟಾಗುತ್ತದೆ.

ಪರಮಾತ್ಮನ ಚಿತ್‌ಶಕ್ತಿಯು ಮಾಯಾಶಕ್ತಿಯಲ್ಲಿ ಪ್ರವೇಶಿಸಿ "ಪ್ರಕೃತಿ" ಎನಿಸಿದೆ. ಮಾಯೆಯ ಸಂಬಂಧದಿಂದ ಜೀವನು ತನ್ನ ವಾಸ್ತವ ಸ್ವರೂಪವನ್ನು ಮರೆ

ಯಿಯುವುದಕ್ಕೆ ಕಾರಣವಾಗಿರುವ ವೈಚಿತ್ರ್ಯ ವೈವಿಧ್ಯಗಳೇ ಪ್ರಕೃತಿ ಎಂದೂ ಸಹ ಹೇಳಬಹುದು. ಸತ್ತ್ವರಜಸ್ತಮೋಗುಣಾತ್ಮಕವಾದ ಈ ಪ್ರಕೃತಿಯೇ ಮುಂದಿನ ತತ್ತ್ವಗಳಿಗೆ ಕಾರಣವಾಗಿರುವುದು.

ನಿಶ್ಚಯಾತ್ಮಕಜ್ಞಾನಕ್ಕೆ ಹೇತುವಾದ ವಸ್ತುವು "ಮಹತ್ತತ್ತ್ವ" ಎನಿಸಿದೆ. ಇದವಿಂತ್ಥಂ ಎಂದು ನಿಶ್ಚಯಿಸಲು ಕಾರಣವಾದಂದರಿಂದ ಇದಕ್ಕೆ ಬುದ್ಧಿ ಎಂಬ ಮತ್ತೊಂದು ಹೆಸರಿದೆ. ಅಭಿಮಾನಕ್ಕೆ (ಅಹಂಕಾರ ಮಮಕಾರಗಳಿಗೆ) ಕಾರಣವಾದ ವಸ್ತುವು "ಅಹಂಕಾರತತ್ತ್ವ" ವೆನಿಸಿದೆ. ಈ ಅಹಂಕಾರತತ್ತ್ವವೇ ಸಂಕಲ್ಪ ವಿಕಲ್ಪಗಳಿಗೆ ಕಾರಣವಾಗಿ "ಮನಸ್ತತ್ತ್ವ" ಎನಿಸುತ್ತದೆ. ಈ ಮೂರು (ಬುದ್ಧಿ ಅಹಂಕಾರ ಮನಸ್ಸು) ತತ್ತ್ವಗಳು ಅಂತಃಕರಣವೆನಿಸುತ್ತವೆ.

ಶಬ್ದಜ್ಞಾನಕ್ಕೆ ಸಾಧನವಾಗಿ ಶ್ರೋತ್ರತತ್ತ್ವ, ಸ್ಪರ್ಶಜ್ಞಾನಕ್ಕೆ ಸಾಧನವಾಗಿ ತ್ವಕ್‌ತತ್ತ್ವ, ರೂಪಜ್ಞಾನಕ್ಕೆ ಸಾಧನವಾಗಿ ನೇತ್ರತತ್ತ್ವ, ರಸಜ್ಞಾನಕ್ಕೆ ಸಾಧನವಾಗಿ ಜಿಹ್ವಾತತ್ತ್ವ, ಗಂಧಜ್ಞಾನಕ್ಕೆ ಸಾಧನವಾಗಿ ಘ್ರಾಣತತ್ತ್ವ ಈ ಐದು "ಜ್ಞಾನೇಂದ್ರಿಯಗಳು" ಬಾಹ್ಯಶರೀರವನ್ನು ಅವಲಂಬಿಸಿ ಉತ್ಪತ್ತಿಯಾಗುತ್ತವೆ.
ಉಚ್ಚಾರಣಾಕ್ರಿಯೆಗೆ ಸಾಧನವಾಗಿ ವಾಕ್‌ತತ್ತ್ವವೆಂದೂ, ದಾನ ಆದಾನ ಕ್ರಿಯೆಗಳಿಗೆ ಸಾಧನವಾಗಿ ಪಾಣಿತತ್ತ್ವವೆಂದೂ, ಗಮನಾಗಮನಕ್ರಿಯೆಗಳಿಗೆ ಸಾಧನವಾಗಿ ಪಾದ ತತ್ತ್ವವೆಂದೂ, ಮಲಪರಿತ್ಯಾಗಕ್ಕೆ ಸಾಧನವಾಗಿ ಪಾಯುತತ್ತ್ವವೆಂದೂ, ರೇತೋಮೂತ್ರಪರಿತ್ಯಾಗಕ್ಕೆ ಸಾಧನವಾಗಿ ಉಪಸ್ಥತತ್ತ್ವವೆಂದೂ ಕರೆಸಿಕೊಳ್ಳುವುದು. ಈ ಐದು ಇಂದ್ರಿಯಗಳೂ ಕ್ರಿಯಾಶಕ್ತಿಪ್ರಧಾನವಾದ್ದರಿಂದ "ಕರ್ಮೇಂದ್ರಿಯಗಳೆ" ನಿಸಿವೆ."

ಅನಂತರ ಈ ಶಕ್ತಿತತ್ತ್ವವೇ ಶ್ರೋತ್ರೇಂದ್ರಿಯಮಾತ್ರಗ್ರಾಹ್ಯವಾಗಿ ಶಬ್ದ ತತ್ತ್ವವೆಂದೂ. ತ್ವಗಿಂದ್ರಿಯಮಾತ್ರಗ್ರಾಹ್ಯವಾಗಿ ಸ್ಪರ್ಶತತ್ತ್ವವೆಂದೂ, ಚಕ್ಷುರಿಂದ್ರಿಯ ಮಾತ್ರಗ್ರಾಹ್ಯವಾಗಿ ರೂಪತತ್ತ್ವವೆಂದೂ. ಜಿಹ್ವೇಂದ್ರಿಯಮಾತ್ರಗ್ರಾಹ್ಯವಾಗಿ ರಸತತ್ತ್ವವೆಂದೂ, ಘ್ರಾಣೇಂದ್ರಿಯಮಾತ್ರಗ್ರಾಹ್ಯವಾಗಿ ಗಂಧತತ್ತ್ವವೆಂದೂ ಕರೆಸಿಕೊಳ್ಳುವುದು, ಇವುಗಳಿಗೆ "ತನ್ಮಾತ್ರಗಳೆ"ಂದು ಕರೆಯುತ್ತಾರೆ. ತನ್ಮಾತ್ರಗಳೆಂದರೆ ಪೃಥಿವ್ಯಾದಿಭೂತಗಳ ಸೂಕ್ಷ್ಮವಾದ ಪೂರ್ವಾವಸ್ಥೆ.

ಶಕ್ತಿತತ್ತ್ವವೇ ಶಬ್ದವೊಂದೇ ಗುಣವುಳ್ಳದ್ದಾಗಿ ಆಕಾಶತತ್ತ್ವವೆಂದೂ, ಸ್ಪರ್ಶವೆಂಬ ಮುಖ್ಯಗುಣವುಳ್ಳದ್ದಾಗಿ ವಾಯುತತ್ತ್ವವೆಂದೂ, ರೂಪವೆಂಬ ಮುಖ್ಯ ಗುಣವುಳ್ಳದ್ದಾಗಿ ತೇಜಸ್‌ತತ್ತ್ವವೆಂದೂ, ರಸವೆಂಬ ಮುಖ್ಯಗುಣವುಳ್ಳದ್ದಾಗಿ ಜಲತತ್ತ್ವವೆಂದೂ, ಗಂಧವೆಂಬ ಮುಖ್ಯ ಗುಣವುಳ್ಳದ್ದಾಗಿ ಪೃಥ್ವೀತತ್ತ್ವವೆಂದೂ ಕರೆಸಿಕೊಳ್ಳುವುದು. ಈ "ಪಂಚ ಭೂತ" ಗಳಲ್ಲಿ ಮುಂದುಮುಂದಿನದರಲ್ಲಿ ಒಂದೊಂದು ಗುಣ ಹೆಚ್ಚಾಗುತ್ತದೆ. ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದಸ್ಪರ್ಶಗಳು, ತೇಜಸ್ಸಿನಲ್ಲಿ ಶಬ್ದಸ್ಪರ್ಶರೂಪಗಳು, ಜಲದಲ್ಲಿ ಶಬ್ದಸ್ಪರ್ಶರೂಪ ರಸಗಳು, ಪೃಥ್ವಿಯಲ್ಲಿ ಶಬ್ದಸ್ಪರ್ಶ

ರೂಪ ರಸ ಗಂಧಗಳೂ ಇವೆ. ಈ ರೀತಿಯಾಗಿ ಒಂದೊಂದು ಭೂತದಲ್ಲಿ ಒಂದೊಂದು ಗುಣ ಹೆಚ್ಚಾಗಿದೆ.

ಈ ರೀತಿಯಾಗಿ ಸೃಷ್ಟಿಕಾಲದಲ್ಲಿ ಪ್ರವೃತ್ತಿಕ್ರಮದಿಂದ ಪರಶಿವಬ್ರಹ್ಮವೇ ಶಿವ ತತ್ತ್ವವೊದಲ್ಗೊಂಡು ಪೃಥ್ವೀತತ್ತ್ವದವರೆಗೆ ಕ್ರಮಂಕ್ರಮವಾಗಿ ವಿಕಾಸಗೊಂಡಿದೆ. ಪ್ರಳಯಕಾಲದಲ್ಲಿ ನಿವೃತ್ತಿಕ್ರಮದಿಂದ ಒಂದೊಂದು ತತ್ತ್ವವೂ ಹಿಂದು ಹಿಂದಕ್ಕೆ ಸರಿದು ಎಲ್ಲವೂ ಶಕ್ತಿಯಲ್ಲಿ ಸೇರುತ್ತವೆ. ಆ ಶಕ್ತಿಯು ಶಿವನಲ್ಲಡಗಿ ಆ ಶಿವನೂ ಸಹ ನಿರಾಕಾರ, ನಿರ್ಗುಣನಾದ ಪರಶಿವಬ್ರಹ್ಮನಲ್ಲಿ ಲೀನವಾಗುತ್ತಾನೆ. ಈ ಸ್ಥಿತಿಯಲ್ಲಿ ಶಿವನು ಕೇವಲನಾಗಿ ತಾನೊಬ್ಬನೇ ಪ್ರಕಾಶಿಸುತ್ತಿರುವನು.

ದೀಕ್ಷೆ

ಡಾ|| ಎಚ್. ಪಿ. ಮಲ್ಲೇದೇವರು

ವಿಶ್ವದಲ್ಲಿ ಎಲ್ಲ ಧರ್ಮಗಳೂ ತಮ್ಮ ಧರ್ಮವನ್ನನುಸರಿಸುವವರ ಪ್ರಗತಿಗಾಗಿ ಪ್ರಾಯಶಃ ಒಂದಲ್ಲೊಂದು ತೆರನಾದ ಸಂಸ್ಕಾರಗಳನ್ನು ನಿರೂಪಿಸಿರುವುವು. ಆ ಸಂಸ್ಕಾರಗಳಲ್ಲಿ ಹಲವು ಐಹಿಕ, ಕೆಲವು ಆಮುಷ್ಮಿಕ ಮತ್ತೆ ಕೆಲವು ಐಹಿಕವಾಗಿ ಕಂಡು ಬಂದರೂ, ಅಂತ್ಯದಲ್ಲಿ ಆತ್ಯಂತಿಕ ಕಲ್ಯಾಣಕ್ಕೆ ಸಾಧಕ. ಹಿಂದೂಗಳು ನಲ ವತ್ತೆಂಟು ಸಂಸ್ಕಾರಗಳನ್ನು, ಅವುಗಳಲ್ಲಿ ಮುಖ್ಯವಾಗಿ ಹದಿನಾರು ಸಂಸ್ಕಾರಗಳನ್ನು ಪಾಲಿಸುವರು. ಶೈವಧರ್ಮದ ಎಲ್ಲ ಪ್ರಭೇದಗಳಲ್ಲಿಯೂ ಕೆಲವು ಸಂಸ್ಕಾರಗಳ ಆವಶ್ಯ ಕತೆಯನ್ನು ಒತ್ತಿ ಹೇಳಿರುವರು. ಶಿವಾದ್ವೈತಸಿದ್ಧಾಂತವು ಕೆಲವು ಸಂಸ್ಕಾರಗಳನ್ನು ಬೋಧಿಸಿ, ಅವುಗಳಲ್ಲಿ ದೀಕ್ಷೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯವಿತ್ತಿರುವುದು.

ಸಂಸ್ಕಾರವೆಂದರೇನು ? ಸಂಸ್ಕಾರವು ಮಾನವನಿಗೆ ಅಗತ್ಯವೇ ? ದೀಕ್ಷೆಯ ವೈಶಿಷ್ಟ್ಯವೇನು ? ಇವುಗಳನ್ನು ಸ್ವಲ್ಪ ವಿಮರ್ಶಿಸೋಣ.

ಲೋಕದಲ್ಲಿ ಚೇತನವಸ್ತುವಾಗಲಿ ಅಥವಾ ಅಚೇತನವಸ್ತುವಾಗಲಿ ಸೌಂದರ್ಯ ಪೂರ್ಣ ಪ್ರಶಸ್ತವೈಶಿಷ್ಟ್ಯದ ಪರಾಕಾಷ್ಠತೆಯನ್ನು ಪಡೆಯಬೇಕಾದರೆ ಅದಕ್ಕೆ ಸಂಸ್ಕಾರ ಅನಿವಾರ್ಯ. ಧರಣಿಯಲ್ಲಿ ಅಲ್ಲಲ್ಲಿ ದೊರೆಯುವ ಚಿನ್ನದ ಅದುರು ಅಥವಾ ಕೆಲವು ಲೋಹವಿಶೇಷಗಳು ಯುಕ್ತಕ್ರಮದಿಂದ ಬೇರೆ ವಸ್ತುಗಳಿಂದ ಪ್ರತ್ಯೇಕ ಗೊಳಿಸಲ್ಪಟ್ಟು, ವಿಧಾನಾತ್ಮಕ ಕ್ರಿಯೆಯಿಂದ ಪರಿಶುದ್ಧಿಗೊಳಿಸಲ್ಪಟ್ಟಾಗಲೇ ಅವು ಸಂಸ್ಕರಣ ಹೊಂದಿ ಪರಿಶುದ್ಧವಾದ ಸುವರ್ಣ ಅಥವಾ ಶುದ್ಧವಾದ ಲೋಹಗಳಾಗು ವುವು. ಅಂತೆಯೇ ಕೆಲವು ಕಲ್ಲುಗಳು ಅಥವಾ ಬಂಡೆಗಳು ಶಿಲ್ಪಿಯ ಕರ್ಮಕೌಶಲ್ಯದಿಂದ ಭವ್ಯ ಹಾಗೂ ರಮ್ಯ ಕಲಾಕೃತಿಗಳಾಗಿ ಸಹೃದಯರ ಹೃದಯವನ್ನು ಸೂರೆಗೊಳ್ಳು ವುವು. ಒಟ್ಟಿನಲ್ಲಿ ವಿಧಾನಾತ್ಮಕ ಕ್ರಿಯೆಗಳು ಘಟಿಸದೆ ಅಚೇತನ ವಸ್ತುಗಳು ತಮ್ಮ ಪರಿಪೂರ್ಣ ವೈಶಿಷ್ಟ್ಯವನ್ನು ಹೊರಸೂಸಲಾರವು.

ಈ ನಿಯಮವು ಚೇತನವರ್ಗಕ್ಕೆ ಇನ್ನೂ ಹೆಚ್ಚು ಅನ್ವಯವಾಗುವುದು. ಮಾನ- ವರ ನಾದ ಅಥವಾ ಧ್ವನಿಯು, ತಾಳ, ಸ್ವರ ಮೊದಲಾದವುಗಳಿಗನುಗುಣವಾಗಿ ಪರಿ ವರ್ತನವಾದಾಗಲೇ ಅದು ''ಸಂಗೀತ''ವೆನಿಸಿಕೊಳ್ಳುವುದು. ಅಂತೆಯೇ ಪದಗಳು

ವ್ಯಾಕರಣದ ನಿಯಮದಂತೆ ಪ್ರಕ್ರಿಯೆ ಹೊಂದಿ,[1] ಸನ್ನಿವೇಶಾದಿಗಳಿಗನುಗುಣವಾಗಿ ಪ್ರಯೋಗಿಸಲ್ಪಟ್ಟಾಗಲೇ ಮಹತ್ತರವಾದ ಅರ್ಥಗಳನ್ನು ನಿಖರವಾಗಿ ಸೂಚಿಸುವವು.[2] ಅಷ್ಟೇಕೆ. ಸಾಮಾನ್ಯವಾಗಿ ನಿರುಪಯೋಗವೆನಿಸಿದ ಮುಳ್ಳುಗಿಡಗಳೂ ಸಹ, ಪುಷ್ಪ ಪರಾಗಗಳಿಂದ ಸುಶೋಭಿತವಾದ ಸುಂದರ ಉಪವನದ ಸುತ್ತ ಪರಿಮಿತಪ್ರಮಾಣ ದಲ್ಲಿ ಬೆಳೆಸಿ ಯುಕ್ತರೀತಿಯಿಂದ ಕತ್ತರಿಸಲ್ಪಟ್ಟಾಗ, ಪ್ರಾಯಶಃ ದೂಷಣೆಗೆ ಪಾತ್ರ ವಾಗುವ ಆ ಗಿಡಗಳೇ ರಮ್ಯೋದ್ಯಾನಕ್ಕೆ ರಕ್ಷಣೆಯಿತ್ತು ತಮ್ಮ ಉಪಯುಕ್ತತೆ ಹಾಗೂ ಶೋಭೆಯನ್ನು ಪ್ರಕಟಿಸಿ ಪ್ರಶಂಸೆಗೆ ಪಾತ್ರವಾಗುವುವು. "ಆತ್ಮಶರೀರಾನ್ಯತರನಿಷ್ಠೋ ವಿಹಿತಕ್ರಿಯಾಜನ್ಯಃ ಅತಿಶಯವಿಶೇಷಃ[3]" ಎಂದು ವೀರಮಿತ್ರೋದಯ ಸಂಸ್ಕಾರ ಪ್ರಕಾಶದಲ್ಲಿ ಹೇಳಿದೆ. ಒಟ್ಟಿನಲ್ಲಿ ವಿಹಿತಕ್ರಿಯೆಯಿಂದ ಆತ್ಮ ಅಥವಾ ಶರೀರದಲ್ಲಾ ಗುವ ಪರಿಪೂರ್ಣವೈಶಿಷ್ಟ್ಯ ಅಥವಾ ಪ್ರಶಸ್ತ ಅತಿಶಯವಿಶೇಷಕ್ಕೆ ಸಂಸ್ಕಾರವೆನ್ನ ಬಹುದು.

ಪ್ರಾಣಿಗಳಿಗೆಲ್ಲ ಆಹಾರ, ನಿದ್ರಾ, ಭಯ ಮೊದಲಾದ ಕ್ರಿಯೆಗಳು ಸಮಾನವಾಗಿ ದ್ದರೂ, ಮಾನವನು ಅವುಗಳಿಗಿಂತ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿರುವುದರ ರಹಸ್ಯ ವಾದರೂ ಆವುದು ? ವಿಮರ್ಶಾತ್ಮಕವಾದ ಬುದ್ಧಿಯಿಂದಲೇ ಅಲ್ಲವೆ ? ಭರ್ತೃಹರಿ "ವಿದ್ಯಾವಿಹೀನಃ ಪಶುಃ" ವಿದ್ಯೆ ಅಥವಾ ಜ್ಞಾನವಿಲ್ಲದವನು ಪಶುಸಮಾನನೆಂದು ಹೇಳಿದ್ದಾನೆ. ಕೇವಲ ಜ್ಞಾನ ಸಾಲದು, ಆ ಜ್ಞಾನವು ಕ್ರಿಯೆಯಲ್ಲಿ ಅಳವಟ್ಟು ಸತ್ಕ್ರಿಯೆ ಯಾಗಿ ಪರಿಣಮಿಸಬೇಕು. ಒಟ್ಟಿನಲ್ಲಿ ಸನ್ನಿವೇಶಕ್ಕೆ ಅನುಗುಣವಾದ ಆಚರಣೆ ಇಲ್ಲ ದವನು, ಅಜ್ಞಾನಿಯಾಗಲಿ ಅಥವಾ ವಿಜ್ಞಾನಿಯಾಗಲಿ ಬರಡು ಪಶು ಎಂದರೆ ಬಹುಶಃ ತಪ್ಪಾಗಲಾರದು. ಸಂಸ್ಕಾರವಿಶೇಷ ಅಥವಾ ಜ್ಞಾನ ಯಾವ ವ್ಯಕ್ತಿಗೆ ಕ್ರಿಯೆಯಲ್ಲಿ ಅಳವಟ್ಟಿರುವುದೋ, ಅಂತಹ ವ್ಯಕ್ತಿಯನ್ನು ಸುಸಂಸ್ಕೃತನೆನ್ನಬಹುದು. ಆದುದ ರಿಂದಲೇ ಅನುಭಾವಿಗಳಾದ ಶರಣರು, "ಜ್ಞಾನದಲ್ಲಿ ಅರಿದಡೇನಯ್ಯ, ಸತ್ಕ್ರಿಯಾ ಚಾರಿಯಾಗದನ್ನಕ್ಕರ ? ನೆನೆದ ಮಾತ್ರದಲ್ಲಿ ಕಾಂಬುದೆ ಕಾರ್ಯದಲ್ಲಿಲ್ಲದೆ ? ಕುರುಡ ಕಾಣ ಪಥವ, ಹೆಳವ ನಡೆಯಲರಿಯ, ಒಂದಿಲ್ಲದಿದ್ದರೆ ಒಂದಾಗದು, ಜ್ಞಾನವಿಲ್ಲದ ಕ್ರಿಯೆ ಜಡ, ಕ್ರಿಯೆಯಿಲ್ಲದ ಜ್ಞಾನ ಭ್ರಾಂತಿ, ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು"[4] ಎಂದು ಹೇಳಿದ್ದಾರೆ. ಅನುಭಾವಿಗಳ ಈ ವಾಣಿಯು, ಮಾನವ

---

1 "ಸಂಸ್ಕಾರವತ್ಯೇವ ಗಿರಾ ಮನೀಷೀ........."
—ಕುಮಾರಸಂಭವ. ಸ. ೧ ಶ್ಲೋ. ೨೮

2 "ಗೌರ್ಗೌಃ ಕಾಮದುಘಾ ಸಮ್ಯಕ್ಪ್ರಯುಕ್ತಾ ಸ್ಮರ್ಯತೇ ಬುಧೈಃ ।
ದುಷ್ಪ್ರಯುಕ್ತಾ ಪುನರ್ಗೋತ್ವಂ ಪ್ರಯೋಕ್ತುಃ ಸೈವ ಶಂಸತಿ" ॥
—ಕಾವ್ಯಾದರ್ಶ ದಂಡಿ ೧.೬

3 "ವೀರಮಿತ್ರೋದಯ ಸಂಸ್ಕಾರಪ್ರಕಾಶ" ಭಾ. ೧. ಪು. ೧೩೨

4 "ವಚನಶಾಸ್ತ್ರ ರಹಸ್ಯ" ಶ್ರೀ. ಆರ್. ಆರ್. ದಿವಾಕರ. ಪು. ೮೬

ನಲ್ಲಿ. ಜ್ಞಾನ ಮತ್ತು ಕ್ರಿಯೆಗಳು ಹೇಗೆ ಸಮನ್ವಯಗೊಂಡಿರಬೇಕೆಂಬುದನ್ನು ಹೃದಯ ಸ್ಪರ್ಶಿಯಾಗುವಂತೆ ಒತ್ತಿ ಹೇಳುತ್ತದೆ.

ಆರ್ಯರು ಭಾರತಕ್ಕೆ ವಲಸೆ ಬರುವ ಮುನ್ನವೇ, ಸಿಂಧೂನದಿಯ ಪ್ರದೇಶ ದಲ್ಲಿ ನಿವಾಸಿಸುತ್ತಿದ್ದ ಜನರು ಸರ್ವಾಂಗೀಣಪ್ರಗತಿ ಹೊಂದಿ ಸುಸಂಸ್ಕೃತರಾಗಿದ್ದರೆಂಬು ದಕ್ಕೆ, ಇತ್ತೀಚೆಗೆ ದೊರೆತಿರುವ ಹರಪ್ಪ. ಮೊಹೆಂಜೊದಾರೊ ಮುಂತಾದ ಪಟ್ಟಣಗಳ ಗೃಹನಿರ್ಮಾಣ ರಚನೆ ಹಾಗೂ ಅಂದಿನ ನಾಗರೀಕತೆಯನ್ನು ವ್ಯಕ್ತಪಡಿಸುವ ಪ್ರಾಕ್ತನ ಅವಶೇಷಗಳು, ಜೀವಂತ ಹಾಗೂ ಭವ್ಯ ನಿದರ್ಶನಗಳಾಗಿವೆ. ಖ್ಯಾತಿವೆತ್ತ ಇತಿ ಹಾಸಜ್ಞರಾದ ಸರ್‌ಜಾನ್ ಮಾರ್ಷಲ್,[5] ಫಾದರ್ ಹೆರಾಸ್[6] ಮೊದಲಾದವರ ಸಂಶೋಧನೆಗಳಿಂದ, ಆ ಜನರ ಧರ್ಮವು ಶೈವಧರ್ಮವೇ ಆಗಿದ್ದಿತೆಂಬುದರ ಬಗೆಗೆ ಈಗ ಸಂಶಯ ಉಳಿದಿಲ್ಲ. ಗರ್ಭಧಾರಣೆಯಿಂದ ಮೊದಲ್ಗೊಂಡು ಮಾನವ ಅವಸಾನ ಹೊಂದಿದನಂತರವೂ ಆಚರಿಸಲ್ಪಡುವ ಇಷ್ಟೊಂದು ತೆರನಾದ ಆರ್ಯರ ಸಂಸ್ಕಾರಗಳು ಸಿಂಧೂ ನಿವಾಸಿಗಳ ಮೇಲೆ ಪ್ರಭಾವ ಬೀರಿದುವೆ ? ಅಥವಾ ಭಾರತೀಯ ಸಂಸ್ಕಾರ ಆರ್ಯರ ಮೇಲೆ ಪ್ರಭಾವ ಬೀರಿದುವೆ ? ಇದು ಅತಿ ಮಹತ್ವದ ವಿಷಯ. ಆರ್ಯ ರಲ್ಲಿ ಪ್ರಚಲಿತವಿರುವ ಇಷ್ಟೊಂದು ತೆರನಾದ ಸಂಸ್ಕಾರಗಳು, (ಭಾಷಾಶಾಸ್ತ್ರದ ರೀತಿ) ಒಂದೇ ಬುಡಕಟ್ಟಿಗೆ ಸೇರಿದ ಅಥವಾ ಒಂದೇ ಪ್ರದೇಶದಲ್ಲಿ ಹಲವಾರು ವರ್ಷಗಳ ಕಾಲ ಬಾಳುತ್ತಿದ್ದು, ಅನಂತರ ವಿವಿಧ ಪ್ರದೇಶಗಳಿಗೆ ವಲಸೆ ಹೋದ ಆರ್ಯರನ್ನು ಬಿಟ್ಟು ಉಳಿದ ಪಾಶ್ಚಿಮಾತ್ಯ ಜನಾಂಗದಲ್ಲಿ ಕಂಡು ಬಾರದಿರುವುದರಿಂದ ಇವು ಭಾರತೀಯರ ಪ್ರಭಾವದ ಪರಿಣಾಮವೆಂದೇ ಪರಿಗಣಿಸಬಹುದಲ್ಲವೆ ? ಈ ವಿಷಯಗಳು ಪರಿಶೀಲ ನಾರ್ಹವಾದರೂ, ಹೆಚ್ಚು ವಿಮರ್ಶಿಸುವುದು ಪ್ರಕೃತ ಲೇಖನದಲ್ಲಿ ಸಾಧುವಾಗ ಲಾರದು.

ವೀರಶೈವ ಸಂಸ್ಕಾರಗಳಲ್ಲಿ ಲಿಂಗಧಾರಣ, ದೀಕ್ಷಾ, ವಿವಾಹ ಮತ್ತು ಸಮಾಧಿ ಈ ಸಂಸ್ಕಾರಗಳು ಪ್ರಾಮುಖ್ಯವಾದವು.[7]

ಲಿಂಗಧಾರಣೆಯನ್ನು ಯಾವಾಗ ಮಾಡಬೇಕೆಂಬುದರ ಬಗೆಗೆ ಭಿನ್ನಾಭಿಪ್ರಾಯ ಗಳಿವೆ.

"ವೀರಶೈವಸ್ಥಿತಾನಾಂ ಚ ಸ್ತ್ರೀಣಾಂ ಗರ್ಭಾಷ್ಟಮೇ ಗುರುಃ !

---

5 "Mohenjo-daro and Indus civilisation" vol. I Ch. V.P.55
—by. Sir. John Marshall

6 "Religion of the Mohenjo-daro People"
—by. Heras. Bombay University Journal, July, 1936.

7. A Hand book of Virasaivism. P. 66
by Dr. S. C. Nandimath. M. A., Ph. D. (Lond)

ಪಂಚಸೂತ್ರಕೃತಂ ಲಿಂಗಂ ಧಾರಯೇತ್ ವಿಧಿವಚ್ಛುಭಂ ॥[8]

ಎಂಬುದಾಗಿ ವೀರಶೈವಾಚಾರಪ್ರದೀಪಿಕೆಯಲ್ಲಿ ಹೇಳಿರುವುದರಿಂದ ಲಿಂಗಧಾರಣರೂಪವಾದ ಸಂಸ್ಕಾರವನ್ನು ಗರ್ಭಧಾರಣೆಯಾದ ಎಂಟನೇ ತಿಂಗಳಲ್ಲಿ ಮಾಡಬೇಕೆಂದು ಅರ್ಥವಾಗುತ್ತದೆ. ಆದರೆ, ಸ್ವಾಯಂಭುವಾಗಮದಲ್ಲಿ :" ಪೂರ್ವಂ ಸಂಸ್ಕಾರಿತಂ ಲಿಂಗಂ ಶಿಶೋಃ ಕಂಠೇ ಚ ಧಾರಯೇತ್"ಎಂದೂ, ಮತ್ತೆ ವೀರಶೈವಸದಾಚಾರಸಂಗ್ರಹದಲ್ಲಿ,

"ಇತಿ ಬಧ್ವಾ ಚೇಷ್ಟಲಿಂಗಂ ಪ್ರತೀಕ್ಷೇತ ಶಿಶೋರ್ಜನಿಮ್ ।
ಸಂಸ್ಕುರ್ಯಾತ್ತನಯಂ ಜಾತಕರ್ಮಣಾ ಜನನಾತ್ಪರಮ್"[9] ॥

ಎಂಬುದಾಗಿ ಹೇಳಿರುವುದರಿಂದ ಲಿಂಗಧಾರಣವನ್ನು ಮಗುವಿಗೆ ಜಾತಕರ್ಮಸಂಸ್ಕಾರ ಮಾಡುವುದರೊಡನೆ ಆಚರಿಸಬೇಕೆಂಬುದು ಸ್ಪಷ್ಟವಾಗುತ್ತದೆ. ಈ ರೀತಿಯಿಂದ ಲಿಂಗಧಾರಣೆಯನ್ನು ಗರ್ಭಧರಿಸಿದ ಎಂಟನೆಯ ತಿಂಗಳಲ್ಲಿ ಮಾಡಬೇಕೆಂದು ವೀರಶೈವಾಚಾರಪ್ರದೀಪಿಕೆಯಲ್ಲೂ, ಮಗುವು ಜನಿಸಿದನಂತರ ಜಾತಕರ್ಮದೊಡನೆ ಮಾಡಬೇಕೆಂದು ವೀರಶೈವಸದಾಚಾರ ಸಂಗ್ರಹದಲ್ಲಿಯೂ ಹೇಳಿರುವುದರಿಂದ, ಭಿನ್ನಾಭಿಪ್ರಾಯ ತಲೆದೋರಿ, ಇದರಲ್ಲಿ ಯಾವುದು ಸ್ವೀಕಾರಾರ್ಹವಾದುದು ಎಂಬ ಬಗೆಗೆ ಸಹಜವಾಗಿ ಸಂಶಯವು ತಲೆದೋರುವುದು. ಗರ್ಭಧಾರಣೆಯಾದ ಎಂಟನೇ ತಿಂಗಳಲ್ಲಿ ಲಿಂಗಧಾರಣೆಮಾಡುವುದು ಮಗುವು ಜನಿಸುವಾಗಲೇ ಪವಿತ್ರವಾಗುದಯಿಸಲೆಂಬ ಮಹತ್ವಾಕಾಂಕ್ಷೆಯಿಂದ ಸೂಕ್ತವೆನಿಸಿದರೂ, ವ್ಯಾವಹಾರಿಕವಾಗಿ ಅದು ಅಷ್ಟು ಉಚಿತವಲ್ಲ. ಗರ್ಭವತಿಯಾದನಂತರ ಸಂಸ್ಕಾರಗಳನ್ನು ಮಾಡುವ ಪ್ರಮುಖ ಉದ್ದೇಶವಾದರೂ ಆ ಮಾತೆಯ ಗರ್ಭದಲ್ಲಿರುವ ಶಿಶುವು ಸಂಸ್ಕಾರ ಹೊಂದಲೆಂಬುದೇ ಆಗಿರುತ್ತದೆ. ಆದುದರಿಂದ ಮಗುವಿಗೆ ಜಾತಕರ್ಮದೊಡನೆ ಲಿಂಗಧಾರಣೆ ಮಾಡುವುದೇ ಉಚಿತವಾದುದು. ಪ್ರೊ. ಸಿರಸಿ. ಗುರುಶಾಂತ ಶಾಸ್ತ್ರಿಗಳವರೂ ಸಹ ಈ ತೆರನಾದ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ, "ಗರ್ಭೋತ್ಪತ್ತಿಯಾದ ನಾಲ್ಕನೇ ತಿಂಗಳಿಂದ ಎಂಟನೇ ತಿಂಗಳವರೆಗೆ 'ಸೀಮಂತ'ವೆಂಬ ಸಂಸ್ಕಾರವನ್ನು ಮಾಡಬೇಕು. ಪಿಂಡದಲ್ಲಿ ಚೇತನ ಅಭಿವ್ಯಕ್ತಿಯಾದೊಡನೆಯೇ ಆ ಗರ್ಭಕ್ಕೆ ವೀರಶೈವಸಿದ್ಧಾಂತರೀತ್ಯಾ "ಲಿಂಗಧಾರಣ"ರೂಪವಾದ ಸಂಸ್ಕಾರವೂ ಸಹ ಸೀಮಂತದ ಅಂಗವಾಗಿ ಆಚರಿಸಲ್ಪಡಬೇಕು. ಇದರಿಂದ ಆತ್ಮನಿಗೆ ಶಿವಸಂಬಂಧಾಂಕುರವಾಗಿ ಆವನು ಶುದ್ಧಾತ್ಮನಾಗಿಯೇ ಅವತರಿಸುತ್ತಾನೆ. ಆದರೆ ವ್ಯವಹಾರದಲ್ಲಿ ಈ ಸಂಸ್ಕಾರವು ಜನನವಾದ ಮೇಲೆ ಜಾತಕರ್ಮದ ಅಂಗವಾಗಿ ಆಚರಿಸಲ್ಪಡುತ್ತದೆ.[10]

---

8 ವೀರಶೈವಾಚಾರ ಪ್ರದೀಪಿಕಾ. ಪು. ೧೧. ಶ್ಲೋ. ೮೨

9 ವೀರಶೈವ ಸದಾಚಾರ ಸಂಗ್ರಹ. ಪು. ೯೩. ಶ್ಲೋ. ೮೬

10 "ವೀರಶೈವ ಪೂರ್ವಪ್ರಯೋಗ ರತ್ನಂ" ಉಪೋದ್ಘಾತ. ಪು. ೪.

ಪಂಚಸೂತ್ರ ಮೊದಲಾದವುಗಳಿಗನುಸಾರವಾಗಿ ತಯಾರಿಸಲ್ಪಟ್ಟ ಲಿಂಗವನ್ನು.[11] ಶ್ರೀಗುರುವು ವಿಧಿ ವಿಧಾನಗಳಿಂದ ಸಂಸ್ಕರಿಸಿ ಶಿಶುವಿನ ಕಂಠದಲ್ಲಿ ಧರಿಸಿ ಅದರ ಬಲ ಕಿವಿಯಲ್ಲಿ ಪಂಚಾಕ್ಷರೀ ಮಹಾಮಂತ್ರೋಚ್ಚಾರಣೆಯನ್ನು ಮಾಡಬೇಕು.

ಕೆಲವರು ಲಿಂಗಧಾರಣ ಮತ್ತು ಶಿವದೀಕ್ಷೆಗಳು ಬೇರೆ ಬೇರೆ ಸಂಸ್ಕಾರಗಳೆಂದೂ, ಮತ್ತೆ ಕೆಲವರು ಲಿಂಗಧಾರಣ ಶಿವದೀಕ್ಷೆಗಳಿಗೆ ಯಾವುದೂ ಭೇದವಿಲ್ಲ, ಒಂದರ ಕಾರ್ಯ ಕ್ರಮದಲ್ಲಿ ಮತ್ತೊಂದು ಹಾಸು ಹೊಕ್ಕುಗಳಂತೆ ಹೆಣೆದುಕೊಂಡಿದೆ, ಶಿವದೀಕ್ಷೆಯನ್ನು ಬಿಟ್ಟು ಲಿಂಗಧಾರಣವಿಲ್ಲ, ಲಿಂಗಧಾರಣವನ್ನು ಬಿಟ್ಟು ಶಿವದೀಕ್ಷೆಯಿಲ್ಲ, ಶಿವದೀಕ್ಷೆಯು ಲಿಂಗಧಾರಣೆಯಲ್ಲಿ ಮುಕ್ತಾಯಕೊಳ್ಳಬೇಕು, ಎಂಬುದಾಗಿ ಪ್ರತಿಪಾದಿಸಿದ್ದಾರೆ. ಈ ಬಗೆಗೆ ವಿಪುಲವಾಗಿ ಚರ್ಚೆ ನಡೆದಿದೆ[12] "ವಾದೇ ವಾದೇ ಜಾಯತೇ ತತ್ತ್ವಬೋಧಃ" ಎಂಬ ನುಡಿಯು ನಿಜವಾದಾಗ್ಯೂ ಇಲ್ಲಿ ಚರ್ಚೆಯನ್ನು ತತ್ತ್ವಗಳಿಗೆ ಮಾತ್ರ ಮೀಸಲಾ ಗಿರಿಸದೆ ಕೆಲವೊಮ್ಮೆ ವ್ಯಕ್ತಿಗಳ ನಿಂದೆಗೂ ಪಸರಿಸಿರುವುದರಿಂದ, ನಿರೀಕ್ಷಿಸಿದಷ್ಟು ಫಲ ದೊರೆತಿಲ್ಲವೆಂದರೆ ತಪ್ಪಾಗಲಾರದು.

---

೧೧ "ಇಷ್ಟಲಿಂಗವಿಜ್ಞಾನ" ಶ್ರೀ. ಅಕ್ಕುಲಯ್ಯ ದೀಕ್ಷಿತ.

೧೨ 'ಲಿಂಗಧಾರಣ ಮತ್ತು ಶಿವದೀಕ್ಷೆ' ಶ್ರೀ. ಬಿ. ಶಿವಮೂರ್ತಿಶಾಸ್ತ್ರಿ 'ಶರಣಸಾಹಿತ್ಯ' ಅಗಷ್ಟ ೧೯೪೧.

ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ' ಶ್ರೀ. ಬಿ.ಕೆ. ಬಸಪ್ಪ. 'ಶಿವಾನುಭವ' ಜನವರಿ ೧೯೪೧.

'ಶಿವದೀಕ್ಷೆ ಅಥಾತ್ ಲಿಂಗಧಾರಣೆ' ಶ್ರೀ. ಬ.ಚ. ಪಟ್ಟೇದ. 'ಶಿವಾನುಭವ' ಮೇ–ಜೂನ್ ೧೯೪೧.

'ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ' ಶ್ರೀ. ಬ.ಚ. ಪಟ್ಟೇದ. 'ಶಿವಾನುಭವ' ಜುಲೈ–ಅಗಷ್ಟ ೧೯೪೧.

'ಧಾರಣದೀಕ್ಷೆ' ಶ್ರೀ. ಗುರುಮೂರ್ತಿ ದೇವರು. 'ಶಿವಾನುಭವ ಸೆಪ್ಟಂಬರ್ ೧೯೪೧.

'ಶಿವದೀಕ್ಷೆ ಅರ್ಥಾತ್ ಲಿಂಗಧಾರಣ' ಶ್ರೀ. ಜಿ.ಕೆ. ಬಸಪ್ಪ 'ಶಿವಾನುಭವ' ಸೆಪ್ಟಂಬರ್ ೧೯೪೧.

'ಲಿಂಗಧಾರಣ ಅರ್ಥಾತ್ ಶಿವದೀಕ್ಷೆ' ಶ್ರೀ. ಎನ್, ರಾಚೋಟಯ್ಯ 'ಶಿವಾನುಭವ' ಸೆಪ್ಟಂಬರ್ ೧೯೪೧.

'ಲಿಂಗಧಾರಣ ಅರ್ಥಾತ್ ಶಿವದೀಕ್ಷೆ' ಶ್ರೀ. ಗುರುಮೂರ್ತಿ ದೇವರು. 'ಶಿವಾನುಭವ' ನವೆಂಬರ್ ೧೯೪೧.

'ಲಿಂಗಧಾರಣ' ಶ್ರೀ. ಭಸ್ಮಾಂಗ ದೇವರು. 'ಶಿವಾನಂಭವ' ಡಿಸೆಂಬರ್ ೧೯೪೧.

'ಧಾರಣದೀಕ್ಷೆ' ಶ್ರೀ. ಗುರುಮೂರ್ತಿ ದೇವರು. 'ಶಿವಾನುಭವ. ಫೆಬ್ರವರಿ ೧೯೪೧.

(ಇತ್ಯಾದಿಯಾಗಿ ಕೆಲವು ಲೇಖನಗಳು 'ಶರಣ ಸಾಹಿತ್ಯ' ಮತ್ತು 'ಶಿವಾನುಭವ' ದಲ್ಲಿ ಪ್ರಕಟ ವಾಗಿವೆ.)

ದೀಕ್ಷೆಯ ಬಗೆಗೆ ಧರ್ಮಶಾಸ್ತ್ರಗಳ ಅಭಿಪ್ರಾಯವನ್ನು ಅರಿಯೋಣ.

"ಗರ್ಭಾಷ್ಟಮೇ ಕೃತಾ ದೀಕ್ಷಾ ಮುಖ್ಯಾ ಸಾ ಷೋಡಶಾವಧಿ ।
ಗೌಣಾ ತದೂರ್ಧ್ವಮಧಮಾ ವೀರಶೈವಾನುಯಾಯಿನಾಂ"[13] ॥

ಎಂಬುದಾಗಿ ವೀರಶೈವ ಸದಾಚಾರ ಸಂಗ್ರಹವು ಶಿವಾಗಮಂಗಳ ಪ್ರಮಾಣವನ್ನನುಸರಿಸಿ, ವೀರಶೈವರಿಗೆ ದೀಕ್ಷೆಯನ್ನು ಎಂಟನೆಯ ವರ್ಷದಲ್ಲಿ ಮಾಡುವುದು ಉತ್ತಮವೆಂದೂ, ಎಂಟರ ನಂತರ ಹದಿನಾರುವರ್ಷಗಳವರೆಗೆ ಮಾಡುವುದು ಮಧ್ಯಮವೆಂದೂ, ಅನಂತರ ಮಾಡುವುದು ಅಧಮವೆಂದೂ ತಿಳಿಸಿದೆ. ಅಂತೆಯೇ ಶ್ರೀಪತಿ ಪಂಡಿತರು

"ಗರ್ಭಾಷ್ಟಮವರ್ಷಪ್ರಯುಕ್ತಶಿವದೀಕ್ಷಾಸಂಸ್ಕಾರ........'[14]

ಎಂಟನೆಯ ವರ್ಷದಲ್ಲಿ ಮಾಡಬೇಕೆಂದು "ಶ್ರೀಕರ ಭಾಷ್ಯ" ದಲ್ಲಿ ಹೇಳಿದ್ದಾರೆ.

"ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ ।
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ"[15] ॥

ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದೆ. ಭಕ್ತಿಪೂರ್ವಕವಾಗಿ ಆಗ ತಾನೇ ಜನಿಸಿದ ಮಗುವು ಪ್ರಾರ್ಥಿಸಲಾರದು. ಸುಮಾರು ಕೆಲವು ವರ್ಷಗಳಾದರೂ ಆಗಬೇಕು. "ಪಣತೆಯೂ ಇದೆ, ಬತ್ತಿಯೂ ಇದೆ. ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ ? ಗುರುವಿದಾನೆ, ಲಿಂಗವಿದೆ, ಶಿಷ್ಯನ ಸುಜ್ಞಾನವಂಕುರಿಸದನ್ನಕ್ಕರ ಭಕ್ತಿ ಎಲ್ಲಿಯದೋ ?........ ಗುಹೇಶ್ವರಾ"[16] ಮಹಾಶಿವಯೋಗಿ ಅಲ್ಲಮಪ್ರಭುವು ದೀಕ್ಷೆ ಮಾಡಬೇಕಾದರೆ 'ಭಕ್ತಿ'ಯ ಅವಶ್ಯಕತೆಯನ್ನು ಹೇಳಿದ್ದಾರೆ. ಈ ಎಲ್ಲ ಕಾರಣಗಳಿಂದ ಲಿಂಗಧಾರಣವನ್ನು ಶಿಶುವು ಜನಿಸಿದನಂತರ ಜಾತಕರ್ಮದೊಡನೆಯೂ, ಶಿವದೀಕ್ಷೆಯನ್ನು ಎಂಟನೆಯ ವರ್ಷದಲ್ಲಿಯೂ ಮಾಡುವುದು ಸೂಕ್ತವಾದುದು.

"ವೀರಶೈವರಲ್ಲಿ ಶಿಶುವು ಜನಿಸಿದ ಕೂಡಲೇ ಲಿಂಗಧಾರಣೆಯು ಮಾಡಲ್ಪಡುತ್ತದೆ ಮತ್ತು ಗರ್ಭಾವಸ್ಥೆಯ ಎಂಟನೇ ತಿಂಗಳಲ್ಲಿ ಸಹ ಈ ವಿಧಿಯು ಒಮ್ಮೊಮ್ಮೆ ನೆರವೇರಿಸಲ್ಪಡುವುದುಂಟು. ಆದರೆ ಈ ಸ್ಥಿತಿಯಲ್ಲಿ ಆ ಚಿಹ್ನದ ತಿಳುವಳಿಕೆಯು ಆ ಶಿಶುವಿಗೆ ಆಗುವುದು ಅಶಕ್ಯವು. ಮುಂದೆ ಆ ಶಿಶುವು ದೊಡ್ಡದಾಗಿ ತಿಳುವಳಿಕೆಯು ಉತ್ಪನ್ನವಾಗಹತ್ತಿದ ಬಳಿಕ ದೀಕ್ಷೆಯು ಮಾಡಲ್ಪಡುವುದು. ಬಾಲಕನಿಗೆ ಜಗತ್ತಿನ ಸಾಮಾನ್ಯಜ್ಞಾನವು ೮ ನೇ ವರ್ಷದಲ್ಲಿ ಪ್ರಾರಂಭವಾಗಿ ೧೬ ವರ್ಷಗಳವರೆಗೆ ಹೆಚ್ಚುತ್ತ ಹೋಗುತ್ತದೆ. ಈ ಕಾಲವೇ ಮನುಷ್ಯನ ಮಹತ್ವದ ಕಾಲವು. ಆಗ ಉಂಟಾದ

---

13 "ವೀರಶೈವ ಸದಾಚಾರ ಸಂಗ್ರಹ." ಪು. ೯೯. ಶ್ಲೋ. ೨.

14 "ಶ್ರೀಕರ ಭಾಷ್ಯ" (ಜಿಜ್ಞಾಸಾಧಿಕರಣ) ಪು. ೩.

15 "ಸಿದ್ಧಾಂತ ಶಿಖಾಮಣಿ" ಗುರುಕಾರುಣ್ಯಸ್ಥಳ. ಶ್ಲೋ. ೧೦.

16 "ಅಲ್ಲಮನ ವಚನ ಚಂದ್ರಿಕೆ" ಸಂ. ಶ್ರೀ. ಎಲ್. ಬಸವರಾಜು. ಪು. ೧೯.

ಸ್ವಭಾವವು ಆಮರಣ ಉಳಿಯುವುದುಂಟು. ಈ ಅವಧಿಯಲ್ಲಿಯೇ ವಿಶೇಷತರದ ವಿಧಿಗಳಿಂದ ದೀಕ್ಷೆಯು ಶಿಷ್ಯನಿಗೆ ಜರುಗಿಸಲ್ಪಡುವುದು.''[17] ಎಂಬುದಾಗಿ ಡಾ. ಫ. ಗು. ಹಳಕಟ್ಟಿ ಅವರು ಬರೆದಿದ್ದಾರೆ.

ಲಿಂಗಧಾರಣ, ನಾಮಕರಣ ಮೊದಲಾದ ಕೆಲವು ಸಂಸ್ಕಾರಗಳನ್ನು ಹೊಂದಿ, ಲಿಂಗಭೋಗೋಪಭೋಗಿಗಳಾದ ಶರಣರ ಸಮೂಹದಲ್ಲಿ ಕ್ರಮಕ್ರಮವಾಗಿ ಪೂರ್ಣ ಚಂದ್ರನಂತೆ ವೃದ್ಧಿಹೊಂದುತ್ತಿರುವ ಮಗುವಿಗೆ, ವಿದ್ಯಾಭ್ಯಾಸ ಪ್ರಾರಂಭವಾದ ಕೇವಲ ಒಂದೆರಡು ವರ್ಷಗಳಲ್ಲಿ ಸನ್ನಿವೇಶ ಹಾಗೂ ಸಂಸರ್ಗ ಮಹಿಮೆಯಿಂದ ಹಿರಿಯರಂತೆ ತಾನೂ ಸಹ ಲಿಂಗಾರ್ಚನೆ ಮಾಡಬೇಕೆಂಬ ಆಸಕ್ತಿ ಅಂಕುರಿಸುವುದು ನೈಸರ್ಗಿಕವಾದುದು. ''ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ''[18] ಎಂಬ ಗೀತೆಯ ಉಕ್ತಿಯಂತೆ, ಹಿರಿಯರು ಮತ್ತು ಖ್ಯಾತಿವೆತ್ತವರಂತೆ ಆಚರಿಸುವುದು ಸರ್ವರಿಗೂ ಸಹಜವಾದುದಷ್ಟೆ! ''ಸಂಸ್ಕಾರಾಃ ಪ್ರಾಕ್ತನಾ ಇವ''[19] ಪೂರ್ವಜನ್ಮದ ಸುಕೃತ ಹಾಗೂ ಶರಣರ ಸಹವಾಸದಿಂದ ಮಗುವು ಕೇವಲ ಎಂಟನೆಯ ವರ್ಷದಲ್ಲಿಯೇ ಲಿಂಗಾರ್ಚನೆ ಮಾಡಬೇಕೆಂದು ಹಂಬಲಿಸಿ ಹಂಬಲಿಸಿ ಶ್ರೀಗುರುವಿಗೆ ಶರಣುಹೋಗುವುದು. ''ದೀಕ್ಷಾ ಮತ್ತು ಉಪನಯನ ಸಂಸ್ಕಾರಗಳಲ್ಲಿ ವರ್ಷ ಇತ್ಯಾದಿ ಕೆಲವು ಅಂಶಗಳು ಸಮಾನವಾಗಿ ಕಂಡುಬಂದರೂ ಅವುಗಳನ್ನು ಮಾಡುವ ವಿಧಾನ, ಸಂಕಲ್ಪ ಮತ್ತು ಉದ್ದೇಶಗಳಲ್ಲಿ ಮಹದಂತರವಿದೆ.''[20] ಎಂದು ಶ್ರೀ, ಶಿ. ಪುರಾಣಿಕ ಬುದ್ಧಯ್ಯಸ್ವಾಮಿಗಳು ಬರೆದಿರುವುದು ಸೂಕ್ತವಾಗಿದೆಯೆಂದು ನಿಷ್ಪಕ್ಷಪಾತ ರೀತಿಯಿಂದ ತುಲನಾತ್ಮಕವಾಗಿ ವಿಮರ್ಶಿಸುವವರಿಗೆ ಹೊಳೆಯದಿರದು.

ಜನ್ಮತಃ ವೀರಶೈವನಾಗಲಿ ಅಥವಾ ಉದಾತ್ತ ತತ್ತ್ವವನ್ನೊಳಗೊಂಡ ವೀರಶೈವ ಧರ್ಮದ ಮಹತ್ವವರಿತು ಇದನ್ನು ಸ್ವೀಕರಿಸಬೇಕೆಂದು, ಅಪರಿಮಿತ ಆಸಕ್ತಿ ಮತ್ತು ಉತ್ಕಟೇಚ್ಛೆಯಿಂದ ಆಗಮಿಸುವ ವೀರಶೈವೇತರ ವ್ಯಕ್ತಿಯಾಗಲಿ ಲಿಂಗಾಂಗಸಾಮರಸ್ಯವನ್ನು ಹೊಂದಬೇಕಾದರೆ ಶಿವದೀಕ್ಷೆಯೇ ಮೂಲಕಾರಣ. ಅಂತಹ ಪರಮಪವಿತ್ರ ಶಿವದೀಕ್ಷೆಯನ್ನು ಪಡೆಯಬೇಕಾದರೆ, ಪರಮಗುರುವನ್ನು ಸದ್ಗತಿಗಾಗಿ ಶರಣು ಹೋಗಲೇಬೇಕು.

ಅರಿಷಡ್ವರ್ಗಗಳ ಉಪಟಳವನ್ನೂ ಮರ್ಕಟನಂತೆ ಅತ್ತ ಇತ್ತ ಲಂಘಿಸುವ ಮನಸ್ಸನ್ನೂ ಹತೋಟಿಗೆ ತರಲಾಗದೆ ತನ್ನ ಅಂತರಂಗದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನು ಶ್ರೀಗುರುವಿಗೆ ನಿವೇದಿಸುವ ಪರಿ, ಜ್ಯೋತಿರ್ಮಯ ಶಾಂಭವ ದೀಕ್ಷಾಬೋಧೆಯಲ್ಲಿ ಬಹು ಸುಂದರವಾಗಿ ಚಿತ್ರಿತವಾಗಿದೆ.

---

17 ''ಶಿವಾನುಭವ'' ಡಾ. ಫ. ಗು. ಹಳಕಟ್ಟಿ. ನವೆಂಬರ್. ೧೯೨೬.

18 ''ಗೀತಾ'' ಅ. ೩. ಶ್ಲೋ. ೨೧.

19 ''ರಘುವಂಶ'' ಸ. ೧. ಶ್ಲೋ. ೨೦

10 ''ಲಿಂಗಾಯತ ಸಾಹಿತ್ಯ ಸಮಿತಿ ಪತ್ರಿಕೆ'' ಸ. ೩. ಪು. ೨೬. ೧೯೪೫.

"ಕಾಮವೆಂಬ ತಸ್ಕರನು ಹೊಕ್ಕು ನಿಜಜ್ಞಾನವೆಂಬ ರತ್ನವನಪಹರಿಸಿ ಕೊಂಡೊಯ್ದನು ದೇವಾ ! ಕ್ರೋಧವೆಂಬ ವ್ಯಾಘ್ರನು ಹೊಕ್ಕು ನಿಜಸ್ವರೂಪವೆಂಬ ಕಾಮಧೇನುವ ಕಡಿದು ಕೆಡಹಿತ್ತು ದೇವಾ ! ಲೋಭ ಎಂಬ ಕಪಿ ಹೊಕ್ಕು ಶಿವಸತ್ಕ್ರಿಯೆ ಎಂಬ ಹಣ್ಣನು ನುಂಗಿತ್ತು ದೇವಾ ! ಮೋಹವೆಂಬ ಮಳೆಹೊಯಿದು ಶಿವಾಚಾರವೆಂಬ ಅರಿವು ತೇಲಿಹೋಯಿತ್ತು ದೇವಾ ! ಮದವೆಂಬ ಆನೆ ಹೊಕ್ಕು ನಿಶ್ಚಿಂತ ನಿರ್ಮಲತ್ವವೆಂಬ ತಾವರೆಯ ಕೊಳನ ಕಳವಳವ ಮಾಡಿತ್ತು ದೇವಾ ! ಮತ್ಸರವೆಂಬ ಕೋಪಕಾಲಾನಲ ಹೊಕ್ಕು ಶಾಂತಿ ಎಂಬ ಸಮುದ್ರವು ಬತ್ತಿಹೋಯಿತ್ತು ದೇವಾ ! ಮನೋ (ಮದನ) ವಿಕಾರವೆಂಬ ಚಂಡಮಾರುತ ಹೊಕ್ಕು ಸತ್ಯ, ಶೌಚ, ಕ್ಷಮೆ, ದಮೆ, ಶಾಂತಿ, ದಯಾ, ದಾಕ್ಷಿಣ್ಯ, ಬ್ರಹ್ಮಚರ್ಯ, ಸತ್ಕೃತ್ಯವೆಂಬ ದೀಪಗಳು ಮುಗ್ಗಿ (ಮಗ್ಗಿ) ಹೋದವು ದೇವಾ ! ರಾಗ ದ್ವೇಷವೆಂಬ ಜೇನ ನೊಣವು ಕೂಡಿಕೊಂಡು, ಎನ್ನ ಜೀವಹಂಸನ ಬಾಧೆಗೊಳಿಸಲು ತಾಳಲಾಪೆನೆ ? ....ಆರಂ ಸ್ವಾಮೀ ? ನಾನು ಯಾರು ? .... ನಿಮ್ಮ ಪಾದಪದ್ಮಂಗಳೀಗೆನಗೆ ದಿಕ್ಕೆಂದು ಬಂದೆನು, ಎನ್ನ ಕಾಯ್ದು ರಕ್ಷಿಸಯ್ಯಾ ಎಂದು ನಮಸ್ಕಾರಮಾಡಲು, ಆಗ ಶ್ರೀಗುರುಸ್ವಾಮಿಯು ದಯಾದೃಷ್ಟಿಯಲ್ಲಿ ನೋಡಿ, "ನಿನ್ನ ಅಂತರಂಗದ ಸಂಕಲ್ಪ ವಿಕಲ್ಪಂಗಳ ಕೆಡಿಸಿ, ನಿನಗೆ ಮೋಕ್ಷರಾಜ್ಯದ ಪಟ್ಟವಗಟ್ಟಿ ಆಳಿಸುವೆನು ನಿನಗೆ ಭಯಬೇಡ"[21] ಎಂದು ಅಭಯವಿತ್ತನು ಗುಹೇಶ್ವರ ಲಿಂಗದಲ್ಲಿ.

ಗುರುವಿನ ಗರಿಮೆ ಹಾಗೂ ಹಿರಿಮೆಯನ್ನು ಪ್ರಾಯಶಃ ಎಲ್ಲ ಧರ್ಮದವರೂ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಶೈವಾಗಮಗಳಂ "ನ ಗುರೋರಧಿಕಂ" ಗುರುವಿಗಿಂತಧಿಕವಾದುದು ಆವುದೂ ಇಲ್ಲ ಎಂಬುದಾಗಿ ಘೋಷಿಸಿವೆ.

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ[22]

ಮಾನವರು ಕಷ್ಟ ಪರಿಹಾರ ಹಾಗೂ ಪುಣ್ಯಪ್ರಾಪ್ತಿ ಈ ಅಭಿಲಾಷೆಯಿಂದ ಯಾತ್ರೆಗೆ ಹೋಗುವರಷ್ಟೆ ! ಚಂದ್ರಜ್ಞಾನಾಗಮವು ಯಾತ್ರೆಯನ್ನು ಗುರುಯಾತ್ರೆ, ದೇವ ಯಾತ್ರೆ, ತೀರ್ಥಯಾತ್ರೆಗಳೆಂದು ಮೂರು ವಿಭಾಗಮಾಡಿ, ಈ ಯಾತ್ರೆಗಳಲ್ಲಿ ಗುರು ಯಾತ್ರೆಯೇ ಹೆಚ್ಚು ಫಲದಾಯಕವಾದುದೆಂದು ಹೇಳುತ್ತದೆ.

ವಿಶ್ವವಿಭೂತಿ ಶ್ರೀ ಬಸವಣ್ಣನವರು

"ಮಡಿಕೆಯ ಮಾಡುವರೆ ಮಣ್ಣೇ ಮೊದಲು
ತೊಡಿಗೆಯ ಮಾಡುವರೆ ಹೊನ್ನೇ ಮೊದಲು

---

21 "ಜ್ಯೋತಿರ್ಮಯ ಶಾಂಭವ ದೀಕ್ಷಾ ಬೋಧೆ" ಪ್ರಕಾಶಕ. ಶ್ರೀ ಚೆನ್ನಮಲ್ಲಿಕಾರ್ಜುನ. ಪು. ೧೨–೧೩.

22 ಚಂದ್ರಜ್ಞಾನಾಗಮ. ಕ್ರಿಯಾಪಾದ. ಪ. ೩ ಶ್ಲೋ. ೨೮.

ಶಿವಪಥವನರಿವರೆ ಗುರುಪಥವೇ ಮೊದಲು"[23]

ಎಂಬುದಾಗಿ ಹೇಳಿದ್ದಾರೆ. ಮಹಾಶಿವಯೋಗಿ ಅಲ್ಲಮಪ್ರಭುವು "ಕಂಡುದನೆ ಕಂಡಂ ಗುರುಪಾದವ ಹಿಡಿದಲ್ಲಿ ಕಾಣದುದ ಕಾಣಬಹುದು ಗುಹೇಶ್ವರ"[24]

ಎಂದು ಮಾರ್ಮಿಕವಾಗಿ ಅವ್ಯಕ್ತನಾದ ಆ ಪರಮಾತ್ಮನನು ಕಾಂಬುದಕೆ ಪ್ರತ್ಯಕ್ಷ ಕಾಣುವ ಶ್ರೀಗುರುಪಾದವೇ ಗತಿ ಎಂದು ಹೇಳಿರುವರು.

ಬೆಳ್ಳುಳ್ಳಿ ಹೊಡೆದಿಹರೆ ಹೋಳಪ್ಪ ತೆರನಂತೆ
ಒಳ್ಳೆ ಸದ್ಗುರುವಿನುಪದೇಶದಿಂ
ಪಾಪ ಹೊಳ್ಳಿ ಬೀಳುವುದಂ ಸರ್ವಜ್ಞ[25]

ಎಂಬುದಾಗಿ ಸರ್ವಜ್ಞನೂ,

"........ಗುರುವಿಂದುನ್ನತ ಸೇವ್ಯನೇ ಹರಹರಾ ಶ್ರೀಚೆನ್ನಸೋಮೇಶ್ವರಾ"[26]

ಎಂಬುದಾಗಿ ಸೋಮೇಶ್ವರ ಶತಕ ರಚಿಸಿದ ಕವಿಯು ಶ್ರೀಗುರುವಿನ ಶ್ರೇಷ್ಠತೆಯನ್ನು ಬಣ್ಣಿಸಿರುವನು.

ಗುರು ವಚನದಿಂದಲ್ಲದೆ ಭವಪಾಶ ಹರಿಯದು
ಗುರು ವಚನದಿಂದಲ್ಲದೆ ಜಾತಿ ಭೇದ ಮಾಣದು
ಗುರು ವಚನದಿಂದಲ್ಲದೆ ಸೂತಕ ಪಾತಕಂಗಳು ಕೆಡದಿಹವು
ಗುರು ವಚನದಿಂದಲ್ಲದೆ ಅಂಗ ಮನ ಪ್ರಾಣಂಗಳು ಶುದ್ಧವಾಗಲರಿಯವು
ಗುರು ವಚನದಿಂದಲ್ಲದೆ ಲಿಂಗಕ್ಕೆ ಕಳೆ ವೇಧಿಸದು
ಗುರು ವಚನದಿಂದಲ್ಲದೆ ಸದ್ಭಕ್ತಿನೆಲೆಗೊಳ್ಳದು
ಗುರು ವಚನದಿಂದಲ್ಲದೆ ನಿಜಮುಕ್ತಿ ಕಾಣಬಾರದು
ಇದು ಕಾರಣ ಗುರುಮುಟ್ಟಿ ಗುರುವಾದ ಪರಮ ಶರಣರ ಶ್ರೀ ಚರಣಕ್ಕೆ
ಶರಣು ಶರಣೆಂಬೆನಯ್ಯ ಅಖಂಡೇಶ್ವರಾ[27]

ಈ ರೀತಿಯಾಗಿ ಶ್ರೀ ಗುರುವಿಗೆ ವೀರಶೈವ ಧರ್ಮದಲ್ಲಿ ಕೊಟ್ಟಿರುವಷ್ಟು ಘನತೆ ಪ್ರಾಶಸ್ತ್ಯ ಹಾಗೂ ಗೌರವಗಳನ್ನು ಬಹುಶಃ ಮತ್ತಾವ ಧರ್ಮದಲ್ಲಿಯೂ ಕೊಟ್ಟಿರಲಾರರು. ಆದುದರಿಂದ ಗುರುಗಳಾದವರು ನುಡಿಗೆ ನಿಲುಕದ ಮಹೋನ್ನತ ಗೌರವಕ್ಕೆ ಪಾತ್ರರಾಗಲು ಸುಜ್ಞಾನ, ಸತ್ಕ್ರಿಯೆ, ಸದಾಚಾರಗಳಿಂದುಪೇತರಾಗಿ, ಶಿವಾನುಭಾವ

---

23 "ಬಸವಣ್ಣನವರ ಷಟ್‌ಸ್ಥಳದ ವಚನಗಳು' ಸಂ. ಪ್ರೊ. ಬಸವನಾಳ. ಪು. ೧೮.

24 "ಅಲ್ಲಮನ ವಚನ ಚಂದ್ರಿಕೆ" ಸಂ. ಪ್ರೊ. ಎಲ್. ಬಸವರಾಜು. ಪು. ೧೩.

25 "ಸರ್ವಜ್ಞ ವಚನಗಳು" ಸಂ. ಶ್ರೀ ಉತ್ತಂಗಿ ಚನ್ನಪ್ಪ. ಪು. ೯.

26 "ಶ್ರೀ ಸೋಮೇಶ್ವರ ಶತಕ" ಶ್ಲೋ. ೧೩.

27 "ಅಖಂಡೇಶ್ವರ ವಚನಗಳು" ಪು. ೧೫. ಪ್ರಕಾಶಕರು. ಶ್ರೀ ಶ್ರೀ. ಮೃತ್ಯುಂಜಯ ಸ್ವಾಮಿಗಳು. ಧಾರವಾಡ.

ಸಂಪನ್ನರಾಗಿ ಮರೆಹೊಕ್ಕ ಶಿಷ್ಯರಿಗೆ ಕಾರುಣ್ಯದಿಂದಭಯವಿತ್ತು ಲಿಂಗಾಂಗಸಾಮರಸ್ಯ ವನ್ನರುಹಿ ಅವರನ್ನು ಪರಿಪೂರ್ಣದೆಡೆಗೊಯ್ಯುವ ಮಹಾಮಹಿಮರಾಗಬೇಕು. ಅಂತಹ ಯೋಗ್ಯತೆ ಪಡೆಯದಿದ್ದರೆ ಅಥವಾ ಆ ಪರಮ ಗುರಿಯನ್ನು ಮುಟ್ಟಲು ತ್ರಿಕರಣಪೂರ್ವಕವಾಗಿ ಶ್ರಮಿಸದಿದ್ದರೆ ಅವರು ಅಪ್ರಿಯವಾದರೂ ಸತ್ಯವನ್ನು ಘೋಷಿಸಲು ಅಳುಕದ ಶರಣರ ದಿಟ್ಟನುಡಿಯಿಂದ ಅತೀತರಾಗಲಾರರು.[28]

> ''ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಲೇನಪ್ಪು ದೆಲವೋ ?
> ಅಂಧಕನ ಕೈಯ್ಯ ಅಂಧಕ ಹಿಡಿದಂತೆ, ಮುಂದೇನಪ್ಪುದು ಹೇಳಲೋ ಮರುಳೇ........''-[29]

ಆದುದರಿಂದ ಇಂತಹ ಕಟುನುಡಿಗಳಿಗೆ ಭಾಗಿಗಳಾಗದಿರಲು ಶ್ರೀ ಗುರುವರ್ಯರು ನಿಜ ವನರಿತ ಮಹಾವಿಭೂತಿಗಳಾಗಬೇಕು.

ಶಿಷ್ಯನೂ ಸಹ ಅಂತರಂಗ ಬಹಿರಂಗಗಳ ಶುದ್ಧಿಯನ್ನು ಹೊಂದಿದವನಾಗಿರಬೇಕು.

> ''ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ, ಮುನಿಯಬೇಡ,
> ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ,
> ಇದೇ ಅಂತರಂಗದ ಶುದ್ಧಿ ಇದೇ ಬಹಿರಂಗದ ಶುದ್ಧಿ
> ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ''[30]

ಎಂಬುದಾಗಿ ಜಗದ್ವಂದ್ಯ ಬಸವಣ್ಣನವರು, ಅನುಷ್ಠಾನಯೋಗ್ಯವಾದ ಸೂಳ್ನುಡಿಯಂ ಸರ್ವರಿಗೂ ತಿಳಿಯಲೆಂಬ ಸದುದ್ದೇಶದಿಂದ ಸುಲಲಿತ ಕನ್ನಡದಲ್ಲಿ ಸರಳವಾಗಿ ಹೇಳಿದ್ದಾರೆ.

> ''ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ
> ಶುದ್ಧಾಂತಃ ಕರಣೋ ದೇಹೀ ಪಿಂಡಶಬ್ದೇನ ಗೀಯತೇ''[31]

ಅನೇಕ ಜನ್ಮಗಳ ಪುಣ್ಯಸಂಚಯದಿಂದ ಪಾಪರಾಶಿಯು ಸಂಪೂರ್ಣವಾಗಿ ನಶಿಸಿ, ಪರಿ ಶುದ್ಧವಾದ ಅಂತಃಕರಣ ಹೊಂದಿದ ಜೀವಿಯು ಶಿವಾದ್ವೈತಸಿದ್ಧಾಂತದ ಪ್ರಕಾರ ''ಪಿಂಡ'' ಎಂಬ ಅಭಿಧಾನದಿಂದ ಕರೆಯಲ್ಪಡುತ್ತಾನೆ. ಆಗ ಆತನಿಗೆ ಶಿವನನ್ನರಿಯ

---

28 ''ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಂ ಅಪ್ರಿಯಂ ।
ಪ್ರಿಯಂ ಚ ನಾನೃತಂ ಬ್ರೂಯಾತ್ ಏಷ ಧರ್ಮಃ ಸನಾತನಃ'' ॥

29 ''ವಚನಶಾಸ್ತ್ರ ಸಾರ'' ಭಾ.೧. ಪೂರ್ವಾರ್ಧ. ಪು. ೮೮.

30 ''ಶ್ರೀ ಬಸವಣ್ಣನವರ ಅಮೃತವಾಣಿ'' ಶ್ರೀ ಅ. ನ. ಕೃಷ್ಣರಾಯ. ಪು. ೧೧೮.

31 ''ಸಿದ್ಧಾಂತ ಶಿಖಾಮಣಿ'' ಪಿಂಡಸ್ಥಲ. ಶ್ಲೋ. ೩೧.

ಬೇಕೆಂಬ ಉತ್ಕಟವಾದ ಇಚ್ಛೆಯು ಉತ್ಪನ್ನವಾಗುವುದು. ಅಂತಹರು ದೀಕ್ಷೆಗೆ ಅರ್ಹರು, ಮಹಾಜ್ಞಾನಿ ಶ್ರೀ ನಿಜಗುಣಶಿವಯೋಗಿಗಳು,

"ಗುರುಭಕ್ತಿ ನಿರಹಮ್ಮು" ನಿರಪೇಕ್ಷೆ ಸ್ಥೈರಣೆ
ಕರಣಾನುಕೂಲತೆ ಪರಿಣಾಮ
ಸುರಸ ಸಂಸ್ಥಿರಬುದ್ಧಿ ಸದ್ಗುಣವಿರಲಾತ ವರಶಿಷ್ಯನೆನಿಸುವ ಲಲಿ
ತಾಂಗಿ ....[32]

ಎಂಬುದಾಗಿ ಶಿಷ್ಯನಿಗಿರಬೇಕಾದ ಗುಣಗಳನ್ನು ಉಲ್ಲೇಖಿಸಿರುವರು. ಆದುದರಿಂದ ಶಿಷ್ಯನು ಶಮದಮಾದಿಯುತನೂ, ಸದ್ಗುಣಿಯೂ, ಸುವಿವೇಕಿಯೂ, ಭಕ್ತಿಯುತನೂ ಮತ್ತೆ ಮೋಕ್ಷಾಪೇಕ್ಷಿಯೂ ಆಗಿರಬೇಕು. ಅಲ್ಲದಿದ್ದರೆ ಗುರುಕರುಣವು ಫಲಿಸಲಾರದು.

ಹಸಿದ ಸೌದೆಯು ತಂದು ಅಶನ ಮಾಡಿದರುಂಟೆ
ವಿಷಯಂಗಳುಳ್ಳ ಮನುಜರಿಗೆ ಗುರುಕರುಣ
ವಶವರ್ತಿಯಹುದೆ ಸರ್ವಜ್ಞ

"ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣಾ ! ಮಣ್ಣಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ ! ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನು ಹೇಗೆ ಸದ್ಭಕ್ತನಹನು ಕೂಡಲಸಂಗಮದೇವಾ"[33] ಕೆಟ್ಟವನು ತನ್ನ ನಡೆಯನ್ನು ಮಾರ್ಪಡಿಸಿಕೊಳ್ಳಬೇಕೆಂದೂ ಅಲ್ಲದಿದ್ದರೆ ಅಂಥಾ ದುರ್ನಡತೆಯುವನಿಗೆ ದುಷ್ಫಲವೆಂದೂ ಭಕ್ತಿಭಾಂಡಾರಿ ಬಸವಣ್ಣನವರು ಹೇಳಿರುವರು.

ಅನೀತಿ, ಅನ್ಯಾಯ, ಅಧಾರ್ಮಿಕತೆ, ಅಶ್ರದ್ಧೆ, ಅಕಲ್ಯಾಣಕಾರಕ ಕೃತಿಗಳು ತಮ್ಮ ಸಮಾಜದವರಲ್ಲೇ ಇರಲಿ ಅಥವಾ ಅನ್ಯಸಮಾಜದವರಲ್ಲೇ ಇರಲಿ, ವಿಶ್ವಕಲ್ಯಾಣ ಕ್ಕೋಸುಗ ತ್ರಿಕರಣಪೂರ್ವಕವಾಗಿ ಶ್ರಮಿಸುತ್ತಿದ್ದ ಶರಣರು ನಿಂದ್ಯವಾದವುಗಳನ್ನು ಜಗತ್ಕಲ್ಯಾಣಕ್ಕೋಸುಗ ಖಂಡಿಸಲು ಹಿಂಜರಿಯುತ್ತಿರಲಿಲ್ಲ.

"The authors of Vacanashastra seem to hate none. It is true they condemn some practices of Brahmanism in strong language; but they do not hesitate to condemn some of the then existing practices of Virashaivas"[34] ಎಂಬುದಾಗಿ—

ಪ್ರಿನ್ಸಿಪಾಲ್ ನಂದೀಮಠರವರು ಬರೆದಿರುವುದು ವಚನಕಾರರ ನಿಷ್ಪಕ್ಷಪಾತ ಮನೋಭಾವನೆ ಹಾಗೂ ನ್ಯಾಯನಿಷ್ಠುರತೆಯನ್ನು ತೋರಿಸುತ್ತದೆ.

———

32 "ಪರಮಾನುಭವ ಬೋಧೆ" ಸಂಧಿ. ೬.

33 "ಶ್ರೀ ಬಸವಬೋಧಾಮೃತ" ಸಂ. ಹರ್ಡೇಕರ್ ಮಂಜಪ್ಪ- ಪು. ೨೫.

34 A Hand—book of Virasaivism. P. 22.
by: Dr. S· C. Nandimath. M. A. Ph.D. (Lond.)

ನೀಲಕಂಠಶಿವಾಚಾರ್ಯರು ದೀಕ್ಷೆಯಲ್ಲಿ ಸಾಧಾರದೀಕ್ಷೆ ಮತ್ತು ನಿರಾಧಾರದೀಕ್ಷೆ ಇತ್ಯಾದಿ ಭೇದಗಳನ್ನು ಹೇಳಿದ್ದಾರೆ.

"ಸೇಯಂ ದೀಕ್ಷಾ ದ್ವಿಧಾ ಭಿನ್ನಾ ಸಾಧಾರಾಧಾರವರ್ಜಿತಾ
ಆಚಾರ್ಯಮಂತರೇಣೈವ ಕ್ರಿಯತೇ ಶಂಕರೇಣ ಯಾ"[35]

ದೀಕ್ಷೆಯು ನಿರಾಧಾರ ದೀಕ್ಷೆ, ಸಾಧಾರ ದೀಕ್ಷೆ ಎಂದು ಎರಡು ವಿಧವಾಗಿರುತ್ತದೆ. ಪರಮೇಶ್ವರನಿಂದಲೇ ಶಿವಶಕ್ತಿಪಾತವಾಗಿ ಬಸವೇಶ್ವರನಿಗೆ ಸಂಗಮೇಶ್ವರನು ಬಂದೆಸಗಿದಂತೆ ಮಾಡಲ್ಪಡುವ ದೀಕ್ಷೆಯು ನಿರಾಧಾರ ದೀಕ್ಷೆಯೆನಿಸಿಕೊಳ್ಳುತ್ತದೆ. ಗುರುಮೂರ್ತಿಯನ್ನಾಶ್ರಯಿಸಿ ತನ್ಮುಖೇನ ಮಂದಶಕ್ತಿ ನಿಪಾತಗೊಂಡು ಪಡೆಯತಕ್ಕುದೇ ಸಾಧಾರದೀಕ್ಷೆ. ಆ ಸಾಧಾರದೀಕ್ಷೆಯು ಸಬೀಜದೀಕ್ಷೆ, ನಿರ್ಬೀಜದೀಕ್ಷೆ, ಎಂದು ಎರಡು ವಿಧ. ಮತ್ತೆ ಸಬೀಜದೀಕ್ಷೆಯಲ್ಲಿ ಶಿವಧರ್ಮಿಣೀದೀಕ್ಷೆ, ಲೋಕಧರ್ಮಿಣೀ ದೀಕ್ಷೆ ಎಂದು ಎರಡು ತೆರ. ನಿರ್ಬೀಜದೀಕ್ಷೆಯಲ್ಲಿ ಸದ್ಯೋನಿರ್ವಾಣದೀಕ್ಷೆ, ಚಿರನಿರ್ವಾಣ ದೀಕ್ಷೆ ಎಂದು ಎರಡು ತೆರನುಂಟು"[36] ಎಂಬುದಾಗಿ ಆಸ್ಥಾನವಿದ್ವಾನ್. ಎನ್. ಆರ್. ಕರಿಬಸವಶಾಸ್ತ್ರಿಗಳು ಭೇದಗಳನ್ನು (ಶ್ರೀ ಶ್ರೀ ಬಸವಶಿವಾಚಾರ್ಯರ ಸಂಸ್ಕೃತ ವಿಧಿಯಂತೆ) ನಿರೂಪಿಸಿದ್ದಾರೆ. ಆದರೆ ವಚನಶಾಸ್ತ್ರದಲ್ಲಿ ದೀಕ್ಷೆಯ ಬಗೆಗೆ ಹಲವು ತೆರನಾದ ಪ್ರಭೇದಗಳನ್ನು ಮಾಡಿರುವುದು ಕಂಡು ಬರುವುದಿಲ್ಲ, ಮತ್ತೆ ಈ ತೆರನಾದ ಬೇದಗಳನ್ನು ವರ್ಣಿಸುವ ಅಗತ್ಯವೂ ಇಲ್ಲ. ಬಸವೇಶ್ವರನಿಗೆ ಈಶ್ವರನೇ ಗುರು ಸಂಗಮೇಶ್ವರನಾಗಿ ಬಂದು ಅನುಗ್ರಹಿಸಿದುದು, ದೀಕ್ಷೆಯಲ್ಲಿ ವಿಭಾಗಗಳನ್ನು ಕೆಲವು ಆಚಾರ್ಯರುಗಳು ಮಾಡುವುದಕ್ಕೆ ಬಹುಶಃ ಕಾರಣವಾಗಿರಬಹುದು. ಸ್ವಮತದಲ್ಲಿ ಸಾಕಷ್ಟು ಶ್ರದ್ಧೆಯಿಲ್ಲದ ಅಥವಾ ಅನ್ಯಮತದವರಂತೆ ಆಚರಿಸಿದರೆ ತಮ್ಮ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯದೊರಕಬಹುದೆಂಬ ಮೂಢನಂಬಿಕೆಯು ಕೆಲವು ಪಂಡಿತರು ದೀಕ್ಷಾ ವಿಧಾನದಲ್ಲಿ ದೀಕ್ಷೆಯ ಅಂಗವಾಗಿ ಹೋಮಗಳನ್ನು ಹೇಳಿರುವುದು ಶೋಚನೀಯವಾದುದು. ಆದರೆ ಹೋಮಗಳಿಗೆ ವಚನಶಾಸ್ತ್ರಗಳಲ್ಲಿ ಮನ್ನಣೆ ಇತ್ತಿರುವಂತೆ ಕಂಡು ಬರುವುದಿಲ್ಲ. ಮತ್ತೆ ಪರಮೇಶ್ವರನಿಂದಲೇ ದೀಕ್ಷೆ ನೆರವೇರಿದರೆ ನಿರಾಧಾರವೆಂದೂ, ಗುರುವು ಮಾಡಿದರೆ ಸಾಧಾರವೆಂದೂ ದೀಕ್ಷೆಯಲ್ಲಿ ಭೇದಗಳನ್ನು ಕಲ್ಪಿಸುವುದರಲ್ಲಿ ಔಚಿತ್ಯವಿಲ್ಲ. ತಾತ್ತ್ವಿಕವಾಗಿ ವಿಮರ್ಶಿಸುವುದಾದರೆ ವೀರಶೈವಧರ್ಮದಲ್ಲಿ ಗುರುವಿಗೆ ಬಹು ಹೆಚ್ಚಿನ ಪ್ರಾಶಸ್ತ್ಯವಿದೆ.

"ಶಿವೇ ರುಷ್ಟೇ ಗುರುಸ್ತ್ರಾತಾ ನ ರುಷ್ಟೇ ನಿಜಸದ್ಗುರೌ ।
ತ್ರಾತಾ ಶಿವಃ ತದೇತಸ್ಮಾತ್ ಗುರುಪೂಜಾರತೋ ಭವೇತ್"[37] ॥

---

35 "ಕ್ರಿಯಾಸಾರ" ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಪ್ರಕಟಿಸಲ್ಪಟ್ಟುದು. ಭಾಗ ೩ ಪು. ೧೨೯.

36 "ಸಟೀಕ ವೀರಶೈವ ದೀಕ್ಷಾವಿಧಿ" ಶ್ರೀ ಎನ್. ಆರ್. ಕರಿಬಸವಶಾಸ್ತ್ರಿ. ಪೀಠಿಕೆ. ಪು. ೨.

37 "ಚಂದ್ರಜ್ಞಾನಾಗಮ" ಪ. ೧. ಶ್ಲೋ. ೮೨.

ಆಗಮಶಾಸ್ತ್ರದ ಈ ಭಾವವನ್ನೇ "ಹರ ಮುನಿದರೆ ಗುರು ಕಾಯ್ವನು, ಗುರು ಮುನಿದರೆ ಹರ ಕಾಯನು" ಎಂದು ವಚನಶಾಸ್ತ್ರದಲ್ಲಿ ಹೇಳಿರುವರು.

"ಗುರು ಮುನಿದರೆ ಹರ ಕಾಯಲರಿಯನೊವ್ಮೆ
ಹರ ಮುನಿದರೆ ಗುರು ಕಾಯ್ವನೆಂಬುದ ಕೇಳಿ"[38]

ಎಂದು ಮೈಲಾರದ ಬಸವಲಿಂಗಶರಣರು ಹಾಡಿದ್ದಾರೆ, ಅಲ್ಲದೆ,

ಗುರುರೇವ ಮಹಾದೇವಃ ಸಾಕ್ಷಾತ್ಸರ್ವಜಗತ್ಪ್ರಭುಃ ।
ಅನ್ಯಥಾ ತಂ ನ ಜಾನೀಯಾತ್ ಪರತತ್ತ್ವಾವಬೋಧಕಂ ॥

....

ಗುರುರೂಪಂ ಸಮಾಶ್ರಿತ್ಯ ಸೋಹಮೇವ ಮಹೇಶ್ವರಿ ॥

....

ತಸ್ಮಾದ್ಭೇದೋ ನ ಕರ್ತವ್ಯೋ ಗುರುಮೂರ್ತೇರ್ಮಮಾಪಿ ಚ ।
ಮತ್ಪ್ರಸಾದಮನಾ ದೇವಿ ಗುರುಮೇವ ಸಮಾಶ್ರಯೇತ್ ॥[39]

ಸೂಕ್ಷ್ಮಾಗಮದಲ್ಲಿ ಮಹೇಶ್ವರನೇ ಗುರುವಿಗೂ ಈಶ್ವರನಿಗೂ ಭೇದಮಾಡಬಾರದೆಂದೂ, ಪರತತ್ತ್ವವೇತ್ತನಾದ ಶ್ರೀಗುರುವನ್ನು ಅನ್ಯಥಾ ಭಾವಿಸಬಾರದೆಂದೂ, ಈಶನ ಅನುಗ್ರಹವನ್ನು ಬಯಸುವವರು ಶ್ರೀಗುರುವನ್ನೇ ಶರಣುಹೋಗಬೇಕೆಂದೂ ತಿಳಿಸಿರುವನು. ಆದುದರಿಂದ ದೀಕ್ಷೆಯಲ್ಲಿ ಸಾಧಾರ ಮೊದಲಾದ ಪ್ರಭೇದಗಳನ್ನು ಕಲ್ಪಿಸುವುದು ಉಚಿತವಲ್ಲ.

ಕೆಲವರು ಸಂಗನ ಬಸವೇಶ್ವರನ ವಚನಗಳನ್ನನುಸರಿಸಿ ದೀಕ್ಷೆ ಇಪ್ಪತ್ತೊಂದು ತೆರನೆಂದು ಹೇಳಿದರೂ,[40] ಸೂಕ್ಷ್ಮವಾಗಿ ಆ ವಚನಗಳನ್ನೇ ಅವಧಾನದಿಂದ ಅವಲೋಕಿಸಿದವರಿಗೆ ದೀಕ್ಷೆ ಒಂದೇ ತೆರನೆಂಬುದು ವ್ಯಕ್ತವಾಗದಿರದು. ಸಂಗಮೇಶ್ವರನ ವಚನವು ದೀಕ್ಷೆಯ ಅಂಗಗಳಾದ ಹಲವಾರು ಕಾರ್ಯಗಳನ್ನು ವಿವರಿಸುತ್ತ ಆಯಾಯ ಕಾರ್ಯಗಳನ್ನು ವರ್ಣಿಸಿ ಕೊನೆಯಲ್ಲಿ (ಆಜ್ಞೋಪದೀಕ್ಷೆ, ಉಪಮಾದೀಕ್ಷೆ...........) ಎಂದು ಹೇಳಿರುವುದು. ಆದರೆ ಅದೇ ಸಂಗನಬಸವೇಶ್ವರ ವಚನದಲ್ಲಿ, "ಅಯ್ಯಾ ವರಕುಮಾರ ದೇಶಿಕೇಂದ್ರನೆ ಕೇಳಾ........ ಎಲೈ ಮಹಾಪ್ರಭುವೇ, ನಿನ್ನ ಅನಾದಿ ಪಟ್ಟಸ್ಥಲ ನಿರಾಭಾರಿ ವೀರಶೈವ ಶರಣನ ನಿಜಾಚರಣೆಯ ನಿಲುಕಡೆಯ ದಯವಿಟ್ಟು ಕರುಣಿಸಬೇಕಯ್ಯ, ಮಹಾಗುರುವೇ ಎಂದು ಬೆಸಗೊಂಡಲ್ಲಿ, ಆಗ ಮಹಾಪ್ರಭುವು ಲಿಂಗಾಂಗಕ್ಕೆ

---

38 'ಶಿವಾನುಭವ ದರ್ಪಣ' ಮೈಲಾರದ ಬಸವಲಿಂಗ ಶರಣರು.
39 'ಸೂಕ್ಷ್ಮಾಗಮ' ಪ. ೫ ಶ್ಲೋ. ೧೦-೧೩,
40 '೨೧ ದೀಕ್ಷೆಗಳು' 'ಶಿವಾನುಭವ' ಡಾ. ಫ. ಗು, ಹಳಕಟ್ಟಿ ನವೆಂಬರ್. ೧೯೨೬.

ಭಿನ್ನವಿಲ್ಲದೆ ಹಸ್ತಮಸ್ತಕ ಸಂಯೋಗಮಾಡಿ ವೇಧಾ, ಮಂತ್ರ, ಕ್ರಿಯಾ ದೀಕ್ಷೆಯನಿತ್ತು, ಇಪ್ಪತ್ತೊಂದು ತೆರದ ವಿಚಾರವನರುಪಿ ....''[41] ಈ ಇಪ್ಪತ್ತೊಂದು ತೆರನಾದ ವಿಚಾರಗಳನ್ನೇ ಕೊನೆಯಲ್ಲಿ ದೀಕ್ಷೆ ಎಂದು ಕರೆದಿದ್ದಾರೆ. ದೀಕ್ಷೆ ಮಾನವನ ತನುತ್ರಯಗಳಿಗೆ ಸಂಬಂಧಿಸುವುದರಿಂದ ದೀಕ್ಷೆಯನ್ನು ವೇಧಾ, ಮಂತ್ರ ಮತ್ತು ಕ್ರಿಯಾ ಎಂದು ಮೂರು ಹೆಸರುಗಳಿಂದ ಕರೆದಿದ್ದಾರೆ.

ಶರಣರು ದೇವರು ಅದೃಶ್ಯನಾಗಿದ್ದರೂ ಸರ್ವತ್ರ ಇಹನೆಂಬುದನ್ನು ಸುಂದರ ಉಪಮೆಗಳೊಡನೆ ವಿವರಿಸಿದ್ದಾರೆ. ''ಶಿಲೆಯೊಳಗಣ ಪಾವಕನಂತೆ'', ''ಬೀಜದೊಳಗಣ ವೃಕ್ಷದಂತೆ'', ''ಮರದೊಳಗಣ ಮಂದಾಗ್ನಿಯಂತೆ'' ''ನೊರೆವಾಲೊಳಗಣ ತುಪ್ಪದಂತೆ'', ''ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತೆ'', ''ಶಶಿಯೊಳಗಣ ರಸದ ರುಚಿಯಂತೆ'', ''ಸಸಿಯೊಳಗಣ ಫಲಪುಷ್ಪರುಚಿಯ ಪರಿಮಳದಂತೆ'' ಸರ್ವಜ್ಞನೂ ಸಹ,

''ಕ್ಷೀರದಿ ಘೃತ ವಿಮಲ ನೀರಿನೊಳು ಶಿಖಿಯಿರ್ದು
ಆರಿಗೂ ತೋರದದರಂತೆ ಎನ್ನೊಳಗೆ
ಸಾರಿಹನು ಶಿವನು ಸರ್ವಜ್ಞ'' ಎಂದು ಹಾಡಿರುವನು.

ಇಂತಹ ಕೇವಲ ಬರಡುಜ್ಞಾನದಿಂದ ಪ್ರಯೋಜನವಿಲ್ಲ. ಅದು ಅನುಭವವೇದ್ಯವಾಗಬೇಕು.[42] ಅಂಗಕರಣಗಳು ಬಯಲಾಗಿ ಲಿಂಗಕಿರಣಗಳಾಗಿ ಪರಿಣಮಿಸಿ ಪರಿಪೂರ್ಣದೆಡೆಗೆ ಸಾಗಿ ನರನು ಹರನಾಗಬೇಕು. ಅರ್ಥಾತ್ ಲಿಂಗಾಂಗಸಾಮರಸ್ಯ ಹೊಂದಬೇಕು. ಅಂತಹ ಅವಸ್ಥೆಗೊಯ್ಯುವ ಮಹತ್ವಸಾಧನವೇ ದೀಕ್ಷೆ.

ದೀಕ್ಷೆಯನ್ನು ಮಾಡುವ ಮುಖ್ಯ ವಿಧಾನ, ಮಹಿಮೆ ಹಾಗೂ ಅದರ ಉಪಯೋಗವನ್ನು ಅರಿಯಲು ಯತ್ನಿಸೋಣ.

ಆಗಮಶಾಸ್ತ್ರಗಳು ಮತ್ತು ಅನುಭಾವಿ ಶರಣರ ಉಕ್ತಿಗಳು ಚಿತ್ಕಳೆಯು ವ್ಯಕ್ತಿಯಲ್ಲಿ ಹೇಗೆ ಇರುತ್ತದೆಂಬುದನ್ನು ತಿಳಿಸುತ್ತವೆ.

ಜ್ವಲತ್ಕಾಲಾನಲಾಭಾಸಾ ತಟಿತ್ಕೋಟಿಸಮಪ್ರಭಾ ।
ತಸ್ಯೋರ್ಧ್ವೇ ತು ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ ॥
ಯಾ ಕಲಾ ಪರಮಾ ಸೂಕ್ಷ್ಮಾ ತತ್ತ್ವಾನಾಂ ಬೋಧಿನೀ ಪರಾ ।
ತಾಂ ಆಕೃಷ್ಯ ಯಥಾನ್ಯಾಯಂ ಲಿಂಗೇ ಸಮುಪವೇಶಯೇತ್ ॥[43]

ಎಂಬುದಾಗಿ ಕಾರಣಾಗಮದಲ್ಲೂ,

---

41 'ಸಂಗನಬಸವೇಶ್ವರ ವಚನಗಳು' ಸಂ. ಡಾ. ಫ. ಗು. ಹಳಕಟ್ಟಿ. ಪು. ೧.

42 ''ಅಥ ಮರ್ತ್ಯೋಽಮೃತೋ ಭವತಿ ಅತ್ರ ಬ್ರಹ್ಮ ಸಮಶ್ನುತೇ'' ಕಠೋಪನಿಷತ್. ಅ, ೨ ವ. ೩. ಶ್ಲೋ. ೧೪.

43 'ಕಾರಣಾಗಮ–ಕ್ರಿಯಾಪಾದ' ಪ. ೧. ಶ್ಲೋ. ೧೨೨-೧೨೩.

ಲಿಂಗಂ ಹಸ್ತೇ ಗೃಹೀತ್ವಾ ತಂ ಭಾವದೃಷ್ಟ್ಯಾ ಚ ದೇಶಿಕಃ ।
ಸಂಸ್ಥಾಪ್ಯ ಲಿಂಗೇ ಶಿಷ್ಯಸ್ಯ ಮಸ್ತಕಸ್ಥಾಂ ಕಲಾಂ ಪರಾಂ ॥
ಲಿಂಗೇ ಪ್ರಾಣಂ ವಿನಿಕ್ಷಿಪ್ಯ ಪ್ರಾಣೇ ಲಿಂಗಂ ಚ ಶಾಂಭವಂ ।
ತಲ್ಲಿಂಗಂ ಸ್ಥಾಪಯೇತ್ ಶಿಷ್ಯೇ ಸಮ್ಯಗ್ಧ್ಯಾತ್ವೈಕಭಾವತಃ ॥[44]

ಎಂಬುದಾಗಿ ಸೂಕ್ಷ್ಮಾಗಮದಲ್ಲೂ,

ಮಂತ್ರಪೂತೇ ಕಲಾಂ ಶೈವೀಂ ಯೋಜಯೇದ್ವಿಧಿನಾ ಗುರುಃ ।
ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್ ॥[45]

ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿಯೂ,

ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ ತದ್ಯದಾತ್ಮವಿದೋ ವಿದುಃ ।
ತತಸ್ತಲ್ಲಿಂಗಮಸ್ಯಾಂಗೇ ಶಿಷ್ಯಸ್ಯಾಮಿತತೇಜಸಃ[46] ॥

ಎಂಬುದಾಗಿ ಶಿವಾನುಭವಸೂತ್ರದಲ್ಲಿಯೂ,

ಅಂತರ ಸಾಕ್ಷಿ ಚಿದ್ಘನ ಪರಾಹ್ವಯಲಿಂಗಮನಾದಿದೇಶಿಕಂ
ಚಿಂತಿಸಿ ತಂದು ಬಾಹ್ಯಕರಣಕ್ಕುಪದೇಶಮನೊಲ್ದು ಮಾಡೆ ಮಂ
ನ್ನೆಂತಿರಂತಿರ್ದುದಂತುಭಯಸಂಗ ಶರೀರದೊಳೈಕ್ಯಮಾಗಿ ವಿ
ಶ್ರಾಂತಿಯನೆಯ್ದಿದಲ್ಲಿ ಬಳಿಕೇನೆನ ಬರ್ಪುದದಂ ಶಿವಾಧವಾ[47]

ಎಂಬುದಾಗಿ ಮಗ್ಗೆಯ ಮಾಯಿದೇವರೂ,

ಪಾವನಾತ್ಮಕ ಸುಪುತ್ರನ ಮಸ್ತಕದೊಳು ಗುರು
ದೇವ ಕರವಾಂತಂ ಸಾಸಿರದಳದ ಚಿತ್‌ಕಳೆಯ
ಭಾವದಿಂ ಮನಮನದಿ ನೇತ್ರನೇತ್ರಂಗಳಿಂ ತೆಗೆದಿಷ್ಟರೂಪುಗೊಳಿಸಿ ।
ತೀವಿ ತಚ್ಛಿಷ್ಯನಂಗದ ಮೇಲೆ ಧರಿಸಿ ಸಂ
ಜೀವ ಷಣ್ಮಂತ್ರ ಲಿಂಗವಿದೆಂದು ತಿಳಂಹೆ ಚಿದ್
ಭಾವ ಕಳೆಯೊಳಗಿಷ್ಟಲಿಂಗವೇ ತಾನಾದ ಲಿಂಗಭಕ್ತನೆ ಶ್ರೇಷ್ಠನು ॥[48]
ಮಸ್ತಕದ ಮೇಲೆ ಹಸ್ತವನಿಟ್ಟು ನಿಜ
ವಸ್ತುವಾ ತೆಗೆದು ಹಸ್ತಪೀಠದೊಳಿತ್ತ

---

44 'ಸೂಕ್ಷ್ಮಾಗಮ. ಕ್ರಿಯಾಪಾದ' ಪ. ೫. ಶ್ಲೋ. ೪೩.
45 'ಸಿದ್ಧಾಂತ ಶಿಖಾಮಣಿ' ಲಿಂಗಧಾರಣಸ್ಥಲ. ಶ್ಲೋ. ೨೩.
46 'ಶಿವಾನುಭವ ಸೂತ್ರ' ಸಂ. ಪಂ. ನಾಗೇಶ ಶಾಸ್ತ್ರಿಗಳು.
47 'ಶಿವಾಧವ ಶತಕ' ಶ್ಲೋ. ೩೭.
48 ಮೈಲಾರದ ಬಸವಲಿಂಗ ಶರಣರ 'ಅಷ್ಟಾವರಣ' ಶ್ಲೋ. ೪.

ಸ್ವಸ್ತಿ ಶ್ರೀಗುರುವೆ ಕೃಪೆಯಾಗು ॥[49]

ಎಂಬುದಾಗಿ ಮೈಲಾರದ ಬಸವಲಿಂಗ ಶರಣರು,
ಈ ರೀತಿಯಾಗಿ ಸರ್ವರೂ ಜೀವನದಲ್ಲಿ ಚಿತ್ಕಳೆಯಿರುವುದನ್ನು ವಿವರಿಸಿದ್ದಾರೆ.

ಕಾರುಣ್ಯನಿಧಿಯಾದ ಪರಮಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು ಆತನಲ್ಲಿ ಶಿವಕಲೆಯನ್ನು ಜಾಗ್ರತಗೊಳಿಸಿ, ಶಿಷ್ಯನ ಕಾರಣ ತನುವಿನಲ್ಲಿ ಭಾವಲಿಂಗವನು ನೆಲೆಗೊಳಿಸುವುದಕ್ಕೆ ವೇಧಾದೀಕ್ಷೆ ಎಂದು ಹೆಸರು.[50]

ಮಂತ್ರಗಳಲ್ಲಿ ಅತ್ಯಂತಶ್ರೇಷ್ಠವೂ ಪರಮಪವಿತ್ರವೂ ಆದ ಪಂಚಾಕ್ಷರೀ ಮಹಾ ಮಂತ್ರವನ್ನು[51] ಶ್ರೀಗುರುವು ಶಿಷ್ಯನಿಗುಪದೇಶಿಸಿ, ಮಾಂಸಪಿಂಡವನ್ನು ಮಂತ್ರಪಿಂಡ ವನ್ನಾಗಿ ಮಾರ್ಪಡಿಸಿ, ಪ್ರಾಣಲಿಂಗವನ್ನು ಸೂಕ್ಷ್ಮತನುವಿನಲ್ಲಿ ನೆಲೆಗೊಳಿಸುವುದಕ್ಕೆ ಮಂತ್ರದೀಕ್ಷೆ[52] ಎಂದು ಹೆಸರು.

ಶಿಷ್ಯನ ಮಸ್ತಕದಲ್ಲಿರುವ ಚಿತ್ಕಲೆಯನ್ನು ಶ್ರೀಗುರುವು ತನ್ನ ಮಹಿಮಾತಿಶಯ ದಿಂದ (ಶಕ್ತಿ ಪಾತದಿಂದ) ಇಷ್ಟಲಿಂಗದ ರೂಪದಲ್ಲಿ ಭಕ್ತನಿಗನುಗ್ರಹಿಸುವುದರಿಂದ ಅದು ಕೇವಲ ಪ್ರತೀಕವಾಗಲಾರದು. ಅದು ತನ್ನಲ್ಲಿಯೇ ನೆಲಸಿದ ತನ್ನ ನಿಜಸ್ವರೂಪವಾದ ನಿಷ್ಕಳ ಪರಶಿವನ ಸಕಲರೂಪವೆಂದೇ ಭಕ್ತನು ಪೂಜಿಸುತ್ತಾನೆ, ಇಷ್ಟಲಿಂಗವನ್ನು ಸ್ಥೂಲತನುವಿಗೆ ಅನುಗ್ರಹಿಸುವುದರಿಂದ ಕ್ರಿಯಾದೀಕ್ಷೆ ಎಂದು ಹೆಸರು.[53]

ವೇಧಾ, ಮಂತ್ರ, ಕ್ರಿಯಾದೀಕ್ಷೆಗಳನ್ನು ಮಗ್ಗೆಯ ಮಾಯಿದೇವರು ಒಂದೇ ಒಂದು ಪದ್ಯದಿಂದ ಸುಂದರವಾಗಿ ವಿವರಿಸಿದ್ದಾರೆ.

ಕಾರಣದೇಹದೀಕ್ಷೆ ಶಿರದೊಳ್ಕರಪದ್ಮವನಿಟ್ಟೊಡಾಯ್ತು ವಿ
ಸ್ತಾರಿತ ಮಂತ್ರಮುಂ ಶ್ರವಣದಲ್ಲಿ ನಿರೂಪಿಸಲಾಯ್ತು ಸೂಕ್ಷ್ಮ ಶಾ
ರೀರ ಪದೈಕದೀಕ್ಷೆ ತದುಪಾಧಿ ಬಹಿಸ್ತನುದೀಕ್ಷೆ ಲಿಂಗಮುಂ
ಸೇರಿಸಿ ಕೊಟ್ಟೊಡಾಯ್ತು ಕರದಲ್ಲಿ ಗುರುಪ್ರವರಂ ಶಿವಾಧವಾ[54]

---

49 'ಮೈಲಾರದ ಬಸವಲಿಂಗ ಶರಣರ ಕೃತಿಗಳು' ಸಂ. ಪ್ರೊ. ಶಿ. ಶಿ ಬಸವನಾಳ. ಪು. ೪೮

50 'ಗುರೋರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ ।
ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ' ॥
"ಸಿದ್ಧಾಂತ ಶಿಖಾಮಣಿ" ಗುರುಕಾರುಣ್ಯಸ್ಥಳ, ಶ್ಲೋ. ೧೩.

51 'ಶಿವಮಂತ್ರ ಮಹಿಮೆ' ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು.

52 'ಗುರುಣೋದೀರಿತಾ ಕರ್ಣೇ ಯಾ ಸಾ ಮಾಂತ್ರೀತಿ ಕಥ್ಯತೇ' ಶಿವಾನುಭವ ಸೂತ್ರ' ಅ ೫ ಶ್ಲೋ, ೪೧.

53 'ಶಿಷ್ಯಪಾಣಿತಲೇ ದತ್ವಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್' ಕಾರಣಾಗಮ. ಕ್ರಿ. ಪ. ೧. ಶ್ಲೋ. ೧೨.

54 'ಶಿವಾಧವ ಶತಕ' ಶ್ಲೋ. ೭೭.

ಸಂಸಾರಕ್ಕೆ ಮಲವು ಹೇತುವಾಗಿದೆ. ಅದು ಆತ್ಮನ ಜ್ಞಾನಶಕ್ತಿಯನ್ನು ಮುಸುಕಿ, ಅಜ್ಞಾನವನ್ನುಂಟುಮಾಡುತ್ತದೆ. ಆಣವಮಲ, ಮಾಯಾ (ಮಾಯೀಯ) ಮಲ ಮತ್ತು ಕಾರ್ಮಿಕಮಲ ಈ ಮೂರೇ ಮಲತ್ರಯಗಳು. ಶಿವನಲ್ಲಿರುವ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳು ಸಂಕೋಚಹೊಂದುತ್ತಾ ತ್ರಿಮಲಗಳ ಸ್ವರೂಪ ವಾಗುವವೆಂದು ಹೇಳಲ್ಪಟ್ಟಿದೆ. ಇವುಗಳಿಂದಾವರಿಸಲ್ಪಟ್ಟ ಶಿವಸ್ವರೂಪವೇ ಸ್ವಾಂಶ ರೂಪವಾದ ಜೀವರೆನಿಸಿಕೊಳ್ಳುವುದು. ಶಿವಶಕ್ತಿಯಲ್ಲಿ ಸಂಕೋಚ ವಿಕಾಸ ಸ್ವರೂಪವು ಅನಾದಿಸಿದ್ಧವು. ಈ ತೆರನಾದ ಘಟನೆಯನ್ನು ಶಿವನ ಲೀಲೆಯೆಂದು ಕರೆಯುವರು.[55]

ಆಣವಮಲ : ನಾನು ಸರ್ವಾತ್ಮಕನು, ಪರಿಪೂರ್ಣನು ಎಂಬ ವೃತ್ತಿಗೆ ಕಾರಣ ವಾಗಿ ಪರಶಿವನ ಸಂಕಲ್ಪರೂಪವಾದ ಯಾವ ಇಚ್ಛಾಶಕ್ತಿಯುಂಟೋ ಅದು ಸಂಕೋಚವನ್ನು ಹೊಂದಿ, ಆತ್ಮನ ಸಂಸಾರಕ್ಕೆ ಕಾರಣವಾಗಿ, ಅಜ್ಞಾನಗ್ರಂಥಿಯೆಂದೂ ಅವಿದ್ಯೆಯೆಂದೂ ಕರೆಯಿಸಿಕೊಂಡಿತು. ಇದು ಜೀವನಿಗೆ ಕಾರಣ ಶರೀರದಿಂದ ಮೊದ ಲನೆಯ ಆವರಣವಾಗಿರುವುದು. ಇದು ಆತ್ಮನಿಗೆ ತಾನು ಶಿವನಿಂದ ಭಿನ್ನವೆಂಬ ಬುದ್ಧಿ ಯನ್ನು, ತಾನಲ್ಲದ ಅಣುರೂಪವಾದ ದೇಹಾದಿಗಳು ತಾನೆಂಬ ಬುದ್ಧಿಯನ್ನೂ ಹುಟ್ಟಿಸಿ ಆತ್ಮನನ್ನು ಅಣುರೂಪನನ್ನಾಗಿ ಮಾಡಿತು. ಸಮುದ್ರದಿಂದ ಉದ್ಭವಿಸಿದ ನೊರೆ ತೆರೆ ಗಳು ಸಮುದ್ರದಿಂದ ಭಿನ್ನವಲ್ಲದಿದ್ದರೂ, ಭಿನ್ನಭಾವವನ್ನು ಕಲ್ಪಿಸಿಕೊಳ್ಳುವಂತೆ, ಪರಿ ಪೂರ್ಣ ಅಖಂಡ ವಸ್ತುವಿನ ಸ್ಫುರಣದಿಂದ ಉದ್ಭವಿಸಿದ ವ್ಯಕ್ತಿಯು ತಾನು ಆ ಅಪ್ರಮಾಣ ಅಖಂಡವಸ್ತುವಿಗಿಂತ ಭಿನ್ನ ಹಾಗೂ ಅಲ್ಪ ಎಂಬ ಮಿಥ್ಯಾಕಲ್ಪನೆಯ ದೋಷವೇ ಆಣವಮಲವು.

ಮಾಯಾಮಲ : ಶಿವನ ಜ್ಞಾನಶಕ್ತಿಯು ಸಂಕೋಚವಾಗಿ ಸರ್ವಜ್ಞತೆಗೆ ಬದಲಾಗಿ ಆತ್ಮನಲ್ಲಿ ಕಿಂಚಿದ್‌ಜ್ಞತೆಯನ್ನುಂಟುಮಾಡಿ ಮಾಯಾಮಲವೆನಿಸಿಕೊಂಡಿತು. "ಸರ್ವಂ ಶಿವಮಯಂ ಜಗತ್" 'ಶಿವನ ಚಿಚ್ಛಕ್ತಿಯಿಂದ ಪ್ರಕಟವಾದ ಈ ಜಗವು ಶಿವ ನಿಂದ ಅನ್ಯವಲ್ಲ' ಎಂಬ ಆತ್ಯಂತಿಕ ಜ್ಞಾನ ಅಳವಡದೆ, ಕಿಂಚಿದ್‌ಜ್ಞತೆಯ ದೆಸೆಯಿಂದ ಬಹುಪ್ರಕಾರ ಹಾಗೂ ಬಹುರೂಪಿಯಾಗಿ ತೋರುವ ವೈವಿಧ್ಯಪೂರ್ಣವಾದ ಸೃಷ್ಟಿಯೇ ಸತ್ಯವೆಂದು ಬಗೆದು ಅದರ ನಾಮ, ರೂಪ ಮತ್ತು ಕ್ರಿಯೆಗಳಿಗೆ ಒಳಗಾಗುವಂತೆ ಮಾಡುವುದೇ ಮಾಯಾಮಲವು.

ಕಾರ್ಮಿಕಮಲ : ಶಿವನ ಕ್ರಿಯಾಶಕ್ತಿಯು ಸಂಕುಚಿತವಾಗಿ ಸರ್ವಕರ್ತೃತ್ವಕ್ಕೆ ಬದಲಾಗಿ ಆತ್ಮನಲ್ಲಿ ಕಿಂಚಿತ್‌ಕರ್ತೃತ್ವವನ್ನು ಹೊಂದಿ ಕಾರ್ಮಿಕಮಲವೆನಿಸಿಕೊಂಡಿತು.

---

55 "ಶಿವಾನುಭವಸೂತ್ರ" ಶ್ರೀ ಮಗ್ಗೆಯ ಮಾಯಿದೇವರು. ಸಂ. ಪಂ. ವೈ. ನಾಗೇಶ ಶಾಸ್ತ್ರಿ.

ಬಾರದುದಕ್ಕೆ ಬಸವಳಿದು ಪರಿತಪಿಸಿ ಲಿಂಗಾಣತಿಯಿಂದ ದೊರಕಿದುದನ್ನು ಲಿಂಗ ಭೋಗೋಪಭೋಗಿಯಾಗಿ ಸೇವಿಸದೆ, ಜೀವನಂ ಪುಣ್ಯಪಾಪಗಳನ್ನು ಮಾಡುತ್ತಾ 'ಅಹಂ ಕರ್ತಾ, ಅಹಂ ಭೋಕ್ತಾ' ಎಂಬ ಭಾವನೆಯಿಂದ ಕೂಡಿದವನಾಗುವನು. ಶುಭಾ ಶುಭ ಕರ್ಮಗಳಲ್ಲಿ ಜೀವನನ್ನು ಪ್ರವೃತ್ತಿಗೊಳಿಸುವುದೇ ಕಾರ್ಮಿಕಮಲವು. ಇದು ಸ್ಥೂಲ ಶರೀರರೂಪದಿಂದ ಮೂರನೆಯ ಆವರಣವಾಗಿರುವುದು.[56]

ತನುತ್ರಯಗತಾನಾದಿಮಲತ್ರಯಮಸೌ ಗುರುಃ !
ದೀಕ್ಷಾತ್ರಯೇಣ ಸಂದಹ್ಯ ಲಿಂಗತ್ರಯಮುಪಾದಿಶೇತ್ ॥[57]

ಜೀವನಿಗೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ತನುತ್ರಯಗಳಿರುವುವು. ಈ ತನುತ್ರಯಂಗಳಲ್ಲಿ ಹಿಂದೆ ವಿವರಿಸಿದ ಕಾರ್ಮಿಕ, ಮಾಯಾ ಮತ್ತು ಆಣವಮಲ ಎಂಬ ಮೂಬಗೆಯ ದೋಷಗಳಿರುವುವು. ವೇಧಾದೀಕ್ಷೆಯಿಂದ, ಅಜ್ಞಾನದ ಅಂಧಕಾರವು ತೊಲಗಿ, ಶ್ರೀಗುರುವಿನ ಸ್ಪರ್ಶದಿಂದ ಶಕ್ತಿಪಾತವಾಗಿ ಶಿಷ್ಯನಲ್ಲಿ ಅವರ್ಣನೀಯವಾದ ಧನ್ಯತೆ ತಲೆದೋರಿ, ತಾನು ಶಿವನಿಂದ ಭಿನ್ನನೆಂಬ ಭ್ರಮೆಯು ಬಯಲಾಗಿ, ಆಣವ ಮಲದಿಂದ ಅತೀತನಾಗಿ, ತಾನಂ ಶಿವನಿಂದ ಭಿನ್ನನಲ್ಲ ಎಂಬ ಅರಿವು ಗರಿಗಟ್ಟುವದು. ವೇಧಾದೀಕ್ಷೆಯಿಂದಲೇ ಶಿಷ್ಯನ ಕಾರಣಶರೀರದಲ್ಲಿ ಭಾವಲಿಂಗವು ನೆಲೆಗೊಳಿ ಸಲ್ಪಡುವುದು.

ಮಂತ್ರದೀಕ್ಷೆಯಿಂದ ಲಿಂಗಾಂಗಸಾಮರಸ್ಯಪ್ರತಿಪಾದಕವಾದ ಮಹಾಮಂತ್ರ ಉಪದೇಶಿಸಲ್ಪಟ್ಟು, ಮಾಯಾಮಲವು ನಿವಾರಿಸಲ್ಪಟ್ಟು, ಮಾಂಸಪಿಂಡವು ಮಂತ್ರ ಪಿಂಡವಾಗಿ ಮಾರ್ಪಟ್ಟು, ಸೃಷ್ಟಿಯ ವೈವಿಧ್ಯಪೂರ್ಣ ಬಹುರೂಪತ್ವದ ಜಾಡು ತಿಳಿದು, 'ಸರ್ವಂ ಶಿವಮಯಂ ಜಗತ್' ಎಂಬ ಭಾವನೆ ಬಲಿಯುವದು. ಮಂತ್ರದೀಕ್ಷೆ ಯಿಂದಲೇ ಶಿಷ್ಯನ ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗವು ನೆಲೆಗೊಳಿಸಲ್ಪಡುವುದು. ಕ್ರಿಯಾದೀಕ್ಷೆಯಿಂದ, ಶುಭಾಶುಭಕರ್ಮಗಳಲ್ಲಿ ಅಂಗ (ಜೀವ) ನನ್ನು ಪ್ರವೃತ್ತಿಗೊಳಿ ಸುವ ಕಾರ್ಮಿಕಮಲವು ನಿವಾರಿಸಲ್ಪಟ್ಟು, ಕಾಯಕದಿಂದ ದೊರೆತುದನ್ನು ಲಿಂಗ ಭೋಗೋಪಭೋಗಿಯಾಗಿ ಸೇವಿಸುತ್ತ ಸಾಗುವನು. ಶ್ರೀಗುರುವು ಇಲ್ಲಿ-ಅಲ್ಲಿ ಸಲ್ಲುವ ಸದಾಚಾರ ಸತ್ಕ್ರಿಯೆಗಳನ್ನರುಹಿ, ಶಿಷ್ಯನ ಸ್ಥೂಲತನುವಿಗೆ ಇಷ್ಟಲಿಂಗವನ್ನನಂ ಗ್ರಹಿಸುವನು.

ಒಟ್ಟಿನಲ್ಲಿ, ಶ್ರೀಗುರುವು ವೇಧಾ, ಮಂತ್ರ ಮತ್ತು ಕ್ರಿಯಾದೀಕ್ಷೆಗಳಿಂದ, ಜೀವ (ಅಂಗ) ನನ್ನು ಆಣವ, ಮಾಯಾ ಮತ್ತು ಕಾರ್ಮಿಕ ಎಂಬ ಮಲತ್ರಯಗಳಿಂದ ಮುಕ್ತ

---

56 'ಶಿವಾಧವಶತಕ' ಶ್ಲೋ. ೧೬. ಇಲ್ಲಿ ಶ್ರೀ ಶ್ರೀ ತೋಂಟದ ಸಿದ್ಧಲಿಂಗಶಿವಯೋಗಿಗಳು ಮಲತ್ರಯಗಳನ್ನು ಬೇರೆ ತೆರನಾಗಿಯೂ ಪ್ರತಿಪಾದಿಸಿದ್ದಾರೆ.

57 'ಕಾರಣಾಗಮ' ಕ್ರಿಯಾಪಾದ. ಪ. ೧, ಶ್ಲೋ. ೧೪.

ಗೊಳಿಸಿ. ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸಿ ; ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಎಂಬ ತನುತ್ರಯಗಳಲ್ಲಿ, ಭಾವ, ಪ್ರಾಣ ಮತ್ತು ಇಷ್ಟ ಎಂಬ ಲಿಂಗ ತ್ರಯಗಳನ್ನು ನೆಲೆಗೊಳಿಸಿ, ಇಲ್ಲಿ-ಅಲ್ಲಿ ಸಲ್ಲುವ ಸದಾಚಾರ ಸತ್ಕ್ರಿಯೆಗಳನ್ನರುಹಿ ಅಂಗಕರಣಗಳನ್ನು ಲಿಂಗಕಿರಣಗಳನ್ನಾಗಿ ಪರಿಣಮಿಸಿ, ಲಿಂಗಾಂಗಸಾಮರಸ್ಯಕ್ಕೊಯ್ಯುವ ಅಘಟಿತಘಟನಾರೀತಿಗೆ ''ದೀಕ್ಷೆ'' ಎಂದು ಕರೆಯುತ್ತೇವೆ.

''ದೀಕ್ಷೆಯ ಪ್ರಯೋಜನ''

ವೀರಶೈವರಿಗೆ ಲಿಂಗಧಾರಣೆ ಎಷ್ಟು ಮುಖ್ಯವೋ ಶಿವದೀಕ್ಷೆಯನ್ನು ಹೊಂದು ವುದೂ ಸಹ ಅಷ್ಟೇ ಮುಖ್ಯ. ಶಿವಾನುಭವಕ್ಕೆ ಸೋಪಾನವಾದ[58] ಶಿವದೀಕ್ಷಾ ಸಂಪನ್ನನಾಗದವನು ವೀರಶೈವನಾಗಲಾರನು.

ಸ್ತ್ರೀ ಮತ್ತು ಪುರುಷ ಸಮಾಜದ ಎರಡು ನೇತ್ರಗಳು. ಅವುಗಳಲ್ಲಿ ಒಂದು ಅಲ್ಪ, ಮತ್ತೊಂದು ಅಧಿಕವೇ? ಎಲ್ಲ ಮಹಾಪುರುಷರಿಗೆ ಜನ್ಮದಾತೆಯಾಗಿ ಸಹನಾ ಶೀಲೆಯಾಗಿ ತ್ಯಾಗಮಯಿಯಾದ ಸ್ತ್ರೀ ನಿಂದ್ಯಳೇ? ನೀಚಳೇ? ಸಂಸ್ಕಾರಕ್ಕೆ ಅನರ್ಹಳೇ? ''ಧರ್ಮೇ ಚ ಅರ್ಥೇ ಚ....ನಾತಿಚರಿತವ್ಯಾ'' ಎಂದು ಬೇಡಿದಾಗ, ''ನಾತಿಚರಾಮಿ'' ಎಂದು ಗುರುಹಿರಿಯರೆದುರು ಅಗ್ನಿಸಾಕ್ಷಿಕವಾಗಿ ಆಶ್ವಾಸನೆಯಿತ್ತ ಮಾನವನು, ಅದನ್ನು ಮರೆತು, ಸರ್ವತ್ರ ಸಹಭಾಗಿನಿಯಾದ ಸತಿ, ಸಂಸ್ಕಾರಕ್ಕೆ ಅನರ್ಹಳೆನ್ನುವುದು ಸಾಧುವೇ? ಕೇವಲ ಪುರುಷರು ಮಾತ್ರ ಮುಕ್ತಿಭಾಜನರಾದರೆ ಮಹಿಳೆಯರು ಮಾಡಿದ ಅಕ್ಷಮ್ಯ ಅಪರಾಧವಾವುದು? ಇದು ಸಂಕುಚಿತ ಮನೋಭಾವನೆಯ ಕೆಲವು ಪೂರ್ವಾಚಾರ್ಯರು ಆಚರಣೆಗೆ ತಂದ ಅಕ್ಷಮ್ಯ ಅಪರಾಧ ಎಂದರೆ ತಪ್ಪಾಗಲಾರದು. ಈ ತೆರನಾದ ವಿಚಾರಧಾರೆಯಿಂದ ಪ್ರಾಯಶಃ ಕಾಲದ ಪ್ರಭಾವಕ್ಕೆ ಮಣಿದು ಮಹಾಜ್ಞಾನಿ ಬುದ್ಧನೂ ಸಹ ಸಂಪೂರ್ಣ ಮುಕ್ತನಾಗಲಿಲ್ಲ. ಆದರೆ ವೀರಶೈವ ಆಚಾರ್ಯರು ಅನುಭಾವದ ಅಡಿಗಲ್ಲ ಮೇಲೆ ಸಮ್ಯಗ್ದರ್ಶನವನ್ನು ನಿರೂ ಪಿಸಿ, ''ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ'' ಎಂದು ತಾತ್ತ್ವಿಕ ವಾಗಿ ವಿಮರ್ಶಿಸಿ, ಸ್ತ್ರೀ ಪುರುಷರಲ್ಲಿ ಮೇಲು ಕೀಳುಗಳ ಅಂತರವನ್ನು ಕಲ್ಪಿಸದೆ, ದೀಕ್ಷಾ ಮೊದಲಾದ ಎಲ್ಲ ಸಂಸ್ಕಾರಗಳನ್ನು ಮಹಿಳೆಯರಿಗೂ ಅನುಗ್ರಹಿಸಿದರು. ಆದುದರಿಂದಲೇ ಅಕ್ಕಮಹಾದೇವಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಸತ್ಯಕ್ಕ, ವಿಮಲಾದೇವಿ, ಆಗಮ ಮೋಹಿನೀದೇವಿ, ವೇದ ಕಂಚುಕಾದೇವಿ, ಮುಕ್ತಾ ಯಕ್ಕ, ಸೌಂದರೀದೇವಿ, ಶಾಂಭವೀದೇವಿ ಮೊದಲಾದ ಅಸಂಖ್ಯಾತ ಸ್ತ್ರೀರತ್ನಗಳು ಶರಣೆಯರಾಗಿ ಪರಿಪೂರ್ಣತೆ ಪಡೆದರು. ಅಷ್ಟೇ ಅಲ್ಲ, ಕೈಹಿಡಿದ ಪತಿದೇವನು ಸತ್ಯ

---

58 ''ತತ್ತ್ವೈರೇಭಿರ್ನಿಬದ್ಧಾತ್ಮಾ ಸರ್ವಧರ್ಮೈಶ್ಚ ಸಂಯುತಃ । ನಾನ್ಯೇನ ಶಕ್ಯತೇ ಮೋಕ್ತುಂ ಮುಕ್ತ್ವಾ ದೀಕ್ಷಾಂ ಶಿವಾತ್ಮಿಕಾಂ ॥ ಸರ್ವಜ್ಞಾನೋತ್ತರ ಸೂತ್ರ.

ಶುದ್ಧ ಕಾಯಕ ಮಾಡುವಾಗ ತಪ್ಪು ಹೆಜ್ಜೆ ಇಟ್ಟಾಗ, ತನ್ನ ಪತಿಗೆ ಸತ್ಪಥ ಅರುಹಿ ಸಮ್ಯಜ್ಮಾರ್ಗದರ್ಶನ ಮಾಡಿದ ಸಾಧ್ವೀಶಿರೋಮಣಿಯರ ನಿದರ್ಶನಗಳಿಗೆ ವೀರಶೈವ ಇತಿಹಾಸದಲ್ಲಿ ಕೊರತೆಯಿಲ್ಲ.

ಶುದ್ಧಾಂತಃಕರಣನೂ ಹಾಗೂ ಮೋಕ್ಷಾಪೇಕ್ಷಿಯೂ ಆಗಿ ಶ್ರದ್ಧೆ ನಿಷ್ಠೆಗಳಿಂದ ಪರಮಗುರುವನ್ನಾಶ್ರಯಿಸುವ ವ್ಯಕ್ತಿ ಯಾರಾದಡಾಗಲಿ, ಯಾವ ಜಾತಿಯವನಾಗಲಿ, ಶ್ರೀಗುರುವು ಅಂತಹ ವ್ಯಕ್ತಿಗೆ ದೀಕ್ಷೆಯನ್ನನುಗ್ರಹಿಸಬಹುದೆಂದು ಶರಣರು ಘೋಷಿಸಿದರು.

ನಾನಾವಿಧಾನಿ ಕಾಷ್ಠಾನಿ ವಹ್ನಿಯೋಗಾದ್ಯಥಾಗ್ನಿತಾಂ ।
ತಥಾನೇಕವಿಧಾ ಮರ್ತ್ಯಾ ಗುರುತಶ್ಶಿವತಾಮಿಯುಃ ॥
ಕಾಂಚನಂ ರಜತಂ ತಾಮ್ರಂ ರಸಯೋಗಾತ್ ಸುವರ್ಣತಾಂ ।
ತಥಾ ಶಿವಜ್ಞಾನರಸಾಚ್ಚಾತ್ರಾದಿಃ ಶಿವತಾಂ ವ್ರಜೇತ್ ॥[59]

ಅಗ್ನಿಯಂ ಅನೇಕವಿಧವಾದ ಕಟ್ಟಿಗೆಗಳನ್ನು ಸುಟ್ಟು ಹೇಗೆ ಬೆಂಕಿಯನ್ನು ಮಾಡುತ್ತದೆಯೋ, ಅಂತೆಯೇ ಗುರುವಿನಿಂದನುಗ್ರಹಿಸಲ್ಪಡುವ ಜ್ಞಾನಜ್ಯೋತಿ ರೂಪಾದ ಪರಶಿವಲಿಂಗದ ಮೂಲಕ ಮಾನವರು ಶಿವತ್ವವನ್ನು ಹೊಂದುವರು. ಬೆಳ್ಳಿ, ತಾಮ್ರ ಮೊದಲಾದ ಲೋಹಗಳು ತದ್‌ಜ್ಞನಿಂದ ತಯಾರಿಸಲ್ಪಟ್ಟ ವಿಶೇಷರಸಸಂಪರ್ಕದಿಂದ ಹೇಗೆ ಸುವರ್ಣವಾಗಿ ಪರಿವರ್ತನಗೊಳ್ಳುವುವೋ, ಅಂತೆಯೇ ಪರಮಗುರುವಿನಿಂದ ಉಪದೇಶಿಸಲ್ಪಡುವ ಶಿವಜ್ಞಾನರಸದಿಂದ ಮಾನವನು ಶಿವತ್ವವನ್ನು ಹೊಂದುವನು.

ಯಸ್ಯೈವಂ ಶಾಂಭವೀ ದೀಕ್ಷಾ ಜಾತಾ ಗುರುಃಕೃಪಾವಶಾತ್ ।
ಪೂರ್ವಜಾತ್ಯಾದಿಕಂ ತಸ್ಯ ನ ಸ್ಮರೇತ್ ಪ್ರಾಕೃತಂ ಹಿ ತತ್ ॥

ಯಾರಿಗೆ ಶ್ರೀ ಗುರುವಿನ ಅನುಗ್ರಹ ಲಭಿಸಿ ದೀಕ್ಷೆಯು ಹೊಂದಲ್ಪಟ್ಟಿರುವುದೋ ಅವರ ದೀಕ್ಷಾಪೂರ್ವದ ಜಾತಿ ಮೊದಲಾದವುಗಳನ್ನು ಗಮನಿಸಬಾರದು. "ದೀಕ್ಷಾಪ್ರಭಾವದಿಂದ ದೇಹವೂ, ಕರ್ಮೇಂದ್ರಿಯಗಳೂ, ಜ್ಞಾನೇಂದ್ರಿಯಗಳೂ. ಅಂತಃಕರಣವೂ ಪಂಚ ಪ್ರಾಣಗಳೂ, ಸಪ್ತಧಾತುಗಳೂ, ಮಂತ್ರಸ್ವರೂಪವಾಗುವುದರಿಂದ ಆ ದೇಹದಲ್ಲಿ ಜಾತಿಯು ನಿಲ್ಲಲಾರದು[60] ಎಂದು ಸಿದ್ಧರಾಮಪ್ಪ ದುಂಡಪ್ಪ ಪಾವಟೆ ಅವರು ಹೇಳಿರುವುದು ಯುಕ್ತವಾಗಿದೆ.

ಅಪ್ರಾಕೃತಸ್ಯ ಭಕ್ತಸ್ಯ ಗುರುಹಸ್ತಾಮಲಾಂಬುಜಾತ್ ।
ಪುನರ್ಜಾತಸ್ಯಾತ್ಮಜನ್ಮ ಜಾತ್ಯಾದಿ ನ ಚ ಕಲ್ಪಯೇತ್ ।

———

59 ಸೂಕ್ಷ್ಮಾಗಮ ಪ. ೫. ಶ್ಲೋಕ ೭೨-೭೩.
60 "ಸಾಹಿತ್ಯಸಮಿತಿ ಪತ್ರಿಕೆ" ಸಂ. ೪, ಪು. ೭೫. ಏಪ್ರಿಲ್ ೧೯೪೪.

ದೀಕ್ಷಾಸಂಪನ್ನನಾದಾತನು ಪರಮಗುರುವಿನ ಕರಕಮಲಸಂಜಾತನಾಗುವುದ ರಿಂದ. ಆತನ ಹಿಂದಣ ಜಾತಿ ಕುಲಗಳಳಿದು ಆತನು 'ಅಯೋನಿಜ'ನಾಗುವನು, ಅಂದರೆ ಗುರುಕರಕಮಲಸಂಜಾತನಾಗುವನು.

"ನೀರು ಗಟ್ಟಿಗೊಂಡು ಮುತ್ತಪ್ಪುದಲ್ಲದೆ ಮುತ್ತು ನೀರಪ್ಪುದೇನಯ್ಯಾ ? ಹೀನಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವಜಾತಾಭರಣನಾದ ಬಳಿಕ ಮರಳಿ ನರನಪ್ಪನೇನಯ್ಯಾ ಅಖಂಡೇಶ್ವರಾ ?"[1]

ಶಿವಸಂಸ್ಕಾರಸಂಪನ್ನೋ ಹ್ಯಯಂ ಶೂದ್ರೋ ಹ್ಯಯಂ ದ್ವಿಜಃ ।
ಲಿಂಗಭೇದಃಕೃತೋ ಯೇನ ರೌರವಂ ನರಕಂ ವ್ರಜೇತ್ ॥[62]

ಶಿವದೀಕ್ಷಾಸಂಪನ್ನರಾದವರನ್ನು ಅವರು ಶೂದ್ರರು ಇವರು ಬ್ರಾಹ್ಮಣರು ಮುಂತಾಗಿ ಯಾರು ಭೇದವನ್ನು ಮಾಡುವರೋ ಅವರು ರೌರವನರಕಕ್ಕೆ ಹೋಗುವರು ಎಂಬುದಾಗಿ ಸಮಾಜದಲ್ಲಿಯ ಅನೀತಿ ಹಾಗೂ ಭೇದಭಾವನೆಯನ್ನು ತೊಡೆದು ಹಾಕಿ, ಸಂಘಟನೆ ಹಾಗೂ ಏಕತೆಯನ್ನು ಸಾಧಿಸಲು ಅಷ್ಟೊಂದು ಕಠೋರವಾಗಿ ಹೇಳ ಬೇಕಾದುದು ಅಂದು ಅನಿವಾರ್ಯವಾಗಿದ್ದಂತೆ ಕಾಣುತ್ತದೆ. ಭೇದಭಾವನೆಯನ್ನು ಬಿಟ್ಟು ಪರಸ್ಪರರನ್ನು ಸದ್ಭಾವನೆ ಹಾಗೂ ಸದುವಿನಯದಿಂದ ಗೌರವಿಸುತ್ತ, ಸ್ವೀಕರಿ ಸಿದ ಅಥವಾ ಕೈಗೊಂಡ ತಮ್ಮ ತಮ್ಮ ಕಾಯಕಗಳನ್ನು ನಿಷ್ಠೆಯಿಂದ ನೆರವೇರಿಸುತ್ತ, ಸದಾಚಾರದಲ್ಲಿ ಸಾಗಿದರೆ, ರಾಷ್ಟ್ರದ ಪ್ರಗತಿಗೆ ಪ್ರತಿಯೊರ್ವರೂ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿ, ಇಲ್ಲಿ ಮತ್ತು ಅಲ್ಲಿ ಎರಡರಲ್ಲಿಯೂ ಸಲ್ಲಬಹುದಲ್ಲವೇ ?

ಲಿಂಗಾಂಗಸಾಮರಸ್ಯಸಂಪನ್ನನಾಗಿ ಸಮ್ಯಗ್‌ಜ್ಞಾನಿಯೊದ ಪರಮಗುರುವು ದೀಕ್ಷಾ ಗುರು, ಶಿಕ್ಷಾಗುರು, ಮೋಕ್ಷಗುರುವಾಗಿ ಜೀವನಿಗೆ ವಿವಿಧ ಹಂತಗಳಲ್ಲಿ ಮಾರ್ಗದರ್ಶನ ಮಾಡುತ್ತ, ಉಪಾಸಕನಾದ ಭಕ್ತನಿಗೆ ಉಪಾಸ್ಯವಾದ ಲಿಂಗದ ಮಹಿಮೆಯನ್ನರುಹಿ, ಇಷ್ಟಲಿಂಗವನ್ನು ಸ್ಥೂಲಶರೀರಕ್ಕೆ ಕರುಣಿಸಿ, ಪ್ರಾಣ ಮತ್ತು ಭಾವಲಿಂಗಗಳನ್ನು ಸೂಕ್ಷ್ಮ ಮತ್ತು ಕಾರಣಶರೀರಗಳಲ್ಲಿ ನೆಲೆಗೊಳಿಸಿ, ಆಣವ, ಮಾಯಾ ಮತ್ತು ಕಾರ್ಮಿಕ ಮಲತ್ರಯಗಳನ್ನು ನಿವಾರಿಸುವನು. ಭಕ್ತನು, ಜಗವ ಸುತ್ತಿರ್ಪ ಮಾಯೆಗೆ ಸಿಲುಕದೆ ಪವಿತ್ರಪ್ರವಾಹದಂತೆ ಪ್ರವಹಿಸುವ ಮಹಾಜ್ಞಾನಿ ಜಂಗಮದ ಕೃಪೆಗೆ ಪಾತ್ರನಾಗಿ ಪಾದೋದಕ ಪ್ರಸಾದ ಸೇವಿಸುತ್ತ, ಮಾಯೆಯನ್ನು ಭಸ್ಮಮಾಡುವ ಭಸ್ಮ ಧರಿಸಿ, ಜ್ಞಾನಚಕ್ಷುಪ್ರತೀಕವಾಗಿ ರುದ್ರಾಕ್ಷಿಯನ್ನು ಧರಿಸಿ, ಪವಿತ್ರಮಹಾಮಂತ್ರವನ್ನು ಜಪಿ ಸುತ್ತ, ಸದಾಚಾರಯುತನಾಗಿ ಸತ್ಯಶುದ್ಧಕಾಯಕದಲ್ಲಿ ನಿರತನಾಗಿ ಷಟ್‌ಸ್ಥಲಸೋಪಾನ ವೇರಿದಂತೆಲ್ಲ ಆತನ ಅಂಗಕರಣಗಳು ಲಿಂಗಕಿರಣಗಳಾಗಿ ಪರಿಣಮಿಸಿ ಸಚ್ಚಿದಾನಂದ ನಿತ್ಯ ಪರಿಪೂರ್ಣ ಪರಶಿವನೇ ಆಗುವನು. ಅಂತಾಗಬೇಕಾದರೆ ದೀಕ್ಷೆಯೇ ಮೂಲವಲ್ಲವೇ?

---

61 "ವಚನಶಾಸ್ತ್ರ ಸಾರ" ಡಾ. ಫ. ಗು. ಹಳಕಟ್ಟಿ. ಭಾ. ೧. ಪು. ೭೩.

62 "ಅನಾದಿ ವೀರಶೈವ ಸಾರಸಂಗ್ರಹ" ೨೩ ನೇ ಪ್ರಕರಣ. ಪು. ೨೮೭,

ಇಷ್ಟಲಿಂಗೋಪಾಸನೆ

ಶ್ರೀ. ನಿ. ಪ್ರ. ಸ್ವ. ವಿದ್ವಾನ್ ಇಮ್ಮಡಿ ಶಿವಬಸವಸ್ವಾಮಿಗಳು, ಎಂ.ಎ.,

ಜಗತ್ತಿನ ಜೀವರಾಶಿಗಳಲ್ಲಿ ಮಾನವನಿಗೆ ಒಂದು ವಿಶಿಷ್ಟಸ್ಥಾನವಿದೆ. ಈ ವಿಶಿಷ್ಟ ಸ್ಥಾನವು ಆತನಿಗೆ ಲಭ್ಯವಾಗಿರುವುದು ಆತನ ಗಾಢವಾದ ಚಿಂತನಸಾಮರ್ಥ್ಯ ದಿಂದ. ಯಾವುದೇ ಜೀವಿಗೂ ಇಲ್ಲದಿರುವ ಈ ಧೀಶಕ್ತಿಯು ಮಾನವನಲ್ಲಿ ಮಾತ್ರ ಅಡಗಿದೆ. ಪ್ರಾಣಿಗಳಿಗಿರುವ ಬುದ್ಧಿಶಕ್ತಿಯು ಕೇವಲ ದೈಹಿಕ ವಲಯದಲ್ಲುಂಟಾಗುವ ತೃಷೆ, ಹಸಿವು, ಸಂತಾನೋತ್ಪಾದನೆ, ನಿದ್ರೆ ಮುಂತಾದವುಗಳನ್ನು ಮಾತ್ರ ತೃಪ್ತಿಪಡಿಸಲು ಬಳಕೆಯಾಗುತ್ತದೆ. ಕೆಲವು ಪಕ್ಷಿಗಳು ಸಂತಾನ ಸಂರಕ್ಷಣೆಗೋಸ್ಕರ ಬಹಳ ಜಾಣ್ಮೆ ಯಿಂದ ಗೂಡುಕಟ್ಟುವುದನ್ನು ಕಾಣುತ್ತೇವೆ. ಹುಟ್ಟಿನಿಂದಲೇ ತಮ್ಮ ಅಸ್ತಿತ್ವದ ಉಳಿವಿಗೋಸ್ಕರ, ತನ್ನದಲ್ಲದ ಮತ್ತೊಂದು ವರ್ಗದ ಮೇಲೆ ಹೋರಾಟ ಮಾಡು ವುದನ್ನು, ಹಾಗೆಯೇ ಸಂರಕ್ಷಿಸುವ ಉಪಾಯಗಳನ್ನು ಮಾಡಿಕೊಳ್ಳಲು ಪ್ರಾಣಿವರ್ಗವು ಸದಾ ಕ್ರಿಯಾತ್ಮಕವಾಗಿ ತೊಡಗಿರುತ್ತದೆ. ಈ ಎಲ್ಲ ಚಟುವಟಿಕೆಗಳು ನಿಸರ್ಗ ಸಿದ್ಧ ವಾಗಿ ಅವುಗಳಿಗೆ ದೊರಕಿರುತ್ತವೆ. ಮೃಗಗಳಿಗೆ ನೀರಿನಲ್ಲಿ ಈಜುವುದನ್ನು, ಪಕ್ಷಿಗಳಿಗೆ ಗಗನದಲ್ಲಿ ಹಾರುವುದನ್ನು ಯಾರೂ ಕಲಿಸಿಕೊಡಬೇಕಾಗಿಲ್ಲ. ಆದರೆ ಇಂಥ ಕ್ರಿಯೆ ಗಳನ್ನು ಮಾನವನು ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಂಡು ಪ್ರಯತ್ನಪೂರ್ವಕವಾಗಿ ಕಲಿಯಬೇಕು. ಈ ರೀತಿ ಬುದ್ಧಿಶಕ್ತಿಯನ್ನು ಬಳಸಿಕೊಳ್ಳುವ ಸ್ವಾತಂತ್ರ್ಯ ಮಾನವ ನೊಬ್ಬನಿಗೇ ಮೀಸಲಾಗಿದೆ. ಪ್ರಾಣಿಗಳಿಗೆ ಈ ವಿಧವಾದ ಸ್ವಾತಂತ್ರ್ಯವಿಲ್ಲದಿರುವುದ ರಿಂದ ಅವು ತಪ್ಪುಮಾಡಲಾರವು. ಆದರೆ ಈ ರೀತಿಯ ತಪ್ಪು ಮಾಡುವ ಅರಿವಿರು ವುದರಿಂದಲೇ ಅವನು ಹೆಚ್ಚು ವಿಕಾಸ ಹೊಂದಬಲ್ಲ ಎಂಬುದನ್ನು ಮರೆಯುವಂತಿಲ್ಲ. ನಿಸರ್ಗಸಿದ್ಧವಾದ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಷ್ಟೇ ಮೀಸಲಾಗಿರುವ ಪ್ರಾಣಿಗಳ ಬುದ್ಧಿಗಿಂತ ಮಾನವನ ಬುದ್ಧಿ ವಿಕಾಸ ಹೊಂದಿರುವುದು ಸರ್ವವಿದಿತ. ಈ ಮೇಧಾಶಕ್ತಿಯಿಂದ ಮಾನವನು ತನ್ನನ್ನೂ, ತನ್ನ ಹೊರಗಿರುವ ಜಗತ್ತಿನ ಸ್ವರೂಪ ವನ್ನೂ ಅರಿಯಬಲ್ಲ. ಅಂತರಂಗ ಹಾಗೂ ಬಹಿರಂಗ ವಸ್ತುಗಳ ಆಳವಾದ ಇಂತಹ ಅಧ್ಯಯನದ ಫಲವಾಗಿ ವೇದಾಂತ ಹಾಗೂ ವಿಜ್ಞಾನ ಒಡಮೂಡಿದವು. ಭೌತಿಕ ವಸ್ತು ಗಳ ಅಧ್ಯಯನವೇ ಬುದ್ಧಿಶಕ್ತಿಗೆ ವಿಷಯವಾದಾಗ ವಿಜ್ಞಾನವೆನಿಸಿಕೊಳ್ಳುತ್ತದೆ. ಅಂತರಂಗವೇ ಮನೋ-ಬುದ್ಧಿಶಕ್ತಿಗೆ ವಿಷಯವಾದಾಗ ಧರ್ಮವೆನಿಸಿಕೊಳ್ಳುತ್ತದೆ.

ಜ್ಞಾನ, ಇಚ್ಛೆ, ಕ್ರಿಯೆಗಳ ಸಂಗಮವೇ ಮಾನವನೆನ್ನಬಹುದು. ನೈತಿಕ ಪ್ರಜ್ಞೆ, ಸೌಂದರ್ಯ ಪ್ರಜ್ಞೆ, ಮತ್ತು ಆಧ್ಯಾತ್ಮಿಕ ಪ್ರಜ್ಞೆಗಳು ವಿಕಾಸವಾಗುವ ಅರ್ಹತೆ ಮಾನವನಲ್ಲಿ ಮಾತ್ರ ಇದೆ.

ಮಾನವನು ಇಂತಹ ತನ್ನ ಅರಿವಿನ ಆಳವನ್ನು ಪ್ರವೇಶಿಸಿ ಈ ವಿಶ್ವವೆಲ್ಲವೂ ಒಂದು ದಿವ್ಯಶಕ್ತಿಯ ಆವಿರ್ಭಾವ ಎಂಬುದನ್ನು ತಿಳಿದ. ಅಷ್ಟೇ ಅಲ್ಲದೆ ಆ ದಿವ್ಯ ಶಕ್ತಿಯು ಮಾನವನಲ್ಲಿ ಹುದುಗಿದೆಯಲ್ಲದೆ ಅದನ್ನು ಅರಿಯುವ ಅರ್ಹತೆ ಇರುವುದು ಈತನಿಗೊಬ್ಬನಿಗೆ ಮೀಸಲು. ಬ್ರಹ್ಮಾಂಡವೆಲ್ಲವೂ ಪಿಂಡಾಂಡದಲ್ಲಿಯೇ ಅಡಗಿದೆ ಎಂದು ವೇದಾಂತವು ಬೋಧಿಸುತ್ತದೆ. ವಚನಕಾರರೂ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ. ತನಗೂ ವಿಶ್ವಕ್ಕೂ ಇರುವ ಇಂತಹ ಸಂಬಂಧವನ್ನು ಅರಿತುಕೊಳ್ಳ ಬೇಕಾದ ಅಗತ್ಯ ಮಾನವನಿಗಿದೆಯೇ ಎಂದು ಪ್ರಶ್ನಿಸಬಹುದು. ಪ್ರತಿಯೊಬ್ಬ ಮಾನವನಿಗೂ ಅದು ಅತ್ಯಗತ್ಯವಷ್ಟೆ ಅಲ್ಲ, ಅಂತಿಮವಾಗಿ ಅದು ಅನಿವಾರ್ಯವೂ ಹೌದು. ಏಕೆಂದರೆ ಮಾನವನು ಸದಾ ಆನಂದವನ್ನು ಅನ್ವೇಷಿಸುತ್ತಾನೆ. ಸುಖವನ್ನು ಪಡೆಯುವ ಹೆಬ್ಬಯಕೆಯಿಂದಲೇ ಕಾರ್ಯೋನ್ಮುಖನಾಗುತ್ತಾನೆ. ಯಾವ ವಸ್ತುಗಳು ತನಗೆ ಸುಖಕೊಡುತ್ತವೆ ಎಂದು ಭಾವಿಸುತ್ತಾನೋ ಅವನ್ನು ಪಡೆಯಲು ಹಂಬಲಿಸುತ್ತಾನೆ, ಬೆನ್ನಟ್ಟುತ್ತಾನೆ. ಕಾಲಕ್ರಮದಲ್ಲಿ ದೇಹ ಇಂದ್ರಿಯ, ಮನಸ್ಸು, ಬುದ್ಧಿ, ವಸ್ತುಗಳು ಇವುಗಳಿಂದ ದೊರೆಯಬಹುದಾದ ಸುಖವನ್ನು ಪಡೆದರೂ, ಅತೃಪ್ತಿಯ ಮನೋಭಾವ ಮುಗಿಯದೆ ಪರಿತಪಿಸುತ್ತಾನೆ. ಯಾವುದೇ ವಸ್ತುವಿನ ಹಂಬಲವಿಲ್ಲದೆ ಅತಿಶಯವಾದ ಆನಂದವನ್ನು ಅನುಭವಿಸುವ ಸ್ಥಿತಿಯನ್ನು ತನ್ನಲ್ಲೇ ಕಂಡುಕೊಳ್ಳುವುದಲ್ಲದೆ ಆ ಸ್ಥಿತಿಯನ್ನು ತಲುಪಿದಾಗ, ಅದರಿಂದ ಒಂದು ವಿಶಿಷ್ಟ ಶಕ್ತಿಯೂ ಅಭಿವ್ಯಕ್ತವಾಗಿ ಜಗತ್ತಿನ ರಚನೆಯ ಹಿಂದಿರುವ ಸೂಕ್ಷ್ಮತೆಯ ಪರಿಚಯವಾಗುತ್ತದೆ. ಅಲ್ಲದೆ ದೃಶ್ಯವಾದ ವಸ್ತುಗಳೂ ಅದರ ವಿಕಾಸವೇ ಎಂದರ್ಥವಾಗುತ್ತದೆ. ಹೀಗೆ ತನ್ನಲ್ಲೇ ಆನಂದವನ್ನು ಕಂಡುಕೊಳ್ಳದವನನ್ನು ನೋಡಿ ಮಹಾದೇವಿಯಕ್ಕ ಹೀಗೆ ವಿಡಂಬಿಸಿದ್ದಾಳೆ :

> ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
> ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
> ತನ್ನೊಳಗಿರ್ದ ಮಹಾಘನವನರಿಯರು
> ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ.

ತನ್ನೊಳಗಡೆಯೇ ಸುಪ್ತವಾಗಿರುವ ಅದ್ಭುತವಾದ ಆ 'ಮಹಾಘನ'ವನ್ನರಿಯದೆ ಬಳಲಿ ಅಶನ ವಸನಕ್ಕೋಸ್ಕರವೇ ಮಾನವನು ದುಡಿದು ದುಃಖಕ್ಕೀಡಾಗುತ್ತಾನೆ. ಈ ಮಹಾಚೈತನ್ಯದ ಸ್ವರೂಪವನ್ನು ಅರಿತಾಗಲೇ ಸರ್ವದುಃಖಗಳಿಂದಲೂ ವಿಮೋಚನೆ ಪಡೆಯುತ್ತಾನೆ. ಇದಲ್ಲದೆ ಇನ್ನಾವುದೇ ರೀತಿಯ ದುಃಖ ವಿಮುಕ್ತಿಯ ಮಾರ್ಗ

ಅಸಾಧ್ಯ ಎಂದು ಉಪನಿಷತ್ತು ಸಾರಿದೆ. 'ಮಾನವನು ಚರ್ಮವನ್ನು ಮಡಚಿ ಕೊಳ್ಳುವಂತೆ ಆಕಾಶವನ್ನು ಮಡಚಿಕೊಳ್ಳುವುದಾದರೆ, ಆಗ ಮಾತ್ರ ಶಿವನನ್ನು ಕಾಣದೆ ದುಃಖವನ್ನು ಕೊನೆಗಾಣಿಸಿಕೊಳ್ಳಬಹುದು.[1] ಅಂದರೆ ಆಕಾಶವನ್ನು ಮಡಚುವುದು ಹೇಗೆ ಅಸಾಧ್ಯವೊ, ಅಂತೆಯೇ ಪರಮಾತ್ಮನನ್ನು ಕಾಣದೆ ಸುಖವನ್ನು ಪಡೆಯುವುದೂ ಅಸಂಭವ. ಏಕೆಂದರೆ ಭೌತಿಕ ವಸ್ತುವಿನಿಂದ ಲಭಿಸಬಹುದಾದ ಯಾವುದೇ ಸುಖವೂ ಸಾಪೇಕ್ಷ ಹಾಗೂ ಉಪಾಧಿಯುಕ್ತವಾದದ್ದು. ನಿರಪೇಕ್ಷವಾದ, ನಿರುಪಾಧಿಕವಾದ, ನಿರತಿಶಯವಾದ ಎಲ್ಲ ಕಾಲಕ್ಕೂ ಸುಖಕೊಡುವ ಯಾವುದೇ ವಸ್ತು ಇನ್ನೂ ಸೃಷ್ಟಿಯಾಗಿಲ್ಲ. ಆದ್ದರಿಂದಲೇ ನಿರತಿಶಯವಾದ, ಆನಂದಘನವಾದ ಜ್ಯೋತಿ ಸ್ವರೂಪವಾದ ಆ ಮಹಾಘನವನ್ನು ಪ್ರತಿಯೊಬ್ಬ ಮಾನವನೂ, ದೋಷರಹಿತ ನಾದಾಗ ತನ್ನ ಶರೀರದೊಳಗಡೆಯೇ ಕಾಣಬಲ್ಲ.[2] ಮಾನವನ ಹೃದಯದಲ್ಲಿ ಇದ್ದೂ ಇಲ್ಲದಂತಿರುವ ಆ ದೇವನ ನಿಲುವನ್ನು ಕಂಡು ಶರಣನೊಬ್ಬ ಈ ರೀತಿ ಅಚ್ಚರಿ ವ್ಯಕ್ತ ಪಡಿಸಿದ್ದಾನೆ.

ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ಕೆನೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮವನಾರು ಕಾಣದಂತಿರಿಸಿದೆ
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ

ಮರದೊಳಗೆ ಬೆಂಕಿಯು ಸುಪ್ತವಾಗಿ ಅಡಗಿರುವಂತೆ, ಹಾಲಿನಲ್ಲಿ ತುಪ್ಪವು ಗುಪ್ತ ವಾಗಿರುವಂತೆ, ನಮ್ಮ ಒಡಲಿನಲ್ಲಿ ಪರಮಾತ್ಮನು ಇದ್ದೂ ಇಲ್ಲದಂತಿರುವುದು ಬೆರಗು ಗೊಳಿಸುವ ಅದ್ಭುತವಿಚಾರ. ಇದನ್ನು ಅರಿಯುವುದು ಸುಲಭವಲ್ಲ, ಜಡರಿಗೆ ಸಾಧ್ಯವಿಲ್ಲ ಅದು. ಅದು ಕೇವಲ ಪರಮಾತ್ಮನ ಕರುಣೆಯಿಂದ ಮಾತ್ರ ಸಾಧ್ಯ. ಇದನ್ನರಿತೇ ಮಹಾನುಭಾವಿಗಳಾದ ಬಸವಣ್ಣನವರು ಹೀಗೆ ಎಚ್ಚರಿಸಿದ್ದಾರೆ :

ಏನಾದರೆಯೂ ಸಾಧಿಸಬಹುದು
ಮತ್ತೇನನಾದರೆಯೂ ಸಾಧಿಸಬಹುದಯ್ಯಾ!
ತಾನಾರೆಂಬುದ ಸಾಧಿಸಬಾರದು
ಕೂಡಲ ಸಂಗಮದೇವರ ಕರುಣವುಳ್ಳವಂಗಲ್ಲದೆ!

---

1. ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥
—ಶ್ವೇತಾಶ್ವತರೋಪನಿಷತ್. 6-20

2 ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ।
ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥
ಮುಂಡಕೋಪನಿಷತ್. 3–15

ಈ ನಿಟ್ಟಿನಲ್ಲಿ ಈ ಶತಮಾನದ ಶ್ರೇಷ್ಠ ವಿಜ್ಞಾನಿಗಳೆನಿಸಿದ ಸರ್ ಜೇಮ್ಸ್ ಜೀನ್ಸ್, ಆಲ್ಬರ್ಟ್ ಐನ್‌ಸ್ಟೈನ್, ಮತ್ತು ಅಲೆಕ್ಸ್ ಕ್ಯಾರೆಲ್‌ರವರ ಮಾತು ಗಂಭೀರವಾಗಿ ಚಿಂತಿಸತಕ್ಕವು.

Science has given man control over nature before he has gained control over himself. Thus in respect of knowledge, each generation stands on the shoulders of its predecessors; but in respect of himself, both stands on the same ground. These are hard facts which we cannot alter. For the first time in his long history man may be enabled to obey the command 'know thyself'.[1]

"ವಿಜ್ಞಾನದ ಅನ್ವೇಷಣೆಯಲ್ಲಿ ಗಾಢವಾಗಿ ಮಗ್ನವಾಗಿರುವ ಪ್ರತಿಯೊಬ್ಬನಿಗೂ ವಿಶ್ವದ ನಿಯಮಗಳ ಹಿಂದೆ ಒಂದು ಚೇತನ ಸ್ಪಂದಿಸುತ್ತಿದೆಯೆಂಬ ಭಾವ ದೃಢಪಡುತ್ತದೆ. ಅದೆಂಥ ಚೇತನ ? ಮಾನವನದಕ್ಕಿಂತ ಅದೆಷ್ಟೋ ಅಧಿಕ ತ್ರಾಣ ಚೇತನ ! ತೀರ ಪರಿಮಿತ ಸಾಮರ್ಥ್ಯವಂತರಾದ ನಾವು ಮನುಷ್ಯರು ಅದರ ಸಾನ್ನಿಧ್ಯದಲ್ಲಿ ವಿನೀತರಾಗುವುದೊಂದೇ ಶರಣು. ಹೀಗೆ ವಿಜ್ಞಾನದ ಅನ್ವೇಷಣೆ ವಿಶಿಷ್ಟ ಬಗೆಯ ಒಂದು ಧಾರ್ಮಿಕ ಭಾವನೆಯತ್ತ ನಮ್ಮನ್ನು ಒಯ್ಯುತ್ತದೆ. ಈ ಭಾವನೆ ಮುಗ್ಧ ವ್ಯಕ್ತಿಯೊಬ್ಬನ ಧಾರ್ಮಿಕ ಶ್ರದ್ಧೆಗಿಂತ ಬೇರೆಯೇ ಆದದ್ದು. [2]

'Man obtained the mastery of everything on the face of the earth except themselves"; 'we understand atoms and stars better than our own minds'. [3]

ಸ್ವಸ್ವರೂಪದ ಪರಿಪೂರ್ಣತೆಯನ್ನು ಅರಿಯಲು ಮತ್ತು ಅದನ್ನು ಸಾಧಿಸಲು ಪ್ರತಿಯೊಂದು ಧರ್ಮವೂ ತನ್ನದೇ ಆದ ಸಾಧನಮಾರ್ಗವನ್ನು ರೂಪಿಸಿಕೊಂಡಿದೆ. ವೀರಶೈವಧರ್ಮವು ಇಷ್ಟಲಿಂಗೋಪಾಸನೆಯನ್ನು ನೈತಿಕ, ಧಾರ್ಮಿಕ, ಸಾಮಾಜಿಕ, ತಾತ್ವಿಕ ಹಾಗೂ ಆಧ್ಯಾತ್ಮಿಕ ತಳಹದಿಯ ಮೇಲೆ ಸಾಕ್ಷಾತ್ಕಾರದ ಹಾದಿಯೆಂದು ಭಾವಿಸಿದೆ.

---

1 Dr. Paul Bruton : The Quest of the Overself : P 36. B. I. Publications ; Madras 1975.

2. ಆಲ್ಬರ್ಟ್ ಐನ್‌ಸ್ಟೈನ್ : ಕನ್ನಡ ಅನುವಾದ : ಜಿ. ಟಿ. ನಾರಾಯಣರಾವ್.

3 Alexis Carrel : Reflections on life. P. 37, 69, Wilco Publishing House, Bombay.

ಉಪಾಸನೆ :

ಉಪಾಸನೆ ಎಂಬುದು ಭಾರತೀಯ ಧರ್ಮ ಹಾಗೂ ತತ್ವಶಾಸ್ತ್ರದಲ್ಲಿ ಅತ್ಯಂತ ಮಹತ್ವವಾದ ಹಾಗೂ ವ್ಯಾಪಕವಾದ ಅರ್ಥವನ್ನುಳ್ಳದ್ದು. ಅನುಷ್ಠಾನದ ವಿವಿಧ ಪ್ರಾಯೋಗಿಕ ಮಾರ್ಗಗಳನ್ನು ಒಳಗೊಂಡಿರುವ ಈ ಪದ ಪ್ರತಿಯೊಂದು ದರ್ಶನ (System) ದಲ್ಲೂ ತನ್ನದೇ ಆದ ಅರ್ಥವಿವರಣೆಯನ್ನು ಪಡೆಯುತ್ತದೆ. ತತ್ವ ಜ್ಞಾನದ ಭಂಡಾರವೆನಿಸಿದ ಉಪನಿಷತ್ತುಗಳಲ್ಲೇ ಉಪಾಸನೆಗೆ ಸಂಬಂಧಿಸಿದಂತಹ ವಿಷಯಗಳನ್ನು ಕಾಣುತ್ತೇವೆ. ಅಲ್ಲಿ ವಿಶ್ವದ ಹಿನ್ನೆಲೆಯಲ್ಲಿದ್ದು, ವಿಶ್ವವನ್ನೆಲ್ಲ ವ್ಯಾಪಿಸಿ ಕೊಂಡಿರುವ ತತ್ವದ ಸಾಕ್ಷಾತ್ಕಾರಕ್ಕೆ ಹೇಳಿರುವ ನಾನಾವಿಧವಾದ ವಿದ್ಯೆಗಳನ್ನೇ ಉಪಾಸನೆ ಎಂದು ಕರೆದಿದೆ. ಇವು ಧ್ಯಾನದ ವಿವಿಧ ಮಾರ್ಗಗಳು, ಪಂಚಾಗ್ನಿವಿದ್ಯೆ ವೈಶ್ವಾನರವಿದ್ಯೆ. ಶಾಂಡಿಲ್ಯವಿದ್ಯೆ, ಉಪಕೋಸಲವಿದ್ಯೆ. ದಹರೋಪಾಸನೆ, ಓಂಕಾ ರೋಪಾಸನೆ ಇನ್ನೂ ಮುಂತಾದ ಅನೇಕ ಉಪಾಸನಾವಿಧಿಗಳು ಅಲ್ಲಲ್ಲಿ ನಿರೂಪಿತ ವಾಗಿರುವುದನ್ನು ಕಾಣಬಹುದು. ವಿಶ್ವಚೈತನ್ಯದತ್ತ ನಮ್ಮನ್ನು ಒಯ್ಯುವುದೇ ಈ ಉಪಾಸನೆಗಳ ಗುರಿ. ಉಪನಿಷತ್ತುಗಳಲ್ಲಿ ಸಾಕಾರೋಪಾಸನೆ ನಿರಾಕಾರೋಪಾಸನೆ ಎರಡನ್ನೂ ಹೇಳಿದೆ.

ಉಪಾಸನೆ ಎಂಬ ಪದದ ವಾಚ್ಯಾರ್ಥ 'ಹತ್ತಿರ ಕುಳಿತುಕೊಂಡಿರುವುದು' ಮಾನಸಿಕವಾಗಿ ಧ್ಯೇಯದತ್ತ ಸಾಗುತ್ತಿರುವುದು ಎಂದಾಗುತ್ತದೆ.[1] ಉಪನಿಷತ್ ಪದವೂ ಈ ಅರ್ಥವನ್ನೇ ಒಳಗೊಂಡಿರುವುದು ಗಮನಾರ್ಹವಾದದ್ದು. ಈ ಪದ ರಹಸ್ಯ ವಿಷಯ ಎಂಬುದನ್ನು ಸೂಚಿಸುತ್ತದೆ. ವೇದಾಂತಗ್ರಂಥಗಳಲ್ಲಿ ಇದನ್ನು ನಾನಾ ರೀತಿಯಾಗಿ ಅರ್ಥೈಸಿದ್ದಾರೆ. ಸದಾನಂದನು ಉಪಾಸನೆ ಎಂದರೆ ಸಗುಣ ಬ್ರಹ್ಮ ವಿಷಯಕವಾದ ಮಾನಸವ್ಯಾಪಾರ ಎನ್ನುತ್ತಾನೆ.[2] ಈ ವಿವರಣೆ ನಿರ್ಗುಣಬ್ರಹ್ಮಕ್ಕೆ ಅನ್ವಯಿಸುವಷ್ಟು ವಿಶಾಲವಾಗಿಲ್ಲ. ಶಂಕರಾಚಾರ್ಯರು ಈ ಶಬ್ದಕ್ಕೆ ವಿವರಣೆ ನೀಡುತ್ತಾ—'ಶ್ರುತಿಗಳು ತಿಳಿಸಿರುವಂತೆ ದೇವತಾದಿಸ್ವರೂಪವನ್ನು ಮಾನಸಿಕವಾಗಿ ಸಮೀಪಿಸುತ್ತಾ ಹೋಗುವುದು, ಯಾವ ದೇವತೆಯನ್ನು ಉಪಾಸಿಸುತ್ತಾನೋ ಆ ದೇವತಾಸ್ವರೂಪವೇ ತಾನು ಎಂಬಂತೆ ಆತ್ಮಭಾವವು ಅಭಿವ್ಯಕ್ತವಾಗುವವರೆಗೂ ಚಿಂತನಮಾಡುತ್ತಿರುವುದು. ಈ ರೀತಿ ಉಪಾಸಕನು ಸ್ವಯಂ ದೇವತಾಸ್ವರೂಪನೇ ಆಗಿ ಸಮರಸಹೊಂದುತ್ತಾನೆ.[3] ಉಪಾಸನೆಯ ದೈವ ತನಗೆ ಅಭಿಮತವಾದ ಯಾವುದೇ ವಿಧವಾದ ಇಷ್ಟದೈವವಾಗಬಹುದು. ಈ ಜ್ಞಾನ ಮನಶ್ಶುದ್ಧೀಕರಣದ

---

1 ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂ. 1, ಪುಟ ೨೮೨; ಮೈಸೂರು ವಿಶ್ವವಿದ್ಯಾಲಯ.

2 ವೇದಾಂತಸಾರ.

3 ಛಾಂದೋಗ್ಯೋಪನಿಷತ್, ಶಾಂಕರಭಾಷ್ಯ ಪೀಠಿಕೆ.

ಮೂಲಕ ಬ್ರಹ್ಮಸಾಕ್ಷಾತ್ಕಾರಕ್ಕೆ ಸಹಾಯಕವಾಗುತ್ತದೆ. ಅದ್ವೈತಸಿದ್ಧಾಂತದಲ್ಲಿ ಬ್ರಹ್ಮಜ್ಞಾನ ಬೇರೆ, ಬ್ರಹ್ಮೋಪಾಸನೆ ಬೇರೆ. ಶುದ್ಧಬ್ರಹ್ಮ ಎಂದೂ ಉಪಾಸನೆಗೆ ಅಲ್ಲಿ ವಿಷಯವಾಗುವಂತಿಲ್ಲ. ಉಪಾಸನೆ ಎಂದಾಗ ಉಪಾಸಕ, ಉಪಾಸ್ಯವಸ್ತು, ಎಂಬ ಭೇದ ಅನಿವಾರ್ಯ. ಆದ್ದರಿಂದ ನಿರ್ಗುಣಬ್ರಹ್ಮಕ್ಕೆ ಉಪಾಸನೆಯ ವಿಷಯ ಸಾಮಾನ್ಯಾರ್ಥದಲ್ಲಿ ಅನ್ವಯವಾಗುವಂತಿಲ್ಲ. ಯಾವುದೇ ವಿಧವಾದ ಕ್ರಿಯೆಯೂ ಕಾರಣವಾಗಲಾರದು ಬ್ರಹ್ಮಜ್ಞಾನಕ್ಕೆ; ಏಕೆಂದರೆ ಬ್ರಹ್ಮವು ಎಂದೂ ಕಾರ್ಯವಲ್ಲ. ಅದು ಸ್ವತಸ್ಸಿದ್ಧವಾದುದು ಎಂಬುದು ಅದ್ವೈತಸಿದ್ಧಾಂತದ ನಿಲವು.

ವೇದಾಂತದಲ್ಲಿ ಉಪಾಸನೆಗಳನ್ನು ಪ್ರಧಾನವಾಗಿ ಅಂಗಾವಬದ್ಧೋಪಾಸನೆ, ಪ್ರತೀಕೋಪಾಸನೆ, ಮತ್ತು ಅಹಂಗ್ರಹೋಪಾಸನೆ ಎಂದು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಯಜ್ಞಕ್ಕೆ ಸಂಬಂಧಿಸಿದ್ದು. ಪ್ರಧಾನಕರ್ಮಕ್ಕೆ ಅಂಗವೆನಿಸಿದ ಉದ್ಗೀಥಾದಿ ಸಾಮಂಗಳನ್ನು ಬ್ರಹ್ಮವೆಂದು ಭಾವಿಸಿ ಉಪಾಸನೆಮಾಡುವುದೇ ಅಂಗಾವಬದ್ಧೋಪಾಸನೆ.[1] ಚಿನ್ನ, ಬೆಳ್ಳಿ, ತಾಮ್ರ, ಶಿಲೆ ಮುಂತಾದವುಗಳಿಂದ ಮಾಡಿದ ದೇವರ ಪ್ರತಿಮೆಗಳಲ್ಲಿ ತಮ್ಮ ಇಷ್ಟದೇವತೆಗಳ ಗುಣಗಳನ್ನೆಲ್ಲ ಆರೋಪ ಮಾಡಿ, ಬ್ರಹ್ಮವೇ ಈ ರೂಪ ಧರಿಸಿದೆ ಎಂದು ಉಪಾಸಿಸುವುದು ಪ್ರತೀಕೋಪಾಸನೆ. ಈ ಪ್ರತೀಕೋಪಾಸನೆಯೂ ಸಂಪದುಪಾಸನೆ ಮತ್ತು ಅಧ್ಯಾಸೋಪಾಸನೆ ಎಂದು ಎರಡು ವಿಧ. ಅಲ್ಪವಾದುದನ್ನು ಪ್ರತೀಕವಾಗಿ ಸ್ವೀಕರಿಸಿ ಸಾದೃಶ್ಯಮಾತ್ರದಿಂದ ಉತ್ಕೃಷ್ಟ ದೇವತಾದಿ ಗುಣಗಳನ್ನು ಆರೋಪಿಸಿ ಉಪಾಸಿಸಿದಾಗ ಸಂಪದುಪಾಸನೆ.' ಇಲ್ಲಿ ಉಪಾಸನೆಗೆ ವಸ್ತುವಾಗಿರುವ ಅಲ್ಪವಾದ ಪ್ರತೀಕದಲ್ಲಿ ಹೋಲಿಕೆಯ ಮೂಲಕ ಉತ್ಕೃಷ್ಟ ಗುಣಗಳನ್ನು (ಸಂಪತ್) ಆರೋಪಿಸಿ ಅವುಗಳನ್ನು ಪ್ರತೀಕದಲ್ಲಿ ಬೃಹತ್ತೆಂದು ಭಾವಿಸಿ ಉಪಾಸಿಸುವುದು. ಯಾವುದಾದರೂ ಸಾದೃಶ್ಯದಿಂದ ಫಲಕಾರಿಯಾಗುವ ಕರ್ಮಗಳಿಗೆ ಸಂಪತ್ತೆಂದು ಹೆಸರು. ಅಗ್ನಿಹೋತ್ರ ಮುಂತಾದ ಕರ್ಮವನ್ನಾಶ್ರಯಿಸಿ, ಅದರ ಫಲವೇನು ಎಂಬುದನ್ನು ತಿಳಿದು ಆ ಫಲವನ್ನು ಪಡೆಯುವ ಆಸೆಯಿಂದ ಉಪಾಸಿಸುವುದೇ ಸಂಪದುಪಾಸನೆ ಎಂದು ಶಂಕರರ ವಿವರಣೆ.[2] ಅಧ್ಯಾಸೋಪಾಸನೆಯಲ್ಲಿ ದೇವತಾದಿಗುಣಗಳು ಆರೋಪಿತವಾಗಿರುವ ಪ್ರತೀಕವೇ ಪ್ರಧಾನ.

ಇನ್ನು ಮೂರನೆಯದಾದ ಅಹಂಗ್ರಹೋಪಾಸನೆ ಎಂದರೆ ಜೀವಾತ್ಮನು ತಾನೇ ಬ್ರಹ್ಮ ಎಂದು ಪರಿಭಾವಿಸಿ ಉಪಾಸಿಸುವುದು. ಬ್ರಹ್ಮಸೂತ್ರದ ಆತ್ಮಾಧಿಕರಣದಲ್ಲಿ ಈ ವಿಷಯವನ್ನು ವಿವರಿಸಿದೆ (ಬ್ರ.ಸೂ. 4-1-3). ಜಗತ್ತೆಲ್ಲವೂ ಬ್ರಹ್ಮತತ್ವದಿಂದ ವ್ಯಾಪ್ತಿ

---

1 ಶಾಂಕರಭಾಷ್ಯ ೪-೧-೨-೩.

2 ಯುಗಯಾತ್ರೀ ಭಾರತೀಯ ಸಂಸ್ಕೃತಿ: ಸಂ. 1. ಪುಟ 284, ಮೈಸೂರು ವಿಶ್ವವಿದ್ಯಾಲಯ.

ಸಿದೆ. 'ಸರ್ವಂ ಖಲ್ವಿದಂ ಬ್ರಹ್ಮ'—(ಛಾಂ. 3-14-1)'ಈ ಎಲ್ಲವೂ ಬ್ರಹ್ಮವೇ' ಎಂದರಿತ ಜೀವಾತ್ಮ ಅಂತಿಮವಾಗಿ ಅಹಂ ಬ್ರಹ್ಮಾಸ್ಮಿ—'ನಾನೇ ಬ್ರಹ್ಮ' (ಬೃ. 1–1–40) ಎಂದು ಅರಿತುಕೊಳ್ಳುವುದು. ಇಲ್ಲಿ ಉಪಾಸ್ಯ ಉಪಾಸಕರಿಗೆ ಭೇದವಿಲ್ಲ. ಉಪಾಸಿಸುವ ವಸ್ತು ತನಗಿಂತ ಅನ್ಯವಲ್ಲ ಎಂದು ಪರಿಭಾವಿಸಿಕೊಳ್ಳುವುದು. ಸಾಧಕನು ಅಂತರ್ಮುಖಿಯಾದಾಗ ಮೊದಲ ಹಂತದಲ್ಲಿ ಭಗವಂತನು ಹೃದಯದಲ್ಲಿ ನೆಲಸಿದ್ದಾನೆ ಎಂದು ಭಾವಿಸುತ್ತಾನೆ. ಇದು ಬಲಿತಂತೆಲ್ಲ ತಾನೂ ಭಗವಂತನ ಅಂಶ ಎಂಬ ಪ್ರಜ್ಞೆಯೂ ಮೂಡುತ್ತದೆ. ಹೀಗೆಯೇ ಮುಂದುವರಿದಂತೆಲ್ಲ ಆ ಪರವಸ್ತುವೇ ತಾನೂ, ತನಗೂ ಅದಕ್ಕೂ ಯಾವ ಭೇದವು ಇಲ್ಲ ಎಂಬ ಅದ್ವೈತ ಪ್ರಜ್ಞೆಯೂ ನೆಲೆಸುತ್ತದೆ. ಆಗ ವಿಶ್ವಮಾನವನಾಗುತ್ತಾನೆ. ಉಪನಿಷತ್ತಿನಲ್ಲೇ "ಯಾವನು ಬೇರೊಂದು ದೇವರನ್ನು ತಾನು ಬೇರೆ, ಅದೇ ಬೇರೆ ಎಂದು ಉಪಾಸನೆಮಾಡುವನೋ ಅವನು ಸತ್ಯಾಂಶವನ್ನು ಅರಿಯಲಾರ; ಈ ವಿಶ್ವವೆಲ್ಲವೂ ಆತ್ಮ ಎಂದೇ ತಿಳಿದು ಉಪಾಸಿಸು; ನೀನಾದರೂ ನಾನೇ ಆಗಿರುವೆ, ನಾನಾದರೂ ನೀನೇ ಆಗಿರುವೆ" (ಬೃ.ಉ. 3–4–10, 6–5–7) ಎಂದು ಘೋಷಿಸಿದೆ. 'ಜಗತ್ತೆಲ್ಲವೂ ಶಿವಮಯ' 'ನಾನು ಶಿವನೇ' ಎಂಬ ಭಾವನೆಗೂ ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ 'ಸರ್ವವೂ ಬ್ರಹ್ಮವೇ' 'ನಾನೇ ಬ್ರಹ್ಮ' ಎಂಬ ಮಾತಿಗೂ ಅಂತರವಿಲ್ಲ. ವೀರಶೈವದರ್ಶನವು ಉಪನಿಷತ್ತಿನ ಬ್ರಹ್ಮ ಶಬ್ದಕ್ಕೆ ಸಂವಾದಿಯಾಗಿ ಲಿಂಗಪದವನ್ನು ಬಳಸಿದೆ. ಅದ್ವೈತಮತವು ಇದನ್ನು ಬಳಸಿಕೊಳ್ಳುವ ರೀತಿಗೂ ವೀರಶೈವರು ಅನ್ವಯಿಸಿಕೊಳ್ಳುವ ರೀತಿಗೂ ವ್ಯತ್ಯಾಸವಿದೆ. ಸರ್ವವೂ ಬ್ರಹ್ಮವೇ ಆದಮೇಲೆ ಜಗತ್ತೂ ಬ್ರಹ್ಮನದೇ ಆಗಿದೆ. ಹೀಗಿರುವಾಗ ಜಗತ್ತು ಕಲ್ಪಿತ ಅಥವಾ ಮಿಥ್ಯೆ ಎಂದು ಹೇಳುವುದಾದರೂ ಹೇಗೆ? ಎಂದು ಅದ್ವೈತಮತದ ಬಗೆಗೆ ಆಕ್ಷೇಪವೆತ್ತುತ್ತಾರೆ. ಆದ್ದರಿಂದ ವೀರಶೈವದರ್ಶನದಲ್ಲಿ ಪ್ರಾರಂಭದಲ್ಲಿ ದ್ವೈತ, ಅಂತಿಮವಾಗಿ ಅದ್ವೈತ. ಷಟ್‌ಸ್ಥಲದ ಮೊದಲಿನ ಮೂರು ಸ್ಥಲವು ಭೇದದಲ್ಲೂ, ಮುಂದಿನ ಮೂರು ಸ್ಥಲವು ಅಭೇದದಲ್ಲೂ ಕೊನೆಗಾಣುತ್ತದೆ. ಏಕೆಂದರೆ ಭಕ್ತಿ ಜ್ಞಾನ ಕ್ರಿಯೆಗಳ ಸಮನ್ವಯವು ಇಲ್ಲಿ ಮುಪ್ಪುರಿಗೊಂಡಿದೆ. ಶಿವ-ಜೀವರಿಗೆ ಮೊದಲು ಭೇದ, ಅಂತ್ಯದಲ್ಲಿ ಅಭೇದ. ಈ ಭೇದಾಭೇದ ಸಿದ್ಧಾಂತವನ್ನೇ ವೀರಶೈವವು ಮಾನ್ಯಮಾಡಿದೆ.

ಒಟ್ಟಿನಲ್ಲಿ ಪ್ರತಿಪಾದಿತವಾಗಿರುವ 'ಅಹಂಗ್ರಹೋಪಾಸನೆ' ಯನ್ನೇ ವೀರಶೈವ ಧರ್ಮವು ಇಷ್ಟಲಿಂಗೋಪಾಸನೆಯಲ್ಲಿ ತನ್ನದೇ ಆದ ರೀತಿಯಲ್ಲಿ ಬಳಸಿಕೊಂಡಿದೆ. ಇಲ್ಲಿನ ಇಷ್ಟಲಿಂಗೋಪಾಸನೆಯಲ್ಲಿ ಭಕ್ತಿ ಹಾಗೂ ಯೋಗದ ಅಂಶಗಳನ್ನು ಬಳಸಿಕೊಂಡು ಸಮೀಚೀನವಾದ ಷಟ್‌ಸ್ಥಲವೆಂಬ ತಾತ್ವಿಕಸಿದ್ಧಾಂತವನ್ನು ನಿರೂಪಿಸಿದೆ. ಶ್ರದ್ಧೆ, ಭಕ್ತಿ ಹಾಗೂ ಧ್ಯಾನಯೋಗವು ಈ ಉಪಾಸನೆಯಲ್ಲಿ ಅಳವಟ್ಟಿದೆ.

ಲಿಂಗಪೂಜೆಯ ಮಹತಿ

ಇಷ್ಟಲಿಂಗ ಪೂಜೆಯನ್ನು ಪರಾತ್ ಪರವಸ್ತುವಿನ ಸಂಕೇತವಾಗಿಟ್ಟುಕೊಂಡು ಉಪಾಸಿಸುವ ವೀರಶೈವಧರ್ಮದ ಪ್ರಾಚೀನತೆಯನ್ನು ವೇದಾಗಮಗಳಲ್ಲಿಯೇ ಕೆಲವು

ವಿದ್ವಾಂಸರು ಗುರುತಿಸಿದ್ದಾರೆ. ಮತ್ತೆ ಕೆಲವರು, ಲಿಂಗಪೂಜೆಯು ಪ್ರಾಚೀನವೇ ಹೊರತು, ಇಷ್ಟಲಿಂಗ ಕಲ್ಪನೆಯು ಬಸವಾದಿ ಪ್ರಮಥರ ಕಾಲದಿಂದಲೇ ರೂಪಿತವಾದದ್ದು ಎನ್ನುತ್ತಾರೆ. ಇದನ್ನು ವಿಮರ್ಶಿಸಿ ನಿರ್ಣಯಕ್ಕೆ ಬರುವುದು ಪ್ರಸ್ತುತ ಲೇಖನಕ್ಕೆ ಸಂಬಂಧಿಸದ ವಿಷಯ.

ಲಿಂಗಪೂಜೆಯು ಅತ್ಯಂತ ಪ್ರಾಚೀನವೆಂಬುದು ನಿರ್ವಿವಾದವಾದ ಅಂಶ. ವೇದ, ಪುರಾಣ, ಆಗಮಗಳಲ್ಲಿಯೇ ಲಿಂಗಪೂಜೆಯು ಅಸ್ತಿತ್ವದಲ್ಲಿತ್ತು ಎಂಬುದನ್ನು ಕಾಣಬಹುದು. ವೀರಶೈವದರ್ಶನದಲ್ಲಿ ವಿಶ್ವಕ್ಕೆ ಕಾರಣವಾಗಿರುವ ಪರಬ್ರಹ್ಮವನ್ನು ಲಿಂಗ, ಸ್ಥಲ, ಶೂನ್ಯ, ಬಯಲು ಮುಂತಾದ ಹೆಸರಿನಿಂದ ಕರೆದಿದೆ.

ಸಿದ್ಧಾಂತ ಶಿಖಾಮಣಿಯಲ್ಲಿ—

ಚರಾಚರಾತ್ಮಕವಾದ ಈ ಜಗತ್ತು ಎಲ್ಲಿಂದ ಉಗಮಿಸಿತ್ತದೋ ಮತ್ತು ಎಲ್ಲಿ ಲಯಹೊಂದುತ್ತದೆಯೋ ಅದೇ ಲಿಂಗ ಎಂಬ ವ್ಯಾಪಕವಾದ ಅರ್ಥವಿದೆ.[1]

ಸ್ವತಂತ್ರ ಸಿದ್ಧಲಿಂಗೇಶ್ವರರು ಲಿಂಗದ ಮಹತ್ವವನ್ನು ಹೀಗೆ ವಿವರಿಸುತ್ತಾರೆ—

ಲಿಂಗವೆಂಬುವುದು ಸರ್ವಕಾರಣ ನಿರ್ಮಲ
ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ
ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಕಾರಣ
ಲಿಂಗವೆಂಬುದು ಸರ್ವತತ್ವ ಪೂರಣ ನಿಜಚೈತನ್ಯವು
ಲಿಂಗವೆಂಬುದು ಜನ್ಮವಾರಿಧಿಯ ದಾಂಟಿಸುವ ಛತ್ರವು
ಲಿಂಗವೆಂಬುದು ಶರಣರ ಹೃದಯದಲ್ಲಿ
ಬೆಳಗುವ ಜ್ಯೋತಿರ್ಮಯಲಿಂಗವು
ಇಂತೀ ಲಿಂಗದ ಮರ್ಮವನರಿದವನೆ ಅರಿದವನು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಎಲ್ಲಕ್ಕೂ ಕಾರಣವಾಗಿರುವ, ಸಚ್ಚಿದಾನಂದ ಪರಿಪೂರ್ಣವಾಗಿರುವ ನಿಜ ಚೈತನ್ಯ ಸ್ವರೂಪವಾಗಿರುವ, ಸಂಸಾರಸಮುದ್ರವನ್ನು ದಾಟಿಸುವ ನಾವೆಯಾಗಿರುವ, ಈ ಪವಿತ್ರವಾದ ಜ್ಯೋತಿಸ್ವರೂಪವಾದ ಲಿಂಗವು ಪ್ರತಿಯೊಬ್ಬ ಮಾನವನ ಹೃದಯದಲ್ಲೂ ಹುದುಗಿದೆ. ಅದನ್ನು ಅರಿಯುವುದೇ ಜೀವನದ ಧ್ಯೇಯ. ಅದನ್ನು ಪ್ರತಿಯೊಬ್ಬ ವ್ಯಕ್ತಿಯೂ ಅರಿಯಬಲ್ಲ.

ಇಂತಹ ಲಿಂಗಸ್ವರೂಪವನ್ನರಿಯದೆ ಇದ್ದರೆ ಮಾನವಜೀವನ ವ್ಯರ್ಥವಾದಂತೆ. ಅದನ್ನರಿದ ಬಳಿಕವೇ ಜೀವನ ಸಾರ್ಥಕ ಎಂದು ಅಲ್ಲಮಪ್ರಭುಗಳು ಎಚ್ಚರಿಸುತ್ತಾರೆ :

---

1 ಲಯಂ ಗಚ್ಛತಿ ಯತ್ರೈವ ಜಗದೇತತ್ ಚರಾಚರಮ್ ।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್ ॥ (6–36)

ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ,
ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ.
ಸರ್ವಕಾರಣ ಲಿಂಗವಾಗಿ
ಲಿಂಗವನೆ ಅರಿದರಿದು, ಲಿಂಗಸಂಗವನೆ ಮಾಡುವೆ
ಸಂಗ ಸುಖದೊಳೋಲಾಡುವೆ ಗುಹೇಶ್ವರ.

ಪರಾತ್ಪರ ವಸ್ತುವೇ ಮೂರ್ತಿವೆತ್ತ ಲಿಂಗ ; ಇದು ಕೇವಲ ಅನುಭಾವಕ್ಕೆ ಸಿಲುಕುವ ಲಿಂಗ. ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ—'ವೇದ ವೇಧಿಸಲರಿಯದ ಅಭೇದ್ಯಲಿಂಗ. ಶಾಸ್ತ್ರಸಾಧಿಸಲರಿಯದ ಅಸಾಧ್ಯಲಿಂಗ, ತರ್ಕ ತರ್ಕಿಸಲರಿಯದ ಅತರ್ಕ್ಯಲಿಂಗ, ಆಗಮ ಗಮಿಸಲರಿಯದ ಅಗಮ್ಯಲಿಂಗ'ವದು.

ತಾತ್ವಿಕವಾಗಿ ಅಂಗದ ಕಲ್ಪನೆ ಬಹು ಉದಾತ್ತವಾದುದು. ಇದನ್ನು ಅರಿಯ ಬೇಕಾದರೆ ಓದುಗರು ಅನಿವಾರ್ಯವಾಗಿ ಕೆಲವು ತಾಂತ್ರಿಕ ಪದಗಳನ್ನು ಪರಿಚಯಿಸಿ ಕೊಳ್ಳಬೇಕು.

ನಿರಾಮಯವೂ ನಿರಾಕಾರವೂ ನಿರ್ಗುಣವೂ ನಿರ್ಮಲವೂ ಶಿವಸ್ವರೂಪವೂ ಆದ ಸರ್ವಶೂನ್ಯ ನಿರಾವಲಂಬ ಸ್ಥಿತಿಯಲ್ಲಿದ್ದ ಪರತತ್ತ್ವವನ್ನೇ ಪರಶಿವ ಎಂದು ಕರೆದಿದೆ, ತ್ರಿಮೂರ್ತಿಗಳ ಕಲ್ಪನೆಯಲ್ಲಿರುವ ಶಿವನಲ್ಲ. ಈ ನಿರಾವಲಂಬ ಸ್ಥಿತಿಯಲ್ಲಿದ್ದ ಶಿವ, ನಿರಂಜನ ಬ್ರಹ್ಮನಾಗಿ ಅಲ್ಲಿಂದ ಓಂಕಾರವಾಗಿ ಪರಿಣಮಿಸಿದ. ಈ ಓಂಕಾರದಿಂದ ಶೂನ್ಯ ಲಿಂಗ. ಈ ಶೂನ್ಯಲಿಂಗದಿಂದ ನಿಃಕಲಬ್ರಹ್ಮ ಉದಿಸುತ್ತದೆ.

ಈ ನಿಃಕಲ ಶಿವತತ್ವದಿಂದ, ಅಲ್ಲಿಯೇ ಅವಿನಾಭಾವದಿಂದ ಅಡಗಿದ್ದ ಶಕ್ತಿಯು ನೆನಹೇ, ತನ್ನ ತಾನರ್ಚಿಸಿ ಪೂಜಿಸಿಕೊಳ್ಳುವ ಲೀಲಾವಿಲಾಸದಿಂದ ಮಹಾಲಿಂಗದ ಉದಯಂಕ್ಕೆ ಕಾರಣವಾಗುತ್ತದೆ. ಅನಂತರ ಅದು ಸಚ್ಚಿತ್ಸ್ವರೂಪವಾದ ಲಿಂಗವಾಗುತ್ತದೆ. ವೀರಶೈವ ಅನುಭಾವಿಗಳ ಪ್ರಕಾರ ಲಿಂಗಸ್ವರೂಪವಾದ ಪರಬ್ರಹ್ಮವೇ, ಸ್ವಶಕ್ತಿಯ ಕ್ಷೋಭೆಯಿಂದ ಲಿಂಗಸ್ಥಲ ಮತ್ತು ಅಂಗಸ್ಥಲ ಎಂಬ ಎರಡು ಸ್ಥಿತಿಯನ್ನೂ ತಾಳುತ್ತದೆ.[1]

ಅಂಗಸ್ಥಲವೇ ಮಲತ್ರಯವಿಶಿಷ್ಟನಾದ ಸ್ಥೂಲಶಕ್ತಿಯಿಂದ ಕೂಡಿದ ಜೀವಾತ್ಮ ನೆನಿಸಿಕೊಳ್ಳುತ್ತಾನೆ. ಶಿವನಲ್ಲಿರುವ ವಿಮರ್ಶಾಶಕ್ತಿಯೇ ಅಂಗಸ್ಥಲವನ್ನಾಶ್ರಯಿಸಿ ಭಕ್ತಿ ಎನಿಸಿಕೊಂಡರೆ, ಲಿಂಗವನ್ನಾಶ್ರಯಿಸಿ ಶಕ್ತಿ ಎನಿಸಿಕೊಳ್ಳುತ್ತದೆ. ಪಾರಮಾರ್ಥಿಕ ವಾಗಿ ಭಕ್ತಿ ಶಕ್ತಿಗಳೆರಡರಲ್ಲಿಯೂ ಭೇದವಿಲ್ಲ. ಅಂಗವೂ ತ್ಯಾಗಾಂಗ, ಭೋಗಾಂಗ

---

[1] ಸ್ವಶಕ್ತಿ ಕ್ಷೋಭಮಾತ್ರೇಣ ಸ್ಥಲಂ ತದ್ವಿವಿಧಂ ಭವೇತ್।
ಏಕಂ ಲಿಂಗಸ್ಥಲಂ ಪ್ರೋಕ್ತಂ ಅನ್ಯದಂಗಸ್ಥಲಂ ಸ್ಮೃತಮ್॥ -ಅನುಭವಸೂತ್ರ

ಯೋಗಾಂಗವೆಂದು ಮೂರು ರೀತಿಯಾದರೆ, ಲಿಂಗವೂ ಇಷ್ಟ, ಪ್ರಾಣ, ಭಾವಲಿಂಗಗಳೆಂಬ ಮೂರು ತೆರನಾಗುತ್ತದೆ. ತ್ಯಾಗಾಂಗವು ಭಕ್ತ ಮಹೇಶ ಎಂದೂ, ಭೋಗಾಂಗವು ಪ್ರಸಾದಿ, ಪ್ರಾಣಲಿಂಗಿ ಎಂದೂ ಯೋಗಾಂಗವು ಶರಣ ಐಕ್ಯವೆಂದೂ ಆರು ತೆರನಾಗಿರುತ್ತದೆ. ಅಂತೆಯೇ ಈ ಇಷ್ಟಲಿಂಗವು ಗುರುಲಿಂಗ, ಆಚಾರಲಿಂಗವೆಂದೂ ಪ್ರಾಣಲಿಂಗವು ಪ್ರಸಾದಲಿಂಗ, ಚರ (ಜಂಗಮ) ಲಿಂಗವೆಂದೂ, ಭಾವಲಿಂಗವು ಶಿವಲಿಂಗ ಮಹಾಲಿಂಗವೆಂದೂ ಆರು ರೀತಿಯಾಗುತ್ತವೆ. ಈ ಆರು ಲಿಂಗಗಳಲ್ಲಿ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಗಳು ನೆಲೆಸಿರುತ್ತವೆ. ಈ ಶಕ್ತಿಗಳು ಅಂಗೋಪಾಸಕನಾದ ಅಂಗನನ್ನು (ಜೀವಾತ್ಮ) ಲಿಂಗಾಭಿಮುಖನನ್ನಾಗಿ ಮಾಡಿ ಕಡೆಗೆ, ಅವನನ್ನೂ ಲಿಂಗರೂಪಿಯನ್ನಾಗಿ ಮಾಡಲು ಕಾರಣಗಳಾಗುತ್ತವೆ. ಇದು ವೀರಶೈವಸಿದ್ಧಾಂತದ ಸ್ಥೂಲವಾದ ತಾತ್ವಿಕ ಸ್ವರೂಪ.

ಭೌತಿಕ ದೃಷ್ಟಿಯಿಂದ ನಾವು ಪೂಜಿಸುವ ಶಿವಲಿಂಗದಲ್ಲಿ ಗೋಳಕಾಕಾರ, ಕೆಳಗಿನ ಪಾಣಿಪೀಠ, ಪಕ್ಕದ ಜಲಹರಿ, ಈ ಮೂರು ಭಾಗಗಳಿವೆ. ಇದರ ಮೇಲೆ ಕಪ್ಪು ಕಂಥೆಯನ್ನು ಹೊದಿಸಿದ್ದಾರೆ. ದೃಷ್ಟಿಯೋಗದಲ್ಲಿ ಈ ಕಂಥೆಗೆ ಬಹಳ ಮಹತ್ವವಿದೆ. ಇದರ ಪೀಠ, ಪಿಂಡಿಕೆ, ಹಾಗೂ ಗೋಮುಖಗಳು ಬಿಂದು ನಾದ ಕಲೆಗಳ ಪ್ರತಿನಿಧಿಗಳು.

ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ

ಈ ತಾತ್ವಿಕ ನಿಲವು ಆಚರಣೆಯಲ್ಲಿ ಅಳವಟ್ಟಾಗ ಲಿಂಗಾಂಗಸಾಮರಸ್ಯವೆನಿಸಿಕೊಳ್ಳುತ್ತದೆ. ಇಷ್ಟಲಿಂಗೋಪಾಸನೆಯೇ ವೀರಶೈವಧರ್ಮದ ತಿರುಳು. ಆದ್ದರಿಂದಲೇ ವೀರಶೈವಸಿದ್ಧಾಂತದಲ್ಲಿ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಎನಿಸಿಕೊಳ್ಳುತ್ತದೆ. ಆತ್ಮನಿಲ್ಲದ ಶರೀರ ಶವ ಎನಿಸಿಕೊಳ್ಳುವಂತೆ ಇಷ್ಟಲಿಂಗೋಪಾಸನೆ ಇಲ್ಲದವನು ವೀರಶೈವನಾಗಲಾರ. ಈ ಅಭಿಪ್ರಾಯದಿಂದಲೇ ವೀರಶೈವಶಬ್ದಕ್ಕೆ ಈ ರೀತಿ ನಿರ್ವಚನವಿದೆ. 'ಯಾವನು ಕರಪೀಠದಲ್ಲಿ ಗುರುಕೊಟ್ಟ ಇಷ್ಟಲಿಂಗವನ್ನಿಟ್ಟು ಬಾಹ್ಯಕ್ರಿಯೆ ಹಾಗೂ ಬಯಕೆಗಳೆಲ್ಲವನ್ನೂ ತೊರೆದು, ಭಕ್ತಿಯಿಂದ ಮನಸ್ಸನ್ನು ಅಲ್ಲಿಯೆ ಲಯಮಾಡಿ ಪೂಜಿಸುವನೋ ಆತನೇ ವೀರಶೈವ.[1]

ಶ್ರೀಗುರುವು ಲಿಂಗವನ್ನು ಅರ್ಚನೆ ಅರ್ಪಣೆ ಅನುಸಂಧಾನಕ್ಕೋಸ್ಕರ ಶಿಷ್ಯನಿಗೆ ನೀಡಿದಾಗಲೇ ಇಷ್ಟಲಿಂಗವೆನಿಸಿಕೊಳ್ಳುತ್ತದೆ. ಇಷ್ಟಲಿಂಗ ಎಂಬ ಪದಕ್ಕೆ ಸಿದ್ಧಾಂತ ಶಿಖಾಮಣಿಯು ಈ ರೀತಿ ನಿರ್ವಚನ ಮಾಡಿದೆ—ಅನಿಷ್ಟವನ್ನು ಪರಿಹರಿಸಿ ಇಷ್ಟವನ್ನುಂಟು

---

1. ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃಪ್ರಚಾರಃ ।
ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಃ ॥
(ಲಿಂ. ಲೀ. ಚಾರಿತ್ರ ಪುಟ. 110)

ಮಾಡುವುದರಿಂದ ಇದಕ್ಕೆ ಇಷ್ಟಲಿಂಗವೆಂದು ಹೆಸರು. (6-5) ಶಿವಾನುಭವಸೂತ್ರವು ಈ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ.[1]

'ಅನಿಷ್ಟವನ್ನು ನಿವಾರಿಸಿ ಇಷ್ಟವನ್ನು ದೊರಕಿಸುತ್ತದೆ. ಇಷ್ಟಿ ಎಂದರೆ ಪೂಜೆ, ಪ್ರತಿನಿತ್ಯವೂ ಲಿಂಗವನ್ನು ಆದರದಿಂದ ಪೂಜಿಸುವುದರಿಂದ ಇಷ್ಟಲಿಂಗ ಎಂದು ಹೆಸರಿಸಿದ್ದಾರೆ. ತನ್ನ ಭಕ್ತರಿಗೆ ಅದು ಇಷ್ಟಾರ್ಥವನ್ನೇ ಯಾವಾಗಲೂ ನೀಡುತ್ತದೆ. ಇಷ್ಟ ಎಂಬ ಪದದ ಆಧಾರದಮೇಲೆ ಹೊರಹೊಮ್ಮಿರುವ ಈ ನಿಷ್ಪತ್ತಿ ಇಷ್ಟಲಿಂಗೋಪಾಸನೆಯ ಗಹನತೆಯನ್ನು ತಿಳಿಸಲು ಹೆಚ್ಚು ಉಪಯುಕ್ತವಲ್ಲವೇನೊ ಎನಿಸುತ್ತದೆ. ಏಕೆಂದರೆ ಪ್ರತಿಯೊಬ್ಬ ಉಪಾಸಕನಿಗೂ ತನ್ನ ಇಷ್ಟದೈವವೇ ಎಲ್ಲ ಇಷ್ಟಾರ್ಥವನ್ನು ಈಡೇರಿಸುತ್ತದೆ ಎಂಬ ಭಾವ ಇದ್ದೇಇರುತ್ತದೆ.

ವೀರಶೈವಧರ್ಮದಲ್ಲಿ ಲಿಂಗದೀಕ್ಷೆ ಅಥವಾ ಲಿಂಗಾನುಗ್ರಹ ಲಭಿಸುವುದು ಒಂದು ಪುಣ್ಯದ ಫಲದಿಂದ. ಸಚ್ಚಿದಾನಂದಾತ್ಮಕವಾದ ಪರವಸ್ತು ತನ್ನ ಅಂಶಿಕವೇ ಆದ ಜೀವಾತ್ಮನ ಉದ್ಧಾರಕ್ಕಾಗಿ ಗುರು-ಲಿಂಗ-ಜಂಗಮರೂಪದಲ್ಲಿ ಸಾಕಾರಕ್ಕೆ ಬಂದು ಸಂಳುಹುದೋರುತ್ತಾನೆ. ಗುರುವು ಶಿಷ್ಯನಿಗೆ ಲಿಂಗದೀಕ್ಷಾಸಂಸ್ಕಾರಮಾಡಿ ಭವಿಯನ್ನು ಭಕ್ತನನ್ನಾಗಿ, ನರನನ್ನು ಹರನನ್ನಾಗಿ ಮಾಡುತ್ತಾನೆ. ಹೀಗಾಗಬೇಕಾದರೆ ಪ್ರತಿಯೊಬ್ಬನೂ ಗುರುಪುತ್ರನಾಗಿರಬೇಕು. ಅಂದರೆ ಗುರುವಿನಿಂದ ಇಷ್ಟಲಿಂಗಾನುಗ್ರಹವು ದೊರೆಯಬೇಕು. ಇದೇ ಶಿವದೀಕ್ಷೆ ಅಥವಾ ಲಿಂಗದೀಕ್ಷೆ. ಆದ್ದರಿಂದಲೇ ಅಷ್ಟಾವರಣದಲ್ಲಿ ಮೊದಲ ಸ್ಥಾನ ಗುರುವಿನದು. ದೀಕ್ಷೆಯು ಜೀವಿಗೆ ಗುರುವು ನೀಡುವ ಸಂಸ್ಕಾರ. ಮಣ್ಣು ಸಂಸ್ಕಾರದಿಂದ ಮಡಕೆಯಾಗುವಂತೆ, ಸುವರ್ಣವು ಸಂಸ್ಕಾರದಿಂದ ತೊಡಿಗೆಯಾಗುವಂತೆ, ಜೀವಿಯು ಲಿಂಗಸಂಸ್ಕಾರದಿಂದ ಹರನಾಗಲು ಅರ್ಹತೆ ಪಡೆಯುತ್ತಾನೆ.

ನರ ಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ
ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೇ
ಭವಿ ಎಂಬುದ ತೊಡೆದು ಭಕ್ತ ಎಂದೆನಿಸಿದ ಗುರುವೇ
ಚನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು''

ಎಂಬ ಅಕ್ಕನ ವಾಣಿ ಇಷ್ಟಲಿಂಗೋಪಾಸನೆಯಲ್ಲಿ ಅಗತ್ಯವಾಗಿರುವ ಗುರುವಿನ ಮಹತಿಯನ್ನು ಸುಂದರವಾಗಿ ಅರುಹುತ್ತದೆ.

ಆಣವ ಮಾಯಾ ಮತ್ತು ಕಾರ್ಮಿಕ ಮಲತ್ರಯಂಗಳಿಂದ ಅಂಗನಿಗೆ ಕಾರಣ

---

1. ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟಪರಿಹಾರಕಂ ।
ಇಷ್ಟಿಃ ಪೂಜಾ ತಥಾ ನಿತ್ಯಮಿಷ್ಟಂ ಪೂಜಿತಮಾದರಾತ್ ॥
ಇಷ್ಟಲಿಂಗಮಿತಿ ಪ್ರೋಕ್ತಂ ಆಚಾರ್ಯೈರ್ಲಿಂಗ ಪೂಜಕೈಃ ।
ಇಷ್ಟಮರ್ಥಂ ಸ್ವಭಕ್ತಾನಾಂ ಅನುಯಚ್ಛತಿ ಸರ್ವದಾ ॥
(ಅನುಭವಸೂತ್ರ, 3-9,10)

ಸೂಕ್ಷ್ಮ ಮತ್ತು ಸ್ಥೂಲತನುಗಳು ಘಟಿಸುತ್ತವೆ. ಈ ಮಲತ್ರಯಗಳನ್ನು ಕಳೆಯಲು ಶ್ರೀಗುರುವು ಕ್ರಿಯಾ, ವೇಧಾ ಮತ್ತು ಮಂತ್ರದೀಕ್ಷೆಗಳ ಮೂಲಕ ದೀಕ್ಷೆಗಳನ್ನು ನೀಡುತ್ತಾನೆ. (ಗುರುವು ಶಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನ್ನಿಟ್ಟು ಸುಷುಮ್ನೆಯಲ್ಲಿ ಸುಪ್ತವಾಗಿದ್ದ ಶಿವಕಳೆಯನ್ನು ಜಾಗೃತಗೊಳಿಸಿ ಭಾವಕ್ಕೆ ತಂದು ಕಾರಣ ಶರೀರದಲ್ಲಿ ಭಾವಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲಿಂದ ಅದನ್ನೂ ಪ್ರಾಣಕ್ಕೆ ತಂದು ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗದಲ್ಲಿ ನೆಲೆಗೊಳಿಸುವಂತೆ ಮಾಡುತ್ತಾನೆ. ಪ್ರಾಣದಲ್ಲಿ ನೆಲೆಸಿದ ಶಿವಕಳೆಯನ್ನು ಗುರುವು ಶಿಷ್ಯನ ನಯನಗಳ ಮೂಲಕ ಹೀರಿ, ಕರಸ್ಥಲಕ್ಕೆ ತಂದು ಸ್ಥೂಲ ಶರೀರದಲ್ಲಿ ವಿಧ್ಯುಕ್ತಕ್ರಿಯೆಯಿಂದ ಇಷ್ಟಲಿಂಗವನ್ನು ಸ್ಥಾಪಿಸುತ್ತಾನೆ.

ಶಿಷ್ಯನ ಕರ್ಣದಲ್ಲಿ ಪ್ರಣವ ಪಂಚಾಕ್ಷರಿಯನ್ನು ಉಪದೇಶಿಸಿ ಶಿವಭಾವವನ್ನುಂಟುಮಾಡುತ್ತಾನೆ. ಪರಬ್ರಹ್ಮಸ್ವರೂಪವಾದ ಲಿಂಗವು ಹೀಗೆ ಅಂಗನ ಕರ ಮನ ಭಾವದಲ್ಲಿ ಇಷ್ಟ ಪ್ರಾಣ ಭಾವಲಿಂಗವಾಗಿ ಮೂರಾಗುತ್ತದೆ.)

ಬಸವಣ್ಣನವರು ಇದನ್ನು ಹೀಗೆ ತಿಳಿಸಿದ್ದಾರೆ—

ಅಂತರಂಗದೊಳಗಿರ್ದ ನಿರವಯ ಲಿಂಗವನು
ಸಾವಯ ಲಿಂಗವ ಮಾಡಿ ಶ್ರೀಗುರುಸ್ವಾಮಿ ಕರಸ್ಥಲಕ್ಕೆ
ತಂದುಕೊಟ್ಟ ಲಿಂಗವು ಅಂತರಂಗವನಾವರಿಸಿ
ಅಂತರಂಗದ ಕರಣಂಗಳೇ ಕಿರಣಂಗಳಾಗಿ,
ಆ ಬೆಳಗುವ ಚಿದಂಶವೇ ಪ್ರಾಣಲಿಂಗವು
ಆ ಮೂಲ ಚೈತನ್ಯವೇ ಭಾವಲಿಂಗ ಇದನರಿದು ನೋಡುವ
ನೋಟ ಭಾವ ಪರಿಪೂರ್ಣವಾಗಿ ತಾನು ತಾನಾದಲ್ಲದೆ ಇದಿರಿಟ್ಟು
ತೋರುವುದಿಲ್ಲವಾಗಿ ಅಖಂಡ ಪರಿಪೂರ್ಣವು ನಿಜವು ತಾನೆ

ಅಂತರಂಗದೊಳಗೆ ನಿರಾಕಾರವಾಗಿದ್ದ ಲಿಂಗವು ಸಾಕಾರವಾಗಿ ಬಹಿರಂಗಕ್ಕೆ ಗುರುವಿನ ಶಕ್ತಿಯ ಮೂಲಕ ಅರ್ಚನೆಗೆ ಯೋಗ್ಯವಾದದ್ದಾಗಿ ಇಷ್ಟಲಿಂಗವೆನಿಸಿಕೊಳ್ಳುತ್ತದೆ. ಇಲ್ಲಿ ಅವಯವವೆಂದರೆ ಕರಚರಣಾದಿ ಅವಯವಗಳೆಂದಲ್ಲ. ನಿರಾಕಾರ ಸಾಕಾರ ಚಿದಂಶವೇ ಪ್ರಾಣಲಿಂಗವಾಗಿ, ಚೈತನ್ಯವೇ ಭಾವಲಿಂಗವೆನಿಸಿಕೊಳ್ಳುತ್ತದೆ.

ವೀರಶೈವರು ಅರ್ಪಿಸುವ ಈ ಗೋಳಕರೂಪವಾದ ಇಷ್ಟಲಿಂಗ, ತನ್ನ ಹೊರಗೆ ಇರುವ, ಆಹ್ವಾನಿಸಿದರೆ ಬರುವ, ವಿಸರ್ಜಿಸಿದರೆ ಹೋಗುವ, ಪ್ರತಿಷ್ಠಿಸಿದರೆ ಕುಳಿತುಕೊಳ್ಳುವ ಪ್ರತಿಮೆಯಲ್ಲ. ಅಣು ರೇಣು ತೃಣ ಕಾಷ್ಠಗಳಲ್ಲಿ ನೆಲಸಿ, ಬ್ರಹ್ಮಾಂಡದಲ್ಲಿ ನೆಲೆಸಿ, ಅದರ ಪ್ರತಿಕೃತಿಯಾದ ಪಿಂಡಾಂಡದಲ್ಲಿಯೂ ನೆಲೆಸಿರುವ ಪರಾತ್ಪರ ವಸ್ತು; ತನ್ನೊಳಗಿನಿಂದಲೇ ಬಂದದ್ದು. (ತನ್ನ ಮಸ್ತಕದಲ್ಲಿ ನ್ಯಸ್ತವಾಗಿರುವ ಚಿದ್ಬೆಳಗನ್ನು ಭಾವಕ್ಕೆ ತಂದು, ಭಾವದಿಂದ ಮನಸ್ಸಿಗೆ, ಮನಸ್ಸಿನಿಂದ ಕಣ್ಣಿಗೆ, ಕಂಗಳಿಂದ ಕರಸ್ಥಲಕ್ಕೆ ತಂದು ಸ್ಥಾಪಿಸಿದ ಅಖಂಡ ತೇಜೋರೂಪವೇ ಈ ಇಷ್ಟಲಿಂಗ.)

ಬಸವಣ್ಣನವರು ಇದನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ :

ಅಯ್ಯಾ, ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿದ್ಬೆಳಗ
ಹಸ್ತಮಸ್ತಕಸಂಯೋಗದಿಂದೊಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ!
ಅಯ್ಯಾ, ಎನ್ನ ಮಸ್ತಕದೊಳೊಂದುಗೂಡಿದ ಮಹಾಬೆಳಗ
ತಂದು ಭಾವದೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಭಾವದೊಳಗೆ ಕೂಡಿದ ಮಹಾಬೆಳಗ
ಮನಸ್ಸಿನೊಳಗೆ ತಂದಿಟ್ಟಿರಲ್ಲಾ !
ಅಯ್ಯಾ, ಎನ್ನ ಮನಸ್ಸಿನೊಳಗೆ ಕೂಡಿದ ಮಹಾ ಬೆಳಗ
ತಂದು ಎನ್ನ ಕಂಗಳೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕಂಗಳೊಳು ಕೂಡಿದ ಮಹಾ ಬೆಳಗ
ತಂದು ಕರಸ್ಥಲದೊಳಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ, ಬೆಳಗಿ ಹೊಳೆವುತ್ತಿಪ್ಪ
ಅಖಂಡ ತೇಜವನೆ ಇಷ್ಟಲಿಂಗವೆಂಬ ದೃಷ್ಟಪ ತೋರಿ,
ನಿಶ್ಚಯಂವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ !
ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ,
ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ !
ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ
ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದ್ದಿರಲ್ಲ !

ಸಾಕಾರ—ನಿರಾಕಾರ

ಸದ್ಗುರುವು ಕರುಣಿಸಿದ ಇಷ್ಟಲಿಂಗವು ಅಖಂಡ ಬ್ರಹ್ಮಾಂಡದ ಶಕ್ತಿ. ಅದು ಪರಶಿವನ ನಿಜದೇಹ, ಘನತೇಜ. ಇಂತಹ ಸರ್ವಶಕ್ತವಾದ ಲಿಂಗವು ಶಿರದರ ಮನೆಯಿಂದ ಕರದರಮನೆಗೆ ಬಿಜಯಂಗೈಸಿದಾಗ ಭಕ್ತನಿಗೆ ಅವರ್ಣನೀಯವಾದ ಆನಂದ ವುಂಟಾಗುತ್ತದೆ. ಆ ಸ್ಥಿತಿಯಲ್ಲಿ ಹಾಡಿದ ವಚನಗಳಂ ಮನಂಬುಗುವಂತಿವೆ —

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತೆ ನಿಮ್ಮ ಶ್ರೀ ಮುಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ

ಪರಮಾತ್ಮನು ಸರ್ವವ್ಯಾಪಕನು. ಭಗವಂತನಿಂದ ಭರಿತವಾಗದ ಠಾವು ಆವುದೂ ಇಲ್ಲ. ಅವನು ಬ್ರಹ್ಮಾಂಡದ ಬೃಹದ್ರೂಪವನ್ನು ತಳೆದಿರುವನಲ್ಲದೆ, ಪಿಂಡಾಂಡದ ಸೂಕ್ಷ್ಮರೂಪವನ್ನೂ ತಾಳಿದ್ದಾನೆ. ಅಣುವಿಗೆ ಅಣು, ಮಹತ್ತಿಗೆ ಮಹತ್ತು.

ಇಡೀ ವಿಶ್ವವನ್ನೇ ವ್ಯಾಪಿಸಬಲ್ಲ ಶಕ್ತಿ ಸೂಕ್ಷ್ಮರೂಪವನ್ನು ತಳೆದು ಅಂಗೈಯಲ್ಲಿ ನೆಲೆಸಿರುವುದು ಸೋಜಿಗವೆನ್ನುತ್ತಾರೆ ಅಲ್ಲಮಪ್ರಭುಗಳು ಹೀಗೆ —

ಕಾಣಬಾರದ ಲಿಂಗ ಕರಸ್ಥಲಕ್ಕೆ ಬಂದರೆ
ಎನಗಿದು ಸೋಜಿಗ ! ಎನಗಿದು ಸೋಜಿಗ !
ಅಹುದೆನಲಮ್ಮೆನು, ಅಲ್ಲೆನಲಮ್ಮೆನು !
ಗುಹೇಶ್ವರ ಲಿಂಗವು ನಿರಾಳ ನಿರಾಕಾರ !
ಬಯಲು ಆಕಾರವಾದೊಡೆ !

ಭಗವಂತನು ಸಾಕಾರನೇ ? ನಿರಾಕಾರನೇ ? ಎಂಬುದು ಗಹನವಾದ ಪ್ರಶ್ನೆ. ತಾತ್ವಿಕ ಚರ್ಚೆಗೆ, ಧಾರ್ಮಿಕ ಭಿನ್ನಾಭಿಪ್ರಾಯಕ್ಕೆ ಎಡೆಮಾಡಿಕೊಟ್ಟಿದೆ. ವೀರಶೈವ ಧರ್ಮವು ಭಗವತ್ತತ್ತ್ವವು ನಿರಾಕಾರ ಮತ್ತು ಸಾಕಾರ ಎರಡೂ ರೂಪದಿಂದಿರುತ್ತದೆ ಎಂದು ಬೋಧಿಸುತ್ತದೆ. ಶುದ್ಧ ಜ್ಞಾನಕ್ಕೆ ವಿಷಯವಾದಾಗ ನಿರಾಕಾರನಾಗಿಯೂ, ಅರ್ಚನೆ ಹಾಗೂ ಭಕ್ತಿಗೆ ವಿಷಯವಾದಾಗ ಸಾಕಾರವಾಗಿಯೂ ಆಗುತ್ತದೆ. 'ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ' ಎನ್ನುತ್ತಾರೆ ಬಸವಣ್ಣನವರು. ಪರಿಮಳ ನಿರಾಕಾರ–ಕುಸುಮ ಸಾಕಾರ, ಬೆಳಕು ನಿರಾಕಾರ–ದೀಪ ಸಾಕಾರ, ರುಚಿ ನಿರಾಕಾರ–ಫಲ ಸಾಕಾರ ; ನಿರಾಕಾರವಾದ ನೀರು ಮಂಜುಗಡ್ಡೆಯಾದಾಗ ಸಾಕಾರವಾಗುತ್ತದೆ ಎನ್ನುತ್ತಾರೆ ರಾಮಕೃಷ್ಣಪರಮಹಂಸರು. ಆದ್ದರಿಂದ ಇಷ್ಟಲಿಂಗವು ನೋಟ–ಕೂಟಗಳಿಗೆ ಸಾಕಾರ. ಆದರೆ ಸ್ವರೂಪದಿಂದ ನಿರಾಕಾರ ಆದ್ದರಿಂದ ಲಿಂಗವು ಸಕಲಕಲಾಮೂರ್ತಿ ಎಂದಿದ್ದಾರೆ.

ಅಗಮ್ಯ ಅಗೋಚರ ನಿರವಯ ನಿರಾಕಾರವಾದ ಮಹಾಲಿಂಗವು ಭಕ್ತಿಯ ದೆಸೆಯಿಂದ ಸಾಕಾರವಾಗಿ ಕರಸ್ಥಲದಲ್ಲಿ ಮೂರ್ತಿಗೊಳ್ಳುತ್ತದೆ. ಅರ್ಚನೆ, ಅರ್ಪಣೆ, ಅನುಸಂಧಾನಕ್ಕೆ ಯೋಗ್ಯವಾಗುವ ರೂಪನ್ನು ನಿರಾಕಾರವಾದ ಘನ ತಳೆದುದರಿಂದ ಅದನ್ನು ಕೇವಲ ನಿರಾಕಾರವೆನ್ನುವಂತಿಲ್ಲ. ಲಿಂಗವು ಸಾಕಾರವಾಗಿದ್ದು, ಭಕ್ತಿಯು ಕೈಗೊಂಡು ನಿರಾಕಾರದತ್ತ ಒಯ್ದು, 'ಶೂನ್ಯ ಸಂಪಾದನೆ' ಉಂಟುಮಾಡುವುದರಿಂದ ಅದನ್ನು ಕೇವಲ ಸಾಕಾರವೆನ್ನುವಂತಿಲ್ಲ. ಬಯಲು ಆಕಾರವಾಗುವ ಬಗೆಯನ್ನು ಕಂಡು ಹೀಗೆ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಆದ್ದರಿಂದ ವೀರಶೈವಧರ್ಮದಲ್ಲಿ ನಿರಾಕಾರ ಸಾಕಾರಗಳು ಪ್ರತ್ಯೇಕಗಳಲ್ಲ; ಅವೆರಡಕ್ಕೂ ಬೆಸುಗೆ ಇದೆ. ದ್ವೈತಿಗಳು ಕೇವಲ ಸಾಕಾರವನ್ನೂ, ಅದ್ವೈತಿಗಳು

ನಿರಾಕಾರವನ್ನೂ ಪರಮಸತ್ಯವೆಂದು ಪ್ರತಿಪಾದಿಸುತ್ತಾರೆ. ಸಾಕಾರ-ನಿರಾಕಾರಗಳ ಉಪಾಸನೆಯೇ ಷಟ್‌ಸ್ಥಲದ ರಹಸ್ಯ.

ಕರಸ್ಥಲದಲ್ಲಿರುವ ಇಷ್ಟಲಿಂಗ ಪರಮನಿರಂಜನನ ಕುರುಹು. ಇದನ್ನು ಷಣ್ಮುಖಶಿವಯೋಗಿಗಳು ಹೀಗೆ ತಿಳಿಸಿದ್ದಾರೆ—

ಎನ್ನ ಕರಸ್ಥಳದ ಮಧ್ಯದಲ್ಲಿ ಪರಮನಿರಂಜನನ ಕುರುಹು ತೋರಿದ.
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯು ತೋರಿದ ;
ಆ ಕಳೆಯು ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ,
ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ,
ಎನ್ನೊಳಗೆ ತನ್ನ ತೋರಿದ, ತನ್ನೊಳಗೆ ಎನ್ನನಿಂಬಿಟ್ಟುಕೊಂಡ
ಮಹಾಗುರುವಿಗೆ ನಮೋ ನಮೋ ಎನುತಿರ್ದೆನಯ್ಯಾ ಅಖಂಡೇಶ್ವರ.

ಶ್ರೀಗುರುದತ್ತವಾಗಿ ಧರಿಸಿದ ಸಾಧಕನ ಇಷ್ಟಲಿಂಗದಲ್ಲಿ ಅರುಹಿನ ಕಳೆಯಿದೆ. ಇದರಲ್ಲಿ ಮಹಾಜ್ಞಾನದ ಬೆಳಕಿದೆ. ಆ ಬೆಳಕಿನಲ್ಲಿ ಸಾಧಕನು ತನ್ನ ವಿರಾಟ್‌ಶಕ್ತಿಯನ್ನು ಗುರುತಿಸಿಕೊಳ್ಳುತ್ತಾನೆ. ಪರಾತ್ಪರಚೈತನ್ಯವು ತನ್ನಲ್ಲಿಯೇ ಅಡಗಿರುವುದನ್ನು ಅನುಭಾವದ ಬೆಳಕಿನಲ್ಲಿ ಅರಿಯುತ್ತಾನೆ.

ಪ್ರಾಣಲಿಂಗವು ಪಾರಮಾರ್ಥಿಕ ಲಿಂಗ. ಇದರಲ್ಲಿ ನಾಲ್ಕು ಲಕ್ಷಣಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಅದು ನಾದರೂಪ. ಈ ಪರಮನಾದವೇ ಅನಾಹತನಾದ. ಎರಡನೆಯದಾಗಿ ಅದು ಒಳಗೆ ದೀಪವಿದ್ದು ರಂಧ್ರವುಳ್ಳ ಕುಂಭದೊಳಗಿಂದ ಹೊರಬರುವ ಬೆಳಕಿನ ಕಿರಣದಂತೆ, ಗಡಿಗೆಯೊಳಗಿನ ದೀಪವು ತನ್ನ ರಂಧ್ರಗಳ ಮೂಲಕ ಬೆಳಕನ್ನು ಹೊರಚೆಲ್ಲುವಂತೆ, ಪ್ರಾಣಲಿಂಗವೂ ಕೂಡ 'ಕಿರಣನಿಕರ'ಗಳ ಮೂಲಕ ತನ್ನ ಬೆಳಕನ್ನು ಹೊರಹೊಮ್ಮಿಸುತ್ತದೆ. ಮೂರನೆಯದಾಗಿ ದೇಹದಲ್ಲಿ ಶಕ್ತಿಯ ಕೇಂದ್ರಗಳೆನಿಸಿದ ಎಲ್ಲ ಚಕ್ರಗಳನ್ನು ವ್ಯಾಪಿಸಿದೆ. ನಾಲ್ಕನೆಯದಾಗಿ ಅದು ಕೆಂಪು, ಮಿಂಚು, ರನ್ನ, ಚಿನ್ನ, ಸೊಡರು ಮುಂತಾದ ಬಗೆಬಗೆಯ ಬಣ್ಣಗಳನ್ನು ಹೊರ ತೋರಿಸುತ್ತದೆ. ಒಟ್ಟಾರೆ ಜ್ಯೋತಿರ್ಮಯವಾದ, ವಿವಿಧ ವರ್ಣಗಳಿಂದ ಶೋಭಿಸುವ, ಇಡೀ ಶರೀರವನ್ನು ವ್ಯಾಪಿಸಿರುವ, ಆಂತರಿಕ ಸಾಮರಸ್ಯವಿರುವ ಲಿಂಗವೇ ಪ್ರಾಣಲಿಂಗ.[1]

ಭಾವಲಿಂಗವು ಸರ್ವವ್ಯಾಪಿ. ಇಷ್ಟಪ್ರಾಣಲಿಂಗಗಳು ಅದರ ಆವಿರ್ಭಾವಗಳೆನ್ನಬಹುದು. ಭಾವಲಿಂಗವು ವ್ಯಷ್ಟಿ ಸಮಷ್ಟಿ ಪ್ರಪಂಚಗಳೆರಡರಲ್ಲಿಯೂ ಅಖಂಡವಾಗಿ ವ್ಯಾಪಿಸಿದೆ. ಉಪನಿಷತ್ತಿನಲ್ಲಿ ಹೇಳುವ ಬ್ರಹ್ಮದ ಲಕ್ಷಣಗಳೆಲ್ಲವನ್ನೂ ಅದಕ್ಕೆ

---

1. ಕನ್ನಡಸಂತರ ಪರಮಾರ್ಥ : ಡಾ॥ ಆರ್. ಡಿ. ರಾನಡೆ : 1966, ಪುಟ-203. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅನ್ವಯಿಸಬಹುದು. ಇದೇ ಎಲ್ಲಕ್ಕೂ ಮೂಲಕಾರಣ. ಭಾವಲಿಂಗವು ಇಷ್ಟಲಿಂಗ ಪ್ರಾಣಲಿಂಗಗಳ ಮೂಲಕವೇ ಹೊಳೆಯುತ್ತದೆ. "ಇಷ್ಟಲಿಂಗವು ಭೌತಿಕಲಿಂಗ, ಪ್ರಾಣಲಿಂಗವು ಪಾರಮಾರ್ಥಿಕಲಿಂಗ, ಭಾವಲಿಂಗವು ದಾರ್ಶನಿಕಲಿಂಗ. ಭೌತಿಕತೆ, ಪಾರಮಾರ್ಥಿಕತೆ ಹಾಗೂ ದಾರ್ಶನಿಕತೆ—ಇವು ಈ ಲಿಂಗಗಳ ಪ್ರಧಾನ ಸ್ವರೂಪಗಳು.[1]

ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಸಾಧಕನು ಸಾಕಾರದ ನಿಚ್ಚಣಿಗೆಯ ಮೂಲಕವೇ ನಿರಾಕಾರದ ಶಿಖರವನ್ನೇರಬೇಕು. ಭಕ್ತಿ ಹಾಗೂ ಜ್ಞಾನಗಳೆರಡೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅಗತ್ಯ ಎಂದೊಪ್ಪುವವರು ಅನಿವಾರ್ಯವಾಗಿ ಸಾಕಾರ–ನಿರಾಕಾರಗಳನ್ನೊಪ್ಪಲೇಬೇಕು. ಅಲ್ಲಮಪ್ರಭುಗಳು ಇಂತಹ ಗಹನವಾದ ವಿಚಾರವನ್ನು ಸರಳವಾಗಿ, ಆದರೆ ನೇರವಾಗಿ ತಿಳಿಸಿರುವರು.

"ಆಕಾರ ನಿರಾಕಾರವೆಂಬೆರಡೂ ನಾನೇ ದಿಟ ! ದಿಟ ತಪ್ಪದು ಕೇಳಾ !
ಆಕಾರಕ್ಕೆ ಭಾವವೇ ಪ್ರಾಣ, ನಿರಾಕಾರಕ್ಕೆ ಮಹಾಜ್ಞಾನವೆ ಪ್ರಾಣ.
ಇಂತೀ ಉಭಯಕುಳಕ್ಕೆ ಇದು ಲಕ್ಷಣ ಕೇಳಾ ! ಎರಡರೊಳಗೆ
ಆವ ಮುಖದಲ್ಲಿ ಇಪ್ಪಾತನು ಆ ಮುಖದಲ್ಲಿ ಶುದ್ಧನಾಗದನ್ನಕ್ಕರ !
ಗುಹೇಶ್ವರಲಿಂಗಕ್ಕೆ ದೂರ ಕೇಳಾ"

ಸಾಕಾರಮಾರ್ಗವೇ ಆಗಿರಲಿ, ನಿರಾಕಾರ ಮಾರ್ಗವೇ ಆಗಿರಲಿ ಅಲ್ಲಿ, ಶುದ್ಧವಿರಬೇಕು. ಇದು ಅತ್ಯಂತ ಮುಖ್ಯವಾದ ವಿಚಾರ. ಆಕೃತಿಯು ಭಾವವನ್ನು ಧರಿಸಿರುವುದರಿಂದ ಸಾಧಕನ ಭಾವಕ್ಕೆ ತಕ್ಕಂತೆ ದೈವವು ಆಕಾರವನ್ನು ತಾಳುತ್ತದೆ. ಆದರೆ ಅದೇ ಅಂತಿಮಸ್ವರೂಪವಲ್ಲ. ನಿರಾಕಾರವು ಜ್ಞಾನವನ್ನಾಶ್ರಯಿಸಿರುವುದರಿಂದ, ಜ್ಞಾನದ ಹಂತವನ್ನು ತಲುಪಿದ ಕೂಡಲೇ ಆಕೃತಿಯು ಕರಗಿ ಹೋಗುತ್ತದೆ. ಇದನ್ನೇ ಯೋಗಮಾರ್ಗದಲ್ಲಿ ಸಬೀಜಸಮಾಧಿ ಹಾಗೂ ನಿರ್ಬೀಜಸಮಾಧಿ ಎಂದು ಕರೆದಿದ್ದಾರೆ. ಭಕ್ತಿಯ ಬೋನವು ಇಷ್ಟಲಿಂಗಕ್ಕೆ ಅರ್ಪಿತ. ಆಕಾರವಿರುವ ವಸ್ತುವಿಗೆ ಅರ್ಚನೆ ಸಾಧ್ಯವೇ ಹೊರತು ನಿರಾಕಾರವಾದದ್ದಕ್ಕೆ ಅಸಾಧ್ಯ. "ಸಾಕಾರ ವಿಡಿದು ಅರ್ಚನೆ ಪೂಜನೆಯ ಮಾಡಬೇಕಲ್ಲದೆ ನಿರಾಕಾರವ ನಂಬಲಾಗದು" ಎನ್ನುತ್ತಾನೆ ಶರಣನೊಬ್ಬ. ಆದ್ದರಿಂದ ಇಷ್ಟಲಿಂಗಪೂಜೆ ಅತ್ಯವಶ್ಯ. ಇಷ್ಟಲಿಂಗವನ್ನು ಅಷ್ಟವಿಧಾರ್ಚನೆ, ಷೋಡಶೋಪಚಾರಗಳ ಮೂಲಕ ಭಕ್ತಿಯಿಂದ ಆರಾಧಿಸಬೇಕು. ಅರಿವು ಆಚರಣೆಯಿಂದ ಕರಿಗೊಳ್ಳಬೇಕು. ಚನ್ನಬಸವಣ್ಣನವರು ಇಷ್ಟಲಿಂಗ–ಪ್ರಾಣಲಿಂಗದ ಸಂಬಂಧವೆಂತಹದು ಎಂಬುದನ್ನು ತಿಳಿಸುತ್ತಾ —

ಇಷ್ಟಲಿಂಗ ಪ್ರಾಣಲಿಂಗವೆಂಬಂದನಾರು ಬಲ್ಲರು ?
ಇಷ್ಟಲಿಂಗವೀಗ ದರ್ಪಣ, ಪ್ರಾಣಲಿಂಗ ಪ್ರತಿಬಿಂಬ ;

———

1. ಕನ್ನಡ ಸಂತರ ಪರಮಾರ್ಥ ಪಥ, ಪುಟ 204,

ದರ್ಪಣ ಮಸುಳಿಸಿದರೆ ಪ್ರಾಣಲಿಂಗವ ಕಾಣಬಹುದೇ ?
ಇಷ್ಟಪ್ರಾಣ ತೃಪ್ತಿಯೆಂಬುದು ನೋಡಾ ! ಇಷ್ಟಲಿಂಗದಲ್ಲಿ
ಅಷ್ಟವಿಧಾರ್ಚನೆ ಷೋಡಶೋಪಚಾರ ಮಸುಳಿಸಿದರೆ
ಪ್ರಾಣಲಿಂಗವ ಕಾಣಬಹುದೇ ?
ಇಷ್ಟಲಿಂಗಮವಿಶ್ವಸ್ಯ ಪ್ರಾಣಲಿಂಗಂ ನ ಪಶ್ಯತಿ ।
ದರ್ಪಣಪ್ರತಿಬಿಂಬಾಸಾಂ ಯಥಾ ರೂಪಂ ತಥಾ ಭವೇತ್॥ ಎಂಬುಂದಾಗಿ
ಇದು ಕಾರಣ ಕೂಡಲಚನ್ನಸಂಗಮದೇವ ಇಷ್ಟದಲ್ಲಿ
ಪ್ರಾಣ ತೃಪ್ತಿಯಾದವರ ತೋರಿ ಬದುಕಿಸಯ್ಯಾ.

ಎಂದಿದ್ದಾರೆ. ಇಷ್ಟಲಿಂಗವೆಂಬ ಕನ್ನಡಿಯಲ್ಲಿ ಪ್ರಾಣಲಿಂಗದ ಪ್ರತಿಬಿಂಬವನ್ನು ಕಾಣಬೇಕು. ದರ್ಪಣವು ಧೂಳಿನಿಂದ ಮಲಿನವಾಗಿದ್ದರೆ ಬಿಂಬವು ಕಾಣಿಸಲಾರದು/ಕಾಣಿಸುವುದಿಲ್ಲ. ಅಂತೆಯೇ ಇಷ್ಟಲಿಂಗಸಂಬಂಧಿಯಾದ ಕ್ರಿಯಾಚರಣೆ ಇಲ್ಲದಿದ್ದರೆ ಪ್ರಾಣಲಿಂಗದ ಸಾಕ್ಷಾತ್ಕಾರ ಅಸಾಧ್ಯ. ಇಕ್ಷುವಿನೊಳಗಣ ಮಾಧುರ್ಯ, ತಿಲದೊಳಗಣ ತೈಲ, ಕ್ಷೀರದೊಳಗಣ ಘೃತ, ಕಾಷ್ಠದೊಳಗಣ ಅಗ್ನಿ ಕ್ರಿಯಾಮಂಥನದಿಂದ ಮಾತ್ರ ಗೋಚರವಾಗುವಂತೆ, ಇಷ್ಟಲಿಂಗಕ್ಕೆ ಮಾಡುವ ಸತ್ಕ್ರಿಯಾಚರಣೆಯಿಂದಲೇ ವ್ಯಕ್ತಿಯ ಅಂತರಂಗದಲ್ಲಿ ಪರಮಾತ್ಮನ ಅರಿವು ಮೂಡುತ್ತದೆ ಎನ್ನುತ್ತಾರೆ ಅಲ್ಲಮಪ್ರಭುಗಳು.

ಇಷ್ಟಲಿಂಗಾರ್ಚನೆಯಲ್ಲಿ ಬಹಿರ್ಮುಖವಾಗಿದ್ದ ಮನಸ್ಸು ಹಾಗೂ ಇಂದ್ರಿಯಗಳು, ಈಗ ಅಂತರ್ಮುಖಿಗಳಾಗುತ್ತವೆ. ಮೊದಲು ಕೇವಲ ಸಕಲವಾಗಿದ್ದ ಇಷ್ಟಲಿಂಗವು ಅಂತರಂಗದಲ್ಲಿ ಪ್ರಾಣದಲ್ಲಿ ಸಕಲ-ನಿಷ್ಕಲ ಎರಡೂ ರೂಪಿನಿಂದ ಹೃದಯದಲ್ಲಿ ತೋರುತ್ತಾ ಪ್ರಾಣಲಿಂಗವೆನಿಸಿಕೊಳ್ಳುತ್ತದೆ. ಇಷ್ಟಲಿಂಗಪೂಜೆಗೆ ಆಗತ್ಯವಾಗಿದ್ದ ಭಸ್ಮ, ಜಲ, ಪುಷ್ಪ, ಧೂಪ, ದೀಪ, ಮುಂತಾದ ಬಾಹ್ಯದ ಯಾವ ಪರಿಕರಗಳೂ ಬೇಕಾಗದೆ, ಕೇವಲ ಮನಸ್ಸಿನಿಂದಲೇ ಪೂಜೆಯನ್ನು ಸಲ್ಲಿಸುತ್ತಾನೆ. ಬಹಿರ್ಮುಖವಾಗಿ ಇಷ್ಟಲಿಂಗಾನುಸಂಧಾನ ಮಾಡಿದಂತೆ, ಅಂತರ್ಮುಖನಾಗಿ ಪ್ರಾಣಲಿಂಗಾನುಸಂಧಾನ ಮಾಡುತ್ತಾನೆ. ಆಗ ಕಾಯವೇ ಸಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯದಲ್ಲಿ ಶಿವಶಿವಾ ಎಂಬ ಮಂತ್ರ' ಆಗ ಅಂಗಭಾವವಳಿದು ಲಿಂಗಭಾವ ಮೈಗೂಡುತ್ತದೆ. ಲಿಂಗವೂ ಪ್ರಾಣವು ಅವಿರಳಾತ್ಮಕವಾಗಿ ಪ್ರಾಣಲಿಂಗ ಗೋಚರವಾಗುತ್ತದೆ. ಷಣ್ಮುಖಶಿವಯೋಗಿಗಳು ಪ್ರಾಣಲಿಂಗದ ದರ್ಶನ ಯಾವಾಗ ಎಂಬುದನ್ನು ನಿರ್ದೇಶಿಸಿದ್ದಾರೆ. 'ಅಂಗ ಪ್ರಕೃತಿ ಗುಣಗಳೆಲ್ಲ ನಷ್ಟವಾಗಿ, ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು, ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಭಾವವಿಂಬುಗೊಂಡು, ಅನಿಮಿಷದೃಷ್ಟಿ ಅಚಲಿತವಾಗಿ ಬಲಿದು, ಆ ಲಿಂಗವು ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗವೆನಿಸಿಕೊಂಡು ಷಡಾಧಾರಚಕ್ರಂಗಳಲ್ಲಿ ಷಡ್ವಿಧ ಲಿಂಗವಾಗಿ ನೆಲೆಗೊಂಬುದು ....'' ಹೀಗೆ ಪ್ರಾಣವೇ ಲಿಂಗ

ವಾದ ಶರಣನಿಗೆ ಮನಸ್ಸೇ ಪೀಠ, ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಸುವರ್ಣದ ಕಲಶ, ಕರಣೇಂದ್ರಿಯಗಳೆಲ್ಲ ಸೇವಕರು.[1] ಆಗ ಹೊರಗು ಒಳಗು ಎಂಬ ದ್ವೈತಭಾವವಳಿಯುತ್ತದೆ. ಅದ್ವೈತದ ಅರಿವು ಮೂಡುತ್ತದೆ. ಪ್ರಾಣಲಿಂಗಪೂಜೆ ಯಲ್ಲಿ ಇರಬೇಕಾದ ಉಪಕರಣಗಳು ಯಾವುವು ಎಂಬುದನ್ನು ಪ್ರಭುದೇವರ ವಚನ ದಿಂದಲೇ ತಿಳಿಯಬಹುದು—

> ಎನ್ನ ಹೃದಯಕಮಲದಲ್ಲಿ ಮೂರ್ತಿಗೊಂಡಿಪ್ಪ ಎನ್ನ ಪ್ರಾಣೇಶ್ವರಂಗೆ
> ಎನ್ನ ಕ್ಷಮೆಯೇ ಅಭಿಷೇಕ, ಎನ್ನ ಪರಮ ವೈರಾಗ್ಯವೇ ಪುಷ್ಪಮಾಲೆ,
> ಎನ್ನ ಸಮಾಧಿಸಂಪತ್ತೇ ಗಂಧ, ಎನ್ನ ನಿರಹಂಕಾರವೇ ಅಕ್ಷತೆ,
> ಎನ್ನ ಸದ್ವಿವೇಕವೇ ವಸ್ತ್ರ, ಎನ್ನ ಸತ್ಯವೇ ದಿವ್ಯಾಭರಣ,
> ಎನ್ನ ವಿಶ್ವಾಸವೇ ಧೂಪ, ಎನ್ನ ದಿವ್ಯಜ್ಞಾನವೇ ದೀಪ,
> ಎನ್ನ ನಿಭ್ರಾಂತಿಯೇ ನೈವೇದ್ಯ, ಎನ್ನ ನಿರ್ವಿಷಯವೇ ತಾಂಬೂಲ,
> ಎನ್ನ ಮೌನವೇ ಘಂಟೆ, ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ,
> ಎನ್ನ ಶುದ್ಧಿಯೇ ನಮಸ್ಕಾರ, ಎನ್ನ ಅಂತಃಕರಣದಿಂದ ಮಾಡುವ
> ಸೇವೆಯೇ ಉಪಚಾರಗಳು. ಈ ಪರಿಯಲ್ಲಿ ನಿಮ್ಮ ಗುಹೇಶ್ವರ
> ಲಿಂಗಕ್ಕೆ ಪ್ರಾಣಪೂಜೆಯ ಮಾಡಿ ....

ಕ್ಷಮೆ, ವೈರಾಗ್ಯ, ಸಮಾಧಿ, ನಿರಹಂಕಾರ, ಸದ್ವಿವೇಕ, ಸತ್ಯ, ವಿಶ್ವಾಸ, ದಿವ್ಯಜ್ಞಾನ, ನಿಭ್ರಾಂತಿ, ನಿರ್ವಿಷಯ, ಮೌನ, ನಿರ್ವಿಕಲ್ಪ, ಅಂತಃಕರಣ ಶುದ್ಧಿ ಇವೆಲ್ಲವೂ ಅಂತ ರಂಗದಲ್ಲಿ ಸಿದ್ಧವಾಗಿರುವ ಪೂಜಾಸಾಮಗ್ರಿಗಳು. ಇಂತಾದರೂ ಇಷ್ಟಲಿಂಗೋಪಾಸ ನೆಯೇ ಪ್ರಾಣಲಿಂಗೋಪಾಸನೆಯ ಮಹಾದ್ವಾರ ಎಂಬುದನ್ನು ಮರೆಯುವಂತಿಲ್ಲ.

ಸಾಧಕನು ಅಂತರಂಗದ ಆಳಕ್ಕೆ ಇಳಿದಂತೆಲ್ಲ ಆತನಿಗೆ ವಿಶ್ವದ ವಿರಾಟ್‌ದರ್ಶನ ವಾಗುತ್ತದೆ. ಒಳಗು ಹೊರಗುಗಳ ಅಭೇದವೂ, ಸ್ಥೂಲ–ಸೂಕ್ಷ್ಮಗಳಿಗಿರುವ ಅಂತ ರವೂ, ಅವುಗಳಿಗಿರುವ ಸಂಬಂಧವೂ, ಒಂದೇ ಪರಾತ್ಪರ ವಸ್ತು ಹೇಗೆ ವಿಶ್ವಾಕಾರ ತಾಳಿತು ಎಂಬುದೂ ನಿಚ್ಚಳವಾಗಿ ಅನುಭವಕ್ಕೆ ಬರುತ್ತದೆ. ಭಾವದ ನೆಲೆಯಲ್ಲಿ ನಿಂತಾಗ ಅರಿವಿನ ಹರಹು ಸಿದ್ಧಿಸುತ್ತದೆ. ಈ ಭಾವಲಿಂಗಪೂಜೆಯಲ್ಲಿ ಪೂಜ್ಯ–ಪೂಜಕನಿಲ್ಲ, ವೇದ್ಯ–ವೇದಕನಿಲ್ಲ, ಗಮ್ಯ–ಗಮನವಿಲ್ಲ, ಅಲ್ಲಿ ದೇವರಿಲ್ಲ–ಭಕ್ತರಿಲ್ಲ, ನಾನು-ನೀನೆಂಬುದಿಲ್ಲ, ಇಹ–ಪರಗಳಿಲ್ಲ; ಇಲ್ಲಿ ನಡೆಯುವ ಪೂಜೆ ಪರಿಪೂರ್ಣ ಪೂಜೆ. ಇರವು, ಅರಿವು, ಆನಂದ ಎಲ್ಲವೂ ಪರಿಪೂರ್ಣ. ಕಾಲ ದೇಶಗಳನ್ನು ಮೀರಿದ ವ್ಯಕ್ತಿತ್ವ ಅವನಲ್ಲಿ ಮೂಡುತ್ತದೆ. ವಿಶ್ವಮಾನವನಾಗುತ್ತಾನೆ. ಇಲ್ಲಿ ನಡೆಯುವ ಪೂಜೆಯ ಸಾಮಗ್ರಿಗಳು ಎಂಥವು ಎಂಬುದು ಪ್ರಭುದೇವರ ಮಾತಿನಲ್ಲಿ ಹೀಗಿದೆ :

———

1. ಲಿಂಗಲೀಲಾವಿಲಾಸ ಚಾರಿತ್ರ್ಯ , ಪುಟ 315.

ಗಗನವೇ ಗುಂಡಿಗೆ, ಆಕಾಶವೇ ಅಗ್ಫವಣಿ !
ಚಂದ್ರಸೂರ್ಯರಿಬ್ಬರೂ ಪುಷ್ಪ ನೋಡಾ !
ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ !
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ !

ವೇದಾಂತದ ಪರಿಭಾಷೆಯಲ್ಲಿ ಹೇಳುವುದಾದರೆ ಇದು ಜೀವನ್ಮುಕ್ತಸ್ಥಿತಿ. ಒಟ್ಟಿನಲ್ಲಿ ಇಷ್ಟಲಿಂಗಕ್ಕೆ ಭಕ್ತಿಭಾವದಿಂದ ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವುದು ಇಷ್ಟಲಿಂಗಪೂಜೆ. 'ಆ ಲಿಂಗವ ಮನಸ್ಸಿನಲ್ಲಿ ಧ್ಯಾನಿಸಿ ಮನೋಮಧ್ಯದಲ್ಲಿಪ್ಪ ನಿಷ್ಕಲ ಬ್ರಹ್ಮವನು ಧ್ಯಾನವೆಂಬ ಹಸ್ತದಲ್ಲಿ ಪಿಡಿದು, ಕರಸ್ಥಲದಲ್ಲಿಪ್ಪ ಲಿಂಗವ ಅಂತರಂಗದಲ್ಲಿ ಪರಿಭಾವಿಸಿ ನೆರವುದೀಗ ಪ್ರಾಣಲಿಂಗದ ಪೂಜೆ, ಮನಸ್ಸು ತಲ್ಲಿಂಗದಲ್ಲಿ ಲೀಯವಾಗಿ ನಚ್ಚುಮಚ್ಚು ಅಚ್ಚೊತ್ತಿ ಆನಂದಿಪ್ಪುದೀಗ ಭಾವಲಿಂಗದ ಪೂಜೆ.' ಇವು ಮೂರೂ ಜೊತೆಯಲ್ಲಿ ಪ್ರತಿನಿತ್ಯವೂ ನಡೆಯಬೇಕಾದ ಉಪಾಸನೆಗಳು. ಸಾಧಕನು ಶ್ರದ್ಧೆ, ನಿಷ್ಠೆಗಳನ್ನು ಮೈಗೂಡಿಸಿಕೊಂಡು ಕ್ರಮಕ್ರಮವಾಗಿ ಇದನ್ನು ಸಾಧಿಸುತ್ತಾನೆ.

ಕಣ್ಣಿಗೆ ಬಾಹ್ಯವಸ್ತುಗಳನ್ನು ನೋಡುವ ಶಕ್ತಿ ಇದ್ದರೂ, ತನ್ನನ್ನು ತಾನೆ ನೋಡಿಕೊಳ್ಳುವ ಶಕ್ತಿ ಇಲ್ಲ. 'ಜಗವೆಲ್ಲ ಕಾಂಬ ಕಣ್ಣು ತನ್ನ ಕೊಂಬ ಕೊಯಿಲೆಯ ನರಿಯದು' ಎನ್ನುತ್ತಾರೆ ಬಸವಣ್ಣನವರು. ನಮ್ಮ ಕಣ್ಣನ್ನು ನೋಡಲು ಕನ್ನಡಿ ಅಗತ್ಯವಿದೆ. ಈ ನೋಟ ಕನ್ನಡಿಯಿಂದ ಲಭಿಸಿತೋ, ಕಣ್ಣಿನಿಂದಲೇ ದೊರೆಯಿತೋ ಹೇಳುವುದು ದುಸ್ತರ. ಕಣ್ಣಿನಿಂದ ಕನ್ನಡಿಯ ನೋಡಿ, ಆ ದೃಷ್ಟಿ ಕಾಣಲೂ ಕಣ್ಣೇ , ಕನ್ನಡಿಯೇ ಆ ಉಭಯ ದೃಷ್ಟಿಯಿಂದ ಇಷ್ಟದ ದೃಷ್ಟವ ಕಂಡು ಉಭಯ ನಿಶ್ಚಯವಾದಲ್ಲಿ ಕೈವಲ್ಯವೆಂಬ ಕರ್ಕಶ ಬೇಡಾ ! ಎನ್ನುತ್ತಾರೆ ಮೋಳಿಗೆಯ ಮಾರಿತಂದೆ. ಅಂತೆಯೇ ಲಿಂಗದರ್ಪಣದಿಂದ ಆತ್ಮನಲ್ಲಿ ನಿಗೂಢವಾಗಿರುವ ಶಕ್ತಿ, ವಿರಾಟ್ ಸ್ವರೂಪವನ್ನು ಅರಿಯಬೇಕು ಎಂಬುದು ಶರಣರ ಅಭಿಮತ.

ಇಷ್ಟಲಿಂಗದ ಆವಶ್ಯಕತೆ

ಇಷ್ಟಲಿಂಗೋಪಾಸನೆಯು ಆತ್ಮಸಾಕ್ಷಾತ್ಕಾರಕ್ಕೆ ಅಗತ್ಯ ಎಂಬುದು ವೀರಶೈವ ಧರ್ಮದ ನಿಲುವು. ಆಗಮಗಳು ವಚನಶಾಸ್ತ್ರಗಳು, ಇಷ್ಟಲಿಂಗಧಾರಣೆಯ ಮಹತ್ವವನ್ನು ಒತ್ತಿ ಹೇಳುತ್ತವೆ. ಬಸವಾದಿ ಪ್ರಮಥರು ಈ ವಿಷಯದಲ್ಲಿ ಏಕಾಭಿಪ್ರಾಯ ಉಳ್ಳವರು. ಇಷ್ಟಲಿಂಗೋಪಾಸನೆಯು ಆತ್ಮಸಾಕ್ಷಾತ್ಕಾರಕ್ಕೆ ಅತ್ಯಗತ್ಯವೇ ? ಇಲ್ಲವೇ ? ಎಂಬ ವಿಷಯದಲ್ಲಿ ಶರಣರಲ್ಲೇ ವಿಚಾರಮಂಥನ ಮಾಡಿ, ಅಂತಿಮವಾಗಿ ಅಗತ್ಯ ಎಂಬ ಸಿದ್ಧಾಂತವನ್ನು ನಿರೂಪಿಸಿರುವ ನುಲಿಯ ಚಂದಯ್ಯ, ಸಿದ್ಧರಾಮ,, ಘಟ್ಟಿವಾಳಯ್ಯ ಮುಂತಾದವರ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ಮನೋಜ್ಞವಾಗಿ ತರ್ಕಬದ್ಧವಾಗಿ ಚಿತ್ರಿಸಿರುವ ಶರಣಸಾಹಿತ್ಯವನ್ನು ಕಾಣಬಹುದು.

ಮೊಗ್ಗೆಯ ಮಾಯಿದೇವರು ಲಿಂಗಧಾರಣೆಯ ಮಹತ್ತ್ವವನ್ನು ತಿಳಿಸುತ್ತಾ—

ನೆನೆವುದರಿಂ ನಿರೀಕ್ಷಿಸುವುದತ್ಯಧಿಕಂ, ನೆನಹಿಂ ನಿರೀಕ್ಷೆಯಿಂ
ದನುದಿವಸಂ ಸಮರ್ಚಿಸುವುದತ್ಯಧಿಕಂ, ನೆನಹಿಂ ನಿರೀಕ್ಷೆಯಿಂ।
ದನುದಿನವುಂ ಸಮರ್ಚಿಸಂವುದರಿಂ ಶಿವಲಿಂಗಮಂನಂಗದಲ್ಲಿ
ಸುಮ್ಮನೆ ಧರಿಸುವುದತ್ಯಧಿಕಮತ್ಯಧಿಕಂ ನಿರುತಂ ಶಿವಾಧವಾ ॥

ಲಿಂಗದ ಸ್ಮರಣೆಗಿಂತಲೂ, ಅದರ ದರ್ಶನವೂ, ದರ್ಶನಕ್ಕಿಂತಲೂ ಅರ್ಚನೆಯೂ, ಅರ್ಚನೆಗಿಂತ ದೇಹದಲ್ಲಿ ನಿಸ್ಸಂಶಯವಾಗಿ ಧರಿಸುವುದೂ ಅತ್ಯಂತ ಶ್ರೇಷ್ಠ ಎಂದಿದ್ದಾರೆ. ಇದರ ಅಭಿಪ್ರಾಯ ವಾಸ್ತವವಾಗಿ ಅರ್ಚನೆ, ದೃಷ್ಟಿಯೋಗ, ಅನುಸಂಧಾನಗಳಿಗಿಂತ ಕೇವಲ ಧರಿಸಿರುವುದು ಎಂದಲ್ಲ. ಯಾಂತ್ರಿಕವಾಗಿ ಧರಿಸಿರುವುದರಿಂದಲೇ ಫಲ ಲಭ್ಯ ವಾಗುವುದೇ ? ಧರಿಸದೇ ಇದ್ದಾಗ ಈ ಕ್ರಿಯೆಗಳಿಗೆ ಅವಕಾಶವೇ ಇಲ್ಲದಂತಾಗುವುದ ರಿಂದ ಮೊದಲು ಧಾರಣೆ ಅಗತ್ಯ. ಧರಿಸಿದವನ ಮನದಲ್ಲಿ ಒಮ್ಮೆಯಾದರೂ ಜಾಗೃತಿ ಮೂಡಿ, ಲಿಂಗೋಪಾಸನೆಯನ್ನು ಕೈಗೊಳ್ಳಬಹುದು. ಇದಕ್ಕೆಲ್ಲಾ ಮೂಲಪ್ರೇರಣೆ ಧಾರಣೆಯಿಂದಲೇ ಉದಿಸುತ್ತದೆ. ಆದ್ದರಿಂದ ಇಷ್ಟಲಿಂಗಧಾರಣೆ ಅತ್ಯಗತ್ಯ.

ನಮ್ಮಲ್ಲಿರುವ ಆತ್ಮಲಿಂಗಕ್ಕೆ ಭವರೋಗವನ್ನು ನಿವಾರಣೆ ಮಾಡುವ ಸಾಮರ್ಥ್ಯ ಇರುವುದಾದರೆ ಹೊರಗಿನ ಲಿಂಗವೇಕೆ ಬೇಕು ಎಂಬ ಅನುಮಾನವು ಸಹಜವಾಗಿ ಏಳು ತ್ತದೆ. ಜಗತ್ತನ್ನು ನಡೆಸುವ ದಿವ್ಯಶಕ್ತಿಯೊಂದಿದೆ ಎಂಬ ಗಾಢವಾದ ನಂಬಿಕೆಯೊಂದಿ ದ್ದರೆ ಸಾಲದೇ ? ಅದನ್ನು ಅರಿಯಬೇಕೆಂಬ ಹಂಬಲವೇಕೆ ? ಅರಿಯುವುದರಿಂದಾ ಗುವ ಪ್ರಯೋಜನವೇನು ? ಅರಿಯಲು ಸಾಧ್ಯವೇ ? ಇಂತಹ ಅನೇಕ ಪ್ರಶ್ನೆ ಗಳು ಮೂಡುತ್ತವೆ. ಅಪರಿಮಿತವಾದ ಆ ಶಕ್ತಿಯನ್ನು ಅರಿಯಲು ಸಾಧ್ಯವೇ ಇಲ್ಲ. ಎಂದಾಗ ಅಜ್ಞೇಯತಾವಾದವಾಗುತ್ತದೆ. ಅರಿಯುವ ಫಲ ಆನಂದ ಸ್ವರೂಪವೇ ಆಗುವುದು. ಇಂತಹ ಆನಂದವನ್ನು ಅನುಭವಿಸಿದ ಜ್ಞಾನಿಗಳು, ಸಂತರು, ಶರಣರು, ಭಕ್ತರು ಅದನ್ನು ಅರಿತು ಅನುಭವಿಸದಿದ್ದರೆ ಜೀವನ ವ್ಯರ್ಥ ಎಂದು ಸಾರಿದ್ದಾರೆ. ಇದಕ್ಕಾಗಿ ಉಪಾಸನೆ ಅಗತ್ಯ.

ನಿರಾಕಾರವಾದ ನಿತ್ಯನಿರಂಜನನನ್ನು ಅರಿಯಲು ಸಾಕಾರದ ಆವಶ್ಯಕತೆ ಇದೆ. ಅರು ಹನ್ನು ಪಡೆಯಲು ಕುರುಹು ಬೇಕು. ಜ್ಞಾನವನ್ನು ಪಡೆಯಲು ಕ್ರಿಯೆ ಬೇಕು. ಕ್ರಿಯೆಯಿಲ್ಲದ ಜ್ಞಾನ, ಜ್ಞಾನವಿಲ್ಲದ ಕ್ರಿಯೆ ಕಾಲಿದ್ದು ಕಣ್ಣಿಲ್ಲದ, ಕಣ್ಣಿದ್ದು ಕಾಲಿಲ್ಲದ ವರಂತೆ. ಇದರಿಂದ ನಮ್ಮ ಗುರಿಯನ್ನು ತಲಪಲು ಸಾಧ್ಯವಿಲ್ಲ.

ಗೋವಿನ ಹೊಟ್ಟೆಯಲ್ಲಿ ಘೃತವಿದ್ದೊಡೇನೋ,
ಆ ಗೋವು ದಿನದಿನಕ್ಕೆ ಪುಷ್ಟವಾಗಬಲ್ಲುದೇ ?
ಅದು ಕಾರಣ, ಆ ಗೋವ ಪೋಷಿಸಿ, ಕರೆದು
ಕಾಸಿ ಘೃತವ ಮಾಡಿ, ಆ ಗೋವಿಂಗೆ ಕುಡಿಯಲೆರೆದಡೆ

ಆ ಗೋವು ದಿನದಿನಕ್ಕೆ ಪುಷ್ಟವಹುದು.
ಹಾಂಗೆ ತನ್ನಲ್ಲಿ ವಸ್ತುವಿದ್ದಡೇನೋ ?
ವಸ್ತುವ ಗುರುಮುಖದಿಂದ ಕರಸ್ಥಲಕ್ಕೆ ಪಡೆದು
ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿದಲ್ಲದೆ ಪ್ರಾಣಲಿಂಗವಾಗದು
ಕೂಡಲ ಚನ್ನಸಂಗಯ್ಯನಲ್ಲಿ ಇಷ್ಟಲಿಂಗವ ಸತ್ಕ್ರಿಯೆಯಿಂದ
ಪ್ರಾಣಕ್ಕೆ ವೇಧಿಸಿ, ತಾನೆಂಬ ಅನಿಷ್ಟವ
ತೊಲಗಿಸಿದಲ್ಲದೆ ಪ್ರಾಣಲಿಂಗಸಂಬಂಧವಾಗಬಾರದು.

ಎನ್ನುತ್ತಾರೆ ಚನ್ನಬಸವಣ್ಣನವರು. ಹಸುವೊಂದಕ್ಕೆ ಬಾವು ಆದರೆ ಅದಕ್ಕೆ ಹಸುವಿನ ತುಪ್ಪವೇ ಔಷಧವೆಂದು ಪಶುವೈದ್ಯನೊಬ್ಬ ವಿಧಿಸಿದರೆ, ಹಸುವಿನಲ್ಲಿ ಹಾಲಿದ್ದು, ಆ ಹಾಲಿನಿಂದಲೇ ತುಪ್ಪವಾಗುವುದರಿಂದ ಅದರಲ್ಲಿರುವ ತುಪ್ಪವೇ ಅದಕ್ಕೆ ಔಷಧಿಯಾಗುತ್ತದೆಯಲ್ಲಾ ಎಂದು ಆಲೋಚಿಸಿ ಸುಮ್ಮನಾದರೆ ಹಸುವಿಗೆ ರೋಗ ಉಲ್ಬಣಿಸಿ ಪ್ರಾಣವನ್ನು ಕಳೆದುಕೊಳ್ಳುತ್ತದೆ. ಇದಕ್ಕೆ ಬದಲಾಗಿ ಹಸುವಿನಲ್ಲಿರುವ ಹಾಲನ್ನು ಹಿಂಡಿ ತುಪ್ಪವನ್ನು ಪಡೆದು ಲೇಪಿಸಿದರೆ ನೋವು ಇಲ್ಲದಂತಾಗುತ್ತದೆ. ಅದರಲ್ಲಿಯೇ ತುಪ್ಪವಿದ್ದರೂ ಅದರ ನೋವಿಗೆ ಹೇಗೆ ಅದು ಒದಗಲಾರದೋ, ಹಾಗೆ ಆತ್ಮನಲ್ಲಿಯೇ ಪರಮಾತ್ಮನಿದ್ದರೂ ಅದು ಬಾಹ್ಯ ಕ್ರಿಯೆ, ಉಪಾಸನೆ, ಅನುಸಂಧಾನದ ಮೂಲಕ ಗೋಚರವಾಗಬೇಕೇ ಹೊರತು ತನಗೆ ತಾನೇ ಉಪಯುಕ್ತವಾಗಲಾರದು. ಹಸುವಿನ ಹಾಲನ್ನು ಹಿಂಡಿ ಹೊರತೆಗೆದಂತೆ ಸದ್ಗುರುವು ಶಕ್ತಿಪಾತದ ಮೂಲಕ ಶಿಷ್ಯನಲ್ಲಿ ಹುದುಗಿರುವ ಚಿತ್ಕಳೆಯನ್ನು ಭಾವಕ್ಕೆ, ಪ್ರಾಣಕ್ಕೆ, ಕರಕ್ಕೆ ತಂದುಕೊಡುವನು. ಕರದಿಷ್ಟಲಿಂಗದ ಅರ್ಚನೆ, ಅನುಸಂಧಾನದಿಂದ, ಸತ್ಯಶುದ್ಧ ಆಚಾರದಿಂದ, ಅದು ನಮ್ಮ ಅಜ್ಞಾನವನ್ನು ನಾಶಮಾಡುತ್ತದೆ. ಅರಿವನ್ನು ಅರಿದೆವೆಂದು ಕ್ರಿಯೆಯ ಬಿಡಬಾರದು.

ಆಕಾಶದಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು
ಭೂಮಿ ಇಲ್ಲದೆ ಬಂಡಿ ನಡೆವುದೇ ?
ಕಲಿಯಾದಡೆಯೂ ಕಜ್ಜವಿಲ್ಲದೆ ಆಗದು
ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು

ಎನ್ನುತ್ತಾರೆ ಜ್ಞಾನನಿಧಿ ಚನ್ನಬಸವಣ್ಣನವರು. ಪಿಂಡದಲ್ಲಿ ಪರಮಾತ್ಮನಿದ್ದರೂ ಪರಮಾನಂದವಾಗದು.

ಪ್ರಾಣಲಿಂಗವ ಪರಲಿಂಗವ ಮಾಡಿ
ಇಷ್ಟಲಿಂಗದ ಪೂಜೆಯ ಕಷ್ಟವ ನೋಡಾ।
ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ
ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೇ ?

ಬಯಲಾಸೆ ಹಾಸ್ಯವಾಯಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗವಿಲ್ಲಾದ ಕಾರಣ

ಎನ್ನುತ್ತಾರೆ ಘಟ್ಟಿವಾಳಯ್ಯನವರು. ಗರ್ಭದಲ್ಲಿ ಮಗುವಿದ್ದರೂ ಜನನಿಯು ತನ್ನ ಮಗುವಿನ ಸ್ವರೂಪವನ್ನು ಕಾಣಳು. ಶಿಶುವು ತಾಯ ಮುಖವನ್ನು ನೋಡಲಾರದು. ಒಡಲೊಳಗಡೆ ಇರುವ ಕಂದನಿಂದ ಆನಂದವಾಗಲಾರದು. ತಾಯಿ ಶಿಶುವನ್ನು ಹಡೆದು, ತೊಟ್ಟಿಲಲ್ಲಿಟ್ಟು ನೋಡಿದಾಗ, ಜೋಗುಳ ಹಾಡಿದಾಗ, ಮುದ್ದಾಡಿದಾಗ, ಅಪಾರ ಆನಂದವಾಗುವಂತೆ ಒಳಗಿನ ಅರುಹು ಕುರುಹಾಗಿ ಕರಸ್ಥಲಕ್ಕೆ ಬಂದು ಪೂಜಿಸಿ ಗೊಂಬಾಗ ಮಾತ್ರ ಆನಂದ ಉಂಟು. ಕಲ್ಲಿದ್ದಲಿನಲ್ಲಿ ಬೆಂಕಿಯಿದ್ದರೂ ಹೊರಗಿನ ಬೆಂಕಿಯ ಸ್ಪರ್ಶವಾದಾಗಲೇ, ತದ್ಗತವಾದ ಅಗ್ನಿ ಹೊರವಟ್ಟು ದಗ್ಧವಾಗುವುದು. ಹಾಗೆ ಇಷ್ಟಲಿಂಗವೆಂಬ ಸೊಡರಿನಿಂದ ಅಂತರಂಗದ ಜ್ಯೋತಿಯು ದರ್ಶನವಾಗುತ್ತದೆ. ಕಣ್ಣಿಗೆ ನೋಡುವ ಶಕ್ತಿ ಇದ್ದರೂ ದೀಪವಿಲ್ಲದೆ ಕತ್ತಲೆಯಲ್ಲಿ ಕಾಣಬಲ್ಲದೇ ? ಎನ್ನುತ್ತಾರೆ ಚನ್ನಬಸವಣ್ಣನವರು.

ಕಾಯಕನಿಷ್ಠೆ, ಜಂಗಮದಾಸೋಹ ಇವೆರಡರಿಂದಲೇ ಜೀವನದ ಸಿದ್ಧಿಯನ್ನು ಸಾಧಿಸಬಹುದಲ್ಲವೇ ? ಎಂಬ ಶರಣ ಚಂದಯ್ಯನ ಪ್ರಶ್ನೆಗೆ ಶರಣರು ಇಂದಿಗೂ ಉಪಯುಕ್ತವೆನಿಸುವ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಜಂಗಮವೆಂದರೆ ಸಕಲ ಜೀವರಾಶಿ. ಹುಟ್ಟಿನಿಂದ ಬರುತ್ತದೆಂದಿರುವ ಭ್ರಾಂತಿಯ ಜಂಗಮತ್ವವಲ್ಲ. ಯಾವುದಾದರೊಂದು ಕಾಯಕ ಮಾಡುತ್ತಾ ತನ್ಮೂಲಕ ಗಳಿಸಿದ್ದನ್ನು ನಿಃಸ್ವಾರ್ಥವಾಗಿ ಸಮಾಜ ಸೇವೆಗೆ ವಿನಿಯೋಗಿಸುತ್ತಾ ಬದುಕು ಸಾಗಿಸುತ್ತಿರುವಾಗ, ಆಧ್ಯಾತ್ಮಿಕ ಚಿಂತನೆಯ ಅಗತ್ಯವಿದೆಯೇ ? ಎಂಬುದು ಇಂದಿಗೂ ಅನೇಕ ಬುದ್ಧಿಜೀವಿಗಳನ್ನು ಕಾಡುತ್ತಿರುವ ಪ್ರಶ್ನೆ. ನೀತಿಯುಕ್ತವಾದ ಬದುಕು ಹಾಗೂ ಮಾನವೀಯತೆ ಇವೆರಡರಿಂದಲೇ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬಹುದು ಎಂಬ ವಿಚಾರ ರಮಣೀಯವಾದುದು ಹಾಗೂ ಬುದ್ಧಿಯು ಮೆಚ್ಚುವಂತಹುದು. ಇದೇ ಸಮತಾವಾದದ ದೃಷ್ಟಿ. ಆದರೆ ಈ ದೃಷ್ಟಿಯು ಭೌತಿಕ, ಸಾಮಾಜಿಕ ಹಂತದಲ್ಲೇ ಮಾನವನ ದೃಷ್ಟಿಯು ನೆಟ್ಟು ಆಧ್ಯಾತ್ಮಿಕತೆಯನ್ನು ಸಂಪೂರ್ಣ ಮರೆಮಾಡುತ್ತದೆ. ಅಲ್ಲದೆ ವ್ಯಕ್ತಿಯ ಅತೃಪ್ತಿಯನ್ನು ಎಂದೂ ತಣಿಸಲಾರದು, ಶಾಂತಿಯುತವಾದ ಬದುಕನ್ನು ತೋರಿಸಲಾರದು,

ನುಲಿಯ ಚಂದಯ್ಯನ ಇಷ್ಟಲಿಂಗ ಭಕ್ತನನ್ನು ಪರೀಕ್ಷಿಸುವ ಸಲುವಾಗಿ ಅವನು ಕಾರ್ಯದಲ್ಲಿ ನಿರತನಾಗಿದ್ದಾಗ ನೀರಿನಲ್ಲಿ ಬಿದ್ದು ಮರೆಯಾಗುವುದು. ಚಂದಯ್ಯ ಇದಕ್ಕೆ ವಿಚಲಿತನಾಗದೆ ತಾನು ನಿತ್ಯವೂ ಜಂಗಮ ದಾಸೋಹ ಮಾಡುತ್ತಿರುವುದರಿಂದ ಜಂಗಮವು ಲಿಂಗದ ಬಾಯಾಗಿರುವುದರಿಂದ ಆ ಸೇವೆಯಲ್ಲಿಯೇ ಲಿಂಗಭಾವನೆಯನ್ನು ಬೆಳೆಸಿಕೊಳ್ಳುವೆನೆಂದು ಲಿಂಗವನ್ನು ತ್ಯಜಿಸಿ ತೆರಳುತ್ತಾನೆ. ಲಿಂಗಯ್ಯ ಮೂರ್ತಿವೆತ್ತು

ಗಾಬರಿಗೊಂಡು ಮತ್ತೆ ಚಂದಯ್ಯನನ್ನು ಆಶ್ರಯಿಸಲು ಬರುತ್ತಾನೆ. ಆಗ ಚಂದಯ್ಯನು ಸ್ವೀಕರಿಸಲು ಹಿಂದೆಗೆಯುತ್ತಾನೆ. ಇವರಿಬ್ಬರ ಸವಸ್ಯೆ ಅನುಭವಮಂಟಪಕ್ಕೆ ಬರುತ್ತದೆ. ಅಲ್ಲಿ ಸ್ಪಷ್ಟವಾಗಿ ಜಂಗಮದಾಸೋಹದಲ್ಲಿ (ಸಮಾಜಸೇವೆ) ನಿರತನಾದವನಿಗೆ ಲಿಂಗದ ಹಂಗೇಕೆ ? ಭಾವಶುದ್ಧವಾಗಿಪ್ಪುದೆ ಗುರುಪೂಜೆ, ಜ್ಞಾನಶುದ್ಧವಾಗಿಪ್ಪುದೆ ಲಿಂಗಪೂಜೆ, ತ್ರಿಕರಣ ಶುದ್ಧವಾಗಿ ತ್ರಿಮಲಶುದ್ಧವಾಗಿ ನಿಂದುದೆ ಜಂಗಮಪೂಜೆ ಎಂದು ವಾದಿಸಿದ. ಆದಕ್ಕೆ ಅಲ್ಲಿನ ಶರಣರು ಚಂದಯ್ಯನ ಮಾತಿಗೆ ತಲೆದೂಗಿದರೂ ರತ್ನ ವಿಶೇಷವಾದರೂ ಅದು ಕುಂದಣದಲ್ಲಿ ಬಂಧಿಸಲ್ಪಟ್ಟಿರುವಂತೆ ಭಕ್ತನು ಲಿಂಗದಲ್ಲಿ ಸಂಧಿಸಿರಬೇಕು. ಜಂಗಮದಾಸೋಹದಲ್ಲಿದ್ದರೂ ಲಿಂಗವಿರಹಿತನಾಗಿರಬಾರದು, ಗುರುಲಿಂಗ ಜಂಗಮರು ಪರಸ್ಪರಾವಲಂಬಿಗಳು.

> ಜಂಗಮವೆ ಪರವೆಂದರಿದಡೇನು ? ಆ ಜಂಗಮದಂಗವಲ್ಲವೆ ಲಿಂಗ ?
> ಆ ಲಿಂಗಚೈತನ್ಯದರಿವು ಜಂಗಮವಲ್ಲವೆ ? ಅಂಗವಿಲ್ಲದ ಜೀವ,
> ಆತ್ಮನಿಲ್ಲದಂಗಕ್ಕೆ ಸರ್ವಭೋಗ ಉಂಟೇ ? ಮಣ್ಣಿಲ್ಲದೆ ಮರನುಂಟೆ ?
> ಮರನಿಲ್ಲದೆ ಹಣ್ಣುಂಟೆ ? ಹಣ್ಣಿಲ್ಲದೆ ಸ್ವಾದವುಂಟೆ ?
> ಹೀಗಿದೆ ಅರಿವುದಕ್ಕೆ ಕ್ರಮಂ
>
> ಅಂಗವೆ ಮಣ್ಣು, ಲಿಂಗವೆ ಮರನು, ಫಲವೆ ಜಂಗಮ, ರುಚಿಯೆ ಪ್ರಸಾದ
> ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಸಾಕಾರಲಿಂಗ
> ಜಂಗಮದಂಗವಯ್ಯಾ ಪ್ರಭುವೆ.

ಒಂದರಿಂದ ಇನ್ನೊಂದು ಒಡಮೂಡುತ್ತಾ ಹೋಗುತ್ತದೆ, ಒಂದಿಲ್ಲದಿದ್ದರೆ ಮತ್ತೊಂದಿಲ್ಲ. ಫಲದ ಸ್ವಾದ ಬೇಕು ಫಲ ಬೇಡವೆಂದರೆ ಸರಿಯಲ್ಲ. ಫಲ ಬೇಕು ಮರ ಬೇಡವೆಂದರೆ ಹೇಗೆ ? ಮರ ಬೇಕು ಮರ ಬೆಳೆಸಿದ ಮಣ್ಣು ಬೇಡವೆಂದರೆ ಯೋಗ್ಯವೇ? ಅಂತೆಯೇ ಜಂಗಮ ಬೇಕು. ಲಿಂಗ ಬೇಡವೆಂದರೆ ಸಲ್ಲದು, ಎಂದು ಯುಕ್ತಿಯುಕ್ತವಾಗಿ ಚನ್ನಬಸವಣ್ಣನವರು ಅಂಗಕ್ಕೆ ಲಿಂಗ ಸಾಹಿತ್ಯದ ಅಗತ್ಯವನ್ನು ಬೋಧಿಸುತ್ತಾರೆ.

ಇಷ್ಟಲಿಂಗೋಪಾಸನೆ ಮತ್ತು ಯೋಗ :

ಭಾರತೀಯ ಆಧ್ಯಾತ್ಮಶಾಸ್ತ್ರದಲ್ಲಿ ಯೋಗಕ್ಕೆ ಪ್ರಮುಖ ಸ್ಥಾನವಿದೆ. ಈ ದೇಶದಲ್ಲಿ ಹುಟ್ಟಿದ ಎಲ್ಲ ದರ್ಶನಗಳೂ, ಮತಪಂಥಗಳೂ ಯೋಗದಿಂದ ಪ್ರಭಾವಿತವಾಗಿವೆ. ಯೋಗದ ಮೂಲಕಲ್ಪನೆಯನ್ನು ಉಪನಿಷತ್ತುಗಳಲ್ಲಿಯೇ ಕಾಣಬಹುದು. ಕಠ, ತೈತ್ತಿರೀಯ, ಶ್ವೇತಾಶ್ವತರ ಹಾಗೂ ಮೈತ್ರಾಯಿಣೀ ಮುಂತಾದ ಉಪನಿಷತ್ತುಗಳಲ್ಲಿ ಸ್ಥೂಲವಾಗಿ ವಿವರಿಸಲ್ಪಟ್ಟಿದೆ. ಯೋಗದ ಮುಖ್ಯ ತತ್ವವೆಂದರೆ ಮಾನವನಲ್ಲಿರುವ ಅನುಪಮ ಶಕ್ತಿಯನ್ನು ಸಾಧನವನ್ನಾಗಿ ಉಪಯೋಗಿಸಿಕೊಂಡು ದಿವ್ಯ ಚೈತನ್ಯದೊಡನೆ ಬೆರೆಯಬೇಕು ಎನ್ನುವುದೇ ಆಗಿದೆ.

ಯೋಗವೆಂದರೆ ಜೀವಾತ್ಮ–ಪರಮಾತ್ಮರ ಐಕ್ಯ.[1] ಜೀವಾತ್ಮರ ಐಕ್ಯವೇ ಯೋಗ[2] ಶಿವಶಕ್ತಿ ಸಮಾಯೋಗವೇ ಯೋಗ. ಇದರಲ್ಲಿ ಯಾವ ಸಂಶಯ ಬೇಡ,[3] ಚಿತ್ತವೃತ್ತಿಗಳ ನಿರೋಧವೇ ಯೋಗ ಎಂದು ಪತಂಜಲಿಯು ಯೋಗ ಶಬ್ದಕ್ಕೆ ಅರ್ಥೈಸಿದ್ದಾನೆ,[4] ಈ ಎರಡು ವಿವರಣೆಯಲ್ಲಿ ವೀರಶೈವದರ್ಶನವು ಮೊದಲನೆಯದಕ್ಕೆ ಹೆಚ್ಚು ಸಮೀಪವಾಗುತ್ತದೆ.

ಯೋಗದ ಗಹನತೆಯು ಅರ್ಥವಾದಂತೆಲ್ಲ, ವಿಕಾಸ ಉಂಟಾಗಿ ಮಂತ್ರಯೋಗ, ಹಠಯೋಗ, ರಾಜಯೋಗ, ಲಯಯೋಗ ಎಂಬ ವರ್ಗೀಕರಣ ಪ್ರಾರಂಭವಾಯಿತು. ಕಾಲಕ್ರಮದಲ್ಲಿ ಈ ನಾಲ್ಕು ಯೋಗಗಳ ಜೊತೆಗೆ ಶೈವ ಪುರಾಣವು ಪ್ರತಿಪಾದಿಸುವ ಶಿವಯೋಗವು ಸೇರಿಕೊಂಡಿತು. ಲಿಂಗಪುರಾಣ ಹಾಗೂ ಶಿವಪುರಾಣಗಳಲ್ಲಿ ಪ್ರತಿಪಾದಿತವಾಗಿರುವ ಶಿವಯೋಗವು ಷಟ್‌ಚಕ್ರವನ್ನಾಧರಿಸಿ ನಿಂತಿದೆ.[5] ವೀರಶೈವ ದರ್ಶನವು ನಿರೂಪಿಸುವ ಶಿವಯೋಗವೂ ಇಷ್ಟಲಿಂಗೋಪಾಸನೆಯನ್ನಳವಡಿಸಿಕೊಂಡು ಷಟ್‌ಚಕ್ರದ ಆಧಾರದ ಮೇಲೆಯೇ ನಿಂತಿದೆ.

'ದೇಹವೇ ದೇವಾಲಯ ಅದರಲ್ಲಿ ವಾಸಿಸುವ ಜೀವಾತ್ಮನೇ ಶಿವ. ಆದ್ದರಿಂದ 'ನಾನೇ ಅವನು' ಎಂಬ ಭಾವನೆಯಿಂದ ಪೂಜಿಸಬೇಕು' ಎಂಬ ಮಾತಿದೆ. ಮಾನವ ಶರೀರವು ಬ್ರಹ್ಮಾಂಡದ ಪ್ರತಿಕೃತಿ. ಇದನ್ನು ಪಿಂಡಾಂಡವೆನ್ನುತ್ತಾರೆ. ಇದನ್ನರಿತವನು ಬ್ರಹ್ಮಾಂಡವನ್ನೇ ಅರಿಯಬಲ್ಲ, ಎಂಬ ಮಾತುಗಳನ್ನು ಯೋಗೋಪನಿಷತ್ತಿನಲ್ಲಿಯೇ ಕಾಣುತ್ತೇವೆ.[6] ಶರಣಸಿದ್ಧಾಂತವೂ ಈ ಎರಡು ಭಾವನೆಗಳನ್ನು ಸುಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಯೋಗಶಾಸ್ತ್ರವು ಮಾನವಶರೀರದಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ವಿವರಿಸಿರುವುದಲ್ಲದೆ ಅದನ್ನು ಅರಿಯುವ ಮಾರ್ಗವನ್ನು ನಿರೂಪಿಸಿದೆ. ವೀರಶೈವಧರ್ಮದಲ್ಲಿ ಇದಕ್ಕೆ 'ಷಟಚಕ್ರವಿವೇಕ' ವೆನ್ನುತ್ತಾರೆ. ಶಿವಯೋಗಿಗಳು ತಮ್ಮ ಯೋಗಭೂಮಿಕೆಯಲ್ಲಿ ಕಂಡುಕೊಂಡ ಸತ್ಯವಿದು. ಅದನ್ನು ಸಂಕ್ಷೇಪವಾಗಿ ಹೀಗೆ ವಿವರಿಸಬಹುದು.

ಶರೀರದಲ್ಲಿ ಮೇರುದಂಡವು (Spinal chord)ಅಥವಾ ಬೆನ್ನುಮೂಳೆಯು ದೈಹಿಕ ದೃಷ್ಟಿಯಿಂದಲ್ಲದೆ ಆಧ್ಯಾತ್ಮಿಕ ದೃಷ್ಟಿಯಿಂದಲೂ ಮಹತ್ವವಾದದ್ದು. ಜೀವಿಯ

---

1. ಸಂಯೋಗೋ ಯೋಗ ಇತ್ಯುಕ್ತಃ ಜೀವಾತ್ಮಪರಮಾತ್ಮನೋ :(ಯಾಜ್ಞವಲ್ಕ್ಯ 1–44)
2. ಯೋಗೋ ಜೀವಾತ್ಮನೋರೈಕ್ಯಂ (ಮಹಾನಿರ್ವಾಣತಂತ್ರ (14–12–3)
3. ಶಿವಶಕ್ತಿಸಮಾಯೋಗಃ ಯೋಗ ಏವ ನ ಸಂಶಯಃ (ತಂತ್ರಸಾರ 702)
4. ಯೋಗಶ್ಚಿತ್ತವೃತ್ತಿನಿರೋಧಃ 1–1-2
5. ಶಿವಮಹಾಪುರಾಣ ವಾಯವೀಯಸಂಹಿತೆ ಅಧ್ಯಾಯ 38–51–68.
6. ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ ।
ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್ ॥

ವಿಕಾಸದ ಹಂತದಲ್ಲಿ ಇದು ಪ್ರಮುಖವೆಂದು ವಿಜ್ಞಾನಿಗಳು ಒಪ್ಪಿದ್ದಾರೆ. ಮೇರು ದಂಡದ ಒಳಗಡೆ ಮಧ್ಯಭಾಗದಲ್ಲಿ ಹರಿಯುವ ಶಕ್ತಿಪ್ರವಾಹಕ್ಕೆ ಯೋಗಶಾಸ್ತ್ರವು ಸುಷುಮ್ನಾನಾಡಿ ಎಂದು ಕರೆದಿವೆ. ಇದರ ಎಡ ಬಲಗಳಲ್ಲಿ ಇಡಾ, ಪಿಂಗಳಾ ಎಂಬ ಎರಡು ನಾಡಿಗಳಿವೆ. ಇದಕ್ಕೆ ಸೂರ್ಯನಾಡಿ ಎಂದೂ ಚಂದ್ರನಾಡಿ ಎಂದೂ ಹೆಸರಿದೆ. ಈ ಮೂರು ನಾಡಿಗಳೂ ಒಂಡೆದೆ ಸಂಧಿಸುತ್ತವೆ. ಇದಕ್ಕೆ ತ್ರಿಕೂಟ, ತ್ರಿವೇಣೀ ಸಂಗಮ ಎಂದಿದ್ದಾರೆ. ಮೇರು ದಂಡದ ಉದ್ದಕ್ಕೂ ಆರು ಶಕ್ತಿಯ ಕೇಂದ್ರಗಳಿವೆ. ಇದಕ್ಕೆ ಚಕ್ರಗಳು ಅಥವಾ ಕಮಲಗಳೆಂದು ಹೆಸರು. ಅವುಗಳನ್ನು ಕ್ರಮವಾಗಿ ಮೂಲಾ ಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾಚಕ್ರವೆನ್ನುತ್ತಾರೆ. ಈ ಮೇರುದಂಡದ ಮೇಲ್ಭಾಗದಲ್ಲಿ ಅಂದರೆ ಭ್ರೂಮಧ್ಯದಿಂದ ಆಚೆ ಶಿರಸ್ಸಿನಲ್ಲಿ ಸಹ ಸ್ರಾರವೂ, ಕೆಳಭಾಗದ ಪ್ರಾರಂಭದಲ್ಲಿ ಮೂಲಾಧಾರಚಕ್ರವೂ ನೆಲೆಸಿದೆ. ಇಲ್ಲಿರುವ ಶಕ್ತಿಗೆ ಕುಂಡಲಿನಿ ಶಕ್ತಿ ಎಂದು ಹೆಸರು, ಸಹಸ್ರಾರಕ್ಕೆ ಸಾವಿರದಳಕಮಲವೆನ್ನು ತ್ತಾರೆ. ಪ್ರಾಣವಾಯುವು ಸುಷುಮ್ನೆಯ ಮೂಲಕ ವಿಷ್ಣುಗ್ರಂಥಿ, ಬ್ರಹ್ಮಗ್ರಂಥಿ, ರುದ್ರಗ್ರಂಥಿ ಎಂಬ ತಂಗುದಾಣಗಳನ್ನು ದಾಟಿ, ಸಹಸ್ರಾರದಲ್ಲಿ ಪ್ರವೇಶಿಸಿದರೆ ಜೀವಾ ತ್ಮನು ಆಗ ಸಮಾಧಿ ಅವಸ್ಥೆಯನ್ನು ಪಡೆಯುತ್ತಾನೆ. ಕುಂಡಲಿನಿಯಲ್ಲಿ ಗುಪ್ತ ವಾಗಿರುವ ಶಕ್ತಿಯು ಪ್ರಬುದ್ಧವಾಗಿ ಸಹಸ್ರಾರದಲ್ಲಿ ನೆಲೆಸಿರುವ ಶಿವನೊಡನೆ ಬೆರೆಯು ವುದೇ ಶಿವಯೋಗ ಅಥವಾ ಶಕ್ತಿವಿಶಿಷ್ಟಾದ್ವೈತ. ಇದೇ ಮನುಷ್ಯನ ಆತ್ಯಂತಿಕ ಸಿದ್ಧಿ. ಆಗ ಪರಿಪೂರ್ಣತೆಯನ್ನು ಪಡೆಯುತ್ತಾನೆ. ಈ ಚಕ್ರಗಳ ವಿವರಣೆಯು ಶರಣರ ವಚನಗಳಲ್ಲಿ ಅಧಿಕವಾಗಿ ಪ್ರಾಣಲಿಂಗಿಸ್ಥಳದಲ್ಲಿ ನಿರೂಪಿತವಾಗಿವೆ. ಚನ್ನಬಸವಣ್ಣ ನವರ ವಚನ ಹಾಗೂ ಅಲ್ಲಮಪ್ರಭುವಿನ ವಚನಗಳಲ್ಲಿ ಸಂಕ್ಷೇಪವಾಗಿ ಆ ಷಟ್‌ಚಕ್ರ ಗಳ ಸ್ವರೂಪ ವಿವರಣೆ ಇದೆ. ಆರು ಕಮಲಗಳ ದಳಗಳು, ಅವುಗಳ ವಿಕಾಸ, ಅವು ಗಳ ಅಧಿದೇವತೆ, ಅವುಗಳಲ್ಲಿರುವ ಬೀಜಾಕ್ಷರಗಳು, ಅವುಗಳಿಗೆ ಸೇರಿದ ಭೂತವಸ್ತು ಗಳು, ಇವುಗಳ ಸಮೇತ ನಿರೂಪಿಸಿದೆ. ಇವುಗಳ ಜೊತೆಗೆ ಶರಣರು ಅನುಭಾವದಲ್ಲಿ ಕಂಡುಕೊಂಡ ಶಿಖಾಚಕ್ರ, ಪಶ್ಚಿಮಚಕ್ರ ಅಣುಚಕ್ರಗಳನ್ನು ಹೆಸರಿಸಿದ್ದಾರೆ.

ಆಚಾರಲಿಂಗವು ಆಧಾರಚಕ್ರದಲ್ಲಿಯೂ ಗುರುಲಿಂಗವು ಸ್ವಾಧಿಷ್ಠಾನಚಕ್ರ ದಲ್ಲಿಯೂ, ಶಿವಲಿಂಗವು ಮಣಿಪೂರ ಚಕ್ರದಲ್ಲಿಯೂ, ಚರಲಿಂಗವು (ಜಂಗಮ) ಅನಾಹತ ಚಕ್ರದಲ್ಲಿಯೂ, ಪ್ರಸಾದಲಿಂಗವು ವಿಶುದ್ಧಿಚಕ್ರದಲ್ಲಿಯೂ, ಮಹಾಲಿಂಗವು ಆಜ್ಞಾಚಕ್ರ ದಲ್ಲಿಯೂ, ನೆಲೆಸಿವೆಯೆಂದು ಶರಣರಸಿದ್ಧಾಂತ. ಪೃಥ್ವೀತತ್ವವೆನಿಸಿದ ನಾಲ್ಕು ದಳ ವಿರುವ ಸುವರ್ಣಮಯ ಮೂಲಾಧಾರಕಮಲದಲ್ಲಿ ನಕಾರವೂ, ಜಲತತ್ತ್ವವಾದ ನೀಲವರ್ಣದ ಆರುದಳವಿರುವ ಸ್ವಾಧಿಷ್ಠಾನಕಮಲದಲ್ಲಿ ಮಕಾರವೂ, ತೇಜಸ್ತತ್ವ ವೆನಿಸಿದ ಮಾಣಿಕ್ಯವರ್ಣವಿರುವ ಹತ್ತೆಸಳಿನ ಮಣಿಪೂರಕಮಲದಲ್ಲಿ ಶಿಕಾರವೂ, ವಾಯುತತ್ತ್ವವೆನಿಸಿದ ಕುಂಕುಮವರ್ಣವಿರುವ ಹನ್ನೆರಡೆಸಳಿರುವ ಅನಾಹತಕಮಲ

ದಲ್ಲಿ ವಾಕಾರವೂ, ಆಕಾಶತತ್ತ್ವವೆನಿಸಿದ ಶ್ವೇತವರ್ಣದ ಹದಿನಾರುದಳಗಳಿರುವ ವಿಶುದ್ಧಿಕಮಲದಲ್ಲಿ ಯಕಾರವೂ, ಮನಸ್‌ತತ್ತ್ವವೆನಿಸಿದ ಜ್ಯೋತಿಸ್ವರೂಪದ ಎರಡು ದಳವುಳ್ಳ ಆಜ್ಞಾಕಮಲದಲ್ಲಿ ಹಂ ಕ್ಷಂ ವರ್ಣವೂ ನೆಲೆಸಿವೆ. ಇಲ್ಲಿಂದಾಚೆ ಅನಂತ ಕೋಟಿ ಸೂರ್ಯ ಪ್ರಕಾಶ ಸ್ವರೂಪಾದ ಬ್ರಹ್ಮರಂಧ್ರದಲ್ಲಿರುವ ಸಹಸ್ರಾರಕಮಲ ದಲ್ಲಿ ಪರಮಾತ್ಮನು ಓಂಕಾರಸ್ವರೂಪಾಗಿ ತೋರುತ್ತಿರುವನು ಎಂಬುದಾಗಿ ಯೋಗ ಭೂಮಿಕೆಯಲ್ಲಿ ಕಂಡ ತತ್ತ್ವವನ್ನು ಶರಣರು ನಿರೂಪಿಸಿದ್ದಾರೆ.

ಇಷ್ಟಲಿಂಗೋಪಾಸನೆಯಲ್ಲಿಯೇ ಪತಂಜಲಿ ಮಹರ್ಷಿಗಳು ಹೇಳಿರುವ ಯಂಮ, ನಿಯಂಮ, ಆಸನ, ಪ್ರಾಣಾಯಾಮ. ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗಗಳನ್ನು ಅಳವಡಿಸಿರುವುದನ್ನು ಶರಣರ ವಚನಗಳಿಂದ ಅರಿಯ ಬಹುದು.

ಅನೃತ, ಹಿಂಸೆ. ಪರಧನ, ಪರಸ್ತ್ರೀ, ಪರನಿಂದೆ ಇವುಗಳನ್ನು ಬಿಟ್ಟು ಲಿಂಗಪೂಜೆ ಮಾಡುವುದೇ ಯಮ, ನಿರಪೇಕ್ಷವಾಗಿ, ಇಂದ್ರಿಯ ನಿಗ್ರಹವಮಾಡಿ, ತ್ರಿಕರಣದಲ್ಲೂ ಪಂಚಾಕ್ಷರಿಜಪ ಸ್ಮರಿಸುತ್ತಾ ಪಾಪಕ್ಕೆ ಭೀತನಾಗಿರುವುದು ನಿಯಮ. ಸಿದ್ಧಾಸನ, ಸ್ವಸ್ತಿಕಾಸನ. ಅರ್ಧಚಂದ್ರಾಸನ. ಪರ್ಯಂಕಾಸನ ಇವುಗಳಲ್ಲಿ ಯಾವುದಾದರೊಂದನ್ನು ಆಶ್ರಯಿಸಿ ಸ್ಥಿರಚಿತ್ತನಾಗಿ ಕುಳಿತು ಅರ್ಚಿಸುವುದೇ ಆಸನ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆಂಬ ದಶವಾಯುಂಗಳ ಸ್ವರೂಪವನ್ನು ತಿಳಿದು, ಈಡಾಪಿಂಗಳೆ ಚರಿಸುವ ರೇಚಕ ಪೂರಕಂಗಳ ಭೇದವನ್ನರಿದು ಮನ ಪವನ, ಪ್ರಾಣಂಗಳನು ಲಿಂಗದಲಿ ಕೂಡಿಸಿ, ಲಿಂಗಸ್ವರೂಪವಮಾಡಿ ಹೃದಯ ಕಮಂಲಮಧ್ಯದಲ್ಲಿ ಪ್ರಣವವನುಚ್ಚರಿಸುತ್ತ ಪರಶಿವಧ್ಯಾನದಲ್ಲಿ ತರಹರವಾಗಿಪ್ಪುದೇ ಪ್ರಾಣಾಯಾಮ. ಗುರುಕೃಪೆಯಿಂದ ಸರ್ವೇಂದ್ರಿಯಗಳ ಸುಲಿಂಗಮುಖದಿಂದ ಸಾವಧಾನಮಾಡಿಕೊಂಡಿರುವುದು ಪ್ರತ್ಯಾಹಾರ; ಇವಿಷ್ಟು ಪೂರ್ವಯೋಗ. ಇನ್ನುಳಿದ ಧ್ಯಾನ, ಧಾರಣ, ಸಮಾಧಿಯೇ ಉತ್ತರಯೋಗ. ಅಂತರಂಗದಲ್ಲಿ ಪರಮಾತ್ಮ ಸ್ವರೂಪನ್ನು ಶಿವಲಿಂಗ ಸ್ವರೂಪವ ಮಾಡಿ ಕರಸ್ಥಲಕ್ಕೆ ಕೊಟ್ಟ ಲಿಂಗಮೂರ್ತಿಯನ್ನು ಆಧಾರಾಧಿ ಷಟ್‌ಚಕ್ರಗಳಲ್ಲಿ ಸ್ಥಾಪಿಸಿ ಆಹ್ವಾನ ವಿಸರ್ಜನೆಯಿಲ್ಲದೆ ಧ್ಯಾನಿಸುವುದೇ ಧ್ಯಾನಯೋಗ. ಆ ಲಿಂಗದ ಭಾವ, ಮನ, ಕರಣ ಮುಖ್ಯವಾದ ಸರ್ವಾಂಗದಲ್ಲಿ ಧರಿಸುವುದೇ ಧಾರಣ. ಸತ್ಕ್ರಿಯಾಜ್ಞಾನಯೋಗದಿಂದ ಇಷ್ಟ, ಪ್ರಾಣ, ಭಾವವೆಂಬ ಲಿಂಗತ್ರಯವನು ಏಕಾಕಾರವಮಾಡಿ ಅಖಂಡ ಪರಿಪೂರ್ಣ ಪರಂಜ್ಯೋತಿಸ್ವರೂಪಾಗಿ ರುವ ಮಹಾಲಿಂಗದೊಳಗೆ ಭಿನ್ನವಿಲ್ಲದೆ ಐಕ್ಯವಾಗುವುದೇ ಸಮಾಧಿ.[1]

ಇಂತಹ ಸಮಾಧಿಸ್ಥಿತಿಯೇ ಶೂನ್ಯಸಂಪಾದನೆ. ಶೂನ್ಯವೆಂದರೆ ಏನೂ ಇಲ್ಲದ್ದಲ್ಲ, ಎಲ್ಲವನ್ನೂ ಅಡಗಿಸಿಕೊಂಡಿರುವ ಪರಿಪೂರ್ಣ.

---

1 ತೋಂಟದ ಸಿದ್ಧಲಿಂಗ ಶಿವಯೋಗಿಗಳು: ಷಟ್‌ಸ್ಥಲಜ್ಞಾನಸಾರಾಮೃತ- ವಚನ 364. ಸಂ, ಡಾ|| ಆರ್. ಸಿ. ಹಿರೇಮಠ.

ಇಷ್ಟಲಿಂಗಾನುಸಂಧಾನ :

ನಮ್ಮ ಸಾಧಾರಣ ನಯನಗಳಿಗೆ ಗೋಚರವಾಗುವಂತೆ ಇಷ್ಟಲಿಂಗವೆಂಬುದು ಶಿಲೆಯಲ್ಲ, ಅದು ಕೇವಲ ಕಪ್ಪು ಕಂಥೆಯಲ್ಲ. ಅದರಲ್ಲಿ ರಹಸ್ಯವಾಗಿರುವುದು ಪರಾತ್ಪರವಸ್ತು. ಶಿವನ ಚಿತ್ಕಲೆಯೇ ಈ ರೀತಿ ಮೈ ತಳೆದಿದೆ ಎಂದು ಗುರುವು 'ಶಕ್ತಿಪಾತ'ದ ಮೂಲಕ ಅರುಹಿದ್ದಾನೆ. ಇಷ್ಟಲಿಂಗಕ್ಕೆ ಎರಡು ಸ್ವರೂಪಗಳಿವೆ. ಒಂದು ಬಾಹ್ಯ ಆವರಣ. ಮತ್ತೊಂದು ಆಂತರಿಕವಾಗಿರುವ ಲಿಂಗಪೀಠ. ಗೋಲಾಕಾರವಾಗಿರುವ ಬಹಿರಾವರಣವು ಬ್ರಹ್ಮಾಂಡದ ಸಂಕೇತ. ಇದು ಪೂಜೆಯ ಕಾಲಕ್ಕೆ ಮೂಗಿನ ನೇರಕ್ಕೆ ಹನ್ನೆರಡು ಅಂಗುಲ ಪ್ರಮಾಣದಲ್ಲಿ ಎಡಕೈಯಲ್ಲಿ ಇಷ್ಟಲಿಂಗವನ್ನಿರಿಸಿಕೊಂಡು, ತನ್ನ ದೃಷ್ಟಿಯಿಂದ, ಭಕ್ತಿಪೂರ್ವಕವಾಗಿ ನೋಡುತ್ತಿರುವಾಗ ಇರುವ ಸಾಧಕನ ಶರೀರವು ಶಿವಲಿಂಗದ ಆಕಾರವನ್ನೇ ತಾಳಿರುತ್ತದೆ. ಇಷ್ಟಲಿಂಗೋಪಾಸನೆಯಲ್ಲಿ ಅನುಸಂಧಾನವು ಪ್ರಧಾನವಾದ ವಿಷಯ. ಸಾಧಕನು ಶುಚಿರ್ಭೂತನಾಗಿ ಶಿವಪೂಜಾಗೃಹದಲ್ಲಿ ಅಥವಾ ಏಕಾಂತಸ್ಥಳದಲ್ಲಿ ಉಣ್ಣೆಯ ಕಂಬಳಿ ಅಥವಾ ಶುಭ್ರವಸನವನ್ನು ಹಾಸಿ, ಅದರ ಮೇಲೆ ಪದ್ಮಾಸನದಲ್ಲಾಗಲಿ, ಸುಖಾಸನದಲ್ಲಾಗಲಿ ಕುಳಿತುಕೊಳ್ಳಬೇಕು. ಅನಂತರ ಸಂಕಲ್ಪಪೂರ್ವಕವಾಗಿ ಶ್ರದ್ಧಾಭಕ್ತಿಯಿಂದ, ಆ ಪರವಸ್ತುವಿಗೆ ಅಭಿಷೇಕ, ಅರ್ಚನೆಗಳನ್ನು ಮಾಡಿ ಮುಗಿಸಿದ ತರುವಾಯ ಶ್ರೀ ಗುರುವು ಉಪದೇಶಿಸಿದ ಮಂತ್ರವನ್ನು ಉಪಾಂಶು ರೀತಿಯಲ್ಲಿ ಉಚ್ಚರಿಸುತ್ತಾ ಇಷ್ಟಲಿಂಗವನ್ನು ಅನುಸಂಧಾನ ಮಾಡಬೇಕು. ಶಿವನ ಚಿತ್ಕಲೆಯಾದ ಲಿಂಗದ ಮೇಲೆ ಧರಿಸಿರುವ ನೇರಳೆ ವರ್ಣದ ಕಂಥೆಯು ಕಪ್ಪುದರ್ಪಣದಂತೆ ಹೊಳೆಯುವುದು. ಕಣ್ಣಿನ ಪಾಪೆಯೂ ಲಿಂಗದ ವರ್ಣವೂ ಕಪ್ಪಾಗಿರುವುದರಿಂದ ಏಕಾಗ್ರತೆಯು ಸುಲಭಸಾಧ್ಯವೆನ್ನುತ್ತಾರೆ. 'ಕೂಟಕ್ಕೆ ನೋಟವೇ ಪ್ರಾಣ'ವಾಗಿರುವುದರಿಂದ ಚಿತ್ತಸ್ಥಿರತೆಗೆ ನಿರ್ನಿಮೇಷ ದೃಷ್ಟಿ ಅತ್ಯಾವಶ್ಯಕ. 'ಲಿಂಗಸ್ಯ ಸಾಯಕಂ ನೇತ್ರಂ'–ನೇತ್ರವು ಲಿಂಗವನ್ನು ತನ್ನೊಳಗು ಮಾಡಿಕೊಂಬುವುದಕ್ಕೆ ಪ್ರಯೋಗಿಸುವ ಬಾಣ ಎಂದಿದೆ.

ಜ್ಞಾನೇಂದ್ರಿಯಗಳಲ್ಲೆಲ್ಲ ನಯನೇಂದ್ರಿಯವು ಅತ್ಯಂತ ಸೂಕ್ಷ್ಮವಾಗಿದ್ದು ಇಂದ್ರಿಯಗಳ ಗುಂಪಿನಲ್ಲಿ ಇದಕ್ಕೆ ವಿಶಿಷ್ಟಸ್ಥಾನವಿದೆ. ಬಾಹ್ಯಪ್ರಪಂಚದ ಜ್ಞಾನವನ್ನು ಪಡೆಯುವ ವಿಷಯದಲ್ಲಿ ಕಣ್ಣಿನ ಕಾರ್ಯ ಅತ್ಯಂತ ಮಹತ್ವವಾದುದು ಹಾಗೂ ಪ್ರಭಾವಯುತವಾದುದು. ಬಾಹ್ಯವಸ್ತುಗಳ ಸ್ಥೂಲಪರಿಚಯವನ್ನು ಮಾಡಿಕೊಡುವ ಸಾಮರ್ಥ್ಯ ಇದಕ್ಕಿರುವಷ್ಟು ಇನ್ನಾವ ಜ್ಞಾನೇಂದ್ರಿಯಕ್ಕೂ ಇಲ್ಲ. ಆಕೃತಿಯುಳ್ಳ ಬಾಹ್ಯವಸ್ತುಗಳ ಚಿತ್ರವನ್ನು ಮನಸ್ಸಿನ ಪರದೆಯ ಮೇಲೆ ತಟ್ಟನೆ ಮೂಡಿಸುವುದಲ್ಲದೆ ಮನಸ್ಸಿನ ಮೇಲೆ ಚಿರಕಾಲ ಉಳಿಯುವಂತಾಗುವುದು ಇದರ ಮೂಲಕವೇ. ಕಣ್ಣು ಮನಸ್ಸಿನ ಕಿಟಕಿ ಎಂದಿರುವುದು ಬಹಳ ಅರ್ಥವತ್ತಾದ ಮಾತು. ನಮ್ಮ ವಿವಿಧ ಭಾವನೆಗಳನ್ನು ಕಣ್ಣು ಜಾಗ್ರತೆ ವ್ಯಕ್ತಪಡಿಸುತ್ತದೆ. ವ್ಯಕ್ತಿಯ ನೋಟದಿಂದಲೇ

ಆತನ ಮನಸ್ಸಿನಲ್ಲಿರುವ ಭಾವನೆಗಳ ಪರಿಚಯವಾಗಬಹುದು. ಆದರೆ ಅಭಿನಯ ವಿದ್ದಾಗ ಮಾತ್ರ ಅರಿಯಲು ಸಾಧ್ಯವಿಲ್ಲ.

ಯೋಗಿಗಳು ಒಬ್ಬ ವ್ಯಕ್ತಿಯಲ್ಲಿರುವ ಆಂತರಿಕ ಶಕ್ತಿಯನ್ನು ಆತನ ದೃಷ್ಟಿಯಿಂದಲೇ ತಿಳಿಯಬಲ್ಲವರಾಗಿರುತ್ತಾರೆ. ಮನುಷ್ಯನ ವ್ಯಕ್ತಿತ್ವ ಎಂತಹದೆಂಬುದನ್ನು ಸ್ವಲ್ಪ ಮಟ್ಟಿಗೆ ಆತನ ಕಣ್ಣೋಟವು ತೋರಿಸಬಲ್ಲದೆನ್ನುತ್ತಾರೆ. ಕಣ್ಣಿಗೂ ಮನಸ್ಸಿಗೂ ನಿಕಟವಾದ ಸಂಬಂಧವಿದೆ. ದೃಷ್ಟಿ ಎಂಬ ಪದ ಮನಸ್ಸಿನ ಸಂಬಂಧವನ್ನು ಗರ್ಭೀಕರಿಸಿಕೊಂಡೇ ವೇದಾಂತದಲ್ಲಿ ಬಳಕೆಯಾಗಿದೆ. ನಮ್ಮ ಆಲೋಚನಾಶಕ್ತಿಯ ಮೇಲೆ ನೋಟ ಪ್ರಭಾವ ಬೀರುತ್ತದೆ. ವ್ಯಕ್ತಿಯು ಸಂಮೋಹನ ಶಕ್ತಿಗೆ ಒಳಪಡುವುದು ಕಣ್ಣಿನ ಮೂಲಕವೇ. ನೋಟಕ್ಕೂ ಮನಸ್ಸಿಗೂ ಇರುವ ಸಂಬಂಧವನ್ನು ಕುರಿತು ಹೇಳಿರುವ ಡಾ॥ ಪಾಲ್ ಬ್ರಂಟನ್‌ರವರ ಮಾತು ಗಮನಾರ್ಹವಾದುದು—

"Fixation of sight leads to fixation of mind. It cultivates and achieves fixed attention ; Because latter faculty follows the route dictated by an outside object. When a man's concious being is thus wholly placed on one point, his inner resources—hither to merely patent—begin to show themselves"[1]

ದೃಷ್ಟಿಪರಿಶುದ್ಧತೆ ಹಾಗೂ ಅದರ ಮಹತ್ವದ ಬಗೆಗೆ ಸಂತ ಕ್ರಿಸ್ತನು ಹೇಳಿರುವ ಮಾತು ಅತ್ಯಂತ ಮಹತ್ತ್ವಪೂರ್ಣವಾದುದು—

The light of the body is the eye : If therefore thine eye be single thy body shall be full of light.[2]

ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗವನ್ನು ನಿರೀಕ್ಷಿಸುತ್ತಾ ಅಲ್ಲಿಯೇ ಮನಸ್ಸನ್ನು ಸ್ಥಿರೀಕರಿಸಲು ಪ್ರಯತ್ನಿಸಬೇಕು. ಈ ರೀತಿ ಅಭ್ಯಾಸವು ಅಂತರಂಗದ ತಳಮಳವನ್ನು ಕಡಿಮೆ ಮಾಡಿ ಬಾಹ್ಯದ ನೆನಪನ್ನು ಅಳಿಸಲು ಸಹಾಯಕವಾಗುತ್ತದೆ. ಚಿತ್ತವು ಭವಿಷ್ಯತ್ತನ್ನು ಕಲ್ಪಿಸಿಕೊಳ್ಳುವುದರ ಮೂಲಕವೋ ಅಥವಾ ಹಿಂದಿನದನ್ನು ನೆನೆಸಿಕೊಳ್ಳುವುದರ ಮೂಲಕವೋ ಸದಾ ಆಲೋಚನೆಯ ರೂಪದಲ್ಲಿ ಕಾರ್ಯ ಮಾಡುತ್ತಿರುತ್ತದೆ. ದೃಷ್ಟಿ ಸ್ಥಿರೀಕರಣವು ಗಾಢವಾದಂತೆಲ್ಲ ಗಾಳಿ ಬೀಸುವುದು ನಿಂತಾಗ ಅಲೆಗಳು ನಿಲ್ಲುವಂತೆ ಚಿತ್ತದ ವೃತ್ತಿಗಳು ಸ್ಥಗಿತವಾಗುತ್ತವೆ. ಆಲೋಚನೆಯ ಪ್ರವಾಹವು ನಿಲ್ಲುತ್ತದೆ. ಗಾಢವಾದ ಸುಷುಪ್ತಿಯಲ್ಲಿ ಇದು ನಿಂತಿದ್ದರೂ ಮತ್ತೆ ಎಚ್ಚರವಾದಾಗ ಮುಂದುವರಿಯಬಲ್ಲದು; ಆದರೆ ಧ್ಯಾನ ಮಾಡಿದಂತೆಲ್ಲ ವ್ಯಕ್ತಿಗತವಾದ ವಿವಿಧ ದುಸ್ಸಂಸ್ಕಾರಗಳು ಕ್ರಮಕ್ರಮವಾಗಿ ಕಡಿಮೆಯಾಗುತ್ತವೆ. ಅಭ್ಯಾಸವು

1. Paul Bruntan : The quest of the Overself; p.172 :
2. ಅದೇ, ಪುಟ 174.

ಮುಂದುವರಿದಂತೆಲ್ಲಾ ಅರೆಸಮಾಧಿ ಅವಸ್ಥೆಯು (Semi-trance) ಉದಿಸುತ್ತದೆ. ಕಾಲಕ್ರಮದಲ್ಲಿ ಸ್ವಪ್ರಯತ್ನವಿಲ್ಲದೆಯೇ ದೃಷ್ಟಿಸ್ಥಿರೀಕರಣಕ್ಕೆ ವಿಷಯವಾದ ಧ್ಯೇಯ ವಸ್ತುವೂ ದೃಷ್ಟಿಯಿಂದ ತನ್ನಷ್ಟಕ್ಕೆ ತಾನೇ ಮರೆಯಾಗುತ್ತದೆ. ಏಕಾಗ್ರತೆಯು ತೀವ್ರವಾದಂತೆ ತನ್ನ ಇರವಿನ ಅರಿವನ್ನು ಮರೆಸುವುದಲ್ಲದೆ ಮನಸ್ಸು ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತದೆ. ಚಿತ್ತಭಿತ್ತಿಯು ಅದೃಶ್ಯವಾಗುವುದರಿಂದ ನೀರು ಹಿಂಗಿದಾಗ ಅಲೆಗಳು ಏಳದಿರುವಂತೆ ಆಲೋಚನಾ ತರಂಗಗಳು ಏಳುವುದೇ ಇಲ್ಲ. ಆಗ ಸ್ವಸ್ವರೂಪ ಜ್ಞಾನವಾಗುತ್ತದೆ.[1]

ಈ ದೃಷ್ಟಿಯೋಗವನ್ನು ಕುರಿತಾದ ಚಾಮರಸನ ಪದ್ಯವು ಎಲ್ಲರ ಮನಂಬುಗುವಂತಿದೆ:

ಅಲಿ ನಿಂದಡೆ ಸುಳಿದು ಸೂಸುವ
ಗಾಳಿ ನಿಲುವುದು, ಗಾಳಿ ನಿಲೆ ಮನ
ಮೇಲೆ ನಿಲುವುದು, ಮನವು ನಿಂದೊಡೆ ಬಿಂದು ನಿಲುವುದು.[2]

ಅನಿಮಿಷ ನೋಟಕ್ಕೂ-ಪ್ರಾಣಕ್ಕೂ, ಪ್ರಾಣಕ್ಕೂ-ಮನಸ್ಸಿಗೂ ಸಂಬಂಧವಿರುವುದರಿಂದ ದೃಷ್ಟಿ ಸ್ಥಿರವಾದಾಗ ಪ್ರಾಣದ ಸ್ಪಂದಿಸುವಿಕೆಯ ಮೇಲೆ ಪರಿಣಾಮ ಬೀರಿ, ತನ್ಮೂಲಕ ಮನದ ಚಾಂಚಲ್ಯವನ್ನು ಕಳೆದು ಬಿಂದುವು ನಿಲಲು ಕಾರಣವಾಗುತ್ತದೆ. ಚಾಮರಸನು ಇದರ ಮಹತ್ವವನ್ನು ವಿವರಿಸಲು ಒಂದು ಸೊಗಸಾದ ರೂಪಕವನ್ನು ಕೊಟ್ಟಿರುತ್ತಾನೆ. ಅದರ ಅಭಿಪ್ರಾಯ ಹೀಗಿದೆ-ನಮ್ಮ ಮನಸ್ಸು ಒಂದು ಪಕ್ಷಿಯಿದ್ದಂತೆ. ಸತತವೂ ಚಲಿಸುವ ಎರಡು ದೃಷ್ಟಿಯೇ ಆ ಪಕ್ಷಿಯ ಕಾಲುಗಳು. ನಾಸಿಕದ ಎಡಬಲ ರಂಧ್ರಗಳಲ್ಲಿ ಶ್ವಾಸೋಚ್ಛ್ವಾಸ ರೂಪದಲ್ಲಿ ಸಂಚರಿಸುತ್ತಿರುವ ವಾಯುವೇ ಆ ಪಕ್ಷಿಯ ರೆಕ್ಕೆಗಳು. ಹಕ್ಕಿಯ ಕಾಲುಗಳನ್ನು ಬಲವಾಗಿ ಹಿಡಿದರೆ ರೆಕ್ಕೆಯ ಅಲುಗಾಟವು ನಿಲ್ಲುತ್ತದೆ. ಆಗ ಮನವೆಂಬ ಪಕ್ಕಿ ಕರಗತವಾಗಬಲ್ಲುದು.

ಈ ದೃಷ್ಟಿಯೋಗವನ್ನು ಪ್ರತಿನಿತ್ಯವೂ ಶಿವಾರ್ಚನೆ ಮುಗಿದ ಬಳಿಕ ಶ್ರದ್ಧಾಪೂರ್ವಕವಾಗಿ ಸಾಧಿಸಬೇಕು. ಅನಂತರ ತನ್ನ ದೇಹದಲ್ಲಿ ಆರು ಕಮಲಗಳನ್ನು ಈ ಹಿಂದೆ ಹೇಳಿದಂತೆ ದೇಹದ ನಿರ್ದಿಷ್ಟ ಸ್ಥಾನದಲ್ಲಿ ಭಾವನಾತ್ಮಕವಾಗಿ ಕಲ್ಪಿಸಿಕೊಂಡು ಅಲ್ಲಿ ನೆಲೆಸಿರುವ ಆರು ಲಿಂಗಗಳನ್ನು ಕ್ರಮವಾಗಿ ಮಂತ್ರಪುರಸ್ಸರವಾಗಿ ಧ್ಯಾನಿಸಬೇಕು.

ಈ ವಿಧವಾದ ಸತತವಾದ ಅಭ್ಯಾಸವು ಮನುಷ್ಯನ ವ್ಯಕ್ತಿತ್ವವನ್ನು ಪರಿವರ್ತಿಸುತ್ತದೆ. ಇದರ ಫಲವು ಸರಿಯಾಗಿ ವ್ಯಕ್ತವಾಗಿ ಅನುಭವಕ್ಕೆ ಬರಬೇಕಾದರೆ ವ್ಯಕ್ತಿಯು ನೈತಿಕವಾಗಿ ಪರಿಶುದ್ಧನಾಗಿರಬೇಕಲ್ಲದೆ ಮಾನವೀಯ ಭಾವನೆಗಳನ್ನೊಳಗೊಂಡಿರಬೇಕು.

---

1. ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಂ, (ಯೋ.ಸೂ. 1-1-3)
2. ಪ್ರಭುಲಿಂಗಲೀಲೆ 18-21, 22

ನೋಟವೇ ಕೂಟ, ಕೂಟವೇ ಪ್ರಾಣ
ಪ್ರಾಣವೇ ಏಕ, ಏಕವೇ ಸಮರಸ
ಸಮರಸವೇ ಲಿಂಗ, ಲಿಂಗವೇ ಪರಿಪೂರ್ಣ
ಇಂತೀ ನಿಜವ ಗುಹೇಶ್ವರ ಬಲ್ಲನಲ್ಲದೆ
ಕಣ್ಣುಗೆಟ್ಟಣ್ಣಗಳೆತ್ತಬಲ್ಲರು ನೋಡಾ !

ದೃಷ್ಟಿಯೋಗವನ್ನು ಕುರಿತ ಪ್ರಭುದೇವರ ಈ ವಾಣಿ ಇಡೀ ಲಿಂಗಾಂಗಸಾಮರಸ್ಯವನ್ನು ಕ್ರೋಢೀಕರಿಸಿ ಹೇಳಿದಂತಿದೆ.

ಇಷ್ಟಲಿಂಗದ ಸಾಮಾಜಿಕ ಮೌಲ್ಯ :

ಇಷ್ಟಲಿಂಗದ ಧಾರ್ಮಿಕ ಮೌಲ್ಯ ಹಾಗೂ ಆಧ್ಯಾತ್ಮಿಕ ಮೌಲ್ಯವನ್ನು ಶರಣರ ದೃಷ್ಟಿಯಿಂದ ಸಂಕ್ಷೇಪವಾಗಿ ತಿಳಿಸಿದೆ. ಈಗ ಇಷ್ಟಲಿಂಗವು ಹೇಗೆ ಸಾಮಾಜಿಕ ಮೌಲ್ಯವಾಯಿತು ಎಂಬುದನ್ನು ತಿಳಿಯಬೇಕಾಗಿದೆ. ಇದನ್ನು ಅರಿಯಬೇಕಾದರೆ ಬಸವಾದಿ ಪ್ರಮಥರ ಆಗಮನಕ್ಕೆ ಮುಂಚೆ ಸಮಾಜದ ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದನ್ನು ನೋಡಬೇಕು. ಧರ್ಮಶಬ್ದವು ಪಡೆದಿದ್ದ ವಿಶಾಲವಾದ ಅರ್ಥವು ಹೆಚ್ಚು ಹೆಚ್ಚು ವ್ಯಾಖ್ಯಾನಕ್ಕೊಳಗಾಗಿ, ವಿಕಾಸವಾಗುವುದಕ್ಕೆ ಬದಲಾಗಿ ಅಂದು ಸಂಕೋಚಗೊಂಡಿತ್ತು. ಸಕಲಮಾನವರಿಗೆಲ್ಲ ಅನ್ವಯಿಸಬೇಕಾದ ಧರ್ಮ ಸೀಮಿತವಾಗಿತ್ತು. ಗುಣಗಳಿಗಿಂತಲೂ ಹುಟ್ಟಿನಿಂದಲೇ ಶ್ರೇಷ್ಠ ಎಂಬ ವಿಷಯವನ್ನು ಪ್ರತಿಪಾದಿಸುವ ವರ್ಣಾಶ್ರಮದಿಂದ ಸಮಾಜದಲ್ಲಿ ಅಸಂತುಷ್ಟಿ ಬೆಳೆದಿತ್ತು. ಅಲ್ಲದೆ ವ್ಯಕ್ತಿಯ ವೃತ್ತಿಗಳು ಹುಟ್ಟಿನಿಂದಲೇ ನಿರ್ಣೀತವಾಗುತ್ತಿದ್ದ ಕಾಲವದು. ವ್ಯಕ್ತಿಯ ಅಭಿರುಚಿ ಅರ್ಹತೆಗಳನ್ನು ಆದರಿಸಿ ನಿರ್ಣಯವಾಗಬೇಕಾಗಿದ್ದ ಕರ್ತವ್ಯಗಳು ಜಾತಿಯಿಂದಲೇ ನಿರ್ಧರಿಸಲ್ಪಡುತ್ತಿದ್ದವು. ಮತ್ತೊಂದು ಪ್ರಮುಖ ವಿಷಯವೆಂದರೆ-ಆತ್ಮವು 'ಹೆಣ್ಣಲ್ಲ, ಗಂಡಲ್ಲ, ನಪುಂಸಕವಲ್ಲ, ಯಾವ ಯಾವ ಶರೀರವನ್ನು ಧರಿಸುತ್ತದೆಯೋ ಅದರೊಡನೆ ಒಡಮೆರೆಯುತ್ತದೆ;' ಎಂದು ಶ್ವೇತಾಶ್ವತರ ಉಪನಿಷತ್ತು[1] ಸಾರಿದ್ದರೂ ಸ್ತ್ರೀಯರು ಮತ್ತು ಶೂದ್ರರು ಯಾವುದೇ ಆಧ್ಯಾತ್ಮಿಕ ಸಂಸ್ಕಾರಕ್ಕೆ ಅನರ್ಹರಾಗಿದ್ದರು. ಸಂಸ್ಕಾರರಹಿತರಾದ ವ್ಯಕ್ತಿಗಳಿಗೆ ಬ್ರಹ್ಮೋಪಾಸನೆಯ ಅಧಿಕಾರವಿರಲಿಲ್ಲ.[2] ಹೀಗಿದ್ದ ಪರಿಸ್ಥಿತಿಯಲ್ಲಿ ಸಕಲ ಮಾನವರಿಗೂ ಅನ್ವಯವಾಗುವ, ಸಾಮಾಜಿಕ ಅಸಮಂತೆಯನ್ನಳಿಸುವ, ವಿಶಿಷ್ಟ ಸಂಸ್ಕಾರವು ಅನಿವಾರ್ಯವಾಯಿತು. ಲಿಂಗದೀಕ್ಷಾಸಂಸ್ಕಾರವನ್ನು ಸರ್ವರಿಗೂ ಅನ್ವಯಿಸಿದ್ದರಿಂದ ಅಸ್ಪೃಶ್ಯತೆಯ ನಿವಾರಣೆಯೂ, ಆಧ್ಯಾತ್ಮಿಕ ಮಾರ್ಗದಲ್ಲಿ ಅರ್ಹ

---

1. ನೈವ ಸ್ತ್ರೀ ನ ಪುಮಾನೇಷ ನ ಚೈವಾಯಂ ನಪುಂಸಕಃ ।
ಯದ್ಯತ್ ಶರೀರಮಾದತ್ತೇ ತೇನ ತೇನ ಸ ಯುಜ್ಯತೇ ॥ (ಶ್ವೇ. 5–5)
2. ಬ್ರಹ್ಮ ಸೂತ್ರ, 1–3–34

ತೆಯೂ ವೃತ್ತಿಯ ಸಮಾನತೆಯೂ ಲಭಿಸಲು ಸಾಧ್ಯವಾಯಿತು. ಯಾವುದೇ ವೃತ್ತಿಯಲ್ಲಿರುವ ಯಾವುದೇ ವ್ಯಕ್ತಿಯಾದರೂ ಸಹ ಈ ಸಂಸ್ಕಾರವನ್ನು ಪಡೆದು ಸ್ವಸಾಧನೆಯ ಮೂಲಕ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಎಂಬುದನ್ನು ಶರಣಧರ್ಮವು ಸಾಧಿಸಿ ತೋರಿಸಿತು. ಮಾನವರಲ್ಲಿ ಕೇವಲ ಎರಡು ವರ್ಗಗಳಿವೆ. ಒಂದು ದೇವರನ್ನು ನಂಬುವ ಕುಲ, ಮತ್ತೊಂದು ನಂಬದ ಕುಲ ಎಂದು ಸಾರಿತು. ದೀಕ್ಷೆಯ ತರುವಾಯ ಎಲ್ಲರೂ ಸಮಾನರು ಎಂಬುದು ವೀರಶೈವ ಧರ್ಮದ ಸಾರ; ಒಳಪಂಗಡಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಅಷ್ಟಾವರಣವಾಗಲೀ, ಪಂಚಾಚಾರವಾಗಲೀ, ಷಟ್‌ಸ್ಥಲವಾಗಲೀ ಇಲ್ಲಿ ನಿರೂಪಿತವಾಗಿಲ್ಲ.

ಹೀಗೆ ವೃತ್ತಿಯಲ್ಲಿ ಸಮಾನತೆ, ಹುಟ್ಟಿನಿಂದ ಸಮಾನತೆ, ಆಧ್ಯಾತ್ಮಿಕ ಸಮಾನತೆ, ಇವುಗಳನ್ನು ಸಾಧಿಸಿ ಇಷ್ಟಲಿಂಗವು ಸಾಮಾಜಿಕ ವಿಷಮತೆಯನ್ನಳಿಸುವ ನಿಟ್ಟಿನಲ್ಲಿ ಸಾಧನ ವೌಲ್ಯವೂ ಆಗಿರುವುದನ್ನು ಕಾಣಬಹುದು.

ಶರಣರ ದೃಷ್ಟಿಯಲ್ಲಿ ನಮಗೂ ದೈವಕ್ಕೂ ಇರುವ ಸಂಬಂಧ, ವಾರದ ಯಾವುದೋ ಒಂದು ನಿಯತವಾದ ಶುಭದಿನದಲ್ಲಾಗಲೀ ಅಥವಾ ದಿನದ ಯಾವುದೇ ಒಂದು ಶುಭವೇಳೆಯಲ್ಲಾಗಲೀ, ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಾಗಲೀ ಏರ್ಪಡುವ ವಾಣಿಜ್ಯ ಒಪ್ಪಂದವಲ್ಲ. ಅದು ಪೂಜ್ಯ ಪೂಜಕರ ನಡುವೆ ಇರಬಹುದಾದ ನೇರ ಸಂಬಂಧ. ಆದ್ದರಿಂದಲೇ ಶರಣನೊಬ್ಬ "ಸತಿಯು ಸಂಗವನು, ಅತಿಶಯದ ಗ್ರಾಸವನು, ಪೃಥ್ವಿಯಲೀಶ್ವರನ ಪೂಜೆಯನು ಅರಿವುಳ್ಳಡೆ, ಹೆರರ ಕೈಯಲಿ ಮಾಡಿಸುವರೇ" ಎಂದು ತೀವ್ರವಾಗಿ ಪ್ರಶ್ನಿಸುತ್ತಾನೆ. ಹೀಗೆ ಇಷ್ಟಲಿಂಗವು ಸಮಾಜದ ಎಲ್ಲ ಜನರಿಗೂ ನೈತಿಕ ತತ್ವಾಚರಣೆಯ ಆಧಾರದ ಮೇಲೆ ಸಾಮಾಜಿಕ ಸುವ್ಯವಸ್ಥೆಗೆ ಕಾರಣವಾಗಿ, ಧಾರ್ಮಿಕ ಸಮಂತಾಭಾವವನ್ನು ನೆಲೆಗೊಳಿಸುವ ಸಾಧನವಾಗಿ, ಆಧ್ಯಾತ್ಮದ ಸೋಪಾನವಾಗಿ, ವ್ಯಷ್ಟಿ–ಸಮಷ್ಟಿಗಳ ಪರಿಪೂರ್ಣ ಅರಿವನ್ನು ತಂದುಕೊಡುವ ಮಹಾ ಬೆಳಗಾಗಿ ಪರಿಣಮಿಸಿತು.

ಸೂರ್ಯಸ್ಯೋದಯ ಮಾತ್ರೇಣ ಸೂರ್ಯಕಾಂತಃ ಪ್ರಕಾಶತೇ ।
ಗುರೋರಾಲೋಕ ಮಾತ್ರೇಣ ಶಿಷ್ಯೋ ಬೋಧೇನ ಭಾಸತೇ ॥

ಸಿದ್ಧಾಂತ ಶಿಖಾಮಣಿ

0—0

ವೀರಶೈವ ನಿತ್ಯಾಚರಣೆಗಳು

ಶ್ರೀ ಬಿ. ನಂಜುಂಡಪ್ಪ

ಪರಾಪರವಸ್ತುವೆನಿಸಿದ ಪರಶಿವನಿಂದಾದ ಜಗತ್ತಿನ ಸೃಷ್ಟಿಯು ಜಡ ಮತ್ತು ಚೇತನಾತ್ಮಕವಾಗಿದೆಯಷ್ಟೆ. ಚೇತನರೂಪವಾದ ಪ್ರಾಣಿವರ್ಗದಲ್ಲಿ ಮಾನವನು ಅತ್ಯಂತ ಉನ್ನತ ಮಟ್ಟದಲ್ಲಿರುವನು. ಜ್ಞಾನದ ಔನ್ನತ್ಯವನ್ನು ಸಾಧಿಸುವ ಶಕ್ತಿಯುಳ್ಳವನು. ಆತ್ಮಾನಾತ್ಮವಸ್ತುವಿವೇಕವನ್ನರಿತು ತನ್ನ ಜೀವನದ, ಅಂತಿಮಗುರಿಯನ್ನು ಸಾಧಿಸಬಲ್ಲವನು. ಆದರೆ, ತನ್ನ ಧರ್ಮ (ಮಾನವೀಯತೆ) ಆವುದೆಂಬುದನ್ನರಿಯದೆ, ಕಟ್ಟಳೆಗೆ ಒಳಪಡದೆ, ನೀತಿ ತಪ್ಪಿ ಅಧರ್ಮ ಹಿಡಿದು ಅಧಃಪಾತಾಳಕ್ಕೆ ಬಿದ್ದು, ಜನ್ಮಾಂತರಗಳ ಜಿನುಗಿನಲ್ಲಿ ಅನಂತಕಾಲ ಬಳಲುವ ಅವಕಾಶವುಂಟು. ಅಂತಹ ಕಷ್ಟದ ದಾರಿಗೆ ಕಾಲಿಡದೆ, ಮಾನವಜನ್ಮದ ಸಾರ್ಥಕತೆಯ ಕಡೆಗೆ ಅವನ ಮನ ಹರಿಯಬೇಕು.

ಮಾನವನು ತನ್ನ ನೈಜ ಗುರಿಯನ್ನು ಮುಟ್ಟಲು ಸಾಧನೋಪಾಯವನ್ನು ತಿಳಿಸುತ್ತದೆ ವೀರಶೈವಧರ್ಮ. ಜ್ಞಾನಜಿಜ್ಞಾಸುವಾದ ಯಾವ ಮಾನವನೇ ಆಗಲಿ–ಅವನ ಹುಟ್ಟು, ಕುಲ, ಅಂತಸ್ತು ಯಾವುದೇ ಇರಲಿ, ಉಚ್ಚ—ನೀಚ ಎನ್ನುವುದಿಲ್ಲದೆ, ಬಡವ—ಬಲ್ಲಿದ ಎಂಬುದಿಲ್ಲದೆ, ಈ ಧರ್ಮದ ಅವಲಂಬನೆಗೆ ತೆರೆದ ಬಾಗಿಲಿದೆ. ಆದ್ದರಿಂದ ವೀರಶೈವಧರ್ಮ ವಿಶ್ವಧರ್ಮವೆನಿಸಿದೆ. ಇದು 'ಸಕಲ ಜೀವರಾಶಿಗೂ ಲೇಸನೇ ಬಯಸುವ ಧರ್ಮ'

ಜನ್ಮದ ಜಿನುಗಿಗೆ ಬೇಸತ್ತು, ಅದರಿಂದ ಪಾರಾಗುವ ಮಾರ್ಗವಾವುದೆಂದು ಚಿಂತಿಸುತ್ತಿರುವ ಜೀವನಿಗೆ ಈ ಧರ್ಮ ಆಶ್ರಯ ನೀಡಿ, ಸತ್ಯವೂ, ಶಾಶ್ವತವೂ, ಆನಂದರೂಪವೂ ಆದ ಗುರಿಯನ್ನು ಮುಟ್ಟಿಸುವುದು.

'ಏಕೇನ ಜನ್ಮನಾ ಮುಕ್ತಿರ್ವೀರಾಣಾಂ ತು ಮಹೇಶ್ವರಿ' ಎಂಬ ಪವಿತ್ರ ವಾಕ್ಯವೇ ಇದಕ್ಕೆ ಸಾಕ್ಷೀಭೂತವಾಗಿದೆ.

ಜೀವನು ಮೂಲತಃ ಶಿವನ ಅಂಶೀಭೂತನಾಗಿದ್ದು, ಮಾಯೋಪಾಧಿಯಿಂದ, ಜನ್ಮಜನ್ಮಾಂತರಗಳಲ್ಲಿ ಕಷ್ಟಪರಂಪರೆಗಳನ್ನನುಭವಿಸಿ ಬೇಸತ್ತು, ಮತ್ತೆ ಪರಬ್ರಹ್ಮನಲ್ಲಿ ಒಂದಾಗುವವರೆಗೂ ಅಶಾಂತಿಯಿಂದ ಮುಕ್ತಿಸಾಧನೆಯಿಲ್ಲದವನಾಗಿರುತ್ತಾನೆ. ಏಕಮೇವಾದ್ವಿತೀಯನಾದ ಪರಮಾತ್ಮನ ಅಂಶೀಭೂತನು ತಾನು ಎಂಬ ಅರಿವಿಲ್ಲದವ

ನಾಗಿ, ಮಾಯಾಜಾಲದಲ್ಲಿ ಸಿಕ್ಕಿಬಿದ್ದು, ಸ್ವರೂಪಜ್ಞಾನವಿಲ್ಲದೆ ದೇಹವೇ ನಾನೆಂಬ ಭ್ರಮೆಗೊಳಗಾಗಿರುತ್ತಾನೆ.

ಗುರುಕೃಪೆ

ಜನ್ಮಜನ್ಮಾಂತರಗಳ ಪುಣ್ಯಪರಿಪಾಕದಿಂದ, ಅಂಗ ಧರ್ಮಾವಲಂಬಿಯಾಗಿ, ಗುರೂಪಾಸನೆಯಿಂದ ಗುರುಕೃಪೆಗೆ ಪಾತ್ರನಾಗುತ್ತಾನೆ. ಗುರು ಮಾನವರೂಪ ದಿಂದ ಬಂದ ಪರಮಾತ್ಮನಲ್ಲದೆ ಬೇರೆಯಲ್ಲ. ಶ್ರೀಗುರುವು ತನ್ನನ್ನು ಬಯಸಿ ಬಂದ ಶಿಷ್ಯನನ್ನು ಶಿವದೀಕ್ಷೆಯಿಂದ ಸಂಸ್ಕರಿಸುವನು. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗುವ ಸ್ಥಿತಿಯನ್ನು ಅರಹು ವನು. ಜ್ಞಾನಕ್ರಿಯೆಗಳ ಸಮುಸಮುಚ್ಚಯ ಮಾರ್ಗವನ್ನು ತೋರುವುದರ ಮೂಲಕ ಲಿಂಗಾಂಗಸಾಮರಸ್ಯದ ಪರಿಚಯ ಮಾಡುವನು. ಶಿವದೀಕ್ಷೆಯ ಸ್ವರೂಪ ಇಂತಿದೆ.

ಶಿವದೀಕ್ಷೆ

"ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಂ।
ದೀಯತೆ ಕ್ಷೀಯತೇ ಯಸ್ಮಾತ್ತಾಸ ದೀಕ್ಷೇತಿ ನಿಗದ್ಯತೆ" ॥

— ಶಿವಾನಂಭವ ಸೂತ್ರ

"ಮಾಯಾವೃತವಾದ ಶಿವಾಂಶವೇ ಜೀವ"ವೆಂದು ಹೇಳಿದೆಯಷ್ಟೆ .ಅಜ್ಞಾನಮಯ ವಾದ ಈ ಮಾಯಾವರಣವೇ ಮಲತ್ರಯವೆಂಬ ಹೆಸರಿನಿಂದ ಪ್ರವೃತ್ತಿಪರವಾಗಿ ಜೀವ ನನ್ನು ಬಂಧನದಲ್ಲಿರಿಸುವುದು. ಲಿಂಗಸಂಬಂಧವಾದ ಜ್ಞಾನವನ್ನುಂಟುಮಾಡಿ ಮಲ ತ್ರಯಗಳಿಂದ ಬಿಡಿಸುವ ಸಂಸ್ಕಾರವೇ ದೀಕ್ಷೆಯೆನಿಸುವುದು.

ಜೀವನಿಗೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ತನು (ದೇಹ) ಗಳಿರುವುವು. ಸ್ಥೂಲದೇಹ ಹೊರಗೆ ಗೋಚರಿಸತಕ್ಕದ್ದು. ಸೂಕ್ಷ್ಮದೇಹ ಸ್ವಪ್ನಾ ವಸ್ಥೆಯ ವ್ಯವಹಾರಗಳಲ್ಲಿ ಗೋಚರವಾಗುತ್ತದೆ. ಅದು ಪ್ರಾಣದ ನೆಲೆ. ಕಾರಣ ದೇಹ ಅತ್ಯಂತ ಸೂಕ್ಷ್ಮತರ. ಅದು ಮನಸ್ಸಿನ ಸೂಕ್ಷ್ಮಸ್ಥಿತಿಯಾದ ಭಾವದ ಆಶ್ರಯ ಸ್ಥಾನ.

"ಆಣವಮಲವು ಕಾರಣತನುವನ್ನೂ, ಮಾಯಾಮಲವು ಸೂಕ್ಷ್ಮತನುವನ್ನೂ, ಕಾರ್ಮಿಕಮಲವು ಸ್ಥೂಲತನುವನ್ನೂ, ಆವರಿಸಿರುವುವು. ಅವುಗಳ ಆವರಣದಿಂದ ಜೀವ ನಿಗೆ ತನ್ನ ಸಹಜಸ್ಥಿತಿಯ ಅರಿವಾಗುವುದಿಲ್ಲ. ಅವುಗಳ ಪ್ರಭಾವದಿಂದ ಜೀವನು ಅಜ್ಞಾನದಲ್ಲಿ ವ್ಯವಹರಿಸುವನು.

ಶಿವನ ಪ್ರವೃತ್ತಿಪರವಾದ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳೇ ಸಂಕೋಚ ಹೊಂದಿ ಮೂರು ಮಲಗಳಾಗುವುವೆಂದು ಹೇಳಲ್ಪಟ್ಟಿದೆ. ಆಣವಮಲವು ಜೀವ

ನಲ್ಲಿ 'ದೇಹವೇ ನಾನು' ಎಂಬ ಬುದ್ಧಿಯನ್ನು ಹುಟ್ಟಿಸಿ ಆತ್ಮನನ್ನು ಅಣುರೂಪನನ್ನಾಗಿ ಮಾಡಿಬಿಡುವುದು. ಮಾಯಾಮಲವು ಆತ್ಮನಲ್ಲಿ 'ಕಿಂಚಿದ್‌ಜ್ಞತೆ'ಯನ್ನುಂಟುಮಾಡ್ತು ವುದು. ಕಾರ್ಮಿಕ ಮಲದಿಂದ ಜೀವನು 'ಕಿಂಚಿತ್‌ಕರ್ತೃತ್ವ'ವನ್ನು ಹೊಂದಿ, ಪುಣ್ಯ ಪಾಪಗಳನ್ನು ಮಾಡುತ್ತಾ 'ನಾನು ಸುಖಿ, ನಾನು ದುಃಖಿ' ಎಂಬ ವ್ಯವಹಾರ ದಿಂದಿರುವನು.

ಶ್ರೀ ಗುರು ಮಾಡಿದ ಲಿಂಗತ್ರಯಸಂಬಂಧ

ಶ್ರೀಗುರುವು ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳನ್ನು ಆವರಿಸಿದ ಕಾರ್ಮಿಕ, ಮಾಯಾ, ಆಣವಮಲಗಳನ್ನು ಕಳೆದು, ಲಿಂಗತ್ರಯ ಸಂಬಂಧ ಮಾಡುವನು.

"ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆಯೆಂಬ ದೀಕ್ಷಾತ್ರಯಗಳಿಂದ ತನು ತ್ರಯಂಗಳ ಪೂರ್ವಾಶ್ರಯವ ಕಳೆದು ಲಿಂಗತ್ರಯಂಗಳ ಸಂಬಂಧಿಸಿದನು. ಅದೆಂತೆಂದಡೆ:

ವೇಧಾದೀಕ್ಷೆಯೆಂದು ಶ್ರೀ ಗುರು ತನ್ನ ಹಸ್ತವ ಶಿಷ್ಯನ
ಮಸ್ತಕದಲ್ಲಿ ಸಂಯೋಗವ ಮಾಡಿದುದು.
ಮಂತ್ರದೀಕ್ಷೆಯೆಂದು ಶ್ರೀ ಗುರು ಪ್ರಣವ ಪಂಚಾಕ್ಷರಿಯ
ಮಂತ್ರವ ಕರ್ಣದಲ್ಲಿ ಉಪದೇಶಿಸಿದುದು.
ಕ್ರಿಯಾದೀಕ್ಷೆಯೆಂದು ಆ ಮಂತ್ರಸ್ವರೂಪವನೆ
ಇಷ್ಟಲಿಂಗ ಸ್ವರೂಪವ ಮಾಡಿ ಕರಸ್ಥಲದಲ್ಲಿ ಸಂಬಂಧಿಸಿದುದು.

ಇದುಕಾರಣ, ವೇಧಾದೀಕ್ಷೆಯಿಂದ ಕಾರಣತನುವಿನ
ಪೂರ್ವಾಶ್ರಯವಳಿದು ಭಾವಲಿಂಗ ಸಂಬಂಧವಾಯಿತ್ತು.
ಮಂತ್ರದೀಕ್ಷೆಯಿಂದ ಸೂಕ್ಷ್ಮತನುವಿವ ಪೂರ್ವಾಶ್ರಯವಳಿದು
ಪ್ರಾಣಲಿಂಗ ಸಂಬಂಧವಾಯಿತ್ತು
ಕ್ರಿಯಾದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯವಳಿದು
ಇಷ್ಟಲಿಂಗಸಂಬಂಧವಾಯಿತ್ತು.
ಹೀಗೆ ಅಂಗತ್ರಯಂಗಳಲ್ಲಿ ಲಿಂಗತ್ರಯಂಗಳ ಧರಿಸಿದನಯ್ಯಾ
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ"

—ಸಿದ್ಧಲಿಂಗೇಶ್ವರ ವಚನ

ಶ್ರೀಗುರುವು ತನ್ನ ಪರುಷಹಸ್ತವನ್ನು ಶಿಷ್ಯನ ಮಸ್ತಕದ ಮೇಲಿಟ್ಟು (ಹಸ್ತ ಮಸ್ತಕ ಸಂಯೋಗದಿಂದ) ತ್ರಿವಿಧ ದೀಕ್ಷೆಗಳನ್ನು ಮಾಡುವನು. ಪ್ರತಿ ದೀಕ್ಷೆಯೂ ಏಳು ವಿಧಗಳಾಗಿ ಒಟ್ಟು ಇಪ್ಪತ್ತೊಂದು ತೆರನಾಗುವುದನ್ನು ಚನ್ನಬಸವೇಶ್ವರರ ಈ ವಚನ ದಿಂದ ಅರಿಯಬಹುದು.

ದೀಕ್ಷಾಭೇದಗಳು (೨೧)

> ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ ಲಿಂಗಸ್ವಾಯತ— ಈ ಏಳನು ಕಾಯಕ್ಕುಪದೇಶವ ಮಾಡುವುದು. ಸಮಯಂ, ನಿಸ್ಸಂಸಾರ, ನಿರ್ವಾಣ, ತತ್ತ್ವದೀಕ್ಷೆ, ಅಧ್ಯಾತ್ಮ, ಅನುಗ್ರಹ, ಸತ್ಯಶುದ್ಧ–ಈ ಏಳನು ಪ್ರಾಣಕ್ಕುಪದೇಶವ ಮಾಡುವುದು. ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನಿಜ, ಮನೋಲಯ, ಸದ್ಯೋನ್ಮುಕ್ತಿ—ಈ ಏಳನು ಮನಕ್ಕುಪದೇಶವ ಮಾಡುವುದು. ಈ ಕ್ರಮವನರಿದು ಮಾ—ಡುವುದು ಕೂಡಲ ಚನ್ನಸಂಗಯ್ಯನಲ್ಲಿ ಸಹಜದೀಕ್ಷೆಯಯ್ಯ''

ಶಿಷ್ಯನ ಸರ್ವಾಂಗದಲ್ಲೂ ಲಿಂಗಸಂಬಂಧವಾಗುವುದು. ಮಾಂಸಪಿಂಡವು ಮಂತ್ರಪಿಂಡವಾಗಿ ಪರಿವರ್ತನೆಗೊಳ್ಳುವುದು. ಮಲತ್ರಯಗಳನ್ನು ನೀಗಿದ (ಅವಿದ್ಯಾಗ್ರಂಥಿ ಭೇದಿಸಲ್ಪಟ್ಟು) ಶರೀರಗಳು ಲಿಂಗತನುಗಳಾಗುವುವು. ಶಿಷ್ಯನಲ್ಲಿ ಸುಪ್ತವಾಗಿ ಅಡಗಿರುವ ನಿಷ್ಕಲ ಶಿವಚೈತನ್ಯವು ಚೇತನಗೊಂಡು ಲಿಂಗಶರೀರಿಯಾದ, ಮಂತ್ರಶುದ್ಧನಾದ ಜೀವನು ಅಂಗನೆನಿಸಿಕೊಳ್ಳುವನು. ಅದರಿಂದ ಅಂಗನು ಸಂಪೂರ್ಣವಾಗಿ ಲಿಂಗಸಾಧನೆಗೆ ಅರ್ಹನಾಗುವನು.

ಶ್ರೀಗುರುವು ನಿಷ್ಕಲಸ್ವರೂಪ (ಸ್ವಸ್ವರೂಪ) ಜ್ಞಾನವನ್ನುಂಟುಮಾಡುವನಲ್ಲದೆ, ತತ್ಸಾಧನೆಯ ಕ್ರಮಂವಾದ ಆಚರಣೆಯನ್ನೂ ಗುರಿಯನ್ನೂ ತಿಳಿಸುವನು. ಆಂದಿನಿಂದ ಶಿಷ್ಯನು ತನ್ನ ಪೂರ್ವಾಶ್ರಯದ ಎಂದರೆ—ತನ್ನ ಜನನಕ್ಕೆ ಕಾರಣರಾದ ಐಹಿಕ ತಂದೆತಾಯಿಗಳ ರಕ್ತಸಂಬಂಧವಾದ ಜನನದೋಷದಿಂದ ಬಿಡುಗಡೆ ಹೊಂದಿ ಗುರುಕರಜಾತನೆನಿಸುವನು. ಅಂಗನು ಗುರೂಪದೇಶದಿಂದ ಬಾಹ್ಯ ಮತ್ತು ಅಂತರಷ್ಟಾವರಣಗಳೇ ಅಂಗವಾಗಿ, ಪಂಚಾಚಾರಗಳೇ ಪ್ರಾಣವೆನಿಸಿ, ಜ್ಞಾನಕ್ರಿಯಾಯುಕ್ತ ಭಕ್ತಿಯಿಂದ ಷಟ್‌ಸ್ಥಲಾಚರಣೆಯಿಂದ, ಅಂಗಗುಣಗಳನ್ನು ದೂರೀಕರಿಸಿ, ಲಿಂಗಗುಣಗಳನ್ನು ಸಂಪೂರ್ಣ ಅಳವಡಿಸಿಕೊಂಡು, ಉರಿ ಕರ್ಪುರ ಸಂಯೋಗದಂತೆ ಲಿಂಗದಲ್ಲಿ ಸಮರಸ ಹೊಂದಿ ಲಿಂಗವೇ ಆಗುವನು. ಇದೇ ವೀರಶೈವಧರ್ಮದ ಅಂತಿಮಗುರಿ.

ಅಷ್ಟಾವರಣಗಳು

ಅಷ್ಟಾವರಣಗಳು ವೀರಶೈವ ಧರ್ಮಾಚರಣೆಯ ಪ್ರಧಾನ ಅಂಗವಾಗಿವೆ. ಅವು ಗುರು, ಲಿಂಗ. ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದ. ಅವುಗಳಲ್ಲಿ ಗುರು, ಲಿಂಗ ಮತ್ತು ಜಂಗಮ ಈ ಮೂರು ಪೂಜಾಮೂರ್ತಿಗಳು ; ಭಸ್ಮ, ರುದ್ರಾಕ್ಷಿ ಮತ್ತು ಮಂತ್ರ ಇವುಗಳು ಸಾಧನಗಳು. ಪಾದೋದಕ ಪ್ರಸಾದ

ಗಳು ಉಪಾಸನೆಯ ಫಲಗಳು. ಅವು ಭಕ್ತನಿಗೆ ಅಂಗವಾಗಿದ್ದು ಲಿಂಗಾಂಗ ಸಂಬಂಧಾಚರಣೆಗೆ ರಕ್ಷಣೆ ನೀಡುತ್ತವೆ.

ನಿಷ್ಕಲನೂ ಸಾಕಾರ ನಿರಾಕಾರನೂ, ಸಕಲನೂ ಆದ ಪರಮಾತ್ಮನೇ ಭಕ್ತರ ಉದ್ಧಾರಕ್ಕಾಗಿ ಅಷ್ಟಾವರಣರೂಪವಾಗಿರುವನು. ಗುರುವಾಗಿ ಬಂದು ದೀಕ್ಷಾ ಮೂರ್ತಿಯಾಗಿ, ಲಿಂಗವಾಗಿ ಪೂಜಾಮೂರ್ತಿಯೆನಿಸಿ, ಜಂಗಮವಾಗಿ ಬಂದು ಪ್ರಸಾದ ಭೋಗಮೂರ್ತಿಯೆನಿಸುವನು ಒಬ್ಬ ಪರಮಾತ್ಮನೇ.

''ಏಕಮೂರ್ತಿಸ್ತ್ರಯೋಭಾರ್ಗಾ ಗುರುರ್ಲಿಂಗಂ ತು ಜಂಗಮಃ ।
ಮಾನುಷಂ ಲೋಕಮಾಶ್ರಿತ್ಯ ತ್ರಿಧಾ ಭವತಿ ಶಂಕರಃ ॥
ಆಚಾರ್ಯೋ ಲಿಂಗನಾಮಾ ಚ ಚರದೇವೋ ಮಹೇಶ್ವರಃ ॥''

—ವೀರಶೈವಾಚಾರ ಪ್ರದೀಪಿಕೆ.

ಗುರುರ್ಲಿಂಗಂಚರಶ್ಚೈವ ಪ್ರಸಾದಃ ಪಾದವಾರಿ ಚ ।
ಭೂತಿರುದ್ರಾಕ್ಷಮಂತ್ರಾಶ್ಚ ಭಕ್ತಾಂಗಮಿತಿ ಕಥ್ಯತೇ ॥''

—ವೀರಶೈವ ಪ್ರದೀಪಿಕೆ.

''ಗುರುವನರಿದು ಗುರುಭಕ್ತಿಯ ಮಾಡಿ,
ಲಿಂಗವನರಿದು ಲಿಂಗಭಕ್ತಿಯ ಮಾಡಿ,
ಜಂಗಮವನರಿದು ಜಂಗಮಭಕ್ತಿಯ ಮಾಡಿ,
ತ್ರಿವಿಧವನೂ ಒಂದೆಂದು ಕಂಡು,
ತ್ರಿವಿಧಭಕ್ತಿಸಂಪನ್ನರಾದವರ ಭಕ್ತರೆಂಬೆನು
ಅಲ್ಲದವರ ಉದರಪೋಷಕರೆಂಬೆನು ಕಾಣಾ
ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ''

—ಸ್ವತಂತ್ರ ಸಿದ್ಧಲಿಂಗೇಶ್ವರ ವಚನ[1]

ಅಷ್ಟಾವರಣವು ಬಹಿರಷ್ಟಾವರಣ, ಅಂತರಷ್ಟಾವರಣ ಎಂದು ಎರಡು ಬಗೆ. ಬಹಿರಷ್ಟಾವರಣದ ಆಚರಣೆಯಿಂದ ಭಕ್ತನಲ್ಲಿ ಅಂತರಷ್ಟಾವರಣಗಳು ಸಿದ್ಧಿಸುವುವು.

ಕಾಯದೊಳು ಗುರುಲಿಂಗಜಂಗಮ
ದಾಯತವನರಿಯಲ್ಕೆ ಸುಲಭೋ
ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕ್ಕೆ ಕುರುಹಾಗಿ
ದಾಯದೋರಿ ಸಮಸ್ತ ಭಕ್ತನಿ
ಕಾಯವನು ಪಾವನವ ಮಾಡಿದ
ರಾಯಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ.

—ಪ್ರಭುಲಿಂಗಲೀಲೆ.

1. ಸ್ವತಂತ್ರಸಿದ್ಧಲಿಂಗೇಶ್ವರರ ಕೃತಿಗಳು. ಸಂ. ಡಾ. ಎಚ್. ಪಿ. ಮಲ್ಲೇದೇವರು

೧. ಗುರು

ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಾಚರಣೆಯಿಂದ ಜ್ಞಾನಕ್ರಿಯಾ ವಿಶಿಷ್ಟನಾಗಿ, ಗುರುತ್ವಸಂಸ್ಕಾರ ಹೊಂದಿ, ದೀಕ್ಷಾದಿಸಂಸ್ಕಾರವನ್ನು ಕೊಡುವ ಬೋಧಾಮೂರ್ತಿಯೇ ಗುರು. ಭಕ್ತೋದ್ಧಾರಕ್ಕಾಗಿ ಅವತರಿಸಿದ ಪರಮಾತ್ಮ ರೂಪನು ಶಿಷ್ಯನಲ್ಲಿ ಭಕ್ತಿಬೀಜವನ್ನು ಬಿತ್ತಿ, ತನ್ನಂತೆ ಲಿಂಗಾಂಗಸಾಮರಸ್ಯವನ್ನು ಪಡೆಯುವ ಸಾಧನಾಮಾರ್ಗವನ್ನು ತೋರಿದನು ಗುರು.

ಬಯಲ ಮೂರ್ತಿಯ ಮಾಡಿ ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯಾ ಶ್ರೀಗುರು
ಬಯಲುಮೂರ್ತಿಯ ಅಮೂರ್ತಿಯ ಮಾಡಿ ಎನ್ನ ಪ್ರಾಣದೊಳ—
ಗಿರಿಸಿದನಯ್ಯಾ ಶ್ರೀಗುರು

ಬಯಲು ಬಯಲನೆ ಬಯಸೆ, ಬಯಲೆಂದೆನಿಸಿ ಎನ್ನ ಭಾವದಲ್ಲಿರಿಸಿದ—
ನಯ್ಯಾ ಶ್ರೀಗುರು
ಇದು ಕಾರಣ, ಎನ್ನಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ
ನಾನು ಅಂಗಲಿಂಗಸಂಬಂಧಿಯಾದೆನಯ್ಯಾ
ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ

ಮಡಕೆಯ ಮಾಡುವರೆ ಮಣ್ಣೇ ಮೊದಲು
ತೊಡಿಗೆಯ ಮಾಡುವರೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥವೇ ಮೊದಲು
....
—ಬಸವಣ್ಣನವರು

ಗುರುವಚನವುಪದೇಶ ಗುರುವಚನ ಪರಭಕ್ತಿ
ಗುರುವಚನ ಮೋಕ್ಷಪದವದುವೆ ಗುರುವಚನ
ಪರಮಾರ್ಥವಯ್ಯ ಸರ್ವಜ್ಞ ॥
—ಸರ್ವಜ್ಞ

ಶ್ರೀಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕುತಿ ॥
—ನಿಜಗುಣ ಶಿವಯೋಗಿಗಳು.

ಎನ್ನ ಕರಸ್ಥಲಮಧ್ಯದಲ್ಲಿ ಪರಮನಿರಂಜನನ ಕುರುಹ ತೋರಿದ
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆ ತೋರಿದ.
ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ.
ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ, ಎನ್ನೊಳಗೆ ತನ್ನ ತೋರಿದ.

ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಗೆ
ನಮೋ ನಮೋ ಎನಂತಿರ್ಪೆನಯ್ಯಾ, ಅಖಂಡೇಶ್ವರಾ.

—ಷಣ್ಮುಖಸ್ವಾಮಿಗಳು

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥

ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದವನಿಗೆ ಜ್ಞಾನಾಂಜನದ ಕಡ್ಡಿಯಿಂದ ಕಣ್ಣು ಕಾಣುವಂತೆ ಮಾಡುವವನು ಶ್ರೀಗುರು.

ಅಂತರಂಗದ ಗುರು : "ಗುರುವಿನಿಂದ ಪಡೆದ ಆಚಾರವೂ, ಜ್ಞಾನವೂ ಶಿಷ್ಯನಲ್ಲಿ ಒಡಮೂಡಿದಾಗ, ಅವನ ಆಚಾರವೇ ಗುರು, ಜ್ಞಾನವೇ ಗುರುವೆಂದು ಹೇಳುವರು. ಮುಖ್ಯವಾಗಿ, ಶಿಷ್ಯನು ಗುರುಸ್ವರೂಪ ಹೊಂದುವುದೇ — ಗುರುವಿನಂತೆ ಲಿಂಗಾಂಗಸಾಮರಸ್ಯವನ್ನು ಅನುಭವಿಸುವುದೇ ಗುರುತ್ವವು".

೨. ಲಿಂಗ

ಹಸ್ತಮಸ್ತಕಸಂಯೋಗದಿಂದ ಶ್ರೀಗುರುವು ಶಿಷ್ಯನಲ್ಲಿರುವ ಶಿವಚೈತನ್ಯವನ್ನು ಹೊರಕ್ಕೆ ತೆಗೆದು ಕೊಟ್ಟುದೇ ಲಿಂಗ. ಅದೇ ಇಷ್ಟಲಿಂಗ. ಸಕಲಬ್ರಹ್ಮಾಂಡಗಳ ಸೃಷ್ಟಿಕರ್ತನೂ ಚೈತನ್ಯಾತ್ಮಕನೂ ಆದ ನಿರಾಕಾರ ಪರಬ್ರಹ್ಮವೇ ಲಿಂಗರೂಪವಾಗಿದೆ. ಅದು ಸಕಲತತ್ತ್ವಗಳಿಗೆ ಸ್ಥಾಯಿಭೂತವೂ ಲಯಕಾರಣವೂ ಆಗಿ ಸ್ಥಲವೆನಿಸಿಕೊಂಡಿದೆ. ಓಂಕಾರಸ್ವರೂಪವೂ ಷಡಕ್ಷರಸ್ವರೂಪವೂ ಆಗಿದೆ. ಅದರ ವ್ಯಾಪಕತೆಯು ವರ್ಣನೆಗೆ ಅತೀತ.

"ಬ್ರಹ್ಮಣಸ್ತ್ರೀಣಿ ರೂಪಾಣಿ ಸಕಲಂ ಸಕಲನಿಷ್ಕಲಂ ನಿಷ್ಕಲಂ ಚೇತಿ"

— ಶ್ರುತಿ

ಆ ಪರಬ್ರಹ್ಮವು ಸಕಲ, ಸಕಲನಿಷ್ಕಲ ನಿಷ್ಕಲ ಎಂದು ಮೂರು ರೂಪವಾಗಿದೆ.

ಪರಂ ಪವಿತ್ರಮಮಲಂ ಲಿಂಗಂ ಬ್ರಹ್ಮ ಸನಾತನಂ ।
ಶಿವಾಭಿಧಾನಂ ಚಿನ್ಮಾತ್ರಂ ಸದಾನಂದಂ ನಿರಂಕುಶಂ ॥
ಕಾರಣಂ ಸರ್ವಲೋಕಾನಾಂ ವೇದಾನಾಮಪಿ ಕಾರಣಂ ।
ಪೂರಣಂ ಸರ್ವತತ್ತ್ವಸ್ಯ ತಾರಣಂ ಜನ್ಮವಾರಿಧೇಃ ॥
ಜ್ಯೋತಿರ್ಮಯಮನಿರ್ದೇಶ್ಯಂ ಯೋಗಿನಾಮಾತ್ಮನಿ ಸ್ಥಿತಂ ।
ಕಥಂ ವಿಜ್ಞಾಯತೇಲೋಕೇ ಮಹಾಗುರುದಯಾಂ ವಿನಾ" ॥

ಶಿವಲಿಂಗವು ಅತ್ಯಂತ ಪರಿಶುದ್ಧವೂ. ನಿರ್ಮಲವೂ, ಪರಬ್ರಹ್ಮವೆಂಬ ಸಂಜ್ಞೆಯುಳ್ಳದ್ದೂ, ನಿತ್ಯವೂ, ಸಚ್ಚಿದಾನಂದರೂಪವೂ, ಪಾಶಜಾಲಕ್ಕೊಳಗಾಗದುದೂ, ಸಕಲಭುವನನಿರ್ಮಾಣಕಾರಣವೂ, ವೇದೋತ್ಪತ್ತಿಮೂಲವೂ, ಸಕಲತತ್ತ್ವಮಯ

ವಾದ ಜಗತ್ತನ್ನು ತನ್ನಲ್ಲೇ ಅಡಗಿಸಿಕೊಂಡಿರುವುದೂ, ಸಂಸಾರಸಾಗರದಿಂದ ಪಶು ಜಾಲವನ್ನು ದಾಂಟಿಸುವುದೂ, ಶಿವಯೋಗಿಗಳ ಹೃದಯದಲ್ಲಿ :ಜ್ಯೋತಿಸ್ವರೂಪ ವಾಗಿ ಮೆರೆಯುತ್ತಿರುವುದೂ ಆಗಿರುವುದು. ಆ ಮಹಾಲಿಂಗವನ್ನು ಲೋಕದಲ್ಲಿ ಮಹಾ ಗುರುವಿನ ಅನುಗ್ರಹವಿಲ್ಲದಿದ್ದರೆ ಹೇಗೆ ತಿಳಿಯಲಾದೀತು ?

—ಸಿದ್ಧಾಂತ ಶಿಖಾಮಣಿ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ,
ಅಗಮ್ಯ, ಅಪ್ರಮಾಣ, ಅಗೋಚರ, ಅಪ್ರತಿಮ ಲಿಂಗವೇ.
ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ

—ಬಸವಣ್ಣನವರು

ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ,
ಲಿಂಗವೆಂಬುದು ಪರಶಿವನ ಘನತೇಜ,
ಲಿಂಗವೆಂಬುದು ಪರಶಿವನ ಪರಮಜ್ಞಾನ,
ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ,
ಲಿಂಗವೆಂಬುದು ಅಖಂಡಿತ ವೇದ ಪಂಚಸಂಜ್ಞೆ,
ಲಿಂಗವೆಂಬುದು ತಾ ಹರಿಬ್ರಹ್ಮರ ನಡುಮನೆಗಳ ಜ್ಯೋತಿರ್ಲಿಂಗ,
'ಅಖಿಲಾರ್ಣವಲಯಾನಾಂ ಲಿಂಗಂ ಮುಖ್ಯಂ ಪರಂ ತಥಾ
ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್
ಯದಾದ್ಯಮೈಶ್ವರಂ ತೇಜಸ್ತಲ್ಲಿಂಗಂ ಪಂಚಸಂಜ್ಞಕಂ'
ಎಂಬುದು ಲಿಂಗದ ಮರ್ಮ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ,
ಲಿಂಗದಮರ್ಮವ ತಿಳಿಯಬಲ್ಲವನೇ ಬಲ್ಲವನು.

—ಉರಿಲಿಂಗಪೆದ್ದಿಗಳ ವಚನ[1]

ಲಿಕಾರೋ ಲಯಬುದ್ಧಿಸ್ಸ್ಥೋ ಬಿನ್ದುನಾ ಸ್ಥಿತಿರುಚ್ಯತೇ ।
ಗಕಾರಾತ್ಸೃಷ್ಟಿರಿತ್ಯುಕ್ತಂ ಲಿಙ್ಗಂ ಸೃಷ್ಟ್ಯಾದಿಕಾರಣಮ್॥
ಲೀನಂ ಪ್ರಪಂಚರೂಪಂ ಹಿ ಸರ್ವಮೇತಚ್ಚರಾಚರಮ್ ।
ಸರ್ಗಾದೌ ಗಮ್ಯತೇ ಭೂಯಸ್ತಸ್ಮಾಲ್ಲಿಙ್ಗಮುದೀರಿತಮ್॥

–ಸೂಕ್ಷ್ಮಾಗಮ.

---

1. ಉರಿಲಿಂಗಪೆದ್ದಿಗಳ ವಚನಗಳು. ಸಂ. ಡಾ. ಎಚ್. ಪಿ. ಮಲ್ಲೇದೇವರು

ದೀಕ್ಷೆಯಿಂದ ಅಂಗನ (ಭಕ್ತನ) ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳಲ್ಲಿ ಈ ಮಹಾಲಿಂಗವೇ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂದು ಮೂರು ರೂಪವಾಗಿದ್ದು, ಇಷ್ಟಲಿಂಗದಲ್ಲಿ ಸಮಾವೇಶವಾಗಿದೆ. ಈ ಮೂರು ಲಿಂಗಗಳೇ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗವೆಂಬ ಆರು ಲಿಂಗಗಳಾಗಿ ನಾಸಿಕ, ಜಿಹ್ವೆ, ನೇತ್ರ, ತ್ವಕ್, ಶ್ರೋತ್ರ ಮತ್ತು ಹೃದಯಗಳಲ್ಲಿಯೂ, ಸರ್ವಾಂಗದಲ್ಲಿಯೂ ನೆಲಸಿದೆ, ಈ ರೀತಿಯಾಗಿ ಮಹಾಲಿಂಗವು ಸರ್ವ ಬ್ರಹ್ಮಾಂಡಗಳನ್ನೂ ಪಿಂಡಾಂಡ (ಭಕ್ತನ ದೇಹ) ವನ್ನೂ ತನ್ನಲ್ಲಿ ಒಳಗೊಂಡು ಜಗತ್ತಿನ ಮೂಲಚೈತನ್ಯವಾಗಿದೆ. ನಿರಾಕಾರ, ಸಾಕಾರ-ನಿರಾಕಾರ ಮತ್ತು ಸಾಕಾರರೂಪಗಳಲ್ಲಿ ವರ್ತಿಸುತ್ತಿರುವುದೂ, ಎಲ್ಲಾ ವಸ್ತುಗಳಿಗೆ ಮೀರಿ ಇಂದ್ರಿಯಗಳಿಗೆ ನಿಲುಕದವನಾದ್ದರಿಂದ 'ಪರ' ಎಂಬ ಸಂಜ್ಞೆಯುಳ್ಳವನೂ, ಕಣ್ಣಿಗೆ ಕಾಣಿಸಿಕೊಳ್ಳದವನಾದ್ದರಿಂದ 'ಗೂಢ' ಎಂಬ ಸಂಜ್ಞೆಯುಳ್ಳವನೂ, ಸರ್ವವ್ಯಾಪಿಯಾಗಿ ಎಲ್ಲಾ ಚರಾಚರವಸ್ತುಗಳಲ್ಲಿಯೂ ಇರುವವನಾದ್ದರಿಂದ 'ಶರೀರಸ್ಥ'ನೆಂಬ ಸಂಜ್ಞೆಯುಳ್ಳವನಾಗಿಯೂ, ಹೀಗಿದ್ದರೂ ಲಿಂಗರೂಪನಾಗಿ ಚೈತನ್ಯಸ್ವರೂಪನಾಗಿರುವುದರಿಂದ 'ಲಿಂಗಕ್ಷೇತ್ರ'ವೆಂಬ ಸಂಜ್ಞೆಯುಳ್ಳವನಾಗಿಯೂ, ಅವನು ಆದಿ ಅಂತ್ಯವಿಲ್ಲದವನಾಗಿ 'ಅನಾದಿ'ಎಂಬ ಸಂಜ್ಞೆಯಿಂದ ಕೂಡಿದವನಾಗಿಯೂ ಇರುತ್ತಾನೆ.

ಆ ಪರಮಾತ್ಮನು ಓಂಕಾರರೂಪನೂ ಷಡಕ್ಷರಮಂತ್ರಸ್ವರೂಪನೂ ಆಗಿರುವನು. ದೇಹದ ಆಧಾರಾದಿ ನವಚಕ್ರಗಳಲ್ಲಿಯೂ ನವಲಿಂಗ(ಪ್ರಣವ)ರೂಪವಾಗಿರುವನು. ೨೧೬ ಸಕೀಲಗಳ ಸಂಬಂಧದಲ್ಲಿ ಗೋಚರಿಸುವನು. ಅಂತರಂಗದ ಗುರೂಕ್ತವಾದ ಜ್ಞಾನಮಯ ಆಚರಣೆಯ ಅನುಭವವೇ ಅಂತರಂಗದ ಲಿಂಗ.

೩. ಜಂಗಮ

ಲಿಂಗದ ನಿಜಜ್ಞಾನವನ್ನರುಹಿ, ಅಂಗವು (ಭಕ್ತನು) ಲಿಂಗದೊಡನೆ ಸಮರಸವಾಗುವ ಪರಿಯನ್ನು ಅರುಹುವವನು ಗುರುವಾದರೆ, ಗುರು ಹೇಳಿದಂತೆ ಶಿಷ್ಯನು ನಡೆಯುವನೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ತಪ್ಪುನೆಪ್ಪುಗಳನ್ನು ಸರಿಪಡಿಸಿ ಪೂಜೆಗೊಂಡು, ಪಾದೋದಕ ಪ್ರಸಾದಗಳನ್ನು ಅನುಗ್ರಹಿಸುವ ಜ್ಞಾನಾನುಭವಿಯೇ ಜಂಗಮನು. ಜಂಗಮನು ಪ್ರಸಾದಭೋಗಮೂರ್ತಿ.

"ಜಂಗಮನು ಅಂಗವಿಕಾರಗಳನ್ನು ದೂರಮಾಡಿ, ಷಟ್‌ಸ್ಥಲಾಚರಣೆಯುಳ್ಳವನಾಗಿ, ಶಿವತತ್ತ್ವವನ್ನೊಳಗೊಂಡು ಆಚರಿಸುತ್ತಾನೆ. ಅವನು ಭಾವದಲ್ಲಿ ಪರಿಪೂರ್ಣ ಲಿಂಗಚೈತನ್ಯನು, ಅನುಭಾವಿಯು. ಗುರುವಿಗೆ ಜಂಗಮವು ಪ್ರಾಣವಾಗಿರುತ್ತದೆ, ಆಧಾರವಾಗಿರುತ್ತದೆ. ಶಿವಶಕ್ತಿಗಳಲ್ಲಿ ಸಂಬಂಧವಿರುವಂತೆ, ಲಿಂಗ ಜಂಗಮಂಗಳಲ್ಲಿ ಸಂಬಂಧವಿರುತ್ತದೆ. ಜಂಗಮವು ಲಿಂಗಕ್ಕೆ ಚೈತನ್ಯಾತ್ಮಕವಾಗಿದೆ. ಲಿಂಗದ ಕಳೆಯೇ ಜಂಗಮ. ಜಂಗಮವು ಜ್ಞಾನರೂಪ. ನಿರಾಕಾರವಸ್ತುವನ್ನು ಜಂಗಮಂವಿಡಿದು ಕಾಣಬೇಕು." ಜಂಗಮವು ಆನಂದಸ್ವರೂಪ.

ಭಕ್ತನು ಗುರುವಿಗೆ ತನುವನ್ನೂ. ಲಿಂಗಕ್ಕೆ ಮನವನ್ನೂ ಅರ್ಪಿಸುವಂತೆ, ಜಂಗಮಕ್ಕೆ ಸತ್ಯಶುದ್ಧಕಾಯಕದಿಂದಾರ್ಜಿಸಿದ ಧನವನ್ನರ್ಪಿಸಬೇಕು.

ವೇದಶಾಸ್ತ್ರಾಗಮಕ್ಕತೀತ ಜಂಗಮವು ಚಿ-
ನ್ನಾದ ಚಿದ್ಬಿಂದು ಚಿತ್ಕಳೆಯೆ ಜಂಗಮವು ಭ-
ಕ್ತಾದಿ ಮಾಹೇಶ ಪ್ರಸಾದಿ ಸುಲಿಂಗಿ ಶರಣೈಕ್ಯ ಷಟುಸ್ಥಲ ಜಂಗಮಂ॥
ಸಾಧೆಸುವೆನೆಂಬರಿಗಸಾಧ್ಯವಹ ಜಂಗಮವು
ಭೇದಿಸುವೆನೆಂಬರಿಗಭೇದ್ಯವಹ ಜಂಗಮವು
ಮೂದೇವತಾರಾಧ್ಯಗತ್ತತ್ತ ಜಂಗಮದ ದಾಸೋಹಿ ಭಕ್ತನಧಿಕಂ॥

—ಮೈಲಾರದ ಬಸವಲಿಂಗ ಶರಣರು

ಹರಹರ ಶಿವಶಿವ ಜಯಜಯಂ ಕರುಣಾಕರ ಮತ್ಪ್ರಾಣನಾಥ ಮಹಾ ಪ್ರಭು
ಜಂಗಮವೆ ಸರ್ವಾಧಾರ ಪರಬ್ರಹ್ಮ ಘನಗಂಭೀರ ಪರತತ್ತ್ವಮೂರ್ತಿ ನೋಡಾ
ಜಂಗಮವೆ ನಿರುಪಮ ನಿರಾಮಯ ವಸ್ತು ನೋಡಾ
ಜಂಗಮವೆ ನಿಷ್ಕಳಂಕ ನಿಶ್ಚಿಂತ ನೋಡಯ್ಯ
ಜಂಗಮವೆ ಸ್ವಯ ಚರ ಪರವಸ್ತು ನೋಡಯ್ಯ
ಜಂಗಮವೆ ಭೂರಂದ್ರಮೂರ್ತಿ ನೋಡಯ್ಯ
ಜಂಗಮವೆ ಸತ್ಯಸದಾಚಾರಮೂರ್ತಿ ನೋಡಯ್ಯ.
ಜಂಗಮವೆ ಸತ್ಕ್ರಿಯಾ ಸಮ್ಯಗ್ಜ್ಞಾನಮೂರ್ತಿ ನೋಡಯ್ಯ
ಜಂಗಮವೆ ಸದ್ಭಕ್ತಿಪ್ರಿಯ ನೋಡಯ್ಯ
ಜಂಗಮವೆ ಗುರು ಲಿಂಗ ಭಕ್ತರಿಗೆ ಹರನಕಿರಣ ಚೈತನ್ಯಮೂರ್ತಿ ನೋಡಯ್ಯ
ಜಂಗಮವೆ ಪರಮಾನಂದ ಪರಿಣಾಮಿ ನೋಡಯ್ಯ
ಜಂಗಮವೆ ಸಚ್ಚಿದಾನಂದಭರಿತ ನೋಡಯ್ಯ
ಜಂಗಮವೆ ಜಗತ್ಪಾವನ ಮೂರ್ತಿ ನೋಡಯ್ಯ
ಜಂಗಮವೆ ಕಾರಣಾವತಾರಮೂರ್ತಿ ನೋಡಯ್ಯ
ಜಂಗಮವೆ ಅಂಗಲಿಂಗವೆರಡಕ್ಕೆ ಹರನಕಿರಣಚೈತನ್ಯಮೂರ್ತಿ ನೋಡಯ್ಯ
ಜಂಗಮವೆ ಸದ್ಭಕ್ತ ಮಾಹೇಶ್ವರರ ಸದ್ಧರ್ಮ ಸರ್ವಾಚಾರ ಸಂಪತ್ತಿನಾ ಚರಣೆಗೆ
ಕಾರಣಕರ್ತ ನೋಡ—ಸಂಗನ ಬಸವೇಶ್ವರ.

—ನಿಜಾಚರಣೆ ಸಂಬಂಧ ವಚನಗಳು

''ಜಂಗಮದಲ್ಲಿ ಸ್ವಯ, ಚರ, ಪರ—ಎಂದು ಮೂರು ಭೇದವಿದೆ. ಸ್ವಯಜಂಗಮನು ಮಠದಲ್ಲಿಯೇ ಇದ್ದು, ತನ್ನಲ್ಲಿಗೆ ತಂದುಕೊಟ್ಟ ಭಕ್ತರ ಪದಾರ್ಥಗಳನ್ನು ಪ್ರಸಾದ ರೂಪದಿಂದ ಸಮಾಜಕ್ಕೆ ಕೊಡುವನು.''

''ಚರಜಂಗಮನು ಸಮಾಜದಲ್ಲಿ ಸಂಚರಿಸಿ ಶಿವಾನುಭವವನ್ನು ಬೋಧಿಸುತ್ತಾ ಭಕ್ತರ ಕುಂದು ಕೊರತೆಗಳನ್ನು ತಿದ್ದಿ ಸರಿಪಡಿಸಿ, ಉದ್ಧರಿಸುತ್ತಾ, ಅವರು ತಾವಾಗಿಯೆ ಕೊಟ್ಟ ಪದಾರ್ಥಗಳನ್ನು ಪ್ರಸಾದರೂಪದಿಂದ ಹಂಚುವನು.

''ಪರಜಂಗಮನು ಸ್ವಯ ಚರ ಜಂಗಮರ ಕರ್ತವ್ಯವನ್ನು ಮನಸ್ಸು ಬಂದರೆ ಮಾಡುವನು, ಇಲ್ಲದಿದ್ದರೆ ಸ್ವಲೀಲೆಯಿಂದ ಸಂಚರಿಸುವನು. ವಿರತಿಯೇ ಪ್ರಧಾನ ವಾಗಿರುವ ಈ ಮೂರ್ತಿಗೆ ಕರ್ತವ್ಯದ ಬಂಧನವಿಲ್ಲ. ದರ್ಶನ ಸ್ಪರ್ಶನಾದಿಗಳಿಂದಲೇ ಸಮಾಜವನ್ನು ಉದ್ಧರಿಸುವ ಮಹಿಮಾಶಾಲಿಯಾಗಿರುವನು.

ಅಂತರಂಗದ ಜಂಗಮ : ''ಭಕ್ತನು ಗುರುವಿನಿಂದ ಪಡೆದ ಜ್ಞಾನದ ಅನುಭವ ವನ್ನು ಲಿಂಗದೊಡನ ಮಾಡಿಕೊಂಡು, ಆ ಅನುಭವಜನ್ಯವಾದ ಆನಂದವನ್ನು (ಪ್ರಸಾದ ವನ್ನು), ಜಂಗಮದೊಡನೆ ಅನುಭವಿಸುವುದು. ಈ ಆನಂದವೇ ಅಂತರಂಗದ ಜಂಗಮ.

೪. ಭಸ್ಮ

ಶಿವನ ಮೈಬೆಳಗಿನ ಪ್ರತೀಕವೇ ಭಸ್ಮ. ತ್ರಿಪುಂಡ್ರವೆಂಬುದು ಪರ್ಯಾಯ ನಾಮ. ಮೂರು ಮಲಗಳು ನಾಶವಾಗುವುದರ ಕುರುಹು. ಶಿವನ ಜ್ಯೋತಿಸ್ವರೂಪ ವಾಗಿರುವುದಲ್ಲದೆ ಐಶ್ವರ್ಯಪ್ರದವೂ ಆಗಿದೆ. ಭಸ್ಮವು ದೇಹೋಪಾಧಿಯಿಂದಾದ ರೋಗರುಜಿನಾದಿಗಳ ಮತ್ತು ಭೂತಪ್ರೇತಾದಿಗಳ ಭಯವನ್ನು ನಿವಾರಿಸುತ್ತದೆ.

ಶಿವನ ಸದ್ಯೋಜಾತಾದಿ ಮುಖಗಳಿಂದ ಜನಿಸಿದ ವಿವಿಧ ವರ್ಣದ ಗೋವುಗಳಿಂದ ಉತ್ಪತ್ತಿಯಾದ ಭಸ್ಮವು ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷೆ ಎಂಬ ಹೆಸರು ಗಳಿಂದ ಕರೆಯಲ್ಪಡುತ್ತದೆ. ಇದು ಸೋಪಾಧಿಕ ಭಸ್ಮವೆನಿಸುತ್ತದೆ.

ಭಸ್ಮಧಾರಣೆಯಿಂದ ವೀರಶೈವನ ಅಂತರಂಗದಲ್ಲಿ ಶಿವಜ್ಞಾನ ಅನುಷ್ಠಾನಗಳಿಂದುಂ ಟಾದ ಜ್ಞಾನತೇಜಸ್ಸಿನಿಂದ ಕೂಡಿದುದೇ ಚಿದ್ಭಸಿತವೆನಿಸುವುದು. ಇದು ನಿರುಪಾಧಿಕ ಭಸಿತವೆನಿಸುವುದು. **ಇದೇ ಅಂತರಂಗದ ಭಸ್ಮ.**

೫. ರುದ್ರಾಕ್ಷಿ

''ರುದ್ರಾಕ್ಷಿಗಳು ಪರಶಿವನ ಜ್ಞಾನನೇತ್ರದಿಂದ ಉದಯವಾದವು. ಇವು ಶಿವಾನುಭವದ ನೆಲೆಯನ್ನು ಗೊತ್ತುಮಾಡಿಕೊಡುವ ತತ್ತ್ವಚಿಂತಾಮಣಿಗಳು. ಇವು ಗಳನ್ನು ಉಕ್ತಸ್ಥಾನಗಳಲ್ಲಿ ಧರಿಸಿಕೊಂಡು ತಾನೇ ರುದ್ರನಾಗಿ ಲಿಂಗವನ್ನು ಪೂಜಿಸ ಬೇಕೆಂದು ಶಿವಶರಣರುಕ್ತಿಗಳಿರುವುವು. ಆದರೆ, ಧರ್ಮಗ್ರಂಥಗಳಲ್ಲಿ —ತ್ರಿಪುರಸಂಹಾರ ಕಾಲದಲ್ಲಿ ಪರಶಿವನು ತ್ರಿಪುರವನ್ನು ನೋಡಲು ಅರಳಿಸಿದ ತ್ರಿನೇತ್ರಗಳಿಂದ ಬಿದ್ದ

ಕಂಬನಿಗಳಿಂದ ರುದ್ರಾಕ್ಷಿಗಳ ಉತ್ಪತ್ತಿಯನ್ನು ವಿವರಿಸಿರುವುದುಂಟು. ಅದು ಹೇಗೆಂದರೆ :

ಶಿವನ ತಪಸ್ಯಾದಿ ದ್ವಾದಶ ಕಲಾತ್ಮಕವಾದ ಸೂರ್ಯನೇತ್ರದಿಂದ ಕಪಿಲವರ್ಣದ ಹನ್ನೆರಡು ಬಗೆಯ ರುದ್ರಾಕ್ಷಿಗಳು ಹುಟ್ಟಿದವು. ಶಿವನ ಅಮೃತಾದಿ ಷೋಡಶ ಕಲಾತ್ಮಕವಾದ ಸೋಮನೇತ್ರದಿಂದ ಶ್ವೇತವರ್ಣದ ಹದಿನಾರು ಬಗೆಯ ರುದ್ರಾಕ್ಷಿಗಳು ಹುಟ್ಟಿದವು. ಶಿವನ ಧೂಮ್ರಾರ್ಚಿಃ ಪ್ರಭೃತಿದಶಕಲಾತ್ಮಕವಾದ ಅಗ್ನಿನೇತ್ರದಿಂದ ಕೃಷ್ಣವರ್ಣದ ಹತ್ತು ಬಗೆಯ ರುದ್ರಾಕ್ಷಿಗಳು ಹುಟ್ಟಿದವು—ಹೀಗೆಂದು ರುದ್ರಾಕ್ಷಿಗಳ ಉತ್ಪತ್ತಿಯು ವಿವರಿಸಲಾಗಿದೆ. ಲಿಂಗಾರ್ಚನೆಯಲ್ಲಿ ಧಾರಣಕ್ಕೂ ಜಪಮಾಲೆಗೂ ಯೋಗ್ಯವಾದ ಈ ಬಗೆಯ ರುದ್ರಾಕ್ಷಿಗಳೇ ಅಷ್ಟಾವರಣದಲ್ಲಿ ಬರುವ ರುದ್ರಾಕ್ಷಿಗಳು."

ಪೂಜಾಕಾಲದಲ್ಲಿ ರುದ್ರಾಕ್ಷಧಾರಣ ಮಾಡಿಕೊಂಡು ಪೂಜಿಸಬೇಕು. ಜಪಕ್ಕೆ ರುದ್ರಾಕ್ಷಮಾಲೆಯನ್ನು ಉಪಯೋಗಿಸಬೇಕು.

ಅಂತರಂಗದ ರುದ್ರಾಕ್ಷಿ : "ಚಿದ್ರುದ್ರಾಕ್ಷಿಯೆಂಬ ಹೆಸರಿನ ಶಿವಜ್ಞಾನದೃಷ್ಟಿಯು ಅಂತರಂಗದಲ್ಲಿ ಬೆಳಗುವುದೇ ಅಂತರಂಗದ ರುದ್ರಾಕ್ಷಿ."

೬. ಮಂತ್ರ

ಮಹಾಲಿಂಗದ ನಾಮವಾಚಕವೇ ಮಂತ್ರವಾಗಿದೆ. ಮಂತ್ರ ಎಂದರೆ ಗುರೂಪದಿಷ್ಟ ಷಡಕ್ಷರಮಹಾಮಂತ್ರ (ಓಂ ನಮಃ ಶಿವಾಯ) ವಾಚಕವಾದರೆ, ಲಿಂಗವೇ ಅದರ ಅರ್ಥ. ದೇಹದಲ್ಲಿ ಲಿಂಗವೂ ಮನದಲ್ಲಿ ಮಂತ್ರವೂ ಇರುತ್ತದೆ. ಅದು ಅಂಗಲಿಂಗ ಸಾಮರಸ್ಯಬೋಧಕವಾಗಿದೆ.

ಸದ್ಗುರುವಿನ ದೆಸೆಯಿಂದ ಆವನಾನೋರ್ವನ ಕಿವಿಯಲ್ಲಿ
ಬ್ರಹ್ಮೋಪದೇಶ ಹೇಳಲ್ಪಟ್ಟಿತ್ತು
ಆ ಶಬ್ದವೇ ಬೀಜವೆನಿಸಿಕೊಂಡಿತ್ತಯ್ಯಾ
ಅದು ಆವುದಯ್ಯಾ ಎಂದಡೆ :
ಶ್ರೀಗುರುವಿನ ದೆಸೆಯಿಂದ ಪಡೆದ ಶಿವಮಂತ್ರಾಕ್ಷರ ಬೀಜವೆ
ಬೀಜವೆನಿಸಿಕೊಂಡಿತ್ತಯ್ಯಾ
ಅಂತಹಜೀವಿಯೆ ಜ್ಞಾನಕಾಯನೆನಿಸಿಕೊಂಬನಯ್ಯಾ
ಶಿವಮಂತ್ರೋಪದೇಶವಿಲ್ಲದಾತನು ಪ್ರಕೃತಿಕಾಯನೆನಿಸುವನಯ್ಯಾ
ಪ್ರಕೃತಿಕಾಯನೆಂದಡೆ ಅಜ್ಞಾನಿಯೆಂದು ಪೇಳಲ್ಪಡುತಿರ್ಪನಯ್ಯಾ
ಇದು ಕಾರಣ,
ಪ್ರಕೃತಿಕಾಯ, ಜ್ಞಾನಕಾಯವೆಂದು ಎರಡು ಭೇದವಾಗಿರ್ಪುದಯ್ಯಾ
ಶಿವಮಂತ್ರ ದೀಕ್ಷೋಪದೇಶವಾಗಲಾಗಿ—
ಪ್ರಕೃತಿ ಕಾಯಂಹೋಗಿ. ಜ್ಞಾನಕಾಯವಪ್ಪುದು ತಪ್ಪದಯ್ಯಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ

ನಾಮರೂಪು ಕ್ರಿಯೆಗಳೇನಂ ಏನೂ ಇಲ್ಲದಂದು
ನಿತ್ಯನಿರಂಜನ ಪರವಸ್ತು ತಾನೇ ನಿರಂಜನ ಪ್ರಣವ ನೋಡಾ!
ಆ ನಿರಂಜನ ವಸ್ತುವಿನಲ್ಲಿ ಪರಮ ಚಿತ್ಕಲೆ ಉದಯವಾಗಿ
ಆ ಚಿದ್ರೂಪಕಲೆಯು ಶುದ್ಧಪ್ರಣವವೆನಿಸಿತ್ತು ನೋಡಾ !
ಆ ಶುದ್ಧಪ್ರಣವದಲ್ಲಿ ಚಿತ್ತು
ಆ ಚಿತ್ತೇ ಸಚ್ಚಿದಾನಂದ ಸ್ವರೂಪವನುಳ್ಳದಾಗಿ
ಚಿತ್ಪ್ರಣವವೆನಿಸಿತ್ತು ನೋಡಾ.
ಆ ಚಿತ್ಪ್ರಣವಸ್ವರೂಪಮಪ್ಪ ಪರತತ್ವದಲ್ಲಿ
ಪರಶಕ್ತಿ ಉದಯವಾಯಿತ್ತು
ಆ ಪರಶಕ್ತಿಯಿಂದೆ ನಾದ ಬಿಂದು ಕಳೆಗಳಾದುವಯ್ಯ.
'ಅ'ಕಾರವೇ ನಾದ, 'ಉ'ಕಾರವೇ ಬಿಂದು, 'ಮ'ಕಾರವೇ ಕಳೆ.
ಇಂತು ಮೂರಕ್ಕೆ ಪರಶಕ್ತಿಯೆ ತಾಯಿ
ಇಂತು ನಾಲ್ಕು ಒಂದಾದಲ್ಲಿ ಪ್ರಣವವಾಯಿತ್ತಯ್ಯಾ
ಆ ಪ್ರಣವವೇ ಪಂಚಲಕ್ಷಣವಾಯಿತ್ತು.
ಅದೆಂತೆಂದಡೆ :
ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ,
ಬಿಂದ್ವಾಕೃತಿ, ಇಂತೀ ಪಂಚಾಕೃತಿಯಾಯಿತ್ತಯ್ಯಾ
ತಾರಕಾಕೃತಿಯಲ್ಲಿ 'ನ'ಕಾರ ಜನನ, ದಂಡಕಾಕೃತಿಯಲ್ಲಿ 'ಮ'ಕಾರ ಜನನ
ಕುಂಡಲಾಕೃತಿಯಲ್ಲಿ 'ಶಿ'ಕಾರ ಜನನ, ಅರ್ಧಚಂದ್ರಾಕೃತಿಯಲ್ಲಿ
'ವ'ಕಾರ ಜನನ,
ಬಿಂದ್ವಾಕೃತಿಯಲ್ಲಿ 'ಯ'ಕಾರ ಜನನ
ಇಂತೀ ಪಂಚಾಕ್ಷರಂಗಳುತ್ಪತ್ತಿಯಾದವಯ್ಯಾ
ಪ್ರಣವವೇ ಕೂಡಿ ಷಡಕ್ಷರವೆಂದು ಪೇಳಲ್ಪಟ್ಟಿತ್ತಯ್ಯಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ
ಇದು ಕಾರಣ,
ದೇವಗುರು ನಿರೂಪಿಸಿದ ಶಿವಷಡಕ್ಷರ ಮಂತ್ರವನಗಲ್ದು
ಹುಟ್ಟಿ, ಸಾವ, ಕೆಡುವ ಮಂತ್ರ ತಂತ್ರ ಯಂತ್ರಾದಿಗಳ
ಕಲಿತು ಬದುಕಿದೆನೆಂಬ ಕಾಳ್ವಿಚಾರವ ಬಿಡು. ಗಡ, ಮನುಜರಿರಾ !
'ಓಂ ನಮಃ ಶಿವಾಯ'— ಇತಿ ಮಂತ್ರಂ ಸರ್ವೇಷು ಸ್ಥಾಪಯೇತ್'
ಎಂಬ ಬಿರುದು ಕಾಣಿರೋ !
ಎಲ್ಲಾ ಮಂತ್ರಕ್ಕೂ ಶಿವಮಂತ್ರವೇ ಗುರುವೆಂದರಿಯದೆ

ಅನ್ಯನಾಮವಿಡಿದು ಬಳಲುಪ ಅನಾಚಾರಿಗಳ ಕಂಡಡೆ
ಎನ್ನ ಮನ ನಚ್ಚದು, ಮೆಚ್ಚದಯ್ಯಾ,
ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೆ
—ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರು

ಭೋಗ್ಯವಾದ ಜಗತ್ತನ್ನು ಶಿವನಿಗರ್ಪಿಸಿ, ಲಿಂಗಭೋಗೋಪಭೋಗಿಯಾಗುವ ಅರ್ಥವು ಈ ಮಂತ್ರದಲ್ಲಿದೆ. ಲಿಂಗಾರ್ಚನಾನಂತರದಲ್ಲಿಯೂ ಈ ಮಂತ್ರವನ್ನು ಜಪಿಸಬೇಕು.

ಅಂತರಂಗದ ಮಂತ್ರ : ಬಹಿರಂಗದ ಮಂತ್ರವೇ ಲಿಂಗವಾಚಕವು, ಅಂತರಂಗದ ಅನುಭವದಲ್ಲಿ ಒಡಮೂಡುವುದೇ ಅಂತರಂಗದ ಮಂತ್ರವೆನಿಸುವುದು. ಅಂಗವು ಲಿಂಗ ಮಯವಾದಂತೆ ಮಂತ್ರಮಯವೂ ಆಗಿರುವುದೆಂಬ ಅನುಭವದಿಂದ ಇದು ಸಿದ್ಧಿಸು ವುದು.

೭. ಪಾದೋದಕ

ಗುರುಲಿಂಗಜಂಗಮರಿಂದ ಪಡೆದ ತೀರ್ಥವೇ ಪಾದೋದಕವೆನಿಸುತ್ತದೆ. ಉಪಾ ಸ್ಯೋಪಾಸಕರಾದ ಗುರುಶಿಷ್ಯರ ಸಮರಸಭಾವದಲ್ಲಿ ಒಡಮೂಡಿದ ಚಿದ್ರಸ ಎಂದರೆ—ಜ್ಞಾನಾಮೃತವೇ ಪಾದೋದಕವು. ಪಾದೋದಕದಲ್ಲಿ ಗುರುಪಾದೋದಕ, ಲಿಂಗ ಪಾದೋದಕ ಮತ್ತು ಜಂಗಮಪಾದೋದಕವೆಂದು ಮೂರು ವಿಧ, ಇವುಗಳನ್ನು ಕ್ರಮವಾಗಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ ಮತ್ತು ಜ್ಞಾನಪಾದೋದಕವೆಂದು ಕರೆಯುವರು. ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಉಳಿದೆರಡು ಕೂಡಿಯೇ ಇರು ವುವು. ಅವುಗಳನ್ನು ಪಡೆಯುವ ಕ್ರಮದಲ್ಲಿ ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ ಎಂಬ ಏಳು ವಿಧಗಳು ಕೂಡಿ ಒಟ್ಟು ದಶವಿಧ ಪಾದೋದಕವಾಗುವುದು. ಪಾದೋ ದಕ ಪ್ರಕ್ರಿಯೆಯಲ್ಲಿ, ಗುರು–ಶಿಷ್ಯರಲ್ಲಿ ಪೂಜಾಕಾಲದಲ್ಲಿ ಮಾತ್ರ ಭೇದವೂ, ಪೂಜಾಫಲ ವಾದ ಪಾದೋದಕವನ್ನು ಪಡೆದು ಸ್ವೀಕರಿಸುವಲ್ಲಿ ಅಭೇದವೂ ಎಂದರೆ ಸಾಮರಸ್ಯವೂ ಇರುವುದು.

ಗುರುಪಾದೋದಕದಿಂದೆ
ಪರಾತ್ಪರವು ಬೇರಿಲ್ಲ ಕಾಣಿರೆ॥ ಪಲ್ಲವಿ
ಆಣವಮಲ ಕಾರ್ಮಿಕಮಲದ ಕುಲವತೊಳೆದು
ಪ್ರಾಣ ನಿರ್ಮಳ ಮಾಡಿದುದೆನ್ನಯ.
ಪ್ರಾಣನಾಥ—ಗುರುಪಾದೋದಕ॥ ೧

ಗುರುಪಾದಾಂಗುಷ್ಠದಲ್ಲಿ ಅಷ್ಟಷಷ್ಟಿ
ವರ ತೀರ್ಥಂಗಳಿರ್ಪವು

ಅಂದು ಗುರುವಿನಡಿಯಲ್ಲಿ ಪಾದೋದಕ
ಪರಮರಸವ ಧರಿಸಲು ಮುಕ್ತಿ॥ ೨

ಪಾದವೆ ಗುರುವಾಗಿ ಘನಗುರುವಿನೊಳು ಪ್ರ-
ಮೋದದೊಳುದಕವಾಗಿರೆ ಕೂಡೆ
ಭೇದವಿಲ್ಲದೆ ಶಿಷ್ಯನುದಯಿಸಿದನಂ
ಪಾದೋದಕರೂಪ ತಾನಾಗಿ॥ ೩

ಗುರುಶಿಷ್ಯರೀರ್ವರು ಸಮರಸವಾಗಿ ತಮ್ಮೊಳು
ಬೆರಸಿ ಪರಸ್ಪರವರಿಯದೆ
ಗುರುಕರುಣಾಮೃತ ಪಾದೋದಕದಲ್ಲಿ
ಪರವಶವಾದುದನೇನೆಂಬೆ ! ೪

ನೀರು ನೀರಾಗಿ ಬೆರಸಿದ ಪಾದೋದಕ–
ಧಾರೆಯ ಕಡಲೋಕುಳಿಯಲ್ಲಿ
ಪೂರಾಯ ಸನ್ಮತದಲ್ಲಿ ಬಾಗಿ ಮುಳುಗಿ
ಕೂಡಲಸಂಗನ ಕೃಪೆಯಿಂದ ಬದುಕಿದೆನು॥ ೫

—ವೀರಶೈವಚಿಂತಾಮಣಿ

ಗುರುಪಾದೋದಕವು ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು
ಧರಿಸಿದಾತಂಗೆ ಅಷ್ಟಷಷ್ಟಿತೀರ್ಥಂಗಳು
ತನ್ನೊಳಗಿಹವಯ್ಯಾ
ಸಾಕ್ಷಿ-'ಅಂಗುಷ್ಠಾಗ್ರೇ ಅಷ್ಟಷಷ್ಟಿತೀರ್ಥಾನ್ಯಸ್ಮಿನ್ ವಸಂತಿ ತೇ'
ಇಂತೆಂದುದಾಗಿ—
ಶ್ರೀಗುರುವಿನ ಅಂಗುಷ್ಠಾಗ್ರದಲ್ಲಿ
ಸಕಲತೀರ್ಥಗಳಿರ್ಪವು
ಶ್ರೀಗುರುವಿನ ಪಾದೋದಕವು ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು
ಇದು ಕಾರಣ, ಗುರುಪಾದೋದಕದಿಂದವೆ
ಪರವಪ್ಪುದಂ ಅಮರಗುಂಡದ ಮಲ್ಲಿಕಾರ್ಜುನ

—ಪುರದ ನಾಗಣ್ಣ

ಕರುಣಜಲ, ವಿನಯಜಲ ಸಮತಾಜಲ :
ಕರುಣಜಲ ಗುರುಪಾದೋದಕ.

ವಿನಯಜಲ ಲಿಂಗಪಾದೋದಕ,
ಸಮತಾಜಲ ಜಂಗಮಪಾದೋದಕ.
ಗುರುಪಾದೋದಕದಿಂ ಸಂಚಿತಕರ್ಮ ನಾಸ್ತಿ
ಲಿಂಗಪಾದೋದಕದಿಂ ಪ್ರಾರಬ್ಧಕರ್ಮ ನಾಸ್ತಿ
ಜಂಗಮಪಾದೋದಕದಿಂ ಆಗಾಮಿಕರ್ಮ ನಾಸ್ತಿ
ಇಂತೀ ತ್ರಿವಿಧ ಪಾದೋದಕದಿಂ ತ್ರಿವಿಧಕರ್ಮ ನಾಸ್ತಿ
ಇದು ಕಾರಣ, ಈ ತ್ರಿವಿಧ ಪಾದೋದಕವನು
ಕೂಡಲ ಚೆನ್ನಸಂಗಾ, ನಿಮ್ಮ ಶರಣ ಬಲ್ಲ.

—ಚನ್ನಬಸವಣ್ಣನವರು

ಅಂತರಂಗದ ಪಾದೋದಕ : ಬಹಿರಂಗದ ಪಾದೋದಕ ಸ್ವೀಕಾರದಿಂದ ಸಿದ್ಧಿಸಿದ ಚಿದ್ರಸ (ಜ್ಞಾನಾನಂದ) ಅಂತರಂಗದಲ್ಲಿ ಚಿರಸ್ಥಾಯಿಯಾಗಿ ಉಳಿಯುವುದೇ ಅಂತರಂಗದ ಪಾದೋದಕ. ಅಂತರಂಗದ ಗುರುಪಾದೋದಕ, ಲಿಂಗಪಾದೋದಕ ಮತ್ತು ಜಂಗಮಪಾದೋದಕಗಳು ಕ್ರಮವಾಗಿ ಕರುಣಜಲ, ವಿನಯಜಲ, ಸಮತಾಜಲ (ದಯೆ, ವಿನಯ. ಸಮತೆ) ವೆಂಬ ಅರಿವಿನಿಂದುಂಟಾದ ಆನಂದವೇ ಅಂತರಂಗದ ಪಾದೋದಕವೆನಿಸುವುದು.

ಪ್ರಸಾದ

"ವೀರಶೈವನು ತನ್ನ ಆಹಾರವನ್ನು ತಾನು ದುಡಿದುದಂ ತನ್ನದೆಂದು ಅಹಂಕಾರ ಮಮಂಕಾರ ಭಾವನೆಯಿಂದ ಭುಂಜಿಸದೆ, ಅದು ತನ್ನ ಉಪಾಸ್ಯಮೂರ್ತಿಗಳಾದ ಗುರು ಲಿಂಗ ಜಂಗಮರ ಕೃಪೆಯಿಂದ ಪಡೆದುದೆಂದು ತಿಳಿದಂ, ಅವರಿಗರ್ಪಿಸಿ, ಅವರ ಮುಖದಿಂದ ಬಂದುದನ್ನು ದಾಸೋಹಂಭಾವದಿಂದ ಭುಂಜಿಸುವ ಆಹಾರವು ಪ್ರಸಾದವೆನಿಸುವುದು"

"ಶಿವನು ಪ್ರಸಾದ ಸ್ವರೂಪನು. ಜೀವನೂ ಜಗತ್ತೂ ಪದಾರ್ಥ ಸ್ವರೂಪವು. ಜೀವನಂ ಶಿವನಾಗಬೇಕಾದರೆ ಶಿವನಂತೆ ಪ್ರಸಾದರೂಪನಾಗಬೇಕು.

ಭಕ್ತನು ಗುರುಜಂಗಮರನ್ನು ಪೂಜಿಸಿ, ಅವರಿಗರ್ಪಿಸಿ ಪ್ರಸಾದ ಮಾಡಿಕೊಳ್ಳ ತಕ್ಕದ್ದು (ಒಕ್ಕುಮಿಕ್ಕ ಪ್ರಸಾದ). ಅಲ್ಲದೆ, ತನ್ನ ದೇಹೇಂದ್ರಿಯಗಳನ್ನೂ ತನ್ನನ್ನೂ ಅವರಿಗರ್ಪಿಸಿ ಪ್ರಸಾದ ಮಾಡಿಕೊಳ್ಳಬೇಕಂ. ಈ ರೀತಿ ಪಡೆದುದು ಗುರುಪ್ರಸಾದ, ಲಿಂಗಪ್ರಸಾದ ಮತ್ತು ಜಂಗಮಪ್ರಸಾದವಾಗುವುವು.

ತನ್ನ ತನು ಮನ ಭಾವಗಳನ್ನು ಪ್ರಸಾದ ಮಾಡಿಕೊಳ್ಳುವುದರಲ್ಲಿ ಏಕಾದಶ ಪ್ರಸಾದಗಳಾಗುತ್ತವೆ. ಪ್ರಸಾದಪ್ರಕ್ರಿಯೆಯಲ್ಲಿ ಕಾಯಾರ್ಪಣ, ಕರಣಾರ್ಪಣ ಮತ್ತು ಭಾವಾರ್ಪಣ ಎಂದು ಮೂರು ವಿಧಗಳಿವೆ. ಇವು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೂ ಜ್ಞಾನೇಂದ್ರಿಯ ಕ್ರಿಯೆಗಳಿಗೂ ಸಂಬಂಧಪಡುತ್ತವೆ.

ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂತುಟೆಂದು ಬೆಸಗೊಂಡಡೆ
ಹೇಳಿಹೆ, ಕೇಳಿರೆ :

ಶುದ್ಧಪ್ರಸಾದವು ಗುರುಮುಖದಿಂದೆ ಬಂದುದು
ಸಿದ್ಧಪ್ರಸಾದವು ಲಿಂಗಮುಖದಿಂದೆ ಬಂದಂದು
ಪ್ರಸಿದ್ಧ ಪ್ರಸಾದವು ಜಂಗಮಮುಖದಿಂದೆ ಬಂದುದು
ಇದರೊಳಗಾವುದು ಘನವೆಂಬೆ, ಆವುದು ಕಿರಿದೆಂಬೆ
ಘನಕ್ಕೆ ಘನವಾದ ಮಹಾಘನಪ್ರಸಾದವ ?

ಗುರುಪ್ರಸಾದದಿಂದ ತನುಶುದ್ಧ,
ಲಿಂಗಪ್ರಸಾದದಿಂದ ಮನಶುದ್ಧ,
ಜಂಗಮಪ್ರಸಾದದಿಂದ ಪ್ರಾಣಶುದ್ಧವಾಯಿತ್ತು

ಇದು ಕಾರಣ, ಕೂಡಲ ಚನ್ನಸಂಗಮದೇವಾ
ಈ ತ್ರಿವಿಧ ಪ್ರಸಾದವ ಕೊಂಡೆನ್ನಭವಂ ನಾಸ್ತಿಯಾಯಿತ್ತು
—ಚನ್ನಬಸವಣ್ಣನವರು

ಕಾಯಪ್ರಸಾದವೆನ್ನ, ಜೀವಪ್ರಸಾದವೆನ್ನ,
ಪ್ರಾಣಪ್ರಸಾದವೆನ್ನ, ಮನಪ್ರಸಾದವೆನ್ನ,
ಪ್ರಸಾದಪ್ರಸಾದವೆನ್ನ, ಭಾವಪ್ರಸಾದವೆನ್ನ,
ಸಯದಾನ ಪ್ರಸಾದವೆನ್ನ, ಸಮಭೋಗ ಪ್ರಸಾದವೆನ್ನ,
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಪ್ರಸಾದವ ಹಾಸಿ ಹೊದ್ದಿಸಿಕೊಂಡಿರ್ಪೆನಂ
—ಅಕ್ಕಮಹಾದೇವಿಯವರು

ಪ್ರಸಾದ ಪ್ರಸಾದವೆಂದೆಂಬರು
ಪ್ರಸಾದದಾದಿಕುಳವನಾರುಂ ಬಲ್ಲರು ?
ಪ್ರಸಾದವೆಂಬುದುಂ ಅತರ್ಕ್ಯ, ಅಪ್ರಮಾಣವು

ಗುರುವಿನಲ್ಲಿ ಶುದ್ಧಪ್ರಸಾದವೆನಿಸಿತ್ತು
ಲಿಂಗದಲ್ಲಿ ಸಿದ್ಧಪ್ರಸಾದವೆನಿಸಿತ್ತು
ಜಂಗಮದಲ್ಲಿ ಪ್ರಸಿದ್ಧಪ್ರಸಾದವೆನಿಸಿತ್ತು

ಇಂತೀ ತ್ರಿವಿಧಮುಖವೊಂದೇ ಪ್ರಸಾದವಾಗಿ ತೋರಿ,
ಮತ್ತೆ ವಿಶ್ವದೊಳಗೆ ವಿಶ್ವತೋಮುಖವಾಗಿ ಪ್ರಕಾಶಿಸಿತ್ತು.

ಎನ್ನಂತರಂಗದಲ್ಲಿ ಬೆಳಗುವ ಮಹಾಪ್ರಸಾದವು
ಎನ್ನ ಸರ್ವಾಂಗಮಯವಾಗಿ ತೋರುತ್ತಿದೆ

ಶಿವ ಶಿವ ! ನಿಮ್ಮ ಪ್ರಸಾದದ ಮಹಿಮೆಯನೇನೆಂದುಪಮಿಸುವೆ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ

—ಸ್ವತಂತ್ರ ಸಿದ್ಧಲಿಂಗೇಶ್ವರ ವಚನ

ಅಂತರಂಗದ ಪ್ರಸಾದ : "ಅಹಂಕಾರ ಮಮಕಾರರಹಿತವಾಗಿ, ಆತ್ಮನು ಪ್ರಸನ್ನತೆಯನ್ನು(ವಿಶುದ್ಧತೆಯನ್ನು—ಪ್ರಸಾದ ಸ್ವರೂಪವನ್ನು) ಪಡೆದಿರುವುದೇ ಅಂತರಂಗದ ಪ್ರಸಾದ ಸ್ವರೂಪವು."

ಪಂಚಾಚಾರಗಳು

ಆಚಾರ : "ಶಿವಾನುಭವವು ನಮಗೆ ಉಂಟಾಗಲು ನಮ್ಮ ಶರೀರವನ್ನೂ ಅಂತಃಕರಣವನ್ನೂ ತಕ್ಕ ಹದಕ್ಕೆ ತರಬೇಕಾಗಿದೆ. ಈ ಹದಗೊಳಿಸುವ ನಡತೆಯೇ ಆಚಾರ.... ನಮ್ಮ ಪ್ರತಿಯೊಂದು ಆಚಾರವೂ ನಮ್ಮಲ್ಲಿ ಒಂದು ಸಂಸ್ಕಾರವನ್ನು ಹುಟ್ಟಿಸುವುದು ....ಆದುದರಿಂದ, ಆಚಾರಗಳಿಗೆ ವೀರಶೈವ ಧರ್ಮವು ಅತ್ಯಂತ ಮೇಲ್ಮೆಯನ್ನು ಕಲ್ಪಿಸಿರುವುದು. ಒಂದೊಂದು ಆಚಾರದಿಂದಲೂ ಆತ್ಮನು ಸಂಸ್ಕಾರವನ್ನು ಹೊಂದುತ್ತ ಪರಿಶುದ್ಧನಾಗಹತ್ತುವನು. ಈ ಪರಿಶುದ್ಧಿಯಲ್ಲಾದ ಸ್ವಾತ್ಮತತ್ವಪ್ರಕಾಶವೇ ಲಿಂಗವು. ಇಂತು ಆಚಾರವು ನಡತೆಯಲ್ಲಿ ಸಾಧನವಾಗುತ್ತಲೂ, ಆ ಸ್ವಾತ್ಮಾಯಪ್ಕರಣದಲ್ಲಿ ಸಾಧ್ಯವಾಗುತ್ತಲೂ ಹೋಗುವುದರಿಂದ ಈ ಸಾಧ್ಯ ಸಾಧನ ಭಾವಗಳನ್ನು ತನ್ನಲ್ಲೊಡಗೊಂಡು ಆಚಾರಲಿಂಗವಾಯಿತು.

ನೀತಿಯು ಆಚಾರದ ತಳಹದಿಯಾಗಿದೆ, ನೀತಿಯಿಲ್ಲದ ಆಚಾರ ಬಲಗೊಳ್ಳದು. ವೀರಶೈವನಿಗೆ ಅಷ್ಟಾವರಣಗಳು ಅಂಗವಾಗಿಯೂ, ಷಟ್‌ಸ್ಥಲಗಳು ಆತ್ಮವಾಗಿಯೂ ಇರುವಂತೆ, ಪಂಚಾಚಾರಗಳು ಪ್ರಾಣಸ್ವರೂಪವಾಗಿವೆ, ಗುಣಪ್ರಧಾನವಾಗಿವೆ, ಸದ್ಭಾವನೆಯನ್ನೊಳಗೊಂಡಿವೆ. ಲಿಂಗಚೈತನ್ಯ ಆತ್ಮನಲ್ಲಿ ಬೆಳಗಬೇಕಾದರೆ ಪಂಚಾಚಾರಗಳು ಪ್ರಾಣದಂತೆ ಸಹಾಯಕವಾಗಬೇಕು. ಆದುದರಿಂದ ವೀರಶೈವಧರ್ಮಾಚರಣೆಗೆ ಬೆನ್ನೆಲುಬಿನಂತಿರುವ ಆಚಾರ ಐದು ರೂಪವಾಗಿದೆ. ಅವು ಲಿಂಗಾಚಾರ, ಸದಾಚಾರ. ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳಾಗಿವೆ.

೧. ಲಿಂಗಾಚಾರ

ಲಿಂಗಸಿದ್ಧಿಗೆ ಇರುವ ಆಚಾರವೇ ಲಿಂಗಾಚಾರ. ಲಿಂಗವೇ ತಾನೆಂಬ ತಾತ್ವಿಕ ವಿವೇಚನೆಯೂ ಮನದಲ್ಲಿ ನೆಲಸಿರಬೇಕು. ಸದ್ಭಕ್ತಿಯಿಂದ ಲಿಂಗಸಾಧನೆಯಲ್ಲಿ ತೊಡಗಬೇಕು. ಲಿಂಗೋಪಾಸನೆಯಿಂದ ಲಿಂಗಸಿದ್ಧಿ ಲಭಿಸುವುದು. ಲಿಂಗಪೂಜೆ ಧ್ಯಾನಾದಿಗಳಿಂದ ಲಿಂಗದಲ್ಲಿ ಸಾಮರಸ್ಯಸುಖವನ್ನು ಪಡೆಯುವಂತಾಗಬೇಕು. ಅಷ್ಟಾವರಣಗಳಲ್ಲಿ ಉಕ್ತವಾಗಿರುವ ಪರಮಾತ್ಮನ ಮೂರು ರೂಪಗಳಾದ ಗುರು, ಲಿಂಗ, ಜಂಗಮಗಳ ಉಪಾಸನೆಗೆ ಸಾಧನಗಳಾದ ಭಸ್ಮ, ರುದ್ರಾಕ್ಷಿ, ಮಂತ್ರಗಳ ಮೂಲಕ ಪಾದೋದಕ, ಪ್ರಸಾದ ಫಲಗಳನ್ನು ಪಡೆಯಬೇಕು. ಭಕ್ತನು ತನ್ನ ಸ್ಥೂಲ, ಸೂಕ್ಷ್ಮ, ಕಾರಣ ಶರೀರ

ಗಳಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ರೂಪದಲ್ಲಿರುವ ಪರಮಾತ್ಮನನ್ನು ಇಷ್ಟಲಿಂಗರೂಪದಲ್ಲಿ ಉಪಾಸಿಸಬೇಕು. ಆ ಮೂರು ಲಿಂಗಗಳೇ ಆರು ಲಿಂಗಗಳಾಗಿ ನಾಸಿಕಾದಿ ಜ್ಞಾನೇಂದ್ರಿಯಗಳಲ್ಲಿ ಉಪಾಸಿಸಲ್ಪಡಬೇಕು. ಇವೆಲ್ಲಾ ಮೈಗೂಡಬೇಕಾದರೆ, ಅಂಗನಲ್ಲಿ ನೈತಿಕಶಕ್ತಿ ಬೆಳೆದು ಅಂಗ, ಲಿಂಗ (ಶಿವ) ಗುಣಗಳು ಅಳವಡಬೇಕು. ದುರ್ಗುಣಗಳು ತ್ಯಾಜ್ಯವಾಗಬೇಕು. ಅಂಗದಮೇಲೆ ಲಿಂಗವನ್ನು ಸದಾ ಧರಿಸಿ ಪೂಜಿಸಬೇಕು. ಗುರು, ಲಿಂಗ, ಜಂಗಮರನ್ನು ಸೇವಿಸಬೇಕು. ಲಿಂಗವಲ್ಲದೆ ಅನ್ಯದೇವತೆಗಳನ್ನು ಪೂಜಿಸಬಾರದು,

೨. ಸದಾಚಾರ

ಲಿಂಗಾನುಭವಿಗಳೂ, ಸಾಧು ಸತ್ಪುರುಷರೂ ಒಪ್ಪುವಂತೆ, ಲಿಂಗಾರಾಧಕನಾಗಿ ಭಕ್ತನು ಸಜ್ಜನನಾಗಿ, ಸದ್ಗುಣಸಂಪನ್ನನಾಗಬೇಕು. ಸದಾಚಾರದಿಂದ ಕೂಡಿದ ವ್ಯಕ್ತಿಯಿಂದ ಸಂತತಿಗೂ, ಸಮಾಜಕ್ಕೂ, ದೇಶಕ್ಕೂ ಹಿತವಾಗುವುದು. ಸದಾಚಾರಿಯು ಸತ್ಯ ಶುದ್ಧ ಕಾಯಕವನ್ನು ಕೈಕೊಂಡು ಉದ್ಯೋಗಶೀಲನಾಗಬೇಕು. ಷಟ್‌ಸ್ಥಲ ತತ್ತ್ವಗಳಿಗನುಸರಿಸಿ, ನೀತಿಯುತನಾಗಿ ತಾನು ನಡೆಯುವುದಲ್ಲದೆ, ತನ್ನ ಮನೆಯವರೂ ನಡೆಯುವಂತೆ ಮಾಡಿ, ತ್ಯಾಜ್ಯಾಹಾರಾದಿಗಳನ್ನು ಬಿಟ್ಟು, ಪಾದೋದಕ ಪ್ರಸಾದೋಪಜೀವಿಯಾಗಿರತಕ್ಕದ್ದು ಮತ್ತು ಉದ್ಯೋಗಶೀಲನಾಗಿ, ಆ ಉದ್ಯೋಗವನ್ನು ಪ್ರಾಮಾಣಿಕವಾಗಿ ಶಿವಾರ್ಪಣಬುದ್ಧಿಯಿಂದ ಮಾಡತಕ್ಕದ್ದು.''

೩. ಶಿವಾಚಾರ

ಲಿಂಗಾಂಗಿಯು ತನ್ನಂತೆ ತನ್ನ ಸಮಾಜದವರನ್ನೂ ಶಿವಸ್ವರೂಪಿಗಳೆಂದು ಭಾವಿಸಬೇಕು. ಅವರಲ್ಲಿ ಕುಲ, ವಯಸ್ಸು, ಲಿಂಗವೆಂಬ ಭೇದಗಳನ್ನೆಣಿಸಬಾರದು. ಇತರ ಸಮಾಜಗಳ ಆತ್ಮಾನುಭವಿಗಳನ್ನೂ ಶಿವಸ್ವರೂಪವೆಂದೇ ಭಾವಿಸಬೇಕು. ''ಚೆನ್ನಬಸವೇಶ್ವರನು ಹೇಳಿದಂತೆ : ಶಿವಭಕ್ತರಲ್ಲಿ ಜಾತಿ ವರ್ಣಾಶ್ರಮವನರಸದೆ, ಅವರೊಕ್ಕುದ ಕೊಂಬುದೇ ಶಿವಾಚಾರ''ವೆಂತಲೂ, ಮತ್ತೊಂದೆಡೆಯಲ್ಲಿ : ''ಗುರುಮಾರ್ಗಾಚಾರದಲ್ಲಿ ನಿಂದ ಶಿವಲಾಂಛನಧಾರಿಗಳಲ್ಲಿ ಪರಶಿವಲಿಂಗದಲ್ಲಿ ಬೆರಸಿ, ಅರ್ಥಪ್ರಾಣಾಭಿಮಾನವನ್ನು ಅರ್ಪಿಸುವುದೇ ಶಿವಾಚಾರವೆಂಬೆನಯ್ಯಾ'' ಎಂಬುದನ್ನು ಗಮನಿಸಬೇಕು. ಇದರಿಂದ ಶಿವಾಚಾರವೂ ನೀತಿಮಯವಾಗಿರುವುದು.

೩. ಗಣಾಚಾರ

ಚೆನ್ನಬಸವೇಶ್ವರನು ''ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ''ವೆಂತಲೂ, ಮತ್ತೊಂದೆಡೆಯಲ್ಲಿ ''ಅಷ್ಟಾವರಣಗಳ ಮೇಲೆ ನಿಂದೆ ಕುಂದುಗಳು ಬಂದು ತಟ್ಟಿದಲ್ಲಿ, ಆ ಸ್ಥಳವ ತ್ಯಜಿಸುವುದೇ ಗಣಾಚಾರವೆಂಬೆನಯ್ಯಾ'' ಎಂದೂ ಹೇಳಿರುವನು. ಮತ್ತೊಬ್ಬರು : ''ಗುರು ಲಿಂಗ ಜಂಗಮನಿಂದೆ, ಭಕ್ತರ ನಿಂದೆ ಇತ್ಯಾದಿ ವಿರೋಧ ಪ್ರವೃತ್ತಿಯುಳ್ಳವರನ್ನು ನಿಗ್ರಹಿಸಬೇಕೆಂ''ತಲೂ ಹೇಳಿದರು. ಆದರೆ ಅದು ಸಮಾಜ

ದಲ್ಲಿ ಕಲಹ, ಅಶಾಂತಿಗೆ ಕಾರಣವಾಗುವ ಸಂಭವವಿದೆ. ಆದುದರಿಂದ ನೈತಿಕ ಸದ್ಭಾವನೆಗಳನ್ನು ಬೆಳೆಸುವುದು ಅಗತ್ಯ. ತತ್ತ್ವಯುಕ್ತ ತನ್ನ ಧರ್ಮದ ಆಚರಣೆಯನ್ನು ಇತರರಿಗೆ ತೊಂದರೆಯಾಗದ ರೀತಿಯಲ್ಲಿ ತನ್ನ ದೇಹಾವಸಾನದವರೆಗೂ ಬಿಡದೆ ನಡೆಸಿಕೊಂಡು ಹೋಗುವ ಧರ್ಮಾಗ್ರಹದಿಂದಿರುವುದೇ ಗಣಾಚಾರವೆನ್ನಬಹುದು, ವಿರೋಧಿ ವ್ಯಕ್ತಿನಾಶನ ಉಚಿತವಲ್ಲ, ವ್ಯಕ್ತಿಗತ ದುರ್ಗುಣ ನಾಶವೇ ಯುಕ್ತವಾದುದು. ಗಣಾಚಾರಿಯು ದುರ್ಗುಣಗಳನ್ನು ಸುಗುಣಗಳನ್ನಾಗಿ ಮಾಡಲು ಪ್ರಯತ್ನಿಸಬೇಕು.

೪. ಭೃತ್ಯಾಚಾರ

ಲಿಂಗಾಂಗಿಯು ಸದ್ಗುಣ ಸಂಪನ್ನನಾಗಿರುವುದಲ್ಲದೆ ವಿನಯಾದಿಸಾತ್ವಿಕ ಗುಣವನ್ನೂ ಅಳವಡಿಸಿಕೊಳ್ಳಬೇಕು. ಕಿಂಕರಭಾವವು ಇತರ ಆಚಾರಗಳಿಗೆ ಮೆರುಗನ್ನು ಕೊಡುತ್ತದೆ. ಕಿರಿತನವು ಸಮಾಜದಲ್ಲಿ ಸಮತಾಭಾವವನ್ನು ಉಂಟು ಮಾಡಲು ಸಾಧನವಾಗಿದೆ. ಭೃತ್ಯಾಚಾರಿಯು ಎಲ್ಲರಿಂದಲೂ ಗೌರವಿಸಲ್ಪಡುವನು ಬಸವಣ್ಣನವರು :

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ.
ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ, ಕೂಡಲಸಂಗಮದೇವಾ
ಎನಗಿದೇ ದಿವ್ಯ"

"ಸದುವಿನಯವೇ ಸದಾಶಿವನ ಒಲುಮೆಯಯ್ಯಾ"
"ಬನ್ನಿರಿ, ಕುಳ್ಳಿರಿ ಹದುಳವಿದ್ದಿರೆ—ಎಂದರೆ ನೆಲಕುಳಿ
ಹೋಹುದೇ ? ಕೊಡಲಿಲ್ಲದಿದ್ದರೂ ಈ ಗುಣವಿಲ್ಲದಿದ್ದರೆ ಕೂಡಲ
ಸಂಗಮದೇವನೆಂತೊಲಿವ ?"

ಎಂದಿದ್ದಾರೆ. ವೀರಶೈವನು ವಿನಯಶೀಲನಾಗಿರದಿದ್ದರೆ, ದುರಭಿಮಾನಿಯಾಗಿ ಅಹಂಕಾರಿಯಾಗುವನು.

ಪಂಚಾಚಾರಗಳಲ್ಲದೆ, ವಚನಕಾರರು ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಮತ್ತು ಸರ್ವಾಚಾರಗಳೆಂಬ ಸಪ್ತಾಚಾರಗಳನ್ನು ಹೇಳಿರುವರು. ಅವು ಬಹು ಮಟ್ಟಿಗೆ ಪಂಚಾಚಾರಗಳ ವಿವರಣೆಯಂತಿವೆ.

ಚೆನ್ನಬಸವಣ್ಣನವರ ವಚನ :

ಲಿಂಗವೇ ಪರವೆಂದರಿದು ಅನ್ಯದೇವರ ಭಜನೆಯಿಲ್ಲದಿಪ್ಪುದೇ
ಲಿಂಗಾಚಾರ.
ಸತ್ಕ್ರಿಯೆಯಿಂದ ಧನ ಸಂಪಾದಿಸಿ, ಗುರು ಲಿಂಗ ಜಂಗಮ ದಾಸೋಹ
ದಾನ, ಪರೋಪಕಾರ ಮಾಡುವುದೇ ಸದಾಚಾರ.
ಅಂಗದ ಮೇಲೆ ಲಿಂಗವಿರ್ಪ ಶಿವಭಕ್ತನೇ ಶಿವರೂಪೆಂದರಿದು

ಅವರ ಮಂದಿರವ ಪೊಕ್ಕು ವಿಂಕ್ಕುದನುಂಬುದೇ ಶಿವಾಚಾರ
ಶಿವನಿಂದೆಯ ಕಿವಿಗೊಟ್ಟು ಕೇಳದಿಪ್ಪುದೇ ಗಣಾಚಾರ.
ಶಿವಭಕ್ತರ ಶಿಶುವು ಹೊಟ್ಟೆಯಲ್ಲಿರ್ಪುದ ಕಂಡು ಯಜಮಾನ
ನೆಂದರಿದು ನಮ್ರಭಾವದಿಂ ನಡೆದುಕೊಳ್ಳುವುದೇ ಭೃತ್ಯಾಚಾರ.
ಇಂತೀ ಪಂಚಾಚಾರಸಂಯುಕ್ತನಾಗಿ ನಡೆಯುವ ಶಿವಭಕ್ತ
ನೊಕ್ಕುಮಿಕ್ಕುದನಿಕ್ಕಿ ಸಲಹಯ್ಯ ಕೂಡಲಸಂಗಮ ದೇವಾ.

ಷಟ್‌ಸ್ಥಲಗಳು

ಅಷ್ಟಾವರಣನಿಷ್ಠನಾಗಿ, ಪಂಚಾಚಾರನಿರತನಾಗಿ, ಜ್ಞಾನ ಕ್ರಿಯಾ ಮಾರ್ಗವನ್ನ ರಿತ ಸದ್ಭಕ್ತಿಸಂಪನ್ನನಾದ ವೀರಶೈವನು ಆತ್ಮಸ್ವರೂಪವಾದ ಷಟ್‌ಸ್ಥಲಾಚರಣೆಯ ಅಂತಿಮ ಗುರಿಯನ್ನು ಸಾಧಿಸುವನು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ—ಇವು ಲಿಂಗಾಂಗಸಾಮರಸ್ಯದ ಆರು ಮೆಟ್ಟಿಲುಗಳು.

೧. ಭಕ್ತಸ್ಥಲ.

ಗುರುವಿನಿಂದ ಶಿವದೀಕ್ಷೆ ಪಡೆದ ಭಕ್ತನು ಅಷ್ಟಾವರಣ, ಪಂಚಾಚಾರಸಂಪನ್ನ ನಾಗಿ, ತನುವಿನಿಂದ ಗುರುಸೇವೆ ಮಾಡಬೇಕು. ಮನವನ್ನು ಲಿಂಗಧ್ಯಾನದಲ್ಲಿರಿಸ ಬೇಕು. ಧನವನ್ನು ಜಂಗಮಕ್ಕರ್ಪಿಸಬೇಕು. ಶಿವನಲ್ಲಿ, ಶಿವ ಭಕ್ತರಲ್ಲಿ ಶ್ರದ್ಧಾಭಕ್ತಿ ಯುಳ್ಳವನಾಗಿ ಕಿಂಕುರ್ವಾಣತೆಯಿಂದಿರಬೇಕು. ಭಕ್ತಿ, ಪ್ರೀತಿ, ದಯೆ, ಶಾಂತಿ, ಸತ್ಯ, ಕ್ಷಮೆ, ಅಹಿಂಸೆ ಮುಂತಾದ ಸದ್ಗುಣಗಳಿಂದ ಕೂಡಿರಬೇಕು.

ಕಿಂಕರ ಭಾವಮಂ ಬಲಿದಂ, ಲಿಂಗಮುಖಂ ಚರಲಿಂಗವೆಂದು ನಿ–
ಶ್ಶಂಕತೆಯಿಂ ಸುವರ್ಣವಸನಾನ್ನಪುರಸ್ಸರ ವಸ್ತುವಾಹನಾ-
ಲಂಕರಣಂಗಳಂ ಸಲೆ ಸಮರ್ಪಿಸಿ, ವೀರಶಿವಾಗಮೋಕ್ತ ಚಿ
ಹ್ನಾಂಕಿತರಾದವರ್ಗೆ ಮಣಿವಂತುಟೆ ಭಕ್ತಿಪದಂ ಶಿವಾಧವಾ ॥[1]

ಕಿಂಕರ ಭಾವವು ಬಲಿತು, ಜಂಗಮವೇ ಲಿಂಗವೆಂದರಿತು, ಅನ್ನ, ವಸ್ತ್ರ, ಧನ, ವಾಹನ, ಅಲಂಕಾರಾದಿಗಳನ್ನು ಸಂಶಯಪಡದೆ ಅರ್ಪಿಸಿ, ವೀರಶೈವಾಗಮೋಕ್ತ ಚಿಹ್ನೆಗಳಾದ ಇಷ್ಟಲಿಂಗ, ವಿಭೂತಿ, ರುದ್ರಾಕ್ಷಿ ಮೊದಲಾದುವನ್ನು ಧರಿಸಿದವರಿಗೆ ನಮಸ್ಕರಿಸುವುದೇ ಭಕ್ತನ ಲಕ್ಷಣ.

ಪ್ರಾಣಮುಮಂ ಶರೀರಮುಮನರ್ಥಮುಮಂ ಗುರುಲಿಂಗಜಂಗಮ
ಶ್ರೇಣಿಗೆ ಕೊಟ್ಟು, ತನ್ಮುಖಸಮಾಗತಶಾಂತಿಕರಪ್ರಸಾದಕ

---

1. ಷಟ್‌ಸ್ಥಲಗಳ ವಿವರಣೆಯಲ್ಲಿ ಉದ್ಧರಿಸಲಾಗಿರುವ ವೃತ್ತಗಳನ್ನು ಮಗ್ಗೆಯ ಮಾಯಿ ದೇವರ "ಶತಕತ್ರಯ"ದಿಂದ ಆರಿಸಲಾಗಿದೆ, ವಚನಗಳನ್ನು ಸಕಲಾಗಮಶಿಖಾಮಣಿಯಿಂದ ಉದ್ಧರಿಸಲಾಗಿದೆ.

ಲ್ಯಾಣಸುಖಪ್ರಪೂರ್ಣ ಪರಿಣಾಮವನೈದಿದವರ್ಗೆ ನಿತ್ಯ ನಿ
ರ್ವಾಣಪದಂ, ಬಳಿಕ್ಕುಳಿದವರ್ಗೆ ಪರಿಭ್ರಮಣಂ ಶಿವಾಥವಾ ॥

ದೇಹಶ್ರಮದಿಂದ ಗುರುಸೇವೆ ಮಾಡಿ, ಮನಃಪೂರ್ವಕ ಲಿಂಗವನ್ನು ಪೂಜಿಸಿ, ಜಂಗಮಕ್ಕೆ ಧನವನ್ನರ್ಪಿಸಿ, ಅವರಿಂದ ಲಭ್ಯವಾದ ಶಾಂತಿಕರ ಪ್ರಸಾದವನ್ನು ಸೇವಿಸಬೇಕು, ಅದರಿಂದ ತೃಪ್ತಿಪಡಬೇಕು. ಅಂತಹ ಭಕ್ತರಿಗೆ ಶಾಶ್ವತ ಮೋಕ್ಷ ಲಭಿಸುವುದು. ಹಾಗಿಲ್ಲದವರಿಗೆ ಹುಟ್ಟು ಸಾವುಗಳ ಜನ್ಮಾಂತರಗಳಲ್ಲಿ ತಿರುಗುವುದೇ ಗತಿ.

ಸದಾಚಾರದಲ್ಲಿ ನಡೆಯುವುದು, ಶಿವನಲ್ಲಿ ಭಕ್ತಿಯಿಂದಿರುವುದು, ಲಿಂಗಜಂಗಮವು ಬಂದರೆ ಸಂತೋಷಬುದ್ಧಿಯಿಂದಿರುವುದು, ಲಾಂಛನಧಾರಿಗಳ ಕಂಡರೆ ವಂದಿಸುವುದು—ಇದು ಭಕ್ತಿಸ್ಥಲ ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೨. ಮಹೇಶ ಸ್ಥಲ.

ಆ ಭಕ್ತನೇ ಮುಂದೆ ವಿಶೇಷನಿಷ್ಠೆಯಿಂದ ಗುರುಲಿಂಗಜಂಗಮದಲ್ಲಿ ಭಕ್ತಿಯನ್ನಾಚರಿಸಬೇಕು. ಪರಧನ, ಪರಸ್ತ್ರೀ, ಪರಹಿಂಸೆ, ಪರನಿಂದೆ, ಪರಪಾಕ, ಪರದೈವಗಳಿಂದ ದೂರನಾಗಿರಬೇಕು. ಶಿವಪೂಜೆ, ಶಿವಭಜನೆ, ಶಿವಾನುಭವ ಗೋಷ್ಠಿಗಳಲ್ಲಿ ವಿಶೇಷ ಆಸಕ್ತಿವಹಿಸಬೇಕು, ಆಚಾರನಿಷ್ಠನಾಗಿರಬೇಕು.

ಪರವಧುವಂ ಪರದ್ರವಿಣಮಂ ಪರಹಿಂಸೆಯನೈದೆ ದೂರದಿಂ
ಪರಿಹರಿಸಿ, ಸ್ವದೇಶಿಕ ನಿರೂಪಿತವಪ್ಪ ಷಡರ್ಥಸಂಗ್ರಹಾ
ಚರಣೆಯೊಳೇಕಲಿಂಗ ನಿಜನಿಷ್ಠೆ ಸಮಾಹಿತಮಾದೊಡಂತದೇ
ಪರಮಂ ಮಹೇಶ್ವರಸ್ಥಲದ ಲಕ್ಷಣವೃತ್ತಿಪದಂ ಶಿವಾಥವಾ ॥

ಪರಸ್ತ್ರೀಯನ್ನೂ, ಪರರ ಹಣವನ್ನೂ, ಪರಹಿಂಸೆಯನ್ನೂ ದೂರದಲ್ಲಿಯೇ ಬಿಟ್ಟು, ತನ್ನ ಗುರು ಉಪದೇಶಿಸಿದ ಶಿವಜ್ಞಾನಸಂಪತ್ತನ್ನು ಪಡೆಯುವುದರಲ್ಲಿ ನಿರತನಾಗಿ, ಲಿಂಗನಿಷ್ಠೆಯು ಸ್ಥಿರವಾದರೆ, ಅದು ಮಹೇಶ್ವರಸ್ಥಲದ ಲಕ್ಷಣ.
ಪರಸ್ತ್ರೀ ಪರಧನದಾಸೆಯ ಬಿಟ್ಟು ಶುದ್ಧವಾಗಿ ಲಿಂಗನಿಷ್ಠೆಯುಳ್ಳಾತನು ಮಾಹೇಶ್ವರ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

೩. ಪ್ರಸಾದಿ ಸ್ಥಲ.

ಪ್ರಸಾದಿಯು ಗುರುಲಿಂಗ ಜಂಗಮಕ್ಕರ್ಪಿಸಿದ ಶೇಷ ಪ್ರಸಾದವನ್ನೇ ಸ್ವೀಕರಿಸುವನು. ಪಂಚೇಂದ್ರಿಯಮುಖವಾಗಿ ಸ್ವೀಕರಿಸುವ ಆಯಾಯ ವಿಷಯ (ಶಬ್ದ, ಸ್ಪರ್ಶ, ರೂಪ. ರಸ, ಗಂಧ)ಗಳನ್ನು ಆಯಾಯ ಲಿಂಗದ ಪ್ರಸಾದರೂಪವಾಗಿ ಭೋಗಿಸಿ ಲಿಂಗಭೋಗೋಪಭೋಗಿಯಾಗುವನು.

ಲಿಂಗಮುಖಾರ್ಪಣೀಯವಹ ಸರ್ವವಿಶುದ್ಧ ಪದಾರ್ಥಜಾತಮಂ
ಸ್ವಾಂಗವಚೋಮನಃಕರಣ ಕಾಯಕವಾಚಕಮಾನಸ ಕ್ರಿಯಾ

ಸಂಗತ ಸಾವಧಾನ ಸುವಿವೇಕದಿನರ್ಪಿಸಿ ತತ್ಪ್ರಸಾದಮಂ
ಪಿಂಗದೆ ಭೋಗಿಪಲ್ಲಿ ಬಳಿಕಾಸ್ಥಲಸಿದ್ಧಿದಿಟಂ ಶಿವಾಧವಾ ॥

ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳಿಗೆ ಅರ್ಪಿಸಲು ಎಲ್ಲ ರೀತಿಯಿಂದಲೂ ಪವಿತ್ರ ವಾದ ಪದಾರ್ಥಗಳನ್ನೂ ತ್ರಿಕರಣ (ದೇಹ, ಮಾತು, ಮನಸ್ಸು)ಗಳಿಂದ, ಎಚ್ಚರಿಕೆ ಯಿಂದ ರೂಪನ್ನು ಇಷ್ಟಲಿಂಗಕ್ಕೂ, ರುಚಿಯನ್ನು ಪ್ರಾಣಲಿಂಗಕ್ಕೂ, ತೃಪ್ತಿಯನ್ನು ಭಾವಲಿಂಗಕ್ಕೂ ಅರ್ಪಿಸಿ, ಕ್ರಮವಾಗಿ ಆ ಲಿಂಗಗಳಿಂದುಂಟಾಗುವ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳನ್ನು ಭೋಗಿಸುವುದು ಪ್ರಸಾದಿಸ್ಥಲದ ಲಕ್ಷಣ.

ಲಿಂಗಪ್ರಸಾದ ನೆನಹಿನಿಂದ ಭೋಗಿಸುವುದೇ ಅರ್ಪಿತ. ಅನರ್ಪಿತವ ಬಿಡುವು ದೀಗ ಪ್ರಸಾದಿಸ್ಥಲ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

೪. ಪ್ರಾಣಲಿಂಗಿಸ್ಥಲ

ಆ ಪ್ರಸಾದಿಯೇ ಮುಂದೆ ಪ್ರಾಣಲಿಂಗಿಯಾಗಿ ಲಿಂಗವೇ ತನ್ನ ಪ್ರಾಣವೆಂದೂ, ತನ್ನ ಪ್ರಾಣವೇ ಲಿಂಗವೆಂದೂ ಭಾವಿಸುವನು. ದೈಹಿಕಸುಖದುಃಖಾದಿಗಳೆಲ್ಲಾ ಪರ ಮಾತ್ಮನಿಂದ ಪರೀಕ್ಷಾರ್ಥವಾಗಿ ಒದಗಿಬರುವವೆಂದು ತಿಳಿದು, ಲಿಂಗನಿಷ್ಠೆಯಲ್ಲಿರುವನು. ಅವನಲ್ಲಿ ಶಾಂತಿ, ವಿವೇಕ, ಸತ್ಯ, ಅಹಿಂಸೆ, ವೈರಾಗ್ಯ, ಮನಸ್ಸಿನ ಏಕಾಗ್ರತೆ, ನಿರಹಂಕಾರ, ವಿಶ್ವಬಂಧುತ್ವ ಮೊದಲಾದ ಸದ್ಗುಣಗಳು ಸ್ಥಿರಪಡುವುವು.

ಆಣವ ಮಾಯ ಕಾರ್ಮಿಕ ಮಲತ್ರಯಸಂಗತಿ ದೂರಮಾಗಿ, ನಿ-
ರ್ವಾಣ ಪದೈಕ ಹೇತುವಹ ಸದ್ಗುರುನಾಥ ನಿಜೋಪದೇಶದಿಂ
ಪ್ರಾಣದ ಲಿಂಗದ ಸ್ಥಿತಿ ಸಮಂಜಸಮಾಗಿ ಸುಸಾಧ್ಯಮಾದೊಡಾ
ಪ್ರಾಣವೆ ಲಿಂಗಮಾದ ಪರಮಸ್ಥಳ ಸಿದ್ಧಿ ಕಣಾ ಶಿವಾಧವಾ ॥

ಮೋಕ್ಷಕ್ಕೆ ದಾರಿತೋರುವ ಒಂದೇ ಒಂದಾದ ಗುರುವಿನ ಬೋಧೆಯಿಂದ ಮಲತ್ರಯ ಗಳು ದೂರವಾಗಿ, ಪ್ರಾಣವೂ ಲಿಂಗವೂ ಅನ್ಯೋನ್ಯ ಹೊಂದಿಕೊಳ್ಳಲು ಸಾಧ್ಯವಾ ದಲ್ಲಿ, ಅಂತಹ ಪ್ರಾಣವೇ ಲಿಂಗವಾಗಿರುವ ಶ್ರೇಷ್ಠವಾದ ಸ್ಥಿತಿಯೇ ಪ್ರಾಣಲಿಂಗಿಸ್ಥಲವು, ಪ್ರಾಣವೇ ಲಿಂಗವಾಗಿ, ಲಿಂಗವೇ ಪ್ರಾಣವಾಗಿ, ಸುಖ ದುಃಖ ಉಭಯವು ತನಗಲ್ಲ ದಿಹುದೀಗ ಪ್ರಾಣಲಿಂಗಿಸ್ಥಲ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

೫. ಶರಣಸ್ಥಲ

ಆ ಪ್ರಾಣಲಿಂಗಿಯೇ ಶರಣನಾಗಿ, ಲಿಂಗವೇ ಪತಿ-ತಾನೇ ಸತಿ ಎಂಬ ಭಾವನೆ ಯಿಂದ, ಲಿಂಗಮೂರ್ತಿಯ ಪೂಜೆ ಧ್ಯಾನಗಳಿಂದ ಆನಂದಭಕ್ತಿಯಿಂದ ಲಿಂಗಾನಂದ ದಲ್ಲಿರುವನು. ಇಡೀ ವಿಶ್ವವನ್ನೇ ಶಿವಸ್ವರೂಪವೆಂದು ಭಾವಿಸುವನು, ಪರಮಾತ್ಮ ನನ್ನೇ ರಕ್ಷಕನೆಂದು ಮರೆಹೋಗುವನು.

ಪಂಚವಿಧೇಂದ್ರಿಯ ಪ್ರಕೃತಿ ಸಂಗಸುಖಂ ತನಗೆಂಬ ಬುದ್ಧಿಯಂ
ವಂಚಿಸಿ, ಲಿಂಗವೇ ಪತಿ, ತದೀಯ ಮಹಾಸತಿ ತಾನೆನಿಪ್ಪ ನಿ-
ರ್ವಂಚಕ ಭಾವಮಂ ಬಲಿದು, ಚಿತ್ಪರಿಣಾಮ ಪರಾನುಭೂತಿಯಿಂ–
ದಂ ಚರಿಸಲ್ವಿಶಿಷ್ಟ ಶರಣಸ್ಥಲಸಿದ್ಧಿ ಕಣಾ ಶಿವಾಧವಾ ॥

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಎಂಬ ಪಂಚೇಂದ್ರಿಯಗಳ ಪ್ರಕೃತಿ ಸಿದ್ಧವಾದ ಸುಖವು ತನಗೆ ಬೇಕೆಂಬ ಇಚ್ಛೆಯಿಲ್ಲದೆ, ಲಿಂಗವೇ ಪತಿಯೆಂದೂ ತಾನೇ ಸತಿಯೆಂದೂ ಭಾವಿಸಿ, ನಿರ್ವಂಚನೆಯ ಬುದ್ಧಿ ಸ್ಥಿರವಾಗಿ, ಶ್ರೇಷ್ಠವಾದ ಜ್ಞಾನದಿಂದ ಆಚರಿಸಲು ಶರಣಸ್ಥಲವಾಗುವುದು.

ಲಿಂಗವೇ ಪತಿಯಾಗಿ, ತಾನಂ ಸತಿಯೆಂಬ ಭಾವದಲ್ಲಿ ಆಚರಿಸಿ, ಪಂಚೇಂದ್ರಿಯಸುಖಗಳ ಬಯಸದಿಹುದೀಗ ಶರಣ ಸ್ಥಲ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

6 ಐಕ್ಯಸ್ಥಲದಲ್ಲಿ ಶರಣನ ಆತ್ಮವು ಸಮರಸಭಕ್ತಿಯಿಂದ ಲಿಂಗದಲ್ಲಿ ಸಮರಸವಾಗುತ್ತದೆ. ಕರ್ಪೂರ ಉರಿಯಲ್ಲಿ ಕೂಡಿ ಅಡಗಿದಂತೆ, ಆತ್ಮನು ಪರವಸ್ತುವಿನಲ್ಲಿ ಕೂಡಿ ಒಂದಾಗುವನು.

ತನಗವಸಾನ ಭೂಮಿ ಶಿವಲಿಂಗಮದಕ್ಕವಸಾನ ಭೂಮಿ ತಾ
ನೆನಿಸಿ ಬಹಿಃಪ್ರಪಂಚ ರಚನಾಕ್ರಿಯೆಯಂ ನೆರೆಬಿಟ್ಟು ಚಿತ್ಪರಾ
ಣ್ವನುಭವದಿಂದಹಂತ್ವಮಿತಿ ಶಬ್ದವಿಭೇದವಡಂಗಿ ತೋರ್ಪೊಡಾ
ತನೆ ಪರಮೈಕ್ಯ ನಿಷ್ಕಳ ಮಹಾಸ್ಥಲ ಯುಕ್ತಿಪದಂ ಶಿವಾಧವಾ ॥

ಶರಣನಿಗೆ ಶಿವಲಿಂಗವೇ ಆಶ್ರಯವಾಗಿ, ಶಿವಲಿಂಗಕ್ಕೆ ಶರಣನೇ ಆಶ್ರಯವಾಗಿ ಆತನಂ ಹೊರಪ್ರಪಂಚದ ವ್ಯವಹಾರವನ್ನೂ ವಾಸನೆಯನ್ನೂ ಬಿಟ್ಟು. ಸೂಕ್ಷ್ಮವಾದ ಜ್ಞಾನಾನುಭವದಿಂದ, ನಾನು ನೀನೆಂಬ ಭಿನ್ನತೆಯಿಲ್ಲದೆ ಕಾಣುವ ಸ್ಥಿತಿಯೇ ನಿರಾಕಾರ ಸ್ವರೂಪವಾದ ಐಕ್ಯಸ್ಥಿತಿ.

ಕ್ಷೀರದೊಳಗಣ ಘೃತದಂತೆ, ತಿಲದೊಳಗಣ ತೈಲದಂತೆ, ಪುಷ್ಪದೊಳಗಣ ಪರಿಮಳದಂತೆ, ಉಪ್ಪು ಉದಕವ ಕೂಡಿದಂತೆ, ಮನ ಲಿಂಗದಲ್ಲಿ ಲೀಯವಾಗಿಹುದೀಗ ಐಕ್ಯಸ್ಥಲ ನೋಡಾ, ಅಪ್ರಮಾಣ ಕೂಡಲ ಸಂಗಮ ದೇವಾ.

ಸಾರಾಂಶ :

ಭಕ್ತನು ದೇಹಾಭಿಮಾನವನ್ನು ಬಿಟ್ಟು, ಸರ್ವವನ್ನೂ ಪರಮಾತ್ಮಸ್ವರೂಪರಾದ ಗುರುಲಿಂಗಜಂಗಮಕ್ಕೆ ಅರ್ಪಿಸುತ್ತಾನೆ. ಮಹೇಶ್ವರಸ್ಥಲದಲ್ಲಿ ಚಿತ್ತಶುದ್ಧಿಯುಳ್ಳವನಾಗಿ ಪರದ್ರವ್ಯ, ಪರಸ್ತ್ರೀ, ಪರದೈವ ಮುಂತಾದುವುಗಳನ್ನು ದೃಢಭಾವದಿಂದ ದೂರೀಕರಿಸುತ್ತಾನೆ. ಪ್ರಸಾದಿಸ್ಥಲದಲ್ಲಿ ಸರ್ವವನ್ನೂ ಗುರುಲಿಂಗಜಂಗಮಕ್ಕರ್ಪಿಸಿ ಒಕ್ಕುಮಿಕ್ಕ ಪ್ರಸಾದ ಭೋಗಿಸುತ್ತಾನೆ. ಪ್ರಾಣಲಿಂಗಿಯು ತನ್ನ ಪ್ರಾಣ

ವನ್ನು ಲಿಂಗಕ್ಕರ್ಪಿಸಿ, ಲಿಂಗವೇ ಪ್ರಾಣವಾಗಿ ಭಾವಿಸುತ್ತಾನೆ. ಶರಣನು ಶರಣ ಸತಿ ಲಿಂಗ ಪತಿಯಾಗಿ ವರ್ತಿಸುತ್ತಾನೆ. ಐಕ್ಯಸ್ಥಿತಿಯಲ್ಲಿ ಅಂಗ–ಲಿಂಗವೆಂಬ ಭಿನ್ನತೆಯಿಲ್ಲದೆ ಪರಮಾತ್ಮನಲ್ಲಿ ಸಮರಸಸ್ಥಿತಿಯಲ್ಲಿರುವನು.

ಷಟ್‌ಸ್ಥಲಾಚರಣೆಯಲ್ಲಿ ಭಕ್ತಿಸ್ವರೂಪ ಸಾರಾಂಶ.

ಷಟ್‌ಸ್ಥಲಾಚರಣೆಯಲ್ಲಿ ಭಕ್ತನು ಅನುಭವಿಸುವ ಭಕ್ತಿಯ ಸ್ಥಿತಿ ಹೀಗಿರುವುದು. ತಾನು ಶಿವನೆಂಬ ನಂಬುಗೆಯಿಂದ ಶಿವಸ್ವರೂಪಿಗಳಾದ ಗುರುಲಿಂಗಜಂಗಮಕ್ಕೆ ಅರ್ಪಿಸುವ ಸ್ಥಿತಿ ಶ್ರದ್ಧಾಭಕ್ತಿ. ಆ ನಂಬುಗೆಯ ದೃಢಭಾವನೆ ನಿಷ್ಠಾಭಕ್ತಿ, ತಾನು ಶಿವನೆಂಬುದರ ಭಾವದೊಡನೆ ಸದಾ ಇರುವುದು ಅವಧಾನಭಕ್ತಿ. ತನ್ನ ಪ್ರಾಣವೇ ಲಿಂಗವೆಂಬ ಅನುಭವವೇ ಅನುಭಾವಭಕ್ತಿ. ಸರ್ವಸ್ವವನ್ನೂ ಅರ್ಪಿಸಿ, ಸಂತೋಷದಿಂದಿರುವುದೇ ಆನಂದಭಕ್ತಿ. ಶಿವನೊಡನೆ ಅಭಿನ್ನತೆಯಿಂದ ಶಿವನೇ ತಾನಾಗಿ ಸಮರಸದಿಂದಿರುವುದೇ ಸಮರಸಭಕ್ತಿ.

ಹೀಗೆ, ದೇಹವೂ ಪ್ರಾಣವೂ ಸರ್ವಸ್ವವೂ ಶಿವನಿಗೆ ಅರ್ಪಿತವಾಗಿ, ಶಿವನೇ ತಾನಾಗುವ ಸ್ಥಿತಿಯು ಷಟ್‌ಸ್ಥಲಾಚರಣೆಯಿಂದ ಅಳವಡುತ್ತದೆ. ಈ ಆರು ಸ್ಥಲಗಳೇ ಅಂಗಸ್ಥಲ-ಲಿಂಗಸ್ಥಲ ವಿಭೇದಗಳಿಂದ ಭಕ್ತನ ಆಚರಣೆಯ ನೂರೊಂದು ಸ್ಥಲ (ಏಕೋತ್ತರ ಶತಸ್ಥಲ) ಸಕೀಲ ಸಂಬಂಧಗಳಾಗುತ್ತವೆ.

ನಿತ್ಯಾಚರಣೆಗಳು

ವೀರಶೈವರು ತಮ್ಮ ನಿಜಜೀವನದಲ್ಲಿ ಆಚರಿಸಬೇಕಾದ ನಿತ್ಯಾಚರಣೆಗಳನ್ನು ತಿಳಿಯಬೇಕಾಗಿದೆ. ಆ ಆಚರಣೆಯ ಮೂಲ ಅರಿವನ್ನು ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಪರಿಚಯದ ಮೂಲಕ ಅರಿಯಬಹುದಾಗಿದೆ.

ಪ್ರಾರಂಭಿಕ ಆಚರಣೆಗಳು

ಲಿಂಗಧಾರಣೆ

ವೀರಶೈವ ಧಾರ್ಮಿಕ ಸಂಪ್ರದಾಯಾನುಸಾರವಾಗಿ, ತಾಯಿಯ ಗರ್ಭಧಾರಣೆಯ ಎಂಟನೆ ತಿಂಗಳಲ್ಲಿ, ಗರ್ಭದಲ್ಲಿರುವ ಶಿಶುವಿನಲ್ಲಿ ಶಿವಚೇತನವಿರುವುದರಿಂದ ಆಗಲೇ ಮಗುವಿಗೆ ಲಿಂಗಸಂಸ್ಕಾರವನ್ನು ತಾಯಿಯ ಮೂಲಕ ಸಂಕ್ಷೇಪವಾಗಿ ನಡೆಸುವ ಪದ್ಧತಿಯೂ ಇದೆ. ಮಗು ಜನನವಾದ ಕೂಡಲೇ ಗುರುವಿನಿಂದ ಸಕ್ರಮವಾಗಿ ಲಿಂಗಧಾರಣೆ–ನಾಮಕರಣ ಸಂಸ್ಕಾರಗಳು ನಡೆಸಲ್ಪಡುವುವು. ಆಗ ಅಷ್ಟಾವರಣ ಸಂಬಂಧವೂ ಆಗುವುದು. ಅಂದಿನಿಂದ ಶಿಶುವು ಪ್ರಾಪ್ತವಯಸ್ಸಿಗೆ ಬರುವವರೆವಿಗೂ ತಾಯಿ ಮಗುವಿನ ಲಿಂಗಪೂಜಾದಿ ಕ್ರಿಯೆಗಳನ್ನು ನಡೆಸುವುದರ ಮೂಲಕ ಪಾಲನೆ ಮಾಡಬೇಕು. ಮಗು ಬೆಳೆಯುತ್ತಾ ಬಂದಂತೆ, ಇಷ್ಟಲಿಂಗವನ್ನು ಮಗುವಿನ ಕೊರಳಿನಲ್ಲಿ ಧರಿಸಿಸಬೇಕು. ಧಾರ್ಮಿಕ ನಡೆ ನುಡಿಗಳ ಶಿಕ್ಷಣವಿತ್ತು, ಗುರುಲಿಂಗಜಂಗಮರ

ಸಂಬಂಧವನ್ನುಂಟುಮಾಡಬೇಕು. ವಯಸ್ಸಿಗೆ ಅನುಗುಣವಾಗಿ ವಿದ್ಯಾಭ್ಯಾಸ ಮಾಡಿಸಬೇಕು.

ಲಿಂಗಧಾರಣೆ ವೀರಶೈವಧರ್ಮದ ಪ್ರಾಥಮಿಕ ಸಂಸ್ಕಾರವಾದ ಶಿವದೀಕ್ಷೆಯ ಸೂಕ್ಷ್ಮರೂಪವೇ ಆದರೂ, ಬಾಲಕನು ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಪಡೆದಿರುವನಾದ್ದರಿಂದ, ಅವನ ೧೨ನೆಯ ವಯಸ್ಸಿನಲ್ಲಿ ಸಕ್ರಮವಾದ ಶಿವದೀಕ್ಷಾ ಸಂಸ್ಕಾರವನ್ನು ಪಡೆಯಬೇಕು.

ಶಿವದೀಕ್ಷೆ

ತಂದೆತಾಯಿಗಳು ವಿಶೇಷ ಶ್ರದ್ಧೆಯಿಂದ ಹಿರಿಯರ ಮತ್ತು ಗುರುಜಂಗಮರ ಸಮ್ಮುಖದಲ್ಲಿ ಶಿವದೀಕ್ಷೆಯನ್ನು ಯಥಾವತ್ತಾಗಿ ನೆರವೇರಿಸಬೇಕು. ಇದು ಲಿಂಗಾಂಗಿ ಜೀವನದ ಪ್ರಮುಖ ಧಾರ್ಮಿಕ ಸಂಸ್ಕಾರ.

ಹಿಂದೆ ತಿಳಿಸಿರುವಂತೆ, ಶ್ರೀಗುರುವು ಬಾಲಕನ ಅಂಗ ಮತ್ತು ಲಿಂಗಸಂಸ್ಕಾರಗಳನ್ನು ವಿಧ್ಯುಕ್ತವಾಗಿ ನೆರವೇರಿಸುವನು. ಕಾರಣ, ಸೂಕ್ಷ್ಮ, ಸ್ಥೂಲತನುವಿನ ಆಣವ ಮಾಯಾ, ಕಾರ್ಮಿಕ ಮಲಗಳನ್ನು ಕಳೆದು, ಕ್ರಮವಾಗಿ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗಗಳನ್ನು ಧಾರಣೆಮಾಡುವನು. ಈ ಮೂರು ಲಿಂಗಗಳೂ ಇಷ್ಟಲಿಂಗದಲ್ಲೇ ಸಮಾವೇಶವಾಗಿರುವುವು. ಬಾಲಕನಿಗೆ ಲಿಂಗದ ನಾಮವಾದ ಷಡಕ್ಷರ ಮಂತ್ರೋಪದೇಶ ಮಾಡುವನು. ಲಿಂಗದ ನೆಲೆಕಲೆಗಳನ್ನೂ ಲಿಂಗಪೂಜಾಕ್ರಮವನ್ನೂ ಮನದಟ್ಟು ಮಾಡುವನು. ಆಚಾರವನ್ನು ಬೋಧಿಸುವನು. ಈರೀತಿ ದೀಕ್ಷೋಪದೇಶವನ್ನು ಮಾಡುವನು.

ದೀಕ್ಷೋಪದೇಶ

೧. ವೀರಶೈವನು ಸದಾ ಲಿಂಗಧಾರಿಯಾಗಿ, ದಿನಂಪ್ರತಿಯೂ ಮೂರು ಅಥವಾ ಎರಡು ವೇಳೆಯಾದರೂ ಲಿಂಗಾರ್ಚನೆ ಮಾಡಬೇಕು. ಇದೇ ಆತನ ನಿತ್ಯಕ್ರಿಯೆ. ಲಿಂಗಪೂಜೆ ಮಾಡದೆ ಭೋಜನಾದಿಗಳನ್ನು ಮಾಡಬಾರದು. ಶಿವಪೂಜೆಯಿಂದ ಮನಶ್ಶಾಂತಿ, ಏಕಲಿಂಗನಿಷ್ಠೆಯುಂಟಾಗಿ, ಮನಸ್ಸಿನ ಚಂಚಲತೆ ಮಾಯವಾಗಿ ಮನೋನಿಗ್ರಹವುಂಟಾಗುವುದು. "ಹೃದಯಾಂತರ್ವರ್ತಿಯಾದ ಜ್ಯೋತಿರ್ಲಿಂಗದ ಸಾಕ್ಷಾತ್ಕಾರ ಪಡೆಯಲು ಗುರುದತ್ತ ಇಷ್ಟಲಿಂಗವನ್ನು ಕರದಲ್ಲಿರಿಸಿ ಏಕಭಾವದಿಂದ ಪೂಜಿಸುವುದೇ ಲಿಂಗಾಂಗಿಗಳ ಪವಿತ್ರ ಕರ್ತವ್ಯವಾಗಿದೆ."

೨. ವೀರಶೈವನಿಗೆ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಮತ್ತು ಷಟ್‌ಸ್ಥಲವೇ ಆತ್ಮವೆಂದರಿಯಬೇಕು. ಇವುಗಳ ಸಾಧನೆಯಿಂದ ಲಿಂಗಾಂಗಸಾಮರಸ್ಯ ರೂಪ ಮೋಕ್ಷವನ್ನು ಪಡೆಯಬಹುದು.

೩. ಗುರುಲಿಂಗಜಂಗಮರನ್ನೇ ಪೂಜಿಸಬೇಕು. ಸ್ಥಾವರಲಿಂಗಗಳನ್ನು ಉಪಾಸಿಸಕೂಡದು, ಶಿವಪ್ರಸಾದವಲ್ಲದೆ ಮತ್ತಾವುದನ್ನೂ ಭುಂಜಿಸಬಾರದು.

೪. ಎಂದಾದರೂ ಶಿವಧರ್ಮದ ವಿಷಯದಲ್ಲಿ ಸಂದೇಹವುಂಟಾದರೆ, ಶಿವ ಶಾಸ್ತ್ರಪಾರಂಗತರೂ ಪೂರ್ವಾಚಾರಜ್ಞರೂ ಆದ ಶಿವಶರಣರ ಸಲಹೆಗಳನ್ನು ಕೇಳಿ ನಡೆಯಬೇಕು.

೫, ಶಿವಗುಣ (ಸದ್ಗುಣ) ಸಂಪನ್ನನಾಗಿರಬೇಕು. ಸತ್ಯಶಾಂತಿದಯಾವಂತ ನಾಗಿರಬೇಕು.

೬. ಸತ್ಯಶುದ್ಧಕಾಯಕವನ್ನವಲಂಬಿಸಬೇಕು.

ಲಿಂಗಪೂಜೆ

ವೀರಶೈವರು ಆಚರಿಸುವ ಲಿಂಗಪೂಜೆಯೂ ಷಟ್‌ಸ್ಥಲಾಚರಣೆಗೆ ಅನುಗುಣ ವಾಗಿರಬೇಕು. ಎಂದರೆ, ಲಿಂಗಪೂಜೆಗೆ ಕುಳಿತು ಮುಗಿಯುವುದರಲ್ಲಿ ಆರುಸ್ಥಲಗಳ ಆಚರಣೆಗಳು ನಡೆದಿರಬೇಕು.

ಭಕ್ತಸ್ಥಲ:

ಭಕ್ತನು ಪ್ರಾತಃಕಾಲ ಬ್ರಾಹ್ಮೀಮುಹೂರ್ತದಲ್ಲೆದ್ದು ಇಷ್ಟಲಿಂಗಧ್ಯಾನದಿಂದ ಲಿಂಗವನ್ನು ನಿರೀಕ್ಷಣೆಮಾಡಿ, ಸ್ಥೂಲ ಶೌಚಾಚಮನಗಳನ್ನು ಮುಗಿಸಿ ದಂತಧಾವನ ಮಾಡಿ, ಇಂದ್ರಿಯಗಳನ್ನು ಶುದ್ಧಪಡಿಸಿಕೊಳ್ಳಬೇಕು. ಶುದ್ಧಮನಸ್ಸಿನಿಂದ ಶಿವಧ್ಯಾನ ಮಾಡುತ್ತಾ, ತಂಬಿಗೆಯ ಜಲದಲ್ಲಿ 'ಓಂ' ಪ್ರಣವವನ್ನು ಬರೆದು, ಶಿರಸ್ಸಿನಿಂದ ಸ್ನಾನ ಮಾಡಬೇಕು. ಬಳಿಕ ಸಾರಣೆಮಾಡಿದ ಪೂಜಾಗೃಹಕ್ಕೆ ಪ್ರವೇಶಿಸಿ, ಪೂಜಾಜಲದಲ್ಲಿ ಪ್ರಣವವನ್ನು ಬರೆದು, ಪೂಜಾಸನವನ್ನು ಜಲಭಸ್ಮಗಳಿಂದ ಪ್ರೋಕ್ಷಿಸಿ ವಂದಿಸಬೇಕು. ಆಸನದಲ್ಲಿ ಕುಳಿತು, ಹಣೆಗೆ ಸೂಕ್ಷ್ಮವಾಗಿ ಭಸ್ಮವನ್ನು ಧರಿಸಿ, ಅಭಿಷೇಕಜಲದಲ್ಲಿ ಪಂಚಾಕ್ಷರೀ ಮಂತ್ರವನ್ನು ಬರೆದು, ಮಂತ್ರಜಲದಿಂದ ಪೂಜಾದ್ರವ್ಯಗಳ ಮೇಲೆ ಪ್ರೋಕ್ಷಿಸಬೇಕು. ತರುವಾಯ ಲಿಂಗಕ್ಕೆ ಮಜ್ಜನಮಾಡಿಸಿ, ಕರಡಿಗೆ ಹುದುಗುಗಳನ್ನು ಶುದ್ಧಪಡಿಸಿ, ಲಿಂಗಕ್ಕೆ ಭಸ್ಮಧರಿಸಿ, ಕರ್ಪೂರಬೆಳಗಿ, ಅರ್ಘ್ಯವಿತ್ತು, ಲಿಂಗವನ್ನು ಮಡಿ ಹುದುಗದಲ್ಲಿಟ್ಟು ಕರಡಿಗೆಯಲ್ಲಿರಿಸಬೇಕು.

ಗುರುಧ್ಯಾನ

"ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ ।
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ ॥
ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ ।
ನಮಸ್ಸದ್ಗುರುನಾಥಾಯ ಷಟ್‌ಸ್ಥಲಬ್ರಹ್ಮಮೂರ್ತಯೇ ॥

ಎಂದು ಗುರುಧ್ಯಾನ ಮಾಡಬೇಕು.

ಸಂಕಲ್ಪ

"ಮಮ ಕಾಯಿಕವಾಚಿಕಮಾನಸಿಕಜ್ಞಾತಾಜ್ಞಾತಸಕಲಪಾಪವಿಮೋಚನಾರ್ಥಂ, ಶಿವಭಕ್ತಿಶಿವಜ್ಞಾನಸಂಪದಭಿವೃದ್ಧ್ಯರ್ಥಂ, ಶ್ರೀಮದ್ಗುರುಜಂಗಮ ಪ್ರಸಾದ

ಸಿದ್ಧ್ಯರ್ಥಂ ಚ, ಶ್ರೀಮತ್ಪ್ರಾಣಲಿಂಗ ಭಾವಲಿಂಗಾಧಿಷ್ಠಾನ ಶ್ರೀಮದಿಷ್ಟಲಿಂಗ ಪೂಜಾಂ ಕರಿಷ್ಯೇ''

''ನನ್ನ ಮೈ ಮಾತು ಮತ್ತು ಮನಸ್ಸುಗಳಿಂದ ತಿಳಿದೋ ತಿಳಿಯದೆಯೋ ಮಾಡಿದ ಸಕಲಪಾಪ ವಿಮೋಚನೆಗಾಗಿ, ಶಿವಭಕ್ತಿ, ಶಿವಜ್ಞಾನ ಸಂಪತ್ಸಿದ್ಧಿಗಾಗಿ ಶ್ರೀ ಗುರುಜಂಗಮ ಪ್ರಸಾದ ಸಿದ್ಧಿಗಾಗಿ, ಪ್ರಾಣಲಿಂಗ ಮತ್ತು ಭಾವಲಿಂಗಗಳು ಅಧಿಷ್ಠಾನವಾಗಿರುವ ಇಷ್ಟಲಿಂಗಪೂಜೆ ಮಾಡುವೆನು'' ಎಂದು ಸಂಕಲ್ಪಿಸಿ ಅರ್ಘ್ಯವನ್ನು ಕೊಡಬೇಕು.

ಬಳಿಕ, ಪ್ರಾಣಾಯಾಮಾನಂತರ, ಭಸ್ಮವನ್ನು ಪೂಜಿಸಿ, ಅಂಗಾಂಗಗಳಿಗೆಲ್ಲಾ ಭಸ್ಮಸ್ನಾನ, ಭಸ್ಮೋದ್ಧೂಳನಗಳಿಂದ ಭಸ್ಮಧಾರಣ ಮಾಡಿಕೊಳ್ಳಬೇಕು.[1]

ಅನಂತರ ರುದ್ರಾಕ್ಷಮಾಲಿಕೆಯನ್ನು ಪೂಜಿಸಿ, ಧರಿಸಬೇಕು.

ಮಾಹೇಶ್ವರ ಸ್ಥಲ.

ಅನಂತರ ಗುರೂಕ್ತವಾದ ಮಹಾಮಂತ್ರವನ್ನು. ಕರನ್ಯಾಸ, ದೇಹನ್ಯಾಸ, ಅಂಗನ್ಯಾಸ ಪೂರ್ವಕ ಅತ್ಯಂತನಿಷ್ಠೆಯಿಂದ ೧೦೮ ವೇಳೆ ಜಪಿಸತಕ್ಕದ್ದು.

ಪ್ರಸಾದಿ ಸ್ಥಲ.

ಅನಂತರ ವಾಮಹಸ್ತಪೀಠವನ್ನು ಪೂಜಿಸಿ, ಕರಡಿಗೆಯಲ್ಲಿರುವ ಇಷ್ಟಲಿಂಗವನ್ನು ವಾಮಗೋಮುಖವಾಗಿರಿಸಿ, ಅನಿಮಿಷದೃಷ್ಟಿಯಿಂದ ನೋಡಿ, ಲಿಂಗಧ್ಯಾನ ಮಾಡಿ, ಸಮ್ಮುಖಗೊಳಿಸಿ, ಇಷ್ಟಲಿಂಗವನ್ನು ಅರ್ಘ್ಯ ಪಾದ್ಯಾದಿಗಳಿಂದ ಅಭಿಷೇಕ ಮಾಡಿ, ಷೋಡಶೋಪಚಾರಗಳಿಂದ ಪೂಜಿಸಬೇಕು. ಪೂಜಾಂತ್ಯದಲ್ಲಿ ಸ್ತೋತ್ರ ಮಾಡಿ, ಮಂಗಳಾರತಿಯನ್ನೆತ್ತಬೇಕು,[2]

ಪ್ರಾಣಲಿಂಗಿಸ್ಥಲ.

ಆ ಇಷ್ಟಲಿಂಗವೇ ಪ್ರಾಣಸ್ವರೂಪವೆಂದು ತಿಳಿದು, ಇಷ್ಟಲಿಂಗವನ್ನು ಏಕಾಗ್ರತೆಯಿಂದ ಧ್ಯಾನಿಸಿ ಜಪಿಸುವುದು. ''ಬಲಗೈಗೆ ಭಸ್ಮಧರಿಸಿ, ಜಪವಸ್ತ್ರದಿಂದ ಮುಚ್ಚಿಕೊಂಡು ಹಸ್ತಜಪವನ್ನಾಗಲೀ, ಮಾಲಿಕಾ ಜಪವನ್ನಾಗಲೀ ಗುರುಮುಖದಿಂದ ತಿಳಿದು ಜಪಮಾಡಬೇಕು.''

ಜಪಕಾಲದಲ್ಲಿ ತುಟಿಯನ್ನು ಕದಲಿಸದೆ, ನಾಲಗೆಯ ತುದಿ ಮಾತ್ರ ಚಲಿಸುವಂತೆ ಹೃದ್ಗತವಾಗಿ ಮಾನಸಿಕಜಪ ಮಾಡಬೇಕು.

---

1. ಲಿಂಗಪೂಜೆಗೆ ಸಂಬಂಧಪಟ್ಟ ಮಂತ್ರಗಳನ್ನೂ ನ್ಯಾಸಕ್ರಮವನ್ನೂ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ 'ಷಟ್‌ಸ್ಥಲಲಿಂಗಪೂಜಾವಿಧಿ, ಅಥವಾ ಇತರ ಶಿವಪೂಜಾವಿಧಿಗಳಿಂದ ತಿಳಿಯಬಹುದು.

2. ಸ್ತೋತ್ರ ಮತ್ತು ಮಂಗಳ ಪದ್ಯಗಳನ್ನು ಶರಣರ ಮತ್ತು ಶಿವಯೋಗಿಗಳ ಕೃತಿಗಳಿಂದ ಆರಿಸಿಕೊಳ್ಳಬಹುದು.

ಭಾವಲಿಂಗೋಪಾಸನೆಯಲ್ಲಿ ಇಷ್ಟಲಿಂಗವೇ ತನ್ನ ಸ್ವರೂಪೆಂದು ಭಾವಿಸಿ ಅದರಲ್ಲಿ ಮನಸ್ಸನ್ನು ಲೀನಗೊಳಿಸಬೇಕು.

ವಿಚಾರ : [3]ಮಾಹೇಶ್ವರಸ್ಥಲದ ಜಪಕ್ಕೆ ಮೊದಲು ಮಂತ್ರಪಲ್ಲವಗಳಾದ ನಮಃ, ಸ್ವಾಹಾ, ವಷಟ್, ವೌಹಟ್, ಹುಂ, ಫಟ್–ಇವುಗಳನ್ನೂ, ಮಂತ್ರಾಂಗಗಳಾದ ಋಷಿ, ಛಂದಸ್ಸು, ಮಂತ್ರದೇವತೆ, ಮಂತ್ರಬೀಜ, ಮಂತ್ರಶಕ್ತಿ, ಮಂತ್ರಕೀಲಕಗಳನ್ನೂ ಅರಿತು ಆಚರಿಸಬೇಕು. ಮಂತ್ರನ್ಯಾಸವನ್ನರಿಯಬೇಕು.[3] ಬಳಿಕ ಅರ್ಘ್ಯವನ್ನಿತ್ತು, ಸ್ತೋತ್ರಮಾಡಬೇಕು.

ಅನಂತರ, ಗುರುಲಿಂಗಜಂಗಮದ ನೆನಹಿನಿಂದ, ಇಷ್ಟಲಿಂಗಕ್ಕೆ ಮಂತ್ರೋದಕವನ್ನೆರೆದು, ಭಕ್ತಿಯಿಂದ ಅವರ ಪಾದತೀರ್ಥವೆಂದು ಸೇವಿಸಬೇಕು. ಲಿಂಗವನ್ನು ಸೂಕ್ಷ್ಮವಾಗಿ ಪೂಜಿಸಬೇಕು.

ಶರಣ ಸ್ಥಲ.

[4] "ತದನಂತರದಲ್ಲಿ ಕ್ರಿಯಾಕಾಲದಲ್ಲಿ ಗಡಣಿಸಿ ಬಂದ ಸಕಲ ಪದಾರ್ಥಗಳನ್ನು 'ಶರಣಸತಿ–ಲಿಂಗಪತಿ' ಭಾವದಿಂದ ಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವನ್ನು ಸವಿದು ಆನಂದಿಸುವುದೇ ಆನಂದಭಕ್ತಿಯನ್ನುಳ್ಳ ಶರಣಸ್ಥಲವಾಗಿಪ್ಪುದು",

ಐಕ್ಯಸ್ಥಲ.

"ತದನಂತರದಲ್ಲಿ ಶಿಖಿ–ಕರ್ಪುರ ಸಂಯೋಗವಾದ ಹಾಗೆ ಲಿಂಗದಲ್ಲಿ ತಾ ಕೂಡಿ, ತನ್ನಲ್ಲಿ ಲಿಂಗವು ಕೂಡಿ, ತಾನು ಲಿಂಗ ಎಂಬ ಉಭಯಭಾವವಳಿದು. ತಾನೇ ತಾನಾಗಿರುವುದೇ ಸಮರಸಭಕ್ತಿಯುಳ್ಳ ಐಕ್ಯಸ್ಥಲವಾಗಿರುವುದು."

ಪೂಜಾಸಮಯದಲ್ಲಿ, ಲಿಂಗದಲ್ಲಿ ಏಕಾಗ್ರತೆಯಿಂದ ದೃಷ್ಟಿ ನಿಲ್ಲಿಸುವ ರೀತಿ.

[5] ಹೇಳುವೊಡೆ ಮನವೆಂಬ ಹಕ್ಕಿಗೆ
ಕಾಲುಗಳೆಲೈ ತೊಳಲುತಿಹ ಕ
ಣ್ಣಾಲಿಗಳು ದಿಟವದಕೆ ಪಕ್ಕೆಗಳೀಡೆ ಪಿಂಗಳದ
ಗಾಳಿಯಾಗಿಹುದಂತು ಕಾರಣ
ವಾಲಿಯೋ ಸಾಧನಕೆ ಸಾಧನ
ಮೂಲವನು ನಿಲಿಸುವನೆ ಭಕ್ತನು ಬಸವ ಕೇಳೆಂದ ॥
ಆಲಿ ನಿಂದೊಡೆ ಸುಳಿದು ಸೂಸುವ

---

3. ಅ. ಭಾ. ಶಿವಾನುಭವಸಂಸ್ಥೆಯು ಪ್ರಕಟಿಸಿರುವ "ಇಷ್ಟಲಿಂಗೋಪಾಸನೆ"ಯನ್ನು ನೋಡಿ.

4. ವಚನಶಾಸ್ತ್ರಸಾರ–ಭಾಗ 3. ಪೂರ್ವಾರ್ಧ ಪುಟ ೧೬೮.

5. "ಶಿವಯೋಗ" ಪುಟ ೩೨–೩೩

ಗಾಳಿ ನಿಲುವುದು ಗಾಳಿ ನಿಲೆ ಮನ
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು.

[1] "ಮನವೆಂಬುದು ಪಕ್ಷಿಯು ಚಲಿಸುವ ಎರಡು ದೃಷ್ಟಿಗಳೇ ಆ ಪಕ್ಷಿಯ ಕಾಲುಗಳು. ಮೂಗಿನ ಎಡಬಲಭಾಗದ ರಂಧ್ರಗಳಲ್ಲಿ ಶ್ವಾಸೋಚ್ಛ್ವಾಸರೂಪವಾಗಿ ಚಲಿಸುವ ಗಾಳಿಯೇ ಆ ಪಕ್ಷಿಯ ರೆಕ್ಕೆಗಳು. ಕಾಲುಗಳನ್ನು ಹಿಡಿದರೆ, ರಕ್ಕೆಯಾಡದೆ, ಮನವೆಂಬ ಪಕ್ಷಿಯು ವಶವಾಗುವುದು. ಆದುದರಿಂದ ಷಟ್‌ಸ್ಥಲಕ್ಕೆ ಮೂಲ ಸಾಧನವಾದ ಮನವೆಂಬ ಪಕ್ಷಿಯ ಕಾಲಿನಂತಿರುವ ದೃಷ್ಟಿಯನ್ನು ನಿಲ್ಲಿಸುವವನೇ ಭಕ್ತನು.

ದೃಷ್ಟಿಯನ್ನು ನಿಲ್ಲಿಸುವುದು ಹೇಗೆ ?

"ಇಷ್ಟಲಿಂಗದಲ್ಲಿ ರೆಪ್ಪೆ ಹಾಕದಂತೆ, ದೃಷ್ಟಿಯನ್ನು ನಿಲ್ಲಿಸಿ, ತಲ್ಲಿಂಗನಿರೀಕ್ಷಣೆಯನ್ನು ಮಾಡುತ್ತ ಧ್ಯಾನಿಸುವ ಅಭ್ಯಾಸವನ್ನು ಮಾಡಿದರೆ, ದೃಷ್ಟಿಸ್ಥಿರತೆಯು ಸಿದ್ಧಿಸುವುದು. ಹೀಗೆ ದೃಷ್ಟಿ ನಿಲ್ಲಲು, ಮೂಗಿನಲ್ಲಿ ಸುಳಿದು ಸೂಸುವ ಗಾಳಿ ನಿಲ್ಲುವುದು. ಈ ಗಾಳಿಯು ನಿಂತೊಡನೆಯೇ ಮನವು ತನ್ನಷ್ಟಕ್ಕೆ ತಾನೇ ನಿಂತುಬಿಡುವುದು. ಎಂದರೆ, ಏಕಾಗ್ರತೆಯನ್ನು ಪಡೆಯುವುದು. ಮನಸ್ಸಿನ ಏಕಾಗ್ರತೆಯಿಂದ ಬಿಂದು ನಿಗ್ರಹವಾಗುವುದು."

ಪ್ರಾಣಲಿಂಗಪೂಜೆಯ ವಿಶೇಷಾಂಶಗಳು.

ಭಕ್ತನ ಸದ್ಗುಣಗಳೇ ಪ್ರಾಣಲಿಂಗಕ್ಕೆ ಉಪಚಾರಗಳು :[2]

ಭಕ್ತಿಯೇ ಅಭಿಷೇಕ
ವಿರಕ್ತಿಯೇ ಗಂಧ
ಇಂದ್ರಿಯಾದಿ ಕರಣಗಳ-
ಪ್ರಸಾದವೇ ಅಕ್ಷತೆ.
ಶಿವಜ್ಞಾನವೇ ಪುಷ್ಪ
ಬಿಂದುದರ್ಶನವೇ ದೀಪಾರತಿ
ಪರಿಪೂರ್ಣಾನಂದವೇ ನೈವೇದ್ಯ.
ಸತ್ವರಜತಮೋಗುಣಗಳೇ ತಾಂಬೂಲ.
ಇಷ್ಟಲಿಂಗವೇ ಅಂತರಂಗದ_
ಪ್ರಾಣಲಿಂಗವಾಗಿದೆ.

ಭಾವಲಿಂಗಾರ್ಚನೆಯಲ್ಲಿ[3]

(ಮನದ ಅಂತರ್ಗತವಾದ್ದು)

ಮನವೇ ಮಂಜ್ಜನ
ಮನವೇ ಗಂಧ
ಮನವೇ ಅಕ್ಷತೆ
ಮನವೇ ಧೂಪ
ಮನವೇ ದೀಪ
ಮನವೇ ಅರ್ಪಣ

---

1. "ಶಿವಯೋಗ" ಅಖಿಲ ಭಾರತ ಶಿವಾನುಭವಸಂಸ್ಥೆ ಪ್ರಕಟನೆ। ಪುಟಗಳು ೬೨-೬೩.
2. ಸರ್ಪಭೂಷಣ ಶಿವಯೋಗಿಗಳ "ಲಿಂಗಪೂಜೆಯ ಮಾಡಿರೋ" ಪದ್ಯ.
3. ನಿರಾಳಗುರು ಸ್ತೋತ್ರ.

ಮನವೇ ತಾಂಬೂಲ
ಮನವೇ ಪುಷ್ಪ ಮನವೇ ಘನ.

ಇಷ್ಟಲಿಂಗೋಪಾಸನೆಯಲ್ಲಿ ತಿಳಿದಿರಬೇಕಾದ ವಿಷಯಗಳು

ಇಷ್ಟಲಿಂಗೋಪಾಸನೆಯಲ್ಲಿ ಅರ್ಚನ, ಅರ್ಪಣ ಮತ್ತು ಅನುಭಾವ ಎಂಬ ಮೂರು ಭಾಗಗಳಿವೆ.

ಅರ್ಚನ :

ಷೋಡಶೋಪಚಾರಗಳಿಂದ ಇಷ್ಟಲಿಂಗವನ್ನು ಪೂಜಿಸುವುದು ಇಷ್ಟಲಿಂಗಾರ್ಚನೆ.
ಭಕ್ತನು ಸದ್ಗುಣಗಳಿಂದ ಕೂಡಿ ಜಪಿಸಿ ಧ್ಯಾನಿಸುವುದು ಪ್ರಾಣಲಿಂಗಾರ್ಚನೆ.
ಮನವನ್ನು ಲಿಂಗದಲ್ಲಿ ಏಕಾಗ್ರತೆಯಿಂದಿರಿಸಿ ತನ್ಮಯವಾಗಿರುವುದೇ ಭಾವ ಲಿಂಗಾರ್ಚನೆ.

ಅರ್ಪಣ : ಕ್ರಿಯಾಮತಾರ್ಪಣ :

ಪದಾರ್ಥವನ್ನು ಪ್ರಸಾದವನ್ನಾಗಿ ಮಾಡಿ ಸ್ವೀಕರಿಸಬೇಕು.
ಪದಾರ್ಥದ ರೂಪನ್ನೂ ಇಷ್ಟಲಿಂಗಕ್ಕೂ, ರುಚಿಯನ್ನು ಪ್ರಾಣಲಿಂಗಕ್ಕೂ ಪದಾರ್ಥದಿಂದಾದ ತೃಪ್ತಿಯನ್ನು ಭಾವಲಿಂಗಕ್ಕೂ ಅರ್ಪಿಸಲು ಅವು ಕ್ರಮವಾಗಿ ರೂಪು, ರುಚಿ, ತೃಪ್ತಿ ಪ್ರಸಾದಗಳಾವುವು. ಅವುಗಳೇ ಗುರುಪ್ರಸಾದ, ಲಿಂಗಪ್ರಸಾದ ಜಂಗಮಪ್ರಸಾದಗಳೆನ್ನಿಸಿಕೊಳ್ಳುವುವು.
ಜ್ಞಾನಮತಾರ್ಪಣ :

ಇಷ್ಟ, ಪ್ರಾಣ ಮತ್ತು ಭಾವಲಿಂಗಗಳೇ ಆಚಾರಲಿಂಗ, ಗುರುಲಿಂಗ, ಶಿವಲಿಂಗ ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗಗಳೆನಿಸಿ ಜ್ಞಾನೇಂದ್ರಿಯವಿಷಯಂಗಳನ್ನು ಸ್ವೀಕರಿಸಿ, ಪ್ರಸಾದವೀಯುವುವು.

ಜ್ಞಾನೇಂದ್ರಿಯಗಳಾದ ಮೂಗು, ನಾಲಗೆ, ಕಣ್ಣು, ಚರ್ಮ, ಕಿವಿ ಮತ್ತು ಹೃದಯಗಳ ವಿಷಯಗಳಾದ ಗಂಧ, ರುಚಿ, ರೂಪ, ಸ್ಪರ್ಶ, ಶಬ್ದ ಮತ್ತು ತೃಪ್ತಿ ವಿಷಯಗಳು ಆಯಾಯ ಲಿಂಗಗಳಿಂದ ಸ್ವೀಕರಿಸಲ್ಪಟ್ಟು ಆಯಾಯ ಪ್ರಸಾದಗಳಾಗುವುವು. ಈ ಉಭಯಪ್ರಸಾದಗಳನ್ನು ಸ್ವೀಕರಿಸಿದ ಭಕ್ತನು ಲಿಂಗಭೋಗೋಪಭೋಗಿ ಯಾಗುವನು. ಅದರಿಂದ ಪ್ರಸಾದಕಾಯನೆನಿಸುವನು. ಅಷ್ಟವಿಧ, 216 ಸಕೀಲ ಸಂಬಂಧದಿಂದ ಈ ವಿಚಾರ ಇನ್ನೂ ಸೂಕ್ಷ್ಮವಾಗಿರುವುದು.

ಅನುಭವ :

ಅನುಭವವು ಭಕ್ತಿಯ ಒಂದು ಸ್ಥಿತಿ. ಸಂತತವಾದ ಲಿಂಗಪೂಜೆಯಿಂದ ಲಿಂಗಾನುಭವವುಂಟಾಗುತ್ತದೆ, ಲಿಂಗ ಸ್ವರೂಪನೆನಿಸುತ್ತಾನೆ ಲಿಂಗಪೂಜೆಯಿಂದ. ಭಸ್ಮ ಶಿವನ ಪ್ರಕಾಶವೆಂದೂ, ರುದ್ರಾಕ್ಷ ಶಿವನ ಮುಖವೆಂದೂ, ಮಂತ್ರ ಶಿವನನಾಮವೆಂದೂ, ಇಷ್ಟಲಿಂಗ ಶಿವನ ಮೂರ್ತಿಯೆಂದೂ, ತೀರ್ಥ ಶಿವಾನಂದಾಮೃತವೆಂದೂ, ಪ್ರಸಾದ ಶಿವ ಪ್ರಸಾದವೆಂದೂ ಭಕ್ತಿಭಾವವುಂಟಾದರೆ ಭಕ್ತನು ಲಿಂಗಸ್ವರೂಪನಾಗುವನು.

ಲಿಂಗಪೂಜಕನಿಗೆ ಜೀವ ಜಗತ್ತುಗಳು ಸತ್ಯ

ವೀರಶೈವಧರ್ಮಾನುಸಾರ ಜೀವ ಜಗತ್ತುಗಳು ಸತ್ಯವೇ ಹೊರತು ಮಿಥ್ಯವಲ್ಲ. ದೈಹಿಕ ವೃತ್ತಿಗಳು ತುಚ್ಛವಲ್ಲ. ಅವುಗಳ ಭೋಗಗಳು ಪ್ರಸಾದವಾಗಿ ಪರಿವರ್ತನಗೊಳ್ಳುವುವು. ಜೀವನಿಗೆ ದೇಹವು ದೇವಾಲಯ. ಜೀವನ ವೃತ್ತಿಗಳೆಲ್ಲ ದೇವರ ಪೂಜೆ. ಜೀವನ ಭೋಗವು ದೇವರ ಪ್ರಸಾದವಾಗಿ, ಪ್ರಸಾದರೂಪನಾದ ದೇವನೇ ತಾನಾಗುವನು.

ಲಿಂಗಪೂಜಕನ ಆಚರಣೆ ಜ್ಞಾನಕ್ರಿಯಾತ್ಮಕವಾದುದು

ವೀರಶೈವಧರ್ಮದಲ್ಲಿ ಜ್ಞಾನದಷ್ಟೇ ಕ್ರಿಯೆಯೂ ಮುಖ್ಯ. ತತ್ತ್ವಗಳನ್ನು ತಿಳಿಯುವುದೇ ಜ್ಞಾನ. ಅದರಂತೆ ಆಚರಿಸುವುದೇ ಕ್ರಿಯೆ. ಒಂದನ್ನು ಬಿಟ್ಟು ಒಂದನ್ನಾಚರಿಸುವಂತಿಲ್ಲ. ಅರಿವು ಆಚರಣೆಯಿಂದಲೇ ಅಂಗವು ಲಿಂಗದಲ್ಲಿ ಸಮರಸವಾಗುತ್ತದೆ.

ಲಿಂಗಾಂಗಿಗೆ ದಿನನಿತ್ಯ ಗುರು–ಲಿಂಗ–ಜಂಗಮ ಸೇವೆಅತ್ಯಗತ್ಯ

ಲಿಂಗಾಂಗಿಯು ದಿನಂಪ್ರತಿ ಮೂರು ಅಥವಾ ಎರಡು ವೇಳೆ ಲಿಂಗಪೂಜೆ ಮಾಡಬೇಕಾಗಿದೆಯಷ್ಟೆ. ಲಿಂಗದ ಮುಖ ಜಂಗಮ. ಲಿಂಗದ ಪ್ರಾಣವೇ ಜಂಗಮ ಎಂಬುದರ ಶರಣವಾಣಿ.

ಲಿಂಗ ಪೂಜಿಸುವಾತ ಜಂಗಮಕೆ ನೀಡಿದಡೆ
ಲಿಂಗದ ಕ್ಷೇಮ ಘನವಾಗಿ ಆ ಲಿಂಗ
ಹಿಂಗದಿರುತಿಹುದು ಸರ್ವಜ್ಞ.

—ಸರ್ವಜ್ಞ ವಚನಗಳು.

ಧರೆಗೆ ನೀರೆರೆಯಲ್ಕೆ ಮರವು ಫಲವಾಂತಂತೆ
ಚರಲಿಂಗ ತೃಪ್ತಿ-ಕರದಿಷ್ಟಲಿಂಗಕ್ಕೆಂ
ದೊರೆದ ಶ್ರೀಗುರುವೆ ಕೃಪೆಯಾಗು.

—ಗುರು ಕರುಣ ತ್ರಿವಿಧಿ.

ಜಂಗಮ ತೃಪ್ತಿಪಟ್ಟರೆ ಇಷ್ಟಲಿಂಗಕ್ಕೆ ತೃಪ್ತಿ.

ಜಂಗಮಂ ದೊರೆತಾಗ ಸೇವೆ ಸಲ್ಲಿಸಲು ಸಾಧ್ಯ. ಆದರೆ ದಿನವೂ ಜಂಗಮವನ್ನು ದೊರಕಿಸಿ ಕೊಳ್ಳುವುದು ಸಾಧ್ಯವಾಗದು, ಆದ್ದರಿಂದ ಲಿಂಗಪೂಜೆಯಲ್ಲೇ ಗುರಂಲಿಂಗ ಜಂಗಮ ಪೂಜೆಯನ್ನು ಸಹಜಾಚರಣೆ ಸಂಬಂಧಾಚರಣೆಗಳಿಂದ ನೆರವೇರಿಸಬಹುದು. ಈ ರೀತಿಯಲ್ಲಿ—

ಅಷ್ಟಾವರಣದ ಬಹಿರಾಚರಣೆಯಿಂದ ನಿಷ್ಠಭಕ್ತನಲ್ಲಿ ಅಂತರಂಗದ ಅಷ್ಟಾವರಣ ಗಳಂ ಮೈಗೂಡುವುವೆಂದು ಹಿಂದೆ ತಿಳಿಸಲಾಗಿದೆ. ತಾನು ಪೂಜಿಸುವ ಲಿಂಗದ ಸಹಜಾ ಚರಣೆಯಿಂದ, ಗುರು ಮತ್ತು ಜಂಗಮರ ಸಂಬಂಧಾಚರಣೆಯನ್ನು ಮಾಡಿಕೊಳ್ಳಬಹು ದಾದ್ದರಿಂದ ಗುರುಲಿಂಗಜಂಗಮ ಪೂಜೆನಡೆದಂತಾಗುತ್ತದೆ. ಗುರು ಅಥವಾ ಜಂಗ ಮರು ದೊರತಾಗ, ಅವರ ಪೂಜೆಯ ಸಹಜಾಚರಣೆಯಲ್ಲೇ ಪೂಜೆಯ ಸಂಬಂಧಾಚರಣೆ ಯಾಗುವುದೆಂಬ ಭಾವನೆ ಖಚಿತವಾಗುತ್ತದೆ. ಈ ಬಗೆಯ ಸಹಜ ಮತ್ತು ಸಂಬಂಧಾ ಚರಣೆಗಳಿಂದ ಈ ಮೂರು ಮೂರ್ತಿಗಳ ಪೂಜೆ ಪೂರ್ಣಗೊಳ್ಳುವುದು, ಆದರೆ, ಆ ಗುರು ಜಂಗಮರ ಪೂಜೆ ಆಗಾಗ್ಗೆ ನಡೆಯುತ್ತಲೇ ಇರಬೇಕು.

ಲಿಂಗಪೂಜಕನು ಸದ್ಗುಣಸಂಪನ್ನನಾಗಿರಬೇಕು

ಪಂಚಾಚಾರಗಳಲ್ಲಿ ಉಕ್ತವಾದ ಸದ್ಗುಣಗಳು ಭಕ್ತನ ಲೌಕಿಕ ಮತ್ತು ಆಧ್ಯಾತ್ಮಿಕ ಸುಖ ಶಾಂತಿಗಳನ್ನುಂಟುಮಾಡುತ್ತವೆ. ತನ್ನಿಂದ ಇತರರಿಗೂ ನೆಮ್ಮದಿಯನ್ನುಂಟು ಮಾಡತಕ್ಕವು. ಮಾಡುವ ಪೂಜೆ ಫಲಕಾರಿಯಾಗುತ್ತದೆ.

ಆ ಬಗ್ಗೆ ಶರಣರ ಪ್ರಸಾದವಾಣಿಗಳಿವು :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮ ದೇವನನೊಲಿಸುವ ಪರಿ.

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.

....

ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.

ಸದಾಚಾರ ಸದ್ಭಕ್ತಿ ಇಲ್ಲದವರ ನಾನೊಲ್ಲೆನಯ್ಯ.
ಅವರಾರಾಧನೆ ದಂಡ.......

ದಯವಿಲ್ಲದ ಧರ್ಮವದೇವುದಯ್ಯ ?
ದಯೆಯೇ ಧರ್ಮದ ಮೂಲವಯ್ಯ.

ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ,
ಪಾಪಿ ಹೂವನೇರಿಸಲು ಮಸೆದಾಯುಧದ ಗಾಯ.

....

ನೂರನೋದಿ ನೂರ ಕೇಳಿದರೇನು !
ಆಸೆ ಹರಿಯದು, ರೋಷ ಬಿಡದು
ಮಜ್ಜನಕ್ಕೆರೆದು ಫಲವೇನು ?
ಮಾತಿನಂತೆ ಮನವಿಲ್ಲದ ಜಾತಿಡೊಂಬರ
ನೋಡಿ ನಗುವ ನಮ್ಮ ಕೂಡಲಸಂಗಮದೇವ.

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ಪ ಲಿಂಗವು ಘಟಸರ್ಪ ನೋಡಯ್ಯ.

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ.
ಮಾಡಿದೆನೆನ್ನದಿರಾ ಲಿಂಗಕ್ಕೆ, ನೀಡಿದೆನೆನ್ನದಿರಾ ಜಂಗಮಕ್ಕೆ,
ಮಾಡಿದೆನೆಂಬುದು ಮನದಲ್ಲಿ ಹೊಳೆಯದಿದ್ದರೆ
ಬೇಡಿದ್ದನೀವ ನಮ್ಮ ಕೂಡಲಸಂಗಮದೇವ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ !
ತನುವಿನೊಳು ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನದೊಳಗೆ ಮನದೊಡೆಯನಿಲ್ಲ ! ಕೂಡಲಸಂಗಮದೇವಾ.

—ಬಸವಣ್ಣನವರು.

ಸಜ್ಜನೆಯಾಗಿ ಮಜ್ಜನಕ್ಕೆರೆವೆ, ಶಾಂತಳಾಗಿ ಪೂಜೆಯ ಮಾಡುವೆ.
ಸಮರತಿಯಿಂದ ನಿಮ್ಮ ಹಾಡುವೆ
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ.
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿ ಕೊಂಬಂತೆ.

—ಮಹಾದೇವಿಯಕ್ಕ.

ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೇಸರ ವೋಗದೆ,
ಹಿಡಿದ ಭಕ್ತಿಯ ಕಡೆತನಕ ಬಿಡದೆ,
ಬಡತನ ಎಡರು ಕಂಟಕಗಳು ಬಂದಲ್ಲಿ
ಚಿಂತೆಯಿಂದ ಕಾಂತಿ ಗುಂದದೆ
ಅಡಿಗಡಿಗೆ ಶಿವಶಿವಾ ಎಂಬ ನುಡಿಯ
ಮರೆಯದಿರ್ಪ ಸದ್ಭಕ್ತಂಗೆ
ಬೇಡಿದ ಪದವಿಯನೀವ ನಮ್ಮ ಅಖಂಡೇಶ್ವರಾ.

ಮೊಟ್ಟೆಮೊಟ್ಟೆ ಪುಷ್ಪವ ಪತ್ರೆಯ ತಂದು
ಒಟ್ಟಿ ಒಟ್ಟಿ ಲಿಂಗವ ಪೂಜಿಸಿದಡೇನು ?
ತನು ಮನ ಧನವಕೊಟ್ಟು ತನುವ ಹಿಂಗದನ್ನಕ್ಕರ
ಹಿಂಸಿ, ಕಳವು, ಪರದಾರ—ವ್ಯಾಪಾರದಲ್ಲಿ
ಹರಿದಾಡುವ ಮರುಳುಬುದ್ಧಿಯ
ದುರಾಚಾರಿಗಳಿಗೆ ದೂರವಾಗಿಪ್ಪನು ನೋಡಾ
ನಮ್ಮ ಅಖಂಡೇಶ್ವರನು.

—ಷಣ್ಮುಖಸ್ವಾಮಿಗಳು.

ಆಸೆಯಿಂದ ಬಿಟ್ಟು ಕಿರಿಯರಿಲ್ಲ
ನಿರಾಸೆಯಿಂದ ಬಿಟ್ಟು ಹಿರಯರಿಲ್ಲ

—ಸಕಲೇಶ ಮಾದರಸರು.

ಶಮೆ, ದಮೆ, ವಿವೇಕ, ವೈರಾಗ್ಯ, ಪರಿಪೂರ್ಣಭಾವ,
ಶಾಂತಿ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನ, ಶಿವಾನಂದ
ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ
ಆತನ ದರ್ಶನ ಸ್ಪರ್ಶನ ಸಂಭಾಷಣದಿಂದ
ಕೇವಲ ಮುಕ್ತಿಯಪ್ಪುದು ತಪ್ಪದಯ್ಯಾ
ಸ್ವತಂತ್ರ ಸಿದ್ಧಲಿಂಗೇಶ್ವರಾ.

— ಸ್ವತಂತ್ರ ಸಿದ್ಧಲಿಂಗೇಶ್ವರರು.

ವೀರಶೈವನು ಸದ್ಭಕ್ತಿಸಂಪನ್ನನಾದಾಗಲೇ ಶಿವಸ್ವರೂಪಿಯಾಗುವನು.
ಮುಗ್ಗಿಯ ಮಾಯಿದೇವರ ವಾಕ್ಯವಿದು :

> ಭಕ್ತಿ ಶಿವಪ್ರಸಾದ ಜನನೀಭವನಂ, ಶಿವಪ್ರಸಾದಮಾ
> ಭಕ್ತಿಗೆ ಜನ್ಮಭೂಮಿ-ವಿಮಲಾಂಕುರ ಬೀಜದವೋಲ್ ಪರಸ್ಪರಂ,
> ವ್ಯಕ್ತಮಿಂದಿಂತು ನೋಳ್ಪೊಡದು ತಾನೆ ನಿರಂತರಮಪ್ಪ ಮುಕ್ತಿಯಾ
> ಮುಕ್ತಿಯೆ ಶುದ್ಧ ನಿಷ್ಕಳ ನಿಜೈಕ್ಯಪದಂ ಪರಮಂ ಶಿವಾಥವಾ ॥

ಶಿವಭಕ್ತಿಯಿಂದ ಶಿವಪ್ರಸನ್ನತೆ (ಶಿವಾನುಗ್ರಹ)ಉಂಟಾಗುವುದು. ಶಿವಪ್ರಸನ್ನತೆ (ಶಿವಾನುಗ್ರಹ)ಯಿಂದ ಶಿವಭಕ್ತಿಯುಂಟಾಗುವುದು. ಆದ್ದರಿಂದ ಶಿವಭಕ್ತಿಗೂ ಶಿವಪ್ರಸನ್ನತೆಗೂ ಬೀಜಾಂಕುರದಂತೆ ಸಂಬಂಧವಿರುವುದು. ಆ ಭಕ್ತಿಯೇ ಶಾಶ್ವತ ವಾದ ಮುಕ್ತಿ. ಆ ಮುಕ್ತಿಯೇ ಶುದ್ಧಸ್ವಸ್ವರೂಪಸಾಕ್ಷಾತ್ಕಾರವು. ವೀರಶೈವನ ದೈನಂದಿನ ಕ್ರಿಯೆಗಳೆಲ್ಲವೂ ಸದ್ಭಕ್ತಿಯಿಂದ ಕೂಡಿರಬೇಕು.

ವೀರಶೈವನು ಅಂಧಶ್ರದ್ಧೆಗಳನ್ನು ದೂರೀಕರಿಸಬೇಕು.

ಕೆಲವು ವೀರಶೈವಧರ್ಮಿಯರಲ್ಲಿ ಶೈವಾಚರಣೆಗಳೂ ಅನ್ಯಧರ್ಮಿಯರ ನಡವಳಿಕೆಗಳೂ ರೂಢಿಗೆ ಬಂದಿವೆ. ಇದು ವೀರಶೈವಾಚರಣೆಗೆ ಕುಂದನ್ನುಂಟುಮಾಡು ವುದು, ಶೈವಾಚರಣೆಗೆ ಸಂಬಂಧಪಟ್ಟ ಸ್ಥಾವರಲಿಂಗಪೂಜೆ, ಹಲವು ದೇವರ ಪೂಜೆಗಳನ್ನು ವೀರಶೈವರು ಮಾಡಕೂಡದು. ಶಿವಯೋಗೀಶ್ವರರ ತಪೋಭೂಮಿ ಮುಂತಾದ ಶಿವಕ್ಷೇತ್ರಗಳಲ್ಲದ ತೀರ್ಥಕ್ಷೇತ್ರಯಾತ್ರೆ ಮಾಡಬಾರದು. ಮಾರಿ, ಮಸಣಿ ಮುಂತಾದ ಶಕ್ತಿದೇವತೆಗಳ ಪೂಜೆ, ವ್ರತಗಳನ್ನು ಆಚರಿಸಬಾರದು. ಜ್ಯೋತಿಷ ಫಲಾದಿಗಳನ್ನು ಶರಣರು ಮಾನಿಸುವುದಿಲ್ಲ.

ಜಾತಿಸೂತಕ, ಜನನಸೂತಕ, ಉಚ್ಛಿಷ್ಟಸೂತಕ, ಪ್ರೇತಸೂತಕ ಮತ್ತು ರಜ ಸ್ಸೂತಕಗಳನ್ನು ಈ ಧರ್ಮವು ಒಪ್ಪುವುದಿಲ್ಲ. ಮಾಯಾಶಕ್ತಿಸಂಬಂಧ ಯಂತ್ರ ಧಾರಣೆ, ಪೂಜೆ, ಮಂತ್ರ, ತಂತ್ರಗಳು ನಿಷಿದ್ಧವಾದವು, ಅಂಧಶ್ರದ್ಧೆಯನ್ನುಂಟು ಮಾಡುವ ಕಥನಗಳಿಗೆ ಕಿವಿಗೊಡಬಾರದು.

ಈಗಿನ ಸಮಾಜದಲ್ಲಿ ಕೆಲವರು ಇಷ್ಟಲಿಂಗವನ್ನು ಪೂಜಿಸದೆ, ತೆಗೆದಿಡುವರು. ತತ್ತ್ವ ಸಂಪ್ರದಾಯಗಳ ಮಹತ್ವವನ್ನು ಗಮನಿಸದೆ, ಅನ್ಯರ ಅನುಕರಣೆಯಿಂದ ಮಾತ್ರ ಧರ್ಮವನ್ನು ತಿರಸ್ಕರಿಸುವರು. ಇದು ಸರ್ವಥಾ ಉಚಿತವಾದುದಲ್ಲ.

ವೀರಶೈವನು ಕಾಯಕ ನಿರತನಾಗಬೇಕು.

ಮಾನವನು ತನ್ನ ಮತ್ತು ತನ್ನವರ ದೇಹ ಪೋಷಣೆ ಮತ್ತು ಜೀವನ ವ್ಯವಹಾರ ಗಳಿಗಾಗಿ ದುಡಿಯಬೇಕಾದ್ದು ಸಹಜವಷ್ಟೇ. ವೀರಶೈವಧರ್ಮದಲ್ಲಿ ದುಡಿಮೆಯೂ ಧಾರ್ಮಿಕ ಸ್ವರೂಪವನ್ನು ಪಡೆದು ಕಾಯಕವೆನಿಸಿಕೊಳ್ಳುವುದು. ಗುರುಲಿಂಗಜಂಗಮ

ಸೇವೆ ಮಾಡಲು ಸತ್ಯಶುದ್ಧಕಾಯಕ ಮಾಡಲೇಬೇಕು. "ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ, ಸಲೆ ಕೈಕೂಲಿಯ ಮಾಡಿಯಾದೊಡೆಯೂ ನಿಮ್ಮ ನಿಲುವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದೊಡೆ ತಲೆದಂಡ, ತಲೆದಂಡ" ಎಂದಿದ್ದಾರೆ—ಬಸವಣ್ಣನವರು. "ಕಾಯಕವೇ ಕೈಲಾಸವಾದ ಕಾರಣ ಅಮಳೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು"—ಎಂದು ಮೋಳಿಗೆ ಮಾರಯ್ಯ ಶರಣರು ನುಡಿದಿದ್ದಾರೆ. ಸತ್ಯಶುದ್ಧಕಾಯಕ ಮಾಡಿ ಗಳಿಸಿದ ಹಣದಿಂದ ಗುರುಲಿಂಗಜಂಗಮಕ್ಕೆ ಸೇವೆ ಮಾಡಿ, ನೀಡಿ, ತಾನು ಒಕ್ಕುಮಿಕ್ಕ ಪ್ರಸಾದವನ್ನು ಸೇವಿಸಬೇಕು ಭಕ್ತ. ಅದರಿಂದಲೇ ಲಿಂಗತೃಪ್ತಿ. ಆದಕಾರಣ ವೀರಶೈವನು ಕಾಯಕವಿಲ್ಲದೆ ಕಾಲಯಾಪನೆ ಮಾಡಲು ಅವಕಾಶವಿಲ್ಲ. ಕಾಯಕದಿಂದ ತನಗೂ ತನ್ನವರಿಗೂ ತನ್ನ ಸಮಾಜಕ್ಕೂ, ಅಷ್ಟೇಕೆ, ತನ್ನ ರಾಷ್ಟ್ರಕ್ಕೂ ಸೇವೆ ಸಲ್ಲಿಸಲು ಅವಕಾಶವುಂಟು. ಕಾಯಕವಿಲ್ಲದ ಸೋಮಾರಿ ಜೀವನವನ್ನು ವೀರಶೈವಧರ್ಮ ಒಪ್ಪುವುದಿಲ್ಲ. ಆದ್ದರಿಂದ ಕಾಯಕ ಲಿಂಗವಂತನ ನಿತ್ಯಜೀವನದ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಅದು ಹಿಂಸಾತ್ಮಕವಾಗಿರಬಾರದು.

ವೀರಶೈವನು ದಾಸೋಹಂಭಾವದಿಂದಿರಬೇಕು.

ಲಿಂಗವಂತನ ಜೀವನದ ಸಾರ್ಥಕತೆ ದಾಸೋಹದಿಂದ. ಶಿವಭಾವದಿಂದ ಗಳಿಸಿದುದನ್ನು ಶಿವನಿಗಾಗಿ ಎಂದು ವಿನಿಯೋಗಿಸಬೇಕು. ಶಿವಸ್ವರೂಪಿಗಳಾದ ಗುರುಜಂಗಮರಿಗೆ ಸದ್ಭಕ್ತರಿಗೆ ನೀಡುವುದು ದಾಸೋಹ. ದಾಸೋಹವಿಲ್ಲದ ಜೀವನ ನಿರರ್ಥಕವಾದುದು. ಆದುದರಿಂದ ವೀರಶೈವಪರಂಪರೆಯಲ್ಲಿ ಹಿಂದಿನಿಂದಲೂ ನಡೆದುಬಂದ ಆಚಾರದಲ್ಲಿ ದಾಸೋಹಂಭಾವ ಬೆಳೆದು ಬಂದಿದೆ. ಬಸವಣ್ಣನವರು ನಿತ್ಯವೂ ನಡೆಸುತ್ತಿದ್ದ ದಾಸೋಹಕಾರ್ಯ ಸರ್ವವಿದಿತವಾಗಿದೆ,

ದಾಸೋಹದ ಮಹತ್ವವನ್ನರಿತ ದೇವನೂರಿನ ಮಹಾಮಹಿಮರಾದ ಗುರುಮಲ್ಲೇಶ್ವರರು ದಕ್ಷಿಣನಾಡಿನಲ್ಲಿ ವೀರಶೈವರಿರುವ ಹಲವು ಗ್ರಾಮಗಳಲ್ಲಿ ಭಿಕ್ಷದ (ದಾಸೋಹದ) ಮಠಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಮೊದಲಿಗರಾಗಿದ್ದರು. ಅವರ ನಂತರ ಅವರ ಅನುಯಾಯಿಗಳೂ ಅನೇಕ ಭಿಕ್ಷದ ಮಠಗಳನ್ನು ಸ್ಥಾಪಿಸಿ, ದಾಸೋಹ ಪರಂಪರೆಯನ್ನು ಬೆಳೆಸುತ್ತಾ ಬಂದಿದ್ದಾರೆ. ಇಂದಿನವರೆಗೂ ಭಿಕ್ಷದ ಮಠಗಳ ದಾಸೋಹಕಾರ್ಯ ಸಮಾಜದ ಸಹಕಾರದಿಂದ ನಡೆಯುತ್ತಲೇ ಬಂದಿದೆ. ಈ ದಾಸೋಹ (ಭಿಕ್ಷದ) ಮಠಗಳ ಮೂಲಕ ಆಯಾಯ ಗ್ರಾಮಗಳ ವೀರಶೈವಕುಟುಂಬಗಳು ನಿತ್ಯವೂ ದಾಸೋಹ ಕಾರ್ಯದಲ್ಲಿ ಭಾಗಿಯಾಗಲು ಸಾಧ್ಯವಾಗಿದೆ. ಅಲ್ಲದೆ, ಕರ್ನಾಟಕದ ಮತ್ತು ಹೊರನಾಡಿನ ಹಲವು ಕಡೆ ವೀರಶೈವಮಠಗಳು ನಿತ್ಯದಾಸೋಹ ಮತ್ತು ವಿದ್ಯಾರ್ಥಿಗಳ ಪ್ರಸಾದ ನಿಲಯಗಳನ್ನು ನಡೆಸುತ್ತಲೇ ಬಂದಿವೆ. ಕೆಲವು ಕಡೆ ಸಂಘ ಸಂಸ್ಥೆಗಳೂ ಈ ಕಾರ್ಯವನ್ನು ನಡೆಸುತ್ತಿವೆ.

ಈ ದಿಶೆಯಲ್ಲಿ ಪ್ರತಿ ವೀರಶೈವನೂ ತನ್ನ ನಿತ್ಯಜೀವನದಲ್ಲಿ ದಾಸೋಹ ಕಾರ್ಯವನ್ನು ಯಥಾಶಕ್ತಿ ನಡೆಸುವುದು ಮತ್ತು ದಾಸೋಹ ನಡೆಸುತ್ತಿರುವ ಮಠ ಸಂಸ್ಥೆಗಳಿಗೆ ಸಹಾಯ ನೀಡುವುದು ಉಚಿತ ಕರ್ತವ್ಯವಾಗಿದೆ.

ವೀರಶೈವನು ತತ್ವಾಚರಣೆಯ ಸಾಂಸ್ಕೃತಿಕ ಕಾರ್ಯಗಳಲ್ಲಿ ತೊಡಗಬೇಕು.

ವೀರಶೈವನು ತನ್ನ ನಿಜಜೀವನದಲ್ಲಿ ಮತತತ್ವಾಚರಣೆಯ ಸಾಂಸ್ಕೃತಿಕ ಕಾರ್ಯಗಳಾದ ಭಜನೆ, ಪುರಾಣಶ್ರವಣ, ಉಪನ್ಯಾಸ, ಪ್ರವಚನಗಳು, ಪ್ರಾಸಂಗ ಗೋಷ್ಠಿಗಳು ಮುಂತಾದುವುಗಳಲ್ಲಿ ಆಸ್ಥೆಯಿಂದ ಭಾಗವಹಿಸಬೇಕು.

ಅನ್ನ (ಪ್ರಸಾದ) ದಾಸೋಹದಷ್ಟೇ ಜ್ಞಾನದಾಸೋಹವೂ ಪ್ರಧಾನವಾದದ್ದೇ. ಈ ಸಾಂಸ್ಕೃತಿಕ ಕಾರ್ಯಗಳು ಜ್ಞಾನದಾಸೋಹದ ಪ್ರತಿರೂಪಗಳು.

ಭಜನಾಕೂಟಗಳು :

ಲಿಂಗಾಂಗಿಧರ್ಮದ ತತ್ತ್ವ ಮತ್ತು ಆಚರಣೆಗಳನ್ನು ತಿಳಿಸುವ ಸಾಹಿತ್ಯ ನಮ್ಮಲ್ಲಿ ವಿಪುಲವಾಗಿದೆ. ನಮ್ಮ ಹಿಂದಿನ ಶರಣರೂ. ಶಿವಾನುಭಾವಿಗಳೂ, ಶಿವಯೋಗಿಗಳೂ ಇಂದಿನ ನಮಂಗಾಗಿ—ಲಿಂಗಾಂಗಿಪೀಳಿಗೆಗಾಗಿ, ಅರಿತು ಆಚರಿಸಿ, ಗಳಿಸಿಟ್ಟಿರುವ ಆಧ್ಯಾತ್ಮಿಕ ಅನುಭವದ ಆಸ್ತಿಯಕಾಗಿದೆ ಆ ಸಾಹಿತ್ಯ. ವಿವಿಧ ವೃತ್ತ ಛಂದಸ್ಸುಗಳಲ್ಲಿ ಹಾಡುಗಬ್ಬಗಳಲ್ಲಿ, ಕೈವಲ್ಯ ಪದಗಳಲ್ಲಿ, ರಾಗರಚನೆಗಳಲ್ಲಿ ನೂರಾರು—ಸಾವಿರಾರು ಕೃತಿಗಳು ರಚನೆಯಾಗಿವೆ. ಅವುಗಳಲ್ಲಿ ನೂರೊಂದರ ಹಾಡುಗಳು, ನಿಜಗುಣಶಿವಯೋಗಿಗಳ, ಸರ್ಪಭೂಷಣಶಿವಯೋಗಿಗಳ, ಮೈಲಾರದ ಬಸವಲಿಂಗಶರಣರ, ಬಾಲಲೀಲಾ ಮಹಾಂತ ಶಿವಯೋಗಿಗಳ, ತುಮಕೂರು ನಂಜುಂಡಕವಿಗಳ, ಘನಮಠದಾರ್ಯರ ಮತ್ತಿತರ ಅನುಭಾವಿಗಳ ಕೃತಿಗಳು ಸಮಾಜದಲ್ಲಿ ಹೆಚ್ಚು ಪ್ರಚಾರದಲ್ಲಿವೆ. ಭಜನ ಕೂಟಗಳಿರುವ ಕಡೆಗಳಲ್ಲಿ ಈ ಕೃತಿಗಳನ್ನು ಹಾಡುವ ಪರಿಪಾಠವಿದೆ. ಸಂಗೀತ ರಾಗ ರಚನೆಗಳ ಪಾಠ್ಯಾಸವಿರುವ ಕಡೆಗಳಲ್ಲಿ ಈ ಕೂಟಗಳನ್ನು ಸಜೀವವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ದಿನವೆಲ್ಲಾ ಜೀವನದ ವಿವಿಧ ಹಂತಗಳಲ್ಲಿ ವ್ಯವಹರಿಸಿ ಬಳಲಿರುವವರು ಮನಸ್ಸನ್ನು ಹಗುರಗೊಳಿಸಿ, ದೈವಭಕ್ತಿ, ಧಾರ್ಮಿಕ ಆಚಾರ ವಿಚಾರಗಳನ್ನು ತಿಳಿಯಲು ಭಜನಾಕೂಟಗಳು ವಿಶೇಷ ನೆರವು ನೀಡುತ್ತವೆ. ಇಂತಹ ಭಜನಾಕೂಟಗಳನ್ನು ಏರ್ಪಡಿಸಿಕೊಂಡು, ನಮ್ಮವರು ಧರ್ಮತತ್ತ್ವಗಳನ್ನು ಅರಿಯಲು ಪ್ರಯತ್ನಿಸಬೇಕು.

ಪುರಾಣಶ್ರವಣ, ಉಪನ್ಯಾಸ, ಪ್ರವಚನಗಳು.

ವರ್ಷಂಪ್ರತಿ ಶ್ರಾವಣ ಕಾರ್ತಿಕ ಮಾಸಗಳಲ್ಲಿ, ವೀರಶೈವರಿರುವ ಅನೇಕ ಗ್ರಾಮಗಳಲ್ಲಿ ಬಸವಪುರಾಣ, ಚನ್ನಬಸವಪುರಾಣ, ಶರಣಲೀಲಾಮೃತ, ಪ್ರಭುಲಿಂಗಲೀಲೆ ಶಿವಶರಣವಿಲಾಸ, ವೀರಶೈವಾಮೃತಮಹಾಪುರಾಣ, ಶಿವಯೋಗೀಶ್ವರ ಪುರಾಣ

ಮುಂತಾದ ಪುರಾಣ ಕಾವ್ಯಗಳನ್ನು ಶ್ರವಣ ಮಾಡುವುದು, ಶರಣರ ವಚನಗಳನ್ನು ಪ್ರವಚನ ಮಾಡುವುದು, ಅನೂಚಾನವಾಗಿ ನಡೆದು ಬಂದಿದೆ. ಸಂಘ ಸಂಸ್ಥೆಗಳು ಮತ್ತು ಮಠಗಳು ಈ ಕಾರ್ಯಗಳನ್ನು ಮತ್ತು ಧಾರ್ಮಿಕ ಉಪನ್ಯಾಸಗಳನ್ನು ನಡೆಸುವುದೂ ರೂಢಿಯಲ್ಲಿದೆ. ವೀರಶೈವರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ವೀರಶೈವ ಧರ್ಮಗ್ರಂಥಗಳ ಸಂಗ್ರಹ ಮತ್ತು ವ್ಯಾಸಂಗ.

ವೀರಶೈವಸಾಹಿತ್ಯ ಕನ್ನಡಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪರಂಪರೆಯನ್ನೇ ಬೆಳೆಸಿಕೊಂಡಿದೆ. ಶರಣರ ವಚನಸಾಹಿತ್ಯವಂತೂ ಜಗತ್ತಿನ ಶ್ರೇಷ್ಠ ಸಾಹಿತ್ಯದಲ್ಲಿ ಪರಿಗಣಿತವಾದದ್ದೆಂದು ಹೇಳುವರು. ವೀರಶೈವಧರ್ಮ ತತ್ತ್ವಗಳು, ಮಹಾಮಹಿಮರ ಅನುಭಾವದ ರಚನೆಗಳು, ದಿವ್ಯಜೀವನವನ್ನು ಚಿತ್ರಿಸುವ ಕೃತಿಗಳು, ಕಾವ್ಯಗಳು ಮುಂತಾದ ವಿವಿಧ ಪ್ರಕಾರದ ಕೃತಿಗಳು ಈ ಸಾಹಿತ್ಯರಾಶಿಯಲ್ಲಿವೆ. ಸಾವಿರಾರು ಕೃತಿಗಳು ಕನ್ನಡ, ಸಂಸ್ಕೃತ, ಆಂಧ್ರ, ತಮಿಳು ಮತ್ತು ಮರಾಠಿ ಭಾಷೆಗಳಲ್ಲಿ ರಚಿತವಾಗಿವೆ. ಓಲೆಕಟ್ಟುಗಳಲ್ಲಿವೆ, ಅಚ್ಚಾಗಿ ಪ್ರಕಟಗೊಂಡಿವೆ,

ನಮ್ಮ ಸಂಘ ಸಂಸ್ಥೆಗಳೂ, ಗುರು ಮಠಗಳೂ, ಅಲ್ಲದೆ ಸಾಮಾಜಿಕರೂ ಅವುಗಳನ್ನು ಸಂಗ್ರಹಿಸಬೇಕು. ದಿನನಿತ್ಯದ ಜೀವನದ ಒಂದೆರಡು ಘಂಟೆಗಳನ್ನಾದರೂ ಅವುಗಳ ವ್ಯಾಸಂಗಕ್ಕೆ ಮೀಸಲಾಗಿರಿಸಬೇಕು.

ವಿಚಾರ ಮತ್ತು ಆಚರಣೆಯ ಗೋಷ್ಠಿಗಳು

ವೀರಶೈವರಿರುವ ಗ್ರಾಮಗಳಲ್ಲಿ ವ್ಯವಸ್ಥಿತವಾದ ಗೋಷ್ಠಿಗಳನ್ನು ಏರ್ಪಡಿಸಿಕೊಂಡು, ಪ್ರತಿದಿನ, ಇಲ್ಲವೇ—ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಶಿವಾನುಭವವಿಚಾರ, ಚರ್ಚೆ, ಸಾಮಾಜಿಕ ಸಮಸ್ಯೆಗಳನ್ನು ಆಲೋಚಿಸಬೇಕು.

ಆಗಾಗ್ಗೆ, ನಿಸರ್ಗರಮಣೀಯ ಕ್ಷೇತ್ರಗಳಲ್ಲಿ, ಶಿವಕ್ಷೇತ್ರಗಳಲ್ಲಿ, ವಿಚಾರಗೋಷ್ಠಿ, ಶಿವಭಜನೆ, ಕಾವ್ಯವಾಚನ, ಉಪನ್ಯಾಸಗಳು ನಡೆಸಲ್ಪಡಬೇಕು. ಲಿಂಗಪೂಜೆ, ಶಿವದೀಕ್ಷೆ, ಪಾದಪೂಜೆ—ಇವುಗಳ ಆಚರಣೆಗಳ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಸೂಕ್ತ. ಇಂತಹ ಕಾರ್ಯಕ್ರಮಗಳಲ್ಲಿ ಮಠಾಧೀಶ್ವರರೂ ಸಮಾಜಬಾಂಧವರೂ ಸಂಯುಕ್ತ ಸಹಕಾರದಿಂದ ಭಾಗವಹಿಸಬೇಕು.

ಈ ಮೇಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ, ವೀರಶೈವನು ತನ್ನ ನಿತ್ಯಜೀವನವನ್ನು ಧಾರ್ಮಿಕ ಜೀವನವನ್ನಾಗಿ ಮಾರ್ಪಡಿಸಿ, ಆತ್ಮೋನ್ನತಿಯನ್ನಲ್ಲದೆ ಚಿರಶಾಂತಿಯನ್ನು ಪಡೆಯಬಹುದಾಗಿದೆ.

ವೀರಶೈವರು ಲೌಕಿಕಜೀವನದಲ್ಲಿ—ಇತರ ಸಮಾಜದವರಲ್ಲಿ ಸೌಹಾರ್ದ ಸಹಕಾರಗಳಿಂದ ವರ್ತಿಸಬೇಕು. ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ತಮ್ಮ

ಧರ್ಮತತ್ತ್ವಗಳಿಗೆ ವಿರೋಧವಲ್ಲದ ರೀತಿಯಲ್ಲಿ ವ್ಯವಹರಿಸಬೇಕು. ಭಾರತರಾಷ್ಟ್ರದ ಆದರ್ಶಪ್ರಜೆಗಳಾಗಿರಬೇಕು.

ಹಿತೋಕ್ತಿಗಳು

(ಧಾರ್ಮಿಕ ಮತ್ತು ನೈತಿಕ)

ಸೂರ್ಯೋದಯಕ್ಕೆ ಮೊದಲೇ ಹಾಸಿಗೆಯಿಂದೆದ್ದು, ಇಷ್ಟಲಿಂಗದರ್ಶನ ಮಾಡಿ ಧ್ಯಾನ ಮಾಡಬೇಕು. ಬಳಿಕ ಪ್ರಾತಃಕಾಲದ ಆಹ್ನಿಕಗಳಾದ ಶೌಚಾದಿಗಳನ್ನು ಮುಗಿಸಬೇಕು. ಸ್ನಾನ ಮಾಡಿ ಮಡಿಯುಟ್ಟು ಶಿವಪೂಜೆ ಮಾಡಬೇಕು. ಶುದ್ಧ ಭಕ್ತಿಯೇ ಜೀವನವನ್ನು ಸುಗಮಗೊಳಿಸುವ ಸಾಧನ. ಗುರುಬೋಧೆಯಂತೆ, ತಾತ್ವಿಕಾರ್ಥವುಳ್ಳ ಆಚರಣೆಗಳನ್ನು ನಡೆಸಬೇಕು. 'ಅರಿವಿಲ್ಲದ ಆಚರಣೆ ಘಟಿಸದು'. ಎಂದರೆ—ತಿಳಿದು ನಡೆಯಬೇಕು, ಲಿಂಗಾಂಗಿಯ ಸ್ವಸ್ವರೂಪವಾದ ನಿಷ್ಕಲ ನಿರಾಕಾರ ಪರಬ್ರಹ್ಮವೇ ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಶರೀರಗಳಲ್ಲಿ ಕ್ರಮವಾಗಿ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳಾಗಿ ಪೂಜೆಗೊಳ್ಳುವುದು. ಅದೇ ಅಖಂಡಜ್ಯೋತಿರೂಪವಾಗಿ ಗೋಚರಿಸುವುದು. ಜ್ಞಾನ-ಕ್ರಿಯೆಗಳಿಂದ, ಸಾಧನೆಯಿಂದ, ಪೂಜ್ಯಪೂಜಕಭಾವವಳಿದು. ಸ್ವಾನುಭಾವರತಿಯಿಂದ. ಲಿಂಗಾಂಗಸಾಮರಸ್ಯಯೋಗ (ಶಿವಯೋಗ)ದಿಂದ ಆಚರಿಸುವುದೇ ಸದ್ಯೋನ್ಮುಕ್ತಿಯೆನಿಸುತ್ತದೆ.

ಯಾವ ಕಾರಣದಿಂದಲೂ ಇಷ್ಟಲಿಂಗವನ್ನು ದೇಹದಿಂದ ಅಗಲಿಸಬಾರದು. ಇಷ್ಟಲಿಂಗವಲ್ಲದೆ, ಗುರುಜಂಗಮರನ್ನಲ್ಲದೆ, ಇತರ ದೈವಗಳನ್ನು ಉಪಾಸಿಸಬಾರದು.

ಸಂಜೆಯ ವೇಳೆ ದಿನಂಪ್ರತಿ ಅಥವಾ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆಯಾದರೂ ಸದ್ಗೋಷ್ಠಿಯಲ್ಲಿ ಒಂದೆರಡು ಘಂಟೆ ಕಾಲವನ್ನು ವಿನಿಯೋಗಿಸಬೇಕು. ಪುರಾಣ ಪುಣ್ಯ ಕಥೆಗಳನ್ನು ಕೇಳುವುದು, ಶಿವಾನುಭವಗ್ರಂಥಗಳನ್ನು ವ್ಯಾಸಂಗ ಮಾಡುವುದು. ಅನುಭಾವಿಗಳಿಂದ ತತ್ತ್ವಾರ್ಥಗಳನ್ನು ತಿಳಿಯಬೇಕು. ತತ್ತ್ವಾರ್ಥ ಮನನ ಮತ್ತು ಆಚರಣೆ ಶಿವಪೂಜೆಯಷ್ಟೇ ಮುಖ್ಯ. ಅದರಿಂದ ಧಾರ್ಮಿಕ ಮನೋವೃತ್ತಿ ಬೆಳೆಯುತ್ತದೆ. ವಿಚಾರಶಕ್ತಿ ಹೆಚ್ಚುವುದು. ಮನದ ಚಂಚಲ ವೃತ್ತಿ ಅಡಗುತ್ತದೆ. ಐಹಿಕ ವಿಷಯ ಸುಖಗಳಲ್ಲಿ ಪ್ರವೃತ್ತವಾದ ಮನಸ್ಸು ಪರಿವರ್ತನ ಹೊಂದಿ, ಇಂದ್ರಿಯಭೋಗವು ಲಿಂಗಭೋಗೋಪಭೋಗದಿಂದ ಪ್ರಸಾದ ಸ್ವರೂಪವಾಗುವುದು. ಆದರಿಂದ ಆತ್ಮಶಕ್ತಿ ಉದ್ದೀಪಿತವಾಗುತ್ತದೆ. ಧಾರ್ಮಿಕ ಶಿಕ್ಷಣ ವ್ಯವಸ್ಥೆಗೆ ಧಾರ್ಮಿಕ ಗ್ರಂಥಭಂಡಾರಗಳಿರಬೇಕು.

ಆಗಾಗ್ಗೆ ಧಾರ್ಮಿಕ, ಸಾಮಾಜಿಕ ವಿಚಾರಗಳ ಪ್ರವಾಸ ಗೋಷ್ಠಿಗಳನ್ನು ಏರ್ಪಡಿಸಬೇಕು. ಪ್ರಾಯೋಗಿಕ ವ್ಯವಸ್ಥಿತ ಕಾರ್ಯಕ್ರಮಗಳಿಂದ ಅಂತಹ ಗೋಷ್ಠಿಗಳ ಕಾರ್ಯ ಯಶಸ್ವಿಯಾಗಲು ಸಾಕಷ್ಟು ಪ್ರಚಾರಸಾಧನವಿರಬೇಕು. ಗುರುಜಂಗಮರೂ, ಧಾರ್ಮಿಕ ಸಂಸ್ಥೆಗಳೂ, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೂ ಆ ಬಗ್ಗೆ

ಹೆಚ್ಚು ಆಸಕ್ತಿವಹಿಸಿ ಕಾರ್ಯಪ್ರವೃತ್ತರಾಗುವುದರಿಂದ ಧರ್ಮ–ಸಂಸ್ಕೃತಿ ಉಜ್ಜ್ವಲಗೊಳ್ಳುವುದು.

ಪೂಜಾನಂತರ ಸತ್ಯಶುದ್ಧಕಾಯಕದಲ್ಲಿ ನಿರತನಾಗಬೇಕು. ಯಾಚನೆಯಿಂದ ಹೊಟ್ಟೆ ಹೊರೆಯುವುದು ಅತ್ಯಂತ ನಿಕೃಷ್ಟವಾದುದು.

ಗುರುಕರಜಾತರಾದ ಪುರುಷರೂ ಸ್ತ್ರೀಯರೂ, ವೃದ್ಧರೂ ತರುಣರೂ ಸಮಾನ ಆಚರಣೆಯುಳ್ಳವರು.

ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕೃತಿಯಿಂದಾಗಲೀ ಯಾರನ್ನೂ, ಯಾವ ಪ್ರಾಣಿಯನ್ನೂ ನೋಯಿಸಬಾರದು.

ಅಪೇಯಪಾನ, ಅಭಕ್ಷ್ಯಭಕ್ಷಣಗಳನ್ನು ಸರ್ವಥಾ ವರ್ಜಿಸಬೇಕು. ಎಳೆತನದಿಂದಲೂ ಮಕ್ಕಳಲ್ಲಿ ಧಾರ್ಮಿಕ ಮನೋಭಾವವನ್ನು ಬೆಳೆಸಬೇಕು. ಕಾಲಧರ್ಮಕ್ಕೆ ಹೊಂದಿಕೊಳ್ಳುವಂತೆ, ತನ್ನ ಧರ್ಮಕ್ಕೆ ವಿರೋಧವಲ್ಲದ ರೀತಿಯಲ್ಲಿ ನಡೆಯುವಂತೆ ಗೃಹಶಿಕ್ಷಣವಿರಬೇಕು.

ದೇಹಾರೋಗ್ಯವನ್ನೂ ಮನಸ್ಸಿನ ನೈರ್ಮಲ್ಯವನ್ನೂ ಕಳೆದುಕೊಳ್ಳಬಾರದು. ನಮ್ಮ ನಡೆನುಡಿಗಳೂ, ಕಿಂಕುರ್ವಾಣತೆಗಳೂ ಹಿರಿಯರು, ಸಾಧು ಸತ್ಪುರುಷರು ಮೆಚ್ಚುವಂತಿರಬೇಕು,

ದಯೆಗಿಂತ ಮಿಗಿಲಾದ ಧರ್ಮವಿಲ್ಲ ; ಹಿಂಸೆಗಿಂತ ಮಿಗಿಲಾದ ಪಾಪವಿಲ್ಲ.

ಅನ್ಯಮತ ತತ್ತ್ವಗಳನ್ನು ಸಹಿಷ್ಣುತೆಯಿಂದ ಗೌರವಿಸಬೇಕು. ಸಂಕುಚಿತವಾದ ಸ್ವಾರ್ಥಸಾಧನೆಗಿಂತ ಪರಹಿತಸಾಧನೆಯೇ ಶಿವಕೃಪೆ ಪಡೆಯಲು ಸಾಧನ.

ಸಮ್ಯಗ್‌ಜ್ಞಾನ, ಸತ್ಕ್ರಿಯೆ, ಕರ್ತವ್ಯನಿಷ್ಠೆ, ಶಾಂತಿ, ಕ್ಷಮೆ, ಅಹಿಂಸಾಪ್ರವೃತ್ತಿ, ಔದಾರ್ಯ, ಸತ್ಯ-ಇವುಗಳುಳ್ಳವನೇ ಐಶ್ವರ್ಯವಂತ, ಇವಿಲ್ಲದಿರುವವನು ದರಿದ್ರನು.

ಅಲ್ಪಾಲೋಚನೆಯಿಂದ, ಸ್ವಧರ್ಮದ ವಿವೇಚನೆಯಿಲ್ಲದೆ, ಪರಧರ್ಮದ ಮೋಹಕ್ಕೆ ಒಳಗಾಗುವುದು ವಿಚಾರಶೂನ್ಯತೆ.

ವ್ಯವಹಾರದಲ್ಲಿ ನಂಬಿಕೆ, ವಿಶ್ವಾಸ, ಸೌಹಾರ್ದಗಳಿಂದ ನಡೆಯುವುದರಿಂದ ವ್ಯಕ್ತಿಗೌರವವು ಹೆಚ್ಚುತ್ತದೆ.

ಆತ್ಮಸ್ತುತಿ, ಪರನಿಂದೆಗಳಿಂದ ವ್ಯಕ್ತಿತ್ವವು ಹಾಳಾಗುತ್ತದೆ.

ಅರ್ಥವಿಲ್ಲದ, ವಿಚಾರಶೂನ್ಯವಾದ ಮೂಢನಂಬಿಕೆಗಳಿಂದ ಮಾನವನು ಅಧೋಗತಿಗಿಳಿಯುತ್ತಾನೆ.

ಸ್ತ್ರೀಯರೂ ಪುರುಷರಂತೆಯೇ ಗೌರವಾರ್ಹರು. ಸಂಸ್ಕಾರ ಉಭಯರಿಗೂ ಬೇಕು. ಮನೆಗೆ ಬಂದ ಅತಿಥಿಗಳನ್ನು ಗೌರವಿಸಬೇಕು.

ಶತ್ರುಗಳನ್ನು, ಆಗದವರನ್ನು ಗೆಲ್ಲಲು ಅತಿಸುಲಭೋಪಾಯ ಸ್ನೇಹ ಸೌಹಾರ್ದಗಳೇ. ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ, ಸಮಾಧಾನದಿಂದಿರಬೇಕು.

ಸಾಲದ ಗೊಡವೆಗೆ ಹೋಗಬಾರದು. ಹಾಸಿಗೆಯಿದ್ದಷ್ಟು ಕಾಲು ಚಾಚಬೇಕು. ಜೂಜು, ವ್ಯಭಿಚಾರ, ಮಾದಕ ವಸ್ತುಗಳ ಸೇವನೆಗಳಿಂದ ಮನುಷ್ಯನು ಹಾಳಾಗುವನು. ಅಸಾಧ್ಯವಾದುದನ್ನು ಬಯಸಿ ಬಳಲಬಾರದು, ಬಂದುದರಲ್ಲಿ ತೃಪ್ತಿಪಡಬೇಕು. ಡಾಂಭಿಕಜೀವನ ನಗೆಗೀಡಾಗುತ್ತದೆ.

ಬುದ್ಧಿವಂತರೂ ವಿದ್ವಾಂಸರೂ ವಿದ್ಯಾವ್ಯಾಸಂಗಕ್ಕೆ ಅವಕಾಶ ದೊರಕದೇ ಹೋದವರಿಗೆ ತಿಳಿವಳಿಕೆಯನ್ನುಂಟುಮಾಡಲು ಸಹಕರಿಸಬೇಕು.

ಸದ್ಗ್ರಂಥಾವಲೋಕನವೂ ಸತ್ಸಂಗವೂ ಜೀವನವನ್ನು ಉದ್ದೀಪಿತಗೊಳಿಸಬಲ್ಲವು. ಲೋಭಿಯಿಂದ ಜಗತ್ತಿಗೆ ಏನೂ ಪ್ರಯೋಜನವಾಗದು, ದುಂದುಗಾರನು ಬಹುಬೇಗ ಕಷ್ಟಕ್ಕೀಡಾಗುವನು.

ತಂದೆ ತಾಯಿಗಳನ್ನೂ, ಅನ್ನವಿಟ್ಟು ಕಾಪಾಡಿದವರನ್ನೂ, ಬುದ್ಧಿ ಕಲಿಸಿದ ಗುರು ಹಿರಿಯರನ್ನೂ ಜೀವನಪರ್ಯಂತ ಕೃತಜ್ಞತೆಯಿಂದ ನೆನೆಯಬೇಕು.

ವಿತಂಡವಾದ ಮಾಡಬಾರದು. ಶುಷ್ಕವಾದದಿಂದ ಕಾಲವ್ಯಯವಾಗುವುದು. ಕೋಪ, ಹಠ, ಸೇಡುತೀರಿಸಿಕೊಳ್ಳುವ ಮನೋಭಾವದಿಂದ ಯಾವುದನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ.

ಸಂಸಾರದಲ್ಲಿ ಕಂಡುಬರುವ ಕಷ್ಟಗಳನ್ನು ದೈವಚಿಂತನೆಯಿಂದ ಕಳೆದುಕೊಳ್ಳಬಹುದು.

ಕಾಲವು ಅಮೌಲ್ಯವಾದುದು. ಕಳೆದು ಹೋದ ಕಾಲ ಮತ್ತೆ ಬರಲಾರದು. "ಕ್ರಮಂತಪ್ಪಿ ನಡೆವುದರಿಂ ಕಷ್ಟಮಿನ್ನುಂಟೆ ?"

ಸಿಟ್ಟಿನಲ್ಲಿರುವವನನ್ನು ಉದ್ರೇಕಿಸುವುದು ಮೂರ್ಖತನ. ಸಿಟ್ಟು ಬೇರೆಯವನಿಗೆ ಕೆಡುಕನ್ನುಂಟುಮಾಡುವುದಕ್ಕಿಂತಲೂ ತನ್ನನ್ನು ಮೊದಲು ಕೆಡಿಸುವುದು.

ಮೃದುನುಡಿಗಳನ್ನಾಡುವುದಕ್ಕೆ ಹಣ ಖರ್ಚಾಗುವುದಿಲ್ಲ. ಆದರೂ ಅವುಗಳ ಪ್ರತಿಫಲ ಹೆಚ್ಚು ಬೆಲೆಯುಳ್ಳದ್ದು.

o—o

ವೀರಶೈವದಲ್ಲಿ ಷಟ್‌ಸ್ಥಲ ಸೋಪಾನ

ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯ

ಎಲ್ಲರೂ ಬಯಸುವುದು ಸುಖವನ್ನು, ಆ ಸುಖವು ದುಃಖಮಿಶ್ರವಾಗಿರ ಬಾರದು. ನಮ್ಮ ಜೀವನದಲ್ಲಿ ಅನುಭವಿಸುತ್ತಿರುವ ಸುಖವು ಅಂತಹುದಲ್ಲ. ಸುಖ-ದುಃಖಗಳು ಬೆಳಕು–ಕತ್ತಲುಗಳಂತೆ ಒಂದಾದ ಮೇಲೆ ಒಂದು ಬರುತ್ತಲೇ ಇರುತ್ತವೆ.

ದುಃಖಮಿಶ್ರಣವಲ್ಲದ ಸುಖವೊಂದು ಇದೆಯೆ ? ಎಂದು ಕೇಳಬಹುದು, ಇದೆ ಎನ್ನುತ್ತದೆ ನಮ್ಮ ಆಧ್ಯಾತ್ಮಶಾಸ್ತ್ರ. ಉಪನಿಷತ್ತುಗಳಲ್ಲಿ ಈ ಬಗ್ಗೆ ವಿಪುಲವಾದ ಚರ್ಚೆ ಸಂಶೋಧನೆಗಳು ನಡೆದಿವೆ. ಕಡೆಗೆ ಉಪನಿಷತ್ತು ಅಂಥದೊಂದು ಸುಖ ವುಂಟು ಎಂದು ನಿರ್ಧರಿಸಿದೆಯಲ್ಲದೆ ಅವನ್ನು "ಭೂಮಾ" ಎಂದು ಕರೆದಿದೆ.

ಹಾಗಾದರೆ "ಭೂಮಾ" ಎಂದರೇನು ? ಎಂದು ಪ್ರಶ್ನಿಸಿಕೊಂಡ ಉಪನಿಷತ್ತು "ಅಂತರಾತ್ಮ" ಎಂದು ಉತ್ತರಿಸಿದೆ. ದುಃಖಮಿಶ್ರವಲ್ಲದ ಸುಖವು ಯಾವುದೇ ಬಾಹ್ಯವಸ್ತುವನ್ನು ಅವಲಂಬಿಸಿಲ್ಲ. ಸಂತುಷ್ಟನಾದ ಅಂತರಾತ್ಮನೇ "ಭೂಮಾ" ಎಂಬುದರ ಆಶ್ರಯ ಎನ್ನಲಾಗಿದೆ.

ಅಲೌಕಿಕವೂ ಕೇವಲ ಆನಂದರೂಪವೂ ಆದ ಆ ಸುಖವನ್ನು ಪಡೆಯುವು ದಕ್ಕಾಗಿಯೇ ಎಲ್ಲ ದರ್ಶನಗಳೂ ಹೊರಟಿವೆ. "ದರ್ಶನ ಎಂದರೆ ತನ್ನನ್ನು ತಾನು ಅರಿಯುವುದು, ಸ್ವಾತ್ಮಪ್ರತ್ಯಕ್ಷ" ಎಂದು ಅದನ್ನು ಕರೆಯಲಾಗಿದೆ. ಇಂದ್ರಿಯಗಳಿಗೆ ನಿಲುಕದುದೂ ತನ್ನನ್ನು ತಾನು ಅರಿಯಲು ಸಾಧನವೂ ಆದ ಶಾಸ್ತ್ರಕ್ಕೆ "ದರ್ಶನ"* ಎಂದು ಹೆಸರು.

'ಅಪರೋಕ್ಷಾನುಭೂತಿ' 'ಪ್ರತಿಬೋಧ' ಮುಂತಾದುವು ಸ್ವಾತ್ಮಪ್ರತ್ಯಕ್ಷದ ಪರ್ಯಾಯ ನಾಮಗಳು.

ಜಗತ್ತಿಗೆ ಮೂಲವಾದ ವಸ್ತು ಒಂದು. ಅದನ್ನು ಕಾಣುವ ದಾರಿಗಳು ಬೇರೆ ಬೇರೆ. ಆ ವಸ್ತುವನ್ನು ಕಾಣಲೆಳಸಿದ ಸಾಧಕರ ಅನುಭವವನ್ನು ಅವು ಅವಲಂಬಿ ಸಿವೆ. ದಾರಿಗಳು ಬೇರೆಯಾದರೂ ಅವೆಲ್ಲವುಗಳ ಗುರಿ ಒಂದು.

---

* 'ದೃಶಿರ್ ಪ್ರೇಕ್ಷಣೇ' ಎಂಬ ಧಾತುವಿಗೆ 'ಲ್ಯುಟ್' ಪ್ರತ್ಯಯವು ಬಂದು. 'ಅನ' ಆದೇಶವಾಗಿ 'ದರ್ಶನ' ಎಂಬ ಶಬ್ದವು ಸಿದ್ಧವಾಗಿದೆ.

ಅಂತರಾತ್ಮನನ್ನು ಅನುಭವಕ್ಕೆ ತಂದುಕೊಳ್ಳಲು ಹೊರಟ ಸಾಧಕರ ದಾರಿ ಮೂರು ಬಗೆಯಿದೆ. ಭೇದಾಭೇದ, ಅಭೇದ ಮತ್ತು ಭೇದ ಎಂದು ಸೂತಸಂಹಿತೆ ಅವನ್ನು ಗುರ್ತಿಸಿದೆ.

"ಭೇದಾಭೇದಃ ತಥಾ ಭೇದೋ ಭೇದ ಏತೇ ಮತಾಸ್ತ್ರಯಃ"

ಇವುಗಳಲ್ಲಿ 'ಭೇದಾಭೇದ'ಕ್ಕೆ ಅಗ್ರತೆ ನೀಡಲಾಗಿದೆ ಏಕೆಂದರೆ 'ಭೇದ' ಎಂದರೆ ಎರಡು. 'ಅಭೇದ' ಎಂದರೆ ಒಂದು. ಎಂದರೆ ಈ ಪದಗಳು ಜೀವ ಮತ್ತು ಬ್ರಹ್ಮರಿಗೆ ಇರುವ ಸಂಬಂಧವನ್ನು ಸೂಚಿಸುವ ಪದಗಳು. ಇಲ್ಲಿ ಜೀವನೇ ಬೇರೆ, ಬ್ರಹ್ಮವೇ ಬೇರೆ ಎಂದು ಹೇಳುವುದು ಭೇದ; ಜೀವನೂ ಬ್ರಹ್ಮನೂ ಒಂದೇ ಎಂಬುದು ಅಭೇದ. 'ಭೇದಾಭೇದ' ಎಂಬುದು ಇವೆರಡಕ್ಕೂ ಇರುವ "ಸಮನ್ವಯ"ವನ್ನು ಸೂಚಿಸುತ್ತದೆ.

ಭಾರತದ ವೇದಾಂತ ದರ್ಶನಗಳಲ್ಲಿ "ಸಮನ್ವಯ ಸಿದ್ಧಾಂತ" ಎಂಬ ಹೆಸರು ಸಂದಿರುವುದು ಶಕ್ತಿವಿಶಿಷ್ಟಾದ್ವೈತ ಎಂಬ ವೀರಶೈವದರ್ಶನಕ್ಕೆ ಮಾತ್ರ ; ಏಕೆಂದರೆ ಇಲ್ಲಿ ಮೇಲೆ ಹೇಳಿದ ಅದ್ವೈತ ಮತ್ತು ದ್ವೈತಗಳ ಸುಮಧುರ ಸಮನ್ವಯವಿದೆ. ಆದ್ದರಿಂದಲೇ ಈ ಸಿದ್ಧಾಂತವನ್ನು ಭೇದಾಭೇದ ಅಥವಾ ದ್ವೈತಾದ್ವೈತ ಎಂದೂ ಕರೆಯಲಾಗಿದೆ. ವೀರಶೈವ ಆಚಾರ್ಯರಲ್ಲಿ ಒಬ್ಬರಾದ ಶ್ರೀಪತಿಪಂಡಿತಾರಾಧ್ಯರು (ಕ್ರಿ. ಶ. ಸು. ೧೦೬೦) ತಮ್ಮ ಶ್ರೀಕರಭಾಷ್ಯದ ಪ್ರಾರಂಭದಲ್ಲಿ ದ್ವೈತಾದ್ವೈತಾತ್ಮಕವಾದ ಈ ಸಿದ್ಧಾಂತವನ್ನು 'ವಿಶಿಷ್ಟಾದ್ವೈತ' ಎಂದು ಕರೆದಿದ್ದಾರೆ.

ವೇದಾಂತಿಗಳಲ್ಲಿ ಅದ್ವೈತಿಗಳು ಬ್ರಹ್ಮವೊಂದೇ ನಿಜ (ಸತ್ಯ), ಉಳಿದ ಜೀವ ಮತ್ತು ಜಗತ್ತುಗಳು ಸುಳ್ಳು ಎಂದರೆ ಮಿಥ್ಯೆ ಎನ್ನುತ್ತಾರೆ. ನಮ್ಮ ಎದುರಿಗೆ ಕಾಣುವ ಈ ಜೀವ ಮತ್ತು ಜಗತ್ತುಗಳು ನಿಜವಲ್ಲ ; ಹಗ್ಗವನ್ನು ಹಾವೆಂದೂ, ಕಪ್ಪೆಚಿಪ್ಪನ್ನು ಬೆಳ್ಳಿ ಎಂದೂ ತಪ್ಪಾಗಿ ತಿಳಿಯುವಂತೆ ಏಕಮೇವಾದ್ವಿತೀಯನಾದ ಬ್ರಹ್ಮವನ್ನು "ಜಗತ್ತು" ಎಂದು ತಿಳಿದಿದ್ದೇವೆ. ಈ ಬಗೆಯ ತಿಳಿವನ್ನು "ಭ್ರಾಂತಿ" ಅವಿದ್ಯೆ ಅಥವಾ 'ವಿವರ್ತ' ಎಂದು ಅವರು ಹೇಳುತ್ತಾರೆ.

ಅಜ್ಞಾನವು (ಅವಿದ್ಯೆ)ಅಳಿದು ಸುಜ್ಞಾನವು ಉದಿಸಿದಾಗ, ಇದು ಹಾವು ಅಲ್ಲ ಹಗ್ಗ ಎಂದೂ, ಇದು ಬೆಳ್ಳಿಯಲ್ಲ ಕಪ್ಪೆಚಿಪ್ಪುಎಂದೂ ಪರಿಶೀಲಿಸಿದ ಮೇಲೆ ತಿಳಿಯುವಂತೆ; ಇದು ವಾಸ್ತವವಾಗಿ ಬ್ರಹ್ಮವೇ ಹೊರತು ಜಗತ್ತಲ್ಲ. ಮಣ್ಣಿನಿಂದ ಮಾಡಿದ ಮಡಕೆ ಕುಡಿಕೆಗಳು ಒಡೆದು ಕಡೆಗೆ ಮಣ್ಣೇ ಆಗುವಂತೆ, ಬ್ರಹ್ಮಮಯವಾದ ಈ

---

* ಶ್ರುತ್ಯೇಕದೇಶಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು ।
ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿಕೇ ।
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ।

—ಶ್ರೀಕರಭಾಷ್ಯ

ಜಗತ್ತು ಕಡೆಗೆ ಬ್ರಹ್ಮವೇ ಆಗಿರುತ್ತದೆ. ಈ ಆಕಾರ, ರೂಪು, ಹೆಸರುಂಗಳೆಲ್ಲ ಮಿಥ್ಯೆ ಎಂದು ತಿಳಿಯಲಾಗುತ್ತದೆ.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ।"

ಎಂಬ ಉಕ್ತಿಯು ಅದ್ವೈತವಾದದ ಅಡಿಗಲ್ಲು. ಎಂದರೆ ಇರುವುದು ಬ್ರಹ್ಮವು ಒಂದೇ., ಜೀವ-ಜಗತ್ತುಗಳೆಂಬುವು ಬೇರೆ ಇಲ್ಲ; 'ನಾನು' ಎಂಬ ಜೀವಭಾವವು ಅಳಿದು 'ನಾನೇ ಬ್ರಹ್ಮ' (ಅಹಂ ಬ್ರಹ್ಮಾಸ್ಮಿ) ಎಂಬ ತಿಳಿವು ಉದಿಸಿದಾಗ ಜೀವನು ನಿತ್ಯವಾದ ಆನಂದಸ್ವರೂಪವೇ ಆಗುತ್ತಾನೆ. ಇದೇ ಅದ್ವೈತ ಅಥವಾ 'ಮೋಕ್ಷ'. ಇದರ ಪ್ರತಿಪಾದಕರು ಶ್ರೀ ಶಂಕರಾಚಾರ್ಯರು. (ಕ್ರಿ. ಶ. ಸು. ೮೦೦)

'ದ್ವೈತ' ಎಂಬುದು ಎರಡು ಎಂಬುದರ ಭಾವ. ಜೀವ ಮತ್ತು ಬ್ರಹ್ಮರು ಒಂದಲ್ಲ; ವಸ್ತುತಃ ಅವರು ಬೇರೆ ಬೇರೆ, ಜೀವನು ಕಿಂಚಿದ್‌ಜ್ಞ: ಎಂದರೆ ಸ್ವಲ್ಪ ತಿಳಿದವನು, ಬ್ರಹ್ಮವು ಸರ್ವಜ್ಞ (ಎಲ್ಲವನ್ನು ತಿಳಿದಿರುವುದು) ಇವೇ ಮುಂತಾದ ಗುಣಗಳಲ್ಲಿ ಇವರಿಬ್ಬರಲ್ಲಿಯೂ ಅಜಗಜಗಳಿಗೆ ಇರುವಷ್ಟು ವ್ಯತ್ಯಾಸ, ಆಂದ ಮೇಲೆ ಇವರಿಬ್ಬರೂ ಒಂದೇ ಎಂಬ ಮಾತು ಅನುಭವಕ್ಕೆ ವಿರುದ್ಧ. ದ್ವೈತಿಗಳು ಈ ಬಗೆಯ ಭೇದವು ಕೇವಲ ಜೀವ-ಬ್ರಹ್ಮರಲ್ಲಿ ಮಾತ್ರವೇ ಅಲ್ಲ; ಅದು ಜೀವ ಮತ್ತು ಜಗತ್ತುಗಳಿಗಿರುವ ಭೇದ, ಜೀವ-ಜೀವಭೇದ; ಜೀವ-ಜಗತ್ತುಗಳ ಭೇದ, ಜಗತ್-ಜಗತ್ ಭೇದ ಎಂದು ಐದು ಬಗೆ ಎನ್ನುತ್ತಾರೆ.

"ಸುಂದರವಾದ ರೆಕ್ಕೆಗಳಿರುವ, ಯಾವಾಗಲೂ ಅಗಲದೆ ನಿತ್ಯಸಖರು ಎನಿಸಿರುವ, ಎರಡು ಹಕ್ಕಿಗಳು ಒಂದೇ ಅಶ್ವತ್ಥವೃಕ್ಷವನ್ನು ಆಶ್ರಯಿಸಿವೆ. ಇವುಗಳಲ್ಲಿ ಒಂದು ಆ ಮರದ ಹಣ್ಣನ್ನು ಚಪ್ಪರಿಸಿ ತಿನ್ನುತ್ತದೆ. ಮತ್ತೊಂದು ಅದಕ್ಕೆ ಸಾಕ್ಷಿಯಾಗಿ ಸುಮ್ಮನೆ ತನ್ನ ಸಖನನ್ನು ನೋಡುತ್ತಾ ಇರುತ್ತದೆ" ಎಂಬ ಅರ್ಥದ ಶ್ರುತಿಯನ್ನು •ದ್ವೈತಿಗಳು ಉದಾಹರಿಸುತ್ತಾರೆ.

ಈ ಶ್ರುತಿಯಲ್ಲಿ ರೂಪಕಮರ್ಯಾದೆಯಲ್ಲಿ ವರ್ಣಿತವಾಗಿರುವ ಹಕ್ಕಿಗಳು ಜೀವಾತ್ಮ ಮತ್ತು ಪರಮಾತ್ಮರು. ಅವರು ಶರೀರವೆಂಬ ವೃಕ್ಷವನ್ನು ಆಶ್ರಯಿಸಿದ್ದಾರೆ. ಅವರಲ್ಲಿ ಜೀವಾತ್ಮನು ತನ್ನ ಕರ್ಮದ ಫಲವನ್ನು ಉಣ್ಣುತ್ತಾನೆ. ಪರಮಾತ್ಮನು ಅದಕ್ಕೆ ಸಾಕ್ಷಿಯಾಗಿದ್ದಾನೆ.

"ಜ್ಞಾಜ್ಞೌ ದ್ವಾವಜಾವೀಶಾನೀಶೌ" (ಶ್ವೇ. ೧. ೯) 'ಋತಂ ಪಿಬಂತೌ ಸಂಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ಛಾಯಾತಪೌ ಬ್ರಹ್ಮ

• ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ॥

(—ಮುಂ. ೩. ೧. ೧)

ವಿದೋ ವದಂತಿ (ಕಠ. ೧. ೩. ೧೦) ಮುಂತಾದ ದ್ವಿವಚನಾಂತವಾದ ಶ್ರುತಿಗಳು ದ್ವೈತವನ್ನು ಸಮರ್ಥಿಸುತ್ತವೆ. ಈ ಮತದ ಪ್ರತಿಪಾದಕರು ಶ್ರೀ ಮಧ್ವಾಚಾರ್ಯರು (ಕ್ರಿ. ಶ. ೧೪೦೦)

ಶ್ರುತಿಗಳಲ್ಲಿ ಮತಭೇದ

ಇಲ್ಲಿಯೇ ದಾರ್ಶನಿಕರಲ್ಲಿ ಮತಭೇದವುಂಟಾಗಿರುವುದು. ಶ್ರುತಿಗಳಲ್ಲಿ ಕೆಲವು ಅದ್ವೈತವನ್ನು ಪ್ರತಿಪಾದಿಸಿದರೆ ಮತ್ತೆ ಕೆಲವು ದ್ವೈತವನ್ನು ಸಮರ್ಥಿಸುತ್ತವೆ. ಆದ್ದರಿಂದ ಅದ್ವೈತವನ್ನು ಸಾಧಿಸುವವರು ದ್ವೈತಪ್ರತಿಪಾದಕವಾದ ಶ್ರುತಿಗಳನ್ನು ಪೂರ್ವಪಕ್ಷ ಎಂದು ಭಾವಿಸಿ, ಜೀವ–ಬ್ರಹ್ಮರಿಗೆ ಅಭೇದವನ್ನು ಸಿದ್ಧಾಂತ ಮಾಡಿದ್ದಾರೆ.

ಇನ್ನು ದ್ವೈತಿಗಳು ಜೀವರು ಅನೇಕ, ತಮ್ಮ ಗುಣ-ಶೀಲಾದಿಗಳಿಂದ ಅವರು ಬೇರೆ ಬೇರೆ ಎಂದು ಎಲ್ಲರೂ ಬಲ್ಲರು. ಮೇಲಾಗಿ ಈ ಜೀವರು ಬ್ರಹ್ಮವಂತೂ ಅಲ್ಲ. ಹಾಗಿದ್ದರೆ ಬ್ರಹ್ಮಕ್ಕೆ ಅಜ್ಞಾನವು ಕವಿಯುವುದಂಟೆ ? ಪ್ರತಿಯೊಬ್ಬ ಜೀವಿಯೂ ಬ್ರಹ್ಮವೇ ಆದರೆ ಅದೆಷ್ಟು ಜನ ಬ್ರಹ್ಮರು ? ಮುಂತಾದ ಸಂದೇಹಗಳು ಬರುವುದರಿಂದ ಅದ್ವೈತವು ನಮ್ಮ ಅನುಭವಕ್ಕೆ ವಿರುದ್ಧ. ಅದೂ ಅಲ್ಲದೆ ಅದ್ವೈತಿಗಳು ಉಪನಿಷತ್ತಿನಲ್ಲಿ ಬರುವ 'ಸ ಆತ್ಮಾ ತತ್ತ್ವಮಸಿ' ಎಂಬ ಅದ್ವೈತ ಪ್ರತಿಪಾದಕವಾದ ಶ್ರುತಿಗಳಿಗೆ 'ಸಆತ್ಮಾ+ಅತತ್ತ್ವಮಸಿ' ಮುಂತಾಗಿ ಆಕಾರವನ್ನು ಪ್ರಶ್ಲೇಷಿಸಿ, ಕೆಲವು ಕಡೆ ಅಭೇದ ಶ್ರುತಿಗಳನ್ನು ಪೂರ್ವಪಕ್ಷವೆಂದು ವಾದಿಸಿ ಜೀವ ಮತ್ತು ಬ್ರಹ್ಮರಿಗೆ ಭೇದವನ್ನೇ ಸಾಧಿಸುತ್ತಾರೆ.

ವೇದಕ್ಕೆ ಪ್ರಾಮಾಣ್ಯವನ್ನು ಒಪ್ಪುವ ಎರಡು ಪಂಥಗಳೂ ಸಂಪೂರ್ಣ ವೇದಕ್ಕೆ ಪ್ರಾಮಾಣ್ಯವನ್ನು ಕೊಡದೆ ಶ್ರುತಿಯ ಏಕದೇಶಕ್ಕೆ ಮಾತ್ರ ಪ್ರಾಮಾಣ್ಯವನು ನೀಡಿದ ದೋಷಕ್ಕೆ ಗುರಿಯಾಗಿವೆ. ಅದಕ್ಕಾಗಿಯೇ ಸಂಪೂರ್ಣ ಶ್ರುತಿಗೆ ಪ್ರಾಮಾಣ್ಯವನ್ನು ಒಪ್ಪುವ ಪರಮವೈದಿಕವೆನಿಸಿದ 'ದ್ವೈತಾದ್ವೈತ ಸಿದ್ಧಾಂತವು' ಆವಿರ್ಭವಿಸಿತು. ಇದೇ ವೀರಶೈವವೆನಿಸುವ ವಿಶೇಷಾದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತ ಇಲ್ಲವೆ ಶಿವಾದ್ವೈತ.

'ವಿಶೇಷಾದ್ವೈತ ' ಎಂಬಲ್ಲಿ ವಿಃ ಎಂದರೆ ಪರಮಾತ್ಮ[1] ; ಶೇಷ=ಎಂದರೆ ಶಿವಾಂಶನಾದ ಜೀವ. (ವಿಶ್ಚ ಶೇಷಶ್ಚ ವಿಶೇಷೌ ಜೀವೇಶೌ ; ತಯೋಃ ಅದ್ವೈತಂ ವಿಶೇಷಾದ್ವೈತಂ ಎಂಬುದು ಈ ಪದದ ನಿರ್ವಚನ ವಿಶೇಷಾದ್ವೈತ, ಶಕ್ತಿವಿಶಿಷ್ಟಾದ್ವೈತ, ವಿಶಿಷ್ಟಾದ್ವೈತ ಮತ್ತು ಶಿವಾದ್ವೈತ ಮುಂತಾದ ಪದಗಳು ಭೇದಾಭೇದದ ಪರ್ಯಾಯ ಪದಗಳು.

---

1. 'ವಿಃ ಪಕ್ಷಿಪರಮಾತ್ಮನೋಃ' ವೈದಿಕಕೋಶ.

ಈ ಪದಗಳ ನಿರ್ವಚನ ಹೀಗಿದೆ —

ಶ್ರೀ ನೀಲಕಂಠ ಶಿವಾಚಾರ್ಯರು (ಕ್ರಿ. ಶ. ೧೪೦೦) ಈ ಸಿದ್ಧಾಂತಕ್ಕೆ ವಿಶಿಷ್ಟಾದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತ ಎಂದು ಹೆಸರಿಸಿದ್ದಾರೆ. ಆದರೆ ಇದು ಶ್ರೀ ರಾಮಾನುಜಾಚಾರ್ಯರು (ಕ್ರಿ.ಶ. ೧೦೧೭ – ೧೧೩೭) ಹೇಳುವ "ಜೀವಶರೀರಕಂ ಬ್ರಹ್ಮ" (ಬ್ರಹ್ಮನಿಗೆ ಜೀವವೇ ಶರೀರ) ಎಂದು ಹೇಳುವ ವಿಶಿಷ್ಟಾದ್ವೈತವಲ್ಲ. ಇಲ್ಲಿರುವ ವೈಶಿಷ್ಟ್ಯ ಶಕ್ತಿಯದು.

ಜೀವ ಮತ್ತು ಬ್ರಹ್ಮರು ಕೇವಲರಲ್ಲ ; ಅವರು ವಿಶಿಷ್ಟರು, ಘಟ ಎಂಬಲ್ಲಿ 'ಘಟತ್ವ'ವು ಹೇಗೆ ವಿಶೇಷಣವೋ, ಅದರಂತೆ ಬ್ರಹ್ಮದ ವಿಶೇಷ ಶಕ್ತಿಯದೇ. ಅಗ್ನಿ ಮತ್ತು ಅಗ್ನಿಕಣಗಳಿಗೆ ದಾಹಕತ್ವ (ಸುಡುವುದು) ರೂಪದಿಂದ ಅಭೇದವಿರುವಂತೆ, ಅಗ್ನಿತ್ವ ಮತ್ತು ಕಣತ್ವ ಎಂಬ ಭೇದವೂ ಇದೆ. 'ಅಹಿ–ಕುಂಡಲಿ' ಎಂಬಲ್ಲಿ ಭೇದ–ಅಭೇದಗಳಿಗೆ ವಿರೋಧವಿಲ್ಲ, ಅದರಂತೆ ಶಕ್ತಿವಿಶಿಷ್ಟ ಜೀವ ಮತ್ತು ಶಕ್ತಿವಿಶಿಷ್ಟ ಬ್ರಹ್ಮರಲ್ಲಿ ಅದ್ವೈತವೂ ಸ್ವತಃ ಸಿದ್ಧವಾಗಿದೆ.

ಈ ಮತದಲ್ಲಿ ಜೀವನು ಸ್ಥೂಲಚಿತ್ (ಕಿಂಚಿದ್‌ಜ್ಞತ್ವ) ಮತ್ತು ಸ್ಥೂಲ ಅಚಿತ್ (ಕಿಂಚಿತ್ ಕರ್ತೃತ್ವ) ಎಂಬ ಶಕ್ತಿವಿಶಿಷ್ಟ. ಅದರಂತೆ ಶಿವನು ಸೂಕ್ಷ್ಮಚಿತ್ (ಸರ್ವಜ್ಞತ್ವ) ಸೂಕ್ಷ್ಮ ಅಚಿತ್ (ಸರ್ವಕರ್ತೃತ್ವ) ಎಂಬ ಶಕ್ತಿವಿಶಿಷ್ಟ. ಹೀಗೆ ಎರಡು ವಿಧವಾದ ಶಕ್ತಿಗಳಿಂದ ಕೂಡಿರುವ ಜೀವ ಮತ್ತು ಶಿವರಿಗೆ ಆಗುವ ಸಾಮರಸ್ಯ ಎಂಬ ಅದ್ವೈತವೇ ವಿಶಿಷ್ಟಾದ್ವೈತ. ಈ ಪದದ ನಿರ್ವಚನ ಹೀಗಿದೆ. "ವಿಶಿಷ್ಟಂ ಚ ವಿಶಿಷ್ಟಂ ಚ ವಿಶಿಷ್ಟೇ, ತಯೋರದ್ವೈತಂ=ವಿಶಿಷ್ಟಾದ್ವೈತಂ."

ಶಕ್ತಿವಿಶಿಷ್ಟಾದ್ವೈತಂ—ಶಕ್ತಿಶ್ಚ ಶಕ್ತಿಶ್ಚ ಶಕ್ತೀ, ತಾಭ್ಯಾಂ ವಿಶಿಷ್ಟೌ ಜೀವೇಶೌ; ತಯೋರದ್ವೈತಂ ಶಕ್ತಿವಿಶಿಷ್ಟಾದ್ವೈತಂ.

ಶಿವಾದ್ವೈತಂ — i) ಶಿವೇ ಅದ್ವೈತಂ ಶಿವಾದ್ವೈತಂ.
ii) ಶಿವಶ್ಚ ಶಿವಶ್ಚ ಶಿವೌ ಜೀವೇಶೌ, ತಯೋರದ್ವೈತಂ.

ಶಿವಯೋಗ :— ಶಿವೇ ಯೋಗಃ=ಶಿವಯೋಗಃ.

ಇದುವರೆಗೆ ಶಿವ ಮತ್ತು ಜೀವರಿಗೆ ಇರುವ ಸಂಬಂಧವನ್ನು ಕುರಿತು ಹೇಳಿರುವ ಪದಗಳ ನಿರ್ವಚನವನ್ನು ಹೇಳಿ ಆಯಿತು. ಇನ್ನು ಜೀವನು ತನ್ನ ಅನಾದಿ ಕರ್ಮವಶದಿಂದ ಶಿವನಿಂದ ಬೇರ್ಪಟ್ಟು ಅನೇಕ ಭವಗಳಲ್ಲಿ ಹುಟ್ಟಿ-ಸತ್ತು ಅಸಾಧ್ಯವಾದ ದುಃಖ ಸಾಗರದಲ್ಲಿ ಬಿದ್ದು ದಡ ಕಾಣದೆ ಬಳಲಿರುವಾಗ, ಶಿವಕೃಪೆಗೆ ಪಾತ್ರನಾಗಿ, ಶಿವದೀಕ್ಷೆ ಪಡೆದು ಷಟ್‌ಸ್ಥಲ ಮಾರ್ಗದಿಂದ ಭಕ್ತ-ಮಾಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ ಮತ್ತು ಐಕ್ಯ ಎಂಬ ಆರು ಸೋಪಾನಗಳನ್ನು ಏರಿ ಶಿವನಲ್ಲಿ-ನೀರಿನಲ್ಲಿ ನೀರೂ, ಬೆಂಕಿಯಲ್ಲಿ ಬೆಂಕಿಯೂ ಬೆರೆದು, ಬೇರಿಲ್ಲದಿರ್ಪ ಸ್ಥಿತಿಯನ್ನು ಹೇಳುವ ಷಟ್‌ಸ್ಥಲವೆಂಬ ಮುಖ್ಯ ಸಿದ್ಧಾಂತವನ್ನು ಕುರಿತು ಇಲ್ಲಿ ಹೇಳಲಾಗುತ್ತದೆ,

ಷಟ್‌ಸ್ಥಲ ಸಿದ್ಧಾಂತ

ಅಂಗ—ಲಿಂಗ : ಶಿವಾಗಮಗಳಲ್ಲಿ ಜಗತ್ತಿನ ಹುಟ್ಟು-ಬದುಕು-ಅಳಿವು-ಅಡಗುವುದು ಮತ್ತು ಅನುಗ್ರಹ ಎಂಬ ಪಂಚಕೃತ್ಯಗಳಿಗೆ ಕಾರಣವಾದ ಪರಶಿವಬ್ರಹ್ಮವನ್ನು 'ಸ್ಥಲ' ಎಂದು ಕರೆಯಲಾಗಿದೆ. ಸ್ಥಾವರ (ಅಚರ) ಮತ್ತು ಜಂಗಮ (ಚರ) ವೆನಿಸಿರುವ ವಿಶ್ವವು ಯಾವುದರಿಂದ ಹೊರಹೊಮ್ಮಿ ಮತ್ತೆ ಎಲ್ಲಡಗುವುದೋ ಅದೇ ಸ್ಥಲತತ್ತ್ವ.[1]

ಪ್ರಳಯದಲ್ಲಿ ಸ್ವಸ್ಥನಾಗಿದ್ದ (ತನ್ನಲ್ಲಿ ತಾನೇ ಅಡಗಿದ್ದ) ಬ್ರಹ್ಮಕ್ಕೆ "ಜಗತ್ತನ್ನು ಸೃಜಿಸಬೇಕು." ಎನ್ನಿಸಿದಾಗ ಅದು ಸ್ವಲ್ಪ ಚಲಿ (ಕ್ಷೋಭೆ)ಸಿತು. ಎಂದರೆ ಅವನ ಪ್ರಜ್ಞಾಶಕ್ತಿಯು ಸ್ಫುರಿಸಿತು. ಆಗ ಆ ಸ್ಥಲತತ್ತ್ವವು ಎರಡು ಭಾಗವಾಯಿತು. ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ[2]. ಚರ ಮತ್ತು ಅಚರವೆನಿಸಿದ ವಿಶ್ವವು ಪ್ರಳಯದಲ್ಲಿ ಎಲ್ಲಿ ಅಡಗಿತ್ತೋ ಮತ್ತೆ ಸೃಷ್ಟಿಕಾಲದಲ್ಲಿ ಯಾವುದರಿಂದ ಹೊರಹೊಮ್ಮಿತೋ ಅದೇ ಲಿಂಗಸ್ಥಲ,[3] 'ಅಂ' ಎಂದರೆ ಪರಬ್ರಹ್ಮ, ಅದರ ಕಡೆ ಅಭಿಮುಖವಾಗಿರುವ ಜೀವತತ್ತ್ವವೇ ಅಂಗಸ್ಥಲ.[4]

ಹೀಗೆ 'ಸ್ಥಲ' ಎನಿಸಿದ ಶಕ್ತಿಯಿಂದ ಕೂಡಿದ ಪರಶಿವಬ್ರಹ್ಮವು ಲಿಂಗ ಮತ್ತು ಅಂಗ ಎಂದು ಎರಡು ಭಾಗವಾದಾಗ ಅಲ್ಲಿರುವ ಶಕ್ತಿಯೂ ಇರ್ತೆರನಾಯಿತು.

ಶಕ್ತಿ—ಭಕ್ತಿ

ಲಿಂಗಸ್ಥಲವನ್ನು ಆಶ್ರಯಿಸಿರುವ ಶಕ್ತಿಯೂ 'ಕಲೆ' ಎನಿಸಿತು. ಅಂಗಸ್ಥಲವನ್ನು ಆಶ್ರಯಿಸಿರುವ ಶಕ್ತಿಯು ಜೀವನದ ಉದ್ಧಾರಕ್ಕಾಗಿ 'ಭಕ್ತಿ' ಎನಿಸಿತು.

ಒಟ್ಟಿನಲ್ಲಿ ಜಗತ್ತನ್ನು ಸೃಷ್ಟಿಸಬೇಕೆಂದು ಬಯಸಿದ ಪರಶಿವಬ್ರಹ್ಮಕ್ಕೆ ಶಕ್ತಿಯ ನೆರವು ಅಗತ್ಯವಾಯಿತು, ಹಾಗೆಯೇ ಜಗತ್ತನ್ನು ವಿರಮಿಸಬೇಕೆಂದು ಬಯಸಿದಾಗಲೂ

---

1. ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಂ ।
   ತದ್ ಬ್ರಹ್ಮಸ್ಥಲಮಿತ್ಯಾಹುಃ ಸ್ಥಲತತ್ತ್ವವಿಶಾರದಾಃ ॥
   (—ಅನುಭವ ಸೂತ್ರಂ)

2. ಸ್ವಶಕ್ತಿಕ್ಷೋಭಮಾತ್ರೇಣ ಸ್ಥಲಂ ತತ್‌ದ್ವಿವಿಧಂ ಭವೇತ್ ।
   ಏಕಂ ಲಿಂಗಸ್ಥಲಂ ಪ್ರೋಕ್ತಮನ್ಯದಂಗಸ್ಥಲಂ ಸ್ಮೃತಂ ॥
   (—ಅನು. ೨–೧೦)

3. ಲೀಯತೇ ಗಮ್ಯತೇ ಯೇನ ಸರ್ವಮೇತತ್ ಚರಾಚರಂ ।
   ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ ॥
   (—ಅನು. ೩–೨)

4. ಅಂ ಭವೇತ್ ಪರಮಂ ಬ್ರಹ್ಮ ತತ್ಪರಂ ತತ್ಪರಾಯಣಂ ।
   ಅಂಗಸ್ಥಲಮಿತಿ ಪ್ರಾಹುಃ ಅಂಗತತ್ತ್ವಪರಾಯಣಾಃ ॥
   (—ಅನು. ೪–೩)

ಆ ಶಿವನಿಗೆ ಶಕ್ತಿಯ ನೆರವು ಅಗತ್ಯವಾಗಿ ಅದೇ ಮಾತೃರೂಪಿಣಿಯಾದ 'ಭಕ್ತಿ' ಎಂದೆನಿಸಿತು.

ಜಗತ್ತನ್ನು ವಿರಮಿಸುವುದು ಎಂದರೆ ಅವನಿಂದ ಹೊಮ್ಮಿದ ಜಗತ್ತನ್ನು ಮತ್ತೆ ಆ ಲಿಂಗತತ್ತ್ವದಲ್ಲಿ ಅಡಗಿಸುವುದು, ಮಹಾಕಾಲಾನಲಜ್ವಾಲೆಯು ಮನೆ ಬೆಳಗುವ ದೀಪವಾದಂತೆ.

ಶಕ್ತಿ ಮತ್ತು ಭಕ್ತಿಗಳಿಗೆ ಇರುವ ವ್ಯತ್ಯಾಸ

ಶಕ್ತಿಯು ಜ್ವಾಲೆ ಮತ್ತ ತಮಸ್ವಿನಿ (ಕತ್ತಲು)	ಭಕ್ತಿ—ಸುಪ್ರಕಾಶಿನಿ (ಬೆಳಕು)
ಶಕ್ತಿಯು ಸವಾಸನ	ಭಕ್ತಿಯು ನಿರ್ವಾಸನ ಅಷ್ಟೇ ಅಲ್ಲ ಅದು ಮಹತ್ತರ ಮತ್ತು ಶುದ್ಧ.

ಶಕ್ತಿ ಭಕ್ತಿಗಳೆರಡಕ್ಕೂ ಹೆಚ್ಚು ವ್ಯತ್ಯಾಸವಿಲ್ಲವಾದರೂ ವಿಚಾರ ಮಾಡಿದರೆ ಇವೆರಡಕ್ಕೂ ಬಹಳ ವ್ಯತ್ಯಾಸವುಂಟು.

೧	ಶಕ್ತಿಯಿಂದ ಪ್ರಪಂಚಸೃಷ್ಟಿ	ಭಕ್ತಿಯಿಂದ ಪ್ರಪಂಚಲಯ
೨	ಶಕ್ತಿಯ ವೈಚಿತ್ರ್ಯದಿಂದ ರೂಪವಿಲ್ಲದ್ದೂ ರೂಪು ತಳೆಯುತ್ತದೆ.	—ಭಕ್ತಿ ವೈಚಿತ್ರ್ಯದಿಂದ ರೂಪವೂ ನೀರೂಪವಾಗುತ್ತದೆ.
೩	ಶಕ್ತಿಗೆ ಪ್ರಪಂಚವನ್ನು ಬೆಳೆಸುವ ಬಯಕೆ.	—ಭಕ್ತಿಗೆ ಪ್ರಪಂಚವನ್ನು ಮುಗಿಸುವ ಅಪೇಕ್ಷೆ.
೪	ಶಕ್ತಿ ಅಧೋಮುಖಿ	—ಭಕ್ತಿ ಊರ್ಧ್ವಮುಖಿ,
೫	ಶಕ್ತಿ ಸಮಾಯಾ	—ಭಕ್ತಿಯು ನಿರ್ಮಾಯಾ.
೬	ಶಕ್ತಿಯದು ಉಪಾಸ್ಯತ್ವ	—ಭಕ್ತಿಯದು ಉಪಾಸಕತ್ವ
೭	ಶಕ್ತಿಯು ಲಿಂಗಸ್ಥಲವನ್ನು ಆಶ್ರಯಿಸಿದೆ.	—ಭಕ್ತಿಯು ಅಂಗಸ್ಥಲವನ್ನು ಆಶ್ರಯಿಸಿದೆ.

ಯಾವ ದೃಷ್ಟಿಯಿಂದ ನೋಡಿದರೂ ಶಕ್ತಿಗಿಂತ ಭಕ್ತಿಯೇ ಮಿಗಿಲು. [1]

ಪ್ರವೃತ್ತಿ ಮಾರ್ಗ

ಶಕ್ತಿಯಿಂದ ಜಗತ್ತು ಪರಿಣಮಿಸಿದ ಬಗೆಗೆ "ಪ್ರವೃತ್ತಿ" ಎಂದು ಹೆಸರು.

ಸಚ್ಚಿದಾನಂದರೂಪವಾದ ಪರಶಿವ ಬ್ರಹ್ಮದಲ್ಲಿನ ವಿಮರ್ಶಶಕ್ತಿಯ ಪರಿಣಾಮವೇ ಜಗತ್ತು. ಶಕ್ತಿಯು ಜಗತ್ತಿನ ಸೃಷ್ಟಿಯಲ್ಲಿ ಪ್ರವೃತ್ತವಾದಾಗ ಅದು ಕ್ರಮವಾಗಿ ಮೂವತ್ತಾರು ತತ್ತ್ವಗಳಾಗಿ ಪರಿಣಮಿಸಿತು. ಆ ಕ್ರಮವು ಹೀಗಿದೆ,

---

1. ಅಪಿ ತರ್ಕಪ್ರಮಾಣಾಭ್ಯಾಂ ಶಕ್ತೇರ್ಭಕ್ತಿರ್ಗರೀಯಸೀ

(ಅನು. ೨-೨೦)

ಶುದ್ಧತತ್ತ್ವಗಳು ೫

ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ.

ಮಿಶ್ರತತ್ತ್ವಗಳು ೭

ಮಾಯಾ-ಕಲಾ–ವಿದ್ಯಾ–ರಾಗ-ಕಾಲ-ನಿಯತಿ-ಪುರುಷ.

ಅಶುದ್ಧತತ್ತ್ವಗಳು ೨೪

ಪ್ರಕೃತಿ (ಸತ್ತ್ವರಜಸ್ತಮೋಗುಣಗಳ ಸಾಮ್ಯರೂಪ)

ಚಿತ್ತ-ಬುದ್ಧಿ-ಅಹಂಕಾರ-ಮನಸ್ಸು (ಅಂತಃಕರಣಚತುಷ್ಟಯ)
ಶ್ರೋತ್ರ-ತ್ವಕ್-ನೇತ್ರ–ಜಿಹ್ವಾ–ಘ್ರಾಣ (ಜ್ಞಾನೇಂದ್ರಿಯಪಂಚಕ)
ವಾಕ್-ಪಾಣಿ–ಪಾದ-ಪಾಯು-ಉಪಸ್ಥ (ಕರ್ಮೇಂದ್ರಿಯಪಂಚಕ)
ಶಬ್ದ-ಸ್ಪರ್ಶ-ರೂಪ-ರಸ–ಗಂಧ (ತನ್ಮಾತ್ರಾಪಂಚಕ)
ಆಕಾಶ-ವಾಯು-ವಹ್ನಿ-ಜಲ-ಭೂಮಿ (ಭೂತಪಂಚಕ)

ಹೀಗೆ ಶಿವನ ಸಂಕಲ್ಪದಂತೆ ಶಕ್ತಿಯ ನೆರವಿನಿಂದ ಮುವ್ವತ್ತಾರು ತತ್ತ್ವಗಳಾಗಿ ಜಗತ್ತು ನಿರ್ಮಾಣವಾಯಿತು ಎಂಬುದನ್ನು ವೃದ್ಧಜಾಬಾಲೋಪನಿಷತ್ತು ಎತ್ತಿ ತೋರಿಸಿದೆ. ''ಬಹು ಸ್ಯಾಂ ಪ್ರಜಾಯೇಯ'' ಎಂಬ ಶ್ರುತಿಯು ಪರಬ್ರಹ್ಮನು ಸೃಷ್ಟಿಗೆ ಉನ್ಮುಖವಾದಾಗ ಆತನ ಇಚ್ಛಾಶಕ್ತಿಯೇ ಜಗದ್ರೂಪವಾಗಿ ಪರಿಣಮಿಸಿ, ಎಲ್ಲ ಲೋಕಗಳ ಸೃಷ್ಟಿಯಾಯಿತು ಎಂದು ಸೂಚಿಸಿದೆ ಎಂಬುದನ್ನು ಶಿವಾಗಮಗಳು ಮುಕ್ತಕಂಠದಿಂದ ಘೋಷಿಸಿವೆ.

ನಿವೃತ್ತಿಮಾರ್ಗ : ಪರಶಿವಬ್ರಹ್ಮದ ಇಚ್ಛಾಶಕ್ತಿಯಿಂದ ಹೊರ ಹೊಮ್ಮಿದ ಜಗತ್ತು ಮತ್ತೆ ಆ ಪರಶಿವಬ್ರಹ್ಮದಲ್ಲಿ ಅಡಗುವುದು ಅನಿವಾರ್ಯ ವೆಂಬುದನ್ನು ಈ ನಿವೃತ್ತಿಮಾರ್ಗವು ಸೂಚಿಸಿದೆ. ಪರಮಾತ್ಮನನ್ನು ಅನಾದಿ ಅವಿದ್ಯಾ ಪ್ರಭಾವದಿಂದ ಅಗಲಿದ ಜೀವಿಯನ್ನು ಮತ್ತೆ ಆ ಪರಶಿವಬ್ರಹ್ಮದಲ್ಲಿ ಅಡಗಿಸುವ ದಿಸೆಯಲ್ಲಿ ಜೀವಿಯ ಸೃಷ್ಟಿಗೆ ಕಾರಣವಾದ ಶಕ್ತಿಯೇ ಮಾತೃಸ್ವರೂಪಣಿಯಾಗಿ ಜೀವಿಯನ್ನು ಮೇಲೆತ್ತಲು ತಾನೇ ಭಕ್ತಿಯಾಗಿ ಪರಿಣಮಿಸಿತು ಎಂದು ಹೇಳ ಲಾಯಿತು.

ಭಕ್ತಿಯ ವಿಕಾಸವೇ ಷಟ್‌ಸ್ಥಲಸೋಪಾನ.

ಮಲತ್ರಯ

ಅನಾದಿಕರ್ಮವಶದಿಂದ ಶಿವನಿಂದ ಬೇರ್ಪಟ್ಟ ಜೀವನಲ್ಲಿ **ಆಣವ-ಮಾಯಾ-ಕಾರ್ಮ** ಎಂಬ ಮೂರುಬಗೆಯ ಮಲಗಳು ಸ್ವಾಭಾವಿಕವಾಗಿರುತ್ತವೆ. ತಾಮ್ರದಲ್ಲಿ ಸ್ವಾಭಾವಿಕವಾಗಿ ಕಿಲುಬು ಇರುವಂತೆ. ''ರಸವೇಧ''ವಾದಾಗ ಆ ಕಿಲುಬು ನಾಶವಾಗಿ ತಾಮ್ರವು ಸುವರ್ಣವಾಗುತ್ತದೆ. ಇದನ್ನು ಪರುಷ (ಸ್ಪರ್ಶ) ಎಂದು ಕರೆಯಲಾಗಿದೆ.

ಅಲ್ಲಿಂದ ಮುಂದೆ ಅದರಲ್ಲಿ ಕಿಲುಬಿಗೆ ಅವಕಾಶವಿಲ್ಲ. ಅದರಂತೆ ಜೀವಿಯಲ್ಲಿ ಆಣವಾದಿ ಮಲಗಳು ಸ್ವಾಭಾವಿಕವಾದರೂ ಅದು ಸದ್ಗುರುವಿನ ಕೃಪೆಗೆ ಪಾತ್ರನಾಗಿ ಜೀವನಂ ಶಿವದೀಕ್ಷೆ ಪಡೆದ ಮೇಲೆ ನಾಶವಾಗುವುವು, ಆಗ ಆವನು ಭವ(ಶಿವ)ನಕಡೆ ಅಭಿಮುಖ ನಾಗಿ "ಅಂಗ" ಅಥವಾ "ಭಕ್ತ"ನೆನಿಸುತ್ತಾನೆ.

ಮಲಗಳ ಸ್ವರೂಪ

ಜೀವನು ಶಿವನ ಅಂಶ ಎಂದು ಹೇಳಲಾಯಿತು. ಶಿವನಲ್ಲಿ ಪರಿಪೂರ್ಣತ್ವ, ಸರ್ವಜ್ಞತ್ವ ಮತ್ತು ಸರ್ವಕರ್ತೃತ್ವಗುಣಗಳಿದ್ದವು. ಮೂಲತಃ ಜೀವನು ಶಿವನೇ! ಆದರೂ ಅವನು ಅನಾದಿಕರ್ಮವಶದಿಂದ ಬೆಂಕಿಯಿಂದ ಕಿಡಿಗಳು ಸಿಡಿದಂತೆ ಶಿವಾಂಶ ನಾಗಿ ಶಿವನಿಂದ ಬೇರ್ಪಟ್ಟನು. ಆಗ ಶಿವನಲ್ಲಿದ್ದ "ಪರಿಪೂರ್ಣತ್ವ"ವು ಮರೆತು 'ತಾನು ಅಪೂರ್ಣ ಎಂಬ ಭಾವವುದಿಸಿತು. ಅದೇ **ಆಣವಮಲ.** ತಾನು ಮೊದಲು "ಸರ್ವಜ್ಞ"ನಾದರೂ ಈಗ ಅವನು "ಕಿಂಚಿದ್‌ಜ್ಞ"ನೆನಿಸಿದ. ಇದೇ **ಮಾಯಾಮಲ.** ಅವನಲ್ಲಿ ಮೊದಲಿದ್ದ "ಸರ್ವಕರ್ತೃತ್ವ" ಶಕ್ತಿಯು ಮರೆಯಾಗಿ 'ತಾನು ಕಿಂಚಿತ್‌ಕರ್ತ' ಎಂಬ ತಿಳಿವುದಿಸಿತು. ಅದೇ **ಕಾರ್ಮಮಲ.** ಈ ಬಗೆಯ ಮೂರು ಮಲಗಳಿಂದ ಆವೃತನಾದ ಜೀವನು ಸಂಸಾರಿಯೆನಿಸಿ, ಜನನ ಮರಣಗಳ ಸುಳಿಯಲ್ಲಿ ಬಿದ್ದು ಕಳವಳ ಗೊಂಡ. ಶಿವದೀಕ್ಷೆಯಿಂದ ಜೀವಿಗೆ ಆವರಿಸಿದ್ದ ಮೇಲೆ ಹೇಳಿದ ಮೂರು ಮಲಗಳೂ ನಾಶವಾಗುತ್ತವೆ.

ತ್ರಿವಿಧ ದೀಕ್ಷೆಗಳು ತ್ರಿವಿಧ ಮಲನಾಶಕಗಳು

ಶಿವದೀಕ್ಷೆಯು **ವೇಧಾ–ಮನು–ಕ್ರಿಯಾ** ಎಂದು ಮೂರುವಿಧ. ಶಿವಜ್ಞಾನ ವನ್ನು ನೀಡುವುದಂ ಮಲತ್ರಯವನ್ನು ಕಳೆವುದೇ ದೀಕ್ಷೆ.[1] ದೀಕ್ಷೆಯಿಂದ ಮೂರು ಬಗೆಯ ಮಲಗಳಿಂದ ಬಿಡಲ್ಪಟ್ಟು, ಪಶುತ್ವವನ್ನು ಕಳೆದುಕೊಂಡು ಜೀವನು ಶಿವತ್ವ ವನ್ನು ಹೊಂದುತ್ತಾನೆ.[2]

ಗುರುವು ಶಿಷ್ಯನನ್ನು ಹತ್ತಿರಕರೆದು ಕೃಪಾದೃಷ್ಟಿಯಿಂದ ನೋಡಿ ಅವನ ಮಸ್ತಕದ ಮೇಲೆ ತನ್ನ ವರದ ಹಸ್ತವನ್ನು ಇಡುವುದೇ **ವೇಧಾದೀಕ್ಷೆ.** ಇದರಿಂದ ಜೀವನ ಆಣವ ಮಲವು ನಾಶವಾಗುತ್ತದೆ. ಅನಂತರ ಶಿವದೀಕ್ಷಾಂಗವಾಗಿ ಎಸಗುವ ಮಂತ್ರೋಪ ದೇಶವು ಮಂತ್ರದೀಕ್ಷೆ. ಅದರಿಂದ **ಮಾಯಾಮಲ** ನಿವೃತ್ತಿ. ಶಿವದೀಕ್ಷೆಯಲ್ಲಿ ಎಸಗುವ ಹೋಮಕುಂಡ ಮತ್ತು ಮಂಡಲ-ಕಲಶಸ್ಥಾಪನಾದಿಗಳು **ಕ್ರಿಯಾದೀಕ್ಷೆ.**

---

1 ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಸಂಚಯಃ ।
ತಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥ (ಸಿ.ಶಿ. ೫)

೨ ದೀಕ್ಷಯಾ ಮುಚ್ಯತೇ ದೇಹೀ ತ್ರಿವಿಧಾತ್ ಪಾಶಬಂಧನಾತ್ ।
ಶಿವತ್ವಂ ಯಾತಿ ಸತತಂ ನ ಪುನಃ ಪಶುತಾಂ ವ್ರಜೇತ್ । (—ವೀರಶೈವಾಚಾರಕೌಸ್ತುಭ)

ಇದರಿಂದ ಅವನಲ್ಲಿದ್ದ **ಕಾರ್ಮಮಲವು** ನಷ್ಟವಾಗಿ ಅವನು ಪರಿಶುದ್ಧ ಅಪರಂಜಿಯಂತೆ ಬೆಳಗುವ ಶಿವಭಕ್ತನೆನಿಸುತ್ತಾನೆ.

ಶಿವದೀಕ್ಷೆ ಮುಕ್ತಿಗೆ ಉಪಾಯ

ಶಿವದೀಕ್ಷೆಯಿಂದ ಪಾಶಮುಕ್ತನಾದ ಜೀವನನ್ನು ಉದ್ಧರಿಸುವುದಕ್ಕಾಗಿಯೆ ಭಕ್ತಿಯು ಅವನನ್ನು ಆಶ್ರಯಿಸುತ್ತದೆ. ಈ ಭಕ್ತಿಯು **ಶ್ರದ್ಧಾ-ನಿಷ್ಠಾ-ಅವಧಾನ ಅನುಭವ-ಆನಂದ** ಮತ್ತು **ನವರಸ** ಎಂಬ ಆರು ಹಂತಗಳಲ್ಲಿ ಭಕ್ತನನ್ನು ಶಿವನೆಡೆ ಗೊಯ್ಯುತ್ತದೆ. ಆ ಕ್ರಮವು ಹೀಗಿದೆ.

ಷಟ್‌ಸ್ಥಲಸೋಪಾನ

ವೀರಶೈವದ ಕಡೆಯ ಗುರಿ ಜೀವನು ಶಿವನಾಗುವುದು. ಅದಕ್ಕೆ ಭಕ್ತಿಯು ರಚಿಸಿರುವ ಷಟ್‌ಸ್ಥಲ ಸೋಪಾನ ಮುಖ್ಯ ಹೆದ್ದಾರಿ. ಭಕ್ತನನ್ನು ಶಿವನೆಡೆಗೊಯ್ಯುವ ಈ ಹಾದಿಯಲ್ಲಿ **ಭಕ್ತ-ಮಾಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ** ಮತ್ತು **ಐಕ್ಯ** ಎಂಬ ಆರು ಮೆಟ್ಟಿಲುಗಳು ಏರ್ಪಟ್ಟಿವೆ. ಭಕ್ತಿಯ ವಿಕಾಸವೆನಿಸಿದ ಶ್ರದ್ಧೆ-ನಿಷ್ಠೆ ಅವಧಾನ-ಅನುಭವ-ಆನಂದ ಮತ್ತು ಸಮರಸ ಎಂಬ ಹಂತಗಳಲ್ಲಿ ಭಕ್ತನನ್ನು ಮೇಲೆ ಮೇಲೆ ಕೊಂಡೊಯ್ದು ಸಾಧಕನನ್ನು ಶಿವನಲ್ಲಿ ಸಮರಸಗೊಳಿಸುವುದು. ಭಕ್ತಿಯೆ ಇವುಗಳಲ್ಲಿ ಮೊದಲನೆಯದು.

ಭಕ್ತಸ್ಥಲ

ಇದು ಬೀಜವೃಕ್ಷನ್ಯಾಯ (ಬೀಜವು ಮೊಳೆತು ಮರವಾಗಿ ಫಲ ನೀಡುವುದು) ಸಂಸ್ಕಾರವಿಶೇಷದಿಂದ ಪರಶಿವನ ಕೃಪೆ(ಶಕ್ತಿಪಾತ)ಗೆ ಪಾತ್ರನಾಗಿ ಶಿವದೀಕ್ಷೆಪಡೆದ ಜೀವನದಲ್ಲಿ ಭಕ್ತಿಯು ಶ್ರದ್ಧೆಯ ರೂಪದಲ್ಲಿ ಅಡಗಿರುತ್ತದೆ. ಆಗ ಅವನಲ್ಲಿ ದೇಹಾದಿ ಅಭಿಮಾನವು ನಷ್ಟವಾಗಿ ಅವನಿಗೆ ಗುರು-ಲಿಂಗ-ಜಂಗಮ-ಭಸ್ಮ-ರುದ್ರಾಕ್ಷ-ಮಂತ್ರ-ಪಾದೋದಕ ಮತ್ತು ಪ್ರಸಾದ ಎಂಬ ಅಷ್ಟಾವರಣಗಳಲ್ಲಿ; ಲಿಂಗಾಚಾರ-ಸದಾಚಾರ-ಶಿವಾಚಾರ-ಗಣಾಚಾರ ಮತ್ತು ಭೃತ್ಯಾಚಾರ ಎಂಬ ಪಂಚ ಆಚಾರಗಳಲ್ಲಿ ಶ್ರದ್ಧೆಯು ಮೂಡುತ್ತದೆಯಲ್ಲದೆ ಅವನ್ನು ಅರಿತು ಆಚರಿಸುವ ಪ್ರಕೃತಿಯುಂಟಾಗುತ್ತದೆ. ಈ ಬಗೆಯ ಅನುಷ್ಠಾನದ ಪ್ರಭಾವದಿಂದ ಬೆಣ್ಣೆತೆಗೆಯಲು ಮೊಸರನ್ನು ಕಡೆಯುವಂತೆ ಜೀವಾತ್ಮನಲ್ಲಿ ಶಿವತ್ವದ ಅಭಿವ್ಯಕ್ತಿಗಾಗಿ ಪ್ರೇಮಮಂಥನವು ಆರಂಭವಾಗುತ್ತದೆ. ಭಕ್ತಸ್ಥಲಸ್ವರೂಪವು ಇಲ್ಲಿ ಸ್ಪಷ್ಟವಾಗಿದೆ.

> ಸದಾಚಾರಃ ಶಿವೇ ಭಕ್ತಿರ್ಲಿಂಗೇ ಜಂಗಮ ಏಕಧೀಃ ।
> ಲಾಂಛನೇ ಶರಣೇ ಭಕ್ತಿರ್ಭಕ್ತಸ್ಥಲಮನುತ್ತಮಂ ॥

ಮಾಹೇಶ್ವರಸ್ಥಲ

ಇದು ಸಲಿಲಮುಕ್ತಾನ್ಯಾಯಸ್ಥಲ: (ಜಲವು ಗಟ್ಟಿಗೊಂಡು ಮುತ್ತಾಗುವುದು) ಎಂದರೆ ಕಡಲಿನಲ್ಲಿರುವ ಮುತ್ತಿನ ಚಿಪ್ಪಿನಲ್ಲಿ ಬಿದ್ದ ಸ್ವಾತಿಮಳೆಯ ಹನಿ ಕಾಲಾಂತರದಲ್ಲಿ

ಗಟ್ಟಿಗೊಂಡು ಮುತ್ತು ಆಗುವಂತೆ ಭಕ್ತರಲ್ಲಿರುವ ಈಶ್ವರಾಭಿಮುಖವಾದ ಶ್ರದ್ಧೆಯೇ ಚಿತ್ತಸ್ಥೈರ್ಯರೂಪದಿಂದ ಘನೀಭಾವ ಪಡೆದು ನಿಷ್ಠೆಯೆನಿಸುತ್ತದೆ. ಆದ್ದರಿಂದ ಈ ಸ್ಥಲದಲ್ಲಿನ ಭಕ್ತಿಗೆ 'ನಿಷ್ಠಾಭಕ್ತಿ' ಎಂದು ಹೆಸರು. ಅದರಿಂದ ಸಾಧಕನು ತನ್ನ ಆಚಾರ ವಿಚಾರ ಮತ್ತು ಅನುಷ್ಠಾನಗಳಲ್ಲಿ ದೃಢವ್ರತನಾಗುತ್ತಾನೆ. ಆಗ ಅವನಿಗೆ 'ಶಿವವ್ರತಿ' ಎಂದು ಹೆಸರು.

ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃಸ್ಮೃತಃ ॥

ತನ್ನವೆನಿಸಿದ್ದ ತನು ಮನ ಮತ್ತು ಧನವೆಂಬ ತ್ರಿವಿಧವನ್ನು ದಾಸೋಽಹಂಭಾವದಿಂದ ಗುರು-ಲಿಂಗ-ಜಂಗಮರಿಗೆ ದಾನಮಾಡಿ, ಬ್ರಹ್ಮಪದವಿಯೇ ಮೊದಲಾದುವನ್ನೆಲ್ಲ ಹುಲ್ಲಿಗೆ (ತೃಣ) ಕಡೆಯಾಗಿ ಭಾವಿಸುವ ಭಕ್ತನೇ ಮಾಹೇಶ್ವರನೆನಿಸುತ್ತಾನೆ.

ಪ್ರಸಾದಿಸ್ಥಲ

ಇದು 'ಅನಲಕಾಷ್ಠನ್ಯಾಯ'ಸ್ಥಲ. ಇಲ್ಲಿಯ ಭಕ್ತಿಯು ಚಿತ್ತಶುದ್ಧಿಯಮೂಲಕ 'ಅವಧಾನಭಕ್ತಿ' ಎನಿಸುತ್ತದೆ. ಕಾಷ್ಠ (ಸೌದೆ)ಕ್ಕೆ ಸೋಂಕಿದ ಬೆಂಕಿಯು ಆ ಕಾಷ್ಠವನ್ನು ಸುಟ್ಟು ಸಂಪೂರ್ಣವಾಗಿ ವ್ಯಾಪಿಸಿ ಹೇಗೆ ಕಾಷ್ಠಗುಣಗಳನ್ನು ಕಳೆಯುತ್ತದೆಯೋ ಅದರಂತೆ ಶಿವಪ್ರೇಮ(ಭಕ್ತಿ)ವು ಅವಧಾನವೆನಿಸಿ, ಸಾಧಕನ ತ್ರಿಕರಣಗಳನ್ನು ವ್ಯಾಪಿಸಿ, ಅಲ್ಲಿಯ ಶಬ್ದ-ಸ್ಪರ್ಶ ಮುಂತಾದ ತನ್ಮಾತ್ರಾವಿಷಯಗಳೆನಿಸಿದ ಸ್ರಕ್-ಚಂದನ-ವನಿತಾದಿವಿಷಯದೋಷಗಳನ್ನು ಸುಟ್ಟು ಭಸ್ಮಮಾಡಿ ಅವನ್ನು ಪ್ರಸಾದರೂಪವಾಗಿ ಪರಿವರ್ತಿಸುತ್ತದೆ. ಆಗ ಸಾಧಕನಲ್ಲಿ ಚಿತ್ತಪ್ರಸನ್ನತೆ ಮೂಡುತ್ತದೆ. ಮನಸ್ಸಿನ ಪ್ರಸನ್ನತೆಯೇ ಪ್ರಸಾದ. ಅಂಥ ಭಕ್ತನ ವ್ಯವಹಾರವೆಲ್ಲ ಶಿವರೂಪ. ಅಂಥ ಭಕ್ತನು ''ಪ್ರಸಾದಕಾಯ''ನೆನಿಸುತ್ತಾನೆ.

ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಮ್ ।
ಶಿವಪ್ರಸಾದಂಸ್ವೀಕುರ್ವನ್ ಪ್ರಸಾದೀ ಹ್ಯೇಷ ಕಥ್ಯತೇ ।

ಪ್ರಾಣಲಿಂಗಿಸ್ಥಲ—

ಇಲ್ಲಿಯದು ಅನುಭವಭಕ್ತಿ, ''ಭ್ರಮರಕೀಟನ್ಯಾಯ''ಸ್ಥಲ, ಅವನ ಅನುಭವವು ಭ್ರಮರವನೆ ನೆನೆನೆನೆದು ಕೀಟವು ಭ್ರಮರವೇ ಆಗುವಂತೆ.

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ ।
ಶಿವಭಕ್ತಃ ಶಿವಯೋಗೇನ ಶಿವೋ ಭವತಿ ನಿಶ್ಚಿತಂ ॥

ಎಂಬಂತೆ ಜೀವಭ್ರಮೆಯಳಿದ ಸಾಧಕನು ಶಿವಾನುಭಾವಿಯಾಗುತ್ತಾನೆ. ನಿರಂತರವೂ ಶಿವಚಿಂತನದಲ್ಲಿರುವ ಸಾಧಕನು ಶಿವಧ್ಯಾನ-ಪೂಜಾ-ಜಪಾದಿಗಳಲ್ಲಿ ಶಿವನ ಅನುಭವ ಪಡೆಯುತ್ತಾನೆ.

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥

ಎಂಬುದು ಅವನ ಸ್ಥಿತಿ.

ಶರಣಸ್ಥಲ—''ಸತೀಪತಿನ್ಯಾಯಂ''ಸ್ಥಲವಿದು. ಇಲ್ಲಿಯದು ಆನಂದಭಕ್ತಿ, ಶಿವನ ನಿತ್ಯತ್ವದ ವಿಷಯದಲ್ಲಿ ಉಂಟಾದ ನಿಶ್ಚಿಂತತೆಯಿಂದ ಅವನಿಗೆ ಆನಂದ. ಇಲ್ಲಿಯ ಸಾಧಕ ಶಿವಾನಂದಿ. ಈ ಸ್ಥಿತಿಯನ್ನು ಶ್ರುತಿಯು 'ಮನಸ್ಸಿಗೆ ಪ್ರಿಯೆ ಎನಿಸಿದ ಪ್ರಿಯತಮೆಯೊಡನೆ ಒಡಪೆರೆದವನು ಹೊರಗಿನದೇನನ್ನು ಹೇಗೆ ಅರಿಯನೋ ಅದರಂತೆ ಬ್ರಹ್ಮನೊಡನೆ ಒಳಪೆರೆದವನು ಮತ್ತೇನನ್ನೂ ಅರಿಯನು.'*

ಸತೀ ಚಾಹಂ ಪತಿರ್ಲಿಂಗಂ ಹೃದಿ ಯುಕ್ತಃ ಸ್ವಯಂ ಪ್ರಭುಃ ।
ಪ್ರಾಪಂಚಿಕಸುಖಂ ನಾಸ್ತಿ ಶರಣಸ್ಥಲಮುತ್ತಮಂ ॥

ಐಕ್ಯಸ್ಥಲ

ಇದು 'ಶಿಖಿಕರ್ಪೂರನ್ಯಾಯಂ'ಸ್ಥಲ. ಇಲ್ಲಿಯದು 'ಸಮರಸಭಕ್ತಿ' ಭೂತ ವಸ್ತುಗಳೆನಿಸಿದ ಶಿಖಿ(ಬೆಂಕಿ) ಮತ್ತು ಕರ್ಪೂರಗಳು ಸಂಯೋಗಮಾತ್ರದಿಂದ ಒಂದಾಗಿ ಉರಿದು ಕಡೆಗೆ ಎರಡೂ ಇಲ್ಲವಾಗುವಂತೆ ಶರಣನೆನಿಸಿದ ಸಾಧಕನು ಭಕ್ತಿಯ ಪ್ರಭಾವ ದಿಂದ ಕಿಂಚಿದ್ಜ್ಞತ್ವ-ಕಿಂಚಿತ್ಕರ್ತೃತ್ವಾದಿ ಜೀವಗುಣವಳಿದು ಮುಕ್ತನಾಗಿ ಸರ್ವಜ್ಞತ್ವ-ಸರ್ವಕರ್ತೃತ್ವಗಳು ಮೂಡಿ, ನೀರಿನಲ್ಲಿ ನೀರು, ಬೆಂಕಿಯಲ್ಲಿ ಬೆಂಕಿ ಬೆರೆದಂತೆ 'ನದೀ ಸಮುದ್ರನ್ಯಾಯದಿಂದ' ಸಾಮರಸ್ಯ ಪಡೆಯುತ್ತಾನೆ. ಷಟ್‌ಸ್ಥಲ ಸೋಪಾನದ ತುದಿಯೇ ಮೋಕ್ಷ.

ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।

ಇದೇ ಸಮರಸಮುಕ್ತಿಯ ಸ್ವರೂಪ, ಲಿಂಗಾಂಗಸಾಮರಸ್ಯರೂಪಮುಕ್ತಿ !

o—o

---

*''ಯಥಾ ಪ್ರಿಯಯಾ ಮನಃಪ್ರಿಯಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚ ವೇದ ನಾಂತರಂ, ತಥಾ ಬ್ರಹ್ಮಣಾ ಸಂಪರಿಷ್ವಕ್ತಃ ನ ಕಿಂಚಿದ್ವೇದ ನಾಂತರಂ''

ಅಷ್ಟಾವರಣ

ವಿದ್ವಾನ್ ಬಿ. ರಾಜಶೇಖರಯ್ಯ, ಎಂ.ಎ.

ಪಾಂಚಭೌತಿಕವಾದ ಈ ಶರೀರವು ಅಂತ್ಯದಲ್ಲಿ ಪಂಚಭೂತಗಳಲ್ಲಿಯೇ ಲೀನವಾಗುವುದು ಪ್ರಕೃತಿಯ ನಿಯಮ, ಹುಟ್ಟಿದವರಿಗೆ ಮರಣ ಹೇಗೋ ಮೃತನಿಗೆ ಜನನವೂ ಹಾಗೆಯೇ ನಿಶ್ಚಿತ. ಈ 'ಜನನ-ಮರಣ' ಚಕ್ರದಿಂದ ಬಿಡುಗಡೆ ಹೊಂದಬೇಕಾದರೆ ಆಧ್ಯಾತ್ಮಮಾರ್ಗವೊಂದೇ ಸಾಧನ. ಮೋಕ್ಷವನ್ನು ಹೊಂದಲು ಅನೇಕ ಮಾರ್ಗಗಳುಂಟು. ಅವುಗಳಲ್ಲಿ ವೀರಶೈವಧರ್ಮದ ಮಾರ್ಗವೂ ಒಂದು. 'ಶಕ್ತಿವಿಶಿಷ್ಟಾದ್ವೈತ', 'ವೀರಶೈವಸಿದ್ಧಾಂತ', 'ಷಟ್‌ಸ್ಥಲಸಿದ್ಧಾಂತ', 'ವೀರಶೈವ', 'ವೀರಶೈವಧರ್ಮ'—ಇತ್ಯಾದಿ ಪದಗಳಿಂದ ಇದನ್ನು ವ್ಯವಹರಿಸಲಾಗುತ್ತದೆ. ಹರಪ್ಪಾ—ಮೊಹೆಂಜೋದಾರೋಗಳಲ್ಲಿನ ಅವಶೇಷಗಳಲ್ಲಿ ಈ ಧರ್ಮದ ಕುರುಹುಗಳನ್ನು ಸಂಶೋಧಕರು ಗುರುತಿಸಿರುವುದು ಒಂದು ವೈಶಿಷ್ಟ್ಯ.

ಈ ವೀರಶೈವಸಿದ್ಧಾಂತವು 'ಷಟ್‌ಸ್ಥಲಸಿದ್ಧಾಂತ'ದ ತಳಹದಿಯನ್ನು ಹೊಂದಿರುತ್ತದೆ. ಇದನ್ನು 'ತಾತ್ತ್ವಿಕವಿಭಾಗ' ಎಂದು ಕರೆಯಲಾಗುತ್ತದೆ. ಸಾಮಾಜಿಕ ಕಟ್ಟು-ಕಟ್ಟಳೆಗಳು 'ಅಷ್ಟಾವರಣ' ಗಳನ್ನು ಅವಲಂಬಿಸಿರುವುದರಿಂದ, ಈ ಅಷ್ಟಾವರಣಗಳನ್ನು 'ಧಾರ್ಮಿಕ ವಿಭಾಗ' ಎಂದು ಕರೆಯಲಾಗುತ್ತದೆ. ಅಂತೆಯೇ ಪ್ರತಿಯೊಬ್ಬ ವೀರಶೈವನೂ ನೀತಿವಂತನಾಗಿರಲು 'ಪಂಚಾಚಾರ'ಗಳೂ ಸಹ ಈ ಧರ್ಮದಲ್ಲಿ ವಿಹಿತವಾಗಿರುತ್ತವೆ. ಇವುಗಳನ್ನು 'ನೈತಿಕ ವಿಭಾಗ' ದಲ್ಲಿ ಸೇರಿಸಲಾಗಿದೆ. ಹೀಗೆ ಈ ಮೂರೂ ವಿಭಾಗಗಳ ತ್ರಿವೇಣೀಸಂಗಮವಾಗಿದೆ ಈ ವೀರಶೈವಧರ್ಮ.

ವೀರಶೈವನು ಅಷ್ಟಾವರಣವೇ ಅಂಗವಾಗಿ ಅದರಲ್ಲಿ ನಿಷ್ಠನಾಗಿರಬೇಕು; ಸದಾಚಾರಸಂಪನ್ನನಾಗಿ ಪಂಚಾಚಾರಗಳಲ್ಲಿ ನಿರತನಾಗಿರಬೇಕು; ಷಟ್‌ಸ್ಥಲ ಜ್ಞಾನಸಂಪನ್ನನಾಗಿರಬೇಕು. ನಿತ್ಯದಾಚರಣೆಯಲ್ಲಿ ಅಷ್ಟಾವರಣಗಳು ಪ್ರತಿಯೊಬ್ಬ ವೀರಶೈವನಿಗೂ ಅವಶ್ಯ ಅಂಗವಾಗಿ ಅನಿವಾರ್ಯವಾಗಿರುತ್ತವೆ. ಈ ಅಷ್ಟಾವರಣಗಳ ಒಂದು ಕಿರು ಪರಿಚಯ ಈ ಲೇಖನವಾಗಿದೆ.

ಅಷ್ಟಾವರಣಗಳು :—

ಮನೆಯ ರಕ್ಷಣೆಗೆ ಗೋಡೆ, ಹೊಲದ ರಕ್ಷಣೆಗೆ ಬೇಲಿ—ಇತ್ಯಾದಿ ಇರುವಂತೆ, 'ವೀರಶೈವ'ನ ರಕ್ಷಣೆಗಾಗಿ ಈ ಅಷ್ಟಾವರಣಗಳಿರುತ್ತವೆ. ಅಷ್ಟ+ಆವರಣ; ಆವರಣ

ಪದಕ್ಕೆ—ಮುಚ್ಚುವುದು, ಮುಸುಕುಹಾಕುವುದು, ಪ್ರಾಕಾರ. ಸುತ್ತುಗೋಡೆ, ಹೊದಿಕೆ, ತೆರೆ, ಸುತ್ತುಗಟ್ಟುವುದು, ಗುರಾಣಿ, ಹರಿಗೆ—ಇತ್ಯಾದಿ ಅರ್ಥಗಳುಂಟು. ಆದರೆ, 'ಅಂಗನ ರಕ್ಷಣೆಗಾಗಿ ಇರುವ ಎಂಟು ಪ್ರಮುಖ ಕೋಟೆಗಳು' ಎಂಬ ಅಭಿಪ್ರಾಯವನ್ನು ಈ ಪದಕ್ಕೆ ಅನ್ವಯಿಸುವುದೇ ಅತ್ಯಂತ ಸಮಂಚಿತವಾಗಿದೆ. ಇವುಗಳನ್ನು (1) ಪೂಜ್ಯವಸ್ತುಗಳು, (2) ಪೂಜಾಸಾಮಗ್ರಿಗಳು ಮತ್ತು (3) ಫಲಗಳು—ಎಂದು ಮೂರು ಭಾಗವಾಗಿ ವಿಂಗಡಿಸಲಾಗಿದೆ. (೧) ಗುರು-ಲಿಂಗ-ಜಂಗಮ ಇವು ಪೂಜ್ಯವಸ್ತುಗಳು (೨) ವಿಭೂತಿ-ರುದ್ರಾಕ್ಷ-ಮಂತ್ರ ಇವು ಈ ಪೂಜ್ಯವಸ್ತುಗಳನ್ನು ಪೂಜಿಸುವ ಸಲುವಾಗಿ ಇರುವ ಸಾಧನಗಳು ಅಥವಾ ಸಾಮಗ್ರಿಗಳು ಮತ್ತು (೩) ಪಾದೋದಕ-ಪ್ರಸಾದ--ಇವು, ಈ ಪೂಜ್ಯವಸ್ತುಗಳನ್ನು, ಈ ಪೂಜಾಸಾಮಗ್ರಿಗಳಿಂದ ಪೂಜಿಸಿ ಪಡೆಯುವ ಫಲ.

ವೀರಶೈವರು ಸದಾಕಾಲವೂ, ತನ್ನ ಶರೀರದ ಮೇಲೆ, ಶ್ರೀ ಗುರುದತ್ತವಾದ ಇಷ್ಟಲಿಂಗವನ್ನು ಧರಿಸಿಕೊಂಡಿರಬೇಕು; ಶ್ರೀ ಗುರುವು ಬೋಧಿಸಿದ ಮಾರ್ಗವನ್ನನುಸರಿಸಿ ಈ ಇಷ್ಟಲಿಂಗವನ್ನು ಪೂಜಿಸಬೇಕು; ಆಗಾಗ್ಗೆ ಗುರು-ಜಂಗಮರನ್ನು ಕರೆತಂದು, ಅವರ ಪೂಜೆಗೈದು, ಅವರಿಂದ ಪಾದೋದಕ—ಪ್ರಸಾದಗಳನ್ನು ಸ್ವೀಕರಿಸಬೇಕು. ಇಂತಹ ಪೂಜಾಸಂದರ್ಭಗಳಲ್ಲಿ, ಹಾಗೂ ನಿತ್ಯಪೂಜಾಕಾಲದಲ್ಲಿ, ತಾನು ವಿಭೂತಿ—ರುದ್ರಾಕ್ಷಗಳನ್ನು ಧರಿಸಿದ್ದು, ಗುರುವು ಬೋಧಿಸಿರುವ ಪಂಚಾಕ್ಷರ ಮಹಾಮಂತ್ರವನ್ನು ಜಪಿಸುತ್ತಿರಬೇಕು. ಇದು ಪ್ರತಿಯೊಬ್ಬ ವೀರಶೈವನ ದೈನಂದಿನ ಸಮುದಾಚಾರ ಹಾಗೂ ಧಾರ್ಮಿಕ ಆಚರಣೆಯಾಗಿರುತ್ತದೆ. ಈ ಧಾರ್ಮಿಕ ಆಚರಣೆಗಾಗಿಯೇ ವೀರಶೈವಧರ್ಮದಲ್ಲಿ ಈ ಅಷ್ಟಾವರಣಗಳನ್ನು ಅಳವಡಿಸಲಾಗಿದೆ.

'ನಾರುದ್ರೋ ರುದ್ರಮರ್ಚಯೇತ್', 'ರುದ್ರೋ ಭೂತ್ವಾ ರುದ್ರಂ ಯಜೇತ್'—ರುದ್ರನೇ ಆಗಿ ರುದ್ರನನ್ನು ಪೂಜಿಸಬೇಕು ; ಅಂದರೆ, ಶಿವನ ಮೈಬೆಳಗೆನಿಸಿರುವ ಭಸ್ಮವನ್ನು ಧರಿಸಿಕೊಂಡು, 'ಸರ್ವಂ ಶಿವಮಯಂ' ಎಲ್ಲವೂ ಶಿವಸ್ವರೂಪವೇ ಹೌದು-ಎಂಬ ಭಾವನೆಯನ್ನು ಮೂಡಿಸುವ ರುದ್ರಾಕ್ಷವನ್ನು ಧರಿಸಿಕೊಂಡು, ಶಿವಸ್ತೋತ್ರವಾದ ಪಂಚಾಕ್ಷರೀ ಮಹಾಮಂತ್ರವನ್ನು ಜಪಿಸುತ್ತಾ, ತ್ರಿಮೂರ್ತಿಗಳೆನಿಸಿದ ಗುರು-ಲಿಂಗ-ಜಂಗಮದಲ್ಲಿ ಭೇದವೆಣಿಸದೆ, ಅವರನ್ನು ಶುದ್ಧ-ಭಕ್ತಿಗಳಿಂದ ಪೂಜಿಸುತ್ತಾ, ಅವರು ನೀಡುವ ಪಾದೋದಕ-ಪ್ರಸಾದಗಳನ್ನು ಸೇವಿಸುತ್ತಾ, ಸದಾ 'ಶಿವಾನಂದಿ'ಯಾಗಿರಬೇಕು. ಆದ್ದರಿಂದಲೇ ವೀರಶೈವರನ್ನು 'ಲಿಂಗಭೋಗೋಪಭೋಗಿ'—ಲಿಂಗಾರ್ಪಿತವಾದುದನ್ನು ಮಾತ್ರ ಸೇವಿಸತಕ್ಕವರು—ಎಂದು ಕರೆಯಲಾಗುತ್ತದೆ. ಈ ವಿವಿಧ ನಿತ್ಯೋಪಾಸನೆಯು ವೀರಶೈವನನ್ನು ಶಿವಾಭಿನ್ನನನ್ನಾಗಿಸುತ್ತದೆ. ಈ ಶಿವಾಭಿನ್ನತೆ ಅಥವಾ ಶಿವಸಾಮರಸ್ಯವೇ ವೀರಶೈವರು ಪಡೆಯಬೇಕಾಗಿರುವ ಮೋಕ್ಷ, ಇದನ್ನೇ 'ಲಿಂಗಾಂಗ ಸಾಮರಸ್ಯ', 'ಶಿವಜೀವೈಕ್ಯ' ಇತ್ಯಾದಿಯಾಗಿ ಕರೆಯಲಾಗುತ್ತದೆ. ಅಂದರೆ,

ತನ್ನ ಈ ಮುಖ್ಯವಾದ ಗುರಿಯೆನಿಸಿದ ಈ ಮೋಕ್ಷಪ್ರಾಪ್ತಿಗಾಗಿಯೇ, ಈ ಅಷ್ಟಾವರಣಗಳು ವಿಹಿತವಾಗಿರುವುವು.

ಈ ಅಷ್ಟಾವರಣಗಳನ್ನು ಬಹಿರಷ್ಟಾವರಣ ಮತ್ತು ಅಂತರಷ್ಟಾವರಣ ಎಂದು ಎರಡು ವಿಧವಾಗಿ ವಿಂಗಡಿಸಲಾಗಿದೆ. ಬಹಿರಷ್ಟಾವರಣಗಳು ಧಾರ್ಮಿಕ ಅಥವಾ ಸಾಮಾಜಿಕವೆನಿಸಿದರೆ, ಅಂತರಷ್ಟಾವರಣಗಳು ತಾತ್ತ್ವಿಕವೆನಿಸುತ್ತವೆ. ಬಹಿರಷ್ಟಾವರಣಗಳು ಕ್ರಿಯೊಪ್ರಧಾನವುಳ್ಳವುಗಳಾಗಿರುವುದರಿಂದ ಇವುಗಳನ್ನು ಕ್ರಿಯಾಷ್ಟಾವರಣ ಅಥವಾ ಸಾಮಾಜಿಕಾಷ್ಟಾವರಣವೆಂದೂ ಕರೆಯಲಾಗುತ್ತದೆ, ಅಂತರಷ್ಟಾವರಣಗಳಲ್ಲಿ ಜ್ಞಾನ ಅಥವಾ ಸಂಬಂಧ ಪ್ರಧಾನವಾಗಿರುವುದರಿಂದ ಇವುಗಳನ್ನು ಜ್ಞಾನಾಷ್ಟಾವರಣ ಅಥವಾ ಸಂಬಂಧಾಷ್ಟಾವರಣ ಎಂದೂ ಕರೆಯಲಾಗುತ್ತದೆ, **ಕ್ರಿಯಾಪ್ರಭಾವ ಅಷ್ಟಾವರಣಗಳ ಆಚರಣೆಯ ಮುಖಾಂತರ ಅಂತರಷ್ಟಾವರಣಗಳ ಸ್ವರೂಪವನ್ನು ವೀರಶೈವರು ಪಡೆಯಬೇಕಾಗಿದೆ.**

ಬಹಿರಷ್ಟಾವರಣಗಳಲ್ಲಿ ಅರ್ಚನಾದಿಕ್ರಿಯೆಯು ಸಹಜವಾಗಿಯೇ ನಡೆಯುವುದರಿಂದ ಇವುಗಳಿಗೆ ಕ್ರಿಯಾಷ್ಟಾವರಣವೆಂಬ ಹೆಸರು ಅನ್ವರ್ಥವಾಗಿದೆ. ಅಂತೆಯೇ ಇವುಗಳ ಸಂಬಂಧವನ್ನು ಭಾವಿಸಿ ಆಚರಿಸುವುದರಿಂದ ಅಂತರಷ್ಟಾವರಣಗಳಿಗೆ ಜ್ಞಾನಾಷ್ಟಾವರಣಗಳೆಂಬ ಹೆಸರು ಅನ್ವರ್ಥವಾಗಿದೆ.

ಪ್ರತ್ಯಕ್ಷವಾಗಿ ನಾವು ಆಚರಿಸುವ ಪೂಜಾದಿಗಳು ಗುರು–ಲಿಂಗ-ಜಂಗಮರಲ್ಲಿ ಸಹಜವಾಗಿಯೇ ನಡೆಯುವುದರಿಂದ ಇವು ಮೂರೂ ಸಹ ಬಹಿರಷ್ಟಾವರಣದ ಪೂಜ್ಯ ವಸ್ತುಗಳೆನಿಸಿದರೆ, 'ಕ್ರಿಯಾಮಯವಾದ ಜ್ಞಾನವೇ ಅಂತರಂಗದ ಗುರು ; ಕ್ರಿಯೆ ಮತ್ತು ಜ್ಞಾನಗಳ ಅನುಭವವೇ ಅಂತರಂಗದ ಲಿಂಗ ಮತ್ತು ಏತದನುಭವಜನ್ಯವಾದ ಆನಂದವೇ ತನ್ನ ಅಂತರಂಗದ ಜಂಗಮ'—ಈ ಮೂರೂ ಅಂತರಂಗದ ಗುರು-ಲಿಂಗ ಜಂಗಮಂಗಳು.

ಉಪಾಸನೆಯ ಸಾಧನಗಳಾದ ವಿಭೂತಿ-ರುದ್ರಾಕ್ಷ–ಮಂತ್ರಗಳು ಸಹಜವಾದ ಸಾಧನತ್ರಯವಾದರೆ, 'ಶಿವನ ತೇಜಃಪ್ರಾಪ್ತಿಯೇ ಅಂತರಂಗದ ವಿಭೂತಿ ; ಸರ್ವಂ ಶಿವಮಯಂ–ಎಂಬ ಜ್ಞಾನವೇ ಅಂತರಂಗದ ರುದ್ರಾಕ್ಷ ; ಮತ್ತು ಶಿವಮಂತ್ರಜಪದಿಂದ ಶಿವಸ್ವರೂಪಪ್ರಾಪ್ತಿಯೇ ಅಂತರಂಗದ ಮಂತ್ರ'—ಇವು ಮೂರೂ ಅಂತರಂಗದ ವಿಭೂತಿ-ರುದ್ರಾಕ್ಷ–ಮಂತ್ರಗಳು.

ಗುರು ಲಿಂಗ ಜಂಗಮರ ಸಹಜ ಸಂಬಂಧದಿಂದ ಪಡೆಯುವ ಪಾದೋದಕ ಪ್ರಸಾದಗಳು ಬಹಿರಷ್ಟಾವರಣದ ಪಾದೋದಕ ಪ್ರಸಾದಗಳಾದರೆ, 'ಶಿವನ ಕರುಣಾಮಯವಾದ ಚಿದ್ರಸಪ್ರಾಪ್ತಿಯೇ ಅಂತರಂಗದ ಪಾದೋದಕ ಮತ್ತು ಶಿವನ ಪ್ರಸನ್ನತೆಯ ಪ್ರಾಪ್ತಿಯೇ ಅಂತರಂಗದ ಪ್ರಸಾದ'—ಇವು ಅಂತರಷ್ಟಾವರಣದ ಪಾದೋದಕ ಪ್ರಸಾದಗಳು.

ಸಮಾಜದಲ್ಲಿ ಗುರು-ಜಂಗಮರ ಕರ್ತವ್ಯ ಬಹಳ ಪ್ರಮುಖವಾದುದು. ಗುರುವು ದೀಕ್ಷಾದಿಕಾರ್ಯಗಳನ್ನು ನೀಡಿದರೆ, ಜಂಗಮರು ಶಿಷ್ಯನ ಸಾಧನೆಯನ್ನು ಪರೀಕ್ಷಿಸಿ, ತಪ್ಪುಗಳನ್ನು ತಿದ್ದಿ, ಪರಿಪೂರ್ಣಮಾರ್ಗದಲ್ಲಿ ಶಿಷ್ಯನು ನಡೆಯುವಂತೆ ನೋಡಿಕೊಳ್ಳಬೇಕು. ಸಮಾಜದ ಆಗು ಹೋಗುಗಳೆಲ್ಲ ಇವರಿಬ್ಬರ ಜವಾಬ್ದಾರಿಯಲ್ಲಿಯೋ ನಡೆಯುವುದರಿಂದ ಇವರು ವೀರಶೈವಸಮಾಜದ ಧರ್ಮಸಂರಕ್ಷಕರು ಮತ್ತು ಮುಖ್ಯಧರ್ಮಾಧಿಕಾರಿಗಳು. ಗುರುವು ಧರ್ಮಬೋಧಕನಾದರೆ, ಜಂಗಮ ಧರ್ಮ ಪರೀಕ್ಷಕ. ಶಿಷ್ಯರನ್ನು ಧರ್ಮಾನುಯಾಯಿಗಳನ್ನಾಗಿಸುವುದು ಗುರುವಿನ ಹೊಣೆಗಾರಿಕೆಯಾದರೆ, ಧರ್ಮವು ನ್ಯಾಯಮಾರ್ಗದಲ್ಲಿ ನಡೆಯುತ್ತಿದೆಯೋ ಇಲ್ಲವೇ ಎಂಬುದನ್ನು ನಿರ್ಧರಿಸಿ, ಧರ್ಮರಕ್ಷಣೆಗೈಯುವುದು ಜಂಗಮರ ಹೊಣೆಗಾರಿಕೆ. ಹೀಗೆ ಇವರಿಬ್ಬರ ಸ್ಥಾನವು ಸಮಾಜದಲ್ಲಿ ಬಹಳ ಪ್ರಾಮುಖ್ಯ ಪಡೆದಿದೆ.

ಲಿಂಗವು ಸದಾಕಾಲವೂ ಅಂಗನ ಅಂಗದ ಮೇಲೆ ಕಂಗೊಳಿಸುತ್ತಿದ್ದು, ಸದಾಕಾಲ ಪೂಜೆಗೊಳ್ಳುತ್ತಾ ಅಂಗನ ಇಷ್ಟಾರ್ಥಗಳನ್ನು ನೆರವೇರಿಸಿ, ಅನಿಷ್ಟಗಳನ್ನು ಪರಿಹರಿಸಿ, 'ಇಷ್ಟಲಿಂಗ'ವೆಂಬ ತನ್ನ ಹೆಸರನ್ನು ಅನ್ವರ್ಥವಾಗಿಸಿಕೊಳ್ಳಬೇಕು.

ವೀರಶೈವಚಿಂತಾಮಣಿಯಲ್ಲಿ ಈ ಅಷ್ಟಾವರಣಗಳ ಬಗ್ಗೆ ಹೀಗೆ ಹೇಳಲಾಗಿದೆ—'ಆ ಮಹಾಲಿಂಗದಲ್ಲಿ ಸತ್ತು, ಚಿತ್ತು, ಆನಂದ, ಪರಿಪೂರ್ಣ, ನಿತ್ಯವೆಂಬ ಪಂಚ ಲಕ್ಷಣದಲ್ಲಿ ಸತ್ತು ಎಂಬುದೇ ಗುರು, ಚಿತ್ತು ಎಂಬುದೇ ಲಿಂಗ, ಆನಂದವೆಂಬುದೇ ಜಂಗಮ, ಪರಿಪೂರ್ಣವೆಂಬುದೇ ಪಾದೋದಕ, ನಿತ್ಯವೆಂಬುದೇ ಪ್ರಸಾದ. ಅತನ ಚಿದಗ್ನಿಯುದೆಸೆಯಿಂದ ಪುಟ್ಟಿತ್ತು ವಿಭೂತಿ, ತ್ರಿಣೇತ್ರದತ್ತಣದಿಂದೆ ರುದ್ರಾಕ್ಷಗಳು ಪುಟ್ಟಿದವು. ಆ ಪರಶಿವಲಿಂಗದ ಹೃತ್ಪ್ರಾಣದತ್ತಣಿಂದೆ ಜನಿಸಿತ್ತು ಪಂಚಾಕ್ಷರಿ ಮಂತ್ರ' (ಪುಟ ೯)

ನಿತ್ಯದಾಚರಣೆಯಲ್ಲಿ ಪ್ರತಿಯೊಬ್ಬರಿಗೂ ಗುರು-ಜಂಗಮರು ದೊರಕುವುದು ಕಷ್ಟ. ಅಥವಾ ಕಾಲದ ಪರಿಸ್ಥಿತಿಯಿಂದಾಗಿ ಸೇವೆಗೈಯುವುದು ಕೆಲವರಿಗೆ ಅಸಾಧ್ಯ, ಆದ್ದರಿಂದ ಅಂತರಷ್ಟಾವರಣಗಳ ಆವಶ್ಯಕತೆಯಿರುತ್ತದೆ. ಇದನ್ನು ಸಂಬಂಧಾಚರಣೆಯ ಮುಖಾಂತರ ಅಳವಡಿಸಿಕೊಂಡು ನಿತ್ಯಕ್ರಿಯೆಯನ್ನಾಚರಿಸಬಹುದು. ಆದರೆ, ತನ್ನ ಇಷ್ಟಲಿಂಗದಲ್ಲಿಯೇ ಗುರು ಮತ್ತು ಜಂಗಮರ ಸಂಬಂಧವನ್ನು ಭಾವಿಸಿಕೊಂಡು ಪೂಜಾದಿಗಳನ್ನು ಆಚರಿಸಬಹುದು.

ತನ್ನ ಪರಿಪಕ್ವಾಂತಃಕರಣದಿಂದ ಕೂಡಿದ ಸದಾಚಾರದಿಂದ ವೀರಶೈವನಿಗೆ ಸದ್ಗುರುವು ದೊರೆಯುತ್ತಾನೆ. ಈ ಗುರುವಿನಿಂದ ಲಿಂಗವು ದೀಕ್ಷಾಮುಖದಿಂದ ಪ್ರಾಪ್ತವಾಗುತ್ತದೆ. ಈ ಲಿಂಗದಿಂದ ಲಿಂಗಮುಖನೆನಿಸಿರುವ ಜಂಗಮನ ಪ್ರಾಪ್ತಿ ; ಈ ಜಂಗಮನಿಂದ ಪಾದೋದಕ ಪ್ರಸಾದಗಳ ಪ್ರಾಪ್ತಿ ; ಇವುಗಳಿಂದ ತೃಪ್ತಿ ಸ್ವರ್ಗ

ಸ್ವರೂಪವಾದ ಮಹಾಲಿಂಗಸ್ವರೂಪದ ಪ್ರಾಪ್ತಿ ಸಂಭವಿಸುತ್ತದೆಂದು ಸೂಕ್ಷ್ಮಾಗಮವು ವಿವರಿಸುತ್ತದೆ.

ಈಗ ಕ್ರಮವಾಗಿ ಈ ಅಷ್ಟಾವರಣಗಳ ಪ್ರತ್ಯೇಕ ಸ್ವರೂಪಾದಿಗಳನ್ನು ಪರಾಮರ್ಶಿಸೋಣ.

ಗುರು

ಗುರುವಿನ ಮಹಿಮೆ ಅವರ್ಣನೀಯಂ. ಆ ಪದವೇ ಹೇಳುವಂತೆ. ಶ್ರೀಗುರುವು ಶಿಷ್ಯನ ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ಒಂದು ಉತ್ತಮ ಜ್ಞಾನಜ್ಯೋತಿ. ಗುರುವು ತ್ರಿಮೂರ್ತಿಗಳ ಸ್ವರೂಪವೆಂದು ಹೇಳಲಾಗುತ್ತದೆ, ಶಿವಪಥವರಿವೊಡೆ ಗುರುಪಥ ಅತ್ಯವಶ್ಯವೆಂದು ಅಣ್ಣನವರು ಹೇಳಿರುತ್ತಾರೆ.

'ಗುರು' ಎಂಬ ಪದದಲ್ಲಿ, 'ಗು' ಕಾರವು ಅಂಧಕಾರವನ್ನೂ, 'ರು'ಕಾರವು ಆ ಅಂಧಕಾರವನ್ನು ಹೋಗಲಾಡಿಸುವ ಬೆಳಕನ್ನೂ ಬೋಧಿಸುತ್ತವೆ. ಅಂದರೆ, ಅಜ್ಞಾನಾಂಧಕಾರವನ್ನು ಹೋಗಲಾಡಿಸುವವನೇ ಶ್ರೀಗುರುವು. ಬೆಂಕಿಯ ಸಂಪರ್ಕದಿಂದ ಚಿನ್ನವು ತನ್ನ ಮಲವನ್ನು ನಾಶಮಾಡಿಕೊಂಡು ಪರಿಶುದ್ಧವಾಗುವಂತೆ, ಶಿಷ್ಯನು ತನ್ನ ಗುರುವಿನ ಸಂಪರ್ಕದಿಂದ ತನ್ನೆಲ್ಲ ಮಲತ್ರಯಗಳನ್ನೂ ಹೋಗಲಾಡಿಸಿಕೊಂಡು ಪರಿಶುದ್ಧನಾಗುತ್ತಾನೆ.

ಉರಿಯು ಕರ್ಪೂರವನ್ನು ಸೋಂಕಿದರೆ, ಕರ್ಪೂರವೂ ಸಹ ಉರಿಯೇ ಆಗುತ್ತದೆ. ಅಂತೆಯೇ ಶಿಷ್ಯನು ಗುರುಸಂಪರ್ಕದಿಂದ ಗುರುವೇ ಆಗುತ್ತಾನೆ. ಅಂತರಂಗದಲ್ಲಿ ಅಡಗಿರುವ ಲಿಂಗತತ್ತ್ವ ಅಥವಾ ಪರತತ್ತ್ವವನ್ನು ವ್ಯಕ್ತಪಡಿಸಿ, ಅದನ್ನು ಇಷ್ಟಲಿಂಗದಲ್ಲಿ ಅಳವಡಿಸಿ, ಅಂಗನನ್ನು ಸರ್ವಾಂಗಲಿಂಗಿಯನ್ನಾಗಿಸುವವನೆಂದರೆ ಶ್ರೀಗುರುವೇ ಹೌದು. ಭವಿತನವನ್ನು ಹೋಗಲಾಡಿಸಿ, ಭಕ್ತತನವನ್ನು ನೀಡುವವನು, ಪ್ರಕೃತಿಕಾಯವನ್ನು ಪ್ರಸಾದಕಾಯವನ್ನಾಗಿಸುವವನು, ವಾಯುಪ್ರಾಣಿಯನ್ನು ಲಿಂಗಪ್ರಾಣಿಯಾಗಿಸುವವನು, ಅಂಗದ ಇಂದ್ರಿಯಗಳನ್ನು ಲಿಂಗದ ಇಂದ್ರಿಯಗಳನ್ನಾಗಿ ಮಾಡುವವನು, ಅಂಗಗಳ ವಿಷಯಗಳನ್ನು ಲಿಂಗವಿಷಯವನ್ನಾಗಿಸುವವನು—ಶ್ರೀಗುರುವಲ್ಲದೆ ಮತ್ತಾರೂ ಅಲ್ಲ. ಆದ್ದರಿಂದ ಶ್ರೀಗುರುವೇ ತಾಯಿ, ತಂದೆ, ಬಂಧು ಬಳಗ ಇತ್ಯಾದಿ.

ಗುರುವು ದೊರೆಯದೆ ಲಿಂಗವು ದೊರೆಯದು ; ಲಿಂಗವು ದೊರೆಯದೆ ಜಂಗಮವು ದೊರೆಯದು, ಈ ತ್ರಿವಿಧವೂ ಇಲ್ಲವಾದಲ್ಲಿ ಪಾದೋದಕ ಪ್ರಸಾದಗಳೂ ಅಲಭ್ಯಗಳು. ಅಂದಮೇಲೆ ಮುಕ್ತಿಯು ಕೇವಲ ಕನಸಿನ ಗಂಟು ; ಗುರುವಿದ್ದರೆ ಈ ಎಲ್ಲವೂ ಉಂಟು.

ಇಂತಹ ಗುರುವನ್ನು ದೀಕ್ಷಾಗುರು; ಶಿಕ್ಷಾಗುರು ಮತ್ತು ಜ್ಞಾನಗುರುವೆಂದು ಮೂರು ವಿಧವಾಗಿ ಹೇಳಲಾಗುತ್ತದೆ, ಒಬ್ಬನೇ ಗುರುವು ತಾನು ಮಾಡುವ ಕಾರ್ಯಭೇದದಿಂದ ಈ ಭೇದವೇ ಹೊರತು, ಇದು ವಾಸ್ತವಿಕ ಭೇದವಲ್ಲ.

ಶಿಷ್ಯನ ಸ್ಥೂಲಶರೀರದಲ್ಲಿ ಇಷ್ಟಲಿಂಗವನ್ನು ಕ್ರಿಯಾದೀಕ್ಷೆಯ ಮುಖಾಂತರ ನೀಡಿ, ಆತನ ಕಾರ್ಮಿಕಮಲವನ್ನು ಹೋಗಲಾಡಿಸುವವನು ದೀಕ್ಷಾಗುರುವೆನಿಸುವನು. ಈ ದೀಕ್ಷಾಗುರುವೇ, ಶಿಷ್ಯನಿಗೆ ಶಿವತತ್ತ್ವ, ಶಿವಮಂತ್ರಾದಿಗಳನ್ನು ಉಪದೇಶಿಸಿ, ಸದಾಚಾರ ಸದ್ಬೋಧೆಗಳನ್ನು ನೀಡುವವನಾಗಿ ಶಿಕ್ಷಾಗುರುವೆನಿಸುವನು. ಶಿವಜ್ಞಾನದ ಪರಿಪೂರ್ಣತೆಯನ್ನು ದೊರಕಿಸಿಕೊಟ್ಟು, ಅವನ ಎಲ್ಲ ಸಂದೇಹಗಳನ್ನು ನಿವಾರಣೆ ಮಾಡಿಸಿ, ಲಿಂಗಾಂಗಸಾಮರಸ್ಯರೂಪಮೋಕ್ಷಕ್ಕೆ ಅರ್ಹನನ್ನಾಗಿಸುವ ಶ್ರೀಗುರುವು ಜ್ಞಾನಗುರುವೆನಿಸುವನು.

ಗುರುವಿಗೆ 'ಆಚಾರ್ಯ' ಎಂಬ ಪರ್ಯಾಯನಾಮವೂ ಉಂಟು.

ಆಚಿನೋತಿ ಹಿ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ।
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ॥

ಎಂದು ಸಿದ್ಧಾಂತಶಿಖಾಮಣಿಯು ಆಚಾರ್ಯಲಕ್ಷಣವನ್ನು ನಿರೂಪಿಸುತ್ತಿದೆ. ಅಂದರೆ ಶಾಸ್ತ್ರಗಳ ಮಾರ್ಮಿಕ ಅರ್ಥವನ್ನೂ ಅರಿತವನಾಗಿರಬೇಕು. ಆ ಆಚಾರಗಳನ್ನು ತಾನು ಮೊದಲು ಆಚರಣೆಯಲ್ಲಿ ತಂದು, ಆ ಬಳಿಕ ಶಿಷ್ಯನಿಗೆ ಉಪದೇಶಿಸಿ, ಅವನನ್ನೂ ಆ ಮಾರ್ಗದಲ್ಲಿ ಕರೆದೊಯ್ಯುವವನು ಆಚಾರ್ಯ.

ಒಟ್ಟಿನಲ್ಲಿ ಶ್ರೀಗುರುವು ಆತ್ಮಶಕ್ತಿಸಂಪನ್ನ, ಸದಾಚಾರನಿಷ್ಠ, ವಾಕ್ಸಿದ್ಧಿಸಂಪನ್ನ, ನಿಗ್ರಹಾನುಗ್ರಹಸಮರ್ಥ, ಶಿವತತ್ತ್ವಪರಿಜ್ಞಾನವುಳ್ಳವ, ಶಿವಾನುಭಾವಿ, ಅಂತೆಯೇ ಸಾಕ್ಷಾತ್ ಶಿವಸ್ವರೂಪಿ—ಇತ್ಯಾದಿ.

ಇಂತಹ ಗುರುವು ಶಿಷ್ಯನ ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗವನ್ನು ಯೋಜಿಸಿ, ಅವನ ಮಾಯಾಮಲವನ್ನು ದೂರಮಾಡುವನು. ಅಂದರೆ, ಮಂತ್ರದೀಕ್ಷೆಯ ಮುಖಾಂತರ ಪರಮಪಂಚಾಕ್ಷರ ಮಹಾಮಂತ್ರದ ಉಪದೇಶರೂಪವಾದ ಪ್ರಾಣಲಿಂಗವನ್ನು ನೀಡಿ, ಶಿಷ್ಯನನ್ನು ಮಂತ್ರಕಾಯನನ್ನಾಗಿಸಿ ಪ್ರಾಣಲಿಂಗಿಯನ್ನಾಗಿಸುವನು. ಅಂತೆಯೇ ಕಾರಣಶರೀರದಲ್ಲಿ 'ಶಿವೋಽಹಂ' ಎಂಬ ಭಾವನೆಯನ್ನು ಮೂಡಿಸಿ, ಭಾವಲಿಂಗವನ್ನು ವೇಧಾದೀಕ್ಷೆಯ ಮುಖಾಂತರ ನೀಡಿ, 'ಶಿವಸಾಮರಸ್ಯ' ರೂಪಮೋಕ್ಷಕ್ಕೆ ಅವನನ್ನು ಅರ್ಹನನ್ನಾಗಿಸುತ್ತಾನೆ. ಅಂತೆಯೇ ಶ್ರೀಗುರುವಿನ ಅವಶ್ಯಕತೆ ಸಮಾಜದಲ್ಲಿ ಬಹಳವಾಗಿದೆ.

ಲಿಂಗ

'ಲಿಂಗ' ಪದದಲ್ಲಿ 'ಲಿ' ಅನುಸ್ವಾರ (೦) ಮತ್ತು 'ಗ' ಎಂಬ ಮೂರು ವರ್ಣಗಳುಂಟು. ಇವುಗಳು ಕ್ರಮವಾಗಿ ಲಯ, ಸ್ಥಿತಿ ಮತ್ತು ಸೃಷ್ಟಿಗಳನ್ನು ಬೋಧಿಸುತ್ತವೆ. (ಸೂಕ್ಷ್ಮಾಗಮ–ಪಟಲ–೬). ಅಂದರೆ, ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಯಾವುದು ಕಾರಣವೋ ಅದೇ ಲಿಂಗವು. ತನ್ನಲ್ಲಿ ಸೂಕ್ಷ್ಮರೀತಿಯಲ್ಲಿ ಅಡಗಿದ್ದ ಜೀವಿಗಳೆಲ್ಲವೂ ಆ ಪರಾತ್ಪರ ವಸ್ತುವಿನಿಂದ ಹೊರಬಂದು ಭವಚಕ್ರದಲ್ಲಿ ಸುತ್ತಿ, ಕಡೆಗೆ ಆ

ಪರಬ್ರಹ್ಮದಲ್ಲಿಯೇ ಸೇರುತ್ತವೆ. ಈ ವಿವಿಧ ಜೀವಿಗಳ ಚಕ್ರಕ್ಕೆ ಮುಖ್ಯ ಕಾರಣ ವಾದುದೇ 'ಲಿಂಗ', ಇದು ವಿಶ್ವದ ಪ್ರತೀಕವೇ ಆಗಿರುತ್ತದೆ.

ದಿವ್ಯಲಿಂಗದ ಸ್ತುತಿಯೊಂದು ಹೀಗಿರುತ್ತದೆ—

ಓಂ ಪೀಠಂ ಸ್ಯಾದ್ಧರಿತ್ರೀ ಜಲಧರಕಲಶಂ ಲಿಂಗಮಾಕಾಶಮೂರ್ತಿಃ
ನಕ್ಷತ್ರಂ ಪುಷ್ಪಮಾಲ್ಯಂ ಗ್ರಹಗಣಕುಸುಮಂ ನೇತ್ರಚಂದ್ರಾರ್ಕವಹ್ನಿಃ।
ಕುಕ್ಷೌ ಸಪ್ತಸಮುದ್ರಂ ಭುಜಗಿರಿಶಿಖರಂ ಸಪ್ತಪಾತಾಳಪಾದಂ।
ವೇದಾ ವಕ್ತ್ರಂ ದಶದಿಶವಸನಂ ದಿವ್ಯಲಿಂಗಂ ನಮಾಮಿ॥ (ವೀರಶೈವ ಚಿಂತಾಮಣಿ ಪುಟ ೩೬)

ಪೀಠವೇ ಶಕ್ತಿ ; ಲಿಂಗವೇ ಶಿವ ; ಶಿವ-ಶಕ್ತಿಯರ ಸಮಾಯೋಗಾತ್ಮಕ ವಾದುದೇ ಲಿಂಗ—ಎಂದು ಸಿದ್ಧಾಂತಶಿಖಾಮಣಿ ಹೇಳುತ್ತದೆ.

'ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ।
ಅಗ್ರತಃ ಶಿವರೂಪಾಯ ಶಿವಲಿಂಗಾಯ ತೇ ನಮಃ ॥' ಎಂಬ ಪ್ರಸಿದ್ಧ ಶ್ಲೋಕವು, ಲಿಂಗವು ತ್ರಿಮೂರ್ತ್ಯಾತ್ಮಕವಾದುದೆಂಬುದನ್ನು ತಿಳಿಸಿಕೊಡುತ್ತದೆ.

ಈ ಲಿಂಗವು ಅಂಗನ ಸ್ಥೂಲಶರೀರದಲ್ಲಿ ಇಷ್ಟಲಿಂಗರೂಪವಾಗಿಯೂ, ಸೂಕ್ಷ್ಮ ಶರೀರದಲ್ಲಿ ಮಂತ್ರಜಪರೂಪವಾದ ಪ್ರಾಣಲಿಂಗರೂಪವಾಗಿಯೂ ಮತ್ತು ಕಾರಣ ಶರೀರದಲ್ಲಿ 'ಶಿವೋಽಹಂ' ಭಾವರೂಪವಾದ ಭಾವಲಿಂಗರೂಪವಾಗಿಯೂ ಸದಾಕಾಲ ಪೂಜೆಗೊಳ್ಳುತ್ತಿರುತ್ತದೆ.

ಅಣ್ಣನವರು ಮಹಾಲಿಂಗದ ಸ್ಥಿತಿಯ ಬಗ್ಗೆ —

ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ ;
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ ; ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ ;
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ, ನೀವೆನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ —

ಎಂದು ಹೇಳಿರುವರು. ಅಂದರೆ, ಹೃದಯದ ಚಿತ್ಕಳೆಯನ್ನು ಶ್ರೀ ಗುರುವು ಹೊರ ಸೆಳೆದು ಇಷ್ಟದಲ್ಲಿ ಮೂರ್ತೀಕರಿಸಿ ಅನುಗ್ರಹಿಸುತ್ತಾನಾದ್ದರಿಂದ ಹಸ್ತಪೀಠದಲ್ಲಿಟ್ಟು, ಆ ಇಷ್ಟಲಿಂಗದಲ್ಲಿ ಪ್ರಾಣಾದಿಗಳನ್ನು ಭಾವಿಸಿ ಅರ್ಚಿಸಬೇಕು ; ಇದು ಅಂಗನನ್ನು ಲಿಂಗವಾಗಿಸುತ್ತದೆಂಬುದು ತಾತ್ಪರ್ಯ. ಈ ಲಿಂಗವು ನಾದ-ಬಿಂದು-ಕಲಾತ್ಮಕವೆಂದು ಸೂಕ್ಷ್ಮಾಗಮ ವಿವರಿಸುತ್ತದೆ.

ಪರಬ್ರಹ್ಮವು ನಿರಾಕಾರ, ನಿರ್ಗುಣ, ನಿರಂಜನ,—ಇತ್ಯಾದಿ ಎಂಬುದಾಗಿ ಶಾಸ್ತ್ರ ಕಾರರು ಹೇಳುತ್ತಾರೆ. ಆದರೆ ಈ ಪರಾತ್ಪರವಸ್ತುವೇ ಪೂಜೆಗೊಳ್ಳುವ ಸಲುವಾಗಿ

ಸಾಕಾರ, ಸಗುಣಾತ್ಮಕವಾದ ಲಿಂಗರೂಪವನ್ನು ತಳೆದಿರುತ್ತದೆ. ಸಾಕಾರ ಅಥವಾ ಸಗುಣಬ್ರಹ್ಮೋಪಾಸನೆ, ನಿರ್ಗುಣ ಬ್ರಹ್ಮೋಪಾಸನೆಯಲ್ಲಿ ನಿಲಂಗಡೆ ಪೊಂದಂತ್ತದೆ. ಅಂದರೆ, ಇಷ್ಟಲಿಂಗದ ಉಪಾಸನೆಯ ಮುಖಾಂತರ ಅಂಗವು ಲಿಂಗವಾಗುವುದರಿಂದ ಇಷ್ಟಲಿಂಗ ಅತ್ಯವಶ್ಯ. ಈ ಇಷ್ಟಲಿಂಗಪೂಜೆ ಪ್ರಾಣಲಿಂಗಪೂಜೆಯಲ್ಲಿಯೂ. ಈ ಪ್ರಾಣ ಲಿಂಗಪೂಜೆ ಭಾವಲಿಂಗಪೂಜೆಯಲ್ಲಿಯೂ ಕೊನೆಗೊಳ್ಳುವುದರಿಂದ, ಇಷ್ಟಲಿಂಗ ಪ್ರಾಣಲಿಂಗದಲ್ಲಿ, ಪ್ರಾಣಲಿಂಗ ಭಾವಲಿಂಗದಲ್ಲಿ ಐಕ್ಯಗೊಂಡು, ಸಾಧಕನಿಗೆ ಲಿಂಗಾಂಗ ಸಾಮರಸ್ಯವನ್ನು ನೀಡುತ್ತದೆ. ಅಂದರೆ ಇಷ್ಟಲಿಂಗವು ಪ್ರಾಣಲಿಂಗದಲ್ಲಿ ಐಕ್ಯ ಗೊಂಡಂತೆ, ತ್ಯಾಗಾಂಗವೆನಿಸಿದ ಸ್ಥೂಲಶರೀರವು ಭೋಗಾಂಗವೆನಿಸಿದ ಸೂಕ್ಷ್ಮಶರೀರ ದಲ್ಲಿ ಐಕ್ಯಗೊಳ್ಳುತ್ತದೆ. ಪ್ರಾಣಲಿಂಗವು ಭಾವಲಿಂಗದಲ್ಲಿ ಐಕ್ಯಗೊಂಡಂತೆ, ಸೂಕ್ಷ್ಮ ಶರೀರವು ಯೋಗಾಂಗವೆನಿಸಿದ ಕಾರಣಶರೀರದಲ್ಲಿ ಐಕ್ಯಗೊಳ್ಳುತ್ತದೆ.

ಲಿಂಗದ ಬಗ್ಗೆ ಶ್ರೀ ಉರಿಲಿಂಗಪೆದ್ದಿಗಳ ಒಂದು ವಚನ ಹೀಗಿದೆ—

ಲಿಂಗವೆಂಬುದು ಪರಶಕ್ತಿಯುಕ್ತ,
ಲಿಂಗವೆಂಬುದು ಪರಶಿವನ ನಿಜದೇಹ,
ಲಿಂಗವೆಂಬುದು ಪರಶಿವನ ಘನತೇಜ,
ಲಿಂಗವೆಂಬುದು ಪರಶಿವನ ಸಕಲೈಶ್ವರ್ಯಾನಂದ ಸುಖವು.
ಲಿಂಗವೆಂಬುದು ಪರಶಿವನ ಪರಮಜ್ಞಾನ,
ಲಿಂಗವೆಂಬುದು ಪರಶಿವನು ತಾನು,
ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ ತಾನು,
ಲಿಂಗವೆಂಬುದು ಅಖಂಡಿತ,
ಲಿಂಗವೆಂಬುದು ಅಭೇದ್ಯ, ಪಂಚಸಂಜ್ಞೆ ತಾನು,
ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ
ಜ್ಯೋತಿರ್ಮಯ ಲಿಂಗ. ಇತ್ಯಾದಿ.

ಇವರದೇ ಆದ ಮತ್ತೊಂದು ವಚನ ಇನ್ನೂ ಸುಂದರವಾಗಿದೆ —

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ಎಂದೆನಿಸುವ ಲಿಂಗವು,
ಅತ್ಯತಿಷ್ಠದ್ದಶಾಂಗುಲಂ ಎಂದೆನಿಸುವ ಲಿಂಗವು,
ಚಕಿತಮಭಿಧತ್ತೇ ಶ್ರುತಿರಪಿ ಎಂದೆನಿಸುವ ಲಿಂಗವು,
ಅಣೋರಣೀಯಾನ್ ಮಹತೋಮಹೀಯಾನ್—ಎಂದೆನಿಸುವ ಲಿಂಗವು
ಅಯಂ ಮೇ ಹಸ್ತೋ ಭಗವಾನ್, ಅಯಂ ಮೇ ಭಗವತ್ತರಃ
ಎಂದೆನಿಸುವ ಲಿಂಗವು,

ಏಕಮೂರ್ತಿಸ್ತ್ರೀಧಾ ಭೇದಃ ಎಂದೆನಿಸುವ ಲಿಂಗವು,
ಶ್ರೀ ಗುರುಲಿಂಗಜಂಗಮರೂಪಾಗಿ,
ಇಷ್ಟಃಪ್ರಾಣಸ್ತಥಾ ಭಾವಸ್ತ್ರಿಧಾ ಐಕ್ಯಂ
ಎಂದಂ ತ್ರಿವಿಧವು ಏಕೀಭವಿಸಿ
ಲಿಂಗರೂಪಾಗಿ ಎನ್ನ ಕರಸ್ಥಲಕೆ ಬಂದು,
ಕರತಳಾಮಳಕವಾಗಿ ತೋರುತ್ತೈದಾನೆ,
ಆಹಾ ! ಎನ್ನ ಸತ್ಯವೇ ! ಆಹಾ ! ಎನ್ನ ನಿತ್ಯವೇ !
ಶಿವಶಿವಾ ಹರಹರಾ, ಮಹಾದೇವ, ಮಹಾದೇವಾ !
ನೀನೇ ಬಲ್ಲೆ, ನೀನೆ ಬಲ್ಲೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ !

(ಉರಿಲಿಂಗಪೆದ್ದಿ ವಚನಗಳು)

ಹೀಗೆ ಲಿಂಗದ ಸ್ವರೂಪ—ಮಹತ್ತ್ವಾದಿಗಳನ್ನು ನೂರಾರು ಪ್ರಮಾಣವಾಕ್ಯಗಳು ಸಮರ್ಥಿಸುತ್ತವೆ. ಇಂತಹ ಲಿಂಗವು ಸದಾಕಾಲ ವೀರಶೈವನ ಅಂಗದ ಮೇಲೆ ವಿರಾಜಿಸುತ್ತಿದ್ದು, ಅವನ ಅಂಗಗುಣಗಳನ್ನು ದೂರಮಾಡಿ ಲಿಂಗಗುಣಗಳನ್ನು ಕರುಣಿಸುತ್ತದೆ.

ಜಂಗಮ :—

'ನಿತರಾಂ ಗಚ್ಛತೀತಿ ಜಂಗಮಃ' —ಸದಾ ಸಂಚಾರಶೀಲ— ಎಂಬುದಂ ಜಂಗಮ ಪದದ ಶಾಬ್ದಿಕಾರ್ಥ. 'ಗಮನ' ಎಂಬರ್ಥವನ್ನುಳ್ಳ ಧಾತುವು 'ಜ್ಞಾನ'ವೆಂಬರ್ಥವನ್ನೂ ಕೊಡುವುದರಿಂದ, 'ಜಂಗಮ'— ಎಂದರೆ 'ಶಿವಜ್ಞಾನ ಸಂಪನ್ನ' ಎಂದೇ ಇಲ್ಲಿ ಅರ್ಥ.

ಶಿವನೇ ಲೋಕೋಪಕಾರಕ್ಕಾಗಿ ಜಂಗಮರೂಪದಿಂದ ಸಂಚಾರ ಕೈಗೊಳ್ಳುತ್ತಾನೆ. 'ಜ' ಕಾರವೇ 'ಬ್ರಹ್ಮ', 'ಗ' ಕಾರವೇ 'ವಿಷ್ಣು' ಮತ್ತು 'ಮ' ಕಾರವೇ ಮಹೇಶ್ವರ. ಹೀಗೆ 'ಜಂಗಮ'ವು ತ್ರಿಮೂರ್ತ್ಯಾತ್ಮಕ. 'ಜ' ಕಾರವು ಜನನರಾಹಿತ್ಯವನ್ನೂ, 'ಗ' ಕಾರವು ಭವರಾಹಿತ್ಯವನ್ನೂ, 'ಮ' ಕಾರವು ಮರಣರಾಹಿತ್ಯವನ್ನೂ, ಬೋಧಿಸುವುದರಿಂದ, ಜನನ—ಮರಣರೂಪ ಭವಚಕ್ರವನ್ನು ಗೆದ್ದವನೇ 'ಜಂಗಮ'ನೆನಿಸುವನು. 'ಜ' ಕಾರವು ಸದ್ರೂಪ, 'ಗ' ಕಾರವು ಚಿದ್ರೂಪ ಮತ್ತು 'ಮ' ಕಾರವು ಆನಂದರೂಪವಾದ್ದರಿಂದ, 'ಜಂಗಮ'ನೆಂದರೆ 'ಸಚ್ಚಿದಾನಂದರೂಪ'. ಇವನು ಕಾಮ–ಕ್ರೋಧಾದಿಗಳನ್ನು ಗೆದ್ದವನು ; ಸರ್ವಸಂಗಪರಿತ್ಯಾಗಿ ;

ಮುಖೇ ಮಂತ್ರಂ ಹೃದಿ ಧ್ಯಾನಂ ಪ್ರಾಣೇ ಲಿಂಗಂ ಸಮಾಶ್ರಿತಂ ।
ಅಷ್ಟಮೂರ್ತಿರಧಿಷ್ಠಾನಂ ತಚ್ಚ ಜಂಗಮಲಕ್ಷಣಂ ॥

ಎಂಬ ವಚನಾನುಸಾರವಾಗಿ ಸದಾಕಾಲವೂ ಮಂತ್ರಜಪನಿಷ್ಠನಾಗಿ, ಹೃದಯದಲ್ಲಿ ಶಿವತತ್ತ್ವವನ್ನು ಭಾವಿಸುವವನಾಗಿರಬೇಕು. ಇವನು ಪ್ರಸನ್ನಮುಖಿನು, ಶಾಂತ

ಸ್ವಭಾವವುಳ್ಳವನು, ಶಿವಭಕ್ತಿಸಂಪನ್ನ, ಸಕಲಶಾಸ್ತ್ರ ಹಾಗೂ ಸಕಲಶಾಸ್ತ್ರಾರ್ಥ ನಿಷ್ಣಾತ, ಬ್ರಹ್ಮ–ವಿಷ್ಣು–ರುದ್ರ ಪದವಿಗಳನ್ನು ತೃಣೀಕರಿಸಿರುವವನು, ಇತ್ಯಾದಿ.

ಈತನಿಗೆ ಅತ್ಯಾಶ್ರಮಿ, ನಿರಾಭಾರಿ, ಷಟ್‌ಸ್ಥಲೀ, ಚರ, ಯತಿ, ಶಿವಯೋಗಿ ಇತ್ಯಾದಿ ಪರ್ಯಾಯ ನಾಮಗಳುಂಟು. ಶಿವಜ್ಞಾನಿಯಾದ ಜಂಗಮನು, ಲೋಕೋದ್ಧಾರಕ್ಕಾಗಿ ಲೋಕಸಂಚಾರಶೀಲನಾಗಿ, ಈ ಸಂಚಾರ ಕಾಲದಲ್ಲಿ ತನ್ನ ದರ್ಶನ–ಸ್ಪರ್ಶನಾದಿಗಳಿಂದ ಸಮಸ್ತರನ್ನು ಮುಕ್ತರನ್ನಾಗಿಸಂತ್ತಾನಾದ್ದರಿಂದ 'ಜಂಗಮ' ಎಂಬ ಹೆಸರು ಅನ್ವರ್ಥ. ಶಮೆ (ಅಂತರೀಂದ್ರಿಯನಿಗ್ರಹ), ದಮೆ (ಬಹಿರಿಂದ್ರಿಯನಿಗ್ರಹ), ನಿತ್ಯಾನಿತ್ಯವಸ್ತುವಿಚಾರಾತ್ಮಕವಾದ ವಿವೇಕ, ವಿಷಯವಿರಕ್ತಿ, ಅಖಂಡಶಿವಜ್ಞಾನ, ಕ್ಷಮೆ, ಭೂತದಯೆ, ಶಿವಭಕ್ತಿ ಸಂಪನ್ನತೆ, ಶಿವಧರ್ಮನಿಷ್ಠೆ—ಇತ್ಯಾದಿ ಗುಣಯುಕ್ತನಾದವನೇ ಶಿವಯೋಗಿ ಅಥವಾ ಜಂಗಮ.

ಸ್ವಜಂಗಮ, ಚರಜಂಗಮ ಮತ್ತು ಪರಜಂಗಮವೆಂದು ಜಂಗಮದಲ್ಲಿ ಮೂರು ವಿಧವುಂಟು. ಶಿವಜ್ಞಾನ ಸಂಪನ್ನ, ವಿಷಯರಹಿತ, ಮಮತಾರಹಿತ, ಶರೀರಾಭಿಮಾನ ಶೂನ್ಯ, ಭಿಕ್ಷಾನ್ನಭೋಜಿ, ತಾನಾಗಿಯೇ ಪ್ರಾಪ್ತವಾದುದರಲ್ಲಿ ಸಂತುಷ್ಟ ಇತ್ಯಾದಿ ಗುಣವುಳ್ಳವನು ಸ್ವಜಂಗಮ ; ಸ್ವಸ್ವರೂಪಜ್ಞಾನಸಂಪನ್ನನಾಗಿ, ಅಹಂಕಾರಮಮಕಾರದೂರನಾಗಿ, ಲೋಕೋದ್ಧಾರಕ್ಕೋಸ್ಕರ ತಾನೇ ತಾನಾಗಿ ಸಂಚರಣಶೀಲನಾಗಿರುವವನು ಚರಜಂಗಮ ; ಸ್ವಸ್ವರೂಪಜ್ಞಾನವುಳ್ಳವನು, ಸರ್ವಕೃತ್ಯಗಳಲ್ಲಿ ಸ್ವತಂತ್ರ, ಜಗತ್ತನ್ನು ತೃಣೀಕರಿಸುವವನು, ಇತ್ಯಾದಿ ಲಕ್ಷಣಸಂಪನ್ನನು ಪರಜಂಗಮ.

ಜಂಗಮಕ್ಕೆ ಉಣಬಡಿಸಿ ತೃಪ್ತಿಪಡಿಸುವುದು ಎಲ್ಲ ಗೃಹಸ್ಥರ ಕರ್ತವ್ಯ. ಅಣಿಮಾದ್ಯಷ್ಟಸಿದ್ಧಿಗಳಿಗೆ ನಿಧಿಯಂತಿರುವ ಈತನಿಗೆ, ಉಣಬಡಿಸಿದ್ದಾದರೆ, ಕ್ಷೀರಕಂಭ ಸಹಸ್ರಪ್ರದಾನ, ಘೃತಕುಂಭಶತಗಳ ದಾನ—ಇತ್ಯಾದಿಗಳಿಂದ ಬರುವ ಫಲವೇ ಸಾಕ್ಷಾತ್ತಾಗಿ ಸಂಭವಿಸುತ್ತದೆ.

ಜಂಗಮನು ಸಂತೃಪ್ತಿಗೊಂಡರೆ, ಇದರಿಂದ ಶಿವನು ತೃಪ್ತನಾಗುವನು. ಶಿವನು ಸಂತೃಪ್ತಿಗೊಳ್ಳುವುದರಿಂದ, ಇವನಲ್ಲಡಗಿರುವ ಸಮಸ್ತವೂ ತೃಪ್ತಿ ಹೊಂದುತ್ತದೆ.

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ ।
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಂ ॥

(ಸಿದ್ಧಾಂತಶಿಖಾಮಣಿ. ಪರಿ ೯)

ಶ್ರೀ ಚನ್ನಬಸವಣ್ಣನವರ ಒಂದು ವಚನ ಹೀಗಿದೆ—

ಲಿಂಗಾರ್ಚನೆಯ ಮಾಡುವೆನಯ್ಯ ನಾನು
ಜಂಗಮ ಮನೆಗೆ ಬರಬೇಕೆಂದು !
ಜಂಗಮ ಮನೆಗೆ ಬಂದಡೆ, ಆ ಲಿಂಗಾರ್ಚನೆಯ ಮಾಡು
ಜಂಗಮಾರ್ಚನೆಯ ಮಾಡುವೆನಯ್ಯ !

ಲಿಂಗದಲ್ಲಿ ಏನುಂಟು ? ಜಂಗಮದಲ್ಲಿ ಏನುಂಟು ?
ಲಿಂಗದಲ್ಲಿ ಕುಲವುಂಟು, ಛಲವುಂಟು,
ಫಲವುಂಟು, ಪದವುಂಟು, ಭವವುಂಟು ;
ಜಂಗಮದಲ್ಲಿ ಕುಲಂ ನಾಸ್ತಿ, ಛಲಂ ನಾಸ್ತಿ,
ಫಲಂ ನಾಸ್ತಿ, ಪದಂ ನಾಸ್ತಿ, ಭವಂ ನಾಸ್ತಿ ;
ಇದು ಕಾರಣ, ಕೂಡಲಚೆನ್ನಸಂಗಯ್ಯ,
ನಿಮ್ಮ ಬಸವಣ್ಣ ಜಂಗಮಸಾಧಕನಾಗಿ
ಸ್ವಯಲಿಂಗವಾದ.

ಮಡಿವಾಳ ಮಾಚಿದೇವರು ಜಂಗಮ–ಲಿಂಗ–ಗುರು ಈ ತ್ರಿವಿಧದ ಸಂಬಂಧವನ್ನು ಬಹು ಮಾರ್ಮಿಕವಾಗಿ ಹೀಗೆ ಹೇಳಿರುತ್ತಾರೆ —

ಆದಿಯಲ್ಲಿ ನಿಮ್ಮ ಜಂಗಮವೆಂಬುವನಾರು
ಬಲ್ಲರಯ್ಯ ಬಸವಣ್ಣನಲ್ಲದೆ ?
ಸ್ಥಾವರವಿರ್ದಲ್ಲಿ ನೋಡಲಾಗದು, ಮನದಲ್ಲಿ ನೆನೆಯಲಾಗದು ;
ಲಿಂಗಕ್ಕಾದಡೆಯು ಜಂಗಮವೇ ಬೇಕು,
ಜಂಗಮವಿಲ್ಲದ ಲಿಂಗವುಂಟೇ ?
ಗುರುವಿಗಾದಡೆಯು ಜಂಗಮವೇ ಬೇಕು,
ಜಂಗಮವಿಲ್ಲದ ಗುರುವುಂಟೇ ?
ಜಂಗಮವಿರ್ದಲ್ಲಿ ಗುರು, ಲಿಂಗ, ಜಂಗಮ,
ಪಾದೋದಕ, ಪ್ರಸಾದ, ಅನುಭಾವ ಸನ್ನಿಹಿತವಾಗಿಹುದು.
ಇಂತೀ ಜಂಗಮವೇ ಲಿಂಗವೆಂಬುದ ಬಸವಣ್ಣ ಬಲ್ಲ,
ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿಯಲ್ಲಿ
ಶರಣೆಂದು ಶುದ್ಧನಾದೆನಯ್ಯಾ ಕಲಿದೇವಯ್ಯ.

ಲಿಂಗದ ಮುಖ ಜಂಗಮವೆಂಬ ಮಾತು ಪ್ರಸಿದ್ಧವಿದೆ. ಜಂಗಮವಾದರೂ ಲಿಂಗಪೂಜೆಯನ್ನಾಚರಿಸಬೇಕು; ಗುರುವಾದರೂ ಲಿಂಗಪೂಜೆಯನ್ನಾಚರಿಸಬೇಕು, ಆದರೆ, ಲಿಂಗನಿಷ್ಠೆಗೆ ಗುರು–ಜಂಗಮರು ಅತ್ಯವಶ್ಯ. ಆದರಲ್ಲಿಯೂ ಜಂಗಮದ ಆವಶ್ಯಕತೆ ಅತ್ಯನಿವಾರ್ಯ, ಅಂತೆಯೇ ಅಕ್ಕನವರು ಜಂಗಮದ ಬಗ್ಗೆ ಹೀಗೆ ಹೇಳಿದ್ದಾರೆ —

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ,
ಜಂಗಮವೆನ್ನ ನಿಧಿ–ನಿಧಾನ, ಜಂಗಮವೆನ್ನ ಪುಣ್ಯದ ಫಲ,
ಜಂಗಮವೆನ್ನಹರುಷದ ಮೇರೆ, ಚೆನ್ನಮಲ್ಲಿಕಾರ್ಜುನ !
ಜಂಗಮತಿಂತಿಣಿಯಲ್ಲಿ ಓಲಾಡುವೆನು

ದಾನಗಳಲ್ಲಿ, ಸೋಪಾಧಿದಾನ, ನಿರುಪಾಧಿದಾನ ಮತ್ತು ಸಹಜದಾನಗಳೆಂದು ಮೂರುವಿಧ. (ಸಿದ್ಧಾಂತ ಶಿಖಾಮಣಿ) ಇವುಗಳ ಪೈಕಿ ಸಹಜದಾನವೇ ಶ್ರೇಷ್ಠ. ಗುರು-ಲಿಂಗ-ಜಂಗಮಕ್ಕೆ ನೀಡುವುದೇ ಸಹಜದಾನ. ಇದು ಅನಂತಪುಣ್ಯಫಲದಾಯಕ ವಾದುದು. ಈ ತ್ರಿವಿಧಕ್ಕೆ ನೀಡುವ ವಸ್ತು ಸತ್ಯಶುದ್ಧ ಕಾಯಕದಿಂದ ಗಳಿಸಿದ್ದಾಗಿರ ಬೇಕು. ಅಂತೆಯೇ ಈ ಎಲ್ಲವೂ ಕಾಯಕಕ್ಕೊಳಗು,

ವಿಭೂತಿ

'ವಿ' ಉಪಸರ್ಗಪೂರ್ವಕ 'ಭೂ' ಧಾತುವಿನ ಮೇಲೆ 'ಕ್ತಿನ್' ಪ್ರತ್ಯಯ ಬಂದು 'ವಿಭೂತಿ' ಪದವು ನಿಷ್ಪನ್ನವಾಗಿದೆ, ಶಕ್ತಿ. ಹಿರಿತನ, ಗೌರವ, ಅದ್ಭುತ, ಐಶ್ವರ್ಯ, ಕಾಂತಿ, ಅಣಿಮಾದ್ಯಷ್ಟಸಿದ್ಧಿ, ಇತ್ಯಾದಿ ಅನೇಕಾರ್ಥಗಳುಂಟು ಈ ವಿಭೂತಿಪದಕ್ಕೆ. ಭಗವದ್ಗೀತೆಯ ಹತ್ತನೆಯ ಅಧ್ಯಾಯವು ಭಗವಂತನ ವಿಭೂತಿತ್ವವನ್ನು ವಿವರಿಸು ತ್ತದೆ. ಅದರ ಪ್ರಕಾರ. 'ಜಗತ್ತಿನಲ್ಲಿ ಶ್ರೇಷ್ಠವಸ್ತುವೆನಿಸಿರುವುದೆಲ್ಲವೂ ಭಗವಂತನ ವಿಭೂತಿ.' ಆದರೆ, ವೀರಶೈವದಲ್ಲಿ 'ವಿಭೂತಿ' ಪದಕ್ಕೆ ಇನ್ನೂ ಹೆಚ್ಚು ವಿಶಾಲವಾದ ಅಥವಾ ತನ್ನದೇ ಆದ ವೈಶಿಷ್ಟ್ಯಪೂರ್ಣ ಅರ್ಥವುಂಟು.

ಶಿವನಿಗೂ ವಿಭೂತಿಗೂ ಅಭೇದವನ್ನು ಹೇಳಲಾಗುತ್ತದೆ. ವಿಭೂತಿ, ಭಸಿತ. ಭಸ್ಮ. ಕ್ಷಾರ, ರಕ್ಷಾ,—ಈ ಐದು ಹೆಸರುಗಳು ವಿಭೂತಿಗೆ ಕ್ರಮವಾಗಿ ಐದು ಕಾರಣಗಳಿಂದ ಬಂದಿರುತ್ತವೆ—

ಅಣಿಮಾದ್ಯಷ್ಟಸಿದ್ಧಿಗಳನ್ನು ನೀಡುವುದರಿಂದ ಇದು 'ವಿಭೂತಿ'; ಶಿವತತ್ತ್ವ ವನ್ನು ಇದು ಪ್ರಕಾಶಗೊಳಿಸುವುದರಿಂದ 'ಭಸಿತ'; ಮನೋವಾಕ್ಕಾಯಗಳಿಂದುಂಟಾಗುವ ಪಾಪಗಳನ್ನು ನಾಶಮಾಡುವುದರಿಂದ ಇದು 'ಭಸ್ಮ'; ಆಧಿದೈವಿಕ, ಆಧಿಭೌತಿಕ ಆಧ್ಯಾತ್ಮಿಕವೆಂಬ ತಾಪತ್ರಯಗಳಿಂದ ಸಂಭವಿಸುವ ವಿಪತ್ತುಗಳನ್ನು ಹೋಗಲಾಡಿಸುವು ದರಿಂದ ಇದು 'ಕ್ಷಾರ'; ಭೂತ-ಪ್ರೇತ-ಪಿಶಾಚ-ಬ್ರಹ್ಮರಾಕ್ಷಸಾದಿಗಳಿಂದ ಇದು ರಕ್ಷಣೆ ನೀಡುವುದರಿಂದ 'ರಕ್ಷಾ'. ಇವೆಲ್ಲ ವಿಭೂತಿಯ ಪರ್ಯಾಯಪದಗಳು;

ಭಸ್ಮವು ನಿರುಪಾಧಿಕ ಮತ್ತು ಸೋಪಾಧಿಕವೆಂದು ಎರಡು ವಿಧ. 'ಪರಶಿವನೇ ಮಹಾಭಸ್ಮ' ಎಂಬ ಭಾವನೆಯೇ 'ನಿರುಪಾಧಿಕಭಸ್ಮ'. ಪಂಚಬ್ರಹ್ಮಮಂತ್ರಗಳ ನ್ಯಾಸ ಪೂರ್ವಕವಾಗಿ, ಶಿವಾಗ್ನಿ ಸಂಸ್ಕಾರದ ಮುಖಾಂತರ ಉತ್ಪನ್ನವಾದುದು 'ಸೋಪಾಧಿಕ ಭಸ್ಮ,'

ಶಿವನ ಸದ್ಯೋಜಾತಮುಖದಿಂದ ಕಪಿಲವರ್ಣದ 'ನಂದಾ' ಎಂಬ ಧೇನುವು ಹುಟ್ಟಿ, ಇದರಿಂದ 'ವಿಭೂತಿ' ಉತ್ಪನ್ನವಾಯಿತು; ವಾಮದೇವಮುಖದಿಂದ ಜನಿಸಿದ ಕೃಷ್ಣವರ್ಣದ 'ಭದ್ರಾ' ಎಂಬ ಧೇನುವಿನಿಂದ 'ಭಸಿತ' ಉಂಟಾಯಿತು; ಅಘೋರ ಮುಖದಿಂದ ಜನಿಸಿದ ಧವಲವರ್ಣದ 'ಸುರಭಿ' ಎಂಬ ಧೇನುವಿನಿಂದ 'ಭಸ್ಮ'ವು ಉಂಟಾಯಿತು; ತತ್ಪುರುಷಮುಖದಿಂದುತ್ಪನ್ನವಾದ ಧೂಮ್ರವರ್ಣದ 'ಸುಶೀಲಾ'

ಎಂಬ ಧೇನುವಿನಿಂದ 'ಕ್ಷಾರ' ಉತ್ಪನ್ನವಾದರೆ; ಈಶಾನಮುಖದಿಂದುದಿಸಿದ ರಕ್ತ ವರ್ಣದ 'ಸುಮನ'ವೆಂಬ ಧೇನುವಿನಿಂದ 'ರಕ್ಷಾ'ದ ಉತ್ಪತ್ತಿಯಾಗಿದೆ.

ಭಸ್ಮದ ತಯಾರಿಕೆಯ ಬಗ್ಗೆ ಒಂದು ವಿಶಿಷ್ಟವಾದ ಪ್ರಕ್ರಿಯೆಯೇ ಇರುತ್ತದೆ—ಇದನ್ನು ಕಲ್ಪ, ಅನುಕಲ್ಪ, ಉಪಕಲ್ಪ, ಮತ್ತು ಅಕಲ್ಪವೆಂದು ನಾಲ್ಕು ಪ್ರಕಾರವಾಗಿ ಹೇಳಲಾಗುತ್ತದೆ.

ನೆಲಕ್ಕೆ ಸೋಂಕಿಸದೆ, ನೂತನಗೋಮಯವನ್ನು ಸದ್ಯೋಜಾತಮಂತ್ರವನ್ನು ಹೇಳಿಕೊಂಡು, ಅಂತರದಲ್ಲಿಯೇ ಕೈಯ ಮುಖಾಂತರ ಹಿಡಿದುಕೊಳ್ಳಬೇಕು. ಅದಕ್ಕೂ ವಾಮದೇವ ಮಂತ್ರದಿಂದ ಉಂಡೆಯನ್ನಾಗಿ ಮಾಡಬೇಕು. ತತ್ಪುರುಷಮಂತ್ರದಿಂದ ಆ ಉಂಡೆಯನ್ನು ಒಣಗಿಸಬೇಕು. ಒಣಗಿದ ಆ ಉಂಡೆಯನ್ನು ಅಘೋರಮಂತ್ರ ದಿಂದ ಸುಡಬೇಕು. ಅನಂತರ ಆ ಭಸ್ಮವನ್ನು ಈಶಾನ ಮಂತ್ರದಿಂದ ಬಿಲ್ವಾದಿ ಪವಿತ್ರ ಪಾತ್ರೆಗಳಲ್ಲಿ ಶೇಖರಿಸಿಡಬೇಕು—ಇದು **'ಕಲ್ಪಭಸ್ಮ'.** ಈ ಭಸ್ಮವು ಅನು ಕಲ್ಪಾದಿಭಸ್ಮಗಳಿಗಿಂತ ಶ್ರೇಷ್ಠವಾದುದು.

ಅರಣ್ಯದಲ್ಲಿ ದೊರೆಯುವ ಒಣಗಿದ ಗೋಮಯವನ್ನು ತಂದು ಪುಡಿಮಾಡಿ, ಮೇಲ್ಕಂಡಂತೆ ಸಂಸ್ಕರಿಸಿದರೆ ಅದು **'ಅನುಕಲ್ಪಭಸ್ಮ.'** ಅಂಗಡಿಯಲ್ಲಿ ದೊರೆಯುವ ಭಸ್ಮವನ್ನು ತಂದು ವಸ್ತ್ರದಿಂದ ಶೋಧಿಸಿ, ಗೋಮೂತ್ರದಿಂದ ಉಂಡೆಮಾಡಿ ಪ್ರಥಮೋಕ್ತವಿಧಿಯಂತೆ ಸಿದ್ಧಪಡಿಸುವುದು **'ಉಪಕಲ್ಪಭಸ್ಮ'**, ಮಂತ್ರಜ್ಞಾನ ರಹಿತರು ಸಿದ್ಧಪಡಿಸಿದುದು **'ಅಕಲ್ಪಭಸ್ಮ.'**

ಬೃಹಜ್ಜಾಬಾಲೋಪನಿಷತ್ತು ಭಸ್ಮಧಾರಣೆ ಅತ್ಯಾವಶ್ಯವೆಂಬುದನ್ನು 'ಭಸ್ಮ ಧಾರಣಹೊಂದಿರದ ಹಣೆಗೆ ಧಿಕ್ಕಾರ'ವೆಂಬ ವಾಕ್ಯದಿಂದ ಸೂಚಿಸಿದೆ.

ಭಸ್ಮಧಾರಣದಲ್ಲಿ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ಭಸ್ಮಧಾರಣವೆಂದು ಮೂರು ಪ್ರಕಾರಗಳುಂಟು. ಭಸ್ಮಸ್ನಾನದಿಂದ ಸಕಲ ದೋಷಗಳೂ ಪರಿಹಾರ. 'ನಮಃ ಶಿವಾಯ' ಎಂಬ ಮಂತ್ರದಿಂದ ಭಸ್ಮವನ್ನು ಏಳು ಸಾರಿ ಅಭಿಮಂತ್ರಿಸಿ, ಎಲ್ಲ ಇಂದ್ರಿಯಗಳಲ್ಲಿ ಉದ್ಧೂಲನ ಮಾಡಿಕೊಂಡು, ತ್ರಿಪುಂಡ್ರಧಾರಣ ಮಾಡಿಕೊಳ್ಳ ಬೇಕು. ಒಟ್ಟು ಹದಿನೈದು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣ ಮಾಡಿಕೊಳ್ಳಬೇಕೆಂದು ಹೇಳಲಾಗಿದೆ. ಆ ಸ್ಥಾನಗಳೆಂದರೆ—ಶಿರಸ್ಸು, ಹಣೆ, ಎರಡು ಕಿವಿಗಳು, ಕಂಠ, ಎರಡು ಭುಜಗಳು, ಹೃದಯ, ನಾಭಿ, ಬೆನ್ನು, ಎರಡು ಬಾಹುಗಳು, ಹೆಗಲು ಮತ್ತು ಎರಡು ಮುಂಗೈಗಳು.

ಹಣೆಯಲ್ಲಿ ತ್ರಿಪುಂಡ್ರ ಧಾರಣವನ್ನು ಮಾಡಲು ಎರಡು ವಿಧಾನಗಳನ್ನು ಹೇಳ ಲಾಗುತ್ತದೆ. ೧) ಬಲಗೈಯ ತರ್ಜನೀ-ಮಧ್ಯಮ-ಅನಾಮಿಕಾ-ಈ ಮೂರೂ ಬೆರಳುಗಳಿಂದ, ಆರಂಗುಲ ಪ್ರಮಾಣ ಅಥವಾ ತನ್ನ ಹಣೆಯ ಪ್ರಮಾಣದಷ್ಟು ಧರಿಸ ಬೇಕು. ಅಥವಾ (೨) ಮೊದಲು—ಮಧ್ಯಮಾ—ಅನಾಮಿಕಾಗಳಿಂದ ಎಡದಿಂದ ಬಲಕ್ಕೆ

ಹಾಗೂ, ಹೆಬ್ಬೆಟ್ಟಿನಿಂದ ಬಲದಿಂದ ಎಡಕ್ಕೆ-ಹೀಗೆ ಮೂರು ರೇಖೆಯನ್ನು ಧರಿಸುವುದು.

ವೈಜ್ಞಾನಿಕವಾಗಿ ಭಸ್ಮದ ಬಗ್ಗೆ ಒಂದೆರಡು ಮಾತು—ಇದು ಶೀತಾಪಹಾರಿ, ಶರೀರದ ಉಷ್ಣತೆಯನ್ನು ಸಮತೋಲನದಲ್ಲಿಡುವ ಸ್ವಭಾವವುಳ್ಳದ್ದು. ನೀರಿನಲ್ಲಿ ಬಿದ್ದ ವ್ಯಕ್ತಿಯನ್ನು ಹೊರತೆಗೆದಾಗ, ಆತನ ಶರೀರದ ಶೈತ್ಯವನ್ನು ಹೋಗಲಾಡಿಸುವ ಸಲುವಾಗಿ ಮೈಗೆ ಚೆನ್ನಾಗಿ ಭಸ್ಮವನ್ನು ತಿಕ್ಕುವ ರೂಢಿ ಇಂದಿಗೂ ಪ್ರಥಮ ಚಿಕಿತ್ಸೆಯ ರೂಪದಲ್ಲಿದೆ. ಚರ್ಮವು ಸಚ್ಛಿದ್ರವಾದ್ದರಿಂದ ಅನೇಕ ರೋಗಾಣುಗಳು ಅನುಕ್ಷಣವೂ ನಮ್ಮ ಶರೀರವನ್ನು ಪ್ರವೇಶಿಸುವ ಸಂಭವವುಂಟು. ಇವುಗಳನ್ನು ನಾಶ ಮಾಡಿ. ಶರೀರ ರಕ್ಷಣೆ ಮಾಡುವ ಸಾಮರ್ಥ್ಯ ಈ ವಿಭೂತಿಗುಂಟು. ಭಯಭೀತರಾದ ವರಿಗೆ, ಬಾಲಗ್ರಹಪೀಡಿತರಾದ ಮಕ್ಕಳಿಗೆ ಇಂದಿಗೂ ಭಸ್ಮವನ್ನು ಮಂತ್ರಿಸಿ ಕೊಡುವುದು ರೂಢಿಯಲ್ಲಿದೆ. ಮಂತ್ರಿಸಿಕೊಟ್ಟ ಭಸ್ಮದಿಂದ ದೃಷ್ಟಿದೋಷಾದಿಗಳು ಪರಿಹಾರಗೊಳ್ಳುತ್ತವೆಯೆಂಬ ನಂಬಿಕೆಯಿದೆ. ಅಂದರೆ, ಔಷಧದ ರೂಪದಲ್ಲಿಯೂ ಇದು ಬಳಕೆಯಲ್ಲಿದೆ. ಭಸ್ಮಧಾರಣದಿಂದ ಚರ್ಮಸಂಬಂಧವಾದ ರೋಗ-ರುಜಿನಗಳೂ ಸಹ ನಾಶಗೊಳ್ಳುತ್ತವಲ್ಲದೆ, ಚರ್ಮದ ಕಾಂತಿಯೂ ಸಹ ಇಮ್ಮಡಿಸುತ್ತದೆ. ಈ ವಿಭೂತಿಯನ್ನು 'ಶಿವನ ಮೈ ಬೆಳಗು' ಎಂದು ಕರೆದಿರುವುದು ಈ ದೃಷ್ಟಿಯಿಂದ ಅನ್ವರ್ಥವೇ ಆಗಿದೆ. ಅಂತೆಯೇ ಇದರ ಧಾರಣದಿಂದ ಶರೀರಕ್ಕೆ ಅತ್ಯಪೂರ್ವವಾದ ದೈವಿಕ ತೇಜಸ್ಸು ಸಂಭವಿಸುತ್ತದೆ.

ರುದ್ರಾಕ್ಷ :

ರುದ್ರ + ಅಕ್ಷ—ಈ ಎರಡು ಪದಗಳು ಒಂದುಗೂಡಿ 'ರುದ್ರಾಕ್ಷ' ಪದವಾಗಿದೆ. 'ಅಕ್ಷ' ಶಬ್ದಕ್ಕೆ—ಲವಣವಿಶೇಷ, ತೂಕವಿಶೇಷ, ರಥದ ಚಕ್ರದ ಅಂಚು, ಪಗಡೆ, ನೇತ್ರ —ಇತ್ಯಾದಿ ಅರ್ಥಗಳುಂಟು, 'ಅಕ್ಷ', 'ಅಕ್ಷಿ' ಈ ಎರಡೂ ಶಬ್ದಗಳ ಪ್ರಯೋಗವುಂಟು. 'ಅಕ್ಷಃ' ಎಂಬುದು ಪುಲ್ಲಿಂಗರೂಪ, 'ಅಕ್ಷಂ, ಅಕ್ಷಿ' ಎಂಬುದು ನಪುಂಸಕಲಿಂಗರೂಪ. 'ಅಶ್ನುತೇ—ವ್ಯಾಪ್ನೋತಿ ವಿಷಯಾನ್ ಸ್ವವೃತ್ತ್ಯಾ, ಸಂಯೋಗೇನ ವಾ'—ಎಂಬುದು ಈ ಶಬ್ದದ ನಿರ್ವಚನ. ಅಂದರೆ—ತನ್ನ ವೃತ್ತಿಯಿಂದ ಅಥವಾ ಸಂಯೋಗದಿಂದ ವಿಷಯಗಳನ್ನು ವ್ಯಾಪಿಸುವುದು—ಎಂದರ್ಥ, 'ಇಂದ್ರಿಯ' ಎಂಬುದು ಈ ಪದದ ಸಾಮಾನ್ಯಾರ್ಥ. 'ರುದ್ರಸ್ಯ ಅಕ್ಷಃ—ರುದ್ರಾಕ್ಷಃ' ಎಂಬುದು ರುದ್ರಾಕ್ಷಪದದ ಸಮಾಸ. ಇದು ರುದ್ರನ ನೇತ್ರದಿಂದ ಉತ್ಪನ್ನವಾದುದೆಂದು ಸಂಪ್ರದಾಯದ ಹೇಳಿಕೆ. ಶಿವನ ಉಪಾಸನೆಗೆ ರುದ್ರಾಕ್ಷಧಾರಣವು ವಿಭೂತಿಧಾರಣದಂತೆಯೇ ಅತ್ಯವಶ್ಯ. ಅಂತೆಯೇ 'ರುದ್ರೋ ಭೂತ್ವಾ ಯಜೇದ್ರುದ್ರಂ ನಾರುದ್ರೋ ರುದ್ರಮರ್ಚಯೇತ್' ಎಂಬ ವಾಕ್ಯ ಪ್ರಸಿದ್ಧವಾಗಿದೆ. ಜೀವನಿಗೆ 'ಶಿವೋಽಹಂ' ಭಾವವನ್ನೂ, ಹಾಗೆಯೇ 'ಸರ್ವಂ ಶಿವಮಯಂ' ಎಂಬ ಜ್ಞಾನವನ್ನೂ ಒಡಮೂಡಿಸಲು ರುದ್ರಾಕ್ಷ

ಧಾರಣವು ಬಹಳ ಮುಖ್ಯ. ಅಂತೆಯೇ 'ಎಲ್ಲವೂ ರುದ್ರನೆಂಬ ದೃಷ್ಟಿಯನ್ನು ನೀಡುವುದಾದ್ದರಿಂದ ರುದ್ರಾಕ್ಷ' ವೆಂಬ ಅನ್ವರ್ಥ ಹೆಸರು ಇದಕ್ಕೆ. ತನ್ನ ಶಿವದಾರದಲ್ಲಿ ಕಡೆಯ ಪಕ್ಷ ಒಂದು ರುದ್ರಾಕ್ಷವನ್ನಾದರೂ ವೀರಶೈವನಾದವನು ಧರಿಸಿರುವುದನ್ನು ನಾವು ಕಾಣಬಹುದು.

ಇದರ ಉತ್ಪತ್ತಿಯ ಬಗ್ಗೆ ಸಂಗ್ರಹವಾಗಿ ಹೀಗೆ ಹೇಳಬಹುದು—ತ್ರಿಪುರದಹನ ಕಾಲದಲ್ಲಿ, ಶಿವನು ತ್ರಿಪುರಾಸುರರನ್ನು ಸಂಹರಿಸುವ ಸಲುವಾಗಿ, ಆ ತ್ರಿಪುರಗಳು ಒಂದೇ ರೇಖೆಯಲ್ಲಿ ಬರುವ ಕ್ಷಣವನ್ನು ತೆರೆದ ಕಣ್ಣಿನಿಂದ ಸುದೀರ್ಘಕಾಲ ನೋಡಿದ್ದುದರಿಂದ, ಆತನ ನೇತ್ರಗಳಿಂದ ಅನೇಕ ಜಲಬಿಂದುಗಳು ಬಿದ್ದು, ಅವೇ ರುದ್ರಾಕ್ಷವಾದವು.

ಒಂದು ಮುಖದಿಂದ ಹಿಡಿದು ಹದಿನಾಲ್ಕು ಮುಖದವರೆಗೆ ರುದ್ರಾಕ್ಷಗಳುಂಟು. ನಿರ್ದಿಷ್ಟಸ್ಥಾನದಲ್ಲಿ, ನಿರ್ದಿಷ್ಟಮುಖದ, ನಿರ್ದಿಷ್ಟಸಂಖ್ಯೆಯ ರುದ್ರಾಕ್ಷಗಳನ್ನು ಧರಿಸಬೇಕೆಂಬುದು ನಿಯಮ, ಹೇಗೆಂದರೆ—

ಒಂದು ಮುಖದ ರುದ್ರಾಕ್ಷವನ್ನು ಶಿಖೆಯಲ್ಲಿ ; ಎರಡು ಮುಖದ ಒಂದು—ಮೂರು ಮುಖದ ಒಂದು—ಹನ್ನೆರಡು ಮುಖದ ಒಂದು—ಹೀಗೆ ಒಟ್ಟು ಮೂರು ರುದ್ರಾಕ್ಷಗಳನ್ನು ಶಿರಸ್ಸಿನಲ್ಲಿ; ಹನ್ನೊಂದು ಮುಖಗಳುಳ್ಳ ಮುವತ್ತಾರನ್ನು ಮಸ್ತಕದಲ್ಲಿ; ಹತ್ತು ಮುಖದ ಎರಡು—ಏಳುಮುಖದ ಎರಡು—ಐದುಮುಖದ ಎರಡು—ಹೀಗೆ ಒಟ್ಟು ಆರು—ಆರು ರುದ್ರಾಕ್ಷಗಳನ್ನು ಎರಡೂ ಕಿವಿಗಳಲ್ಲಿ ; ಆರು ಮುಖದ ಹದಿನಾರು—ಎಂಟುಮುಖದ ಹದಿನಾರು—ಹೀಗೆ ಒಟ್ಟು ಮುವತ್ತೆರಡನ್ನು ಕಂಠದಲ್ಲಿ; ನಾಲ್ಕು ಮುಖವುಳ್ಳ ಐವತ್ತನ್ನು ಎದೆಯ ಮೇಲೆ ; ಹದಿಮೂರು ಮುಖಗಳುಳ್ಳ ಹದಿನಾರು-ಹದಿನಾರು ರುದ್ರಾಕ್ಷಗಳನ್ನು ಎರಡೂ ಬಾಹುಗಳಲ್ಲಿ; ಒಂಭತ್ತು ಮುಖಗಳ ಹನ್ನೆರಡು—ಹನ್ನೆರಡು ರುದ್ರಾಕ್ಷಗಳನ್ನು ಎರಡೂ ಮುಂಗೈಗಳಲ್ಲಿ, ಹದಿನಾಲ್ಕು ಮುಖಗಳುಳ್ಳ ನೂರೆಂಟನ್ನು ಯಜ್ಞೋಪವೀತವಾಗಿ ಧರಿಸಬೇಕು.

ಈ ನಿರ್ದಿಷ್ಟಮುಖಗಳುಳ್ಳ ರುದ್ರಾಕ್ಷಗಳು ದೊರೆಯುವುದು ಕಷ್ಟ, ಅಥವಾ ದುರ್ಲಭ. ಆದರೆ, ಸಾಮಾನ್ಯವಾಗಿ ಐದು ಮುಖದ ರುದ್ರಾಕ್ಷಗಳನ್ನೆ ನಿರ್ದಿಷ್ಟ ಸಂಖ್ಯಾಕವಾಗಿ ನಿರ್ದಿಷ್ಟಸ್ಥಾನಗಳಲ್ಲಿ ಧರಿಸುವುದು ರೂಢಿಯಲ್ಲಿದೆ. 'ಗೌರೀಶಂಕರ' ಎಂಬ ಜೋಡಿರುದ್ರಾಕ್ಷವನ್ನು ಧರಿಸುವುದು ಪದ್ಧತಿಯಲ್ಲಿದೆ. ಧರಿಸುವ ರುದ್ರಾಕ್ಷಗಳು ಛಿದ್ರಗೊಂಡಿರಬಾರದು; ಸುವರ್ಣದಂತೆ ಕಾಂತಿಯುಳ್ಳವಾಗಿರಬೇಕು; ಬೇರಾರೂ ಧರಿಸಿದವುಗಳನ್ನು ಧರಿಸಬಾರದು. ರುದ್ರಾಕ್ಷಿಗಳನ್ನು ಧರಿಸುವುದರಿಂದ ಸಕಲಪಾಪವೂ ನಾಶವಾಗುತ್ತದೆ. ತೋಂಟದ ಶ್ರೀ ಸಿದ್ಧಲಿಂಗಯತಿಗಳು—

ತತ್ತ್ವ ಚಿಂತಾಮಣಿಗಳೆಂಬ ರುದ್ರಾಕ್ಷಿಗಳ
ಭಕ್ತಿಯ ದಾರದಲ್ಲಿ ಸರಗೊಳಿಸಿ,

ಯುಕ್ತಿ ವಿಧಾನವಿಡಿದು ಧರಿಸಿ,
ಸದ್ಯೋನ್ಮುಕ್ತನಾದೆನಯ್ಯಾ,
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !
ಲಲಾಟದಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯ ಮಾಲೆ,
ಮುಖದಲ್ಲಿ ಶಿವಮಂತ್ರ, ಅಂಗದ ಮೇಲೆ ಶಿವಲಿಂಗಧಾರಣವುಳ್ಳ
ಶಿವಭಕ್ತನೆ ಸಾಕ್ಷಾತ್ ಶಿವ ತಾನೆ ನೋಡಾ
ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೆ !

ಹೀಗೆ ಪ್ರಶಂಸಿಸಿರುತ್ತಾರೆ, ಘನಕ್ಕೆ ಘನ ಶ್ರೀ ರುದ್ರಾಕ್ಷಿ ; ರುದ್ರಾಕ್ಷಿಯ ಧರಿಸಿದಾತ ಮರ್ತ್ಯನಲ್ಲ, ಸಾಕ್ಷಾತ್ ಶಿವ ; ಇದು ಪರಬ್ರಹ್ಮ ಪರಶಿವನ ಕೊಡುಗೆಯಾಗಿರುವುದರಿಂದ ಪರಮ ಪುಣ್ಯಪ್ರದವಾದುದು. ಚಿತ್ತಶುದ್ಧಿಯಿಂದ ರುದ್ರಾಕ್ಷಧಾರಣ ಮಾಡಿದವನು ಸಾಕ್ಷಾತ್ ರುದ್ರನೇ ಹೌದು.

ಅಣ್ಣನವರು ಇದರ ಬಗ್ಗೆ ಹೀಗೆ ಹೇಳಿದ್ದಾರೆ —
ಅಯ್ಯಾ ! ಎನಗೆ ರುದ್ರಾಕ್ಷಿಯೇ ಸರ್ವಪಾವನವು,
ಅಯ್ಯಾ ! ಎನಗೆ ರುದ್ರಾಕ್ಷಿಯೇ ಸರ್ವಕಾರಣವು,
ಅಯ್ಯಾ ! ಎನಗೆ ರುದ್ರಾಕ್ಷಿಯೇ ಸರ್ವಸಾಧನವು,
ಅಯ್ಯಾ ! ಎನಗೆ ರುದ್ರಾಕ್ಷಿಯೇ ಸರ್ವಪಾಪಕ್ಷಯವು,
ಅಯ್ಯಾ ! ಪಂಚವಕ್ತ್ರಂಗಳೇ
ಪಂಚಮುಖ ರುದ್ರಾಕ್ಷಿಗಳಾದವಾಗಿ,
ಅಯ್ಯಾ ! ಕೂಡಲಸಂಗಮದೇವಾ ! ಎನ್ನ
ಮುಕ್ತಿಪಥಕ್ಕೆ ಶ್ರೀ ರುದ್ರಾಕ್ಷಿಯೇ ಸಾಧನವಯ್ಯಾ !
ಅಯ್ಯಾ ! ರುದ್ರಾಕ್ಷಿಯಿಂದೆ ಪರಿದೆನು ಭವಪಾಶಂಗಳ ;
ಅಯ್ಯಾ ! ರುದ್ರಾಕ್ಷಿಯಿಂದೆ ಮುರಿದೆನು ತನುಗುಣಾದಿಗಳ ;
ಅಯ್ಯಾ ! ರುದ್ರಾಕ್ಷಿಯಿಂದೆ ಒರಸಿದೆನು ಮಹಾಮಾಯೆಯ ;
ಅಯ್ಯಾ ! ರುದ್ರಾಕ್ಷಿಯಿಂದೆ ಕಳೆದೆ ಪಂಚಮಹಾಪಾತಕವ ;
ಅಯ್ಯಾ ! ಕೂಡಲಸಂಗಮದೇವಾ !
ಶ್ರೀ ಮಹಾರುದ್ರಾಕ್ಷಿಯಿಂದೆ ಗೆಲಿದೆನಯ್ಯಾ
ಸಕಲ ದುರಿತಗಳನು. ಇತ್ಯಾದಿ.

ರುದ್ರಾಕ್ಷಧಾರಣದಿಂದ ಘೋರಪಾಪಗಳೂ, ನಾಶಗೊಳ್ಳುತ್ತವೆ. ಇಷ್ಟೇ ಅಲ್ಲ, ಇದರ ದರ್ಶನ–ಸ್ಪರ್ಶನಾದಿಗಳೂ ಸಹ ಅಪಾರ ಪುಣ್ಯಪ್ರದಗಳೆಂದ ಮೇಲೆ ಇವುಗಳ ಪೂಜೆ ಅನಂತಫಲದಾಯಕವೆಂದು ಹೇಳಲೇಬೇಕಾಗಿಲ್ಲ. ವ್ಯಕ್ತಿಯ ಮರಣಕಾಲದಲ್ಲಿ ರುದ್ರಾಕ್ಷವನ್ನು ಬಾಯಲ್ಲಿಟ್ಟು ನೀರುಬಿಡುವ ಪದ್ಧತಿಯಿದೆ. ಹೀಗೆ ತನ್ನ ಅಂತ್ಯಕಾಲ

ದಲ್ಲಿ ರುದ್ರಾಕ್ಷಜಲಪಾನ ಮಾಡಿ, ಶಿವೈಕ್ಯನಾಗುವನು. ರುದ್ರಲೋಕವನ್ನೇ ಸೇರುವನೆಂದು ಶಾಸ್ತ್ರಗಳು ಹೇಳುತ್ತಿವೆ.

ವೈಜ್ಞಾನಿಕವಾಗಿ ರುದ್ರಾಕ್ಷದ ಬಗ್ಗೆ ಒಂದೆರಡು ಮಾತು —

ಇದು ಗುರುಭೂತ (ತೂಕವುಳ್ಳ)ವಾದುದು. ಸ್ನಿಗ್ಧತೆಯುಳ್ಳದ್ದು, ಮಧುರ ರಸಾತ್ಮಕ, ಮಧುರವಿಪಾಕ, ಶೀತಹಾರಿ, ವಾತ-ಪಿತ್ತಶಾಮಕ. ಇದರ ರಸಲೇಪನ ತಾಪಶಮನಕಾರಿ ; ಚಂದನ (ಶ್ರೀಗಂಧ)—ರುದ್ರಾಕ್ಷಗಳ ರಸಲೇಪನ ಶರೀರದ ಒಳ ಹಾಗೂ ಹೊರಗಿನ ತಾಪವನ್ನು ಹೋಗಲಾಡಿಸುತ್ತದೆ. ರುದ್ರಾಕ್ಷ-ಚಂದನ-ಜೇನು ತುಪ್ಪ ಇವುಗಳ ಲೇಪನದಿಂದ ಸಿಡುಬು- ದಡಾರ ಮೊದಲಾದ ರೋಗಗಳು ನಾಶವಾಗುತ್ತವೆ. ಮನೋವಿಕಾರವನ್ನು ಹೋಗಲಾಡಿಸುವಂತಹುದು ; ರಕ್ತದ ಒತ್ತಡವನ್ನು ಸಮೀಕರಿಸುತ್ತದೆ ; ದಾಹ-ಜ್ವರಾದಿಗಳನ್ನು ಶಮನಗೊಳಿಸುತ್ತದೆ.

ರುದ್ರಾಕ್ಷಮಾಲೆಯನ್ನು ಸಿದ್ಧಪಡಿಸುವಲ್ಲಿ ಒಂದು ನಿರ್ದಿಷ್ಟ ಕ್ರಮವಿದೆ. ರುದ್ರಾಕ್ಷದಲ್ಲಿ ಮುಖ ಪುಚ್ಛಗಳೆಂಬ ಭಾಗಗಳಿರುತ್ತವೆ. ಮೇರುಮಣಿಯನ್ನು ಊರ್ಧ್ವಮುಖವಾಗಿಸಬೇಕು. ಮೇರುಮಣಿಯ ಪುಚ್ಛ ಹಾಗೂ ಮಾಲೆಯ ಎರಡೂ ಪಾರ್ಶ್ವದ ಮೊದಲ ಎರಡೂ ರುದ್ರಾಕ್ಷಗಳ ಪುಚ್ಛ—ಒಂದುಗೂಡಿರಬೇಕು. ಮುಖಕ್ಕೆ ಪುಚ್ಛ ಸೇರಿಸಿ ಪೋಣಿಸಬೇಕು. ಮೇರುಮಣಿಯ ಮುಖದ ರಂಧ್ರಕ್ಕೆ ನಾಗಪಾಶ (ಗಂಟು) ಇರಬೇಕು. ಹೀಗೆ ಸಿದ್ಧಪಡಿಸಿದ ಮಾಲೆಯನ್ನು ಗಂಧದ ಜಲದಲ್ಲಿ ತೊಳೆಸಿ, ಅನಂತರ ಪಂಚಗವ್ಯ—ಶುದ್ಧೋದಕಗಳಿಂದ ತೊಳೆದು, ಶಿವಕವಚ, ರುದ್ರಕವಚಾದಿ ಮಂತ್ರಗಳಿಂದ ಅಭಿಮಂತ್ರಿಸಿ, ಬಳಿಕ ಮೂಲಮಂತ್ರವನ್ನು ಜಪಿಸಿ, ಸದ್ಯೋಜಾತಾದಿ ಪಂಚಬ್ರಹ್ಮಮಂತ್ರಗಳಿಂದ ಪ್ರೋಕ್ಷಿಸಿ, ನೂರೆಂಟು ಸಾರಿ ಮೂಲಮಂತ್ರ ಜಪಿಸಿ, ಅದನ್ನು ಶುದ್ಧ ಪ್ರದೇಶದಲ್ಲಿಟ್ಟು, ಅದರಲ್ಲಿ ಉಮಾಮಹೇಶ್ವರನ್ನು ನ್ಯಾಸ ಮಾಡಿ, ಅನಂತರ ಆ ಜಪಮಾಲೆಯನ್ನು ನಿಯತರೀತಿಯಲ್ಲಿ ಹಿಡಿದುಕೊಂಡು ಜಪ ಮಾಡಬೇಕು. ಮಾಲೆಗಾಗಿ ಕಾರ್ಪಾಸ (ಹತ್ತಿ) ಸೂತ್ರ, ತಾಮ್ರದ ತಂತಿ, ಬೆಳ್ಳಿಯ ತಂತಿ, ಚಿನ್ನದ ತಂತಿ—ಇವುಗಳಲ್ಲಿ ಒಂದನ್ನು ಯಥಾಶಕ್ತಿ ಬಳಸಬಹುದು. ರುದ್ರಾಕ್ಷವನ್ನು ಕಲ್ಲಿನ ಮೇಲೆ ಉಜ್ಜಿದಾಗ, ಸ್ವರ್ಣರೇಖೆಯಂತೆ ರೇಖೆ ಕಂಡುಬಂದರೆ, ಅದು ಶ್ರೇಷ್ಠವಾದ ರುದ್ರಾಕ್ಷವೆಂದು ಹೇಳಲಾಗುತ್ತದೆ.

ಮಂತ್ರ :—'ಮನನಾತ್ ಮಂತ್ರಃ'—ಯಾವಾಗಲೂ ಮನಸ್ಸಿನಲ್ಲಿ ಅನುಸಂಧಾನ ಮಾಡುವುದರಿಂದ ಇದಕ್ಕೆ 'ಮಂತ್ರ' ಎಂದು ಹೆಸರು. ಮಂತ್ರ ಪದಕ್ಕೆ—ವೇದಮಂತ್ರ. ಪಂಚಾಕ್ಷರಾದಿ ಮಂತ್ರವಿಶೇಷ, ಗುಪ್ತಸಮಾಲೋಚನೆ, (ಮಂತ್ರಾಲೋಚನೆ), ಉಪಾಯ, ಬುದ್ಧಿಯ ಉಪದೇಶ, ಚಿಂತನೆ ಇತ್ಯಾದಿ ಅರ್ಥಗಳುಂಟು. ಜಪಯೋಗ್ಯವಾದ ಮಂತ್ರಗಳು ಅನಂತಕೋಟಿ, ಏಕಾಕ್ಷರ —'ಓಂ' ; ದ್ವ್ಯಕ್ಷರ 'ಶಿವ' ; ತ್ರ್ಯಕ್ಷರ - 'ಬಸವ' ; ಪಂಚಾಕ್ಷರ—'ನಮಃ ಶಿವಾಯ' ; ಷಡಕ್ಷರ—'ಓಂ ನಮಃ

ಶಿವಾಯ' ;—ಇತ್ಯಾದಿಗಳನ್ನು ಉದಾಹರಣೆಯಾಗಿ ತಿಳಿಯಬಹುದು. ಇಂತಹ ಸಪ್ತ ಕೋಟಿ ಮಂತ್ರಗಳಲ್ಲಿ ಪಂಚಾಕ್ಷರ ಮಹಾಮಂತ್ರವೇ ಶ್ರೇಷ್ಠವೆಂದು ಸಿದ್ಧಾಂತಶಿಖಾ ಮಣಿ ಹೇಳುತ್ತಿದೆ.

ಶ್ರೀರುದ್ರದಲ್ಲಿ—"ನಮಃ ಶಂಭವೇ ಚ... .... ಮಯಸ್ಕರಾಯ ಚ ನಮಃ ಶಿವಾಯ ಚ ಶಿವತರಾಯ ಚ"– ಎಂಬ ವಾಕ್ಯದಲ್ಲಿ ಈ ಮಂತ್ರವು ಬಹು ಪ್ರಸಿದ್ಧವಾಗಿದೆ. 'ಶಿವನಿಗೆ ನಮಸ್ಕಾರ' ಎಂಬುದು ಈ ಮಂತ್ರದ ಅರ್ಥ. ಇದಕ್ಕೆ ಓಂಕಾರ ಸೇರಿದರೆ ಷಡಕ್ಷರ ಮಂತ್ರವೆನಿಸುತ್ತದೆ.

'ಶಿವ'—ಎಂದರೆ 'ಮಂಗಳಕರ' ಎಂದರ್ಥ. ಆಣವಾದಿ ಮಲತ್ರಯರಹಿತನಾಗಿ, ಸ್ವಯಂಪರಿಶುದ್ಧನಾಗಿರುವುದರಿಂದ ಶಿವನಿಗೆ 'ಶಿವ' ಎಂಬ ಹೆಸರು ಸಲ್ಲುತ್ತದೆ. ಅಂತೆಯೇ ಈತನ 'ಅಭಿಧಾನ' (ಹೆಸರು)ವೆನಿಸಿರುವ ಈ ಮಂತ್ರವನ್ನು ಜಪಿಸುವವರಿಗೆ 'ಮಂಗ ಳತ್ವ' ಅಥವಾ 'ಶಿವತ್ವ'ವನ್ನೇ ಪರಶಿವನು ನೀಡುತ್ತಾನಾದ್ದರಿಂದ ಈ ಮಂತ್ರವು ಅತಿಗಹನವೂ ಶ್ರೇಷ್ಠವೂ ಆಗಿರುತ್ತದೆ.

'ಶಿವ' ಎಂಬ ಎರಡಕ್ಷರಗಳ ಪೈಕಿ, 'ಶಿ'ಕಾರದ ಉಚ್ಚಾರಣೆಯು, ನಮ್ಮ ಒಳಗಿನ ಪಾಪರಾಶಿಯನ್ನು ಹೊರದೂಡಿಸುತ್ತದೆ; 'ವ'ಕಾರದ ಉಚ್ಚಾರಣೆಯು, ಹೊರಗಿನ ಪಾಪರಾಶಿಯನ್ನು ಒಳಕ್ಕೆ ಪ್ರವೇಶಿಸದಂತೆ (ಕವಾಟ ಅಂದರೆ ಬಾಗಿಲು ಮುಚ್ಚುವುದ ರಿಂದ ಪ್ರವೇಶವನ್ನು ತಡೆಯುವಂತೆ) ತಡೆಯುತ್ತದೆ ; ಅಂತೆಯೇ ಇದು ಬಹು ಪವಿತ್ರವಾದ ಮಂತ್ರ.

'ಓಂ'ಕಾರದಲ್ಲಿ ಅ–ಉ–ಮ್–ಬಿಂದು–ನಾದ ಎಂಬ ಐದು ಅಂಶಗಳುಂಟು. ಇವುಗಳಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಶಕ್ತಿ, ಶಿವ—ಇವರು ಅಧಿದೇವತೆಗಳು. ನ, ಮಃ, ಶಿ, ವಾ, ಯ—ಎಂಬ ಈ ಐದು ಅಕ್ಷರಗಳಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ ಈಶ್ವರ ಸದಾಶಿವ—ಇವರು ಅಧಿದೇವತೆಗಳೆಂದು ಹೇಳಲಾಗುತ್ತದೆ.

ಪೃಥವೀ, ಅಪ್, ತೇಜಸ್, ವಾಯು, ಆಕಾಶಗಳೆಂಬ ಪಂಚಭೂತಗಳು, ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ಪಂಚತನ್ಮಾತ್ರೆಗಳು, ಘ್ರಾಣ, (ನಾಸಿಕ), ಜಿಹ್ವಾ, (ನಾಲಗೆ), ನೇತ್ರ, ಚರ್ಮ (ತ್ವಕ್), ಶ್ರವಣ (ಕಿವಿ), ಪಂಚ ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳು, ಸದ್ಯೋ ಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳೆಂಬ ಪಂಚಬ್ರಹ್ಮರು, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳು,—ಇತ್ಯಾದಿಗಳೆಲ್ಲವೂ ಈ ಪಂಚಾಕ್ಷರ ಮಹಾಮಂತ್ರದ ಪಂಚ ಅಕ್ಷರಗಳಿಂದ ಬೋಧಿತವಾಗುತ್ತವೆ. ಶಿವ ಪೂಜಾ ನಿಷ್ಠನಾದವನು, ಪ್ರಣವಸಹಿತವಾದ ಈ ಪಂಚಾಕ್ಷರ ಮಂತ್ರವನ್ನು ಜಪಿಸ ಬೇಕು.

ಜಪದಲ್ಲಿ—ವಾಚಿಕ, ಉಪಾಂಶು, ಮಾನಸಿಕ,—ಎಂದು ಮೂರು ವಿಧ. ಎಲ್ಲ ರಿಗೂ ಕೇಳಿಸುವಂತೆ ಜಪಿಸುವುದು 'ವಾಚಿಕ' ತುಟಿಯಲುಗಿಸಿ ಉಚ್ಚರಿಸಿದರೂ, ಅಕ್ಕ

ಪಕ್ಕದವರಿಗೆ ಕೇಳಿಸದಿರುವುದು, 'ಉಪಾಂಶು'. ತುಟಿಯನ್ನೂ ಅಲುಗಿಸದೆ, ಕೇವಲ ಮನಸ್ಸಿನಲ್ಲಿ ಜಪಿಸುವುದು 'ಮಾನಸಿಕ'. 'ಅಗರ್ಭ' ಮತ್ತು 'ಸಗರ್ಭ'ವೆಂಬ ಮತ್ತೂ ಎರಡು ಪ್ರಕಾರ ಜಪಕ್ರಮಂಗಳುಂಟು. ಸುಮ್ಮನೆ ಜಪಿಸುವುದು 'ಅಗರ್ಭಜಪ' ; ಮಂತ್ರದ ಅರ್ಥವನ್ನರಿತು, ಜಪಯೋಗ್ಯದೇವತೆಯನ್ನು ಹೃದಯದಲ್ಲಿ ಭಾವಿಸಿ, ತಲ್ಲೀನಮನಸ್ಕನಾಗಿ ಜಪಿಸುವುದು 'ಸಗರ್ಭಜಪ'. ಈ 'ಸಗರ್ಭಜಪ'ವೇ ವೀರ ಶೈವನಿಗೆ ವಿಹಿತವಾದ ಜಪವಾಗಿದೆ.

ಮಂತ್ರಜಪ ಮಾಡುವ ಮುನ್ನ ಅಂಗನ್ಯಾಸ, ಕರನ್ಯಾಸ, ದೇಹನ್ಯಾಸಗಳನ್ನು ಮಾಡಬೇಕು, ಇದಕ್ಕೂ ಮುನ್ನ ಸಂಕಲ್ಪ ಮಾಡಿ, ಋಷಿ, ದೇವತೆ, ಛಂದಸ್— ಇತ್ಯಾದಿಗಳನ್ನೂ ನ್ಯಾಸ ಮಾಡಬೇಕು. ಈ ಕ್ರಮವನ್ನು ಗುರುಮುಖದಿಂದಲೇ ಅರಿಯ ಬೇಕು. ಏಕೆಂದರೆ, ಸಂಪ್ರದಾಯಭೇದದಿಂದ ಜಪಕ್ರಮದಲ್ಲಿಯೂ ಭೇದವಿದೆ.

ಮಂತ್ರ ಜಪಮಾಡುವಾಗ ಮಂತ್ರೋಚ್ಚಾರಣೆ ಅತಿಸಾವಕಾಶವಾಗಿಯೂ ಇರ ಬಾರದು ಅಥವಾ ಅತಿವೇಗವಾಗಿಯೂ ಇರಬಾರದು ; 'ನ ದ್ರುತಂ, ನ ವಿಲಂಬಿತಂ'. ಶ್ರೀ ತೋಂಟದ ಸಿದ್ಧಲಿಂಗ ಯತಿಗಳವರ ಈ ವಚನಗಳಲ್ಲಿ ಈ ಮಂತ್ರದ ಸಾರ ಸರ್ವಸ್ವವೆಲ್ಲ ಅಡಗಿರುವುದನ್ನು ಕಾಣಬಹುದು—

(೧) ಓಂಕಾರವೆ ಶಿವ, ಯಕಾರವೆ ಸದಾಶಿವ,
ವಕಾರವೆ ಈಶ್ವರ, ಶಿಕಾರವೆ ಮಹೇಶ್ವರ,
ಮಕಾರವೆ ಈಶ, ನಕಾರವೆ ಈಶಾನ,
ಈ ಷಡಕ್ಷರವೆ ಷಡ್ವಿಧಮಂತ್ರಮೂರ್ತಿಗಳಾಗಿ
ಒಪ್ಪುತಿರ್ಪರಯ್ಯಾ.

ಮತ್ತೆ,

ನಕಾರವೆ ಮೂರ್ತಿಬ್ರಹ್ಮ, ಮಕಾರವೆ ಪಿಂಡಬ್ರಹ್ಮ,
ಶಿಕಾರವೆ ಕಲಾಬ್ರಹ್ಮ, ವಕಾರವೆ ಆನಂದಬ್ರಹ್ಮ,
ಯಕಾರವೆ ವಿಜ್ಞಾನಬ್ರಹ್ಮ, ಓಂಕಾರವೆ ಪರಬ್ರಹ್ಮ,
ಈ ಷಡಕ್ಷರವೆ ಷಡ್ವಿಧಬ್ರಹ್ಮವೆಂದು
ಪೇಳಲ್ಪಟ್ಟಿತ್ತು ನೋಡಾ !

ಮತ್ತೆ,

ನಕಾರವೆ ಕ್ರಿಯಾಶಕ್ತಿ, ಮಕಾರವೆ ಜ್ಞಾನಶಕ್ತಿ,
ಶಿಕಾರವೆ ಇಚ್ಛಾಶಕ್ತಿ, ವಕಾರವೆ ಆದಿಶಕ್ತಿ
ಯಕಾರವೆ ಪರಶಕ್ತಿ, ಓಂಕಾರವೆ ಚಿಚ್ಛಕ್ತಿ,
ಈ ಮಂತ್ರ ಶಕ್ತಿಯರ
ಸ್ವರೂಪವೆಂದರಿವುದು ನೋಡಾ !

ಮತ್ತೆ,

ನಕಾರವೆ ಕರ್ಮಸಾದಾಖ್ಯ, ಮಕಾರವೆ ಕರ್ತೃಸಾದಾಖ್ಯ,
ಶಿಕಾರವೆ ಮೂರ್ತಿಸಾದಾಖ್ಯ, ವಕಾರವೆ ಅಮೂರ್ತಿಸಾದಾಖ್ಯ,
ಯಕಾರವೆ ಶಿವಸಾದಾಖ್ಯ, ಓಂಕಾರವೆ ಮಹಾಸಾದಾಖ್ಯ ನೋಡಾ !

ಮತ್ತೆ,

ನಕಾರವೆ ಪೀತವರ್ಣ, ಮಕಾರವೆ ನೀಲವರ್ಣ,
ಶಿಕಾರವೆ ಕುಂಕುಮವರ್ಣ, ವಕಾರವೆ ಶ್ವೇತವರ್ಣ,
ಯಕಾರವೆ ಸ್ಫಟಿಕವರ್ಣ, ಓಂಕಾರವೆ ಜ್ಯೋತಿರ್ಮಯಸ್ವರೂಪು,
ಇಂತಿವು ಮಂತ್ರಮೂರ್ತಿಯ ವರ್ಣಭೇದವೆಂದರಿವುದಯ್ಯ !

ಮತ್ತೆ,

ನಕಾರವೆ ಸದ್ಯೋಜಾತ ಮಂತ್ರಮೂರ್ತಿ,
ಮಕಾರವೆ ವಾಮದೇವ ಮಂತ್ರಮೂರ್ತಿ,
ಶಿಕಾರವೆ ಅಘೋರ ಮಂತ್ರಮೂರ್ತಿ,
ವಕಾರವೆ ತತ್ಪುರುಷ ಮಂತ್ರಮೂರ್ತಿ,
ಯಕಾರವೆ ಈಶಾನ್ಯ ಮಂತ್ರಮೂರ್ತಿ,
ಓಂಕಾರವೆ ಮಹಾಮಂತ್ರಮೂರ್ತಿ,
ಇಂತಿವು ಮಂತ್ರಮೂರ್ತಿಯ
ವದನಭೇದವೆಂದರಿವುದಂ ನೋಡಾ !

ಮತ್ತೆ,

ನಕಾರವೆ ಸತ್ತು, ಮಕಾರವೆ ಚಿತ್ತು,
ಶಿಕಾರವೆ ಆನಂದ, ವಕಾರವೆ ನಿತ್ಯ,
ಯಕಾರವೆ ಪರಿಪೂರ್ಣ, ಓಂಕಾರವೆ
ನಿರಂಜನ ಸ್ವರೂಪವೆಂದರಿವುದಯ್ಯಾ !

ಮತ್ತೆ,

ನಕಾರವೆ ಆಚಾರಲಿಂಗ, ಮಕಾರವೆ ಗುರುಲಿಂಗ,
ಶಿಕಾರವೆ ಶಿವಲಿಂಗ, ವಕಾರವ ಜಂಗಮಲಿಂಗ,
ಯಕಾರವ ಪ್ರಸಾದಲಿಂಗ, ಓಂಕಾರವೆ ಮಹಾಲಿಂಗ,
ಈ ಷಡಕ್ಷರ ಲಿಂಗಮಂತ್ರವೆಂದರಿವುದಯ್ಯ,
ಇಂತಿವು ಲಿಂಗಷಡಕ್ಷರವೆಂದು ಪೇಳಲ್ಪಡುವುದು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ !

(೨) ನಕಾರವೆ ಪೃಥ್ವಿ, ಮಕಾರವೆ ಅಪ್ಪು,
ಶಿಕಾರವೆ ಅಗ್ನಿ, ವಕಾರವೆ ವಾಯು,
ಯಕಾರವೆ ಆಕಾಶ, ಓಂಕಾರವೆ ಆತ್ಮಸ್ವರೂಪ ನೋಡಾ !

ಮತ್ತೆ,

ನಕಾರವೆ ಬ್ರಹ್ಮ, ಮಕಾರವೆ ವಿಷ್ಣು,
ಶಿಕಾರವೆ ರುದ್ರ, ವಕಾರವೆ ಈಶ್ವರ,
ಯಕಾರವೆ ಸದಾಶಿವ, ಓಂಕಾರವೆ ಮಹಾತ್ಮನು ನೋಡಾ !

ಮತ್ತೆ,

ಅಂತರ್ಯಾಮಿಯೆ ನಕಾರ, ಚೈತನ್ಯವೆ ಮಕಾರ,
ಭವನೆ ಶಿಕಾರ, ಕರ್ತಾರನೆ ವಕಾರ,
ಕ್ಷೇತ್ರಜ್ಞನೆ ಯಕಾರ, ಶಿವನೆ ಓಂಕಾರ ನೋಡಾ !

ಮತ್ತೆ,

ಕರ್ಮಾಂಗಸ್ವರೂಪನಪ್ಪ ಭಕ್ತನೆ ನಕಾರ,
ವಿದ್ಯಾಂಗಸ್ವರೂಪನಪ್ಪ ಮಹೇಶ್ವರನೆ ಮಕಾರ,
ಕಾಮಾಂಗಸ್ವರೂಪನಪ್ಪ ಪ್ರಸಾದಿಯೆ ಶಿಕಾರ,
ಯೋಗಾಂಗಸ್ವರೂಪನಪ್ಪ ಪ್ರಾಣಲಿಂಗವೆ ವಕಾರ,
ಭೂತಾಂಗಸ್ವರೂಪನಪ್ಪ ಶರಣನೆ ಯಕಾರ,
ಶಿವಾಂಗಸ್ವರೂಪನಪ್ಪ ಐಕ್ಯನೆ ಓಂಕಾರ ನೋಡಾ !

ಮತ್ತೆ,

ನಕಾರವೆ ಶ್ರದ್ಧಾಭಕ್ತಿ, ಮಕಾರವೆ ನೈಷ್ಠಿಕಭಕ್ತಿ,
ಶಿಕಾರವೆ ಸಾವಧಾನಭಕ್ತಿ, ವಕಾರವೆ ಅನುಭಾವಭಕ್ತಿ,
ಯಕಾರವೆ ಆನಂದಭಕ್ತಿ, ಓಂಕಾರವೆ ಸಮರಸಭಕ್ತಿ ನೋಡಾ !

ಮತ್ತೆ

ನಕಾರವೆ ಆತ್ಮತತ್ತ್ವ, ಮಕಾರವೆ ವಿದ್ಯಾತತ್ತ್ವ,
ಶಿಕಾರವೆ ಶಿವತತ್ತ್ವ, ವಕಾರವೆ ಈಶ್ವರತತ್ತ್ವ,
ಯಕಾರವೆ ಸದಾಶಿವತತ್ತ್ವ,
ಓಂಕಾರವೆ ಪರತತ್ತ್ವ ನೋಡಾ !

ಮತ್ತೆ,

ನಕಾರವೆ ಸುಚಿತ್ತಹಸ್ತ, ಮಕಾರವೆ ಸುಬುದ್ಧಿಹಸ್ತ,
ಶಿಕಾರವೆ ನಿರಹಂಕಾರಹಸ್ತ, ವಕಾರವೆ ಸುಮನಹಸ್ತ,

ಯಕಾರವೆ ಸುಜ್ಞಾನಹಸ್ತ, ಓಂಕಾರವೆ ಸದ್ಭಾವಹಸ್ತ,
ಇಂತಿವು ಅಂಗಷಡಕ್ಷರ ಕಾಣಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ !

(೩) ಆಧಾರಚಕ್ರದಲ್ಲಿ ನಕಾರ ಸ್ವಾಯತ,
ಸ್ವಾಧಿಷ್ಠಾನಚಕ್ರದಲ್ಲಿ ಮಕಾರ ಸ್ವಾಯತ,
ಮಣಿಪೂರಕಚಕ್ರದಲ್ಲಿ ಶಿಕಾರ ಸ್ವಾಯತ,
ಅನಾಹತ ಚಕ್ರದಲ್ಲಿ ವಕಾರ ಸ್ವಾಯತ,
ವಿಶುದ್ಧಿ ಚಕ್ರದಲ್ಲಿ ಯಕಾರ ಸ್ವಾಯತ,
ಆಜ್ಞಾ ಚಕ್ರದಲ್ಲಿ ಓಂಕಾರ ಸ್ವಾಯತ,
ಇದು ಕಾರಣ, ಶರಣರ ಕಾಯವೆ
ಷಡಕ್ಷರಮಂತ್ರಶರೀರವಾಗಿ,
ಸರ್ವಾಂಗವೆಲ್ಲವು ಜ್ಞಾನಕಾಯ ಕಾಣಾ !
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ !

(೪) ಓಂಕಾರವೆ ಪಂಚಭೂತಾತ್ಮಮಯ ನೋಡಾ !
ನಕಾರವೆ ದಶವಿಧೇಂದ್ರಿಯ,
ಮಕಾರವೆ ಮನಪಂಚಕಂಗಳು ನೋಡಾ !
ಶಿಕಾರವೆ ಪ್ರಾಣಸ್ವರೂಪವು,
ವಕಾರವೆ ದಶವಾಯುಸ್ವರೂಪವು,
ಯಕಾರವು ತ್ರಿಗುಣಸ್ವರೂಪು, ನೋಡಾ !
ಓಂಕಾರವೆ ಪಾದಾದಿಮಸ್ತಕ ಪರ್ಯಂತರ
ಪರಿಪೂರ್ಣನಾಗಿ ತ್ವಙ್ಮಯನಾಗಿರ್ಪುದು,
ನಕಾರವೆ ರುಧಿರಮಯವಾಗಿರ್ಪುದು,
ಮಕಾರವೆ ಮಾಂಸಮಯವಾಗಿರ್ಪುದು,
ಶಿಕಾರವೆ ಮೇದಸ್ಸುಮಯವಾಗಿರ್ಪುದು,
ವಕಾರವೆ ಅಸ್ಥಿಮಯವಾಗಿರ್ಪುದು,
ಯಕಾರವೆ ಮಜ್ಜಾಮಯವಾಗಿರ್ಪುದು,
ಈ ಷಡಕ್ಷರ ಮಂತ್ರವೆಲ್ಲವು ಕೂಡಿ ಶುಕ್ಲಮಯವಾಗಿರ್ಪುದು,
ಇದು ಕಾರಣ, ಶರಣನ ಶರೀರವೆ ಶಿವನ ಶರೀರ ನೋಡಾ !
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ !

ಈ ವಚನಗಳ ಸಾರವನ್ನರಿತರೆ ಸಾಕು, ಈ ಮಂತ್ರದ ಬಗ್ಗೆ ಮತ್ತಾವ ವಿವರಣೆಯೂ ಅನವಶ್ಯ.

ಪಾದೋದಕ :

'ಪಾದೋದಕ', ಪದದಲ್ಲಿ ಪಾದ+ಉದಕ—ಈ ಎರಡು ಪದಗಳ ಯೋಗವಿದೆ. 'ಪಾದ' ಶಬ್ದವು 'ಪರಮಾನಂದ' ಎಂಬರ್ಥವನ್ನೂ, 'ಉದಕ' ಶಬ್ದವು 'ಶಿವಜ್ಞಾನ' ಎಂಬರ್ಥವನ್ನೂ ಕೊಡುವುದರಿಂದ, ಈ 'ಜ್ಞಾನಾನಂದಗಳ ಸಂಗಮವೇ ಪಾದೋದಕ' —ಎಂಬುದು ಒಂದರ್ಥ.

'ಪಾದ' ಶಬ್ದವು 'ಗುರು'ವನ್ನೂ, 'ಉದಕ' ಶಬ್ದವು 'ಶಿಷ್ಯ'ನನ್ನೂ ಬೋಧಿಸುವುದರಿಂದ, 'ಪಾದೋದಕ' ಶಬ್ದವು ಈ ಗುರು-ಶಿಷ್ಯರ ಐಕ್ಯವನ್ನು ಬೋಧಿಸುತ್ತದೆ-ಎಂಬುದು ಎರಡನೆಯ ಅರ್ಥ.

ವೀರಶೈವದಲ್ಲಿ ಪಾದೋದಕವನ್ನು ಪಡೆಯುವ ಪದ್ಧತಿಯು ಅನನ್ಯಸಾಧಾರಣವಾದುದಾಗಿದೆ. ಗುರು—ಜಂಗಮರ ಪಾದಾಂಗುಷ್ಠ ಹಾಗೂ ಶಿಷ್ಯನ ಹಸ್ತಾಗ್ರ—ಇವುಗಳು ಪಾದೋದಕಪ್ರಕ್ರಿಯೆಯಲ್ಲಿ ಪ್ರಧಾನಪಾತ್ರವಹಿಸುತ್ತವೆ. "ಅಂಗುಷ್ಠಾಗ್ರೇ ಅಷ್ಟಷಷ್ಟಿತೀರ್ಥಾನ್ಯಸ್ಮಿನ್ ವಸಂತಿ ಹಿ" ಎಂಬ ಉಕ್ತಿಯಂತೆ, ಶ್ರೀ ಗುರು — ಜಂಗಮರ ಅಂಗುಷ್ಠಾಗ್ರದಲ್ಲಿ ಅರವತ್ತೆಂಟು ತೀರ್ಥಗಳು ನೆಲೆಸಿರುತ್ತವೆಯೆಂಬುದು ಒಂದು ನಂಬಿಕೆ. ಈ ಪಾದೋದಕ ಸ್ವೀಕಾರವೊಂದರಿಂದಲೇ ಆ ಎಲ್ಲ ತೀರ್ಥಗಳ ಸೇವಾಫಲವೂ ಲಭಿಸುತ್ತದೆಂಬುದು ಇದರ ತಾತ್ಪರ್ಯ.

ಸಹಜಾಚರಣೆಯಿಂದ, ಗುರುವಿನಿಂದ ಪಡೆಯುವುದು ಗುರುಪಾದೋದಕ, ಲಿಂಗದಿಂದ ಪಡೆಯುವುದು ಲಿಂಗಪಾದೋದಕ, ಹಾಗೆಯೇ ಜಂಗಮದಿಂದ ಪಡೆಯುವುದು ಜಂಗಮಪಾದೋದಕ. ಆದರೆ, ಗುರು — ಜಂಗಮತತ್ತ್ವವನ್ನು ಲಿಂಗದಲ್ಲಿಯೇ ಸಂಬಂಧಿಸಿಕೊಂಡು—ಈ ತ್ರಿವಿಧ ಪಾದೋದಕವನ್ನು ಪಡೆಯುವುದು ಸಂಬಂಧಾಚರಣೆಯ ತ್ರಿವಿಧ ಪಾದೋದಕವಾಗುತ್ತದೆ. ಸಾಮಾನ್ಯವಾಗಿ ನಿತ್ಯದ ಇಷ್ಟಲಿಂಗಪೂಜಾಕಾಲದಲ್ಲಿ ಕಡೆಯಲ್ಲಿ ಸ್ವೀಕರಿಸುವ ಈ ಲಿಂಗತೀರ್ಥದಲ್ಲಿ ಶ್ರೀಗುರು— ಜಂಗಮ ಪಾದೋದಕಗಳ ಸಂಬಂಧವನ್ನು ಅಳವಡಿಸಿಕೊಳ್ಳುವುದೇ ವಿಹಿತ. ಅಂತೆಯೇ ಪಾದೋದಕವನ್ನು ಇಷ್ಟಲಿಂಗಕ್ಕೆ ಮೂರು ಸಾರಿ ಎರೆದುಕೊಳ್ಳುವುದು ಈ ತ್ರಿವಿಧ ಪಾದೋದಕದ ಕುರುಹಾಗಿದೆಯೆನ್ನಬಹುದು.

ಸಿದ್ಧಾಂತಶಿಖಾಮಣಿಯಲ್ಲಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕವೆಂಬ ತ್ರಿವಿಧ ಪಾದೋದಕವನ್ನು ವಿವರಿಸಲಾಗಿದೆ.

ಗುರುವು ಶಿಷ್ಯರಿಗೆ ನೀಡುವ ತ್ರಿವಿಧ ದೀಕ್ಷೆಯು ಈ ಈರ್ವರಲ್ಲಿ ಅಭೇದವನ್ನು ಮೂಡಿಸುತ್ತದೆ. ಇವರ ಈ ಅದ್ವೈತಜ್ಞಾನದೊಡನೆ ಇವರ ಪರಸ್ಪರ ಆನಂದದ ಐಕ್ಯವೂ ಆದಲ್ಲಿ ಅದು 'ದೀಕ್ಷಾಪಾದೋದಕ'. ಗುರುವಿನ ಬೋಧೆಯಿಂದ ಶಿಷ್ಯನಲ್ಲಿ ಶಿವಜ್ಞಾನ ವರ್ಧಿಸುತ್ತದೆ. ಅಂದರೆ, ಈ ಗುರು—ಶಿಷ್ಯರ ಸ್ವರೂಪೈಕ್ಯ

ಜ್ಞಾನವೇ 'ಶಿಕ್ಷಾಜ್ಞಾನ'. ; ಈ ಜ್ಞಾನದ ಸಮರಸವು ಇವರಿಬ್ಬರಲ್ಲಿ ಉಂಟಾದಲ್ಲಿ ಅದು 'ಶಿಕ್ಷಾಪಾದೋದಕ', ಗುರುವು ಸದ್ರೂಪ-ಪರಬ್ರಹ್ಮದ ಸಾಮರಸ್ಯವನ್ನು ಪಡೆದವನಾಗಿ, 'ಜ್ಞಾನಗುರು'ವೆನಿಸಿರುತ್ತಾನೆ. ಶಿಷ್ಯನೂ ಸಹ ತನ್ನ ಆಚರಣೆಯಿಂದ ಈ ಜ್ಞಾನಗುರುವಿನೊಡನೆ ಸಾಮರಸ್ಯ ಪಡೆದಲ್ಲಿ 'ಜ್ಞಾನಪಾದೋದಕ'.

ಪಾದೋದಕವನ್ನು ಪಡೆಯುವ ಪ್ರಕ್ರಿಯೆ ವೀರಶೈವದಲ್ಲಿ ಒಂದು ವಿಶಿಷ್ಟ ಪದ್ಧತಿಯೆಂದು ಮೇಲೆ ಹೇಳಲಾಗಿದೆಯಷ್ಟೇ ! ಪಾದೋದಕವನ್ನು ಪಡೆಯುವ ಸಂದರ್ಭದಲ್ಲಿ ಗುರು—ಶಿಷ್ಯ, ಅಥವಾ ಜಂಗಮ—ಶಿಷ್ಯ, ಇವರಲ್ಲಿ ಯಾವುದೇ ಭೇದ ವಿರಕೂಡದು. ಪರಸ್ಪರರಲ್ಲಿ. ಪರಸ್ಪರ ಶಿವ—ಎಂಬ ಭಾವನೆಯೇ ಇರಬೇಕು. ಸ್ವಾಮಿ—ಭೃತ್ಯ. ಗುರು—ಶಿಷ್ಯಾದಿ ಭೇದಭಾವವಿದ್ದರೆ ಈ ಪ್ರಕ್ರಿಯೆ ಅರ್ಥಹೀನ ವಾಗುತ್ತದೆ : ಅಥವಾ 'ಪಾದೋದಕ' ಪದದ ವಿಶಾಲಪೂರ್ಣ ಅರ್ಥವೇ ವ್ಯರ್ಥ ವಾಗುತ್ತದೆ.

ತಾ ಗುರುಲಿಂಗಜಂಗಮದ ಪಾದಕ್ಕೆರಗಿ,
    ಲೀಯವಾದ ಬಳಿಕ ಇದು ಚಿಹ್ನ ನೋಡಯ್ಯಾ !
ಗುರುಲಿಂಗಜಂಗಮದ ಪಾದವೆ
    ತನ್ನ ಸರ್ವಾಂಗದಲ್ಲಿ ಅಚ್ಚೊತ್ತಿದಂತಾಯಿತ್ತಾಗಿ,
ಅಲ್ಲಿಯೆ ಪಾದಾರ್ಚನೆ, ಅಲ್ಲಿಯೇ ಪಾದೋದಕ ಸೇವನೆ.
    ಬೇರೆ, ಪೃಥಕ್ ಎಂಬುದಿಲ್ಲಯ್ಯ.
ಅದೆಂತೆಂದಡೆ,
    ಪರಮಗುರು ಲಿಂಗ ಜಂಗಮದ
    ಸಂಬಂಧ ಸಮರತಿಯ ಸೊಕ್ಕಿನಲ್ಲಿ
    ಪರಮಾನಂದ ಜಲವೆ ಪ್ರವಾಹವಾಗಿ,
ಸರ್ವಾಂಗದಲ್ಲಿ ಪುಳಕವಾಗಿ ಹರಿವುತ್ತಿರಲು,
ಆ ಪರಮಸುಖಸೇವನೆಯ ಮಾಡುವಲ್ಲಿ
ಪಾದೋದಕಸೇವನೆಯೆನಿಸಿತ್ತಯ್ಯ ;
ಈ ಪರಮಾಮೃತದ ತೃಪ್ತಿ ಬಸವಣ್ಣಂಗಾಯಿತ್ತು,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು
ಬದುಕಿದೆನಯ್ಯ ಕಲಿದೇವಯ್ಯ !

ಎಂಬ ಮಡಿವಾಳ ಮಾಚಿದೇವರ ಈ ವಚನ ಪರಸ್ಪರ ಅಭೇದವನ್ನು ಸೂಚಿಸುತ್ತದೆ.

ಗುರುವಿನಲ್ಲಿ ಪಾದೋದಕದ ಸಹಜಾಚರಣೆಯಾಗುವಾಗ ಲಿಂಗಜಂಗಮಗಳ ಸಂಬಂಧವನ್ನೂ, ಲಿಂಗದಲ್ಲಿ ಗುರುಜಂಗಮಗಳ ಸಂಬಂಧವನ್ನೂ, ಅಂತೆಯೇ ಜಂಗಮ ದಲ್ಲಿ ಗುರು–ಲಿಂಗಗಳ ಸಂಬಂಧವನ್ನೂ ಅಳವಡಿಸಿಕೊಂಡು ಆಚರಿಸಬೇಕು.

ಶಿವನು 'ಜ್ಞಾನಾನಂದಸ್ವರೂಪ'ನೆಂದು ಹೇಳಲಾಗುತ್ತದೆ ; ಅಂತೆಯೇ 'ಪಾದೋದಕ'ವೂ ಸಹ 'ಶಿವಾನಂದ, ಶಿವಜ್ಞಾನ'ಗಳ ಸಮನ್ವಯವನ್ನು ಬೋಧಿಸುತ್ತದೆ. ಗುರು-ಜಂಗಮರ ದಯೆಯಿಂದ, ಜ್ಯೋತಿಮುಟ್ಟಿದ ಹಣತೆ ಜ್ಯೋತಿಯೇ ಆಗುವಂತೆ, ಅಂಗನೂ ಸಹ ಸ್ವಯಂ ಆತ್ಮಪ್ರಕಾಶಕವಾದ ದಿವ್ಯಜ್ಯೋತಿಯೇ ಆಗುತ್ತಾನೆ. ಅಂದರೆ ಗುರು-ಲಿಂಗ-ಜಂಗಮ ಪಾದೋದಕಸೇವನೆಯು, ಗುರು-ಶಿಷ್ಯ ಸಾಮರಸ್ಯ, ಲಿಂಗ-ಅಂಗ ಸಾಮರಸ್ಯ, ಜಂಗಮ-ಶಿಷ್ಯ ಸಾಮರಸ್ಯಗಳನ್ನು ಬೋಧಿಸುವುದಾಗಿದೆ. ಶಿವಜೀವೈಕ್ಯಜ್ಞಾನವುಳ್ಳವನಿಗೆ ಕೇವಲ ಪರಮಾನಂದವೇ ಹೊರತು, ಮತ್ತಾವ ಸುಖ-ದುಃಖಾದಿಗಳ ಅನುಭವವೂ ಇರುವುದಿಲ್ಲ. ಈ ಪರಮಾನಂದ ಪ್ರಾಪ್ತಿಯು ಪಾದೋದಕದಿಂದ ಸಂಭವಿಸುವುದರಿಂದ ಪಾದೋದಕದ ಹಿರಿಮೆ-ಗರಿಮೆಗಳು ಅವರ್ಣನೀಯಗಳು.

ಪಾದೋದಕಸೇವನೆಯ ಹಂತಗಳಲ್ಲಿಯೂ ದಶವಿಧ ಪಾದೋದಕಗಳ ವಿವರಣೆಯನ್ನು ವಚನಗಳಲ್ಲಿ ಕಾಣಬಹುದು. ಪಾದೋದಕ, ಲಿಂಗೋದಕ, ಮಜ್ಜನೋದಕ, ಸ್ಪರ್ಶನೋದಕ, ಅವಧಾರೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ—ಈ ದಶವಿಧ ಒಂದು ಪ್ರಕಾರವಾದರೆ ; ನೇತ್ರೋದಕ, ಶ್ರೋತ್ರೋದಕ, ಘ್ರಾಣೋದಕ, ಜಿಹ್ವೋದಕ, ಸ್ಪರ್ಶನೋದಕ, ಪಾದೋದಕ, ಮಜ್ಜನೋದಕ, ಅರ್ಪಿತೋದಕ, ಹಸ್ತೋದಕ, ಸತ್ಯೋದಕ— ಎಂಬ ಮತ್ತೊಂದು ಪ್ರಕಾರದ ದಶವಿಧ ಪಾದೋದಕವನ್ನು ವಿವರಿಸಲಾಗಿದೆ.

ಒಟ್ಟಿನಲ್ಲಿ 'ಪಾದೋದಕ'ವೆಂಬುದು 'ಶಿವಜ್ಞಾನಾಮೃತ' ; ಈ ಪಾದೋದಕ ಸ್ವೀಕಾರವೆಂದರೆ 'ಈ ಶಿವಜ್ಞಾನಾನಂದಾಮೃತಾಸ್ವಾದ' ಎಂಬುದು ಪಾದೋದಕ ಪ್ರಕ್ರಿಯೆಯ ಮುಖ್ಯ ಮರ್ಮವಾಗಿದೆ.

ಪ್ರಸಾದ

'ಪ್ರ' ಉಪಸರ್ಗಪೂರಕ 'ಸದ್' ಧಾತುವಿನಿಂದ 'ಪ್ರಸಾದ' ಪದ ನಿಷ್ಪನ್ನವಾಗಿದೆ. 'ಸದ್' ಧಾತುವಿಗೆ—ಕುಳ್ಳಿರು, ಮುಳುಗು, ಇರು, ನಾಶ ಇತ್ಯಾದಿ ಅರ್ಥಗಳುಂಟು. 'ಪ್ರ' ಉಪಸರ್ಗದಿಂದ ಕೂಡಿದ 'ಸದ್' ಅಂದರೆ 'ಪ್ರಸದ್' ಧಾತುವಿಗೆ ಪ್ರಸನ್ನತೆ ಸಂತೋಷಗೊಳ್ಳುವಿಕೆ ಇತ್ಯಾದ್ಯರ್ಥಗಳುಂಟು. 'ಪ್ರಸಾದಸ್ತು ಪ್ರಸನ್ನತಾ' ಎಂಬ ಅಮರಕೋಶೋಕ್ತಿಯಂತೆ, ಪ್ರಸಾದವೆಂದರೆ 'ಶಿವಪ್ರಸನ್ನತೆ', 'ಶಿವಾನುಗ್ರಹ' 'ನಿರ್ಮಲತೆ', 'ಗುರು-ಲಿಂಗ ಜಂಗಮಕ್ಕೆ ಅರ್ಪಿಸಿದ ಬಳಿಕ ಅವರ ಅನುಗ್ರಹವನ್ನು ಪಡೆದ ವಸ್ತು' ಇತ್ಯಾದಿ ಅರ್ಥಗಳನ್ನು ಮನಗಾಣಬಹುದು. (ಸಮಸ್ತ ಪಾಪಗಳನ್ನೂ ನಾಶಮಾಡಿ, ಮನಸ್ಸಿಗೆ ಪ್ರಸನ್ನತೆಯನ್ನು ನೀಡುವುದೇ 'ಪ್ರಸಾದ'.) ಇದು ಮನಸ್ಸಿನ ನಿರ್ಮಲತೆಯ ಕುರುಹು. ಈ ಮನೋನೈರ್ಮಲ್ಯ ನಮಗೆ ದೊರೆಯಬೇಕಾದರೆ, ಭಕ್ತಿಪೂರ್ವಕ ಗುರುಲಿಂಗಜಂಗಮಾರ್ಪಿತ ಪ್ರಸಾದವನ್ನು ಸೇವಿಸಬೇಕು. ಮನಃ

ಪ್ರಸನ್ನತೆಯಿಂದ ಶಿವಜ್ಞಾನ ಹೆಚ್ಚುತ್ತದೆ; ಪರಿಪೂರ್ಣತೆಯೂ ದೊರೆಯುತ್ತದೆ. ಅಂದರೆ ಪ್ರಸಾದಸೇವನೆಯಿಂದ 'ಶಿವಸಾಮರಸ್ಯ' ಪ್ರಾಪ್ತಿಯೆಂಬುದು ಸಿದ್ಧಾಂತ.

ಶಿವನ ಪ್ರಸನ್ನತೆಯೇ 'ಪ್ರಸಾದ', ಈ ಪ್ರಸಾದವಾದರೂ ಶಿವಭಕ್ತಿಯಿಂದಲೇ ಪ್ರಾಪ್ತವಾಗಬೇಕು. ಪ್ರಸಾದವು ಭಕ್ತಿಗೆ ಮೂಲ; ಭಕ್ತಿಯಿಲ್ಲದೆ ಪ್ರಸಾದವೂ ಇಲ್ಲ. ''ಶಿವನ ಪ್ರಸಾದವು ಭಕ್ತಿಗೆ ಜನ್ಮಭೂಮಿ' ಎಂಬುದು ಮೊಗ್ಗೆಯ ಮಾಯಿ ದೇವರ ಹೇಳಿಕೆ. 'ಪ್ರಸಾದ' ಮತ್ತು 'ಭಕ್ತಿ'ಗಳಿಗೆ 'ಬೀಜ-ವೃಕ್ಷನ್ಯಾಯ'. ಅಂತೆಯೆ ವೀರಶೈವ ಸಂಪ್ರದಾಯದಲ್ಲಿ 'ಪ್ರಸಾದ'ಕ್ಕೆ ಬಹಳ ಮಹತ್ತ್ವ ನೀಡಲಾಗಿದೆ.

ಶಿವಾನುಗ್ರಹವಾಗಬೇಕಾದರೂ ಅನೇಕ ಜನ್ಮಗಳ ಪುಣ್ಯವಿಶೇಷವಿರಬೇಕು. ಶಿವಾನುಗ್ರಹವಿಲ್ಲದೆ ಸಂಸಾರನಿವೃತ್ತಿ ಅಸಂಭವ. ಶಿವಾನುಗ್ರಹವನ್ನು ಸಂಪಾದಿಸಲು ತಾನು ಸ್ವೀಕರಿಸುವ ವಸ್ತುವನ್ನು ಶಿವಾರ್ಪಿತ ಮಾಡಿಯೇ ಸ್ವೀಕರಿಸಬೇಕು.

> ರುದ್ರೇಣಾತ್ತಮಶ್ನಂತಿ, ರುದ್ರೇಣ ಪೀತಂ ಪಿಬಂತಿ,
> ರುದ್ರೇಣ ಘ್ರಾತಂ ಜಿಘ್ರಂತಿ—

ಹೀಗೆ ಜಾಬಾಲಶಿಖೋಪನಿಷತ್ತು ಅಪ್ಪಣೆ ಕೊಡಿಸುತ್ತಿದೆ.

ಮೂಸುವ ಗಂಧ, ನೋಡುವ ನೋಟ, ಕೇಳುವ ಶಬ್ದ, ಸ್ಪರ್ಶಿಸುವ ಸುಖ, ಶೀತೋಷ್ಣತೆ, ರುಚಿನೋಡುವ ರಸ-ಇತ್ಯಾದಿ ಎಲ್ಲವೂ ಶಿವಾರ್ಪಿತಭಾವದಿಂದಲೇ ಅನುಭವಿಸಲ್ಪಡಬೇಕು ಎಂಬೀ ಭಾವನೆಯಿಂದಲೇ ನಾಸಿಕಾದಿ ಇಂದ್ರಿಯಗಳಲ್ಲಿ ಆಚಾರಾದಿಲಿಂಗಗಳ ಸಮುಪಸ್ಥಿತಿಯನ್ನು ಈ ದರ್ಶನ ನಿರ್ದಿಷ್ಟಪಡಿಸಿದೆ. ಆದ್ದರಿಂದಲೇ 'ಅರ್ಪಣೆ'ಗೆ ಪ್ರಾಮುಖ್ಯ ಕೊಡಲಾಗಿದೆ.

ಅರ್ಪಣೆಯು 'ಕ್ರಿಯಾಮುತಾರ್ಪಣ' ಮತ್ತು 'ಜ್ಞಾನಮುತಾರ್ಪಣ' ಎಂದು ಎರಡು ವಿಧ. ಪದಾರ್ಥಗಳನ್ನು ಗುರು-ಲಿಂಗ-ಜಂಗಮಕ್ಕೆ ಅರ್ಪಿಸುವುದು ಕ್ರಿಯಾ ಪ್ರಧಾನವಾದ್ದರಿಂದ ಇದು ಕ್ರಿಯಾಮುತಾರ್ಪಣ. ಪಂಚಜ್ಞಾನೇಂದ್ರಿಯ ಹಾಗೂ ಮನಸ್ಸು ಈ ಷಡಿಂದ್ರಿಯಗಳ ವಿಷಯಗಳನ್ನು, ಆ ಇಂದ್ರಿಯನಿಷ್ಠಲಿಂಗಗಳಿಗೆ ಸಮರ್ಪಿಸಿ, ಆ ವಿಷಯಪ್ರಸಾದವನ್ನು ಸೇವಿಸುವುದು ಜ್ಞಾನಮುತಾರ್ಪಣ.

ಪ್ರತಿಯೊಂದು ಪದಾರ್ಥದಲ್ಲಿಯೂ ರೂಪ-ರುಚಿ-ತೃಪ್ತಿ ಎಂಬು ಮೂರು ಅಂಶಗಳಿರುತ್ತವೆ. ರೂಪವನ್ನು ಇಷ್ಟಲಿಂಗಕ್ಕೂ, ರುಚಿಯನ್ನು ಪ್ರಾಣಲಿಂಗಕ್ಕೂ ಮತ್ತು ತೃಪ್ತಿಯನ್ನು ಭಾವಲಿಂಗಕ್ಕೂ ಅರ್ಪಿಸಿ, ತತ್ಪ್ರಸಾದತ್ರಯವನ್ನು ಸೇವಿಸಬೇಕು. ಇಷ್ಟಲಿಂಗಕ್ಕರ್ಪಿತವಾದ ರೂಪವೇ 'ಶುದ್ಧಪ್ರಸಾದ'; ಪ್ರಾಣಲಿಂಗಕ್ಕರ್ಪಿತವಾದ ರುಚಿಯೇ 'ಸಿದ್ಧಪ್ರಸಾದ' ಮತ್ತು ಭಾವಲಿಂಗಕ್ಕರ್ಪಿತವಾದ ತೃಪ್ತಿಯೇ 'ಪ್ರಸಿದ್ಧ ಪ್ರಸಾದ'.

ಅಂತೆಯೇ ಗುರುವು ಬೋಧಿಸಿದ ಮಾರ್ಗದಲ್ಲಿ ಶರೀರವನ್ನು ತೊಡಗಿಸುವುದರಿಂದ ಈ ಸ್ಥೂಲಶರೀರವು 'ಶುದ್ಧಪ್ರಸಾದ'; ಮಂತ್ರವನ್ನು ಸದಾ ಜಪಿಸುವುದ

ರಿಂದ ಮನಸ್ಸು, 'ಸಿದ್ಧಪ್ರಸಾದ' ಮತ್ತು 'ಶಿವೋಽಹಂ' ಎಂದು ಸದಾ ಭಾವಿಸುವುದರಿಂದ ಭಾವವು 'ಪ್ರಸಿದ್ಧಪ್ರಸಾದ'.

ತನುವು ಗುರೂಪದಿಷ್ಟ ಮಾರ್ಗದಲ್ಲಿ ನಡೆಯುವುದರಿಂದ ಇದು ಶುದ್ಧಪ್ರಸಾದ. ಮಂತ್ರವನ್ನು ಜಪಿಸುವುದರಿಂದ ಮನವು 'ಸಿದ್ಧಪ್ರಸಾದ'. ಸತ್ಯಶುದ್ಧ ಕಾಯಕದಿಂದ ಗಳಿಸಿದ ದ್ರವ್ಯವನ್ನು ಜಂಗಮಸೇವೆಗೆ ವಿನಿಯೋಗಿಸುವುದರಿಂದ ಧನವು ಪ್ರಸಿದ್ಧ ಪ್ರಸಾದ'.

ಹೀಗೆ ತ್ರಿವಿಧ ಪ್ರಸಾದದ ಪ್ರಕಾರಗಳುಂಟು. ಇದೆಲ್ಲವೂ ಕ್ರಿಯಾಪ್ರಧಾನವಾದ್ದರಿಂದ ಕ್ರಿಯಾಮಂತಾರ್ಪಣದಲ್ಲಿ ಸೇರುತ್ತವೆ.

ಜ್ಞಾನಮತಾರ್ಪಣದಲ್ಲಿ ಆರು ಜ್ಞಾನೇಂದ್ರಿಯಗಳ ಪ್ರವೃತ್ತಿ ಪ್ರಮುಖವಾಗಿರುತ್ತದೆ. ನಾಸಿಕದಲ್ಲಿ ಆಚಾರಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ನೇತ್ರದಲ್ಲಿ ಶಿವಲಿಂಗ, ತ್ವಕ್‌ನಲ್ಲಿ ಜಂಗಮಲಿಂಗ, ಶ್ರವಣದಲ್ಲಿ ಪ್ರಸಾದಲಿಂಗ ಮತ್ತು ಹೃದಯದಲ್ಲಿ ಮಹಾಲಿಂಗ, ಹೀಗೆ ಷಡಿಂದ್ರಿಯಗಳಲ್ಲಿ ಷಟ್‌ಲಿಂಗಗಳ ಸಂಬಂಧವುಂಟು. ಇವುಗಳ ಅರ್ಪಣ ಕ್ರಮ, ವಿಷಯಪ್ರಸಾದಗಳ ಅನುಭವಕ್ರಮುವನ್ನು ಹೀಗೆ ಮನಗಾಣಬಹುದು.

1) ಭಕ್ತ ಸ್ಥಲಾಪನ್ನನು, ಶ್ರಧ್ಧಾಭಕ್ತಿಯಿಂದ, ಆಚಾರಲಿಂಗಕ್ಕೆ ನಾಸಿಕದ ಮುಖಾಂತರ, ಸುಚಿತ್ತವೆಂಬ ಹಸ್ತದಿಂದ, ನಾನಾವಿಧ ಗಂಧದ್ರವ್ಯವನ್ನು ಅರ್ಪಿಸಿ ಆ'ಗಂಧಪ್ರಸಾದ'ವನ್ನು ಸ್ವೀಕರಿಸಬೇಕು ಅಥವಾ ಸೇವಿಸಬೇಕು.

2) ಮಹೇಶಸ್ಥಲಾಪನ್ನನು, ನಿಷ್ಠಾಭಕ್ತಿಯಿಂದ, ಗುರುಲಿಂಗಕ್ಕೆ ಜಿಹ್ವೆಯ ಮುಖಾಂತರ, ಸುಬುದ್ಧಿಯೆಂಬ ಹಸ್ತದಿಂದ, ಮಧುರ ಆಮ್ಲಾದಿ ಷಡ್ರಸಗಳನ್ನು ಸಮರ್ಪಿಸಿ, ಆ 'ರಸಪ್ರಸಾದ'ವನ್ನು ಸ್ವೀಕರಿಸಬೇಕು.

3) ಪ್ರಸಾದಸ್ಥಲಸಂಪನ್ನನು, ಅವಧಾನಭಕ್ತಿಯಿಂದ, ಶಿವಲಿಂಗಕ್ಕೆ, ನೇತ್ರದ ಮುಖಾಂತರ, ನಿರಹಂಕಾರವೆಂಬ ಹಸ್ತದಿಂದ, ಶ್ವೇತ-ನೀಲಾದಿ ವರ್ಣಪದಾರ್ಥವನ್ನು ಸಮರ್ಪಿಸಿ, ಆ 'ರೂಪಪ್ರಸಾದ'ವನ್ನು ಸ್ವೀಕರಿಸಬೇಕು.

4) ಪ್ರಾಣಲಿಂಗಿಸ್ಥಲಿಯು, ಅನುಭವಭಕ್ತಿಯಿಂದ, ಜಂಗಮಲಿಂಗಕ್ಕೆ ತ್ವಗಿಂದ್ರಿಯದ ಮುಖಾಂತರ, ಸುಮನಸ್ ಎಂಬ ಹಸ್ತದಿಂದ, ಮೃದುಕಠಿಣಾದಿ ಸ್ಪರ್ಶ ಪದಾರ್ಥವನ್ನು ಸಮರ್ಪಿಸಿ, ಆ 'ಸ್ಪರ್ಶಪ್ರಸಾದ'ವನ್ನು ಸೇವಿಸಬೇಕು.

5) ಶರಣಸ್ಥಲಿಯು, ಆನಂದಭಕ್ತಿಯಿಂದ, ಪ್ರಸಾದಲಿಂಗಕ್ಕೆ, ಶ್ರೋತ್ರದ ಮುಖಾಂತರ, ಸುಜ್ಞಾನವೆಂಬ ಹಸ್ತದಿಂದ, ವೀಣಾದಿನಾದರೂಪದ್ರವ್ಯವನ್ನು ಸಮರ್ಪಿಸಿ, ಆ 'ನಾದಪ್ರಸಾದ'ವನ್ನು ಸ್ವೀಕರಿಸಬೇಕು.

6) ಐಕ್ಯಸ್ಥಲಾಪನ್ನನು, ಸಮರಸಭಕ್ತಿಯಿಂದ. ಮಹಾಲಿಂಗಕ್ಕೆ, ಹೃದಯದ ಮುಖಾಂತರ, ಸದ್ಭಾವವೆಂಬ ಹಸ್ತದಿಂದ, ಸುಖಾದಿಪರಿಣಾಮರೂಪಪದಾರ್ಥಗಳನ್ನು ಸಮರ್ಪಿಸಿ, ಆ 'ತೃಪ್ತಿಪ್ರಸಾದ'ವನ್ನು ಸ್ವೀಕರಿಸಬೇಕು.

ಇದು ಷಟ್‌ಸ್ಥಲಾನುಗುಣವಾಗಿ, ಷಡಿಂದ್ರಿಯಗಳಲ್ಲಿ ಆಗುವ ಷಟ್‌ಪದಾರ್ಥಗಳ ಅರ್ಪಣೆಯ ಕ್ರಿಯೆಯ ಫಲವಾಗಿ ಪಡೆಯಬಹುದಾದ ಷಟ್ಪ್ರಸಾದಗಳ ವಿವರಣೆ ಅಥವಾ ರೀತಿಯಾಗಿದೆ.

ಅಂದರೆ, ಜೀವನೇ ಪದಾರ್ಥ, ಶಿವನೇ ಪ್ರಸಾದ ; ಅರ್ಪಣವೇ ಶಿವ-ಜೀವರ ತಾದಾತ್ಮ್ಯ-ಎಂಬುದು ಇದರ ತತ್ತ್ವ. ಅಂತೆಯೇ ಈ ಜಗತ್ತು ಒಂದು ಪದಾರ್ಥ ; ಇದನ್ನು ನಾವು ಅನುಭವಿಸಬೇಕಾದರೆ, ಇದನ್ನು ಶಿವಾರ್ಪಿತವಾಗಿಸಿ, ಅದನ್ನು ಪ್ರಸಾದ ರೂಪವಾಗಿಯೇ ಅನುಭವಿಸಬೇಕು. ಆದ್ದರಿಂದಲೇ ಜಗತ್ತು ಪರಬ್ರಹ್ಮದಂತೆಯೇ ಸತ್ಯ, ನಿತ್ಯ. ಅಂದರೆ ಶಿವಾರ್ಪಿತವಾದುದು ಮಾತ್ರವೇ ವೀರಶೈವನಿಗೆ ಗ್ರಾಹ್ಯ ; ಶಿವಾರ್ಪಿತವಾಗದುದು ತ್ಯಾಜ್ಯ, ಈ ಕಾರಣದಿಂದಲೇ ವೀರಶೈವನು 'ಲಿಂಗಭೋ ಗೋಪಭೋಗಿ'.

ಅರ್ಪಣವನ್ನು ಮತ್ತೂ ಒಂದು ರೀತಿಯಲ್ಲಿ ವಿಭಾಗಿಸಲಾಗಿದೆ--ಕಾಯಾರ್ಪಣ, ಕರಣಾರ್ಪಣ ಮತ್ತು ಭಾವಾರ್ಪಣವೆಂದು ಮೂರು ರೀತಿ. ಕಾಯಾರ್ಪಣವು 'ಏಕಾ ದಶವಿಧ' (೧೧) ಪ್ರಸಾದಕ್ಕೆ ಕಾರಣವಾದರೆ, ಕರಣಾರ್ಪಣದಲ್ಲಿ ಮೂವತ್ತಾರು ವಿಧಗಳನ್ನು ಹೇಳಲಾಗುತ್ತದೆ. ಮತ್ತು ಭಾವಾರ್ಪಣದಲ್ಲಿ ಇನ್ನೂರ ಹದಿನಾರು ಪ್ರಕಾರಗಳನ್ನು ಹೇಳಲಾಗಿದೆ. ಪ್ರಕೃತ ಕಾಯಾರ್ಪಣದ ಏಕಾದಶವಿಧ ಪ್ರಸಾದ ಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

೧) ದೀಕ್ಷೆಯಿಂದ ಶುದ್ಧಗೊಂಡ ತನುವೇ 'ಶುದ್ಧಪ್ರಸಾದ'.

೨) ಗುರೂಪದಿಷ್ಟ ಮಂತ್ರದ ಸಿದ್ಧಿಯೇ 'ಸಿದ್ಧಪ್ರಸಾದ' ; ಅಂದರೆ, ಮಂತ್ರ ಸಿದ್ಧಿ ಪಡೆದ ಮನಸ್ಸೇ 'ಸಿದ್ಧಪ್ರಸಾದ'.

೩) ತನು-ಮನಗಳು ಶುದ್ಧ ಸಿದ್ಧ ಪ್ರಸಾದತತ್ತ್ವವನ್ನು ಪಡೆದಿವೆಯೆಂಬ ಭಾವನೆಯೇ 'ಪ್ರಸಿದ್ಧ ಪ್ರಸಾದ,

೪) ಈ ತ್ರಿವಿಧ ಪ್ರಸಾದಗಳಿಂದ ಆತ್ಮನಲ್ಲುಂಟಾಗುವ ಪ್ರಸನ್ನತೆಯೇ 'ಆಪ್ಯಾ ಯನ ಪ್ರಸಾದ'

೫) ವೀರಶೈವಧರ್ಮವನ್ನು ಹೊರತು ಮತ್ತಾವ ಧರ್ಮದಲ್ಲೂ ಯಾವುದೇ ಕ್ರಿಯೆಯಿಂದಲೂ ಈ ಪ್ರಸಾದಸಿದ್ಧಿಯಾಗದೆಂಬ ಭಾವವೇ 'ಸಮಯಪ್ರಸಾದ'

೬) ವಿಷಯಗಳನ್ನು ಗ್ರಹಿಸುವ ಪಂಚಜ್ಞಾನೇಂದ್ರಿಯಗಳು ಲಿಂಗಗಳ ಸಂಬಂಧ ದಿಂದಾಗಿ, ಆಯಾ ಪ್ರಸಾದವನ್ನು ಗ್ರಹಿಸುವ ಲಿಂಗಮುಖಗಳಾಗಿ ಪರಿಣಮಿಸುವುದೇ ಪಂಚೇಂದ್ರಿಯವಿರಹಿತ ಪ್ರಸಾದ

೭) ಚಿತ್ತ-ಬುದ್ಧಿ-ಅಹಂಕಾರ-ಮನಸ್ಸು-ಎಂಬೀ ಅಂತಃಕರಣಚತುಷ್ಟಯವು ಕ್ರಮವಾಗಿ ಸುಚಿತ್ತ-ಸುಬುದ್ಧಿ-ನಿರಹಂಕಾರ-ಸುಮನಸ್ ಎಂಬ ಲಿಂಗಕರಣಚತುಷ್ಟಯ ವಾಗಿ ಪರಿಣಮಿಸುವುದೇ 'ಅಂತಃಕರಣವಿರಹಿತ ಪ್ರಸಾದ'.

೮) ಹೀಗೆ ಪ್ರಸಾದತ್ವ ಹೊಂದುವುದರಿಂದ ಶುದ್ಧಗೊಂಡ ದೇಹೇಂದ್ರಿಯಗಳುಳ್ಳ ಅಂಗನು ಲಿಂಗಸಂಬಂಧದಿಂದಾಗಿ, 'ಲಿಂಗೋಪಭೋಗಕ್ಕೆ ಯೋಗ್ಯನಾಗಿ ಪರಿಣಮಿಸುವುದೇ 'ಪ್ರಸಾದಿಯ ಪ್ರಸಾದ'.

೯) ತನು-ಕರಣ (ಇಂದ್ರಿಯ) ಮೊದಲಾದವುಗಳು ಪ್ರಸಾದರೂಪವಾಗಿರುವವೆಂಬ ಭಾವನೆ ನಿಶ್ಚಲವಾದಲ್ಲಿ, ಅದು 'ಸದ್ಭಾವಪ್ರಸಾದ'.

೧೦) ಈ ಸದ್ಭಾವವುಳ್ಳವನಾಗಿದ್ದು, ಪರರ ಸ್ತುತಿ-ನಿಂದೆಗಳಲ್ಲಿ ಸಮಂತಾಭಾವವನ್ನು ಹೊಂದಿರುವುದಾದರೆ ಅದು 'ಸಮತಾಪ್ರಸಾದ'.

೧೧) ಈ ಸಮತಾಜ್ಞಾನದಿಂದ ಸದಾ ಪ್ರಕಾಶಿಸುತ್ತಿರುವುದೇ 'ಜ್ಞಾನಪ್ರಸಾದ'.

ತಾತ್ಪರ್ಯವೆಂದರೆ—ಶಿವಾರ್ಪಿತವಾದ ಪದಾರ್ಥವು ಶಿವಪ್ರಸನ್ನತೆಯನ್ನು ಹೊಂದಿ, ವೀರಶೈವನಿಗೆ ಸ್ವೀಕಾರಯೋಗ್ಯವಾದ ಪ್ರಸಾದವಾಗುತ್ತದೆ. ಅಂದರೆ ಪದಾರ್ಥದಲ್ಲಿ ಶಿವಪ್ರಸನ್ನತೆ ಸೇರಿದರೆ, ಆ ಪದಾರ್ಥವು ತನ್ನ ಪದಾರ್ಥತ್ವವನ್ನು ಕಳೆದುಕೊಂಡು ಉಪಭೋಗ್ಯವಾದ ಪ್ರಸಾದವಾಗುತ್ತದೆ. ಆದ್ದರಿಂದಲೇ ವೀರಶೈವನು 'ಪ್ರಸಾದಕಾಯ'ವುಳ್ಳವನು. ಈ ಪ್ರಸಾದಸೇವನೆಯೇ ಅಂಗನ ಶಿವಸಾಮರಸ್ಯಕ್ಕೆ ಮುಖ್ಯ ಕಾರಣ.

ವಿಶೇಷವಿಚಾರ : ಭಾರತದಲ್ಲಿ ಮೊಟ್ಟಮೊದಲು ಬಹುವ್ಯಾಪಕವಾಗಿದ್ದ ಧರ್ಮವೆಂದರೆ 'ಶೈವಧರ್ಮ'. ಇದರಲ್ಲಿ ಶುದ್ಧಶೈವ, ಮಿಶ್ರಶೈವ, ವೀರಶೈವ ಮೊದಲಾದ ಪ್ರಭೇದಗಳುಂಟಾದವು. ಇಂದು ಪ್ರಚಲಿತವಿರುವ ಶೈವಪ್ರಭೇದಗಳನ್ನು ಪ್ರಧಾನವಾಗಿ ಶೈವ ಮತ್ತು ವೀರಶೈವ ಎಂದು ಎರಡು ಪ್ರಕಾರವಾಗಿ ಹೇಳಬಹುದು. ಶೈವವಲ್ಲಿಯೂ ಕಾಶ್ಮೀರಶೈವ, ದ್ರಾವಿಡಶೈವಾದಿ ಪ್ರಭೇದಗಳುಂಟು. ಆದರೂ ಇವೆಲ್ಲವನ್ನೂ ಒಂದೇ ಶೈವ ಪ್ರಭೇದದಲ್ಲಿ ಪ್ರಕೃತ ಪರಿಗಣಿಸಿ ಹೇಳಲಾಗಿದೆ. ಈ ಶೈವದಲ್ಲಿ ಅಷ್ಟಾವರಣಗಳನ್ನು ಒಪ್ಪಿದ್ದರೂ, ವೀರಶೈವದಲ್ಲಿರುವಂತೆ ವ್ಯಾಪಕರೀತಿಯಲ್ಲಿ, ಪ್ರಾಧಾನ್ಯರೀತಿಯಲ್ಲಿ ಪರಿಗಣಿತವಾಗಿಲ್ಲ. ಗುರುವು ಉಪನಯನ ದೀಕ್ಷಾದಿ ಸಂಸ್ಕಾರಗಳನ್ನು ನಡೆಸಿಕೊಟ್ಟು, ಅಧ್ಯಾತ್ಮದುಪದೇಶಕನೂ ಆಗಿರುತ್ತಾನೆ. ಆದರೆ ಲಿಂಗವು ಇಷ್ಟಾದಿರೂಪದಲ್ಲಿ ಉಪಾಸ್ಯವಾಗಿರದೆ, ಕೇವಲ ಸ್ಥಾವರಾತ್ಮಕವಾಗಿ ಉಪಾಸ್ಯವಾಗಿರುತ್ತದೆ. ಜಂಗಮವೆಂಬ ಪ್ರಕಾಶವೇ ಆ ಶೈವದಲ್ಲಿಲ್ಲ. ಗುರುವಿಗೇ ಅದು ಪರ್ಯಾಯವಾಗಿ ಅನ್ವಯಿಸುತ್ತದೆ. ವಿಭೂತಿ-ಮಂತ್ರ ರುದ್ರಾಕ್ಷಗಳು ಉಪಾದೇಯಗಳಾಗಿರುತ್ತವೆ. ಪಾದೋದಕ ಪ್ರಸಾದಗಳು ವೀರಶೈವದಲ್ಲಿರುವಂತೆ ಪ್ರಕ್ರಿಯೆಗಳನ್ನು ಹೊಂದಿರುವುದಿಲ್ಲ. ಹೀಗೆ ವೀರಶೈವದಲ್ಲಿ ಈ ಅಷ್ಟಾವರಣಗಳು ಅತ್ಯವಶ್ಯಕವೂ, ಅತ್ಯನಿವಾರ್ಯವೂ, ಅತಿ ಪ್ರಧಾನವೂ ಆದ ವಸ್ತುಗಳಾಗಿದ್ದು, ವೀರಶೈವದ ವಿಶೇಷಚಿಹ್ನೆಗಳು, ಅಂಗನ ಅಂಗತ್ವವನ್ನು ಲಿಂಗತತ್ತ್ವವಾಗಿಸುವಲ್ಲಿ ಪ್ರಧಾನ ಸಹಕಾರಿಗಳೂ ಆಗಿರುತ್ತವೆ. ಅಂತೆಯೇ ಅಂಗನ ಸಂರಕ್ಷಣೆಗಾಗಿಯೇ ವಿಹಿತವಾಗಿರುವ ಇವು 'ಅಷ್ಟ ಆವರಣ'ಗಳೆಂಬ ತಮ್ಮ ಹೆಸರನ್ನು ಅನ್ವರ್ಥಗೊಳಿಸಿಕೊಂಡಿರುತ್ತವೆ.

ಹೀಗೆ ಅಷ್ಟಾವರಣಗಳ ಬಗ್ಗೆ ಇದೊಂದು ಕಿರು ಪರಿಚಯಾತ್ಮಕವಾದ ಒಂದು ಪುಟ್ಟ 'ಕ್ಷ ಕಿರಣ'ವಾಗಿದೆ, ತಾತ್ವಿಕವಾಗಿ ಇವುಗಳ ಸಮಗ್ರ ಪರಿಶೀಲನೆ ಅನೇಕ ವಿಮರ್ಶಕಾರರಿಂದ ನಡೆದಿದೆ ದೈನಂದಿನ ಆಚರಣೆಯಲ್ಲಿ ಇವುಗಳನ್ನು ಅಳವಡಿಸಿಕೊಂಡು 'ಲಿಂಗಾಂಗ ಸಾಮರಸ್ಯ' ರೂಪಮೋಕ್ಷವನ್ನು ಪಡೆಯುವ ಹಲವಾರು ಮಂದಿ ಮಹನೀಯರು ಇಂದೂ ಸಹ ಇರುತ್ತಾರೆ. 'ತೇಭ್ಯೋ ಮಹದ್ಭ್ಯೋ ನಮಃ' ; ಅಂತಹವರಿಗೆ ನಿತ್ಯ ಕಾಲವೂ ಶರಣು ಶರಣಾರ್ಥಿ. ಇತಿ ಶಿವಂ.

ಆಕರ ಗ್ರಂಥಗಳು :

1) ಬೃಹಜ್ಜಾಬಾಲೋಪನಿಷತ್, ರುದ್ರಾಕ್ಷಜಾಬಾಲೋಪನಿಷತ್ ಇತ್ಯಾದಿ ಉಪನಿಷತ್ತುಗಳು 2) ದೇವೀಭಾಗವತ 3) ಸಿದ್ಧಾಂತಶಿಖಾಮಣಿ 4) ಅನುಭವ ಸೂತ್ರ 5) ವಿಶೇಷಾರ್ಥಪ್ರಕಾಶಿಕಾ 6) ವೀರಶೈವಚಿಂತಾಮಣಿ 7) ಶಕ್ತಿವಿಶಿಷ್ಟಾದ್ವೈತ–ಇತ್ಯಾದಿ.

o—o

ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು,
ಮಣ್ಣು ಮಾಯೆ ಎಂಬರು, ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ.

––ಅಲ್ಲಮಪ್ರಭು

ವೀರಶೈವ ದರ್ಶನದಲ್ಲಿ ಪಂಚಾಚಾರಗಳು

ಶ್ರೀ ಎಂ. ವೀರಭದ್ರಯ್ಯ ಎಂ.ಎ.

ವೀರಶೈವಧರ್ಮದ ಅಡಿಗಲ್ಲಾದ ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತ ಸಿದ್ಧಾಂತದ ಮೇಲೆ ರೂಪಿತವಾದ ಷಟ್‌ಸ್ಥಲ. ಅಷ್ಟಾವರಣ, ಪಂಚಾಚಾರಗಳನ್ನು ಕುರಿತ ಉಲ್ಲೇಖಗಳು ಹನ್ನೆರಡನೇ ಶತಮಾನದ ವಚನಕಾರರಿಗಿಂತ ಹಿಂದೆಯೇ ಸಿಕ್ಕುತ್ತವೆ. ಆದರೆ ವೀರಶೈವಧರ್ಮ ಕಂಡುಕೊಂಡ ಈ ವಿಶಿಷ್ಟವಾದ ದರ್ಶನವನ್ನು ತಮ್ಮ ಅನುಭಾವಮಾರ್ಗಕ್ಕೆ ಅಳವಡಿಸಿಕೊಂಡು ಆಚರಿಸಿ ತೋರಿಸಿದ ಕೀರ್ತಿ ಶರಣರದು.

ಲೋಕಕಲ್ಯಾಣದಲ್ಲಿಯೇ ಆತ್ಮಕಲ್ಯಾಣವನ್ನು ಕಂಡುಕೊಂಡ ಶರಣರು ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಭೂತಪೂರ್ವವಾದುದು. ಪರಂಪರಾಗತವಾಗಿ ಬಂದಿದ್ದ ಮೂಢನಂಬಿಕೆ, ಅಂಧಸಂಪ್ರದಾಯ, ಮೇಲು-ಕೀಳು ಭಾವನೆ ಹಾಗೂ ಅನಾಚಾರಗಳ ಮೇಲೆ ಖಡ್ಗವನ್ನು ಸೆಳೆದುನಿಂತು ಕ್ರಾಂತಿ ಕಹಳೆಯನ್ನೂದಿದರು, ಹೆಣ್ಣು-ಗಂಡು, ಬಡವ-ಬಲ್ಲಿದ, ಮೇಲು-ಕೀಳು ಎಂಬ ಭೇದವಿಲ್ಲದೆ ಎಲ್ಲ ಕಾಲಕ್ಕೂ ಎಲ್ಲ ಜನಾಂಗಕ್ಕೂ ಅನ್ವಯವಾಗುವ ತತ್ತ್ವ ವಿಶೇಷಗಳನ್ನು ಕೊಟ್ಟರು. ಈ ತತ್ವವಿಶೇಷಗಳೇ ವೀರಶೈವಧರ್ಮದ ತಿರುಳು. ಎಲ್ಲರಿಗೂ ಲೇಸನ್ನು ಬಯುಸುವುದೇ ಧರ್ಮವೆನಿಸಂತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಶತ ಶತಮಾನಗಳಿಂದ ನಡೆದುಬಂದಿದ್ದ ಶೋಷಣೆಗೆ ಪೂರ್ಣ ವಿರಾಮವಿಡುವ ದಿಕ್ಕಿನಲ್ಲಿ ಜನತೆಯುನ್ನು ಎಚ್ಚರಿಸಿ, ಅವರಲ್ಲಿ ಮನೆಮಾಡಿಕೊಂಡಿದ್ದ ಅನಾಚಾರವನ್ನು ತೊಲಗಿಸಿ, ಅವರನ್ನು ವಿಚಾರಪರರನ್ನಾಗಿ ಮಾಡಬೇಕಾಯಿತು. ಈ ದಿಕ್ಕಿನಲ್ಲಿ ಶರಣರು ಇಹಪರಗಳೆರಡಕ್ಕೂ ಸಮಾನವಾದ ಸ್ಥಾನವನ್ನು ಕೊಟ್ಟರು. ಇಹದಲ್ಲಿ ಅರ್ಥಪೂರ್ಣವಾದ ಬದುಕನ್ನು ಬದುಕಿದವರಿಗೆ ಪರದಲ್ಲಿಯೂ ಸ್ಥಾನವಿದೆ ಎಂಬುದನ್ನು ಒತ್ತಿಹೇಳಿದರು.

> ''ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
> ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
> ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ,
> ಕೂಡಲ ಸಂಗಮ ದೇವ''

ಡಂಭಾಚಾರದಿಂದ ತುಂಬಿಹೋಗಿದ್ದ ವ್ರತಾಚಾರಗಳಿಂದಾಗಿ ಕೇವಲ ಬಾಹ್ಯಾಚರಣೆಗಳನ್ನೇ ಧರ್ಮದ ಅಳತೆಗೋಲೆಂದು ನಂಬಿ, ಜನತೆ ನಿಜದ ನೆಲೆಯನ್ನರಿಯಲಾರದೆ

ಕಾಮನನ್ನು ಸುಟ್ಟ ಸಂಕೇತವೇ ಭಸ್ಮ. ಈ ಭಸ್ಮವನ್ನು ಧರಿಸುವುದರಿಂದ ಚಿತ್ತ ಶುದ್ಧಿಯೂ, ರುದ್ರಾಕ್ಷಿಯಿಂದ ಪರಿಶುದ್ಧ ನೋಟವೂ ಲಭ್ಯವಾಗುತ್ತವೆ. ಹೀಗೆ ಅಷ್ಟಾವರಣಗಳು ಷಟ್ಸ್ಥಲೋಪಾಸನೆಯ ಮಾರ್ಗದಲ್ಲಿ ಸಹಾಯಕವಾಗಿವೆ.

ವೀರಶೈವದರ್ಶನದಲ್ಲಿ ಷಟ್‌ಸ್ಥಲಮಾರ್ಗಕ್ಕೆ ಅಷ್ಟಾವರಣಗಳು ಹೇಗೆ ಪೂರಕ ವಾಗಿವೆ ಎಂಬುದನ್ನು ಮೇಲಿನ ಸಂಕ್ಷಿಪ್ತನಿರೂಪಣೆಯಿಂದ ತಿಳಿಯಬಹುದು, ಅನುಭಾವಿಗಳಾದ ಶರಣರು ಈ ಮಾರ್ಗದಲ್ಲಿ ಸಾಗುವಲ್ಲಿ ನೀತಿ ನಿಯಮಗಳಿಗೂ ಹೆಚ್ಚು ಮಹತ್ವಕೊಟ್ಟರು. ಏಕೆಂದರೆ ನೀತಿನಿಯಮಗಳಿಲ್ಲದ ಯಾವುದೇ ಸಿದ್ಧಾಂತ ವಾದರೂ ಶುಷ್ಕವಾಗಿ ಪರಿಣಮಿಸುತ್ತದೆ. ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಒಳಿತಾಗ ಬೇಕಾದರೆ ನೈತಿಕನೆಲೆಗಟ್ಟು ಅನಿವಾರ್ಯ. ಸಾಧನೆಯ ಮಾರ್ಗಕ್ಕೆ ನೆರವಾಗುವ ಕೆಲವು ಶಾಶ್ವತ ಮೌಲ್ಯಗಳೇ ಧರ್ಮದ ತಿರುಳೆಂಬುದನ್ನು ಯಾರೂ ಕಡೆಗಣಿಸುವಂತಿಲ್ಲ. ಮಾನವೀಯ ಗುಣಗಳಾದ ಕರುಣೆ, ಅನುಕಂಪೆ, ದಯೆ, ಅಹಿಂಸೆ, ನಿರಹಂಕಾರಗಳು ಧರ್ಮದ ಅವಿಭಾಜ್ಯ ಅಂಗಗಳು. ಇವಿಲ್ಲದ ಧರ್ಮವನ್ನು 'ಧರ್ಮ' ಎಂದು ಕರೆಯುವು ದಾದರೂ ಹೇಗೆ? ಅಂದಮಾತ್ರಕ್ಕೆ ನೀತಿಯೇ ಧರ್ಮವೆಂದು ಅರ್ಥವಾಗುವುದಿಲ್ಲ. "ನೀತಿ ಬೀಜವಿದ್ದಂತೆ; ಧರ್ಮ ಆ ಬೀಜದಿಂದ ತೆಗೆದ ಫಲ, ನೈತಿಕ ನಿಯಮಗಳು ಇಲ್ಲಿ ಶುಷ್ಕವಾಗಿ ಉಳಿಯದೆ ಅಂತರಂಗದ ಅನುಭವದೊಡನೆ ಬೆಳೆಯುತ್ತವೆ; ಪರಿಪಕ್ವ ಗೊಳ್ಳುತ್ತವೆ."[3] ಇದನ್ನೇ ಶರಣರು ಆಚಾರವೆಂದು ಕರೆದರು. ಭಕ್ತನಾದವನಿಗೆ ಇದು ಭೂಷಣಪ್ರಾಯ. ಆಚಾರವಿಲ್ಲದ ಅಂದರೆ ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿ ಸಾಧನೆಯ ಯಾವುದೇ ಮಾರ್ಗದಲ್ಲಿ ಮುನ್ನಡೆಯಲಾರ. ಆಚಾರಸಂಪನ್ನನ ದೃಷ್ಟಿ ವಿಶಾಲವಾಗುತ್ತದೆ. ಅವನಿಗೆ ಮೇಲು-ಕೀಳು, ಜಾತಿಭೇದ ಇಲ್ಲವಾಗುತ್ತದೆ. ಈ ಅರ್ಥದಲ್ಲಿಯೇ ಶರಣರು, ಕುಲದಲ್ಲಿ ಶೂದ್ರನಾದರೂ ಮನದಲ್ಲಿ ಮಹಾದೇವ ನೆಲೆಗೊಂಡವನು ನಿಜವಾದ ವೀರಶೈವ ಎಂದು ನುಡಿದರು, ವ್ಯಕ್ತಿ ಅಳವಡಿಸಿಕೊಳ್ಳ ಬೇಕಾದ ಆಚಾರವಿಚಾರಗಳಿಗೆ ಹೆಚ್ಚು ಒತ್ತುಕೊಟ್ಟರು. ಆದುದರಿಂದಲೇ ವೀರಶೈವ ಧರ್ಮದಲ್ಲಿ ಸಿದ್ಧಾಂತಗಳ ಪ್ರತಿಪಾದನೆಯಷ್ಟೇ ಅನುಭಾವಮಾರ್ಗಕ್ಕೆ ನೆರವಾಗುವ ನೈತಿಕ ನೆಲೆಗಟ್ಟು ಮುಖ್ಯವಾಯಿತು. ಇದನ್ನೇ ಅವರು ಪಂಚಾಚಾರಗಳೆಂದು ಕರೆದರು. ಷಟ್‌ಸ್ಥಲ ಚಕ್ರವರ್ತಿಯೆನಿಸಿದ ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಪಂಚಾಚಾರಗಳ ಅರ್ಥವನ್ನು ಹೀಗೆ ವಿವರಿಸಿದ್ದಾರೆ !

"ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ
ಭೃತ್ಯಾಚಾರವೆಂಬ ಆಚರಣೆಯೆಂತೆಂದಡೆ;
ಲಿಂಗವಲ್ಲದೆ ಅನ್ಯವನರಿಯದಿಹಂದೇ ಲಿಂಗಾಚಾರ ;

---

3 ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ, ಪು. ೨೭೦.

ಸಜ್ಜನಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ
ನೀಡಿ ಸತ್ಯಶುದ್ಧನಾಗಿಹುದೇ ಸದಾಚಾರ ;
ಶಿವಭಕ್ತರಲ್ಲಿ ಕುಲಗೋತ್ರ ಜಾತಿವರ್ಣಾಶ್ರಮ
ವನ್ನರಸದೆ ಅವರೊಕ್ಕುದ ಕೊಂಬುದೆ ಶಿವಾಚಾರ ;
ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ ;
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯ
ಪ್ರಭುವೆ ಕೂಡಲ ಸಂಗಮದೇವಾ''

ಪಂಚಾಚಾರಗಳನ್ನು ಕುರಿತು ಚನ್ನಬಸವಣ್ಣನವರು ವ್ಯಕ್ತಪಡಿಸಿರುವ ಈ ಅಭಿಪ್ರಾಯಗಳು ಮನನೀಯವಾದುವು. ವೀರಶೈವನಾದವನು ಜಾತಿಭೇದ ಮಾಡ ಕೂಡದು. ಪಂಚಾಚಾರದಲ್ಲಿ ಅವಕ್ಕೆ ಅವಕಾಶವಿಲ್ಲ. ''ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ ಎಂಬ ಅನಾಚಾರಿಯ ಮಾತ ಕೇಳಲಾಗದು'' ಎಂಬಲ್ಲಿ ಸರ್ವಸಮಾನತೆಯ ಮಹಾಮಂತ್ರವಿದೆ. ಈ ಸಮಾನತೆಯ ನೆಲೆಗಟ್ಟಿನ ಮೇಲೆ ಪ್ರತಿಪಾದಿತವಾಗಿರುವ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಮತ್ತು ಭೃತ್ಯಾಚಾರಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಳ್ಳಬಹುದು.

ಲಿಂಗಾಚಾರ.

ಅಂಗನು ಜೀವನು ಲಿಂಗದಲ್ಲಿ ಒಂದಾಗಿ ಬೆರೆಯುವುದೇ 'ಲಿಂಗಾಂಗಸಾಮ ರಸ್ಯ'ವೆನಿಸುತ್ತದೆ. ಇಲ್ಲಿ ಇಷ್ಟಲಿಂಗಕ್ಕೆ ಮಹತ್ವವಿರುವಂತೆಯೇ ಲಿಂಗನಿಷ್ಠೆಗೆ ಹೆಚ್ಚು ಮಹತ್ವವಿದೆ. ಲಿಂಗೋಪಾಸನೆಯಲ್ಲಿ ಅಚಲವಾದ ನಿಷ್ಠೆ ಇರಬೇಕು. ಎಲ್ಲ ವನ್ನೂ ಲಿಂಗಾರ್ಪಿತ ಮಾಡುವುದರ ಮೂಲಕ ಪ್ರಸಾದವನ್ನಾಗಿ ಮಾಡಿ ಸ್ವೀಕರಿಸ ಬೇಕು. ಇಷ್ಟಲಿಂಗದಲ್ಲಿ ನಿಷ್ಠೆ ಇಲ್ಲದೆ ಸ್ಥಾವರಲಿಂಗಕ್ಕೆ ಎರಗುವುದನ್ನು ಶರಣರು ಮಾರ್ಮಿಕವಾಗಿ ಖಂಡಿಸಿದ್ದಾರೆ. ಉಗ್ರನಿಷ್ಠೆಗೆ ಹೆಸರಾದ ಅಂಬಿಗರ ಚೌಡಯ್ಯನ ಒಂದು ವಚನವನ್ನು ಇಲ್ಲಿ ನೋಡಬಹುದು. ''ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟಡಿಯಾಗಿ ಬೀಳುವ ಲೊಟ್ಟೆ ಮೂಳನ ಕಂಡಡೆ ಮೆಟ್ಟಿರ್ದ ಎಡ ಪಾದರಕ್ಷೆಯ ತಗೊಂಡು ಲಟಲಟನೆ ಹೊಡಿ'' ಈ ಬಗೆಯಾದ ನಿಷ್ಠೆ ಕೇವಲ ಬಾಹ್ಯಕ್ರಿಯೆಗಳಲ್ಲಿ ಮಾತ್ರ ವ್ಯಕ್ತವಾದರೆ ಸಾಲದು, ಸಾಧನೆಯಿಂದ ಅಂತರಂಗದಲ್ಲಿ ಪರಿಪಕ್ವಗೊಂಡು ಬಾಹ್ಯಾಚರಣೆಯಲ್ಲಿ ತೋರಬೇಕು. ಅಂತರಂಗದ ಅರಿವನ್ನು ಪಡೆಯಲು ಲಿಂಗ ಸಾಧನವಾಗಬೇಕು. ಲಿಂಗಧಾರಿಗಳೆಲ್ಲ ಒಂದೇ ಎಂಬ ಭಾವನೆ ಸಾಮಾಜಿಕ ಸಮಾನತೆಗೂ ಪೂರಕವಾಗುತ್ತದೆ. ಆದ್ದರಿಂದ ಈ ಲಿಂಗನಿಷ್ಠೆಯಲ್ಲಿ ಒಳಗೊಳ್ಳಬಹುದಾದ ನೈತಿಕ ನಿಯಮಗಳನ್ನು ಲಿಂಗಾಚಾರವೆಂದು ಕರೆಯಬಹುದು. ಲಿಂಗಗುಣಗಳಿಲ್ಲದ ಲಿಂಗಧಾರಿಗಳನ್ನು ಕುರಿತು ಅಲ್ಲಮಪ್ರಭು ಹೀಗೆನ್ನುತ್ತಾನೆ—

"ಹೊಟ್ಟೆಯ ಮೇಲೆ ಕಟ್ಟೋಗರನ ಮೊಟ್ಟೆಯ
ಕಟ್ಟಿದೊಡೇನು ? ಹಸಿವು ಹೋಹುದೆ ? ಅಂಗದ ಮೇಲೆ
ಲಿಂಗ ಸ್ವಾಯತವಾದರೇನು ? ಇಟ್ಟಕಲ್ಲು
ಮೆಳೆಯ ಮೇಲೆ ಸಿಕ್ಕಿದಡೆ ಆ ಮೆಳೆ ಭಕ್ತನೆ ?
ಇಟ್ಟಾತ ಗುರುವೆ ? ಇಂತಪ್ಪವರ ಕಂಡಡೆ
ನಾಚುವೆನಯ್ಯ ಗುಹೇಶ್ವರಾ"

ಲಿಂಗ ಕರಸ್ಥಲದ ಜ್ಯೋತಿಯಾಗಬೇಕಾದರೆ ಅಂಗನ ನಡೆ, ನುಡಿ, ನೋಟ, ಬೇಟ, ಕೂಟ ಎಲ್ಲವೂ ಲಿಂಗವೇ ಆಗಬೇಕು. ಆಗ ಮಾತ್ರ ಅಂಗನು ಲಿಂಗದ ಬೆಳಕಿನಲ್ಲಿ "ತನ್ನೆಲ್ಲ ಕಾಳಿಕೆಗಳನ್ನು ಕಳೆದುಕೊಳ್ಳುವ ಸಾಧನೆಯಲ್ಲಿ ತೊಡಗುತ್ತಾನೆ : ಉಳಿದೆಲ್ಲವನ್ನೂ ಮರೆಯುತ್ತಾನೆ.[4] ಆಗ ಲಿಂಗವನ್ನು ಕುರಿತಾದ ಹಂಬಲ ಅಂತರಂಗದಲ್ಲಿ ಗಟ್ಟಿಗೊಂಡು, ಸರ್ವಾಂಗದಲ್ಲಿಯೂ ವ್ಯಾಪಿಸಿ ಅವನು ಮಾಡುವುದೆಲ್ಲಾ ಲಿಂಗಾರ್ಪಿತವಾಗುತ್ತದೆ.

"ಲಿಂಗಕ್ಕೆಂದೆ ನೆನೆವೆ, ಲಿಂಗಕ್ಕೆಂದೆ ಮಾಡುವೆ
ಲಿಂಗಕ್ಕೆಂದೆ ಕೊಡುವೆ ನಾನಯ್ಯ
ಸಕಲ ಪದಾರ್ಥಂಗಳ ಲಿಂಗಕ್ಕೆಂದೆ ಭಾವಿಸುವೆ,
ಅಂಗಗುಣಗಳನರಿಯೆನಯ್ಯ
ಲಿಂಗಕ್ಕೆಂದೆ ಕಾಮಿಸುವೆನು ನಿಃಕಾಮಿಯಾಗಿ,
ಲಿಂಗಕ್ಕೆಂದೆ ಕೈಕೊಂಡೆನು
ಅನರ್ಪಿತವನರಿಯೆ ಕೂಡಲ ಸಂಗಮದೇವಾ,

ಬಸವಣ್ಣನವರ ಲಿಂಗಪ್ರೇಮ ಎಂತಹುದೆಂಬುದಕ್ಕೆ ಈ ವಚನ ಕನ್ನಡಿ ಹಿಡಿಯುತ್ತದೆ. ಮರುಳು ಶಂಕರದೇವರ ಒಂದು ವಚನದಲ್ಲಿ ಅರ್ಪಣಾಭಾವದ ಪರಾಕಾಷ್ಠೆಯನ್ನು ಮನಗಾಣಬಹುದು.

"ಇಷ್ಟಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು
ಪ್ರಾಣಲಿಂಗಕ್ಕೆ ಮನವನರ್ಪಿಸಬೇಕು
ಭಾವಲಿಂಗಕ್ಕೆ ತೃಪ್ತಿಯನರ್ಪಿತವ ಮಾಡಬೇಕು
ಈ ಮರ್ಮವನರಿಯದು ಬಲ್ಲಡೆ ಪ್ರಸಾದಿ ಅದೆಂತೆಂದೊಡೆ
'ಇಷ್ಟಲಿಂಗಾರ್ಪಿತಂ ಅಂಗಂ ಪ್ರಾಣಲಿಂಗಾರ್ಪಿತಂ ಮನಃ ।
ಭಾವಲಿಂಗಾರ್ಪಿತಂ ತೃಪ್ತಿರಿತಿ ಭೇದಂ ವರಾನನೇ' ॥

---

4 ಡಾ॥ ಎಚ್. ತಿಪ್ಪೆರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ, ಪು. ೨೬೯.

ಎಂಬುದಾಗಿ ಲಿಂಗಕ್ಕೆಯೂ ತನಗೆಯೂ ಎಡೆತೆರಹಿಲ್ಲದೆ ಲಿಂಗಸಹಿತವಾಗಿಯೇ ಕೇಳುವ, ಲಿಂಗಸಹಿತವಾಗಿಯೇ ಘ್ರಾಣಿಸುವ, ಲಿಂಗಸಹಿತವಾಗಿಯೇ ರುಚಿಸುವ, ಲಿಂಗಸಹಿತವಾಗಿಯೇ ನೋಡುವ, ಲಿಂಗಸಹಿತವಾಗಿಯೇ ತೊಳಗುವ, ಇಂತಪ್ಪ ಮಹಾಮಹಿಮ ಸದ್ಭಕ್ತನ ಅಂಗವೆಲ್ಲವೂ ಲಿಂಗ, ಲಿಂಗವೆಲ್ಲವೂ ಅಂಗ, ಅಂಗಸಂಗ ವೆಲ್ಲವೂ ಲಿಂಗಸಂಗವಾದ ಕಾರಣ, ಅಂಗಕ್ರಿಯೆಗಳಿಲ್ಲ ಲಿಂಗಕ್ರಿಯೆಗಳಾದ ಕಾರಣ, ಅಂಗಭೋಗವೆಲ್ಲವೂ ಲಿಂಗಭೋಗವಾದ ಕಾರಣ, ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀ ಚರಣಕ್ಕೆ ಎನ್ನ ಶಿರವನರ್ಪಿಸಿಪೂಜಿಸುವೆ ಕಾಣಾ ಶುದ್ಧಸಿದ್ಧ ಪ್ರಸಿದ್ಧಪ್ರಭುವೆ ಶಾಂತ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಸದ್ಭಕ್ತನ ನಿಲವಿನ ಪರಿಯು ನೀವೇ ಬಲ್ಲಿರಲ್ಲದೆ ನಾನೆತ್ತಬಲ್ಲೆನಯ್ಯ ನಿಮ್ಮಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ'' ಲಿಂಗಾಂಗಸಾಮರಸ್ಯ ಸಾಧ್ಯವಾಗಬೇಕಾದರೆ ಈ ನಿಷ್ಠೆ ಮತ್ತು ತನ್ಮಯತೆ ಬೇಕು. ಈ ಬಗೆಯಾದ ಆಚಾರವೇ ಲಿಂಗಾಚಾರ. ''ತಾನೇ ಲಿಂಗಸ್ವರೂಪವಾಗಿ ಪರಿಣಮಿಸುವ ಲಿಂಗಾಂಗಸಾಮರಸ್ಯದ ಮಾರ್ಗದಲ್ಲಿ ಈ ಲಿಂಗಾಚಾರ ಮೊದಲನೆಯ ಮೆಟ್ಟಿಲು. ಸಾಧನೆಯಲ್ಲಿ ಮುಂದುವರಿದಂತೆ ಇತರ ಆಚಾರಗಳ ಬೆಂಬಲದಿಂದ ಲಿಂಗಾಚಾರದ ವ್ಯಾಪ್ತಿಯೂ ಬೆಳೆಯುತ್ತಾ ಹೋಗುತ್ತದೆ. ಷಟ್‌ಸ್ಥಲಗಳನ್ನು ಅವಲಂಬಿಸಿರುವ ಷಡ್ಲಿಂಗಗಳಲ್ಲಿ ಮೊದಲನೆಯದು ಆಚಾರಲಿಂಗ. ಕ್ರಮೇಣ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ ಮೊದಲಾಗಿ ವಿಕಾಸಗೊಳ್ಳುತ್ತಾ ಹೋಗುತ್ತದೆ. ಇದೆಲ್ಲಕ್ಕೂ ಕಾರಣವಾಗುವ ಸರ್ವಾಚಾರ ಸಂಪತ್ತನ್ನೆಲ್ಲಾ ಒಂದರ್ಥ ದಲ್ಲಿ ಲಿಂಗಾಚಾರವೆಂದೇ ಕರೆಯಬಹುದು. ಆದರೆ ಪಂಚಾಚಾರಗಳಲ್ಲಿ ಲಿಂಗಾಚಾರ ವೆಂದಾಗ ಇಷ್ಟು ವ್ಯಾಪಕವಾದ ಅರ್ಥದಲ್ಲಿಲ್ಲ; ವೈಯಕ್ತಿಕವಾಗಿ ಲಿಂಗನಿಷ್ಠೆ, ಸಾಮಾಜಿಕ ವಾಗಿ ಸರ್ವಸಮತೆ ಎಂಬರ್ಥದಲ್ಲಿ ತೆಗೆದುಕೊಳ್ಳಬಹುದು''.[5]

ಒಟ್ಟಿನಿಂದ ಹೇಳುವುದಾದರೆ ಚಂಚಲಗೊಳ್ಳುವ ಮನಸ್ಸನ್ನು ನಿಯಂತ್ರಿಸಿ, ಲಿಂಗದಕಡೆಗೆ ತಿರುಗಿಸುವ 'ವೈಯಕ್ತಿಕ ಸಾಧನೆ'ಯೇ ಲಿಂಗಾಚಾರವೆನಿಸುತ್ತದೆ. ಆದರೆ ಈ 'ವೈಯಕ್ತಿಕ ಸಾಧನೆ'ಯನ್ನು ಅಹಿಂಸಾತ್ಮಕವೂ ಪಕ್ಷಪಾತರಹಿತವೂ ಆದ ಮಾರ್ಗದಲ್ಲಿ ಸಾಧಿಸಿಕೊಳ್ಳಬೇಕು. ಪರಮಾತ್ಮ ಸರ್ವಾಂತರ್ಯಾಮಿಯಾದುದರಿಂದ ಸರ್ವಜೀವಿ ಗಳಲ್ಲೂ ಅವನಿದ್ದಾನೆ ಎಂದು ತಿಳಿದು ನಡೆಯಬೇಕು

''ಕಾಗೆ ಒಂದಗಳು ಕಂಡರೆ ಕರೆಯದೆ ತನ್ನ ಬಳಗವೆಲ್ಲವನು?
ಕೋಳಿ ಒಂದು ಗುಟುಕ ಕಂಡರೆ ಕರೆಯದೆ ತನ್ನ ಕುಲವೆಲ್ಲವನು?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಳಿಗಿಂತ
ಕರಕಷ್ಟ ಕೂಡಲ ಸಂಗಮ ದೇವಾ''

---

5 ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ. ಪು. ೨೮೦.

ವೀರಶೈವಧರ್ಮದಲ್ಲಿ ಲಿಂಗಾಚಾರ ಆಧ್ಯಾತ್ಮಿಕಪಥದಲ್ಲಿ ಸಾಗುವುದಕ್ಕೆ ಪೂರಕವಾಗಿ ನಿಲ್ಲುವುದರ ಜತೆಗೆ ಸಾಮಾಜಿಕ ಸಮಾನತೆಯನ್ನು ಸಾಧಿಸುವುದರಲ್ಲಿಯೂ ಗಮನಾರ್ಹವಾದುದು ಎಂಬುದನ್ನು ಮೇಲಿನ ವಚನದಿಂದ ಸ್ಪಷ್ಟಪಡಿಸಬಹುದು. ಈ ವಚನ ಲಿಂಗಾಚಾರದಲ್ಲಿ ನಡೆವವನಿಗೆ ಕೈಗನ್ನಡಿಯಂತಿದೆ.

ಸದಾಚಾರ

ಆಧ್ಯಾತ್ಮಿಕ ಜೀವನದ ತಳಹದಿಯೆಂದರೆ ನೈತಿಕ ನೆಲೆಗಟ್ಟು. ವ್ಯಕ್ತಿಯು ನಡೆ–ನುಡಿ ಆಚಾರ ವಿಚಾರ ಪರಿಶುದ್ಧವಾಗಿರಬೇಕು. ಮಾನವ ಪ್ರೇಮಿಯೂ, ಅಹಿಂಸಾ ಮಾರ್ಗಿಯೂ ಆಗದವನಿಗೆ ಎಲ್ಲ ಸಾಧನೆಯ ಮಾರ್ಗವೂ ಮುಚ್ಚಿದಂತೆಯೇ ಸರಿ. ಆಸೆಗೆ, ಆಮಿಷಕ್ಕೆ ಹೊನ್ನು–ಹೆಣ್ಣು-ಮಣ್ಣಿಗೆ ಹಂಬಲಿಸುವವನು ಸದಾಚಾರಿಯೆನಿಸಲಾರ. ''ಕೋಪವಡಗದೆ ತಾಪಮುಳಿಯದೆ ಒಳಿದೆ ಭಕ್ತರಾದೆವೆಂದು'' ಭ್ರಮಿಸುವವರಿಗೆ ಲಿಂಗ ದೀಕ್ಷೆ ಸಲ್ಲದು ಎಂಬುದೆ ಶರಣರ ಅಭಿಪ್ರಾಯ. ಆದ್ದರಿಂದ ಸದಾಚಾರವಿಲ್ಲದವನು ಲಿಂಗಾಚಾರಕ್ಕೆ ಅರ್ಹನಾಗುವುದಿಲ್ಲ. ''ಸದಾಚಾರ ಸದ್‌ಭಕ್ತಿ ಇಲ್ಲದವರನೊಲ್ಲನಯ್ಯ'' ಎಂಬ ಮಾತನ್ನು ಗಮನಿಸಬೇಕು. ಸದಾಚಾರ ಎಂದರೇನು ? ಎಂಬ ಪ್ರಶ್ನೆಗೆ ಬಸವಣ್ಣನವರ ಒಂದು ಜನಪ್ರಿಯ ವಚನ ಸಮರ್ಪಕವಾದ ಉತ್ತರವನ್ನು ನೀಡುತ್ತದೆ.

''ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ;
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ''

ಬಸವಣ್ಣನವರು ಹೇಳಿರುವ ಈ ಅಂತರಂಗ ಬಹಿರಂಗ ಶುದ್ಧಿಯೇ ಸದಾಚಾರವೆನಿಸುತ್ತದೆ. ವ್ಯಕ್ತಿಯ ವೈಯಕ್ತಿಕ ಸಾಮಾಜಿಕ ಬದುಕು ಪರಸ್ಪರ ಪೂರಕವಾಗಿದ್ದು ಶಾಶ್ವತವಾದ ಮೌಲ್ಯಗಳನ್ನು ಒಳಗೊಂಡಿರಬೇಕೆಂಬುದನ್ನು ಈ ವಚನ ಧ್ವನಿಸುತ್ತದೆ. ''ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ,'' ನಮ್ಮ ಮಾತು ಅನ್ಯರ ಅಂತರಂಗವನ್ನು ಚುಚ್ಚುವಂತಿರಬಾರದು. ಒಳ್ಳೆಯ ನುಡಿ, ಒಳ್ಳೆಯ ನಡೆ, ಸದಾಚಾರದ ಲಕ್ಷಣವೆಂಬುದನ್ನು ಮರೆಯಬಾರದು. ಸಾಧನೆಯ ಮಾರ್ಗದಲ್ಲಿ ಸದಾಚಾರದ ಪ್ರಾಮುಖ್ಯತೆಯನ್ನು ಒತ್ತಿ ಹೇಳುವಲ್ಲಿ ಧರ್ಮದ ಸೂಕ್ಷ್ಮವನ್ನೂ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಶರಣರ ದೃಷ್ಟಿಯಲ್ಲಿ ಧರ್ಮವೆಂಬುದು ಜಾತಿಸೂಚಕ ಶಬ್ದವಲ್ಲ. ಅದು ಮಾನವಕುಲಕ್ಕೆಲ್ಲಾ ಹಿತವನ್ನೇ ಬಯಸುವ, ಅಹಿಂಸೆಯಿಂದ ಕೂಡಿದ ತತ್ತ್ವ ವಿಶೇಷ. ಧರ್ಮದ ಮೂಲ ದಯೆ.

"ದಯವಿಲ್ಲದ ಧರ್ಮವದಾವುದಯ್ಯ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ ;
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ"

ಯಾವುದು ಅಧರ್ಮವೋ ಅದನ್ನೇ ಧರ್ಮವೆಂದು ತಿಳಿದು ಆಚರಿಸುವ ಅಜ್ಞಾನಿಗಳನ್ನು ಕಂಡಾಗ, ಬಸವಣ್ಣನವರು ವಿಡಂಬಿಸುವ ಬಗೆ ಇದು :

"ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೇ ಅಳು ಕಂಡೆಯಾ !
ವೇದವನೋದಿದವರ ಮುಂದೆ ಅಳು ಕಂಡೆಯಾ !
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ !
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲಸಂಗಮ ದೇವಾ"

ಬಸವಣ್ಣನವರ ಈ 'ವಿಡಂಬನೆಯ ಹಿಂದಿರುವ ಕರುಣೆ ಮುಖ್ಯವಾದುದು. ಹಬ್ಬಕ್ಕೆ ತಂದ ಹರಕೆಯ ಕುರಿಯನ್ನು ಕಂಡು ಅವರು ಮರುಗುತ್ತಾರೆ. ಬಲಿಯಾಗುವ ಕುರಿಗಿಂತ, ಬಲಿಕೊಡುತ್ತಿರುವ ಮಾನವ ಪ್ರಾಣಿಯ ವಿಚಾರದಲ್ಲಿ ಅವರ ಅನುಕಂಪೆ ಇನ್ನೂ ಹೆಚ್ಚಿನದು. ತಾಮಸಿಕ ಪೂಜೆಯಿಂದ ಆತ್ಮವನ್ನು ಬಲಿ ಮಾಡಿಕೊಳ್ಳುತ್ತಿದ್ದಾರಲ್ಲಾ ಎಂಬ ಆತಂಕ ಅವರಿಗೆ"[6] ಇದನ್ನು ಗಮನಿಸಿದರೆ ಶರಣರು ಕಂಡುಕೊಂಡ ಆಧ್ಯಾತ್ಮಿಕ ಮಾರ್ಗ ಎಷ್ಟು ಅರ್ಥಪೂರ್ಣವೆಂಬುದನ್ನು ಅರಿಯಬಹುದು. ಸತ್ಯ, ಅಹಿಂಸೆ, ದಯೆ, ಪ್ರೇಮ ಮತ್ತು ಅಂತರಂಗಶುದ್ಧಿಗಳಂತಹ ಪರಮಮೌಲ್ಯಗಳಿಗೆ ಹೆಚ್ಚು ಒತ್ತುಕೊಟ್ಟರು. ಮಾನವಕುಲದಲ್ಲಿ ತುಂಬಿರುವ ಅತೃಪ್ತಿ, ವಿಷಮತೆ, ಮತ್ತು ವಿರಸಗಳನ್ನು ಹೋಗಲಾಡಿಸಿ ಸಮರಸ ಮತ್ತು ಸಂತೃಪ್ತಿಗಳನ್ನು ಕಾಣಲು ನೆರವಾಗಬಹುದಾದುದನ್ನೆಲ್ಲ ಸದಾಚಾರವೆನ್ನಬಹುದು. ಆಚಾರವನ್ನರಿಯದೆ ಕೇವಲ ಶುಷ್ಕವಾದ ಬಾಹ್ಯಾಚರಣೆಯಲ್ಲಿ ತೊಡಗುವವರನ್ನು ಕಂಡು ತೋಂಟದ ಸಿದ್ಧಲಿಂಗೇಶ್ವರರು ಹೀಗೆನ್ನುತ್ತಾರೆ :

"ಆಚಾರವಿಲ್ಲದ ಗುರು ಭೂತ ಪ್ರಾಣಿ, ಆಚಾರವಿಲ್ಲದ
ಲಿಂಗ ಶಿಲೆ, ಆಚಾರವಿಲ್ಲದ ಜಂಗಮ ಮಾನವ,
ಆಚಾರವಿಲ್ಲದ ಪಾದೋದಕ ನೀರು, ಆಚಾರವಿಲ್ಲದ
ಪ್ರಸಾದ ಎಂಜಲು, ಆಚಾರವಿಲ್ಲದ ಭಕ್ತ ದುಷ್ಕರ್ಮಿ,
ಇದು ಕಾರಣ ಅಟ್ಟವನೇರುವುದಕ್ಕೆ ನಿಚ್ಚಣಿಕೆಯೇ

6. ಡಾ|| ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವ ಧರ್ಮ, ಪು. ೨೮೩-೮೪.

ಸೋಪಾನವಯ್ಯ. ಹರಪದವನೇರುವುದಕ್ಕೆ
ಶ್ರೀಗುರು ಹೇಳಿದ ಸದಾಚಾರವೇ ಸೋಪಾನವಯ್ಯ.
ಗುರು ಉಪದೇಶವ ಮೀರಿ ಮನಕ್ಕೆ ಬಂದಂತೆ ವರ್ತಿಸುವ.
ಪಾಪಿಗಳ ಎನಗೊಮ್ಮೆ ತೋರದಿರಯ್ಯ ಮಹಾಲಿಂಗ
ಗುರು ಸಿದ್ಧೇಶ್ವರ ಪ್ರಭುವೇ''

ಕೇವಲ ಬಾಹ್ಯಾಚರಣೆಯಲ್ಲಿ ತೊಡಗಿರುವವನು ಗುರುವಾದರೂ. ಭಕ್ತನಾದರೂ ಅನಾಚಾರಿಯೆನಿಸುತ್ತಾನೆ. 'ಹರಪದವನೇರುವುದಕ್ಕೆ ಗುರು ಹೇಳಿರುವ ಸದಾಚಾರವೇ ಸೋಪಾನ' ಎಂಬ ಮಾತನ್ನು ಮೇಲಿಂದ ಮೇಲೆ ಮೆಲುಕು ಹಾಕಬಹುದು.

ಗಣಾಚಾರ

ಗಣಾಚಾರ, ಸಾಧನೆಯ ಮಾರ್ಗದಲ್ಲಿ ಲಿಂಗಾಚಾರ ಮತ್ತು ಸದಾಚಾರಕ್ಕೆ ಪೂರಕವಾಗಿ ನಿಲ್ಲುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಏಕ ದೇವೋಪಾಸನೆ. ಒಂದು ದೈವವನ್ನು ನಂಬಿ ಸಾಧನೆಯ ಮಾರ್ಗದಲ್ಲಿ ಮುಂದುವರಿಯುವುದು ಮನೋವಿಜ್ಞಾನ ದೃಷ್ಟಿಯಿಂದಲೂ ಸಮ್ಮತವಾದುದು. ವೀರಶೈವ ಧರ್ಮ ಇದಕ್ಕೆ ಹೆಚ್ಚು ಒತ್ತು ಕೊಟ್ಟಿದೆ.

''ಇಬ್ಬರು ಮೂವರು ದೇವರೆಂದುಬ್ಬಿ ಮಾತಾಡಬೇಡ
ದೇವನೊಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿ ನೋಡಾ
ಕೂಡಲ ಸಂಗಮದೇವನೊಬ್ಬನೇ ಅಲ್ಲದೆ
ಇಬ್ಬರಿಲ್ಲವೆಂದಿತ್ತುದಾ ವೇದವು''

ಗಣಾಚಾರದಲ್ಲಿ ಇರಬೇಕಾದ ಏಕೈಕ ನಿಷ್ಠೆಯೆಂದರೆ ಇದೆ. ನಿಷ್ಠಾವಂತನಾದ ಭಕ್ತ ಶಿವನಿಂದೆಯನ್ನಾಗಲೀ, ಜಂಗಮನಿಂದೆಯನ್ನಾಗಲೀ, ಗುರುನಿಂದೆಯನ್ನಾಗಲೀ, ವೀರಶೈವ ತತ್ತ್ವ ದರ್ಶನಗಳ ಅವಹೇಳನವನ್ನಾಗಲೀ ಕೇಳಬಾರದು. ಶಿವನಿಂದೆ ಮಾಡುವವರ ಆಲೋಚನೆಯ ತಪ್ಪುಗಳೇನು ಎಂಬುದನ್ನು ತೋರಿಸಿಕೊಟ್ಟು ಅವರನ್ನು ತಿದ್ದಬೇಕು, ಪ್ರತಿಭಟಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಆ ಸ್ಥಾನದಿಂದ ಕಾಲ್ತೆಗೆಯಬೇಕು ಎನ್ನುವಷ್ಟರ ಮಟ್ಟಿಗೆ ಗಣಾಚಾರದ ವ್ಯಾಪ್ತಿಯನ್ನು ಗುರುತಿಸಬಹುದು. ಆದರೆ ''ಇದೇ ಗಣಾಚಾರದ ತಿರುಳೆಂದು ಹೇಳುವಂತಿಲ್ಲ. ಇದು ಬಹುಶಃ ಆ ಕಾಲದ ಧಾರ್ಮಿಕ ಜೀವನದಲ್ಲಿ ಕಂಡು ಬರುತ್ತಿದ್ದ ಪರಸ್ಪರ ಸ್ಪರ್ಧೆ ತಿಕ್ಕಾಟಗಳ ಪ್ರತಿಧ್ವನಿ ಎನ್ನಬಹುದು. ಇಲ್ಲವಾದರೆ ತನ್ನದೊಂದೇ ಶ್ರೇಷ್ಠವೆಂಬ ಹಠ, ಅಂಧಾಭಿಮಾನ ಅಹಂಕಾರಗಳೆಲ್ಲಾ ಗಣಾಚಾರವೆನ್ನಬೇಕಾಗುತ್ತದೆ. ಆದರೆ ಗಣಾಚಾರ ಇವುಗಳಿಂದ ಭಿನ್ನವಾದದ್ದು. ಶ್ರೇಷ್ಠವಾದುದನ್ನು ಮಾತ್ರ ಪುರಸ್ಕರಿಸುತ್ತೇನೆಂಬ ಸತ್ಯನಿಷ್ಠೆಯಿಂದ ಪ್ರೇರಿತವಾದದ್ದು. ಅಸತ್ಯದೊಡನೆ ಅನ್ಯಾಯದೊಡನೆ ಹೇಗೋ ಹೊಂದಿ

ಕೊಂಡು ಹೋಗಬೇಕೆಂಬುದಕ್ಕೆ ಅದು ವಿರುದ್ಧವಾದುದು"[7] ಎಂಬುದೇ ಗಣಾಚಾರದ ಧ್ವನಿತಾರ್ಥ. ಆದ್ದರಿಂದ ಈ ದಿಕ್ಕಿನಲ್ಲಿ ಶರಣರು ನುಡಿದಿರುವ ನುಡಿ ಕೆಲವು ವೇಳೆ ಕಟುವಾದರೂ, ಚಾಟಿಯ ಏಟಿನಂತಾದರೂ ಅವರ ಅಪೂರ್ವವಾದ ನಿಷ್ಠೆ ಮತ್ತು ಮನೋಧರ್ಮ ಮೆಚ್ಚುವಂತಹದು.

"ಸತ್ತರೆ ಸಂಗಾತಿ ಹೂಳಿಸಿಕೊಂಬ ಇಷ್ಟಲಿಂಗವ
ಸಟೆ ಮಾಡಿ ಮತ್ತೆ ಅನ್ಯ ದೈವಕ್ಕೆರಗುವ ಕತ್ತೆ
ಹೊಲೆಯರು ನೀವು ಕೇಳಿರೋ, ತನ್ನ ಪುರುಷನಿರಲು
ಅನ್ಯ ಪುರುಷನ ಕೂಡಿಹ ಸ್ತ್ರೀಗೆ ನರಕವಲ್ಲವೇ ?
ಮೋಕ್ಷಾರ್ಥಿಯೆಂದು ಗುರುವು ಕೊಟ್ಟ ಇಷ್ಟಲಿಂಗವು
ಅಂಗಕ್ಕೆ ಸಂಬಂಧಿಸಿದ ಬಳಿಕ ಹಲವು ದೇವರೆಂದು
ಭಾವಿಸಿ ಪೂಜೆಯ ಮಾಡುವ ಭ್ರಷ್ಟರು
ನೀವು ಕೇಳಿರೋ, ನೀವು ಮಾಡಿದ ಪೂಜೆಯೂ
ಹಾದರ ಸ್ತ್ರೀಯಳಂತೆ ಕಾಣಿರೋ, ಕಡೆಗೆ
ಅದೇ ಲಿಂಗವೇ ಮುಂದೆ ಮಾರಿಯಾಗಿ
ಮೋಕ್ಷಕ್ಕೆ ದೂರ ಮಾಡುವುದೆಂದಾತ ನಮ್ಮ
ಅಂಬಿಗರ ಚೌಡಯ್ಯ"

"ಪತಿವ್ರತೆಯಾದೊಡೆ ಅನ್ಯಪುರುಷನ ಸಂಗವೇತಕ್ಕಯ್ಯ ?
ಲಿಂಗಸಂಗಿಯಾದೊಡೆ ಅನ್ಯದೈವದ ಸಂಗವೇತಕ್ಕಯ್ಯ ?
ಕಂಡ ಕಂಡವರ ಹಿಂದೆ ಹರಿವ ಚಂಡಾಲಗಿತ್ತಿಯಂತೆ
ಒಬ್ಬನ ಕೈವಿಡಿದು ಒಬ್ಬಗೆ ಮಾತು ಕೊಟ್ಟು
ಒಬ್ಬಗೆ ಸನ್ನೆಯ ಮಾಡಿ ಮತ್ತೊಬ್ಬರ ಸಂಗವ —
ಮಾಡುವ ಹಾದರಗಿತ್ತಿಯಂತೆ, ಪ್ರಾಣಲಿಂಗವಿದ್ದಂತೆ
ಸ್ಥಾವರಲಿಂಗಕ್ಕೆ ಹರಿಸಿ ಪೊಡಮಡುವ ಕೋಟಲೆ
ಏತಕೆ ? ಇದು ಕಾರಣ, ಕೂಡಲಚೆನ್ನಸಂಗಮದೇವಾ
ಇಂತಪ್ಪ ಪಾತಕರ ಮುಖವ ನನಗೆ ತೋರದಿರಯ್ಯ"

ಅನ್ಯದೈವಗಳನ್ನು ಪೂಜಿಸುವುದಿರಲಿ, ಸ್ಥಾವರ ಲಿಂಗಪೂಜೆಯೂ ಕೂಡಾ ವೀರಶೈವ ಧರ್ಮಕ್ಕೆ ಹೊರತಾದುದೆಂಬುದನ್ನು ಚನ್ನ ಬಸವಣ್ಣನವರು ಸ್ವಲ್ಪ ಕಟುವಾಗಿಯೇ ಹೇಳಿದ್ದಾರೆ. ಈ ಬಗೆಯಾದ ಅಚಲನಿಷ್ಠೆಗೆ ಸಾತ್ವಿಕ ಛಲ ಬೇಕು.

"ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ,
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ,

---

7. ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ, ಪು. ೨೮೮.

ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ,
ಛಲ ಬೇಕು ಶರಣಂಗೆ ಲಿಂಗ ಜಂಗಮ ಒಂದೆಂಬ,
ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ,
ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮ ದೇವ''

ಯಾವುದು ಅಶಿವವೋ, ಯಾವುದು ಅಧರ್ಮವೋ, ಯಾವುದು ಕಪಟವೂ, ಕುಹಕವೂ ಆದುದೋ, ಅದನ್ನು ಖಂಡಿಸಿ, ಸಾಧನೆಯ ಮಾರ್ಗದಲ್ಲಿ ಇಹಪರಗಳೆರಡಕ್ಕೂ ಪೂರಕವಾಗುವ ವೀರವ್ರತದ ಪ್ರತಿಪಾದನೆಯನ್ನು ಗಣಾಚಾರದಲ್ಲಿ ಮನಗಾಣಬಹುದು. ಹನ್ನೆರಡನೇ ಶತಮಾನದ ಸಕಲೇಶ ಮಾದರಸ, ಕಿನ್ನರಿ ಬೊಮ್ಮಯ್ಯ, ಮಡಿವಾಳ ಮಾಚಯ್ಯ ಮೊದಲಾದ ಅನೇಕ ಶರಣರು ಗಣಾಚಾರದ ವೀರಜಂಗಮರಾಗಿದ್ದರೆಂಬುದನ್ನು ಇಲ್ಲಿ ಸ್ಮರಿಸಬಹುದು.

ಶಿವಾಚಾರ

ಲಿಂಗಧಾರಿಗಳೆಲ್ಲ ಒಂದೇ ಎಂದು ತಿಳಿದು ಅವರಲ್ಲಿ ಭೇದ ಮಾಡದೆ ಪ್ರತ್ಯಕ್ಷ ಶಿವನೆಂದು ಆದರಿಸುವುದೇ ಶಿವಾಚಾರವೆನಿಸುತ್ತದೆ. ವೀರಶೈವದಲ್ಲಿ ಸ್ತ್ರೀ–ಪುರುಷ ಭೇದವಾಗಲಿ, ಜಾತಿವರ್ಣ ಭೇದವಾಗಲಿ ಇಲ್ಲ. ನಮ್ಮ ಬದುಕು ಶಿವಮಯವಾಗ ಬೇಕಾದರೆ ಪರಿಶುದ್ಧವಾದ ನಡೆ ನುಡಿಯನ್ನು ಅಳವಡಿಸಿಕೊಳ್ಳಬೇಕು. ಎಲ್ಲ ಸಾಧನೆಗಳಿಗೂ ಇದೇ ಮೊದಲನೆಯ ಮೆಟ್ಟಿಲು ಎಂಬುದನ್ನು ಮನಗಂಡಿದ್ದ ಶರಣರು ಶಿವಾಚಾರಕ್ಕೆ ಅರ್ಥಪೂರ್ಣವಾದ ವ್ಯಾಖ್ಯಾನ ಮಾಡಿದ್ದಾರೆ,

''ಅವರ ನಡೆಯೊಂದು ನುಡಿಯೊಂದಾದರೆ
ಶಿವಾಚಾರಕ್ಕವರು ಸಲ್ಲರಯ್ಯ
ಬಲ್ಲನು, ಸಾತ್ವಿಕರಲ್ಲದವರನೊಲ್ಲನು :
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು
ಪ್ರಪಂಚಿಯ ಮನವನೊಲ್ಲನು
ಕೂಡಲ ಸಂಗಮ ದೇವನು''

ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನೆಸಗಿದ ಶರಣರು ಸಮಾಜದ ಅರ್ಥಹೀನ ಸಂಪ್ರದಾಯ ಕಟ್ಟುಪಾಡುಗಳಿಗೆ ಮಣಿದವರಲ್ಲ. ಎಲ್ಲ ರಂಗಗಳಲ್ಲಿ ಸಮಾನತೆಯನ್ನು ಸಾಧಿಸುವ ಹೊಣೆಗಾರಿಕೆಯನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದರು. ಲೌಕಿಕದ ಚೌಕಟ್ಟಿನಲ್ಲಿಯೇ ಅಧ್ಯಾತ್ಮದ ಹಂದರವನ್ನು ನಿರ್ಮಿಸಿದ್ದು ಅವರ ಆಧ್ಯಾತ್ಮಿಕ ಮಾರ್ಗದ ವೈಶಿಷ್ಟ್ಯವೆನ್ನಬಹುದು. ''ಶ್ವಪಚನಾದರೇನು ? ಲಿಂಗಭಕ್ತನೇ ಕುಲಜನು'' ಎಂದು ನುಡಿದು, ಶಿವಾಚಾರದ ನೆಲೆ ಬೆಲೆಗಳನ್ನು ತೋರಿಕೊಟ್ಟರು. ಅಲ್ಲದೆ ಶಿವಾಚಾರವೆಂಬುದೊಂದು ಬಾಳಬಾಯಧಾರೆ : ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು, ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು ! ಬಿಚ್ಚಿ ಬೇರಾದರೆ

ಮೆಚ್ಚುವನೆ. ನಮ್ಮ ಕೂಡಲ ಸಂಗಮ ದೇವ ? ಎಂದು ಎಚ್ಚರಿಸಿದರು. ಇಂದ್ರಿಯ ಗುಣಗಳಳಿದು ಲಿಂಗಗುಣಗಳು ಅಳವಟ್ಟರೆ ಮಾತ್ರ ಶಿವಾಚಾರಕ್ಕೆ ಒಪ್ಪಿತ ಎಂಬುದಂ ಅಲ್ಲಮನ ಅಭಿಪ್ರಾಯ.

''ತನು ಬತ್ತಲೆಯಿದ್ದಡೇನೋ
ಮನಶುಚಿಯಾಗದನ್ನಕ್ಕರ ?
ಮಂಡೆ ಬೋಳಾದಡೇನೋ
ಭಾವ ಬಯಲಾಗದನ್ನಕ್ಕರ ?
ಭಸ್ಮವ ಪೂಸಿದಡೇನೋ
ಕರಣಾದಿ ಗುಣಂಗಳನೊತ್ತಿ, ಮೆಟ್ಟಿ ಸುಡದನ್ನಕ್ಕರ ?
ಇಂತೀ ಆಶೆಯ-ವೇಷದ-ಭಾಷೆಗೆ
ಗುಹೇಶ್ವರ ನೀ ಸಾಕ್ಷಿಯಾಗಿ ಛೀಯೆಂಬೆನು''

ಅಂಗಗುಣಗಳನ್ನು ಕಳೆದುಕೊಂಡು ಲಿಂಗಗುಣಗಳನ್ನು ಪಡೆದು ಲಿಂಗಸ್ವರೂಪಿಯಾದವನಿಗೆ ಈ ಜಗತ್ತಿನ ಚರಾಚರವೆಲ್ಲವೂ ಲಿಂಗಮಯವಾಗಿಯೇ ಕಾಣುತ್ತದೆ. ''ಲಿಂಗಾಚಾರ ಸದಾಚಾರ ಗಣಾಚಾರದ ನಿಷ್ಠೆಯಿಂದ ಸಾಧಕನ ಜೀವನದಲ್ಲಿ ಅಳವಟ್ಟು ಆತನ ವಿಕಾಸಕ್ಕೆ ಕಾರಣವಾಗುತ್ತದೆ. ಕರಸ್ಥಲದ ಇಷ್ಟಲಿಂಗ, ಕರಸ್ಥಲದಲ್ಲಿ ಮಾತ್ರ ಉಳಿಯದೆ ಅಂತರಂಗವನ್ನೂ ವ್ಯಾಪಿಸಿ, ಪ್ರಾಣಲಿಂಗ ಭಾವಲಿಂಗಗಳ ಅರಿವನ್ನೂ ಅನುಭವವನ್ನೂ ತಂದುಕೊಡುತ್ತದೆ. ಷಟ್‌ಸ್ಥಲ ಮಾರ್ಗದ ಪ್ರಸಾದಿ ಪ್ರಾಣಲಿಂಗಿ ಸ್ಥಳಗಳಲ್ಲಿ ಆ ನಿಲುವನ್ನು ಕಾಣುತ್ತೇವೆ. ಅದಕ್ಕೆ ಅನುಗುಣವಾದ ನಡೆ ನುಡಿಗಳನ್ನು ಕೈಗೂಡಿಸಿ ಕೊಡುತ್ತದೆ ಶಿವಾಚಾರ.[8] ಅಲ್ಲದೆ ''ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ'' ಎಂಬ ಭಾವ ನೆಲೆಗೊಂಡು ಶಿವಸ್ವರೂಪಿಯಾದ ಜಗತ್ತಿಗೆ ತನ್ನ ಸಾಧನೆಯ ಪೂರ್ಣ ಫಲವನ್ನು ಅರ್ಪಿಸುವಲ್ಲಿ ಭೃತ್ಯಾಚಾರಿಯಾಗಿ ಸಾಗುತ್ತಾನೆ.

ಭೃತ್ಯಾಚಾರ

ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ಭೃತ್ಯಾಚಾರಕ್ಕೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ ಎಲ್ಲ ಹಂತಗಳಲ್ಲಿಯೂ ಸಾಧಕನಾದವನು ಭೃತ್ಯಾಚಾರಿಯಾಗಿಯೇ ಸಾಗಬೇಕಾಗುತ್ತದೆ.

''ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ;
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ,
ಕೂಡಲ ಸಂಗಮ ದೇವಾ ಎನಗಿದೇ ದಿಬ್ಯ !

ಹೀಗೆ ಭಕ್ತರೇ ಹಿರಿಯರೆಂದು ಭಾವಿಸಿ, ಭಯ ಭಕ್ತಿಯಿಂದ ಅವರನ್ನು ಸೇವಿಸುವುದೇ ಭೃತ್ಯಾಚಾರ. ಸ್ವಾಮಿ—ಭೃತ್ಯ ಸಂಬಂಧವನ್ನು ಕುರಿತು ಬಸವಣ್ಣನವರು ಹೀಗೆ ಹೇಳುತ್ತಾರೆ.

———

8 ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ. ಪು. ೨೯೦

"ಸ್ವಾಮಿ—ಭೃತ್ಯ ಸಂಬಂಧಕ್ಕೆ ಆವುದು ಪದವೆಂದರೆ
ದಿಟವ ನುಡಿವುದು, ನುಡಿದಂತೆ ನಡೆವುದು
ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ
ನಮ್ಮ ಕೂಡಲ ಸಂಗಮ ದೇವ"

ಅಹಂಕಾರಕ್ಕೆ ದಾರಿ ಮಾಡಿಕೊಡುವ ಯಾವುದೇ ಪದವಿ ಅಥವಾ ಅಧಿಕಾರದ ವ್ಯಾಮೋಹದಿಂದ ದೂರ ಸರಿದು ನಿಲ್ಲುವ ಈ ಸ್ಥಿತಿಯನ್ನು ಮುಟ್ಟಿದ್ದ ಬಸವಣ್ಣನವರು ಬ್ರಹ್ಮಪದವಿಯನ್ನಾಗಲೀ, ವಿಷ್ಣುಪದವಿಯನ್ನಾಗಲೀ, ರುದ್ರಪದವಿಯನ್ನಾಗಲೀ, ಮತ್ತಾವ ಪದವಿಯನ್ನಾಗಲೀ ಬಯಸದೆ, 'ಸದ್ಭಕ್ತರ ಪಾದವನರಿದಿಪ್ಪ' ಮಹಾಪದವಿಯನ್ನು ಮಾತ್ರ ಬಯಸುತ್ತಾರೆ. ಆದ್ದರಿಂದಲೇ ಅವರಲ್ಲಿ ತಾನು ಉತ್ತಮಕುಲದವನೆಂಬ ಭಾವನೆ ಬರಲೇ ಇಲ್ಲ.

"ಆವನಾದರೇನು ?
ಶ್ರೀ ಮಹಾದೇವನ ನೆನೆವವನ ಬಾಯ
ತಂಬುಲವ ಮೆಲುವೆ,
ಬೀಳುಡುಗೆಯ ಹೊದೆವೆ,
ಪಾದರಕ್ಷೆಯ ಕಾದು ಬದುಕುವೆ,
ಕೂಡಲ ಸಂಗಮ ದೇವಾ"

ಬಸವಣ್ಣನವರು 'ಭೃತ್ಯಾಚಾರದ ಸಾಕಾರಮೂರ್ತಿಗಳಾಗಿದ್ದರೆಂಬುದನ್ನು ಇಲ್ಲಿ ಮನಗಾಣಬಹುದು. ಭಕ್ತಿಮಾರ್ಗದಲ್ಲಿಯೇ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಬಸವಣ್ಣನವರು ಅದರ ಫಲವನ್ನು ಶಿವರೂಪಿಯಾದ ಈ ಜಗತ್ತಿಗೆ ನೀಡಿದರು. ಅಲ್ಲದೆ ಯಾವ ಪದವಿಯನ್ನೂ ಅಪೇಕ್ಷಿಸದ ಅವರು "ಚನ್ನಯ್ಯನ ಮನೆಯ ದಾಸಿಯ ಮಗ ನಾನು" ಎಂದು ಹೇಳಿ ತೊತ್ತುತನದ ಪದವಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

"ಎತ್ತಪ್ಪೆ ಶರಣಂಗೆ ತೊತ್ತಪ್ಪೆ ಶರಣಂಗೆ;
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ
ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ ನಿನಗೆ ಕರವೆತ್ತಿ ಪೊಡೆವಿಡುವ
ಭಕ್ತರ ಮನೆಯ
ಹಿತ್ತಿಲ ಬೇಲಿಯಾಗಿಪ್ಪೆನೈ ರಾಮನಾಥಾ"

ಎಂಬ ದೇವರ ದಾಸಿಮಯ್ಯನ ವಚನದಲ್ಲಿಯೂ 'ಭೃತ್ಯಾಚಾರದ ನಿಲವು' ವ್ಯಕ್ತವಾಗಿದೆ. "ಭೃತ್ಯಾಚಾರದಲ್ಲಿ ದಾಸತ್ವ, ವೀರದಾಸತ್ವ, ಭೃತ್ಯತ್ವ, ವೀರ ಭೃತ್ಯತ್ವ—

ಎಂಬ ನಾಲ್ಕು ಭಾಗಗಳನ್ನು ಮಾಡುವುದುಂಟು''[9] ಅನುಕ್ರಮವಾಗಿ ಇವುಗಳಲ್ಲಿ ತ್ರಿವಿಧದಾಸೋಹ ಕಠೋರನಿಷ್ಠೆ ಹಾಗೂ ಸಾಮಾಜಿಕ ದೃಷ್ಟಿ ಒಳಗೊಂಡಿರುವುದನ್ನು ಗುರುತಿಸಬಹುದು. ತಾನು ನಂಬಿದ ತತ್ವಕ್ಕಾಗಿ, ಅಪ್ಪಿಕೊಂಡ ಆದರ್ಶಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವ ಭೃತ್ಯಾಚಾರಿಗೆ ಭಯವೆಂಬುದಿಲ್ಲ.

''ಆರು ಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವುದು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ ?''

ಇದು ವೀರದಾಸತ್ವದಲ್ಲಿ ಕಾಣುವ ಕಠೋರ ನಿಷ್ಠೆಯನ್ನು ಸೂಚಿಸುತ್ತದೆ.

'ಮರಣವೇ ಮಹಾನವಮಿ' ಎಂದ ಶರಣರಿಗೆ ಈ ಕಠೋರ ನಿಷ್ಠೆ ಸಹಜವಾಗಿಯೇ ಮೈಗೂಡಿಕೊಂಡಿತ್ತು. ಈ ನಿಷ್ಠೆಯ ಜೊತೆಗೆ ಅವರು ಅಳವಡಿಸಿಕೊಂಡ ಪಂಚಾಚಾರಗಳು ಹೇಗೆ ಪೂರಕವಾಗಿ ನಿಂತಿವೆ ಎಂಬುದನ್ನು ನೋಡಿದ್ದೇವೆ. ಶರಣರ ದೃಷ್ಟಿಯಲ್ಲಿ ಇವು ಕೇವಲ ಸಿದ್ಧಾಂತಗಳಾಗದೆ ವ್ಯಕ್ತಿಜೀವನದ, ಸಮಾಜ ಜೀವನದ ಉನ್ನತಿಗೆ ಸಹಾಯಕವಾಗುವ ಕೆಲವು ವಿಶಿಷ್ಟ ಮೌಲ್ಯಗಳಾಗಿರುವುದನ್ನು ಗಮನಿಸಬೇಕು.

ಒಟ್ಟಿನಿಂದ ಹೇಳುವುದಾದರೆ ಪಂಚಾಚಾರಗಳಲ್ಲಿ, ಶರಣರು ಧಾರ್ಮಿಕ ಮಾರ್ಗದಲ್ಲಿ ಏರಿ ನಿಂತ ನಿಲುವನ್ನೂ, ಆ ಮೂಲಕ ಅವರು ಕಟ್ಟ ಬಯಸಿದ ಸರ್ವಸಮಾನತೆಯ ಸುಂದರ ಸಮಾಜವನ್ನೂ ಸಂದರ್ಶಿಸಬಹುದಾಗಿದೆ.

o—o

9 ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ ಪು. ೨೯೬

ವೀರಶೈವ ಶಿವಯೋಗ

ಡಾ|| ನಿಜಲಿಂಗಮ್ಮ ಕೊಪ್ಪಳ

ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ಅತ್ಯಂತ ಉಜ್ವಲವೂ ಊರ್ಜಿತವೂ ಆದ ಯೋಗಶಾಸ್ತ್ರದ ಪರಂಪರೆಯೊಂದು ಬಹು ಪುರಾತನ ಕಾಲದಿಂದ ಬೆಳೆದು ಬಂದಿದೆ. ಭಾರತದಲ್ಲಿ ಹುಟ್ಟಿ ಬೆಳೆದ ಎಲ್ಲ ದರ್ಶನಗಳು ತತ್ವಸಾಕ್ಷಾತ್ಕಾರಕ್ಕಾಗಿ ತಮ್ಮದೇ ಆದ ಸಾಧನಮಾರ್ಗವನ್ನು ಅನುಸರಿಸಿವೆ. ಯೋಗದರ್ಶನದ ಬಗೆಗೆ ಇಂದಿಗೂ ಕಂಡು ಬರುವ ಲೋಕಪ್ರಿಯತೆ ಹಾಗೂ ಹಿರಿಮೆಗರಿಮೆಗಳು ಈ ದರ್ಶನದ ಸಿದ್ಧಾಂತ-ಸಿದ್ಧಿಗಳ ಮೌಲ್ಯದ ಬಗೆಗೆ ಕೂಲಂಕಷವಾಗಿ ವಿವೇಚಿಸಿದಷ್ಟು ಹೆಚ್ಚುತ್ತವೆ.

ಮಹರ್ಷಿ ಪತಂಜಲಿ ಯೋಗದರ್ಶನದ ಮೂಲಪುರುಷನೆಂದು ಪ್ರಖ್ಯಾತನಾಗಿದ್ದಾನೆ. ಪತಂಜಲಿಗಿಂತಲೂ ಪೂರ್ವದಲ್ಲಿಯೇ ಯೋಗಸಾಧನೆಯ ರೂಪರೇಷೆಗಳು ಮೂಡಿದ್ದು ಕಂಡುಬರುತ್ತದೆ. ಪರಂಪರಾಗತ ತಿಳಿವಳಿಕೆಯಂತೆ ಯೋಗದರ್ಶನದ ಆದ್ಯ ಪ್ರವರ್ತಕ ಹಿರಣ್ಯಗರ್ಭನೆಂದು[1] ಪ್ರತೀತಿ. ಈ ದಿಸೆಯಲ್ಲಿ ಪತಂಜಲಿ ಶಾಸ್ತ್ರೀಯವಾಗಿ ನಿಯೋಜಿಸಿದ ತನ್ನ ಯೋಗದರ್ಶನವನ್ನು 'ಯೋಗಾನುಶಾಸನ'ವೆಂದು ಕರೆದುದು ಔಚಿತ್ಯಪೂರ್ಣವಾಗಿದೆ, ಹಿರಣ್ಯಗರ್ಭ ಪತಂಜಲಿ-ಮೊದಲಾದ ಋಷಿಗಳು ಶಿವೋಪಾಸಕರು. ಇದರಿಂದಾಗಿ ಪ್ರಾಚೀನಯುಗದಲ್ಲಿ ಯೋಗಶಾಸ್ತ್ರವು ಶೈವಧರ್ಮದ ಪರಿಸರದಲ್ಲಿ ರೂಪುಗೊಂಡು ಮಹಾವೃಕ್ಷವಾಗಿ ಬೆಳೆದು ನಿಂತಿದೆ. ಶೈವಾಗಮ ಪುರಾಣೋಪನಿಷತ್ತುಗಳಲ್ಲಿ ಶಾಕ್ತ ಮತ್ತು ಪಾಂಚರಾತ್ರಾಗಮಗಳಲ್ಲಿ ಸಹಿತ ಯೋಗದ ಅಮೂಲ್ಯವಾದ ತತ್ವಗಳ ವಿವೇಚನೆ ಉಕ್ತವಾಗಿದೆ. ಭಗವದ್ಗೀತೆಯೂ ಯೋಗ ಪದಕ್ಕೆ ವ್ಯಾಪಕವಾದ ಅರ್ಥವನ್ನು ಕಲ್ಪಿಸಿ ಕರ್ಮಯೋಗ, ಭಕ್ತಿಯೋಗ, ಜ್ಞಾನ ಯೋಗಗಳ ತ್ರಿವೇಣೀಸಂಗಮವನ್ನು ಚಿತ್ರಿಸಿದೆ. ಈ ಸಾಹಿತ್ಯಕ್ಷೇತ್ರಕ್ಕಿಂತಲೂ ಪೂರ್ವದಲ್ಲಿಯೇ, ಪ್ರಾಗೈತಿಹಾಸಿಕ ಭಾರತೀಯ ಸಂಸ್ಕೃತಿಗೆ ತವರುಮನೆಯಾದ ಮೊಹೆಂಜೋದಾರೋ ಹರಪ್ಪಾಗಳ ಅಗೆತಗಳಲ್ಲಿ ಶೈವದರ್ಶನದ ಮೂಲರೇಖೆಗಳು ಕಂಡುಬರು

---

1 ಹಿರಣ್ಯಗರ್ಭೋ ಯೋಗಸ್ಯ ವಕ್ತಾ ನಾನ್ಯಃ ಪುರಾತನಃ॥ ಯಾಜ್ಞವಲ್ಕ್ಯಸ್ಮೃತಿ.

ತ್ತವೆ. ಇವುಗಳ ಬಗೆ ಬಗೆಯ ಆಕಾರ ಲಿಂಗಗಳೂ[2] ಪದ್ಮಾಸನದಲ್ಲಿ ಶಿವನಂತೆ ಧ್ಯಾನ ಮಗ್ನನಾದ ಮಹಾಯೋಗಿಯ ಮೂರ್ತಿಗಳೂ[3] ದೊರೆತಿವೆ.

ಶೈವಧರ್ಮದ ಆಧಾರಗ್ರಂಥಗಳಾದ ಶಿವಾಗಮಗಳ ನಾಲ್ಕು ಪಾದಗಳಲ್ಲಿ ಯೋಗ ಪಾದವೂ ಬರುತ್ತದೆ. ಅಲ್ಲಿ ಸಾಧಕನ ಆತ್ಯಂತಿಕ ಸ್ಥಿತಿ ಪ್ರತಿಪಾದಿತವಾಗಿದೆ. ಮತ್ತು ಜ್ಞಾನ ಹಾಗೂ ಯೋಗಗಳ ಪರಸ್ಪರ ಸಂಬಂಧವನ್ನೂ ಯೋಗದ ಹೆಚ್ಚಳವನ್ನೂ ನಿರೂಪಿಸಿದೆ.[4] ಯೋಗದ ಬಗೆಗೆ ಶಾಸ್ತ್ರೀಯವಾದ ಪ್ರಜ್ಞೆ ಜಾಗೃತವಾಗಿ ಅದೊಂದು ಪ್ರತ್ಯೇಕ ದರ್ಶನವೆಂದು ಪರಿಗಣಿತವಾದಮೇಲೆ ಮಂತ್ರಯೋಗ, ಹಠಯೋಗ, ಲಯ ಯೋಗ, ರಾಜಯೋಗ ಎಂಬ ಸೂಕ್ಷ್ಮ ಪ್ರಭೇದಗಳು ತಲೆದೋರಿದವು. ಶಿವಾಗಮ ಶಿವಸಂಹಿತೆ ಮೊದಲಾದ ಶೈವಪರಗ್ರಂಥಗಳಲ್ಲಿ[5] ಕಂಡುಬರುವ ಯೋಗದ ವಿವರಣೆ ಯಿಂದ ಹಾಗೂ ಶಿವಯೋಗವೆಂಬ ಪದದ ಧಾರಾಳ ಬಳಕೆಯಿಂದ ಶಿವಯೋಗವೆಂಬ ಇನ್ನೊಂದು ಯೋಗವಿತ್ತೆಂದು ವಿದಿತವಾಗುತ್ತದೆ. ಈ ಯೋಗವು ಸೇರಿಕೊಂಡು ಒಟ್ಟಾರೆ ಐದು ಬಗೆಯ ಯೋಗಗಳೆಂದು ಪರಿಗಣಿಸಲಾಯಿತು.

ಕೆಲವು ಆಗಮಗಳಲ್ಲಿ ಯೋಗಿ ಶೈವನ ಲಕ್ಷಣಗಳನ್ನು ವಿವರಿಸುತ್ತ, ಆವನು ಭಕ್ತಿ, ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತವಾಸ, ಭಿಕ್ಷಾಟನೆ, ಲಿಂಗಪೂಜೆ, ಸ್ಮರಣ ಎಂಬ ಅಷ್ಟಾಂಗಗಳನ್ನು ಅನುಸರಿಸಬೇಕೆಂದು ಬೋಧಿಸಲಾಗಿದೆ.[6] ಈ ಅಷ್ಟಾಂಗ ಪ್ರಧಾನ ವಾದ ಶಿವಯೋಗವು ಶಿವನೊಡನೆ ಕೂಡಿಕೊಂಡಿರುವ ನಿಲುವನ್ನು ತಿಳಿಸುತ್ತದೆ. ಶಿವ ಲಾಂಛನಧಾರಿಗಳಾಗಿ ಲಿಂಗಾರ್ಚನೆಯಲ್ಲಿ ನಿರತರಾದವರಿಗೆಲ್ಲ ಶಿವಯೋಗಿಗಳೆಂದೂ, ದಾಂಪತ್ಯಜೀವನವನ್ನು ಪಾಲಿಸುತ್ತಿದ್ದ ಶಿವಯೋಗಿಯ ಪತ್ನಿಗೆ ಶಿವಯೋಗಿನಿ ಎಂದೂ ಸಂಬೋಧಿಸಲಾಗುತ್ತಿತ್ತು.[7] ಐಹಿಕ ಹಾಗೂ ಆಮುಷ್ಮಿಕ ಫಲಪ್ರದವಾದ

---

2 The larger ones serve as aniconiz agalnata for cult purposes, the smaller as amulets to be carried on the person, just as miniature Linges are commonly carried by Saivitestoday"—
Marshall : Mohenjodaro—and Indus Civilisation.

3 Illustrated by Marshall in P I XII 17.

4 ಪಾರಮೇಶ್ವರ ತಂತ್ರ XII–52. ಸರ್ವಪಾಪಹರೋ ಯೋಗೋ ವಿರಕ್ತಸ್ಯೈವ ಕಲ್ಪ್ಯತೇ। ವೈರಾಗ್ಯಾತ್ ಜಾಯತೇ ಜ್ಞಾನಂ ಜ್ಞಾನಾತ್ ಯೋಗಃ ಪ್ರವರ್ತತೇ ॥

5 ಪಾರಮೇಶ್ವರ ತಂತ್ರವು ಅನಾದಿಶೈವ, ಆದಿಶೈವ, ಮಹಾಶೈವ, ಯೋಗ ಶೈವ, ಜ್ಞಾನಶೈವ. ವೀರಶೈವ—ಎಂಬ ಸಪ್ತವಿಧ ಶೈವ ಪ್ರಭೇದಗಳನ್ನು ನಿರೂಪಿಸುತ್ತದೆ. ಪಾರಮೇಶ್ವರ ತಂತ್ರ—1 13—15 'ವೀರಶೈವ ಮತಸ್ಥಸ್ಯ ಜ್ಞಾನಂ ಯೋಗೋ ಹಿ ಸಾಧನಮ್ ॥, ವೀರಶೈವಮತವನ್ನ ನುಸರಿಸುವವನಿಗೆ ಜ್ಞಾನ ಮತ್ತು ಯೋಗಗಳೇ ಸಾಧನ ಅಂದರೆ ಜ್ಞಾನಯುಕ್ತವಾದ ಯೋಗವೆ ಅಥವಾ ಶಿವಯೋಗವೆ ಸಾಧನವೆಂಬುದನ್ನು ತೋರಿಸುತ್ತದೆ—ಪಾರಮೇಶ್ವರತಂತ್ರ VII. 36–37

6 ಪಾರಮೇಶ್ವರ ತಂತ್ರ X–55–56

7 ಪಾರಮೇಶ್ವರ ತಂತ್ರ IV–7

ಶಿವಸಾಕ್ಷಾತ್ಕಾರವನ್ನು ಪಡೆಯುವುದೇ ಆಗಮಕಾಲದ ಶಿವಯೋಗಿಗಳ ಧ್ಯೇಯವಾಗಿತ್ತು. ಜ್ಞಾನ ಯೋಗಗಳ ಸಿದ್ಧಿಗಾಗಿ ಅಂತರಂಗ ಬಹಿರಂಗ ಶುದ್ಧಿಯನ್ನು ಸಂಪಾದಿಸಲು ತಪ, ಕರ್ಮ, ಜಪ, ಧ್ಯಾನ, ಜ್ಞಾನವೆಂಬ ಪಂಚವಿಧ ಸಾಧನೆಯಲ್ಲಿ ಅವರು ನಿರತರಾಗುತ್ತಿದ್ದರು[8] ಹಾಗೂ ಷಟ್‌ಸ್ಥಲ ಸಿದ್ಧಾಂತದ ಸಾಧನೆಸಿದ್ಧಿಗಳಲ್ಲಿ ಗಮನವಿರಿಸುತ್ತಿದ್ದರು. ಅವರು ಪೂಜಿಸುವ ಲಿಂಗವೇ ಇಷ್ಟಲಿಂಗವಾಯಿತು. ಅದು ಪ್ರಾಣದಷ್ಟು ಪ್ರಿಯವಾದುದರಿಂದ ಅದುವೆ ಪ್ರಾಣಲಿಂಗವಾಯಿತು. ಇಂಥ ಶಿವಯೋಗಿಗಳ ಆಚರಣೆ, ಜ್ಞಾನಸಾಧನೆ ಅಧ್ಯಾತ್ಮದ ನಿಲವಿಗನುಸರಿಸಿ ಅವರಿಗೆ ಅವಧೂತ, ಸನ್ಯಾಸಿ, ಯೋಗಿ, ಪಾಶುಪತ, ಶಿವ, ಲಿಂಗಿ, ವೀರ, ವೀರಶೈವ, ಯತಿ, ಎಂಬ ಅನೇಕ ವಿಧವಾದ ಸಂಪ್ರದಾಯಗಳೂ ನಾಡಿನಲ್ಲಿ ರೂಢವಾಗಿದ್ದವು.[9]

ಕನ್ನಡನಾಡಿನಲ್ಲಿ ಇದ್ದಂತೆ ತಮಿಳುನಾಡಿನಲ್ಲಿಯೂ ಅನೇಕ ಶಿವಯೋಗಿಗಳಿದ್ದರೆಂಬುದು ಅಲ್ಲಿ ಪ್ರಚಲಿತವಾಗಿದ್ದ ಶೈವಸಿದ್ಧಾಂತಪರಂಪರೆಯ ಐತಿಹ್ಯದಿಂದ ಗೊತ್ತಾಗುತ್ತದೆ. ಆಧ್ಯಾತ್ಮಪರವಾದ ಉದ್ಗ್ರಂಥಗಳಲ್ಲಿ ಅಂದು ತಿಳುವಳಿಕೆಯಲ್ಲಿದ್ದ ಶಿವಯೋಗದ ಸ್ವರೂಪವು ವಿದಿತವಾಗುತ್ತದೆ. ಆ ನಾಡಿನ 'ತಿರುಮೂಲರ್' (ಕ್ರಿ. ಶ. ೫ನೆಯ ಶತಕ) ಎಂಬ ಅನುಭಾವಿಯು ಉನ್ನತ ನಿಲವಿನ ಶಿವಯೋಗಿ ಎಂದು ಪ್ರಖ್ಯಾತನಾಗಿ, 'ತಿರುಮಂತಿರಮ್', ಎಂಬ ಗ್ರಂಥವನ್ನು ರಚಿಸಿದನು. [10] ಈ ಗ್ರಂಥದ ಮೂರನೆಯ ಭಾಗವು ಪತಂಜಲಿ ಮಹರ್ಷಿ ನಿರೂಪಿಸಿದ ಅಷ್ಟಾಂಗಯೋಗಕ್ಕಿಂತ ಭಿನ್ನ ಹಾಗೂ ವಿಶಿಷ್ಟವಾದ ಯೋಗಮಾರ್ಗವನ್ನು ವಿವರಿಸುತ್ತದೆ. ಅದು ಶಿವಯೋಗವೆಂದು ಪ್ರಚುರವಾಗಿದೆ. ತಿರುಜ್ಞಾನಸಂಬಂಧರ್ ಎಂಬ ಇನ್ನೊಬ್ಬ ತಮಿಳುನಾಡಿನ ಅನುಭಾವಿಯು ಬಾಲ್ಯದಿಂದಲೇ ಸಿದ್ಧಶಿವಯೋಗಿಯಾಗಿದ್ದನಂತೆ [11]

ಸಾಹಿತ್ಯಕ್ಷೇತ್ರದಲ್ಲಿಯೇ ಮೊದಲನೆಯದಾದ ವೈದಿಕಸಾಹಿತ್ಯದಲ್ಲಿ 'ಯೋಗ' ಎಂಬ ಶಬ್ದದ ಪ್ರಯೋಗವು ಕಂಡುಬರುತ್ತದೆ. ಅಲ್ಲಿ ಈ ಶಬ್ದವು 'ಹೂಡು' 'ಕೂಡಿಸುವಿಕೆ.' 'ಇಷ್ಟವಸ್ತುವಿನ ಪ್ರಾಪ್ತಿ, 'ಒಂದುಗೂಡಿಸು'—ಎಂಬ ಅರ್ಥವನ್ನು ಕೊಡುತ್ತದೆ.[12] ಆದರೆ ಯೋಗಶಾಸ್ತ್ರಕ್ಕೆ ಮೀಸಲಾದ—ಗ್ರಂಥಗಳಲ್ಲಿ ಕಂಡುಬರುವ 'ಯೋಗ' ಪದದ ಅರ್ಥ ವೇದಗಳಲ್ಲಿಲ್ಲ. ಋಗ್ವೇದದ ಒಂದು ಸೂಕ್ತವು ಮಾತ್ರ ಏಳು ಜನ ಮುನಿಗಳ ಲಕ್ಷಣಗಳನ್ನು ವರ್ಣಿಸುತ್ತದೆ ಅಷ್ಟೆ. ಅಥರ್ವಣವೇದದ ಯಾವ ಭಾಗದಲ್ಲಿಯೂ

---

8 ಪಾರಮೇಶ್ವರ ತಂತ್ರ XII. 13. 14

9 ಪಾರಮೇಶ್ವರ ತಂತ್ರ X 66, 67

10 Dr. V.V Ramana sastri : Introduction to Tirumantiram. P. 5-8.

11 V. Paranjoti ; 'Saiva Siddhanta' P. 28-30.

12 ಋಗ್ವೇದ 1-85-2, I-34-9, III-27-11 IV—24-4 VII-67-8, X-114-9.

ಯೋಗ ಶಬ್ದದ ನೇರವಾದ ಉಪಯೋಗ ಕಂಡುಬರುವದಿಲ್ಲ. ಆದರೂ ಅಲ್ಲಿ ತ್ಯಾಗಿಯ ತಪಸ್ಸಿನಿಂದ ಅಣಿಮಾದಿ ಸಿದ್ಧಿಗಳು (Supernatural powers)[13] ಪ್ರಾಪ್ತವಾಗುತ್ತವೆ ಎಂದು ಹೇಳಲಾಗಿದೆ. ವೇದಸಾಹಿತ್ಯದ ಕೊನೆಗೆ ಬರುವ ಶತಪಥಬ್ರಾಹ್ಮಣದಲ್ಲಿ[14] ಮತ್ತು ಆರಣ್ಯಕೋಪನಿಷತ್ತುಗಳಲ್ಲಿ ಯೋಗಪದದ ಸ್ಪಷ್ಟ ಉಲ್ಲೇಖವಿದೆ. ಶಿವಾಗಮಗಳಲ್ಲಿ ಅನೇಕ ಸಲ ಈ ಪದ ಕಾಣಿಸಿಕೊಂಡಿದೆ.

ಯೋಗಶಾಸ್ತ್ರದ ಮೇರೆಗೆ 'ಯೋಗ' ಎಂಬ ಪದವು 'ಯುಜ್ ಸಮಾಧೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು. ಅದು ಎರಡು ವಸ್ತುಗಳ ಸಂಯೋಗ ಕೂಡುವಿಕೆಯನ್ನು ಸೂಚಿಸುತ್ತದೆ. ಯೋಗಶಬ್ದದ ನಿಷ್ಪತ್ತಿಯೇ ಸೂಚಿಸುವಂತೆ ಎಲ್ಲ ಯೋಗಗಳ ಆತ್ಯಂತಿಕ ಗುರಿ ಒಂದೇವಿಧವಾಗಿದೆ. ಆಂತರಿಕ ಅನುಸಂಧಾನ ಕ್ರಮದಲ್ಲಿ ತೋರುವ ಕೆಲವು ವ್ಯತ್ಯಾಸಗಳಿಂದ ಯೋಗಮಾರ್ಗದಲ್ಲಿ ಪ್ರಭೇದಗಳನ್ನು ಕಲ್ಪಿಸಬಹುದಾಗಿದೆ. ಏಕಾಕ್ಷರ, ದ್ವ್ಯಕ್ಷರ, ಪಂಚಾಕ್ಷರ, ಷಡಕ್ಷರ ಮೊದಲಾದ ಮಂತ್ರಗಳನ್ನು ಪಠಿಸುತ್ತ ವೈಖರೀವಾಣಿ, ಪರಾವಾಣಿಗಳನ್ನು ಒಂದುಗೂಡಿಸಿ ಪರಾವಾಕ್‌ಸಿದ್ಧಿಯನ್ನು ಮಂತ್ರಯೋಗಿಗಳು ಸಾಧಿಸುವರು. ನಾದಬಿಂದುಗಳನ್ನು ಒಂದುಗೂಡಿಸಿ ಮನ-ಮಾರುತಗಳ ಉಲುಹನ್ನು ಅಡಗಿಸಿ. ನಾದಾತೀತ ಸ್ಥಿತಿಯನ್ನು ಲಯಯೋಗಿಗಳು ಪಡೆವರು. ಪ್ರಾಣಾಪಾನಗಳನ್ನು ಅಷ್ಟಾಂಗಯೋಗಮಾರ್ಗದಿಂದ ಹಾಗೂ ಮುದ್ರಾಕರಣಗಳಿಂದ ತಮ್ಮ ಅಂಕಿತಕ್ಕೆ ತಂದುಕೊಂಡು ಪ್ರಾಣಶಕ್ತಿಯ ಅನರ್ಘ್ಯ ಚೈತನ್ಯ ಸ್ವರೂಪದಿಂದ ಆನಂದವನ್ನು ಅನುಭವಿಸುವರು. ಇಡಾ-ಪಿಂಗಲಾನಾಡಿಗಳನ್ನು ಅಥವಾ ಚಂದ್ರ-ಸೂರ್ಯರನ್ನು ಒಂದುಗೂಡಿಸಿ, ಸುಷಮ್ನಾನಾಳವನ್ನು ಜಾಗ್ರತಗೊಳಿಸಿ ದೃಷ್ಟಿಸಿದ್ಧಿಯನ್ನು ಪಡೆದು ಕೊನೆಯಲ್ಲಿ ಪರಮನಿರ್ವಾಣಪದವನ್ನು ರಾಜಯೋಗಿಗಳು ಸಂಪಾದಿಸುವರು. ಲಿಂಗ ಅಂಗಗಳ ಸಂಯೋಗ ಅವಿನಾಭಾವ ಸಾಮರಸ್ಯವನ್ನು ಶಿವಯೋಗಿಗಳು ಹೊಂದುವರು. ಈ ವಿವಿಧ ಮಾರ್ಗಗಳನ್ನು ಅನುಸರಿಸಿದ ಯೋಗಿಗಳಿಗೆಲ್ಲ ಶಿವನೇ ಆರಾಧ್ಯವಸ್ತು.

ಶಿವಾಗಮಗಳಲ್ಲಿ ವರ್ಣಿಸಲಾದ ಷಟ್‌ಸ್ಥಲಸಿದ್ಧಾಂತವನ್ನು ಹಾಗೂ ಗುರು-ಲಿಂಗ-ಜಂಗಮ-ಶಿವಯೋಗ ಮೊದಲಾದ ಪದಪ್ರಯೋಗಗಳನ್ನು ಉಪಯೋಗಿಸಿಕೊಂಡು ೧೨ನೆಯ ಶತಮಾನದ ಶಿವಶರಣರು ಹಾಗು ಮುಂದಿನ ವೀರಶೈವ ಶಿವಯೋಗಿಗಳು ತಮ್ಮದೇ ಆದ ನವೀನ ಅಧ್ಯಾತ್ಮಪಥವನ್ನು ನಿರ್ಮಿಸಿಕೊಂಡರು. ಎಲ್ಲ ಆಗಮ ಪದಗಳಲ್ಲಿ ಅವರು ಅನುಭಾವಾತ್ಮಕವಾದ, ವ್ಯಾಪಕವಾದ ಅರ್ಥವೈಭವವನ್ನೂ, ಹೊಸ ರೀತಿಯ ಅಧ್ಯಾತ್ಮ ಸಂಪತ್ತಿಯ ಮೆರುಗನ್ನೂ ನೀಡಿದರು. ಶಿವಶರಣರಿಗೆ ಷಟ್‌ಸ್ಥಲ ಸಿದ್ಧಾಂತವು ಸಾಧನ ಪಥವಾದರೆ, ಶಿವಯೋಗದ ಪರಾಕಾಷ್ಠೆಯೂ ಇಲ್ಲವೆ ಲಿಂಗಾಂಗ

13 ಅಥರ್ವಣ ವೇದ II–7

14 ಶತಪಥ ಬ್ರಾಹ್ಮಣ XIV 7-1-11.

ಸಾಮರಸ್ಯವೂ ಪರಮಸಿದ್ಧಿಯಾಯಿತು. ಶಿವಶರಣನು ಪಡೆವ ಲಿಂಗಾಂಗಸಾಮರಸ್ಯದಿಂದ ಆಗಮ ಪರಂಪರೆಯ ಶಿವಯೋಗಿಯು ಪಡೆವ ಮುಕ್ತಿಪದ ತೀರ ಭಿನ್ನ. ಕೆಲವು ಆಗಮಗಳ ನಾಲ್ಕು ಪಾದಗಳನ್ನು ಅವಲೋಕಿಸಿದರೆ ಅಲ್ಲಿಯ ವೀರಶೈವ ಪ್ರಭೇದವು ಶೈವ ಮಹಾವೃಕ್ಷದ ಮುಖ್ಯ ಕೊಂಬೆಯಾಗಿ ೧೨ನೆಯ ಶತಮಾನದಲ್ಲಿ ಚಿಗುರೊಡೆದಿದೆಂದು ಅರಿಯಬಹುದಾಗಿದೆ. ಯೋಗಾಭ್ಯಾಸದ ದೃಷ್ಟಿಯಿಂದ ಶೈವಗ್ರಂಥಗಳು ಪ್ರತಿಪಾದಿಸುವ ಶಿವಯೋಗದಲ್ಲಾಗಲೀ ಹಾಗು ೧೨ನೆಯ ಶತಮಾನದ ಶಿವಶರಣರು ಸಾಧಿಸುವ ಯೋಗದಲ್ಲಾಗಲಿ ದೃಷ್ಟಿಸ್ಥಿರತೆಗೆ ಪ್ರಮುಖಸ್ಥಾನವುಂಟು. ಆದರೂ ಎರಡರಲ್ಲಿಯೂ ವ್ಯತ್ಯಾಸವನ್ನು ಸೂಚಿಸುವ ಮುಖ್ಯ ಅಂಶ ಇಷ್ಟಲಿಂಗ. ಶೈವರು ದೇವಾಲಯಗಳಲ್ಲಿಯ ಸ್ಥಾವರಲಿಂಗೋಪಾಸಕರು (ಆದರೂ ಇಷ್ಟಲಿಂಗದ ಕಲ್ಪನೆ ಅವರಿಗಿತ್ತು) ವೀರಶೈವ ಶರಣರು ಕರಸ್ಥಲದಲ್ಲಿ ತಮ್ಮ ಸ್ವಸ್ವರೂಪವೆನಿಸುವ ಇಷ್ಟಲಿಂಗವನ್ನಿರಿಸಿ ಅನುಸಂಧಾನಿಸುವರು. ಸ್ಥಾವರಲಿಂಗವಾಗಲಿ, ಹಾಗೂ ಇಷ್ಟಲಿಂಗವಾಗಲಿ ಪರವಸ್ತುವಿನ ನಿಃಕಲ ನಿರಾಕಾರ ನಿಲವಿನ ಸಕಲಸಾಕಾರ ರೂಪಗಳು. ಸ್ಥಾವರಲಿಂಗದ ಮೇಲೆ ದೃಷ್ಟಿಯನ್ನಿಟ್ಟು ತನ್ನ ಚಿತ್ತವೃತ್ತಿಯನೆಲ್ಲ ಅಲ್ಲಿ ಲಯಗೊಳಿಸಿ ಶೈವ ಶಿವಯೋಗಿ ಸಮಾಧಿಯನ್ನು ಸಾಧಿಸುವನು. ವೀರಶೈವ ಶರಣನು ಕರಸ್ಥಲದ ಶಿವಶಕ್ತಿಗಳ ಅವಿನಾಭಾವಸಂಬಂಧವನ್ನು ಕಾಣುವನು, ಲಿಂಗಾಂಗಸಾಮರಸ್ಯವನ್ನು ಪಡೆಯುವನು. ಶಿವಶರಣರ ಷಟ್‌ಸ್ಥಲ ಸಾಧನೆಯ ಮಾರ್ಗದಲ್ಲಿ ಬರುವ ಪ್ರಾಣಲಿಂಗಸ್ಥಲವು ಶಿವಯೋಗದ ಸಾಧನೆ ಹಾಗೂ ಸಿದ್ಧಿಗಳ ಬಗೆಗೆ ಬಹು ಸೂಕ್ಷ್ಮವಾಗಿ ವಿವರಿಸುತ್ತದೆ.

ವೀರಶೈವ ಶಿವಯೋಗಿಗಳ ಸಾಮರಸ್ಯ ಸಂಬಂಧವನ್ನು ಕುರಿತು ಶಿವಯೋಗ ಪ್ರದೀಪಿಕೆಯು ಐದು ಬಗೆಯಾಗಿ ತಿಳಿಸುತ್ತದೆ.

> ಜ್ಞಾನಂ ಶಿವಮಯಂ ಭಕ್ತಿಃ ಶೈವೀಧ್ಯಾನಂ ಶಿವಾತ್ಮಕಂ ।
> ಶೈವಂ ಮಂತ್ರಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ[15]॥೧॥

ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವಮಂತ್ರ ಎಂಬ ನಾಲ್ಕುಬಗೆಯ ಅನುಸಂಧಾನವನ್ನು ಕೂಡಿಕೊಂಡಿರುವ ಇಷ್ಟಲಿಂಗಪೂಜೆಯೆ ಶಿವಯೋಗದ ಮುಖ್ಯ ಸಾಧನ ಗುರಿ. ಶಿವಯೋಗಸಾಧನೆಯಲ್ಲಿ ಶಿವಪೂಜೆ ಅನುಸಂಧಾನಗಳಿಗೆ ಪ್ರಾಧಾನ್ಯ. ಜ್ಞಾನ ಭಕ್ತಿ ಧ್ಯಾನ ಜಪಗಳನ್ನು ಗರ್ಭೀಕರಿಸಿಕೊಂಡು ಅದು ನಿರಂತರವಾಗಿ ಅವ್ಯಾಹತವಾಗಿ ಸಾಗುತ್ತದೆ.[16] ಸುಪ್ರಭಾತ ಸಮಯದಲ್ಲಿ ಪ್ರೀತಿ ವಿಶ್ವಾಸಗಳಿಂದ ಲಿಂಗವ ನೆನೆದಡೆ ಅಪಮೃತ್ಯು ಕಾಲ ಕರ್ಮಗಳು ತಪ್ಪುವವು; ಪರಮಾತ್ಮನ ನಿರಂತರ ಸಾನ್ನಿಧ್ಯ ಸುಖವು ದೊರಕುವುದೆಂದು ಶರಣರು ಅನುಭವಗಂಡಿದ್ದಾರೆ.[17]

———

15 ಶಿವಯೋಗ ಪ್ರದೀಪಿಕೆ I 15

16 ಚನ್ನಬಸವಣ್ಣನವರ ವಚನಗಳು 218 (ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆ)

17 ಬಸವಣ್ಣನವರ ವಚನಗಳು 177 (ಕ.ವಿ.ವಿ. ಪ್ರಕಟನೆ)

ಆಗಮಕಾರರಂ ಶಿವಾಲಯಗಳಲ್ಲಿ ಪೂಜಿಸುತ್ತಿದ್ದ ಲಿಂಗ ಹಾಗೂ ವೀರಶೈವರು ತಮ್ಮ ಕರಕಮಲದಲ್ಲಿ ಅರ್ಚಿಸುವ ಲಿಂಗ–ಇವು ನಿರಾಕಾರ, ನಿರವಯ ನಿರಂಜನ ನಿರ್ದ್ವಂದ್ವನಾದ ಪರಬ್ರಹ್ಮನ ಸಾಕಾರ ರೂಪಗಳೇ. ಇಂಥ ಪರಶಿವನು ತನ್ನ ಲೀಲಾ ವಿನೋದದಿಂದ ಅಖಿಲ ಬ್ರಹ್ಮಾಂಡವನ್ನೂ ಆತ್ಮರುಗಳನ್ನೂ ಸೃಷ್ಟಿಸಿ, ಲೀಲಾವಿನೋದ ದಲ್ಲಿ ಮಗ್ನನಾಗಿದ್ದಾನೆಂದು ವೀರಶೈವರು ನಂಬುತ್ತಾರೆ.[18] ಪರಶಿವನ ಸ್ವಪ್ರಕಾಶದಿಂದ ಕಿರಣಮಾತ್ರವಾಗಿ ಉದಿಸುವ ಆತ್ಮನು ಸ್ವರೂಪತಃ ಪ್ರಜ್ಞಾಪ್ರಕಾಶವುಳ್ಳವನಾಗಿರು ತ್ತಾನೆ. ಆದರೆ ಪ್ರಕೃತಿಯಿಂದ ಒಡಮೂಡಿದ ಜಡದೇಹದ ಸಂಬಂಧದಿಂದ ಅಜ್ಞಾನ–ಪರವಶನಾಗಿ ಸ್ವಸ್ವರೂಪ ಜ್ಞಾನವನ್ನು ಜೀವನು ಮರೆತಿರುತ್ತಾನೆ. ದೇಹದಲ್ಲಿದ್ದು ಕೊಂಡೇ ಸ್ವರೂಪಜ್ಞಾನಹೊಂದಿ ಪರಶಿವನಲ್ಲಿ ಪುನಃ ಸಮರಸನಾದಾಗಲೇ ಆತ್ಮನಿಗೆ ಪರಮಸುಖಪ್ರಾಪ್ತಿ ಲಭ್ಯ, ಅಲ್ಲದೆ ಚಿಂತನಶೀಲನಾದ ಜೀವಾತ್ಮನಿಗೆ ಈ ದೇಹ ಸಂಬಂಧವು ಸ್ವರೂಪಜ್ಞಾನವನ್ನು ಪಡೆಯಲು ಆಧಾರವಾಗಿದೆ. ಅಲ್ಲದೆ ತನ್ನಂತೆಯೇ ದೇಹ ಧರಿಸಿ ಬಂದ ಇನ್ನಿತರ ಆತ್ಮರುಗಳಿಗೂ ಸ್ವರೂಪ ಸಾಕ್ಷಾತ್ಕಾರದ ಅನುಸಂಧಾನಕ್ಕೆ ಪ್ರೋತ್ಸಾಹಿಸುವುದೇ ಶ್ರೇಯಸ್ಕರ. ಇದು ಪರಶಿವ ಲೀಲೆಯಲ್ಲಿ ಸಲ್ಲಬೇಕಾದ ಪಾತ್ರ. ಇದಕ್ಕೆ ವೀರಶೈವರು 'ಶಿವಶಕ್ತಿ ಸಂಚದ ಲೀಲೆಯ ಪರಮ ರಹಸ್ಯ'ವೆಂದು ತಿಳಿಯುಂ ತ್ತಾರೆ. ಮಾನವನಲ್ಲಿ ಸುಪ್ತವಾಗಿ ಅವಿತುಕೊಂಡಿರುವ ಆತ್ಮಚೇತನವನ್ನು ದೈವೀಚೇತನ ವಾಗಿ ಜಾಗ್ರತಗೊಳಿಸಿ ಜೀವ-ಪರಮಾತ್ಮರ ಐಕ್ಯವನ್ನು ಸಾಧಿಸುವದೇ ವೀರಶೈವ ಶಿವ ಯೋಗಾಭ್ಯಾಸದ ಮುಖ್ಯ ಉದ್ದೇಶ.

ವೀರಶೈವರ ಶಿವಯೋಗವನ್ನುಳಿದು ಉಳಿದ ಯೋಗಗಳ ಸಾಧನ ಕ್ರಮದಲ್ಲಿ ಅನೇಕ ಬಗೆಯ ತೊಡಕು ತೊಂದರೆಗಳಂ ಕಂಡುಬರುತ್ತವೆ. ಈ ಯೋಗಗಳ ಸಾಧನೆ ಯಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿಗಳೆಂಬ ಅಷ್ಟಾಂಗಗಳ ಮಹತಿಯನ್ನು ವಿವರಿಸಲಾಗಿದೆ. ಇವುಗಳ ಸಾಧನೆಯಲ್ಲಿ ಸಾಧಕನು ಅತ್ಯುಗ್ರವಾದ ನಿಯಮಗಳನ್ನು ಪಾಲಿಸಬೇಕಾಗುವದು.

ಪ್ರಾಣಾಯಾಮದಿಂದ ಪ್ರಾಣವನ್ನು ನಿಯಂತ್ರಣಗೊಳಿಸುವಾಗ ಒಮ್ಮೊಮ್ಮೆ ಪ್ರಾಣಕ್ಕೆ ಅಪಾಯವೊದಗುವ ಸಂಭವವೂ ಉಂಟು. ಕುಂಡಲಿನಿ ಶಕ್ತಿಯನ್ನು ಜಾಗ್ರತ ಗೊಳಿಸಿ ಷಟ್‌ಚಕ್ರಗಳ ಮುಖಾಂತರ ಅದನ್ನು ಸಹಸ್ರಾರು ಚಕ್ರಕ್ಕೆ ಹೊರಳಿಸುವ ಕ್ರಮ ದಲ್ಲಿ ಒಮ್ಮೊಮ್ಮೆ ಸಾಧಕನು ವ್ರತಚ್ಯುತನಾಗುವ ಸಂಭವವೂ ಉಂಟು. ಈ ಯೋಗ ಗಳನ್ನು ಸಾಧಿಸುವುದು ಸುಲಭಸಾಧ್ಯವಲ್ಲ ; ಶಕ್ಯವೂ ಅಲ್ಲ. ಅಂತೆಯೇ ವೀರಶೈವ ಶಿವ ಯೋಗಿಗಳು ಅಷ್ಟಾಂಗಯೋಗದಲ್ಲಿ ಪೂರ್ವದ ಐದಂಗಗಳನ್ನು ಬಿಟ್ಟು ಉತ್ತರಯೋಗ ವೆನಿಸುವ ಧ್ಯಾನ-ಧಾರಣ-ಸಮಾಧಿ ಈ ಮೂರನ್ನು ಶಿವಯೋಗಾನುಸಂಧಾನದ ಕ್ರಮ

---

18 ಚೆನ್ನಬಸವಣ್ಣನವರ ವಚನಗಳು—480

ದಲ್ಲಿ ಬಳಸಿಕೊಂಡಿದ್ದಾರೆ. ಶರಣರು ಪ್ರತಿನಿತ್ಯ ಆಚರಿಸಬೇಕಾದ ಭಕ್ತಿಯುತವಾದ ಶಿವ ಪೂಜೆ-ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗಗಳನ್ನೊಳಗೊಂಡು ಶಿವಯೋಗವಾಗುವಂತೆ ಮಾರ್ಪಡಿಸಲಾಗಿದೆ. ಶಿವಯೋಗ ಲೌಕಿಕ-ಪಾರಮಾರ್ಥಿಕ ಜೀವನಗಳ ನಡುವಿನ ಸೇತುವೆಯಂತಿದೆ. ಶರಣನು ಮಾಡುವ ನಿತ್ಯಲಿಂಗಾರ್ಚನೆಯೇ ಕರ್ಮ-ಭಕ್ತಿ-ಜ್ಞಾನಗಳ ಸಂಗಮವಾಗಿದೆ.

"ಮಂತ್ರಯೋಗ ಹಠಯೋಗ ಲಯಯೋಗ ಜ್ಞಾನಯೋಗ
ಇಂತಿ ಎಲ್ಲಾ ಯೋಗವನಱಿದು ಮರೆದು
ಭಕ್ತಿಯೋಗದ ಮೇಲೆ ನಿಂದು. ರಾಜಯೋಗದ ಮೇಲೆ
ನಡೆವ ನುಡಿವಕಾಣಿರೋ ;[19]

ಇಲ್ಲಿ ರಾಜಯೋಗವೆಂದಡೆ ಶಿವಯೋಗ. ಶಿವಯೋಗಸಾಧಕನು ಭಕ್ತಿಯೋಗ ವನ್ನು ಆಶ್ರಯಿಸಿ, ಮೇಲೇರುವ ರಾಜಯೋಗವೆನಿಸಿದ ಶಿವಯೋಗವನ್ನು ಕಾಣಬೇ ಕೆಂಬ ಧ್ವನಿ ಇದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸುಪ್ತವಾಗಿರುವ ಭಕ್ತಿಗೆ ಮೂಲವಾಗಿರುವ ಭಾವನಾಶಕ್ತಿ, ಕ್ರಿಯೆಗೆ ಮೂಲವಾಗಿರುವ ಭಾವನಾಶಕ್ತಿ, ಕ್ರಿಯೆಗೆ ಮೂಲವಾಗಿರುವ ಕ್ರಿಯಾಶಕ್ತಿ, ಜ್ಞಾನಕ್ಕೆ ಮೂಲವಾಗಿರುವ ಜ್ಞಾನಶಕ್ತಿ ಇವನ್ನು ಜಾಗ್ರತಗೊಳಿಸಿ ಈ ಎಲ್ಲ ಶಕ್ತಿಗಳ ಸಮತೂಕದ ವಿಕಾಸಕ್ಕೆ–ಈ ಎಲ್ಲ ಯೋಗಗಳ ಸಮನ್ವಯದ ವಿಲಾಸಕ್ಕೆ ಶಿವ ಯೋಗದಲ್ಲಿ ಅವಕಾಶವಿದೆ. ಷಟ್‌ಸ್ಥಲಾನುಸಂಧಾನದಿಂದ ಕ್ರಿಯಾಶುದ್ಧಿ, ಜ್ಞಾನಶುದ್ಧಿ, ಭಾವಶುದ್ಧಿಗಳುಂಟಾಗಿ ಸಮ್ಯಕ್ ಜ್ಞಾನವು ಅಳವಟ್ಟು ನಿರ್ಮಲ ಸಮಾಧಿಯನ್ನು ಸಾಧಿಸುವುದೇ ಶಿವಯೋಗದ ಅತ್ಯಂತಿಕ ಗುರಿಯಾಗಿದೆ.

ಪರಶಿವನ ಲೀಲೆಯಿಂದ ಆತ್ಮನಿಗೆ ತನುಸಂಬಂಧವಾದೊಡನೆ ಪ್ರಾಣಸಂಚಾರವೂ ಅಲ್ಲಿ ಮಾಡಿಕೊಳ್ಳುತ್ತದೆ. ಆತ್ಮ–ಪ್ರಾಣಗಳೊಳಗೆ ತಾದಾತ್ಮ್ಯ ಸಂಭವಿಸಿ ಮನವೆಂಬ ಘಟಕ ಮೂಡಿ ಬರುತ್ತದೆ. ಆತ್ಮ ಪರಮಾತ್ಮರ ಸಾಮರಸ್ಯವನ್ನು ಸಂಪಾದಿಸಲು ಪರಶಿವ ನಿಂದ ಹೊರಹೊಮ್ಮಿದ ಈ ಸೃಷ್ಟಿಯೂ ಅವಶ್ಯ ; ಆತ್ಮನನ್ನು ಸುತ್ತಿಕೊಂಡ ದೇಹವೂ ಅವಶ್ಯ[20]. ಪ್ರಾಕೃತಿಕ ದೇಹಸ್ವರೂಪ, ಅಲ್ಲಿ ಸಂಚರಿಸುವ ಪ್ರಾಣ, ಅಲ್ಲಿ ಮೂಡಿಬಂದ ಮನ-ಇವುಗಳ ಅಸ್ವಸ್ಥಸ್ಥಿತಿ ಜೀವ–ಪರಮರ ಸಾಮರಸ್ಯ ಸುಖಕ್ಕೆ ಆತಂಕವನ್ನೊಡ್ಡು ತ್ತದೆ ಎಂಬುದು ಶಿವಯೋಗಿಗಳ ಅನುಭವ. ಮನಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಆದರೆ ಪ್ರಾಣ ಮಾತ್ರ ತನುವಿಗೆ ಮುಖ್ಯ ಆಧಾರ. ಅಂತೆಯೇ ಸಾಧನಾಕ್ರಮದಲ್ಲಿ ಪ್ರಾಣಕ್ಕೆ ಮಹತ್ವದ ಪಾತ್ರವಿದೆ. ಮಾನವನ ಪ್ರಾಣವು ಅನೇಕ ಕಾರಣಗಳಿಂದ ತಾಳ-ಲಯಬದ್ಧ ವಾಗಿರುವುದಿಲ್ಲ. ಇದರಿಂದ ಮನವೂ ದೋಷಯುಕ್ತವಾಗಿ ಜೀವಾತ್ಮನಲ್ಲಿ ಬಗೆಬಗೆಯ ಬಯಕೆಗಳು,ವಾಸನೆಗಳು ಸಂಸ್ಕಾರ ರೂಪವಾಗಿ ಮೂಡಿಬರುತ್ತವೆ. ಅವು ಅರಿಷಡ್ವರ್ಗ,

---

19 ಚೆನ್ನಬಸವಣ್ಣನವರ ವಚನಗಳು—1456 (ಕ.ವಿ.ವಿ. ಪ್ರಕಟನೆ)

20 ಬಸವಣ್ಣನವರ ವಚನಗಳು—774 (ಕ.ವಿ.ವಿ. ಪ್ರಕಟನೆ)

ಸಪ್ತವ್ಯಸನ, ಅಷ್ಟಮದ ಇತ್ಯಾದಿ ಅಮಂಗಲ ಗುಣಗಳ ಜಾಲದಿಂದ ಮಾನವನನ್ನು ಬಂಧಿಸುತ್ತವೆ. ಆದರಿಂದ ಸ್ವಸ್ವರೂಪ ವಿಸ್ಮೃತಿಯೂ ಸಂಭವಿಸುತ್ತದೆ. ಜೀವನಿಗೆ ಒಮ್ಮೆ ಸಮ್ಯಕ್‌ಜ್ಞಾನ ಜಾಗ್ರತವಾಯಿತೆಂದರೆ ತನ್ನಲ್ಲಿ ಸುಪ್ತವಾಗಿರುವ ಶುದ್ಧ ಶಿವತತ್ವವನ್ನು ಜಾಗ್ರತಗೊಳಿಸಿಕೊಂಡು, ಸಾಕ್ಷಾತ್ಕಾರ ಪಡೆದು ಪರಮನಲ್ಲಿ ಬೆರೆತು ಬೇರಿಲ್ಲದಂತೆ ಇರ ಬೇಕೆಂಬ ಇಚ್ಛೆ ತಲೆದೋರುವದು. ಈ ಜ್ಞಾನಾಗ್ನಿ ಹೊತ್ತಿ ಉರಿಯುತ್ತಿರಲು ಎಂದೆಂದಿಗೂ ಅವಿದ್ಯೆ ಮುಸುಕಬಾರದೆಂದು ಮತ್ತು ನಿರಂತರ ಸಾಮರಸ್ಯ ಸುಖಸಾಧ್ಯ ವಾಗಬೇಕೆಂದು ಜೀವಾತ್ಮನು ಶಿಷ್ಯಭಾವದಿಂದ ಶ್ರೀ ಗುರುವಿನ ಕಾರುಣ್ಯಕ್ಕೆ ಹಂಬಲಿಸು ತ್ತಾನೆ.

> ಅವಾವ ಭಾವದಲ್ಲಿ ನಿಮ್ಮನಲ್ಲದೆ ನಾನರಿಯದಿದ್ದೆನಯ್ಯಾ''
> ದೇವದೇವಾ ಕಾಯಯ್ಯಾ, ಕಾಯಯ್ಯಾ,
> ಕರುಣಿ, ಕರುಣಿ, ಕೃಪಾವಲ್ಲಭ ಗುರುವೆ,
> ಕಪಿಲ ಸಿದ್ಧಮಲ್ಲಿನಾಥಯ್ಯ''[21]

ಶಿವಯೋಗ ಸಾಧನೆಯಲ್ಲಿ ಸದ್ಗುರುವಿನ ಸ್ಥಾನ ಗುರುತರವಾದುದು. ಶ್ರೀಗುರು ತನ್ನ ಶಿವಯೋಗ ಸಾಮರ್ಥ್ಯದಿಂದ ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿರಿಸಿ ಸಹಸ್ರದಳ ಕಮಲದಲ್ಲಿ ಅವ್ಯಕ್ತವಾಗಿ ಅವಿತುಕೊಂಡಿರುವ ಚಿತ್ಕಳೆಯನ್ನು ಜಾಗ್ರತಗೊಳಿಸುತ್ತಾನೆ. ಆ ಶಿವಕಳೆಯನ್ನು ಭಾವಕ್ಕೆ ಭಾವಲಿಂಗವಾಗಿ, ಭಾವದಿಂದ ಮನಕ್ಕೆ ಪ್ರಾಣಲಿಂಗವಾಗಿ, ಮನದಿಂದ ದೃಷ್ಟಿಗೆ ಇಷ್ಟಲಿಂಗವಾಗಿ ಅವತರಿಸಿ ಶಿಷ್ಯನ ಕರಸ್ಥಲದಲ್ಲಿ ಇರಿಸುತ್ತಾನೆ[22] ಉಪಾಸನೆಗೆಂದು ಆದಿ ಅಕ್ಷರದ್ವಯವನ್ನು ಭೇದಿಸಿ ತಂದು-ಶಿವಲಿಂಗವಾಗಿ ಮಾಡಿ ಶಿಷ್ಯನ ಕರದಲ್ಲಿರಿಸುತ್ತಾನೆ. ದೀಕ್ಷಾತ್ರಯವನ್ನು ಅಳವಡಿಸಿ ಶಿವಲಿಂಗಾರ್ಚನೆಗೆಂದು ಅಷ್ಟಾವರಣ-ಪಂಚಾಚಾರ-ಷಟ್‌ಸ್ಥಲಾನುಸಂಧಾನದ ಮರ್ಮವನ್ನು ಬೋಧಿಸುತ್ತಾನೆ. ಈ ರೀತಿ ಹಸ್ತಮಸ್ತಕ ಸಂಯೋಗದಿಂದ ಫಲಿಸುವದೇ ವೇಧಾದೀಕ್ಷೆ. ಪ್ರಾಣದಲ್ಲಿ ಮೂಡಿದ ಶಿವ ಕಳೆಯನ್ನು ಶಿಷ್ಯನ ಕಣ್ಣುಗಳ ಮುಖಾಂತರ ಹೀರಿ ಕರಸ್ಥಲಕ್ಕೆ ತಂದು ವಿಧಿಪೂರ್ವಕ ವಾದ ಕ್ರಿಯೆಯಿಂದ ಇಷ್ಟಲಿಂಗವೆಂದು ಕೊಡುವದೇ ಕ್ರಿಯಾದೀಕ್ಷೆ. ಶಿಷ್ಯನ ಕಿವಿಯಲ್ಲಿ ಪ್ರಣವ ಪಂಚಾಕ್ಷರಿಯನ್ನುಸುರಿ ಶಿವಜ್ಞಾನವನ್ನುಂಟುಮಾಡುವದೇ ಮಂತ್ರದೀಕ್ಷೆ. ಕೊನೆಗೆ ಶಿವಯೋಗದ ನೆಲೆಕಲೆಗಳನ್ನು ತಿಳಿಸಿ ಈ ಯೋಗದ ಹೊಲಬು 'ಶಕ್ತಿಸಂಪುಟ ವಾಗಿದ್ದುದೆಂದು ಅರುಹುತ್ತಾನೆ'. ಈ ವಿಷಯವನ್ನು ಸಿದ್ಧರಾಮ ಶಿವಯೋಗಿಯು ಹೀಗೆ ಹೇಳುತ್ತಾನೆ—

———

21 ಶ್ರೀ ಸಿದ್ಧರಾಮೇಶ್ವರ ವಚನಗಳು—146

22 ಚೆನ್ನಬಸವಣ್ಣನವರ ವಚನಗಳು—65. 1176 1466 ಬಸವಣ್ಣನವರ ವಚನಗಳು—814.

—'ಶ್ರೀ ಗುರುಸ್ವಾಮಿ ಬಹಳಪಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ
ಕೈಯ್ಯಲ್ಲಿ ಕೊಟ್ಟ ಬಳಿಕ ಯೋಗವುಂಟೇ
ತನ್ನ ಹಸ್ತವ ಮಸ್ತಕದಲ್ಲಿ ಇಟ್ಟು
ವಾಯುಪ್ರಾಣವಾಗಿದ್ದುದಕೊಂಡು ಲಿಂಗಪ್ರಾಣಿಯ ಮಾಡಿದ ಬಳಿಕ,
ಅಕ್ಷರವೈದ್ಯರಲ್ಲಿ ಮುಂಕ್ತನ ಮಾಡಿದ ಬಳಿಕ
ಮರಳಿ ಯೋಗವುಂಟೇ ಶಿವಯೋಗವಲ್ಲದೆ ?
ಲಿಂಗಾರ್ಚನೆಯ ಮಾಡಿ ಜಂಗಮ ಪ್ರಸಾದವ ಕೊಂಡ ಬಳಿಕ,
ಮರಳಿ ಬರಿಯ ಯೋಗಕ್ಕೆ ಒಡಂಬಡುವದೇ ಅಱಿವು ?
ಇಂತಪ್ಪವನತಿಗಳೆದಃ ಶಿವಯೋಗಿಯ ಮಾಡಿದಾತ ಚೆನ್ನಬಸವಣ್ಣ
ಮಹಾಲೋಕದಲ್ಲಿಪ್ಪ ಆದ್ಯಕ್ಷರದ್ವಯದ ಭೇದವಂ
ಭೇಧಿಸಿ ತಂದು ಕರದಲ್ಲಿ ಇರಿಸಿ,
ಇದು ಪರಮಪದವೆಂದು ತೋಱಿಕೊಟ್ಟು
ಎನ್ನ ತನ್ನಂತೆ ಮಾಡಿದ ಗುರು ಚೆನ್ನಬಸವಣ್ಣ[23]....

ಪ್ರಭುದೇವನು ತನ್ನ ವಿಶಿಷ್ಟ ರೀತಿಯ ಗುರಂಕರುಣವನ್ನು ಈ ರೀತಿ ಹೇಳಿದ್ದಾನೆ—

'ಕಾಣಬಾರದ ಗುರುವು ಕಣ್ಗೆ ಗೋಚರವಾದರೆ
ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತಮಸ್ತಕಸಂಯೋಗ.
ಹೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣಮಂತ್ರ
ತುಂಬಿತುಳುಕದ ಕಳಶಾಭಿಷೇಕ, ಆಗಮವಿಲ್ಲದ ದೀಕ್ಷೆ
ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ
ಸಯವಪ್ಪ ಅನುಗ್ರಹ ಆನುಗೊಂಬಂತೆ ಮಾಡಾ ಗೋಹೇಶ್ವರಾ[24] !

ಗುರುಕಾರುಣ್ಯವಾದುದಕ್ಕೆ ಕುರುಹಂ ಕರಸ್ಥಲದ ಇಷ್ಟಲಿಂಗ. 'ಕುರುಹುವಿಡಿದು ಕುರುಹುಗೆಡಬೇಕು' ಎಂದು ಬೋಧಿಸುವದೇ ಷಟ್‌ಸ್ಥಲಾಚರಣೆಯ ರಹಸ್ಯ. 'ಅಂಗ ತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು' ಎಂಬ ಚೆನ್ನಬಸವಣ್ಣನ ನುಡಿಯು ಇಷ್ಟಲಿಂಗದ ಅವಶ್ಯಕತೆಯನ್ನು ಬೋಧಿಸುತ್ತದೆ.[25] ಭಾವಸಂಸ್ಕಾರ ಹೊಂದಿದ ಸಾಧಕನಿಗೆ

---

23 See also ಪ್ರಭುದೇವರ ವಚನಗಳು 1121—1154

24 ಪ್ರಭುದೇವರ ಶೂನ್ಯಸಂಪಾದನೆ—(ಸಂಪುಟ 1) ವ. 37.

25 A Hand book of Veerashaivism. P. 176

It is insisted that in all the stages there must be the worship of the Istalinga and that It should always serve as the basis of contemplation.

ಅರುಹಿನಕುರುಹಾಗಿ ಇಷ್ಟಲಿಂಗ ದೊರಕುತ್ತದೆ. ಆಗ ಮಾತ್ರ ಸಾಧಕನು ಲಿಂಗಾನು ಸಂಧಾನಕ್ಕೆ ಯೋಗ್ಯನಾಗುತ್ತಾನೆ.

ಶಿವಯೋಗಾನುಸಂಧಾನವು ಇಷ್ಟಲಿಂಗದ ಮೇಲಿರಿಸಿದ ಅನಿಮಿಷದ ದೃಷ್ಟಿಯಿಂದಲೇ ಆರಂಭವಾಗುತ್ತದೆ. ಕಾರಣ ಇಲ್ಲಿ ಅನಿಮಿಷದೃಷ್ಟಿ ಅರ್ಥಾತ್ ನಿರ್ನಿಮೇಷ ನೋಟವೇ ಮೂಲಸೂತ್ರವಾಗುತ್ತದೆ. ವೀರಶೈವ ಸಾಧಕನು ಪ್ರತಿನಿತ್ಯವೂ ಸುಪ್ರಭಾತದಲೆದ್ದು ನಿಸರ್ಗ ಸಹಜವಾದ ಮಾಲಿನ್ಯವನ್ನು ತೊಡೆದುಹಾಕಿ ಸ್ನಾನಗೈದು ಪರಿಶುದ್ಧನಾಗಿ ಪವಿತ್ರ ಪೂಜಾಮಂದಿರವನ್ನು ಪ್ರವೇಶಿಸುತ್ತಾನೆ. ತನಗೆ ಯೋಗ್ಯವಾದ ಆಸನದಲ್ಲಿ ಕುಳಿತು[26] ಅಹಂಗ್ರಹೋಪಾಸನೆಗೆ ಸಿದ್ಧನಾಗುತ್ತಾನೆ. ಅಷ್ಟವಿಧಾರ್ಚನೆ-ಷೋಡಶೋಪಚಾರಗಳಿಂದ ಇಷ್ಟಲಿಂಗವನ್ನರ್ಚಿಸುತ್ತಾನೆ. ಇದರಿಂದ ಪವಿತ್ರ ವಾತಾವರಣವು ಸುತ್ತಲೂ ಪಸರಿಸುತ್ತದೆ. ನಂತರ ಇಷ್ಟಲಿಂಗಾನುಸಂಧಾನಕ್ಕೆ ಸಿದ್ಧನಾಗುತ್ತಾನೆ. ಪಶ್ಚಿಮ ಪದ್ಮಾಸನದಲ್ಲಿ ಕುಳಿತು ಬೆನ್ನೆಲುಬನ್ನು ನೆಟ್ಟಗಿರಿಸಿ ಅಂದರೆ ಎದೆ, ಕುತ್ತಿಗೆ, ತಲೆ—ಇವುಗಳನ್ನು ನೇರವಾಗಿರಿಸುತ್ತಾನೆ. ದೃಷ್ಟಿಸ್ಥಿರತೆಯಿಂದ ಪ್ರಾಣವಾಯುವಿನ ಸಂಚಾರವು ನಿಧಾನವಾಗಿ ಸುಸ್ಥಿರಗೊಳ್ಳುವದು ; ಚಂಚಲಮನವೂ ನಿಶ್ಚಲಗೊಳ್ಳುವದು. ನಿಸ್ತರಂಗ ಸಮುದ್ರದ ಆಳದಂತೆ ಮನವು ಸ್ತಬ್ಧಗೊಳ್ಳಲು, ಕರಸ್ಥಲದ ಲಿಂಗವು ಮನೋವೇದ್ಯವಾಗಿ ; ಪ್ರಾಣಲಿಂಗ ಭಾವಲಿಂಗಗಳಾಗಿ ಸಾಧಕನಲ್ಲಿ ಆತ್ಮಶಕ್ತಿಯು ಜಾಗೃತವಾಗುವುದು. ಈ ಅನುಭವವನ್ನು ಭಕ್ತಿಭಂಡಾರಿ ಬಸವಣ್ಣನು ಹೀಗೆ ಹೇಳಿದ್ದಾನೆ—

> ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು
> ತುಟಿ ಕದಲದೆ ಅಟ್ಟೆಯಾಡಿತ್ತಲ್ಲಾ
> ಬಿಟ್ಟ ಕಣ್ಣು, ಬಿಗಿದ ಹುಬ್ಬು
> ಬ್ರಹ್ಮರಂಧ್ರದಲ್ಲಿ ಕಟ್ಟುಗುಡಿಯ
> ಕೂಡಲ ಸಂಗಮದೇವ ಹಿಡಿವಡೆದ.[27]

ಈ ರೀತಿ ಸಾಧನೆಯಿಂದ ಕರ್ಮನಾಶವಾಗಿ ಜನನ ಮರಣಗಳ ಬಲೆ ಕಳಚಿ ಹೋಗಿ, ಮಾಯೆ ಮೋಹಗಳು ಹೇಳಹೆಸರಿಲ್ಲದೆ ತೊಲಗುವವು. ಹೊದ್ದಿದ ಪ್ರಪಂಚ ವಾಸನೆಗಳು ಸುಟ್ಟುಹೋಗುವವು. ಕವಿ ಚಾಮರಸನು ಇಂಥ ಶಿವಯೋಗ ಸಾಧನೆಯ ನೆಲೆ ಕಲೆಗಳ ಬಗೆಗೆ ಹೇಳುತ್ತಾನೆ.

> ಆಲಿ ನಿಂದಡೆ ಸುಳಿದು ಸೂಸುವ
> ಗಾಳಿ ನಿಲುವುದು ಗಾಳಿ ನಿಲೆ ಮನ
> ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು
> ಲೀಲೆಯಿಂದಾ ಬಿಂದು ನಿಂದೊಡೆ

---

26 ಬಸವಣ್ಣ. ವ. 820 ಅಲ್ಲಮ ಪ್ರಭುದೇವರ ವ. 195. ಮುಪ್ಪಿನ ಷಡಕ್ಷರಿ
27 ಬಸವಣ್ಣನವರ ವ. 814.

ಕಾಲಕರ್ಮವ ಗೆದ್ದು ಮಾಯೆಯ
ಹೇಳ ಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ[28] ॥

ಅಂಗೈಯನೋಟದೊಳು ಕಂಗಳು ನಟ್ಟು ತನು-ಮನ-ಭಾವಗಳೆಲ್ಲ ಲಿಂಗದ ದಿವ್ಯ ಪ್ರಭೆಯಿಂದ ಬೆಳಗುವ ಶರಣನ ನಿಲವನ್ನು ಶಿವಯೋಗದ ಕಲೆಯನ್ನು ಸಿದ್ಧರಾಮ ಶಿವಯೋಗಿ ಹೀಗೆ ಕೊಂಡಾಡಿದ್ದಾನೆ.

'ಅಂಗೈಯ ನೋಟದೊಳು ಕಂಗಳು ನಟ್ಟು,
ಕಂಗಳ ತೇಜ ಲಿಂಗದಲ್ಲರಿತು,
ಲಿಂಗದ ಪ್ರಭೆಯೊಳಗೆ ಅಂಗವೆಲ್ಲ ಲೀಯವಾಗಿ
ಸಂಗ-ನಿಸ್ಸಂಗವೆಂಬ ದಂದುಗ ಹಱಿದು,
ಹಿಂದು ಮುಂದೆಂಬ ಭಾವವಳಿದು ನಿಂದ,
ನಿಜದ ನಿರಾಳದಲ್ಲಿ ಪ್ರಾಣ ಸಮರತಿಯಾಗಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ....'[29]

ಮೋಳಿಗೆಯ ಮಹಾದೇವಿಯಮ್ಮನ ಶಿವಯೋಗರಹಸ್ಯ ಹೀಗಿದೆ—

ಇಷ್ಟದಲ್ಲಿ ನೋಟ, ಜ್ಞಾನದಲ್ಲಿ ಕೂಟ
ಏಕಾರ್ಥವಾದಲ್ಲಿ ಕಾಯವೆಂಬ ಕದಳಿ ಬಿಟ್ಟುದು ;
ಭಾವವೆಂಬ ಕುಱುಹ ಮಱೆದುದು
ಇಂತೀ ಉಭಯ ನಿರ್ಭಾವವಾದಲ್ಲಿ[29]
ಇಹಪರವೆಂಬ ಹೊಲಬುಗೆಟ್ಟಿತ್ತು

ಹೀಗೆ ಸಾಧಕನು ಲಿಂಗವ ಪೂಜಿಸಿ ಲಿಂಗವೇ ಆಗುತ್ತಾನೆ.[30] ಚಂಚಲ ಮನವನ್ನು ನಿಶ್ಚಲಗೊಳಿಸುವ ಸುಲಭಸಾಧ್ಯವಾದ-ಮಾರ್ಗವೇ ಶಿವಯೋಗವೆಂದಿದ್ದಾನೆ ಸಿದ್ಧರಾಮ ಶಿವಯೋಗಿ—

ಚಂಚಲಮನದಂಬರಕ್ಕೆ
ಕಟಕದ ಗೊಂಚಲಾಯಿತ್ತಲ್ಲಾ ಶಾಂಭವೀಯೋಗ
ಚಂಚಲಮನದ ರತಿಗೆ
ಚಂಚಲವಳಿದ ಮದನವಾಯಿತ್ತಲ್ಲಾ ಶಿವಾನುಭವಯೋಗ
ಚಂಚಲ ಮನದಾನೆಗೆ ಶೃಂಖಲೆಯಾಯಿತ್ತಲ್ಲಾ

———

28 ಪ್ರಭುಲಿಂಗಲೀಲೆ– (ಚಾಮರಸ) XVIII 22; ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು 293, ಚೆನ್ನಬಸವಣ್ಣನವರ ವಚನಗಳು 1087.

29 ಶ್ರೀ ಸಿದ್ಧರಾಮೇಶ್ವರ ವಚನಗಳು–1094. ಶಿವಶರಣೆರ ವಚನಗಳು (a) ಮೋಳಿಗೆಯ ಮಹಾದೇವಮ್ಮನ ವಚನಗಳು (ಕ.ವಿ.ವಿ) 58

30 ಬಾಲಲೀಲಾ ಮಹಾಂತ ಶಿವಯೋಗಿ; ಕೈವಲ್ಯ ದರ್ಪಣ

ಕಪಿಲಸಿದ್ಧ ಮಲ್ಲಿಕಾರ್ಜುನ ಬೋಧಿಸಿದ ಪರಮ ಪರಿಣಾಮಯೋಗ[31]

ಉಪಾಸನೆಗೊಂಡ ಇಷ್ಟಲಿಂಗವು ಇಲ್ಲಿ ಮೂರ್ತಿಯಲ್ಲ, ಸಾಧಕನ ಸ್ವಸ್ವರೂಪದ ಪ್ರತೀಕವಾಗಿದೆ.

ಶಿವಯೋಗದಲ್ಲಿ ಗುರು ಕರುಣಿಸಿದ ಮಂತ್ರದ ಅನುಸಂಧಾನದೊಡನೆ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗಗಳ ಆರಾಧನೆ, ಅನುಸಂಧಾನಗಳು ನಿರಂತರವಾಗಿ ಸಾಗುತ್ತವೆ. ಶಿವಯೋಗಿಗಳಂ ತಮ್ಮ ಅನುಸಂಧಾನದಲ್ಲಿ ಓಂಕಾರ ಮಂತ್ರವನ್ನಿರಿಸಿಕೊಂಡಿರಬೇಕು. ನಾದ-ಬಿಂದು-ಕಳೆಗಳಿಗೆ ಅತೀತವಾದ ಪರವಸ್ತುಸ್ಥಿತಿಯೇ ಓಂಕಾರ ಪ್ರಣವ. ಶಿವನ ಚಿಚ್ಛಕ್ತಿಯಂ ನೆನಹಂ ಮಾತ್ರದಿಂದಲೇ ಓಂಕಾರದ ಸೂಕ್ಷ್ಮರೂಪಗಳಾದ ನಾದ-ಬಿಂದು-ಕಳೆಗಳ ಉತ್ಪತ್ತಿಯಾಗಿ ಮಾನವನ ಸ್ಥೂಲ-ಸೂಕ್ಷ್ಮ-ಕಾರಣ ದೇಹಗಳ ರಚನೆ ಮತ್ತು ಚರಾಚರ ಸೃಷ್ಟಿಯ ಉದಯವಾಗುತ್ತದೆ. ಓಂಕಾರದಲ್ಲಿರುವ ಅ-ಉ-ಮ ವರ್ಣಗಳ ನ್ನೊಳಗೊಂಡ ಸ್ವರಬದ್ಧ ಪ್ರಾಣಾನುಸಂಧಾನವನ್ನು ಇಷ್ಟ-ಪ್ರಾಣ-ಭಾವಲಿಂಗಗಳ ಪೂಜೆಯಲ್ಲಿ ಸಮನ್ವಯಗೊಳಿಸಿ, ಈ ಲಿಂಗತ್ರಯಗಳ ಪೂಜೆ ಅವಶ್ಯವೆಂದು ಸಾರುತ್ತದೆ. ಅಲ್ಲದೆ ಅಕಾರ ಸ್ವರೂಪವಾದ ಇಷ್ಟಲಿಂಗದ ಪೂಜೆ ಸ್ಥೂಲದೇಹದ ಮೋಹವ ಕಳಚುವ ದೆಂದೂ, ಉಕಾರಸ್ವರೂಪವಾದ ಪ್ರಾಣಲಿಂಗದ ಪೂಜೆ ಮನವ ಉನ್ಮನಗೊಳಿಸಿ ಸೂಕ್ಷ್ಮ ದೇಹವನ್ನು ನಿರ್ಮಲಗೊಳಿಸುವದೆಂದೂ, ಮಕಾರಸ್ವರೂಪವಾದ ಭಾವಲಿಂಗಾನು ಸಂಧಾನ ಕಾರಣದೇಹದ ಕರ್ಮಬೀಜವ ಅಳಿಯುವದೆಂದೂ, ಕೊನೆಗೆ ನಾದ-ಬಿಂದು-ಕಳಾತೀತವಾದ ಪ್ರಣವಸ್ವರೂಪವೇ ಸಾಧಕನಿಗೆ ಪ್ರಾಪ್ತವಾಗುವದೆಂದೂ ಸಿದ್ಧರಾಮ ಹೇಳಿದ್ದಾನೆ.[32] 'ಓಂಕಾರವೆಂಬ ಪೀಠಕ್ಕೆ ನಾನಾಗಿ, ನಿಶ್ಶಬ್ದವೆಂಬ ಲಿಂಗವ ನೆಲೆಗೊಳಿಸಿ ಬೆರಸಿ ಬೇರಿಲ್ಲದೆ ಇಪ್ಪೆ' 'ಅನಿರ್ವಾಚ್ಯ ಪ್ರಣವನಾದ'—ಎಂಬ ನುಡಿಗಳು ಸಿದ್ಧರಾಮ ತನ್ನ ಶಿವಯೋಗಾನುಸಂಧಾನದಲ್ಲಿ ಅಳವಡಿಸಿಕೊಂಡ ಮಂತ್ರಮಹಿಮೆಯನ್ನು ತಿಳಿಸು ತ್ತವೆ. ಇಲ್ಲಿ ವೀರಶೈವರು ಆಚರಿಸಬೇಕಾದ ಅಷ್ಟಾವರಣಗಳಲ್ಲಿ ಮಂತ್ರವು ಮಹತ್ವದ ಪಾತ್ರವನ್ನಿಡುತ್ತದೆ ಎಂಬುದನ್ನು ಗಮನಿಸಬೇಕು.

ನಿಶ್ಚಲವಾದ ಕಂಗಳು ಲಿಂಗನಿರೀಕ್ಷಣೆಯಲ್ಲಿ, ಉನ್ಮನಸ್ಥಿತಿಯನ್ನು ಹೊಂದಿದ ಮನಸ್ಸು ಮಂತ್ರಾನುಸಂಧಾನದಲ್ಲಿ, ಭಕ್ತಿಭರಿತವಾದ ಹೃದಯವು ಪರಶಿವನ ಸಮರಸ ಜ್ಞಾನದಲ್ಲಿ–ಲೀನವಾಗಿ ಶಿವಯೋಗಿ ಮೈಮರೆಯುತ್ತಾನೆ. ಪ್ರಾಣಲಿಂಗಪೂಜೆಗೆ ಸಿದ್ಧ ನಾದ ಶಿವಯೋಗಿಗೆ ತನುವೆ ಅಗ್ಗವಣಿಯ ಬಿಂದಿಗೆಯಾಗಿ, ಮನವೇ ಸಿಂಹಾಸನವಾಗಿ, ಉಸುರ ಹಿಡಿದು ಲಿಂಗಕ್ಕೆ ಮಜ್ಜನಗೈಯುತ್ತಾನೆ. 'ವಿಷಯ ಮಾದಂ ಗಂಧವ'ನ್ನಿತ್ತಿ ದ್ದಾನೆ. ನೆನಹ ನೆಲೆಗೊಳಿಸಿ, ತನುಗುಣಾದಿಗಳನರುಹಿ ದಶಾಂಗ ಧೂಪವನ್ನಿಕ್ಕುತ್ತಾನೆ.

---

31 ಶ್ರೀ ಸಿದ್ಧರಾಮೇಶ್ವರ ವಚನಗಳು—1045.

32 ಶ್ರೀ ಸಿದ್ಧರಾಮೇಶ್ವರ ವಚನಗಳು- 1000, 1034,

ತನ್ನನೇ ಪರಮಾತ್ಮನಿಗೆ ಬೋನವೆಂದು ಅರ್ಪಿಸಿಕೊಳ್ಳುತ್ತಾನೆ.[33] ಮತ್ತೊಮ್ಮೆ ಮನದ ರಜದ ಮಣ್ಣ ಕಳೆದು, ದಯಾ ಶಾಂತಿಯ ಉದಕವ ತೆಗೆಯುತ್ತಾನೆ. ಯೋಗ ಕಂಪವನ್ನಿಕ್ಕಿ ಮನವನ್ನು-ಬಂಧಿಸುತ್ತಾನೆ.[34] ಪ್ರಾಣಲಿಂಗಪೂಜೆಯಲ್ಲಿ ತೊಡಗುತ್ತಾನೆ. ಸಾಧಕನ ಭಾವ ಶುದ್ಧವಾಗಿ ಪ್ರಾಣಲಿಂಗ ಪೂಜೆಯು ಅವ್ಯಾಹತವಾಗಿ, ತಾನೇ ತಾನಾಗಿ ನಡೆಯುತ್ತದೆ. ಆಗ ಶಿವಯೋಗಿ ಬಹಿರಂಗದಲ್ಲಿ ತೋರಬೇಕಾದ ಗುರು-ಲಿಂಗ-ಜಂಗಮ ನಿಷ್ಠೆಯೇ ಅಂತರಂಗ ಅನುಭಾವಕ್ಕೆ ಗೋಚರಿಸುತ್ತದೆ. ಅರಿವೇ ಗುರುವಾಗಿ, ಸುಜ್ಞಾನವೇ ಜಂಗಮವಾಗಿ ಸಾಧಕನ ಅಂತರಂಗವನ್ನು ಬೆಳಗುತ್ತವೆ. ಅಂಗಗುಣಗಳೆಲ್ಲ ಅಳಿದು ಲಿಂಗಗುಣಗಳಾಗುತ್ತವೆ, ಅಂಗೇಂದ್ರಿಯಗಳೆಲ್ಲವು–ಲಿಂಗೇಂದ್ರಿಯಗಳಾಗುತ್ತವೆ[35] ಕರಣ-ಹರವಾಗಿಪ್ಪ ನಿರ್ವಾಣಪದ ಸಾಧ್ಯವಾಗುತ್ತದೆ.[36]

ಈ ಬಗೆಯ ಶಿವಯೋಗ ಸಾಧನೆಯಲ್ಲಿ ನಿರತನಾಗಿರುವ ಶಿವಯೋಗಿಗೆ ಅನೇಕ ದಿವ್ಯಾನುಭವಗಳಾಗುತ್ತವೆ. ಅನುಸಂಧಾನದಲ್ಲಿ ಅತೀಂದ್ರಿಯ ಸದ್ವಾಸನೆ, ಚಿದ್‌ರಸಾನ. ಭವ, ದೂರದರ್ಶನ, ದೂರಶ್ರವಣ ಮತ್ತು ದಿವ್ಯಸ್ಪರ್ಶಗಳು ಗೋಚರಿಸುತ್ತವೆ ಸಾಧಕನ ಸಾಮಾನ್ಯ ವ್ಯಕ್ತಿತ್ವವು ದೈವೀಗಾಂಭೀರ್ಯವುಳ್ಳದ್ದಾಗಿ ಮಾರ್ಪಡುತ್ತದೆ. ಆಂತರಿಕ ಅನುಭವಗಳು ಯೋಗಿಯಲ್ಲಿ ಪರಿಶುದ್ಧವಾದ ಭೌತಿಕ, ಪ್ರಾಣದ ಮಾನಸಿಕ ಹಾಗೂ ಆತ್ಮನ ಕ್ಷೇತ್ರದಿಂದ ಅಥವಾ ಒಮ್ಮೊಮ್ಮೆ ಅತಿ-ಮಾನಸದ ಕ್ಷೇತ್ರದಿಂದ ಆವಿರ್ಭಾವವನ್ನು ಹೊಂದುವದುಂಟು. ಮುಖ್ಯವಾಗಿ ಪರಮಾತ್ಮನ ಅಸ್ತಿತ್ವವನ್ನೂ, ಅಣುರೇಣುತೃಣಕಾಷ್ಠ ಮೊದಲಾದವುಗಳಲ್ಲಿ ತುಂಬಿರುವ ದೈವೀಆವಿರ್ಭಾವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದುದು ಪರಮಧ್ಯೇಯ. ಕಾರಣ ದಿವ್ಯಾನುಭವಗಳನ್ನು ಗಮನಿಸಬಾರದೆಂದು ಹೇಳಲಾಗುತ್ತದೆ. ಏವಲಿನ್ ಅಂಡರ್‌ಹಿಲ್—ಅವಳು ಈ ಅನುಭವಗಳ ಬಗೆಗೆ ಹೀಗೆ ಹೇಳಿದ್ದಾಳೆ. "Vision is recognised by the true contemplative .... as at best on imperfect, oblique and untrustworthy method of apprehension, it is ungovernable capricious, liable to deception and the greater its accompanying hallucination, the more suspicious it becomes[37]

———

33 ಶ್ರೀ ಸಿದ್ಧರಾಮೇಶ್ವರ ವಚನಗಳು 1030

34 ,, ,, ,, 1025

35 ,, ,, ,, (ಸಂಕೀರ್ಣ ತ್ರಿವಿಧಿ) 100

36 ,, ,, ,, 30

37 [Evelyn Underhill; 'Mysticism' P. 28, see also part II ch· v]

"ಅವಳು ಮಾನಸಿಕ ಕ್ಷೇತ್ರಕ್ಕನುಸರಿಸಿ ದರ್ಶನಾನುಭವವನ್ನು (1) ಬೌದ್ಧಿಕ (2) ಕಾಲ್ಪನಿಕ (3) ಶರೀರ ಸಂಬಂಧವಾದವುಗಳೆಂದು, ಶ್ರವಣಾನಂಭವವನ್ನು (1) ವಾಸ್ತವಿಕ (2) ಆಂತರಿಕ ಹಾಗೂ ಸ್ಪಷ್ಟವಾದ (3) ಬಹಿರಂಗದ ಧ್ವನಿಗಳೆಂದಂ ವಿಂಗಡಿಸುತ್ತಾಳೆ. ಸಾಮಾನ್ಯವಾಗಿ ಸಾಧಕನಿಗೆ, ಸದ್ವಾಸನೆ-ದಿವ್ಯದೃಶ್ಯ-ದಿವ್ಯ ಶ್ರವಣ ಮುಂತಾದ-ಅನುಭವಗಳಂ ದಿವ್ಯಲೋಕ-ಆಂತರಿಕ ಲೋಕ-ಘನ ಐಶ್ವರ್ಯ ಪ್ರದೇಶ-ಇವುಗಳಿಗೆ ಸಂಬಂಧವನ್ನು ಕಲ್ಪಿಸಂವ-ಸಾಧನಗಳೆಂದು ಅಥವಾ ಈ ಅನಃಭವಗಳು ದೈವೀ ಸಾಕ್ಷಾತ್ಕಾರ ಮಾರ್ಗದಲ್ಲಿ ಸಹಾಯವಾಗಬಲ್ಲ ಉಪಕಾರಕಗಳೆಂದು ತಿಳಿಯಲಾಗುತ್ತದೆ. ಸಾಧಕನಿಗೆ ದರ್ಶನ-ಶ್ರವಣಗಳಾಗಲಿ ಇಲ್ಲವೆ ಹೃದಯದಲ್ಲಿ ಮೂಡಿದ ದೇವ ಮೂರ್ತಿಯಾಗಲಿ, ಜೀವಾತ್ಮನ ಅಂತಃಪ್ರಜ್ಞೆಯನ್ನು ಜಾಗ್ರತಗೊಳಿಸುವಲ್ಲಿ ಪ್ರಥಮ ಹಾಗೂ ಮುಖ್ಯ ವಿಷಯವೆನಿಸುತ್ತದೆ. ವೀರಶೈವ ಶಿವಯೋಗಾನುಭವಿಗೆ ದೂರದರ್ಶನ, ದೂರಶ್ರವಣ, ಮೊದಲಾದ ಅತೀಂದ್ರಿಯ ಅನುಭವಗಳು 'ದೈವೀಲೀಲೆ'ಯಾಗಿ ಗೋಚರಿಸುತ್ತವೆ. ಅವನ ದೃಷ್ಟಿಯಲ್ಲಿ 'ಅಂಡರ್‌ಹಿಲ್'ಳಂ ಹೇಳುವಂತೆ ಮಾನಸಿಕ ಮತ್ತು ಕಾಲ್ಪನಿಕ, ಆಂತರಿಕ ಮತ್ತು ಸ್ಪಷ್ಟ ಮುಂತಾದ ಭೇದಗಳು ಅನುಭವದಲ್ಲಿಲ್ಲ. ಅನುಭಾವಿಯ ಅನಂಭವದ ಬಗ್ಗೆ 'ಅಂಡರ್‌ಹಿಲ್'ಳು ಹೇಳುವಂತೆ ಶಿವಯೋಗಾನುಭವಿಗೆ ಎಂದೆಂದೂ 'ಭ್ರಮೆ' ಎಂಬುದಿಲ್ಲ.

ವೀರಶೈವದರ್ಶನಕ್ಕೆ ಪರಿಶಂದ್ಧವಾದ ಹಾಗೂ ನಿಶ್ಚಿತವಾದ ತತ್ವಶಾಸ್ತ್ರದ ತಳಹದಿ ಇರುವುದರಿಂದ, ವೀರಶೈವ ಅನುಭಾವಿಗಳಂ ಕಾಣುವ ಅತೀಂದ್ರಿಯಾನುಭವಗಳು ಮಾನಸಿಕ ಇಲ್ಲವೆ ಭೌತಿಕ ಪ್ರದೇಶದಿಂದ ಮೂಡಿಬರಂವಂತಹುಗಳಲ್ಲ. ಅಲ್ಲದೆ ಈ ಅನುಭವಗಳು ಆತ್ಮಜ್ಞಾನದ ಅಥವಾ 'ಸತ್ಯದ' ವಾಸ್ತವಿಕಪ್ರಜ್ಞೆಯ ಗಂರುತಾಗಿವೆ. ಎಲ್ಲ ಕಾಲದ ಎಲ್ಲ ದೇಶದ ಅನುಭಾವಿಗಳು ಈ ಅತೀಂದ್ರಿಯಾನುಭವಗಳು ಉತ್ಕೃಷ್ಟ ಲೋಕದಿಂದ ಅವತರಿಸಿದ, ದೈವೀ ಅಸ್ತಿತ್ವದ ದರ್ಶನಗಳೆಂದು ನಂಬುತ್ತಾರೆ. ಸೇಂಟ್‌ಟೆರೆಸಾ ಎಂಬವಳು ಹೀಗೆ ಹೇಳುತ್ತಾಳೆ :

Judging from the brightness in which He (Christ) was pleased to show Himself.............. it would be absurd to suppose that one (The Picture of Christ) bears any resemblance whatever to the other" (Christ seen in the vision)[38]

ಶಿವಯೋಗಿಯ ಅನಂಭವಗಳಲ್ಲಿ ವಿಶೇಷವಾಗಿ ದೀಕ್ಷಾಕಾಲದಲ್ಲಿ ಶಕ್ತಿಪಾತ ಪ್ರಯೋಗದಿಂದ ಉಂಟಾಗುವ ಆತ್ಮದರ್ಶನದ ಅನುಭವವು ಮೊದಲನೆಯದಾಗುತ್ತದೆ. ವಿಶೇಷವಾಗಿ ದೈವೀಪ್ರಜ್ಞೆಯನ್ನು ಜಾಗ್ರತಗೊಳಿಸಬಲ್ಲ ಸಿದ್ಧ ಸದ್ಗುರುವು ಈ ದಿವ್ಯ

---

38 [Evelyn underhill: 'Mysticism' P. 287—289

ಅನುಭವವನ್ನು ದಯಪಾಲಿಸುತ್ತಾನೆ. ಗುರುಕರುಣದಿಂದ ತನಗೆ ಲಭ್ಯವಾದ ಅನುಭವವನ್ನು ಅಲ್ಲಮಪ್ರಭು ಹೀಗೆ ಹೇಳಿಕೊಳ್ಳುತ್ತಾನೆ :

ಗುರುವಿನ ಪರಿ ವಿಪರೀತವಾಯಿತಯ್ಯಾ !
ಭ್ರಮರಕೀಟಕನ್ಯಾಯದಂತಾಯಿತ್ತು,
ಗುರು ತನ್ನ ನೆನೆವನ್ನೆಬರ ಎನ್ನನಾ ಗುರುವ ಮಾಡಿದನು.

....

ಗುರುಶಿಷ್ಯ ಸಂಬಂಧವನರಿಸಲೆಂದು ಹೋದರೆ,
ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ
ಗುಹೇಶ್ವರಾ, ನಿಮ್ಮ ಶರಣನ ಕೈಯಲ್ಲಿ ಲಿಂಗವ ಕೊಟ್ಟರೆ,
ಭಾವ ಬತ್ತಲೆಯಾಯಿತ್ತು,
ಕಾಣಬಾರದ ಲಿಂಗವೆನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮ, ಕೇಳಲಮ್ಮ
ಎನಗಿದು ಸೋಜಿಗ !
ಗೊಹೇಶ್ವರನೆಂಬ ಲಿಂಗ ನಿರಾಕಾರ ಬಯಲು ;
ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮ ಕೇಳಲಮ್ಮ[39]

ಅಮುಗೆಯ ರಾಯಮ್ಮನು ಲಿಂಗದೀಕ್ಷೆಯಿಂದುಂಟಾದ ದಿವ್ಯಾನುಭವವನ್ನು ಹೀಗೆ ಹೇಳಿಕೊಂಡಿದ್ದಾಳೆ :

ಮೊತ್ತದ ಮಾಮರ ಉರಿಯಿಂತ್ತ ಕಂಡೆ
ಉಪ್ಪರಿಗೆ ಬೆಂದು ಕರ್ಪುರವಾದುದ ಕಂಡೆ,
ಬೆಟ್ಟ ಸುಟ್ಟು ಸರ್ಪನ ಶಿರ ಹಱಿದುದ ಕಂಡೆ.
ನೋಡಿ ನೋಡಿ ನಿಮ್ಮ ಕೂಡಿಕೊಂಡೆನಯ್ಯಾ
ಅಮುಗೇಶ್ವರಾ.[40]

ಶಿವಯೋಗಿಯ ದಿವ್ಯಾನುಭವಗಳಲ್ಲಿ ಸದ್ಗಂಧವು ಅನುಪಮವಾದುದು. ಸ್ಫುರಣಾತ್ಮಕವಾದ ಅರಿವಿನಿಂದ ಈ ಅನುಭವವು ಶಿವಯೋಗಿಯಲ್ಲಿ ಉಂಟಾಗುತ್ತದೆ. ಸಿದ್ಧರಾಮ ಶಿವಯೋಗಿಯು ತನ್ನ ಸಾಧನೆಯಲ್ಲಿ ಅನುಭವಿಸಿದ ಸದ್ಗಂಧದ ಅನುಭವವನ್ನು ಹೀಗೆ ಹೇಳಿಕೊಂಡಿದ್ದಾನೆ.

ಅಯ್ಯಾ, ಮನದ ರಜದ ಮಣ್ಣ ಕಳೆದು
ದಯಾ ಶಾಂತಿಯ ಉದಕವ ತೆಗೆವೆನಯ್ಯಾ
ಜಳಕವ ಮಾಡಿ ಯೋಗ ಕಂಪವನಿಕ್ಕಿ ಹೊದೆವೆನಯ್ಯಾ

....

———

39 ಶೂನ್ಯ ಸಂಪಾದನೆ ಸಂಪುಟ 1 ಪ್ರಥಮೋಪದೇಶ, ವ, 48, 49-53

40 ಶಿವಶರಣೆಯರ ವಚನಗಳು : ಅಮುಗೆಯ ರಾಯಮ್ಮನ ವಚನಗಳು—77

....ರಸದ ಕಂಪಕೊಡುವ ಒಡೆಯ ನೀನೇ
ಕಪಿಲಸಿದ್ಧ ಮಲ್ಲಿಕಾರ್ಜುನ

ಆಕಾಶತತ್ವದ ಸ್ಥಾನವಾದ ಮಸ್ತಕದಲ್ಲಿ ಆಧಾರ ಚಕ್ರವಿರುವುದು. ಅದರ ಮಧ್ಯದಲ್ಲಿ "ನಿತ್ಯಾನಂದ ಪರಿಪೂರ್ಣ ಪರಮಾಮೃತ"ಒಸರುತ್ತದೆ—ಎಂಬ ಅನುಭವವು ಅನೇಕ ಶಿವಯೋಗಿಗಳಿಗೆ ಆಗಿದೆ.
ಲಿಂಗಮ್ಮನು ಹೀಗೆ ಹೇಳಿದ್ದಾಳೆ :

"ಆಧಾರ ಒಲಿಯೆ ತೇಜ ಉರಿಹತ್ತಿತ್ತು ;
ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು
ಸಾಸಿರದಳದ ಅಮೃತದ ಕೊಡ ಕಾಯಿತ್ತು ;
ಕಾಯ್ದ ಅಮೃತ ಉಕ್ಕಿ ತೊಟ್ಟಿಕ್ಕಿ, ಅಮೃತವನುಂಡು
ಹಸಿವು ಕೆಟ್ಟಿತ್ತು ; ತೃಷೆಯಡಗಿತ್ತು ; ನಿದ್ರೆಯರತ್ತಿತ್ತು".

... .

ಮಸ್ತಕದಲ್ಲಿಯ ಅಮೃತಕುಂಭವುಕ್ಕಲು ಅಂಗವೆಂಬ ಭೂಮಿಯ ಮೇಲೆ ಮಾನವರು ಶಂಭುಲೋಕಕ್ಕೆ ತೆರಳುವರೆಂದು ಅಕ್ಕಮಹಾದೇವಿಯು ಸಾರಿದ್ದಾಳೆ.

ಅಂಬರದೊಳಗಳ ತುಂಬಿದ ಕೊಡನುಕ್ಕಿ
ಕುಂಭಿನಿಯ ಮೇಲೆ ಸುರಿಯಲು । ಮಾನವರು
ಶಂಭುಲೋಕಕ್ಕೆ ತೆರಳಿದರು.[41]

ಈ ಅಮೃತಸಿದ್ಧಿಯ ಯೋಗವು ಲಿಂಗಾನುಸಂಧಾನಿಗೆ ಸಹಜವಾಗಿ ಲಭಿಸುವಂಥದು. ಸರ್ವಜ್ಞಕವಿಯೂ ಕೂಡ ಮಾನವನ ನೆತ್ತಿಯೊಳಗಡಗಿದ ಅಮೃತರಸದ ಸೂಚನೆಯನ್ನಿತ್ತು—

ನೆತ್ತಿಯೊಳಗಮೃತವನು ಹೊತ್ತಿಹುದು ಜಗವೆಲ್ಲ
ಅತ್ತಿತ್ತ ನೀರ ಬಯಸುವಾ ಯೋಗಿಗಿ
ನ್ನೆತ್ತಣದು ಯೋಗ ಸರ್ವಜ್ಞ

ಎಂದು ಯೋಗಿಗಳನ್ನು ಎಚ್ಚರಿಸಿದ್ದಾನೆ. ಒಂಭತ್ತು ದ್ವಾರಗಳಲ್ಲಿರುವ ವಾಯುವನ್ನು ಬಂಧಿಸಿ ಮಧ್ಯನಾಡಿ ಎನಿಸುವ ಸುಷುಮ್ನೆಯಲ್ಲಿ ಮನವನ್ನು ಉನ್ಮನಗೊಳಿಸಿ ನೋಡಲು ಮಸ್ತಕದಲ್ಲಿರುವ-ಕುಂಭದೊಳಗಿನ ಅಮೃತ ಸುರಿವುದೆನ್ನುತ್ತಾಳೆ ಅಕ್ಕಮಹಾದೇವಿ.

———

41 ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಪದ್ಯ-18

ಒಂಬತ್ತು ದ್ವಾರದ ಇಂಬುಗಳ ಬಲಿವುತ್ತ
ತುಂಬಿ ಸುಷುಮ್ನೆಯೊಳು ಮನವ । ನೋಡಲ್ಕೆ
ಕುಂಭದೊಳಮೃತ ಸುರಿವುದಂ.[42]

ಯೋಗತತ್ತ್ವೋಪನಿಷತ್ತಿನ ಕೊನೆಗೆ ಇದೆ ಬಗೆಯ ಅನುಭವದ ನಿರ್ದೇಶವಿದೆ:

ಕುರ್ವೀತ ಸ್ವಪಾಣಿಪಾದಾದಿ ಶಿರಶ್ಚಾತ್ಮನಿ ಧಾರಯೇತ್ ।
ಏವಂ ದ್ವಾರೇಷು ಸರ್ವೇಷು ವಾಯುಂಪೂರಿತರೇಚಿತಃ ।
ಘಟಮಧ್ಯೇ ಯಥಾ ದೀಪೋ ನಿವಾತಂ ಕುಂಭಕಂ ವಿದುಃ ।
ನಿಷಿದ್ಧೈರ್ನವಭಿರ್ದ್ವಾರೈರ್ನಿರ್ಜಿತೇ ನಿರುಪದ್ರವೇ ।
ನಿಶ್ಚಿತಂ ತ್ವಾತ್ಮಮಾತ್ರೇಣಾವಶಿಷ್ಟಂ ಯೋಗಸೇವಯಾ ॥

ಸಹಸ್ರದಳಪದ್ಮದಲ್ಲಿರುವ ಅಮೃತವನ್ನು ಕುರಿತು ಅಲ್ಲಮಪ್ರಭುದೇವನು ಹೀಗೆ ಹೇಳಿದ್ದಾನೆ.

....
"ಉನ್ಮನಿಜ್ಯೋತಿ ಬ್ರಹ್ಮರಂಧ್ರದಲ್ಲಿ ಸಹಸ್ರದಳ ಪದ್ಮ ;
ಅಲ್ಲಿ ಅಮೃತವಿಹುದು ಅಲ್ಲಿ ಓಂಕಾರ ಸ್ವರೂಪವಾಗಿ
ಗುಹೇಶ್ವರನು ಸದಾ ಸನ್ನಿಹಿತನು"
.. .. "ಅಮೃತಬಿಂದುವಿನ ರಸವ ದಣಿಯಲುಂಡು
ಪಶ್ಚಿಮದಲ್ಲಿ ಗುಹೇಶ್ವರಲಿಂಗವ ಸ್ವೀಕರಿಸಿತ್ತಲ್ಲಾ" [43]

ತೋಂಟದ ಸಿದ್ಧಲಿಂಗ ಶಿವಯೋಗಿಯು ಇದೇ ಅನುಭವವನ್ನು ಹೇಳಿಕೊಂಡಿದ್ದಾನೆ.

'........ ಪಿಂಡ ಕರಗಿ ಅಖಂಡಮಯನಾದೆನು
ಅಮೃತಬಿಂದುವ ಸೇವಿಸಿ ನಿತ್ಯಾನಿತ್ಯವ ಗೆದ್ದು
ನಿರ್ಮಲ ನಿರಾವರಣನಾದೆನು [44]

ವೀರಶೈವ ಅನುಭಾವಿಗಳು ತಮ್ಮ ಆಂತರಿಕ ದೃಕ್‌ಶಕ್ತಿಯಿಂದ ಪರಬ್ರಹ್ಮದರ್ಶನವನ್ನು ಗುರುರೂಪದಲ್ಲಿ, ಸೂರ್ಯ, ಚಂದ್ರ, ನಕ್ಷತ್ರ, ಮಣಿ, ಮುತ್ತುಗಳ ಪ್ರಕಾಶರೂಪದಲ್ಲಿ ಕಂಡಿದ್ದಾರೆ ; ಅನುಪಮ, ಅಗಣಿತ ಪ್ರಕಾಶವನ್ನು ಕಂಡಿದ್ದಾರೆ. ಸರ್ವವ್ಯಾಪಿಯೂ ಅಗೋಚರಸ್ವರೂಪನೂ ಆದ ಪರಶಿವನು ಅಕ್ಕಮಹಾದೇವಿಗೆ

'ಆಕಾಶದೊಳಗಿನ ಜ್ಯೋತಿಯ ಪ್ರಭೆ'ಯಾಗಿ,
'ಬಟ್ಟಬಯಲುಗೊಂಡು ಮುಟ್ಟಬಾರದ ಘನವಾಗಿ,

———

42 ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಪದ್ಯ 21
43 ಅಲ್ಲಮಪ್ರಭುದೇವರ ವಚನಗಳು—105, 297.
44 ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳು ವ. 380

'ಕೋಟಿ ರವಿಶಶಿಗಳಿಗೆ ಮೀಟದ ಪ್ರಭೆ'ಯಾಗಿ ತೋರಿದ್ದಾನೆ. ಬಸವೇಶ್ವರನ ಮಡದಿ ನೀಲಮ್ಮನು ತನ್ನ ಹೃದಯಸ್ಥಾನದಲ್ಲಿ ಜ್ಯೋತಿಯನ್ನು ಕಂಡಿದ್ದಾಳೆ.

ಹೃದಯ ಮಧ್ಯದೊಳೊಂದಂ ಜ್ಯೋತಿಯ ಮನೆ ಹುಟ್ಟಿತ್ತು ....
ಆ ಜ್ಯೋತಿಯ ಮನೆಯಲ್ಲಿ ಮರುಜೀವಣಿಯ ಕುಡಿ
ಹೆಸರಿಲ್ಲದ ರೂಪಾಯಿತ್ತು ಬಸವಂಗೆ ಸಂಗಯ್ಯಾ[54]

ಪ್ರಭುದೇವನು ಭ್ರೂಮಧ್ಯಸ್ಥಾನದಲ್ಲಿ ನಕ್ಷತ್ರ ಮಾಲೆಯನ್ನೆ ಕಂಡಿದ್ದಾನೆ [46]

ಚೆನ್ನಬಸವಣ್ಣನು ವಿದ್ಯುತ್ತನ್ನು, ಚಂದ್ರ ಸೂರ್ಯರನ್ನು, ದೀಪವಿಲ್ಲದ ಪರಮ ಪ್ರಕಾಶವನ್ನು ಅನುಭವಿಸಿದ್ದಾನೆ. [47]

ತೋಂಟದ ಸಿದ್ಧಲಿಂಗ ಶಿವಯೋಗಿಯ ಬೆಡಗಿನ ಅನುಭವ ಹೀಗಿದೆ :

ಊರೊಳಗನೇಕ ಜ್ಯೋತಿಯ ಕಂಡೆ
ಬಾಗಿಲೊಳಗೆ ನವರತ್ನವ ಕಂಡೆ
ಮೇಲಣ ಮಾಣಿಕಕ್ಕೆ ಬೆಲೆಯಿಂಡಲಾರಳವಲ್ಲ ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ! [48]
ಎನ್ನ ಬ್ರಹ್ಮರಂಧ್ರದಲ್ಲಿ ತೊಳಗಿ ಬೆಳಗುವ ಪರಂಜ್ಯೋತಿ ನೀನೆ
ಎನ್ನ ಅಂತರಂಗದೊಳಗಣ ಆತ್ಮಲಿಂಗ, ಅನಂತ ಜ್ಯೋತಿಯಂತಿಪ್ಪುದಂ

ಲಿಂಗದ ಧ್ಯಾನದಿಂದ ಸದಮಲ ಜ್ಞಾನವನ್ನು ಪಡೆದು ಚಿದಾಕಾಶದಲ್ಲಿ ಉದಿಸಿದ ಚಿತ್ತ ಸೂರ್ಯನ ಪ್ರಭೆಯನ್ನು ಸಿದ್ಧರಾಮನು ಹೀಗೆ ವರ್ಣಿಸಿದ್ದಾನೆ.

ಇದಿರಿಟ್ಟು ನಾ ಬಂದು ಸದಮಲಜ್ಞಾನವ ಕಂಡೆ।
ಉದಯಾದ್ರಿಯಲಿ ಜ್ಯೋತಿಬೆಳಗಿತೆಂದು ।
ಆ ಬೆಳಗಿನ ಕೃಪೆಯಿಂದ ಈ ಬೆಳಗ ನಾ ಕಂಡಂ ।
ಆನು ನೀನಾದೆನ್ನೈ ಯೋಗಿನಾಥಾ [49]
ಬಸವಣ್ಣನಂ ಬೆಳಗಿನೊಳಗಣ ಮಹಾ ಬೆಳಗಿನ ಅನುಭವ ಪಡೆದಿದ್ದಾನೆ :
ಬೆಳಗಿನೊಳಗಣ ಬೆಳಗು ಮಹಾಬೆಳಗಂ
ಶಿವಶಿವಾ ಪರಮಾಶ್ರಯವೇ ತಾನಾಗಿ

---

45 ಶಿವಶರಣೆಯರ ವಚನಗಳು (ನೀಲಮ್ಮನ ವ. 118)
46 ಅಲ್ಲಮಪ್ರಭುದೇವರ ವ. 258
47 ಚೆನ್ನಬಸವಣ್ಣ ಮಂತ್ರಗೊಪ್ಯ ಪ.25,35.
48 ತೊಂಟದ ಸಿದ್ಧಲಿಂಗ ಶಿವಯೋಗಿಗಳ ವಚನ ವ. 375,–367
49 ಸಿದ್ಧರಾಮೇಶ್ವರ ಯೋಗಾಂಗ ತ್ರಿವಿಧಿ ಪದ್ಯ 82

ಶತಪತ್ರ ಕಮಲ ಕರ್ಣಿಕಾಮಧ್ಯದಲ್ಲಿ
ಸ್ವತಂತ್ರ ಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವ !

ಹೀಗೆ ಶರಣರು ಶಿವಯೋಗಿಗಳು ತಮ್ಮ ತಮ್ಮ ನಿಲವಿಗನುಸರಿಸಿ ಪರಶಿವತತ್ವಸ್ವರೂಪವನ್ನು ಮಾಹಾಪ್ರಭೆಯ ರೂಪದಲ್ಲಿ ಕಂಡಿದ್ದಾರೆ. ಈ ಪ್ರಭೆ ಹೃದಯ, ಭ್ರೂಮಧ್ಯ, ಸಹಸ್ರಾರ, ಶಿಖಾ ಚಕ್ರಗಳಲ್ಲಿ ಕಾಣಿಸಿಕೊಂಡಿದೆ. ಇಂತಹ ಸ್ವಾನುಭಾವದ ಆಳದಲ್ಲಿ ತಮ್ಮನ್ನು ಮರೆತು ಶಿವಸ್ವರೂಪವೇ ತಾವಾಗಿ ಬೆಳಗಿದ್ದಾರೆ.

ಮಧುರ ದೈವೀಸ್ಪರ್ಶವು ಶಿವಾನುಭವಿಗಳ ಅನಂಭವಕ್ಕೆ ಬಂದಿರುವುದಂ ತಿಳಿದು ಬರುತ್ತದೆ. 'ಶರಣಸತಿ ಲಿಂಗಪತಿ' ಭಾವದ ವಚನಗಳು ಈ ದಿವ್ಯಾನುಭವವನ್ನು ನಿವೇದಿಸುತ್ತವೆ. ಅಕ್ಕಮಹಾದೇವಿಯ ಭಾವಸಮಾಧಿಯಲ್ಲಿ ಕಂಡ ಅನುಭವ ಹೀಗಿದೆ.

ಅಕ್ಕ ಕೇಳೇ, ಅಕ್ಕಯ್ಯಾ ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಓಲೆ ತೆಂಗಿನ ಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸಂಲಿಪಲ್ಲ ಗೊರವನು
ಭಿಕ್ಷಕೆ ಮನೆಗೆ ಬಂದುದ ಕಂಡೆನವ್ವಾ
ಮಿಕ್ಕು ಮೀರಿ ಹೋಹಸ ಬೆಂಬತ್ತಿ ಕೈವಿಡಿದೆನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು[50]

ಗಜೇಶಮಸನಯ್ಯ ಹಾಗೂ ಉರಿಲಿಂಗದೇವ ಎಂಬ ಶರಣರು ದೈವೀಸ್ಪರ್ಶದ ಅನಂಭವವನ್ನು ಸತೀಭಾವದಿಂದ ಅನುಭವಿಸಿದ್ದಾರೆ.

'ಇಂಬಿನ ಚುಂಬನವಮೃತಾಹಾರ, ಆಲಿಂಗನವೇ ಆಭರಣ
ಸೋಂಕೇ ಸುವಸ್ತ್ರ. ನೋಟವೆ ಕೂಟ
ಒಡನಾಟವೇ ಅಷ್ಟಭೋಗವೆನಗೆ,
ಉರಿಲಿಂಗದೇವನ ಕೂಟ ಪರಾತ್ಪರ ವಾಙ್ಮನಾತೀತ....
ಪರಮಸುಖವನೇನೆಂಬನವ್ವ ! [51]

....

.... ಎನ್ನಕಾಯದ ಸುಖಭೋಗವ,
ಲಿಂಗವೆ ಭೋಗಿಸುವನಾಗಿ ಶರಣಸತಿ ಲಿಂಗಪತಿಯಾದೇನು [52]

ಎಂದು ಅಕ್ಕಮಹಾದೇವಿಯು ಹಾಡಿಕೊಂಡಿದ್ದಾಳೆ.

ನಿಜಗುಣ, ಸರ್ಪಭೂಷಣ, ಚೆನ್ನಸದಾಶಿವ ಶಿವಯೋಗಿ, ಸಪ್ತಕಾವ್ಯದ ಗುರುಬಸವ, ತೋಂಟದ ಸಿದ್ಧಲಿಂಗ ಶಿವಯೋಗಿ ಮುಂತಾದವರು ಪೂರ್ವದ ಯೋಗಗಳಾದ

---

50 ಶಿವಶರಣೆಯರ ವಚನಗಳು (ಅಕ್ಕಮಹಾದೇವಿಯ ವ. 262)
51 ಉರಿಲಿಂಗದೇವನ ವಚನ. ವ. 46
52 ಶಿವಶರಣೆಯರ ವಚನಗಳು (ಅಕ್ಕಮಹಾದೇವಿಯ ವ. ೨೪೩)

ಮಂತ್ರ, ಲಯ, ಹಠ. ರಾಜಯೋಗಗಳ ಪ್ರಭಾವಕ್ಕೊಳಗಾಗಿ ತಮ್ಮ ದಿವ್ಯಾನುಭವಗಳನ್ನು ನಾದ–ಬಿಂದು(Form)–ಕಳಾ (Light) ಮುಂತಾದ ಪಾರಿಭಾಷಿಕ ಪದಗಳಲ್ಲಿ ಹಾಡಿಕೊಂಡಿದ್ದಾರೆ. ತಮ್ಮ ಶಿವಯೋಗದ ಪರಾಕಾಷ್ಠೆಯನ್ನು ಮುಟ್ಟಲು ಅವರು ಸೂರ್ಯ ಚಂದ್ರನಾಡಿಗಳನ್ನು ಬಂಧಿಸಿದ್ದಾರೆ. ಕುಂಭಕಮಾಡಿ, ಆಧಾರದಲ್ಲಡಗಿದ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿದ್ದಾರೆ ; ಆಗ ಆಧಾರ ಮೊದಲಾಗಿ ಪಶ್ಚಿಮ ಕಡೆಯಾದ ನವಚಕ್ರಗಳಲ್ಲಿ ಭ್ರಮರ, ವೀಣಾ. ಘಂಟಾ. ಭೇರಿ, ಮೇಘ, ಪ್ರಣವ, ದಿವ್ಯ ಸಿಂಹ ಮತ್ತು ಮಹಾನಾದಗಳೆಂಬ ಒಂಭತ್ತು ನಾದಗಳನ್ನು ಕೇಳಿದ್ದಾರೆ. ಹಳದಿ, ಬಿಳಿ, ಕೆಂಪು, ಹಸಿರು, ಕಪೋತ, ಎಳೆಮಿಂಚು ಜ್ಯೋತಿ, ಮಹಾಜ್ಯೋತಿ, ಅಗಣಿತ ಜ್ಯೋತಿ ಎಂಬ ಜ್ಯೋತಿಗಳನ್ನು ಕಂಡಿದ್ದಾರೆ. ಒಂಭತ್ತು ದ್ವಾರಗಳಲ್ಲಿರುವ ವಾಯುವನ್ನು ಬಂಧಿಸಿ, ಮಧ್ಯನಾಡಿ ಎನಿಸುವ ಸುಷುಮ್ನೆಯಲ್ಲಿ ಮನವನ್ನು ಉನ್ಮನಗೊಳಿಸಿ ಮಸ್ತಕದಲ್ಲಿರುವ ಅಮೃತವನ್ನು ಆಸ್ವಾದಿಸಿದ್ದಾರೆ.

....'ನಾದಬಿಂದು ಕಳಾಭೇದವ ತಿಳಿದಲ್ಲದೆ........[53]

ರಾಜಯೋಗಿಯಾಗಬಾರದು'

ಎಂದಿದ್ದಾರೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳು. ಈ ಅನುಭವವನ್ನು ಸರ್ಪಭೂಷಣ ಶಿವಯೋಗಿಗಳು ಅನುಭವಿಸಿದ್ದಾರೆ.[54]

ಈ ರೀತಿಯಾಗಿ ಭಕ್ತಿ ಕ್ರಿಯಾ ಜ್ಞಾನಗಳ ಸಂಗಮದಿಂದ ಶಿವಯೋಗಿಯು ತನ್ನ ಆತ್ಯಂತಿಕ ಸಾಮರಸ್ಯದ ಅನುಭವವನ್ನು ಪಡೆಯುತ್ತಾನೆ. ತಾನೇ ಭಕ್ತ, ತಾನೇ ಲಿಂಗ ತಾನೇ ಜಂಗಮನಾಗಿ, ತಾನೆ ಪೂಜ್ಯ, ತಾನೇ ಪೂಜಕನಾಗುತ್ತಾನೆ. ಅಂತಃ ಪ್ರಕಾಶದ ಚಿದ್ಬೆಳಗಿನಿಂದ ಅಂಗ ಕರಣಂಗಳೆಲ್ಲ ಪಾರದರ್ಶಕವಾಗಿ ಮಾರ್ಪಡುತ್ತವೆ. ಪರಶಿವನ ಪ್ರಭೆ ತುಂಬಾ ತುಂಬಿ ಲಿಂಗಕಿರಣಗಳಾಗಿ ಹೊರಹೊಮ್ಮುತ್ತವೆ. ಇಷ್ಟಲಿಂಗ, ಪ್ರಾಣ ಲಿಂಗ. ಭಾವಲಿಂಗ ಪೂಜೆಯಿಂದ ಕೂಡಿದ ಅನುಸಂಧಾನಿಗೆ ಸಿದ್ಧಿ ವೃದ್ಧಿಗಳನ್ನು ಒದಗಿಸುತ್ತದೆ, ಈ ಸೂಚನೆಯನ್ನು ಸಿದ್ಧರಾಮ ಶಿವಯೋಗಿ ಕೊಡುತ್ತಾನೆ.

"ಇಷ್ಟಲಿಂಗ ಪೂಜೆಯದು ಅಷ್ಟೈಶ್ವರ್ಯಪ್ರದವಾಯಿತ್ತು
ಪ್ರಾಣಲಿಂಗ ಪೂಜೆಯದು ಅಖಂಡ ಚಿದೈಶ್ವರ್ಯಪ್ರದವಾಯಿತ್ತು
ಭಾವಲಿಂಗ ಪೂಜೆಯದು ನಿರ್ಭಾವ ನಿಜಾನಂದ ವಸ್ತುಸ್ವರೂಪ
ವಾಯಿತ್ತು
ಕೇಳಾ, ಕಪಿಲಸಿದ್ಧ ಮಲ್ಲಿಕಾರ್ಜುನಾ"

ಸಕಲಯೋಗಗಳಲ್ಲಿ ಸಿದ್ಧಿಯನ್ನು ಗಳಿಸಿ ಷಟ್‌ಸ್ಥಲಸಿದ್ಧಾಂತಕ್ಕೆ ಆ ಅನಂ

---

53 ತೋಂಟದಸಿದ್ಧಲಿಂಗ ಶಿವಯೋಗಿ ವ. 372

54 ಸರ್ಪಭೂಷಣ ಶಿವಯೋಗಿಗಳು : ಕೈವಲ್ಯ ಕಲ್ಪವಲ್ಲರಿ. ಪದ್ಯ 8–11

ಭವವನ್ನು ಪರಿವರ್ತಿಸಿ ಆಯಾಚಕ್ರಗಳ ಅನುಭವವನ್ನು ಶಿವಯೋಗಾನುಸಂಧಾನದಲ್ಲಿ ಕಂಡವರು ಉಂಟು. ಅಭ್ಯಾಸಯೋಗವು ಆಯಾಸವೆಂದೂ ಶಿವಯೋಗ ಸಹಜವೆಂದೂ ಬಲ್ಲವರುಂಟು. ಮಂಗಲಗುಣಗಳ ಸಹಜ ಸಂಪಾದನೆಯಿಂದ, ಷಟ್ ಚಕ್ರಗಳ ಅಭ್ಯಾಸದಿಂದೊದಗುವ ಸಿದ್ಧಿ—ಶಕ್ತಿಗಳು ಸಾಧ್ಯವಾಗುವುದೆಂಬುದನ್ನು ಶಿವಯೋಗಿಸಿದ್ಧರಾಮನು ತಿಳಿಸಿದ್ದಾನೆ.

....ಆಧಾರಸ್ವಾಧಿಷ್ಠಾನ............
ಆದಿಯನ್ನುಳ್ಳುದೆ ಆಧಾರ ; (ಆಧಾರವ) ಕೂಡಿಪ್ಪುದೆ ಸ್ವಾಧಿಷ್ಠಾನ ;
ಮಣಿಯ ಬೆಳಗಿನಲ್ಲಿಪ್ಪುದೆ ಮಣಿಪೂರಕ ; ಆಸೆಯಿಲ್ಲದುದೆ ಅನಾಹತ,
ಅಲ್ಲ ಆಹುದೆಂಬುದನತಿಗಳೆದಿಹುದೆ ವಿಶುದ್ಧಿ ;
ಸರ್ವಜೀವಂಗಳಲ್ಲಿ ದಯಾವನುಳ್ಳುದೆ ಆಜ್ಞೆ ;
ಇಂತಪ್ಪುದೀಗ ಶಿವಯೋಗ
ಉಳಿದ ಅಭ್ಯಾಸಯೋಗಿಗಳ ಕಂಡು ನಗುಂತಿರ್ದೆನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ [55]

ಸಿದ್ಧರಾಮ ಶಿವಯೋಗಿಯು ತನ್ನ ಷಟ್‌ಚಕ್ರಗಳ ಜ್ಞಾನವನ್ನು ಷಟ್‌ಸ್ಥಲಗಳಿಗೆ ತಿರುಗಿಸಿ ಶರಣನ ಮುಕ್ತಿಯ ಸಾಧನೆಯನ್ನು ನಿರೂಪಿಸಿದ್ದಾನೆ. ಸಮದೃಷ್ಟಿಯಿಂದ ಭಕ್ತ ; ವಿಷಯಗಳು ಅಳಿವುದರಿಂದ ಮಹೇಶ ; ಶಿವಕರುಣವಿಡಿವುದರಿಂದ ಪ್ರಸಾದಿ, ಅಂಗೇಂದ್ರಿಯಗಳಳಿವುದರಿಂದ ಪ್ರಾಣಲಿಂಗಿ, ಸಂಕಲ್ಪ ವಿಕಲ್ಪ ಹರಿವುದರಿಂದ ಶರಣ, ಪರಮಾತ್ಮನ ಸಾಮರಸ್ಯವನ್ನರಿವುದರಿಂದ ಐಕ್ಯನಾಗುವನೆನ್ನುತ್ತಾನೆ ಸಿದ್ಧರಾಮ.[56] ಷಟ್‌ಸ್ಥಲಗಳ ಸಂಕ್ಷಿಪ್ತವೂ ಸುಂದರವೂ ಆದ ವರ್ಣನೆಯನ್ನು ಚೆನ್ನಬಸವಣ್ಣನು ಹೀಗೆ ಕೊಂಡಾಡುತ್ತಾನೆ.

"ಕಿಂಕುರ್ವಾಣತೆಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ
ನಿಷ್ಠೆ ನಿಬ್ಬರಿಸಿ ಗಟ್ಟಿಗೊಂಡು, ಅಭಿಲಾಷೆ ಸಮನಿಸದೆ,
ಪರಿಚ್ಛೇದಬುದ್ಧಿಯುಳ್ಳಲ್ಲಿ ಮಹೇಶ್ವರ
ಅನರ್ಪಿತವ ಸಮನಿಸದೆ, ಬಂದುದ ಕಾಯದ ಕರಣದ ಕೈಯಲ್ಲಿ ಕೊಟ್ಟು
ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ
ಪ್ರಾಣಕ್ಕೆ ಪ್ರಾಣವಾಗಿ. ಕಾಲಸ್ಥಿತಿಯನ್ನರಿದು
ಎಚ್ಚರಿಕೆಗುಂದದಿಪ್ಪಲ್ಲಿ ಪ್ರಾಣಲಿಂಗಿ,

---

55 ಸಿದ್ಧರಾಮ ಶಿವಯೋಗಿಗಳ ವಚನ 1047
56 „ „ „ ವ. ೧೫೩ ೧೫೪

ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ,
ಹೆಚ್ಚು ಬೇರಿಲ್ಲದಿರ್ದೊಡೆ ಶರಣ
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ
ಹೆಸರಡಗಿದ ಸುಖವದು ಲಿಂಗೈಕ್ಯ [57]

ಹೀಗೆ ಷಟ್‌ಸ್ಥಲಸಿದ್ಧಾಂತ ಹಾಗೂ ಶಿವಯೋಗಸಾಧನೆಗಳು ಶಿವಯೋಗಿಗಳ ಜೀವನದ ಆದರ್ಶಗಳಾಗಿವೆ. ವಿಶ್ವಧರ್ಮದ ಉದಾರತತ್ತ್ವವನ್ನು ಪಡೆದ ವೀರಶೈವ ಶಿವಯೋಗವು ಶಿವಶರಣರು ಹಾಗೂ ನಂತರದ ಶಿವಯೋಗಿಗಳ ದಿವ್ಯ ಜೀವನದ ಸಾರವನ್ನು ಎತ್ತಿ ತೋರಿಸುತ್ತದೆ. ಆಕಾಶದಂತೆ ನಿರಾಕಾರವೆನಿಸುವ ಪರ ಮಾತ್ಮ ತತ್ತ್ವವನ್ನು ತನ್ನ ಭಾವಘನತೆಯಿಂದ ಸಾಕಾರವಾಗಿ ಮಾಡಬಲ್ಲಾತನೇ ಯೋಗಿ, ಸಾಕಾರವನ್ನು ನಿರಾಕಾರವಾಗಿ ಪರಿವರ್ತಿಸಬಲ್ಲಾತನೇ ಯೋಗಿ. ನಿರಾಕಾರ ದಲ್ಲಿಯೂ ಬಯಲಿದೆ, ಸಾಕಾರದಲ್ಲಿಯೂ ಬಯಲಿದೆ. ಈ ಎರಡೂ ಬಯಲು ಗಳನ್ನು ಸಮರಸಗೊಳಿಸಿ ಪಾರಲೌಕಿಕ ಸ್ಥಿತಿಯಲ್ಲಿ ಉಳಿಯಬಲ್ಲಾತನೇ ಶಿವಯೋಗಿ.

ಈ ಬಗೆಯ ದಿವ್ಯಶಿವಯೋಗಿಯ ನಿಲುವು ೧೨ನೆಯ ಶತಮಾನದ ಅಲ್ಲಮ ಪ್ರಭುದೇವನಿಗೆ ಸಾಧ್ಯವಾಗಿತ್ತೆಂದು ಗೊತ್ತಾಗುತ್ತದೆ. ಅವನು ಬಯಲುಗ, ಬಯಲು ಶರೀರಿ, ವ್ಯೋಮಮೂರ್ತಿಯಾಗಿದ್ದನೆಂದು ಆತನ ಸಮಕಾಲೀನ ಶರಣರು ಹಾಗೂ ನಂತರದ ಚಾಮರಸಾದಿ ಕವಿಗಳು ಉಲ್ಲೇಖಿಸಿದ್ದಾರೆ.

"ಆಕಾಶವ ಪಾಷಾಣ ಮಾಡಬಲ್ಲಾದಡೆ ಯೋಗಿ
ಪಾಷಾಣ ಆಕಾಶ ಮಾಡಬಲ್ಲಾದಡೆಯೋಗಿ
ಆಕಾಶದಲ್ಲಿಯ ಬಯಲು ಪಾಷಾಣದಲ್ಲಿಪ್ಪುದು
ಏಕೀಯವಾಗಬಲ್ಲಾದಡೆ ಶಿವಯೋಗಿ"
ಕಪಿಲಸಿದ್ಧಮಲ್ಲಿಕಾರ್ಜುನ ಆತನ ನೋಡಾ ! [58]

ಎಂದಿದೆ. ಸಿದ್ಧರಾಮಶಿವಯೋಗಿಯ ದಿವ್ಯಧ್ವನಿ !

ಹೀಗೆ ನಿರ್ವಿಕಲ್ಪ ಅದ್ವೈತದಲ್ಲಿ ಮೈಮರೆದು 'ಬೆಳಗಿನೊಳಗಣ ಬೆಳಗಾಗಿ ನಿಂದ ಶರಣರೂ ಶಿವಯೋಗಿಗಳೂ ಆಚರಿಸಿದ ಶಿವಯೋಗಸಾಧನೆ ಅಪೂರ್ವವಾದುದು ! ಸುಲಭಸುಂದರವಾದುದು ! ಸಹಜದ ನಿಬ್ಬೆರಗಿನಿಂದ ಕೂಡಿದುದು !

೦—೦

57 ಚೆನ್ನಬಸವಣ್ಣನವರ ವಚನಗಳು ೯೩೪೧.
58 ಸಿದ್ಧರಾಮೇಶ್ವರ ವಚನಗಳು ೧೧೪೦.

ಅನುಭವ ಮಂಟಪದ ಶಿವಶರಣೆಯರು

ಶ್ರೀಮತಿ ಎಸ್. ಎಂ. ಶ್ರುತಿ

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿದ ವೀರಶೈವ ಧರ್ಮ ನಾಡಿನಲ್ಲೆಲ್ಲಾ ಅತೀವ ಧರ್ಮ ಜಾಗೃತಿಯನ್ನುಂಟು ಮಾಡಿತು. ಇದು ಶೈವಧರ್ಮದ ಸಾರವನ್ನು ಹೀರಿಕೊಂಡು ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ. ಈ ಧರ್ಮಕ್ಕೆ ಭದ್ರ ಬುನಾದಿ ದೊರೆತದ್ದು ಬಸವಣ್ಣನವರ ಕಾಲದಿಂದಲೇ ಎಂದು ಹೇಳಬಹುದು. ವೀರಶೈವ ಧರ್ಮಕ್ಕೆ ಸಾರ್ವತ್ರಿಕ ಸ್ವರೂಪ ಕೊಡುವುದಕ್ಕೆ ವೀರಶೈವ ಮತೋದ್ಧಾರಕ, ಯುಗಪ್ರವರ್ತಕ ಬಸವಣ್ಣ 12ನೇ ಶತಮಾನದಲ್ಲಿ "ಅನುಭವ ಮಂಟಪ" ವನ್ನು ಸ್ಥಾಪಿಸಿದರು.

ಬಸವಣ್ಣನ ಮತ್ತೊಂದು ಮಹತ್ಕಾರ್ಯವೆಂದರೆ ಸಮಾಜದಲ್ಲಿ ಸ್ತ್ರೀಯರಿಗೆ ಪುರುಷ ಸಮಾನ ಸ್ಥಾನಮಾನಗಳನ್ನು ದೊರಕಿಸಿಕೊಟ್ಟದ್ದು. 12ನೇ ಶತಮಾನದ ಮೊದಲುಭಾರತದ ಇತಿಹಾಸವು ಸ್ತ್ರೀಯರನ್ನು ಉದ್ದಕ್ಕೂ ಕಡೆಗಣಿಸಿದ್ದೇ ಆಗಿದೆ.ಆದರೆ ಬಸವಣ್ಣನವರು "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಪ್ರಾಚೀನೋಕ್ತಿಯನ್ನು ಸುಳ್ಳಾಗಿಸಿ, ಹೆಣ್ಣನ್ನು ಬಾಹ್ಯ ವಿಷಯಗಳಿಂದ ಕಳಚಿ ಅವಳಿಗೆ ಬೌದ್ಧಿಕವಾಗಿ ಮನ್ನಣೆ ನೀಡಿ, ಕ್ರಿಯಾಶಕ್ತಿಯನ್ನು ಗುರುತಿಸಿದರು. ಹೆಣ್ಣೆಂಬ ಭೇದವೆಣಿಸದೆ ಆಧ್ಯಾತ್ಮಿಕ ಸಾಮಾಜಿಕ ಸ್ವಾತಂತ್ರ್ಯಗಳನ್ನು ನೀಡಿ, ಧಾರ್ಮಿಕ, ಸಾಮಾಜಿಕವಾಗಿ ಕೀಳೆಂದು ಭಾವಿಸಿದ ಹೆಣ್ಣನ್ನು ಶರಣರು ಗೌರವದಿಂದ ಕಂಡರು. "ಪರವಧುವನು ಮಹಾದೇವಿ ಎಂಬೆ" ಎಂದು ಬಸವಣ್ಣನವರು ತಮ್ಮ ವಚನದಲ್ಲಿ ಹೇಳಿದ್ದಾರೆ. ಶೂನ್ಯ ಸಿಂಹಾಸನಾಧೀಶ್ವರರಾದ ಪ್ರಭುದೇವರು "ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ" ಎಂದು ಹೇಳಿ ಜನಸಾಮಾನ್ಯರಲ್ಲಿ ಹೆಣ್ಣಿನ ಬಗೆಗಿದ್ದ ತಿರಸ್ಕಾರಭಾವವನ್ನು ತೊಡೆದು ಹಾಕಿದರು. ಕರ್ಮಯೋಗಿ ಸಿದ್ಧರಾಮೇಶ್ವರನು 'ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಭಾವಿಸಿದ್ದರು. ಬಸವಣ್ಣನವರು ತಾವು ರೂಪಿಸಿದ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನ ಅವಕಾಶವನ್ನು ಕಲ್ಪಿಸಿಕೊಟ್ಟರು. ಅನೇಕ ಜನ ಮಹಿಳೆಯರು ಈ ಸದವಕಾಶವನ್ನು ಉಪಯೋಗ ಪಡಿಸಿಕೊಂಡರು. ಆಧ್ಯಾತ್ಮಿಕ ಜ್ಞಾನವನ್ನು ಪಡೆಯಬೇಕೆನ್ನುವ ನೂರಾರು

ಮಹಿಳೆಯರು ಇಷ್ಟಲಿಂಗವನ್ನು ಧರಿಸಿದರು. ಸತ್ಯಶುದ್ಧ ಕಾಯಕ ನಿರತರಾದರು. ಹಲವಾರು ಶಿವಶರಣೆಯರು ಅನುಭವ ಮಂಟಪದಲ್ಲಿ ಭಾಗವಹಿಸಿದರು. ಶಿವಯೋಗ ಮಾರ್ಗದಲ್ಲಿ ಬಲ್ಲವರಾದ ಶಿವಶರಣೆಯರು ಅನುಭವ ಮಂಟಪದಲ್ಲಿ ಶಿವಾನುಭವ ಗೋಷ್ಠಿಯಲ್ಲಿ ಶಿವಶರಣೆಯರೊಂದಿಗೆ ಪುರುಷ ಸಮಾನತೆಯಿಂದ ಚರ್ಚೆ ನಡೆಸುತ್ತಿದ್ದರು. ವಿಚಾರಮಂಥನದಿಂದ ಹೊರಹೊಮ್ಮಿದ ಲೋಕಾನುಭವಗಳನ್ನು ಒಂದುಕೂಡಿಸಿಕೊಂಡು ಶಿವಶರಣೆಯರು ತಿಳಿಗನ್ನಡದಲ್ಲಿ ವಚನಗಳನ್ನು ರಚಿಸಿದ್ದಾರೆ. ಇದರ ಪರಿಣಾಮವಾಗಿ ಸ್ತ್ರೀಯರಲ್ಲಿ ಹೊಸ ಜಾಗೃತ ಚೈತನ್ಯ ಉದಯವಾಯಿತು. ಅಂತರಂಗದಲ್ಲಿ ಸುಪ್ತವಾಗಿದ್ದ ಅವರ ಅರಿವು ಜಾಗೃತವಾಯಿತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ತ್ರೀಯರು ಮುಂದುವರಿದು ಕಾರ್ಯ ಕೈಗೊಂಡರು. ಒಂದು ಕಾಲಕ್ಕೆ ಮಾಯೆ ಎಂದೆನಿಸಿಕೊಂಡಿದ್ದ ಹೆಣ್ಣೇ ಮಾಯಾಬಂಧನವನ್ನು ಹರಿದೊಗೆವ ಸೂತ್ರವನ್ನು ಸ್ವಾನುಭವದಿಂದ ಆರಂಭಿಸಿದಳು. ಇದಕ್ಕೆ ಸಾಕ್ಷಿಯಾಗಿ ಅನೇಕ ಶರಣೆಯರ ವಚನಗಳು ಇವೆ.

ಇಂಥ ಮಹಿಳಾ ವಚನಕಾರ್ತಿಯರಲ್ಲಿ ಅಕ್ಕನಾಗಮ್ಮ, ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ಮೋಳಿಗೆ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಇನ್ನೂ ಮುಂತಾದ ಸ್ತ್ರೀಯರನ್ನು ಕಾಣಬಹುದು.

ಹೀಗೆ ಕನ್ನಡನಾಡು ಧಾರ್ಮಿಕ ಕ್ಷೇತ್ರದಲ್ಲಿ ಪ್ರಖ್ಯಾತಿಯನ್ನು ಪಡೆಯಿತು. ಕನ್ನಡ ಸಾಹಿತ್ಯವು ರಾಜಮಹಾರಾಜರುಗಳಿಗೆ, ಪಂಡಿತರಿಗೆ ಮೀಸಲಾಗಿದ್ದ ಕಾಲದಲ್ಲಿ ಜನವಾಣಿಯನ್ನೇ ದೇವವಾಣಿಯ ಸ್ಥಾನಕ್ಕೇರಿಸಿದ ಕೀರ್ತಿ ವೀರಶೈವ ಶರಣೆಯರದು. ಅಂತೆಯೆ ಸಾಹಿತ್ಯದೇವಿಯ ದರ್ಶನವು ಸಾಮಾನ್ಯರಿಗೂ ದೊರೆಯುವಂತೆ ಶಿವಶರಣೆಯರು ಒಂದು ಕ್ರಾಂತಿಯನ್ನೇ ಪ್ರಾರಂಭಿಸಿದರು.

೦—೦

ವೀರಶೈವ ಧರ್ಮದಲ್ಲಿ ಕ್ರಿಯಾ, ಜ್ಞಾನ, ಭಕ್ತಿ ಸಮನ್ವಯ

ವಿದ್ವಾನ್. ಪಿ. ಮರಿಬಸವಾರಾಧ್ಯ

ಹಿಂದೂ ಧರ್ಮದಲ್ಲಿ ಅದ್ವಿತೀಯ ಬ್ರಹ್ಮೋಪಾಸನೆಯು ಅನೇಕ ನಾಮ ರೂಪಗಳಿಂದ ರೂಢಿಯಲ್ಲಿ ಬಂದಿದೆ. ಉಪಾಸಕರು ವಿಭಿನ್ನ ಸಂಪ್ರದಾಯ-ಉಪಸಂಪ್ರದಾಯಗಳಿಗೆ ಸೇರಿರುವುದರಿಂದ ಅವರ ಉಪಾಸನಾವಸ್ತುವಿನ ರೂಪ ಮತ್ತು ನಾಮಗಳು ವಿಭಿನ್ನವಾಗಿವೆ. ಸಾಕಾರೋಪಾಸನೆಯು ಹಿಂದೂ ಧರ್ಮದ ಒಂದು ಪ್ರಧಾನ ಅಂಗವಾಗಿದೆ. ಜಗತ್ತಿನಲ್ಲಿರುವ ಪ್ರತಿಯೊಂದು ಪದಾರ್ಥವೂ ಬ್ರಹ್ಮನಿಂದ ಅಭಿನ್ನವೆಂದೇ ತಿಳಿಯುತ್ತಾರೆ. [ಈ ಉಪಾಧಿಗಳು ತೋರಿಕೆಗೆ ಮಾತ್ರ.] "[1]ಸರ್ವಂ ಖಲ್ವಿದಂ ಬ್ರಹ್ಮ" ಎಂದು ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ ಬ್ರಹ್ಮವೇ ಸಾಕ್ಷಾತ್ಕಾರದ ಮೂಲವಸ್ತು. ಈ ಚಿತ್ಸ್ವರೂಪ ಬ್ರಹ್ಮವೇ ಅನಾದಿಕಾಲದಿಂದ ದೃಶ್ಯರೂಪವಾಗಿ (ಪ್ರಪಂಚ) ಕಾಣುತ್ತಿದೆ. ಈ ವಸ್ತುಗಳು ಸಾಧಕನಲ್ಲಿನ ಬ್ರಹ್ಮಬುದ್ಧಿಯಿಂದ ಉಪಾಸ್ಯಗಳಾಗಿವೆ. ಮಹಾಪುರುಷರ ಆಂತರಿಕ ಶಕ್ತಿಯಲ್ಲಿ ಬ್ರಹ್ಮನ ಜೀವಂತ ಪ್ರಕಾಶವು ಸೇರಿರುತ್ತದೆ. ಭಗವಂತನ ಅಸಾಧಾರಣ ಶಕ್ತಿಯು ಅವರಲ್ಲಿ ಕಾರ್ಯೋನ್ಮುಖವಾಗಿರುತ್ತದೆ. ಆದ ಕಾರಣ ಸಾಮಾನ್ಯವಾಗಿ ಜನರು ಅವರ ಕಡೆಗೆ ಆಕರ್ಷಿಸಲ್ಪಡುತ್ತಾರೆ. ಅವರಲ್ಲಿ ಶ್ರದ್ಧಾಭಕ್ತಿಗಳು ಹುಟ್ಟಿ ಉಪಾಸಕರಾಗುತ್ತಾರೆ. ಸಾಧಕನ ಚಿತ್ತವು ವಿಶಾಲವಾಗಿ ಸೀಮಾತೀತನೊಡನೆ ಯೋಗಾನುಸಂಧಾನ ಮಾಡಲು ಪ್ರಾರಂಭಿಸುತ್ತದೆ. ಸಾಧಕನು ತನ್ನ ಚಿತ್ತವನ್ನು ಪರಮಾತ್ಮನೊಡನೆ ವಿಲೀನಗೊಳಿಸಿ ಪ್ರೇಮಮಯನೂ, ಸರ್ವಶಕ್ತನೂ, ಭಕ್ತಪರಾಧೀನನೂ, ಚಿನ್ಮಯನೂ ಆದ ಪರಮಾತ್ಮನ ಅಸ್ತಿತ್ವವು ವಿಶ್ವದ ಎಲ್ಲೆಡೆ ಇದೆ ಎಂಬ ಅನುಭವವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಈ ರೀತಿಯಾದ ಬ್ರಹ್ಮ ಅಥವಾ ಶಿವನನ್ನು ಲಿಂಗ ರೂಪದಲ್ಲಿ ಆರಾಧಿಸುವ ಒಂದು ಸಂಪ್ರದಾಯವಿದೆ, ಸಾಧಕಾನಾಂ ಹಿತಾರ್ಥಾಯ ಬ್ರಹ್ಮಣೋ ರೂಪಕಲ್ಪನಾ"[2] ಎಂಬ ಉಕ್ತಿಯಂತೆ ಲಿಂಗರೂಪದಲ್ಲಿ ಶಿವನನ್ನು ಆರಾಧಿಸುವುದು ಅದ್ವಿತೀಯಬ್ರಹ್ಮೋಪಾಸನೆಯೇ ಸರಿ. ಈ ರೀತಿಯಾದ ಉಪಾಸನೆಯು ವೇದಾಂತದರ್ಶನದ ದೇಶಕಾಲಾತೀತನೂ, ಇಂದ್ರಿಯಾತೀತನೂ ಆದ ಶಿವನನ್ನು ಪ್ರತ್ಯಕ್ಷ ಅನುಭವ ಕ್ಷೇತ್ರದಲ್ಲಿ ತಂದಿಳಿಸಿ ಲಿಂಗೋಪಾಸನೆಗೆ ಸರ್ವರಿಗೂ ಅಧಿಕಾರವನ್ನು ತಂದು ಕೊಟ್ಟಿದೆ.

---

1 ಛಾಂದೋಗ್ಯ 3-14-1.

2 ಗ್ರಂಥಾಂತರ

ಮಾನವ ತಾನು ಸುಖಿಯಾಗಿರಬೇಕೆಂದು ಬಯಸುವುದು ಅವನ ಸಹಜ ಗುಣ. ಈ ಸುಖ ಎರಡು ವಿಧ. ಒಂದು ನಿತ್ಯ ಮತ್ತೊಂದು ಅನಿತ್ಯ. ವಾಸನಾಸಹಿತವಾದುದು ಅನಿತ್ಯ, ವಾಸನಾರಹಿತವಾದುದು ನಿತ್ಯ. ಪ್ರತಿಫಲಾಪೇಕ್ಷಿತನಾಗಿ ಯಜ್ಞಯಾಗಾದಿಗಳನ್ನು ಮಾಡಿ ಅದರಿಂದ ಪ್ರಾಪ್ತವಾಗುವ ಅಪೂರ್ವವೆಂಬ ಪುಣ್ಯವಿಶೇಷದಿಂದ ಕೆಲವು ಸಮಯ ಸ್ವರ್ಗಸುಖವನ್ನು ಅನುಭವಿಸಿ ಅದು ಕ್ಷಯಿಸಿದ ಅನಂತರ'' [2]ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ''ಎಂಬ ಗೀತಾ ವಾಕ್ಯದಂತೆ ಮತ್ತು ''[3]ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀಜಠರೇ ಶಯನಮ್.'' ಎಂಬ ಶಂಕರಾಚಾರ್ಯರ ಉಕ್ತಿಯಂತೆ ''[4]ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ'' ಎಂಬ ರೀತಿಯಲ್ಲಿ ಜನ್ಮಾಂತರಗಳನ್ನು ಹೊಂದುತ್ತಿರುತ್ತಾನೆ. ಈ ರೀತಿಯಾದ ತಾತ್ಕಾಲಿಕ ಸುಖಕ್ಕಿಂತ ಭಿನ್ನವಾದ, ಜನ್ಮಾಂತರಗಳಿಲ್ಲದ, ಶಾಶ್ವತಸುಖವೊಂದುಂಟು. ಅದೇ ಲಿಂಗಾಂಗಸಾಮರಸ್ಯ, ಜೀವನ್ಮುಕ್ತಿ, ಬಯಲಗಳಿಕೆ. ಇದನ್ನೇ ಬ್ರಹ್ಮಸೂತ್ರಕಾರನಾದ ಬಾದರಾಯಣನು [5]ಅನಾವೃತ್ತಿಶ್ಶಬ್ದಾದನಾವೃತ್ತಿಶ್ಶಬ್ದಾತ್'' ಎಂಬ ಅಂತಿಮಸೂತ್ರದಲ್ಲಿ ''ಸ ಖಲ್ವೇವಂ ವರ್ತಯನ್ ಯಾವುದಾಯುಷಂ ಬ್ರಹ್ಮಲೋಕಮಭಿಸಂಪದ್ಯತೆ, [6]ನ ಚ ಪುನರಾವರ್ತತೇ ನ ಚ ಪುನರಾವರ್ತತೇ'' ಎಂದು ಪುನರ್ಜನ್ಮರಹಿತವಾದ ಮೋಕ್ಷವನ್ನೇ ಪ್ರತಿಪಾದಿಸಿದ್ದಾನೆ. ಈ ಮುಕ್ತಿಗಳಿಕೆಗಾಗಿ ಸಾಧಕನು, ಅಂದರೆ ಲಿಂಗಧಾರೀಭಕ್ತನು, ಆಚರಿಸಬೇಕಾದ ಮಾರ್ಗಗಳನ್ನು ವೀರಶೈವದರ್ಶನದಲ್ಲಿ ವಿವರವಾಗಿ ನಿರೂಪಿಸಿದ್ದಾರೆ.

ಕೆಲವು ದಾರ್ಶನಿಕರು ಮೋಕ್ಷಸಾಧನೆಗೆ ಜ್ಞಾನವೇ ಕಾರಣ ಎಂದು ಪ್ರತಿಪಾದಿಸಿದ್ದಾರೆ. ಜಪ-ತಪ-ಅರ್ಚನ ಧ್ಯಾನಾದಿ ಕ್ರಿಯೆಗಳು ಕೇವಲ ಜ್ಞಾನೋತ್ಪತ್ತಿಗಾಗಿ, ಬ್ರಹ್ಮಜ್ಞಾನವಾದನಂತರ ಅವುಗಳು ಗೌಣ ಎಂದಿದ್ದಾರೆ. ಇದಕ್ಕೆ ಕ್ರಮಸಮುಚ್ಚಯ ಎನ್ನುತ್ತಾರೆ. ಮತ್ತೆ ಕೆಲವರು ಮೋಕ್ಷಸಾಧನೆಗೆ ಮೊದಲು ಕ್ರಿಯೆ, ಆ ಕ್ರಿಯೆಯಿಂದ ಬ್ರಹ್ಮಜ್ಞಾನ ಉಂಟಾಗುತ್ತದೆ, ಅನಂತರ ದೇಹಪಾತಪರ್ಯಂತವಾಗಿ ಕ್ರಿಯೆ ಮತ್ತು ಜ್ಞಾನ ಈ ಎರಡೂ ಸಮಾನಸ್ಥಾನಗಳಲ್ಲಿಯೇ ಇರುತ್ತವೆ, ಇದನ್ನು ಸಮಸಮುಚ್ಚಯವೆಂದು ಕರೆಯುತ್ತಾರೆ. ಈ ಸಮಸಮುಚ್ಚಯವಾದಿಗಳೇ ವೀರಶೈವರು ಇವರಲ್ಲಿ ಕ್ರಿಯೆ ವಿಧಿರೂಪವಾಗಿರುತ್ತದೆ. ವಿಧಿ ಎಂದರೆ ಗುರುಮಂತ್ರೋಪದಿಷ್ಟವಾದ ಇಷ್ಟಲಿಂಗಧಾರಣೆ, ಪೂಜೆ, ಧ್ಯಾನಾದಿಗಳನ್ನು ಅವಶ್ಯ ಆಚರಿಸುವುದೇ ಆಗಿದೆ.

---

2 ಭಗವದ್ಗೀತಾ.

3 ಚರ್ಪಟಪುಂಜರಿಕಾಸ್ತೋತ್ರಂ 8.

4 ಸಿದ್ಧಾಂತಶಿಖಾಮಣಿ ಪರಿ. 5. ಶ್ಲೋ. 46.

5 ಬ್ರಹ್ಮಸೂತ್ರ, ಅಧ್ಯಾಯ 4, ಅಧಿಕರಣ 6, ಸೂತ್ರ 22.

6 ಛಾಂದೋಗ್ಯ 8-15-1

[7]ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ ।
ಕದಾಚಿತ್ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ॥
[8]ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಮ್ ।
ನ ತೇಷಾಂ ಪುನರಾವೃತ್ತಿರ್ಘೋರಸಂಸಾರಮಂಡಲೇ ॥

ಎಂದು ಸಿದ್ಧಾಂತಶಿಖಾಮಣಿಯು ಪುಷ್ಟೀಕರಿಸುತ್ತದೆ. ಜ್ಞಾನರಹಿತವಾದ ಕರ್ಮ ಹೇಗೆ ಪ್ರಯೋಜನವಿಲ್ಲವೋ, ಕರ್ಮರಹಿತವಾದ ಜ್ಞಾನವೂ ಅಷ್ಟೆ. ಕೇವಲ ನಾನೇ ಶಿವನೆಂದು ಭಾವಿಸಿಕೊಂಡರೆ ಶಿವನಾಗಲಾರ. ಮುಕ್ತನಾಗಲಂತೂ ಸಾಧ್ಯವೇ ಇಲ್ಲ. ಪದಾರ್ಥಜ್ಞಾನದಿಂದ ಆ ಪದಾರ್ಥ ಸಿಕ್ಕಲಾರದು. ಅನ್ನಜ್ಞಾನದಿಂದ ಹಸಿವು ಹಿಂಗದು.

[9]ಅಂಧಪಂಗುವದನ್ಯೋನ್ಯಂ ಸಾಪೇಕ್ಷಾತ್ ಜ್ಞಾನಕರ್ಮಣೋಃ ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್‌ದ್ವಯಮಾಚರೇತ್ ॥

ಅಂದರೆ ಕುರುಡ ತಾನು ತಲಪಬೇಕಾಗಿರುವ ಸ್ಥಳವನ್ನು ತಲಪಲಾರ. ಹಾಗೆ ಕುಂಟ ತನ್ನ ಗಮ್ಯಸ್ಥಾನಕ್ಕೂ ಗಮಿಸಲಾರ. ಇವರಿಬ್ಬರ ಪರಸ್ಪರ ಸಹಕಾರ ವಿದ್ದರೆ ತಮ್ಮ ತಮ್ಮ ಗಮ್ಯ ಸ್ಥಳಗಳಿಗೆ ಹೋಗಬಲ್ಲರು. [10]ನ ಹ್ಯೇಕಪಕ್ಷೋ ವಿಹಗಃ ಪ್ರಯಾತಿ'' ಎಂಬ ಉಕ್ತಿಯಂತೆ ಪಕ್ಷಿ ಹಾರಬೇಕಾದರೆ ಎರಡೂ ರೆಕ್ಕೆಗಳಿರಬೇಕು. ಆದಕಾರಣ ಮೋಕ್ಷವನ್ನು ಪಡೆಯಲು ಜ್ಞಾನ ಕ್ರಿಯೆಗಳ ಪರಸ್ಪರ ಸಾಪೇಕ್ಷೆ ಇರಲೇಬೇಕು.

ಕರ್ಮಗಳಲ್ಲಿ ಎರಡು ವಿಧ. ಪಶುಕರ್ಮ ಮತ್ತು ಪತಿಕರ್ಮ ಎಂದು. ಪ್ರತಿಫಲಾಪೇಕ್ಷಿತವಾದುದು ಪಶುಕರ್ಮ. ಇದರಿಂದ ಸ್ವರ್ಗ ಸ್ವಾರಾಜ್ಯಾದಿಗಳ ಫಲ ಪ್ರಾಪ್ತಿಯೇ ಫಲ. ಪ್ರತಿಫಲಾಪೇಕ್ಷೆರಹಿತವಾದ ಶಿವಾರ್ಪಣಬುದ್ಧಿಯಿಂದ ದಾಸೋಹಂ ಭಾವದಿಂದ ಮಾಡುವ ಕರ್ಮವೇ ಪತಿಕರ್ಮ. ಸಾಧಕನು ಶಿವಜ್ಞಾನ ಯುಕ್ತನಾಗಿ ಗುರೂಪದಿಷ್ಟಮಾರ್ಗದಿಂದ ಅಷ್ಟಾವರಣ ಷಟ್‌ಸ್ಥಲಾಚರಣೆಗಳನ್ನು ಆದೇಹಪಾತವಾಗಿ ಆಚರಿಸಬೇಕಾದವುಗಳಾಗಿವೆ. ಕರ್ಮಜ್ಞಾನಸಮ ಸಮುಚ್ಚಯ ವೆಂದರೆ ಅಷ್ಟಾವರಣಸಹಿತ ಷಟ್‌ಸ್ಥಲಾಚರಣೆಯೇ ಆಗಿದೆ.

[11]ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ । ನೋ ಇತರಾಣಿ'' ಎಂಬ ಶ್ರುತಿವಾಕ್ಯದಂತೆ—

---

7 ಸಿದ್ಧಾಂತ ಶಿಖಾಮಣಿ ಪಂ. 6 ಶ್ಲೋ., 25
8 —„— —„— —„41
9 —„— 16 —„— 11
10 ಗ್ರಂಥಾಂತರ
11 ಶ್ರುತಿ

[12]ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್ ॥

ಎಂಬ ಆಗಮವಾಕ್ಯವೂ ಪ್ರಮಾಣವಾಗಿದೆ.

[13]ಜ್ಞಾನಮಾಚಾರಹೀನಂ ಚೇತ್‌ತದ್ ಜ್ಞಾನಂ ತು ವೃಥಾ ವೃಥಾ ।
ಕೇವಲಂ ಕರ್ಮಮಾತ್ರೇಣ ಜನ್ಮಕೋಟಿಶತೈರಪಿ ॥
ನಾತ್ಮನೋ ಜಾಯತೇ ಮುಕ್ತಿಃ ಜ್ಞಾನಂ ಮುಕ್ತೇಸ್ತುಕಾರಣಮ್ ।
ಅಂಧೋ ಯಥಾ ಪುರಃಸ್ಥಾನಿ ವಸ್ತೂನಿ ನ ಚ ಪಶ್ಯತಿ ॥
ಜ್ಞಾನಹೀನಸ್ತಥಾ ದೇಹೀ ನಾತ್ಮಸ್ಥಂ ವೀಕ್ಷತೇ ಶಿವಮ್ ।
ಜ್ಞಾನಂ ಪ್ರಧಾನಂ ನ ತು ಕರ್ಮ ಹೀನಂ
ಕರ್ಮ ಪ್ರಧಾನಂ ನ ತು ಚಿದ್ವಿಹೀನಮ್ ।
ತಸ್ಮಾತ್‌ದ್ವಯೋರೇವ ಭವೇತ್ಪ್ರಸಿದ್ಧಿಃ
ನ ಹ್ಯೇಕಪಕ್ಷೋ ವಿಹಗಃ ಪ್ರಯಾತಿ ॥
[14]ನ ಕ್ರಿಯಾರಹಿತಂ ಜ್ಞಾನಂ ನ ಜ್ಞಾನರಹಿತಾ ಕ್ರಿಯಾ ।
ಅಪಶ್ಯನ್ನಂಧಕೋ ದಗ್ಧಃ ಪಶ್ಯನ್ ಪಂಗುಶ್ಚ ದಹ್ಯತೆ ॥

ಈ ಉಕ್ತಿಗಳಿಂದ ಪ್ರಮಾಣೀಕರಿಸುವಂತೆ ಪುನರಾವೃತ್ತಿರಹಿತವಾದ ಮೋಕ್ಷಸಾಧನೆಗೆ ಜ್ಞಾನಕ್ರಿಯೆಗಳ ಸಮುಸಮುಚ್ಚಯವೇ ಮುಖ್ಯ.

ಇನ್ನು ವೀರಶೈವ ದರ್ಶನದಲ್ಲಿಯ ಕ್ರಿಯಾಂಗಗಳನ್ನು ಸ್ಥೂಲವಾಗಿ ಪರಿಚಯಿಸೋಣ. ದಾರ್ಶನಿಕರಲ್ಲಿ ವೈದಿಕತಾಂತ್ರಿಕರು ಹಾಗು ತಾಂತ್ರಿಕವೈದಿಕರೆಂದು ಎರಡು ವಿಧ. ವೈದಿಕತಾಂತ್ರಿಕರೆಂದರೆ ವೇದವನ್ನೇ ಪ್ರಧಾನವಾಗಿ ಅಂಗೀಕರಿಸಿ ಅದಕ್ಕೆ ಅವಿರೋಧವಾದ ತಂತ್ರ (ಆಗಮ) ಭಾಗಗಳನ್ನು ಒಪ್ಪುವವರು ತಾಂತ್ರಿಕವೈದಿಕರೆಂದರೆ-ತಂತ್ರಗಳನ್ನೇ ಪ್ರಧಾನವಾಗಿ ಅಂಗೀಕರಿಸಿ ಅವುಗಳಿಗೆ ಅವಿರೋಧವಾದ ವೇದಭಾಗಗಳನ್ನು ಅನುಮೋದಿಸುವವರು. ಈ ತಾಂತ್ರಿಕವೈದಿಕರೇ ವೀರಶೈವರು. ಇವರು ಸರ್ವಶ್ರುತಿಸಮನ್ವಯಸಿದ್ಧಾಂತವನ್ನು ಅಂಗೀಕರಿಸಿದ್ದಾರೆ. ಅಂದರೆ ಕೆಲವರು ಅದ್ವೈತಪರವಾದ ಶ್ರುತಿಗಳಿಗೆ ಮತ್ತು ಕೆಲವರು ದ್ವೈತಪರಶ್ರುತಿಗಳಿಗೆ ಪ್ರಾಧಾನ್ಯವನ್ನು ಕೊಡುತ್ತಾರೆ. ಉಳಿದವುಗಳನ್ನು ಗೌಣ ಎಂದು ಹೇಳುತ್ತಾರೆ. ಆದರೆ ಶ್ರುತಿಗಳಲ್ಲಿ ಕೆಲವಕ್ಕೆ ಗೌಣಸ್ಥಾನವನ್ನು ಕೊಟ್ಟರೆ ವೇದಕ್ಕೆ ಅಪಚಾರವೆಸಗಿದಂತಾಗುತ್ತದೆ. ನಮ್ಮ ಶರೀರದಲ್ಲಿಯ ಅಂಗಗಳು ಒಂದು ಪ್ರಧಾನ ಮತ್ತೊಂದು

---

12 ಆಗಮವಾಕ್ಯ
13 ಗ್ರಂಥಾಂತರ
14 ಶಿವರಹಸ್ಯ

ಗೌಣವಾಗಲು ಸಾಧ್ಯವಿಲ್ಲ. ಎಲ್ಲಾ ಅಂಗಗಳೂ ಪ್ರಧಾನಗಳೇ. ಹಾಗೆಯೇ ಶ್ರುತಿಗಳೂ ಕೂಡ.

[15]ಶ್ರುತ್ಯೇಕದೇಶಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು !
ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ ।
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ।
[16]ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ ।
ಸರ್ವವೇದಾನುಸಾರಿತ್ವಾತ್ ಶೈವತಂತ್ರಂ ವಿಶಿಷ್ಯತೇ ।
[17]ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ....
[18]ಅನುಗತಸಕಲಾರ್ಥೇ ಸರ್ವತಂತ್ರೈಃ ಸಮಸ್ತೈಃ
ಪ್ರಕಟಿತಶಿವಬೋಧಾದ್ವೈತಭಾವಪ್ರಸಾದೇ ।
ವಿದಧತು ಮತಿಮಸ್ಮಿನ್ ವೀರಶೈವೇ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತಶ್ಲಾಘನೀಯೇ ॥

ಈ ಪ್ರಮಾಣಗಳಿಂದ ವೀರಶೈವದರ್ಶನವು ವೇದೈಕದರ್ಶಿಗಳಾದ ಸಾಂಖ್ಯಾದಿ ದರ್ಶನಗಳಿಗಿಂತ ವಿಭಿನ್ನದರ್ಶನವೆನಿಸಿ, ಸರ್ವಶ್ರುತಿಸಮನ್ವಯಸಿದ್ಧಾಂತವೆನಿಸಿ, ಶಿವಮಹಿಮ್ನೋಕ್ತ ಪ್ರಾಚೀನ ಮಹಾಪ್ರಸ್ಥಾನಗಳಲ್ಲಿ ಒಂದೆನಿಸಿ, ಪಶುಪತಿಮತಸಾರ ರೂಪವಾಗಿ ಶಿರೋವ್ರತ ಸಿದ್ಧಾಂತವೆನಿಸಿದೆ.

[19]ಸರ್ವಂ ಖಲ್ವಿದಂ ಬ್ರಹ್ಮ, [20]ಏಕಮೇವಾದ್ವಿತೀಯಂ ಬ್ರಹ್ಮ, [21]ಅಹಂ ಬ್ರಹ್ಮಾಸ್ಮಿ, [22]ತತ್ತ್ವಮಸಿ, ಈ ವಾಕ್ಯಗಳಲ್ಲಿರುವ ಏಕತ್ವವು ಪಾರಮಾರ್ಥಿಕವಾದುದು. [23]ದ್ವಾಸು ಪರ್ಣಾ, [24]ಋತಂ ಪಿಬನ್ತೌ ಎಂಬ ಭೇದವಾಕ್ಯಗಳು ಮಾಯಾಕಲ್ಪಿತವಾದವುಗಳೆಂದು ಹೇಳುತ್ತಾರೆ. ಆದರೆ ವೀರಶೈವರು ಭೇದಪರವಾದ ವಾಕ್ಯಗಳು ಸಾಧನಾವಸ್ಥೆಯಲ್ಲಿ ಯವು, ಅದ್ವೈತಪರವಾದವುಗಳು ಮುಕ್ತಾವಸ್ಥೆಯ ವಾಕ್ಯಗಳೆಂದು ಸಮನ್ವಯಿ

---

15 ಶ್ರೀಕರಭಾಷ್ಯ O.Tr.P ಪುಟ ೩ ಶ್ಲೋ. 14.
16 ಸಿದ್ಧಾಂತ ಶಿಖಾಮಣಿ. ಪರಿ–5 ಶ್ಲೋ. 7
17 ಶಿವಮಹಿಮ್ನ ಸ್ತೋತ್ರ ಶ್ಲೋ–7
18 ಸಿದ್ಧಾಂತ ಶಿಖಾಮಣಿ--ಪರಿ. 1, ಶ್ಲೋ. 32.
19 ಛಾಂದೋಗ್ಯ—3–14-1,
20 ,, 6-2-1
21 ಬೃಹದಾರಣ್ಯಕ—1-4-10
22 ಛಾಂದೋಗ್ಯ—6-9-4
23 ಮುಂಡಕ 3-1
24 ಕಠೋಪನಿಷತ್ 1-3-7

ಸುತ್ತಾರೆ. ಇದಕ್ಕೆ ಕ್ರಿಯಾಜ್ಞಾನವೆಂದೂ ಕರೆಯುತ್ತಾರೆ. ಈ ಅಂಶವನ್ನೇ ಶ್ರೀಪತಿ ಪಂಡಿತರು ಶ್ರೀಕರಭಾಷ್ಯದ ಅಂಶಾಧಿಕರಣದಲ್ಲಿ ವಿವರವಾಗಿ ತಿಳಿಯಪಡಿಸಿದ್ದಾರೆ. ನಮ್ಮ ಸಿದ್ಧಾಂತದ ಪ್ರಕಾರ ಪ್ರಧಾನ ಕ್ರಿಯಾಂಗಗಳೆಂದರೆ–[25]ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ಭಸ್ಮ, ರುದ್ರಾಕ್ಷಿ ಮತ್ತು ಮಂತ್ರ ಎಂಬ ಅಷ್ಟಾವರಣಗಳು. ಆಚಾರಗಳೆಂದರೆ –[26]ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಎಂಬ ಪಂಚಾಚಾರಯುಕ್ತನಾಗಿ ಭಕ್ತಾದಿ ಶರಣಸ್ಥಲಾಂತ್ಯದವರೆವಿಗೆ ಕ್ರಿಯಾಂಗ ಗಳಾಗಿ ಭೇದಪರವಾಗಿರುತ್ತವೆ. ಐಕ್ಯಸ್ಥಲವು ಅಭೇದಪರವಾದುದು. ಲಿಂಗಾಂಗ ಸಾಮರಸ್ಯವನ್ನು ಸಾಧಿಸಲು ಸೋಪಾನಗಳಂತಿರುವ ಷಟ್‌ಸ್ಥಲಮಾರ್ಗದಲ್ಲಿ (ಭಕ್ತಿ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ) ಸಮಂಸಮುಚ್ಚಯವಾದವನ್ನು ಕಾಣ ಬಹುದು. ಇದಕ್ಕೆ ಮೊದಲು ಅವನಲ್ಲಿ ದಾಸೋಹಂಭಾವ ಮೂಡಬೇಕು. ಶ್ರೀಕರ ಭಾಷ್ಯದಲ್ಲಿ. "[27]ಶಿವ ತ್ವದ್ದಾಸದಾಸೋ ಯಸ್ತದ್ದಾಸೋಽಸ್ಮೀತಿ ಯಾ ಸಂಧೀಃ" ಶಿವನೆ! ನಿನ್ನ ದಾಸ, ಅವನ ದಾಸ, ಮತ್ತವನ ದಾಸ ನಾನು ಎಂದು ಶ್ರೀ ಪತಿಪಂಡಿತನು ಹೇಳಿದ್ದಾನೆ. ಇದನ್ನೇ ಬಸವಣ್ಣನವರೂ ಸಹ "ಎನಗಿಂತ ಕಿರಿಯರಿಲ್ಲ' ಎಂದು ದಾಸಭಾವ ಬಹಳ ಶ್ರೇಷ್ಠವೆಂದು ಹೇಳಿದ್ದಾರೆ. ಇಲ್ಲಿ ಸತಿ ಭಕ್ತ, ಲಿಂಗವೇ ಪತಿ ಎಂಬ ಸತಿಪತಿಭಾವವು ಬಹು ಮುಖ್ಯ. ಶರಣರೆಲ್ಲರೂ "ಶರಣ ಸತಿ ಲಿಂಗ ಪತಿ" ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಆದುದರಿಂದ ಪತಿಯಲ್ಲಿ ಸತಿಗೆ ಭಕ್ತಿ ಅನಿವಾ ರ್ಯವಾಗಿರಬೇಕು. ಅದರಂತೆ ಶರಣನಿಗೆ ಲಿಂಗದಲ್ಲಿ ಅಂದರೆ ಶಿವನಲ್ಲಿ ದಾಸೋಹಂ ಭಾವ ಅರ್ಥಾತ್ ಅರ್ಪಣಭಾವ ಮುಖ್ಯ. ಭಕ್ತಿಜ್ಞಾನ ಕ್ರಿಯೆಗಳ ಸಾಮರಸ್ಯವನ್ನು ಸಮರ್ಥಿಸುವ ಮುಕ್ತಿಗೆ ಸೋಪಾನಗಳಂತಿರುವ, ಸಮುಸಮುಚ್ಚಯವಾದವನ್ನು ಪುಷ್ಟೀ ಕರಿಸುವ ಷಟ್‌ಸ್ಥಲಗಳ ವಿವರಣೆಯನ್ನು ಸಂಕ್ಷೇಪವಾಗಿ ವಿವರಿಸಲಾಗಿದೆ:—

ಭಕ್ತಸ್ಥಲ :

ಷಟ್‌ಸ್ಥಲಗಳಲ್ಲಿ ಭಕ್ತಸ್ಥಲವು ಉಪಾಸಕನ ಪ್ರಗತಿಯಲ್ಲಿ ಮೊದಲನೆಯದು, ವಿಶ್ವಾಸವೇ ಇದರ ಲಕ್ಷಣ. ವಿಶ್ವಾಸದಿಂದಲೇ ಆಸ್ತಿಕ್ಯ ಬುದ್ಧಿ ಉಂಟಾಗುತ್ತದೆ. ವಿಶ್ವಾಸವು ದೃಢವಾಗಬೇಕಾದರೆ ಭಕ್ತಿಯ ಅಭ್ಯಾಸವು ಆವಶ್ಯಕ. ಆ ಭಕ್ತಿಯೇ ಶ್ರದ್ಧಾಭಕ್ತಿ ಎನಿಸುವುದು. ಶರೀರಾದಿಗಳು ಸತ್ಯವೆಂದು ಭಾಸವಾಗುತ್ತಿದ್ದರೂ ನಶ್ವರ ಎಂದು ತಿಳಿದು ಚಿತ್ತವನ್ನು ಸದ್ಭಕ್ತಿ ಕ್ರಿಯೆಗಳಲ್ಲಿ ನೆಲಗೊಳಿಸಬೇಕು. ಭಕ್ತ ಭಕ್ತರಲ್ಲಿ ಜಾತಿ ಕುಲ ಎಣಿಸಬಾರದು. ಶಿವಶ್ರವಣ, ಶಿವಸಂಕೀರ್ತನ ಪಾದಸೇವೆ ಇವು ಮುಖ್ಯ. ದಾಸಭಾವವೇ ಇದರ ಲಕ್ಷಣ.

———

25 ವೀರಶೈವಾನಂದ ಚಂದ್ರಿಕಾ, ವಾದಕಾಂಡ. ಹುಬ್ಬಳ್ಳಿ. ಪುಟ 50ರಿಂದ166.

26 ಚಂದ್ರಜ್ಞಾನಾಗಮ ಪಟಲ 9

27 ಶ್ರೀಕರಭಾಷ್ಯ.

[28]ಶಿವೇ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ ।
ತಸ್ಮಾನುಷ್ಠೇಯಧರ್ಮಾಣಾಂಮುಕ್ತಿರ್ಭಕ್ತಸ್ಥಲಂ ಮತಮ್

ಮಹೇಶಸ್ಥಲ:

ಮಹೇಶಸ್ಥಲವು ಉಪಾಸಕನ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಎರಡನೆಯದು. ಭಕ್ತಸ್ಥಲದಲ್ಲಿ ಶ್ರದ್ಧಾಭಕ್ತಿಯನ್ನು ಆಚರಿಸಿದವನು ಮಹೇಶಸ್ಥಲದಲ್ಲಿ ನಿಷ್ಠಾಭಕ್ತಿ ಯನ್ನು ಆಚರಿಸುತ್ತಾನೆ. ಶಿವನಲ್ಲಿ ವಿಶ್ವಾಸವೂ, ಶ್ರದ್ಧೆಯೂ ಬಲಗೊಳ್ಳುತ್ತವೆ. ಅವನು ಪೂರ್ವಾಶ್ರಮದ ನಿರಸನವನ್ನು ಮಾಡುವನು. ಅವನಿಗೆ ಲಿಂಗದ ನಿಜ ಸ್ವರೂಪದ ಅರಿವಾಗುವುದು. ಭಕ್ತ ಮತ್ತು ಮಹೇಶನ ಆಚರಣೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ. ಭಕ್ತನಿಗೆ ವ್ರತಗಳ ನಿಯಮವಿಲ್ಲ. ಆದರೆ ಮಹೇಶನಿಗೆ ಅವುಗಳನ್ನು ನಿಷ್ಠೆಯಿಂದ ಆಚರಿಸಬೇಕೆಂಬ ನಿಯಮವಿದೆ. ಗುರುಲಿಂಗಜಂಗಮರಲ್ಲಿ ಸಾಕ್ಷಾತ್ ಶಿವಸ್ವರೂಪವನ್ನು ಕಂಡುಕೊಂಡು ಆಚರಿಸುವವನೇ ಮಹೇಶ.

[29]ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ವೈರಾಗ್ಯಗೌರವಾತ್ ।
ತದಾ ಮಾಹೇಶ್ವರಃ ಪ್ರೋಕ್ತೋ ಭಕ್ತಃ ಸ್ಥಿರವಿವೇಕವಾನ್ ॥
ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ ॥

ಪ್ರಸಾದಿಸ್ಥಲ:

ಇದು ಮೂರನೆಯ ಸ್ಥಲ, ಉಪಾಸಕನ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಮೂರನೆ ಯದು. ಇಲ್ಲಿ ಸಾವಧಾನ ಭಕ್ತಿಯಿಂದ ಮನವು ನಿರ್ಮಲಗೊಳ್ಳುತ್ತದೆ. ತಾನು ಅನುಭವಿಸುವ ಪ್ರತಿಯೊಂದು ಪದಾರ್ಥವೂ ಲಿಂಗಾರ್ಪಿತವಾಗಬೇಕು. ಅನಂತರ ಲಿಂಗ ಪ್ರಸಾದವೆಂದು ಸ್ವೀಕರಿಸಬೇಕು. ಲಿಂಗಾರ್ಪಿತವಲ್ಲದ ಯಾವುದನ್ನೇ ಆಗಲಿ ಪ್ರಸಾದರೂಪವಾಗಿ ತೆಗೆದುಕೊಳ್ಳಬಾರದು.[30] ತೇನ ತ್ಯಕ್ತೇನ ಭುಂಜೀಥಾಃ ಇದರಿಂದ ಅವನ "ಅಹಂ" ನಿರ್ನಾಮವಾಗುತ್ತದೆ. ಗುರುಲಿಂಗ ಜಂಗಮರಿಗೆ ಅರ್ಪಿಸಿ ಕ್ರಮವಾಗಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವನ್ನು ಸ್ವೀಕರಿಸುತ್ತಾನೈತಿಕ ಜೀವನದಲ್ಲಿ ಉನ್ನತ ಸ್ಥಾನಕ್ಕೆ ಏರುವವನೇ ಪ್ರಸಾದಿ.

[31]ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪನಿಬಂಧನಃ ।
ಮನಃಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ ॥

---

28 ಸಿದ್ಧಾಂತ ಶಿಖಾಮಣಿ ಪರಿ 5. ಶ್ಲೋ 16.
29 ಸಿದ್ಧಾಂತಶಿಖಾಮಣಿ ಪರಿ, 10 ಶ್ಲೋ, 2,3.
30 ಈಶಾವಾಸ್ಯೋಪನಿಷತ್
31 ಸಿದ್ಧಾಂತ ಶಿಖಾಮಣಿ ಪರಿ, 11 ಶ್ಲೋ 2.

ಪ್ರಾಣಲಿಂಗಿಸ್ಥಲ :

ಷಟ್‌ಸ್ಥಲಗಳಲ್ಲಿ ನಾಲ್ಕನೇ ಹೆಜ್ಜೆ. ಹಿಂದೆ ಹೇಳಿದ ಭಕ್ತ ಮಹೇಶ ಪ್ರಸಾದಿ ಸ್ಥಳಗಳಲ್ಲಿ ಉಪಾಸಕನ ದೃಷ್ಟಿ ಬಹಿರ್ಮುಖವಾಗಿರುತ್ತದೆ. ಪ್ರಾಣಲಿಂಗಿಸ್ಥಳದಲ್ಲಿ ಅವನ ದೃಷ್ಟಿ ಅಂತರ್ಮುಖವಾಗುತ್ತದೆ. ಉಪಾಸಕನು ತನ್ನ ಹೃದಯದಲ್ಲಿರುವ ಪ್ರಾಣಲಿಂಗವನ್ನು ಕಾಣುವನು. ಬಹಿರ್ಮುಖವಾಗಿ ಇಷ್ಟಲಿಂಗಾರ್ಚನೆಯನ್ನು ಮಾಡಿದಂತೆ ಅಂತರ್ಮುಖವಾಗಿ ಪ್ರಾಣಲಿಂಗಾನುಸಂಧಾನವನ್ನು ಮಾಡುವನು. ಉಪಾಸಕನು ಶಾಂತಿ, ವಿವೇಕ, ಸತ್ಯ, ಅಹಿಂಸೆ, ಚಿತ್ತೈಕಾಗ್ರತೆ, ಅಹಂಕಾರನಿರಸನ ಮತ್ತು ವಿಶ್ವಪ್ರೇಮವನ್ನು ಗಳಿಸುತ್ತಾನೆ. ಪ್ರಾಣಲಿಂಗಾನುಸಂಧಾನದಿಂದ ಪ್ರತಿಯೊಂದು ಜೀವರಾಶಿಯಲ್ಲೂ ಶಿವನಿರುವನೆಂಬ ಅರಿವು ಉಂಟಾಗುತ್ತದೆ. ಅನುಭವಭಕ್ತಿಯಿಂದ ಅವನಿಗೆ ಲಿಂಗೈಕಾಗ್ರತೆ ಬರುತ್ತದೆ.

[32]ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀ ಚ ಪ್ರಕೀರ್ತಿತಃ ।
ಕರ್ಮಪ್ರಾಧಾನ್ಯಯೋಗೇನ ಜ್ಞಾನಯೋಗೋಽಸ್ಯ ಕಥ್ಯತೇ ॥
ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥

ಶರಣಸ್ಥಲ

ಅರಿವುಳ್ಳಾತನೇ ಶರಣ. ಅಂದರೆ ನಾನು ಯಾರು ? ಏಕೆ ಇಹಕ್ಕೆ ಬಂದೆ ? ಮುಂದಿನ ಗುರಿ ಏನು ? ಎಂಬುದಾಗಿ ವಿಚಾರಮಾಡುವವನೇ ಶರಣ. ಈ ಉಪಾಸಕನು ತಾನು ಸತಿ, ಲಿಂಗವೇ ಪತಿ ಎಂದು ತಿಳಿಯುತ್ತಾನೆ. ಶರಣನು ಸದಾ ಸದ್ವಿವೇಕ ಬುದ್ಧಿಯುಳ್ಳವನಾಗಿರುತ್ತಾನೆ. ಸುಖ, ದುಃಖ, ಸ್ತುತಿನಿಂದೆಗಳ ಬಾಧೆ ಇಲ್ಲ. ಅವನ ಆಚಾರ ವಿಚಾರಗಳು ಪರಮಾತ್ಮನಲ್ಲಿ ಲೀನವಾಗಿರುತ್ತವೆ. ಲಿಂಗಾನುಷ್ಠಾನದಲ್ಲಿ ಮಗ್ನನಾಗಿ ಲಿಂಗವೇ ಆಗುವ ಹವಣಿಕೆಯಲ್ಲಿರುತ್ತಾನೆ. ಪೂಜಾಧ್ಯಾನಗಳಿಂದ ಲಿಂಗಾನಂದವನ್ನು ಆನಂದಭಕ್ತಿಯ ಮೂಲಕ ಅನುಭವಿಸುತ್ತಾನೆ.

[33]ಅಂಗಲಿಂಗೀ ಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ ।
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ॥

ಐಕ್ಯಸ್ಥಲ :

ಇದು ಮುಕ್ತಿಸೋಪಾನದಲ್ಲಿ ಅಂತಿಮವಾದುದು. ಇಲ್ಲಿ ಸಮರಸಭಕ್ತಿಯೇ ಮುಖ್ಯ. ಉಪಾಸಕನು [34]"ತತ್ತ್ವಮಸಿ" ಎಂಬ ಉಪನಿಷತ್ತಿನ ವಾಕ್ಯದಂತೆ ಅನುಭವವನ್ನು ಪಡೆ

———

32 — „ — 12 -„- 2,3.
33 ಸಿದ್ಧಾಂತಶಿಖಾಮಣಿ ಪರಿ. 13 ಶ್ಲೋ 2
34 ಛಾಂದೋಗ್ಯ 3-9-4

ಯುತ್ತಾನೆ. ಅವನಿಗೆ ಎಲ್ಲವೂ ಲಿಂಗಮಯವಾಗಿಯೇ ತೋರುತ್ತದೆ. ಹಿಂದಿನ ಅಂಗಲಿಂಗಗಳ ದ್ವೈತಭಾವವನ್ನು ಕಳೆದುಕೊಂಡು ಅಂಗವೇ ಲಿಂಗವೆಂಬ ಅದ್ವೈತ ಭಾವವನ್ನು ಹೊಂದುತ್ತಾನೆ. ಜ್ಞಾನದ ಉತ್ತುಂಗ ಶಿಖರವನ್ನು ಏರುತ್ತಾನೆ. ಇದೇ ಶಿವಾನುಭವ. ಲಿಂಗಾಂಗಸಾಮರಸ್ಯ. ಶಿಖಿಕರ್ಪೂರನ್ಯಾಯದಂತೆ ಲಿಂಗದಲ್ಲಿ ಲೀನ ವಾಗುತ್ತಾನೆ.

[35]ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ॥

ಈ ಷಟ್‌ಸ್ಥಲಗಳಿಗೆ ವೀರಶೈವದಾರ್ಶನಿಕರು ಮುಕ್ತಿಸೋಪಾನಗಳೆಂದು ಕರೆದಿದ್ದಾರೆ. ಈ ಜ್ಞಾನೋಪಾಸನೆಗಳನ್ನು ಹತ್ತಲು ಕ್ರಿಯೆ ಬೇಕೇಬೇಕು. ಆ ಕ್ರಿಯೆಗಳೇ ಅಷ್ಟಾವರಣಗಳು. ಕ್ರಿಯಾರೂಪವಾದ ಅಷ್ಟಾವರಣಗಳಿಂದ ಅಜ್ಞಾನರೂಪವಾದ ಷಟ್ ಸ್ಥಲಗಳ ಅರಿವು ದೇಹಪಾತಪರ್ಯಂತವಾಗಿ ಆಚರಣೆಯಲ್ಲಿರಬೇಕು. ಈಶೋಪನಿಷತ್ತಿನ ಮಂತ್ರಗಳು, ಕರ್ಮಜ್ಞಾನಸಮುಚ್ಚಯವನ್ನು ಪ್ರತಿಪಾದಿಸುವ ಮಂತ್ರಗಳಾಗಿವೆ. ಕೇವಲ ಜ್ಞಾನ-ಕೇವಲ ಕರ್ಮಗಳನ್ನು ಅನುಸರಿಸಿದರೆ ಫಲವಿಲ್ಲವೆಂದು

[36]"ಅಂಧಂ ತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ ॥

ಈ ಮಂತ್ರ ಹೇಳುತ್ತಿದೆ. ಆದುದರಿಂದ ಕರ್ಮಜ್ಞಾನಗಳ ಸಮುಚ್ಚಯಕ್ಕೆ ಈ ಮಂತ್ರವೇ ಸಾಕ್ಷಿಯಾಗಿದೆ.

[37]ವಿದ್ಯಾಂ ಚಾವಿದ್ಯಾಂಚ ಯಸ್ತದ್ವೇದೋಭಯಗ್ಂ ಸಃ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

ಯಾವ ಭಕ್ತನು ಶಿವೈಕ್ಯಜ್ಞಾನವನ್ನು, ಪತಿಕರ್ಮವೆನಿಸಿದ ಲಿಂಗಪೂಜಾದಿಕರ್ಮವನ್ನು, ಈ ಎರಡನ್ನೂ ಜೊತೆಯಲ್ಲಿ ತಿಳಿಯುತ್ತಾನೆಯೋ, ಆ ಭಕ್ತನು ಪತಿಕರ್ಮಗಳಿಂದ ಮೃತ್ಯುವನ್ನು ದಾಟಿ, ಶಿವೈಕ್ಯಜ್ಞಾನದಿಂದ ಲಿಂಗಾಂಗಸಾಮರಸ್ಯವನ್ನು ಹೊಂದುತ್ತಾನೆ ಎಂದು ಈವಾಕ್ಯ ಪ್ರತಿಪಾದಿಸುತ್ತದೆ.

ಇಲ್ಲಿನವರೆವಿಗೆ ಕ್ರಿಯೆಜ್ಞಾನಗಳ ಸಮುಚ್ಚಯವನ್ನು ವಿವರಿಸಲಾಯಿತು. ಆ ಕ್ರಿಯಾಜ್ಞಾನಗಳಿಗೆ ಸೇತುವೆಯಂತಿರುವ ಭಕ್ತಿಯ ಸ್ವರೂಪವನ್ನು ತಿಳಿಯೋಣ.

ಪ್ರಾಚೀನಕಾಲದಿಂದಲೂ ಮೋಕ್ಷಸಾಧನೆಗಾಗಿ ಮೂರು ಪ್ರಧಾನಮಾರ್ಗಗಳನ್ನು ಅನುಸರಿಸುತ್ತಾ ಬಂದಿದ್ದಾರೆ, ಕರ್ಮ, ಜ್ಞಾನ, ಭಕ್ತಿ ಎಂದು

---

35 ಸಿದ್ಧಾಂತಶಿಖಾಮಣಿ ಪರಿ-14 ಶ್ಲೋ-2
36 ಈಶಾವಾಸ್ಯೋಪನಿಷತ್ ಸೂ 9
37 ಈಶವಾಸ್ಯೋಪನಿಷತ್ ಸೂ 9

ಒಂದೊಂದು ಸಮಯದಲ್ಲಿ ಒಂದೊಂದಕ್ಕೆ ಪ್ರಧಾನಪಟ್ಟವನ್ನು ಕೊಟ್ಟರು. ಆಗ ಸಮಾಜದಲ್ಲಿ ದ್ವೇಷಾಸೂಯೆಗಳು ಪ್ರಾರಂಭವಾದವು. ಈ ವಿಷಮತೆಯನ್ನು ನಿವಾರಿಸಲು ಭಕ್ತಿ ಕ್ರಿಯೆ ಜ್ಞಾನಗಳ ಸಮನ್ವಯವನ್ನು ಅಂಗೀಕರಿಸಿದರು. ಈ ಸಮನ್ವಯವನ್ನು ಸ್ವೀಕರಿಸಿ ಆನುಷ್ಠಾನಕ್ಕೆ ತಂದವರು ವೀರಶೈವರು. ಇದಕ್ಕೆ "ತ್ರಿಪುಟಿ" ಸಿದ್ಧಾಂತವೆಂದೂ ಕರೆಯುತ್ತಾರೆ. ಈಗ ಭಕ್ತಿಯ ಸ್ವರೂಪ ಮತ್ತು ಮೋಕ್ಷವನ್ನು ಸಾಧಿಸುವಲ್ಲಿ ಅದರ ಮಹತ್ವವನ್ನು ಅರಿಯಬೇಕಾಗಿದೆ. ಭಕ್ತಿ ಎಂದರೆ "ಭಜ ಸೇವಾಯಾಮ್" ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಸೇವೆಯನ್ನು ಮಾಡುವುದೆಂದರ್ಥ. ಅಂದರೆ ಭಗವಂತನ ಸೇವೆಯನ್ನು ಮಾಡುವುದೆಂದು ತಿಳಿಯಬೇಕು. ಶಾಂಡಿಲ್ಯನ ಭಕ್ತಿಸೂತ್ರದಲ್ಲಿ "ಸಾ ಪರಾಽನುರಕ್ತಿರೀಶ್ವರೇ[38] ಭಗವಂತನಲ್ಲಿ ಪರಮ ಅನುರಕ್ತಿಯೇ ಭಕ್ತಿ. ನಾರದರ ಭಕ್ತಿಸೂತ್ರದಲ್ಲಿ "ಸಾ ತ್ವಸ್ಮಿನ್ ಪರಮಪ್ರೇಮರೂಪಾ"[39] ಭಗವಂತನನ್ನು ಪರಮಪ್ರೇಮದಿಂದ ಆರಾಧಿಸುವುದೇ ಭಕ್ತಿ ಎಂದು ಹೇಳಿದೆ. ಸಾಧಕನ ಮನಸ್ಸಿನ ಪ್ರವೃತ್ತಿ ಆಧ್ಯಾತ್ಮಿಕ ಸಾಧನೆಯಲ್ಲಿ ದ್ರವಿಸಿ ನೀರಾಗಿ ಪರಮಾತ್ಮನ ಕಡೆಗೆ ಹರಿಯುವುದೇ ಭಕ್ತಿ. ಆದುದರಿಂದ ಪುನರಾವೃತ್ತಿರಹಿತವಾದ ಮೋಕ್ಷಸಾಧನೆಯಲ್ಲಿ ಸರಳ ಹಾಗೂ ಸುಂದರವಾದ ಮಾರ್ಗವೇ ಭಕ್ತಿಮಾರ್ಗ. ಈ ಭಕ್ತಿ ವೀರಶೈವ ಧರ್ಮದಲ್ಲಿ ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಮತ್ತು ಸಮರಸ ಎಂದು ಪ್ರತಿಪಾದಿತವಾಗಿದೆ. ವೀರಶೈವಧರ್ಮದಲ್ಲಿ ಅಂಗನು ಲಿಂಗಮಯವಾಗುವುದಕ್ಕೆ ಸಾಮರಸ್ಯವೆನ್ನುತ್ತಾರೆ. ಜೀವನಲ್ಲಿ ಎರಡು ವಿಧವಾದ ಶಕ್ತಿಗಳಿವೆ. ಮೊದಲನೆಯದು ಜೀವನನ್ನು ಅರಿಷಡ್ವರ್ಗಗಳಿಗೆ ವಶವಾಗುವಂತೆ ಮಾಡುತ್ತದೆ. ಎರಡನೆಯದು ಅರಿಷಡ್ವರ್ಗಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವಂತೆ ಮಾಡಿ ಮೋಕ್ಷಸಾಧನೆಗೆ ಜೀವನನ್ನು ಪ್ರೇರೇಪಿಸುತ್ತದೆ. ಅದು ಭಕ್ತಿ ಎನಿಸಿಕೊಳ್ಳುತ್ತದೆ. ಬದ್ಧ ಜೀವನವನ್ನು ವಿಮೋಚನಗೊಳಿಸುವ ಶಕ್ತಿಯೇ ಭಕ್ತಿಯು. ಜೀವನಿಗೆ ಗುರೂಪದಿಷ್ಟವಾದ ಅಷ್ಟಾವರಣ ಷಟ್‌ಸ್ಥಲಾಚರಣೆಯಿಂದ ಜಗತ್ತಿನ ಬಂಧಗಳ ಸೋಂಕು ಇರುವುದಿಲ್ಲ. ಶಿವಮಾರ್ಗದಲ್ಲಿ ಯೋಗವಾಗಲೀ ತಪಸ್ಸಾಗಲೀ, ಅರ್ಚನೆಯಾಗಲೀ ಅವನಿಗೆ ಗೋಚರಿಸುವುದಿಲ್ಲ. ಅವನಿಗೆ ಗೋಚರಿಸುವುದು ಭಕ್ತಿಯೊಂದೇ.

[40]ನ ಯೋಗೋ ನ ತಪೋ ನಾರ್ಚಾ ಕ್ರಮಃ ಕೋಽಪಿ ನ ವಿದ್ಯತೇ ।
ಅಮಾಯೇ ಶಿವಮಾರ್ಗೇಽಸ್ಮಿನ್ ಭಕ್ತಿರೇಕಾ ಪ್ರಶಸ್ಯತೇ ॥

ಭಕ್ತಿಯು ಸತ್ವರಜಸ್ತಮೋಯುಕ್ತವಾಗಿದ್ದರೂ ಜೀವದಿಂದ ಅದು ಶಿವನಿಗೆ ಅರ್ಪಿಸಲ್ಪಟ್ಟರೆ ಶುದ್ಧಿಯನ್ನು ಹೊಂದುತ್ತದೆ. ಇದರಿಂದ ಭಕ್ತಿಯು ಸ್ವಾಭಾವಿಕವಾಗಿ ತ್ರಿಗುಣಾ

---

38 ಶಾಂಡಿಲ್ಯನ ಭಕ್ತಿಸೂತ್ರ 2.

39 ನಾರದಭಕ್ತಿಸೂತ್ರ. 2.

40 ಅನುಭವಸೂತ್ರ ಅಧಿಕರಣ 8 ಸೂ. 13.

ಶೀತವಾಗುತ್ತದೆ. ಸ್ಪರ್ಶಮಣಿಸಂಪರ್ಕದಿಂದ ಲೋಹಗಳು ಸುವರ್ಣವಾಗುವಂತೆ ಈ ಶುದ್ಧವಾದ ಶಿವಭಕ್ತಿಯು ಜೀವನಲ್ಲಿಯ ಸತ್ವರಜಸ್ತಮಗಳನ್ನು ಹೋಗಲಾಡಿಸಿ ಅವನನ್ನು ಶಿವನಡಿಗೆ ಕರೆದೊಯ್ಯಲು ಸಹಾಯಕವಾಗುತ್ತದೆ.

[40]ಯಥಾ ಸಿದ್ಧರಸೋ ಲೋಹತ್ರಯಂ ಚೈಕಪ್ರಕಾರತಃ।
ಕುರ್ಯಾತ್ಸ್ವರ್ಣಂ ತಥಾ ಭಕ್ತಿರತಿಃ ಶೈವಂ ಗುಣತ್ರಯಮ್॥

ಶಿವಭಕ್ತಿಯುಕ್ತನಾಗಿ ತ್ರಿಕರಣಗಳಿಂದ ಮಾಡಿದ ಕ್ರಿಯೆಯೇ ಶಿವಾರ್ಚನೆಯಾಗುತ್ತದೆ. ಶಿವಪ್ರಸಾದದಿಂದ ಶಿವಭಕ್ತಿಯೂ, ಶಿವಭಕ್ತಿಯಿಂದ ಶಿವಪ್ರಸಾದವೂ ಪ್ರಾಪ್ತವಾಗುತ್ತದೆ. ಇವೆರಡಕ್ಕೂ ಬೀಜಾಂಕುರದಂತೆ ಪರಸ್ಪರ ಸಂಬಂಧವಿದೆ.

[41]ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥

ಭಕ್ತಿಯು ಉಪಾಸನಾಮಾರ್ಗದಲ್ಲಿ ಮೊದಲನೆಯದು. ಆತ್ಮನನ್ನು ಶಿವನಿಂದ ಬೇರ್ಪಡಿಸಿ ಶಿವನನ್ನು ಉಪಾಸ್ಯನನ್ನಾಗಿಯೂ ಜೀವನನ್ನು ಉಪಾಸಕನನ್ನಾಗಿಯೂ ಮಾಡಿ ಅಂತ್ಯದಲ್ಲಿ ಶಿವಜೀವರ ಸಮರಸವನ್ನು ಮಾಡುವುದೇ ಭಕ್ತಿಯ ಕಾರ್ಯವಾಗಿರುತ್ತದೆ. ಇದನ್ನೇ ವೀರಶೈವರು ಶಿವಾದ್ವೈತಭಕ್ತಿ ಎಂದು ಕರೆಯುತ್ತಾರೆ.

[42]ಅದ್ವೈತಭಕ್ತಿರೂಪೇಣ ದೃಶ್ಯಂತೇ ಭಕ್ತಿಯೋಗತಃ।
ಕ್ರಿಯಾಕಾರಸ್ವರೂಪೇಣ ಪ್ರತೀತಾಪ್ಯೇವ ಸರ್ವಥಾ॥

ಈ ಶಿವಾದ್ವೈತಭಕ್ತಿಯನ್ನು ಪಂಚಮಮಹಾಪುರುಷಾರ್ಥವೆಂದು ಕರೆಯುತ್ತಾರೆ. ಶಿವಪ್ರಸಾದದಿಂದ ಶಿವಜ್ಞಾನವಾಗುವುದು. ಆ ಶಿವಜ್ಞಾನದಿಂದ ಮೋಕ್ಷ ಸಿದ್ಧಿಸುವುದು. ಭಕ್ತಿಯು ಧರ್ಮ, ಅರ್ಥ, ಕಾಮ. ಮೋಕ್ಷಕ್ಕಿಂತಲೂ ಮಿಗಿಲಾದುದು. ಐದನೇ ಪುರುಷಾರ್ಥವೆಂದೂ. ಪರಮಾರ್ಥದಾಯಿನಿಯೆಂದೂ. ಪರತತ್ತ್ವವೇದಿನಿಯೆಂದೂ, ಭವದೋಷಹಾರಿಯೆಂದೂ, ಶಿವಭಾವಕಾರಿಯೆಂದೂ, ಮೊಗ್ಗೆಯ ಮಾಯಿದೇವರು ತಮ್ಮ ಅನುಭವಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ.

[43]ಪಂಚಮಃ ಪುರುಷಾರ್ಥೋ ಹಿ ಭಕ್ತಿಃ ಶೈವೀ ಸನಾತನೀ।
ಲೋಕಯೋರುಭಯೋರೈಹಿಕಾಮುಷ್ಮಿಕಪದಾರ್ಥಯೋಃ॥
[44]ಭಕ್ತಿರೇವ ಪರಮಾರ್ಥದಾಯಿನೀ ಭಕ್ತಿರೇವ ಪರತತ್ತ್ವವೇದಿನೀ।
ಭಕ್ತಿರೇವ ಭವದೋಷಹಾರಿಣೀ ಭಕ್ತಿರೇವ ಶಿವಭಾವಕಾರಿಣೀ॥

---

40 —,,— 8 ,, 18.
41 —,,— 8 ,, 31.
42 ಅನುಭವಸೂತ್ರ, ಅಧಿಕರಣ ಸೂತ್ರ—63
43 —,,— —,,— 78
44 —,,— —,,— 83

[45]ಕ್ರಿಯಾ ವಿಶ್ರಾಂತಿರಿತ್ಯೇವಂ ಮಯಾ ಸಂಸಾರನಾಶಿನೀ।
ಅದ್ವೈತಭಕ್ತಿನಿರ್ವಾಣನಿಷ್ಠಾ ಕಾಷ್ಠಾ ಸಮೀರಿತಾ॥

ಹೀಗೆ ಭವಬಂಧನಾಶಕವಾದ ಶಿವಾದ್ವೈತಭಕ್ತಿ ನಿರ್ವಾಣನಿಷ್ಠೆಯೇ ಅಂತಿಮ ಧ್ಯೇಯ ವಾಗಿದೆ ಎಂದು ಮಾಯಿದೇವರು ಕ್ರಿಯಾಜ್ಞಾನಸಮುಂದಾಯವಲ್ಲಿ ಭಕ್ತಿಯ ಸ್ಥಾನ ವನ್ನು ಪ್ರತಿಪಾದಿಸಿ ಕ್ರಿಯಾ-ಭಕ್ತಿ–ಜ್ಞಾನ ಎಂಬ ತ್ರಿಪುಟಿಸಿದ್ಧಾಂತವನ್ನು ಪ್ರದರ್ಶಿಸಿ ದ್ದಾರೆ. ಹೀಗೆ ಪ್ರತಿಪಾದಿಸಿರರುವ ಭಕ್ತಿಕ್ರಿಯಾಜ್ಞಾನಗಳು ಒಂದಕ್ಕೊಂದು ಸಮ ನಾಗಿರುವುದರಿಂದಲೇ

[46]ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಮ್।
ಮಾನವಶ್ಶಿವಯೋಗೇನ ಶಿವೋ ಭವತಿ ನಿಶ್ಚಯಃ॥

ಎಂದು ಪರಿಣಾಮವಾದವನ್ನು ಅಂಗೀಕರಿಸುವ ಈ ವೀರಶೈವ ಧರ್ಮಕ್ಕೆ ಭಕ್ತಿ-ಕ್ರಿಯಾ-ಜ್ಞಾನ ಸಮಸಮುಚ್ಚಯಸಿದ್ಧಾಂತವೆಂದು ಹೇಳುವುದು ಸಮಂಜಸವಾಗಿದೆ, ಬಸ ವಾದಿ ಶಿವಶರಣರ ವಚನಗಳಲ್ಲಿ ಈ ತ್ರಿಪುಟಿ ಸಿದ್ಧಾಂತವನ್ನು ನಾವು ಕಾಣಬಹುದಾಗಿದೆ.

ಭಕ್ತಿ—

ಭಕ್ತಿ ಎಂಬ ನಿಧಾನವ ಸಾಧಿಸುವೊಡೆ
ಶಿವಪ್ರೇಮವೆಂಬ ಅಂಜನವನಚ್ಚಿಕೊಂಬುದು
ಭಕ್ತನಾದವಂಗೆ ಇದೇ ಪಥವಾಗಿರಬೇಕು
ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ
(ಬಸವಣ್ಣ, ವಚನ 243)

ಭಕ್ತಿಜ್ಞಾನ :

ಜ್ಞಾನದ ಕಾರಣಾಂಗವೇ ಭಕ್ತಿಯು
ಭಕ್ತಿಯ ಮಹಾಕಾರಣಾಂಗವೇ ಜ್ಞಾನವು
ಭಕ್ತಿಜ್ಞಾನವೆಂಬುದು ಕಾಕಾಕ್ಷಿಯಂತೆ
ಭಕ್ತಿಜ್ಞಾನವೆಂಬುದು ಎನ್ನಮೋಹದ ಚನ್ನಮಲ್ಲಿಕಾರ್ಜುನಾ ನಿಮ್ಮಂತೆ.
(ಅಕ್ಕಮಹಾದೇವಿ. ವಚನ 186)

ಜ್ಞಾನ–ಕ್ರಿಯೆ :

ಜ್ಞಾನವಿಡಿದಾಚರಿಸಿದರಲ್ಲದೆ ಕ್ರೀವಿಡಿದಾಚರಿಸಲಿಲ್ಲವು
ಕ್ರೀವಿಡಿದಾಚರಿಸಿದರಲ್ಲದೆ ಜ್ಞಾನವಿಡಿದಾಚರಿಸಲಿಲ್ಲವು
ರೂಪವಿಡಿದು ನಿರೀಕ್ಷಿಸುವರಲ್ಲದೆ ಅರೂಪವಿಡಿದು ನಿರೀಕ್ಷಿಸರು

---

45 ಅನುಭವ ಸೂತ್ರ ಅಧಿಕರಣ 8
46 —,,— —,,— 88

ಜ್ಞಾನಕ್ರಿಯೆವಿಡಿದಾಚರಿಸಿದರಂ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಚೆನ್ನಬಸವಣ್ಣನವರು

(ಸಿದ್ಧರಾಮ—ವಚನ 1202)

ಕ್ರಿಯಾ ಜ್ಞಾನ ಎಂಬುದಕ್ಕೆ ಭೇದ ತಿಲಾಂಶವಿಲ್ಲ ನೋಡಾ
"ದ್ವಂದ್ವೇನ ಭೇದಃ" ಎಂಬ ಅಥರ್ವಣ ಶಾಖೆಯದು ಸಟೆಯೆ ?
ಸೂಕ್ಷ್ಮೇಂದ್ರಿಯ ನಿಗ್ರಹದಲ್ಲಿ ಜ್ಞಾನವೆನಿಸಿತ್ತು
ಜ್ಞಾನಂ ವಿನಾ ಕ್ರಿಯಾ ನೋ ಭಾತಿ, ಕ್ರಿಯಾಂ ವಿನಾ ನೋ ಭಾತಿ ತತ್
ಎಲ್ಲೈ ಕಪಿಲಸಿದ್ಧಮಲ್ಲಿಕಾರ್ಜುನಾ

ಸಿದ್ಧರಾಮವಚನ, 844)

ಕ್ರಿಯೆಯದು ಚೆನ್ನಬಸವಣ್ಣನ ಎಡಪಾದ
ಜ್ಞಾನವದು ಚೆನ್ನಬಸವಣ್ಣನ ಬಲಪಾದ
ನಾನವರ ಚಮ್ಮಾವುಗೆ ನೀನವನ ಮನೆದಾಸ ನೋಡಯ್ಯಾ

(ಸಿದ್ಧರಾಮ ವಚನ 890)

ಜ್ಞಾನಕ್ರಿಯಾದಿಗಳಿಂದ ಲಿಂಗದಲ್ಲಿ ನಿಬ್ಬೆರಗಾದ ನೀಲಮ್ಮನ
ಪಾದದ ಕಂದ ನಾನು, ಪಾದದ ದಾಸ ನಾನು, ಪಾದದ ಪಾದುಕೆ ನಾನು,
ಪಾದುಕೆಯ ಧೂಳಿ ನಾನು, ಕಪಿಲಸಿದ್ಧಮಲ್ಲಿಕಾರ್ಜುನಾ.

(ಸಿದ್ಧರಾಮ–ವಚನ-901)

ಕ್ರಿಯೆ :

ಕ್ರಿಯೆಯಿಲ್ಲದ ಭಕ್ತ **ಮನುಜ,**
ಕ್ರಿಯೆಯಿಲ್ಲದ ಮಹೇಶ **ರಾಕ್ಷಸ,**
ಕ್ರಿಯೆಯಿಲ್ಲದ ಪ್ರಸಾದಿ **ಯವನ,**
ಕ್ರಿಯೆಯಿಲ್ಲದ ಪ್ರಾಣಲಿಂಗಿ **ಭವಿ,**
ಕ್ರಿಯೆಯಿಲ್ಲದ ಶರಣ **ಅಜ್ಞಾನಿ,**
ಕ್ರಿಯೆಯಿಲ್ಲದ ಲಿಂಗೈಕ್ಯ **ಜನನಕ್ಕೊಳಗು** ನೋಡಾ
ಕೂಡಲಚೆನ್ನಸಂಗಮದೇವಾ

(ಚೆನ್ನಬಸವಣ್ಣ-ವಚನ-226)

೭—೦

ಸತ್ಯಶುದ್ಧಕಾಯಕ

ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮಿ. ಎಂ. ಎ.

ಸ್ವತಂತ್ರ ಭಾರತದ ಸಂವಿಧಾನವು ಜಾತ್ಯತೀತ, ವರ್ಗರಹಿತ ಸಮಾಜ ನಿರ್ಮಾಣದ ಗುರಿ ಹೊಂದಿದೆ. ಇಂತಹ ಸುಂದರ ಸಮಾಜದ ಕಲ್ಪನೆ, ನಿರ್ಮಾಣಕಾರ್ಯ ಹನ್ನೆರಡನೇ ಶತಮಾನದಲ್ಲೇ ಕರ್ನಾಟಕ ರಾಜ್ಯದಲ್ಲಿ ರೂಪುಗೊಂಡಿತ್ತೆಂಬುದು ಚರಿತ್ರಾರ್ಹ ಸಂಗತಿಯಾಗಿದೆ. ಒಬ್ಬ ವ್ಯಕ್ತಿಯನ್ನು ಜಾತಿಯ ಆಧಾರದಿಂದ ಉಚ್ಚ ನೀಚನೆಂದಾಗ ಅಥವಾ ಅವನಲ್ಲಿ ಹಣವಿದೆ, ಇಲ್ಲವೆಂಬ ಭೇದದಿಂದ ವರ್ಗೀಕರಿಸಿದಾಗ ಸಮಾಜದಲ್ಲಿ ಏರುಪೇರುಗಳಾಗುವುದು ಸಹಜ. ಅಂದರೆ ವ್ಯಕ್ತಿ ಮತ್ತು ಸಮಾಜ ಪರಸ್ಪರ ಪೂರಕಗಳು. ಸಮಾಜದ ವ್ಯಕ್ತಿಗಳೆಲ್ಲರ ಪರಸ್ಪರ ಸುಮಧುರ ಸಂಬಂಧವೇ ಮಾನವತಾವಾದದ ಗುರಿಯಾಗಿದೆ. ಮಾನವ ತನ್ನ ಜೀವಿತ ಕಾಲದಲ್ಲಿ ಸುಖಸಂತೋಷದಿಂದ ಬಾಳಲು, ಅವನಿಗೆ ಧರ್ಮದ ಚೌಕಟ್ಟು ಅಗತ್ಯ. ಆತ್ಮೋನ್ನತಿ ಮತ್ತು ಸಕಲ ಜೀವಾವಳಿಗೆ ಒಳಿತಾಗಬೇಕೆಂಬುದೇ ಧರ್ಮದ ಗುರಿ. ಆದುದರಿಂದ ಅನುಭಾವಿಗಳು ನಮಗೆ ಮಾರ್ಗದರ್ಶನವಿತ್ತಿದ್ದಾರೆ. ನಾವು ಸತ್ಯದಿಂದ ಸದಾಚಾರದಿಂದ ಹಾಗೂ ನುಡಿದಂತೆ ನಡೆಯಲು ಹೇಳಿದ್ದಾರೆ.

ಈ ದೃಷ್ಟಿಯಿಂದ ವೀರಶೈವಧರ್ಮ ವಿಶ್ವಧರ್ಮವಾಗಿದೆ. ದಯೆಯೇ ಧರ್ಮದ ಮೂಲವೆಂದು ಸಾರುವ, ಸತ್ಯವ ನುಡಿವುದೇ ದೇವಲೋಕ, ಎನ್ನುವ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಧರ್ಮವಿದಾಗಿದೆ. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲಗಳೇ ಮಾರ್ಗವಾಗಿ ಇರಬೇಕೆಂದು ವೀರಶೈವಧರ್ಮ ಬೋಧಿಸುತ್ತದೆ. ಈ ಉದ್ದೇಶಸಾಧನೆಗಾಗಿ ಶ್ರದ್ಧೆ ಪಕ್ವಗೊಂಡು, ನಿಷ್ಠೆ ಬೆಳೆದು, ಅನುಭವದ ಆನಂದ ಸವಿಯುವಂತಾಗುವುದು. ಇಷ್ಟಲಿಂಗ ಪೂಜೆಯಿಂದ, ತನು ಮನ ಧನ ಅರ್ಪಣೆಯಿಂದ ಗುರುಲಿಂಗಜಂಗಮ ಸೇವೆ ಸಲ್ಲಿಸಿ ಇಹಪರ ಜೀವನವನ್ನು ಸಾರ್ಥಕ್ಯಗೊಳಿಸಲು ಸಾಧ್ಯವೆಂಬುದನ್ನು ಶರಣರು ತಮ್ಮ ಸಾಧನೆಯಿಂದ ತೋರಿಸಿಕೊಟ್ಟಿದ್ದಾರೆ.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಇಂತಹ ಗುರಿಸಾಧನೆಗಾಗಿ ಅಭೂತಪೂರ್ವ ಕ್ರಾಂತಿಯಾದುದು ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ಹಾಗೂ ಆರ್ಥಿಕವಾಗಿ ಅನೇಕ ಸಮಸ್ಯೆಗಳಿದ್ದ

ಅಂದಿನ ಸಮಾಜದಲ್ಲಿ ಅಂಧಶ್ರದ್ಧೆ, ಮೂಢನಂಬಿಕೆಗಳನ್ನು ಕಿತ್ತೊಗೆದು, ಸುಂದರ ಸಮನ್ವಯ ಸಾಧಿಸಿ, ಕಾಯಕಜೀವಿಗಳಾಗಿ, ದಾಸೋಹಪ್ರಿಯರಾಗಿ, ಉತ್ತಮ ಚಾರಿತ್ರ್ಯ ಹೊಂದಿ ಬಾಳಿದ ಸಾವಿರಾರು ಶಿವಶರಣರ ಚರಿತ್ರೆಯನ್ನು ಓದಿದಾಗ, ಕೇಳಿದಾಗ ಮೈನವಿರೇಳುವುದು ಸಹಜ. 'ಕಾಯಕವೇ ಕೈಲಾಸ' 'ವೆನ್ನುವ ಸುಂದರ ಅರ್ಥಪೂರ್ಣ ತತ್ವವನ್ನು ಜಗತ್ತಿಗೆ ಇತ್ತವರು ಶಿವಶರಣರು. ಗಾದೆಯ ಮಾತುಗಳು ನಾಣ್ಣುಡಿಗಳು ಕಾಯಕತತ್ವವನ್ನು ಪ್ರತಿಪಾದಿಸುತ್ತವೆ.

ಸಮಾಜದಲ್ಲಿ ಸರ್ವರೂ ಸಮಾನರು, "ಸರ್ವೇ ಜನಾಃ ಸುಖಿನೋ ಭವಂತು" ಎಂದು ಸಾರಿದ ನಾಡಿನಲ್ಲಿ, ಜಾತಿಗಳಿಂದ ಮಾನವನ ನಿಜವಾದ ಯೋಗ್ಯತೆಯನ್ನು ನಿರ್ಣಯಿಸದೆ ಅವನ ನಡೆ ನುಡಿಗಳಿಂದ ನಿರ್ಣಯಿಸುವಂತಾಗಬೇಕು.

"ಹೊಲೆಗುಂಡಗಲ್ಲದೆ ಪಿಂಡದ ನೆಲಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೇ
ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲಾ ಒಂದೇ
ಏನನೋದಿ ಏನ ಕೇಳಿ ಏನು ಫಲ ?
ಕುಲಜನೆಂಬುದಕ್ಕಾವುದು ದೃಷ್ಟ ?

ಹುಟ್ಟುವುದು ಎಲ್ಲರೂ ಒಂದೇ ರೀತಿಯಲ್ಲಿ, ಆಸೆ ಆಮಿಷಾದಿಗುಣಗಳು ದೌರ್ಬಲ್ಯಗಳು ಎಲ್ಲರಿಗೂ ಸಮಾನವಾದುವು. ಆದುದರಿಂದ ಸದ್ಗುಣಗಳನ್ನು ಬೆಳಸಿ ಕೊಳ್ಳದಿದ್ದರೆ ಏನನ್ನು ಓದಿ ಏನನ್ನು ಕೇಳಿದರೂ ಫಲವಿಲ್ಲ–ಉತ್ತಮ ಕುಲಜನೆಂಬುದು ಅರ್ಥಹೀನ. ವೃತ್ತಿಯಿಂದ ಕುಲ ನಿರ್ಧರಿಸುವುದು ಕೃತಕವಾದುದೇ ಹೊರತು, ನೈಜ ವಾಗುವುದಿಲ್ಲ.

ಸಪ್ತಧಾತುಸಮಂ ಪಿಂಡಂ ಸಮಂಯೋನಿಸಮುದ್ಭವಂ ।
ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥
"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೇ ಜಗದೊಳಗೆ ?
ಇದು ಕಾರಣ, ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೇ ಕುಲಜನು"

ಅವರವರ ಮನೋಧರ್ಮಕ್ಕೆ ಅಥವಾ ಅಭಿರುಚಿಗೆ ಅನುಸರಿಸಿ ಕೈಗೊಂಡ ಕೆಲಸ ಗಳು ಮೇಲೂ ಅಲ್ಲ, ಕೀಳೂ ಅಲ್ಲ. ಯಾರು ಸಹ ಕರ್ಣದಿಂದ ಉದ್ಭವವಾಗಿಲ್ಲ. ಹುಟ್ಟಿನಿಂದ ಜಾತಿ ನಿರ್ಧಾರ ಮಾಡಬಾರದು. ಅಂತರಂಗ ಶೋಧನೆಯಿಂದ ಯಾರು ತಮ್ಮ ಅಂಗದ ಸ್ವರೂಪವನ್ನು ಅರಿತು ತಮ್ಮ ಆತ್ಮಸಾಧನೆಯಲ್ಲಿ ತೊಡಗುವರೋ

ಅವರೇ ಉತ್ತಮ ಕುಲದವರಾಗುತ್ತಾರೆ. ಇಂತಹ ಅವಕಾಶ ಎಲ್ಲರಿಗೂ ಸಮಾನ ಆಗಿರಬೇಕು. ಹುಟ್ಟಿನಿಂದ ಕುಲ ನಿರ್ಧರಿಸುವವರನ್ನು ಬಸವಣ್ಣನವರು ಛೇಡಿಸಿ—

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ
ಕುಲವೇನೋ ಅವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗಮ ಶರಣರೇ ಕುಲಜರು ''ಎಂದಿದ್ದಾರೆ.

ಭಗವಂತನನ್ನು ನಂಬುವ ಭಕ್ತ, ನಂಬದ ಭವಿ, ಎಂಬುದೇ ಎರಡು ಜಾತಿ, ಬೇರಾವ ಜಾತಿಗಳೂ ಇಲ್ಲ ಎಂದು ಹೇಳಿದ್ದಾರೆ.

ಸಮಾಜದಲ್ಲಿ ಮೇಲು ಕೀಳೆಂಬ ಭಾವನೆಯಿಲ್ಲದೆ ಸದ್ಗುಣಗಳಿಂದಲೇ ಯೋಗ್ಯತೆಯನ್ನು ನಿರ್ಧರಿಸುವ ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ಪಡೆಯಬಲ್ಲ ಆದರ್ಶ ಸಮಾಜದ ರಚನೆ ಮಾಡಲು ''ಕಾಯಕ''ವೆಂಬ ಅಪೂರ್ವ ಮಾರ್ಗವನ್ನು ಈ ವಿಚಾರ ಪ್ರಪಂಚಕ್ಕೆ ಬಸವಣ್ಣನವರು ತೋರಿಸಿದ್ದಾರೆ. ಇವರ ನೇತೃತ್ವದಲ್ಲಿ ಶರಣರು ಕಂಡಿರುವ ಆದರ್ಶ ಮತ್ತು ಅರ್ಥವ್ಯಾಪ್ತಿ ಸಾಮಾಜಿಕ ಸಾಧನೆಯು ಎಲ್ಲ ಸ್ತರಗಳನ್ನು ಒಳಗೊಂಡಿರುವುದಲ್ಲದೆ, ಆಂತರಿಕ ವಿಕಾಸದತ್ತಲೂ ಅನ್ವಯಿಸುತ್ತದೆ. 'ಕಾಯಕ'ದ ಲಕ್ಷಣಗಳು ಬಹಳ ಮಹತ್ವವುಳ್ಳವು. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇರಬೇಕು. ಕೆಲಸ ಮಾಡದೆ ಮತ್ತೊಬ್ಬರ ದುಡಿಮೆಯಿಂದ ಜೀವಿಸಬಾರದು, ಜೀವನ ನಿರ್ವಹಣೆಗಾಗಿ ಕೈಗೊಂಡ ವೃತ್ತಿ ಅವನ ಸರ್ವಾಂಗೀಣ ವಿಕಾಸಕ್ಕೆ ಅಡ್ಡಿಯಾಗಬಾರದು. ಉದ್ಯೋಗದಲ್ಲಿ ಮೇಲು ಕೀಳೆಂಬುದಿಲ್ಲ. ಆದರೆ ಅದನ್ನು ನಿರ್ವಹಿಸುವ ಮನೋಧರ್ಮದಲ್ಲಿದೆ. ಹೀಗೆ ನಿರ್ವಹಿಸಿದ ವೃತ್ತಿ ಅಥವಾ ಉದ್ಯೋಗ, ಕಾಯಕವಾಗಿ ಪರಿಣಮಿಸುತ್ತದೆ. ವೈರಾಗ್ಯದ ಸೋಗುಹಾಕಿ ದುಡಿಯದ ಸೋಮಾರಿಗಳನ್ನು ಶರಣರು ಖಂಡಿಸುತ್ತಾರೆ. ಇಲ್ಲಿ ಚೆನ್ನಾಗಿ ಬದುಕಬೇಕು, ಚೆನ್ನಾಗಿ ದುಡಿಯಬೇಕು. ದುಡಿತದ ಫಲ ಸ್ವಾರ್ಥಕ್ಕೆ ಮೀಸಲಾಗಬಾರದು. ತನಗಲ್ಲದೆ ಇತರರಿಗಾಗಿಯೂ ಬದುಕಬೇಕು, ಇದನ್ನೇ ಶರಣರು 'ದಾಸೋಹ' ಎನ್ನುವುದು. ಅವರ ತ್ರಿವಿಧ ದಾಸೋಹ ಕಲ್ಪನೆ ಅರ್ಥವತ್ತಾಗಿದೆ. ದುಡಿಮೆಯ ಫಲವನ್ನು ದಾಸೋಹದಲ್ಲಿ ವಿನಿಯೋಗಿಸಿದಾಗ ಮಾತ್ರ ದುಡಿಮೆಯು ಕಾಯಕವಾಗುತ್ತದೆ. ಬಸವಣ್ಣನವರು ಸಂಪತ್ತಿನ ಗಳಿಕೆಗಾಗಿ ಮಂತ್ರಿಯಾಗಿ ದುಡಿಯಲಿಲ್ಲ. ''ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ ಎನ್ನ ಮನಕ್ಕೆ ಮನವೇ ಸಾಕ್ಷಿ ''ಎಂದು ಹೇಳುತ್ತಾ ಬಸವಣ್ಣನವರು ತಾವು ಬಿಜ್ಜಳನ ಮಂತ್ರಿಯಾದುದಕ್ಕೆ ಕಾರಣ ತಿಳಿಸುತ್ತಾರೆ.

''ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು ;

ಕೊಡುವೆನುತ್ತರವನವರಿಗೆ, ಕೊಡಲಮ್ಮುವೆ,
ಹೊಲೆಯರ ಮನೆಯ ಹೊಕ್ಕು
ಸಲೆ ಕೈ ಕೂಲಿಯ ಮಾಡಿಯಾದರೂ
ನಿಮ್ಮ ನಿಲುವಿಂಗೆ ಕುದಿವೆನಲ್ಲದೆ,
ಎನ್ನೊಡಲವಸರಕ್ಕೆ ಕುದಿದೆನಾದೊಡೆ
ತಲೆದಂಡ ಕೂಡಲಸಂಗಮ ದೇವಾ

ಹೀಗೆ ಜಗತ್ತಿನ ಸಂಸಾರಕ್ಕಾಗಿ ದುಡಿಯುತ್ತಾ ಯಾವ ಉದ್ಯೋಗವನ್ನು ಕೈಗೊಂಡರೂ ಅದು ಕಾಯಕವಾಗುತ್ತದೆ. ಸಮಾಜ ಸ್ವಯಂಪೂರ್ಣವಾಗಬೇಕಾದರೆ, ಸುಖಿಯೂ ಸಮೃದ್ಧವೂ ಆಗಬೇಕಾದರೆ ಎಲ್ಲರೂ ರಚನಾತ್ಮಕ ಉದ್ಯೋಗದಲ್ಲಿ ನಿರತರಾಗಬೇಕು ಎಂದು ಶರಣರು ಹೇಳಿದ್ದಾರೆ. ಭಿಕ್ಷೆ ಬೇಡುವುದನ್ನು ಅವರು ಕಟುವಾಗಿಯೇ ಖಂಡಿಸಿದ್ದಾರೆ. ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನ ಅದು ಜೀವನವೇ ಅಲ್ಲ. ಇನ್ನೊಬ್ಬರ ಮನೆಗೆ ಹೋಗಿ ಉದರವನ್ನು ಹೊರೆಯುವವನು ಅವನು ಭಕ್ತನಾಗಲೀ, ಗುರುವಾಗಲೀ, ಜಂಗಮವಾಗಲೀ ಅವನನ್ನು ಶರಣರು ತಿರಸ್ಕರಿಸಿದ್ದಾರೆ.

''ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಷಪಾಶ ಹರಿವುದು
ಇದು ಚನ್ನಬಸವಣ್ಣ ಪ್ರಿಯ ಚಂದೇಶ್ವರಲಿಂಗದ ಅರಿವು''

ಎಂಬುದು ನುಲಿಯ ಚಂದಯ್ಯನ ಕಾಯಕನಿಷ್ಠೆಯನ್ನು ತೋರುತ್ತವೆ. ಇವನ ಕಾಯಕ ಹಗ್ಗ ಹೊಸೆಯುವುದು, ಇವನೊಬ್ಬ ಮಹಾಸಾಧಕ. ಪ್ರಾಮಾಣಿಕತೆಯಿಂದ ಕೂಡಿದ ಸತ್ಯ ಶುದ್ಧಕಾಯಕವೇ ಕೈಲಾಸವೆಂಬುದು ಶಿವಶರಣರ ಪರಮ ಗುರಿ. ಇದು ಕೇವಲ ಗುರಿಯಾಗಿರದೆ ಆಚರಣೆಗೇ ತಂದರು. ಇಂತಹ ಕಾಯಕಧೀರರಾಗಿ ಮೆರೆದ ಅಸಂಖ್ಯಾತ ಶಿವಶರಣರಲ್ಲಿ ಹರಳಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ, ಗಾನದ ಕನ್ನಪ್ಪ, ವೈದ್ಯ ಸಂಗಣ್ಣ, ಹಾವಿನಾಳ ಕಲ್ಲಯ್ಯ, ಬಹುರೂಪಿ ಚೌಡಯ್ಯ ಮುಂತಾದವರಿದ್ದರು.

ಅನುಭವಮಂಟಪ ಅನುಭಾವಿಗಳ ಕೂಟವಾಗಿತ್ತು. ತಾವು ಎದುರಿಸಬೇಕಾದ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳ ವಿಚಾರಮಂಥನ ಅಲ್ಲಿ ಚರ್ಚಿತವಾಗುತ್ತಿತ್ತು. ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಒಮ್ಮೆ 'ಕಾಯಕ' ಕುರಿತ ಸಮಸ್ಯೆಯನ್ನು ಆಯ್ದಕ್ಕಿ ಮಾರಯ್ಯ ಮಂಡಿಸಿದನು. ಅಳೆಯುವಾಗ ಸಾಗಿಸುವಾಗ ಚೆಲ್ಲಿದ ಅಕ್ಕಿಯನ್ನು ಆಯುವುದು ಆತನ ಕಾಯಕ. ಜೀವನಾಧಾರವಾದ ಧಾನ್ಯ ಹಾಳಾಗಬಾರದೆಂಬ ಮಹತ್ತರ ಆಶಯ ಈ ಕಾಯಕದ ಹಿಂದಿದೆ. ''ಕಾಯಕವೇ ಕೈಲಾಸ'' ಎಂಬುದರಿಂದ ಗುರು ಲಿಂಗ ಜಂಗಮದ ಹಂಗಾದರೂ ಏಕೆ? ಎಂಬ ಸಂಶಯ ಆವನದು

"ಕಾಯಕದಲ್ಲಿ ನಿರತನಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗದರ್ಶನವಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು"

ಕಾಯಕವೊಂದರಿಂದಲೇ ಎಲ್ಲವೂ ಸಿದ್ಧಿಸುವುದಾದರೆ ತ್ರಿವಿಧ ದಾಸೋಹಗಳ ಶ್ರಮವಾದರೂ ಏಕೆ ? ಎಂಬುದು ಮಾರಯ್ಯನ ಸಂದೇಹ. ಕಾಯಕದ ಅರ್ಥವ್ಯಾಪ್ತಿ ಸಂಕುಚಿತವಾದಾಗ ಹೊಟ್ಟೆಪಾಡಿಗಾಗಿ ಉದ್ಯೋಗ ಎಂಬಷ್ಟಕ್ಕೆ ನಿಲ್ಲುತ್ತದೆ. ಆದರೆ ವಿಶಾಲವಾದ ಅರ್ಥದಲ್ಲಿ ಅದು ಉದ್ಯೋಗವೇ ನಿಜ. ಅದರಲ್ಲಿ ಶರೀರಶ್ರಮವಿರಬೇಕು. ಅದು ಸಮಾಜಕ್ಕೆ ಉಪಯುಕ್ತವಾಗಬೇಕೇ ಹೊರತು ಹಾನಿಕರವಾಗಿರಬಾರದು. ಸಮಾಜದ ಆವಶ್ಯಕತೆ ಪೂರೈಸುವಂತಿರಬೇಕು. ಇದರಿಂದ ದೊರೆತ ಫಲ ವ್ಯಕ್ತಿಗೆ ಮಾತ್ರವಲ್ಲದೆ ಸಮಾಜಕ್ಕೂ ದೊರೆಯಬೇಕು. ಕಾರ್ಯದಿಂದ ಸ್ವಾರ್ಥತೆ ದೂರಾಗುತ್ತ ವಿಶ್ವಶಕ್ತಿ ಮೂಡಿ ಬೆಳೆದು ಬರಬೇಕು, ಇಂತಹ ನಿರ್ಲಿಪ್ತ ಮನೋಭಾವದಿಂದ ಗೈದ ಕೆಲಸ ಕಾಯಕವಾಗಿ ಪರಿಣಮಿಸುತ್ತದೆ. ಆದುದರಿಂದ ಕಾಯಕದ ಜೊತೆಗೆ ತ್ರಿವಿಧ ದಾಸೋಹವೂ ಅಗತ್ಯ ಎಂಬುವುದು ಪ್ರಭುವಿನ ಎಚ್ಚರಿಕೆಯ ಮಾತು.

ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು
ಅರಿವಿಂಗೆ ನೆಮ್ಮುಗೆ ಒಡಗೂಡಬೇಕು
ಅರಿವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ
ಬಯಲ ಭ್ರಮೆಯು ಕಳೆದು
ನಮ್ಮ ಗುಹೇಶ್ವರ ಲಿಂಗದಲ್ಲಿ ನಿಜತಪವನ್ನೈದುವುದು ಮಾರಯ್ಯಾ

ಎಂದು ಕಾಯಕದ ವಿಶಾಲಾರ್ಥವನ್ನು ಮಾರಯ್ಯನಿಗೆ ಪ್ರಭು ತಿಳಿಸುವನು. ಕಾಯಕದ ಮಹತ್ವ ಮನಗಂಡ ಮಾರಯ್ಯನು ಅದನ್ನೇ ನೆನೆಯುತ್ತ ಕುಳಿತಿರಲು, ಅಲ್ಲಿಗೆ ಅವನ ಪತ್ನಿ ಲಕ್ಕಮ್ಮ ಬಂದು ಕಾಯಕ ತಪ್ಪಬಾರದೆಂದು ಎಚ್ಚರಿಸಿ ಕಳುಹಿಸುತ್ತಾಳೆ. ಅವನು ಅವಶ್ಯಕತೆಗೆ ಮೀರಿದ ಪ್ರಮಾಣದಲ್ಲಿ ಅಕ್ಕಿಯನ್ನು ಆಯ್ದು ತಂದು ಲಕ್ಕಮ್ಮನಿಗೆ ಕೊಡುತ್ತಾನೆ. ಇಷ್ಟೊಂದು ಅಕ್ಕಿ ಆಸೆ ತರವಲ್ಲವೆಂದು ಅವಳು.

"ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗಕ್ಕೆ ದೂರ.

ಆದುದರಿಂದ ಕಾಯಕದಲ್ಲಿ ಅತಿಯಾಸೆ ಇರಬಾರದೆಂಬುದು ವ್ಯಕ್ತವಾಗುತ್ತದೆ. ಮೇಲಾಗಿ ಕಾಯಕದಲ್ಲಿ ಸಮಯಪಾಲನೆ ಇರಬೇಕು. ಅಂದಂದಿನ ಕಾಯಕವನ್ನು ಅಂದಂದು ಮಾಡಬೇಕು. ಅದಕ್ಕಾಗಿ ಹೆಚ್ಚಾದ ಅಕ್ಕಿಯನ್ನು ಸುರಿದು ಬರುವಂತೆ ಹೇಳಿ ಕಳುಹಿಸುತ್ತಾಳೆ.

ಇದು ಕಾಯಕದ ನೈಜ ಅರ್ಥ. ತನಗೆ ಆವಶ್ಯಕವಾದಷ್ಟನ್ನು ಮಾತ್ರ ಪ್ರತಿಯೊಬ್ಬನೂ ತೆಗೆದುಕೊಂಡರೆ ಲೋಕದಲ್ಲಿ ಯಾರಿಗೂ ಯಾವ ಆವಶ್ಯಕತೆಗೂ ಕೊರತೆ ಬಾರದು. ಸೃಷ್ಟಿ ಎಲ್ಲರಿಗೂ ಆವಶ್ಯಕವಾದುದನ್ನು ನೀಡುತ್ತದೆ. ಇದು ಅದರ ನಿಯಮ. ಅತಿ ಆಸೆಯಿಂದ ಅದನ್ನು ಶೇಖರಿಸಿಕೊಂಡಾಗ ಅಸಮತೆಯುಂಟಾಗಿ ವಿರಸಕ್ಕೆ ಕಾರಣವಾಗುತ್ತದೆ. ಅಗತ್ಯವಾದುದನ್ನು ಮಾತ್ರ ಉಳಿಸಿಕೊಂಡು ಉಳಿದುದನ್ನು ಬಿಟ್ಟಾಗ ಸಹಜೀವಿಗಳಿಗೆ ಅದರ ಉಪಯೋಗವಾಗುವುದು. ಇಂತಹ ಗುರಿಯು ಸಮಾಜದ ಭದ್ರ ಬುನಾದಿಯಾಗುವುದು. ಕಾಯಕ ಇಂತಹ ದೂರಾಲೋಚನೆ ಹೊಂದಿದೆ. ಲಕ್ಕಮ್ಮನ ಮಾತಿನಂತೆ ;

ಮನ ಶುದ್ಧವಿಲ್ಲದವನಿಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧವಾಗಿ ಕಾಯಕಮಾಡುವಲ್ಲಿ
ಸದ್ಭಕ್ತರಿಗೆ ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ

ಎಂದು ಮಾರಯ್ಯನಿಗೆ ತಿಳಿಸುತ್ತಾಳೆ. ಅಹಂಕಾರವಳಿದ ತ್ರಿವಿಧದಾಸೋಹವಮಾಡುವುದೇ ಕಾಯಕದ ಸಾರ್ಥಕತೆಯೆಂದು ಬಗೆದ ಅವಳು ಬಸವಾದಿ ಪ್ರಮಥರನ್ನು ತನ್ನ ಮನೆಗೆ ಆಹ್ವಾನಿಸಿ ಸತ್ಕರಿಸುತ್ತಾಳೆ.

ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿಗಳು ;
ಪಸಾರಕ್ಕನುವಿಲ್ಲ ; ಬಂದ ತತ್ಕಾಲಕ್ಕುಂಟು ;
ಕೂಡಲಸಂಗನ ಶರಣರು ಸ್ವತಂತ್ರಧೀರರು !

ಎಂದು ಬಸವಣ್ಣನವರು ಮಾರಯ್ಯ ದಂಪತಿಗಳನ್ನು ಸ್ತುತಿಸುತ್ತಾರೆ. ಇಲ್ಲಿ ಗಮನಿಸಬೇಕಾದುದು ಸಮಾಜವಾದದ ಬಹುಮುಖ್ಯ ಅಂಶ-ಅಸಂಗ್ರಹ ತತ್ವ. ಬಸವಣ್ಣನವರ ಜೀವನದಲ್ಲಿ ಇಂತಹ ಘಟನೆಯೊಂದನ್ನು ನಾವು ಕಾಣಬಹುದು. ಒಮ್ಮೆ ಮಹಾಮನೆಗೆ ಕಳ್ಳನೊಬ್ಬನು ಬಂದು ನೀಲಾಂಬಿಕೆಯ ಓಲೆಗಳನ್ನು ಕದಿಯಲು ಕೈ ಹಾಕುತ್ತಾನೆ. ನೀಲಾಂಬಿಕೆಯ ಕೂಗಿಗೆ ಎಚ್ಚರಗೊಂಡ ಬಸವಣ್ಣನವರು ವಿಷಯವರಿತು 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲಸಂಗಮ ದೇವನಲ್ಲವೆ ಬೇರಾರೂ ಅಲ್ಲವೆಂದು ಹೇಳಿ ಓಲೆಗಳನ್ನು ಬಿಚ್ಚಿಕೊಡುವಂತೆ ಗದರಿಸುತ್ತಾರೆ. 'ಇಂದು ನಾನು ಕಳ್ಳನಾದೆ, ಆ ಕಳ್ಳನ ಬಳಿ ಇಲ್ಲದಿದ್ದುದನ್ನು ಸಂಗ್ರಹಿಸಿದ್ದೇನೆಂದು ಆ ಕಳ್ಳ ನನ್ನ ಮನೆಗೆ ಬಂದಿದ್ದಾನೆ. ಇದರಿಂದ ನಾನು ಕಳ್ಳನಾದಂತೆಯೇ ಸರಿ ಎಂಬ ಭಾವನೆಯು ಗಾಂಧೀಜಿ ಹೇಳಿದಂತೆ ನಾವೆಲ್ಲರೂ ಒಂದು ರೀತಿಯಲ್ಲಿ ಕಳ್ಳರು.

'ನನ್ನ ತತ್‌ಕ್ಷಣದ ಉಪಯೋಗಕ್ಕೆ ಬೇಕಾಗದಿರುವ ಏನನ್ನಾದರೂ ನಾನು ಸಂಗ್ರಹಿಸಿಟ್ಟುಕೊಂಡರೆ ಇತರರಿಂದ ಅದನ್ನು ನಾನು ಕದ್ದಂತೆ' ಎಂಬ ಮಾತಿಗೆ ಸರಿಹೊಂದು

ತ್ತದೆ. ಮಂತ್ರಿಯಾಗಿದ್ದು ಎಚ್ಚರಿಕೆಯಿಂದ ಆತ್ಮವೀಕ್ಷಣೆಯನ್ನು ಬಸವಣ್ಣ ಮಾಡಿ ಕೊಳ್ಳುತ್ತಿದ್ದನೆಂಬುದಕ್ಕೆ ಆತನ ಮಾತು ಸಾಕ್ಷಿಯಾಗಿದೆ.

'ಹೊನ್ನಿನೊಳಗೊಂದೊರೆಯ, ಸೀರೆಯೊಳಗೋಂದೆಳೆಯ,
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ
ನಿಮ್ಮಾಣೆ ನಿಮ್ಮ ಪುರಾತನರಾಣೆ ;
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ.

ಇಂತಹ ಏಕೈಕ ನಿಷ್ಠೆಯ ಅಸಂಗ್ರಹ ತತ್ವ ಸಮಾಜವಾದದ ತಳಹದಿ. ಬಸವಣ್ಣನವರು ಹಾಗೂ ಶರಣರೆಲ್ಲರೂ ತಮ್ಮ ನಮ್ರಕಾಯಕದಲ್ಲಿ ಈ ತತ್ವಕ್ಕೆ ಬದ್ಧರಾಗಿದ್ದರೆಂಬುದು ಸ್ಪಷ್ಟ. ಮನಸ್ಸಿನ ಉದಾತ್ತೀಕರಣವೇ ಸಂಗ್ರಹ ಪ್ರವೃತ್ತಿಯನ್ನು ಹೋಗಲಾಡಿ ಸುವುದು.

ಶರೀರಶ್ರಮದ ಕಾಯಕಕ್ಕೆ ಬೆಲೆ. ಒಮ್ಮೆ ಮೋಳಿಗೆ ಮಾರಯ್ಯನನ್ನು ಪರೀಕ್ಷಿ ಸಲು ಅವರ ಮನೆಗೆ ಬಸವಣ್ಣ ಜಂಗಮವೇಷದಲ್ಲಿ ಬಂದ. ಮಾರಯ್ಯ ಮನೆಯಲ್ಲಿರ ಲಿಲ್ಲ. ಪೂಜಾನೆಪದಲ್ಲಿ ಬಂದ ಅವನು ಮಹಾದೇವಮ್ಮನಿಗೆ ಕಾಣದಂತೆ ಅಲ್ಲಿ ಎರಡು ಜಾಳಿಗೆ ಹೊನ್ನನ್ನು ಬಿಟ್ಟು ಬರುತ್ತಾನೆ. ಕಾಯಕದಿಂದ ವಾಪಸ್ಸಾದ ಮಾರಯ್ಯ ಅದನ್ನು ಕಂಡು ಹೌಹಾರಿ ಅದನ್ನು ಬೀದಿಗೆ ಬಿಸಾಡುವಂತೆ ಹೇಳುತ್ತಾನೆ.

ನುಲಿಯ ಚಂದಯ್ಯನ ಕಥೆ ಕಾಯಕನಿಷ್ಠೆಯನ್ನು ತಿಳಿಸುತ್ತದೆ. ಒಂದು ದಿನ ಚಂದಯ್ಯ ಕೆರೆಯ ದಡದಲ್ಲಿ ಹಗ್ಗ ಹೊಸೆಯುವ ತನ್ನ ಕಾಯಕಕ್ಕಾಗಿ ಹೊಡೆ ಹುಲ್ಲನ್ನು ಕೊಯ್ಯುತ್ತಿರುತ್ತಾನೆ. ಆಗ ಆತ ಧರಿಸಿದ್ದ ಇಷ್ಟಲಿಂಗ ಅಕಸ್ಮಾತ್ ಜಾರಿ ನೀರಿಗೆ ಬೀಳುತ್ತದೆ. 'ಕಾಯಕದಲ್ಲಿ ನಿರತನಾದರೆ ಲಿಂಗ ಮುಂದಿದ್ದರೂ ಹಂಗು ತೊರೆಯ ಬೇಕು' ಎಂಬ ಮಾತಿನಂತೆ ಚಂದಯ್ಯ ಕಾಯಕದಲ್ಲೇ ನಿರತನಾಗಿ ಹುಲ್ಲನ್ನು ಕೊಯ್ದು ಕೊಂಡು ಹಾಗೇ ಹೊರಡುತ್ತಾನೆ. ನಂತರ ಮಡಿವಾಳ ಮಾಚಯ್ಯನವರ ವಿನಂತಿಯ ಮೇಲೆ ಲಿಂಗಧಾರಿಗಳಾಗುತ್ತಾರೆ ಶರಣ ಚಂದಯ್ಯನವರು.

ಕಾಯಕತತ್ವದಲ್ಲಿ ಎಷ್ಟು ಶ್ರಮವೋ ಅಷ್ಟೇ ಪ್ರತಿಫಲ. ಅಲ್ಪ ಶ್ರಮಕ್ಕೆ ಹೆಚ್ಚು ಫಲ ಬಯಸುವುದು ದುರಾಶೆ. ಶುದ್ಧ ಕಾಯಕನಿಷ್ಠೆ ಆದರ್ಶ ಸಮಾಜಕ್ಕೆ ಬುನಾದಿ.

ಕಾಯಕವೀರಶೈವದರ್ಶನದ ಪಾರಿಭಾಷಿಕ ಶಬ್ದ. ಜೀವ ಜಗತ್ತಿನಲ್ಲಿದ್ದರೂ ಜಗದೀಶನೊಡನೆ ಸಮಾನವಾಗಲು ಹವಣಿಸುತ್ತದೆ. ಜೀವದ ಚಲನವಲನಗಳು ದೇಹವನ್ನು ಅವಲಂಬಿಸಿರುತ್ತದೆ. ಜೀವದೇಹಸಂಬಂಧವಿರುವಾಗ ದೈಹಿಕವಾದ ಕ್ರಿಯೆ ನಡೆಯುತ್ತದೆ. ಕಾಯದ ಚಟುವಟಿಕೆಯೇ ಬಾಹ್ಯಕ್ರಿಯೆಯಾಗುತ್ತದೆ. ಜೀವ, ದೇಹಸಂಬಂಧವಿರುವವರೆಗೆ ಇಂತಹ ಕ್ರಿಯೆ ನಡೆಯಲೇಬೇಕು. ದೇಹವೇ ನೆರವಾಗ

ಬೇಕು. ಹೀಗೆ ಕ್ರಿಯಾಶೀಲವಾದ ಕಾಯದ ಚಟುವಟಿಕೆಗಳೇ ಕಾಯಕ. ಕಾಯಕ ಕೇವಲ ದೇಹದ ಕ್ರಿಯೆಯಲ್ಲ, ಅದು ಮನ, ಬುದ್ಧಿಗಳನ್ನು ಬಿಟ್ಟು ನಡೆಯುವ ಕಾರ್ಯವೆಂದು ಭಾವಿಸಬಾರದು. ಮನಸ್ಸಿನ ಪ್ರೇರಣೆಯಿಂದ ಬುದ್ಧಿಯ ಮಾರ್ಗ ದರ್ಶನದಲ್ಲಿ ದೈಹಿಕ ಕ್ರಿಯೆ ನಡೆಯುತ್ತದೆ. ಯಾವ ಕಾರ್ಯವನ್ನು ಮಾಡಬೇಕೆಂಬು ದನ್ನು ಪ್ರಚೋದಿಸುವುದು ಮನಸ್ಸಿನ ಕ್ರಿಯೆ.

"ಕೊಂಬೆಯ ಮೇಲಿನ ಮರ್ಕಟನಂತೆ ಲಂಘಿಸುವುದೆನ್ನ ಮನವು, ನಿಂದಲ್ಲಿ ನಿಲ್ಲಲೀಯದೆನ್ನ ಮನವು, ಕೂಡಲಸಂಗಮದೇವಾ ನಿಮ್ಮ ಚರಣ ಕಮಲದಲ್ಲಿ ಭ್ರಮರ ನಾಗಿರಿಸು." "ಸುಡು ಸುಡು ಮನವಿದು ವಿಷಯಕ್ಕೆ ಹರಿವುದು, ಮೃಡ, ನಮ್ಮನನು ದಿನ ನೆನೆಯಲೀಯದು" ಇತ್ಯಾದಿ ಹಲವು ರೀತಿಯಲ್ಲಿ ಮನಸ್ಸಿನ ಪರಿಣಾಮವನ್ನು ಬಸವಣ್ಣನವರು ವರ್ಣಿಸುತ್ತಾರೆ. ಆದುದರಿಂದ ದೇಹದ ಎಲ್ಲಾ ಕ್ರಿಯೆಗಳ ಹಿಂದೆ ಮನಸ್ಸಿನ ಪ್ರಭಾವವಿರುವದನ್ನು ಒಪ್ಪಲೇಬೇಕಾಗುತ್ತದೆ. ಆದರೆ ಅದು ಯಾವ ರೀತಿ ಮಾರ್ಗದರ್ಶನ ಮಾಡುತ್ತದೋ ಅದಕ್ಕನುಗುಣವಾದ ಕ್ರಿಯೆ ದೇಹದಿಂದ ನಡೆಯು ತ್ತದೆ. ಆದುದರಿಂದ ಮನಸ್ಸು ದೈಹಿಕ ಕ್ರಿಯೆಗೆ ಪ್ರಚೋದನೆ ಕೊಡುವಾಗ ಸತ್ಯ ವಾದುದು ಯಾವುದು ? ಅಸತ್ಯವಾದುದು ಯಾವುದು ? ಎಂಬುದನ್ನು ಅರಿತು ಸತ್ಯ ವಾದುದನ್ನು ಪ್ರಚೋದಿಸಬೇಕು.

"ಮನದಲ್ಲಿ ಹುಟ್ಟಿದ ಅರಿವನ್ನು ಮಾಡುವ ಮಾಟದಲ್ಲಿ ಕಾಣಬಹುದು. ಶರಣರ ಸಂಗಕ್ಕೆ....ಚಿತ್ತವ ಅನುಭಾವದಲ್ಲಿ ಕಾಣಬಹುದು. ಒಳಹೊರಗೆ ತೆರಹಿಲ್ಲದ ಕೂಟ ನಿನ್ನದು; ಅಮರೇಶ್ವರ ಲಿಂಗದಲ್ಲಿ–ಸಂಗನ ಬಸವಣ್ಣ ನಿನ್ನ ಪಾದಕ್ಕೆ ನಮೋ ನಮೋ" ಎಂಬ ಲಕ್ಕಮ್ಮನ ಅಮೃತವಾಣಿಯು ಮನ ಬುದ್ಧಿಗಳ ಪರಿಣಾಮ ಹೇಗೆ ಕ್ರಿಯೆಯಲ್ಲಿ ಪರಿಣಾಮಗೊಳ್ಳಬಹುದೆಂಬುದನ್ನು ಸ್ಥೂಲವಾಗಿ ಸೂಚಿಸುತ್ತದೆ. ಮನವು ಸತ್ಯ ವನ್ನರಸುತ್ತಾ ಸತ್ಯವನ್ನವಲಂಬಿಸುತ್ತಾ ಕ್ರಿಯೆಗೆ ನೆರವಾದರೆ, ಬುದ್ಧಿ ಶುದ್ಧ ಆಚಾರ ದಲ್ಲಿ ದೇಹಕ್ರಿಯೆಗಳನ್ನು ನಡೆಸಿದರೆ, ಅದು ಸತ್ಯಶುದ್ಧ ಕಾಯಕವೆನಿಸುತ್ತದೆ.

ಕಾಯಕವೆಂದರೆ ದುಡಿಮೆ. ಮನುಷ್ಯನು ಬದುಕಿಗಾಗಿ ನಡೆಸುವ ಪ್ರತಿಯೊಂದು ಕ್ರಿಯೆಯೂ ಕಾಯಕವೇ. ಕಾಯವನ್ನು ಬಳಸದೆ ಗಳಿಸುವ ಕ್ರಿಯೆ ಕಾಯಕವೆನಿಸದು. ತನುಮನಗಳೆರಡೂ ಕಾಯಕದಲ್ಲಿ ವಿನಿಯೋಗವಾಗಬೇಕು.

ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ,
ಕಾಡಿ ಬೇಡಿ ಮಾಡುವುದು ದಾಸೋಹವೇ ?
ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ, ದ್ರವ್ಯ ಮೊದಲಾಗಿ,

ಚಿತ್ತ ಶುದ್ಧದಲ್ಲಿ ಬಂದುದಕ್ಕೆ ಸರಿಗಂಡು
ಲಿಂಗದೇಹಗಳಿಗೆ ಒಂದೇ ಪ್ರಮಾಣದಲ್ಲಿ ಸರಿಗಂಡುದು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ತೃಪ್ತಿ.

ಶಿವಲೆಂಕ ಮಂಚಣ್ಣನವರು ಈ ವಚನದಲ್ಲಿ ಕಾಯಕದ ಸಮಗ್ರ ಅರ್ಥವಿವರಣೆ ನೀಡಿದ್ದಾರೆ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ ಶಿವನಿಗರ್ಪಿತವೆನ್ನುತ್ತಾರೆ ಶರಣರು.

ಬುದ್ಧಿಬಲದಿಂದ ಬದುಕುವವರೇ ಶ್ರೇಷ್ಠರೆಂಬ ಭಾವನೆ ಸಮಾಜದಲ್ಲಿ ಹಿಂದೆಯೂ ಇತ್ತು. ಈಗಲೂ ಇದೆ. ಕಾಯವನ್ನು ಬಳಲಿಸಿ ಸರ್ವರನ್ನೂ ರಕ್ಷಿಸುವವರು ಕೀಳಾಗಿ ಪರಿಗಣಿಸಲ್ಪಟ್ಟಿದ್ದಾರೆ. ಶರಣರು ಈ ಪರಿಸ್ಥಿತಿಯನ್ನು ಬದಲಿಸಲು ಪ್ರಯತ್ನಿಸಿದರು. ಕಾಯಕಮಾಡಿ ಜೀವಿಸುವವನನ್ನು ಶರಣನಾಗಿಸಿದರು. ಯಾವ ಕಾಯಕವಾದರೂ ಅದು ದೈವ ಕಾರ್ಯವೆನಿಸಲು ಶ್ರಮಿಸಿದರು.

> "ದೇವಸಹಿತ ಭಕ್ತ ಮನೆಗೆ ಬಂದಡೆ,
> ಕಾಯಕವಾವುದೆಂದು ಬೆಸಗೊಂಡೆನಾದಡೆ
> ನಿಮ್ಮಾಣೆತಿ ನಿಮ್ಮ ಪುರಾತನರಾಣೆ ; ತಲೆದಂಡ ; ತಲೆದಂಡ ;
> ಕೂಡಲಸಂಗಮದೇವಾ ;
> ಭಕ್ತರಲ್ಲಿ ಕುಲವನರಸಿದಡೆ ನಿಮ್ಮ ರಾಣೀವಾಸದಾಣೆ ;

ಇದು ಬಸವಣ್ಣನವರ ಸ್ಪಷ್ಟ ನಿಲುವು. ಯಾವ ಕಾಯಕವೂ ಕನಿಷ್ಠವಲ್ಲ. ಆದರೆ ಅದು ಸತ್ಯವೂ ಶುದ್ಧವೂ ಆಗಿರಬೇಕು. ಶರಣರ ನವಸಮಾಜನಿರ್ಮಾಣ ಕಾರ್ಯದಲ್ಲಿ ಕಾಯಕ ನೆಲೆಗಟ್ಟು. ಮಾನವನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಶಕ್ತಿಗಳಿಗೆಲ್ಲಾ ಸಮಾನ ಗೌರವ ದೊರೆಯಬೇಕು. ಇವು ಮೂರು ಸಮಾನವಾಗಿ ರಾಷ್ಟ್ರಕ್ಕೆ ಬಳಕೆಯಾಗಬೇಕು. ಇದು ಕಾಯಕ ತತ್ವದ ಸಾಮಾಜಿಕ ಅರ್ಥ. ಕಾಯಕದಲ್ಲಿ ನಿರತನಾದವನು ಆದರ ಫಲವನ್ನು ಸ್ವಾರ್ಥಕ್ಕಾಗಿ ಬಳಸದೆ, ಗುರು ಲಿಂಗ ಜಂಗಮಕ್ಕೆ ಅರ್ಪಿಸುವುದು ಮಾನವ ಧರ್ಮ. ಇದು ಧರ್ಮದ ಕಾಯಕದಲ್ಲಿಯೇ ದೈವ ಸಾಕ್ಷಾತ್ಕಾರ ಪಡೆಯುವುದು ಶರಣರ ತತ್ವದ ಅಂತರಾರ್ಥ, ಈ ಅರ್ಥದಲ್ಲಿ ಕಾಯಕ ವೀರಶೈವಸಿದ್ಧಾಂತದ ಪರಮಾರ್ಥ. ತ್ರಿಕರಣವನ್ನು ಭಗವದರ್ಪಣ ಮಾಡುವುದು ಕಾಯಕದ ಜೀವಾಳ. ಈ ತತ್ವವನ್ನು ಅನುಸರಿಸುವವರು ವೀರಶೈವರು. ಇದೇ ಜೀವನದ ಆದರ್ಶ ದರ್ಶನ. ಆದನ್ನು 'ಕಾಯಕವೇ ಕೈಲಾಸ'ವೆಂದು ಶರಣರು ಕರೆದರು,

o—o

ವೀರಶೈವ ಧರ್ಮದ ವೈಶಿಷ್ಟ್ಯ

ಡಾ. ಎಚ್. ತಿಪ್ಪೇರುದ್ರಸ್ವಾಮಿ.

ಇಂದಿನ ವೈಜ್ಞಾನಿಕ ಯುಗದ ಸಂಕೀರ್ಣ ಜೀವನದಲ್ಲಿ ಧರ್ಮದ ಸ್ಥಾನವೇನು ? ಎಂಬುದೇ ಒಂದು ದೊಡ್ಡ ಪ್ರಶ್ನೆಯಾಗಿದೆ. ಜಗತ್ತು ಇಂದು ದಿನದಿನಕ್ಕೆ ಬದಲಾಗುತ್ತಿದೆ. ಹಳೆಯ ಮೌಲ್ಯಗಳು ಕುಸಿಯುತ್ತಿವೆ, ಹೊಸ ನೆಲೆ ಸಿಕ್ಕಿಲ್ಲ. ನೆಲೆಯೇ ಬೇಕಿಲ್ಲವೆಂಬ ದೃಷ್ಟಿಯೂ ಬೆಳೆಯುತ್ತಿದೆ. ವೈಜ್ಞಾನಿಕ ಶಕ್ತಿಗಳು ಕರಗತವಾದಂತೆ ಜೀವನಸೌಲಭ್ಯಗಳು ಒಂದು ಕಡೆ ಹೆಚ್ಚುತ್ತಿವೆ. ಅಂತೆಯೇ ಅತೃಪ್ತಿ ಆತಂಕ ಅಭದ್ರತೆಗಳೂ ಹೆಡೆಯೆತ್ತುತ್ತಿವೆ. ಯಂತ್ರಗಳು ಬೆಳೆದಂತೆ ಮಾನವನು ಒಂದು ಯಂತ್ರವಾಗಿ ಪರಿಣಮಿಸಿದ. ಯಂತ್ರಗಳ ದುಡಿಮೆ ಒಂದು ಕಡೆ ಕೂಲಿಕಾರರನ್ನೂ, ಇನ್ನೊಂದು ಕಡೆ ಬಂಡವಾಳಗಾರರನ್ನೂ ಬೆಳಸಿತು. ಈ ವಿಷಮತೆಯ ವಿಷವರ್ತುಲದಿಂದ ಅನೇಕ ಸಾಮಾಜಿಕ ಸಮಸ್ಯೆಗಳೂ, ನೂತನ ರಾಜಕೀಯ ಸಿದ್ಧಾಂತಗಳೂ ಹೊರಸಿಡಿದುವು. ಜೀವನದ ಗೊತ್ತು ಗುರಿಗಳು ಬದಲಾದವು. ಧರ್ಮಕ್ಕೆ ಸ್ಥಾನವಿರದ ಹೊಸ ಜೀವನತತ್ವಮೀಮಾಂಸೆಯೂ ಒಂದು ಕಡೆ ರೂಪುಗೊಂಡಿತು. ಆರ್ಥಿಕ ತಳಹದಿಯೇ ಅದರ ಸರ್ವಸ್ವವಾಯಿತು. ಇದರಿಂದ ಉಂಟಾದ ರಾಜಕೀಯ ಮತ್ತು ಸಾಮಾಜಿಕ ಸವಾಲುಗಳನ್ನು ಧರ್ಮ ಎದುರಿಸಬೇಕಾಯಿತು. ಇವುಗಳನ್ನು ಯಶಸ್ವಿಯಾಗಿ ಎದುರಿಸುವ ಪೂರ್ಣಧರ್ಮದ ವೈಶಿಷ್ಟ್ಯಗಳನ್ನು ವೀರಶೈವ ಧರ್ಮ ಒಳಗೊಂಡಿದೆ. ೧೨ನೇ ಶತಮಾನದ ಶರಣರ ಆಚರಣೆಯಿಂದ ಆಧುನಿಕ ವೈಚಾರಿಕತೆಯ ಎಲ್ಲ ಸತ್ವವನ್ನೂ ಅರಗಿಸಿಕೊಂಡು ಬೆಳೆಯುವಷ್ಟು ಅದು ವ್ಯಾಪಕವಾಗಿದೆ.

ಶೈವಧರ್ಮದ ಬೆಳವಣಿಗೆಯಲ್ಲಿ ಬಹುಶಃ ಪರಿಪೂರ್ಣತೆಯನ್ನು ಸಾಧಿಸಿದ ಶಾಖೆಯೆಂದರೆ ವೀರಶೈವ ಎನ್ನಬಹುದು. ಎಲ್ಲ ಶೈವಸಿದ್ಧಾಂತಗಳ ಒಳ್ಳೆಯ ಅಂಶಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಂಡು ವ್ಯಾಪಕವಾದ ಒಂದು ತತ್ವಸಿದ್ಧಾಂತವನ್ನೂ ಆಚರಣೆಯ ಮಾರ್ಗವನ್ನೂ ಇದು ರೂಪಿಸಿಕೊಂಡಿತು. ಇದರ ಪ್ರಾಚೀನತೆಯ ವಿಚಾರದಲ್ಲಿ ಸದ್ಯಕ್ಕೆ ದೊರಕುವ ಆಧಾರಗಳಿಂದ ಏನನ್ನೂ ಹೇಳುವುದು ಸಾಧ್ಯವಿಲ್ಲವಾಗಿದೆ. ೧೨ನೇ ಶತಮಾನದಲ್ಲಿ ಬಸವಣ್ಣನವರಿಂದ ನಿರ್ದಿಷ್ಟವಾದ ಒಂದು ಸ್ವರೂಪವನ್ನು ಇದು ಪಡೆದು, ಸರ್ವಸಮಾನತೆಯ ತನ್ನ ಆಶಯವನ್ನು ಬಹುದೊಡ್ಡ ಪ್ರಮಾಣದಲ್ಲಿ ಈಡೇರಿಸುವ ಶಕ್ತಿಯುತವಾದ ಧರ್ಮವಾಗಿ ಪರಿಣಮಿಸಿ

ತೆಂಬ ವಿಚಾರದಲ್ಲಿ ಸಂದೇಹವಿಲ್ಲವಾದರೂ, ಬಸವಣ್ಣನವರಿಂದಲೇ ಈ ಧರ್ಮ ಸ್ಥಾಪಿತವಾಯಿತೆಂದು ಹೇಳುವಂತಿಲ್ಲ. ಅವರಿಗಿಂತ ಹಿಂದೆಯೇ ಈ ಧರ್ಮ ಅಸ್ತಿತ್ವದಲ್ಲಿತ್ತೆಂಬುದಕ್ಕೆ ಸ್ಪಷ್ಟವಾದ ಆಧಾರಗಳಿವೆ.

ವೀರಶೈವಧರ್ಮ ಎಷ್ಟು ಪ್ರಾಚೀನ ? ಎಂಬ ಪ್ರಶ್ನೆಗೆ ಸರಿಯಾದ ಉತ್ತರವಿಲ್ಲವೆಂದೇ ಹೇಳಬೇಕು. ಇದೇ ಕೊನೆಯ ಅಭಿಪ್ರಾಯವೆಂದು ಖಚಿತವಾಗಿ ಹೇಳಲು ಸಾಕಷ್ಟು ಸಾಮಗ್ರಿ ದೊರೆತಿಲ್ಲ. ಆದುದರಿಂದ ಅದರ ಅತಿಯಾದ ವಿವರಗಳಿಗೆ ಹೋಗದೆ ಇಷ್ಟು ಮಾತ್ರ ಹೇಳಬಹುದು. ಲಿಂಗವನ್ನು ಅಂಗದ ಮೇಲೆ ಧರಿಸುವ ಪದ್ಧತಿ ಯಾರೊಬ್ಬರಿಂದಲೂ ಪ್ರವರ್ತಿತವಾದುದಲ್ಲ. ಶೈವಧರ್ಮದ ವಿಕಾಸದಲ್ಲಿ ಅಳವಟ್ಟ ಸಹಜ ಪ್ರಕ್ರಿಯೆ. ರೇಣುಕಾದಿ ಪಂಚಾಚಾರ್ಯರು ಅದರ ಬೆಳವಣಿಗೆಗೆ ಕಾರಣರಾಗಿರಬಹುದು. ಇತರ ಆಚಾರ್ಯರೂ ಪ್ರಚೋದಕರಾಗಿರಬಹುದು. ಪಾಶುಪತಶೈವ, ಕಾಶ್ಮೀರಶೈವ, ತಮಿಳುಶೈವ, ಈ ವಿವಿಧ ಶಾಖೆಗಳಲ್ಲಿನ ಉದಾತ್ತ ಅಂಶಗಳನ್ನು ಅಳವಡಿಸಿಕೊಳ್ಳುವ ಮಾರ್ಗದಲ್ಲಿ, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳು ರೂಪುಗೊಂಡಿರಬೇಕು. ಬಸವಣ್ಣನವರು ಬರುವ ವೇಳೆಗೆ ಕರ್ನಾಟಕದಲ್ಲಿದ್ದ ಲಾಕುಳರು ಕಾಳಾಮುಖರು ಮೊದಲಾದ ವಿವಿಧ ಶೈವಶಾಖೆಗಳಲ್ಲಿ ಕೆಲವಕ್ಕಾದರೂ ದೀಕ್ಷೆ ಮೊದಲಾದ ವೀರಶೈವ ಸಂಸ್ಕಾರಗಳು ನಡೆಯುತ್ತಿದ್ದಿರಬೇಕು. ಅಲ್ಲಲ್ಲಿ ಆ ಮತದ ಅನುಯಾಯಿಗಳು ಕಾರ್ಯನಿರತರಾಗಿದ್ದಂತೆಯೂ ತೋರುತ್ತದೆ. ಕೊಂಡಗುಳಿ ಕೇಶಿರಾಜ, ಏಕಾಂತ ರಾಮಯ್ಯ, ದೇವರ ದಾಸಿಮಯ್ಯ ಇವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಆ ಧರ್ಮದಲ್ಲಿ ಸುಪ್ತವಾಗಿದ್ದ ಸರ್ವಸಮಾನತೆಯ ಅಂಶಗಳನ್ನು ಗ್ರಹಿಸಿದ ಬಸವಣ್ಣ ಅದರ ಉದಾತ್ತತತ್ವಗಳ ಬೆಂಬಲದಿಂದ ಜನತೆಯ ಸಾಮೂಹಿಕ ಉದ್ಧಾರಕ್ಕೆ ಧುಮುಕಿದ. ಇದರಿಂದ ವೀರಶೈವಧರ್ಮ ಹೊಸದಾಗಿ ಸ್ಥಾಪಿತವಾದಷ್ಟೇ ಪ್ರಸಿದ್ಧಿಯನ್ನೂ ಹೊಸ ಕ್ರಾಂತಿಯನ್ನೂ ವಿಶಿಷ್ಟ ಸ್ವರೂಪವನ್ನೂ ಪಡೆಯಿತು. ಈ ಅರ್ಥದಲ್ಲಿ ಆತ ಸ್ಥಾಪಕನೂ ಆಗಿ ಪರಿಣಮಿಸಿದ.

ಬಸವಣ್ಣನವರ ವ್ಯಕ್ತಿತ್ವದಿಂದ ಆಕರ್ಷಿತವಾಗಿ ನಾಡಿನ ನಾನಾಭಾಗಗಳಿಂದ ಸಾಧಕರು ಬಂದು ಕಲ್ಯಾಣದಲ್ಲಿ ಸೇರಿದರು. ಅಲ್ಲಮ ಪ್ರಭುವಿನಂತಹ ಮಹಾಮೇರು ಸದೃಶ ವ್ಯಕ್ತಿಯೂ ಮಣಿದು ಬಂದನೆಂದರೆ ಬಸವಣ್ಣನವರ ಕಾರ್ಯಕ್ಷೇತ್ರದ ಹಿರಿಮೆಯನ್ನು ಊಹಿಸಿಕೊಳ್ಳಬಹುದು. ಧಾರ್ಮಿಕ ಸಾಮಾಜಿಕ ರಂಗಗಳಲ್ಲಿ ಸ್ವತಂತ್ರ ವಿಚಾರ ವಿಮರ್ಶೆ ಅಲ್ಲಿ ನಡೆಯಿತು. ಅನುಭವಮಂಟಪದ ಮಥನದಿಂದ ವೀರಶೈವಧರ್ಮದ ತಾತ್ವಿಕ ವಿವೇಚನೆ ಆಳವಾಗಿ ಬೇರುಬಿಟ್ಟಿತು. ಆಚಾರಮಾರ್ಗಗಳಾದ ಷಟ್‌ಸ್ಥಲ ಅಷ್ಟಾವರಣಾದಿಗಳು ಇನ್ನೂ ಎತ್ತರಕ್ಕೆ ಬೆಳೆದುವು. ಪ್ರಾಚೀನ ವೀರಶೈವಧರ್ಮ, ತನ್ನ ಸನಾತನ ತತ್ವಗಳನ್ನು ನಿತ್ಯನೂತನವಾದ ಮಾನವೀಯ ಮಟ್ಟಕ್ಕೇರಿಸಿ. ವಿಶ್ವಧರ್ಮವಾಗಿ ಪರಿಣಮಿಸಿತು. ಆದುದರಿಂದ ವೀರಶೈವಧರ್ಮದ ವೈಶಿಷ್ಟ್ಯವನ್ನರಿಯುವಲ್ಲಿ ಶರಣರ ಈ ಸಾಧನೆಯನ್ನು ಪ್ರತಿಬಿಂಬಿಸುವ ವಚನ

ಸಾಹಿತ್ಯವನ್ನು ಮುಖ್ಯವಾಗಿ ಪರಿಗಣಿಸಬೇಕಾಗುತ್ತದೆ. ಇದರ ಜೊತೆಗೆ ಶಿವಾಗಮಗಳು, ಅದರಲ್ಲೂ ಮುಖ್ಯವಾಗಿ ವೀರಶೈವವನ್ನು ಪ್ರತಿಪಾದಿಸುವ ವೀರಶೈವಾಗಮಗಳು, ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಮಗ್ಗೆಯ ಮಾಯಿದೇವರ ಶಿವಾನುಭವ ಸೂತ್ರ–ಈ ಮೊದಲಾದ ಅನೇಕ ಸಂಸ್ಕೃತ ಕೃತಿಗಳಲ್ಲಿಯೂ ಈ ಧರ್ಮದ ಪ್ರತಿಪಾದನೆ ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿ ಈ ಧರ್ಮದ ವಿಶಿಷ್ಟ ಅಂಶಗಳಾದ ಶಕ್ತಿವಿಶಿಷ್ಟಾದ್ವೈತ, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಇವುಗಳನ್ನು ಅವಲಂಬಿಸಿ ಇದರ ವಿಶಿಷ್ಟತೆಯನ್ನು ಗುರುತಿಸಬಹುದಾಗಿದೆ.

ಈ ಧರ್ಮದ ತಾತ್ವಿಕ ಮುಖವನ್ನು 'ಶಕ್ತಿವಿಶಿಷ್ಟಾದ್ವೈತ' ಎಂಬ ಹೆಸರಿನಿಂದ ಕರೆಯುವುದು ರೂಢವಾಗಿದೆ. ದ್ವೈತಾದ್ವೈತ, ಶಿವಾದ್ವೈತ-ಎಂಬುದಾಗಿಯೂ ಇದನ್ನು ಕರೆದಿರುವುದುಂಟು. ಜೀವ, ಜಗತ್ತು, ಈಶ್ವರ ಇವುಗಳ ವಿವೇಚನೆಯಲ್ಲಿ ಈ ಮಾರ್ಗ ಅನುಸರಿಸುವ ರೀತಿಯಿಂದ "ಶಕ್ತಿವಿಶಿಷ್ಟಾದ್ವೈತ" ಎಂಬ ಮಾತು ಇದಕ್ಕೆ ಹೆಚ್ಚು ಸೂಕ್ತವೆಂಬಂತೆ ತೋರುತ್ತದೆ. ಸೃಷ್ಟಿಕರ್ತನಿಂದ ಹಿಡಿದು ಸೃಷ್ಟಿಯಲ್ಲಿ ಕಂಡು ಬರುವ ಕೊನೆಯ ಅಣುವಿನವರೆಗೆ ಎಲ್ಲೆಲ್ಲಿಯೂ ವ್ಯಾಪ್ತವಾಗಿರುವ ಶಕ್ತಿತತ್ವವನು. ಇದು ಗಮನಿಸಿದೆ. ಶಕ್ತಿವಿಶಿಷ್ಟನಾದವನು ಶಿವ, ಶಕ್ತಿವಿಶಿಷ್ಟನಾದವನು ಜೀವ, ಹೀಗೆ ಶಕ್ತಿವಿಶಿಷ್ಟರಾದ ಜೀವ, ಶಿವರಲ್ಲಿ ಕಂಡು ಬರುವ ಅದ್ವೈತವೇ ಶಕ್ತಿವಿಶಿಷ್ಟಾದ್ವೈತ.

"ಶಕ್ತಿ" ಎಂಬುದು ಒಂದಲ್ಲ ಒಂದು ರೂಪದಲ್ಲಿ ಎಲ್ಲ ಸಿದ್ಧಾಂತಗಳಲ್ಲಿಯೂ ಕಂಡುಬರುವ ಅಂಶ. ಇದನ್ನು ವೀರಶೈವ ವಿಶಿಷ್ಟ ರೀತಿಯಲ್ಲಿ ವಿವೇಚಿಸಿದೆ. ಜೀವ ಶಿವರಿಬ್ಬರೂ ಶಕ್ತಿಸಮನ್ವಿತರಾಗಿದ್ದರೂ ಆ ಶಕ್ತಿಯ ಸ್ವರೂಪದಲ್ಲಿ ಭೇದ ಕಾಣುತ್ತದೆ. ಸ್ಥೂಲಶಕ್ತಿಯಿಂದ ಜೀವ ಆವೃತವಾಗಿ ತನ್ನ ಮೂಲ ಸ್ವರೂಪವನ್ನು ಮರೆತು, ತಾನು ಅಲ್ಪಜ್ಞಾನಿ, ಅಲ್ಪಶಕ್ತಿ ಎಂಬ ಪರಿಮಿತ ಭಾವನೆಗೆ ಒಳಗಾಗಿದ್ದಾನೆ, ಜೀವ ಶಿವರಲ್ಲಿರುವ ಭೇದ, ಮೂಲತಃ ಇರುವ ಭೇದವಲ್ಲ ; ಸ್ಥೂಲ ಮತ್ತು ಸೂಕ್ಷ್ಮ ಶಕ್ತಿಗಳಿಂದ ತಾತ್ಕಾಲಿಕವಾಗಿ ಕಂಡು ಬರುವಂತಹದು. ಇಲ್ಲಿ ಸ್ಥೂಲ ಎಂದರೆ ಅಶುದ್ಧ' ಎಂಬ ಅರ್ಥವನ್ನು ಕೊಡಲಾಗಿದೆ. ಜೀವ ತನ್ನ ಅಶುದ್ಧತೆಯಿಂದ ಸೂಕ್ಷ್ಮಶಕ್ತಿವಿಶಿಷ್ಟ ಸಂಪರ್ಕವನ್ನು ಕಳೆದುಕೊಂಡಿದೆ. ಈ ಅಶುದ್ಧತೆ ಯಾವುದು ? ಸೃಷ್ಟಿಯ ನಿರ್ಮಾಣ ಕಾರ್ಯದಲ್ಲಿ ಸಂಕೋಚ ಸ್ಥಿತಿಯನ್ನು ಪಡೆದು ಆಣವ, ಮಾಯಾ, ಕಾರ್ಮಿಕ ಈ ಮಲತ್ರಯಕ್ಕೆ ಒಳಗಾಗಿ ಶುದ್ಧಸ್ವರೂಪವನ್ನು ಕಳೆದುಕೊಂಡು ಅಶುದ್ಧವಾಗುತ್ತದೆ ಜೀವ. ಅಂದರೆ ಸೂಕ್ಷ್ಮಶಕ್ತಿವಿಶಿಷ್ಟವಾದ ಶಿವನ ಅಂಶವೇ ಜೀವರುಗಳಾಗಿ ಪರಿಣಮಿಸಿ, ಸ್ಥೂಲಶಕ್ತಿಯಿಂದ ಆವೃತವಾಗುತ್ತದೆ. ಈ ಸಂಕೋಚಸ್ಥಿತಿಯಿಂದ ಬಿಡುಗಡೆಯನ್ನು ಪಡೆದು ಮೂಲರೂಪದ ಪೂರ್ಣವಿಕಾಸಸ್ಥಿತಿಯನ್ನು ಪಡೆದಾಗ, ಸೂಕ್ಷ್ಮ ಚಿದಚಿದಾತ್ಮಕ ಶಕ್ತಿವಿಶಿಷ್ಟವಾಗಿ ಶಿವನೊಡನೆ ಅದ್ವೈತ ಭಾವವನ್ನು ಪಡೆಯುತ್ತದೆ. ಈ ಅರ್ಥದಲ್ಲಿ ಇದನ್ನು 'ಶಕ್ತಿವಿಶಿಷ್ಟಾದ್ವೈತ' ಎಂದು ಕರೆಯಲಾಗಿದೆ.

ಶಿವಶಕ್ತಿಯರ ಸಂಬಂಧ, ಅವಿನಾಭಾವ ಸಂಬಂಧ ಎಂಬ ಮಾತನ್ನು ಒತ್ತಿ ಹೇಳುತ್ತದೆ ಈ ಸಿದ್ಧಾಂತ. ಶಿವ ಮತ್ತು ಶಕ್ತಿ ಒಂದನ್ನು ಬಿಟ್ಟು ಇನ್ನೊಂದಿರಲಾರವು—ಎಂಬ ಈ ಅಭಿಪ್ರಾಯವನ್ನು ಕಾಳಿದಾಸನ ಪ್ರಸಿದ್ಧವಾದ ಈ ಶ್ಲೋಕ ಹೀಗೆ ಹೇಳುತ್ತದೆ :

> ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
> ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

'ರಘುವಂಶ'ದ ಈ ನಾಂದೀಶ್ಲೋಕ ಶಿವಶಕ್ತಿಯರ ಸಂಬಂಧವನ್ನು ಬಹಳ ಅರ್ಥವತ್ತಾಗಿ ಸೂಚಿಸುತ್ತದೆ. ಜಗತ್ತಿನ ಮಾತಾಪಿತರಾದ ಪಾರ್ವತೀಪರಮೇಶ್ವರರ ಸಂಬಂಧ ವಾಕ್ ಮತ್ತು ಅರ್ಥದಂತೆ, ಎಂದು ಹೇಳಿರುವ ಮಾತು ಅವರ ಅವಿನಾಭಾವ ಸಂಬಂಧದ ಸ್ವರೂಪವನ್ನು ಸೂಚಿಸುತ್ತದೆ. ಚಂದ್ರನಲ್ಲಿರುವ ಚಂದ್ರಿಕೆಯಂತೆ ಹೂವಿನಲ್ಲಿರುವ ಕಂಪಿನಂತೆ, ಸಕ್ಕರೆಯಲ್ಲಿರುವ ಸವಿಯಂತೆ, ಎಂದು ಮುಂತಾಗಿ ಶಿವಶಕ್ತಿಯರ ಸಂಬಂಧವನ್ನು ಹೋಲಿಸುವುದುಂಟು. ಸಚ್ಚಿದಾನಂದ ಸ್ವರೂಪನಲ್ಲಿರುವ ಈ ಶಕ್ತಿಯನ್ನು ಸಿದ್ಧಾಂತ ಶಿಖಾಮಣಿ 'ವಿಮರ್ಶಶಕ್ತಿ' ಎಂದು ಕರೆಯುತ್ತದೆ. ನವಿಲಿನ ಮೊಟ್ಟೆಯಲ್ಲಿರುವ ರಸದಲ್ಲಿ ಮುಂದೆ ಜನ್ಮ ತಾಳಲಿರುವ ನವಿಲಿನ ಎಲ್ಲ ಬಣ್ಣಗಳೂ ಅಡಕವಾಗಿರುವಂತೆ, ಈ ವಿಮರ್ಶಶಕ್ತಿಯಲ್ಲಿ ಸಕಲ ಚರಾಚರಾತ್ಮಕವಾದ ಜಗತ್ತು ಅಡಕವಾಗಿದೆ. ಇದು ಸತ್ವರಜಸ್ತಮೋಗುಣದಿಂದ ಬಂಧಿತವಾಗಿ ಪ್ರಕೃತಿ ಎಂದೆನಿಸಿಕೊಳ್ಳುತ್ತದೆ. ಇದರಿಂದ ಆವೃತನಾದಾಗ ಶಿವನ ಅಂಶವೇ ತನ್ನ ಸರ್ವಜ್ಞತ್ವಾದಿ ಗುಣಗಳನ್ನು ಕಳೆದುಕೊಂಡು ಜೀವರುಗಳಾಗಿ ಪರಿಣಮಿಸುತ್ತದೆ—ಇದು ವೀರಶೈವ ಸಿದ್ಧಾಂತದಲ್ಲಿ ಕಂಡುಬರುವ ಶಕ್ತಿವಿಶಿಷ್ಟಸ್ವರೂಪದ ಸ್ಥೂಲ ನಿರೂಪಣೆ.

ಸೃಷ್ಟಿಗಿಂತ ಮೊದಲು ಶಿವ, ನಿರಂಜನಸ್ವರೂಪನಾಗಿದ್ದ. ಈ ಸೃಷ್ಟಿಯನ್ನು ನಿರ್ಮಿಸಬೇಕೆಂಬ ನೆನಹು ಆತನಲ್ಲಿ ಸುಳಿಯಿತು. ಅದೇ 'ಶಕ್ತಿ' ಎನೆಸಿಕೊಂಡು ಈ ಸೃಷ್ಟಿಗೆ ಕಾರಣವಾಯಿತೆಂಬುದು ಶರಣರ ಶಕ್ತಿತತ್ವದ ಕಲ್ಪನೆ.

> ''ಬಯಲು ಮೊಳಗಿ ಮಳೆ ಸೃಜಿಸಿ ಆ ಬಯಲು ಮಳೆಯನೊಡಗೂಡಿ
> ದೃಷ್ಟವಪ್ಪ ವಾರಿಗಲ್ಲಾಗಿ ತೋರಿದಂತೆ
> ಆ ನಿಮ್ಮ ನೆನಹೇ ನಿಮಗೆ ಶಕ್ತಿಯಾಯಿತ್ತಲ್ಲ ;
> ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ
> ನಾಮ ಸೂಚನೆಯಾಯಿತ್ತಲ್ಲಾ, ಮಹಾಲಿಂಗ ಕಲ್ಲೇಶ್ವರಾ
> ನಿಮ್ಮ ಆದಿಗೆ ಇದೇ ಪ್ರಥಮವಾಯಿತ್ತಲ್ಲಾ''

ಎಂಬ ಹಾವಿನ ಹಾಳ ಕಲ್ಲಯ್ಯನ ಮಾತಿನಲ್ಲಿ ಈ ಅಂಶ ಸ್ಪಷ್ಟವಾಗಿ ಮೂಡಿದೆ. ಇಲ್ಲಿಂದ ಪ್ರಾರಂಭವಾಗಿ ಮುಂದೆ ಸೃಷ್ಟಿರಚನೆಯ ವಿವರಗಳನ್ನೂ ಉದ್ದೇಶಗಳನ್ನೂ

ಶರಣರು ವಿವೇಚಿಸಿದ್ದಾರೆ. 'ಶಕ್ತಿ'ಯ ಕಲ್ಪನೆ ವೀರಶೈವಕ್ಕೆ ಮಾತ್ರ ಮೀಸಲಾದ ವೈಶಿಷ್ಟ್ಯವಲ್ಲ. ಆದರೆ ಅದನ್ನು ತನ್ನ ಸಿದ್ಧಾಂತದಲ್ಲಿ ಮತ್ತು ಆಚರಣೆಯ ಮಾರ್ಗದಲ್ಲಿ ಇದು ಅಳವಡಿಸಿಕೊಂಡಿರುವ ಕ್ರಮ ವಿಶಿಷ್ಟವಾದುದು. ಒಂದು ಸರ್ವವ್ಯಾಪ್ತಿಯಾದ ಶಕ್ತಿ ಈ ಸೃಷ್ಟಿಯ ಜಾಲವನ್ನೆಲ್ಲಾ ನೆಯ್ದಾಳುತ್ತಿದೆ. ಅದು ಶಿವನಲ್ಲಿ ಶುದ್ಧ ಸ್ವರೂಪದಿಂದ ಆತನ ಸಹಚರಿಯಾಗಿರುವಂತೆಯೇ, ಸಂಕುಚಿತಗೊಂಡು ಜೀವದಲ್ಲಿಯೂ ನೆಲಸಿದೆ ; ಜಗತ್ತಿನ ಒಂದೊಂದು ಕಣದಲ್ಲಿಯೂ ವ್ಯಾಪಿಸಿದೆ, ಈ ಸೃಷ್ಟಿಯೆಲ್ಲಾ ಅದರ ಲೀಲೆ ಎನ್ನುತ್ತದೆ ವೀರಶೈವ. ಈ ಹಿನ್ನೆಲೆಯಲ್ಲಿ ಸೃಷ್ಟಿಕರ್ತ, ಸೃಷ್ಟಿ, ಜೀವರುಗಳ ಸ್ವರೂಪವನ್ನು ಇದು ವಿವೇಚಿಸಿದೆ.

ಈ ಸೃಷ್ಟಿ ಸತ್ಯ ; ಇದು ಶಿವನ ಲೀಲೆಯಿಂದ ನಿರ್ಮಿತವಾದಂದು, ಎಂಬ ಮಾತನ್ನು ಶರಣರು ಹೇಳಿದುದಲ್ಲದೆ ಈ ಸೃಷ್ಟಿ ನಿರ್ಮಾಣದ ಕ್ರಮ ಹೇಗೆಂಬುದನ್ನು ಅದರ ವಿವಿಧ ಹಂತಗಳಾವುವೆಂಬುದನ್ನೂ ತಮ್ಮದೇ ಆದ ರೀತಿಯಲ್ಲಿ ಕಂಡುಕೊಳ್ಳಲು ಹವಣಿಸಿದ್ದಾರೆ, ಸಮುದ್ರದಲ್ಲಿ ಹುಟ್ಟುವ ಅಲೆಗಳಂತೆ ಶಿವನಿಂದ ಸೃಷ್ಟಿ ಮೈದೋರುತ್ತದೆ. ಅಲೆಗಳೇ ಸಮುದ್ರವಲ್ಲ ; ಹಾಗೆಂದು ಅದು ಸಮುದ್ರದಿಂದ ಬೇರೆಯೂ ಅಲ್ಲ. ಈ ಸೃಷ್ಟಿಯ ಬಹುರೂಪಗಳೆಲ್ಲವೂ ಹಾಗೆ ತೋರಿಕೆಯವು ; ಶಿವನಲ್ಲಿ ಒಂದಾಗಿ ಪರಿಣಮಿಸತಕ್ಕವು ; ಶಿವತತ್ವವೊಂದೇ ಕೊನೆಯಲ್ಲಿ ಉಳಿಯುವುದು. ಈ ಅರ್ಥದಲ್ಲಿ ಇದು ಅದ್ವೈತ. ಆದರೆ ಅಲೆಗಳು ಆಯಾ ನಿಲವಿನಲ್ಲಿ ಸತ್ಯವಾದವುಗಳು, ಮಿಥ್ಯೆಯಲ್ಲ ; ಸ್ವತಂತ್ರ ಅಸ್ತಿತ್ವವನ್ನುಳ್ಳಂತಹವು. ಈ ಅರ್ಥದಲ್ಲಿ ಇದು ದ್ವೈತ. ಹೀಗೆ ದ್ವೈತಾದ್ವೈತಗಳೆರಡೂ ಇಲ್ಲಿ ಸಮಂಜಸಸ್ಥಾನವನ್ನು ಪಡೆದು, ಸಮನ್ವಯಗೊಂಡಿವೆ. ಹಾಗೆಯೇ ತಾತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗಗಳೆರಡೂ ಇಲ್ಲಿ ಸಮಾವೇಶಗೊಳ್ಳುತ್ತವೆ. ಭೇದಾಭೇದಗಳ ಸಮನ್ವಯ ಇಲ್ಲಿ ರೂಪುಗೊಂಡಿದೆ. ಭಕ್ತಿ ಜ್ಞಾನ ಕರ್ಮಗಳು ಇಲ್ಲಿ ಮುಪ್ಪುರಿಗೊಂಡು ಸಾಮರಸ್ಯಕ್ಕೇರುವ ನಿಚ್ಚಣಿಗೆಯನ್ನು ನಿರ್ಮಿಸಿವೆ. ಈ ನಿಚ್ಚಣಿಗೆಯ ಆರು ಮೆಟ್ಟಿಲುಗಳನ್ನೇ ಷಟ್‌ಸ್ಥಲಗಳೆಂದು ಕರೆಯಲಾಗುತ್ತಿವೆ.

'ಸ್ಥಲ' ಎನ್ನುವ ಮಾತಿಗೆ ಸ್ಥಾನ ಮೆಟ್ಟಿಲು—ಎಂಬ ರೂಢವಾದ ಅರ್ಥವಿದ್ದರೂ ವೀರಶೈವ ಇದಕ್ಕೆ ಒಂದು ವಿಶಿಷ್ಟವಾದ ಅರ್ಥವನ್ನು ಕಲ್ಪಿಸಿಕೊಂಡಿದೆ. ಚರಾಚರವಾದ ಈ ಜಗತ್ತು ಯಾವುದರಲ್ಲಿ ಹುಟ್ಟಿ, ಯಾವುದರಲ್ಲಿ ಲಯವಾಗುತ್ತದೆಯೋ ಆ ಏಕಮೇವಾದ್ವಿತೀಯವಾದ ಪರಶಿವಬ್ರಹ್ಮವನ್ನೇ 'ಸ್ಥಲ' ಎಂದು ಇಲ್ಲಿ ಕರೆಯಲಾಗಿದೆ. ಈ 'ಸ್ಥಲ' ಎಂದರೆ ಶಿವತತ್ವ, ತನ್ನ ಶಕ್ತಿಯ ಕ್ಷೋಭೆಯಿಂದ ಅಂದರೆ ಚಲನಶೀಲತೆಯಿಂದ ಅಂಗಸ್ಥಲ ಲಿಂಗಸ್ಥಲ ಎಂದು ಎರಡಾಗುತ್ತದೆ. ಹಾಗೆಯೇ ಶಕ್ತಿಯಲ್ಲಿ ಕಲಾಶಕ್ತಿ ಭಕ್ತಿಶಕ್ತಿ ಎಂದು ಎರಡಾಗುತ್ತದೆ. ಕಲಾಶಕ್ತಿಯನ್ನು 'ಶಕ್ತಿ' ಎಂದೂ, ಭಕ್ತಿಶಕ್ತಿಯನ್ನು 'ಭಕ್ತಿ' ಎಂದೂ ಕರೆಯಲಾಗಿದೆ. ಶಕ್ತಿ, ಲಿಂಗವನ್ನಾಶ್ರಯಿಸುತ್ತದೆ ; ಭಕ್ತಿ, ಅಂಗವನ್ನಾಶ್ರಯಿಸುತ್ತದೆ. ಮುಂದೆ ಈ ಅಂಗಲಿಂಗ

ಗಳು ಮೂರಾಗಿ ಮತ್ತೆ ಅವುಗಳಲ್ಲಿ ಒಂದೊಂದೂ ಎರಡೆರಡಾಗಿ ಒಟ್ಟು ಆರು ಸ್ಥಲಗಳಾಗಿ ಪರಿಣಮಿಸುತ್ತವೆ.

ಹೀಗೆ ಏಕಮೇವಾದ್ವಿತೀಯವಾಗಿದ್ದ ನಿಷ್ಕಲಲಿಂಗ, ಉಪಾಸ್ಯ ಉಪಾಸಕ ಲೀಲೆಯಿಂದ ಎರಡಾಗಿ ಅನಂತರ ಲಿಂಗಷಟ್‌ಸ್ಥಲ, ಅಂಗಷಟ್‌ಸ್ಥಲ ಎಂದು ಒಂದೊಂದೂ ಆರಾಗಿ ಪರಿಣಮಿಸಿದೆ. ಇದು ಒಂದಾಗಿದ್ದದ್ದು ಮೇಲಿನಿಂದ ಇಳಿದು ಬರುವ ಅವತರಣ ಕ್ರಮ. ಈಗ ಇದನ್ನು ಇನ್ನೊಂದು ದೃಷ್ಟಿಯಿಂದ ನೋಡಬಹುದು: ಮಲತ್ರಯಗಳಿಂದ ಕೂಡಿ ಸಂಸಾರದಲ್ಲಿ ಬದ್ಧವಾದ ಜೀವ, ಉದ್ಧಾರದ ಅಭೀಪ್ಸೆಯಿಂದ ಸಾಧನೆಯಲ್ಲಿ ತೊಡಗಿದಾಗ ಅವಲಂಬಿಸಬೇಕಾದ ಮೊದಲನೆ ಹಂತ ಭಕ್ತಸ್ಥಲ. ಭಕ್ತನ ಊರ್ಧ್ವಗಮನ ಪ್ರತೀಕ್ಷೆ ಅಂಗಸ್ಥಲಕ್ಕೆ ಆತನನ್ನು ಅರ್ಹನಾಗುವಂತೆ ಮಾಡುತ್ತದೆ. ಕೇವಲ ಬದ್ಧಜೀವಿಯಾಗಿದ್ದ ಆತ ಎಚ್ಚರಗೊಂಡು ಗುರುಲಬ್ಧವಾದ ದೀಕ್ಷಾತ್ರಯದಿಂದ ಶುದ್ಧ ಜೀವನಾದಾಗಲೇ 'ಅಂಗ' ಎಂದು ಕರೆಯಿಸಿಕೊಳ್ಳುವುದಕ್ಕೆ ಅರ್ಹನಾಗುತ್ತಾನೆ. ತಾನು ಶಿವರೂಪನೆಂದು ತತ್ವತಃ ತಿಳಿದು ಆ ನಿಲವನ್ನು ಕೈಗೂಡಿಸಿಕೊಳ್ಳಲು ಸಾಧನೆಯಲ್ಲಿ ಮಗ್ನನಾಗುತ್ತಾನೆ. ಈ ಸಾಧನೆಯ ಮಾರ್ಗದಲ್ಲಿ ಭಕ್ತಸ್ಥಲ ಮೊದಲನೆ ಹಂತ. ಅಲ್ಲಿಂದ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಹೀಗೆ ಮೇಲೇರುತ್ತಾ ಹೋಗುತ್ತಾನೆ.

ಈ ಸ್ಥಲವಿವೇಚನೆಯ ವಿಭಾಗಕ್ರಮದಲ್ಲಿ ಏಕರೂಪತೆಯಿಲ್ಲ. ಮೂವತ್ತಾರು ಸ್ಥಲಗಳ ವಿಭಾಗ ಕೆಲವು ಕಡೆ ಕಂಡರೆ, ನೂರೊಂದು ಸ್ಥಲಗಳ ವಿಭಾಗ ಕ್ರಮ, ಏಕೋತ್ತರಶತಸ್ಥಲವೆಂದು ಪ್ರಸಿದ್ಧವಾಗಿದೆ. ಆದರೆ ಇವೆಲ್ಲಾ ಒಟ್ಟಿನಲ್ಲಿ ಷಟ್‌ಸ್ಥಲಗಳ ಚೌಕಟ್ಟನ್ನು ಒಂದೊಂದು ರೀತಿಯಲ್ಲಿ ಸಮರ್ಥಿಸುತ್ತವೆ. ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಏರುವ ಆಧ್ಯಾತ್ಮಿಕ ಯಾತ್ರೆಯ ಮುನ್ನಡೆಯನ್ನೂ ಅದಕ್ಕೆ ಆವಶ್ಯಕವಾದ ಉಪಾಸನಾವಿಧಾನ ಲಿಂಗಸ್ವರೂಪ, ಶಕ್ತಿ ಭಕ್ತಿಗಳ ಕಲ್ಪನೆ. ಇವುಗಳನ್ನು ಅರ್ಥವತ್ತಾದ ರೀತಿಯಲ್ಲಿ ಮೂಡಿಸಿವೆ. ತಾತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗದ ಶ್ರೇಣಿಗಳಲ್ಲಿ ಇದನ್ನು ಅದ್ವಿತೀಯವನ್ನಾಗಿಸಿವೆ. ಈ ಅಂಶವನ್ನು ಮುಖ್ಯವಾಗಿ ಗಮನಿಸಿ ಈ ಮಾರ್ಗದ ವಿಶಿಷ್ಟತೆಯನ್ನು ಸಂಕ್ಷೇಪವಾಗಿ ಕಂಡುಕೊಳ್ಳಬಹುದು.

ಷಟ್‌ಸ್ಥಲದ ವೈಶಿಷ್ಟ್ಯ ಇರುವುದು, ತಾತ್ವಿಕ ಸಿದ್ಧಾಂತಕ್ಕೂ ಧಾರ್ಮಿಕ ಆಚರಣೆಗೂ ಸಮನ್ವಯವನ್ನು ಕಲ್ಪಿಸಿರುವುದರಲ್ಲಿ. ಧಾರ್ಮಿಕ ಆಚರಣೆ ಶಕ್ತಿಶಾಲಿಯಾಗಬೇಕಾದರೆ ಅದು ತಾತ್ವಿಕ ಸಿದ್ಧಾಂತದ ಅಧಿಪಾಯದ ಮೇಲೆ ನಿಂತಿರಬೇಕು. ಆದರೆ ತಾತ್ವಿಕ ಜಿಜ್ಞಾಸೆ ಶುಷ್ಕವಾಗದೆ ಅದು ಆಚಾರದಲ್ಲಿ ಬೆರೆತು, ಜೀವನದಲ್ಲಿ ಅಳವಡುವಂತಿರಬೇಕು. ಇವೆರಡನ್ನೂ ಸಾಧಿಸಿದೆ ಷಟ್‌ಸ್ಥಲ. ಆದುದರಿಂದಲೇ ಇದು ಆಧುನಿಕ ವಿಚಾರವಂತ ದೃಷ್ಟಿಗೆ ಬಹಳ ಅರ್ಥಗರ್ಭಿತವಾಗಿ ಕಾಣುತ್ತದೆ. ಆಧ್ಯಾತ್ಮಿಕ ಸಾಧನೆಗೆ ಒಡ್ಡಿರುವ ಒಂದು ಮನಶ್ಶಾಸ್ತ್ರದ ಕೈಪಿಡಿ ಎಂದು ಇದನ್ನು ಕರೆಯಬಹುದು. ಸಂದೇಹ, ತಳಮಳ, ಆತಂಕ, ಕುತೂಹಲ, ನಿಷ್ಠೆ, ನಿರೀಕ್ಷಣೆ—ಈ ಎಲ್ಲ ಭಾವಗಳೂ ಅಲ್ಲಿ

ವ್ಯಕ್ತವಾಗುತ್ತವೆ. ಈ ಜಗತ್ತೇ ಒಂದು ಪ್ರಯೋಗಶಾಲೆಯಾಗುತ್ತದೆ. ವ್ಯಷ್ಟಿ ಸಮಷ್ಟಿಗಳೆರಡೂ ಆತನ ಪ್ರಯೋಗ ಶಾಲೆಯ ವಿಷಯಗಳಾಗುತ್ತವೆ. ಅಂತರಂಗ ಬಹಿರಂಗಗಳೆರಡನ್ನೂ ಆತ ಹೊಕ್ಕು ನೋಡುತ್ತಾನೆ. ಬೆರಸಿದರೂ ಬೇರಾಗಿ ಬೆಳೆದು ನಿಲ್ಲುತ್ತಾನೆ. ಅದು ಕೇವಲ ಆದರ್ಶವಾದ ಆಧ್ಯಾತ್ಮಿಕ ನಿರೂಪಣೆಯಾಗಲ್ಲ ; ಈ ಲೋಕವನ್ನು ಒಪ್ಪಿಕೊಂಡು ಇದರ ಯಾವೊಂದು ಅಂಶವನ್ನೂ ತಿರಸ್ಕರಿಸದೆ, ಅದರ ಮಿತಿ ವ್ಯಾಪ್ತಿಗಳನ್ನರಿತು ತನ್ನ ಉದ್ದೇಶಕ್ಕೆ ಅಳವಡಿಸಿಕೊಳ್ಳುವ ಬಗೆಯನ್ನು ಸಾಧಿಸಿರುವ ರೀತಿಯಲ್ಲಿ ಅದರ ಕೌಶಲವಿದೆ. ಇಲ್ಲಿ ತತ್ವಜಿಜ್ಞಾಸೆಯು ಜ್ಞಾನಮಾರ್ಗ, ಕ್ರಿಯಾಚರಣೆಯು ಕರ್ಮಮಾರ್ಗ, ಉಪಾಸನೆಯು ಭಕ್ತಿಮಾರ್ಗಗಳು ಮುಪ್ಪುರಿಗೊಂಡಿವೆ.

ಶ್ರದ್ಧೆ ಮತ್ತು ಕ್ರಿಯೆ ಇವೆರಡು ಭಕ್ತಸ್ಥಲದ ಮುಖ್ಯ ಲಕ್ಷಣಗಳು. ಅಚಲ ವಿಶ್ವಾಸ ಅಂದರೆ ಶ್ರದ್ಧೆ, ಮೊದಲ ಗುಣ. ಅವಿವೇಚಿತವಾದ ಅಂಧಶ್ರದ್ಧೆಯಲ್ಲ ; ದೊಡ್ಡದರ ವಿಚಾರದಲ್ಲಿ ವಿಚಾರಪೂರ್ವಕವಾದ ಶ್ರದ್ಧೆ. ಶುದ್ಧಾಂತಃಕರಣದಿಂದ ಮೂಡಿದ ಶ್ರದ್ಧೆ. ಷಟ್‌ಸ್ಥಲ ಮಾರ್ಗದಲ್ಲಿ ಕುರುಡು ನಂಬಿಕೆಗೆ ಎಡೆಯಿಲ್ಲ. ತನ್ನಲ್ಲಿರುವ ಅಂತಃಶಕ್ತಿಯನ್ನು ಕಂಡುಕೊಳ್ಳುವ ವಿವೇಚನೆಯಿಂದ ಕೂಡಿ ಮುಮುಕ್ಷುವಾದಾಗ ಭಕ್ತಸ್ಥಲದ ಮೊದಲ ಹಂತವನ್ನೇರುತ್ತಾನೆ. ಇದನ್ನು ಪಿಂಡಸ್ಥಲ ಎಂದು ಕರೆಯಲಾಗಿದೆ. ಇದನ್ನು ಬಸವಣ್ಣ ಹೀಗೆ ಹೇಳುತ್ತಾನೆ.

> "ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ;
> ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ;
> ನನೆಯೊಳಗಣ ಪರಿಮಳದಂತಿದ್ದಿತ್ತು ;
> ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು"

ಈ ಶಕ್ತಿಯ ಸ್ವರೂಪವನ್ನು ಸಾಧಕ ತನ್ನ ಸಾಧನೆಯ ಪ್ರಾರಂಭದಲ್ಲಿಯೇ ಕಂಡುಕೊಳ್ಳಬೇಕಾಗುತ್ತದೆ. ಮತ್ತು ತತ್ತ್ವತಃ ತಾನೇ ಶಿವಸ್ವರೂಪನಾದವನೆಂದು ಭಾವಿಸಬೇಕಾಗುತ್ತದೆ. ಈ ಭಾವಜ್ಞಾನವನ್ನು ಪಡೆದವನೇ ಪಿಂಡಜ್ಞಾನಿ. ಶರಣರ ಅನೇಕ ವಚನಗಳು ಪಿಂಡಜ್ಞಾನಿಯ ಲಕ್ಷಣವನ್ನು ನಿರೂಪಿಸುತ್ತಿವೆ. "ನಾಶಿವಸ್ಯ ಶಿವೋಪಾಸ್ತಿರ್ಘಟತೇ ಜನ್ಮಕೋಟಿಭಿಃ" ಎಂಬ ಮಾತಿನಲ್ಲಿ, ಮಗ್ಗೆಯ ಮಾಯಿದೇವ ತನ್ನ 'ಶಿವಾನುಭವ ಸೂತ್ರ'ದಲ್ಲಿ ಶರಣರ ಈ ಅಭಿಪ್ರಾಯವನ್ನೇ ಪಡಿನುಡಿಯುತ್ತಾನೆ.

ಹೀಗೆ ತನ್ನ ಸ್ವಸ್ವರೂಪವನ್ನು ತತ್ತ್ವತಃ ತಿಳಿದ ಭಕ್ತ, ಅದರಿಂದ ವಿಸ್ಮೃತಿಗೊಂಡ ತನ್ನ ಇಂದಿನ ಪರಿಮಿತಶಕ್ತಿಯನ್ನು ಪರಿಭಾವಿಸುತ್ತಾನೆ. ಈ ಮರವೆಗೆ ಕಾರಣವಾದ ಸಂಸಾರದ ವಿಚಾರದಲ್ಲಿ ಒಂದು ಜಿಹಾಸೆ ಸಹಜವಾಗಿಯೇ ಉಂಟಾಗುತ್ತದೆ. ಅದೇ ಸಂಸಾರಹೇಯಸ್ಥಲ. ಈ ಸಂಸಾರ ತಿರಸ್ಕರಣೀಯ, ಎಂಬುದು ಇಲ್ಲಿನ ಉದ್ದೇಶವಲ್ಲ. ಇದನ್ನು ಮೀರಿ ಮುನ್ನಡೆಯಬೇಕಾದರೆ ಕ್ಷಣಕಾಲ ಇದರಿಂದ ದೂರ

ನಿಂತು ನೋಡುವ ನಿರ್ಲಿಪ್ತಮನೋಧರ್ಮ ಆವಶ್ಯಕವೆಂಬುದನ್ನು ಇದು ಸೂಚಿಸುತ್ತದೆ. ಇಲ್ಲಿ ಕಂಡುಬರುವುದು ಒಂದು ಬಗೆಯ ದೈವಿಕ ಅತೃಪ್ತಿ. ಜಗತ್ತಿನ ಎಲ್ಲ ಸಾಧಕರಲ್ಲಿಯೂ ಇದು ವ್ಯಕ್ತವಾಗಿದೆ. ಶರಣರಂತೂ ಇದನ್ನು ಬಹಳ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ. ಬಸವಣ್ಣ ಅಕ್ಕಮಹಾದೇವಿ ಮೊದಲಾದವರಲ್ಲಿ ಸುಂದರವಾದ ಕಾವ್ಯವಾಣಿಯಾಗಿ ವ್ಯಕ್ತವಾಗಿದೆ.

> "ಇಲಿ ಗಡುಹನೊಡ್ಡಿದಲ್ಲಿರ್ಪಂತೆ ಎನ್ನ ಸಂಸಾರ
> ತನು ಕೆಡುವನ್ನಕ್ಕ ಮಾಣದು ;
> ಹೆರರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು ;
> ಹೆರರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು ;
> ಅಕಟಕಟಾ ಸಂಸಾರಕ್ಕಸತ್ತೆ, ಕೂಡಲ ಸಂಗಮದೇವಾ."

ಇಂತಹ ನೂರಾರು ವಚನಗಳನ್ನು ಉದಾಹರಿಸಬಹುದು. ಈ ಸಂಸಾರ ಹೇಯ, ನಶ್ವರ–ಎಂದು ತಿಳಿದ ಭಕ್ತ ಇದರಿಂದ ಓಡಿಹೋಗಬೇಕೆಂದು ಷಟ್‌ಸ್ಥಲ ಹೇಳುವುದಿಲ್ಲ. ಸಂಪೂರ್ಣ ಶರಣಾಗತಿಯಿಂದ ಏಕೈಕ ನಿಷ್ಠೆಯಿಂದ ಮುನ್ನಡೆದು 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ''ವೆಂದು ಪ್ರವೃತ್ತಿಮಾರ್ಗದ ನಿಜಭಕ್ತಿಯನ್ನು ಅಳವಡಿಸಿಕೊಳ್ಳಬೇಕೆಂದು ಹೇಳುತ್ತದೆ. ಈ ನಿಜಭಕ್ತಿಯಲ್ಲಿ ಇಷ್ಟಲಿಂಗ ಪ್ರಮುಖಪಾತ್ರ ವಹಿಸುತ್ತದೆ. ಇದರ ಸಾಂಕೇತಿಕಶಕ್ತಿಯ ವಿವೇಚನೆ ಬಹಳ ದೀರ್ಘವಾಗಿ ಅನುಭಾವಪೂರ್ವಕವಾಗಿ ಇಲ್ಲಿ ಬರುತ್ತದೆ.

ವೀರಶೈವಕ್ಕೆ ವಿಶಿಷ್ಟವಾದುದು ಇಷ್ಟಲಿಂಗ. ಗುರು ಅದನ್ನು ದೀಕ್ಷಾಪೂರ್ವಕವಾಗಿ ಅನುಗ್ರಹಿಸುತ್ತಾನೆ. ಆ ಇಷ್ಟಲಿಂಗವೇ ಭಕ್ತಸ್ಥಲದಲ್ಲಿ ಆಚಾರಲಿಂಗವಾಗಿ ಮಹೇಶ್ವರದಲ್ಲಿ ಗುರುಲಿಂಗವಾಗುತ್ತದೆ. ಶ್ರದ್ಧಾಭಕ್ತಿಯಿಂದ ಆಚಾರಲಿಂಗವನ್ನು, ನೈಷ್ಠಿಕಭಕ್ತಿಯಿಂದ ಗುರುಲಿಂಗವನ್ನು ಉಪಾಸಿಸುತ್ತಾನೆ. ಅಂದರೆ ಆಚಾರದಲ್ಲಿ ಶ್ರದ್ಧೆ ಬೇಕು. ಗುರುವಿನಲ್ಲಿ ನಿಷ್ಠೆ ಬೇಕು. ಇವೆರಡನ್ನು ತಾನು ದೇಹದ ಮೇಲೆ ಧರಿಸಿದ ಲಿಂಗದ ಉಪಾಸನೆಯಲ್ಲಿ ಅಳವಡಿಸಿಕೊಳ್ಳಬೇಕು. ಈ ಭಕ್ತಿಸಾಧನೆಯಲ್ಲಿ ಗಮನಿಸಬೇಕಾದ ಒಂದು ಮುಖ್ಯವಾದ ಅಂಶವೆಂದರೆ ಸಾಮಾಜಿಕ ಹಿತವನ್ನು ವೈಯಕ್ತಿಕ ವಿಕಾಸದೊಡನೆ ಸಮನ್ವಯಗೊಳಿಸಿದುದು, 'ಕಾಯಕ'ವನ್ನು ಒಂದು ಧಾರ್ಮಿಕ ಕ್ರಿಯೆಯೆಂಬಂತೆ ಉಪಾಸನೆಯ ವಿಧಾನದಲ್ಲಿಯೇ ಅಳವಡಿಸಿಕೊಂಡುದು. ಗುರು ಲಿಂಗ ಜಂಗಮ ಇವುಗಳಿಗೆ ತನು ಮನ ಧನವನ್ನರ್ಪಿಸುವ ತ್ರಿವಿಧ ದಾಸೋಹದ ಕಲ್ಪನೆ ಶರಣರ ಷಟ್‌ಸ್ಥಲಮಾರ್ಗದ ಒಂದು ವೈಶಿಷ್ಟ್ಯ. ಲಿಂಗಪೂಜೆ ಸಾರ್ಥಕವಾಗಬೇಕಾದರೆ ಕಾಯಕದಿಂದ ಬಂದುದೇ ಅದಕ್ಕೆ ಅರ್ಪಿತವಾಗಬೇಕು. ದೇಹಶ್ರಮದ ದುಡಿಮೆಯಿಂದಲ್ಲದೆ ಬದುಕುವ ಹಕ್ಕಿಲ್ಲ; ಪೂಜಿಸುವ ಹಕ್ಕಿಲ್ಲ, ಆ ದುಡಿಮೆ ತನಗೆ ಮಾತ್ರವಲ್ಲ, ಸಮಾಜಕ್ಕೂ ವಿನಿಯೋಗವಾಗಬೇಕು. ಹೀಗೆ ಒಂದೇ ಹಂತದಲ್ಲಿ ಸಮಾಜ ಮತ್ತು

ವ್ಯಕ್ತಿಗಳೆರಡರ ಉದ್ಧಾರದ ಕಲ್ಪನೆಯನ್ನು ಶರಣರು ಕಂಡರು. ಜಾತಿಭೇದಗಳನ್ನೂ ಇತರ ತಾರತಮ್ಯಗಳನ್ನೂ ಹರಿದೊಗೆದು, ಈ ಸಾಧನೆಯನ್ನು ದಿಟ್ಟತನದಿಂದ ಆಚರಣೆಯಲ್ಲಿ ತಂದುದರಿಂದ ಕ್ರಾಂತಿಕಾರಕವೂ ಆಗಿ ಪರಿಣಮಿಸಿದುವು ಅವರ ಭಾವನೆಗಳು.

ಭಕ್ತಸ್ಥಲದಲ್ಲಿ ತೊಡಗಿದ ಈ ಪೂರ್ಣದೃಷ್ಟಿಯ ಸಾಧನೆ ಮಹೇಶ್ವರ ಸ್ಥಲದಲ್ಲಿ ಇನ್ನೂ ಮುಂದುವರಿಯುತ್ತದೆ. ಇದು ನೈಷ್ಠಿಕಭಕ್ತಿಪ್ರಧಾನವಾದದ್ದು. ವಿಚಾರ ಆಚಾರಗಳಿಂದ ಗಟ್ಟಿಗೊಂಡ ಅಚಲ ನಿಷ್ಠೆ ಇಲ್ಲಿ ಬೆಳೆಯುತ್ತದೆ. ಅನ್ಯಾಯದೊಡನೆ ಹೊಂದಾಣಿಕೆ ಇಲ್ಲದ ಸತ್ಯನಿಷ್ಠುರತೆ ಇಲ್ಲಿನ ಮುಖ್ಯಗುಣ.

"ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ,' ಎಂಬ ಮುಂತಾದ ನೈತಿಕ ನಿಷ್ಠೆಯ ಸಾತ್ವಿಕ ಹಠ ಸಾಧಕನಿಗೆ ಅಗತ್ಯ. ಅವರವರಿಗವರವರಂತೆ ವೇಷ ಕಟ್ಟುವ ಸಮಯಸಾಧಕರಿಂದ ಏನನ್ನೂ ಸಾಧಿಸಲಾಗುವುದಿಲ್ಲ. 'ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ' ವಿರಳವಿಲ್ಲದ ಮಣಿಯ ಪೋಣಿಸುವ ಪ್ರಯತ್ನದಂತೆ ವ್ಯರ್ಥ.

> "ಕಿಡಿಕಿಡಿ ಕೆದರಿದರೆ ಎನಗೆ ಹಸಿವು ತೃಷೆ ಅಡಗಿತೆಂಬೆನು ;
> ಮುಗಿಲು ಹರಿದು ಬಿದ್ದರೆ ಎನಗೆ ಮಜ್ಜನಕ್ಕೆರೆದರೆಂಬೆನು
> ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು,
> ಚನ್ನಮಲ್ಲಿಕಾರ್ಜುನಯ್ಯ ಶಿರ ಹರಿದು ಬಿದ್ದಡೆ
> ಪ್ರಾಣ ನಿಮಗರ್ಪಿತವೆಂಬೆನು"

ಎಂಬಂತಹ ನಿಷ್ಠೆ ಬೇಕು ಸಾಧಕನಿಗೆ. ಆತ ಕಾಯದ ಕಳವಳಕ್ಕಂಜಿ ಕಾಯಯ್ಯ ಎನ್ನುವುದಿಲ್ಲ. ಜೀವನೋಪಾಯಕ್ಕಂಜಿ ಈಯಯ್ಯಾ ಎನ್ನುವುದಿಲ್ಲ. ಮರಣವನ್ನು ಮಹಾನವಮಿ ಎಂದು ಎದುರುಗೊಳ್ಳುವ ಶ್ರೀಮಂತಿಕೆ ಆತನದು. ಭಕ್ತಿಸಾಧನೆ ಅಳಿಮನಸ್ಸಿನಿಂದ ಅತ್ತಿತ್ತ ಹರಿಯಬಾರದು. ಇದರಿಂದ ಭಕ್ತಿ ಹರಿದು ಹಂಚಿಹೋಗುತ್ತದೆ. ಆದ್ದರಿಂದ ಇತರ ದೈವಗಳಿಗಿರಲಿ, ಸ್ಥಾವರಲಿಂಗಗಳಿಗೆರಗುವುದನ್ನೂ ಮೂರ್ತಿಪೂಜೆಯನ್ನೂ ಶರಣರು ನಿರಾಕರಿಸಿದರು; ಇಷ್ಟಲಿಂಗಪೂಜೆ ಮೂರ್ತಿಪೂಜೆಯಲ್ಲಿ, ತನ್ನತನವನ್ನೇ ಪ್ರತ್ಯಕ್ಷೀಕರಿಸಿಕೊಳ್ಳುವ ಆತ್ಮಾನುಸಂಧಾನ ; "ಅಹಂಗ್ರಹೋಪಾಸನೆ." ಮಹೇಶಸ್ಥಲ ಈ ನಿಷ್ಠೆಯೊಂದನ್ನೇ ನೆಮ್ಮಿ ಇಷ್ಟಲಿಂಗದ ಅನುಸಂಧಾನದಲ್ಲಿ ತೊಡಗುತ್ತದೆ.

ಸಾತ್ವಿಕಗುಣಪೂರ್ಣವಾದ ಈ ಕಠೋರನಿಷ್ಠೆ, ಜೀವನದ ಎಲ್ಲ ರಂಗಗಳಲ್ಲಿಯೂ ಆತನಿಗೆ ಮಾರ್ಗದರ್ಶಕವಾಗುತ್ತದೆ. ಆಧ್ಯಾತ್ಮಿಕ ವಮೌಲ್ಯದ ಹಿನ್ನೆಲೆಯಲ್ಲಿ ಜೀವನದ ಎಲ್ಲ ಕಾರ್ಯಗಳೂ ಸಮಾಜದ ಮತ್ತು ವ್ಯಕ್ತಿಯ ಹಿತಕ್ಕೆ ಕಾರಣವಾಗುವಂತಿರಬೇಕು — ಎಂಬುದು ಶರಣರ ದೃಷ್ಟಿ. ಧಾರ್ಮಿಕ ಶ್ರದ್ಧೆಗಳು ವ್ಯಕ್ತಿಯನ್ನು ಪರಾವಲಂಬಿಯನ್ನಾಗಿ ಮಾಡಿದ್ದುವು. ಅಷ್ಟಮಿ, ನವಮಿ, ವಾರ, ತಿಥಿ, ನಕ್ಷತ್ರ, ಶುಭ, ಅಶುಭ, ಶಕುನಾದಿಗಳು ಹೆಜ್ಜೆಹೆಜ್ಜೆಗೂ ಅವನನ್ನು ಬಂಧಿಸಿದ್ದುವು. ಇವೆಲ್ಲವನ್ನು

ಶರಣರು ಕಿತ್ತೆಸೆದರು. ಅಪಾರಮಹಿಮಾನ್ವಿತವಾದ ಉದಾತ್ತಶಕ್ತಿಯ ಸಂಕೇತವಾಗಿ ಇಷ್ಟಲಿಂಗವನ್ನು ಧರಿಸಿದ ಮೇಲೆ ವಾರಗಳ ತಿಥಿಗಳ ಭಕ್ತರಾಗುವುದು ಯುಕ್ತವಲ್ಲ ವೆಂದರು. ಅಣಿಮಾದಿ ಅಷ್ಟಸಿದ್ಧಿಗಳಿಗೋ. ನಾರು, ಬೇರು, ಅಂಜನ, ಘುಟಿಕೆ, ಮೂಲಿಕೆ ರಸಸಿದ್ಧಿಗಳಿಗೋ ಮಾರುಹೋಗುವ ಸಕಾಮಭಕ್ತಿಯನ್ನು ಖಂಡಿಸಿ ಪರಮಪ್ರೇಮ ರೂಪವಾದ ನಿಷ್ಕಾಮಭಕ್ತಿಯನ್ನು ಎತ್ತಿಹಿಡಿದರು, ವ್ಯಷ್ಟಿ ಸಮಷ್ಟಿಗಳೆರಡರ ಹಿತ ವನ್ನು ಸಮನ್ವಯಗೊಳಿಸಿದರು. ಸರ್ವಸಮಾನತೆ, ಅಸ್ಪೃಶ್ಯತೆಯ ನಿವಾರಣೆ, ವರ್ಣ ವಿಭೇದಗಳ ಪ್ರತಿಭಟನೆ—ಇವೆಲ್ಲ ಮಹೇಶ್ವರ ಸ್ಥಲದಲ್ಲಿ ಶರಣರು ಅಳವಡಿಸಿಕೊಂಡ ಭಕ್ತಿಸಾಧನೆಯ ಸಾಮಾಜಿಕ ಪ್ರತಿಕ್ರಿಯೆಗಳು. ಹೀಗೆ ಭಕ್ತ ಮತ್ತು ಮಹೇಶ್ವರಸ್ಥಲ ಗಳಲ್ಲಿ ಆಚಾರವಿಚಾರಗಳೆರಡಕ್ಕೂ ಸಮಾನಸ್ಥಾನ ಲಭಿಸಿ, ಆಧ್ಯಾತ್ಮಿಕ ಸಾಧನೆಯ ವಿಕಾಸಕ್ಕೆ ಭದ್ರ ಬುನಾದಿಯನ್ನು ಇವು ಹಾಕಿರುವುದನ್ನು ಗಮನಿಸಬೇಕು.

ಷಟ್‌ಸ್ಥಲದ ಮುಂದಿನ ಎರಡು ಹಂತಗಳು 'ಪ್ರಸಾದಿ' ಮತ್ತು 'ಪ್ರಾಣಲಿಂಗಿ'. ಶ್ರದ್ಧೆ ನಿಷ್ಠೆಗಳ ಪೂರ್ವಸಿದ್ಧತೆಯನ್ನೂ ಅದರಿಂದ ಒಂದು ಪೂರ್ಣದೃಷ್ಟಿಯನ್ನೂ ಪಡೆದ ಸಾಧಕ, ಇಲ್ಲಿ ಕ್ರಮವಾಗಿ ಅವಧಾನಭಕ್ತಿ, ಅನುಭಾವ ಭಕ್ತಿಗಳನ್ನು ಅವಲಂಬಿಸಿ ಮುನ್ನಡೆಯುತ್ತಾನೆ. ಶ್ರದ್ಧೆ ನಿಷ್ಠೆಗಳೆರಡೂ ಅಪ್ರಯತ್ನಪೂರ್ವಕವಾದ ಸಹಜ ಸ್ಥಿತಿಯಾಗಿ ಇಲ್ಲಿ ಪರಿಣಮಿಸುತ್ತವೆ. ಸಾವಧಾನದ ನಿಲವನ್ನು ಪಡೆಯುತ್ತವೆ. ಇದ ರಿಂದ ಮನಸ್ಸಿನ ಆತಂಕ ತಳಮಳಗಳು ಹಿಂಸೆ, ಹಠನಿಷ್ಠೆಗಳು ಮೃದುತ್ವವನ್ನು ಪಡೆದು ಮನಸ್ಸಿನ ಪ್ರಸನ್ನತೆ ಉಂಟಾಗುತ್ತದೆ. "ಮನಃಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ"–ಎಂಬ ಸಿದ್ಧಾಂತಶಿಖಾಮಣಿಯ ಮಾತು ಅರ್ಥವತ್ತಾಗಿದೆ. ಪರಮಾತ್ಮನ ಸಾನ್ನಿಧ್ಯದ ಸಮೀಪಕ್ಕೆ ಹೆಚ್ಚುಹೆಚ್ಚು ಹತ್ತಿರ ಹೋದಂತೆಲ್ಲಾ ಆತನ ವ್ಯಕ್ತಿತ್ವದಲ್ಲಿ ಉಂಟಾಗುವ ಪರಿವರ್ತನೆ ದೈವಿಕ ಪರಿಣಾಮಗಳನ್ನು ಇಲ್ಲಿ ಕಾಣುತ್ತೇವೆ. ಪ್ರಸಾದಿಸ್ಥಲದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಮಾತೆಂದರೆ, ಸತತ ಕ್ರಿಯೆಯಲ್ಲಿ ನಿರತನಾದರೂ ಅವುಗಳಿಗೆ ಅತೀತವಾಗುವ ನಿರ್ಲಿಪ್ತತೆಯನ್ನು ರೂಢಿಸಿಕೊಳ್ಳುವ ಬಗೆ. ಕರ್ಮಯೋಗದ ರಹಸ್ಯ ಆದರ ಉದಾತ್ತವಾದ ಅರ್ಥದಲ್ಲಿ ಇಲ್ಲಿ ಅಡಕವಾ ಗಿದೆ. "ಫಲಪದದಾಸೆಯಂ ಮಾಡಲಾಗದು ಕ್ರಿಯೆಯಲ್ಲಿ" ಎಂಬ ಅರ್ಪಣತತ್ತ್ವ ಇನ್ನೂ ಬೆಳೆದು "ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ" ಎನ್ನುವ ಸಾಮಾಜಿಕ ಹಿತದ ಸ್ವರೂಪವನ್ನು ಪಡೆಯಿತು. ನನ್ನ ಕ್ರಿಯೆಯ ಫಲ ನನಗೆ ಲಭಿಸಬೇಕು. ಆದರೆ ಅದು ಕೇವಲ ನನಗಾಗಿ ಮಾತ್ರವಲ್ಲ, ಗುರು ಲಿಂಗ ಜಂಗಮಕ್ಕೆ ಅಂದರೆ ಸಮಾಜಕ್ಕೆ ಅರ್ಪಿತವಾಗಬೇಕು—ಎಂಬಲ್ಲಿ ಈ ದೃಷ್ಟಿಯನ್ನು ಕಾಣುತ್ತೇವೆ. ಹೀಗೆ ದಾಸೋಹದ ರಹಸ್ಯವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಕಾಯಕಕ್ಕೆ ಅದು ಸಾರ್ಥಕತೆಯನ್ನು ತಂದುಕೊಟ್ಟಿದೆ.

ಬಂದುದೆಲ್ಲವನ್ನೂ ಲಿಂಗಕ್ಕೆ ಅರ್ಪಿಸುವುದು ಪ್ರಸಾದ ತತ್ತ್ವದ ಒಂದು ಮುಖ ವಾದರೆ, ತನ್ನನ್ನೇ ಸಂಪೂರ್ಣವಾಗಿ ಲಿಂಗಕ್ಕೆ ಅರ್ಪಿಸಿಕೊಳ್ಳುವುದು ಇನ್ನೊಂದು ಮುಖ.

> "ಪರಿಯಾಣವೇ ಭಾಜನವೆಂಬುದು ; ಪರಿಯಾಣ ಭಾಜನವಲ್ಲ
> ಲಿಂಗಕ್ಕೆ ತನ್ನ ಮನವೇ ಭಾಜನ
> ಪ್ರಾಣವನು ಬೀಸರವೋಗದೆ ಮೀಸಲಾಗಿ ಅರ್ಪಿಸಬಲ್ಲಡೆ
> ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ."

ಎನ್ನುತ್ತಾನೆ ಬಸವಣ್ಣ. "ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ ; ಹತ್ತಿ ಕರೆದಿಕ್ಕುವುದು ಪ್ರಸಾದವಲ್ಲ; ತಕ್ಕೈಸಿ ನಿಮ್ಮುವನಪ್ಪಿಕೊಂಡುದೆ ನಿಶ್ಚಯ ಪ್ರಸಾದ" ಎಂಬ ದೇವರದಾಸಿಮಯ್ಯನ ಮಾತಿನಲ್ಲಿ ಪ್ರಸಾದದ ನಿಜಸ್ವರೂಪ ವ್ಯಕ್ತವಾಗಿದೆ. ದೇವರಿಗೆ ನೈವೇದ್ಯ ಮಾಡು ವುದು. ಹಾಗೆ ಅರ್ಪಿಸಿದುದನ್ನು ಪ್ರಸಾದವೆಂದು ಭಾವಿಸು ವುದು ಒಂದು ಹಂತದಲ್ಲಿ ಮಾತ್ರ. ನಿಜವಾದ ಪ್ರಸಾದವೆಂದರೆ ತಕ್ಕೈಸಿ ಶಿವನನ್ನೇ ಅಪ್ಪಿಕೊಳ್ಳುವುದು ; ಆತನಿಗೆ ತನ್ನನ್ನೇ ಅರ್ಪಿಸಿಕೊಳ್ಳುವುದು.

> ಒಕ್ಕುದು ಪ್ರಸಾದವೆಂಬರಂ ಮಿಕ್ಕುದು ಪ್ರಸಾದವೆಂಬರು ;
> ಒಕ್ಕುದು ಮಿಕ್ಕುದನೆಲ್ಲ ಬೆಕ್ಕುಕೊಳ್ಳದೆ ?
> ಒಕ್ಕುಮಿಕ್ಕು ಹೋಗುವ ಸಂಚ ಸಕೀಲವ ಬಲ್ಲರೆ
> ಗುಹೇಶ್ವರ ಲಿಂಗದಲ್ಲಿ ಆತನೇ ಪರಮ ಪ್ರಸಾದಿ

ಎಂದು ಅಲ್ಲಮಪ್ರಭು ಪರಮಪ್ರಸಾದಿಯ ಲಕ್ಷಣವನ್ನು ಬಹಳ ಚೆನ್ನಾಗಿ ಹೇಳಿದ್ದಾನೆ. ಅಂಗ, ಪ್ರಾಣ, ಮನ, ಭಾವ, ಅರಿವುಗಳ ಅರ್ಪಣೆಯನ್ನು ಇಲ್ಲಿ ಕಾಣಬಹುದು. ಲಿಂಗ ದಲ್ಲಿ ಅನನ್ಯಾನುಭವಿಯಾಗಿ ಭಿನ್ನವಳಿದು ಲಿಂಗಭೋಗೋಪಭೋಗಿಯಾಗಬೇಕು. ಪ್ರಸಾದತತ್ತ್ವದಲ್ಲಿ ಕರ್ಮಯೋಗದ ಪರಮರಹಸ್ಯವನ್ನು ವ್ಯಾಪಕರೀತಿಯಲ್ಲಿ ಅಳ ವಡಿಸಲಾಗಿದೆ. ಕ್ರಿಯೆಯಿಂದಲೇ ಕ್ರಿಯಾತೀತನಾಗುವ, ಅರ್ಪಿತ ಅನರ್ಪಿತಗಳನ್ನಳಿದು ದ್ವಂದ್ವಾತೀತವಾಗುವ ನಿಲವನ್ನು ಅದು ಪಡೆಯುತ್ತದೆ.

ಈ ಅನುಭವದಲ್ಲಿ ನಿಂತ ಪ್ರಸಾದಿಯ ಸಾಧನೆ ಇನ್ನೂ ಮೇಲಿನ ಹಂತಕ್ಕೇರು ತ್ತದೆ. ಪ್ರಾಣಲಿಂಗಿಸ್ಥಲದಲ್ಲಿ 'ಪ್ರಾಣಲಿಂಗ' ಎಂಬ ಮಾತೇ ಮಹತ್ವಪೂರ್ಣವಾ ದುದು. "ಲಿಂಗದಲ್ಲಿ ಪ್ರಾಣವ ನಿಲಿಸಿ, ಪ್ರಾಣದಲ್ಲಿ ಲಿಂಗವನಿರಿಸಿ, ನೆನೆವುತ್ತಿದ್ದ ಕಾರಣ. ಪ್ರಾಣಲಿಂಗವಾಯಿತ್ತು' ಎನ್ನುತ್ತಾನೆ ಒಬ್ಬ ಶರಣ. ಅಂದರೆ ಪ್ರಾಣದಲ್ಲಿ ಲಿಂಗವನ್ನು ನಿಲ್ಲಿಸುವುದೇ ಪ್ರಾಣಲಿಂಗ.

> "ಎನ್ನ ಮನದ ಕೊನೆಯ ಮೇಲೆ
> ಅಂಗವಿಲ್ಲದ ರೂಪನ ಕಂಡು ನಾನು ಬೆರಗಾದೆ
> ಅಂತರಂಗದ ಆತ್ಮನೊಳಗೆ ಅನಿಮಿಷ ನಿಜೈಕ್ಯ
> ಗುಹೇಶ್ವರನಲ್ಲಯ್ಯನ ಕಂಡು ಬೆರಗಾದೆನು',

ಎಂದು ಹೇಳುವಲ್ಲಿ ಅಲ್ಲಮಪ್ರಭು, ಪ್ರಾಣಲಿಂಗದ ಸ್ವರೂಪವನ್ನೇ ಸೂಚಿಸಿದ್ದಾನೆ. ಇಲ್ಲಿ ಸಾಧನೆ ಅಂತರಂಗದ ಕಡೆಗೆ ಅನುಸಂಧಾನದ ಕಡೆಗೆ ತಿರುಗುತ್ತದೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಇಲ್ಲಿ ಲಿಂಗ, ಉಪಾಸ್ಯವಾದ ಸ್ಥೂಲವಸ್ತುಮಾತ್ರ ವಾಗಿ ಉಳಿಯದೆ, ಅದು ಅಂತರಂಗ ಬಹಿರಂಗವನ್ನೆಲ್ಲಾ ವ್ಯಾಪಿಸಿದ ಶಕ್ತಿಯಾಗುತ್ತದೆ. ಬಹಿರಂಗಪೂಜೆ, ಅಂತರಂಗದ ನಿರ್ಮಲ ಜ್ಯೋತಿಯನ್ನು ಕಾಣುವುದರ ಕಡೆಗೆ ನಡೆಯು ತ್ತದೆ. ಅನುಭಾವ ಭಕ್ತಿಯಿಂದ ಇಷ್ಟಲಿಂಗದ ಅನುಸಂಧಾನವನ್ನು ಇಲ್ಲಿ ಸಾಧಕ ಕೈ ಕೊಳ್ಳುತ್ತಾನೆ.

ಪ್ರಾಣಲಿಂಗಿಸ್ಥಲ ಯೋಗಾಭ್ಯಾಸದ ಕೊನೆಯ ಹಂತವನ್ನು ಒಳಗೊಂಡಿದೆ. ಶರಣರು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಮೊದಲನೆಯ ಮೂರು ಸ್ಥಲಗಳಲ್ಲಿ ಭಕ್ತಿ ಕ್ರಿಯೆ ಜ್ಞಾನರೂಪವಾದ ಪೂರ್ವಸಿದ್ಧತೆ ನಡೆದು, ಇಲ್ಲಿ ಆ ಮೂರೂ ಮುಪ್ಪುರಿ ಗೊಂಡು, ದೇಹದಲ್ಲಿರುವ ಅಂತಃಶಕ್ತಿಯನ್ನು ಜಾಗ್ರತಗೊಳಿಸುವ ಯೋಗಸಾಧನೆಯನ್ನು ಕೈಕೊಳ್ಳುತ್ತವೆ. ಬಹಿರಂಗದ ಕುರುಹು ಇದಕ್ಕೆ ಸಾಧನವಾಗುತ್ತದೆ. ಕರಸ್ಥಲದಲ್ಲಿರುವ ಇಷ್ಟಲಿಂಗ ದೃಷ್ಟಿಯೋಗದಿಂದ ಕಣ್ಣುಗಳನ್ನು ತುಂಬುತ್ತದೆ. ಕಂಗಳ ನೋಟದ ಮೂಲಕ ಮನದ ಕೊನೆಯನ್ನು ಹೋಗುತ್ತದೆ. ಮನದ ಕೊನೆಯಲ್ಲಿ ನೋಡಿದರೆ ಭಾವದಲ್ಲಿ ಇಂಬಿಡುತ್ತದೆ. ಆತನ ಸರ್ವಾಂಗವನ್ನೂ ವ್ಯಾಪಿಸುತ್ತದೆ. ಅಂದರೆ ಇಷ್ಟಲಿಂಗವೇ ಪ್ರಾಣಲಿಂಗ, ಭಾವಲಿಂಗವಾಗಿ, ಕೊನೆಯಲ್ಲಿ ಸರ್ವಾಂಗಲಿಂಗವಾಗಿ ಪರಿಣಮಿಸುತ್ತದೆ. ಯೋಗಾಭ್ಯಾಸದಲ್ಲಿ ಮುಖ್ಯವಾದ ಧ್ಯಾನ ಧಾರಣ ಸಮಾಧಿ ಈ ಮೂರು ಅಂಶಗಳೂ ಇಲ್ಲಿ ಅಡಕವಾಗುತ್ತವೆ. "ಹರಿವ ಮನವಾಯುವನೊಂದು ಹುರಿಯ ಮಾಡಿ, ಮನವ ಸ್ಥಿರಗೊಳಿಸಿ, ಸಗುಣ ಧ್ಯಾನದಲ್ಲಿ ಮನವ ಸವಿದು, ನಿರ್ಗುಣದಲ್ಲಿ ನಿಂದು, ಆ ನಿರ್ಗುಣ ಧ್ಯಾನ ಬಲಿದು, ಸಗುಣ ನಿರ್ಗುಣದಲ್ಲಿ ಅಡಗಿ, ಆ ನಿರ್ಗುಣವಾದ ನಿಜದಲ್ಲಿ ಮನೋ ಲಯ"ವಾಗಬೇಕೆನ್ನುತ್ತಾನೆ ಒಬ್ಬ ಶರಣ. ಇಷ್ಟಲಿಂಗದ ಅನುಸಂಧಾನಕ್ಕೆ ಅನುಗುಣ ವಾಗಿ ಯೋಗಾಭ್ಯಾಸದ ಎಲ್ಲ ಸಾಧನಗಳೂ ಇಲ್ಲಿ ಪರಿವರ್ತಿತವಾಗುತ್ತವೆ. ಇದೇ ಶಿವಯೋಗದಲ್ಲಿ ಪೂರ್ಣಗೊಳ್ಳುತ್ತದೆ.

ಮುಂದಿನ ಶರಣ ಐಕ್ಯಸ್ಥಲಗಳಲ್ಲಿ ಯೋಗಸಾಧನೆಯ ಈ ಅನುಭಾವ, ಸಹಜ ಸ್ಥಿತಿಯಾಗಿ ಪರಿಣಮಿಸುತ್ತದೆ. ಇಲ್ಲಿ ಭಾವಲಿಂಗಭರಿತನಾಗಿ ಆನಂದ ಮತ್ತು ಸಮ ರಸಭಕ್ತಿಗಳಿಂದ ಆತ್ಯಂತಿಕ ತೃಪ್ತಿಯನ್ನು ಪಡೆಯುತ್ತಾನೆ ಸಾಧಕ. ಆ ನಿಬ್ಬೆರಗಿನಲ್ಲಿ ನಿಸ್ಸಂಗಿಯಾಗಿ ಜ್ಞಾನಮುಖದಿಂದ ಜಗತ್ತಿನಲ್ಲಿ ವರ್ತಿಸುತ್ತಾನೆ. ಇಲ್ಲಿ ಆತ ಸಂಶಯ ರಹಿತ, ನಿರ್ಭೀತ, ಆತ್ಮವಿಶ್ವಾಸಿ, ಪ್ರಪಂಚವನ್ನು ಹೊದ್ದಿಯೂ ಹೊದ್ದದಂತಿದ್ದು ಕರ್ತವ್ಯವನ್ನು ನಿರ್ವಹಿಸುವ ನಿರಾಭಾರಿ. ಇದು ಷಟ್‌ಸ್ಥಲಮಾರ್ಗದಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ವ್ಯಕ್ತಿ ತನ್ನ ಉದ್ಧಾರವನ್ನಷ್ಟೆ ನೋಡಿ ಕೊಂಡರೆ ಸಾಲದು. ತಾನು ಕಂಡ ಬೆಳಕನ್ನು ಇತರರಿಗೂ ತೋರಿಸಿಕೊಡುವ ಪ್ರಯತ್ನ

ದಲ್ಲಿ ಆತನ ಸಾಧನೆಯ ಸಾರ್ಥಕತೆಯಿದೆ ಶರಣಸ್ಥಲದಲ್ಲಿ ಮುಖ್ಯವಾಗಿ ಈ ಆಶಯವನ್ನು ಕಾಣುತ್ತೇವೆ.

ಆಧ್ಯಾತ್ಮಿಕವಾಗಿ ಆತ ಸಿದ್ಧಿಯ ಶಿಖರದಲ್ಲಿ ನಿಂತವನು. ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ ಭಕ್ತಿಗಳನ್ನು ದಾಟಿ ಆನಂದಭಕ್ತಿಯಲ್ಲಿ ನಿಬ್ಬೆರಗಾದವನು. ಅವನ ಇರವು "ಉರಿಯು ಕಯ್ಯ ದೀವಿಗೆಯಂತೆ" "ಪವನನ ಕೈಯ ಪರಿಮಳದಂತೆ."

ಅಂಗ ಲಿಂಗದಲ್ಲಿ ತರಹರವಾಗಿ,
ಮನ ಜ್ಞಾನದಲ್ಲಿ ತರಹರವಾಗಿ,
ಭಾವ ನಿರ್ಭಾವದಲ್ಲಿ ತರಹರವಾಗಿ,
ಸಮತೆ ಶಾಂತಿಯಲ್ಲಿ ತರಹರವಾಗಿ
ಇರಬಲ್ಲಾತನೇ ಅಚ್ಚ ಶರಣ ಗುಹೇಶ್ವರಾ॥

ಎನ್ನುತ್ತಾನೆ ಅಲ್ಲಮಪ್ರಭು. ಅಂಗಲಿಂಗಸಂಗಿಯಾದ ಶರಣರ ಅಂಗವೆಲ್ಲಾ ಲಿಂಗವೇ, ಆತನ ಮನವೆಲ್ಲಾ ಅವಿರಳ ಜ್ಞಾನವೇ. ಆತ ದೇಹವನ್ನು ಧರಿಸಿದ್ದರೂ ನಿರ್ದೇಹಿ; ನಡೆಯುತ್ತಿದ್ದರೂ ಆತ ನಿರ್ಗಮನಿ ; ನುಡಿದರೂ ನಿಶ್ಶಬ್ದ ; ವ್ಯಕ್ತಿಯಾಗಿದ್ದರೂ ಈಶಕ್ತಿಯಾಗಿ ಜಗತ್ತನ್ನು ವ್ಯಾಪಿಸಿದ್ದಾನೆ. ಆದರೂ ಅದಕ್ಕೆ ಅತೀತನಾಗಿದ್ದಾನೆ. ನಿಲವಿಗೇರಿದ ಶರಣನನ್ನೇ ಜಂಗಮ ಎಂಬುದಾಗಿಯೂ ಕರೆದಿರುವಂತೆ ತೋರುತ್ತದೆ, ಜಗತ್ತೆಲ್ಲಾ ಮಾಯೆಯೆಂದು ಇದನ್ನು ತಿರಸ್ಕರಿಸುವ ಅದ್ವೈತಿಯಲ್ಲ, ಆತ. ಸಮಾಜದ ಶಿಶುವಾಗಿ ಬೆಳೆದ ಆತ ತನ್ನ ಅನುಭವದ ಬೆಳಕನ್ನು ತನ್ನ ಸುತ್ತಲಿನ ಸಮಾಜದ ಮೇಲೂ ಬೀರುವ ಕಾರ್ಯದಲ್ಲಿ ನಿರತನಾಗುತ್ತಾನೆ.

ಶರಣ ತನಗಾಗಿ ಮಾಡಬೇಕಾದುದೇನೂ ಉಳಿದಿಲ್ಲ. ಆತನ ಕ್ರಿಯೆಯೆಲ್ಲಾ ಸಮಾಜದ ಒಳಿತಿಗಾಗಿ. ಪೂಜೆ ಜಪ ತಪಾದಿಗಳ ಹಂಗು ಆತನಿಗಿಲ್ಲ. "ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ ? ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ ? ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ ?" ಎಂಬ ಅಕ್ಕಮಹಾದೇವಿಯ ವಚನ ಇದನ್ನು ವ್ಯಕ್ತಪಡಿಸುತ್ತದೆ. "ನೆನೆವರೆ ಮನವಿಲ್ಲ, ತನುವಿನಾಶೆ ಮುನ್ನಿಲ್ಲ, ನೆನೆವ ಮನ ನೇತಿಯಾಡುವ ಘನಕ್ಕೆ ಘನವೇನೆಂಬೆನಯ್ಯಾ." ಎಂದು ಅಲ್ಲಮಪ್ರಭುವೂ. "ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ, ಮಾಟವುಳ್ಳನ್ನಬರ ಜಂಗಮವ ಹಾಡಿದೆ ; ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ. ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ." ಎಂದು ಬಸವಣ್ಣನವರೂ ಹೇಳುತ್ತಾರೆ. ಹೀಗೆ ವಿಧಿ ನಿಷೇಧಗಳಿಗೆ ಅತೀತನಾಗಿ ಆನಂದಮಯನಾದ ಶರಣ ವಿಶ್ವಮಾನವನ ಮಟ್ಟದಲ್ಲಿ ನಿಂತು ಜಗತ್ತನ್ನು ನೋಡುತ್ತಾನೆ. ಜೀವನ್ಮುಕ್ತ ಸ್ಥಿತಿಯಲ್ಲಿ ನಿಂತು ಲೋಕಕಲ್ಯಾಣಕ್ಕಾಗಿ ಕೈಯನ್ನು ಕೆಳಗೆ ಚಾಚಿ ಜನತೆಯನ್ನು ಮೇಲೆತ್ತಿಕೊಳ್ಳುವ ಮಹಾನುಭಾವಿಯ ಆದರ್ಶ ಇಲ್ಲಿದೆ. ಬಸವಣ್ಣನವರ ಜೀವನ ಇದಕ್ಕೊಂದು ಉಜ್ವಲ ಉದಾಹರಣೆಯೂ ಆಗಿದೆ.

ಇನ್ನು ಐಕ್ಯಸ್ಥಲ ಇದರ ಮುಂದಿನ ಹಂತ. ತನ್ನ ಕರ್ತವ್ಯವನ್ನು ನಿರ್ವಹಿಸಿದ ಅನುಭಾವಿ, ಸಂಪೂರ್ಣ ಸಾಮರಸ್ಯದಲ್ಲಿ ಲೀನವಾಗುವುದನ್ನು ಇಲ್ಲಿ ಕಾಣುತ್ತೇವೆ. "ಘೃತ ಘೃತವ ಬೆರಸಿದಂತೆ. ಕ್ಷೀರ ಕ್ಷೀರವ ಬೆರಸಿದಂತೆ. ತೈಲ ತೈಲವ ಬೆರಸಿದಂತೆ, ಜ್ಯೋತಿ ಜ್ಯೋತಿಯ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ" ಪ್ರಾಣ ಪ್ರಾಣ ಸಂಯೋಗವಾಗಿ ಲಿಂಗ ಸಮರಸವಾಗುತ್ತದೆ. ಕರ್ಪೂರ ಅಗ್ನಿ ಸಂಯೋಗವಾಗಿ ಕರ್ಪುರದ ಗುಣವಳಿದು, ಅಗ್ನಿಯಾದಂತೆ, ಲಿಂಗವ ನೆನೆದು ಲಿಂಗವೇ ತಾನಾಗಿ ಪರಿಣಮಿಸುತ್ತಾನೆ. ಅಂಗಲಿಂಗಗಳಲ್ಲಿ ಎರಡೆಂಬ ಭಾವವಳಿದು ಏಕೋಭಾವ ಮೂಡುತ್ತದೆ; ಅವಿರಳ ಸಮರಸದ ಅದ್ವೈತ ಸಿದ್ಧಿಸುತ್ತದೆ; ನದಿಯೊಳಗೆ ನದಿ ಬೆರೆದಂತಾಗುತ್ತದೆ.

> ತನು ಸೋಂಕಿ ತನು ನಷ್ಟವಾಯಿತ್ತು ;
> ಮನ ಸೋಂಕಿ ಮನ ನಷ್ಟವಾಯಿತ್ತು ;
> ಧನ ಸೋಂಕಿ ಧನ ನಷ್ಟವಾಯಿತ್ತು ;
> ಭಾವ ಸೋಂಕಿ ಭಾವ ನಷ್ಟವಾಯಿತ್ತು ;
> ಇದು ಕಾರಣ ಕೂಡಲ ಚನ್ನಸಂಗಯ್ಯ
> ಲಿಂಗ ಸೋಂಕಿ ಶರಣನ ಸಂದು ನಷ್ಟವಾಯಿತ್ತು
> ನಿಮ್ಮೊಳೇಕಾರ್ಥವಾಯಿತ್ತು.

ಎಂಬ ಚನ್ನಬಸವಣ್ಣನ ಮಾತು ಈ ನಿಲವನ್ನು ಅಭಿವ್ಯಕ್ತಪಡಿಸುತ್ತದೆ. "ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ ; ಆವ ಸಂಗವೂ ಇಲ್ಲದ ನಿಜೈಕ್ಯನು". ಅವನು ಬೇಕು ಬೇಡೆಂಬುವ ಹಂಗನ್ನು ಅಳಿದು ಕರ್ಪುರದ ಗಿರಿಯನ್ನು ಉರಿತಾಗಿದಂತೆ ಬೆಳಗಿ ಬಯಲಾಗುತ್ತಾನೆ. "ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ಸಮರಸವೆನ್ನೆ, ಆಯಿತ್ತೆನ್ನೆ, ಆಗದೆನ್ನೆ, ನೀವೆನ್ನೆ ನಾನೆನ್ನೆ ಏನೂ ಎನ್ನೆ"ಎಂಬ ಅಚಲಾನಂದವನ್ನು ಪಡೆಯುತ್ತಾನೆ. ಆ ಅನುಭವ ಮಾತಿಗೂ ಮೀರಿದುದು. "ಅರಗಿನ ದೇಗುಲದಲ್ಲಿ ಉರಿಯ ಲಿಂಗ ಮೂಡಿದಂತೆ" ಉರಿವ ಪರ್ವತಕ್ಕೆ ಅರಗಿನ ಬಾಣದಲೆಚ್ಚಂತೆ, ಕರ್ಪುರದ ಗಿರಿಯ ಉರಿಕೊಂಡಂತೆ—ಈ ಮೊದಲಾದ ಸಾದೃಶ್ಯಗಳಿಂದ ಅದನ್ನು ಶರಣರು ವರ್ಣಿಸುತ್ತಾರೆ. ಅಂತೆಯೇ "ಬೆಳಗಿನೊಳಗಣ ಮಹಾಬೆಳಗಂ, ಅಡಗುವುದು" "ಬಯಲಿನಲ್ಲಿ ಬಯಲಾಗುವುದು" ಈ ಹೋಲಿಕೆಗಳೂ ಅವರಿಗೆ ಬಹಳ ಪ್ರಿಯವಾದುವು.

> ಘನಗಂಭೀರ ಮಹಾಘನದೊಳಗಿನ ಘನಕ್ಕೆ
> ಘನವಾಗಿದ್ದೆನಯ್ಯಾ
> ಕೂಡಲ ಸಂಗಮದೇವಯ್ಯನೆಂಬ
> ಮಹಾಬೆಳಗಿನ ಬೆಳಗಿನೊಳಗಿದ್ದೆನೆಂಬ
> ಶಬ್ದಮುಗ್ಧವಾದುದೇನೆಂಬೆನಯ್ಯ

ಎಂದು ಬಸವಣ್ಣನವರು ಆ ಅನುಭವವನ್ನು ವ್ಯಕ್ತಪಡಿಸುತ್ತಾರೆ. ವೀರಶೈವ ಧರ್ಮ ಪ್ರತಿಪಾದಿಸಿದ ಷಟ್‌ಸ್ಥಲ ಮಾರ್ಗದ ತುತ್ತತುದಿಯನ್ನು ಏರಿನಿಂತಿರುವ ಸಾಧನೆಯ ಸಾರ್ಥಕತೆ ಇಲ್ಲಿ ಕಾಣುತ್ತದೆ. ಯಾವುದೇ ತಾತ್ವಿಕ ಪ್ರತಿಪಾದನೆ ಇಂತಹ ಆಚರಣೆಯಿಂದ ಸಾರ್ಥಕತೆಯನ್ನು ಪಡೆಯುತ್ತದೆ. ವೀರಶೈವರ ವೈಶಿಷ್ಟ್ಯ ಇರುವುದು ಇಂತಹ ಸಾರ್ಥಕತೆಯನ್ನು ಪಡೆದಿರುವುದರಲ್ಲಿ.

ಈ ಷಟ್‌ಸ್ಥಲ ಸಾಧನೆಗೆ ಸಹಾಯಕವಾಗಿ ಅಷ್ಟಾವರಣ ಮತ್ತು ಪಂಚಾಚಾರಗಳನ್ನು ವೀರಶೈವ ಹೇಳುತ್ತದೆ. ಸಾಧನೆಯ ಜೊತೆಯಲ್ಲಿ ಸಹಜವಾಗಿಯೇ ಸೇರಿಹೋಗಿರುವ ಇವುಗಳ ಸ್ವರೂಪವನ್ನು ಒಂದೆರಡು ಮಾತುಗಳಲ್ಲಿ ಹೇಳಬಹುದು. ಗುರು ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ–ಇವು ಅಷ್ಟಾವರಣಗಳು. ಇಲ್ಲಿ ಆವರಣಗಳು ಎಂದರೆ ವ್ಯಕ್ತಿತ್ವವನ್ನು ಮುಸುಕಿ ಅದನ್ನು ಪರಿಮಿತಗೊಳಿಸುವ ಹೊದಿಕೆಗಳಲ್ಲ. ಲೌಕಿಕದ ಉಪಹತಿಯ ಬಾಣದೇಟಿನಿಂದ ಸಾಧಕನನ್ನು ರಕ್ಷಿಸುವ ವಜ್ರಕವಚಗಳು. ಇವುಗಳಲ್ಲಿ ಒಂದೊಂದರ ಮಹತ್ವವನ್ನು ದೀರ್ಘವಾಗಿ ವಿವೇಚಿಸಲಾಗಿದೆ. ಇವು ಕೇವಲ ಬಹಿರಂಗದ ಪ್ರದರ್ಶನ ಸಾಮಗ್ರಿಗಳಲ್ಲ, ಅಂತರಂಗದ ಅರಿವಿಗೆ ಇವು ಬಹಿರಂಗದ ಸಂಕೇತಗಳು. ಶರಣರು ಅಷ್ಟಾವರಣದಲ್ಲಿ ಅಂತರಂಗಿಕವಾದ ತಾತ್ವಿಕ ಕಲ್ಪನೆಯನ್ನು ಕಂಡಿದ್ದಾರೆ, ಈ ದೃಷ್ಟಿಯಿಂದ ಅಷ್ಟಾವರಣಗಳನ್ನು 'ಬಾಹ್ಯ' ಮತ್ತು 'ಅಂತರ' ಎಂದು ಎರಡು ಭಾಗಗಳನ್ನಾಗಿ ಮಾಡಬಹುದು. ನಿಜವಾಗಿ ಬಾಹ್ಯ ಅಷ್ಟಾವರಣಗಳಿಗೆ ಬೆಲೆ ಬರುವುದು, ಅಂತರಿಕವಾದ ಕಾರಣ ತನುವಿನಲ್ಲಿ ಅವು ಬೇರುಬಿಟ್ಟಾಗಲೇ. ಆದರೆ ಅವು ಅಲ್ಲಿ ಬೇರುಬಿಡಬೇಕಾದರೆ ಮೊದಲು ಬಾಹ್ಯ ಅಷ್ಟಾವರಣಗಳ ಬೀಜರೂಪ ಸಂಪರ್ಕ ಅಗತ್ಯ. ಅಂದರೆ ಬಾಹ್ಯ ಮತ್ತು ಆಂತರಿಕ ಅಷ್ಟಾವರಣಗಳು ಪರಸ್ಪರ ಪೂರಕ. ಆದುದರಿಂದ ಅಷ್ಟಾವರಣಗಳೆಂದಾಗ ಇವೆರಡನ್ನೂ ಒಟ್ಟಾಗಿಯೇ ತೆಗೆದುಕೊಳ್ಳಬೇಕಾಗುತ್ತದೆ.

ಈ ಅಷ್ಟಾವರಣಗಳಲ್ಲಿ ಗುರು ಲಿಂಗ ಜಂಗಮ ಇವು ಪ್ರಮುಖಸ್ಥಾನ ವಹಿಸುತ್ತವೆ. ಷಟ್‌ಸ್ಥಲ ಮಾರ್ಗದ ತ್ರಿವಿಧ ದಾಸೋಹಕ್ಕೆ ಇವು ಆಧಾರ ಸ್ವರೂಪವಾದುವುಗಳು. ಸಾಧನೆಯ ನೆಲೆ. ಸಾಧ್ಯಮಾನವಾದ ಕುರುಹು, ಮತ್ತು ಸಿದ್ಧಿಯ ನಿಲವು—ಈ ಮೂರು ಅಂಶಗಳನ್ನು ಇವು ಪ್ರತಿನಿಧಿಸುತ್ತವೆ. ಪಾದೋದಕ, ಪ್ರಸಾದಗಳೆರಡೂ ಇವುಗಳಿಂದ ಲಭ್ಯವಾದುವು. ಇನ್ನು ವಿಭೂತಿ, ರುದ್ರಾಕ್ಷಿ ಒಂದು ಗುಂಪಾಗಿ ನಿಲ್ಲುತ್ತವೆ. ಸ್ಥೂಲದೇಹದ ಮೇಲೆ ಧರಿಸುವ ಇವುಗಳೂ ಆಂತರಿಕ ಅನುಭವಕ್ಕೆ ಸಾಕ್ಷಿಯಾದುವುಗಳಾಗಬೇಕು. ಅಷ್ಟಾವರಣಗಳಲ್ಲಿ ಕೊನೆಯದು ಮಂತ್ರ. ಇವೆಲ್ಲಕ್ಕೂ ಜೀವವನ್ನು ತುಂಬುವ ಮಾಂತ್ರಿಕ ಶಕ್ತಿ ಇದು; ಹೀಗೆ ಇವುಗಳಲ್ಲಿ ಒಂದು ವ್ಯವಸ್ಥಿತವಾದ ಕ್ರಮ, ಮತ್ತು ಪರಸ್ಪರ ಅವಲಂಬನೆಯ ಅನಿವಾರ್ಯತೆ ಕಂಡುಬರುತ್ತದೆ. ಅಷ್ಟಾವರಣಗಳ ಒಂದೊಂದರ ವಿವೇಚನೆಯಲ್ಲಿಯೂ ಈ ಅಂಶ ಸ್ಪಷ್ಟವಾಗುತ್ತದೆ. ವೀರಶೈವವನ್ನು ಒಟ್ಟುದೃಷ್ಟಿಯಲ್ಲಿಟ್ಟುಕೊಂಡು ಹೇಳುವಾಗ, ಅಷ್ಟಾವರ

ಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ ಷಟ್‌ಸ್ಥಲಮಾರ್ಗ ಬೆಳೆಯುತ್ತದೆಂದು ಹೇಳುವುದುಂಟು. ಅಷ್ಟಾವರಣ ದೇಹವಾದರೆ, ಪಂಚಾಚಾರಗಳು ಆ ದೇಹದಲ್ಲಿರುವ ಪಂಚಪ್ರಾಣಗಳು, ಷಟ್‌ಸ್ಥಲವೇ ಆತ್ಮ—ಎಂಬ ಈ ಮಾತಿನಿಂದ ಅವುಗಳ ಸ್ವರೂಪ ವ್ಯಕ್ತವಾಗುತ್ತದೆ.

ಪಂಚಾಚಾರಗಳು ವೀರಶೈವಧರ್ಮಕ್ಕೆ ನೈತಿಕ ತಳಹದಿಯನ್ನು ಹಾಕಿಕೊಟ್ಟಿವೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ—ಈ ಐದು ಆಚಾರಗಳಲ್ಲಿ ಶರಣರು ಪ್ರತಿಪಾದಿಸಿರುವ ನೈತಿಕ ನಿಷ್ಠೆ ಪೂರ್ಣದೃಷ್ಟಿಯಿಂದ ಅವರು ಜೀವನವನ್ನು ಕಂಡುದಕ್ಕೆ ಸಾಕ್ಷಿಯಾಗಿದೆ. ವಿಶ್ವಧರ್ಮದ ಸಮಾನ ತತ್ವಗಳನ್ನು ಪಂಚಾಚಾರಗಳು ಎತ್ತಿಹಿಡಿದಿವೆ. ಅವುಗಳ ಹಿಂದಿರುವ ಮನೋಧರ್ಮ ವಿಶ್ವವ್ಯಾಪಕವಾದದ್ದು; ಸಕಲ ಮಾನವಕುಲದ ಕಲ್ಯಾಣಕ್ಕೆ ಕಾರಣವಾದುದ್ದು. 'ಲಿಂಗಾಚಾರ' ಎಂಬುದು ಪಾರಿಭಾಷಿಕವಾಗಿ ಪರಿಮಿತವಾಗಿರುವಂತೆ ಕಂಡರೂ, ಇದರ ಮುಖ್ಯ ಆಶಯ ಎಲ್ಲ ಸಾಧನೆಗಳ ಮೂಲಭೂತವಾದುದ್ದು. ಅತ್ತ ಇತ್ತ ಹರಿವ ಮನವನ್ನು ಚಿತ್ತದಲ್ಲಿ ಗೊತ್ತುಕಟ್ಟುವ ಕೇಂದ್ರೀಕರಣಶಕ್ತಿ ಇದು. ಇದನ್ನು ಲಿಂಗದ ಮೂಲಕ ಸಾಧಿಸಿಕೊಳ್ಳುವ ಏಕೈಕ ನಿಷ್ಠೆ ಇಲ್ಲಿ ಕಾಣುತ್ತದೆ. ಇತರ ದೈವಗಳಿಗಿರಲಿ, ಸ್ಥಾವರ ಲಿಂಗಗಳಿಗೆ ಸಹ ಎರಗುವುದನ್ನು ಖಂಡಿಸಿ ಅಂತರಂಗದ ಅನುಭವಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಇದು ಕೊಡುತ್ತದೆ. ಲಿಂಗಾಂಗಸಾಮರಸ್ಯಮಾರ್ಗದಲ್ಲಿ ಈ ಲಿಂಗಾಚಾರ ಮೊದಲನೆಯ ಮೆಟ್ಟಿಲು. ಇದರ ಮುನ್ನಡೆ ಸದಾಚಾರವನ್ನು ಅವಲಂಬಿಸಿದೆ. ಪಂಚಾಚಾರಗಳಲ್ಲೆಲ್ಲಾ ಸದಾಚಾರ ಬಹಳ ವ್ಯಾಪಕವಾದದ್ದು. ಪರಿಶುದ್ಧಸಾತ್ವಿಕ ಜೀವನಕ್ಕೆ ಇದು ಆಧಾರಭೂತವಾದದ್ದು. ಶರಣರು ನೈತಿಕ ಜೀವನಕ್ಕೆ ಕೊಟ್ಟ ಮಹತ್ವವನ್ನು ಇಲ್ಲಿ ಮನಗಾಣಬಹುದು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ—ಈ ಮೊದಲಾದ ಎಲ್ಲ ಗುಣಗಳೂ ಇಲ್ಲಿ ಸಮಾವೇಶಗೊಳ್ಳುತ್ತವೆ. ಇದರ ವಿವರಗಳು ಇಲ್ಲಿ ಅಪ್ರಸ್ತುತ.

ಗಣಾಚಾರ ಮತ್ತು ಶಿವಾಚಾರಗಳು ನೈತಿಕ ಜೀವನದ ಬೆಳವಣಿಗೆಯ ಮುಂದಿನ ಹಂತಗಳು. ಗಣಾಚಾರ ಅನೇಕ ವೇಳೆ ಅಂಧಾಭಿಮಾನ, ಅಹಂಕಾರ ಹಠಗಳನ್ನು ಎತ್ತಿ ಹಿಡಿಯುವಂತೆ ತೋರಬಹುದು. ಆದರೆ ಇವೆಲ್ಲವುಗಳನ್ನು ನಿರಾಕರಿಸಿದ ತಾತ್ವಿಕ ಸತ್ಯನಿಷ್ಠೆ ಗಣಾಚಾರ—ಎಂಬುದನ್ನು ಕಂಡುಕೊಳ್ಳಬಹುದು. "ಉರಿ ಬರಲಿ ಸಿರಿ ಬರಲಿ ಬೇಕು ಬೇಡೆನ್ನದ" ಸತ್ಯವನ್ನೆ ಎತ್ತಿ ಹಿಡಿಯುವ, ಅಸತ್ಯದೊಡನೆ ಹೊಂದಾಣಿಕೆ ಮಾಡಿಕೊಳ್ಳದ ತತ್ವನಿಷ್ಠೆಯ ಪರಾಕಾಷ್ಠತೆ ಇಲ್ಲಿದೆ. ಸಾಮಾಜಿಕ ಅನಿಷ್ಟಗಳನ್ನು ಅಪ್ರಿಯವಾದರೂ ಅಂಜದೆ ನಿರ್ದಾಕ್ಷಿಣ್ಯದಿಂದ ಕಿತ್ತುಹಾಕುವ ಈ ದೃಷ್ಟಿ ಶರಣರ ಸಾಮಾಜಿಕ ಕ್ರಾಂತಿಗೆ ಕಾರಣವಾಯಿತು. ಅಶಿವನಿರ್ಮೂಲನದಿಂದ ಎಲ್ಲೆಲ್ಲಿಯೂ ಶಿವಸ್ವರೂಪವನ್ನೆ ಕಾಣುವ ಶಿವಾಚಾರ–ಇದಕ್ಕೆ ಸಂಗತವಾಗಿ ಬೆಳೆದು ಬಂದಿತು. ಸಾಮಾಜಿಕ ಸಮತೆ, ವೈಯಕ್ತಿಕ ವಿಕಾಸಗಳೆರಡನ್ನೂ ಸಾಧಿಸಲು ಈ ಆಚಾರಗಳು

ನೆರವಾದುವು. ಇವರ ಜೊತೆಗೆ ಭೃತ್ಯಾಚಾರವೂ ಸೇರಿ 'ಅಹಂ' ಅಳಿದ ದಾಸೋಹ ಭಾವದಿಂದ ಸಮಾಜದ ಒಳಿತಿಗೆ ಸಕ್ರಿಯ ಶಕ್ತಿಯಾಯಿತು.

ಹೀಗೆ ವೀರಶೈವದ ಪಂಚಾಚಾರ ಅಷ್ಟಾವರಣ ಷಟ್‌ಸ್ಥಲಗಳು ಅದನ್ನೊಂದು ಪರಿಪೂರ್ಣ ಧರ್ಮವನ್ನಾಗಿ ರೂಪಿಸಿದುವು. ಆಧುನಿಕ ಯುಗದ ವೈಚಾರಿಕ ವಿವೇಚನೆಯ ಒರೆಗಲ್ಲಿನ ಮೇಲೂ ಹೊಳೆದು ತೋರುವಂತಹ ಜೀವನ ಮೌಲ್ಯಗಳನ್ನು ಸಾಧಿಸಿ ತೋರಿಸಿದುದು ಈ ಧರ್ಮದ ವೈಶಿಷ್ಟ್ಯ. ಸರ್ವಸಮಾನತೆ ಸ್ವತಂತ್ರವಿಚಾರಶೀಲತೆ, ಅಂಧಶ್ರದ್ಧೆಗಳ ನಿರಾಕರಣೆ, ಪ್ರಾಮಾಣಿಕ ದುಡಿಮೆ ಅಂದರೆ ಕಾಯಕ—ಈ ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸಿದ ವೀರಶೈವಧರ್ಮ ಆಧುನಿಕ ಸರ್ವೋದಯ ಸಮಾಜದ ಕಲ್ಪನೆಗೆ ಸಂಗತವಾಗಿದೆ. ಅಂತರಂಗ ಬಹಿರಂಗಗಳ ವ್ಯಷ್ಟಿ ಸಮಷ್ಟಿಗಳ ಸಮಗ್ರಸ್ವರೂಪವನ್ನು ಅರಗಿಸಿ ಅಳವಡಿಸಿಕೊಳ್ಳುವ ಪರಿಪೂರ್ಣ ದೃಷ್ಟಿಯನ್ನು ಬಸವಣ್ಣನವರು ವೀರಶೈವಧರ್ಮಕ್ಕೆ ತಂದು ಕೊಟ್ಟರು. ಪರಂಪರೆಯ ಸತ್ಯವನ್ನೆಲ್ಲಾ ಅರಗಿಸಿಕೊಂಡು ಸಂಪ್ರದಾಯದ ಜಡತೆಯಿಂದ ಮುಕ್ತಗೊಳಿಸಿದುದು ಬಸವಣ್ಣನವರ ವಿಚಾರವಂತಿಕೆಯ ಮಹತ್ತರವಾದ ಸಾಧನೆ. ವೈದಿಕಧರ್ಮದ ಶೋಷಣಾಮೂಲವಾದ ಕರ್ಮಠತನವನ್ನು ಅವರಷ್ಟು ಕಠಿಣವಾಗಿ ಖಂಡಿಸಿ, ಸಂಪೂರ್ಣವಾಗಿ ತಿರಸ್ಕರಿಸಿದವರು ಇನ್ನೊಬ್ಬರಿಲ್ಲ. ಧರ್ಮವನ್ನು ವಿಚಾರಶೀಲತೆಯ ಕಡೆಗೆ ತಿರುಗಿಸಿ, ಅರಿವನ್ನೂ ಅನುಭವವನ್ನೂ ತಂದುಕೊಡುವ ಸಾಮೂಹಿಕ ಪ್ರಯತ್ನವನ್ನು ವೀರಶೈವದ ಮಾಧ್ಯಮದಿಂದ ಬಸವಣ್ಣನವರು, ಸಾಧಿಸಿದರು. ಅವರ ಕೈಯಲ್ಲಿ ವೀರಶೈವ ಅತ್ಯಂತ ವೈಚಾರಿಕವಾದ ಜೀವಂತ ತತ್ವವಾಯಿತು.

ಆದರೆ ಅವರು ತಂದುಕೊಟ್ಟ ಆಕೃತಿ ಇಂದು ಉಳಿದಿಲ್ಲ. ಜಾತಿಗಳೆಲ್ಲವನ್ನೂ ಸಾಮಾಜಿಕ ತಾರತಮ್ಯಗಳನ್ನೂ ನಿರಾಕರಿಸಿದ ಈ ಧರ್ಮ ಅನೇಕ ಜಾತಿ ಉಪಜಾತಿಗಳನ್ನು ಸೃಷ್ಟಿಸಿಕೊಂಡಿತು. ಬಸವಣ್ಣನವರು ಕಂಡ ಸರ್ವಸಮಾನತೆಯ ಸ್ವಯಂಪೂರ್ಣ ಸಮಾಜವನ್ನು ಐತಿಹಾಸಿಕವಾಗಿ ಸಿದ್ಧಮಾಡಿ ತೋರಿಸಿದ ಈ ಧರ್ಮ, ಅನಂತರ ತನ್ನ ಸಾಧ್ಯತೆಗಳನ್ನೆಲ್ಲಾ ಕಳೆದುಕೊಂಡು ಮಸುಕಾಯಿತು. ಆದರೂ ಇದರಲ್ಲಿ ಪುನರುಜ್ಜೀವನಗೊಳ್ಳುವ ಚಿರಂತನ ಶಕ್ತಿ ಅಡಗಿದೆ ಎಂಬುದನ್ನು ಗಮನಿಸಬೇಕಾಗಿದೆ. ಶರಣರ ಸಾಧನೆಯ ಶಕ್ತಿ ವ್ಯರ್ಥವಾಗಿಲ್ಲ. ತುಕ್ಕುಹಿಡಿದ ಮೌಲ್ಯಗಳಿಗೆ ಸಾಣೆಹಿಡಿಯುವ ವೈಚಾರಿಕ ಶ್ರೀಮಂತಿಕೆ ಇದರ ಗರ್ಭದಲ್ಲಿಯೇ ಅಡಗಿದೆ. ವೀರಶೈವಧರ್ಮದ ಈ ವೈಶಿಷ್ಟ್ಯ ಕಾರ್ಯಗತಗೊಳ್ಳುವ ಪ್ರಾಮಾಣಿಕಪ್ರಯತ್ನವನ್ನು ಎಲ್ಲರೂ ಅವರವರ ಹಂತದಲ್ಲಿ ಕೈಕೊಳ್ಳಬೇಕಾಗಿದೆ.

o—o

ದಾಸೋಹ

ಶ್ರೀ ಜೆ. ಎಸ್. ಪರಶಿವಮೂರ್ತಿ ಎಂ.ಎ.

ಇದು ವೀರಶೈವ ಧರ್ಮದ ವಿಶಿಷ್ಟ ಕೊಡುಗೆ. 'ಸೋಹಂ, ಎಂದೆನಿಸದೆ ದಾಸೋಹಂ ಎಂದೆನಿಸು''-ಇದು ವೀರಶೈವ ಮಂತ್ರ. ವೀರಶೈವದ ಪರಮ ಸಿದ್ಧಾಂತಗಳು.

(1) ಷಟ್ಸ್ಥಲ ; (2) ಅಷ್ಟಾವರಣ ; (3) ಪಂಚಾಚಾರಗಳು ;

(1) ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ

(2) ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ

(3) ಲಿಂಗಾಚಾರ, ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರ

ಇವುಗಳನ್ನು ಶರಣರು, ಅದರಲ್ಲೂ ಚೆನ್ನಬಸವಣ್ಣ ಅತ್ಯಂತ ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ.

'ದಾಸೋಹ' ಎನ್ನುವ ಶಬ್ದ ಇಂದು ಮಠಗಳಲ್ಲಿ ನಡೆಯುವ ಊಟೋಪಚಾರಗಳಿಗೆ (ಪ್ರಸಾದಕ್ಕೆ) ಮಾತ್ರ ಅನ್ವಯವಾಗುತ್ತಿದೆ. ಆದರೆ, ಶರಣರು ನಿರೂಪಿಸಿದ ಪ್ರತಿಪಾದಿಸಿದ ಆಚರಣೆಗೆ ತಂದ 'ದಾಸೋಹ'ದ ವ್ಯಾಪ್ತಿ ಅತ್ಯಂತ ಮಹತ್ವಪೂರ್ಣವೂ ವಿಸ್ತೃತವೂ ಆದುದು. (ಜೀವವು ಪರಮಾತ್ಮನಲ್ಲಿ ಒಂದಾಗಲು ನಡೆಸುವ ಸಾಧನ ಮಾರ್ಗದಲ್ಲಿ ಇದು ಒಂದು.)

ಷಟ್ಸ್ಥಲದ ಪ್ರಥಮ ಸೋಪಾನ ಭಕ್ತಸ್ಥಲ. ಭಕ್ತಿ ಎಂದರೇನು ?

ಭಕ್ತಿ ದೇವನಲ್ಲಿರುವ ಅನುರಕ್ತಿ. ಸಂಸಾರ, ಭವ, ದುಃಖ, ಮಮತೆ, ಮೋದಲಾದವುಗಳಿಗೆ ನಿಗ್ರಹ ಕೊಡುವುದನ್ನೇ ಭಕ್ತಿ ಎಂದು ಕರೆಯಬಹುದು.

ಭಕ್ತಿ ಉದಯವಾದದ್ದೆ ಭೀತಿಯಿಂದ. ಮಾನವ ಸರ್ವಶಕ್ತನಾದರೂ ಪ್ರಕೃತಿಯ ಬೃಹತ್‌ನ ಎದುರು ಈತ ಅಲ್ಪ. ಮೂರು ಭಾಗ ಸುತ್ತಿರುವ ನೀರು, ಮೇಘಮಂಡಲ, ತೂಗಾಡುತ್ತಿರುವ ಭೂಮಿ, ವಾಯುಮಂಡಲ, ಸರ್ವನಾಶಮಾಡುವ ಬೆಂಕಿ : ಇವುಗಳ ಎದುರು ಮಾನವನ ಅಸ್ತಿತ್ವವಿಲ್ಲ. ಆದರೂ ಈ ಎಲ್ಲವುಗಳನ್ನೂ ಗೆದ್ದಿದ್ದಾನೆ; ಯಾಜಮಾನಿಕೆ ಸ್ಥಾಪಿಸಿದ್ದಾನೆ. ವರುಣ, ಅಗ್ನಿ ವಾಯು,ದೇವತೆಗಳ ಕಲ್ಪನೆ ಆರಾಧನೆ ಭಕ್ತಿಗೆ ಉಗಮ.

ಭಕ್ತಿ ಸುಲಭವಲ್ಲ. ಅದು ಗರಗಸದಂತೆ ಹೋಗುತ್ತಾ ಕೊಯ್ವುದು, ಬರುತ್ತಾ ಕೊಯ್ವುದು. ಭಕ್ತಿ ಎಂಬುದು ಶಿವಾಚಾರ, ಶಿವಾಚಾರವೆಂಬುದು ಬಾಳಬಾಯಧಾರೆ,

ಭಕ್ತಿ ಎಂಬುದ ಮಾಡಬಾರದು ಎನ್ನುತ್ತಾರೆ ಶರಣರು. ಭಕ್ತಿ ಭವ ಎಂಬ ರೋಗಕ್ಕೆ ಕೊಡುವ ಔಷಧಿ, ಪಾಪಕ್ಕೆ ನಿವಾರಣೋಪಾಯ, ಸಂಸಾರಸಾಗರ ದಾಟುವ ಸಾಧನ, ಬಂಧನವನ್ನು ಹರಿದೊಗೆದು ಮುಕ್ತಿಯನ್ನು ಸಾಧಿಸುವ ಮಾರ್ಗ, ಜೀವನು ದೇವನಲ್ಲಿ ಬೆರೆಯುವ ಸಾಧನ.

ಪರಮ ಪ್ರೇಮ ಸ್ವರೂಪವೇ ಭಕ್ತಿ. ಭಕ್ತಿಯ ಒಂದು ಗುಣವೇ ಮನಸ್ಸನ್ನು ಶುದ್ಧಿಮಾಡುವುದು. ಎಲ್ಲ ಧರ್ಮವೂ ನೀತಿಯ ಮೇಲೆ ನಿಂತಿರಬೇಕು. ಆಚಾರ ವೆಂದರೆ ಬಾಹ್ಯ ಮತ್ತು ಅಂತರಂಗ ಶುದ್ಧಿ.

—ವಿವೇಕಾನಂದರು

ಭಕ್ತ ಯಾರು ?

ಇವನು ಸ್ವತಂತ್ರ, ಧೀರ, ಸಂಯಮಿ, ಆದರ್ಶನಾಗರಿಕ. ಭಕ್ತಂಗೆ ಕಿಂಕರತ್ವ ಕಿರಿತನವಿರಬೇಕು, ಕುಲ, ಛಲ, ಆಸೆಪಾಸೆ, ಶೋಕ, ಮೋಹ, ಭಯ, ಲಜ್ಜೆ, ರೋಷ, ಯಾಚಕತ್ವ ಇರಲಾರದು. ಅಧಿವ್ಯಾಧಿ, ತಾಮಸಗಳು ಅವನತ್ತ ಸುಳಿಯಲಾಗದು, ಕಿಂಕುರ್ವಾಣತೆಯಿಂ ಉಳ್ಳದನರಿತು ಮಾಡುವಲ್ಲಿ ಆತ ಭಕ್ತ, ಇಂಥವರಲ್ಲಿ ಲಕ್ಷ ಕ್ಕೊಬ್ಬ ಭಕ್ತ.

ಭಕ್ತನು ಶಾಂತನಾಗಿರಬೇಕು, ಸತ್ಯವಂತನೂ, ಹಿತೈಷಿಯೂ ಆಗಿ ಸಕಲ ಪ್ರಾಣಿ ಗಳಂತೆಯೇ ತನ್ನನ್ನೂ ಭಾವಿಸುವುದು, ನಿಗ್ರಹಿಯಾಗಿ ಇರುವುದು, ಹೀನರ ಸಂಗ ತೊರೆಯುವುದು, ಹುಸಿ ತೊರೆಯುವುದು, ಅನ್ಯದೈವರ ಭಜಿಸದಿರುವುದು, ನಿರಂಹಕಾರ ದಿಂದಿರುವುದು, ಸರ್ವವನ್ನೂ ದೇವನಿಗೆ ಸಮರ್ಪಿಸುವುದು-ಇವು ಭಕ್ತನ ಲಕ್ಷಣ.

ಭಕ್ತನು ಬಂದ ಠಾವಿನಲ್ಲಿ ಸತ್ಯನಾಗಿರಬೇಕು, ಭೂತಹಿತವಚನ ನುಡಿಯುತ್ತಿರ ಬೇಕು, ಗುರುಲಿಂಗ ಜಂಗಮಕ್ಕೆ ತನುಮನಧನ ಸವೆಸುವುದು, ಸಕಲೇಂದ್ರಿಯಗಳನ್ನು ತನ್ನ ವಶದಲ್ಲಿರಿಸಿಕೊಳ್ಳುವುದು, ಅಪಾತ್ರ ದಾನವ ನೀಡದಿರುವುದು (ಭಸ್ಮಾಸುರ, ರಾವಣ)

ಭಕ್ತಿಯ ವಿಧಗಳು :

ಇದು ಆರು ವಿಧ—ಶ್ರದ್ಧಾಭಕ್ತಿ ; ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವ ಭಕ್ತಿ ; ಆನಂದಭಕ್ತಿ ; ಸಮರಸಭಕ್ತಿ

ಭಕ್ತನು ಭಗವಂತನನ್ನು ಐದು ವಿಧವಾದ ಸಂಬಂಧಗಳಿಂದ ಆರಾಧಿಸಬಹದು.

(1) ಶಾಂತಭಾವ ; (2) ದಾಸ್ಯಭಾವ ; (3) ಸಖ್ಯಭಾವ ; (4) ವಾತ್ಸಲ್ಯ ಭಾವ, (5) ಮಧುರ ಭಾವ

ಶಾಂತಭಾವ : ಋಷಿಮುನಿಗಳ ತಪಸ್ಸಿನಂತೆ.

ದಾಸ್ಯಭಾವ : ಎಂದರೆ ಸೇವಕನಿಗೆ ಯಜಮಾನನಲ್ಲಿರುವ ಸಂಬಂಧ. ಚಿತ್ರವಿಚಿತ್ರ ವಾದ ವಿಶ್ವರಚನೆಯನ್ನು ನೋಡಿದ ಯಾವನಿಗಾದರೂ ಯಾವನೋ ಒಬ್ಬ ಸರ್ವಶಕ್ತನೂ, ಸರ್ವವ್ಯಾಪಿಯೂ, ಸರ್ವಜ್ಞಾನಿಯೂ, ಅಪಾರ ಕರುಣಾಶಾಲಿಯೂ ಆಗಿರುವವ ಜಗದುದಯಕಾರಣನು. ಅಂತಹ ಅನಂತಪ್ರೇಮಸ್ವರೂಪಿಯಾದ ಪರಮಸ್ವಾಮಿಗೆ ಸ್ವಸುಖಾಭಿಲಾಷೆಗಳನ್ನು ತ್ಯಜಿಸಿಯಾದರೂ ಸೇವೆಮಾಡಿ ಆತನನ್ನು ಒಲಿಸಿಕೊಂಡು ಕೃಪೆಗೆ ಪಾತ್ರರಾಗಬೇಕೆಂದು ಕೆಲವರ ಆಸೆ-ಇದೇ ದಾಸ್ಯಭಾವ

ಹನುಮಂತ—ಶ್ರೀರಾಮ

ಮಧ್ವಾಚಾರ್ಯರ ದ್ವೈತಸಿದ್ಧಾಂತ—ಜೀವಾತ್ಮ-ಪರಮಾತ್ಮ ಬೇರೆ ಬೇರೆ. ಭಗವಂತನ ಸಾಮೀಪ್ಯವೇ ಪರಮಗುರಿ. ಹರಿದಾಸರು ದಾಸತ್ವ ಪಡೆಯುವುದೇ ಅಂತಿಮ ಇಚ್ಛೆ. ಇದು ದ್ವೈತ. ಅದ್ವೈತದಲ್ಲಿ ಒಂದಾಗುವುದು ಪರಮಗುರಿ.

ಸಖ್ಯಭಾವ : ಇಷ್ಟದೈವದೊಂದಿಗೆ ಸಲುಗೆಯಿಂದಿರುವುದು

ಅರ್ಜುನ—ಕೃಷ್ಣ

ವಾತ್ಸಲ್ಯಭಾವ : ಮಾತಾಪಿತೃಗಳಿಗೆ ತಮ್ಮ ಮಕ್ಕಳಲ್ಲಿರುವ ಭಾವ

ಯಶೋದ—ಕೃಷ್ಣ

ಮಧುರಭಾವ : ಪ್ರಿಯ—ಪ್ರೇಯಸಿಯಲ್ಲಿರುವ ಪರಸ್ಪರ ಅನುರಾಗ ಸಂಬಂಧ.

ಗೋಪೀ ಕೃಷ್ಣರ ಸಂಬಂಧ.

ಇವುಗಳನ್ನು ಶರಣರು—

ಪಶುಪತಿಭಾವ, ದಾಸ ಒಡೆಯ ಭಾವ, ತಂದೆ-ಮಕ್ಕಳಭಾವ ಮತ್ತು ಸತಿ-ಪತಿ ಭಾವ,

ಭಕ್ತನು ದೇವನಿಗೆ ಅವನ ಸೇವೆ ಮಾಡುವ ದಾಸನೂ, ಆಡಿಯಾಳೂ ಎಂದು ತಿಳಿದು, ದೇವನೊಬ್ಬ ತನ್ನ ರೋಗಕ್ಕೆ ಮದ್ದುಕೊಡುವ ವೈದ್ಯನೆಂದು ತಿಳಿದು, ಅವನಲ್ಲಿ ಅಧಿಕ ಭಕ್ತಿ, ಕೈಂಕರ್ಯವನ್ನಿಟ್ಟು, ಆ ವೈದ್ಯನ ಪ್ರೀತಿಯನ್ನು ಸಂಪಾದಿಸಲು ಸೇವೆ ಮಾಡಲು ಮುಂದೆಬರುತ್ತಾನೆ. ಬಲ್ಲವರ ಹತ್ತಿರ ಹೋಗುತ್ತಾನೆ, ಬಲ್ಲವರಿಂದ ಶಿವಭಕ್ತನಾಗುವ ಮಾರ್ಗವನ್ನು ಅರಿಯಲು ತವಕಪಡುತ್ತಾನೆ. ಪಶುತ್ವವನ್ನು ಕಳೆದುಕೊಳ್ಳಲು ಆತುರ ಪಡುತ್ತಾನೆ. ಈ ದಿಸೆಗೆ 'ಪಶುಪತಿಭಾವ'ವೆಂದು ಕರೆಯಬಹುದು. ದಾಸಭಕ್ತಿಯೂ ಇದರಲ್ಲಿ ಅಡಗುತ್ತದೆ.

ದಾಸಭಕ್ತಿ ಸತಿ—ಪತಿ ಭಾವದ ಅಂಗವಾಗಿಯೂ ಕಾಣಬಹುದು. ಸತಿಯಾದವಳು ಪತಿಯನ್ನು ದಾಸಿಯಾಗಿ ಸೇವೆ ಮಾಡುವುದಿಲ್ಲವೆ ; ಸೇವೆಗೋಸ್ಕರ ಸತಿಯಾದವಳು ದಾಸಿಯಾಗುವಂತೆ, ಭಕ್ತನು ದೇವನ ದಾಸನಾಗುತ್ತಾನೆ. ಅತಿಕಿಂಕರತ್ವ ತಾಳುತ್ತಾನೆ.

"ಆವನಾದರೇನು ಶ್ರೀಮಹಾದೇವನ ನೆನೆವವನ
ಪಾದರಕ್ಷೆಯ ಕಾಯ್ದು ಬದುಕುವೆನು"

ತ್ರಿವಿಧ ದಾಸೋಹ :

ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮನನೊಲಿಸಬೇಕು

ಇದು ವೇದ, ಶಾಸ್ತ್ರ. ಸ್ಮೃತಿಗಳಲ್ಲಿ ಇಲ್ಲವೆನ್ನುತ್ತಾರೆ ಬಸವಣ್ಣ. ಗುರು, ಲಿಂಗ, ಜಂಗಮರು—ಯಾರು. ಅವರ ಲಕ್ಷಣಗಳೇನು, ಅಧಿಕಾರಗಳೇನು ಎಂಬುದನ್ನು ಪರಿಶೀಲಿಸೋಣ.

ಗುರು—ಜಂಗಮ :

ಗುರು : ಮುಮುಕ್ಷುವಿಗೆ ದೀಕ್ಷೆಯನ್ನು ಕೊಟ್ಟು ಜ್ಞಾನೋಪದೇಶ ಮಾಡುವವನೇ ಗುರು. ಇಂಥ ಗುರು ಮಠ ಕಟ್ಟಿಕೊಂಡು ಶಿಷ್ಯರನ್ನು ಪಡೆದುಕೊಂಡಿರುತ್ತಾನೆ.

ಹುಟ್ಟುವಾಗ ಭವಿಯಾಗಿರುವ ಮಗುವನ್ನು ಲಿಂಗಧಾರಣದಿಂದ ಭಕ್ತನನ್ನಾಗಿ ಮಾಡಬೇಕು. ಶಿಷ್ಯನಿಗೆ ಕಾಲಕ್ರಮದಲ್ಲಿ ದೀಕ್ಷೆಯನ್ನು ಕೊಟ್ಟು ಜ್ಞಾನೋಪದೇಶ ಮಾಡಬೇಕು. ತಪ್ಪುದಾರಿಗೆ ಬೀಳದಂತೆ ಎಚ್ಚರಿಸಿ ಶಿಕ್ಷಿಸಿ ಕಾಪಾಡಬೇಕು. ಗುರು ವರ್ಗದಲ್ಲಿ ಮೂರು ವಿಧ.

ದೀಕ್ಷಾಗುರು ಶಿಕ್ಷಾಗುರು ಮೋಕ್ಷಗುರು

ಭಗವಂತನು ಗುರು ರೂಪದಲ್ಲಿ ಬಂದು ಭಕ್ತರನ್ನು ಉದ್ಧಾರಮಾಡುವನೆಂಬುದೇ ಮುಖ್ಯವಾದ ನಂಬಿಕೆ.

ಗುರು—ಚೈತನ್ಯಂ, ಶಾಶ್ವತಂ, ಶಾಂತಂ, ವ್ಯೋಮಕೇಶಂ, ನಿರಂಜನಂ, ನಾದಬಿಂದು ಕಲಾತೀತಂ.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ॥

ಭವತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು ಕಾಣಲಾರದೆ ಇದ್ದಾಗ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು ಶಿವಪಥವಿದೆಂದು ತೋರಿದ ಸದ್ಗುರು ದೇವಂಗೆ ನಮೋ ನಮೋ ಎಂಬೆನಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ !

—ತೋಂಟದ ಸಿದ್ಧಲಿಂಗೇಶ್ವರರು

ಮಡಕೆಯ ಮಾಡುವಡೆ ಮಣ್ಣೆ ಮೊದಲು
ತೊಡುಗೆಯ ಮಾಡುವಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥವೆ ಮೊದಲು

ಗುರುವಿಡಿದು ಕುರುಹ ಕಾಣಬೇಕು
ಗುರುವಿಡಿದು ಅರುಹ ಕಾಣಬೇಕು
ಗುರುವಿಡಿದು ಆಚಾರವ ಕಾಣಬೇಕು
ಗುರುಕರುಣೆಯೇ ಸದಾಚಾರ
ಗುರುಕರುಣೆಯೇ ಶಿವಾಚಾರ

ಮಾಂಸ ಪಿಂಡವನ್ನು ಗುರು ಮಂತ್ರಪಿಂಡವನ್ನಾಗಿಸುತ್ತಾನೆ ದೀಕ್ಷೆಯಿಂದ.

ಜಂಗಮ :

ಗುರುವಿನ ಮಹತ್ವ ಎಲ್ಲ ಧರ್ಮಗಳಲ್ಲಿಯೂ ಏಕಪ್ರಕಾರವಾಗಿ ಬೆಳೆದು ಬಂದಿದೆ. ಆದರೆ ಜಂಗಮ ವೀರಶೈವಧರ್ಮದ ವಿಶಿಷ್ಟ ಕಲ್ಪನೆ.

ಜಂಗಮ ಜ್ಞಾನಮೂರ್ತಿ ಎಂದರೆ ಅನುಭವಜ್ಞಾನವನ್ನು ಪಡೆದವನು, ಬ್ರಹ್ಮ ಸಾಕ್ಷಾತ್ಕಾರ ಪಡೆದವನು, ಗುರುಗಳಂತೆ ಜಂಗಮರು ಮಠ ಮಾನ್ಯಗಳನ್ನು ಹಾಕಿ ಕೊಂಡು ಗೊತ್ತಾದ ಶಿಷ್ಯ ಮಂಡಳಿ ಉಳ್ಳವರಲ್ಲ. ಯದೃಚ್ಛಾಲಾಭ ಸಂತುಷ್ಟರಾಗಿ ನಿಂತೆಡೆಯೇ ಮಠವಾಗಿ ಹತ್ತಿರ ಬಂದವರೇ ಶಿಷ್ಯರಾಗಿ ಇರತಕ್ಕವರು.

ಯಾರಾದರೂ ಭಕ್ತಿಯಿಂದ ಮಠವನ್ನು ಕಟ್ಟಿಸಿಕೊಟ್ಟು ಇರಹೇಳಿದರೆ ಒಂದು ಕಡೆ ನಿಲ್ಲುವುದುಂಟು, ಇಂಥವರು ಸ್ಥಿರಜಂಗಮರು.

ಜಂಗಮರು ಸಂಚಾರ ಮಾಡುತ್ತಾ ಮತ ಪ್ರಚಾರದಲ್ಲಿ ನಿರತರಾಗಿರತಕ್ಕವರು, ಇಂಥವರು ಚರಜಂಗಮರು. ಪರ ಜಂಗಮರು ಇವರು ಪ್ರಭುದೇವರಂಥವರು.

ಭಕ್ತನನ್ನು ಭವಸಾಗರದಿಂದ ದಾಟಿಸುವ ಗಮ್ಯಸ್ಥಾನಕ್ಕೆ ಕೊಂಡೊಯ್ಯುವ ಮಹಾತ್ಮನೇ ಜಂಗಮ.

ಅನಿಕೇತನನಾಗಿ ಜಗದ್ಭರಿತನಾಗಿ ಸಂಚರಿಸುವವನು. ಅವನು ನಿಂದಿಸಿದಲ್ಲಿ ಕುಂದುವವನಲ್ಲ, ವಂದಿಸಿದಲ್ಲಿ ಆನಂದಮಯನಲ್ಲ, ಬಂದುಪಚಾರದಲ್ಲಿ ಸಂದುಗೊಳ್ಳುವವನಲ್ಲ, ಬಂದಲ್ಲಿ ನೀಡದಿರೆ ಕ್ರೋಧನಲ್ಲ. ದೇಹ, ಪ್ರಾಣ ಮತ್ತು ಮನಸ್ಸಿನ ಧರ್ಮಗಳನ್ನು ಮೀರಿದವನು.

ಗುರುವಿನಿಂದ ಲಿಂಗವನ್ನು ಪಡೆದು ಸಾಧನೆಯಲ್ಲಿ ಮಗ್ನನಾದ ಭಕ್ತನ ಬಳಿಗೆ ಲಿಂಗದೇಹಿಯಾದ ಈ ಜಂಗಮನು ಬರುತ್ತಾನೆ. ತನ್ನ ಅತೀತ ನಿಲವಿನಿಂದ ಭಕ್ತನಲ್ಲಿ ಶ್ರದ್ಧೆ, ನಿಷ್ಠೆಗಳನ್ನು ಪ್ರಚೋದಿಸುತ್ತಾನೆ. ಭಕ್ತನಲ್ಲಿರುವ ಮಿತಿಯನ್ನು ಯಾರ ಹಂಗೂ ಇಲ್ಲದೆ ಎತ್ತಿ ತೋರುತ್ತಾನೆ. ಆತನ ಮುನ್ನಡೆಗೆ ಕಾರಣನಾಗುತ್ತಾನೆ.

"ಗುರು ಉಪದೇಶ ಮಂತ್ರವೈದ್ಯ, ಜಂಗಮ ಉಪದೇಶ ಶಸ್ತ್ರವೈದ್ಯ"

ಲಿಂಗ ಮತ್ತು ಜಂಗಮನಲ್ಲಿ ಒಂದು ಬಗೆಯ ಅವಿನಾಭಾವಸಂಬಂಧವನ್ನು ಶರಣರು ಕಂಡರು.

ಆಚಾರವೇ ಲಿಂಗ, ಆಚಾರದ ಅರಿವೇ ಜಂಗಮ, ಅಂಗವೇ ಲಿಂಗ, ಚೈತನ್ಯವೇ ಜಂಗಮ, ತನುವಿನ ಪ್ರಾಣ ಲಿಂಗವಾದರೆ, ಮನದ ಪ್ರಾಣ ಜಂಗಮ. ಲಿಂಗಕ್ಕೆ ತೃಪ್ತಿಯಾಗಬೇಕಾದರೆ ಅದು ಜಂಗಮದ ಮೂಲಕವೇ.

ಅಗ್ನಿಯುದಕದಲ್ಲಿ ಕಬ್ಬಿಣ ನೀರುಂಬುದಯ್ಯ
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ
ಜಂಗಮಕ್ಕೆ ಆಪ್ಯಾಯನವಾದರೆ ಲಿಂಗ ಸಂತುಷ್ಟವಹುದಯ್ಯ

—ಬಸವಣ್ಣ

ಸಕ್ಕರೆಯಬಿಟ್ಟು ರುಚಿಯ ತೆಗೆಯ ಬಹುದೇ
ಬೆಣ್ಣೆಯಬಿಟ್ಟು ಘನವ ತೆಗೆಯಬಹುದೇ
ಭೂಮಿಯ ಬಿಟ್ಟು ಜಗವ ಮಾಡಬಹುದೆ
ಜಂಗಮ ರಹಿತ ಲಿಂಗವಿಲ್ಲ
ಲಿಂಗರಹಿತ ಜಂಗಮನಿಲ್ಲ

—ಸಿದ್ಧರಾಮ

ಜಂಗಮಕ್ಕೆರೆದರೆ, ಸ್ಥಾವರ ನೆನೆಯಿತ್ತು''—ಇದು ಬಸವಣ್ಣನವರು ತ್ರಿವಿಧ ದಾಸೋಹಕ್ಕೆ ರೂಢಿಸಿಕೊಟ್ಟ ಸೂತ್ರ.

ದೀನರು, ದುಃಖಿಗಳು, ದರಿದ್ರರು, ಉತ್ತಮರ ಪದಹತಿಗೆ ಗುರಿಯಾಗಿ ನರಳುತ್ತಿದ್ದ ದುರದೃಷ್ಟಶಾಲಿಗಳು—

ಇವರೆಲ್ಲರನ್ನೂ ಬಸವಣ್ಣನವರು ಜಂಗಮಸ್ವರೂಪರೆಂದೇ ಕಂಡರು.

ಜಂಗಮ ತನ್ನ ಸಾಧನೆಯಿಂದ ಜಗದ ಭರಿತನಾಗಿ ಬೆಳೆದ ಒಂದು ಮಹಾ ಚೇತನ, ಜಾತಿ, ಕುಲ, ದೇಶ, ಕಾಲಗಳ ಯಾವ ಪರಿಮಿತಿಗೂ ಆತ ಬಂಧಿತನಾದವನಲ್ಲ. ಈ ನಿಲುವಿಗೇರಿದವನು ಯಾರೇ ಆಗಲಿ ಅವನೇ ಜಂಗಮ. ಜಂಗಮ ಎಂಬುದೊಂದು ಜಾತಿಯಲ್ಲ, ಅದೊಂದು ಆಧ್ಯಾತ್ಮಿಕ ನಿಲುವು, ಅನುಭಾವದ ತುತ್ತ ತುದಿ.

ಗುರುವಾಗಲಿ ಜಂಗಮವಾಗಲಿ ತನ್ನ ಸ್ಥಾನಕ್ಕನುಗುಣವಾದ ಯೋಗ್ಯತೆಯನ್ನು ಸಾಧಿಸಿದಾಗಲೇ ಆತ ಪುರಸ್ಕೃತ. ಬಾಹ್ಯವೇಷ ಆಡಂಬರಗಳಿಂದಲ್ಲ.

ಗುರುವೆಂದರೂ ಕಾಯಕವುಳ್ಳನ್ನಕ್ಕ ದೋಷಕ್ಕೆ ಹೊರಗಾಗಿರಬೇಕು
ಜಂಗಮವೆಂದರೂ ಸುಖದುಃಖವುಳ್ಳನ್ನಕ್ಕರ
ರಾಯವಿಡಿದಿಹ ಕಾರಣ ಪಾತಕಕ್ಕೆ ಹೊರಗಾಗಿರಬೇಕು
ಬೇಡುವಾತ ಜಂಗಮನಲ್ಲ
ಬೇಡಿಸಿಕೊಂಬಾತ ಭಕ್ತನಲ್ಲ
ಬೇಡದ ಆ ಭಕ್ತ ತಾನೆ ಮಾಡಿದ ಮಾಟವ
ಪರಿಣಾಮಿಸಬಲ್ಲಡೆ ಜಂಗಮ

ಅವನ ಮನದಿಚ್ಛೆಯ ಸಲಿಸಬಲ್ಲಡೆ ಆತನೇ ಪರಮ ಭಕ್ತ.

—ಚನ್ನಬಸವಣ್ಣ

ಲಿಂಗ:—

ಲಿಂಗ ಎಂದರೆ ಪರಮಾತ್ಮ. ಸಚ್ಚಿದಾನಂದ ಸ್ವರೂಪ. ಶಿಲಾದಿಗಳಲ್ಲಿ ಮೂಡಿ ದುದು ಲಿಂಗವೆಂದಲ್ಲ.

ಲಿಂಗದಲ್ಲಿ ಮೂರು ಭೇದಗಳು—ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ. ಗುರು ಇವುಗಳನ್ನು ಕಾರಣತನು, ಸೂಕ್ಷ್ಮತನು ಮತ್ತು ಸ್ಥೂಲತನುಗಳಲ್ಲಿ ದೀಕ್ಷಾ ಕಾಲದಲ್ಲಿ ಸ್ಥಾಪಿಸುವನು. ಇಷ್ಟಲಿಂಗವನ್ನು ಸದಾ ದೇಹದ ಮೇಲೆ ಧರಿಸಿಕೊಂಡಿರ ಬೇಕು. ಪೂಜಾಕಾಲದಲ್ಲಿ ಎಡಗೈಯಲ್ಲಿ ಇಟ್ಟುಕೊಂಡು ಪೂಜೆ ಮಾಡಬೇಕು. ಈ ಇಷ್ಟ ಲಿಂಗದ ಮೂಲಕ ಪ್ರಾಣಲಿಂಗ ಭಾವಲಿಂಗಗಳ ಜ್ಞಾನವನ್ನುಂಟುಮಾಡಿಕೊಳ್ಳಬೇಕು.

ಮನವಕೊಟ್ಟು ಲಿಂಗವನೊಲಿಸಬೇಕು ಎಂದಿರುವುದರಿಂದ ಲಿಂಗ ಪ್ರಭೆ ಎಂಬುದು ಮನಸ್ಸನ್ನು ಸ್ಥಿರಗೊಳಿಸುವುದಕ್ಕೂ, ಕೇಂದ್ರೀಕರಿಸುವುದಕ್ಕೂ ಸಹಾಯ ಮಾಡುತ್ತದೆ.

ಲಿಂಗ ಸಾಕ್ಷಾತ್ತಾಗಿ ಪರವಸ್ತುವಾಗಿರುವುದರಿಂದ ಒಳಗೂ ಹೊರಗೂ ಅಪಾರ ವಸ್ತುವಿನೊಡನೆ ತಾನು ಕೂಡಿರುವನೆಂದು ತಿಳಿದು ಶ್ರದ್ಧೆವಹಿಸಿ ಅನನ್ಯಭಕ್ತಿಯಿಂದ ನಡೆದುಕೊಳ್ಳಬೇಕು.

ಲಿಂಗ ವೀರಶೈವದ ತಳಹದಿಯೂ ಹೌದು. ಈ ಧರ್ಮದ ತಾತ್ವಿಕ ವಿವೇಚನೆ ಆಚರಣೆಯ ಮಾರ್ಗ, ಸಾಮಾಜಿಕ, ನೈತಿಕ ನಿಯಮ ನಿಷ್ಠೆಗಳೆಲ್ಲಕ್ಕೂ ಲಿಂಗವೇ ಕೇಂದ್ರ ಶಕ್ತಿಯಾಯಿತು.

ಸಾಮಾಜಿಕ ವ್ಯವಸ್ಥೆಯಲ್ಲಿ ವಿಷಮತೆಯನ್ನು ಅಳಿಸಿಹಾಕಿ ಸರ್ವಸಮಾನತೆ ಯನ್ನು ಸಾಧಿಸುವುದಕ್ಕೂ ಇದು ಸಾಧನವಾಯಿತು.

ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಯ್ಯ ಎನ್ನ ಕರಸ್ಥಲಕ್ಕೆ ಬಂದು
ಚುಳುಕಾದಿರಯ್ಯ

ಇಷ್ಟಲಿಂಗಮಿದಂ ಸಾಕ್ಷಾದನಿಷ್ಟ ಪರಿಹಾರಕಂ—ಸಿದ್ಧಾಂತ ಶಿಖಾಮಣಿ

ಪ್ರತ್ಯಕ್ಷವಾಗಿ ಸಂಸಾರ ಪಾಶ ಕೂಪವಾಗಿರುವ ಅನಿಷ್ಟವನ್ನು ಸಂಹರಿಸಿ, ಆ ಮೂಲಕ ಇಷ್ಟವನ್ನು ಕೈಗೂಡಿಸಿಕೊಡುವುದರಿಂದ ಇಷ್ಟಲಿಂಗವೆನಿಸಿಕೊಂಡಿದೆ.

ಇದು ಸಾಕಾರವಿಡಿದು ನಿರಾಕಾರಕ್ಕೇರುವ ಸಮನ್ವಯ ಮಾರ್ಗ. ಇಷ್ಟಲಿಂಗ ಸಾಕಾರವೂ ಅಲ್ಲ, ನಿರಾಕಾರವೂ ಅಲ್ಲ.

ನಿರಾಕಾರವೆಂಬೆನೆ ಸಾಕಾರವಾಗಿದೆ, ಸಾಕಾರವೆಂಬೆನೆ ನಿರಾಕಾರವಾಗಿದೆ.

ಇಷ್ಟಲಿಂಗದಲ್ಲಿ ಕಂಡುಬರುವ ಇನ್ನೊಂದು ಅಂಶವೆಂದರೆ ಧಾರ್ಮಿಕ ಸ್ವಾತಂತ್ರ್ಯ. ನನ್ನ ಆತ್ಮದ ಉದ್ಧಾರಕ್ಕಾಗಿ ನಾನು ಇನ್ನೊಬ್ಬರ ಕೈ ಕಾಯಬೇಕಾಗಿಲ್ಲ, ಇನ್ನೊಂದೆಡೆ ದೇವರನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ—ನನ್ನ ಉದ್ಧಾರ ನನ್ನಲ್ಲಿಯೇ ಇದೆ. ನನ್ನ ಕೈಲೇ ಇದೆ.

ಮೂರ್ತಿ ಪೂಜೆಯ ಎಲ್ಲ ದೌರ್ಬಲ್ಯಗಳನ್ನು ತೆಗೆದುಹಾಕುವುದಕ್ಕೂ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ಶೋಷಣೆಗಳನ್ನು ತಪ್ಪಿಸುವುದಕ್ಕೂ, ಇಷ್ಟಲಿಂಗ ಪರಿಣಾಮಕಾರಿಯಾದ ಸಾಧನವಾಯಿತು.

ಇದರ ಮತ್ತೊಂದು ಉದ್ದೇಶ —ಏಕದೇವೋಪಾಸನೆ.

ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ

ಪಂಚಾಚಾರ:—

ಅಷ್ಟಾವರಣ ಲಿಂಗವಾಗಿ, ಪಂಚಾಚಾರವೇ ಪ್ರಾಣವಾಗಿ ನಡೆದು ಕಡೆಗೆ ಚಿರ ಸುಖಿಯಾಗಿರ್ಪೆನು ನೋಡು

—ಚನ್ನ ಬಸವಣ್ಣ

ಭೃತ್ಯಾಚಾರ:—

ಶಿವಶರಣರೆ ಹಿರಿಯರಾಗಿ, ತಾನೆ ಕಿರಿಯನಾಗಿ, ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ. ಇಲ್ಲಿ ಭಕ್ತನ ಅಹಂಕಾರನಿರಸನ ಕಾಣಬಹುದು. ಸರ್ವಸಮರ್ಪಣ ಭಾವ—'ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ.

ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ
ಕೀಳಿಂಗಲ್ಲದೆ ಹಯನ ಕರೆವುದೆ
ಮೇಲಾಗಿ ನರಕದೊಳೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲ ಸಂಗಮದೇವ
ಅರಸರ ಮನೆಯಲ್ಲಿ ಅರಿಸಿಯಾಗಿಪ್ಪುದರಿಂದ
ಭಕ್ತನ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ

ತನ್ನನ್ನು ಅಲ್ಪಕ್ಕೆ ಮಾರಿಕೊಳ್ಳುವ
ಕೀಳೊಮ್ಮೆಯಲ್ಲ, ಉದಾತ್ತವಾದುದಕ್ಕೆ
ಅರ್ಪಿಸಿಕೊಳ್ಳುವ ಪರುಷ ಸ್ಪರ್ಶ.

ಸೋಹಂ ಎಂಬುದು ಅಂತರಂಗದ ಮದ ನೋಡಯ್ಯ
ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ
ಈ ದ್ವಂದ್ವವನಳಿದು, "ದಾಸೋಹಂ" ಎಂದನಿಸಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ

ದಾಸೋಹಂ' ಎಂಬ ಮಾತಿನೆಲ್ಲಿಯೇ ಅಹಂಕಾರವನ್ನಳಿದ ಕಿಂಕುರ್ವಾಣತೆ ವ್ಯಕ್ತವಾಗುತ್ತದೆ.

"ಮಾಡುವ ದಾಸೋಹ ಕಿಂಕುರ್ವಾಣದಿಂದಾದೊಡೆ
ಅಭಿತ್ತವ, ಅವಗುಣಂಗಳು ಮುಟ್ಟಲಮ್ಮವು. ಅರ್ಥ
ಪ್ರಾಣ, ಅಭಿಮಾನವೆಂಬ ತ್ರಿಸ್ಥಾನವ ಶುದ್ಧವ ಮಾಡುವಲ್ಲಿ
ನಿರಾಭಯ ಮಾಡಿಕೊಂಡಿರ್ಪನು"

ಇದು ದಾಸೋಹದ ಪರಿಯನ್ನು ಸೂಚಿಸುತ್ತದೆ

—ಚೆನ್ನ ಬಸವಣ್ಣ

ಈ ಮೂಲ ಆಕರಗಳೇ ಶುದ್ಧವಾದರೆ ಅದರಿಂದ ಹೊಮ್ಮುವ ಲಯಂಧಾರೆ ಪರಿಶುದ್ಧವೆ ಆಗಿರುತ್ತದೆಂಬುದು ಶರಣರ ದೃಷ್ಟಿ.

ದಾಸೋಹದಲ್ಲಿ ಕಾಯಕತತ್ತ್ವವು ಅಡಕವಾಗಿದೆ. "ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ, ಬೇಡಿ ಕಾಡಿ ಮಾಡುವುದು ದಾಸೋಹವೇ

—ಶಿವಲೆಂಕ ಮಂಚಣ್ಣ

ಗುರುಲಿಂಗಜಂಗಮಕ್ಕೆ ದಾಸೋಹವ ಮಾಡಬೇಕಾದರೆ, ಸತ್ಯ ಶುದ್ಧ ಕಾಯವನ್ನು ಬಳಲಿಸಬೇಕು.

ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು
ಲಿಂಗಕ್ಕೆ ಅರ್ಪಿತವಲ್ಲದೆ ದುರಾಶೆಯಿಂ ಬಂದುದು ಅನರ್ಪಿತ"

—ಚೌಂಡಯ್ಯ

ತನುವ ಕೊಟ್ಟು ಗುರುವನೊಲಿಸಲೆ ಬೇಕು
ಮನವ ಕೊಟ್ಟು ಲಿಂಗವನೊಲಿಸಲೆಬೇಕು
ಧನವ ಕೊಟ್ಟು ಜಂಗಮವನೊಲಿಸಲೆಬೇಕು

ಇದು ತ್ರಿವಿಧ ದಾಸೋಹ. ತನುವಕೊಟ್ಟು ಮನ, ಧನ ಕೊಡದವರಿದ್ದಾರೆ, ಮನ, ಕೊಟ್ಟು ತನು ಧನಗಳನ್ನು ಬಿಡದವರಿದ್ದಾರೆ. ಧನವ ಕೊಟ್ಟು ತನುಮನಗಳನ್ನು ಬೇರಿಟ್ಟುಕೊಂಡವರಿದ್ದಾರೆ. ಈ ಮೂವರಲ್ಲಿ ಒಂದನ್ನು ಕೊಟ್ಟು, ಎರಡನ್ನು ಇಟ್ಟುಕೊಂಡರೆ. ಎರಡನ್ನು ಕೊಟ್ಟು ಒಂದನ್ನು ಇಟ್ಟುಕೊಂಡರೆ ಅದು ಸಲ್ಲದು. ಅದು ದಾಸೋಹವಾಗದು.

ಗುರು, ಲಿಂಗ, ಜಂಗಮದ ವಿಶೇಷತೆ, ಅಧಿಕಾರಗಳನ್ನು ನೋಡಿದ್ದೇವೆ. ಇವು ಗಳಿಗೆ ಸಾಧಕ ತನ್ನದಾದ ತನು, ಮನ, ಧನಗಳ ಸಮರ್ಪಣೆ ಹೇಗೆಂಬುದನ್ನು ನೋಡೋಣ.

'ತನುವಕೊಟ್ಟು ಗುರುವನೊಲಿಸಬೇಕು'

ತನುವಿನ ಮೋಹ ದೊಡ್ಡದು. ಹುಟ್ಟು ಬದುಕು ನಮಗೆ ಗೊತ್ತಿಲ್ಲವಾದರೂ ಅಳಿವು ನಮಗೆ ಸ್ಪಷ್ಟ; ನೂರ್ಕಾಲ ಬದುಕಿದರೂ ದೇಹ ಕುಗ್ಗಿ, ಬಳಲಿ ಬೆಂಡಾಗಿ ಒಂದಲ್ಲ ಒಂದು ದಿನ ತನಗರಿವಿಲ್ಲದೆಯೇ ಇಹದಿಂದ ಕಳಚಿ ಬಿದ್ದುಹೋಗುತ್ತದೆ, ಆದರೂ ಬದುಕಿರುವಾಗ ಇದು ಶಾಶ್ವತವೆಂದೇ ನಂಬಿ ತನುವಿನ ಮೋಹ ದೇಹಿಯನ್ನು ಹಲವು ಮಾಯಾಜಾಲದೊಳಗೆ ತಳ್ಳಿ ಸಂಕಷ್ಟಗಳಿಗೆ ಸಿಲುಕಿಸುತ್ತದೆ.

ಹಂಜರ ಬಲ್ಲಿತೆಂದು ಅಂಜದೇ ಓದುವ ಗಿಳಿಯೇ
ಎಂದೆಂದೂ ಅಳಿಯೆನೆಂದು
ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ
ಮಾಯಾಮಂಜರ ಕೊಲುವಡೆ, ನಿನ್ನ ಹಂಜರಕಾವುದೇ
ಕೂಡಲಸಂಗಮದೇವನಲ್ಲದೆ ?

ಭದ್ರವಾದ ಪಂಜರದೊಳಗಿರುವ ಗಿಳಿ ನನ್ನ ಪಂಜರ ಗಟ್ಟಿಯಾಗಿರುವುದರಿಂದ ಯಾವ ಬೆಕ್ಕೂ ನನ್ನನ್ನು ಕೊಂದು ತಿನ್ನಲಾರದು ಎಂಬ ಭ್ರಮೆಯನ್ನು ನಂಬಿ ಕುಳಿತಿರುವಾಗ ಮಾಯಾಮಂಜರವೇ ಕೊಂದು ತಿನ್ನುವಾಗ ಪಂಜರದ ಭದ್ರತೆ ಕಾಪಾಡುತ್ತದೆಯೆ ?

ಅಮೃತವನ್ನೆ ಸೇವಿಸಿರಲಿ, ಸಿರಿಯ ಸುಪ್ಪತ್ತಿಗೆಯಲ್ಲೆ ಇರಲಿ ದೇಹ ತನ್ನ ಕ್ರಿಯೆ ಯಿಂದ ಹಿಂದುಳಿಯುವುದಿಲ್ಲ.

ನರೆ ಕೆನ್ನೆಗೆ, ತೆರೆ ಗಲ್ಲಕೆ
ಶರೀರಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನುಬಾಗಿ
ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ
ಕೋಲು ಹಿಡಿಯುವ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ

ದೇಹದ ಈ ಸ್ಥಿತಿ ತನ್ನ ತಂದೆ, ತಾತ, ತಾಯಿ, ಅಜ್ಜಿ ಕೊನೆಗೆ ತಾನೇ ಈ ಸ್ಥಿತಿಯತ್ತ ನಡೆಯುವುದನ್ನು ಯಾರು ಕಂಡಿಲ್ಲ, ಇದರ ಅಶಾಶ್ವತತೆ ಯಾರಿಗೆ ಗೊತ್ತಿಲ್ಲ, ಆದರೂ ದೇಹದ ಮೋಹವನ್ನು ಬಿಟ್ಟಿರುವವರು ಎಷ್ಟು ಮಂದಿ. ಜೀವರಹಿತ ದೇಹಕ್ಕೆ ಇರುವ ಬೆಲೆಯಾದರೂ ಎಷ್ಟು ?

ವ್ಯಾಧನೊಂದು ಮೊಲನ ತಂದರೆ
ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ದನ ಹೆಣನೆಂದರೆ
ಒಂದಡಕೆಗೆ ಕೊಂಬವರಿಲ್ಲ ನೋಡಯ್ಯ
ಮೊಲನಿಂದ ಕರಕಷ್ಟ ನರನ ಬಾಳುವೆ !

ಉದಯಾಸ್ತಮಾನವೆನ್ನ ಬೆಂದ ಬಸಿರಿಂಗೆ ಕುದಿಯಲಲ್ಲದೆ ನಿಮ್ಮ ನೆನೆಯಲು ತೆರಹಿಲ್ಲ ವಯ್ಯ, ಬೆರಣೆಯನ್ನಾಯುವುದರಲ್ಲೇ ಸಮಯವೆಲ್ಲ ಮುಗಿಯಿತೇ ಹೊರತು, ಆಯ್ದು ತಂದ ಬೆರಣೆಗೆ ಬೆಂಕಿಹಾಕಿ ಅಡುಗೆ ಮಾಡಿ ಊಟಮಾಡಲು ಸಮಯವೇ ಸಿಗಲಿಲ್ಲ. ತಾನು, ತನ್ನವರು, ತನ್ನದು, ತನಗಾಗಿ, ತನ್ನವರಿಗಾಗಿ, ತನಗೇ, ತನ್ನವರಿಗಾಗಿಯೇ ಎಂದು ಬದುಕಿನಲ್ಲೆಲ್ಲ ದುಡಿದು ದೇಹ ಸವೆಸಿದುದೇ ಹೊರತು ಅದರ ಫಲ ಕೈಗೂಡು ವಾಗ ತಾನಿಲ್ಲ.

ಮನವೇ ಸರ್ಪ, ತನುವೇ ಹೇಳಿಗೆ
ಹಾವಿನೊಡತಣ ಹುದುವಾಳಿಗೆ
ಇನ್ನಾವಾಗ ಕೊಂದಹುದೆಂದರಿಯೆ
ಇನ್ನಾವಾಗ ತಿಂದಹುದೆಂದರಿಯೆ

ಈ ವಿಪತ್ಕಾರ ಸ್ಥಿತಿಯಲ್ಲಿದ್ದು ಹಾವಿನಿಂದ ರಕ್ಷಿಸಬಲ್ಲ ಗಾರುಡ ಮಂತ್ರ ತಿಳಿಯದೆ ಮೋಹದಲ್ಲುಳಿದು ತನುವಿನ ಕೇಡ ಆಹ್ವಾನಿಸುತ್ತೇವೆ. ದೇಹದ ಅನಿಶ್ಚಿತತೆ ಮನ ಗಂಡು ಇಂದು ನಾಳೆ ಎನ್ನದೆ ಇಂದೆ ಈಗಲೆ ಈ ಘಳಿಗೆಯೇ ಶ್ರೇಷ್ಠವೆಂದರಿತು ತನು ವಿನ ಮೋಹ ಕಳೆಯಲು ಪ್ರಯತ್ನಿಸಬೇಕು. ಇಂತಹ ತನುವನ್ನು, ಇದರಿಂದ ನಡೆಯ ಬಹುದಾದ ಎಲ್ಲ ಕ್ರಿಯೆಯನ್ನೂ ಗುರುವಿನ ಸೇವೆಗೆ ಸಮರ್ಪಿಸಬೇಕು.

ಅತ್ತಲಿತ್ತಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವ

ಎನ್ನ ಪಾಮ-ಕ್ಷೇಮ ನಿಮ್ಮದು, ಎನ್ನ ಹಾನಿ–ವೃದ್ಧಿ ನಿಮ್ಮದು, ಎನ್ನ ಮಾನಾಪಮಾನ ನಿಮ್ಮದು ಎನ್ನುವ ಸಮರ್ಪಣಮನೋಭಾವದಿಂದ ತನ್ನನ್ನು ತಾನು ಸಮರ್ಪಿಸಿ ಕೊಂಡು ತನ್ನತನವನ್ನಳಿಯಬೇಕು. ಇದು ದಾಸೋಹದ ಮೊದಲ ಮೆಟ್ಟಿಲು.

''ಮನವಕೊಟ್ಟು ಲಿಂಗವನೊಲಿಸಲೆಬೇಕು''

ಮಾನವನ ಮನಸ್ಸನ್ನು ಶರಣರು ತುಂಬ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಆಧು ನಿಕ ಮನೋವಿಜ್ಞಾನಿಗಳನ್ನೂ ಮೀರಿಸುವಂತಹ ಪರಿಜ್ಞಾನ. ಯಾವ ತೊಡಕೂ ಇಲ್ಲದೆ ನಿರಕ್ಷರಿಯೂ, ಅವಿದ್ಯಾವಂತ ಪಾಮರನೂ ಅರ್ಥಮಾಡಿಕೊಳ್ಳಬಹುದು.

ಕೊಂಬೆಯ ಮೇಲಣ ಮರ್ಕಟನಂತೆ
ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು

....

ಅಂದಣವನೇರಿದ ಸೊಣಗನಂತೆ
ಕಂಡರೆ ಬಿಡದು ತನ್ನ ಮುನ್ನಿನ ಸ್ವಭಾವವನು
ಸುಡು ಸುಡು, ಮನವಿದು ವಿಷಯಕ್ಕೆ ಹರಿವುದು
ತುಪ್ಪದ ಸವಿಗೆ ಅಲಗ ನೆಕ್ಕುವ
ಸೊಣಗನಂತೆನ್ನ ಬಾಳುವೆ
ಸಂಸಾರ ಸಂಗವ ಬಿಡದು ನೋಡೆನ್ನ ಮನವು
ಈ ನಾಯಿತನವ ಮಾಣಿಸು

ಹೌದು ಮರದಮೇಲೆ ಕುಳಿತ ಕೋತಿ ಕೊಂಬೆಯಿಂದ ಕೊಂಬೆಗೆ ಹಾರುವುದರಲ್ಲಿಯೇ ನಿರತವಾಗಿರುತ್ತದೆ. ಒಂದುಕಡೆ ನೆಲೆ ನಿಲ್ಲದು. ಎಲ್ಲ ಬಿಟ್ಟು ಸಾಧನೆಯ ದಾರಿಯಲ್ಲಿದ್ದೇನೆಂದು ಭಾವಿಸುವವನೂ ಹಿಂದಣ ವಾಸನೆ ಮೂಗಿಗೆ ಬಡಿಯುತ್ತಿದ್ದಂತೆ ನೇರ ನಡೆದು ಬಂದ ಮೂಲಕ್ಕೆ ಹೋಗುತ್ತಾನೆ. ಪಲ್ಲಕ್ಕಿಯಲ್ಲಿ ಕುಳಿತ ನಾಯಿ ಹೊಲಸು ಕಂಡ ಕೂಡಲೆ ಅದರತ್ತ ನೆಗೆದು ಹಾರಿ ಹೋಗುವಂತೆ, ಕತ್ತಿಯ ಬಾಯೆಂದು ತಿಳಿದೂ ತುಪ್ಪದ ರುಚಿಗೆ ಕತ್ತಿಯಬಾಯನ್ನು ನೆಕ್ಕಿ ನಾಲಗೆಯನ್ನು ಕತ್ತರಿಸಿಕೊಂಡು ನಾಲಗೆಯನ್ನೆ ಕಳೆದುಕೊಂಡಮೇಲೆ ತುಪ್ಪದ ಪ್ರವಾಹವೇ ತನ್ನ ಎದುರು ಹರಿದರೂ ಪ್ರಯೋಜನವಿಲ್ಲವಾಗುವಂತೆ.

ಈ ಮನಸ್ಸು ಯಾರನ್ನೂ ನಂಬದು, ಯಾರನ್ನೂ ಮೆಚ್ಚದು, ತನ್ನ ವಿಚಾರಿಸಲೊಲ್ಲದೆ ಸದಾ ಇದಿರ ವಿಚಾರಿಸಲೇ ಹಾತೊರೆಯುವುದು. ತನ್ನಿಚ್ಛೆಯ ನುಡಿದರೆ ಮೆಚ್ಚುವುದೀ ಮನವು, ಇದಿರಿಚ್ಛೆಯ ನುಡಿದರೆ ಮೆಚ್ಚದೀ ಮನವು.

ಓತಿ ಬೇಲಿವರಿದಂತೆನ್ನ ಮನವಯ್ಯಾ
ಹೊತ್ತಿಗೊಂದು ಪರಿಯಪ್ಪ
ಗೋಸುಂಬೆಯಂತೆನ್ನ ಮನವು.

ಮಾನವ ಮನಃಸ್ಥಿತಿಯನ್ನು ವಿಶ್ಲೇಷಿಸುವ ಇಂತಹ ನೂರಾರು ಸತ್ಯ ಸುಂದರ ವಚನಗಳು ಸಿಗುತ್ತವೆ. (ಮಾಯೆಗೆ ಮೂಲ ಮನ. ನಮ್ಮ ವಿನಾಶಕ್ಕೆ ತನುವಿನ ಮೋಹ ಒಂದು ಕಾರಣವಾದರೆ, ಮನದ ಮುಂದಣ ಮಾಯೆ ಸರ್ವನಾಶಕ್ಕೆ ಮೂಲ.) ಅದಕ್ಕಾಗಿ

ಬೆಲ್ಲವತಿಂದ ಕೋಡಗದಂತೆ
ಸಿಹಿಯ ನೆನೆಯದಿರಾ ಮನವೆ

ಕಬ್ಬುತಿಂದ ನರಿಯಂತೆ
ಹಿಂದಕ್ಕೆಳಸದಿರಾ ಮನವೆ
ಗಗನವನಡರಿದ ಕಾಗೆಯಂತೆ
ದೆಸೆದೆಸೆಗೆ ಹಂಬಲಿಸದಿರಾ ಮನವೆ.

ಒಮ್ಮೆ ಕದ್ದು ಬೆಲ್ಲತಿಂದ ಕೋಡಗ ಮತ್ತೆ ಬೆಲ್ಲದ ಆಸೆಯಿಂದ ಆಲೆಮನೆಗೆ ಹೋದರೆ ಎಚ್ಚರಿರುವ ಕಾವಲುಗಾರರ ಶಿಕ್ಷೆಗೆ ಗುರಿಯಾಗದಿರುವುದೆ ? ಕಬ್ಬಿನ ಆಸೆಗೆ ಮತ್ತೆ ಕಬ್ಬಿನ ಗದ್ದೆಗೆ ಹೋಗುವ ನರಿ ಬಾಲ ಕಳೆದುಕೊಳ್ಳದೆ ಹೋಗುವುದೆ ! ತಾನು ಹಾರಬಲ್ಲೆನೆಂದು ಆಗಸಕ್ಕೆ ಹಾರಿದ ಕಾಗೆ ದಿಕ್ಕು ದಿಕ್ಕಿಗೆ ಬಾಯ್ಬಿಟ್ಟು ಕೂಗುವುದಲ್ಲದೆ ಮತ್ತೇನನ್ನು ಮಾಡುವುದು ಸಾಧ್ಯ. ಹಾಗೆ ಮಾಡದೆ

ಕೂಡಲಸಂಗನ ಶರಣರ ಕಂಡು
ಲಿಂಗವೆಂದೇ ನಂಬು ಮನವೇ !
ಒಡೆಯನ ಕಂಡರೆ ಕಳ್ಳನಾಗದಿರು ಮನವೆ !
ಭವ ಬಾಧೆಯು ತಪ್ಪಿಸಿಕೊಂಬಡೆ
ನೀನು ನಿಯಂತನಾಗಿ ಭಯಭರಿತನಾಗಿ
ಅಹಂಕಾರಿಯಾಗದೆ ಶರಣೆನ್ನು ಮನವೇ
ಕೂಡಲಸಂಗನ ಶರಣರಲ್ಲಿ
ಭಕ್ತಿಯ ನೋನಂವಡೆ
ಕಿಂಕರನಾಗಿ ಬದುಕು ಮನವೇ.

ಕೋಟ್ಯಾನುಕೋಟಿ ಜಪವ ಮಾಡಿ ಕೋಟಲೆಗೊಳ್ಳುವುದು ಬೇಡ, ಅದಕ್ಕೆ ಬದಲಾಗಿ ಕಿಂಚತುಗೀತ ಒಂದನಂತಕೋಟಿಜಪ. ಮನವೇ ನಿನ್ನ ಜನನದ ಪರಿಭವವ ಮರೆದೆಯಲ್ಲಾ ! ಮನವೇ ಲಿಂಗವ ನಂಬು !

ಅಹಂಕಾರ ನಿರಸನವೇ ಮನದ ವಿಕಲತೆಯನ್ನು ಗೆಲ್ಲುವ ಮಂತ್ರ. ಇದು ಸರ್ವವ್ಯಾಪಿ. ಬಿಟ್ಟೆನೆಂದರೂ ಬಿಡದು. ಮನದ ವಿನಾಶಕ್ಕೆ ಇದು ಮೂಲ.ಇದನ್ನು ಗೆಲ್ಲುವ ತನಕ ಸಾಧಿಸಿದೆವೆಂಬ ಸಾಧನೆ ಹುಸಿ.

ಎನಗಿಂತ ಕಿರಿಯರಿಲ್ಲ
ಶಿವಭಕ್ತರಿಗಿಂತಹಿರಿಯರಿಲ್ಲ.

ಈ ಮಾತು ಬಲು ಸರಳ. ಹಿರಿತನವಿದ್ದರೂ ತಾನು ಕಿರಿಯ ಎಂದು ಭಾವಿಸುವುದು ಅಷ್ಟು ಸುಲಭವಲ್ಲ. ಒಂದು ನಿರ್ದಿಷ್ಟ ಅವಧಿಗೆ ಆಯ್ಕೆಗೊಂಡ ಒಬ್ಬ ಪ್ರಜಾಪ್ರತಿನಿಧಿ ಪ್ರಜಾಸೇವೆಗಾಗಿ ಕುರ್ಚಿಯಲ್ಲಿ ಕುಳಿತಾದಮೇಲೆ ಪ್ರಜಾಸೇವಕನೆಂದು ಉದ್ಘೋಷಿಸಿಕೊಂಡರೂ ಸೇವಕನಲ್ಲಿರಬೇಕಾದ ಕಿರಿತನವನ್ನು ಎಷ್ಟು ಜನರಲ್ಲಿ ನೋಡುವುದು

ಸಾಧ್ಯ ? ಹೆಣ್ಣು ಗಂಡುಗಳಮಧ್ಯೆ, ಅಪ್ಪ–ಮಕ್ಕಳ ಮಧ್ಯೆ, ಅಣ್ಣ-ತಮ್ಮರ ನಡುವೆ, ಧರ್ಮ-ಧರ್ಮಗಳ ಒಳಗೆ, ಸಮಾಜ–ಸಮಾಜದಲ್ಲಿ, ದೇಶ-ದೇಶಗಳಲ್ಲಿ, ಕೀಳು–ಮೇಲು ಗಳದೇ ಪ್ರಾಬಲ್ಯ. ಸೃಷ್ಟಿಯ ಸಮಸ್ತ ಚೇತನವೂ ಹಿರಿತನ ಬಯಸುವುದಲ್ಲದೆ ಕಿರಿ ತನಕ್ಕೆ ಯಾರು ಇಚ್ಛಿಸುತ್ತಾರೆ ? ಇದು ಗೊತ್ತಿದ್ದೂ.

ಮೇಲಾಗಲೊಲ್ಲೆ ಕೀಳಾಗಲೊಲ್ಲದೆ

ಏಕೆಂದರೆ

ಕೀಳಿಂಗಲ್ಲದೆ ಹಯನು ಕರೆವುದೆ ?
ಕಾಗೆ ವಿಷ್ಠಿಸುವ ಹೊನ್ನಕಲಶವಾಗುವುದಕ್ಕಿಂತ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ
ಅಯ್ಯ, ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ

ಎಂದು ಬಸವಣ್ಣನವರಂತಹ ಭಕ್ತಶ್ರೇಷ್ಠರು ಕೂಡಲಸಂಗಮನನ್ನು

"ಕೂಡಲಸಂಗಮದೇವ ನಿಮ್ಮ ಸೆರಗೊಡ್ಡಿ ಬೇಡುವೆನು
ಇದೊಂದೆ ವರವ ಕರುಣಿಸಯ್ಯ"

ಎಂದು ವಿನೀತರಾಗಿ ಬೇಡುತ್ತಾರೆ. ವ್ಯಕ್ತಿಯ ಹಿರಿತನ ತಿಳಿದು ಕಿರಿತನವಳವಟ್ಟಾಗಲೆ ಮನದ ಮುಂದಣ ಮಾಯೆ ವಿನಾಶವಾಗುವುದು. ಮಾಯಾರಹಿತನಾಗದೆ ಅಹಂಕಾರ ನಿರಸನ ಸಾಧ್ಯವಾಗದು.

ತನು ಮನಗಳನ್ನು ಗುರು ಲಿಂಗಗಳಿಗೆ ಸಮರ್ಪಿಸಿದಮೇಲೆ ಉಳಿಯುವುದು ಧನ. ಲಿಂಗಕ್ಕೆ ಮನವನರ್ಪಿಸುವುದು ಎರಡನೆಯ ಮೆಟ್ಟಿಲು.

"ಧನವ ಕೊಟ್ಟು ಜಂಗಮವನೊಲಿಸಲೆ ಬೇಕು"

ನಾನು ಆರಂಬವ ಮಾಡುವೆನಯ್ಯ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯ
ಜಂಗಮದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯೂ
ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ

ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ
ಮತ್ತೊಂದ ಕ್ರೀಯೆ ಮಾಡೆನು
ನಿಮ್ಮ ಸೊಮ್ಮ ನಿಮಗೆ ಸಲಿಸುವೆನು
ನಿಮ್ಮಾಣೆ ಕೂಡಲ ಸಂಗಮದೇವ.

ಎಲ್ಲರೂ ದುಡಿಯಬೇಕು. ವ್ಯವಸಾಯ, ವ್ಯವಹಾರ, ಸೇವೆ ಇವುಗಳನ್ನು ಮಾಡಲೆ ಬೇಕು. ದುಡಿಮೆಯ ಫಲ ತನಗಾಗಿ ಅಲ್ಲ. ಗುರು ಲಿಂಗ ಜಂಗಮ ಸೇವೆಗಾಗಿ. ನಿಮ್ಮ ಕೃಪೆಯಿಂದ ಬರಬಹುದಾದ ದ್ರವ್ಯ ನಿಮ್ಮ ಸೇವೆಗಾಗಿಯೆ ಸವೆಸುತ್ತೇನೆ ಎಂದು ಪ್ರತಿಜ್ಞೆ ಮಾಡಬೇಕು. ಕಾಯಕದ ಗುರಿಯಾದರೂ ಇದೆ. ಕಾಯಕ ಸತ್ಯ ಶುದ್ಧ ಕಾಯಕವಾಗಬೇಕು. ಹತ್ತು ಕೊಟ್ಟು ನೂರು ಪಡೆಯುವುದು ಕಾಯಕವಲ್ಲ. ನೆಲನಾಳ್ದನ ಐಶ್ವರ್ಯ ನೆಲನಾಳುವವನ ಭಾಗ್ಯ ಎರಡೂ ಸೇವೆಗಾಗಿಯೇ ಮೀಸಲಾಗ ಬೇಕು. ಕಾಯಕ ಮಾಡಿ ಕಾರೆ ಸೊಪ್ಪು ತಂದರೂ ಅದನ್ನು ಒಪ್ಪವಿಟ್ಟು ಜಂಗಮಕ್ಕೆ ಬಡಿಸಿ ಉಳಿದುದನ್ನು ತಾನು ಪ್ರಸಾದವಾಗಿ ಸ್ವೀಕರಿಸಬೇಕು. ಸಂಜೆಗೆ, ನಾಳಿಗೆ ಎಂದು ತೆಗೆದಿಡುವುದು, ಸಂಗ್ರಹಿಸುವುದು ಸತ್ಯ ಶುದ್ಧ ಕಾಯಕ ಎನಿಸುವುದಿಲ್ಲ.

ಅಧಿಕಾರ, ಅಂತಸ್ತು ಇವುಗಳನ್ನು ಹೊಂದಿಕೊಂಡ ಐಶ್ವರ್ಯ ಮಾನವನನ್ನು ದಾನವನನ್ನಾಗಿಸುತ್ತದೆ, ಸ್ವಾರ್ಥಿಯಾಗಿಸುತ್ತದೆ, ಲಂಪಟತನ ಕಲಿಸುತ್ತದೆ, ಭ್ರಷ್ಟ ನನ್ನಾಗಿಸುತ್ತದೆ. ಅಂತಿಮವಾಗಿ ಸರ್ವನಾಶಕ್ಕೆ ಮೂಲವಾಗುತ್ತದೆ, ಅಹಂಕಾರಿ ಯನ್ನಾಗಿಸುತ್ತದೆ.

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯ

ಇಂತಹವರನ್ನು ಮಾತಾಡಿಸಲು ಬಡತನವೆಂಬ ಮಂತ್ರವಾದಿಯಿಂದ ಮಾತ್ರ ಸಾಧ್ಯ.

ಸಂಸಾರವೆಂಬುದೊಂದು ಗಾಳಿಯ ಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ
ಇದ ನೆಚ್ಚಿ ಕೆಡಬೇಡ
ಸಿರಿಯೆಂಬುದ ಮರೆದು ಪೂಜಿಸು

ಸಂಸಾರ ಗಾಳಿಯಲ್ಲಿ ಹಚ್ಚಿಟ್ಟ ದೀಪ. ಯಾವಾಗ ಆರುತ್ತದೆ ಎಂಬುದು ತಿಳಿಯದು. ಐಶ್ವರ್ಯ ಸಂತೆಯಲ್ಲಿ ಸೇರಿದ ಜನರಂತೆ. ದಿಕ್ಕು ದಿಕ್ಕುಗಳಿಂದ ಬರುತ್ತಾರೆ. ಕೆಲಸ ಮುಗಿಯುತ್ತಿದ್ದಂತೆ ದಿಕ್ಕುಪಾಲಾಗಿ ಹೋಗುತ್ತಾರೆ. ಸಂತೆಯ ಮಂದಿ ಶಾಶ್ವತ ವಲ್ಲ. ಐಶ್ವರ್ಯವೂ ಅಷ್ಟೆ. ನಾನಾಕಡೆಗಳಿಂದ ಬಂದು ಸೇರುತ್ತದೆ. ಬಂದಂ ತೆಯೇ ಹಂಚಿ ಹರಿದು ಹೋಗುತ್ತದೆ. ದುಡಿದವನೇ ನಶ್ವರ ಎನ್ನುವಾಗ ದುಡಿಮೆ ಶಾಶ್ವತ ಎಂದು ನಂಬಿ ಕೂಡುವುದು ಮೂರ್ಖತನವಲ್ಲದೆ ಮತ್ತೇನು.

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ
ಸತ್ಪಾತ್ರಕ್ಕೆ ಸಲ್ಲದಯ್ಯ
ನಾಯ ಹಾಲು ನಾಯಿಂಗಲ್ಲದೆ

ಪಂಚಾಮೃತಕ್ಕೆ ಸಲ್ಲದಯ್ಯ
ನಮ್ಮ ಕೂಡಲ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯ

ಸತ್ಯಶುದ್ಧ ಕಾಯಕದಿಂದ ಬಂದ ಹಣ ಮಾತ್ರ ಸತ್ಪಾತ್ರಕ್ಕೆ ಸಲ್ಲುತ್ತದೆ. ಹೊಲೆಗೆಲಸದಿಂದ ಸಂಪಾದಿಸಿದರೂ ದಾನ ಧರ್ಮಗಳಿಗೆ ಸಲ್ಲದು. ದುಡಿಮೆ ಎಷ್ಟು ಮುಖ್ಯವೋ ದುಡಿಯುವ ಮಾರ್ಗವೂ ಅಷ್ಟೇ ಮುಖ್ಯವೂ ಶುದ್ಧವೂ ಆಗಿರಬೇಕು. ಹಾಲು ಹಾಲೇ ಆದರೂ ನಾಯಿಯ ಹಾಲು ನಾಯಿಗೆ ಮಾತ್ರ ಪಾನಯೋಗ್ಯ.

ದಾನಿಗಳಿಗೆ ಈಗಲೂ ಕೊರತೆಯಿಲ್ಲ. ಕೋಟಿ ಕೋಟಿ ಹಣ ಸಂಗ್ರಹಿಸುವ ದೇವಸ್ಥಾನಗಳು, ವಜ್ರ ವೈಡೂರ್ಯ ಬಂಗಾರಗಳಿಂದ ಝುಗಿಝುಗಿಸುವ ವಿಗ್ರಹಗಳು, ಹಾದಿಗೊಂದು, ಬೀದಿಗೊಂದು ಕಲ್ಯಾಣ ಮಂಟಪ, ಸತ್ರಗಳು, ಆಶ್ರಮಗಳು, ಮಠಮಾನ್ಯಗಳು ಈಗಲೂ ತುಂಬಿವೆ, ಈ ದಾನ ಧರ್ಮಗಳೆಲ್ಲ ಸ್ವಾರ್ಥ ಮೂಲ. ಹೆಸರಿಗಾಗಿ. ಕೀರ್ತಿಗಾಗಿ, ಸ್ವಪ್ರತಿಷ್ಠೆ ಬಿರುದು ಬಾವಲಿಗಳಿಗಾಗಿ ಮಾಡಿದ ದಾನ ನಾಯಕೆಚ್ಚಲ ಹಾಲಿನಂತೆ. ಈಗಿದ್ದಂತೆಯೇ ಇಂತಹ ದಾನಿಗಳು ಹಿಂದೆಯೂ ಇದ್ದರು.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣವಿದ್ದರೆ ಮಾತ್ರ ಭಗವತ್ಕೃಪೆಗೆ

ಪಾತ್ರನಾಗುತ್ತಾನೆ. ನಾನು ಮಾಡಿದೆ, ಮಾಡಿಸಿದೆ ಎಂಬ ಅಹಂಕಾರ ಮನದಲ್ಲಿ ಮೊಳೆಯುತ್ತಿದ್ದಂತೆಯೇ ಭಗವಂತನ ಅವಕೃಪೆಗೆ ಪಾತ್ರನಾಗಿ ನಾಶವಾಗುತ್ತಾನೆ. ಯಾರು ಏನೇ ಮಾಡಲಿ

ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು
ನೋಡುವಂತಿರಬೇಕು, ನೋಡದಂತಿರಬೇಕು
ನೋಡುವ ನೋಟದೊಳಗೆ ತಾನಿಲ್ಲದಿರಬೇಕು.

ಮಾಡಿಯೂ ಮಾಡದಂತೆ, ನೋಡಿಯೂ ನೋಡದಂತಿರುವ ನಿರ್ಲಿಪ್ತತೆ ಪಡೆಯಬೇಕು.

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ
ಬಂಧುಗಳು ಬಂದಾಗಳಿಲ್ಲೆನ್ನ
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ
ಬಂದ ಪುರಾತನರಿಗೆ ಇಲ್ಲೆಂಬ

ಜೀವನವಿಡೀ ಕೊಡುವ ಶಕ್ತಿ ಇದ್ದರೂ ಕೊಡಲು ಹಿಂಜರಿದಾತ ಸಾಯುವ ಹೊತ್ತಿಗೆ ಮಾತ್ರ ದೇಹವನ್ನು ದೇಗುಲಕ್ಕೆ ಕರದೊಯ್ಯಿ ಎಂದು ಹೇಳಲು ಅವನಿಗಾವ ಹಕ್ಕಿರುತ್ತದೆ.

ಹತ್ತು ಮತ್ತರ ಭೂಮಿ, ಬತ್ತುವಹಯನು, ನಂದಾದೀವಿಗೆಯು ನಡೆಸಿದೆನೆಂದು ಹೆಗ್ಗಳಿಕೆ ಹೇಳಿಕೊಳ್ಳುವವರ ಮುಖ ನೋಡಬಾರದು. ಇದು ಒಡೆಯರಿಗೆ ಉಂಡೆಯ ಮುರಿದಿಕ್ಕಿದಂತೆ ''ಎನ್ನಿಂದಲೇ ಆಯಿತು ಎನ್ನಿಂದಲೇ ಹೋಯಿತು'' ಎಂಬ ದುರಹಂಕಾರಿಯ ಬಾಯಿಗೆ ಮಣ್ಣು ಹೊರತು ಬೇರಿಲ್ಲ.

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು
ಹರಿದು ಹೆದ್ದೊರೆಯು ಕೆರೆತುಂಬಿದಂತಯ್ಯ
ನೆರೆಯದ ವಸ್ತು ನೆರೆವುದು ನೋಡಯ್ಯ
ಅರಸು ಪರಿವಾರ ಕೈವಾರ ನೋಡಯ್ಯ
ಪರಮ ನಿರಂಜನ ಮರೆವ ಕಾಲಕ್ಕೆ
ತುಂಬಿದ ಹರವಿಯು ಕಲ್ಲು ಕೊಂಡಂತೆ

ನಮ್ಮ ಅಸ್ತಿತ್ವವೇ ಭಗವತ್ ಕೃಪೆ, ಇನ್ನು ಇದಕ್ಕೆ ಹೊಂದಿಕೊಂಡ ಅಧಿಕಾರ ಅಂತಸ್ತು ಐಶ್ವರ್ಯ ಇವು ಬೇರಾಗುವುದು ಸಾಧ್ಯವಿಲ್ಲ. ಕೆರೆ ಇರುವ ಊರಲ್ಲಿ ಮಳೆ ಬಾರದಿದ್ದರೂ ಹಳ್ಳದ ಮೂಲದಲ್ಲಿ ಮಳೆ ಬಿದ್ದು ಪ್ರವಾಹ ಬಂದು ಕೆರೆ ತುಂಬಿದಂತೆ ಸದ್ಭಕ್ತನಿಗೆ ಐಶ್ವರ್ಯ ಸೇರುತ್ತದೆ. ಭಗವಂತನ ಕೃಪೆ ಇದ್ದರೆ, ಇಲ್ಲವಾದರೆ ತುಂಬಿದ ಕೊಡಕ್ಕೆ ಕಲ್ಲು ತಾಕುತ್ತಿದ್ದಂತೆ ನೀರೆಲ್ಲವೂ ಚೆಲ್ಲಿ ಕಣ್ಣಿಗೆ ಕಾಣದಂತಾಗುವಂತೆ ಐಶ್ವರ್ಯವೂ ಅಷ್ಟೆ,

ಮರಕ್ಕೆ ಬಾಯಿ ಬೇರೆಂದು
ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದಬಾಯಿ ಜಂಗಮವೆಂದು
ಪಡಿಪದಾರ್ಥವ ನೀಡಿದರೆ ಮುಂದೆ ಸಕಲಾರ್ಥವನೀವನು.

ಲಿಂಗಕ್ಕೆ ಜಂಗಮವೇ ಬಾಯಿ. ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸುವುದು ಸತ್ಯ. ಜಂಗಮತೃಪ್ತಿ ಲಿಂಗತೃಪ್ತಿ. ಹೀಗೆ ತಾನು ದುಡಿದ ಐಶ್ವರ್ಯವೆಲ್ಲ ಜಂಗಮಕ್ಕೆ ಅರ್ಪಿತವಾಗಬೇಕು. ಹೀಗೆ ತನು ಮನ ಧನಗಳನ್ನು ಗುರು. ಲಿಂಗ, ಜಂಗಮಕ್ಕೆ ಸರ್ವಸಮರ್ಪಣ ಮಾಡಬೇಕು.

ಅಯ್ಯ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನು-ಮನ–ಧನವಲಸದಂತೆ ಮಾಡಯ್ಯ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಹಂತೆ ಮಾಡು

ಧನ ದಾಸೋಹಕ್ಕೆ ಸವೆದಂ
ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ
ಆಡಿ, ಪಾಡಿ, ನೋಡಿ, ಕೂಡಿ
ಭಾವಿಸಿ, ಸುಖಿಸಿ, ಪರಿಣಮಿಸುವಂತೆ ಮಾಡು
ಕೂಡಲ ಸಂಗಮದೇವ

ಅತ್ಯಂತ ಆನಂದದಿಂದ ಮಾಡಬೇಕು. ಇಲ್ಲಿ ಮಾಡಬೇಕಲ್ಲ ಎಂದು ಜುಗುಪ್ಸೆಯಿಂದ ಮಾಡುವಂತಹುದಲ್ಲ. ಒಂದೊಂದು ಕ್ರಿಯೆಂ ಮಾಡುವಾಗಲೂ ಉಬ್ಬಿ ಆತ್ಮತೃಪ್ತಿಯಿಂದ ಮಾಡಬೇಕು.

ಈ ದಾಸೋಹದಿಂದ—

ದಾಸೋಹವೆಂಬ ಸೋಹೆಗೊಂಡು ಹೋಗಿ
ಗುರುವ ಕಂಡೆ, ಲಿಂಗವ ಕಂಡೆ
ಜಂಗಮವ ಕಂಡೆ ಪ್ರಸಾದವ ಕಂಡೆ
ಇಂತೀ ಚತುರ್ವಿಧ ಸಂಪನ್ನನಾದೆ ಕಾಣಾ
ಕೂಡಲಸಂಗಮದೇವ

ಎಂದಂ ತೃಪ್ತಿಗೊಂಡ ಸಾಧಕನ ಅಂತಿಮ ಬಯಕೆ

ಜನ್ಮ ಜನ್ಮಕ್ಕೆ ಹೋಗಲೀಯದೆ
''ಸೋಹಂ'' ಎಂದೆನಿಸದೆ, ''ದಾಸೋಹಂ'' ಎಂದೆನಿಸಯ್ಯ
ಲಿಂಗ ಜಂಗಮದ ಪ್ರಸಾದವ ತೋರಿ
ಬದುಕಿಸಯ್ಯ ಕೂಡಲಸಂಗಮದೇವ.

ಇದು ಶರಣರು ಸೂತ್ರಿಸಿರುವ ದಾಸೋಹಮಾರ್ಗ. ನಾನೇ ಶಿವನು ಎನ್ನುವುದಕ್ಕಿಂತ ನಾನಂ ದಾಸ ಎನ್ನುವುದು ಶರಣರಿಗೆ ಶ್ರೇಷ್ಠ. ಶರಣರ ಈ ದಾಸೋಹ ಆಧ್ಯಾತ್ಮ ಲೋಕಕ್ಕೆ ಕೊಟ್ಟ ವಿನೂತನ ಕೊಡುಗೆ.

ಗ್ರಂಥಋಣ :

1) ವಚನಗಳಲ್ಲಿ ವೀರಶೈವಧರ್ಮ
2) ಶರಣರ ಅನುಭಾವ ಸಾಹಿತ್ಯ

0—0

ಈ ಶತಮಾನದಲ್ಲಿ ಪ್ರಕಟವಾಗಿರುವ "ವೀರಶೈವ ಧರ್ಮದ ವಿಶಿಷ್ಟ ಕೃತಿಗಳು"

ವಿದ್ವಾನ್ ಎಂ. ಶಿವಕುಮಾರಸ್ವಾಮಿ ಎಂ. ಎ.

ಯಾವುದೇ ಧರ್ಮವನ್ನು ಒಳಗಣ್ಣಿನಿಂದ ಕಂಡು ಅರಿತು ಆಚರಿಸಿ ಲೋಕದಲ್ಲಿ ಪ್ರಚಾರಮಾಡುವ ಅನುಭಾವಿಗಳು ಅವರ ಕಾಲದಲ್ಲಿ ಮಾತ್ರ ಜನರ ಮೇಲೆ ಸಾಕ್ಷಾತ್ತಾಗಿ ಪ್ರಭಾವವನ್ನು ಬೀರಲು ಸಾಧ್ಯ. ಅವರು ಗತಿಸಿದ ಮೇಲೆ ಮುಂದಿನ ಪೀಳಿಗೆಗಳು ಆ ಧರ್ಮದ ವಿಷಯದಲ್ಲಿ ತಿಳಿಯಲು ಇರುವ ಏಕೈಕ ಸಾಧನ ಆ ಅನುಭಾವಿಗಳಿಂದ ರಚಿತವಾದ ಸಾಹಿತ್ಯ ಮಾತ್ರ. ಇದೊಂದೇ ಪರಿವರ್ತನಶೀಲವಾದ ಜಗತ್ತಿನಲ್ಲಿ ಬಹುಕಾಲ ಶಾಶ್ವತವಾಗಿ ಉಳಿಯಬಲ್ಲ, ಕಾಲಾನುಕ್ರಮದಲ್ಲಿ ಬೆಳೆಯಬಲ್ಲ ಧರ್ಮದ ಆಧಾರ. ಬುದ್ಧ, ಕ್ರಿಸ್ತ, ಬಸವ ಮುಂತಾದ ಮಹಾಚೇತನಗಳು ಆಡಿದ ಮಾತುಗಳು ಇಂದಿಗೂ ಜಗತ್ತಿನಲ್ಲಿ ಉಳಿದಿವೆ. ಉಳಿದೆಲ್ಲಾ ಸಾಮ್ರಾಜ್ಯಗಳು, ಸಾಧನೆಗಳು, ಕಗ್ಗಲ್ಲಿನಲ್ಲಿ ಕಡೆದ ಶಿಲ್ಪಗಳೂ ಸಹ ಮಣ್ಣುಗೂಡಿದ್ದರೂ ಸಾಹಿತ್ಯ ನಿತ್ಯವಾಗಿದೆ. ಮುಂದಿನ ಕಾಲದ ಭಾಷೆಗಳಲ್ಲೂ ಹೊಸರೂಪದಿಂದ ಮತ್ತೆ ಹುಟ್ಟು ಪಡೆದು ವಿಶಾಲವಾಗುತ್ತಾ ಸಾಗಿದೆ. ಆ ಸಾಹಿತ್ಯವೇ ನಮಗೆ ಬೆಳಕು ತೋರುವ ದೀವಿಗೆ. ದಂಡಿಯು ಹೇಳುವಂತೆ—

> ಇದಮಂಧಂತಮಃ ಕೃತ್ಸ್ನಂ ಜಾಯೇತ ಭುವನತ್ರಯಂ ।
> ಯದಿ ಶಬ್ದಾಹ್ವಯಂ ಜ್ಯೋತಿಃ ಆಸಂಸಾರಂ ನ ದೀಪ್ಯತೇ ॥

ವಚನಸಾಹಿತ್ಯದಲ್ಲಿ ನಿತ್ಯತ್ವವನ್ನು ಪಡೆದ 'ವೀರಶೈವಧರ್ಮ' ಪ್ರತಿ ಶತಮಾನದಲ್ಲೂ ಸಾಮಾಜಿಕ ಕಳಕಳಿಯಿಂದ, ಸಮಾಜದ ಎಲ್ಲ ವರ್ಗಗಳ ಬಗೆಗೆ ಅದಕ್ಕಿದ್ದ ಕಾಳಜಿಯಿಂದ ನೂತನ ಗ್ರಂಥಗಳ ಆವಿರ್ಭಾವವನ್ನು ಸ್ವಾಗತಿಸಿದುದು ಸ್ವಾಭಾವಿಕವಾಗಿದೆ. ಚಿಂತನ ಮಂಥನಗಳಿಂದ, ಸಂತರ ಅನುಭವ–ಅನುಭಾವಗಳಿಂದ ಕವಿಗಳ ರಸೋತ್ಕರ್ಷ ಪ್ರಧಾನವಾದ ಭಕ್ತಿ-ಭಾವದಿಂದ ನೂರಾರು ಕೃತಿಗಳು ಈ ಧರ್ಮದ ತತ್ತ್ವಗಳ ಕಣಜಗಳಾಗಿ ಕಾಲ-ಕಾಲದಲ್ಲಿ ಕಂಗೊಳಿಸಿವೆ. ಇಪ್ಪತ್ತನೆಯ ಶತಮಾನ ವೈಜ್ಞಾನಿಕ ಆವಿಷ್ಕಾರಗಳ ಯುಗವಾದುದರಿಂದ ಉಳಿದೆಲ್ಲ ಶತಮಾನಗಳಿಗಿಂತ ವಿಶಿಷ್ಟವಾದುದು. ಲೋಕದ ಜ್ಞಾನ ರಾಶಿಯನ್ನು ವೀಕ್ಷಿಸಿದರೆ, ಪ್ರಾಯಶಃ ಈ ಶತಮಾನದ ಎಂಭತ್ತೈದು ವರ್ಷಗಳಲ್ಲಿ ಸಾಧಿಸಿರುವ ಸಾಧನೆ ಅದ್ಭುತವಾಗಿದೆ. ಆದ್ದರಿಂದ ಈ ಶತಮಾನದಲ್ಲಿ 'ವೀರಶೈವ

ಧರ್ಮ'ದ ಏಳಿಗೆಗೆ, ಅರಿವಿಗೆ, ವಿಕಾಸಕ್ಕೆ ಹೊಸದಾಗಿ ಸೇರಿರುವ ಕಾಣಿಕೆ ಏನು ? ಎಷ್ಟರಮಟ್ಟಿಗೆ ಮುಂದೋಡುತ್ತಿರುವ ಜಗತ್ತಿನ ವೇಗಕ್ಕೆ ಸರಿಯಾಗಿ ಈ ಧರ್ಮವು ಮೈಕೊಡವಿಕೊಂಡು ಎದ್ದುನಿಂತು ಭರದಿಂದ ಸಾಗುತ್ತಿದೆ? ಎಷ್ಟು ಗ್ರಂಥಗಳು ಈ ಕಾಲದಲ್ಲಿ ಹೊಸದಾಗಿ ಮೂಡಿಬಂದಿವೆ ? ಇವುಗಳಲ್ಲಿ ಸ್ವೋಪಜ್ಞ (original) ವಾದ ಮೂಲಭೂತ ಕೃತಿಗಳೆಷ್ಟು ? ವಿವರಣಾತ್ಮಕವಾದ ಗ್ರಂಥಗಳು ಯಾವುವು ? ವಿಮರ್ಶಾ ಕ್ಷೇತ್ರಕ್ಕೆ, ವಿಚಾರದ ಒರೆಗಲ್ಲಿಗೆ, ತರ್ಕವಾದದ ನಿಕಷಕ್ಕೆ ಉಜ್ಜಿದಾಗಲೂ ಚೊಕ್ಕ ಚಿನ್ನವಾಗಿ ನಿಲ್ಲಬಲ್ಲ ಕೃತಿಗಳು ಎಷ್ಟಿವೆ ? ಈ ಬಗೆಗೆ ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ನಿರ್ದುಷ್ಟಪರಿಯಲ್ಲಿ ಪರೀಕ್ಷಿಸುವುದು ಅತ್ಯವಶ್ಯ. ಈ ದೃಷ್ಟಿಯಿಂದ ಈ ಲೇಖಕನ ದೃಷ್ಟಿಗೆ ಗೋಚರವಾದ ಕೆಲವು ಕೃತಿಗಳನ್ನು ಹೆಸರಿಸಲು ಈ ಪುಟ್ಟ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ನನ್ನ ಗಮನಕ್ಕೆ ಬಂದಿರುವ ಗ್ರಂಥಗಳನ್ನು ಹೆಸರಿಸಲು ಇಲ್ಲಿ ಪ್ರಯತ್ನ ಮಾಡಲಾಗಿದೆಯೇ ಹೊರತು ಸಮಗ್ರ ವಿವೇಚನೆಯನ್ನು ಇಲ್ಲಿ ಕೈಗೊಂಡಿಲ್ಲ. ಇನ್ನೂ ಅನೇಕ ಉತ್ತಮ ಗ್ರಂಥಗಳು ಇವೆ ಎನ್ನುವ ಅರಿವು ಲೇಖಕನಿಗಿದೆ.

'ವೀರಶೈವಧರ್ಮ'ವು ವಚನಶಾಸ್ತ್ರವನ್ನೂ, ಆಗಮಂಗಳನ್ನೂ, ತದನುಗುಣವಾದ ವೇದ ವೇದಾಂತಾದಿ ಭಾಗಗಳನ್ನೂ ಆಧಾರವಾಗಿಟ್ಟುಕೊಂಡಿರುವ ಧರ್ಮ. ಇಪ್ಪತ್ತನೆಯ ಶತಮಾನದಲ್ಲಿ ಹೊರಬಂದಿರುವ ಗ್ರಂಥಗಳನ್ನು 1) ಪ್ರಾಚೀನ ಆಗಮಾದಿ ಸಂಸ್ಕೃತ ಗ್ರಂಥಗಳ ವಿವರಣರೂಪವಾದವು ; 2) ವಚನಗಳ ಸಂಪಾದನಾ ಮತ್ತು ಅರ್ಥವಿವರಣಾ ರೂಪದಾದವು ; 3) ವಚನಗಳ ಆಧಾರದ ಮೇಲೆ ಬಸವಾದಿ ಪ್ರಮಥರ ಇತಿಹಾಸಗಳನ್ನು ಅವಲಂಬಿಸಿ ರಚಿತವಾದ ಮೌಲಿಕ ಕೃತಿಗಳು ಮತ್ತು 4) ವಿಮರ್ಶಾತ್ಮಕ ಕೃತಿಗಳು ಎಂಬುದಾಗಿ ವಿಂಗಡನೆಮಾಡಿಕೊಳ್ಳಬಹುದು.

ಪ್ರಾಚೀನ ಆಗಮಾದಿ ಸಂಸ್ಕೃತ ಗ್ರಂಥಗಳ ವಿವರಣರೂಪವಾದವು

ಈ ಗ್ರಂಥಗಳಲ್ಲಿ ಶ್ರೀಯುತ ಅಣ್ಣಾಜಪ್ಪನವರು ಈ ಶತಮಾನದ ಆದಿಭಾಗದಲ್ಲಿ ಸಂಪಾದಿಸಿ ಪ್ರಕಟಿಸಿದ 'ಅನಾದಿವೀರಶೈವಸಂಗ್ರಹ' ಉಲ್ಲೇಖನಾರ್ಹವಾಗಿದೆ. ಹಾಗೆಯೇ ಎಂ. ಆರ್. ಸಾಖರೆ ಅವರು ವಿಸ್ತಾರವಾದ ಭೂಮಿಕೆ ಮತ್ತು ಆಂಗ್ಲ ಅನುವಾದದೊಡನೆ ಪ್ರಕಟಿಸಿದ 'ಲಿಂಗಧಾರಣಚಂದ್ರಿಕೆ' ಒಂದು ಮೈಲಿಗಲ್ಲಿನಂತಿದೆ. ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ದೊಡ್ಡ ಹೆಸರಾದ ಶ್ರೀ ವೈ. ನಾಗೇಶಶಾಸ್ತ್ರಿಗಳು ಸಂಪಾದಿಸಿ ಕನ್ನಡ ಅನುವಾದದೊಡನೆ ಪ್ರಕಾಶಪಡಿಸಿದ ಮಾಯಿದೇವ ಕೃತ 'ಶಿವಾನುಭವ ಸೂತ್ರ', ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ. 'ಶಿವಾನುಭವ ಸೂತ್ರ'ವು ಈಚೆಗೆ ಸುಪರಿಷ್ಕಾರದೊಡನೆ ಡಾ॥ ಹೆಚ್. ಪಿ. ಮಲ್ಲೇದೇವರು ಅವರಿಂದ ಸಂಪಾದಿತವಾಗಿ ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನಾಲಯದಿಂದ ಪ್ರಕಟವಾಗಿರುವುದು ಗಮನಾರ್ಹ. ಹಿಂದೆ ಅಶುದ್ಧಿಭೂಯಿಷ್ಠವಾಗಿ ಪ್ರಕಾಶಗೊಂಡಿದ್ದ 'ಶ್ರೀಕರಭಾಷ್ಯ'ವೂ ಈಚೆಗೆ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರಿಂದ ಸಂಪಾದಿತವಾಗಿ ದೀರ್ಘ ಮುನ್ನುಡಿ ಮತ್ತು

ಟಿಪ್ಪಣಿಗಳೊಡನೆ ಇದೇ ಸಂಶೋಧನಾಲಯದಿಂದ ಪ್ರಕಟಗೊಂಡಿದೆ ಎಂಬುದು ಹರ್ಷದ ವಿಷಯ. ಅಲ್ಲಮಪ್ರಭುವಿನ ಲೀಲೆಗಳನ್ನು ವರ್ಣಿಸಿರುವ 'ಪ್ರಭುಲೀಲಾ' ಕಾವ್ಯವನ್ನು ಡಾ॥ ಜಿ. ಮರುಳಸಿದ್ಧಯ್ಯನವರು ಸಂಪಾದಿಸಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟಪಡಿಸಿದರು. ವಾತುಲಾಗಮ ಭಾಗ ೧ ಮತ್ತು ೨ನ್ನು, ಹದಿನೆಂಟು ಹಸ್ತಪ್ರತಿಗಳ ನೆರವಿನಿಂದ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಾಚ್ಯ ವಿದ್ಯಾಸಂಶೋಧನಾಲಯದಿಂದ ಡಾ॥ ಹೆಚ್. ಪಿ. ಮಲ್ಲೇದೇವರು ಪ್ರಕಟಿಸಿರುವುದು ಹರ್ಷದ ಸಂಗತಿ. ಈ ವಾತುಲಾಗಮದ ಕನ್ನಡ ಅನುವಾದವೂ ಕೂಡ ಮುದ್ರಣ ವಾಗಿದ್ದು ಇನ್ನೊಂದೆರಡು ತಿಂಗಳಲ್ಲಿ ಪ್ರಕಟವಾಗಲಿದೆ. ವೀರಾಗಮದ ಎರಡು ಭಾಗ ಗಳು ಕೂಡ ಸವಿಮರ್ಶಾತ್ಮಕವಾಗಿ ಸಂಪಾದಿಸಲ್ಪಟ್ಟು ಮುದ್ರಣಾಲಯದಲ್ಲಿವೆ. ಇಷ್ಟೊಂದು ಕೃತಿಗಳನ್ನು ಬೆಳಕಿಗೆ ತರುತ್ತಿರುವುದು ಡಾ॥ ಮಲ್ಲೇದೇವರು ಅವರ ಅಪೂರ್ವ ಕೊಡುಗೆ ಎಂದರೂ ತಪ್ಪಾಗಲಾರದು. ಇವೆಲ್ಲವೂ ಶ್ರೇಷ್ಠ ಕೃತಿಗಳೆಂಬುದ ರಲ್ಲಿ ಸಂದೇಹವಿಲ್ಲ.

2) ವಚನಗಳ ಸಂಪಾದನೆ ಮತ್ತು ಅರ್ಥವಿವರಣಾತ್ಮಕ ಗ್ರಂಥಗಳು :

ಈ ಪ್ರಕಾರದ ಗ್ರಂಥಗಳಲ್ಲಿ ಡಾ॥ ರಂಗನಾಥ ರಾಮಚಂದ್ರದಿವಾಕರ್‌ರವರು ರಚಿಸಿರುವ 'ವಚನ ಶಾಸ್ತ್ರರಹಸ್ಯ' ಪ್ರಥಮ ಉಲ್ಲೇಖಕ್ಕೆ ಅರ್ಹವಾಗಿವೆ. ಹಾಗೆಯೇ ಡಾ॥ಪಿ. ಜಿ. ಹಳಕಟ್ಟಿ ಅವರು ಪ್ರಕಟಗೊಳಿಸಿದ ನಾಲ್ಕು ಭಾಗಗಳನ್ನುಳ್ಳ 'ವಚನಶಾಸ್ತ್ರ' ಹಾಗೂ 'ಸಂಗಮೇಶ್ವರ ವಚನಗಳು' 'ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ' 'ಶಿವಾನುಭವ ಸತ್ಯಮಾರ್ಗ' ಮುಂತಾದ ಗ್ರಂಥಗಳು ಪ್ರಶಂಸನೀಯವಾಗಿವೆ. ಹಾಗೆಯೇ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರ 'ವಚನಧರ್ಮಸಾರ', ಡಾ॥ ಆರ್. ಸಿ. ಹಿರೇಮಠ್‌ರವರ 'ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು' ಮೊದಲಾದವುಗಳು ಶ್ಲಾಘನೀಯವಾಗಿವೆ. ಶ್ರೀ ಭೂಸನೂರು ಮಠ್ ಅವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಅಪೂರ್ವ ಕೊಡುಗೆ 'ಶೂನ್ಯ ಸಂಪಾದನೆಯ ಪರಾಮರ್ಶೆ', ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರ 'ಸಿದ್ಧರಾಮನ ವಚನಗಳು' ಮತ್ತು 'ಅಮುಗಿ ದೇವಯ್ಯಗಳ ಸಾಂಗತ್ಯ' ಈ ದಿಸೆಯಲ್ಲಿ ಹೆಸರಿಸಬೇಕಾದ ಗ್ರಂಥಗಳು.

3) ವಚನಗಳನ್ನು ಅವಲಂಬಿಸಿ ರಚಿತವಾದ ಮೌಲಿಕ ಕೃತಿಗಳು :

ಮೌಲಿಕ ಕೃತಿಗಳೆಂದರೆ ಕರ್ತೃ ತನ್ನ ಪ್ರತಿಭಾ ಚಕ್ಷುಸ್ಸಿನಿಂದ ಅಂತರ್‌ದರ್ಶನ ಪಡೆದು ರಚಿಸಿದ ಹೊಸ ಕೃತಿಗಳು. ಆಧುನಿಕ ಕಾಲದಲ್ಲಿ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿ ಗಳ ಸಂಪರ್ಕದಿಂದ ಭಾರತೀಯಸಾಹಿತ್ಯ ನವಚೈತನ್ಯವನ್ನು ಪಡೆದು ಹೊಸದಾಗಿ ಗಳಿಸಿಕೊಂಡ ಒಂದು ಸಾಹಿತ್ಯ ಪ್ರಕಾರ ಕಾದಂಬರಿ. ಪೌರಾಣಿಕ, ಐತಿಹಾಸಿಕ, ಜಾನಪದ, ಸಾಮಾಜಿಕ. ರಾಜಕೀಯ ಮುಂತಾದ ಎಲ್ಲಾ ಕ್ಷೇತ್ರಗಳನ್ನು ಬಳಸಿ ಸರಳಗದ್ಯದಲ್ಲಿ ಆಡುನುಡಿಯಲ್ಲಿ ರಚಿತವಾಗುವ ಕಾದಂಬರಿ ಇಪ್ಪತ್ತನೆಯ ಶತಮಾನದ ಜನತೆಗೆ

ಹೃದಯಂಗಮವಾಗಿ ಎಲ್ಲಆಧುನಿಕ ಭಾಷೆಗಳಲ್ಲೂ ಹುಲುಸಾದ ಬೆಳೆಯನ್ನು ಕೊಡುತ್ತಿದೆ. ಕನ್ನಡಸಾಹಿತ್ಯದಲ್ಲಿ ವೀರಶೈವ ದಾರ್ಶನಿಕರ ಹಾಗೂ ಸಂತರ ಜೀವನ ಚರಿತ್ರೆಯನ್ನೂ ಇತಿಹಾಸವನ್ನೂ ತಮ್ಮದೇ ಆದ ಶೈಲಿಯಲ್ಲಿ ಅನೇಕ ಅತಿರಥಮಹಾರಥರು ಕಾದಂಬರಿಯ ರೂಪದಲ್ಲಿ ಸೃಜಿಸಿ ಕನ್ನಡಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ರೀತಿಯಾದ ಕೃತಿಗಳಲ್ಲಿ ಅಕ್ಕಮಹಾದೇವಿಯವರನ್ನು ಕುರಿತ ಮಾತೆ ಮಹಾದೇವಿಯವರ 'ತರಂಗಿಣಿ', ಡಾ॥ ಎಚ್. ತಿಪ್ಪೇರುದ್ರಸ್ವಾಮಿಗಳವರ 'ಪರಿಪೂರ್ಣದೆಡೆಗೆ', 'ಕದಳಿಯ ಕರ್ಪೂರ', 'ಜ್ಯೋತಿ ಬೆಳಗುತಿದೆ', 'ಕರ್ತಾರನಕಮ್ಮಟ', 'ವಚನವಿರೂಪಾಕ್ಷ' 'ಜಡದಲ್ಲಿ ಜಂಗಮ' ವಿಶಿಷ್ಟಸ್ಥಾನವನ್ನು ಗಳಿಸಿರುವುದು ಗಮನಾರ್ಹವಾಗಿದೆ. ಇದೇ ಲೇಖಕರ ನಾಟಕ ಸಂಗ್ರಹ, ಶರಣರ ಮೂರು ನಾಟಕಗಳು ಎಂಬುದನ್ನೂ ಇಲ್ಲಿ ಉಲ್ಲೇಖಿಸಬಹುದು. ಡಾ॥ ಸಿದ್ದಯ್ಯಪುರಾಣಿಕ ಅವರ 'ಶರಣಚರಿತಾಮೃತ' ಒಳ್ಳೆಯ ಕೃತಿ. ಇವು ಇಂದಿನ ಕನ್ನಡಸಾಹಿತ್ಯದಲ್ಲಿ ಎದ್ದು ಕಾಣುವ ವೀರಶೈವ ಐತಿಹಾಸಿಕ ವಸ್ತುವನ್ನಾಧರಿಸಿದ ಮೌಲಿಕ ಕೃತಿಗಳು.

4) ವಿಮರ್ಶಾತ್ಮಕ ಕೃತಿಗಳು :

ಯಾವುದೇ ಸಾಹಿತ್ಯವನ್ನು, ಯಾವುದೇ ಕಲಾಕೃತಿಯನ್ನು ಬೆಲೆಗಟ್ಟುವಾಗ, ವಿಮರ್ಶಿಸುವಾಗ, ಅದರಲ್ಲಿ ಮಮತ್ವಬುದ್ಧಿ ದೂರವಿರಬೇಕು. ವಿಮರ್ಶೆ ವಸ್ತುನಿಷ್ಠವೂ ಗುಣನಿಷ್ಠವೂ ಆಗಿರಬೇಕು. ವೀರಶೈವಧರ್ಮವು ಎಷ್ಟೇ ಪ್ರಾಚೀನವಾಗಿದ್ದರೂ, ಎಷ್ಟೇ ವಿಶಾಲಭಾವನೆಯನ್ನು ಹೊಂದಿದ್ದರೂ ಅದು ಜಗತ್ತಿನ ಎಲ್ಲಾ ಮಹಾಧರ್ಮಗಳ ಸಾಲಿನಲ್ಲಿ ನಿಲ್ಲುವಾಗ ಅದರ ಹಿರಿಮೆ-ಗರಿಮೆಗಳೇನು ? ಎಂದು ನಿಷ್ಪಕ್ಷಪಾತ ದೃಷ್ಟಿಯಿಂದ ಅವಲೋಕಿಸಿ ಅದನ್ನು ತೂಗಬೇಕು. ದಾರ್ಶನಿಕ ದೃಷ್ಟಿಯಿಂದ ವೀರಶೈವ ಧರ್ಮದ ಮೂಲತತ್ತ್ವಗಳು ತೀಕ್ಷ್ಣವಾದ ತರ್ಕದ ಪರೀಕ್ಷೆಗೆ ಒಳಪಟ್ಟ ನಂತರ ಎಷ್ಟರಮಟ್ಟಿಗೆ ಸ್ಥಿರವಾಗಿ ನಿಲ್ಲುವುದೆಂದು ಅವಲೋಕಿಸಬೇಕು. ವಚನ ಸಾಹಿತ್ಯ ಹಾಗೂ ವೀರಶೈವ ಕವಿಗಳ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿನ ಕೃಷಿ ಎಷ್ಟು ಮಟ್ಟಿಗೆ ಫಲವತ್ತಾಗಿದೆ ? ಜಗತ್ತಿನ ಮಹಾ ಸಾಹಿತ್ಯಗಳೊಡನೆ ಹೋಲಿಸಿದಾಗ ಇದರ ನಿಲುವು ಯಾವ ಎತ್ತರದ್ದು ? ಎಂದೂ ನೋಡಬೇಕು. ಸುದೈವದಿಂದ ಈ ರೀತಿಯಾದ ವಿಮರ್ಶನಾಕಾರ್ಯ ಇಪ್ಪತ್ತನೇ ಶತಮಾನದಲ್ಲಿ ಹುಲುಸಾಗಿ ಕ್ರಮಬದ್ಧವಾಗಿ ನಡೆದಿದೆ. ನಡೆಯುತ್ತಿದೆ. ಅನೇಕಜನವಿದ್ವಾಂಸರು ಅನೇಕ ಆಧುನಿಕ ಭಾರತೀಯ ಭಾಷೆಗಳ ಹಾಗೂ ಹಲವಾರು ಪಾಶ್ಚಾತ್ಯ ಭಾಷೆಗಳ ಸಾಹಿತ್ಯವನ್ನು ಮನದಟ್ಟುಮಾಡಿಕೊಂಡು ಸಮದೃಷ್ಟಿಯಿಂದ ವಚನಸಾಹಿತ್ಯವನ್ನು, ವೀರಶೈವ ದಾರ್ಶನಿಕ ಗ್ರಂಥಗಳನ್ನು ಹಾಗೂ ವೀರಶೈವಕವಿಗಳ ಮಹಾಕೃತಿಗಳನ್ನು ತೌಲನಿಕ ದೃಷ್ಟಿಯಿಂದ ಅಭ್ಯಾಸ ಮಾಡಿದ್ದಾರೆ. 'ಹೇಮ್ನಃ ಸಂಲಕ್ಷ್ಯತೇ ಹ್ಯಗ್ನೌ ವಿಶುದ್ಧಿಃ ಶ್ಯಾಮಿಕಾಽಪಿ ವಾ'—ಬೆಂಕಿಯಲ್ಲಿ ಬಿದ್ದು ಕರಗಿದಾಗ ತಾನೆ ಚಿನ್ನದ ಶುದ್ಧತೆ

ತಿಳಿದು ಬರುವುದು ! ಹಾಗೆ ವಿಮರ್ಶೆಯ ಮೂಸೆಯಲ್ಲಿ ಪುಟವಿಟ್ಟ ಚಿನ್ನದಂತೆ ವೀರಶೈವಧರ್ಮ ಮತ್ತು ಸಾಹಿತ್ಯಗಳು ಹೊರಬಂದಿವೆ. ಕೇವಲ ಭಾರತೀಯರಷ್ಟೇ ಅಲ್ಲ, ವಿದೇಶೀಯರೂ ಕೂಡ ವಚನಸಾಹಿತ್ಯದ ಸೌಂದರ್ಯ, ನಾವೀನ್ಯ ಮತ್ತು ಮೌಲಿಕತೆಗಳಿಂದ ಪರವಶರಾಗಿ ತಮ್ಮ ಭಾಷೆಗಳಿಗೂ ಅವನ್ನು ಅನುವಾದಿಸುವ ಯತ್ನ ಮಾಡಿದ್ದಾರೆ. ಈ ರೀತಿಯಾದ ವಿಮರ್ಶಾತ್ಮಕ ಕೃತಿಗಳಲ್ಲಿ ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರ 'ಶರಣರ ಅನುಭಾವಸಾಹಿತ್ಯ' 'ಶೂನ್ಯ ಸಂಪಾದನೆ—ವಿವರಣಾತ್ಮಕ ಪರಿಚಯ' 'ಕನ್ನಡದಲ್ಲಿ ಅನುಭಾವ ಸಾಹಿತ್ಯ', 'ವಚನಗಳಲ್ಲಿ ವೀರಶೈವಧರ್ಮ', 'ಕರ್ನಾಟಕ ಶರಣ ಕಥಾಮೃತ', ಇತ್ಯಾದಿ ಅನೇಕಕೃತಿಗಳನ್ನು ಹೆಸರಿಸಬಹುದಾಗಿದೆ. ಡಾ॥ ಎಸ್. ಸಿ. ನಂದೀಮಠರವರ A Handbook of Veerasaivism, ಡಾ॥ ಹೆಚ್. ಪಿ ಮಲ್ಲೇದೇವರು ಅವರ Essentials of Veerasaivism ಎಂಬೀ ಕೃತಿಗಳನ್ನೂ ಈ ದಿಸೆಯಲ್ಲಿ ಹೆಸರಿಸಬಹುದಾಗಿದೆ.

ಈ ನಿಟ್ಟಿನಲ್ಲಿ ಬೃಹತ್ತು ಮತ್ತು ಮಹತ್ತಿನ ಸಾಹಿತ್ಯ ಕೈಂಕರ್ಯ ನಡೆಸಿರುವ ಸುಮಾರು ೩೦೦ಕ್ಕೂ ಹೆಚ್ಚು ಕೃತಿಗಳನ್ನು ಕೊಟ್ಟಿರುವ ಪೂಜ್ಯ ಜ. ಚ. ನಿ. ಯವರ ಕೊಡುಗೆ ನಿಜಕ್ಕೂ ಉಪಮಾತೀತವಾದದ್ದು. ಹಳಗನ್ನಡದ ಬಿಂಕ, ನಡುಗನ್ನಡದ ನಡೆ, ಹಾಗೂ ಹೊಸಗನ್ನಡದ ಕಸುವನ್ನು ಮೈವೆತ್ತು ಪದ್ಯಗಂಧಿಯಾಗಿ ಮನಸೆಳೆಯುವ ಗದ್ಯ ಕನ್ನಡಸಾಹಿತ್ಯಕ್ಕೆ ಹೊಸ ತಿರುವನ್ನೇ ಕೊಟ್ಟಿದೆ. ಇವರ ಒಂದೊಂದು ಕೃತಿಯೂ—ಮೌಲಿಕವೂ, ವಿಮರ್ಶಾತ್ಮಕವೂ ಆಗಿದೆ. ಅವುಗಳಲ್ಲಿನ ಭಾಷೆಯ ಸೊಂಪು-ಅರ್ಥದ ಪೆಂಪು-ಆಧ್ಯಾತ್ಮಿಕತೆಯಕಂಪು -ತತ್ವವಾರಿಯತಂಪು -ಶಬ್ದಾಲಂಕಾರಗಳ ಇಂಪು ಯಾರನ್ನು ತಾನೆ ಮೋಹಗೊಳಿಸದು ? ಅವರ ಕೃತಿಗಳ ಆಮೂಲಾಗ್ರ ಪರಿಶೀಲನೆ ಅಶಕ್ಯ. ವೀರಶೈವಜನತೆಗೆ ಇಪ್ಪತ್ತನೇ ಶತಮಾನ ಕೊಟ್ಟಿರುವ ಅಪೂರ್ವ ಕೊಡುಗೆ ಜ. ಚ. ನಿ. ಯವರ ಸಾಹಿತ್ಯ ಎಂದರೆ ತಪ್ಪಾಗಲಾರದು.

ಮನುಷ್ಯನ ನಿರಂತರ ಹೋರಾಟದ ಗುರಿ ನಿತ್ಯವಾದ ಆನಂದದ ಅನ್ವೇಷಣೆ. ಉಪನಿಷತ್ತಿನ ಋಷಿಗಳು ಘೋಷಿಸಿದಂತೆ 'ಯೋ ವೈ ಭೂಮಾ ತತ್ಸುಖಂ. ನಾಲ್ಪೇ ಸುಖಮಸ್ತಿ' ಎಂಬಂತೆ ಪರಿಪೂರ್ಣದೆಡೆಗೆ ಸಾಗುವುದೇ ಮಾನವ ಜೀವನದ ಗುರಿ. ಇದಕ್ಕೆ ಅಡ್ಡಿಯಾಗಿರುವ ಜಾತಿ ಮತ, ಮೇಲು ಕೀಳು, ಗಂಡು ಹೆಣ್ಣು ಮೊದಲಾದ ದುರ್ಭಾವನೆಗಳನ್ನು ಕಿತ್ತೊಗೆದು 'ಒಳಗೆ ಸುಳಿವ ಆತ್ಮ ಒಂದೇ', 'ಮನುಷ್ಯಜಾತಿ ತಾನೊಂದೆ ವಲಂ' ಎಂಬ ತತ್ತ್ವದ ಆಧಾರದಮೇಲೆ ಮಾನವತೆಯ 'ತನವನ್ನು' ಸಾರುವ ಉದ್ದೇಶದಿಂದ ಬಸವಾದಿ ಶರಣರು ವೀರಶೈವಧರ್ಮವನ್ನು ಪ್ರಚುರಪಡಿಸಿದರು. ತಮ್ಮ ಅನುಭವ ಅನುಭಾವಗಳನ್ನು ತಮ್ಮ ಸಾಹಿತ್ಯದಲ್ಲಿ ಶಾಶ್ವತಗೊಳಿಸಿದರು. ಊರ್ಧ್ವಗಾಮಿ ಚೇತನಗಳ ಅರ್ಥವತ್ತಾದ ಅನುಭಾವವನ್ನು ಮೈಗೂಡಿಸಿಕೊಂಡಿರುವ ವೀರಶೈವಸಾಹಿತ್ಯದ ಪುನರುದಯವು ಇಪ್ಪತ್ತನೇ ಶತಮಾನದಲ್ಲಿ ನಾನಾ ರೂಪಗಳಿಂದ ಪ್ರಕಾಶಗೊಳ್ಳುತ್ತಿದೆ. ಈ ಸಾಹಿತ್ಯದ ಎಲ್ಲಾ ಕೃತಿರತ್ನಗಳನ್ನೂ ಸಾಣೆ ಹಿಡಿಯುವ

ಕಾರ್ಯವನ್ನು ಪುಟ್ಟ ಲೇಖನದಲ್ಲಿ ಮಾಡುವುದು ಸಾಧ್ಯವಿಲ್ಲದ ಮಾತು. ಅವುಗಳಲ್ಲಿ ಕೆಲವನ್ನಾದರೂ ಬಲ್ಲ ಓದುಗರ ದೃಷ್ಟಿಗೆ ತರುವುದು ಮಾತ್ರ ಈ ಲೇಖನದ ಉದ್ದೇಶ. ಓದುಗರ ಗಮನ ಈ ಉತ್ತಮ ಅನರ್ಘ್ಯ ಕೃತಿಗಳ ಕಡೆಗೆ ಹೊರಳಿದರೆ ಲೇಖಕನ ಶ್ರಮ ಸಾರ್ಥಕ.

"ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು,
ತತ್ವ ಘಟಿಸಿದ ಸುಮುಹೂರ್ತದಲ್ಲಲ್ಲದೆ ;
ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ.
ಕೂಡಲಸಂಗಮದೇವರ ಒಲವಿನ ದಯದ
ಚಿತ್ತವಿಡಿದಂಗಲ್ಲದೆ ಶಿವತತ್ವ ಸಾಹಿತ್ಯವಾಗದು".

ವೀರಶೈವ ಧರ್ಮೀಯರು ಅಭ್ಯಸಿಸಬೇಕಾದ ಕೆಲವು ಉತ್ತಮ ಗ್ರಂಥಗಳು :

ವೀರಶೈವಧರ್ಮ	ಶ್ರೀ ಸಿದ್ರಾಮಪ್ಪ ಪಾವಟೆ
ಪಂಚಾಚಾರ್ಯ ಪ್ರಕಾಶಿಕೆ	ಪಂಡಿತ ವೈ. ನಾಗೇಶಶಾಸ್ತ್ರಿ
ವೀರಶೈವತತ್ವ ಪ್ರಕಾಶ	ಪ್ರೊ. ಸಿ. ಸಿ. ಬಸವನಾಳ
ವೀರಶೈವ ಸದಾಚಾರ ಸಂಗ್ರಹ	ಪ್ರೊ. ಬಸವರಾಜಶಾಸ್ತ್ರಿ
ಬಸವತತ್ವಪರಿಮಳ	ಶ್ರೀ ಮಲ್ಲಾಭಾವಿ ವೀರಭದ್ರಪ್ಪ
ಬಸವಣ್ಣನವರು ಮತ್ತು ಷಟ್‌ಸ್ಥಲದ ವಚನಗಳು	ಪ್ರೊ. ಸಿ. ಸಿ. ಬಸವನಾಳ
ಶಿವಾದ್ವೈತದರ್ಶನ	ಡಾ॥ ಜ. ಚ. ನಿ.
ಸಂಪಾದನೆಯಸೊಂಪು	
ವೀರಶೈವ ಸಾಹಿತ್ಯ ಮತ್ತು ಸಂಗ್ರಹ ಭಾಗ ೧-೨-೩	ಶ್ರೀ ಬಿ. ಶಿವಮೂರ್ತಿಶಾಸ್ತ್ರಿ
ಚಂದ್ರಾವತಿ	
ಚಂದ್ರಪ್ರಭಾ	
ಮಹಾದೇವಿ	
ಜೀವನಸಿದ್ಧಾಂತ ಮೊದಲಾದವು	ಡಾ॥ ಜ: ಚ. ನಿ.
ಬಸವರಾಜವಿಜಯ	
ಚನ್ನಬಸವೇಶವಿಜಯ	ಶ್ರೀ ಎನ್. ಆರ್. ಕರಿಬಸವಶಾಸ್ತ್ರಿ
ಬಸವಭಾಷೆ	
ಭಜನಾವಳಿ	ಹಾನಗಲ್ಲ ಕುಮಾರಸ್ವಾಮಿಗಳು
ಶ್ರೀ ಬಸವೇಶ್ವರಚರಿತ್ರೆ	ಹೊನ್ನಾಪುರ ಮಠ
ರಾಜಶೇಖರವಿಳಾಸ ಚಂದ್ರಿಕೆ	ಶ್ರೀ ದಕ್ಷಿಣಾಮೂರ್ತಿ ಶಾಸ್ತ್ರಿ

ಅಲ್ಲಮಪ್ರಭು	
ಪ್ರಭುದೇವ ಪುರಾಣ	ಶ್ರೀ ಬಿ. ಎಂ. ಪುರಾಣಿಕರು
ರಾಜಶೇಖರವಿಳಾಸ	ಬೇಗೂರು ಮಲ್ಲಪ್ಪನವರು
ಶಾಂತೇಶನ ಸಿದ್ಧೇಶ್ವರ ಪುರಾಣ	ಡಾ॥ ಬಿ. ನಂ. ಚಂದ್ರಯ್ಯ
ಮಾಣಿಕ್ಯದೀಪ್ತಿ	,, ,,
ಬಸವಪವಾಡ	,, ,,
ತೋಂಟದಸಿದ್ಧಲಿಂಗ ಶಿವಯೋಗಿ	,, ,,
ಸ್ವತಂತ್ರ ಸಿದ್ಧಲಿಂಗೇಶ್ವರರ ಕೃತಿಗಳು	ಡಾ॥ ಎಚ್. ಪಿ. ಮಲ್ಲೇದೇವರು
ಉರಿಲಿಂಗ ಪೆದ್ದಿಗಳ ವಚನಗಳು	
ಶೂನ್ಯ ಸಂಪಾದನೆಯನ್ನು ಕುರಿತು	ಡಾ॥ ಎಂ. ಚಿದಾನಂದಮೂರ್ತಿ
ಶಿವತತ್ವ ಚಿಂತಾಮಣಿ	ಶ್ರೀ ಎಚ್. ದೇವೀರಪ್ಪ
ಶೂನ್ಯ ಸಂಪಾದನೆ	,, ,,
ಶಿವದಾಸ ಗೀತಾಂಜಲಿ	ಡಾ॥ ಎಲ್. ಬಸವರಾಜು
ಶಾಸನಗಳಲ್ಲಿ ಶರಣರು	ಡಾ॥ ಎಂ. ಎಂ. ಕಲ್ಬುರ್ಗಿ
ಬಸವಣ್ಣ	ಡಾ॥ ಆರ್. ಸಿ. ಹಿರೇಮಠ್
ಚನ್ನಬಸವಣ್ಣ	,, ,,
ಭಗವಾನ್ ಬಸವೇಶ್ವರ	
ಶ್ರೀ ಸಿದ್ಧರಾಮೇಶ್ವರ	ಶ್ರೀ ಪುಟ್ಟರಾಜ ಕವಿ
ಪರಮಾನುಭವಬೋಧೆ	ಸಿದ್ಧಾರೂಢ ಸ್ವಾಮಿಗಳು
ಕೈವಲ್ಯಕಲ್ಪವಲ್ಲರಿ	
ಬಸವಣ್ಣನವರ ವಚನ ಸಂಗ್ರಹ	ಶ್ರೀಕಂಠಶಾಸ್ತ್ರಿ ಹಿರೇಮಠ್
ಜಾಣರದೇವ	ಶಾಂತಲಾ ಯೋಗೀಶ್

ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದಮಾಮ ।
ತಲ್ಲಣಿಸದೆ ನೀತಿಯಲ್ಲಿ ತಾನಿರಲಾರ್ಪುದೆ ಚಂದಮಾಮ ॥

ಶ್ರೀ ನಿಜಗುಣ ಶಿವಯೋಗಿಗಳು

o—o

'ವೀರಶೈವ ದರ್ಶನ ಮತ್ತು ಧರ್ಮ' ಒಂದು ಪಕ್ಷಿನೋಟ

ಡಾ. ಎಚ್. ಪಿ. ಮಲ್ಲೇದೇವರು.

ಭಾರತೀಯ ತಾತ್ತ್ವಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ವೀರಶೈವ ದರ್ಶನವು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಶೈವ ಧರ್ಮವೂ ಒಂದು, ಆದರೆ ಇದರ ಕಾಲವನ್ನು ನಿರ್ದಿಷ್ಟವಾಗಿ ಹೇಳಲಿಕ್ಕಾಗುವುದಿಲ್ಲ. ಶೈವಧರ್ಮವು ಶಿವನ ಪಾರಮ್ಯವನ್ನು ಪ್ರತಿಪಾದಿಸುತ್ತದೆ. ಭಾಷಾಶಾಸ್ತ್ರದ ರೀತ್ಯಾ ಆರ್ಯರು ಭಾರತಕ್ಕೆ ವಲಸೆ ಬಂದವರು. ಆರ್ಯರು ಈ ದೇಶಕ್ಕೆ ಬರುವ ಮುನ್ನವೇ ಪೂರ್ವನಿವಾಸಿಗಳಾಗಿದ್ದ ಭಾರತೀಯರ ಧರ್ಮ ಶೈವಧರ್ಮವೆಂದು ಮ್ಯಾಕ್ ನಿಕ್ಕಾಲರ ಅಭಿಪ್ರಾಯ.[1] ಋಗ್ವೇದ[2] ಯಜುರ್ವೇದ[3] ಮತ್ತು ಅಥರ್ವ ವೇದ[4]ಗಳಲ್ಲಿ ರುದ್ರ–ಶಿವನ ಉಲ್ಲೇಖವಿದೆ. ಶ್ವೇತಾಶ್ವತರ[5] ಮತ್ತಿತರ ಕೆಲವು ಉಪನಿಷತ್ತುಗಳು ಶಿವನ ಪಾರಮ್ಯವನ್ನು ಪ್ರತಿಪಾದಿಸುತ್ತವೆ.

ಹರಪ್ಪ ಮತ್ತು ಮೊಹೆಂಜೊದಾರೋಗಳ ಉತ್ಖನನಗಳಿಂದ ಲಭ್ಯವಾದ ಅವಶೇಷಗಳ ಆಧಾರದಿಂದ ಶೈವಧರ್ಮವು ಅಲ್ಲಿಯ ಜನರ ಪ್ರಮುಖ ಧರ್ಮವಾಗಿತ್ತೆಂದು ಸರ್ ಜಾನ್ ಮಾರ್ಷಲ್ ಮೊದಲಾದ ವಿದ್ವಾಂಸರ ಅಭಿಮತ.[6] ಪ್ರಾಯಶಃ ಈ ಶೈವಧರ್ಮದಿಂದಲೇ ಮುಖ್ಯವಾಗಿ ಕರ್ಣಾಟಕದಲ್ಲಿ ವೀರಶೈವಧರ್ಮ, ತಮಿಳುನಾಡಿನಲ್ಲಿ ಶೈವ ಸಿದ್ಧಾಂತ, ಕಾಶ್ಮೀರದಲ್ಲಿ ಶಿವಾದ್ವೈತ, ಗುಜರಾತಿನಲ್ಲಿ ಪಾಶುಪತ, ಬಂಗಾಳದಲ್ಲಿ ಶೈವಮಂತ ಮೊದಲಾದುವುಗಳು ಉದಯಿಸಿವೆಯೆಂದು ಹೇಳಬಹುದು.

---

1. Macnicol, Indian Theism. p.161, Oxford University Press 1915.

2 ಋಗ್ವೇದ I 88 ; I 16.9 II. 33, X. 92.9, X. 136.

3 ಯಜುರ್ವೇದ ತೈತ್ತಿರೀಯ ಸಂಹಿತಾ IV 5.1; VI 2.3
ಯಜುರ್ವೇದ ವಾಜಸನೇಯ ಸಂಹಿತಾ XVI 39

4 ಅಥರ್ವವೇದ IV 28 1, VI 1.9.

5 ಶ್ವೇ ಉ III 20.

6. Sir John morshall : Mohenjodaro and Indus civilization

ಸಂಪ್ರದಾಯದ ಪ್ರಕಾರ ರೇವಣಾರಾಧ್ಯ (ರೇಣುಕಾಚಾರ್ಯ), ಮರುಳಾರಾಧ್ಯ (ಮರುಳಸಿದ್ಧ) ; ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ–ಈ ಪಂಚಾಚಾರ್ಯರೇ ವೀರಶೈವಧರ್ಮದ ಸ್ಥಾಪಕರೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ ಈ ಪಂಚಾಚಾರ್ಯರೇ ವೀರಶೈವ ಧರ್ಮದ ಸ್ಥಾಪಕರೆಂಬುದಕ್ಕೆ ಪ್ರಮಾಣಪೂರ್ವಕವಾದ ಹಾಗೂ ಖಚಿತವಾದ ಆಧಾರಗಳು ಇನ್ನೂ ಲಭ್ಯವಾಗಬೇಕಾಗಿವೆ.

ಬಸವಪುರಾಣ ಮೊದಲಾದ ಕೃತಿಗಳು, ನಂದಿಯ ಅವತಾರವಾದ ಬಸವೇಶ್ವರನೇ ವೀರಶೈವ ಧರ್ಮದ ಸ್ಥಾಪಕ ಎಂಬುದಾಗಿ ತಿಳಿಸುತ್ತವೆ. ಪಾಲ್ಕುರಿಕೆ ಸೋಮನಾಥ, ಚಾಮರಸ, ಮೊದಲಾದ ಲೇಖಕರು ಬಸವಣ್ಣನವರೇ ವೀರಶೈವ ಧರ್ಮದ ಶ್ರೇಷ್ಠ ಪ್ರವರ್ತಕರೆಂದು ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ. ಒಟ್ಟಿನಲ್ಲಿ ನಿರ್ದಿಷ್ಟವಾದ ಸಾಕ್ಷ್ಯಗಳ ಅಭಾವದಿಂದಾಗಿ, ವೀರಶೈವಧರ್ಮದ ಸಂಸ್ಥಾಪಕರಾರು ? ಎಂಬುದನ್ನು ಖಚಿತವಾಗಿ ಸದ್ಯಕ್ಕೆ ಹೇಳಲಿಕ್ಕಾಗದು. ಆದರೆ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವರ ಕಾಲದಲ್ಲಿದ್ದಂತಹ ವೀರಶೈವಧರ್ಮವನ್ನು ಪುನರುಜ್ಜೀವನಗೊಳಿಸಿ ಅವಶ್ಯಕವಾದಂತಹ ಎಲ್ಲ ಅಂಶಗಳನ್ನಳವಡಿಸಿ ವೀರಶೈವಧರ್ಮವು ವಿಶ್ವಧರ್ಮವಾಗುವಂತಹ ಮಹೋನ್ನತ ಸ್ಥಿತಿಗೆ ತಂದರೆಂದು ಹೇಳಬಹುದು. ಈ ಧರ್ಮವನ್ನು ಶಕ್ತಿವಿಶಿಷ್ಟಾದ್ವೈತ, ಶಿವಾದ್ವೈತ, ಷಟ್‌ಸ್ಥಲ, ದ್ವೈತಾದ್ವೈತ, ಮೊದಲಾದ ಹೆಸರುಗಳಿಂದ ಕರೆಯಲಾಗಿದ್ದರೂ ವೀರಶೈವ ದರ್ಶನ ಹಾಗೂ ಧರ್ಮ ಎಂಬ ಹೆಸರೇ ಔಚಿತ್ಯಪೂರ್ಣವಾಗಿದೆ.

ಇಪ್ಪತ್ತೆಂಟು ಶೈವಾಗಮಗಳು[7] ಮತ್ತು ಇನ್ನೂರಿಪ್ಪತ್ತೈದು ಉಪಾಗಮಗಳು,[8] ಅಲ್ಲಮಪ್ರಭು, ಚೆನ್ನಬಸವಣ್ಣ, ಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ, ಲಿಂಗಮ್ಮ ಮುಂತಾದ ಅನುಭಾವಿಗಳ ವಚನಗಳು, ಹಾಗೂ ಶಿವಾಗ್ರಯೋಗಿ ಶಿವಾಚಾರ್ಯ, ನೀಲಕಂಠ ಶಿವಾಚಾರ್ಯ, ಮಗ್ಗೆಯ ಮಾಯಿದೇವ, ಮರಿತೋಂಟದಾರ್ಯ ಮುಂತಾದವರ ಕೃತಿಗಳು ವೀರಶೈವಧರ್ಮದ ಅತ್ಯಮೂಲ್ಯವಾದ ಆಧಾರಗ್ರಂಥಗಳೆಂದು ಹೇಳಬಹುದು.

---

7 ಕಾಮಿಕ. ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ. ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ. ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಸರ್ವೋತ್ತರ, ಪಾರಮೇಶ್ವರ, ಕಿರಣ ಮತ್ತು ವಾತುಲ.

8 ಇನ್ನೂರಿಪ್ಪತ್ತೈದು ಮಿಗಿಲಾಗಿ ಉಪಾಗಮಗಳಿವೆ. ವೀರಶೈವದಾರ್ಶನಿಕ ಗ್ರಂಥಗಳಲ್ಲಿ ಶಿವಧರ್ಮೋತ್ತರ, ವಿಜಯಭೈರವೀ, ವಾತುಲೋತ್ತರ, ನಿಶ್ವಾಸಕಾರಿಕಾ, ಮೊದಲಾದ ಉಪಾಗಮಗಳು ಹಲವೆಡೆ ಉಲ್ಲೇಖಿಸಲ್ಪಟ್ಟಿವೆ.

ದರ್ಶನದಲ್ಲಿ ಪ್ರಧಾನವಾಗಿ ವಿವೇಚಿಸಬೇಕಾದ ಅಂಶಗಳು ದೇವ ಜೀವ ಮತ್ತು ಜಗತ್ತು ಇತ್ಯಾದಿ.

ಪರಾತ್ಪರ ವಸ್ತು (ದೇವರು)

ವೀರಶೈವಧರ್ಮದಲ್ಲಿ ಪರಾತ್ಪರ ವಸ್ತುವೇ "ಲಿಂಗ"[9]. 'ಲೀ' ಮತ್ತು 'ಗಮ್' ಎಂಬೆರಡು ಧಾತುಗಳಿಂದ 'ಲಿಂಗ' ಶಬ್ದವು ನಿಷ್ಪನ್ನವಾಗಿದೆ. 'ಗಮ್', ಧಾತುವಿಗೆ 'ಸೇರು', 'ಉದ್ಭವಿಸುವಿಕೆ' ಎಂಬರ್ಥಗಳಿವೆ. ಅಂದರೆ ಯಾವುದರಿಂದ ಸೃಷ್ಟಿಯು ಆರಂಭವಾಗಿದೆಯೋ ಅರ್ಥಾತ್ ಯಾವುದು ಸೃಷ್ಟಿಗೆ ಮೂಲಕಾರಣವಾಗಿದೆಯೋ ಅದು. 'ಲೀ' ಧಾತುವಿಗೆ 'ಲೀನವಾಗುವಿಕೆ' (ಐಕ್ಯವಾಗುವಿಕೆ) ಎಂಬರ್ಥವಿದೆ. ಅಂದರೆ ಯಾವುದರಲ್ಲಿ ಎಲ್ಲ ವಸ್ತುಗಳೂ ಅಂತ್ಯದಲ್ಲಿ ಲೀನವಾಗುತ್ತವೋ ಅದು.

"ಲೀಯತೇ ಗಮ್ಯತೇ ಯಂತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವವಿಶಾರದೈಃ ॥[10]

ಬೇರೆ ಮಾತಿನಲ್ಲಿ ಹೇಳುವುದಾದರೆ ಲಿಂಗವು ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಮೂಲ ಕಾರಣ. ವೀರಶೈವ ಧರ್ಮದಲ್ಲಿ ಪರಾತ್ಪರ ವಸ್ತುವನ್ನು ಬಯಲು, ಸ್ಥಲ, ಶೂನ್ಯ, ನಿಷ್ಕಲಲಿಂಗ ಎಂದು ಕರೆಯಲಾಗಿದೆ. ಲಿಂಗವು ಅನುಭವಕ್ಕೆ ಮಾತ್ರ ವೇದ್ಯವಾಗಿ ಶಬ್ದಕ್ಕತೀತವಾದುದರಿಂದ 'ಬಯಲು'[11] ಎಂದು ಶರಣರು ಹೇಳಿದ್ದಾರೆ. ಅದು ಅನಿರ್ವಚನೀಯವೆನಿಸಿದ ಪರಬ್ರಹ್ಮನನ್ನು ವರ್ಣಿಸುವ ಉಪನಿಷದ್ದ್ರಷ್ಟಾರರ 'ನೇತಿ ನೇತಿ'[12] ಎಂಬ ಉಕ್ತಿಗೆ ಸರಿಸಮನಾಗಿದೆ. ಇಂತಹ ಭಾವನೆಯು ಪುರಾತನ ಕಾಲದಿಂದಲೂ

---

9 ಲಿಂಗವೆಂಬುದು ಸರ್ವಕಾರಣ ನಿರ್ಮಲ
ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ
ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಕಾರಣ
ಲಿಂಗವೆಂಬುದು ಸರ್ವತತ್ತ್ವಪುರಾಣ ಚೈತನ್ಯ
ಲಿಂಗವೆಂಬುದು ಜನ್ಮವಾರಿಧಿಯ ದಾಂಟಿಸುವ ಭೈತ್ರವು
ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯ ಲಿಂಗವು ಇಂತೀ ಲಿಂಗದ ಮರ್ಮವನರಿದವನೇ ಅರಿದವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.
ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು
ಸಂ. ಡಾ॥. ಎಚ್. ಪಿ. ಮಲ್ಲೇದೇವರು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ.

10 ಶಿವಾನುಭವಸೂತ್ರ ಅ. III ಶ್ಲೋಕ 3
ಸಂ ಡಾ. ಎಚ್. ಪಿ. ಮಲ್ಲೇದೇವರು
ಪ್ರಕಾಶನ : ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

11 ವಚನಶಾಸ್ತ್ರ ಭಾಗ I ಪೂರ್ವಾರ್ಧ ಪು. 7. ವ. 1. ಸಂ. ಡಾ। ಪಿ. ಜಿ. ಹಳಕಟ್ಟಿ ಬಿಜಾಪುರ 1931

12 ಬೃಹದಾರಣ್ಯಕೋಪನಿಷತ್ III 9. 26

ಭಾರತೀಯ ದಾರ್ಶನಿಕರಲ್ಲಿ ಬೆಳೆದು ಬಂದಿದೆ. ಛಾಂದೋಗ್ಯೋಪನಿಷತ್ತಿನ[13] "ತಜ್ಜಲಾನ್ ಇತಿ ಶಾಂತಉಪಾಸೀತ" ಎಂಬ ರಹಸ್ಯಸೂತ್ರದಲ್ಲಿ, ತೈತ್ತಿರೀಯೋಪನಿಷತ್ತಿನ[14] "ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ ಯತ್ಪ್ರಯಂತ್ಯಭಿಸಂವಿಶಂತಿ, ತದ್ವಿಜಿಜ್ಞಾಸಸ್ವ, ತದ್ಬ್ರಹ್ಮೇತಿ", ಎಂಬ ಮಂತ್ರದಲ್ಲಿ, ಸೂಕ್ಷ್ಮಾಗಮದ[15], ಹಾಗೂ ಚಂದ್ರಜ್ಞಾನಾಗಮದ[16]

> ಲಿ ಕಾರೋ ಲಯಬುದ್ಧಿಸ್ಥೋ ಬಿಂದುನಾ ಸ್ಥಿತಿರುಚ್ಯತೇ ।
> ಗ ಕಾರೋ ಸೃಷ್ಟಿರಿತ್ಯುಕ್ತಃ ಲಿಂಗಂ ಸೃಷ್ಟ್ಯಾದಿಕಾರಣಮ್ ॥

'ಲಿ' ಕಾರವೇ ಶೂನ್ಯ, ಬಿಂದುವೇ ಲೀಲೆ, "ಗ" ಕಾರವೇ ಚಿತ್, ಈ ತ್ರಿವಿಧದೊಳಗದೆ ಲಿಂಗವೆಂಬ ಸಕೀಲ.[17]–ಮೊದಲಾದುವುಗಳಲ್ಲಿ ಪರಾತ್ಪರ ವಸ್ತುವಿನ ಬಗೆಗೆ ಭಾರತೀಯ ದರ್ಶನಗಳ ಸಮಾನ ಚಿಂತನೆಯನ್ನು ಕಾಣಬಹುದು.

ಪರವಸ್ತುವು ಮಾತು ಮನಗಳಿಗೆ ಅತೀತವಾಗಿರುವುದರಿಂದ 'ಬಯಲು' ಎಂದೂ, ಭಾವಾತ್ಮಕ ಅಭಾವಾತ್ಮಕ ಗುಣಗಳಿಂದ ಅತೀತವಾಗಿರುವುದರಿಂದ ಅದನ್ನು ಶೂನ್ಯವೆಂದೂ, ಆಕಾರರಹಿತವಾಗಿ ವಾಙ್ಮನೋತೀತವಾಗಿರುವುದರಿಂದ ಅದನ್ನು ನಿಷ್ಕಲ ಲಿಂಗವೆಂದೂ, ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವುದರಿಂದ ಸ್ಥಲವೆಂದೂ-ಹೀಗೆ ಅನೇಕ ಅಭಿಧಾನಗಳಿಂದ ಆ ಪರಾತ್ಪರ ವಸ್ತುವೇ ಸಂಬೋಧಿಸಲ್ಪಟ್ಟಿದೆ.

ಸರ್ವಶೂನ್ಯ ನಿರಾಲಂಬ-ಪರವಸ್ತುವಿನ ಸ್ವಭಾವ ಸಿದ್ಧವಾದ ಸ್ಥಿತಿಯನ್ನು ಸರ್ವಶೂನ್ಯನಿರಾಲಂಬ ಎಂದು ಸಂಬೋಧಿಸಲಾಗಿದೆ. ಅದು ನಾಮರೂಪತತ್ತ್ವಾತೀತವಾಗಿ ಎಲ್ಲ ಭಾವಾತ್ಮಕ ಅಭಾವಾತ್ಮಕ ಗುಣಗಳಿಗೆ ಅತೀತವಾಗಿ, ನಾದ, ಬಿಂದು, ಕಲೆಗಳಿಗೆ ಅತೀತವಾಗಿ ಇದ್ದುದರಿಂದ ಈ ರೀತಿ ಕರೆಯಲಾಗಿದೆ.

> "ಆದಿ ಅನಾದಿ ಇಲ್ಲದಂದು ....
> ....
> ನೀನೊಬ್ಬನೇ ಇದ್ದೆಯಲ್ಲ ಗುಹೇಶ್ವರ ! ಇದ್ದೂ ಇಲ್ಲದಂತೆ !"

ಎಂಬ ವಚನದಲ್ಲಿ ಪರವಸ್ತುವಿನ ಸರ್ವಶೂನ್ಯ ನಿರಾಲಂಬ ಸ್ಥಿತಿಯನ್ನು ಅಲ್ಲಮ ಪ್ರಭುಗಳು ನಿರೂಪಿಸಿದ್ದಾರೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಇದೇ ಭಾವನೆ

---

13 ಛಾಂದೋಗ್ಯೋಪನಿಷತ್ III 14. 1. ಪು.45
14 ತೈತ್ತಿರೀಯೋಪನಿಷತ್ III 1. ಪು. 26
15 ಸೂಕ್ಷ್ಮಾಗಮ, ಕ್ರಿಯಾಪಾದ ಪಟಲ 6 ಶ್ಲೋ 5
16 ಚಂದ್ರಜ್ಞಾನಗಮ ಕ್ರಿಯಾಪಾದ ಪಟಲ 3 ಶ್ಲೋ 9
17 ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ವಚನ 810 ಪು. 384
ಸಂ. ಡಾ. ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ.

ಯನ್ನು ವ್ಯಕ್ತ ಮಾಡಿದ್ದಾರೆ. ಋಗ್ವೇದದಲ್ಲಿ ಬರುವ "ನಾಸದಾಸೀನ್ನೋ" ಎಂಬ ನಾಸದೀಯ ಸೂಕ್ತದಲ್ಲಿಯೂ[18] "ಯದಾ ತಮಸ್ತನ್ನದಿವಾ ನ ರಾತ್ರಿಃ ...." ಎಂಬ ಶ್ವೇತಾಶ್ವತರ ಉಪನಿಷತ್ತಿನ[19] ಉಕ್ತಿಯಲ್ಲಿಯೂ ಇದೇ ತೆರನಾದ ಸ್ವರೂಪ ವರ್ಣನೆಯನ್ನು ಕಾಣಬಹುದಾಗಿದೆ. ಪ್ರಾಯಶಃ ಬೃಹದಾರಣ್ಯಕೋಪನಿಷತ್ತಿನ[20] 'ನೇತಿ ನೇತಿ' ಎಂಬ ಮಂತ್ರವೂ ಇದನ್ನೇ ಸಮರ್ಥಿಸುತ್ತದೆ. ಶಂಕರಾಚಾರ್ಯರು ಪ್ರತಿಪಾದಿಸುವ 'ನಿರ್ಗುಣಬ್ರಹ್ಮ' ಶರಣರು ಪ್ರತಿಪಾದಿಸುವ 'ಸರ್ವಶೂನ್ಯನಿರಾಲಂಬ' ಇವು ತಾತ್ತ್ವಿಕವಾಗಿ ಒಂದೇ ಎಂದು ಹೇಳಬಹುದು.

ಸರ್ವಶೂನ್ಯನಿರಾಲಂಬ ಸ್ಥಿತಿಯ ಮುಂದಿನ ಹಂತವನ್ನು ತೋಂಟದ ಸಿದ್ಧಲಿಂಗೇಶ್ವರರು ಶೂನ್ಯಲಿಂಗ ಅಥವಾ ನಿಷ್ಕಲಲಿಂಗ ಎಂದು ಕರೆದಿದ್ದಾರೆ. ಈ ನಿಷ್ಕಲ ಲಿಂಗವು ನಿರಾಕಾರ, ಅಚಿಂತ್ಯ ಅದ್ವಿತೀಯ ಹಾಗೂ ಅನಿರ್ವಚನೀಯವಾದುದು. ಈ ಅಂಶಗಳನ್ನು ಶ್ವೇತಾಶ್ವತರ[21] ಯೋಗಶಿಖಾ[22] ಮತ್ತು ಆತ್ಮೋಪನಿಷತ್[23]ಗಳಲ್ಲಿ ಕೂಡ ಕಾಣಬಹುದು. ಇದನ್ನು ಗೂಳೂರ ಸಿದ್ಧವೀರಣ್ಣೊಡೆಯರು ಪ್ರಥಮದಲ್ಲಿ 'ಅಖಂಡ ಅದ್ವಯ, ಅನುಪಮ, ನಿರವಯ, ನಿರಂಜನ, ಸರ್ವಶೂನ್ಯವನ್ನೊಳಗೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಷ್ಕಲಲಿಂಗವು[24]........'ಎಂಬುದಾಗಿ ನಿಷ್ಕಲಲಿಂಗವನ್ನು ವರ್ಣಿಸಿದ್ದಾರೆ. ಪ್ರಾಯಶಃ ಈ ಸ್ಥಿತಿಯಲ್ಲಿ ಆ ಪರವಸ್ತುವಿಗೆ ನೆನಹು, ಚಿಂತಾ, ಇಚ್ಛಾ, ಮೂಡಿದ ನಂತರದ ಸ್ಥಿತಿಯೇ ಮಹಾಲಿಂಗ, ಪರಬ್ರಹ್ಮನಲ್ಲಿ ಅವಿನಾಭಾವದಿಂದ ಇದ್ದರೂ ಅವ್ಯಕ್ತವಾಗಿರುವ ಚಿಚ್ಛಕ್ತಿಯು ಈ ಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ವ್ಯಕ್ತವಾಗುತ್ತದೆ. ಈ ಮಹಾಲಿಂಗವೇ ಸೃಷ್ಟಿ, ಸ್ಥಿತಿ, ಲಯ ಮುಂತಾದವಕ್ಕೆ ಕಾರಣವಾಗಿ ಆಶ್ರಯವಾಗಿದೆ. ಲಿಂಗವು ಸಚ್ಚಿದಾನಂದ,[25] ನಿತ್ಯಪರಿಪೂರ್ಣ,[26] ಅಣುವಿಗಿಂತಲೂ ಅಣು.[27] ಮಹತ್ತಿಗಿಂತಲೂ ಮಹತ್,[28] ಅಚಿಂತ್ಯವೂ, ಅನಿರ್ವಚನೀಯವೂ ಆಗಿರುವ ಅದು ವಾಙ್ಮನೋತೀತ.[29]

---

18 ಋಗ್ವೇದ X 129. 1–2
19 ಶ್ವೇತಾಶ್ವತರ ಉಪನಿಷತ್ 1–9 ಪು. 121
20 ಬೃಹದಾರಣ್ಯಕೋಪನಿಷತ್ III-9–26
21 ಶ್ವೇತಾಶ್ವತರ ಉಪನಿಷತ್ VI 19. ಪು. 126
22 ಯೋಗಶಿಖೋಪನಿಷತ್ III 21 ಪು. 402
23 ಆತ್ಮೋಪನಿಷತ್. ಶ್ಲೋ 30. ಪು. 453
24 ಶೂನ್ಯ ಸಂಪಾದನೆ Vol. I ಪು. 48
25 ಸಿದ್ಧಾಂತಶಿಖಾಮಣಿ XII 41
26 ಸ್ವತಂತ್ರಸಿದ್ಧಲಿಂಗೇಶ್ವರನ ಕೃತಿಗಳು. ವ. 171 ಪು. 45
27 ಬಸವಣ್ಣನವರ ಷಟ್‌ಸ್ಥಲದ ವಚನಗಳು ಪು. 798 ವ. 6
28 ವಚನಧರ್ಮಸಾರ. ಪು. 24 ವ. 27
29 ಬಸವಣ್ಣನವರ ಷಟ್‌ಸ್ಥಲದ ವಚನಗಳು ಪು. 798. ವ. 6

ಆದಿಯಲ್ಲಿ ಅಗಮ್ಯವೂ, ಅದ್ವಿತೀಯವೂ, ಸಚ್ಚಿದಾನಂದ ಸ್ವರೂಪವೂ ಆದ ನಿಷ್ಕಲಲಿಂಗವೆಂಬುದಿತ್ತು.[30] ಅದು ಅವಿನಾಭಾವಸಂಬಂಧದಿಂದ ಶಕ್ತಿಯೊಡನೆ ಒಡವೆರೆದು ಒಂದಾಗಿತ್ತು.[31] ಚಂದ್ರನಲ್ಲಿ ಬೆಳದಿಂಗಳಿರುವಂತೆ, ಪುಷ್ಪದಲ್ಲಿ ಪರಿಮಳ ವಿರುವಂತೆ, ಆ ಶಕ್ತಿಯು ಅವಿನಾಭಾವ[32] ಸಂಬಂಧದಿಂದ ಕೂಡಿತ್ತು. ಅದೇ ಚಿಚ್ಛಕ್ತಿ. ಚೆನ್ನಬಸವಣ್ಣನವರು ತಮ್ಮ ಕರಣ ಹಸಿಗೆಯಲ್ಲಿ ಸೃಷ್ಟಿಯ ವಿಕಾಸವನ್ನು ಬೇರೆ ರೀತಿ ಹೇಳಿದ್ದಾರೆ.[33] ಶಿವ, ಶಕ್ತಿ, ಸದಾಶಿವ, ಈಶ್ವರ ಮತ್ತು ಸದ್ವಿದ್ಯಾ ಎಂಬುದೇ ಮೇಲಿನ ಐದು ತತ್ತ್ವಗಳು. ಇವುಗಳನ್ನೇ ಶಿವತತ್ತ್ವ ಅಥವಾ ಚಿತ್ತತ್ತ್ವ ಎಂದು ಕರೆದಿದ್ದಾರೆ ಶಿವತತ್ತ್ವದಲ್ಲಿ ಚಿಚ್ಛಕ್ತಿಯು ಪ್ರಧಾನವಾಗಿರುತ್ತದೆ. ಅಲೌಕಿಕವಾದ ಈ ಶಕ್ತಿಯೇ ಪರಾಶಕ್ತಿಯೊಡಗೂಡಿದ ಪ್ರಸಾದಲಿಂಗ. ಆದಿಶಕ್ತಿಯು ಪ್ರಧಾನವಾಗಿರುವ ಶಕ್ತಿಯೇ ಚರಲಿಂಗ, ಮೂರನೆಯ ವರ್ಗವೇ ಸದಾಶಿವತತ್ತ್ವ. ಇಲ್ಲಿ ಇಚ್ಛಾಶಕ್ತಿಯು ಪ್ರಧಾನ ವಾಗುತ್ತದೆ. ಇದು ಶಿವಲಿಂಗ, ಜ್ಞಾನವು ಪ್ರಧಾನವಾಗಿರುವ ಈಶ್ವರನೇ ನಾಲ್ಕನೆಯ ತತ್ತ್ವ. ಇದು ಜ್ಞಾನಶಕ್ತಿಯುಳ್ಳ ಗುರುಲಿಂಗ. ಕ್ರಿಯಾಶಕ್ತಿಯು ಪ್ರಧಾನವಾಗಿ ತೋರುತ್ತಿರುವ ಸದ್ವಿದ್ಯೆಯೇ ಐದನೆಯ ತತ್ತ್ವ. ಇದೇ ಕ್ರಿಯಾಶಕ್ತಿಯುಳ್ಳ[34] ಆಚಾರಲಿಂಗ.

ಮುಂದಿನ ಗುಂಪು ಮಾಯಾ, ಕಾಲ, ನಿಯತಿ, ರಾಗ, ವಿದ್ಯಾ, ಕಲಾ, ಮತ್ತು ಪುರುಷತತ್ತ್ವದಿಂದ ಕೂಡಿದೆ. ಇದನ್ನೇ ಚಿದಚಿತ್‌ತತ್ತ್ವವೆಂದೂ ಶುದ್ಧಾಶುದ್ಧತತ್ತ್ವ ಗಳೆಂದೂ ಹೇಳಿದ್ದಾರೆ.

ವೀರಶೈವದರ್ಶನದಂತೆ, ಕಲಾಶಕ್ತಿಯು ಮಾಯೆಯೆಂದು ತೋರಿ ಅವಿದ್ಯೆ ಎನಿಸುತ್ತದೆ. ಇದು ಶಿವ ಮತ್ತು ಜೀವನನ್ನು[35] ಪ್ರತ್ಯೇಕಿಸುತ್ತದೆ. ಸಿದ್ಧಾಂತ ಶಿಖಾ ಮಣಿಯು[36] ಇದನ್ನೇ ಒತ್ತಿಹೇಳುತ್ತದೆ. ಪರಮಾತ್ಮನ ನಿತ್ಯತ್ವ, ವ್ಯಾಪಕತ್ವ, ಪೂರ್ಣತ್ವ, ಸರ್ವಜ್ಞತ್ವ, ಸರ್ವಕರ್ತೃತ್ವಗಳು ಸಂಕೋಚಗೊಂಡು ಕಾಲ, ನಿಯತಿ, ರಾಗ, ವಿದ್ಯೆ, ಮತ್ತು ಕಲೆಗಳಾಗುತ್ತವೆ—ಹಾಗೂ ಶಿವನು ಪರಿಚ್ಛಿನ್ನನಾಗುತ್ತಾನೆ.

ಪುರುಷತತ್ತ್ವದಿಂದ ಪ್ರಾರಂಭವಾದ ಸೃಷ್ಟಿಯ ಕ್ರಮವನ್ನು ತಮ್ಮ 'ಕರಣ

---

30 ಶೂನ್ಯಸಂಪಾದನೆ ಸಂಪುಟ 1. ಪುಟ. 48

31 ಸಿದ್ಧಾಂತಶಿಖಾಮಣಿ 6. XX ಶ್ಲೋ. 35–37

32 ಸೂಕ್ಷ್ಮಾಗಮ, ಪಟಲ 6. ಶ್ಲೋ 7

33 ಷಟ್‌ಸ್ಥಲಚಕ್ರವರ್ತಿ ಚನ್ನಬಸವಣ್ಣನವರ ವಚನಗಳು ಪು. 669-676

34 H.H. Kumaraswamiji : Mirror of Virasaivism pp 86-87

35 Dr. S. C. Nandimath ; A Hand book of Virasaivism p. 127

36 ಸಿದ್ಧಾಂತಶಿಖಾಮಣಿ, ಸಂ. ಕರಿಬಸವಶಾಸ್ತ್ರಿ ಅ.V ಶ್ಲೋ 35

ಹಸಿಗೆ'ಯಲ್ಲಿ ಚೆನ್ನಬಸವಣ್ಣನವರು[37] ಬೇರೆ ರೀತಿಯಲ್ಲಿ ಹೇಳಿದ್ದಾರೆ. ಅದು ತೈತ್ತಿರೀಯೋಪನಿಷತ್[38]ನಲ್ಲಿ ಹೇಳಿರುವುದಕ್ಕೆ ಸಮಾನವಾಗಿದೆ.

ಪ್ರಕೃತಿಯಿಂದ ಪೃಥ್ವಿಯವರೆಗೆ ಇರುವ ಮುಂದಿನ ಇಪ್ಪತ್ತನಾಲ್ಕು ತತ್ತ್ವಗಳು ಅವುಗಳನ್ನು ಅಶುದ್ಧ ಅಥವಾ ಅಚಿತ್‌ತತ್ತ್ವಗಳೆಂದು ಹೇಳಿದೆ.

ನಿಷ್ಕಲ ಶಿವ
|
ಮಹಾಲಿಂಗ

ಶಿವ — ಶಕ್ತಿ (ವಿಮರ್ಶೆ)
|
ಸಾದಾಖ್ಯ ಅಥವಾ ಸದಾಶಿವ
|
ಈಶ್ವರ
|
ಸದ್ವಿದ್ಯಾ ಅಥವಾ ಶುದ್ಧವಿದ್ಯಾ

} ಶುದ್ಧ ಅಥವಾ ಚಿತ್ ತತ್ತ್ವಗಳು

ಮಾಯಾ, ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಮತ್ತು ಪುರುಷ ಇವು ಶುದ್ಧಾ ಶುದ್ಧ ಅಥವಾ ಚಿದಚಿತ್‌ತತ್ತ್ವಗಳು.

ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಚಕ್ಷು, ಶ್ರೋತ್ರ, ನಾಸಿಕ, ರಸನಾ. ತ್ವಕ್, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್, ಪೃಥ್ವೀ-ಇವು ಅಶುದ್ಧ ಅಥವಾ ಅಚಿತ್ ತತ್ತ್ವಗಳು.

ವೀರಶೈವಧರ್ಮವು ಜಗತ್ತಿನ ವಿಕಾಸದ ಬಗೆಗೆ ಅವಿಕೃತ ಪರಿಣಾಮವನ್ನು ಅಂಗೀಕರಿಸುತ್ತದೆ. ಶೈವಸಿದ್ಧಾಂತವು ಪ್ರಕೃತಿ ಪರಿಣಾಮವನ್ನು ಅಂಗೀಕರಿಸುತ್ತದೆ. ಇತರ ದಾರ್ಶನಿಕರಾದ ಸಾಂಖ್ಯರು, ವೈಶೇಷಿಕರು, ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ಜಗದ್ವಿಕಾಸವನ್ನು ಕ್ರಮವಾಗಿ ಸತ್ಕಾರ್ಯವಾದ, ಆರಂಭವಾದ, ವಿವರ್ತವಾದ ಮತ್ತು ಪರಿಣಾಮವಾದಗಳ ಮೂಲಕ ಪ್ರತಿಪಾದಿಸಿದ್ದಾರೆ.

ಶಿವನ ಚಿಚ್ಛಕ್ತಿಯಿಂದ ಪ್ರಕಟವಾದ ಜಗತ್ತು ಶಿವನಿಂದನ್ಯವಲ್ಲ. ಸಮುದ್ರದಲ್ಲಿ ಉದಿಸುವ ಅಲೆಗಳಂತೆ ಶಿವನಿಂದ ಸೃಷ್ಟಿ ವ್ಯೈದೋರುತ್ತದೆ. 'ಸಮುದ್ರದೊಳಗೆ ತೆರೆ ನೊರೆಗಳು ನೆಗಳ್ದವೆಂದರೆ, ಸಮುದ್ರದಿಂದನ್ಯವಪ್ಪವೆ ? ನಿರ್ವಿಕಾರ ನಿತ್ಯ ನಿರಂಜನ ನಿರ್ಗುಣ ಪರಿಪೂರ್ಣ ನಿರ್ವಿಕಲ್ಪ ಪರಬ್ರಹ್ಮ ಶಿವನಿಂದ ಜಗತ್ತು ಉದಯಿಸಿತ್ತೆಂದಡೆ ಸಂಕುಚಿತವಾಗಿ ಮಾಯಾಮಲವಾಗುತ್ತದೆ. ಇದರ ಪರಿಣಾಮವಾಗಿ ಜೀವಾತ್ಮನ

37 ಚನ್ನಬಸವಣ್ಣನವರ ವಚನಗಳು ಪು. 669-676 ಸಂ. ಡಾ. ಆರ್.ಸಿ. ಹಿರೇಮಠ್

38 ತೈತ್ತಿರೀಯೋಪನಿಷತ್ ವಲ್ಲಿ II ಮಂ 1

ಶಿವನಿಂದನ್ಯವೆನಬಹುದೆ ? ಎಂದು ತೋಂಟದ ಸಿದ್ಧಲಿಂಗೇಶ್ವರರು ಪ್ರಶ್ನಿಸಿ, ಜಗತ್ತು ಸತ್ಯವೆಂದರುಹಿದ್ದಾರೆ.

'ಮಯೂರಾಂಡರಸನ್ಯಾಯ', ಸುವರ್ಣಕುಂಡಲನ್ಯಾಯ'

ಇವುಗಳಿಂದ ವೀರಶೈವ ದಾರ್ಶನಿಕರು ಜಗತ್ತು ಸತ್ಯವೆಂದರುಹಿದ್ದಾರೆ. 'ಮಯೂರಾಂಡ ರಸ' ಕಾರಣರೂಪವಾದ ನವಿಲನ ತತ್ತಿಯ ರಸದಲ್ಲಿ ಅನಂತರ ರೂಪ ತಳೆವ ನವಿಲು, ವೈವಿಧ್ಯ ಪೂರ್ಣವಾದ ಅದರ ಗರಿ ಇತ್ಯಾದಿ ಕಾರ್ಯಗಳು, ಹುದುಗಿರುವಂತೆ ; ಕಾರ್ಯರೂಪವಾದ ಕುಂಡಲ, ಓಲೆ, ಉಂಗುರ ಇತ್ಯಾದಿ ಆಭರಣಗಳು, ಕಾರಣರೂಪವಾದ ಸುವರ್ಣದಿಂದಾಗುವಂತೆ ; ಕಾರ್ಯರೂಪವಾದ ಜಗತ್ತು, ಕಾರಣರೂಪನಾದ ಶಿವನಿಂದ ಉದಿಸಿರುವುದು. ಶಿವನು ಹೀಗೆ ಜಗತ್ತನ್ನು ಸೃಜಿಸಿದರೂ, ಆವ ಪರಿಣಾಮುವನ್ನೂ ಹೊಂದದೆ ತಾನೇ ತಾನಾಗಿರಬಲ್ಲನಂ. ಆದುದರಿಂದ ಸಾಧನಾಭೂಮಿಯೊದ ಈ ಜಗತ್ತು ಹೇಯವಲ್ಲ, ಇದು ಉಪಾದೇಯವೆ. ಇಲ್ಲಿ-ಅಲ್ಲಿ ಸಲ್ಲುವಂತಹ ಆದರ್ಶಸಾಧನೆಯನ್ನು ವ್ಯಕ್ತಿ ಅನುಷ್ಠಾನಕ್ಕೆ ತರಬೇಕೆಂದು ಶರಣರು ಅರುಹಿ, ಜಗತ್ತು ಸತ್ಯವೆಂದು ಪ್ರತಿಪಾದಿಸಿದರು.

ಆತ್ಮ (ಜೀವ) ಸ್ವರೂಪ : ವೀರಶೈವಧರ್ಮಕ್ಕನುಗುಣವಾಗಿ ಜೀವಾತ್ಮರು ವಾಸ್ತವವಾಗಿ ಪವಿತ್ರರೂ, ನಿತ್ಯರೂ, ಸರ್ವಜ್ಞರೂ, ಆಗಿ ಶಿವನ[39] ಸ್ವರೂಪವನ್ನೇ ಹೊಂದಿರುತ್ತಾರೆ. ಯಾವ ರೀತಿ ಬೆಂಕಿಯ ಕಿಡಿಗಳು ಬೆಂಕಿಗಿಂತ ಬೇರೆಯಲ್ಲವೋ[40] ಹಾಗೆಯೇ ಆತ್ಮರು ಪರಶಿವನಿಗಿಂತ ಬೇರೆಯಲ್ಲ. ಆದರೆ ಶಿವನ ಲೀಲೆಯಿಂದಲೇ ಇಚ್ಛಾ, ಕ್ರಿಯಾ, ಜ್ಞಾನಶಕ್ತಿಗಳು ಸಂಕುಚಿಸಿ, ಇವುಗಳಿಂದ ಪರಿಚ್ಛಿನ್ನವಾದ ಆತ್ಮನು ಜೀವಾತ್ಮನಾಗುತ್ತಾನೆ.

ವೀರಶೈವ ಧರ್ಮದ ದೃಷ್ಟಿಯಲ್ಲಿ ಪರಮಾತ್ಮ ಸತ್ಯ, ಶಾಶ್ವತ. ಬೆಂಕಿಯ ಕಿಡಿಗಳು ಹೇಗೆ ಬೆಂಕಿಗಿಂತ ಬೇರೆಯಲ್ಲವೋ ಹಾಗೆಯೇ ಜೀವಾತ್ಮರು ಪರಮಾತ್ಮನಿಂದ ಬೇರೆಯಲ್ಲ.

ವೀರಶೈವ ಧರ್ಮವು ಆಣವ, ಕರ್ಮ ಮತ್ತು ಮಾಯಾ ಎಂಬ ಮಲತ್ರಯುವನ್ನು ಒಪ್ಪಿದೆ. ಶಿವನೇ ತನ್ನ ಲೀಲೆಗಳಿಂದ ತನ್ನ ಶಕ್ತಿಯನ್ನು ಸಂಕಂಚಿತಗೊಳಿಸಿ ಜೀವಾತ್ಮನೆನಿಸುವನು.

ಸಂಕುಚಿತಗೊಳಿಸಿದ ಶಿವನ ಇಚ್ಛಾಶಕ್ತಿಯೇ[41] ಆಣವಮಲ, ಹಾಗೂ ಅದರ ಪರಿಣಾಮವಾಗಿ ಅನಂತವಾದ ಆತ್ಮನು ಪರಿಚ್ಛಿನ್ನನಾಗುವುದು. ಶಿವನ ಜ್ಞಾನಶಕ್ತಿಯು

---

39 ಶಿವಾನುಭವ ಸೂತ್ರ ಅಧಿಕರಣ 5. ಶ್ಲೋ. 3
ಸಂ. ಡಾ. ಎಚ್. ಪಿ. ಮಲ್ಲೇದೇವರು.

40 ಯಥಾಗ್ನೇ: ಕ್ಷುದ್ರಾ : ವಿಸ್ಫುಲಿಂಗಾ ವ್ಯುಚ್ಚರಂತಿ ಏವಂ ಏತದಸ್ಮಾದಾತ್ಮಾನ : ಸರ್ವೇ ಪ್ರಾಣಾವ್ಯುಚ್ಚರಂತಿ—ಬೃಹದಾರಣ್ಯಕೋಪನಿಷತ್ IV. 120

41 ಶಿವಾದ್ವೈತದರ್ಪಣ ಪು. 35

ಸರ್ವಜ್ಞತ್ವವು ಕಿಂಚಿಜ್ಞತ್ವವನ್ನು ಪಡೆಯುತ್ತದೆ. ಶಿವನ ಕ್ರಿಯಾ ಶಕ್ತಿಯು ಸೀಮಿತ ವಾಗಿ ಕರ್ಮಫಲವೆನಿಸುವುದು. ಜೀವಾತ್ಮನ ಇಚ್ಛಾಶಕ್ತಿಯೇ ಸಂಕುಚಿತಗೊಳಿಸಲ್ಪಟ್ಟು, ತನ್ನ ಕರ್ಮಾನುಗುಣವಾಗಿ ಫಲವನ್ನನುಭವಿಸುತ್ತದೆ.

ವೀರಶೈವ ಧರ್ಮದಲ್ಲಿ ಮೋಕ್ಷಸಾಧನಗಳು : ವ್ಯಕ್ತಿಯನ್ನು ಆಧ್ಯಾತ್ಮಿಕ ಪಥದತ್ತ ಒಯ್ಯಲು ದೀಕ್ಷೆ ನೆರವು ನೀಡುತ್ತದೆ. ಕರ್ಮ, ಮಾಯಾ, ಮತ್ತು ಆಣವ ಈ ಮಲತ್ರಯವನ್ನು ನಿವಾರಿಸಲು ಗುರುವು ಕ್ರಿಯಾ, ಮಂತ್ರ ಮತ್ತು ವೇಧಾದೀಕ್ಷೆ ಗಳ ಮೂಲಕ ವ್ಯಕ್ತಿಗೆ ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಮತ್ತು ಭಾವಲಿಂಗ ಗಳನ್ನನುಗ್ರಹಿಸುವನು. ಯಾವುದೇ ಜಾತಿ, ಮತ, ಸ್ತ್ರೀ ಪುರುಷ ಭೇದವಿಲ್ಲದೆ ಎಲ್ಲರಿಗೂ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನೀಡುವುದೇ ವೀರಶೈವ ಮತದ ವೈಶಿಷ್ಟ್ಯ. ಗುರುವಿನಿಂದ ದೀಕ್ಷೆ ಹೊಂದಿದ ಶಿಷ್ಯನು, ತನ್ನ ಇಷ್ಟಲಿಂಗವನ್ನು ಮಾತ್ರ ಪೂಜಿಸಬೇಕು. ದೇವಾಲಯಂಗಳಿಗೆ ಹೋಗುವ ಅವಶ್ಯಕತೆಯಿಲ್ಲ.[42] ಮೂಢನಂಬಿಕೆಗಳನ್ನು ತ್ಯಜಿಸ ಬೇಕು.[43] ಗುರುವು ಆಯಾ ವ್ಯಕ್ತಿಯ ಸಾಧನೆಗನುಗುಣವಾಗಿ ದೀಕ್ಷಾಗುರು, ಶಿಕ್ಷಾಗುರು ಮತ್ತು ಮೋಕ್ಷಗುರುವಾಗಿ ಆಧ್ಯಾತ್ಮಿಕ ಪ್ರಗತಿಗೆ ನೆರವಾಗುವನು.

ವೀರಶೈವ ಧರ್ಮವು ಭಕ್ತಿ, ಜ್ಞಾನ, ಕ್ರಿಯೆಗಳಿಗೆ ಸಮಾನವಾದ ಪ್ರಾಮುಖ್ಯತೆ ಯನ್ನು ನೀಡುತ್ತದೆ. ಈ ಮೂರರ ಪೂರ್ಣ ಸಂಬಂಧವು ಪರಮಾತ್ಮನೊಡನೆ ಐಕ್ಯ ವನ್ನು ಪಡೆಯಲು ಹಾಗೂ ಆಧ್ಯಾತ್ಮಿಕ ಪ್ರಗತಿಯನ್ನು ಜಾಗ್ರತೆ ಸಾಧಿಸಲು ಸಹಾಯ ವೆಸಗುತ್ತದೆ. ಈ ಧರ್ಮವು ಜಗತ್ತನ್ನು ಸತ್ಯವೆಂದು ಪರಿಗಣಿಸಿರುವುದರಿಂದ ಮೋಕ್ಷವನ್ನು ಪಡೆಯಲು ಸಾಧಕ ಪ್ರಪಂಚವನ್ನು ಪರಿತ್ಯಜಿಸಬೇಕಾಗಿಲ್ಲ. ಸ್ಥೂಲ, ಸೂಕ್ಷ್ಮ, ಮತ್ತು ಕಾರಣ ಶರೀರಗಳಲ್ಲಿ ತ್ರಿವಿಧಲಿಂಗಗಳನ್ನೂ, ಷಡಿಂದ್ರಿಯಗಳಲ್ಲಿ ಷಡ್ ಲಿಂಗಗಳನ್ನೂ ಜಾಗೃತಗೊಳಿಸುವುದರ ಮೂಲಕ ವ್ಯಕ್ತಿಯನ್ನು ಪವಿತ್ರಗೊಳಿಸಲಾಗು ವುದು.[44] ಅರ್ಚನೆ ಮತ್ತು ಅರ್ಪಣೆಗಳಿಂದ ಪ್ರಪಂಚದ ಪಡಿಪದಾರ್ಥಗಳ ನ್ಯೂನತೆಯು ನಿವಾರಿಸಲ್ಪಟ್ಟು ಸಾಧಕನು ಅವುಗಳನ್ನು ಪ್ರಸಾದರೂಪದಿಂದ ಲಿಂಗ ಭೋಗೋಪಭೋಗಿಯಾಗಿ ಸೇವಿಸುವುದರಿಂದ ಭವಬಂಧನಕ್ಕತೀತನಾಗುವನು.[45]

ಈ ಭವ ಸಾಗರವನ್ನು ದಾಟಲು ಆವರಣವು ಸಹಾಯವೆಸಗುತ್ತದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಹಾಮಂತ್ರ —ಇವೇ ಅಷ್ಟಾವರಣಗಳು.

---

42 ಅಲ್ಲಮನ ವಚನ ಚಂದ್ರಿಕೆ. ಪು. 50. ವ. 212, 213 ಸಂ. ಡಾ। ಎಲ್. ಬಸವರಾಜು
43 ಬಸವಣ್ಣನವರ ಷಟ್‌ಸ್ಥಲದ ವಚನಗಳು ಪು. 148, ವ. 563
44 ವಚನಶಾಸ್ತ್ರಸಾರ ಭಾಗ ೨ ವ. ೫. ಸಂ. ಡಾ ಪ. ಗು. ಹಳಕಟ್ಟಿ
45 ಅರ್ಚನಾರ್ಪಣ ಸಾಪೇಕ್ಷಾ ವರ್ತತೇ ದ್ರವ್ಯಶುದ್ಧಯೇ।
ಅರ್ಪಣಾದ್ದ್ರವ್ಯ ಶುದ್ಧಿಃಸ್ಯಾತ್ ಪ್ರಸಾದಸ್ತದನಂತರಮ್ ॥
ವಿಶೇಷಾರ್ಥ ಪ್ರಕಾಶಿಕೆ.

ಸಮರ್ಥಗುರುವಿನ ಉಪದೇಶಕ್ಕನುಗುಣವಾಗಿ ಆಚರಿಸುವುದು, ಲಿಂಗವನ್ನು ನಿಷ್ಠೆಯಿಂದ ಅರ್ಚಿಸುವುದು. ಭಕ್ತರ ಉದ್ಧಾರಕ್ಕಾಗಿ ಸಂಚರಿಸುವ ಮಹಾಜ್ಞಾನಿಯಾದ ಜಂಗಮನಿಗೆ ಶರಣಾಗತನಾಗುವಿಕೆ, ರುದ್ರಾಕ್ಷಿ ಧಾರಣೆ, ಭಸ್ಮಧಾರಣೆ, ಪಾದೋದಕ ಸ್ವೀಕಾರ, ಪಡಿಪದಾರ್ಥಗಳನ್ನು ಲಿಂಗಕ್ಕರ್ಪಿಸಿ ಅದನ್ನು ಪ್ರಸಾದ ರೂಪವಾಗಿ ಸ್ವೀಕರಿಸುವುದು, ಪರಮಾತ್ಮ ಸ್ವರೂಪವಾದ ಮಹಾಮಂತ್ರದ ಪುರಶ್ಚರಣೆ–ಈ ಎಂಟು ಸಾಧನಗಳು ಸಾಧಕನು ಸತ್ಯಾನ್ವೇಷಣೆಯಲ್ಲಿ ಪ್ರಗತಿ ಪಡೆಯಲು ಸಕ್ರಿಯವಾಗಿ ಹೆಚ್ಚು ಹೆಚ್ಚು ಸಹಾಯವೆಸಗುವುವು.

ಆಧ್ಯಾತ್ಮಿಕ ಸಾಧನೆಯು ಪ್ರಾರಂಭದಲ್ಲಿ ಪೂಜ್ಯ–ಪೂಜಕ[45] (ದೇವ, ಭಕ್ತ, ಉಪಾಸ್ಯ–ಉಪಾಸಕ) ಎಂಬ ಭೇದವಿದೆ. ನಿರಂತರ ಪ್ರಯತ್ನದಿಂದ ಭಕ್ತನು ಲಿಂಗದೊಡನೆ ಸಮರಸವನ್ನು ಸಾಧಿಸಿದಂತೆಲ್ಲಾ ಈ ಭೇದವು ಅಳಿಯುತ್ತದೆ. ಈ ಸಾಧನಾ ಕ್ರಮವನ್ನು ಷಟ್‌ಸ್ಥಲಗಳನ್ನಾಗಿ ವಿಭಾಗಿಸಿ ಅವುಗಳನ್ನೇ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಅಭಿಧಾನದಿಂದ ಕರೆಯಲಾಗಿದೆ.

ಗುರು ಕರುಣಿಸಿದ ಇಷ್ಟಲಿಂಗವನ್ನು ಭಕ್ತನು ಭಕ್ತಿಯಿಂದ ಅರ್ಚಿಸುತ್ತ, ಪವಿತ್ರವಾದ ಮತ್ತು ಉದಾತ್ತವಾದ ಜೀವನವನ್ನು ಕಾಯಕನಿಷ್ಠನಾಗಿ ನಡೆಸಬೇಕು. ಈ ಹಂತದಲ್ಲಿನ ಭಕ್ತಿಯನ್ನು ಶ್ರದ್ಧಾಭಕ್ತಿಯೆಂದು ಕರೆಯಲಾಗಿದೆ. ಬಸವಣ್ಣನವರನ್ನು ಐಕ್ಯಸ್ಥಲದ ಪ್ರತಿನಿಧಿಯೆಂದು ಉಲ್ಲೇಖಿಸಲಾಗಿದೆ[47] ಆದರೆ ಬಸವಣ್ಣನವರು ಐಕ್ಯಸ್ಥಲದ ಸ್ಥಿತಿಗೆ ಏರಿದ್ದರೂ ಲೋಕಕಲ್ಯಾಣಕ್ಕಾಗಿ ಭಕ್ತ ಸ್ಥಲದಲ್ಲಿ ನಿಂತು ಸಕಲ ಜೀವಾವಳಿಯ ಲೇಸಿಗಾಗಿ ಅವಿಶ್ರಾಂತರಾಗಿ ಶ್ರಮಿಸಿದರೆಂಬುದನ್ನು ಮರೆಯಲಾಗದು.

ಅನಂತರ ಭಕ್ತನು ಇಷ್ಟಲಿಂಗದಲ್ಲಿ ಸ್ಥಿರವಾದ ಮತ್ತು ವಿಚಲಿತವಾಗದ ಭಕ್ತಿಯನ್ನು ನೆಲೆಗೊಳಿಸಬೇಕು. ಕ್ರಮೇಣ ವಿಕಾಸಗೊಂಡ ಈ ಹಂತದ ಭಕ್ತಿಯೇ 'ನಿಷ್ಠಾ ಭಕ್ತಿ.' ಮಡಿವಾಳ ಮಾಚಿದೇವರು ಈ ಸ್ಥಲದ ನಿರೂಪಕರು. ಅರಿತು ವಿಚಲಿತವಾಗದ 'ಅವಧಾನ ಭಕ್ತಿ' ಯಿಂದ ಕಾಯಕನಿಷ್ಠನಾಗಿ ಲಿಂಗವನ್ನರ್ಚಿಸುತ್ತ ಮುನ್ನಡೆಯುವನು. ಈ ಸ್ಥಲವನ್ನು 'ಪ್ರಸಾದಿ ಸ್ಥಲ'ವೆಂದು ಕರೆಯಲಾಗಿದೆ. ಚನ್ನಬಸವಣ್ಣನವರು ಈ ಸ್ಥಲದ ಪ್ರತಿನಿಧಿ.

ಬಾಹ್ಯವಸ್ತುಗಳಿಂದ ಭಕ್ತನು ತನ್ನ ಮನಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹಿಸುತ್ತಾ, ಲಿಂಗವನ್ನರ್ಚಿಸುತ್ತ ಜೀವಾತ್ಮನು ಲಿಂಗರೂಪಿಯಾದ ವಿಶ್ವಾತ್ಮನಿಗಿಂತ ಭಿನ್ನವಲ್ಲವೆಂಬುದನ್ನರಿಯುತ್ತಾನೆ. ಈ ಹಂತದ ಭಕ್ತಿಯನ್ನು ಅನುಭಾವ ಭಕ್ತಿಯೆಂದೂ, ಪ್ರಾಣಲಿಂಗಿ ಸ್ಥಲವೆಂದೂ ಕರೆಯಲಾಗಿದೆ. ಈ ಸ್ಥಲದ ಪ್ರತಿನಿಧಿ-ನುಲಿಯ ಚಂದಯ್ಯನವರು.

---

46 ಶೂನ್ಯಸಂಪಾದನೆ ಪು. 3

47 ಮಿಶ್ರಸ್ತೋತ್ರದ ವಚನ. ಚನ್ನಂಜೇದೇವರು. ಪು. 39. ವ. 79.

ಆನಂತರ ಮುನ್ನಡೆದ ಸಾಧಕನು ಲಿಂಗವನ್ನರ್ಚಿಸುತ್ತಾ ಪ್ರಸಾದಲಿಂಗನಿಷ್ಠನಾಗಿ ತನ್ನ ಆತ್ಮದ ದಿವ್ಯ ಹೊಳಹನ್ನು ಅನುಭವಿಸುತ್ತಾನೆ. ಈ ಗರಿಗೊಂಡ ಭಕ್ತಿಯನ್ನು 'ಆನಂದ ಭಕ್ತಿ' ಯೆಂದೂ, ಈ ಸ್ಥಲವನ್ನು ಶರಣಸ್ಥಲವೆಂದೂ ಕರೆದಿದ್ದಾರೆ. ಘಟ್ಟಿವಾಳಯ್ಯನವರು ಈ ಸ್ಥಲದ ಪ್ರತಿನಿಧಿಗಳು.

ಅಂತಿಮ ಹಂತದಲ್ಲಿ ಅಂಗ ಮತ್ತು ಲಿಂಗಗಳಿಗಿದ್ದ ಅಲ್ಪ ಭೇದವೂ ಇಲ್ಲದಂತಾಗುತ್ತದೆ. ಅಂಗ-ಲಿಂಗ ಭೇದವಳಿಯುತ್ತದೆ. ಯಾವರೀತಿ ನದಿಯು ನದಿಯೊಡನೆ ಬೆರೆಯುವುದೋ ಅಂತೆಯೇ ಪರಿಶುದ್ಧವಾದ ಅಂಗವು ದೇವ (ಲಿಂಗ)ನಲ್ಲಿ ಒಡವೆರೆಯುತ್ತದೆ.[48] ಈ ಸಮರಸ ಪ್ರಜ್ಞೆ ಅಥವಾ ತಾದಾತ್ಮ್ಯಸ್ಥಿತಿಯನ್ನು ಐಕ್ಯಸ್ಥಲವೆಂದೂ ಈ ಹಂತದಲ್ಲಿನ ಭಕ್ತಿಯನ್ನು 'ಸಮರಸ' ಭಕ್ತಿಯೆಂದೂ ಕರೆದಿದ್ದಾರೆ. ಅಜಗಣ್ಣನವರು ಈ ಸ್ಥಲದ ಪ್ರತಿನಿಧಿಗಳು.

ಹೀಗೆ ವೀರಶೈವಧರ್ಮವು ಭಕ್ತಿ, ಜ್ಞಾನ ಮತ್ತು ಕ್ರಿಯೆಗಳಿಗೆ ಸಮಪ್ರಾಧಾನ್ಯವನ್ನು ಕೊಡುತ್ತದೆ. ಮೋಕ್ಷವನ್ನು ಪಡೆಯಲು ಸರ್ವರೂ ಅರ್ಹರು ಮೋಕ್ಷಕ್ಕಾಗಿ ಜಗತ್ತನ್ನು ತ್ಯಜಿಸಬೇಕಾಗಿಲ್ಲ ಎಂಬುದನ್ನು ಒತ್ತಿಹೇಳಿ, ಪ್ರತಿಯೊಂದು ಹಂತದಲ್ಲಿ ಪರಿಶುದ್ಧವಾದ ಮತ್ತು ಪವಿತ್ರವಾದ ಕಾಯಕನಿಷ್ಠ ಜೀವನ ಹಾಗೂ ದಾಸೋಹವನ್ನು ನಡೆಸಲು ಪ್ರತಿಪಾದಿಸುತ್ತದೆ. ಯಾವ ಜಾತಿ, ಮತ ಭೇದಗಳನ್ನೆಣಿಸದೆ ಸಾಮಾಜಿಕ ಸಮಾನತೆಯನ್ನೂ, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನೂ ಪ್ರತಿಯೊಬ್ಬರಿಗೂ ನೀಡುತ್ತದೆ. ಕಾಯಕದ ಹಿರಿಮೆಗರಿಮೆಗಳನ್ನು ಸುಸ್ಪಷ್ಟವಾಗಿ ಪ್ರತಿಪಾದಿಸಿ, ಗುರುವೂ ಸಹ ಪ್ರಸಾದವನ್ನು (ಆಹಾರವನ್ನು) ಕಾಯಕದಿಂದಲೇ ಸಂಪಾದಿಸಿಕೊಳ್ಳಬೇಕೆಂಬುದನ್ನು ಒತ್ತಿ ಹೇಳುತ್ತದೆ. ವ್ಯಕ್ತಿಯ ಸಂಪೂರ್ಣ ಮತ್ತು ಸರ್ವಾಂಗೀಣ ಅಭ್ಯುದಯವೇ ವೀರಶೈವಧರ್ಮದ ಗುರಿ. ಈ ಕಾರಣದಿಂದಲೇ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳನ್ನು ಯುಕ್ತರೀತಿಯಲ್ಲಿ ಸಮಾವೇಶಗೊಳಿಸಿದೆ. ಮಾನವನು ಉದಾತ್ತ ಹಾಗೂ ಯೋಗ್ಯ ಜೀವನವನ್ನು ನಡೆಸಲು ಮತ್ತು ಅಧ್ಯಾತ್ಮ ಸಾಧನೆಯಲ್ಲಿ ಪ್ರಗತಿ ಪಡೆಯಲು ಪಂಚಾಚಾರಗಳು (ನೀತಿಸಂಹಿತೆಗಳು) ನೆರವಾಗುತ್ತವೆ. ವ್ಯಕ್ತಿಯು ಆಧ್ಯಾತ್ಮಿಕ ಮಾರ್ಗದಲ್ಲಿ ಹೆಚ್ಚು ಹೆಚ್ಚು ಮುನ್ನಡೆಯಲು ಅಷ್ಟಾವರಣಗಳು ಸಕ್ರಿಯವಾಗಿ ಸಹಾಯವೆಸಗುತ್ತವೆ. ಪರಶಿವನೊಡನೆ ಸಮರಸಭಾವದಿಂದ ತಾದಾತ್ಮ್ಯ ಹೊಂದಲು ಅಂದರೆ ಅಂಗ ಲಿಂಗವೇ ಆಗಲು ಆಗುವ ಆಧ್ಯಾತ್ಮಿಕ ಬೆಳವಣಿಗೆಯ ವಿವಿಧ ಹಂತಗಳ ವಿಕಾಸವನ್ನು ಷಟ್‌ಸ್ಥಲವು ಮನೋಜ್ಞವಾಗಿ ಸೂಚಿಸುವುದು. ಮಾನವರಲ್ಲಿ ಸ್ನೇಹ, ಸೌಜನ್ಯ, ಸೌಹಾರ್ದ, ಪರಸ್ಪರ ಅರಿವನ್ನು ನೆಲೆಗೊಳಿಸಿ ; ನೈತಿಕವಾಗಿ, ಸಾಮಾಜಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಅವರನ್ನು ಸಮುನ್ನತಿಗೊಯ್ಯುವುದೇ ವೀರಶೈವ ಧರ್ಮದ ಹೆಗ್ಗುರಿ.

---

48 ಬಸವಣ್ಣನವರ ಷಟ್‌ಸ್ಥಲ ವಚನಗಳು. ಪು. 249. ವ. 929.

o—o

"ಶಿವಾನುಭವಮಂಟಪ"

ಶ್ರೀ ಕೆಂಪಲಿಂಗಯ್ಯ ಎಂ.ಎ., ಬಿ. ಇಡ್.

ಶಿವಾನುಭವ ಮಂಟಪದಲ್ಲಿ[1] ಶರಣರು ಸೇರಿ ಪ್ರಭುವಿನೊಂದಿಗೆ ತತ್ತ್ವಜಿಜ್ಞಾಸೆ ಮಾಡುತ್ತಿದ್ದರು. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಕೋಲ ಶಾಂತಯ್ಯ, ಅಂಬಿಗರ ಚೌಡಯ್ಯ, ಕಿನ್ನರಿಯ ಬ್ರಹ್ಮಯ್ಯ, ಸೊಡ್ಡಳ ಬಾಚರಸ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾದಯ್ಯ, ನುಲಿಯ ಚಂದಯ್ಯ, ಘಟ್ಟಿವಾಳಯ್ಯ, ಡೋಹರ ಕಕ್ಕಯ್ಯ, ದಾಸಿಮಯ್ಯ, ಮೆರಮಿಂಡ ದೇವರು, ಉರಿಲಿಂಗ ಪೆದ್ದಣ್ಣ, ರಾಯಸದ ಮಂಚಣ್ಣ, ಢಕ್ಕೆಯ ಬೊಮ್ಮಣ್ಣ, ಅಮುಗಿ ದೇವಯ್ಯ, ಶಿವನಾಗಮಯ್ಯ, ತೆಲುಗು ಬೊಮ್ಮಯ್ಯ, ಮುಂತಾದ ಅನೇಕ ಶರಣರೂ ನಾಗಲಾಂಬಿಕೆ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಶರಣೆಯರೂ ಅನುಭವ ಮಂಟಪದಲ್ಲಿ ಸೇರುತ್ತಿದ್ದರು. ಪ್ರಭುವನ್ನು ಎಲ್ಲರೂ ಪರಮಪೂಜ್ಯ ಭಾವನೆಯಿಂದ ಕಂಡು ಪ್ರತಿದಿನವೂ ಆತನನ್ನು ವೈಭವದಿಂದ ಶಿವಾನುಭವ ಮಂಟಪಕ್ಕೆ ಬಿಜಯಂಗೈಸುತ್ತಿದ್ದರು. ಪಂಚಮಹಾವಾದ್ಯಗಳು ಮೊಳಗುತ್ತಿದ್ದವು. ಸುಮಂಗಲಿಯರು ಕಳಸ ಕನ್ನಡಿಯಿಂದ ಇದಿರ್ಗೊಂಡು ಮಾಣಿಕ್ಯದ ಆರತಿಗಳನ್ನೆತ್ತಿ ಮಂಗಳ ಗೀತೆಗಳನ್ನು ಹಾಡುತ್ತಿದ್ದರು. ಸಿಂಗರಿಸಿದ ಮಂಟಪದಲ್ಲಿ ಪ್ರಭು ಪರುಷಗದ್ದಿಗೆಯ ಮೇಲೆ ಕುಳಿತು ಕೊಳ್ಳುತ್ತಿದ್ದನು. ಬಸವಣ್ಣ ಪರಮಾನಂದ ಜಲದಿಂದ ಪಾದಾರ್ಚನೆಯ ಮಾಡಿ ವಂದಿಸುವನು. ಶರಣರೆಲ್ಲ ಪ್ರಭುದರ್ಶನದಿಂದ ಆನಂದಿಸುತ್ತ ತಮ್ಮ ತಮ್ಮ ಅನುಭವವನ್ನು ಹೇಳುತ್ತ, ಸಂಶಯಗಳನ್ನು ಪರಿಹರಿಸಿಕೊಳ್ಳುತ್ತಿದ್ದರು.

---

1. ನೆಲಗಟ್ಟು ಸಪ್ತಮಹಕೋಟಿ ಮಂತ್ರಂಗಳತಿ
   ಚೆಲುವ ಮೂವತ್ತಾರು ಮಂಗಸಾಲ್ಗಂಭಗಳು
   ಲಲಿತ ಷಟ್‌ತ್ರಿಂಶಶಕ್ತಿಯರು ಬೋದಿಗೆಯ ಮೂವತ್ತೇಳು ಭಕ್ತಿಕ್ರಮದಿಂ
   ತೊಲೆಗಳುಂ ಮೇಲ್ಲಲಗೆ ನೂರೊಂದು ಸ್ಥಳಗಳತಿ
   ಯುಲಿವುತಿಹ ಉಪಮಂತ್ರ ಇಟ್ಟಿಗೆಯು ಮೇಲ್ಗಾರೆ
   ಕಲಿತ ಷಟ್‌ತ್ರಿಂಶ ಪ್ರಣಮದ ಬಸವರಾಜನನುಭವ ಮಂಟಪವ ನೋಡುತಂ

ಈ ಮಂಟಪದ ಕಂಭವಂ ಅಂಕಣವಂ ಗಣಿಸೆ ಕಂಭ 1296 ಅಂಕಣಂ 1225

—ಎಳಂದೂರು ಹರೀಶ್ವರ ಕವಿ

ಶಿವಯೋಗ ಬಲ್ಲಿದರಾದರೂ 'ಇಷ್ಟಲಿಂಗ' ವೀರಶೈವಕ್ಕೆ ಅವಶ್ಯಕವೇ—ಎಂಬ ಸಂಶಯವನ್ನು ಒಮ್ಮೆ ಸಿದ್ಧರಾಮಯ್ಯ ಸೂಚಿಸಿದನು. ಆಗ ಬಸವಣ್ಣ, ಮೋಳಿಗೆ ಮಾರಯ್ಯ, ದಾಸಿಮಯ್ಯ, ಶಿವನಾಗಮಯ್ಯ, ಅಮುಗಿದೇವಯ್ಯ ಮುಂತಾದವರು ಇಷ್ಟಲಿಂಗವಿಲ್ಲದೇ ವೀರಶೈವ ಸಿದ್ಧಿಸಲಾರದೆಂದು ತಮ್ಮ ತಮ್ಮ ಶಿವಾನುಭಾವವನ್ನು ತಿಳಿಸಿದರು.

1) "ನೊಸಲಲ್ಲೊಂದು ಕಣ್ಣುಳ್ಳವರಾದರೂ ಅವನಂಗದ ಮೇಲೆ ಲಿಂಗ ಸ್ವಾಯತವಿಲ್ಲದಿದ್ದರೆ ಅವನ ಮನೆಯಲ್ಲಿ ಉಂಡರೆ ಜನ್ಮ ಜನ್ಮಾಂತರದಲ್ಲಿ ಶ್ವಾನನ ಯೋನಿಯಲ್ಲಿ ಬಪ್ಪುದು ತಪ್ಪದು. ಎಲೆ ಶಿವನೇ ನೀವಿಲ್ಲದವರ ಮನೆಯಲ್ಲಿ ತಿಂಬವರ ಕಂಡರೆ ಎನ್ನ ಮನ ಸೊಗಸದಯ್ಯ ಕೂಡಲ ಚೆನ್ನಸಂಗಮದೇವಾ"

2) "ಲಿಂಗವಿಲ್ಲದೆ ನಡೆವವನ, ಲಿಂಗವಿಲ್ಲದೆ ನುಡಿವವನ. ಲಿಂಗವಿಲ್ಲದೆ ಉಗುಳು ನುಂಗಿದರೆ ಅಂದಂದಿಂಗೆ ಕಿಲ್ಬಿಷವಯ್ಯ. ಏನೆಂಬೆನೇನೆಂಬೆ ? ಲಿಂಗವಿಲ್ಲದೆ ನಡೆವವನ, ಲಿಂಗವಿಲ್ಲದೆ ನುಡಿವವನ ಅಂಗ ಲೌಕಿಕ ಮುಟ್ಟಲಾರದು. ಲಿಂಗವಿಲ್ಲದೆ ನುಡಿವ ಶಬ್ದ ಸೂತಕವ ಕೇಳಲಾಗದು. ಲಿಂಗವಿಲ್ಲದೆ ಗಮನಿಸಿದರೆ ಆ ನಡೆನುಡಿಗೊಮ್ಮೆ ವ್ರತಗೇಡಿ ಕೂಡಲ ಚೆನ್ನಸಂಗಮದೇವ"

—ಎಂದು ಚೆನ್ನಬಸವಣ್ಣ ಇಷ್ಟಲಿಂಗದ ಶ್ರೇಷ್ಠತೆಯನ್ನು ನಿರೂಪಿಸಿದನು. ಪ್ರಭು ತನ್ನ ನಿರ್ಣಯವನ್ನು ಹೇಳಬೇಕಾಗಿದೆ. ಎಲ್ಲ ಶರಣರೂ ತಮ್ಮ ತಮ್ಮ ಅನುಭಾವವನ್ನು ತಿಳಿಸಿ-ಇಷ್ಟಲಿಂಗವಿರಬೇಕೆಂದೂ ಲಿಂಗಧಾರಣವೇ ವೀರಶೈವಕ್ಕೆ ಪ್ರಥಮ ಸೋಪಾನವೆಂದೂ ಹೇಳಿದರು.

3) " ಎಳ್ಳಿಂಗೆ ಪರಿಮಳದ ಕಟ್ಟಿದಲ್ಲದೆ ಎಣ್ಣೆಂಗೆ ಪರಿಮಳವೇದಿಸದು. ದೇಹದಲ್ಲಿ ಇಷ್ಟಲಿಂಗವ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು. ಇದು ಕಾರಣ ಗುಹೇಶ್ವರ ಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಲ್ಲದೆ ಪ್ರಾಣಸಂಬಂಧಿಯಾಗಬಾರದು ಕಾಣಾ ಸಿದ್ಧರಾಮಯ್ಯ"

4) "ಲಿಂಗವನರಿಯದೆ ಏನರಿದಡೆಯು ಫಲವಿಲ್ಲ. ಲಿಂಗವನರಿದ ಬಳಿಕ ಮತ್ತೇನನರಿದಡೆಯು ಫಲವಿಲ್ಲ. ಸರ್ವಕಾರಣ ಲಿಂಗವಾಗಿ ಅಂಗವನೆ ಅರಿದರಿದು ಲಿಂಗಸಂಗವನೆ ಮಾಡುವೆ. ಸಂಗಸುಖದೊಳೋಲಾಡುವೆ ಗುಹೇಶ್ವರಾ"

—ಎಂದು ಪ್ರಭು "ಇಷ್ಟಲಿಂಗ ತತ್ತ್ವ"ವನ್ನು ಶರಣಗೋಷ್ಠಿಯಲ್ಲಿ ನಿರೂಪಿಸಿದನು. ಮರುದಿನದ ಗೋಷ್ಠಿಯಲ್ಲಿ ಬಸವಣ್ಣ ಪ್ರಭುವನ್ನು ಕುರಿತು ಶಿವಭಕ್ತಿ ಮಾರ್ಗವನ್ನು ತಿಳಿಸಬೇಕೆಂದು ಕೇಳಿದನು. ವೀರಶೈವದಲ್ಲಿ ಭಕ್ತಿಯೇ ಮುಕ್ತಿಗೆ ಸಾಧನ. ಅಂಥ ಭಕ್ತಿಯೊಂದಿಲ್ಲದಿದ್ದರೆ ಪಂಚಾಚಾರ, ಅಷ್ಟಾವರಣ ಮತ್ತು ಷಟ್ಸ್ಥಲಗಳಿಂದ ಏನೂ ಪ್ರಯೋಜನವಿಲ್ಲ. ಭಕ್ತಿಯೊಂದಿದ್ದರೆ ಅವು ತಾನಾಗಿಯೇ ಸಿದ್ಧಿಸುತ್ತವೆ. ಆದ್ದರಿಂದಲೇ—

ಕುರುಡ ಕನ್ನಡಿವಿಡಿದ ಮಾಟದ
ಪರಿಯಲಿದೆ ಶಿವಭಕ್ತಿಯೆಂಬುದು
ಮರುಳುಕಂಡಾ ಕನಸಿನಂತಿರೆ ಮಾತಿಗಡಿದಾಯ್ತು
ಗುರುವೆ ನಾನಿದನರಿವವೊಲು ವಿ
ಸ್ತರಿಸಿ ಪೇಳೆಂದೆನುತಲಾ ವರ
ಗುರು ಗುಹೇಶಗೆ ಬಿನ್ನಹವ ಮಾಡಿದನು ಬಸವಣ್ಣ.

"ಬಸವಣ್ಣಾ ; ನಿನ್ನ ಮನಸ್ಸಿನ ಹಂಬಲು ದೊಡ್ಡದು. ನೀನು ಕಾರಣಪುರುಷ, ಲಿಂಗಮಾರ್ಗವನ್ನು ನಿನಗೆ ತಿಳಿಸತಕ್ಕುದೇನಿದೆ ? ಸೂರ್ಯನಿಗೆ ದೀಪದ ಹಂಗೇಕೆ ?"

"ಪ್ರಭುದೇವಾ, ಬಹು ದೊಡ್ಡ ಮಾತು. ನಾನು ನಿನ್ನ ಚರಣಶರಣ. ನನ್ನನ್ನು ಈ ಭವಪಾಶದಿಂದ ಬಿಡಿಸು. ಬೀಜವನ್ನು ಬಿತ್ತಿದ ಮೇಲೆ ಅದು ಬೆಳೆಯುವು ದಕ್ಕೆ ಮೊದಲೇ ಮೊಳಕೆಯನ್ನು ಕಿತ್ತು ನೋಡುತ್ತಾರೆಯೆ ? ನಾನೆತ್ತ ? ನಿನ್ನ ಹೊಗಳಿಕೆಯೆತ್ತ? ನನ್ನ ಮನಸ್ಸಿನ ಕತ್ತಲೆಯನ್ನು ಕಳೆದು ಅರಿವಿನ ಬೆಳಕನ್ನು ತುಂಬು."

"ಅಮೃತದ ರುಚಿಗೆ ಬೇರೊಂದು ರುಚಿಯನ್ನು ಹೋಲಿಸಲುಂಟೆ ? ನಿರಹಂಕಾರಿ ಯಾದ ನಿನಗಲ್ಲದೆ ಇನ್ನು ಯಾರಿಗೆ ತಾನೆ ಲಿಂಗಪಥವನ್ನು ತಿಳಿಸಬೇಕು ಬಸವಣ್ಣಾ ; ಕರ್ಮಗಳಿಗೆ ತಕ್ಕ ಪುಣ್ಯಪಾಪಗಳ ಸಂಚಯವಾಗುತ್ತದೆ. ದೇಹಿಗಳು ಲೋಕದ ಮಾಯೆಗೆ ಒಳಗಾಗದಿರುವುದು ಅಸಾಧ್ಯ. ಆಯುಸ್ಸು ಮುಗಿಯುವುದಕ್ಕೆ ಮೊದಲೇ ಎಚ್ಚೆತ್ತು ಜನನಮರಣಗಳನ್ನು ತಪ್ಪಿಸಿಕೊಳ್ಳಲು ಯತ್ನಿಸಬೇಕು. "ಹಾಲು ಹಯ ನುಳ್ಳಲ್ಲಿ ಹಬ್ಬುವ ಹೇಳದೆಯು ಕೇಳದೆಯು ಸವೆವುದು. ಗಾಳಿ ಬೀಸುವ ದಿನದಲೇ ತೂರುವುದು ಹೊಟ್ಟುಗಳ" —ಇದು ಬುದ್ಧಿವಂತರ ಲಕ್ಷಣ. ತನ್ನ ಇಷ್ಟಲಿಂಗವನ್ನು ಯಾವಾಗಲೂ ಬಿಟ್ಟಿರದೆ ನಿಷ್ಠೆಯಿಂದ ಅರ್ಚಿಸಬೇಕು. ಪರಮಶಾಂತಚಿತ್ತನಾಗಿ ಲಿಂಗಾರ್ಚನೆಯನ್ನು ಮಾಡಬೇಕು. ದೇಹಭಾವವಳಿದು ಲಿಂಗಗುಣಗಳೇ ಮೈಯಲ್ಲಿ ತುಂಬಬೇಕು. ಲಿಂಗಾಂಗಸಾಮರಸ್ಯಜ್ಞಾನ ಉದಯವಾಗಬೇಕು. ಕಾಯಿಸುವುದರಿಂದ ತಣ್ಣೀರು ತನ್ನ ಮಂಜಿನ ಗುಣವನ್ನು ಬಿಟ್ಟು ಬಿಸಿನೀರಾಗುವಂತೆ ಇಷ್ಟಲಿಂಗಾಗ್ನಿಯಿಂದ ತನುವೆಂಬ ಕಲಶದಲ್ಲಿರುವ ಜೀವಭಾವದ ಕಶ್ಮಲಗಳೆಲ್ಲ ಅಳಿದು, ನವಚಕ್ರ ಕಮಲ ಕರ್ಣಿಕೆಯಲ್ಲಿ ಸ್ಫಟಿಕ ಪಾತ್ರೆಯಲ್ಲಿ ಉರಿಯುವ ದೀಪದ ಹಾಗೆ ಆತ್ಮಜ್ಯೋತಿಯು ಪ್ರಕಾಶಿಸುವುದು. ಇದೇ ಪ್ರಾಣಲಿಂಗ ಸಂಬಂಧ.

"ಲಿಂಗವೇ ಪ್ರಾಣಸ್ವರೂಪವಾದುದರಿಂದ ಇಷ್ಟಲಿಂಗವನ್ನು ಯಾವ ಕಾಲ ದಲ್ಲಿಯೂ ಅಂಗದಿಂದ ಬೇರೆ ಮಾಡಬಾರದು. ಗುರುಲಿಂಗಜಂಗಮ ಪಾದೋದಕ ವನ್ನೂ ಪ್ರಸಾದವನ್ನೂ ಭಕ್ತಿಯಿಂದ ಸ್ವೀಕರಿಸಬೇಕು. ಗುರುವಿಗೆ ತನ್ನ ಶರೀರ ವನ್ನೂ ಇಷ್ಟಲಿಂಗಕ್ಕೆ ತನ್ನ ಮನಸ್ಸನ್ನೂ ಜಂಗಮಕ್ಕೆ ತನ್ನ ಧನವನ್ನೂ ಅರ್ಪಿ ಸುತ್ತಾ ಗುರುಲಿಂಗಜಂಗಮವನ್ನು ತನ್ನಲ್ಲಿಯೇ ತಾನರಿಯಬೇಕು.

"ನಿತ್ಯನಿರ್ಮಲ ಪದವಿಯನ್ನು ಬಯಸುವ ಭಕ್ತನಿಗೆ ; ಇಷ್ಟಲಿಂಗವೇ ಮೊದಲು ಮುಖ್ಯವಾದುದು. ಪ್ರಾಣಲಿಂಗದ ಹದನನ್ನು ತಿಳಿಯಬೇಕಾದರೆ ಸಚ್ಚಿದಾನಂದ ಸ್ವರೂಪಿಯಾಗಿರಬೇಕು. ಲಿಂಗೈಕ್ಯಭಾವದಿಂದ ಕೂಡಿರಬೇಕು. ತಾನು ಬೇರೆ ಲಿಂಗ ಬೇರೆ ಎಂಬ ಭಿನ್ನಭಾವವಿದ್ದರೆ ಭವದಲ್ಲಿ ಪುನಃ ಪುನಃ ಬರುತ್ತಿರಬೇಕಾಗುತ್ತದೆ. ಶಿವಾನಂಭಾವಿಗಳ ಸಂಗದಲ್ಲಿ ಕಾಲ ಕಳೆಯುತ್ತ ಅರ್ಥವಿಲ್ಲದ ನೋಂಪಿ ವ್ರತಶೀಲಗಳನ್ನು ಆಚರಿಸದೆ, ಕೋಪ ತಾಪಗಳಿಗೆ ಒಳಗಾಗದೆ, ಅನ್ಯರನ್ನು ಹಳಿಯದೆ, ತನ್ನನ್ನು ಹೊಗಳಿಕೊಳ್ಳದೆ, ನಿರಹಂಕಾರಿಯಾಗಿರಬೇಕು. ಹಸಿವು ಬಾಯಾರಿಕೆ ನಿದ್ರೆಗಳನ್ನು ಲಕ್ಷ್ಯಮಾಡದೆ ಸತ್ಯಮಾರ್ಗಾವಲಂಬಿಯಾಗಿ ಯಾವಾಗಲೂ ಇಷ್ಟಲಿಂಗಸೇವೆಯಲ್ಲಿಯೇ ಮಗ್ನನಾಗಿರಬೇಕು. ಇಷ್ಟಲಿಂಗದ ಸೇವಾನುಭಾವನೆ ಮನಸ್ಸಿನಲ್ಲಿ ನೆಲೆಗೊಂಡರೆ ಪ್ರಾಣಲಿಂಗವೆಂಬ ನಿಧಿಯನ್ನು ತಿಳಿಯಲು ಕಣ್ಣಿಗೆ ಅಂಜನದಂತಿರುವುದು. ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ—ಇವುಗಳ ನೆಲೆಯನ್ನು ಗುರುಮುಖದಿಂದ ಅರಿಯಬೇಕು. ಮೊಟ್ಟಮೊದಲು ಕೋಲು ಹಿಡಿದು ಅಭ್ಯಾಸ ಮಾಡಿಯೇ ಆಮೇಲೆ ಶಸ್ತ್ರ ಹಿಡಿದು ವೈರಿಯನ್ನು ಎದುರಿಸಬೇಕಾಗುತ್ತದೆ. ಅದರಂತೆ, ಇಷ್ಟಲಿಂಗದ ಜ್ಞಾನವನ್ನು ಪಡೆದು ಶಿವಪಥವನ್ನು ಹಿಡಿಯಬೇಕು. ಶಿವಭಕ್ತಿಯನ್ನು ಆಚರಿಸಬೇಕು."

—ಹೀಗೆ ಪ್ರಭು ಲಿಂಗಪಥವನ್ನು ತಿಳಿಸುತ್ತಿರಲು ಶಿವಶರಣರು ಕೇಳಿ ಹರ್ಷಿಸುತ್ತಿದ್ದರು.

5) "ಲಿಂಗ ಜಂಗಮ ಜಂಗಮ ಲಿಂಗವೆಂಬುದನು ಎನಗೆ ತೋರಿಸಿದವರಾರಯ್ಯ ? ಲಿಂಗ ಪೂಜಿಸಿದರೆ ಭವ ಹರಿಯದೆಂದು ಜಂಗಮಮುಖವಾಗಿ ಬಂದು ಶಿಕ್ಷಿಸಿ ರಕ್ಷಿಸಿ ಎನ್ನ ಆದಿ ಅನಾದಿಯ ತೋರಿ ಪ್ರಾಣಲಿಂಗ ಜಂಗಮವೆಂದು ಎನಗೆ ಪ್ರತಿಷ್ಠಿಸಿ ತೋರಿದಿರಾಗಿ ಕೂಡಲ ಸಂಗಮದೇವಾ ನಿಮ್ಮಿಂದಲಾನು ಬದುಕಿದೆನು ಕಾಣಾ ಪ್ರಭುವೆ"

—ಎಂದು ಬಸವಣ್ಣ ಬಿನ್ನವಿಸಿದನು. ಹೀಗೆ ಶಿವಶರಣರು ಸ್ವಾನುಭವದಿಂದ ವೀರಶೈವತತ್ತ್ವಾರ್ಥವನ್ನು ಚರ್ಚಿಸುತ್ತಾ ಪ್ರಭುವಿನ ಉಪದೇಶದಿಂದ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳುತಿದ್ದರು.

ಕಲ್ಯಾಣದಲ್ಲಿ ಶಿವಶರಣರ ಸಂಭ್ರಮವೇ ಸಂಭ್ರಮ. ಒಂದೊಂದು ದಿನವೂ ಯಾವುದಾದರೊಂದು ಅಮೋಘ ತತ್ತ್ವವನ್ನು ಚರ್ಚಿಸುತ್ತಿದ್ದರು ಅನುಭವ ಮಂಟಪದಲ್ಲಿ. ಎಂದಿನಂತೆ ಶರಣಸಂಗೋಷ್ಠಿಯು ಅನುಭವ ಮಂಟಪದಲ್ಲಿ ಸೇರಿತು. ಆಯ್ದಕ್ಕಿಮಾರಯ್ಯ 'ಕಾಯಕವೇ ಕೈಲಾಸ'—ಎಂಬ ತನ್ನ ಸ್ವಾನುಭವವನ್ನು ನಿರೂಪಿಸಿದನು.

6) "ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು' ಲಿಂಗಪೂಜೆಯಾದಡೂ ಮರೆಯಬೇಕು. ಜಂಗಮ ಮುಂದಿದ್ದಡೆಯೂ ಹಂಗು ಹರಿಯ

ಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು''

—ಎಂಬ ತತ್ತ್ವವನ್ನು ಶರಣಸಂದೋಹದಲ್ಲಿ ಪ್ರತಿಪಾದಿಸಿದನು. ಗುರು-ಲಿಂಗ ಜಂಗಮಕ್ಕಿಂತಲೂ ಕಾಯಕ ಹೆಚ್ಚೆಂದು ಒಪ್ಪಬೇಕೆ ? ಬಿಡಬೇಕೆ ? ಎಂಬುದೇ ಅಂದಿನ ಜಿಜ್ಞಾಸೆ. ಪ್ರಭು ಶರಣರ ಅನುಭಾವವನ್ನು ಕೇಳಿದನು. ಇನ್ನು ತನ್ನ ಅಭಿಮತವನ್ನು ತಿಳಿಸಬೇಕು.

''ಕಾಯಕವೇ ಕೈಲಾಸ'' ಎಂಬುದು ನಿಜ. ಆದರೆ ''ನಾನು ಕಾಯಕವನ್ನು ಮಾಡುತ್ತೇನೆ. ಅದರಿಂದ ಗುರು-ಲಿಂಗ-ಜಂಗಮವನ್ನು ತಣಿಸುತ್ತೇನೆ'' ಎಂಬ ಚಿತ್ತ ಭ್ರಮೆಯಿರಬಾರದು. ಅಂಥ ಕಾಯಕದಿಂದ ಪ್ರಯೋಜನವಿಲ್ಲ. ಈಶ್ವರಾರ್ಪಣ ಬುದ್ಧಿಯಿಂದ ನಿಷ್ಕಾಮ ಕಾಯಕ ಮಾಡಬೇಕು.

7) ''ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು. ಅರುವಿಂಗೆ ನೆಮ್ಮುಗೆ ಒಡಗೂಡಬೇಕು. ಅರುವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ ಭಯಭ್ರಮೆಯು ಕಳೆದು, ನಮ್ಮ ಗುಹೇಶ್ವರ ಲಿಂಗದಲ್ಲಿ ನಿಜಪದವನೈದುವುದು ಮಾರಯ್ಯ''

—ಎಂದು ಪ್ರಭು ಭಾವಶುದ್ಧವಾದ ನಿಷ್ಕಾಮಕಾಯಕವೇ ಶ್ರೇಷ್ಠವೆಂದು ತಿಳಿಸಿದನು. ಆಯ್ದಕ್ಕಿ ಮಾರಯ್ಯನ ಹೆಂಡತಿ ಲಕ್ಕಮ್ಮ ಆ ದಿನ ಈ ತತ್ತ್ವಾರ್ಥವನ್ನು ಕೇಳಿ ಆನಂದಿಸಿದಳು. ಪ್ರತಿದಿನವೂ ಮಾರಯ್ಯ ಬಸವಣ್ಣನ ಮಹಮನೆಯ ಅಂಗಳದಲ್ಲಿಯೂ ಶರಣರ ಮನೆಯ ಕಸದಲ್ಲಿಯೂ ಚೆಲ್ಲಿದ್ದ ಅಕ್ಕಿಯನ್ನು ಆಯ್ದು ತಂದು ತಾನೂ ತನ್ನ ಹೆಂಡತಿಯೂ ಗುರು ಲಿಂಗ ಜಂಗಮ ಸೇವೆ ಮಾಡುತ್ತಿದ್ದರು. ಇದೇ ಆತನ 'ಕಾಯಕ' ಶರಣನಾದವನು ತನಗೆ ಆವಶ್ಯಕವಾಗಿರುವುದಕ್ಕಿಂತ ಹೆಚ್ಚಾಗಿ ಯಾವುದನ್ನೂ ಸಂಗ್ರಹಿಸಬಾರದು. ಏಕೆಂದರೆ—

''ಭಕ್ತಂಗೆ ಬಡತನ ಉಂಟೆ ? ನಿತ್ಯರಿಗೆ ಮರಣ ಉಂಟೆ ? ಭಕ್ತರು ಬಡವರೆಂದು ಮತ್ತೊಂದ ಕೊಟ್ಟಹೆನೆಂದರೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ.''

''ಬಾಹಾಗ ಕೊಂಡುಬಂದ ಪ್ರಾಪ್ತಿಯಲ್ಲದೆ ಬೇರೊಂದು ಗಳಿಸಲಿಲ್ಲ. ಬೇರೊಂದು ಕೆಡಿಸಲಿಲ್ಲ. ಬಂದುದು ನಿಂದುದು. ಮಾರಯ್ಯ ಪ್ರಿಯ ಅಮರೇಶ್ವರಲಿಂಗ ಕೊಟ್ಟಲ್ಲದಿಲ್ಲ'' ಎಂಬುದೇ ಶರಣರ ಸಂದೇಶ. ಇದೇ ಸಮತಾವಾದದ ಉಗಮ. ಪ್ರಭು ಈ ತತ್ತ್ವವನ್ನು ಅನುಮೋದಿಸಿದನು.

ಅಂದು ಸಕಲ ಪ್ರಮಥರಿಗೂ ಆಯ್ದಕ್ಕಿ ಮಾರಯ್ಯನ ಮನೆಯಲ್ಲಿ ಆರೋಗಣೆಗೆ ಬಿನ್ನಹವಾಯಿತು. ಪ್ರಭುದೇವರ ಪಾದಪೂಜೆಯಾಯಿತು, ಷಡ್ರಸೋಪೇತವಾದ ಪ್ರಸಾದದಿಂದ ಶರಣರು ತೃಪ್ತಿಯಾದರು.

''ಉಭಯ ದೃಷ್ಟಿಯಲ್ಲಿ ದೃಷ್ಟವ ಕಾಂಬಂತೆ ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತು ಸಂಗನ ಬಸವಣ್ಣಾ'' ಎಂದು ಪ್ರಭು ತಲೆದೂಗಿದನು.

"ಮನೆ ನೋಡಾ ಬಡವರು. ಮನ ನೋಡಾ ಸಂಪನ್ನರು. ಧನ ನೋಡಾ ಬಡವರು. ಘನಮನ ಸಂಪನ್ನರು. ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು, ಆರಿಗುಂಪಮಿಸಬಾರದು"

ಎಂದು ಬಸವಣ್ಣ ಮೆಚ್ಚಿದನು.

ಪ್ರಭು ಆ ಶರಣ ದಂಪತಿಗಳಿಗೆ ಶಿವಜೀವೈಕ್ಯ ತತ್ತ್ವವನ್ನು ಉಪದೇಶಿಸಿದನು. ಆ ಸಾಧಕರು ಜೀವನ್ಮುಕ್ತ ಸ್ಥಿತಿಯನ್ನು ಪಡೆದು ನಿಜ ಸಮಾಧಿ ಜ್ಞಾನದಲ್ಲಿ ಮುಳುಗಿದರು.

ಚಂದ್ರಕಾಂತಶಿಲೆಯಲ್ಲಿ ಬಿಂದು ಅಡಗಿದಂತೆ, ಗೋವುಗಳಲ್ಲಿ ಗೋರೋಚನ ರಂಜಿಸುವಂತೆ, ಶಿಲೆಕಾಷ್ಠಂಗಳಲ್ಲಿ ಅನಲ ಅಡಗಿಪ್ಪಂತೆ, ಸತ್ಯರ ಹೃದಯದಲ್ಲಿ ಮೌಕ್ತಿಕದ ಉದಕದಂತೆ ಭಾವವಿಲ್ಲದೆ ಅಡಗಿದೆ ಅಮಲೇಶ್ವರ ಲಿಂಗದಲ್ಲಿ "ಎಂದು ಆಯ್ದಕ್ಕಿ ಮಾರಯ್ಯ ಲಿಂಗಸ್ವರೂಪಿಯಾದನು. ಲಕ್ಕಮ್ಮ ಪರಂಜ್ಯೋತಿಸ್ವರೂಪಳಾದಳು.

ಮೋಳಿಗೆಯ ಮಾರಯ್ಯ ಮತ್ತು ಆತನ ಹೆಂಡತಿ ಮಹಾದೇವಿಯಮ್ಮ ಇಬ್ಬರೂ ಕಾಶ್ಮೀರದೇಶದ ರಾಜದಂಪತಿಗಳು. ಅವರು ರಾಜ್ಯವನ್ನು ತ್ಯಜಿಸಿ ವೈರಾಗ್ಯಭಾವದಿಂದ ಕಲ್ಯಾಣಕ್ಕೆ ಬಂದು ಜಂಗಮಾರ್ಚನೆಯಿಂದ ಸಂತೋಷಿಸುತ್ತಿದ್ದರು. ಆತನು ಕಾಡಿನಿಂದ ಕಟ್ಟಿಗೆ ಹೊರೆಗಳನ್ನು ಹೊತ್ತು ತಂದು ಮಾರಿ ಜಂಗಮ ದಾಸೋಹ ನಡೆಸುತ್ತಿದ್ದನು. ನುಲಿಯ ಚಂದಯ್ಯನೆಂಬ ಶರಣನು ಹಗ್ಗಗಳನ್ನು ಹೊಸೆದು ಮಾರಿ ಬಂದ ಹಣದಿಂದ ಗುರು ಲಿಂಗ ಜಂಗಮ ಸೇವೆ ಮಾಡುತ್ತಿದ್ದನು. ಪ್ರಭು ಈ ಶರಣರ ನಿಷ್ಠೆಯನ್ನು ಕಂಡು ಅವರಿಗೆಲ್ಲ ನಿತ್ಯಸುಖದ ಮಾರ್ಗವನ್ನು ಬೋಧಿಸಿದನು.

ಶಿವಾನುಭವಮಂಟಪದಲ್ಲಿ ನಡೆಯುತ್ತಿದ್ದ ಶರಣಗೋಷ್ಠಿಯೆಂದರೆ ಒಣ ವೇದಾಂತಿಗಳ ಶಾಸ್ತ್ರಾರ್ಥವಲ್ಲ ; ಶಿವಜ್ಞಾನ ನಿಧಿಗಳ ಶಿವಾನುಭವದ ತತ್ತ್ವಾರ್ಥ ; ಅಲ್ಲಿ ಮೇಲು ಕೀಳೆಂಬ ಬಡವ-ಬಲ್ಲಿದನೆಂಬ ಹೀನ ಮನೋಭಾವ ಸುಳಿಯುತ್ತಿರಲಿಲ್ಲ. ಹೆಣ್ಣು ಗಂಡೆಂಬ ದುರಭಿಮಾನವಿಲ್ಲ. ಶಿವಜ್ಞಾನಸಂಪನ್ನರಾದ ಶರಣರು ಸರ್ವ ಸಮತಾಭಾವದಿಂದ ಪ್ರಪಂಚವನ್ನು ಶಿವಮಯವೆಂದೇ ಭಾವಿಸುತ್ತಿದ್ದರು. ಪ್ರಭು ಆ ಶಿವಶರಣರ ಸಾಧನಾ ಮಾರ್ಗದಲ್ಲಿ ಓರೆಕೋರೆಗಳನ್ನು ತಿದ್ದಿ ಅವರನ್ನು ಲಿಂಗದೇಹಿಗಳನ್ನಾಗಿ ಮಾಡುತ್ತಿದ್ದನು. ಎಂದಿನಂತೆ ಶಿವಗೋಷ್ಠಿಯಲ್ಲಿ ಪ್ರಭು ಅನುಭವಮಂಟಪದಲ್ಲಿ ಆಸೀನನಾಗಿದ್ದನು. ಆ ಸಮಯದಲ್ಲಿ ಶಿವಶರಣೆ ಉಡುತಡಿಯ ಮಹಾದೇವಿಯಕ್ಕ ಶಿವಾನುಭವ ಮಂಟಪದ ಕಡೆಗೆ ಬರುತ್ತಿದ್ದುದನ್ನು ಶರಣರು ದೂರದಿಂದಲೇ ನೋಡಿದರು. ಆಕೆಗೆ ಹದಿನಾರು ವರ್ಷ ತುಂಬುಪ್ರಾಯ. ಅವಳು ಚೆಲುವಿನ ಗಣಿ ; ರೂಪಿನ ಮಣಿ ; ನೀಳವಾದ ಅವಳ ತಲೆಯ ಕೂದಲೇ ಅವಳ ಮೈಯನ್ನು ಮುಚ್ಚಿದ್ದಿತು. ಆಕೆ ದಿಗಂಬರಳಾಗಿ ಬರುತ್ತಿದ್ದಳು. ಆಕೆಯನ್ನು ನೋಡಿ ಬಸವಣ್ಣ ತನ್ನ ಹೆತ್ತ ತಾಯಿ ಬರುತ್ತಿರುವಳೆಂದು ಬಗೆದನು. ಆಕೆ ಮುಕ್ತಿಯ ತವರುಮನೆ ; ಶಿವಾನುಭಾವ ಸಂಪನ್ನೆ ; ಪುಣ್ಯದ ಪುಂಜೆ ; ಚಿದಂಬರ ಸಂಯುತೆ-ಎಂದು ಶಿವಶರಣರ ಮನಸ್ಸಿಗೆ

ಹೊಳೆಯಿತು. ಆಕೆ ಪ್ರತ್ಯಕ್ಷ ಮುಕ್ತ್ಯಂಗನೆಯಂತಿದ್ದಳು. ಪ್ರಭು ಆಕೆಯನ್ನು ಕಂಡು ಮನಸ್ಸಿನಲ್ಲಿಯೇ ಆನಂದಿಸಿದನು. "ಆ ಜ್ಞಾನನಿಧಿಯ ಮಹಿಮೆಯನ್ನು ಶರಣರಿಗೆ ಮನಗಾಣಿಸಬೇಕು. ಆಕೆಯ ನೈಷ್ಠಿಕ ಬ್ರಹ್ಮಚರ್ಯೆಯನ್ನು ಲೋಕಕ್ಕೆ ಬೆಳಗಿಸಬೇಕು. ಆಕೆಯ ಸ್ವಾನಂಭವದ ಆಳವನ್ನು ಅಳೆಯಬೇಕು. ಆಕೆಯ ತತ್ತ್ವದೃಷ್ಟಿಯ ನೆಲೆಯನ್ನು ಪರೀಕ್ಷಿಸಬೇಕು. ಆಕೆಯ ಆಧ್ಯಾತ್ಮಿಕ ಮನೋಭಾವದ ಔನ್ನತ್ಯವನ್ನು ಕಾಣಬೇಕು. ಆಕೆಯ ಸಾಧನಾ ಮಾರ್ಗವನ್ನು ನೋಡಬೇಕು. ತರುವಾಯ ಆಕೆಯನ್ನು ಅನುಗ್ರಹಿಸಬೇಕು"–ಎಂದು ಪ್ರಭುವಿಗೆ ಅರೆಕ್ಷಣದಲ್ಲಿ ಇವೆಲ್ಲವೂ ಹೊಳೆಯಿತು. ಕಿನ್ನರಿ ಬೊಮ್ಮಯ್ಯ ಭಕ್ತಿಗೌರವದಿಂದ ಆಕೆಯನ್ನು ಇದಿರುಗೊಂಡು ಶಿವಾನುಭವ ಮಂಟಪಕ್ಕೆ ಕರೆತಂದನು.

8) "ಉದಮದದ ಯೌವನವನೊಳಕೊಂಡು ಸತಿ ನೀನು ಇತ್ತಲೇತಕ್ಕೆ ಬಂದೆಯವ್ವ ? ಸತಿ ಎಂದರೆ ಮುನಿವರು ನಮ್ಮ ಶರಣರು. ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು. ಅಲ್ಲದಿರ್ದರೆ ತೊಲಗು ತಾಯೇ. ಗುಹೇಶ್ವರ ಶರಣರಲ್ಲಿ ಲಿಂಗದ ಸಂಗಸುಖವ ಬಯಸುವರೆ ನಿನ್ನ ಪತಿಯ ಕುರುಹು ಹೇಳಾ ಎಲೆ ಅವ್ವಾ"

—ಎಂದು ಪ್ರಭು ನಿರ್ದಾಕ್ಷಿಣ್ಯವಾಗಿ ಕೇಳಿಯೇ ಬಿಟ್ಟನು. ಶಿವಶರಣರು ಆಶ್ಚರ್ಯ ಚಕಿತರಾದರು. ಅನುಭವ ಮಂಟಪವು ಸ್ತಬ್ಧವಾಯಿತು. ಮಹಾದೇವಿಯಕ್ಕ-"ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ ; ಹಸೆಯ ಮೇಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರ ಕಳುಹಿದರೆಮ್ಮವರು. ಭಸ್ಮವನೆ ಹೂಸಿ ಕಂಕಣವನೆಕಟ್ಟಿ ಚನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು."

"ಪಚ್ಚೆಯಂದ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವಿಕ್ಕಿ ಮದುವೆಯ ಮಾಡಿದರೆಮ್ಮವರೆನ್ನ ಮದುವೆಯ ಮಾಡಿದರು. ಕಂಕಣಕೈದಾರೆ ಸ್ಥಿರ ಸೇಸೆಯನಿಕ್ಕಿ ಚನ್ನ ಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆ ಮಾಡಿದರು."

10) "ಗುರುವೇ ತೆತ್ತಿಗನಾದ, ಲಿಂಗವೇ ಮದವಳಿಗನಾದ, ನಾನೇ ಮದವಳಿಗೆಯಾದೆನು. ಈ ಭುವನವೆಲ್ಲವರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು. ಕೊಟ್ಟರು ಪ್ರಭುವಿನ ಮನೆಗೆ ಸಾದೃಶ್ಯವಪ್ಪ ವರನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ ಪ್ರಭುವೆ."

11) "ಸಾವಿಲ್ಲದೆ ಸಹಜಂಗೆ ರೂಹಿಲ್ಲದ ಚೆಲುವಂಗೆ ಭವವಿಲ್ಲದ ಅಭವಂಗೆ ನಿಶ್ಚಯದ ನಿಶ್ಚಲಗೆ ನಾನೊಲಿದೆನಯ್ಯಾ ಚೆನ್ನಮಲ್ಲಿಕಾರ್ಜುನಂಗೊಲಿದ ಕಾರಣ ಮಿಕ್ಕಿನವರಾರು ಸಂಬಂಧವಿಲ್ಲಯ್ಯಾ"

—ಎಂದು ತನಗೆ ಆಗಿದ್ದ 'ಆತ್ಮಕಲ್ಯಾಣ' ದ ರೀತಿಯನ್ನು ತಿಳಿಸಿದಳು. ಶರಣಸತಿ–ಲಿಂಗಪತಿ ಎಂಬ ಭಾವನೆ ಅವಳಲ್ಲಿ ಪರಿಪೂರ್ಣವಾಗಿತ್ತು. ದೇವರನ್ನು ತನ್ನ ಪ್ರಿಯನಂತೆ ಪ್ರೀತಿಸಿ, ನಲಿಸಿ, ಒಲಿಸಿ, ಅವನ ಹಂಬಲದಲ್ಲಿಯೇ ಅರಸುತ್ತಿದ್ದಳು. ಆ

ವಯಸ್ಸಿಗೆ ಆಕೆ ಗಳಿಸಿದ್ದ ಆಧ್ಯಾತ್ಮಿಕ ಜೀವನದ ಮಟ್ಟ ಬಹು ಉನ್ನತವಾಗಿತ್ತು. ಆಕೆ ಭಕ್ತಿ ಜ್ಞಾನ ವೈರಾಗ್ಯಗಳೇ ಮೂರ್ತಿವೆತ್ತಂತೆ ಕಾಣುತ್ತಿದ್ದಳು. ಆಕೆ ಸಾಮಾನ್ಯಳಲ್ಲ ; ಮಹಾ ಶಿವಶರಣೆ.

ಮಹಾದೇವಿಯಕ್ಕ ಉಡುತಡಿಯ ಶಿವಭಕ್ತ, ಶಿವಭಕ್ತೆ ಎಂಬ ದಂಪತಿಗಳಿಗೆ ಒಬ್ಬಳೇ ಮಗಳು. ಚಿಕ್ಕಂದಿನಿಂದಲೂ ಆಕೆ ಶಿವಪೂಜೆ ಶಿವಧ್ಯಾನಗಳಲ್ಲಿಯೇ ನಿರತಳಾಗಿದ್ದಳು. ಆ ನಾಡಿನ ದೊರೆ ಕೌಶಿಕನೆಂಬುವನು. ರೂಪು ಯೌವನಭರಿತಳಾದ ಮಹಾದೇವಿಯಕ್ಕನನ್ನು ಮೋಹಿಸಿ ಆಕೆಯನ್ನು ವಿವಾಹವಾಗಬೇಕೆಂದು ಬಯಸಿದನು. ಶಿವತತ್ತ್ವ, ಶಿವಭಕ್ತ ನಿಷ್ಠಳಾದ ಮಹಾದೇವಿಯಕ್ಕ ಈ ಭವಸಂಸಾರವನ್ನು ಪರಿತ್ಯಜಿಸಿ ಆ ದೊರೆಯನ್ನು ತಿರಸ್ಕರಿಸಿ ವೈರಾಗ್ಯಭಾವದಿಂದ, ದಿಗಂಬರೆಯಾಗಿ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಕಲ್ಯಾಣ ಪಟ್ಟಣದ ಕಡೆಗೆ ಬಂದಳು. ಆಕೆಯು ಬಸವಣ್ಣನ ಭಕ್ತಿ ಸಂದರ್ಶನ ಮಾಡಿ ಪ್ರಭುವಿನ ಅನುಗ್ರಹವನ್ನು ಪಡೆಯಬೇಕೆಂದು ಅಂದು ಶಿವಾನುಭವ ಮಂಟಪಕ್ಕೆ ಬಂದಳು. ಶ್ರೀ ಶೈಲದ ಮಲ್ಲಿಕಾರ್ಜುನನೇ ತನಗೆ ಗಂಡನೆಂಬ ಸ್ಥಿರಭಾವನೆಯಿಂದ ಆಕೆ ದೈವಸಾಕ್ಷಾತ್ಕಾರಕ್ಕಾಗಿ ಹಲುಬುತ್ತಿದ್ದಳು.

ಪ್ರಭು ಮಹಾದೇವಿಯಕ್ಕನ ವೈರಾಗ್ಯದ ಅಂತಸ್ತನ್ನು ಕಂಡು ಬೆರಗಾಗಿರಬೇಕು. ಆದರೂ, ಆಕೆಯ ಪರಿಪಕ್ವ ಮನೋಭಾವವನ್ನು ಪ್ರಭು ಶರಣರಿಗೆ ಮನಗಾಣಿಸಬೇಕೆಂದು ಆಕೆಯ ಆತ್ಮಪರೀಕ್ಷೆಯನ್ನು ಮಾಡಬೇಕಾಯಿತು' ಆಕೆಯ ಸಚ್ಚರಿತ್ರೆ ಪ್ರಭುವಿಗೆ ತಿಳಿದಿತ್ತು. ಆಕೆ ಭವಿ ಕೌಶಿಕನನ್ನು ತಿರಸ್ಕರಿಸಿ ವೈರಾಗ್ಯಭಾವದಿಂದ ಮನೆಯನ್ನು ಬಿಟ್ಟು ಬಂದಿದ್ದಳೆಂಬುದನ್ನೂ ಅರಿತಿದ್ದನು. ಆದ್ದರಿಂದ ಪ್ರಭು ಆಕೆಯನ್ನು

12) ''ತಪ್ಪ ಹೊರಿಸಿ ಹೊರಟೆನೆಂಬುದು ಸತ್ಯವೆ ? ತನುಸಿರಿಯನಳಿದು ನಿರ್ವಾಣವಾದಲ್ಲಿ ಮನದ ಭ್ರಾಂತು ನಿಶ್ಚಯವಾಗದು. ಕೇಶವೆಂಬ ಸೀರೆಯ ಅಂಗಕ್ಕೆ ಮರೆಯಾಯಿತ್ತು. ಅಪಮಾನವೆಂತು ಹರಿಯಿತ್ತು. ಅದು ಗುಹೇಶ್ವರ ಲಿಂಗಕ್ಕೆ ಸಲ್ಲದ ವೇಷ''

ಎಂದು ನಿಷ್ಠುರವಾಗಿ ಕೇಳಿದನು.

13) ಅಕ್ಕ : ''ಅಂಗವಿಕಾರ ಸಂಗವ ಮರೆದು ಲಿಂಗವನೊಡಗೂಡುತಿಪ್ಪವರ ತೋರಾ ಎನಗೆ. ಕಾಮವಿಕಾರಕತ್ತಲೆಯಳಿದು ಭಕ್ತಿಯೇ ಪ್ರಾಣವಾಗಿಪ್ಪವರ ತೋರಾ ಎನಗೆ. ತ್ರಿಕರಣಶುದ್ಧವಾಗಿ ನಿಮ್ಮ ನೆರೆನಂಬಿದ ಸದ್ಭಕ್ತರ ತೋರಾ ಎನಗೆ ಚೆನ್ನಮಲ್ಲಿಕಾರ್ಜುನ.''

14) ''ಕಾಯ ಕರ್ರನೆ ಕಂದಿದರೇನಯ್ಯಾ ? ಕಾಯ ಮಿರ್ರನೆ ಮಿಂಚಿದರೇನಯ್ಯಾ ? ಅಂತರಂಗ ಶುದ್ಧವಾದ ಬಳಿಕ ಚೆನ್ನ ಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದರೇನಯ್ಯ''
—ಎಂದು ಉತ್ತರ ಹೇಳಿದಳು.

ಅಕೆ ತನ್ನ ಅಂತರಂಗದಲ್ಲಿ ಮಲ್ಲಿಕಾರ್ಜುನನನ್ನು ಪ್ರೇಮರೂಪದಿಂದ ಆರಾಧಿಸು ತ್ತಿದ್ದಳು. ಆದ್ದರಿಂದ ಆಕೆಯು ತನು ಲಿಂಗಸ್ವರೂಪವಾಗಿ ಪರಶಿವನ ಕಳೆಯಿಂದ ತುಂಬಿರುವುದರಿಂದ ಶರೀರಾಭಿಮಾನವೇ ಅಳಿದುಹೋಗಿದೆಯೆಂದು ಅವಳ ಭಾವನೆ. ಪ್ರಭು ಅಷ್ಟಕ್ಕೆ ತೃಪ್ತನಾಗಲಿಲ್ಲ—

15) "ದೇವನೊಲಿಯದೆ ನೀನೊಲಿದೆನೆಂಬುದು ಅದಾವುದಕ್ಕೆ ? ಭಾವ ಶುದ್ಧವಾದಲ್ಲಿ ಸೀರೆಯನಳಿದು ಕೂದಲ ಮರೆಮಾಡಲೇತಕ್ಕೆ ? ಅದು ಅಂತರಂಗದ ನಾಚಿಕೆ. ಬಾಹ್ಯದಲ್ಲಿ ತೋರಿತ್ತು. ಅದು ಗುಹೇಶ್ವರ ಲಿಂಗಕ್ಕೆ ಒಲವರಲ್ಲ".

ಎಂಬ ಮಾತಿನಿಂದ ಅವಳ ಅಂತರಂಗ ಶುದ್ಧಿಯಾಗಿರುವುದೆ ? ಎಂದು ಪ್ರಶ್ನೆ ಮಾಡಿದನು.

16) **ಅಕ್ಕ :—** ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು, ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತ್ತೆಂದು ಆ ಭಾವದಿಂದೆ ಮುಚ್ಚಿದೆ. ಇದಕ್ಕೆ ನೋವೇಕೆ ? ಕಾಡದಿರಣ್ಣಾ ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳಾ,

17) "ಎನ್ನ ತನು ಶುದ್ಧವಾಯಿತ್ತು ಶಿವಭಕ್ತರೊಕ್ಕದನುಂಡು, ಎನ್ನ ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದು. ಎನ್ನ ಕಂಗಳು ಶುದ್ಧವಾಯಿತ್ತು ಇದು ಸಕಲ ಶಿವಗಣಂಗಳ ಮುಖವ ನೋಡಿ. ಎನ್ನ ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತನೆಯ ಕೇಳಿ, ಎನ್ನ ಭಾವನೆ ಎನಗಿದು ಜೀವನವು ಕೇಳಾ ಲಿಂಗತಂದೆ. ನೆಟ್ಟನೆ ನಿಮ್ಮ ಪೂಜಿಸಿ ಭವಗೆಟ್ಟೆನು ಕಾಣಾ ಚೆನ್ನ ಮಲ್ಲಿಕಾರ್ಜುನಾ".

ಎಂಬ ತತ್ತ್ವಾರ್ಥಗರ್ಭಿತವಾದ ಉತ್ತರವನ್ನು ಕೇಳಿ, ಪ್ರಭು ಒಪ್ಪಿದನು. ಶರಣರು ಅವರವರ ಅಂತಸ್ತಿಗೆ ಅನುಗುಣವಾಗಿ ಅಕ್ಕನ ನೆಲೆಯನ್ನು ಅರಿತರು, ಆಕೆ ಪ್ರಭುವಿನಲ್ಲಿ ಅನನ್ಯಭಾವದಿಂದ ಶರಣು ಹೋಗುತ್ತಾಳೆ. ಮಹಾದೇವಿಯಕ್ಕನ ಅದ್ವೈತ ಮನೋಭಾವನೆಯನ್ನು ಪ್ರಭು ಒಪ್ಪಲೇಬೇಕಾಯಿತು. ತನ್ನ ಮೆಚ್ಚುಗೆ ಯನ್ನು ಮುಚ್ಚುಮರೆಯಿಲ್ಲದೆ ಪ್ರಭು ತಿಳಿಸಿದನು.

18) "ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು. ಮನಗುಣನಾಸ್ತಿ ಯಾಗಿ ಅರಿವು ಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು. ತಾನಿದಿರೆಂಬೆರಡಳಿದು ನಮ್ಮ ಗುಹೇಶ್ವರ ಲಿಂಗದಲ್ಲಿ ಸ್ವಯಂ ಲಿಂಗವಾದ ಮಹಾದೇವಿ ಯಕ್ಕಗಳ ನಿಲಿವಿಂಗೆ ಶರಣೆನುತಿರ್ದೆನು."

ಎಂದು ಪ್ರಭು ತಲೆಬಾಗಿ ಅಕ್ಕನನ್ನು ವಂದಿಸಿದನು. ಪ್ರಭು ಮಹಾಗುರು ; ಅವನು ಲಿಂಗಮೂರ್ತಿ ; ನಿರಂಜನ ಜಂಗಮ. ಅಕ್ಕ ಆ ಪ್ರಭುವನ್ನು ಅರಸುತ್ತ ಬಂದು ಆತನ ಅನುಗ್ರಹಕ್ಕೆ ಪಾತ್ರಳಾದಳು. ಇನ್ನು ನಿಜಸಮಾಧಿಯ ನೆಲೆಯನ್ನು ಆತನಿಂದ ತಿಳಿಯಬೇಕಾಗಿದೆ—

19) "ಗಿರಿಯೊಳು ವನದೊಳು ಗಿಡದತ್ತ ದೇವ ಎನ್ನ ದೇವ ಬಾರಯ್ಯ ತೋರಯ್ಯ ನಿಮ್ಮ ಕರುಣವನೆಂದು ನಾನು ಅರಸುತ್ತ ಅಳಲುತ್ತ ಕಾಣದೆ ಸುಯಿದು ಬಂದು ಕಂಡೆ ಶರಣರ ಸಂಗದಿಂದ. ಅರಸಿ ಹಿಡಿದೇನೆಂದು ನೀನಡಗುವ ಠಾವ ಹೇಳಾ ಮಲ್ಲಿಕಾರ್ಜುನಾ."

20) "ಲಿಂಗಸುಖ ಸಂಗದಲ್ಲಿ ಮನವೇದ್ಯವಾಯಿತ್ತು. ಇನ್ನೆಂತಯ್ಯಾ ಎನಗೆ ನಿಮ್ಮಲ್ಲಿ ನಿರವಯವು. ಇನ್ನೆಲ್ಲಿಯದಯ್ಯಾ ನಿಮ್ಮಲ್ಲಿ ಕೂಡುವುದು. ಪರಮಸುಖ ಪರಿಣಾಮ ಮೇರೆದಪ್ಪಿ ನಾನು ನಿಜವನೈದುವ ಠಾವ ಹೇಳಾ ಚೆನ್ನ ಮಲ್ಲಿಕಾರ್ಜುನ ಪ್ರಭುವೆ."

—ಎಂದು ಆಕೆ ಪ್ರಭುವನ್ನು ಭಕ್ತಿಯಿಂದ ಬೇಡಿದಳು. ಆತನು ಅಕ್ಕನಿಗೆ ಶಿವಪಥವನ್ನು ತಿಳಿಸಿ ಆಶೀರ್ವದಿಸಿದನು. ಆಕೆಯನ್ನು ಕುರಿತು ಮಗಳೇ ;

21) "ನೀನು ನಾನೆಂಬುಭಯ ಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ ತುಟ್ಟತುದಿಯಲಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ ; ಆ ಬಟ್ಟಬಯಲು ಬೆರೆಸುವರ ಶ್ರೀ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ. ಆ ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ. ನಡೆಯಲ್ಲಿಗೆ ತಾಯೇ ಗುಹೇಶ್ವರ ಲಿಂಗದಲ್ಲಿ ಪರಮಪದವು ನಿನಗೆ ಸಯವಪ್ಪುದು ನೋಡಾ."

—ಎಂದು ಪ್ರಭು ಶಿವಯೋಗ ರಹಸ್ಯಪೂರ್ಣವಾದ ಉಪದೇಶವನ್ನು ಮಾಡಿ ಆಕೆಗೆ ಶಿವಜೀವೈಕ್ಯವನ್ನು ತಿಳಿಸಿದನು. ಅಕ್ಕ ಧನ್ಯಳಾದಳು. ಆಕೆಯ ವೈರಾಗ್ಯ ಫಲ ಬಿಟ್ಟಿತು. ಜ್ಞಾನ ಪರಿಪೂರ್ಣವಾಯಿತು. "ನಿಮ್ಮ ಮಂಡೆಗೆ ಹೂವತಹೆನಲ್ಲದೆ ಹುಲ್ಲು ತಾರೆನು" ಎಂದು ಆಕೆ ಎಲ್ಲರನ್ನೂ ಬೀಳ್ಕೊಂಡು ಕಲ್ಯಾಣದಿಂದ ಹೊರಟು ಶ್ರೀಶೈಲದ ಕಡೆಗೆ ಬರುತ್ತಿದ್ದಳು. ಆಕೆ ಶ್ರೀಗಿರಿಯನ್ನು ಸೇರಿ ಚೆನ್ನಮಲ್ಲಿಕಾರ್ಜುನನನ್ನು ಕಣ್ಣಾರೆ ಕಂಡು ಆನಂದಿಸಿದಳು. ಚೆನ್ನಮಲ್ಲಿಕಾರ್ಜುನನು ಆಕೆಯನ್ನು ತನ್ನ ಹೃತ್ಕಮಲ ಮಧ್ಯದಲ್ಲಿ ಅಡಗಿಸಿಕೊಂಡನು. "ವಾರಿಕಲ್ಲು ವಾರಿಯ ಬೆರೆದಂತೆ ಕ್ಷೀರ ಕ್ಷೀರ ಬೆರೆದಂತೆ" ಅಕ್ಕ ಪರಶಿವನಲ್ಲಿ ಐಕ್ಯವಾದಳು.

'ಅನುಭವ ಮಂಟಪ' ಶರಣರ ಅಧ್ಯಾತ್ಮಸಾಧನೆಯ, ಸಿದ್ಧಿಯ, ಸೋಪಾನ ಸ್ಥಾನ. ಪ್ರತಿಯೋರ್ವರಿಗೂ ಅಧ್ಯಾತ್ಮ ಸ್ವಾತಂತ್ರ್ಯ ಲಭಿಸಿತ್ತೆಂಬುದಕ್ಕೆ ಅನುಭವ ಮಂಟಪವೇ ಸಾಕ್ಷಿ. ಅಧ್ಯಾತ್ಮಸಾಧನೆಯಲ್ಲಿ ಎದುರಾಗುವ ತೊಡುಕು–ತೊಂದರೆಗಳನ್ನು, ಸಂದು–ಸಂಶಯುಗಳನ್ನು, ಸಂಕಲ್ಪ-ವಿಕಲ್ಪಗಳನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಶಿವಾನುಭಾವದಲ್ಲಿ ಮುನ್ನಡೆದವರು ಇತರರಿಗೆ ಹೇಗೆ ಸಹಾಯವೆಸಗುತ್ತಿದ್ದರೆಂಬುದಕ್ಕೆ ಅನುಭವಮಂಟಪವೇ ನಿದರ್ಶನ. ವೈಚಾರಿಕಕ್ರಾಂತಿಗೆ ಖ್ಯಾತಿವೆತ್ತ ವಿಜ್ಞಾನಯುಗದಲ್ಲಿಯೂ ಸಹ ಜಗತ್ತಿನಲ್ಲೆಲ್ಲ ಇಂತಹ ಅನುಭವಮಂಟಪಗಳು

ಅಸ್ತಿತ್ವಕ್ಕೆ ಬಂದು ವಿಚಾರವಂತರು, ಸಾಹಿತಿಗಳು, ದಾರ್ಶನಿಕರು, ಸಕಲಜೀವಾವಳಿಗೆ ಲೇಸ ಬಯಸುವವರು ರಾಜಕೀಯ ಪಟುಗಳು, ವಿಜ್ಞಾನಿಗಳು, ಆಡಳಿತಾಧಿಕಾರಿಗಳು ಅದರಲ್ಲಿ ಭಾಗವಹಿಸಿ ಸರ್ವಸಮ್ಮತದಿಂದ ವಿಶ್ವಕಲ್ಯಾಣಕ್ಕೆ ಸಹಾಯವೆಸಗುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ವಿಶ್ವದಲ್ಲಿ ಚಿರಶಾಂತಿ ಚಿರಸ್ಥಾಯಿಯಾಗಿ ನೆಲೆಸಬಲ್ಲದು,

೦—೦

ಆಸೆಯುಳ್ಳನ್ನಕ್ಕ, ಒಬ್ಬರ ಆಶ್ರಯಿಸುವುದು
ಆಶ್ರಯದಾಸೆ ಕಷ್ಟ ಕಾಣಿರಯ್ಯ
ಆಸೆಯೇ ದಾಸತ್ವ, ನಿರಾಶೆಯೇ ಈಶತ್ವ
ದಾಸತ್ವದ ಈಶತ್ವದ ಈ ಅನುವ ವಿಚಾರಿಸಿ,
ನಿರಾಶೆಯಾಗಿಪ್ಪುದೇ ಈಶಪದವಯ್ಯ
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ

—ಉರಿಲಿಂಗ ಪೆದ್ದಿಗಳು.

ನಮ್ಮ ಲೇಖಕರ ವಿಳಾಸ

1) ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ಶಕ್ತಿವಿಶಿಷ್ಟಾದ್ವೈತ ವಿಶ್ರಾಂತ ಪ್ರಾಧ್ಯಾಪಕರು,
ಪ್ರಬೋಧ ಮುದ್ರಣಾಲಯ
ಶ್ರೀ ಬಸವೇಶ್ವರ ರಸ್ತೆ, ಮೈಸೂರು-4

2) ವೈದ್ಯ ಶ್ರೀ ಗುರುಸಿದ್ಧಪ್ಪ, ಹೆಗ್ಗವಾಡಿ
ಚಾಮರಾಜನಗರ ತಾಲ್ಲೋಕು

3) ಶ್ರೀಯುತ ಪಿ. ಬಸವಣ್ಣ ಬಿ. ಎಸ್‌ಸಿ, ಬಿ. ಎಲ್
ಅಧ್ಯಕ್ಷರು, ನಿಜಗುಣಾನುಭವ ಮಂಟಪ
ಶಂಭುಲಿಂಗನಬೆಟ್ಟ, ಕೊಳ್ಳೇಗಾಲ ತಾಲ್ಲೋಕು

4) ಶ್ರೀಯುತ ಹೆಜ್ಜಿಗೆ ಲಿಂಗಣ್ಣ ಬಿ. ಎಸ್‌ಸಿ, ಎಲ್‌ಎಲ್. ಬಿ
ಮಾಜಿ ಶಾಸಕರು
ಹೌಸಿಂಗ್ ಬೋರ್ಡ್ ಕಾಲೋನಿ, ನಂಜನಗೂಡು

5) ಡಾ. ಬಿ. ನಂ ಚಂದ್ರಯ್ಯ ಎಂ. ಎ. ಪಿಎಚ್. ಡಿ
ಕನ್ನಡ ಪ್ರವಾಚಕರು
ಮಹಾರಾಜ ಕಾಲೇಜು, ಮೈಸೂರು-5

6) ಶ್ರೀಯುತ ಕ. ಪು. ಮಹಾದೇವಪ್ಪ ಎಂ. ಎ.,
ಕನ್ನಡ ಉಪನ್ಯಾಸಕರು
ಜೆ. ಎಸ್. ಎಸ್. ಕಾಲೇಜು, ನಂಜನಗೂಡು

7) ಶ್ರೀಯುತ ವೀರಣ್ಣ ಎಂ. ಎ., ಜೀವಠಾರಹಳ್ಳಿ
ಕನ್ನಡ ಉಪನ್ಯಾಸಕರು
ಜೆ. ಎಸ್. ಎಸ್. ಮಹಿಳಾ ಕಾಲೇಜು
ಸರಸ್ವತಿಪುರಂ, ಮೈಸೂರು

8) ಶ್ರೀಯುತ ಸಿ. ಸುಬ್ಬಣ್ಣ ಎಂ. ಎ.,
ಭೂಗೋಳಶಾಸ್ತ್ರ ಉಪನ್ಯಾಸಕರು
ಜೆ. ಎಸ್. ಎಸ್. ಕಾಲೇಜು, ನಂಜನಗೂಡು

9) ಶ್ರೀಯುತ ಡಿ. ಎಸ್. ಸದಾಶಿವಮೂರ್ತಿ ಎಂ. ಎ.,
ಅರ್ಥಶಾಸ್ತ್ರ ಉಪನ್ಯಾಸಕರು
ಜೆ. ಎಸ್. ಎಸ್. ಕಾಲೇಜು, ಗುಂಡ್ಲುಪೇಟೆ

10) ಶ್ರೀಮತಿ ಜಗದಂಬಾ ಮಲ್ಲೇದೇವರು, ಎಂ. ಎ., ಡಿಪ್ ಇನ್-ಎಪಿಗ್ರಫಿ
ಕನ್ನಡ ಉಪನ್ಯಾಸಕರು
ಜೆ. ಎಸ್. ಎಸ್. ಮಹಿಳಾ ಕಾಲೇಜು
ಸರಸ್ವತಿಪುರಂ, ಮೈಸೂರು

11) ಶ್ರೀಯುತ ಡಿ. ಎಸ್. ಮಹದೇವಯ್ಯ (ಕೇಸರಿ)
ಹೆಗ್ಗಡಹಳ್ಳಿ, ನಂಜನಗೂಡು ತಾಲ್ಲೋಕು

12) ಶ್ರೀಯುತ ಹೆಚ್. ವಿ. ವೀರಭದ್ರಯ್ಯ ಎಂ. ಎ.,
ಕನ್ನಡ ಉಪನ್ಯಾಸಕರು
ಸಿದ್ಧಗಂಗಾ ಕಾಲೇಜು, ತುಮಕೂರು

13) ಶ್ರೀಯುತ ಎಸ್. ನಂಜುಂಡಯ್ಯ. ಎಂ.ಎ.
ಕನ್ನಡ ಪ್ರವಾಚಕರು
ಮಹಾರಾಜ ಕಾಲೇಜು, ಮೈಸೂರು

14) ಡಾ. ಡಿ, ಎಲ್ ಪಾಟೀಲ್ ಎಂ.ಎ. ಪಿಹೆಚ್.ಡಿ.
ಪ್ರವಾಚಕರು ಮತ್ತು ವಿಭಾಗಮುಖ್ಯರು
ತತ್ತ್ವಶಾಸ್ತ್ರ ವಿಭಾಗ
ಮಹಾರಾಜ ಕಾಲೇಜು, ಮೈಸೂರು

15) ಶ್ರೀಯುತ ಎಚ್. ಗಂಗಾಧರನ್. ಎಂ.ಎ. ಬಿ.ಎಲ್.,
ಮಾಜಿ ಶಾಸಕರು. ಪ್ರಾಂಶುಪಾಲರು
ಜೆ.ಎಸ್.ಎಸ್. ಲಾ ಕಾಲೇಜು, ಮೈಸೂರು-4

16) ಶ್ರೀಯುತ ಎಂ.ಸಿ. ಶಾಂತವಮೂರ್ತಿ. ಎಂ.ಎ.,
ಉಪನ್ಯಾಸಕರು, ಸ್ನಾತಕೋತ್ತರ ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

17) ವಿದ್ವಾನ್ ಡಾ. ಎಚ್. ಪಿ. ಮಲ್ಲೇದೇವರು. ಎಂ.ಎ. ಪಿಹೆಚ್. ಡಿ
ಪ್ರಾಧ್ಯಾಪಕರು ಮತ್ತು ವಿಭಾಗಮುಖ್ಯರು
ಸ್ನಾತಕೋತ್ತರ ಸಂಸ್ಕೃತ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಮತ್ತು

ನಿರ್ದೇಶಕರು, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

18) ಶ್ರೀ. ನಿ. ಪ್ರ. ಸ್ವ. ವಿದ್ವಾನ್ ಇಮ್ಮಡಿ ಶಿವಬಸವ ಸ್ವಾಮಿಗಳು ಎಂ.ಎ.
ಪ್ರವಾಚಕರು, ಸಂಸ್ಕೃತ ವಿಭಾಗ
ಮಹಾರಾಜ ಕಾಲೇಜು, ಮೈಸೂರು

19) ಶ್ರೀಯುತ. ಬಿ. ನಂಜುಂಡಪ್ಪ
ವಿಶ್ರಾಂತ ಶಿಕ್ಷಣಾಧಿಕಾರಿಗಳು. ರಾಮನಗರ ರಸ್ತೆ
ಕನಕಪುರ, ಬೆಂಗಳೂರು ಜಿಲ್ಲೆ

20) ವಿದ್ವಾನ್. ಬಿ. ರಾಜಶೇಖರಯ್ಯ ಎಂ.ಎ.,
ಅಲಂಕಾರಶಾಸ್ತ್ರ ಪ್ರಾಧ್ಯಾಪಕರು
ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

21) ಶ್ರೀಯುತ ಎಂ. ವೀರಭದ್ರಯ್ಯ ಎಂ.ಎ.,
ಕನ್ನಡ ಪ್ರವಾಚಕರು, ಜೆ. ಎಸ್. ಎಸ್. ಕಾಲೇಜು, ಮೈಸೂರು

22) ಡಾ. ನಿಜಲಿಂಗಮ್ಮ ಕೊಪ್ಪಳ. ಎಂ. ಎ; ಪಿಎಚ್. ಡಿ.
ಉಪನ್ಯಾಸಕರು, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

23) ಶ್ರೀಮತಿ ಎಸ್. ಎಂ. ಶ್ರುತಿ. ನಂಜನಗೂಡು

24) ವಿದ್ವಾನ್ ಪಿ. ಮರಿಬಸವಾರಾಧ್ಯ.
ಸಹಾಯಕ ಸಂಶೋಧಕರು
ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು

25) ಶ್ರೀ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿ ಎಂ. ಎ
ಸುತ್ತೂರು ಸಂಸ್ಥಾನ ಮಠ
ರಾಮಾನುಜ ರಸ್ತೆ, ಮೈಸೂರು-4

26) ಡಾ. ಎಚ್. ತಿಪ್ಪೇರುದ್ರಸ್ವಾಮಿ ಎಂ. ಎ. ಪಿಎಚ್.ಡಿ
ನಿರ್ದೇಶಕರು
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

27) ಶ್ರೀಯುತ ಜೆ. ಎಸ್. ಪರಶಿವಮೂರ್ತಿ ಎಂ. ಎ
ನಿರ್ದೇಶಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

28) ವಿದ್ವಾನ್ ಎಂ. ಶಿವಕುಮಾರಸ್ವಾಮಿ ಎಂ. ಎ
ಸಹಾಯಕ ಸಂಶೋಧಕರು
ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು—5

29) ಶ್ರೀಯುತ ಕೆಂಪಲಿಂಗಯ್ಯ, ಎಂ. ಎ, ಬಿ. ಇಡ್. ಡೈರೆಕ್ಟರ್
ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘ ನಿಯಮಿತ.
ಮೈಸೂರು.

ಒಪ್ಪೋಲೆ

ಪುಟಸಂಖ್ಯೆ	ಸಾಲು	ತಪ್ಪು	ಒಪ್ಪು
9	21	ಆರಿಹರು	ಆರಿಹರು
12	1	ಚಿದ್ಘನಮೂತಿ	ಚಿದ್ಘನಮೂರ್ತಿ
16	9	ಚಿದ್ಘನನೆ	ಚಿದ್ಘನನೆ
18	21	ನಾನಿಹೆನಂ	ನಾನಹೆನು
25	5	ಸಾದು	ಸಾಧು
27	8	ದಾರ್ಢ್ಯಖೆ	ದಾರ್ಢ್ಯಕೆ
33	18	ನೆಲ್ಲಲಂ	ನೆಲ್ಲೆಲ್ಲು
35	22	ಸಾಲ್ಲುಮೀ	ಸಾಲ್ಗುಮೀ
36	26	ಬನ್ನಬಿಟ್ಟರಂ	ಬನ್ನಬಟ್ಟರು
54	31	ಕಲಶಾರಾಥನ	ಕಲಶಾರಾಧನೆ
55	21	ಮೇಲೊಮ್ಮೆ	ಮೇಲೊಮ್ಮೆ
57	13	ರಾಜಪವು	ರಾಜಿಪುವು
57	20	ಆಜಾನು	ಆಜಾನು
61	23	ಹರಿದನಿದ	ಹರದನಿದ
63	6	ಆಘೋರ	ಅಘೋರ
63	8	ನಿಬ್ಬೆರುಗೊಂಡಿಹೆ	ನಿಬ್ಬೆರಗುಗೊಂಡಿಹೆ
65	13	ಕಾಯುಗೊಂಡ	ಕಾಯುಗೊಂಡು
67	6	ಬಾಂಧವರೋಣಿ	ಬಂದರೋಣಿ
137	5	ಸಮಾಜಕ್ಯ	ಸಮಾಜಕ್ಕೆ
143	3	ಆನುಭವ	ಅನುಭವ
145	5	ಶಿಥಿಲವಾಗವುದನ್ನು	ಶಿಥಿಲವಾಗುವುದನ್ನು
146	16	ಆಭಾವ	ಅಭಾವ
186	4	ಬೇರ	ಬೇರೆ
188	4	ಎಂಧದೆ	ಎಂದಡೆ
198	4	ಅಂಗವಿಕಾರಗಳತ್ತ	ಅಂಗವಿಕಾರಿಗಳೆತ್ತ
208	4	ಸಿದ್ದಾಂತ	ಸಿದ್ಧಾಂತ
213	8	ಉತ್ಪತಿ	ಉತ್ಪತ್ತಿ

213	3	ಭವಿಸಾರ	ಭವಸಾರ
214	2	ವ್ಯಾವೊಹ	ವ್ಯಾವೋಹ
221	9	ಪರಿವರ್ತನೆಗೆ	ಪರಿವರ್ತನೆಗೆ
224	3	ಆಹಂಭಾವನೆ	ಅಹಂಭಾವನೆ
234	30	ಗುಣವಾಗ	ಗುಣವಾದ
239	31	ಭಿನ್ನವಿಸಿ	ಬಿನ್ನವಿಸಿ
240	5	ಹೊಂದುದ	ಹೋದುದ
240	21	Crcate	Create
241	32	ಆಗ್ರ	ಅಗ್ರ
249	32	ಶ್ವೇತಾಶ್ವತರೋನಿಷತ್	ಶ್ವೇತಾಶ್ವತ ರೋಪನಿಷತ್
251	28	ಕೈವಲ್ಯೊಪನಿಷತ್	ಕೈವಲ್ಯೋಪನಿಷತ್
262	14	ಪಣಿತೆಯೂ	ಪ್ರಣಿತೆಯೂ
268	16	ಬೇದಗಳನ್ನು	ಭೇದಗಳನ್ನು
270	5	ಹೆಸರುಗಳಿಂವ	ಹೆಸರಂಗಳಿಂದ
272	26	ಗುರುಕಾರುಣ್ಯಸ್ಲಳ	ಗುರುಕಾರುಣ್ಯಸ್ಥಳ
288	30	ಪ್ರೂಕ್ತಂ	ಪ್ರೋಕ್ತಂ
291	8	ಅಲ್ಲನಲವ್ಮಾನು	ಅಲ್ಲನೆಲಮ್ಮನು
296	1	ಅಗ್ಘಪಣೆ	ಅಗ್ಘವಣಿ
302	5	ಒಂಡೆದೆ	ಒಂದೆಡೆ
303	2	ಜ್ಯೊತಿಸ್ವರೂಪಮ	ಜ್ಯೋತಿಸ್ವರೂಪದ
304	3	ಪರಾತ್ವರವಸ್ತು	ಪರಾತ್ಪರವಸ್ತು
326	5	ರಿಶುದ್ಧತೆಯುನ್ನು	ಪರಿಶುದ್ಧತೆಯನ್ನು
376	24	ವೃತ್ತಿಯಂದ	ವೃತ್ತಿಯಿಂದ
377	25	ಗೌರಿಶಂಕರಿ	ಗೌರಿಶಂಕರ
384	4	ಅಧಾರ	ಆಧಾರ
385	26	ಪಾಪೋದಕವೆಕವೆಂಬ	ಪಾದೋದಕವೆಂಬ
387	24	ಆಂದರೆ	ಅಂದರೆ
389	25	ಅನಂದಭಕ್ತಿ	ಆನಂದಭಕ್ತಿ
391	19	ಶೈವವಲ್ಲಿಯೂ	ಶೈವದಲ್ಲಿಯೂ
393	8	ಆಭೂತಪೂರ್ವ	ಅಭೂತಪೂರ್ವ

,,	14	ಚಿತ್-ಸತ್-	ಚಿತ್-ಸತ್
443	10	್ರಿಯಾ	ಕ್ರಿಯಾ
444	17	ಸಿದ್ಣರಾವು	ಸಿದ್ಧರಾವು
478	26	ಆರಿಸಿ	ಅರಸಿ
481	10	ಕ್ಯಗೂಡು	ಕೈಗೂಡು
483	6	ಕಬ್ಬಿನ	ಕಬ್ಬಿನ
485	10	ಐಶ್ಚರ್ಯ	ಐಶ್ವರ್ಯ
493	23	ನಾಲ್ವೇ	ನಾಲ್ವೇ
499	7	ಗಕಾರೋ	ಗಕಾರಃ
502	13	ಶುದ್ಧಾ ಶುದ್ಧ	ಶುದ್ಧಾಶುದ್ಧ
503	27	ಶಕ್ತಿಯ	ಶಕ್ತಿಯು

ಏನಾಯ...
ಭಾಷೆಗಳಿಗೆ...

ಇದಕ್ಕೆ ಹಣವೇ...
ಮಾತಿಗೆ ಪುಷ್ಟಿ ನೀಡುವ...
ಸೇರಿಸುತ್ತಾರೆ. 'ಸಿಂಧು ಭೈರವಿ'...
ಪ್ರಶಸ್ತಿಗೆ ಈ ಚಿತ್ರದ ನಾನು ಆಯ್ಕೆ...
ನಾಯಕ ಶಿವಕುಮಾರ್‌ಗೆ ಪ್ರಶಸ್ತಿ ನೀಡಿದ...

ತೆಲುಗು ಪ್ರಶಸ್ತಿ

'ಸ್ವಾತಿ' ಸುಹಾಸಿನಿಗೆ ಆಂಧ್ರ ಸರ್ಕಾರದ ಪ್ರಶಸ್ತಿ ತಂದುಕೊಟ್ಟ ತೆಲುಗು ಚಿತ್ರ. ಸುಹಾಸಿನಿಯ ಮೊದಲ ಮಲೆಯಾಳಂ ಚಿತ್ರ ಉತ್ತಮ ಪ್ರಾದೇಶಿಕ ಚಿತ್ರವೆಂದು ರಾಷ್ಟ್ರ ಪ್ರಶಸ್ತಿ ಗಳಿಸಿದೆ. 1985ರಲ್ಲಿ ಸುಹಾಸಿನಿ ಅಭಿನಯಿಸಿದ ಮೂರು ಚಿತ್ರಗಳು 'ಶ್ರಾವಂತಿ', 'ಶಿಕ್ಷಾ' ಮತ್ತು 'ಸಿಂಧು ಭೈರವಿ' ಪ್ರಶಸ್ತಿಗೆ ಹೋಗಿದ್ದವು.

'ಈ ಪ್ರಶಸ್ತಿಯಿಂದ ನನಗೆ ತುಂಬ ಸಂತೋಷವಾಗಿದೆ' ಎನ್ನುವ ಸುಹಾ... ತನ್ನನ್ನು ತಾರೆಯಾಗಿ ರೂಪಿಸಿದ ಕೆ. ಬಾಲಚ...ನದ' ಚಿತ್ರದಲ್ಲಿನ ಅಭಿನಯಕ್ಕೇ ... ಈ ಸಂತೋ...





ತಬರನ ಪಾತ್ರ ಪ...ಸಿದ್ದಾರೆ. ದಕ್ಷಿಣ ಭಾರತದ ಸುಪ್ರಸಿದ್ಧ ನಟ ಕಮಲಹಾಸನ್ ಸುಹಾಸಿನಿಯ ಸೋದರಮಾವ. ಹೀಗೆ ಸಿನಿಮಾ ವಾತಾವರಣದಲ್ಲಿ ಬೆಳೆದ ಹುಡುಗಿಯಲ್ಲಿ ಆಸಕ್ತಿ ಕುಟ್ಟಿಸಿದ್ದು ಸಿನಿಮಾದಂಥ ಅದ್ಭುತವನ್ನು ಸಾಧಿಸುವ ಕ್ಯಾಮೆರಾ.

ಕ್ರಮೇಣ ಈ ಆಸಕ್ತಿ ಹೆಚ್ಚಿ ಸುಹಾಸಿನಿ ಪಿ.ಯು.ಸಿ. ನಂತರ ಮದ್ರಾಸ್ ಫಿಲ್ಮ್ ಇನ್‌ಸ್ಟಿಟ್ಯೂಟ್ ಸೇರಿ ಸಿನಿಮಾಟೊಗ್ರಫಿಯಲ್ಲಿ ಶಿಕ್ಷಣ ಪಡೆದಳು. ಅಭಿನಯಕ್ಕಿಂತ ಸಿನಿಮಾದ ತಾಂತ್ರಿಕ ವಿಚಾರಗಳ... ಹೆಚ್ಚಿನ ಆಸಕ್ತಿ ಹೊಂದಿದ್ದ ಸುಹಾಸಿನಿ ಬಯಸಿದ ಜೀವನಮಾರ್ಗ ಛಾಯಾಗ್ರಾಹಕಿಯಾಗುವುದು.

ಸಿನಿಮಾಟೊಗ್ರಫಿಯಲ್ಲಿ ಶಿಕ್ಷಣದ ನಂತರ ಸುಹಾಸಿನಿ ಮಹೇಂದ್ರನ್ ನಿರ್ದೇಶನದ 'ಜಾನಿ' ಚಿತ್ರದ ಛಾಯಾಗ್ರಾಹಕರ ಸಹಾಯಕಿಯಾಗಿ ತಾನು ಬಯಸಿದ ಕ್ಷೇತ್ರದಲ್ಲಿ ಕಾಲಿರಿಸಿದರು. ಶ್ರೀದೇವಿ, ರಜನೀಕಾಂತ್ ಜೋಡಿಯ 'ಜಾನಿ' ಮುಗಿದಂತೆ ಮಹೇಂದ್ರನ್ ಮತ್ತೊಂದು ಚಿತ್ರದ ತಯಾರಿಕೆಗೆ ಎಲ್ಲ ಸಿದ್ಧತೆ ನಡೆಸಿದ್ದರು. ಆದರೆ ಅವರಿಗೆ ಬೇಕಾದ ಹೀರೋಯಿನ್ ಮಾತ್ರ ಸಿಕ್ಕಿರಲಿಲ್ಲ. ಆಗ ಸುಹಾಸಿನಿಯೇ ಏಕಾಗಬಾರದು ಎಂದು ಯೂನಿಟ್‌ನಲ್ಲಿ ಒಬ್ಬರು ಸಲಹೆ ಮಾಡಿದರು. 'ತಮಾಷೆ ಮಾಡಬೇಡಿ' ಎಂದು ಸುಹಾಸಿನಿ ಈ ಸಲಹೆಯನ್ನು ತಳ್ಳಿ ಹಾಕಿದರು. ಆದರೆ ಮಹೇಂದ್ರನ್ ತಲೆ ಹೊಕ್ಕಿತು. ಅವರೂ ಸುಹಾಸಿನಿಯೇ ಲಾಯಕ್ ಎಂಬ ತೀರ್ಮಾನಕ್ಕೆ ಬಂದರು.

ಮೊದಲ ಚಿ... ಸಾರ್—

"ಆಗ ನಾನು ...ನಲ್ ಜೊತೆ...

ಕೆ. ಬಾಲಚಂದರ್ ...
'ಸಿಂಧು ಭೈರವಿ' ...
ಅಭಿನಯಕ್ಕಾಗಿ 1...
ರಾಷ್ಟ್ರ ಪ್ರಶಸ್ತಿ ಗ...
ಬಾಲ್ಯದಿಂದ ಸಿನಿ...
ವಾತಾವರಣದಲ್ಲೇ ...
ತಾರೆಯಾಗುವ ಕ...
ಸಿನಿಮಾಟೊಗ್ರಫಿ...
ಪಡೆದಿರುವ ಸುಹ...
ಆಸಕ್ತಿಯಿಲ್ಲ. ಸಿನಿ...
ವಿಭಾಗದಲ್ಲಿ. ಚಿತ್ರ...
ಅಭಿನಯ ಜೀವನ...
ಚೆಲುವೆ ಇಂದು ...
ಚಿತ್ರೋದ್ಯಮಗಳ...
ಬೇಡಿಕೆಯಲ್ಲಿರುವ ...

ಬಿಡಲಿಲ್ಲ, ಮತ್ತೆ ಚಿತ್ರರಂಗದ ...